ನವೋದಯ ಕಾಲದ ಕಾದಂಬರಿಗಳು



ಚರಿತ್ರೆ

ಜೀವನ ದೃಷ್ಟಿ

ವಾಸ್ತವತೆ

ನಿರೂಪಣೆ

ಕಾಲ ಹಾಗೂ ಪ್ರಶ್ನೆಗಳು



ಕೇಶವಶರ್ಮ.ಕೆ

NOVELS OF THE RENAISSANCE

ನವೋದಯ ಕಾಲದ ಕಾದಂಬರಿಗಳು

ಚರಿತ್ರೆ, ಜೀವನ ದೃಷ್ಟಿ, ವಾಸ್ತವತೆ, ನಿರೂಪಣೆ, ಕಾಲ ಹಾಗೂ ಪ್ರಶ್ನೆಗಳು

ಕೇಶವ ಶರ್ಮ. ಕೆ

ಪುಸ್ತಕ

ವಿಜಯನಗರ, ಬೆಂಗಳೂರು 560 040

ನವೋದಯ ಕಾಲದ ಕಾದಂಬರಿಗಳು
ಚರಿತ್ರೆ, ಜೀವನ ದೃಷ್ಟಿ, ವಾಸ್ತವತೆ, ನಿರೂಪಣೆ, ಕಾಲ ಹಾಗೂ ಪ್ರಶ್ನೆಗಳು
NOVELS OF THE RENAISSANCE
A criticism By : **Keshava Sharma K.**
1 Cross, Shanthi Nagara
Near Chowdamma Temple, B R Projct,
Badarvathi Taluk, Shivamoga - 574115
Mob : 9448730611
E-mail : dr.keshavasharma.k@gmail.com

Pulished by
Asha Nagesh
DESI PUSTAKA
#121,13th Main Road, M.C. Layout
Vijayanagara,Bengaluru - 560 040.
Ph : 080 - 23153558, Mob: 94484 39998
E-mail: srushtinagesh2005@gmail.com

First Impression: 2024
Page : viii+4+380 = 392
Book Size : 1/4 Crown (23x15.5)
(International Standard Book Size)
₹ : 475 /-
Paper used: 70 Gsm Jk Book Print

DTP : Arpuda Merry
Cover Page : **Kiran Madaal**

Printed at :
POORNIMA PRINTERS
Vijayanagara, Bengaluru-560 040
Ph: 080-23351210



ಅರ್ಪಣೆ

“ಕನ್ನಡ ಕಟ್ಟಿದ ಎಲ್ಲಾ ಕಾದಂಬರಿಕಾರರಿಗೆ"

ಲೇಖಕರ ಮಾತು

ಇಂಗ್ಲೀಷ್ ಮೂಲದ ಜ್ಞಾನ ಪರಂಪರೆಯು ಶ್ರೇಷ್ಠ ಹಾಗೂ ಅನುಕರಣೆಗೆ ಯೋಗ್ಯವೆಂದು ಬುದ್ಧಿ ಜೀವಿಗಳು ಭಾವಿಸಿದರು. ವಸಾಹತು ಕಾಲದಲ್ಲಿ ಆಧುನಿಕ ಯೂರೋಪಿನ ಪಠ್ಯಗಳು ಭಾರತಕ್ಕೆ ಬೇರೆ ಬೇರೆ ಕ್ರಮದಲ್ಲಿ ಬಂದವು. ಮತ್ತು ಭಾರತೀಯ ಅದರಲ್ಲಿಯೂ ಸಂಸ್ಕೃತ ಮೂಲದ ಕೆಲವು ಪಠ್ಯಗಳು ಯೂರೋಪಿಗೆ ತೆರಳಿದವು

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು: ಸಂಸ್ಕೃತದ ಪಠ್ಯಗಳಿಗೂ ಅದರ ನಿರೂಪಣೆಯ ಕ್ರಮಕ್ಕೂ, ಪ್ರಾದೇಶಿಕ ಭಾಷೆಗಳ ಪಠ್ಯಗಳಿಗೂ ಇರುವ ಸಂಬಂಧಾಂತರ. ಭಾರತೀಯ ಮೇಲು ಜಾತಿಯ ಜನರಿಗೆ ಸಂಸ್ಕೃತದ ಪರಂಪರೆ ಮತ್ತು ಪ್ರಾದೇಶಿಕ ಭಾಷೆಗಳ ಸಾಹಿತ್ಯಿಕ ಪರಂಪರೆಯ ಅರಿವು ಇತ್ತು. ಮತ್ತು ಸಾಹಿತ್ಯ ಪರಂಪರೆಯ ಜ್ಞಾನ ಮತ್ತು ವಸಾಹತು ಶಿಕ್ಷಣದ ಪರಿಚಯದ ಸಂಧಿಕಾಲದ ಮನಸ್ಸು ಕಾದಂಬರಿಯಲ್ಲಿ ವಿಶಿಷ್ಟ ನಿರೂಪಣೆಗೆ ಕಾರಣವಾಯಿತು. ಯಾವಾಗ ವಸಾಹತುಶಾಹಿ ಶಿಕ್ಷಣ ಕ್ರಮಗಳು ಭಾರತದಲ್ಲಿ ಪ್ರಬಲವಾಗಿ ಬೇರೂರಿದವೋ ಆಗ ಭಾರತೀಯ ಮತ್ತು ದೇಶೀಯ ಸಾಹಿತ್ಯ ಪರಂಪರೆಯ ಬಗೆಗಿನ ಅಧ್ಯಯನ ಕ್ರಮಗಳು ಬೇರೆಯಾದವು. ೧೮೩೦ರ ವೇಳೆಗಾಗಲೇ ಬ್ರಿಟೀಷ್ ಶಿಕ್ಷಣ ನೀತಿಯು ಬದಲಾಗಲು ತೊಡಗಿತ್ತು. ಇದರಿಂದಾಗಿ ದೇಶೀಯ ಶಿಕ್ಷಣದಲ್ಲಿ ಪೌರ್ವಾತ್ಯ ಭಾಷೆ ಮತ್ತು ಅಧ್ಯಯನ ಕ್ರಮಗಳು ಬದಲಾದವು. ೧೮೩೫ರಲ್ಲಿ ಬಂದ ಬೆಂಟಿಂಕ್‌ನ ಶಿಕ್ಷಣ ಕಾಯಿದೆ ಮತ್ತು ಅದೇ ವರ್ಷದ ಮೆಕಾಲೆಯ ಸೂತ್ರ ದೇಶೀಯ ಶಿಕ್ಷಣ ಪದ್ಧತಿಯ ಮೇಲೆ ಪರಿಣಾಮ ಬೀರಿದವು. ಬೆಂಟಿಂಕನ ಶಿಕ್ಷಣ ಸೂತ್ರದಲ್ಲಿ ಇಂಗ್ಲೀಷ್ ಶಿಕ್ಷಣದ ನಯವಾದ ಸೂತ್ರವನ್ನು ಕಂಡರೆ ಮೆಕಾಲೆಯದು ಇಂಗ್ಲೀಷಿನ ಪರವಾದ ಬಿಗಿಯಾದ ದೃಷ್ಟಿ. ಮೆಕಾಲೆಯ ಶಿಕ್ಷಣ ನೀತಿಯ ಪರಿಣಾಮ ಮಾತ್ರ ತುಂಬಾ ದೊಡ್ಡದು. ವಸಾಹತುಶಾಹಿ ಶಿಕ್ಷಣ ಕ್ರಮದಲ್ಲಿ ಕೆಲವು ಪರಿಕಲ್ಪನೆಗಳು ಆಂತರಿಕವಾಗಿ ಕೆಲಸ ಮಾಡುತ್ತಿದ್ದುದು ಗಮನಾರ್ಹ.

ವಸಾಹತುಶಾಹಿ ಶಿಕ್ಷಣ ಕ್ರಮದಲ್ಲಿ ಎಲ್ಲರಿಗೂ ಸಮಾನ ಅವಕಾಶ ದೊರೆಯಿತು. ಈ ಶಿಕ್ಷಣ ಕ್ರಮದಲ್ಲಿ ಆ ಜಾತಿ; ಈ ಜಾತಿಯೆಂಬ ಪ್ರಶ್ನೆಯಿರಲಿಲ್ಲ.

ಎರಡನೆಯದಾಗಿ, ಇಂಗ್ಲೀಷ್ ಶಿಕ್ಷಣದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಶ್ನೆಯನ್ನು ಬೆಸೆಯಲಾಯಿತು. ಸಾಹಿತ್ಯ ಮತ್ತು ಇತರ ಓದು ಭಾರತೀಯ ವಿದ್ಯಾವಂತ ಜನತೆಗೆ ಸಾಮಾಜಿಕ ಪುನರ್‌ರೂಪೀಕರಣಕ್ಕೆ ಕಾರಣವಾಯಿತು. ಹೊಸದಾಗಿ ಪರಿವರ್ತನೆಗೊಳ್ಳುತ್ತಿದ್ದ ಸಮಾಜದಲ್ಲಿ ಸಾಹಿತ್ಯದ ಕೆಲಸ ಕಾರ್ಯಗಳನ್ನು ವಿವರಿಸಬೇಕಾದ ಅಗತ್ಯ ಲೇಖಕರಿಗೆ ಒದಗಿತು. ಇದರಿಂದ ಕನ್ನಡದ ಕಾದಂಬರಿಗಳು ಹುಟ್ಟಿದವು. ಈ ಕೃತಿಯಲ್ಲಿ ಕನ್ನಡದ ನವೋದಯ ಕಾದಂಬರಿಗಳ ಅಧ್ಯಯನ ಮಾಡಿದ್ದೇನೆ. ಇದರಲ್ಲಿ ಲೋಪ ದೋಷಗಳು ಇದ್ದರೆ ಮನ್ನಿಸಿ

ಹಿತೈಷಿಗಳಾದ ಕೆವಿಯನ್, ಕಲ್ಗುಡಿ, ಮಲ್ಲೇಪುರಂ, ಆರ್. ಜಿ. ಹಳ್ಳಿ ನಾಗರಾಜ್, ಬರಗೂರು, ಡಾ. ಪಿ.ವಿ ಭಂಡಾರಿ, ಎಚ್ ಎಲ್. ಪುಷ್ಪ, ಮಲ್ಲಿಕಾರ್ಜುನ ಮೇಟಿ, ಅವಿನಾಶ್, ಮಾಲಗತ್ತಿಯವರಿಗೆ,

ಕರಡು ತಿದ್ದಿದ ಡಾ. ಪಾಂಡುರಂಗ ಎಂ ಪಿ ಸಂದೀಪ. ಆರ್. ಅಭಿಜಿತ್ ಬಿ, ಮಧು ಟಿ, ಆಶಾ, ಹರ್ಷಿತಾ, ಕಾವ್ಯ, ಉಮೇಶ, ಮಮತ ಇವರಿಗೆ,

ಬೆರಳಚ್ಚು ಮಾಡಿದ ಸಂಪತ್ ಕುಮಾರ್ ಮತ್ತು ಮೇರಿಯವರಿಗೆ

ಸಬಿತ, ನಹುಷ, ನಿಯತಿಯರಿಗೆ,

ನನ್ನ ಬಹುತೇಕ ಪುಸ್ತಕಗಳನ್ನು ಅತ್ಯಂತ ಪ್ರೀತಿಯಿಂದ ಪ್ರಕಟ ಮಾಡುವ ನಾಗೇಶ್ ಮತ್ತು ಆಶಾ ನಾಗೇಶ್ ಅವರಿಗೆ,

ಓದುವ ನಿಮಗೆ ವಂದನೆಗಳು.

ಕೇಶವ ಶರ್ಮ. ಕೆ

ಪರಿವಿಡಿ

ಅಧ್ಯಾಯ – ೧

ನವೋದಯ ಕಾದಂಬರಿಗಳ ಜೀವನ ದೃಷ್ಟಿ

ಇಂಗ್ಲೀಷ್ ಮೂಲದ ಜ್ಞಾನ ಪರಂಪರೆಯು ಶ್ರೇಷ್ಠ ಹಾಗೂ ಅನುಕರಣೆಗೆ ಯೋಗ್ಯವೆಂದು ಬುದ್ಧಿ ಜೀವಿಗಳು ಭಾವಿಸಿದರು. ವಸಾಹತು ಕಾಲದಲ್ಲಿ ಆಧುನಿಕ ಯೂರೋಪಿನ ಪಠ್ಯಗಳು ಭಾರತಕ್ಕೆ ಬೇರೆ ಬೇರೆ ಕ್ರಮದಲ್ಲಿ ಬಂದವು. ಮತ್ತು ಭಾರತೀಯ ಅದರಲ್ಲಿಯೂ ಸಂಸ್ಕೃತ ಮೂಲದ ಕೆಲವು ಪಠ್ಯಗಳು ಯೂರೋಪಿಗೆ ತೆರಳಿದವು. (ನೋಡಿ : Aijaz Ahmed. ೧೯೯೨. ಪು. ೨೬೯–೨೭೨). (ಕೇಶವಶರ್ಮ.ಕೆ. ವಸಾಹತುಶಾಹಿ ಅನುಭವ) ಕಾದಂಬರಿ ಮತ್ತು ಗದ್ಯದ ಬೆಳವಣಿಗೆಯ ಕುರಿತು ಹೇಳುತ್ತಾ ಕಾರಂತರು ಹೀಗೆಂದು ಹೇಳುತ್ತಾರೆ:

"ಕಳೆದ ಶತಮಾನದ ಕೊನೆಯಲ್ಲಿ ಮತ್ತು ಈ ಶತಮಾನದ ಆದಿಯಲ್ಲಿ ಕನ್ನಡ ಬರವಣಿಗೆ ಬೇರೆಯದೇ ಹಾದಿ ಹಿಡಿಯಿತು. ಕನ್ನಡ ಗದ್ಯ ಬರಹಗಾರರಲ್ಲಿ ಇಂಥ ಬದಲಾವಣೆ ಸ್ಪಷ್ಟವಾಗಿ ಕಂಡು ಬರುತ್ತವೆ. ಸಂಸ್ಕೃತ ಸಾಹಿತ್ಯದ ಪ್ರಭಾವ ಅವರ ಮೇಲೆ ಕಡಿಮೆಯಾಗುತ್ತಾ ಸರಿದು, ಇಂಗ್ಲೀಷ್ ಸಾಹಿತ್ಯದ ಪ್ರಭಾವ ಹೆಚ್ಚಾಗಿ ಕಾಣಿಸತೊಡಗಿತು. ಈ ಸಾಹಿತ್ಯವೆಂದರೆ ವಸ್ತು ಮತ್ತು ರೂಪಗಳೆರಡರಲ್ಲೂ ಬೇರೆಯೇ ಮಾದರಿಯದು. ಕನ್ನಡ ಗದ್ಯ ಶೈಲಿಗಳ ಮೇಲೆ ಬಂಗಾಲಿ ಕಾದಂಬರಿಗಳ ಇನ್ನೊಂದು ಬಗೆಯ ಪ್ರಭಾವವೂ ಅದೇ ಕಾಲಕ್ಕೆ ಕಾಣಿಸಿಕೊಂಡಿತು. ಶೈಲಿಯ ದೃಷ್ಟಿಯಿಂದ ಇಂಗ್ಲೀಷಿನ ಪ್ರಭಾವ ಕನ್ನಡದ ಮೇಲೆ ಆಗುವಂತಿರಲಿಲ್ಲ. ಈ ದೃಷ್ಟಿಯಿಂದ ಬಂಗಾಲಿಯ ಪ್ರಭಾವ ಅಧಿಕವಾಗಿತ್ತು. ಇದಕ್ಕೆ ಸ್ಪಷ್ಟವಾದ ಕಾರಣಗಳೂ ಇವೆ. ಕನ್ನಡದ ಲೇಖಕರು ಬಂಗಾಲದ ಬಂಕಿಮಚಂದ್ರ ಚಟರ್ಜಿಯವರಂಥ ಕಾದಂಬರಿಕಾರರ ಬರಹಗಳ ಅನುವಾದ ಮಾಡತೊಡಗಿದರು. ಅವರ ಶೈಲಿ, ಶಬ್ದಾಡಂಬರದ ಅಲಂಕಾರಿಕ ಶೈಲಿ, ಅದರ ಶಬ್ದ ಸಂಪತ್ತೆಲ್ಲವೂ ಸಂಸ್ಕೃತದಿಂದ ಬಂದದ್ದು. ಹೀಗಾಗಿ ನಮ್ಮ ಕನ್ನಡ ಅನುವಾದಕರು ಮೂಲ ಬರಹದಲ್ಲಿದ್ದ ಯಾವತ್ತೂ ಸಂಸ್ಕೃತ ಶಬ್ದಗಳನ್ನು ಕನ್ನಡಕ್ಕೆ ತರತೊಡಗಿದರು. ಅಂಥ ಶೈಲಿಗೆ ಮೆಚ್ಚಿಗೆಯೂ ದೊರೆಯಿತು. ಉದಾ: ಬಿ. ವೆಂಕಟಾಚಾರ್ಯರೆಂಬವರು ಹಲವಾರು ಬಂಗಾಲಿ ಕಾದಂಬರಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಮೂಲ ಬರಹಗಳಲ್ಲಿದ್ದ ಯಾವತ್ತು

ಸಂಸ್ಕೃತ ಶಬ್ದಗಳನ್ನು ಕನ್ನಡದಲ್ಲಿಯೂ ಅವರು ಅನುವಾದಿಸಿಕೊಂಡರು. ಅವರು ಒಂದು ಇಂಗ್ಲೀಷ್ ಕಾದಂಬರಿಯನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ. 'ರಜನಿ' ಎಂಬ ಈ ಕಾದಂಬರಿ ಇಂಗ್ಲೀಷಿನ 'The last days of Pompi' ಎಂಬ ಕಾದಂಬರಿಯ ಅನುವಾದ. ಇಲ್ಲಿ ಮಾತ್ರ ಅವರ ಅನುವಾದ ತೀರಾ ನಿರಾಕರ್ಷಕವಾಗಿತ್ತು. ಮೂಲ ಇಂಗ್ಲೀಷ್ ಭಾಷೆಗೂ, ಕನ್ನಡಕ್ಕೂ ಇರುವ ದೂರವೇ ಅದಕ್ಕೆ ಕಾರಣ".[೧೭] ಕಾರಂತರ ಅಭಿಪ್ರಾಯದಂತೆ ಇಂಗ್ಲೀಷ್ ದೂರ ಮತ್ತು ಬಂಗಾಳಿಯು ಹತ್ತಿರವೆಂಬ ಕಲ್ಪನೆಯು ಇರುವಂತೆಯೇ ಪ್ರಾದೇಶಿಕ ಭಾಷೆಗಳ ಮೇಲೆ ಸಂಸ್ಕೃತದ ಪ್ರಭಾವವೂ ಮುಖ್ಯವಾಗಿತ್ತು. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು: ಸಂಸ್ಕೃತದ ಪಠ್ಯಗಳಿಗೂ ಅದರ ನಿರೂಪಣೆಯ ಕ್ರಮಕ್ಕೂ, ಪ್ರಾದೇಶಿಕ ಭಾಷೆಗಳ ಪಠ್ಯಗಳಿಗೂ ಇರುವ ಸಂಬಂಧಾಂತರ. ಭಾರತೀಯ ಮೇಲು ಜಾತಿಯ ಜನರಿಗೆ ಸಂಸ್ಕೃತದ ಪರಂಪರೆ ಮತ್ತು ಪ್ರಾದೇಶಿಕ ಭಾಷೆಗಳ ಸಾಹಿತ್ಯಿಕ ಪರಂಪರೆಯ ಅರಿವು ಇತ್ತು. ಮತ್ತು ಸಾಹಿತ್ಯ ಪರಂಪರೆಯ ಜ್ಞಾನ ಮತ್ತು ವಸಾಹತು ಶಿಕ್ಷಣದ ಪರಿಚಯದ ಸಂಧಿಕಾಲದ ಮನಸ್ಸು ಕಾದಂಬರಿಯಲ್ಲಿ ವಿಶಿಷ್ಟ ನಿರೂಪಣೆಗೆ ಕಾರಣವಾಯಿತು. ಯಾವಾಗ ವಸಾಹತುಶಾಹಿ ಶಿಕ್ಷಣ ಕ್ರಮಗಳು ಭಾರತದಲ್ಲಿ ಪ್ರಬಲವಾಗಿ ಬೇರೂರಿದವೋ ಆಗ ಭಾರತೀಯ ಮತ್ತು ದೇಶೀಯ ಸಾಹಿತ್ಯ ಪರಂಪರೆಯ ಬಗೆಗಿನ ಅಧ್ಯಯನ ಕ್ರಮಗಳು ಬೇರೆಯಾದವು. ೧೮೩೦ರ ವೇಳೆಗಾಗಲೇ ಬ್ರಿಟೀಷ್ ಶಿಕ್ಷಣ ನೀತಿಯು ಬದಲಾಗಲು ತೊಡಗಿತ್ತು. ಇದರಿಂದಾಗಿ ದೇಶೀಯ ಶಿಕ್ಷಣದಲ್ಲಿ ಪೌರ್ವಾತ್ಯ ಭಾಷೆ ಮತ್ತು ಅಧ್ಯಯನ ಕ್ರಮಗಳು ಬದಲಾದವು. ೧೮೩೫ರಲ್ಲಿ ಬಂದ ಬೆಂಟಿಂಕ್‌ನ ಶಿಕ್ಷಣ ಕಾಯಿದೆ ಮತ್ತು ಅದೇ ವರ್ಷದ ಮೆಕಾಲೆಯ ಸೂತ್ರ ದೇಶೀಯ ಶಿಕ್ಷಣ ಪದ್ಧತಿಯ ಮೇಲೆ ಪರಿಣಾಮ ಬೀರಿದವು. ಬೆಂಟಿಂಕನ ಶಿಕ್ಷಣ ಸೂತ್ರದಲ್ಲಿ ಇಂಗ್ಲೀಷ್ ಶಿಕ್ಷಣದ ನಯವಾದ ಸೂತ್ರವನ್ನು ಕಂಡರೆ ಮೆಕಾಲೆಯದು ಇಂಗ್ಲೀಷಿನ ಪರವಾದ ಬಿಗಿಯಾದ ದೃಷ್ಟಿ. ಮೆಕಾಲೆಯ ಶಿಕ್ಷಣ ನೀತಿಯ ಪರಿಣಾಮ ಮಾತ್ರ ತುಂಬಾ ದೊಡ್ಡದು. ವಸಾಹತುಶಾಹಿ ಶಿಕ್ಷಣ ಕ್ರಮದಲ್ಲಿ ಕೆಲವು ಪರಿಕಲ್ಪನೆಗಳು ಆಂತರಿಕವಾಗಿ ಕೆಲಸ ಮಾಡುತ್ತಿದ್ದುದು ಗಮನಾರ್ಹ.[೧೮]

ವಸಾಹತುಶಾಹಿ ಶಿಕ್ಷಣ ಕ್ರಮದಲ್ಲಿ ಎಲ್ಲರಿಗೂ ಸಮಾನ ಅವಕಾಶ ದೊರೆಯಿತು. ಈ ಶಿಕ್ಷಣ ಕ್ರಮದಲ್ಲಿ ಆ ಜಾತಿ; ಈ ಜಾತಿಯೆಂಬ ಪ್ರಶ್ನೆಯಿರಲಿಲ್ಲ.

ಎರಡನೆಯದಾಗಿ, ಇಂಗ್ಲೀಷ್ ಶಿಕ್ಷಣದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಶ್ನೆಯನ್ನು ಬೆಸೆಯಲಾಯಿತು. ಸಾಹಿತ್ಯ ಮತ್ತು ಇತರ ಓದು ಭಾರತೀಯ ವಿದ್ಯಾವಂತ ಜನತೆಗೆ ಸಾಮಾಜಿಕ ಪುನರ್‌ರೂಪೀಕರಣಕ್ಕೆ ಕಾರಣವಾಯಿತು. ಹೊಸದಾಗಿ ಪರಿವರ್ತನೆಗೊಳ್ಳುತ್ತಿದ್ದ ಸಮಾಜದಲ್ಲಿ ಸಾಹಿತ್ಯದ ಕೆಲಸ ಕಾರ್ಯಗಳನ್ನು ವಿವರಿಸಬೇಕಾದ ಅಗತ್ಯ ಲೇಖಕರಿಗೆ ಒದಗಿತು.

ಈ ಸಂದರ್ಭದ ಚಾರಿತ್ರಿಕ ಪ್ರಕ್ರಿಯೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ಸಂಗತಿಗಳು ಪ್ರಮುಖವಾದವು.

೧. ವಸಾಹತೀಕರಣ ಹಾಗೂ ನಿರ್ವಹಸಾಹತೀಕರಣ ಪ್ರಜ್ಞೆಯಲ್ಲಿಯೇ ತುಂಬಾ ಸಂಕೀರ್ಣವಾದ ಸ್ವರೂಪವಿದೆ. ಕಾದಂಬರಿಗಳಲ್ಲಿ ಇದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

೨. ಶೈಕ್ಷಣಿಕ ವಲಯದಲ್ಲಿ ಇಂಗ್ಲೀಷ್ ಒಂದು ಮಾಧ್ಯಮವಾದುದರಿಂದ ವಸಾಹತು ಕಾಲದ ಔದ್ಯೋಗಿಕ ಅಗತ್ಯಕ್ಕೆ ತಕ್ಕಂತೆ ಒಂದು ಬೌದ್ಧಿಕ ವರ್ಗ ರೂಪುಗೊಂಡಿತು. 'ಔದ್ಯೋಗಿಕ ತಜ್ಞ'ರೆಂಬ ಒಂದು ವರ್ಗರೂಪುಗೊಂಡ ದೆಸೆಯಿಂದ ಈ ವರ್ಗ ಹಾಗೂ ಸಾಮಾನ್ಯರ ವರ್ಗ ಬೇರೆಯಾಯಿತು.

೩. ಭಾರತೀಯ ವಿದ್ಯಾವಂತ ವರ್ಗದಲ್ಲಿ ಭಾರತೀಯ ಪರಂಪರೆ ಮತ್ತು ಪಶ್ಚಿಮದ ಜ್ಞಾನಪರಂಪರೆಯ ಸಂಮಿಶ್ರರೂಪವಾದ ಮನಸ್ಸು ರೂಪುಗೊಂಡಿತು. ಕಾದಂಬರಿ ರೂಪವು ಇದನ್ನು ಸೂಚಿಸುತ್ತದೆ.

೪. ಪ್ರಾದೇಶಿಕ ಭಾಷೆಗಳ ಅಭಿವೃದ್ಧಿ ಹಾಗೂ ಅದರ ಬಗೆಗಿನ ಚರ್ಚೆಗಳು ಪ್ರಾರಂಭವಾದವು.

೫. ಸಾಹಿತ್ಯ ಅಧ್ಯಯನಗಳಲ್ಲಿಯೇ ಬೇರೆ ಬೇರೆ ಸಾಹಿತ್ಯ ರೂಪಗಳ ಪ್ರಭಾವ ಕಾಣಿಸಿಕೊಂಡಿತು. ಇದರಿಂದ ತತ್ವಜ್ಞಾನ; ವಿಮರ್ಶೆ; ಚರಿತ್ರೆ; ಅನುವಾದ; ತೌಲನಿಕ ಅಧ್ಯಯನ ಕ್ರಮಗಳು ಬೆಳೆದವು.

೬. ಸಾಹಿತ್ಯ ಪರಂಪರೆಯ ಮೂಲಕ ನಿರ್ದಿಷ್ಟ ಜ್ಞಾನ ಪರಂಪರೆಯ ಜ್ಞಾನವೊಂದು ರೂಪುಗೊಂಡಿತು.

೭. ಯೂರೋಪಿನ ರೊಮಾಂಟಿಸಿಸಂನ ಪ್ರಭಾವದಿಂದ ಪವಿತ್ರ ಭೂಮಿ; ಪವಿತ್ರ ಜನಾಂಗದ ಕಲ್ಪನೆಯು ಸಾಹಿತ್ಯದೊಳಗೆ ಪ್ರವೇಶಿಸಿತು.

೮. ವಸಾಹತುಶಾಹಿ ಶಿಕ್ಷಣದ ದೆಸೆಯಿಂದ ಸಾಹಿತ್ಯ ಚರಿತ್ರೆಯು ಬೇರೆ ಚರಿತ್ರೆಗಿಂತ ಭಿನ್ನವೆಂಬ ಪರಿಕಲ್ಪನೆಯು ಸಾಧ್ಯವಾಯಿತು. ಇದು ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತಗಳಿಂದ ಸಾಹಿತ್ಯದ ಅಧ್ಯಯನ ಕ್ರಮವು ಬೇರೆಯೆಂಬ ಚಿಂತನೆಯು ರೂಢಿಗತವಾಯಿತು.

೯. ಸಾಹಿತ್ಯ ಕೃತಿಗಳ ರಚನೆಯಲ್ಲಿಯೂ ಸತ್ಯ; ವಿಶ್ವಾತ್ಮಕತೆ; ಧಾರ್ಮಿಕ ಪುನರುತ್ಥಾನದ ಪ್ರಶ್ನೆಗಳು ಮುಖ್ಯವಾದವು.

೧೦. ಪಶ್ಚಿಮದ ಸಾಹಿತ್ಯದ ರೂಪಗಳಿಗೆ ಅವುಗಳದೇ ಸಾಂದರ್ಭಿಕ ಹಿನ್ನೆಲೆಗಳಿವೆ ಮತ್ತು ಕ್ರಿಶ್ಚಿಯನ್ ಅನುಭವ ಮತ್ತು ಚಾರಿತ್ರಿಕ ಹಿನ್ನೆಲೆಗಳಿವೆ.

ಮಾತೃಭಾಷೆ, ದೇಶಭಾಷೆಯ ಕುರಿತು ಶ್ರೀಯವರ ಅಭಿಪ್ರಾಯವು ಗಮನಾರ್ಹವಾಗಿದೆ.

ಇನ್ನು ಇಂಡಿಯಾ ದೇಶದ ದೇಶಭಾಷೆಗಳ ಪುನರುಜೀವನವನ್ನು ಕುರಿತು ವಿಚಾರಮಾಡೋಣ. ದೇಶಭಾಷೆ ಎಂದರೆ ಏನೆಂಬುದು ಎಲ್ಲರಿಗೂ ತಿಳಿದೇ ಇದೆ. ಇಂಗ್ಲಿಷಿನಲ್ಲಿ ಇದನ್ನು "Vernacular, Mother-tongue" ಎಂದು ಕರೆಯುತ್ತಾರೆ. "Vernacular" ನಾಡಿನಲ್ಲಿ ಆಡತಕ್ಕ ಮಾತು ಎಂದು ಅರ್ಥ: ಇದು ನಾಡನುಡಿ, ದೇಶಭಾಷೆ. "Mother- tongue" ಎಂದರೆ ತಾಯಿ ಆಡುವ ಭಾಷೆ, ತಾಯಿಯಿಂದ ಕಲಿತ ಭಾಷೆ, ತಾಯಿನುಡಿ, ಮಾತೃ ಭಾಷೆ, ದೇಶದಲ್ಲಿ ಒಂದೇ ಭಾಷೆ ಇದ್ದರೆ, ಅದು ಮಾತೃಭಾಷೆಯೂ ಹೌದು, ದೇಶಭಾಷೆಯ ಹೌದು. ದೇಶದಲ್ಲಿ

ಮಾತೃಭಾಷೆಗಳು ಅನೇಕ ಇದ್ದರೂ ಇರಬಹುದು, ಬೇರೆ ಬೇರೆ ಭಾಷೆಯನ್ನಾಡುವ ಜನರು ನೆಲಸಿರಲು, ದೇಶಭಾಷೆ ನಾವು ತಾಯಿಯಿಂದ ಕಲಿತ ಭಾಷೆಯಾಗದಿದ್ದರೂ ದೇಶದಲ್ಲಿ ಹೆಚ್ಚು ಜನರು ಉಪಯೋಗಿಸುವ ಭಾಷೆಯಾಗುತ್ತದೆ. ಆಗ ಮನೆಯಲ್ಲಿ, ನಮ್ಮ ಜನರಲ್ಲಿ, ನಾವು ಮಾತೃಭಾಷೆಯನ್ನು ಆಡಿದರೂ, ಹೊರಗೆ, ಜನವ್ಯವಹಾರದಲ್ಲಿ ದೇಶಭಾಷೆಯನ್ನು ಆಡುತ್ತೇವೆ. ಇಲ್ಲದಿದ್ದರೆ ನಿರ್ವಾಹ ವಿಲ್ಲ. ಈ ಮಹತ್ವವನ್ನು ತಿಳಿದೇ ನಮ್ಮ ಹಿರಿಯರು 'ದೇಶಭಾಷೆ'ಯೆಂದರೇ ಹೊರತು ಮಾತೃ ಭಾಷೆಯೆನ್ನಲಿಲ್ಲ. ಮುಖ್ಯಾಂಶವೇನೆಂದರೆ, ಮಾತೃಭಾಷೆಯನ್ನಾಗಲಿ, ದೇಶಭಾಷೆಯನ್ನಾಗಲಿ ಕಷ್ಟ ಪಟ್ಟು ಶಾಲೆಯಲ್ಲಿ, ಗುರುವಿನಲ್ಲಿ ಕಲಿತು ಆಡುವುದಿಲ್ಲ. ಹುಡುಗರಿಂದಲೇ ಬೆಳೆಯುತ್ತ ಸುತ್ತಮುತ್ತ ಆಡುವ ಜನಗಳಿಂದ ಸರಾಗವಾಗಿ ಕಲಿತು ಆಡುತ್ತೇವೆ. ಕನ್ನಡ ದೇಶದಲ್ಲಿ ಕನ್ನಡವೇ ದೇಶಭಾಷೆ. ನೂರರಲ್ಲಿ ಎಂಬತ್ತು ಜನರಿಗೆ ಇದೇ ಮಾತೃಭಾಷೆಯಾಗಿಯೂ ಇದೆ. ಮನೆಯಲ್ಲಿ, ನಾಡಿನಲ್ಲಿ ಆಡುತಾಡುತ ಕಲಿತು ಬಳಸತಕ್ಕುದು ವ್ಯಾಕರಣ ಹೇಳಿಸಿಕೊಂಡು ಪ್ರಾರಂಭಮಾಡುವುದಲ್ಲ. ಇಂಡಿಯಾ ದೇಶಕ್ಕೆ ಹೀಗೆ ಒಂದೇ ದೇಶ ಭಾಷೆ ಇರಲಿಲ್ಲ; ಈಗಲೂ ಇಲ್ಲ. (ಶ್ರೀ ಸಾಹಿತ್ಯ – ಪೂರ್ವೋಕ್ತ ಪು ೬೨೮೬)

ಇಂಡಿಯಾಕ್ಕೆ ಹೀಗೆ ಒಂದು ದೇಶಭಾಷೆ ಬರಲಿಲ್ಲ. ರಾಜರ ಆಶ್ರಯದಿಂದಲೂ, ಮತಾಚಾರಗಳ ಭಕ್ತಿಯಿಂದಲೂ ಸಂಸ್ಕೃತ ಭಾಷೆ ವಿದ್ವನ್ಮಂಡಲಿಯಲ್ಲಿ ರಾಷ್ಟ್ರಭಾಷೆಯಾಗಿ ಗೌರವ ಸ್ಥಾನಕ್ಕೆ ಏರಿತು, ಬಹುಕಾಲ ಭರತ ಭೂಮಿಯನ್ನು ಒಂದುಗೂಡಿಸಿತು. ದೇಶ ಭಾಷೆಗಳ ಮೇಲೆಲ್ಲಾ ಆಧಿಪತ್ಯವನ್ನು ನಡೆಸಿತು. (ಈಚೆಗೆ ಇಂಗ್ಲಿಷ್ ಭಾಷೆ ಈ ರೀತಿ ರಾಜರ ಭಾಷೆಯಾಗಿಯೂ ರಾಷ್ಟ್ರಭಾಷೆಯಾಗಿಯೂ ಸಂಸ್ಕೃತದ ಜಾಗಕ್ಕೆ ಬಂದುವು). ಗಣ್ಯರು, ವಿದ್ಯಾವಂತರೂ ಆದ ಜನರೆಲ್ಲಾ ಈ ರಾಷ್ಟ್ರಭಾಷೆಗಳನ್ನು ಕಲಿಯುತ್ತಾ ಆಡುತ್ತಾ ರಾಷ್ಟ್ರದಲ್ಲಿ ನಡೆಯುವ ಕೆಲಸಗಳಿಗೆಲ್ಲಾ ಇವನ್ನೇ ಉಪಯೋಗಿಸುತ್ತಾ ಬಂದರು. ಆದರೆ ರಾಷ್ಟ್ರಭಾಷೆಯ ನೆವದಲ್ಲಿ ದೇಶಭಾಷೆಯನ್ನು ತಿರಸ್ಕರಿಸಲಿಲ್ಲ. ಕಳೆಯಲಿಲ್ಲ. ಅದಕ್ಕೆ ಬದಲು ಅದನ್ನು ಹೆಚ್ಚಿಸಿದರು. ಪುಷ್ಟಿಗೊಳಿಸಿದರು. ಜನರೆಲ್ಲಾ ರಾಷ್ಟ್ರಭಾಷೆಯನ್ನು ಕಲಿಯಿರಿ, ಎನ್ನಲಿಲ್ಲ: ಮುಂದಾಳುಗಳು, ಮುಖಂಡರು, ಮೇಧಾವಿಗಳು ಮಾತ್ರ ಕಲಿತರು. (ಅದೇ)[೧೧].

"ಕಾದಂಬರಿಯನ್ನು ಒಂದು ಪ್ರಕಾರವೆಂದು ಪರಿಗಣಿಸುವ ನಮ್ಮ ಪರಿಕಲ್ಪನೆ ಮೂಲಭೂತವಾಗಿ ವಸಾಹತುಶಾಹಿಯದು. ಬ್ರಿಟಿಷ್ ವಿದ್ವಾಂಸರು ಭಾರತೀಯ ಕಾದಂಬರಿಯನ್ನ ಪಾಶ್ಚಿಮಾತ್ಯರಿಂದ ಎರವಲು ಪಡೆದ ಪ್ರಕಾರವೆಂಬಂತೆ ನೋಡುತ್ತಿದ್ದರು; ಬಹುಶಃ ನಾವೂ ಸಹ ನಮ್ಮ ಕೆಲವು ಮೊದಲ ಕಾದಂಬರಿಗಳನ್ನು ಅದೇ ದೃಷ್ಟಿಯಿಂದ ನೋಡಿದ್ದೇವೆ. ಅದರ ರಚನಾರೂಪ ಆಮದು ಮಾಡಿಕೊಳ್ಳಲಾಗಿದೆ. ಆದರೆ ಅದರ ಒಳಾಂಶ ನಮ್ಮದೇ ಎಂದು ಸೂಚಿಸುವ ಮೂಲಕ ರಾಮಚಂದ್ರ ಶುಕ್ಲಾ ಒಂದು ರೀತಿಯ ಸಂಧಾನ ಮಾಡಿದರು. ನಂತರದ ಸಾಹಿತ್ಯ ಚರಿತ್ರಕಾರ ಸಿಸಿರ್ ಕುಮಾರ್ ದಾಸ್, ಈ ವಾದವನ್ನು ಇನ್ನಷ್ಟು ಮುಂದೆ ಕೊಂಡೊಯ್ದು ಭಾರತದ ಕಾದಂಬರಿಗಳು ಪಾಶ್ಚಿಮಾತ್ಯ ಮಾದರಿ ಮತ್ತು ದೇಶೀಕಥನ ನಿರೂಪಣಾ ಸಂಪ್ರದಾಯಗಳ ನಡುವಿನ ಕರ್ಷಣದಿಂದ ಉದ್ಭವಗೊಂಡಿದೆಯೆಂದು ಹೇಳಿದ್ದಾರೆ. ಕಾದಂಬರಿಯು ಮೂಲಭೂತವಾಗಿ ಒಂದು ನಿಷ್ಪನ್ನ ರೂಪವೆನ್ನುವ ಭಾವನೆಯನ್ನು ಪುನರ್ ಪರಿಶೀಲಿಸುವ

ಅವಶ್ಯಕತೆಯಿದೆ. ಈ ಕಾರ್ಯವನ್ನು ಬಹುಶಃ ನಾವು ಬಂಕಿಮಚಂದ್ರ ಚಟರ್ಜಿಯವರ ಕಾದಂಬರಿಯಿಂದ ಪ್ರಾರಂಭಿಸಬಹುದು. ಅವರ ಲೇಖಕರ ಬದುಕು ಪ್ರಾರಂಭವಾದದ್ದು ಇಂಗ್ಲಿಷ್ ರೀತಿಯ ಕಾದಂಬರಿಯಿಂದ ಹಾಗೂ ಅವರು ಅದನ್ನು ಇಂಗ್ಲಿಷಿನಲ್ಲಿಯೇ ಬರೆದರು. ಆದರೆ ಅವರ ಮೊದಲ ಮೂಲಕೃತಿ ಕಪಾಲಕುಂಡಲವಾಗಿತ್ತು ಹಾಗೂ ಅದರ ಹಂದರ ಕಾದಂಬರಿಗೆ ಹತ್ತಿರವಾಗಿತ್ತು ಮತ್ತು ಅದರ ಅಂತರಾಳದಲ್ಲಿ ಅನುಕರಣೆಯಿದೆ ಎನ್ನುವುದು ಏನೂ ಇರಲಿಲ್ಲ. ಇಂದಿಗೂ ನಮ್ಮ ಅದ್ವಿತೀಯ ಕಾದಂಬರಿಗಳನ್ನು ಏಕ ರೇಖಾತ್ಮಕವಲ್ಲದ ಹಂದರದಲ್ಲಿ ರಚಿಸಲಾಗಿದೆ. (ಉದಾ: ಗೋಪಿನಾಥ ಮೊಹಾಂತಿಯವರ ಒರಿಯಾ ಕಾದಂಬರಿಗಳು, ತಾರಾಶಂಕರ್ ಬಂದೋಪಾಧ್ಯಾಯರ ಬಂಗಾಳಿ ಕಾದಂಬರಿಗಳು, ಫಣೀಶ್ವರನಾಥ ರೇಣುರವರ ಹಿಂದಿ ಕಾದಂಬರಿಗಳು). ಮಲಯಾಳಂನಲ್ಲಿನ ಮೊದಲ ಕಾದಂಬರಿಗಳ ಬಗ್ಗೆ ಚರ್ಚಿಸಬೇಕಾದಲ್ಲಿ ಬಹುಶಃ ನಾವು ಮಾರ್ತಾಂಡ ವರ್ಮ ಕಾದಂಬರಿಗೆ ಇಂದುಲೇಖಾಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗುತ್ತದೆ. ಆದರೆ ಇಂದುಲೇಖಾದ ರಚನೆ ಪಾಶ್ಚಿಮಾತ್ಯ ಕಾದಂಬರಿಯ ರೂಪಕ್ಕೆ ಹೆಚ್ಚು ಹತ್ತಿರವಾಗಿರುವುದರಿಂದ ಅದು ಒಂದು ರೀತಿಯಲ್ಲಿ ಧರ್ಮಶಾಸ್ತ್ರ ಪಠ್ಯವಾಗಿ ಮಾರ್ಪಟ್ಟಿದೆ.[೧೯]

ಒಟ್ಟಿನಲ್ಲಿ ಆಧುನಿಕ ಶಿಕ್ಷಣ ಕ್ರಮದಲ್ಲಿ ಒಂದು ತಾತ್ವಿಕತೆಯನ್ನು ಲಂಡನ್ ಕೇಂದ್ರಕ್ಕೆ ಅನುಸಾರವಾಗಿ ಹೊಂದಿಸುವ ಪ್ರಯತ್ನವಿತ್ತು. ಇದರ ಪರಿಣಾಮವಾಗಿ ವ್ಯಕ್ತಿಯು ತನ್ನನ್ನು ಹೊಸ ಸಾಮಾಜಿಕ ಪರಿಸ್ಥಿತಿಗೆ ಅನುಸಾರವಾಗಿ ವ್ಯಾಖ್ಯಾನಿಸಿಕೊಳ್ಳಬೇಕಿತ್ತು. ಮತ್ತು ಸಾಮಾಜಿಕ ಸುಧಾರಣೆ; ವೈಜ್ಞಾನಿಕ ಚಿಂತನೆ; ಯುವಜನರಲ್ಲಿ ನೈತಿಕತೆಯ ವಿಸ್ತರಣೆ; ಚಾರಿತ್ರಿಕ ಚಿಂತನೆ ಇತ್ಯಾದಿಗಳನ್ನು ಮಾಡಿಕೊಳ್ಳಬೇಕಿತ್ತು. ಚರಿತ್ರೆಯ ಅಧ್ಯಯನವು ಕೂಡಾ ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ 'ಸ್ವಚರಿತ್ರೆ', 'ವಿದೇಶಿ ಚರಿತ್ರೆ'ಯೆಂಬ ಪರಿಕಲ್ಪನೆಯನ್ನು ರೂಪಿಸಿರುವದು ಗಮನಾರ್ಹ.

ಆಧುನಿಕ ಸಂದರ್ಭದಲ್ಲಿ ರೂಪುಗೊಂಡ ಪ್ರಮುಖ ಸ್ಥಿತಿಯೆಂದರೆ, ಸುಶಿಕ್ಷಿತ ಮಧ್ಯಮವರ್ಗದ ಇಕ್ಕಟ್ಟಿನ ಪರಿಸ್ಥಿತಿ. ಬೌದ್ಧಿಕವಾಗಿ ಸುಶಿಕ್ಷಿತರು ಆ ಸಂದರ್ಭದಲ್ಲಿ ಏಕಾಂತವಾದಿಗಳಾಗಿದ್ದರು. ಸಂಪೂರ್ಣವಾಗಿ ಪರಂಪರೆಯನ್ನು ಒಪ್ಪಿಕೊಳ್ಳಲಾಗದ ಮತ್ತು ಸಂಪೂರ್ಣವಾಗಿ ಸಾಂಪ್ರದಾಯಿಕ ತಿಳುವಳಿಕೆಗಳನ್ನು ತಿರಸ್ಕರಿಸಲಾಗದ ಪರಿಸ್ಥಿತಿಯಲ್ಲಿದ್ದರು. ಸಾಮಾಜಿಕವಾಗಿ ಆ ಕಾಲಘಟ್ಟವನ್ನು ಸ್ಥಿತ್ಯಂತರದ ಕಾಲಘಟ್ಟವೆಂದು ನಾವು ಕರೆಯಬಹುದು. ಗ್ರಾಮೀಣಸಮಾಜದ ಬೌದ್ಧಿಕ ಚಿಂತನೆಗಳನ್ನು ಒಪ್ಪಲಾಗದ ಹಾಗೂ ಗ್ರಾಮೀಣಮಾದರಿಯ ಕುಶಲತೆಯೇ ಸಂದೇಹಾಸ್ಪದ ಎಂಬಂಥ ಸ್ಥಿತಿಯೊಳಗೆ ರೂಪುಗೊಂಡ ಬೌದ್ಧಿಕ ಪ್ರಕ್ರಿಯೆಯೇ 'ನವವರ್ಗ'ವೊಂದನ್ನು ಸೃಷ್ಟಿಸಿತ್ತು. ಭಾರತೀಯ ಭಾಷೆಗಳಲ್ಲಿ ೧೮೫೦ರ ಅನಂತರವೇ 'ಕಾದಂಬರಿ'ಯ ರೂಪವು ಓದುಗರಿಗೆ ಲಭಿಸಿದ್ದಕ್ಕೂ ಅಂತರ್ಗತ ಸಂಬಂಧವಿದೆ. ಹತ್ತೊಂಬತ್ತನೆಯ ಶತಮಾನದ ಬರವಣಿಗೆಯ ರೂಪಗಳು ಈ ಕಾರಣದಿಂದಲೇ ಗಮನಾರ್ಹವಾಗಿದೆ. ಸುದೀಪ್ತ ಕವಿರಾಜ್ ಅವರು ಹತ್ತೊಂಬತ್ತನೆಯ ಶತಮಾನ ಸಂಕೀರ್ಣವಾಗಿತ್ತು. ಸಮಾಜ ಪಲ್ಲಟಗೊಂಡಿತ್ತು ಮತ್ತು ಹೊಸ ಧ್ವನಿಯಲ್ಲಿ ಹೊಚ್ಚ ಹೊಸ ರೀತಿಯ ಚಾರಿತ್ರಿಕ ಸಂವಾದಕ್ಕೆ ತೊಡಗಿತ್ತು. ಈ ಕಾರಣದಿಂದಲೇ 'ಚಾರಿತ್ರಿಕ ಹೊಸತನ'ದ ಕಾಲವೆಂದು ಕರೆಯಬಹುದೆನ್ನುತ್ತಾರೆ.[೨೦]

ಆಧುನಿಕ ಶಿಕ್ಷಣ ಕ್ರಮದಿಂದ ರೂಪುಗೊಂಡ ಬುದ್ಧಿ ಜೀವಿಗಳು ಹೊಸ ರೀತಿಯ ಕೆಲವು ನಿರ್ವಹಣೆಗಳನ್ನು ಮಾಡಬೇಕಾಗಿ ಬಂತು. ಅದು ರಾಜಕೀಯ; ಸಂಸ್ಕೃತಿ; ತತ್ವಜ್ಞಾನ; ಧಾರ್ಮಿಕ ಪುನರುತ್ಥಾನ – ಹೀಗೆ ಹತ್ತು ನಿರ್ವಹಣೆಯ ವಿಧಾನಗಳನ್ನು ಬೇರೆ ಬೇರೆ ಸಂವಹನ ಮಾಧ್ಯಮಗಳಲ್ಲಿ ರೂಪಿಸಬೇಕಾಗಿಬಂತು. ಬೌದ್ಧಿಕವಾಗಿಯೂ ಈ ಗುಂಪಿನ ಜನರು ಕೆಲವನ್ನು 'ಆಯ್ಕೆ' ಮಾಡಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಯು ಒದಗಿಬಂತು. ಒಂದು ಸಣ್ಣ ಉದಾಹರಣೆಯನ್ನು ಕೊಡಬೇಕೆಂದರೆ – ಒಟ್ಟಾರೆಯಾದ ಸಾಮಾಜಿಕ ಪರಿಸ್ಥಿತಿಯಲ್ಲಿ 'ಅಕ್ಷರಸ್ಥರ ಗುಂಪು' ಸಣ್ಣದಿದ್ದರೂ ಅವರು ಹೊಸ ಮಾದರಿಯ ಸಂವಹನ ಮಾಧ್ಯಮವನ್ನು ರೂಪಿಸಿಕೊಳ್ಳಬೇಕಾಗಿ ಬಂತು. ಬರಹ ಸಂವಹನದ ಮಾಧ್ಯಮ ಮಾತ್ರವೇ ಅಲ್ಲ. ಅದು ಹೊಸ ಬಗೆಯ ಜ್ಞಾನದ ಮಾಧ್ಯಮವೂ ಹೌದು. ಹಾಗೂ ಬರಹಗಳ ಸಂವಹನ ಸಾಧ್ಯತೆಗೂ– ಅಧಿಕಾರಕ್ಕೂ ಕೆಲವು ಬಗೆಯ ಸಂವಾದ ಸಾಧ್ಯವೆಂದು ತಿಳಿದ ಕಾಲವೂ ಹೌದು. ಕಾದಂಬರಿಯು ಈ ಕಾಲದ ಪ್ರಮುಖ ಜ್ಞಾನ ರೂಪ ಹಾಗೂ ಚಾರಿತ್ರಿಕ ನಿರೂಪಣೆಯ ಹೊಸ ಮಾದರಿಯ ಸಂಕಥನ. ಈ ಕಾಲದ ಬುದ್ಧಿಜೀವಿಗಳು ಬರಹದ ಹೊಸ ಸಾಧ್ಯತೆಯನ್ನು ಕಂಡುಕೊಂಡಿರುವ ಹಾಗೆಯೇ ದ್ವಿಭಾಷಿಕತೆಯ ಅರಿವು (ಪ್ರಾದೇಶಿಕ ಭಾಷೆ ಹಾಗೂ ಇಂಗ್ಲೀಷ್) ಅವರನ್ನು ಕಾದಂಬರಿಯ ಹುಟ್ಟಿಗೆ ಈ ಕಾರಣದಿಂದ ಸಂಬಂಧವಿದೆ. ಕಾದಂಬರಿಯಲ್ಲಿಯೂ ರಾಷ್ಟ್ರೀಯತೆಯ ಆಲೋಚನೆ; ಒಂದು ನಿರ್ದಿಷ್ಟ ಕಾಲದ ನಿರೂಪಣೆ: ಒಂದು ನಿರ್ದಿಷ್ಟ ಜನಾಂಗದ ನಿರೂಪಣೆಗಳು; ಅವುಗಳ ಪಲ್ಲಟಗಳನ್ನು ನಾವು ಕಾಣಬಹುದು. ಮುದ್ರಣ ಬಂಡವಾಳದಿಂದ ಮತ್ತು ಆಗಿನ ಶಿಕ್ಷಣದ ಪರಿಸ್ಥಿತಿಯಿಂದ ಹೊಸ ಮಾದರಿಯ ಓದುಗ ವರ್ಗ ಸೃಷ್ಟಿಯಾಯಿತು. ಕಾದಂಬರಿಯು ಹೇಗೆ ಹೊಸ ಸಂವಹನದ ಮಾಧ್ಯಮವಾಯಿತೋ ಅದೇ ರೀತಿಯಲ್ಲಿ ಜ್ಞಾನರೂಪವಾಗಿಯೂ ಅದರ ಅವಶ್ಯಕತೆಯಿತ್ತು. ಬದಲಾಗುತ್ತಿರುವ ಚಾರಿತ್ರಿಕ ಸಂದರ್ಭದಲ್ಲಿ ಕಾದಂಬರಿಯು ದೇಶೀಯ; ಪ್ರಾದೇಶಿಕ; ರಾಷ್ಟ್ರೀಯ ಸಂಗತಿಗಳ ಹುಡುಕಾಟವನ್ನು ಮಾಡತೊಡಗಿತು.

ಕಾದಂಬರಿಯ ಸಾಹಿತ್ಯ ರೂಪದ ಹಿಂದಿರುವ ಸಾಂಸ್ಕೃತಿಕ ಸಂಗತಿಗಳಲ್ಲಿ ವಸಾಹತುವಿನ ಅನುಭವದ ಸಂಕೀರ್ಣ ರೂಪವಿದೆ. ಹೀಗಾಗಿ ಕಾದಂಬರಿಗಳು ಚರಿತ್ರೆಯ ಬೇರೊಂದು ಮುಖವನ್ನು ಪರಿಚಯಿಸಿದೆ. ವಸಾಹತುಶಾಹಿ ಅನುಭವದೊಳಗೆ ಇರುವ ಲೇಖಕರು ಕಾದಂಬರಿಯನ್ನು ಬರೆಯುವಾಗಲೇ ಬೇರೊಂದು ಸಿದ್ಧತೆಯನ್ನು ಮಾಡಿಕೊಳ್ಳಬೇಕಿತ್ತು. ಒಂದು ಅವರು, ವಸಾಹತುಶಾಹಿ ಅನುಭವವನ್ನು ಎದುರಿಸಬೇಕಿತ್ತು. ಇದನ್ನು ಎದುರಿಸುವಾಗ ಅವರು ಪಾರಂಪರಿಕ ಜೀವನ ವಿಧಾನವನ್ನು ಪರೀಕ್ಷಿಸಬೇಕಾಯಿತು. ಲೇಖಕರು ಎದುರಿಸಿದ ಪ್ರಮುಖ ಸಮಸ್ಯೆಯೆಂದರೆ 'ಸಾಂಸ್ಕೃತಿಕ ಏಕಾಂತವಾದ'. ವಿದ್ಯಾವಂತರು ಪಶ್ಚಿಮದ – ಯೂರೋಪಿನ ಮೂಲದ ಚಿಂತನೆ ಹಾಗೂ ಭಾರತೀಯ ಮೂಲದ ಚಿಂತನೆಯ ನಡುವೆ ಒಂದು ಸಮನ್ವಯವನ್ನು ತಂದುಕೊಳ್ಳಬೇಕಾಗಿತ್ತು. ಸುಶಿಕ್ಷಿತರು ಕೃಷಿ ಮೂಲದ ಚಟುವಟಿಕೆ ಹಾಗೂ ಅದರ ಜೀವನ ಕ್ರಮದಿಂದ ಹೊರಗೆ ನಿಂತು: ಬ್ರಿಟೀಷ್ ಮೂಲದ ಚಿಂತನೆ ಮತ್ತು ಅದರ ಮೂಲಕ ಬಂದ ಅನೇಕ ವಿಚಾರಧಾರೆಗಳ ಪ್ರೇರಣೆಗಳನ್ನು ಪಡೆದುಕೊಳ್ಳಬೇಕಾಯಿತು. ಎರಡನೆಯದಾಗಿ ಹಳೆಯ ಮಾದರಿಯ ರಾಜಕೀಯ ಚಿಂತನೆಗಳ ಬದಲಿಗೆ ಹೊಸದಾಗಿ ಬಂದ ರಾಜಕೀಯ ಚಿಂತನೆಗಳನ್ನು:

ಅದರ ಮೂಲಕ ಅಭಿವೃದ್ಧಿ; ವಿಜ್ಞಾನ; ಸಮಾನತೆ; ಪ್ರಭುತ್ವದ ವಿರೋಧ ಮುಂತಾದವುಗಳನ್ನು ವೈಚಾರಿಕವಾಗಿ ರೂಪಿಸಬೇಕಾಗಿ ಬಂತು. ನೇರವಾದ ಅರ್ಥದಲ್ಲಿ ಕಾದಂಬರಿಯ ರೂಪಕ್ಕೂ ರಾಜಕೀಯ ಚಟುವಟಿಕೆಗಳಿಗೂ ಸಂಬಂಧವಿಲ್ಲ. ಆದರೆ ಪರೋಕ್ಷವಾದ ಅರ್ಥದಲ್ಲಿ ಸಂಬಂಧವಿದೆ. ಕನ್ನಡದ ಮತ್ತು ವಿಶಾಲವಾಗಿ ಭಾರತೀಯ ಭಾಷೆಗಳ ಮೊದಮೊದಲಿನ ಕಾದಂಬರಿಗಳು 'ಸಾಮಾನ್ಯರ ಸಂಸ್ಕೃತಿ' ಯನ್ನು ಲೇಖಕರ ಅನ್ವಯಿಕ ಚಿಂತನೆಗಳ ಮುಖೇನ ಮೂರ್ತರೂಪಕ್ಕೆ ಬಂದಿವೆ. ಇವುಗಳು ಸಾಮಾನ್ಯರ ಜೀವನಕ್ರಮವನ್ನು (ಐತಿಹಾಸಿಕ ಕಾದಂಬರಿಗಳನ್ನು ಹೊರತುಪಡಿಸಿ) ಭಾಷೆಯ ಪ್ರಾತಿನಿಧೀಕರಣದ ಪ್ರಕ್ರಿಯೆಗೆ ಗುರಿಪಡಿಸಿವೆ. ಮತ್ತು ಸಾಮಾನ್ಯರ ಜೀವನಕ್ರಮ ಅವುಗಳ ಮೌಲ್ಯದ ಚರ್ಚೆಗಳನ್ನು ನಡೆಸುತ್ತವೆ. ಜನಸಾಮಾನ್ಯರು: ಅವರ ಮೌಲ್ಯಾತ್ಮಕ ವ್ಯವಸ್ಥೆ: ಅವರೆದುರು ನಿಂತಿರುವ ವಸಾಹತುಶಾಹಿ ಅನುಭವ – ಇವುಗಳನ್ನು ಕಾದಂಬರಿಕಾರರು ಒಂದು ನಿರ್ದಿಷ್ಟ ತಾಯ್ನೆಲದಲ್ಲಿ ನಿಂತು ಕಾದಂಬರಿಕಾರರು ವಿವರಿಸಿರುವುದು ಈ ಕಾರಣದಿಂದ ಮಹತ್ವದ ವಿಷಯವಾಗಿದೆ.

ಮೊದಮೊದಲಿನ ಕಾದಂಬರಿಗಳಿಗೆ ನಿರ್ದಿಷ್ಟ ಕೇಂದ್ರಗಳಿವೆ. ನಿರ್ದಿಷ್ಟ ಮನೆಗಳಿವೆ. ಭಾಷಿಕ ಆವರಣಗಳಿವೆ. ಕನ್ನಡದ ಮೊದಮೊದಲಿನ ಕಾದಂಬರಿಗಳು ಈ ಮೂಲಕವೇ ಪ್ರಾದೇಶಿಕ ಜೀವನಕ್ರಮ; ಜನರ ಪ್ರಶ್ನೆಗಳನ್ನು ಬೇರೆ ಬೇರೆ ಭಾಷಿಕ ಚಿತ್ರದ ಮೂಲಕ ಬಿಡಿಸಿದವು. ಮತ್ತು ಸಾಂಪ್ರದಾಯಿಕ ಜೀವನ ಕ್ರಮ; ಅದರ ನಂಬಿಕೆ; ಅದರ ಮೌಲ್ಯಗಳು ಒಂದು ರೀತಿಯದಾದರೆ ಸುಶಿಕ್ಷಿತರ ಜೀವನ ಕ್ರಮ ಮತ್ತು ನಂಬಿಕೆ ಒಂದು ಮಾದರಿಯ ಸಂಘರ್ಷವನ್ನು ಸೃಷ್ಟಿಸುತ್ತದೆ. ಹಾಗೆಯೇ ಸುಶಿಕ್ಷಿತರು ಸಾಂಪ್ರದಾಯಿಕ ಜೀವನ ಕ್ರಮದೆದುರು ಆಗಂತುಕರಂತೆ; ವೀಕ್ಷಕರಂತೆ ಯಾಕೆ ವರ್ತಿಸುತ್ತಾರೆ ಎಂಬುದನ್ನು ಪರಿಶೀಲಿಸಬೇಕು. ಸಾಮಾನ್ಯರ ಜೀವನ ಕ್ರಮಕ್ಕೆ ಇರುವ ವಿವರಣೆಯನ್ನು ಕಲಿತವರು ನಂಬುವುದಿಲ್ಲ. ಕಲಿತವರ ನಂಬಿಕೆಗಳು ಸಾಮಾನ್ಯರ ಮನಸ್ಸಿಗೆ ತಿಳಿಯುವುದಿಲ್ಲ. ಆದುದರಿಂದಲೇ ಅದೊಂದು ಸಂಕೀರ್ಣವಾದ ಪರಿಸ್ಥಿತಿ.

ಸಮಾಜವು ತುಂಬಾ ವೇಗವಾಗಿ ಬದಲಾಗುತ್ತಿದೆ. ಮನುಷ್ಯರು ಬದಲಾಗುತ್ತಿದ್ದಾರೆ. ಅವರ ಪರಿಸರ, ಸಂಸ್ಕೃತಿಯು ಬದಲಾಗುತ್ತಿದೆಯೆಂಬ ತಿಳುವಳಿಕೆಯಿಂದ ಕಾದಂಬರಿಗಳು ಅವನ್ನು ಅಭಿವ್ಯಕ್ತಿಸಿವೆ. ಕನ್ನಡದ ಬಹುತೇಕ ಚಂಪೂ ಹಾಗೂ ಪಟ್ಪದಿ ಕಾವ್ಯಗಳು ನಾಯಕರನ್ನು; ಖಳನಾಯಕರನ್ನು ತುಂಬಾ ಸ್ಪಷ್ಟವಾಗಿ ವ್ಯಾಖ್ಯಾನಿಸಿವೆ. ಯಾರು ಖಳನಾಯಕರಾಗುತ್ತಾರೆ. ಯಾರು ನಾಯಕರಾಗುತ್ತಾರೆ ಎಂಬುದನ್ನು ತಿಳಿಸುವಾಗಲೇ ಅವರಿಗೆ ಕೆಲವು ವಿಶಿಷ್ಟ ಗುಣಗಳನ್ನು ಕೊಟ್ಟಿದ್ದಾರೆ. ಕೌರವನು ಖಳನಾಯಕ ಯಾಕೆಂದರೆ ಅವನು ಪುಣ್ಯಾತ್ಮರೂ, ಸಜ್ಜನರೂ ಆದ ಪಾಂಡವರನ್ನು ಕಾಡಿಗೆ ಅಟ್ಟಿದ: ಸಭೆಯಲ್ಲಿ ದ್ರೌಪದಿಯ ಸೀರೆಯನ್ನು ಸೆಳೆಸಿದ – ಇತ್ಯಾದಿ.

ಆದರೆ ಕಾದಂಬರಿಯೆಂದೊಡನೆ ಮನುಷ್ಯರ ಕತೆಗಳೆಂದೇ ನಾವೇಕೆ ತಿಳಿಯಬೇಕು? ಬರೆಯುವಾತನೇನೋ ಮನುಷ್ಯ. ಆದರೆ ಆತನ ಕಥಾ ಸೃಷ್ಟಿಯ ನಾಯಕ, ಪ್ರತಿನಾಯಕ ಪೋಷಕ ಪಾತ್ರಗಳೆಲ್ಲವೂ ನಿಸರ್ಗವಾಗಬಲ್ಲುದು ಎಂದು ಕಾರಂತರು ಹೇಳುತ್ತಾರೆ. ಕಾರಂತರ ಪ್ರಕಾರ ಕಾದಂಬರಿಗೆ ವಸ್ತುವಿನ ಆಯ್ಕೆಯ ಮಿತಿಯಿಲ್ಲ. ಹಾಗೆಂದು ಬರೆಯುವವನು ಮನುಷ್ಯ ಎಂಬುದನ್ನು ಮರೆಯಲಾಗದು ಎಂದೂ ಕಾರಂತರು ಸೂಚಿಸುತ್ತಾರೆ. ಇದರ ಅರ್ಥವಿಷ್ಟೆ

ಕಾದಂಬರಿಕಾರನಿಗೆ ‘ವ್ಯಕ್ತಿ’ಯಾಗಿಯೇ ವಿಶೇಷ ಅನನ್ಯತೆಯಿದೆ”. ಹೊಸ ಚಾರಿತ್ರಿಕ ಯುಗಗಳು ತಮ್ಮ ಅಭಿವ್ಯಕ್ತಿಗೆ ಹೊಸ ಪ್ರಕಾರಗಳನ್ನು ಹುಡುಕಿಕೊಳ್ಳುತ್ತವೆ ಎನ್ನುವ ಲುಕಾಚ್ಸ್ ನಾವೆಲನ್ನು ಸಾಧ್ಯಮಾಡುವ ಸಾಮಾಜಿಕ ಐತಿಹಾಸಿಕ ಸಂದರ್ಭವನ್ನು ಕುರಿತು ಚರ್ಚಿಸುತ್ತಾನೆ. ಅವನ ಪ್ರಕಾರ ನಾವೆಲ್ ಹುಟ್ಟುವದೇ ವ್ಯಕ್ತಿ ಮತ್ತು ಸಮಾಜದ ನಡುವಿನ ರುದ್ರ ಬಿರುಕಿನ ಅನುಭವದಿಂದ ನಾವೆಲ್‌ಗೆ ಸಮುದಾಯದ ಮೌಲ್ಯಗಳಲ್ಲಿ ನಂಬಿಕೆಯಿಲ್ಲ. ವೈಯಕ್ತಿಕ ಅಪನಂಬಿಕೆ ಮತ್ತು ಏಕಾಕಿತನಗಳು ನಾವೆಲ್ ಬರವಣಿಗೆಗೆ ಅಗತ್ಯ”[೧೧] ಸಾಂಸ್ಕೃತಿಕವಾಗಿ ಕಾದಂಬರಿಕಾರರು ಬೇರೆಯಾಗಿದ್ದರು. ಇದು ವಸಾಹತುಶಾಹಿಯು ರೂಪಿಸಿದ ವ್ಯಕ್ತಿತ್ವವೂ ಕೂಡಾ ಹೌದು. ಹಾಗೂ ಮೊದಮೊದಲಿನ ಕಾದಂಬರಿಗಳಿನ್ನು ಉನ್ನತ ದರ್ಜೆಯ ಸಾಹಿತ್ಯವೆಂದು ಅಂಗೀಕರಿಸುವಲ್ಲಿಯೇ ಕೆಲವು ಸಾಂಸ್ಕೃತಿಕ ಸಮಸ್ಯೆಗಳಿದ್ದವು. ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ‘ಕಾದಂಬರಿ’ಯ ರೂಪವು ಲೇಖಕರ ಮತ್ತು ಅನುಭವದ ಹೊಸ ಸಂವಹನದ ಸಾಧ್ಯತೆಯಾಗಿರುವ ಹಾಗೆಯೇ ಅದು ಲೇಖಕರು ಸಾಹಿತ್ಯರೂಪದ ಬದಲಾವಣೆಗೆ ಹಂಬಲಿಸಿರುವ ಪ್ರತೀಕವೂ ಹೌದು. ಅನುಭವದ ಬದಲಾವಣೆ ಮತ್ತು ಸಾಹಿತ್ಯ ರೂಪದ ಬದಲಾವಣೆಗೆ ಸಂಬಂಧವಿದೆ. ಕಾದಂಬರಿಯು ಪ್ರಾದೇಶಿಕ ಭಾಷೆಗಳಲ್ಲಿ ರೂಪುತಳೆಯುವಾಗ ಲೇಖಕರು ಕಾದಂಬರಿ ರೂಪವನ್ನು ಸಮರ್ಥಿಸಬೇಕಾದ ಅಗತ್ಯಗಳೂ ಬಂದವು. ಮತ್ತು ಕಾದಂಬರಿಗಳ ಮುಖೇನ ಲೇಖಕರು ಸಾಮಾಜಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಮಾಡಿದರು. ಕಾದಂಬರಿಯು ಹೊಸ ಮಾದರಿಯ ಓದುಗರನ್ನು ಅವಲಂಬಿಸಿಕೊಂಡಿದೆ. ಕಾದಂಬರಿಕಾರರು ಸಾಮಾಜಿಕವಾಗಿ ಯಾವ ಸ್ಥಾನದಲ್ಲಿ ನಿಂತಿದ್ದರೋ ಅದೇ ಮಾದರಿಯಲ್ಲಿ ಓದುಗರೂ ನಿಂತಿದ್ದರು. ಓದುಗರೂ ವಸಾಹತುಕಾಲದ ಕ್ಷಣದಿಂದ ಪ್ರೇರಿತರಾದವರು. ಓದುಗರು ಕೂಡಾ ಹೊಸ ಚಾರಿತ್ರಿಕ ಸನ್ನಿವೇಶದಲ್ಲಿ ತಮ್ಮ ಆಲೋಚನೆಯ ಕ್ರಮವನ್ನು ಬದಲಾಯಿಸಿಕೊಂಡರು. ಈ ಕುರಿತು ಕಾರಂತರ ಎರಡು ಅಭಿಪ್ರಾಯಗಳು ಗಮನಾರ್ಹ. ಇದರಿಂದ ಓದುಗವರ್ಗವೂ ಕಾದಂಬರಿಯನ್ನು ಬಯಸುತ್ತಿತ್ತು ಎಂದು ತಿಳಿಯುತ್ತದೆ.

ಬಂಕಿಮರ ಕಾದಂಬರಿಗಳು : ಕನ್ನಡದಂಥ ಪ್ರಾದೇಶಿಕ ಭಾಷೆಯಲ್ಲಿಯೂ ವಾಸ್ತವವಾದಿ ಮಾರ್ಗದ ಹಾದಿ ಹದವಾಗಿ ರೂಪಗೊಂಡಿತ್ತು. ಈ ಕಾಲದ ಕಾದಂಬರಿಗಳನ್ನು ಸಾರ್ವಜನಿಕರು ಓದತೊಡಗಿದ್ದಾರೆಂದೂ ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಕಾರಂತರ ಕಾದಂಬರಿಗಳು ಉದ್ಯಮದೊಂದಿಗೆ ಬೆಸೆದುಕೊಂಡಿವೆ. ಮತ್ತು ಅಷ್ಟರ ಮಟ್ಟಿಗೆ ಅಕ್ಷರಸ್ಥರಿದ್ದರು. ಕನ್ನಡದ ಮೊದಮೊದಲಿನ ವಾಸ್ತವತಾವಾದಕ್ಕೆ ಹತ್ತಿರವಿರುವ ಕಾದಂಬರಿಗಳ ಹಿನ್ನೆಲೆಯಲ್ಲಿ ಕೆಲವು ಸಂಗತಿಗಳನ್ನು ಮನಗಾಣಬಹುದು. ಕನ್ನಡದ ಕಾದಂಬರಿಗಳಲ್ಲಿ ಪ್ರಾದೇಶಿಕತೆ ಮತ್ತು ರಾಷ್ಟ್ರೀಯತಾವಾದಿ ಚಿಂತನೆಗಳ ಸಮರೂಪಗಳನ್ನು, ಎರಡನೆಯದಾಗಿ ಆಗತಾನೆ ಉದಯವಾದ ನವಸುಶಿಕ್ಷಿತ ವರ್ಗಗಳ ಮತ್ತು ಸಾಂಪ್ರದಾಯಿಕ ಸಮಾಜಗಳ ನಡುವಣ ಬಿಕ್ಕಟ್ಟಿನಿಂದ ಕಾದಂಬರಿಯು ಉಗಮವಾಯಿತು. ಮೂರನೆಯದಾಗಿ ಕಾದಂಬರಿಗಳು ವಸಾಹತುಶಾಹಿ ಅನುಭವದ ಸಾಂಸ್ಕೃತಿಕ ಕಥನಗಳಾಗಿವೆ. ನವ ಚಿಂತನೆಗಳ ರೂಪಕ್ಕೂ ಕಾದಂಬರಿಯ ರೂಪಕ್ಕೂ ಒಂದು ಸಂಬಂಧವಿದೆ. ಕನ್ನಡದ ಮೊದಮೊದಲಿನ ಕಾದಂಬರಿಗಳಲ್ಲಿ ಸಾಮಾಜಿಕ ಮತ್ತು

ಸಾಂಸ್ಕೃತಿಕ ಪಲ್ಲಟಗಳನ್ನು ಹಿಡಿದಿಡುವ ಪ್ರಯತ್ನವಿದೆ. ಪ್ರಾದೇಶಿಕ ವಾಸ್ತವ ಮತ್ತು ಬದಲಾಗಬೇಕಾದ ಅಗತ್ಯಗಳನ್ನು ಕಾದಂಬರಿಗಳು ಪ್ರತಿಪಾದಿಸಿದವು. ಕಾದಂಬರಿಕಾರರು ಸಾಮಾಜಿಕ ಸಂಬಂಧಗಳಲ್ಲಿ ನೇರ ಕ್ರಿಯಾಶಾಲಿಗಳಾಗಿರದೆ 'ನಿರೂಪಕ'ರಂತೆ ಬರೆದರು. ಇದರಿಂದ ಪಲ್ಲಟಗಳನ್ನು ಗುರುತಿಸುವುದು ಸುಲಭವಾಯಿತು.

ರಾಜಕೀಯ ಚರಿತ್ರೆಯ ಒಂದು ಮುಖವು ಈ ಕಾದಂಬರಿಯ ಒಡಲಲ್ಲಿ ಇದೆ. ಚರಿತ್ರೆಯು ಕಾದಂಬರಿಯ ನಿರೂಪಣೆಯ ಭಾಗವಾಗಿದೆ. ಒಂದು ಘಟನೆಯು ಚಾರಿತ್ರಿಕವಾಗಿ ನಡೆದರೆ ಅದನ್ನು ಚರಿತ್ರೆಯೆಂದು ಕರೆಯುತ್ತೇವೆ. ಚರಿತ್ರೆಗೂ ಒಂದು ನಿರೂಪಣೆಯಿರುತ್ತದೆ. ಚರಿತ್ರೆಯು ಅನೇಕ ಸಂದರ್ಭಗಳಲ್ಲಿ ಸರಳವಾದ ನಿರೂಪಣೆಯಾದರೂ ಅದು ಕತೆಯಂತೆಯೇ ಇರುತ್ತದೆ. ಕತೆ: ಕಾದಂಬರಿಗಳು ಕೂಡಾ ನಿರೂಪಣೆಯೇ. ಚರಿತ್ರೆಯೆನ್ನುವುದು ಸತ್ಯದ ಕತೆಯಾದರೆ, ಕತೆಯು ಹೇಳುವ ಸತ್ಯ ನಿರೂಪಣೆಯ ಒಳಗೆ ಹುದುಗಿರುತ್ತದೆ. ಚರಿತ್ರೆಯ ನಿರೂಪಣೆಯ ರಚನೆಗೂ, ಕತೆಯು ಹೇಳುವ ನಿರೂಪಣೆಗೂ ಭಿನ್ನತೆಯಿದೆ. ಅಷ್ಟೆ ವ್ಯತ್ಯಾಸ!. ಆಗಿನ ಹೆಚ್ಚಿನ ಕಾದಂಬರಿಗಳು ಬೇರೆ ಬೇರೆ ಪ್ರಾದೇಶಿಕ ಚಾರಿತ್ರಿಕ ನಿರೂಪಣೆಯ ಭಾಗಗಳು. ಅವರ ಮನಸ್ಸು ಕೂಡಾ ಆಧುನಿಕ ಚರಿತ್ರೆಯಿಂದ ಪ್ರೇರಿತವಾದುದು. ಅವರ ಆಲೋಚನೆಯ ಕ್ರಮ ನಿರ್ದಿಷ್ಟ ಕಾಲಕ್ಕೆ ಸಂಬಂಧಿಸಿದ್ದು. ಮೊದಮೊದಲಿನ ಕಾದಂಬರಿಗಳ ಗಂಭೀರ ಜೀವನ ದೃಷ್ಟಿಯೇ ಅನಂತರದ ಕಾದಂಬರಿಗಳಲ್ಲಿ ಅಂದರೆ ವಸಾಹತೋತ್ತರ ಸಂದರ್ಭದ ಸಾಮಾಜಿಕ ವಿಶ್ಲೇಷಣೆಗಳ ಕಾರಂತರ ಕಾದಂಬರಿಗಳು (ಅವು ವಾಸ್ತವದ ಹತ್ತಿರವಿರುವುದರಿಂದ) ವಸಾಹತುಶಾಹಿ ಚರಿತ್ರೆ; ವಸಾಹತೋತ್ತರ ಚರಿತ್ರೆ; ಜಮೀನುದಾರಿ ಪದ್ಧತಿಯ ಸಾಮಾಜಿಕ ಜೀವನದ ಚರಿತ್ರೆ: ಎರಡನೆಯ ಮಹಾಯುದ್ಧ ಮತ್ತು ಭಾರತೀಯ ಸಮಾಜ ಜೀವನದ ಮೇಲೆ ಅದರ ಪರಿಣಾಮ ಮುಂತಾದವುಗಳನ್ನು ವಿವರಿಸುತ್ತವೆ. ಕುತೂಹಲದ ಸಂಗತಿಯೆಂದರೆ ಕಾರಂತರು ಕಾದಂಬರಿಗಳಲ್ಲಿ ಕಾರ್ಯ-ಕಾರಣ ಸಂಬಂಧವನ್ನು ವಿವರಿಸುತ್ತಾರೆ. ಕಾರಣಗಳ ಹುಡುಕಾಟ ಕಾರಂತರ ಕಾದಂಬರಿಗಳ ಗುಟ್ಟು. ಪಶ್ಚಿಮದ ಪುನರುಜ್ಜೀವನ ಕಾಲಘಟ್ಟದ ಚಿಂತನೆಗೂ ಈ ತರಹದ ವಿಚಾರಧಾರೆಗೂ ಇರುವ ಸಂಬಂಧವನ್ನು ಗಮನಿಸಬೇಕು.

ಆಧುನಿಕ ಕಾಲದ ಚರಿತ್ರೆಯು ಅತ್ಯಂತ ಸಂಕೀರ್ಣವಾದುದು. ಹಾಗೆಯೇ ಆಧುನಿಕತೆ ಹುಟ್ಟುಹಾಕಿದ ಚರಿತ್ರೆಯಲ್ಲಿ ಬೇರೆ ಬೇರೆ ಮಾದರಿಯ ಕೌಶಲಗಳಿವೆ. ಬೇರೆ ಬೇರೆ ತಾತ್ವಿಕತೆಗಳಿವೆ. ಹಾಗೂ ವಸಾಹತುಶಾಹಿ ಸಂದರ್ಭದ ಚರಿತ್ರೆಗೆ ಭಾರತೀಯ ಚಿಂತನೆಯ ಕ್ರಮಗಳು ತೋರಿಸಿದ ಪ್ರತಿಕ್ರಿಯೆಗಳು ಕೂಡಾ ಬೇರೆ ಬೇರೆ. ಇಂದಿರಾಬಾಯಿ, ಮಾಡಿದುಣ್ಣೋ ಮಹಾರಾಯ, ಇಂದಿರೆ – ಈ ಮೂರೂ ಕಾದಂಬರಿಗಳಲ್ಲಿಯೂ ಲೇಖಕನಿಗೆ ಮಹತ್ವದ ಪಾತ್ರವಿರುವುದು ಸೂಚಕವಾಗಿದೆ. ರಾಷ್ಟ್ರೀಯತೆಯ ಸಮಸ್ಯೆಯೆನ್ನುವುದು ಒಂದೇ ಬಾಗಿಲಲ್ಲಿ ಹೊರಬಂದ ಪ್ರಕ್ರಿಯೆಗಳು ಎಂದು ಕರೆಯುವುದು ಕಷ್ಟ. ಬರಹಗಳು ಆ ಕಾಲದ ಸಾಂಸ್ಕೃತಿಕ ಪ್ರತಿಕ್ರಿಯೆಗಳಾದರೆ ರಾಜಕೀಯ ಚಟುವಟಿಕೆಗಳು ಬೇರೊಂದು ಪ್ರತಿಕ್ರಿಯೆಗಳು. ಬರಹವೆನ್ನುವುದು – ಅದು ಯಾವುದೇ ರೂಪದಲ್ಲಿರಲಿ ಅದಕ್ಕೆ ಆ ಸಂದರ್ಭದ ಮಹತ್ವಗಳು ಬೇರೆ. ಆಧುನಿಕಕಾಲದ ಕಾದಂಬರಿಗಳು ಈ ಅರ್ಥದಲ್ಲಿ ಲೌಕಿಕದ ಪುರಾಣಗಳೆಂದರೂ ಸರಿಯಾಗುತ್ತದೆ. ಕಾದಂಬರಿಗಳು

ಆಗಮಿಕದ ಮಾದರಿಯವು ಅಲ್ಲ. ಆಗಿನ ಕೆಲವು ಕಾದಂಬರಿಗಳಲ್ಲಿ ಸಾಂಸ್ಕೃತಿಕ ಆಶಾವಾದವಿದೆ. ಭವಿಷ್ಯದ ಕುತೂಹಲವಿದೆ. ಮತ್ತು ಕೆಲವು ಕಾದಂಬರಿಗಳು ಜೀವನದ ಇತ್ಯಾತ್ಮಕವಾದ ಸುಖಾಂತದ ಭರವಸೆಗಳಿವೆ.

ಆಧುನಿಕ ಚರಿತ್ರೆಯೇ ಹೊಸ ಯುಗದ ಮಹತ್ವದ ಸಂಕೇತವಾಗಿದೆ. ಇದರಿಂದಾಗಿ ಹೊಸಯುಗದ ಚರಿತ್ರೆಯ ಒಂದು ಮುಖ ಸಾಂಸ್ಕೃತಿಕ ಪಲ್ಲಟ. ಈ ಪಲ್ಲಟದಲ್ಲಿ ಸುಶಿಕ್ಷಿತವರ್ಗದ ಆಶಾವಾದವಿದೆ. ವಸಾಹತುಯುಗದ ಆಧುನಿಕ; ಶಿಕ್ಷಣ; ಸಂವಹನ ಮಾಧ್ಯಮಗಳು; ಚಳುವಳಿ; ಹಳೆಯ ರಾಜಕೀಯ ಪರಂಪರೆಗಳ ನಾಶ; ನಾಗರಿಕತೆಯ ಉದಯ – ಇವುಗಳ ಬಳುವಳಿಯು ಸಾಮಾನ್ಯವಾದುದಲ್ಲ. ಹೊಸ ಯುಗದ ಈ ತರಹದ ಸಂವೇದನೆಯನ್ನು; ಅದು ಮಾಡುತ್ತಿರುವ ಅದಲು ಬದಲಾದ ಕ್ರಮವನ್ನು ಬುದ್ಧಿಜೀವಿಗಳು ಮತ್ತು ರಾಜಕೀಯ ಚಿಂತಕರು ಬೇರೆ ಮಾದರಿಗಳಲ್ಲಿ ಅಭಿವ್ಯಕ್ತಿಸುವ ಪ್ರಯತ್ನವನ್ನು ಮಾಡಿದರು. ಜನರ ಮತ್ತು ಸಮಾಜದ ಅನುಭವ ಲೋಕವನ್ನು ಲೇಖಕರು ಬರಹ ಮೂಲಕ ಅನಾವರಣ ಮಾಡಿದರು. ಆಯಾ ಕಾಲದ ಸಾಮಾಜಿಕ ಅನುಭವವನ್ನು ಅವರು ವಿವರಿಸುತ್ತಾರೆ. ಮತ್ತು ಅದು ಪ್ರಾತಿನಿಧೀಕರಣದ ಪ್ರಕ್ರಿಯೆಗೆ ಗುರಿಯಾಗಿದೆ. ವಸಾಹತು ಕಾಲದ ಚರಿತ್ರೆಯ ಪ್ರಶ್ನೆಯು ಸಂಕೀರ್ಣವಾವುದೆ. ಚರಿತ್ರೆ ಮತ್ತು ಅದರ ದಾಖಲೆಯು ಆಗ ಸಮಸ್ಯೆಯು ಆಗಿತ್ತು. ಯಾವುದನ್ನು ದಾಖಲಿಸಬೇಕು ಎನ್ನುವ್ಯದು ಮುಖ್ಯವಾಗಿತ್ತು. ಚರಿತ್ರೆಯನ್ನು ನಾವು ಎಲ್ಲಿ ಗುರುತಿಸಬೇಕು ಎನ್ನುವುದು ಮುಕ್ಯವಾದ ಪ್ರಶ್ನೆಯಾಗಿತ್ತು ಎಂದು ಕೋನ್ ಹೇಳುತ್ತಾನೆ (ಬರ್ನಾರ್ಡ್. ಸಿ, ಕೋನ್ – ಎನ್ ಅಂಥ್ರಾಪಿಲಸ್ಟ್ ಅಮೆಂಗ್ ದ ಹಿಸ್ಟಾರಿಯನ್)

ಹೊಸ ಸಂದರ್ಭದಲ್ಲಿ ಮಧ್ಯಮವರ್ಗದ ಲೇಖಕರು ಆಗ ತಾನೇ ಹೊಸದಾಗಿ ಅರಿವಿಗೆ ಬಂದ ಮತ್ತು ಅವರು ನಿರ್ವಚಿಸಬೇಕಾದ ಸಂಗತಿಗಳ ಕುರಿತು ಬರಹಗಳ ದಾರಿಯಲ್ಲಿ ಆಗಬೇಕಿತ್ತು. ಕನ್ನಡದ ಉದಾಹರಣೆಯನ್ನೇ ತೆಗೆದುಕೊಂಡು ಹೇಳುವುದಾದರೆ ನಮ್ಮ ಆ ಕಾಲದ ಲೇಖಕರು ಬೇರೆ ಬೇರೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರು. ಅವರಿಗೆ ಅದು ಚಾರಿತ್ರಿಕ ಅನಿವಾರ್ಯತೆ ಕೂಡಾ. ರಾಜಕೀಯ ಮತ್ತು ತತ್ವಜ್ಞಾನ; ರಾಜಕಾರಣ ಮತ್ತು ನಾಡಿನ ಪರಿಸ್ಥಿತಿ; ನಾಡಿನ ಆದರ್ಶ ಮತ್ತು ಚಟುವಟಿಕೆ – ಹೀಗೆ ಪ್ರಭೇದಗಳಿಲ್ಲದೆ ಬರಹಗಾರರು ಬರಹಗಳನ್ನು ಮತ್ತು ಚಳುವಳಿಯನ್ನು ಒಂದು ಅಂಗುಲದಲ್ಲಿ ನೋಡಿದ ಪ್ರಯತ್ನ ಬಹಳ ಮುಖ್ಯವಾದುದು. ಚಾರಿತ್ರಿಕವಾಗಿಯೂ ಈ ಲೇಖಕರು ಬರಹಗಳನ್ನು ಕೂಡಾ ರಾಜಕೀಯ ಚಟುವಟಿಕೆಯ ಅಂತಸ್ಥ ಪ್ರಣಾಲಿಯನ್ನು ಇಟ್ಟುಕೊಂಡಿದ್ದಾರೆ.

ಕಾದಂಬರಿಗಳಲ್ಲಿರುವ ಪ್ರಾದೇಶಿಕತೆ; ಜಾತಿ; ಅವರ ಸಂಪ್ರದಾಯಗಳು ಕಥನಾತ್ಮಕ ನಿರೂಪಣೆಗಳು. ಅದಕ್ಕೆ ಚಾರಿತ್ರಿಕ ಸಾಕ್ಷ್ಯಗಳು ಬೇಕಿಲ್ಲ. ಮತ್ತು ಒಬ್ಬ ಲೇಖಕ ಈ ತರಹ ಬರೆಯುತ್ತಾನೆಂದರೆ ಅದು ನಿರ್ವಸಹಾತೀಕರಣದ ಪ್ರಕ್ರಿಯೆಯೇ ಆಗಿರುತ್ತದೆ. ನವೋದಯಕಾಲದ ಕಾದಂಬರಿಗಳಲ್ಲಿ ಬರುವ ಸಾಮಾಜಿಕರಲ್ಲಿಯೂ ಎರಡು ವಿಧ: ಮೌಲ್ಯರಹಿತ ಮನುಷ್ಯರು ಮತ್ತು ಮೌಲ್ಯಸಹಿತ ಮನುಷ್ಯರು, ಮೌಲ್ಯರಹಿತ ಮನುಷ್ಯರು ದಿನಂದಿನದ ವಾಸ್ತವದಲ್ಲಿ ಬದುಕುತ್ತಾರೆ. ಅವರಿಗೆ ಬದುಕುವುದು ಕಷ್ಟವಾದರೂ ಅವರಿಗೆ ಬೇರೆ ಆಸಕ್ತಿಗಳಿಲ್ಲ, ಆದರ್ಶಗಳಿಲ್ಲ.

ಅಸ್ತಿತ್ವವಾದಿಗಳಂತೆ ಹೇಳುವುದಿದ್ದರೆ ಈ ಮಾದರಿಯ ಮನುಷ್ಯರು ಸ್ವ ಅನನ್ಯತೆಯ ಅರ್ಥವನ್ನು ಕಂಡುಕೊಂಡವರಲ್ಲ. ಇನ್ನೊಂದು ಬಗೆಯವರು ಮೌಲ್ಯಸಹಿತ ಮನುಷ್ಯರು. ಸ್ವ ಅನನ್ಯತೆಯ ಅರ್ಥವನ್ನು ಕಂಡುಕೊಂಡವರು. ಹಳ್ಳಿಯಾಗಲಿ; ನಗರ ವಾಗಲಿ – ಇವರ ಜೀವನ ಕ್ರಮವು ಸಾಮುದಾಯಿಕವಲ್ಲ. ಮೌಲ್ಯಸಹಿತ ಮನುಷ್ಯರ ಜೀವನ ಕ್ರಮದ ಅಭಿವ್ಯಕ್ತಿಯು ಅವರ ಕೆಲಸ ಕಾರ್ಯಗಳಲ್ಲಿ ವ್ಯಕ್ತವಾಗುತ್ತದೆ ಎಂಬುದು ಗಮನಾರ್ಹ. ಆಗಿನ ಎಲ್ಲಾ ಕಾದಂಬರಿಗಳು ವಿವರಣೆಯ ಮೂಲಕ ಸಾಗುವುದರಿಂದ ಅದಕ್ಕೆ ಮತ್ತೆ ಯಾವುದೇ ನ್ಯಾಯ ಸಮ್ಮತಿಯನ್ನು ಅವರು ಕೋರುವುದಿಲ್ಲ. ಯಾರು ಜೀವನ ಮೌಲ್ಯದ ಬಗ್ಗೆ ಕ್ರಿಯಾತ್ಮಕವಾಗಿ ವರ್ತಿಸುತ್ತಾರೋ ಅವರೆಲ್ಲಾ ತಮ್ಮ ಆದರ್ಶಕ್ಕಾಗಿ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಮತ್ತು ಅಲ್ಲಿ ಸಂಘರ್ಷವಂತೂ ಇದ್ದೇ ಇರುತ್ತದೆ. ಕಾದಂಬರಿಯ ಪ್ರಕಾರವು ಕನ್ನಡದಲ್ಲಿ ಹುಟ್ಟಿದ ಸನ್ನಿವೇಶವನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ಕಾದಂಬರಿಯು ಹುಟ್ಟಿಕೊಳ್ಳುವ ಹಿನ್ನೆಲೆಯನ್ನು ಈಗಾಗಲೆ ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. "ಕಾದಂಬರಿಯನ್ನು ಮಧ್ಯಮವರ್ಗದ ಮಹಾಕಾವ್ಯ", "ಸಾಂಪ್ರದಾಯಿಕ ಸಮಾಜದ ರುದ್ರ ಬಿರುಕಿನಿಂದ ಕಾದಂಬರಿಯ ಪ್ರಕಾರವು ಹುಟ್ಟಿಕೊಳ್ಳುತ್ತದೆ". "ಕಾದಂಬರಿ ಪ್ರಕಾರಕ್ಕೂ ಮಧ್ಯಮ ವರ್ಗದ ಉದಯಕ್ಕೂ ಸಂಬಂಧವಿದೆ". ಕಾದಂಬರಿ ಪ್ರಕಾರ ಮತ್ತು ಮುದ್ರಣ ತಂತ್ರಜ್ಞಾನಕ್ಕೂ ಸಂಬಂಧವಿದೆ ಮುಂತಾದ ವ್ಯಾಖ್ಯೆಗಳನ್ನು ಈಗಾಗಲೆ ಅನೇಕ ವಿಮರ್ಶಕರು ಪ್ರತಿಪಾದಿಸಿದ್ದಾರೆ.

ವಸಾಹತುಶಾಹಿ ರಾಷ್ಟ್ರಗಳಲ್ಲಿಯೂ ಇದರ ಪರಿಸ್ಥಿತಿಯು ತುಂಬಾ ಭಿನ್ನವಾದುದಲ್ಲ. ಇಂಗ್ಲೀಷ್ ಶಿಕ್ಷಣ; ಉದಯವಾದ ನವ ಶಿಕ್ಷಿತ ವರ್ಗ; ಮುದ್ರಣ ತಂತ್ರಜ್ಞಾನ ಮುಂತಾದರ ದೆಸೆಯಿಂದ ವಸಾಹತುಶಾಹಿ ರಾಷ್ಟ್ರಗಳಲ್ಲಿಯೂ ಕಾದಂಬರಿಯ ಉಗಮಕ್ಕೆ ಬೇಕಾದ ಭೂಮಿಕೆಯು ಸಿದ್ಧವಾಯಿತು. ವಸಾಹತುಶಾಹಿ ಅನುಭವದ ಸಂದರ್ಭದಲ್ಲಿಯೂ "ಲೇಖಕರ" ಸ್ಥಾನಮಾನ ಮತ್ತು "ಓದುಗರ ಸ್ಥಾನಮಾನ"ವು ಬೇರೆಯಾಯಿತು. ಲೇಖಕರು ಹೊಸ ಸಾಮಾಜಿಕ ಸನ್ನಿವೇಶದಲ್ಲಿ ಹೊಸ ರೀತಿಯ ಬರಹದ ಮುಖೇನ ಪ್ರದರ್ಶಕರಾದರು. ಹೊಸ ಸನ್ನಿವೇಶ ಮತ್ತು ಹೊಸ ನಿರ್ವಹಣೆಯು ಇಂಗ್ಲೀಷ್ ಶಿಕ್ಷಣದ ಅನುಕರಣೆಯಿಂದ ಬಂತು. ವಸಾಹತುಶಾಹಿ ಅನುಭವ ಮತ್ತು ಅದರ ಪರಿಣಾಮಗಳ ಕಡೆಗೆ ಲೇಖಕರು ಗಮನ ನೀಡಬೇಕಾಗಿ ಬಂದುದರಿಂದ ಕಾದಂಬರಿಯ ಉಗಮವಾಯಿತು. ಹೊಸ ಭಾವ ಮತ್ತು ಹೊಸ ರೂಪಗಳ ಅಗತ್ಯ ಒಂದು ಬೌದ್ಧಿಕ ಅವಶ್ಯಕತೆಯೂ ಹೌದು. ಸಾಹಿತ್ಯದ ನಿರ್ವಚನ ಮತ್ತು ಅದರ ಅಗತ್ಯವು ವಸಾಹತುಶಾಹಿ ಅನುಭವಕ್ಕೆ ಒಳಗಾದ ಸನ್ನಿವೇಶದಲ್ಲಿ ಅತ್ಯಂತ ಸಂಕೀರ್ಣವಾದ ಸಮಸ್ಯೆಗಳನ್ನು ಒಳಗೊಂಡಿತ್ತು. ವಸಾಹತುಶಾಹಿ ಅನುಭವಕ್ಕಿಂತ ಪೂರ್ವದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದ ಸಾಹಿತ್ಯ ರೂಪಗಳು ಹೊಸ ಶಿಕ್ಷಣ ನೀತಿಯ ಕಾರಣದಿಂದ ಸ್ವಲ್ಪಮಟ್ಟಿಗೆ ಮೂಲೆ ಗುಂಪಾಗತೊಡಗಿದವು. ಮಹಾಕಾವ್ಯದ ಪರಂಪರೆಯೊಂದು ಕಾಣೆಯಾಯಿತು. ಕಾದಂಬರಿಯು ಆ ಜಾಗವನ್ನು ತುಂಬತೊಡಗಿತು. ಕಾದಂಬರಿಯೆಂಬ ಸಾಹಿತ್ಯ ಪ್ರಕಾರವು ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿಯೂ ಕಾಣಿಸತೊಡಗಿತು. ವಿಶೇಷವೆಂದರೆ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಕಾಣಿಸಿಕೊಂಡ ಕಾದಂಬರಿಗಳಲ್ಲಿಯೂ ವಸಾಹತುಶಾಹಿ ಅನುಭವದ ಕುರಿತು ವಿಶಿಷ್ಟ ಚಿಂತನೆಗಳಿವೆ. ಎರಡನೆಯದಾಗಿ ಭಾರತದಲ್ಲಿ

ಬಂದ ಮೊದಮೊದಲಿನ ಕಾದಂಬರಿಗಳು ವಸಾಹತುಶಾಹಿಯುಗವು ತಂದುಕೊಟ್ಟ ಮೌಲ್ಯಗಳು ಮತ್ತು ಹಳೆಯ ಸಾಂಪ್ರದಾಯಿಕ ಸಮಾಜದ ವಿದಾಯದ ಕುರಿತು ಪರಿಕಲ್ಪನಾತ್ಮಕವಾಗಿ ಮಾತಾಡುತ್ತವೆ. ಮೂರನೆಯದಾಗಿ ಎಲ್ಲಾ ಕಾದಂಬರಿಗಳು ಒಂದಲ್ಲ ಒಂದು ಅರ್ಥದಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಪ್ರತಿಪಾದಿಸುತ್ತವೆ.

ಕಾದಂಬರಿ ವಸಾಹತು ರಾಷ್ಟ್ರ ಕಲ್ಪನೆಯ ಒಡಹುಟ್ಟಿರುವುದು ಮಾತ್ರವಲ್ಲ ಅದನ್ನು ನಿರೂಪಿಸುವ ಕಥನ ರೂಪ ಕೂಡ, ಸಂರಚನಾತ್ಮಕವಾಗಿ ಅದು ರಾಷ್ಟ್ರವನ್ನು ಹೋಲುವ ರಚನೆ, ರಾಷ್ಟ್ರದ ಗಡಿರೇಖೆಗಳು, ಜೊತೆಗೂಡಿ ಬದುಕುವ ಜನ ಮತ್ತು ಸಮುದಾಯಗಳು, ರಾಷ್ಟ್ರದ ಚರಿತ್ರೆ, ಅದರ ಅಭೂತಪೂರ್ವ ಸುವರ್ಣಯುಗ, ಬಹುಭಾಷಿತ್ವ ಮೊದಲಾದವುಗಳನ್ನು ಕಾದಂಬರಿಯೂ ಒಳಗೊಂಡಿದೆ. ಕಾದಂಬರಿಯಲ್ಲಿ ಕಾಣಿಸುವುದು ಅನೇಕ ದನಿಗಳು ಮತ್ತು ಸಂವಾದಗಳು ಹಾಗೂ ಪರಂಪರೆ ಮತ್ತು ಶೈಲಿಗಳು. ಭಕ್ತಿನ್‌ನ ಈಗಾಗಲೇ ಉಲ್ಲೇಖಿಸಿದ ಬಹುಭಾಷಿತ್ವ ಕಾದಂಬರಿಯ ಪ್ರಧಾನ ಲಕ್ಷಣ.

ಎರಡನೆಯದಾಗಿ ಕಾದಂಬರಿ ಮುಂದಿಡುವುದು ಸಂಯುಕ್ತ ಸಂಸ್ಕೃತಿಯನ್ನು ಶ್ರೇಣೀಕೃತ ಸಮಾಜದ ಉನ್ನತ ಮತ್ತು ಸಾಮಾನ್ಯರನ್ನು ಅದು ಒಂದೆಡೆಗೆ ತರುತ್ತದೆ. ಅವರ ಜೀವನ ಶೈಲಿ, ಭಾಷೆಯ ಶೈಲಿಗಳು ಕಾದಂಬರಿಯಲ್ಲಿ ಜೊತೆಯಾಗಿ ಅನುಸಂಧಾನಿಸುತ್ತವೆ, ಹೀಗೆ ಅನುಸಂಧಾನಿಸಿಯೂ ತಮ್ಮ ಅಂತರ ಉಳಿಸಿಕೊಳ್ಳುತ್ತವೆ.

ಕಾಲದ ದೃಷ್ಟಿಯಿಂದಲೂ ಕಾದಂಬರಿ ಮತ್ತು ರಾಷ್ಟ್ರಗಳ ನಡುವೆ ಸಾಮ್ಯವಿದೆ. ರಾಷ್ಟ್ರ ಕಾದಂಬರಿ ಎರಡಕ್ಕೂ ಆಧುನಿಕ ಮನುಷ್ಯ ಮತ್ತು ಕಾಲಾನುಕ್ರಮವಾದ ಕೆಲೆಂಡರ್ ಸಮಯವೆನ್ನುವುದು ಮುಖ್ಯ. ಒಂದು ಸಮುದಾಯವು ಸರಳ ರೇಖಾತ್ಮಕವಾದ ಕಾಲದಲ್ಲಿ ಮುಂದುವರಿಯುತ್ತಾ ಉನ್ನತಿ, ಅವನತಿಯನ್ನು ಹೊಂದುವುದನ್ನು ಕಾದಂಬರಿ ಚಿತ್ರಿಸುತ್ತದೆ. ಐತಿಹಾಸಿಕ ಕಾದಂಬರಿಗಳನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ.[೨೩]

ಆಗಿನ ಲೇಖಕರು ಕಾದಂಬರಿಗಳನ್ನು ಬರೆಯಲು ತೊಡಗಿರುವ ಚಾರಿತ್ರಿಕ ಕಾಲವು ಕನ್ನಡದ ಮಟ್ಟಿಗೆ ಮಹತ್ವಪೂರ್ಣವಾದುದು. ಕನ್ನಡದಲ್ಲಿ ಇವರಿಬ್ಬರು ಬರೆಯಲು ಪ್ರಾರಂಭಿಸಬೇಕಾದ ಮೊದಲು ಗಳಗನಾಥ; ಎಂ.ಎಸ್. ಪುಟ್ಟಣ್ಣ; ಗುಲ್ವಾಡಿ ವೆಂಕಟರಾಯ, ತಿರುಮಲಾಂಬಾ, ಕಾರಂತ, ಕುವೆಂಪು ಮುಂತಾದವರು ಬರೆಯಲು ಪ್ರಾರಂಭಿಸಿಯಾಗಿತ್ತು. ಕಾದಂಬರಿಗಳನ್ನು ಓದುವ ರುಚಿಯು ಓದುಗರಿಗೆ ದೊರಕಿತ್ತು. ಆ ಮೂಲಕ ಪರಿವರ್ತನೆಗೆ ಒಳಗಾಗಿರುವ ಮತ್ತು ಒಳಗಾಗುತ್ತಲೇ ಇರುವ ಜೀವನದ ಚಿತ್ರಣವು ಅವರ ಕಾದಂಬರಿಗಳಲ್ಲಿ ಕಾಣಿಸುತ್ತದೆ.

ಆಗಿನ ಕಾದಂಬರಿಗಳನ್ನು ಓದುವಾಗ ಒಂದು ಅಂಶ ತಕ್ಷಣ ಗಮನ ಸೆಳೆಯುತ್ತದೆ: ರಾಷ್ಟ್ರ ರಾಜಕಾರಣ ಮತ್ತು ಪ್ರಾದೇಶಿಕ ರಾಜಕಾರಣಗಳನ್ನು ಬೆಸೆದ ಅನೇಕ ನವೋದಯ ಕವಿತೆಗಳು ನಮಗೆ ದೊರೆಯುತ್ತವೆ. ಈ ಅರ್ಥದಲ್ಲಿ ನವೋದಯ ಕಾವ್ಯವೆನ್ನುವುದು ಬರಿಯ ಕಲಾತ್ಮಕವಾದ ಬದಲಾವಣೆ ಮಾತ್ರವೇ ಅಲ್ಲ – ಅದು ವಸಾಹತುಶಾಹಿ ಅನುಭವದ ಜೊತೆಗೆ ಮಧ್ಯಮ

ವರ್ಗದ ಬುದ್ಧಿಜೀವಿಗಳು ನಡೆಸಿದ ಸಂಘರ್ಷವೂ ಹೌದು. ನವ್ಯ ವಿಮರ್ಶಕರು ಪರಿಭಾವಿಸಿದ ಥರ – ಹುಸಿಯಾದ ಒಂದು ಆದರ್ಶದ ಪರಿಕಲ್ಪನೆಯಿಂದ ನವೋದಯ ಹುಟ್ಟಿಲ್ಲ. ತುಂಬಾ ಖಚಿತವಾದ ಅರ್ಥದಲ್ಲಿ ಅದಕ್ಕೆ ಕ್ರಿಯಾತ್ಮಕವಾದ ಮೌಲ್ಯವಿತ್ತು. ಮತ್ತು ಕಲೆಯಲ್ಲಿ ಹೊಸತನವನ್ನು ಹುಡುಕುವ ಪ್ರಕ್ರಿಯೆಯಲ್ಲಿಯೂ "ಯೂರೋಪ್" ಕೇಂದ್ರಿತ ಚಿಂತನೆಯನ್ನು ವಿರೋಧಿಸುವ ಹಟವೂ ಇತ್ತು. ಕಾದಂಬರಿಗಳು ಕೂಡಾ ಹಾಗೆಯೇ – ಅದು ಆಗ ಹುಟ್ಟಿದ ಹೊಸ ವರ್ಗದ ಓದಿನ ಆಸಕ್ತಿ ಮತ್ತು ಅಭಿರುಚಿಯನ್ನು ರೂಪಿಸಲು ಸಾಹಿತ್ಯದ ಪರಿಭಾಷೆಯು ಸಾಂಸ್ಥಿಕ ಕಲಿಕೆಯ ಭಾಗವಾಗಿ; ಒಂದು ಜ್ಞಾನ ಶಿಸ್ತಾಗಿ ರೂಪುಗೊಂಡಾಗ ಉಂಟಾದ ಖಾಲಿಯಾದ ಜಾಗವನ್ನು ಕಾರಂತರಂಥ ಕಾದಂಬರಿಕಾರರು ತುಂಬಿಕೊಟ್ಟರು ಎಂಬುದನ್ನು ಚಾರಿತ್ರಿಕ ಗತಿಶೀಲತೆಯ ಮುಖೇನ ಅರ್ಥ ಮಾಡಿಕೊಳ್ಳುವುದು ಸೂಕ್ತ. ಕುವೆಂಪು ಕಾದಂಬರಿಗಳು: ರಾವ್ ಬಹದ್ದೂರರ ಗ್ರಾಮಾಯಣ; ಮಿರ್ಜಿಯವರ ನಿಸರ್ಗದಂಥ ಕಾದಂಬರಿಗಳು ಆ ಸಂದರ್ಭದಲ್ಲಿ ಉಂಟಾದ ಓದುಗ ಮತ್ತು ಸಾಹಿತ್ಯದ ನಡುವಣ ಅವಕಾಶವನ್ನು ತುಂಬಿಕೊಟ್ಟವು. ಮತ್ತು ಈ ಕಾದಂಬರಿಗಳನ್ನು ಓದುವಾಗ ಓದುಗರು ಅರ್ಥವಿಸಿಕೊಳ್ಳುವ ಪ್ರಕ್ರಿಯೆಯ ಕಡೆಗೆ ಗಮನ ಹರಿಸಬೇಕಾಗಿಲ್ಲ. ಈ ಮಾದರಿಯ ಒಳಜಗತ್ತಿನಲ್ಲಿ ಏನು ಜರುಗುತ್ತದೆ ಅದನ್ನು ಸಾಮಾನ್ಯ ಓದುಗರು ಹೇಗೆ ಅರ್ಥಮಾಡಿಕೊಳ್ಳುತ್ತಾರೆಂದರೆ – ಅದಕ್ಕೆ ಮುಖ್ಯ ಕಾರಣ ಕಾದಂಬರಿಗಳ ಸ್ಪಷ್ಟತೆ. ಲೇಖಕರ ನಿಲುವುಗಳು ಕಾದಂಬರಿಗಳ ವಿವರಣೆಗಳಲ್ಲಿ ನಿಸ್ಸಂದೇಹವಾಗಿ ಜರುಗುತ್ತವೆ. ಆದುದರಿಂದಲೇ ಕಾದಂಬರಿ ಮತ್ತು ಓದುಗರು ಯಾವುದೇ ಅಂತರವಿಲ್ಲದೆ ಸಂವಾದ ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಈ ಕಾರಣದಿಂದಲೂ ಚಾರಿತ್ರಿಕ – ಸಾಂಸ್ಕೃತಿಕ ಚಲನಶೀಲತೆಯಲ್ಲಿ ಈ ಥರದ ಕಾದಂಬರಿಗಳ ಪಾತ್ರ ದೊಡ್ಡದು. ವಸಾಹತು ಚರಿತ್ರೆಯ ಸಂದರ್ಭದಲ್ಲಿ ಮತ್ತು ಅನಂತರ ಕಾದಂಬರಿಗಳಲ್ಲಿ ಬೇರೆ ಬೇರೆ ಪಲ್ಲಟಗಳನ್ನು ನಿರೂಪಿಸಲು ಸ್ವಾತಂತ್ರ್ಯವಿತ್ತು ಎನ್ನುವುದೇ ಚಾರಿತ್ರಿಕವಾಗಿ ಮಹತ್ವದ ಸಂಗತಿಗಳಾಗಿವೆ. ಮೇಲೆ ಹೇಳಿರುವ ಕಾದಂಬರಿಗಳ ಮಾದರಿಗಳನ್ನು ಗಮನಿಸಿದರೆ ಅನುಭವದ ಸಮಗ್ರತೆಯ ಅರಿವೂ ಬರುತ್ತದೆ. ಕುವೆಂಪು 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ವಿವರಿಸುವ ಅನುಭವಕ್ಕೂ ವ್ಯತ್ಯಾಸವಿದೆ. ಆದರೆ ಇಬ್ಬರೂ ಲೇಖಕರೂ ಕಾದಂಬರಿಗಳಲ್ಲಿ ಚಿತ್ರಿಸುವ ಅನುಭವಗಳನ್ನು ಅಸಹಜ/ಅತಾರ್ಕಿಕವೆಂದು ಕರೆಯಲು ಬರುವುದಿಲ್ಲ. ಇಬ್ಬರೂ ಲೇಖಕರೂ ಸಾಮಾಜಿಕವಾಗಿ ನಿಯಂತ್ರಣಕ್ಕೆ ಒಳಪಟ್ಟ ಸಾಂಸ್ಕೃತಿಕ ಸಂಗತಿಗಳನ್ನು ತಮ್ಮದೇ ಅನುಭವದ ಹಿನ್ನೆಲೆಯಿಂದ ವಿವರಿಸುತ್ತಾರೆ.

'ವಾಗ್ದೇವಿ'ಯು ಧರ್ಮದ ಹೆಸರಿನಲ್ಲಿ ನಡೆಯುವ ಮೋಸ, ವಂಚನೆ, ಹಾದರಗಳನ್ನು ಸರಳವಾಗಿ ತೆರೆದಿಡುತ್ತ ಸಾಮಾಜಿಕ ವಾಸ್ತವಗಳನ್ನು ಕಠೋರವಾಗಿ ಚಿತ್ರಿಸುತ್ತದೆ. ತಪ್ತ ಮುದ್ರಾಧಾರಣದ ಧಾರ್ಮಿಕ ಪವಿತ್ರ ಸಂದರ್ಭದಲ್ಲಿ ಕುಮುದಪುರದ ಚಂಚಲನೇತ್ರ ಮತಿಗಳು, ಪೂರ್ವಾಶ್ರಮ ಅಣ್ಣನ ನಾದಿನಿ, ವಿವಾಹಿತೆ ವಾಗ್ದೇವಿಯನ್ನು ಮೋಹಿಸುವ ಪತನದಿಂದಲೇ ಕಥನ ಆರಂಭವಾಗುತ್ತದೆ. ಮುಂದೆ ಅವಳನ್ನು ಹೊಂದುವ ಅವಳ ಕರಾರುಗಳಿಗೆ ಒಪ್ಪುವ ಮೂಲಕ ಆ ಪತನ ನಿಶ್ಚಿತವಾಗುತ್ತದೆ. ಈ ಎರಡೂ ಕಾದಂಬರಿಗಳು ಭಾಷೆ, ವಿವರ, ವರ್ಣನೆ, ಪರಿಸರ ಚಿತ್ರಣದಿಂದಲೂ ಗಮನ ಸೆಳೆಯುತ್ತವೆ. "ಕನ್ನಡದ ಮೊದಲ ಕಾದಂಬರಿಗಳಲ್ಲಿ

ಎದ್ದು ಕಾಣುವ ಅಂಶವೆಂದರೆ ಅವುಗಳ ಸಮಕಾಲೀನ ಪ್ರಜ್ಞೆ ಮತ್ತು ಸಾಮಾಜಿಕ ಕಳಕಳಿ.... ಈ ಕೃತಿಗಳ ವೈಚಾರಿಕ ಧ್ವನಿ ಸಿನಿಕತನದಿಂದ ದೂರವಾಗಿದೆ. ವಿಡಂಬನೆಯೂ ಸೃಜನಾತ್ಮಕವಾಗಿದೆ ಎಂಬುದನ್ನು ಈ ಕಾದಂಬರಿಗಳ ವಸ್ತು ಕುರಿತಾಗಿ ಹೇಳಬಹುದಾಗಿದೆ. ಸಾಮಾಜಿಕ ಸಮಸ್ಯೆಗಳಿಗೆ ನೇರವಾಗಿ ಮುಖಾಮುಖಿಯಾಗುವಲ್ಲಿ ಈ ಲೇಖಕರು ಮುಂದಿನ ತಲೆಮಾರಿಗೆ ದೊಡ್ಡ ಮಾದರಿಯಾಗಿಬಿಟ್ಟರು.

'ಒಳಿತಿಗೆ ಒಳಿತು ಕೆಡುಕಿಗೆ ಕೆಡುಕು' ಎಂಬ ಗ್ರಾಮೀಣರ ಭದ್ರ ನಂಬುಗೆಯನ್ನು ಪುಟ್ಟಣ್ಣನವರು 'ಮಾಡಿದ್ದುಣ್ಣೋ ಮಹಾರಾಯ'ದಲ್ಲಿ ದೇಸಿ ನೆಲೆಯಲ್ಲಿ ಪ್ರಯೋಗಿಸಿದ್ದಾರೆ. ಕಥನದಲ್ಲಿ ಸಾಮಾಜಿಕ ಪೌರಾಣಿಕ ಅಂಶಗಳೆರಡೂ ಮಿಳಿತವಾಗಿವೆ. ಡಾ. ಜಿ.ಎಸ್. ಆಮೂರರು ಗ್ರಾಮಾಯಣದೊಂದಿಗೆ ಇದನ್ನು ಹೋಲಿಸುತ್ತಾರೆ. "ಗ್ರಾಮಾಯಣದಂತೆ ಮಾಡಿದ್ದುಣ್ಣೋ ಮಹಾರಾಯ ಕೂಡ ತನ್ನ ಪ್ರಖರ ವಾಸ್ತವತೆಯನ್ನು ಮನುಷ್ಯನ ಭ್ರಷ್ಟತನ ಮತ್ತು ಅದರ ಪರಿಣಾಮವಾಗಿ ಬರುವ ಸಾಮಾಜಿಕ ವಿಘಟನೆ ಇವುಗಳ ಜೀವಂತ ಪ್ರತಿಮೆಗಳ ಮೂಲಕವೇ ಪಡೆದುಕೊಳ್ಳುತ್ತದೆ" ಎಂದು ಅವರು ಹೇಳುವರು. ಪುಟ್ಟಣ್ಣನವರ ಭಾಷಾ ಬಳಕೆಯೂ ವಿಶಿಷ್ಟವಾಗಿತ್ತು. ಈ ಹೊತ್ತಿಗಾಗಲೆ ಗಳಗನಾತರ ಸ್ವತಂತ್ರ ಮತ್ತು ರೂಪಾಂತರಿತ ಕಾದಂಬರಿಗಳೂ ಪ್ರಕಟವಾಗಿದ್ದವು. ಅವುಗಳೊಂದಿಗೆ ಲಕ್ಷ್ಮಣ ಭೀಮರಾವ್ ಗದಗಕರ ಅವರ 'ಸೂರ್ಯಕಾಂತ' ಗುಬ್ಬಿಯ ಮುರಗಾರಾಧ್ಯರ 'ಶೃಂಗಾರ ಚತುರ್ಯೋಲ್ಲಾಸಿನಿ' ಕಾದಂಬರಿಗಳೂ ಈ ಪರಂಪರೆಗೆ ಸೇರುತ್ತವೆಂದು ಡಾ. ಶ್ರೀಕಂಠ ಕೂಡಿಗೆ ಅವರು ತಿಳಿಸುತ್ತಾರೆ.

ಈ ಹಿನ್ನೆಲೆಯಲ್ಲಿ, ಕಾದಂಬರಿಗಳ ಸ್ವತಂತ್ರವಾದ ಬೆಳವಣಿಗೆಯ ಕಿರು ದಾರಿಯಲ್ಲಿ ಕಾಣಿಸಿಕೊಂಡ ಇನ್ನೊಂದು ಮಹತ್ವದ ಕೃತಿಯೇ ಕೆರೂರ ವಾಸುದೇವಾಚಾರ್ಯರ 'ಇಂದಿರಾ' ಕಾದಂಬರಿ. ಇಂದಿರಾ ಕಾದಂಬರಿಯು ಉತ್ತರ ಕರ್ನಾಟಕದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ ಎನ್ನುವಂತಿದೆ. ಕಾದಂಬರಿಕಾರರು ಅಂದಿನ ಕಾಲದಲ್ಲಿ ಪೂನಾ ನಗರದಲ್ಲಿ ಕಾನೂನು ಪದವಿ ಪಡೆದು, ಅದರೊಂದಿಗೆ ಅಲ್ಲಿಯ ರಾಜಕೀಯ ಪ್ರಭಾವ ಪಡೆದು ಊರಿಗೆ ಮರಳಿದವರು. ಕಾನೂನು ಪದವೀಧರರಾಗಿ ನ್ಯಾಯಾಲಯ ಕಚೇರಿಗಳಲ್ಲಿ ತಮ್ಮ ಉತ್ತರೋತ್ತರ ಅಭಿವೃದ್ಧಿ ಕಾಣಬೇಕಿದ್ದ ಅವರು ಧಾರವಾಡಕ್ಕೆ ಹೋಗಿ ನಿಂತು ಪತ್ರಿಕೆ ಆರಂಭಿಸಿ ಸುಧಾರಣಾವಾದದ ಬೆಳವಣಿಗೆಗಳಿಗೆ ತಮ್ಮದೇ ತೆರನಲ್ಲಿ ಪ್ರತಿಕ್ರಿಯೆ ನೀಡುತ್ತಾರೆ. ತಾರುಣ್ಯದಲ್ಲಿ ಗೋಖಲೆ, ತಿಲಕ, ಅಗರಕರ ಅವರ ರಾಜಕೀಯ, ಸಾಮಾಜಿಕ, ವಿಚಾರಧಾರೆಗಳಿಗೆ ಮನಸೋತಿದ್ದ ಅವರು ಕನ್ನಡ, ಮರಾಠಿ, ಸಂಸ್ಕೃತ, ಆಂಗ್ಲಭಾಷೆಗಳಲ್ಲಿ ಪ್ರಭುತ್ವವನ್ನು ಹೊಂದಿದ್ದರು. ಹಲವು ಭಾಷೆಗಳ ಜ್ಞಾನದಿಂದ, ಅನೇಕ ಕೃತಿಗಳ ಓದಿನಿಂದ ಅವರ ಶೈಲಿ ಪ್ರಭಾವಿತವಾಗಿತ್ತು. "ಆಚಾರ್ಯರ ಶೈಲಿ ಎಂದರೆ ಸಂಸ್ಕೃತ ಭೂಯಿಷ್ಠತೆ ಇಂಗ್ಲೀಷ್ ಪರಿಜ್ಞಾನ, ಪುರಾಣಾದಿಗಳ ಸಾಹಚರ್ಯ, ಉತ್ತರ ಕರ್ನಾಟಕದ ದೇಸಿಯ ಕೆಚ್ಚು, ವಿವರಗಳ ಸಜೀವ ಚಿತ್ರಣ ಸುಂದರ ಮತ್ತು ಹರಿತವಾದ ವ್ಯಂಗ್ಯ – ಕೊಂಕುಗಳ ಸಮನ್ವಯವೆಂದು ಹೇಳಬಹುದು ಎಂದು ವಿದ್ವಾಂಸರು ಅಭಿಮತ ಪಡುತ್ತಾರೆ. ಆದರೆ ಇದು ಪೂರ್ತಿಯಾಗಿ ನಿಜವಲ್ಲ. ಮುಖ್ಯವಾಗಿ ಶೈಲಿಯಲ್ಲಿ ಈ ಅಂಶಗಳು ಸಮನ್ವಯವಾಗಿವೆಯೇ? ಎಂಬುದು ಕೊನೆಗೂ ಪ್ರಶ್ನೆಯಾಗಿಯೇ ಉಳಿಯುತ್ತದೆ.

'ಇಂದಿರಾ' ಕಾದಂಬರಿಯ ವಸ್ತು ಮತ್ತು ಅದರ ಸ್ವರೂಪದ ಬಗ್ಗೆ ಚರ್ಚಿಸುವುದಾದರೆ ಅದೂ ಅಂದಿನ ಆರಂಭಕಾಲದ ಕನ್ನಡ ಕಾದಂಬರಿಗಳನ್ನು ಗಮನಿಸಿ ಚರ್ಚಿಸುವುದಾದರೆ, ಇನ್ನೂ ಅನೇಕ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ಇಂದಿರಾಬಾಯಿ, ವಾಗ್ದೇವಿ ಕಾದಂಬರಿಗಳಲ್ಲಿ ಒಂದು ವರ್ಗದ ಬ್ರಾಹ್ಮಣ ಜನಾಂಗದಲ್ಲಿ ಮೂಡಿದ ಎಚ್ಚರ, ಒಳ ವಿಮರ್ಶೆಗಳ ಪ್ರತಿಕ್ರಿಯೆ, ಪರಿಣಾಮಗಳನ್ನು ಗುರುತಿಸಬಹುದು. ಬಾಲ್ಯ ವಿವಾಹದ ಕಾರಣದಿಂದ ವಿಧವೆಯಾಗಿದ್ದ ಇಂದಿರಾಬಾಯಿಯನ್ನು ಭಾಸ್ಕರರಾಯ ಮರು ವಿವಾಹವಾದ ಕಥಾನಕವಿರುವ ಮೊದಲ ಕಾದಂಬರಿ. ಕಾದಂಬರಿಯಲ್ಲಿ ಬಾಲ್ಯ ವಿವಾಹದ ಖಂಡನೆ, ವಿಧವಾವಿವಾಹದ ಪುರಸ್ಕಾರವಿದೆ. ಧಾರ್ಮಿಕ ಕಾರಣಗಳನ್ನು, ಶಾಸ್ತ್ರ ವಿಚಾರಗಳನ್ನು ಮುಂದೊಡ್ಡಿ ನಡೆಯುತ್ತಿದ್ದ ಸ್ತ್ರೀಯ ಶೋಷಣೆಯನ್ನು ಒಂದು ಹಂತದಲ್ಲಿ ಈ ಕೃತಿ ಗಟ್ಟಿಯಾಗಿಯೇ ಪ್ರತಿಭಟಿಸುತ್ತದೆ. ಸಾಮಾಜಿಕ ಸುಧಾರಣೆಯನ್ನು ಬಿಂಬಿಸುವಂತೆ ಉನ್ನತ ಪದವೀಧರನಾದ ಭಾಸ್ಕರರಾಯನು ಕಾದಂಬರಿಯ ಕೊನೆಯ ಭಾಗದಲ್ಲಿ ಹೇಳುವುದು ಹೀಗೆ, "ಯಾವುದೊಂದರ ಗುಣದೋಷವನರಿಯುವುದಕ್ಕೆ ಶಕ್ತಿಯೂ, ಪ್ರಾಯವೂ ಸಾಕಷ್ಟಿಲ್ಲದೆ ಚಿಕ್ಕ ಕನ್ನಿಕೆಯರಿಗೆ ಪ್ರಥಮ ವಿವಾಹವೇ ಯೋಗ್ಯವಲ್ಲ. ಅಂಥವರಿಗೆ ವಿವಾಹವಾಗಿ ವೈಧವ್ಯ ಪ್ರಾಪ್ತಿಯಾದರೆ ಈಗಿನ ಕಾಲದಲ್ಲಿ ಪುನರ್ವಿವಾಹವೇ ಉತ್ತಮ" ಇದಕ್ಕೆ ಪೂರಕ ಎಂಬಂತೆ ಪ್ರಮುಖ ಪಾತ್ರ ಇಂದಿರಾಬಾಯಿ ಕೂಡ ಹೇಳುವ ಮಾತು ಅಂದಿನ ವಿಷಮ ವಿವಾಹದಿಂದ ನಲುಗಿದ ಸ್ತ್ರೀಯರ ನೋವಿನ ದನಿಯಾಗದೆ. "ನ್ಯಾಯವು ಎಲ್ಲರಿಗೂ ಏಕ ಪ್ರಕಾರವಿರಬೇಕು. ಕೆಲವರು ಇಂತಹ ಪ್ರಕಾರವೇ ಯೋಗ್ಯವಾಗಿ ನಡೆಯಬೇಕೆಂದು ಅವರನ್ನು ನೀವು ಬಲಾತ್ಕರಿಸುವುದಾದರೆ, ಬೇರೆಯವರಿಗೂ ಹಾಗೆಯೇ ಬಲಾತ್ಕರಿಸಬೇಕು... ಒಬ್ಬ ಪುರುಷನಿಗೆ ಎಷ್ಟು ಸಾರಿಯಾದರೂ ಮದುವೆಯಾಗಬಹುದಂತೆ, ಸ್ತ್ರೀಗೇಕಾಗಕೂಡದು? ಒಬ್ಬ ಸ್ತ್ರೀಯು ಪತಿಯ ಮರಣನಂತರ ತಲೆ ಬೋಳಿಸಿ ರೂಪವಿರೂಪ ಮಾಡಿ ಸನ್ಯಾಸದಲ್ಲಿ ಇರಬೇಕಂತೆ, ಪುರುಷನು ಪತ್ನಿಯ ಮರಣನಂತರ ತಲೆ ಗಡ್ಡ ಮೀಸೆ ಬೋಳಿಸಿ ಏಕೆ ಸನ್ಯಾಸಿಯಾಗಬಾರದು?" ಅಂದಿನ ಹೆಣ್ಣಿನ ಶೋಷಣೆ, ಅನ್ಯಾಯ, ದೌರ್ಜನ್ಯಗಳಿಗೆ ಈ ಪ್ರಶ್ನೆ ಕನ್ನಡಿಯಾಗಿದೆ. ಸಾಮಾಜಿಕ ಸುಧಾರಣೆಯು ಒಂದು ವರ್ಗದ ಒಳ ವಿಚಾರವಾದರೂ ಇಲ್ಲಿ ಮುಖ್ಯ ವಸ್ತುವಾಗಿ ವಿದ್ಯಾಭ್ಯಾಸದಿಂದಾಗಿ ವೈಚಾರಿಕ ನೆಲೆಯನ್ನು ಅದು ಪಡೆದುಕೊಂಡಿದೆ.

'ವಾಗ್ದೇವಿ'

ಮೇಲ್ನೋಟಕ್ಕೆ ಧಾರ್ಮಿಕ ವಿಡಂಬನೆಯ ಹಾಗೆ ಕಂಡುಬಂದರೂ ಅದು ಸಾಮಾಜಿಕ ವಿಡಂಬನೆಯತ್ತ ಮುಖ ಮಾಡಿದೆ. ಕಾದಂಬರಿಯ ಐವತ್ತೇಳು ಅಧ್ಯಾಯಗಳಲ್ಲಿ ಮೊದಲಿನ ಹನ್ನೆರಡು ಮತ್ತು ಕೊನೆಯ ಐದು ಅಧ್ಯಾಯಗಳಲ್ಲಿ ವಾಗ್ದೇವಿಯ ವೃತ್ತಾಂತ ನೇರವಾಗಿ ಬಂದಿದೆ. ಸುಮಾರಾಗಿ ನಲ್ವತ್ತು ಅಧ್ಯಾಯಗಳಲ್ಲಿ ನ್ಯಾಯ ವಿಚಾರಣೆ, ಅಹವಾಲು, ಕಾನೂನು, ಮನವಿ, ಸಂಚು, ಪ್ರತಿಸಂಚುಗಳು ತುಂಬಿಕೊಂಡಿವೆ. ಚಂಚಲನೇತ್ರ ಮತ್ತು ವಾಗ್ದೇವಿಯರ ಅನೈತಿಕ ಸಂಬಂಧವನ್ನು ಪ್ರಶ್ನಿಸಿ ಧಾರ್ಮಿಕ, ರಾಜಕೀಯ ಅಧಿಕಾರ ಸ್ಥಾನಗಳಲ್ಲಿ ನ್ಯಾಯಕ್ಕಾಗಿ ಹೋರಾಡುವ ವೇದವ್ಯಾಸನ ವಿವರಗಳು ಹೆಚ್ಚು ಲಂಬಿತವಾಗಿವೆ. ಹಣಬಲ, ಅಧಿಕಾರ

ಬಲಗಳು ಸಾಮಾಜಿಕ ನೈತಿಕ ಅಧಃಪತನಕ್ಕೆ ಕಾರಣವಾಗುವುದನ್ನು ಬೆಳೆಸುವ ಕೆಲ ಕೃತಿ ಎಲ್ಲಿಯೂ ಕಪ್ಪು-ಬಿಳುಪು ಪಾತ್ರಗಳನ್ನು ತಂದು ನಿಲ್ಲಿಸುವುದಿಲ್ಲ. ಬಡತನದಿಂದಾಗಿ ಚಂಚಲನೇತ್ರರನ್ನು ಆಕ್ರಮಿಸುವ ವಾಗ್ದೇವಿ, ಮಠದ ಎಲ್ಲ ವ್ಯವಹಾರ ನಿಯಂತ್ರಿಸುತ್ತ, ಅನ್ಯಾಯವೆಂದು ಪ್ರತಿಭಟಿಸಿದವರನ್ನು ಬಗ್ಗು ಬಡಿಯುತ್ತ, ಎಲ್ಲದರಲ್ಲಿ ಜಯ ಪಡೆಯುತ್ತ ಸಾಗಿದರೂ ಕೊನೆಗೆ ಕಾಲದ ನಿರ್ಣಯಕ್ಕೆ ತಲೆಬಾಗುವಂತಾಗುತ್ತದೆ. ಆಕೆಯ ಮಗ ಸೂರ್ಯನಾರಾಯಣನು ಶೂದ್ರ ಕನ್ಯೆಯನ್ನು ಅಪಹರಿಸಿಕೊಂಡು ಹೋಗಿ ವಿವಾಹವಿಲ್ಲದೆ ಸಂಸಾರಿಯಾಗಿ ಬದುಕುವುದು ಅವರಲ್ಲಿ ವಾಗ್ದೇವಿ ಆಶ್ರಯ ಪಡೆಯುವುದು.... ಹೀಗೆ ಕಾದಂಬರಿ ತನ್ನದೇ ವಿಲಕ್ಷಣ ಪ್ರತಿಭಟನಾ ವಿನ್ಯಾಸದ ಸುಧಾರಣಾವಾದವನ್ನು ನೀಡುತ್ತದೆ. 'ಆರ್ಯ ಸಮಾಜದ ಆದರ್ಶದಲ್ಲಿ ರೂಪಗೊಂಡ ಕಾದಂಬರಿ ನಿಷ್ಠುರ ಸಾಮಾಜಿಕ ವಿಮರ್ಶೆಯನ್ನು ಚಿತ್ರಿಸುತ್ತದೆ" ಎಂದು ಡಾ. ಸಿ.ಎನ್. ರಾಮಚಂದ್ರನ್ ಅಭಿಪ್ರಾಯಪಟ್ಟಿರುವುದು ಸರಿಯಾಗಿದೆ.

ಕೆರೂರರ 'ಇಂದಿರಾ' ಇಂದಿರಾಬಾಯಿ, ವಾಗ್ದೇವಿಗಳ ಹಾಗೆ ಸಾಮಾಜಿಕ ವಾಸ್ತವವನ್ನು ಅನನ್ಯವಾಗಿ ಚಿತ್ರಿಸುವ ಗುರಿ ಹೊಂದಿರುವುದು ಸ್ಪಷ್ಟವಾಗಿದ್ದರೂ, ಅದರ ಬೆಳವಣಿಗೆ ಮತ್ತು ಧ್ವನಿಸುವ ಆಶಯಗಳು ಅದಕ್ಕೆ ಪೂರಕವಾಗಿಲ್ಲ. ಜಡಗಟ್ಟಿದ ಹಿಂದೂ ಸಮಾಜದ ಅರ್ಥಹೀನ ಆಚರಣೆ, ಕ್ರಿಯೆ, ಸಂಪ್ರದಾಯಗಳನ್ನು ಖಂಡಿಸಿ, ಹೊಸ ಬದಲಾವಣೆಗೆ ಮುಖ ಮಾಡಬೇಕಾದ ಅಗತ್ಯ ಪ್ರತಿಪಾದಿಸುತ್ತಿದ್ದ ಅಂದಿನ ಕಾದಂಬರಿಗಳ ನಡುವೆ ಈ ಕೃತಿ ಕವಲುದಾರಿಯಲ್ಲಿ ನಿಂತು ಅತ್ತ ಇತ್ತ ವಾಲುತ್ತ ಯಾವ ತೀರ್ಮಾನಕ್ಕೂ ಬಾರದ ಹಂತಕ್ಕೆ ಉಳಿಯುವುದು ಅಚ್ಚರಿ ನೀಡುತ್ತದೆ.

೧೯೦೮ರಲ್ಲಿ ಹೊರ ಬಂದ ಇಂದಿರಾ ಈಗಾಗಲೇ ನಾಲ್ಕು ಮರು ಮುದ್ರಣಗಳನ್ನು ಕಂಡಿದ್ದು ಕೆಲವು ವಿಮರ್ಶಾಲೇಖನಗಳಿಂದ, ವಾಸುದೇವ ಪ್ರಶಸ್ತಿಯಂತಹ ಕೃತಿಗಳಿಂದ ವಿಶ್ಲೇಷಣೆಗೂ ಒಳಗಾಗಿದೆ. ಭಾರತದಲ್ಲಿ ಇಪ್ಪತ್ತನೆಯ ಶತಮಾನದ ಆಚೀಚೆ ನಡೆದ ಸಾಮಾಜಿಕ ಬದಲಾವಣೆಗಳು ಹಲವು ನೆಲೆಗಳಲ್ಲಿ ಚರ್ಚೆ, ವಾದ ವಿವಾದಗಳನ್ನು ಹುಟ್ಟುಹಾಕಿದವು. ಬಂಕಿಮಚಂದ್ರ, ರವೀಂದ್ರನಾಥರಂತಹ ಲೇಖಕರು ಸೃಜನಶೀಲನಾಗಿ ಇದಕ್ಕೆ ಪ್ರತಿಕ್ರಿಯೆ ನೀಡುತ್ತಿದ್ದರೆ, ರಾಜಾರಾಮಮೋಹನರಾಯ ಅವರಂತಹ ಆಧುನಿಕ ವಿಚಾರಧಾರೆಯವರು ಸಕ್ರಿಯ ಹೋರಾಟಕ್ಕೆ ತೊಡಗಿದ್ದರು. ಎಲ್ಲರಿಗೂ ಶಿಕ್ಷಣ, ಬಾಲ್ಯ ವಿವಾಹ ನಿಷೇದಿಸಿ ಆಜ್ಞೆ ಹೊರಡಿಸಿದರು. ಸ್ವಾಮಿ ಶಿವಾನಂದರ ಜನಪ್ರಿಯ ಕೃತಿ 'ಬ್ರಹ್ಮಚರ್ಯವೇ ಜೀವನ'ವು ಬಾಲ್ಯ ವಿವಾಹಕ್ಕೆ ಧರ್ಮ-ಶಾಸ್ತ್ರಗಳ ಆಧಾರವೇ ಇಲ್ಲ ಎಂಬುದನ್ನು ಬಲವಾಗಿ ಪ್ರತಿಪಾದಿಸುತ್ತದೆ. ಪೂನದಲ್ಲಿ ಶಿಕ್ಷಣ ಪಡೆದ ಕೆರೂರರು ಇವುಗಳಿಂದ ದೂರವಾಗಿ ಉಳಿಯಲು ಸಾಧ್ಯವಿಲ್ಲ. ಹಾಗಾಗಿ ಅವರ ಕಾದಂಬರಿಯೂ ಅಂದಿನ ಬೆಳವಣಿಗೆಗಳಿಂದ ತುಂಬ ಪ್ರಭಾವಿತವಾಗಿದೆ. ಈ ಕೃತಿಯಲ್ಲಿ ಎರಡು ಕಥನಧಾರೆಗಳಿವೆ. ಮೊದಲನೆಯದೆಂದರೆ ಇಂದಿರಾ ರಮಾಕಾಂತರ ಪ್ರಣಯ, ಸರಸ, ಆಪ್ತತೆಗಳಿಂದ ಪರಸ್ಪರರಲ್ಲಿಯ ಆಕರ್ಷಣೆ ಬೆಳೆಯುತ್ತಾ ಹೋಗುವುದು. ಇದಕ್ಕೆ ಶ್ರೀಕಂಠ, ನಟೇಶರ ಕಥನವೂ ಸೇರಿಕೊಂಡಿದೆ. ಎರಡನೆಯದಾಗಿ ಕಮಲೆ, ರಾಧಾಬಾಯಿ, ಭಾಷ್ಕಳವಂತರ

ಕಥಾನಕದ ಪ್ರವಾಹವಿದೆ. ಮೊದಲನೆಯದು ಮುಖ್ಯ ಕಥನ ಎನ್ನಿಸಿದರೆ, ಎರಡನೆಯದು ಉಪಕಥನದಂತೆ ಕಂಡುಬರುತ್ತದೆ. ಆದರೆ ಲೇಖಕರ ತಾತ್ವಿಕತೆ ಅರಿಯಲು ಈ ಎರಡೂ ಕಥನಗಳು ಅಷ್ಟೇ ಪ್ರಧಾನವಾಗಿವೆ.

ಪ್ರಧಾನ ಕಥನಗಳಲ್ಲಿ ಬರುವ ಪಾತ್ರಗಳು ವ್ಯಕ್ತಿ ಸಂಬಂಧ, ವ್ಯವಹಾರ, ನಿತ್ಯದ ಬದುಕಿನಲ್ಲಿ ಸಕ್ರಿಯವಾಗಿವೆ. ವಿದ್ಯಾಭ್ಯಾಸ, ಪ್ರಗತಿ, ಅಭಿವೃದ್ಧಿಯ ಕಲ್ಪನೆ ಆ ಪಾತ್ರಗಳಿಗಿದೆ. ಆದರೆ ಸಾಂಪ್ರದಾಯಕ ಬದುಕಿನ ಜಡವಿಚಾರಗಳಿಂದ ಅವು ಪೂರ್ತಿ ಪಾರಾಗಲು ಸಾಧ್ಯವಾಗಿಲ್ಲ. 'ಕುಲೀನೆ ಮತ್ತು ಸಚ್ಚಾರಿತ್ರ್ಯದ' ತರುಣ ತರುಣಿಯರಾದ ರಮಾಕಾಂತ, ಇಂದಿರ ಇಬ್ಬರೂ ತಮ್ಮ ಪರಿಸರದಲ್ಲಿ ಸುಶಿಕ್ಷಿತರೂ, ವಿವೇಕಿಗಳೂ ಸ್ವತಂತ್ರ ಆಲೋಚನೆ ಹೊಂದಿದವರಾಗಿಯೇ ಕಾಣಿಸುತ್ತಾರೆ. ಆದರೆ ಅವರ ಮಿತಿಗಳೂ ಸ್ಪಷ್ಟವಾಗಿವೆ. ಒಂದೆಡೆಗೆ ರಾಧಾಬಾಯಿ ಪುನರ್ವಿವಾಹ, ಪ್ರಬುದ್ಧ ಕನ್ಯಾ ವಿವಾಹ, ಸ್ತ್ರೀ ಶಿಕ್ಷಣಗಳ ಬಗ್ಗೆ ರಮಾಕಾಂತನ ಅಭಿಪ್ರಾಯ ಕೇಳುತ್ತಾಳೆ. ಅದಕ್ಕೆ ಅವನು ನೀಡುವ ಉತ್ತರವಿದು. "ಇವುಗಳ ಬಗ್ಗೆ ನಾನು ಓದಿರುವೆನು. ಆದರೆ ನನ್ನ ಮತವು ಈ ಕಾಲಕ್ಕೆ ಹೀಗೇ ಇರುವುದೆಂದು ಹೇಳಲಾರೆನು. ಸ್ತ್ರೀಯರು ಉಚ್ಚ-ಪ್ರತಿಯ ಶಿಕ್ಷಣ ಹೊಂದುವುದು ಅವಶ್ಯ. ಅವರ ಸ್ವತಂತ್ರ್ಯಾತಿಶಯವು ಮಾತ್ರ ನನಗೆ ಸಹಿಸದು" ಎಂದು ಹೇಳುವುದು ಗಮನಾರ್ಹವಾಗಿದೆ. ಅದೇ ಸಮಯದಲ್ಲಿ ಇಂದಿರಾ ಕೂಡ ರಮಾಕಾಂತನ ಧಾಟಿಯಲ್ಲಿ ಹೇಳುತ್ತಾಳೆ. "ನೀವು ಯಾತಕ್ಕೆ ಸ್ವಾತಂತ್ರ್ಯವೆಂದೆನ್ನುತ್ತೀರೊ ನನಗೆ ತಿಳಿಯದು..... ನಾವು ಯಾರಿಂದ ಸ್ವತಂತ್ರರಾಗಿರಬೇಕು? ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಸಂರಕ್ಷಿಸುವ ಪ್ರಾಣೇಶ್ವರರ ಕೂಡ ಹುರ್ರೆಂದು ಜಗಳಾಡುವುದು ಸ್ವಾತಂತ್ರ್ಯವೇನು?" ಮುಂದುವರೆದು ಅವಳು ಪತಿಯ ಅನುಸರಿಸಿ ನಡೆವುದೇ ನಾರಿಗೆ ಸುಖ, ಮೊಂಡಾಟದ ಹೆಂಡತಿಯನ್ನು ಪತಿ ಹೊಡೆಯಬಹುದು ಎಂದು ಅಭಿಪ್ರಾಯಪಡುತ್ತಾಳೆ. ಇಲ್ಲಿ ಅವರಿಬ್ಬರ ನಿಲುವುಗಳು ಕಾದಂಬರಿಕಾರರ ನಿಲುವುಗಳಾಗಿದ್ದು, ಅವು ಪ್ರಗತಿವಿರೋಧಿ ಎನಿಸುವುದರಿಂದ ಪ್ರಶ್ನಾರ್ಹವಾಗುತ್ತವೆ. ಇನ್ನೊಂದೆಡೆಗೆ ಇಂದಿರಾ ಸ್ತ್ರೀಯರಿಗೇಕೆ ಮಹತ್ವಾಕಾಂಕ್ಷೆ ಎಂದು ಕೇಳಿ 'ಪುರುಷರಲ್ಲಿ ಮಹತ್ವಾಕಾಂಕ್ಷೆ ಎಂದರೆ ಒಂದರ್ಥದಿಂದೊಪ್ಪುವಂತಿದೆ. ಆದರೆ ಸುಕುಮಾರಿಯರೆಂದೆನ್ನಿಸಿಕೊಳ್ಳುವ ನಮ್ಮ ಹೆಂಗಸರಲ್ಲಿ ಮಹತ್ವಾಕಾಂಕ್ಷೆಯಿರುವುದೆಂದರೆ ನನಗೆ ಚಮತ್ಕಾರವೆನಿಸುತ್ತದೆ' ಎಂದು ಹೇಳುತ್ತಾಳೆ. ಅವಳ ಮಾತು, ವಿಚಾರಗಳನ್ನು ಪುರುಷ ಪ್ರಧಾನ ವ್ಯವಸ್ಥೆ ನಿಯಂತ್ರಿಸುವುದು ಸುಸ್ಪಷ್ಟ. ಕಮಲೆಯ ಮರು ವಿವಾಹದ ಬಗ್ಗೆ ಪಂಡಿತ ರಮಾಕಾಂತನಲ್ಲಿ ವಿವರಿಸಿದಾಗ ಅವನು ಇಂತಹ ಕೆಲಸವನ್ನು ನಮ್ಮ ಸಮಾಜದ ಮುಖ್ಯಸ್ಥರು ಕೈಕೊಳ್ಳತಕ್ಕದ್ದು' ಎಂದು ಜಾರಿಕೊಳ್ಳುತ್ತಾನೆ. ಹಾಗಾಗಿ ಈ ಕಾದಂಬರಿಯಲ್ಲಿ ಬರುವ ರಮಾಕಾಂತ, ಇಂದಿರಾ ಸುಶೀಕ್ಷಿತರು ಎನ್ನಬಹುದೇ ಹೊರತು ಸುಧಾರಣಾವಾದಿಗಳೇನೂ ಅಲ್ಲ. ಇಬ್ಬರೂ ಬದಲಾವಣೆಗಾಗಿ ಪ್ರಯತ್ನಿಸುವವರೂ ಅಲ್ಲ. ಅದಕ್ಕೆ ಪೂರಕವಾಗಿ ಯೋಚಿಸುವವರೂ ಅಲ್ಲ. ಇದು ಅವರ ವೈಚಾರಿಕ ಆಕೃತಿಯನ್ನು ರೂಪಿಸಿದ ಅಂಶವಾಗಿದೆ.

ಆದರೆ ಲೇಖಕರು ಸಮಕಾಲೀನ ಸುಧಾರಣಾ ವಿಚಾರವನ್ನು ಪೂರ್ಣ ತಳ್ಳಿಯೂ ಹಾಕುವುದಿಲ್ಲ. ಅದಕ್ಕಾಗಿ ಅವರು ಪಂಡಿತೆ ಕಮಲಾ, ಬಾಷ್ಕಳಪಂಡಿತ ಪಾತ್ರಗಳನ್ನು ತಂದು ಆ

ಬಗೆಗಿನ ಚರ್ಚೆಯನ್ನು ನಡೆಸುತ್ತಾರೆ. ಕಾದಂಬರಿಯಲ್ಲಿ ಅಂದಿನ ಬಂದು, ಬಂಗಾಲೀಟಾಯರ್ವ್ಯ, ಇಂದು ಪ್ರಕಾಶ, ಕೇಸರಿ, ಬೆಂಗಳೂರು ಸಮಾಚಾರ ಪತ್ರಿಕೆಗಳನ್ನು ಮಧ್ಯಮ ಮೇಲ್ವರ್ಗದವರು ಓದುತ್ತಿದ್ದರೆಂದು ಕಂಡುಬರುತ್ತದೆ. ಮರಾಠಿ, ಬಂಗಾಲಿ ಮತ್ತು ಆಂಗ್ಲ ಭಾಷೆಗಳಲ್ಲಿ ಬಂದಿರುವ ಸ್ತ್ರೀ ಸಮಾನತೆ, ವಿಧವಾ ವಿವಾಹ ಪ್ರತಿಪಾದಿಸುವ ಕೃತಿಗಳ ಉಲ್ಲೇಖವಿದೆ. ಬಂಗಾಲ ಪ್ರಾಂತದ ಸುಧಾರಣೆ, ಕೇಶವಚಂದ್ರಸೇನರ ಬ್ರಹ್ಮೋಪಂಥ, ಆರ್ಯಸಮಾಜ, ಉಪಾಸನಾ ಸಮಾಜಗಳ ಉಲ್ಲೇಖವೂ ಕಾಣಿಸಿಕೊಂಡಿದೆ. ಆದರೆ ಈ ಎಲ್ಲ ಅಂಶಗಳೂ ಸುಧಾರಣಾವಾದವನ್ನು ಪರಿಚಯಿಸಲು, ಬಿಂಬಿಸಲು, ಬೆಂಬಲಿಸಲು ಬಳಕೆಗೊಂಡಿಲ್ಲ. ಬದಲಾಗಿ ಅದರ ವಿಡಂಬನೆ, ಟೀಕೆಗಳಿಗೆ ಆಧಾರವಾಗಿ ಬರುತ್ತವೆ. ಸುಧಾರಣಾವಾದದ ಪ್ರಬಲ ಸಮರ್ಥನೆ ಮಾಡಿ ಸಾಮಾಜಿಕ ಬದಲಾವಣೆಯನ್ನು, ಸ್ತ್ರೀ ಸಮಾನತೆಯನ್ನು ಸಾಧಿಸಲು ಪ್ರಯತ್ನಿಸುವ ಪಂಡಿತೆ ರಾಧಾಬಾಯಿಯ ವೈವಾಹಿಕ ಜೀವನವು ಇಲ್ಲಿ ಯಶಸ್ವಿಯಾಗಿದೆ, ಹಾಸ್ಯಾಸ್ಪದವಾಗಿದೆ. ಶಾಸ್ತ್ರಿಗಳನ್ನು ಮೊದಲು ವಿವಾಹವಾಗುವ ಆಕೆ ಸಾಂಪ್ರದಾಯಿಕ ಬ್ರಾಹ್ಮಣ ಆಭರಣಗಳಿಗೆ ಬೇಸರ ಪಡುವುದು, ಪತಿ ಮರಣ ಹೊಂದಿದ ನಂತರ ಸ್ವಾಂತಂತ್ರ್ಯ ಪಡೆವುದು ಅವಳ ಮಾತಿನಲ್ಲಿ ವಿಧಿತವಾಗುತ್ತದೆ. ಅತ್ಯುತ್ತಮ ಮತ್ತು ವಿಜಾತಿ ಗಂಡು ಹೆಣ್ಣುಗಳಿಂದ ಒಳ್ಳೆಯ ಸಂತಾನವಾಗುತ್ತವೆಂಬ ನಂಬಿಕೆ ಆಕೆಗಿದೆ. "ಸ್ವದೇಶಿಯುರಾದ ಸ್ತ್ರೀ ಪುರುಷರ ಸಂಯೋಗದಿಂದ ಸಶಕ್ತವಾದ ಪ್ರಜೋತ್ಪತ್ತಿಯಾಗುವುದಿಲ್ಲವೆಂಬುದು ನನ್ನ ಮತವಿದ್ದುದರಿಂದ ನಾನು ಬಂಗಾಳಕ್ಕೆ ಹೋಗಿ ಕಲಕತ್ತೆಯಲ್ಲಿದ್ದ ಪಂಜಾಬ ದೇಶದ ಪ್ರಸಿದ್ಧ ಮಲ್ಲನಾದ ರಣಧೀರಸಿಂಗನೊಡನೆ ವಿವಾಹ ಮಾಡಿಕೊಂಡೆನು. ಆದರೆ ದುರ್ದೈವದಿಂದ ನನ್ನ ದ್ವಿತೀಯ ಪತಿಯಾದರೂ ಪರಲೋಕ ವಾಸಿಯಾದ್ದರಿಂದ ಮತ್ತೆ ನನಗೆ ವೈಧವ್ಯ ಪ್ರಾಪ್ತಿಯಾಯಿತು. ಅವಳು ತನ್ನ ಚರಿತ್ರೆಯನ್ನು ನೇರವಾಗಿ ಹೇಳಿದರೆ ಸ್ವತಃ ಆಕೆಯ ತಮ್ಮನೇ ಅವಳನ್ನು "ನಿನ್ನೀ ಕೀರ್ತನವನ್ನು ಕೇಳಿ ನಾವೆಲ್ಲರೂ ಪಾಪರಹೀತರಾದೆವು. ಪತಿಮಾಲಿಕಾವಿಭೂಷಿತೆಯಾದ ನಿನ್ನನ್ನು ನೋಡಿ ಯಾವ ಆರ್ಯಭಗನಿಗೆ ಆನಂದವಾಗಲಿಕ್ಕಿಲ್ಲ?" ಎಂದು ಚುಚ್ಚಿ ನುಡಿಯುತ್ತಾನೆ.

ಕಮಲಾಬಾಯಿ ವಿಧವೆ ಮತ್ತು ತರುಣಿ, ಮರು ವಿವಾಹ ಬಯಸುತ್ತಿರುವ ಆಧುನಿಕ ವಿಚಾರದ ಸುಶಿಕ್ಷಿತೆ. ಅವಳೂ ರಾಧಾಬಾಯಿಯೊಂದಿಗೆ ಸಾರ್ವಜನಿಕ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿದ್ದಾಳೆ. ಅವಳನ್ನು ಅವಳ ವಿಚಾರಗಳನ್ನು ಅಲ್ಲಲ್ಲಿ ಹಗುರಾಗಿ, ಹಾಸ್ಯದಿಂದ ಕಾಣಲಾಗಿದೆ. ಕೊನೆಗೆ ಅವಳು ಭಾಷ್ಕಳ ಪಂತನನ್ನು ವಿವಾಹವಾಗುವ ಒಂದು ಸುಧಾರಣಾ ಅಂಶದೊಂದಿಗೆ ಕಾದಂಬರಿ ವಿರಮಿಸುತ್ತದೆ. ಆದರೆ ಅವಳ ಓದು, ಗ್ರಂಥಾಲಯ ಭೇಟಿ, ಚರ್ಚಾಕೂಟ, ವಾದ ವಿವಾದದಲ್ಲಿ ಭಾಗಿಯಾಗುವುದು, ಹೊಸ ವಿಚಾರಗಳನ್ನು ಹೇಳುವುದು... ಹೀಗೆ ಎಲ್ಲಿಯೂ ಅವಳ ಮಾತು, ಕ್ರಿಯೆ ಗೌರವಕ್ಕೆ ಅರ್ಹವೇ ಆಗುವುದಿಲ್ಲ. ಅದೇ ತೆರನಾಗಿ ಭಾಷ್ಕಳ ಪಂಡಿತನೂ ವಿಡಂಬನೆ, ಅಪಹಾಸ್ಯಕ್ಕೆ ಈಡಾಗುವುದೇ ಹೆಚ್ಚು, ರಾಧಾಬಾಯಿ, ಕಮಲಾಬಾಯಿ, ಭಾಷ್ಕಳ ಪಂತ, ಈ ಮೂವರೂ ಕಾದಂಬರಿಯಲ್ಲಿ ಪ್ರತಿಪಾದಿಸುವ ವಿಚಾರಗಳು ಇಂತಿವೆ.

೧. ಎಲ್ಲ ಸ್ತ್ರೀಯರು ಓದು-ಬರಹ ಕಲಿಯಬೇಕು.

೨. ಸ್ತ್ರೀಯರು ಸ್ವಾತಂತ್ರ್ಯ ಸಮಾನತೆ ಪಡೆಯಬೇಕು.

೩. ಬಾಲ್ಯವಿವಾಹ ತಿರಸ್ಕರಿಸಬೇಕು.

೪. ವಿಧವಾ ವಿವಾಹ, ಪುನರ್ ವಿವಾಹ ಆಗಬೇಕು.

೫. ಸ್ವಗೋತ್ರ, ಸ್ವಜಾತಿ ವಿವಾಹದಿಂದ ಸಂತತಿ ರೋಗಗ್ರಸ್ತವಾಗುತ್ತದೆ. ಆ ವಿವಾಹ ಸಲ್ಲದು.

೬. ಸಂತಾನಕ್ಕಾಗಿ ಬಹುಪತ್ನಿತ್ವ ಸಲ್ಲದು.

೭. ಧರ್ಮ, ನೀತಿಗಳ ನಿಯಮಗಳನ್ನು ಕೇವಲ ಹೆಣ್ಣಿಗೆ ಬಲವಂತದಿಂದ ಹೇರಬಾರದು.

೮. ಚಾರಿತ್ರ್ಯ, ಶೀಲ ಎಂಬುದು ಹೆಣ್ಣಿಗೆ ಮಾತ್ರ ಸೀಮಿತವಾಗಬಾರದು.

ಈ ವಿಚಾರಗಳ ಪ್ರತಿನಿಧಿಯಂತಿರುವ ಮೂರು ಪಾತ್ರಗಳು ಲೇವಡಿಗೆ, ಅಪಹಾಸ್ಯಕ್ಕೆ ಒಳಗಾಗುವುದೇ ಅಧಿಕ. ಹಾಗೆ ನೋಡುವುದಾದರೆ ರಾಧಾಬಾಯಿ, ಕಮಲಾಬಾಯಿ ಅವರು ಸ್ಪಷ್ಟವಾಗಿ ಸುಧಾರಣಾವಾದಿ ಪ್ರತಿಪಾದಕರಾಗಿದ್ದರೆ, ಭಾಷ್ಕಳ ಪಂತನು ಆ ಬಗ್ಗೆ ದ್ವಂದ್ವ ಭಾವ ಹೊಂದಿದ್ದಾರೆ. ಹಾಗಾಗಿ ಕಾದಂಬರಿಕಾರರು ಈ ಪಾತ್ರಗಳನ್ನು ಕಾಣುವ, ಕಾಣಿಸುವ ದೃಷ್ಟಿಕೋನವು ಅವರ ತಾತ್ವಿಕತೆಯನ್ನು ಹೇಳುವುದಿಲ್ಲವೇ? ಕಾದಂಬರಿಯಲ್ಲಿ ಆ ಪಾತ್ರಗಳು ಒತ್ತಿ ಹೇಳುವ ವಿಚಾರಗಳನ್ನು ಇಲ್ಲಿ ವ್ಯಂಗ್ಯ ವಿನೋದಕ್ಕೆ ಗುರಿ ಮಾಡಿಲ್ಲವೇ? ಸುಧಾರಣಾವಾದಿಗಳು ಬಾಯಿ ಬಡುಕರು, ವಾದ ಪ್ರಿಯರು, ಚರಿತ್ರ ಹೀನರು, ನಯ-ವಿನಯ ಇಲ್ಲದವರು, ವಿಲಾಸಪ್ರಿಯರು ಎಂದೆಲ್ಲ ಪೂರ್ವಾಗ್ರಹಗಳಿಂದ ಈ ಪಾತ್ರಗಳು ಚಿತ್ರಿತವಾಗಿವೆ ಎಂಬುದಕ್ಕೆ ಕಾದಂಬರಿಯಲ್ಲಿಯೇ ಅನೇಕ ಆಧಾರಗಳು ಕಾಣಿಸುತ್ತವೆ.

ರಮಾಕಾಂತ ಇಂದಿರೆಯ ಪ್ರೇಮಕಥನದಲ್ಲಿ ಎಲ್ಲಿಯೂ ಸ್ತ್ರೀ ಶಿಕ್ಷಣ, ಸಮಾನತೆ, ವಿಧವಾ ವಿವಾಹಗಳ ಚರ್ಚೆ, ವಿಚಾರ ವಿನಿಮಯ, ಅಭಿಪ್ರಾಯ ವಿನಿಮಯಗಳು ಬರುವುದಿಲ್ಲ. ಅವರೀರ್ವರೂ ಶ್ರೀಮಂತ ಕುಟುಂಬಗಳಿಂದ ಬಂದವರು. ರಮಾಕಾಂತನು ನವರಸಪುರದ ಭೂಜಮೀನ್ದಾರರ ಏಕೈಕ ಪುತ್ರನು. ಎಂಜಿನಿಯರಿಂಗ್ ವಿದ್ಯಾಭ್ಯಾಸ ಪೂರೈಸಿ ಬೆಂಗಳೂರಿಗೆ ಬಂದವನು. ಇಂದಿರಾ ಶ್ರೀಮಂತ ತಂದೆಯ ಅಕ್ಕರೆಯ ಏಕಮಾತ್ರ ಪುತ್ರಿ, ಅವಳೂ ಸುಶಿಕ್ಷಿತಳೇ ಅವರು ಮೊದಲ ನೋಟದಲ್ಲಿಯೇ ಪ್ರೇಮದಲ್ಲಿ ಬಿದ್ದು, ಪರಿಚಯ ಪ್ರಣಯದತ್ತ ತಿರುಗಿ ಬಲವಾದ ಆಕರ್ಷಣೆಯ ಸಂಬಂಧ ಹೊಂದುತ್ತಾರೆ. ಅವರು ಶ್ರೀರಂಗಪಟ್ಟಣದ ಪ್ರವಾಸಿ ತಾಣಗಳನ್ನು ವೀಕ್ಷಿಸುವುದು, ಆಗಾಗ್ಗೆ ಭೇಟಿಯಾಗುವುದು, ಅದಕ್ಕೆ ದೇವಯಾನಿಯ ಸಹಕಾರ ಇವುಗಳಿಂದ ಪ್ರಣಯ ಗಾಢವಾಗಲು ಸಹಕಾರಿಯಾಗಿದೆ. ಅಚ್ಚರಿಯ ಸಂಗತಿ ಎಂದರೆ ರಮಾಕಾಂತನ ತಂದೆಯಾದ ಕಮಲಾಕಾಂತ, ಇಂದಿರೆಯ ತಂದೆ ಜಯರಾಮ ಇಬ್ಬರೂ ವಿವಾಹಪೂರ್ವದಲ್ಲಿ ವಿದ್ಯಾಭ್ಯಾಸದಲ್ಲಿ ಸಹಪಾಠಿಗಳಾಗಿದ್ದರು. ಅವರೀರ್ವರೂ ಪೂನಾ, ಮುಂಬಯಿಗಳ ಆಧುನಿಕತೆಗೆ ತೆರೆದುಕೊಂಡವರು. "ಇವರೀರ್ವರು ಮುಂಬಯಿಯಲ್ಲಿರುವಾಗಲೇ ವಾಸುದೇವರಾಯ ಮೋಡಕ, ವಿಷ್ಣುಪಂತ ಭಿಡೆ, ಬಖಲೆ ಇಂಥ ಸುಧಾರಕಾಗ್ರಣಿಗಳ ಮತಕ್ಕೊಳಗಾಗಿ ಪುನರ್ವಿವಾಹ, ಸ್ತ್ರೀ ಶಿಕ್ಷಣ ಮೊದಲಾದ ವಿಷಯಗಳ ಪಕ್ಷಪಾತಿಗಳಾಗಿದ್ದರು".

ಕಮಲಾಕಾಂತನು ತರುಣನಾಗಿದ್ದಾಗ ದೇವಯಾನಿ ಎಂಬ ವಿಧವೆಯನ್ನು ಮೋಹಿಸಿ ವಿವಾಹವಾಗಬೇಕೆಂದು ಯೋಚಿಸಿದರೂ, ಜಯರಾಮನ ಮಾತ್ಸರ್ಯದಿಂದ ವಿಫಲವಾಗುತ್ತದೆ. ಇದು ಕೂಡ ಕಾದಂಬರಿಕಾರರ ವಿಚಾರದಲ್ಲಿ ಮಹತ್ವದ ಅಂಶವಾಗಿದೆ. ವಿಧವಾ ವಿವಾಹದ ಬಗ್ಗೆ ಬಹುದೊಡ್ಡ ಅರಿವು, ಪ್ರಚಾರ ಎಚ್ಚರ ಕಾಣಿಸಿಕೊಳ್ಳುತ್ತಿದ್ದ ಕಾಲದಲ್ಲಿ ಬರೆದ ಈ ಕಾದಂಬರಿಯಲ್ಲಿ ಅದಕ್ಕೆ ಪೂರಕವಾದ ಸಂದರ್ಭಗಳೆಲ್ಲ ವಿಫಲಗೊಂಡು ಒಂದೂ ವಿಧವಾ ವಿವಾಹ ಸರಿಯಾಗಿ ನಡೆಯುವುದಿಲ್ಲ. ತನ್ನನ್ನು ವಿವಾಹವಾಗದ ಕಮಲಾಕಾಂತನ ನೆನಪಿನಲ್ಲಿ ವಿಧವೆ ದೇವಯಾನಿ ಹಾಗೇ ಉಳಿದು, ಪ್ರಿಯಕರನ ಮಗನಾದ ರಮಾಕಾಂತನನ್ನು ಮಗನಂತೆಯೇ ಕಂಡು, ಜಯರಾಮನ ಮಗಳೊಂದಿಗೆ ವಿವಾಹವಾಗುವ ಹಾಗೆ ಏರ್ಪಡಿಸಿ ತನ್ನ ಸೇಡು ಪೂರ್ಣಗೊಳಿಸುತ್ತಾಳೆ. ಆದರೆ ಇದು ಪ್ರೇಮ ವಿವಾಹವೇ ಹೊರತು ವಿವಾಹ ಇಲ್ಲದೆ ಪುನರ್ ವಿವಾಹವಾಗುವುದಿಲ್ಲ.

ಸೂಕ್ಷ್ಮವಾಗಿ ನೋಡಿದರೆ ಕಾದಂಬರಿಯಲ್ಲಿ ಸುಧಾರಣೆಯ ವಾದವು ಒಂದು ಬಗೆಯಾದುದಲ್ಲ. ರಾಧಾಬಾಯಿಯ ದಾರಿಗೂ, ಆಕೆಯ ತಮ್ಮನಾದ ಬಾಷ್ಕಳಪಂತನ ದಾರಿಗೂ ಭಿನ್ನತೆ ಕಾಣಿಸುತ್ತದೆ. ಅದನ್ನು ಒಂದೆಡೆಗೆ ಪಂತನು ಸ್ಪಷ್ಟವಾಗಿ ಹೇಳುತ್ತಾನೆ. “ನಾನು ಪುಣೆಯ ಕಾಕಾಜೋಶಿಯವರ ಮತಾನುವರ್ತಿಯು; ಪಂಡಿತೆಯು ಅಮೇರಿಕನ್ ಮಿಶನರಿಯವರ ಸೂತ್ರದಂತೆ ನಡೆಯುವಳು. ಹಿಂದೂ ಸ್ತ್ರೀಯರು ಇಂಗ್ರೇಜಿ ಸ್ತ್ರೀಯರಂತೆ ವರ್ತಿಸಿ ಧರ್ಮಾಂತರವನ್ನು ಕೂಡ ಮಾಡುವರು ಇಷ್ಟವೆಂದು ಅವಳ ಅಭಿಪ್ರಾಯವು; ನಾನು ಸ್ತ್ರೀ ಶಿಕ್ಷಣಕ್ಕೆ ಪ್ರತಿಕೂಲನು”. ಪುರಾತನ ಸತ್ವ-ತತ್ವಗಳ ಸಾಮರ್ಥ್ಯದಲ್ಲಿ ಮತ್ತು ಆಧುನಿಕತೆಯಲ್ಲಿ ಬಾಷ್ಕಳ ಪಂತನಿಗೆ ಸಮಾನ ವಿಶ್ವಾಸವಿದೆ. ವಿದ್ಯಾಭ್ಯಾಸ ಗಂಡು, ಹೆಣ್ಣುಗಳಲ್ಲಿ ಸ್ವೇಚ್ಛೆ ಅನೀತಿ-ತರುತ್ತದೆಂಬ ವಾದ ಅವನದು. ‘ನಿಮ್ಮ ವಿದ್ಯಾಪ್ರಸಾರಣೆಗೂ ಜೋಡಿ ನಮಸ್ಕಾರವಿರಲಿ’ ಎಂದು ವ್ಯಂಗ್ಯದಿಂದ ಹೇಳಿ ಅದರಿಂದ ಫಿರಂಗಿಯವರ ಅನುಕರಣೆ, ಸರಾಯ ಸೇವನೆ ಹೆಚ್ಚಿದೆ ಎನ್ನುತ್ತಾನೆ. ಅದರೊಂದಿಗೆ ಅವನು ಶಿಕ್ಷಣದಿಂದ ಬರುತ್ತಿರುವ ಸಮಾನತೆಯನ್ನು ಕೂಡ ಸರಿಯಾಗಿ ಅರ್ಥಮಾಡಿಕೊಳ್ಳುತ್ತಿಲ್ಲ. “ಸದ್ಯಕ್ಕೆ ಮೊಚ್ಚೇ ಹೊಲಿಯುವವರದೇ ಪ್ರಾಬಲ್ಯವಾಗಿದೆ. ವಿದ್ಯೆಗೂ ಜಾಣತನಕ್ಕೂ ಸರಕಾರದಲ್ಲಿ ಮಾನವೇ ಇಲ್ಲ” ಎಂದೂ ಹೇಳುತ್ತಾನೆ. ಇಡೀ ಕಾದಂಬರಿಯಲ್ಲಿ ಬಾಷ್ಕಳ ಪಂತ ಸುಧಾರಣಾವಾದಿ ನಿಲುವಿನ ಸುಶಿಕ್ಷಿತ ಹೆಣ್ಣುಗಳೊಂದಿಗೆ ಇದ್ದರೂ ಅದರಿಂದ ಆಗಾಗ್ಗೆ ವಿಮುಖವಾಗುವುದು. ಅದರ ವಿರೋಧ ಮಾಡುವುದು ಒಂದೆಡೆಯಾದರೆ, ಇನ್ನೊಂದೆಡೆ ಅಕ್ಕನ ಆ ಬಗೆಯ ಕಾರ್ಯ ಚಟುವಟಿಕೆಗಳಿಗೆ ಸಹಾಯ ಹಸ್ತವನ್ನು ನೀಡುತ್ತಾನೆ. ಕೊನೆಗೆ ಅಕ್ಕನ ಪ್ರಯತ್ನದಿಂದಾಗಿ ಅವನು ವಿಧವೆ ಕಮಲಾಬಾಯಿಯನ್ನು ವಿವಾಹವಾಗುತ್ತಾನೆ. ಪಂತನು ಇತ್ತಂಡ, ದ್ವಂದ್ವಗಳಲ್ಲಿ ತೂಗುವುದರಿಂದ ಅವನು ತಾತ್ವಿಕವಾಗಿ ಗಂಭೀರವಾದ ಪಾತ್ರವೆನಿಸುವುದಿಲ್ಲ.

ಇದರಂತೆ ರಮಾಕಾಂತ, ಇಂದಿರಾರ ದೃಷ್ಟಿಯು ಸಾಮಾಜಿಕ ಬದಲಾವಣೆ, ಸುಧಾರಣೆಗಳ ಬಗ್ಗೆ ಪೂರಕವಾಗಿ ಸ್ಪಷ್ಟವಾಗಿ ಬಂದಿಲ್ಲವೆಂಬುದನ್ನು ಈಗಾಗಲೇ ವಿವರಿಸಲಾಗಿದೆ. ಆದರೆ ಅಲ್ಲಲ್ಲಿ ಅವರು ಪ್ರಗತಿಶೀಲರಂತೆ ತೋರಿ ಬರುವ ದೃಶ್ಯಗಳೂ, ಸಂವಾದಗಳು ಇವೆ.

ರಮಾಕಾಂತನು ಸ್ತ್ರೀಯರ ಬಗ್ಗೆ ಗೌರವಾದರಳಿಂದ ವರ್ತಿಸುತ್ತಾನೆ. ತನ್ನ ಪ್ರಣಯದ ಸಾಫಲ್ಯಕ್ಕಾಗಿ ಅಪಮಾರ್ಗಗಳನ್ನು ಹಿಡಿಯುವುದಿಲ್ಲ. ಕೊನೆಗೆ ಇಂದಿರಾಳನ್ನು ವಿವಾಹವಾಗುವಾಗ ತಾನು ವರದಕ್ಷಿಣೆಯನ್ನು ಸ್ವೀಕರಿಸಲಾರೆ ಎನ್ನುವನು. ಇಂದಿರೆಯ ವಿವಾಹವೇನೂ ಸರಳವಾಗಿ ನಡೆಯುವುದಿಲ್ಲ. "ಎಂಟಾನೆಂಟು ದಿವಸ ಒಳ್ಳೇ ಮಹೋತ್ಸವದೊಂದಿಗೆ ಲಗ್ನ ಕಾರ್ಯವು ನೆರವೇರಿತು. ವಧು ವರಗಳು ಲಕ್ಷ್ಮೀನಾರಾಯಣರ ಭೂಮಿಕೆಯಲ್ಲಿರುವುದರಿಂದ ವಿಶ್ವಸ್ಥಿತಿಗೆ ಆದಿಹೇತುಗಳಾದ ಆ ಜಗತ್ಪಿತೃಗಳ ವಿವಾಹ ಮಹೋತ್ಸವವನ್ನು ಕಾರಣದವರಾದ ಅಮರರು ಸಸ್ತ್ರೀಕರಾಗಿ ಇಂದಿರಾ ರಮಾಕಾಂತರ ಲಗ್ನ ಸಮಾರಂಭವನ್ನು ನೋಡಬಂದಿರುವರೋ ಏನೋ ಎಂಬಂತೆ ವಸ್ತ್ರಾಭರಣಭೂಷಿತರಾಗಿ ಓಡಾಡುತ್ತಿದ್ದ ನರನಾರಿಯರ ಸಮೂಹವು ಕಂಗೊಳಿಸುತ್ತಿತ್ತು. ನಾಗರಿಕ ಜನಗಳಲ್ಲಿ ಕೆಲವರು ಶ್ರೀಕಾಂತರಾಯರ ಔದಾರ್ಯವನ್ನು ಕೊಂಡಾಡುತ್ತಿದ್ದರು. ಕೆಲವರು ವಧು–ವರಗಳ ರೂಪ, ಲಾವಣ್ಯಗಳನ್ನು ವರ್ಣಿಸುತ್ತಿದ್ದರು". ಇದು ಅದ್ದೂರಿಯ ಭೂರಿಭೋಜನದ, ವಸ್ತ್ರಾಲಂಕಾರ ಆಭರಣಗಳ ಪ್ರದರ್ಶನದ ಶ್ರೀಮಂತಿಕೆಯ ಮದುವೆ. ವಿವಾಹಕ್ಕೆ ಪೂರ್ವ ನವರಸಪುರದ ಜಹಗೀರಿಕೆ, ಆಸ್ತಿಪಾಸ್ತಿ ರಮಾಕಾಂತನಿಗೆ ಸೇರುತ್ತದೆ. ಜೊತೆಗೆ ಜಯರಾಯನೂ ತನ್ನೆಲ್ಲ ಆಸ್ತಿಗೆ ರಮಾಕಾಂತನನ್ನೆ ಒಡೆಯನೆಂದು ಸಾರುತ್ತಾನೆ. ಆರಂಭದಲ್ಲಿ ಶ್ರಮಶೀಲ ಆದರ್ಶ ಯುವಕನೆಂದು ತೋರುತ್ತಿದ್ದ ರಮಾಕಾಂತ ಕೊನೆಗೆ ಜಮೀನ್ದಾರನೂ, ಶ್ರೀಮಂತನೂ ಆಗಿಬಿಡುತ್ತಾನೆ.

ಕೊನೆಯಲ್ಲಿ ರಮಾಕಾಂತ, ಇಂದಿರಾರ ದೈವೀಶ್ರದ್ಧೆಯ ಗಾಢಭಾವದಲ್ಲಿ ಕಾದಂಬರಿ ವಿರಾಮ ಪಡೆಯುವುದನ್ನು ಗಮನಿಸಬೇಕು. ರುಕ್ಮಿಣೀ ಸ್ವಯಂವರದ ವಿಚಾರವಿರುವ ಪದವನ್ನು ಇಂದಿರಾ ಹಾಡುತ್ತಾಳೆ. ಅದರ ವಿವರ ಮುಖಪಾಠ ಬರುವುದೇ ಎಂದು ರಮಾಕಾಂತ ಕೇಳಿದಾಗ ಅವಳು ಕಳೆದ ನಾಲ್ಕು ತಿಂಗಳಿಂದ ನಿತ್ಯ ಅದನ್ನೇ ಪಾರಾಯಣ ಮಾಡುತ್ತಿರುವುದಾಗಿ ಹೇಳುತ್ತಾಳೆ. ಹಾಗೆ ಪಾರಾಯಣಕ್ಕೆ ಕಾರಣ ಕೇಳಿದರೆ ಅವಳು ಹೇಳುವ ಉತ್ತರವಿದು. "ಈ ಪಾದಸೇವಾ ಲಾಭವು ರುಕ್ಮಿಣೀದೇವಿಯರ ಪ್ರಸಾದದಿಂದ ದೊರಕೀತೆಂಬ ಆಸೆಯಿಂದ ಆ ಆದಿಮಾತೆಯ ಲೀಲಾಪ್ರಬಂಧದ ಪಾರಾಯಣ ಮಾಡುತ್ತಿದ್ದೆನು. ರುಕ್ಮಿಣೀದೇವಿಯರ ಅನುಗ್ರಹದಿಂದ ಈ ಮೋಹನಾಂಗವನ್ನು ಸ್ಪರ್ಶ ಮಾಡುವ ಅಧಿಕಾರವು ನನಗೆ ಪ್ರಾಪ್ತವಾದರೆ ಸತ್ಯನಾರಾಯಣ ವ್ರತವನ್ನು ಮಾಡುವೆನೆಂದು ಬೇಡಿಕೊಂಡಿದ್ದೇನೆ". ಅದಕ್ಕೆ ರಮಾಕಾಂತ ನಾಳೆಗೇ ಸತ್ಯನಾರಾಯಣ ಪೂಜೆ ಮಾಡಿ ಬಿಡೋಣ, ಅದರಿಂದ 'ಪ್ರಭುವಿನ ವ್ರತಾಚರಣೆಯಿಂದ ಮನುಷ್ಯ ಮಾತ್ರಕ್ಕೆ ನಿತ್ಯದಲ್ಲಿಯೂ ಶುಭಗಳಾಗುತ್ತವೆ' ಎಂಬ ವಿಚಾರದೊಂದಿಗೆ ಆಶಯದೊಂದಿಗೆ ಕಥನ ಮುಕ್ತಾಯವನ್ನು ಕಾಣುತ್ತದೆ. 'ಇಂದಿರಾಬಾಯಿ' ಕಾದಂಬರಿಯಲ್ಲಿ ಭಾಸ್ಕರರಾಯ ಮತ್ತು ಇಂದಿರಾಬಾಯಿ ಇವರ ವಿವಾಹದೊಂದಿಗೆ ಕಥನ ಕೊನೆಗೊಂಡರೂ ಅಲ್ಲಿ ಮನುಷ್ಯ ಪ್ರಯತ್ನಕ್ಕೆ ಗೆಲುವು ಲಭಿಸಿದ ಸೂಚನೆ ಇದೆ. ಪಾಪಿಗಳು ಪ್ರಾಯಶ್ಚಿತ್ತದಿಂದ ಮತ್ತೆ ಸನ್ಮಾರ್ಗದತ್ತ ಬರುವರು. ಧರ್ಮಸ್ಥಾನದಲ್ಲಿ ಅಂಧಶ್ರದ್ಧೆಯ ಮತ್ತು ಅಲ್ಪಮತೀಯ ಭೀಮರಾಯರ ಬದಲಾಗಿ ಬಿ.ಎ. ಕಲಿತ ಸುಶಿಕ್ಷಿತನೊಬ್ಬ ಕಾರಭಾರಿಯಾಗುತ್ತಾನೆ. 'ವಾಗ್ದೇವಿ'ಯಲ್ಲಿಯೂ ಮನುಷ್ಯನ ಪ್ರಾಯಶ್ಚಿತ್ತ ಮುಖ್ಯವಾಗಿ ಒಳ್ಳೆಯ ಬದುಕಿಗೆ ದಾರಿಯಾಗುವಲ್ಲಿಗೆ ಕಾದಂಬರಿ ಮುಗಿಯುತ್ತದೆ. ಮೂರು ಕಾದಂಬರಿಗಳಲ್ಲಿ 'ಇಂದಿರಾ' ತುಂಬ ಸಾಂಪ್ರದಾಯಕವಾದ ಪುರಾಣ ಪುಣ್ಯ

ಕತೆಗಳ ಮುಕ್ತಾಯದಂತೆ ಕೊನೆಯನ್ನು ಕಂಡುಕೊಂಡಿದೆ. ಅದರಲ್ಲಿ ಬರುವ ಕೊನೆಯ ಮಾತು ಹೀಗಿದೆ. (ಸತ್ಯನಾರಾಯಣ ವ್ರತದ ಬಗ್ಗೆ) "ಆಗಲೀ ನಾಳೆಗೇ ಆ ವ್ರತವನ್ನು ಮುಗಿಸಿ ಬಿಡೋಣ. ಆ ಪ್ರಭುವಿನ ವ್ರತಾಚರಣೆಯಿಂದ ಮನುಷ್ಯ ಮಾತ್ರಕ್ಕೆ ನಿತ್ಯದಲ್ಲಿಯೂ ಶುಭಗಳಾಗುತ್ತವೆ".

'ಇಂದಿರಾ' ಕಾದಂಬರಿಯ ನಂತರದಲ್ಲಿ, ಮಾಸ್ತಿಯವರ ಸುಬ್ಬಣ್ಣ, ಕುವೆಂಪು ಅವರ ಕಾನೂರು ಹೆಗ್ಗಡತಿ, ಕಾರಂತರ ಮರಳಿ ಮಣ್ಣಿಗೆ, ಸರಸಮ್ಮನ ಸಮಾಧಿ ಮತ್ತು ತಿರುಮಲಾಂಬಾ ಅವರ ಕೆಲವು ಕಾದಂಬರಿಗಳು ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಪ್ರಕಟಗೊಂಡ ಮಹತ್ವದ ಕೃತಿಗಳು. 'ಸುಬ್ಬಣ್ಣ' ಕಲಾವಿದನೊಬ್ಬನ ಬದುಕಿನ ಕಥನವಾಗಿದ್ದು, ಅಲ್ಲಿ ಸಮುದಾಯದ ವಿವರವಾದ ಚಿತ್ರಣವೇನೂ ಬರುವುದಿಲ್ಲ. ೧೯೩೬ರಲ್ಲಿ ಪ್ರಕಟಗೊಂಡ 'ಕಾನೂರು ಹೆಗ್ಗಡತಿ'ಯು ಸ್ತ್ರೀ ಹೆಸರಿನಲ್ಲಿ ಹೊರಬಂದಿದ್ದರೂ (ಹೆಗ್ಗಡತಿ) ಅದು ಒಂದು ಪ್ರಾದೇಶಿಕ ಜೀವನದ ಸಾಂಸ್ಕೃತಿಕ ವಿವರಗಳ ಸಮಗ್ರ ಚಿತ್ರಣ ನೀಡುತ್ತದೆ. ಆಧುನಿಕತೆಯ ಮುಖಾಮುಖಿ ಇಲ್ಲಿಯೂ ಬಂದಿದೆ. ವಿದ್ಯಾಭ್ಯಾಸ ಪಡೆದು ಮೈಸೂರಿನಿಂದ ತಮ್ಮ ಮಲೆನಾಡಿಗೆ ಆಗಮಿಸುವ ಯುವಕರೊಂದಿಗೆ ಆರಂಭವಾಗುವ ಕಥಾನಕವು, ಕಿರಿದಾದ ಪ್ರದೇಶದ, ಒಂಟಿಮನೆ ಹಳ್ಳಗಳ ಸಾವಯವ ಬದುಕನ್ನು ಕಟ್ಟಿಕೊಡುತ್ತದೆ. ಹೂವಯ್ಯನ ಆದರ್ಶ, ಭಾವತೀವ್ರತೆಯು ಕಾದಂಬರಿಯ ಸ್ತರವನ್ನು ಭಿನ್ನವಾಗಿಸಿದರೂ, ಇಲ್ಲಿಯ ಮಹಿಳೆಯರು ಹೆಚ್ಚು ದಿಟ್ಟವಾಗಿ ಕಂಡುಬರುತ್ತಾರೆ. ಸ್ವತಃ ಶೋಷಣೆ, ಅನ್ಯಾಯಗಳಿಗೆ ಒಳಗಾದ ಹೆಗ್ಗಡತಿ ಸುಬ್ಬಮ್ಮ, ವಿಧವೆಯಾದಾಗ ಗಂಡಿಗೆ ಸರಿಸಮನಾಗಿ ಜಮೀನು ಮಾಡಿಸುತ್ತಾಳೆ, ಮನೆಯ ಆಡಳಿತ ನಡೆಸುತ್ತಾಳೆ, ಜೈವಿಕವಾಗಿ ತನ್ನ ಆಯ್ಕೆಯನ್ನೂ ಮಾಡಿಕೊಳ್ಳುತ್ತಾಳೆ. ಪ್ರಧಾನ ಪಾತ್ರವಾದ ಸೀತೆ ಒತ್ತಾಯ, ಅಸಹಾಯಕತೆಗೆ ಬಲಿಯಾದರೂ, ತನ್ನ ಸತ್ವಶಕ್ತಿಯಿಂದ ವಿಲಕ್ಷಣ ಪ್ರತಿಭಟನೆ ನಡೆಸಿ, ತಾನು ಒಲಿದವನ ಸಾಮಿಪ್ಯದಲ್ಲಿ, ಪವಿತ್ರ ಸಂಬಂಧ ಸ್ಥಾಪಿಸಿಕೊಂಡು ಸಾಧನೆಯ ದಾರಿಯಲ್ಲಿ ನಡೆಯುತ್ತಾಳೆ. ಹೀಗಾಗಿ ಕುವೆಂಪು ಒಂದೆಡೆಗೆ ಕುಸುಮಕೋಮಲ, ನಯ ನಾಜೂಕಿನ ಹೆಣ್ಣುಗಳನ್ನು ಚಿತ್ರಿಸಿದಂತೆ ಕಂಡುಬಂದರೂ, ಸಮಯ ಸಂದರ್ಭಬಂದಾಗ ಅವರು ಧೀಮಂತಿಕೆಯಿಂದ ನೇರವಾಗಿ ಬದುಕಿಗೆ ಮುಖಾಮುಖಿಯಾಗಿ ನಿಲ್ಲುತ್ತಾರೆ. ಇದು 'ಮಲೆಗಳಲ್ಲಿ ಮದುಮಗಳು'ದಲ್ಲಿಯೂ ಮುಂದುವರೆಯುತ್ತದೆ.

ಕುವೆಂಪು ಆಧುನಿಕತೆ, ಸುಧಾರಣೆ ಪ್ರಕ್ರಿಯೆಗೆ ಕಾದಂಬರಿಯಲ್ಲಿ ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆ. ಆಧುನಿಕ ವಿದ್ಯಮಾನಗಳು ಬದುಕಿನಲ್ಲಿ ವೇಗ, ಉದ್ವೇಗಗಳನ್ನು ತರಬಲ್ಲವೆಂಬುದನ್ನು, ನಗರದಿಂದ ಮಲೆನಾಡಿಗೆ ಬರುವ ಸೈಕಲ್ ಸವಾರನ ಅವಸರ, ಜಾರುವಿಕೆ, ಬೀಳುವಿಕೆಯ ಮುಖೇನ ಕಂಡುಕೊಂಡರೂ, ವಿದ್ಯಾಭ್ಯಾಸ, ಸ್ತ್ರೀಸಮಾನತೆ, ಜಾತಿಪಾತಿಗಳಾಚೆಯ ಮಾನವೀಯತೆಗೆ ಅಪಾರವಾದ ಗೌರವ ಆದ್ಯತೆ ನಿಡುತ್ತಾರೆ. ಹೂವಯ್ಯ ರಾಮಯ್ಯರು ತಮ್ಮ ವಿದ್ಯಾಭ್ಯಾಸದ ಕಾರಣ ವೆಂಕಪ್ಪಯ್ಯ ನಂತಹ ಪುರೋಹಿತನನ್ನು ಎದುರಿಸುತ್ತಾರೆ. ಹೂವಯ್ಯ ಸೀತೆಗೆ ವಿದ್ಯಾಭ್ಯಾಸ ಮಾಡಿಸುತ್ತಾನೆ. ಕೊನೆಗೆ ಎಲ್ಲಾ ಜಾತಿ, ಮತ, ಪಂಥಗಳ ಜನರೊಂದಿಗೆ

ನವಜೀವನ ಮಂತ್ರಗಾನ ಹಾಡಿ ಹೊಸದಾದ ಸಾಮಾಜಿಕ ವ್ಯವಸ್ಥೆಗೆ ಕರೆ ನೀಡುವುದರೊಂದಿಗೆ ಕಾದಂಬರಿ ವಿಶಿಷ್ಟ ಆಶಯದಲ್ಲಿ ಮುಕ್ತಾಯ ಕಾಣುತ್ತದೆ.

ಬದುಕಿನ ಅನನ್ಯವಾದ ಶೋಧದಲ್ಲಿ, ಅನ್ವೇಷಣೆಯಲ್ಲಿ ತೊಡಗುವ ಕಾರಂತರ ಕಾದಂಬರಿಗಳು ಬದುಕಿನ ಸಂದರ್ಭಗಳ ವಿವರಣೆಯಾಗಿ ಗಮನಾರ್ಹವಾಗಿದೆ. ಚೋಮನದುಡಿ ಸರಸಮ್ಮನ ಸಮಾಧಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ ಕಾದಂಬರಿಗಳು ಸ್ವಾತಂತ್ರ್ಯ ಪಾರ್ವದಲ್ಲಿಯೇ ಪ್ರಕಟಗೊಂಡು, ೧೯೩೦–೧೯೪೫ರ ಕಾಲಾವಧಿಯ ಪ್ರತಿನಿಧಿಯಾಗಿ ಬರುತ್ತದೆ. ಗ್ರಾಮೀಣ ಅಸ್ಪೃಶ್ಯತೆ ಮತ್ತು ಜಮೀನ್ದಾರಿ ಪದ್ಧತಿಗಳ ವಾಸ್ತವಿಕ ಚಿತ್ರಣ ಚೋಮನ ದುಡಿಯಲ್ಲಿ ನಿನದಿಸುತ್ತದೆ. ವಿರಸ ದಾಂಪತ್ಯ, ಗಂಡು ಹೆಣ್ಣಿನ ಸಂಬಂಧಗಳ ಹುಡುಕಾಟದೊಂದಿಗೆ ಸತಿ–ಪದ್ಧತಿಯ ವಿಡಂಬನೆಯಂತಿರುವ ಸರಸಮ್ಮನ ಸಮಾಧಿ, ಭೂತ ವರ್ತಮಾನಗಳ ಹುಡುಕಾಟವು ಆಗಿಬಿಡುತ್ತದೆ. ಮರಳಿ ಮಣ್ಣಿಗೆ ಯಲ್ಲಿ ಆಧುನೀಕರಣ, ಗ್ರಾಮಬದುಕನ್ನು ಪ್ರಭಾವಿಸುವ ಬಗೆಯನ್ನು ತಾಳ್ಮೆಯಿಂದ ಪರಿಶೀಲಿಸಲಾಗಿದೆ. ಕಾರಂತರು ಹಳೆಯ ಬದುಕಿನ ವಿಕಾರಗಳನ್ನು ಎತ್ತಿತೋರಿ ವಿಡಂಬಿಸುವಂತೆ, ಹೊಸದರ ಮಿತಿಗಳನ್ನು ಕಾಣಿಸುತ್ತಾರೆ. ಅವರವರ ಅರಿವು, ವಿವೇಕಗಳಿಂದ ಅವರವರ ಬದುಕು, ಪರಿಸರಗಳಲ್ಲಿ ಅರ್ಥಪೂರ್ಣ ಸಾಧನೆಗಳನ್ನು ನಡೆಸುವುದನ್ನು ಅಲ್ಲಿ ಸೂಚಿಸಲಾಗಿದೆ.

ಹೆಣ್ಣಿನ ಬದುಕನ್ನು, ಆಧುನಿಕ ಪ್ರಕ್ರಿಯೆಯನ್ನು ಇನ್ನೂ ಕೆಲವು ಕನ್ನಡ ಕಾದಂಬರಿಕಾರರು ವಿವರಿಸಲು ಯತ್ನಿಸಿದ್ದಾರೆ. ಕೆ.ಜಿ. ಕುಂದಣಗಾರರ ಸರಸ್ವತಿ, ಬಸವರಾಜ ಕಟ್ಟೀಮನಿಯವರ ಖಾನಾವಳಿ ನೀಲಾ, ಮಿರ್ಜಿಅಣ್ಣಾರಾಯರ ನಿಸರ್ಗ, ತಿರುಮಲಾಂಬಾರ ಕಾದಂಬರಿಗಳು ಕಾದಂಬರಿಗಳು ಹೀಗೆ ಹಲವು ಕೃತಿಗಳು ಭಿನ್ನ ಚಿತ್ರಣ ನೀಡುತ್ತವೆ. ಅದೇ ಹೊತ್ತಿಗೆ ರಾಷ್ಟ್ರೀಯ ಮನೋಭಾವವೂ ಮೂಡತೊಡಗಿತ್ತು. ಹಾಗೆ ನೋಡಿದರೆ ಇಂದಿರಾಬಾಯಿ, ವಾಗ್ದೇವಿ, ಇಂದಿರಾ ಕಾದಂಬರಿಗಳಲ್ಲಿ 'ಅಖಿಲ ಭಾರತಮಟ್ಟ' ಎಂಬ ರಾಷ್ಟ್ರೀಯತಾ ಮನೋಭಾವದ ಕುರುಹುಗಳೂ ಕಂಡುಬರುವುದಿಲ್ಲ. ಅಲ್ಲಿ ಏನಿದ್ದರೂ ಸಾಮಾಜಿಕ ವಿಷಮತೆ, ಧಾರ್ಮಿಕ ಪ್ರಭಾವ, ಸುಧಾರಣೆಯ ಅಗತ್ಯ ಬಿಂಬಿತವಾಗಿದೆ. ಅದರಂತೆ ಕೆರೂರರ 'ಇಂದಿರಾ' ಖಂಡಿತವಾಗಿಯೂ ಸಾಮಾಜಿಕ ವಾಸ್ತವತೆಯಲ್ಲಿ ರೂಪುಗೊಂಡ ಸುಧಾರಣಾವಾದದ ವಿವರಣೆ, ವಿಶ್ಲೇಷಣೆ ಆಶಯ ಹೊಂದಿದ ಕಥನವೇ ಆಗಿರುವುದು ಸ್ಪಷ್ಟವಿದೆ.

ಆದರೆ ಕೆರೂರ ದೃಷ್ಟಿ ಆ ಸುಧಾರಣೆಗೆ ಒತ್ತು ನೀಡುವ ಸಾಮಾಜಿಕ ಗತಿಶೀಲತೆಗೆ ಎಷ್ಟು ಸುಸಂಬಂಧವಾಗಿದೆ ಎಂಬುದು ಪ್ರಶ್ನೆಯಾಗಿ ನಿಲ್ಲುತ್ತಿದೆ. 'ಆಧುನಿಕ ಶಿಕ್ಷಣದ ದುಷ್ಪರಿಣಾಮಗಳಿಂದ ಸನಾತನ ಸಮಾಜದ ಮೌಲ್ಯಗಳನ್ನು ಸಂರಕ್ಷಿಸುವುದು ಆಚಾರ್ಯರ ಕಾಳಜಿಯಾಗಿತ್ತು" ಎಂಬುದನ್ನು ಸರಿಯಾಗಿ ಗುರುತಿಸುವ ಡಾ. ಜಿ.ಎಸ್. ಆಮೂರರು ಈ ಕೃತಿಯೊಂದು 'ವಾಸ್ತವದ ಆಭಾಸ' ಎಂದು ಕರೆಯುತ್ತಾರೆ. ಕೆರೂರರ ಕಾದಂಬರಿ ಸಂಪುಟವನ್ನು ಸಂಪಾದಿಸಿದ ವಿಮರ್ಶಕರು, ಕೆರೂರ ಆದರ್ಶ ಸಮಾಜದ ಕಲ್ಪನೆ. ಗುಲ್ವಾಡಿಯವರ ವಾಸ್ತವ ಪ್ರಜ್ಞೆಗೆ ಭಿನ್ನವಾದುದಷ್ಟೇ ಅಲ್ಲ. ಸಾಮಾಜಿಕ ಸಂಚಲನವನ್ನು ಸ್ಥಗಿತ ಚಿತ್ತದಿಂದ ಗ್ರಹಿಸುವ ಮಿತಿಯುಳ್ಳದ್ದಾಗಿದೆ ಎಂದಿದ್ದಾರೆ. ಕೆರೂರರು ಹೊಸ ವಿದ್ಯಾಭ್ಯಾಸ ಪಡೆದು, ಕಾನೂನು

ಪದವಿ ಹೊಂದಿ ಪತ್ರಿಕೆ ನಡೆಸುತ್ತಿದ್ದವರು. ಅವರ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿಯೇ 'ಇಂದಿರಾ' (ಇಂದಿರೆ) ಪ್ರಕಟವಾಗಿದೆ. ಭಾರತೀಯ ಸಮಾಜವೇ ಹೊಸ ಅರಿವು, ಪ್ರಜ್ಞೆ ಮುಡಿದ್ದು ಭಿನ್ನ ಆಯಾಮಕ್ಕೆ ಸಿದ್ಧಗೊಳ್ಳುತ್ತಿರುವ ಸಮಯದಲ್ಲಿ ಕೆರೂರರು ಸನಾತನ ವ್ಯವಸ್ಥೆ, ಮೌಲ್ಯಗಳ ರಕ್ಷಣೆಗಾಗಿ ಹೋರಾಡಿದ್ದು, ಸೃಜನಶೀಲತೆಯ ಆಸರೆ ಪಡೆದು. ಆದರೆ ಇದರಿಂದ ಅವರ ಸೃಜನಶೀಲತೆಯೇ ದ್ವಂದ್ವ, ಇತ್ತಂಡ, ಅನುಭವಿಸಿ, ಸಮಕಾಲೀನತೆಯನ್ನು ಗ್ರಹಿಸುವಲ್ಲಿ, ಚಿತ್ರಿಸುವಲ್ಲಿ ಸೋಲು ಅನುಭವಿಸುವುದು ಕನ್ನಡದ ಮಟ್ಟಿಗೆ ಅಪಾರ ಹಾನಿ ಎಂದೇ ಹೇಳಬೇಕು.

ಕೆರೂರರು ಇಂದಿರಾ ಕಾದಂಬರಿಯ ನಂತರದಲ್ಲಿ, ಯದುಮಹಾರಾಜ, ಭ್ರಾತೃಘಾತಕನಾದ ಔರಂಗಜೇಬ, ಯವನ ಸರಂಧ್ರಿ, ವಾಲ್ಮೀಕಿ ವಿಜಯ ಕೃತಿಗಳಲ್ಲಿ ಕಥನ ಪ್ರಯೋಗ ನಡೆಸಿದ್ದಾರೆ. ಇಂದಿರಾ ನಂತರದಲ್ಲಿ ಕೆರೂರರು ಸಾಮಾಜಿಕ ವಾಸ್ತವತೆಗೆ ಮುಖ ತಿರುಗಿ ನಿಂತು ಇತಿಹಾಸ, ಪುರಾಣಗಳ ಲೋಕಕ್ಕೆ ಸಾಗಿಬಿಡುತ್ತಾರೆ. ಯದುಮಹಾರಾಜ ಕಾದಂಬರಿಯಾಗಿ ಕಲಾತ್ಮಕವಾಗಿದ್ದರೂ, ಅರಸು ಮನೆತನಗಳ ಮೇಲಾಟ, ನಡೆಯುವ ನಾನಾ ತೆರನಾದ ಹೋರಾಟಗಳು ಪ್ರಮುಖವಾಗಿ ಜನಹಿತದ ಪ್ರಶ್ನೆ ಗುಣವಾಗಿದೆ. ಬಾಕಿ ಕಾದಂಬರಿಗಳು ಕಲ್ಪಕತೆಗಳೇ ಆಗಿವೆ. ಹಾಗಾಗಿ ಕೆರೂರರ ಹೆಸರನ್ನು ಕಾದಂಬರಿ ಕ್ಷೇತ್ರದಲ್ಲಿ ಇಂದಿಗೂ ನಿಲ್ಲಿಸಬಲ್ಲ ಕೃತಿಯಾಗಿ 'ಇಂದಿರಾ' ಕಾಣಿಸುತ್ತದೆ. ಆದರೆ ಅದು ವಿಪರ್ಯಸ್ತ ಮನೋಸ್ಥಿತಿಯ ರಚನೆಯಾಗಿರುವ ಕಾರಣ ನಿರೀಕ್ಷಿತ ಮಟ್ಟಕ್ಕೆ ಏರಿ ನಿಲ್ಲಲು ಸಾಧ್ಯವೇ ಆಗುವುದಿಲ್ಲ. ನನ್ನ ಬುದ್ಧಿಗೆ ತೋರುವುದೇನೆಂದರೆ, ವಿದ್ಯೆ ಕಲಿಯುವುದೆಂದರೆ ಯಾವುದೊಂದೂ ಕೇಡಿಲ್ಲ ಮಾತ್ರವಲ್ಲ; ಎಲ್ಲಾ ಕೇಡುಗಳಿಂದಲೂ ತಪ್ಪಿಸಿಕೊಳ್ಳಬಹುದು ಎಂದು 'ಇಂದಿರಾಬಾಯಿ' ಮೂಲಕ ಗುಲ್ವಾಡಿಯವರು ಸಾರುವ ವಿಚಾರಕ್ಕೂ ಆಧುನಿಕ ಶಿಕ್ಷಣದಿಂದ ವಿವೇಕಹೀನರಾದ ಪೋರರರದೊಂದು ಅಸಾಧ್ಯವಾದ ದಂಡೇ ಸಮಗ್ರ ದೇಶವನ್ನು ಆಕ್ರಮಿಸಿಕೊಂಡಿರುವುದು ಇದಕ್ಕಾಗಿಯೇ ನಮ್ಮ ಸ್ತ್ರೀಯರೂ ಕೂಡಾ ತಲೆ ತೆಗೆದು ಮನಸ್ಸಿಗೆ ಬಮದಂತೆ ಮೆರೆಯಬೇಕೇನು? ಎಂದು ಕೆರೂರರು ಕೇಳುವ ಪ್ರಶ್ನೆಗಳಿಗೂ ಅಪಾರ ವ್ಯತ್ಯಾಸವಿದೆ. ಇದು ವಸ್ತುವಿನ ಸ್ವರೂಪ, ವಿನ್ಯಾಸ, ರಚನೆ, ಬೆಳವಣಿಗೆ, ಸಂರಚನೆ, ಆಶಯಗಳನ್ನು ಪ್ರಭಾವಿಸುವುದರಿಂದ, ನಿಯಂತ್ರಿಸುವುದರಿಂದ ಇಲ್ಲಿ ಯಾವ ಸಂಘರ್ಷವೂ ಲೌಖಿಕವಾಗಿ ಬೆಳೆದು ಬರುವುದಿಲ್ಲ.

ಮಾಡಿದ್ದುಣ್ಣೋ ಮಹಾರಾಯ

ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯದಲ್ಲಿ ಅನಾವರಣಗೊಳ್ಳುವುದು ಹಳೆಯ ಕಾಲದ ಜೀವಂತ ಚಿತ್ರವೆನ್ನಬಹುದು. ಮುಮ್ಮಡಿ ಕೃಷ್ಣರಾಜರ ಕಾಲದ ಹಳೆ ಮೈಸೂರು ಪ್ರದೇಶದ ಜೀವನ, ಆಚಾರ ವಿಚಾರ, ನಂಬಿಕೆ, ಶ್ರದ್ಧೆಗಳನ್ನು ದಾಖಲೆಕಾರನ ರೀತಿಯಲ್ಲಿ ಪುಟ್ಟಣ್ಣನವರು ಚಿತ್ರಿಸುತ್ತಾರೆ. ಎ.ಆರ್. ಕೃಷ್ಣ ಶಾಸ್ತ್ರಿಗಳು ಪುಟ್ಟಣ್ಣನವರ ಪೂರ್ವೋಕ್ತ ಕೃತಿಯನ್ನು ಮೈಸೂರು ಚರಿತ್ರೆಯ ಮೇಲೆ ಇರುವ ಕೃತಿಗಳ ಸಾಲಿನಲ್ಲಿ ಸೇರಿಸಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

ಸುಶೀಲೆಯೂ ಪತಿಪರಾಯಣೆಯೂ ಆದ ಸೀತೆಯ ಕಷ್ಟಗಳ ಸುತ್ತ ಈ ಕಾದಂಬರಿಯು ಹೆಣೆಯಲ್ಪಟ್ಟಿದೆ. ರಾಮಾಯಣದ ಸೀತಾಮಾತೆಯ ಪ್ರತಿಮೆಯ ಪ್ರತಿರೂಪಕದಂತೆ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಸೀತೆಯ ಪಾತ್ರವಿದೆ. ಇದರಿಂದಾಗಿ ಈ ಕಾದಂಬರಿಯನ್ನು ವಿಮರ್ಶಕರು ಪುಟ್ಟಣ್ಣನವರು ರಾಮಾಯಣದ ಚಪ್ಪರದ ಮೇಲೆ ಹಬ್ಬಿಸಿರುವ ವಾಸ್ತವಿಕ ಕಾದಂಬರಿ ಎನ್ನುವ ತೀರ್ಮಾನವನ್ನು ತಳೆದಿದ್ದಾರೆ. ಡಾ.ರಾಮಚಂದ್ರನ್ ಅವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು:

....ಈ ತರಹದ ಉದ್ದೇಶಪೂರ್ವಕವಾದ ತಂತ್ರದ ಮೂಲಕ ಪುಟ್ಟಣ್ಣನವರ ಕೃತಿ ರಾಮಾಯಣದ ಒಟ್ಟು ಆಕಾರವನ್ನು ಬಳಸಿಕೊಂಡು ಕೃತಿಯ ಮುಖ್ಯ ಪಾತ್ರಗಳಾದ ಸೀತಮ್ಮ, ಸದಾಶಿಚ ದೀಕ್ಷಿತ, ಅಪ್ಪಾಜಿ ಇವರುಗಳನ್ನು ಒಂದು ಖಚಿತ ಚಾರಿತ್ರಿಕ ಕಾಲದಲ್ಲಿ ನಿಲ್ಲಿಸುವುದಲ್ಲದೆ (ಪ್ರಮಾದಿ ಸಂವತ್ಸರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ) ಅವರಲ್ಲಿನ ಸಾರ್ವಕಾಲೀನ ಗುಣಗಳನ್ನೂ– ಪಾತಿವ್ರತ್ಯ, ಸಹನೆ, ಜ್ಞಾನಮಾರ್ಗ, ಲೋಭ ಮತ್ತು ಕಾಮಗಳನ್ನೂ ಗುರುತಿಸುತ್ತದೆ.

ಅಂದರೆ ಪುಟ್ಟಣ್ಣನವರು ತಮ್ಮ ಕಾದಂಬರಿಯ ಆಕೃತಿಯನ್ನು ರಾಮಾಯಣದ ರೂಪದಿಂದ ಪಡೆದುಕೊಳ್ಳುತ್ತಾರೆ ಎಂದು ರಾಮಚಂದ್ರನ್ ಪರಿಭಾವಿಸುತ್ತಾರೆ. ಈ ಮೂಲಕ ರಾಮಾಯಣದ ನೈತಿಕ ನೆಲೆಯನ್ನು ತಮ್ಮ ಕೃತಿಗೆ ಪುಟ್ಟಣ್ಣನವರು ಒದಗಿಸುತ್ತಾರೆ ಎಂದು ಅವರು ಭಾವಿಸುತ್ತಾರೆ.

ಆದರೆ ರಾಮಾಯಣದ ನೈತಿಕತೆ ಮತ್ತು ಪುಟ್ಟಣ್ಣನವರ ನೈತಿಕತೆಗಳು ಮೇಲ್ನೋಟಕ್ಕೆ ಒಂದೇ ಎನ್ನುವಂತೆ ಕಂಡರೂ ಅವುಗಳು ಭಿನ್ನವಾಗಿವೆ. ರಾಮಾಯಣದ ಸೀತೆಯ ಪ್ರತಿರೂಪಕದಂತೆ ಕಾಣುವ ಮಾಡಿದ್ದುಣ್ಣೋ ಮಹಾರಾಯದ ಸೀತೆ ಸೀತಾಮಾತೆಯ ವ್ಯಾಖ್ಯಾನಿತ ಬಿಂಬವಾಗಿ ಮೂಡುತ್ತಾಳೆ. ಇದನ್ನು ಪುಟ್ಟಣ್ಣನವರು ಮುನ್ನುಡಿಯಲ್ಲಿ ಖಚಿತಪಡಿಸಿದ್ದಾರೆ. 'ನಿರ್ಮಲದ ಗುಣದಲ್ಲಿ ದೋಷವಿದೆ ಎಂದರೆ ಆಭಾಸ ತೋರದೇ ಇರಲಾರದು' ಎನ್ನುವ ಪುಟ್ಟಣ್ಣನವರು ಇಂಥಾ ನಿರ್ದುಷ್ಟ ಪದಾರ್ಥಗಳ ವರ್ಣನೆಯನ್ನು ಬಿಟ್ಟು ಕೆಳಕ್ಕೆ ಇಳಿದರೆ ಬುದ್ಧಿಯ ಜೋವು ಬಿಟ್ಟಂತಾಗುವುದು. ಅಂಥಾ ನಿರ್ಮಲ ಮೂರ್ತಿಗಳಾದ ಶ್ರೀರಾಮ, ಸೀತಾದೇವಿ, ಯುಧಿಷ್ಠಿರ, ದ್ರೌಪದಿ, ಇವರುಗಳ ಗುಣಗಳಲ್ಲಿ ಕೆಲವು ಭಾಗವನ್ನು ಹೊಂದಿ, ಲೋಕದ ರಾಡ್‌ಗೆ ಸಿಕ್ಕಿ ಕಷ್ಟಕ್ಕೆ ಗುರಿಯಾದರೂ, ತಮ್ಮ ಧೀರೋದಾತ್ತ ಗುಣಗಳನ್ನು ಬಿಡದೇ ಇರತಕ್ಕ ಪಾತ್ರಗಳನ್ನು ಮನುಷ್ಯ ಮಾತ್ರದವರಲ್ಲಿ ಆರಿಸಿಕೊಂಡೋ, ಊಹಿಸಿಕೊಂಡೋ ವರ್ಣಿಸುವುದು ಮನಸ್ಸನ್ನು ಚೆನ್ನಾಗಿ ಆಕರ್ಷಣ ಮಾಡುವುದರಲ್ಲಿ ಸಂಶಯವಿಲ್ಲ.

ತಾವು ರಚಿಸುತ್ತಿರುವ ಪಾತ್ರಗಳು ಪುರಾಣ ಪ್ರಸಿದ್ಧರಿಗಿಂತ ಭಿನ್ನವಾದುವು ಎನ್ನುವ ಅರಿವು ಕಾದಂಬರಿಕಾರರಿಗಿದೆ. ಪುರಾಣ ಪ್ರಸಿದ್ಧರ ಗುಣಗಳು ಲೇಖಕರ ನೈತಿಕ ಪ್ರಜ್ಞೆಯಲ್ಲಿ ವ್ಯಾಖ್ಯಾನಿತವಾಗಿ ಅನಂತರ ಕಾದಂಬರಿಯ ಪಾತ್ರಗಳಿಗೆ ಆರೋಪಿತವಾಗುವುದು ಈ

ಕಾದಂಬರಿಯ ತಂತ್ರದ ವಿಶಿಷ್ಟತೆಯಾಗಿದೆ. ಆದುದರಿಂದ ಮಾಡಿದ್ದುಣ್ಣೋ ಮಹಾರಾಯದ ಆಕೃತಿಯನ್ನು ಪುಟ್ಟಣ್ಣನವರು ಬಂದಿರುವ ಸಾಮಾಜಿಕ ವರ್ಗದ ಆಲೋಚನೆಯ ವಿನ್ಯಾಸದಿಂದ ಅರಿಯಬೇಕಾಗಿದೆ.

ಪುಟ್ಟಣ್ಣನವರ ನೈತಿಕ ನಿಲುವು ಅವರ ಕಾದಂಬರಿಯು ರಚಿತವಾಗುತ್ತಿದ್ದ ಸಾಮಾಜಿಕ ವಾಸ್ತವದ ಚಲನೆಗಿಂತ ಭಿನ್ನವಾದ ಸಾಂಪ್ರದಾಯಿಕ ನಿಲುವು. ಸರಗತೆಗಳ ಮೂಲಕ ತಮ್ಮ ಕಾದಂಬರಿಯನ್ನು ನಿರ್ಮಿಸುವ ಪುಟ್ಟಣ್ಣನವರ ಕಾದಂಬರಿಯ ಶೈಲಿ ಮತ್ತು ಅವರ ನೈತಿಕತೆಗಳಿಗಿರುವ ನಿಕಟ ಸಂಬಂಧವನ್ನು ಡಾ.ಎಂ. ಜಿ. ಕೃಷ್ಣಮೂರ್ತಿಯವರು ಗುರುತಿಸಿದ್ದಾರೆ:

"ಈ ಕಾದಂಬರಿಯ ಹೆಸರೇ ಅದರ ನೀತಿ ಬೋಧನಾತ್ಮಕ ಉದ್ದೇಶವನ್ನು ಸೂಚಿಸುತ್ತದೆ. ನೀತಿ ಬೋಧನಾತ್ಮಕ ಕಾದಂಬರಿಗಳು ಕಲಾತ್ಮಕವಾಗಿ ಸೋಲಬಹುದು ಎನ್ನುವ ವಾಡಿಕೆಯ ಮಾತಿಗೆ ಈ ಕಾದಂಬರಿ ಒಂದು ಸವಾಲಿನಂತಿದೆ. ಇದು 'ಪಾತಿವೃತ್ಯ' ಮತ್ತು 'ವ್ಯವಸ್ಥೆ'ಯನ್ನು ಸಂರಕ್ಷಿಸಲು ಬಯಸುವ ಕಾದಂಬರಿ. ಈ ಕಾದಂಬರಿಯ ಅಪ್ರಜ್ಞಾಪೂರ್ವಕ ಸಾಂಕೇತಿಕತೆಯು ಹಿಂದು ಸಮಾಜದ ನೈತಿಕ ಸೂತ್ರಗಳನ್ನು ಯಶಸ್ವಿಯಾಗಿ ಎತ್ತಿಹಿಡಿಯುತ್ತದೆ; ಮತ್ತು ಕಾದಂಬರಿಯ ಯಶಸ್ಸಿಗೂ ಅದೇ ಕಾರಣವಾಗಿದೆ. ವ್ಯವಸ್ಥೆ ಮತ್ತು ಪಾತಿವ್ರತ್ಯ ಆಶಯಗಳನ್ನು ಮಂಡಿಸಲು ಯತ್ನಿಸಿದ ಅನಂತರದ ಲೇಖಕರು ಕಲಾತ್ಮಕವಾಗಿ ಸೋತಿದ್ದಾರೆ. ತಮ್ಮ ಪರಂಪರೆ, ಸಂಸ್ಕೃತಿಯೊಂದಿಗಿನ ಅವರ ಅನಿಶ್ಚಿತ ಸಂಬಂಧವೇ ಅದಕ್ಕೆ ಕಾರಣವಾಗಿರಬಹುದು.

ಆದರೆ, ಪುಟ್ಟಣ್ಣನವರ ಸಾಂಪ್ರದಾಯಿಕತೆ ಎನ್ನುವುದು ರಾಮಾಯಣದ ಮತ್ತು ಜನಪದ ನೈತಿಕತೆಗಳಿಗಿಂತ ಭಿನ್ನವಾದುದು, ಅದು ೧೯-೨೦ನೆಯ ಶತಮಾನದ ವಿದ್ಯಾವಂತನದು ಎನ್ನುವುದನ್ನು ಈ ಹಿಂದೆ ನಾವು ಗಮನಿಸಿದ್ದೇವೆ. ತನ್ನ ಪ್ರಾಚೀನ ಜೀವನದ ಬಗೆಗಿನ ಗೌರವ, ಶ್ರದ್ಧೆ ಮತ್ತು ಪ್ರೀತಿ ಹಾಗೂ ಹಳೆಯ ಮೌಲ್ಯಗಳು ಹೊಸ ಪರಿವರ್ತನೆಗಳ ಕಾರಣದಿಂದ ನಾಶವಾಗುತ್ತಿವೆ ಎನ್ನುವ ತಿಳುವಳಿಕೆ ಈ ಸಾಂಪ್ರದಾಯಿಕತೆಯ ಲಕ್ಷಣ. ಇದನ್ನು ನಾವು ಮೂಲ ಜಿಜ್ಞಾಸು-ಸಾಂಪ್ರದಾಯಿಕತೆ (radical conservatism) ಎಂದು ಕರೆಯಬಹುದು.

ಆದುದರಿಂದಲೇ ಪುಟ್ಟಣ್ಣನವರ ಕಾದಂಬರಿಯಲ್ಲಿ ಬಳಕೆಯಾಗುವ ಸರಗತೆಗಳು ತಮ್ಮ ಕಲ್ಪಕತೆಯನ್ನು ಮತ್ತು ಜಾನಪದೀಯತೆಗಳನ್ನು ಕಳೆಕೊಂಡು ಹೊಸ ನೈತಿಕತೆ-ಪುಟ್ಟಣ್ಣನವರ ಸಾಂಪ್ರದಾಯಿಕ ನೈತಿಕತೆಯನ್ನು ಸಂವಹನಗೊಳಿಸುವ ಕತೆಗಳಾಗಿ ಪರಿವರ್ತನೆ ಹೊಂದುತ್ತವೆ. ಈ ಕತೆಗಳೆಲ್ಲವೂ ವ್ಯಕ್ತಿಯ ನೈತಿಕ ಪರಿಶುದ್ಧತೆಯನ್ನು ಮತ್ತು ಶ್ರದ್ಧೆಯನ್ನು ಬಿಂಬಿಸುವಂತೆ ಕಾದಂಬರಿಯಲ್ಲಿ ಪ್ರಕಟವಾಗುತ್ತವೆ.

ಮುಮ್ಮಡಿಯವರ ಔದಾರ್ಯವನ್ನು ಪ್ರಕಟಿಸುವ ಬ್ರೌನ್ ಸಾಬಿಯ ಪ್ರಸಂಗ (ಪುಟ: ೨೮-೩೦), ಪಾತಿವ್ರತ್ಯವನ್ನು ವೈಭವೀಕರಿಸುವ ಅರುಂಧಮ್ಮನ ವೃತ್ತಾಂತ (ಪುಟ:೧೧೪-೧೨೨) ಅಮಾಸೆಯ ಕತೆ (ಪುಟ:೧೭೬-೧೯೬), ಉಪಾದ್ರಿ ನಾರಪ್ಪಯ್ಯನ ಪ್ರಸಂಗ (ಪುಟ:೩೬-೫೨; ೬೨-೭೩) ಇವು ಉದಾತ್ತತೆ ಮತ್ತು ನಡೆ-ನುಡಿಗಳ ಶುದ್ಧತೆಯ ಅಗತ್ಯವನ್ನು ಬಿಂಬಿಸುತ್ತವೆ. "ಮಾಡಿದ್ದುಣ್ಣೋ ಮಹಾರಾಯ" ಎನ್ನುವ ಮಾತು ಈ ಕತೆಗಳಲ್ಲಿ ಪುನರಾವರ್ತನೆಗೊಳ್ಳುವ

ಆಶಯ. ಸದಾಶಯ ಮತ್ತು ದುರಾಗ್ರಹಗಳ ವೃತ್ತಾಂತಗಳನ್ನು ಮುಖಾಮುಖಿಗೊಳಿಸುತ್ತಾ ಅಥವಾ ಕಾದಂಬರಿಯ ಸೂತ್ರದಲ್ಲಿ ಪೋಣಿಸುತ್ತಾ ವ್ಯಕ್ತಿ ನೈತಿಕತೆಯ ಪರಿಶುದ್ಧಿಯ ಕಥನವನ್ನಾಗಿ ಮಾಡಿದ್ದುದನ್ನೋ ಮಹಾರಾಯವನ್ನು ಪುಟ್ಟಣ್ಣನವರು ರೂಪಿಸುತ್ತಾರೆ. ಇಂತಹದೇ ಯತ್ನವನ್ನು ಮಾಡುವ ಗುಲವಾಡಿಯವರ ಒಲವು ಆಧುನಿಕತೆಯ ಕಡೆಗಾದರೆ, ಪುಟ್ಟಣ್ಣನವರದು ಸಾಂಪ್ರದಾಯಿಕತೆಯ ಕಡೆಗೆ. ಆದುದರಿಂದ ಸಮಕಾಲೀನ ಪತನಮುಖೀ ಜೀವನ ಕ್ರಮದ ವಿಡಂಬನೆ ಗುಲ್ವಾಡಿಯವರ ಕಥಾ ಕೇಂದ್ರವಾಗುತ್ತದೆ. ತಮಗಿಂತ ಹಿಂದಿನ ಜೀವನ ಕ್ರಮ ಪುಟ್ಟಣ್ಣನವರ ಆಯ್ಕೆಯಾಗುತ್ತದೆ. ಮಹಾರಾಜರ ಔದಾರ್ಯವನ್ನು ಕುರಿತ ಉದಾತ್ತ ವಿವರಗಳು ಪುಟ್ಟಣ್ಣನವರು ನಂಬುವ ಮೌಲ್ಯ ಸರಣಿಗೆ ಸಂಬಂಧಪಟ್ಟವು."

ಆದರೆ ಪುಟ್ಟಣ್ಣನವರ ಕಾದಂಬರಿಯಲ್ಲಿ ವ್ಯಕ್ತವಾಗುವ ಸಂದರ್ಭ ಮತ್ತು ಅವರ ಕಾದಂಬರೀ ರಚನೆಯ ಸನ್ನಿವೇಶಗಳು ಪರಸ್ಪರ ಭಿನ್ನವಾದವುಗಳು. ಸಮಕಾಲೀನ ವಾಸ್ತವದ ವಿವರಗಳಿಂದ ಭಿನ್ನವಾದ ಆಯ್ಕೆಯನ್ನು ಮಾಡುವುದೇ ಪುಟ್ಟಣ್ಣನವರ ಕಾದಂಬರಿಯ ವಿಶೇಷತೆ. ಈ ಆಯ್ಕೆಯ ಮೂಲಕ ತಾನು ನಂಬಿರುವ ಸಮಾಜ ವ್ಯವಸ್ಥೆ ಮರೆಯಾಗುತ್ತಿರುವ ಸತ್ಯವನ್ನು ಪುಟ್ಟಣ್ಣನವರು ಮಂಡಿಸುತ್ತಾರೆ. ಸಮಕಾಲೀನ ಜೀವನವನ್ನು ಪುಟ್ಟಣ್ಣನವರು ಟೀಕಿಸುವ ರೀತಿಗೆ ಒಂದು ಉದಾಹರಣೆಯನ್ನು ಕೊಡಬಹುದು:

"ಈ ಸತ್ರ ದೇವಸ್ಥಾನಗಳ ಮತ್ತು ಅನೇಕ ಕಟ್ಟಡಗಳು ಇವುಗಳ ಕೆಲಸವನ್ನೆಲ್ಲಾ ಗುತ್ತಿಗೆಗೆ ಕೊಡುತ್ತಿರಲಿಲ್ಲ. ಗುತ್ತಿಗೆಗೆ ತೆಗೆದುಕೊಳ್ಳುವ ಮೇಸ್ತ್ರಿಗಳು ಆ ಕಾಲದಲ್ಲಿ ಯಾರೂ ಇರಲಿಲ್ಲ. ಎಂಥಾ ಭಾರಿ ಕಟ್ಟಡವನ್ನು ಕಟ್ಟಿದ್ದಾಗ್ಯೂ ಕಟ್ಟಿದ ಕೆಲವು ದಿವಸದಲ್ಲಿಯೇ ಬಿದ್ದು ಹೋಗುತ್ತಾ ಇರಲಿಲ್ಲ. ಬಿದ್ದು ಹೋದರೆ ಎರಡು ಎಸೆ ಸರಿಯಾಗಿ ಬರಲಿಲ್ಲ. ಬಿರುಕು ಬಿಟ್ಟು ಹೋಯಿತು. ಇಟ್ಟಿಗೆಯಲ್ಲಿ ಕಲ್ಲು ಇತ್ತು, ಅದು ಬೇಯಲಿಲ್ಲ. ಸುಣ್ಣದಲ್ಲಿ ಬೂದಿ ಇತ್ತು ಅದು ಅಂಟಲಿಲ್ಲ. ಮರದಲ್ಲಿ ಟೊಳ್ಳು ಇತ್ತು ಅದು ಗೋತ್ತಾಗಲಿಲ್ಲ. ಎಂದು ತಿಪ್ಪೇಸಾರಿಸಿ, ಭಾರೀ ಹಣಕ್ಕೆ ಪುನಃ ಅಂದಾಜುಗಳನ್ನು ಮಾಡಿ ಕಂಡ ಹಾಗೆಯೇ ಜಾಸ್ತಿ ದರಗಳನ್ನು ಹಾಕಿ ತಾವೂ ಕಂಟ್ರಾಕ್ಟರೂ ಸಹಾ ಚೆನ್ನಾಗಿ ಬದುಕುವ ಮಾರ್ಗವನ್ನು ಹುಡುಕುತ್ತಾ ಇದ್ದ ಶಿಲ್ಪಿ ಶ್ರೇಷ್ಠರು ಆಗ ತಯಾರಾಗಿರಲಿಲ್ಲ. ಆ ಕಾಲದಲ್ಲಿ ಮಾಡಿದ ಕೆಲಸವೆಲ್ಲಾ ಒಂದೇ ಸಾರಿ ಕಟ್ಟುವುದು, ಕಟ್ಟಿದ್ದೆಲ್ಲಾ ಭದ್ರವಾಗಿ ನಿಲ್ಲುವುದು, ಹಾಗೆ ಇತ್ತು.

ಆದರೆ ಇಂತಹ ಒಳ್ಳೆಯ ಸಂಸ್ಕೃತಿ ನಾಶವಾದುದು, ವಿದಳನಗೊಂಡುದುದು ಹೇಗೆ? ಈ ಪ್ರಶ್ನೆಯನ್ನು ಎದುರಿಸುವ ರೀತಿಯಲ್ಲಿ ಸೀತೆಯ ಕತೆ ಪ್ರಾಧಾನ್ಯವನ್ನು ಪಡೆಯುತ್ತದೆ. ಮಹಾರಾಜರ ಆಡಳಿತದ ಕಾಲದಲ್ಲಿಯೂ ನೈತಿಕವಾಗಿ ಅಪರಿಶುದ್ಧ ಜೀವನವನ್ನು ದೈನಿಕದಲ್ಲಿ ನಡೆಸುತ್ತಿದ್ದ ಜನರು ಮತ್ತು ಅಧಿಕಾರಿಗಳು ಇದ್ದರೂ, ಈ ನೈತಿಕ ಅಧಃಪತನವೇ ಸಂಸ್ಕೃತಿಯ ಅಧಃಪತನಕ್ಕೂ ಕಾರಣ ಎನ್ನುವುದು ಕಾದಂಬರಿಯ ತೀರ್ಮಾನ.

ಮಹಾರಾಜರ ಆಡಳಿತದ ಅವನತಿಯ ಅವಧಿಯನ್ನು ಈ ಕಾರಣದಿಂದ ಕಾದಂಬರಿಯ ಚಾರಿತ್ರಿಕ ಕಾಲವನ್ನಾಗಿ ಮಾಡಲಾಗಿದೆ. ಕಾದಂಬರಿಯ ಆರಂಭವೇ ಲಂಚಕೋರ ಅಮೀಲನ, ಬ್ರಾಹ್ಮಣ್ಯವಿಲ್ಲದ ಕಿಟ್ಟ ಜೋಯಿಸನ ಮತ್ತು ನೀತಿಯಿಲ್ಲದ ಜನರ ಸ್ವಾರ್ಥಪರತೆಯ ಚಿತ್ರಣದಿಂದ ಆಗುತ್ತದೆ. ಮಾರಮಣರಾಯನನ್ನು ಪುಟ್ಟಣ್ಣನವರು ಚಿತ್ರಿಸುವುದು ಹೀಗೆ:

"ದೊರೆ ಕರೆಯಿಸಿದಾಗಲಿಲ್ಲಾ ಒಂದೊಂದು ವೇಳೆ ರುಮಾಲನ್ನು ಹಿಂದು ಮುಂದಾಗಿ ಇಟ್ಟುಕೊಂಡು ಹೋಗುವುದು, ಅಂಗಿಯನ್ನು ತಳಮೇಲಾಗಿ ತೊಟ್ಟುಕೊಳ್ಳುವುದು. ಸೊಂಟಿವನ್ನು ಹರಹರಕಲಾಗಿ ಸುತ್ತಿಕೊಳ್ಳುವುದು, ಮುಖವನ್ನು ಏನೂ ಅರಿಯದವನ ಹಾಗೆ ಸೊಟ್ಟ ಸೊಟ್ಟನಾಗಿ ಮಾಡಿಕೊಳ್ಳುವುದು, ಅವಸರ ಅವಸರವಾಗಿ ನಡೆಯುವುದು, ಹೆಚ್ಚಿನ ಹೋಲಿಕೆಯನ್ನು ಅರಿಯದವನ ಹಾಗೆ ನಟಿಸುವುದು, ಅಪ್ಪಣೆಯಾದ ಕೂಡಲೇ ಬಹಳ ಅವಸರವಾಗಿ ಬಂದವನ ಹಾಗೆ ತೋರ್ಪಡಿಸಿ ದಾಸ ದಂಡವನ್ನು ಹಾಕುವುದು, ಯಾವ ಮಾತು ರಾಜರ ಮುಖದಿಂದ ಹೊರಟರೂ– ಮಹಾಸ್ವಾಮಿ, ಅಪ್ಪಣೆ ಆದಂತೆ ತಯಾರು ಮಾಡಿದ್ದೇನು, ಏನು ಇದ್ದರೂ ಒಂದು ನಿಮಿಷದಾಗ ಮಾಡಿಸಥೇನು, ಆಹಾ? ಆಕ್ಷೇಷಣೆ ಏನದೆ? ಆಹ ಆಗಬಹುದು, ಭಲೋ ಅಪ್ಪಣೆ ಎಂದು ಸಮಯ ಬಂದ ಹಾಗೆಲ್ಲಾ ಹೋಗಳುವುದು, ಈ ಪ್ರಕಾರ ನಟಿಸುತ್ತಾ ಇದ್ದ ಕಾರಣ, ಈ ರಮಣ್ಯೆಯ್ಯನು ಏನೂ ಅರಿತವನಲ್ಲ, ಒಳ್ಳೆಯವನು, ಸರ್ಕಾರದ ಕೆಲಸಗಳನ್ನು ಶ್ರದ್ಧೆಯಿಂದ ಬಹು ಚೆನ್ನಾಗಿ ಮಾಡತಕ್ಕವನು, ಎಂದು ದೊರೆಯು ಇವನಲ್ಲಿ ಬಹಳವಾಗಿ ಅಭಿಮಾನವನ್ನು ಇಟ್ಟುಕೊಂಡು, ಇವನನ್ನು ಬಹಳ ದಿವಸ ಆ ತಾಲೋಕಿನಲ್ಲಿಯೇ ಇರುವಂತೆ ಅಪ್ಪಣೆ ಮಾಡಿಸಿದ್ದರು.

ಮಹಾರಾಜರ ಆಡಳಿತ ಶೈಲಿಯ ನೇರವಾದ ಟೀಕೆ ಪುಟ್ಟಣ್ಣನವರ ಕಾದಂಬರಿಯಲ್ಲಿ ಇಲ್ಲ. ಆದರೆ ಮೇಲೆ ಉದ್ಧರಿಸಲಾದ ವಿವರಗಳು–ಸಮಾನ ವಿವರಗಳು–ಕಾದಂಬರಿಯಲ್ಲಿ ಮುಮ್ಮಡಿಯವರ ಆಡಳಿತದ ದುಃಸ್ಥಿತಿಯನ್ನು ಬಿಂಬಿಸುತ್ತವೆ. ಚಾಮರಾಜನಗರದ ದೊಂಬಿಯ ವಿಚಾರ (ಪುಟ:೩೨–೩೮) ಮಾರಮಣರಾಯನ ಲಂಚಗುಳಿತನ, ಸಂಜವಾಡಿಯ ಕಳ್ಳರ ಗುಂಪಿನ ವಿಚಾರ, ಅಪ್ಪಾಜಿ ಸೀತೆಯನ್ನು ಬಲಾತ್ಕರಿಸಲು ಪ್ರಯತ್ನಿಸುವುದು ಮೊದಲಾದುವು ಇದಕ್ಕೆ ಉದಾಹರಣೆ. ಮಗುವಿನಂತಹ ಮನಸ್ಸಿನ ಮಹಾರಾಜರ ಸಾಮ್ರಾಜ್ಯ ಉಳಿಯಲಿಲ್ಲ ಎನ್ನುವ ತೀರ್ಮಾನ ಕಾದಂಬರಿಯದು. ತನ್ನ ನಂಬಿಕೆಯ ಭವ್ಯ ಮೌಲ್ಯಗಳ ಅವನತಿಗೆ ಆ ಕಾಲದ ಅನೇಕ ವ್ಯಕ್ತಿಗಳ ನೈತಿಕ ಅಧಃಪತನ ಕಾರಣ ಎಂದು ಪುಟ್ಟಣ್ಣನವರು ನಂಬುತ್ತಾರೆ.

ಕಾದಂಬರಿಯ ಕೊನೆಯಲ್ಲಿ ಸಂಜವಾಡಿ ಬರಿದಾಗುವುದು, ಊರಿನ ಜನ ದಿಕ್ಕಾಪಾಲಾಗುವುದು, ಊರೆಲ್ಲಾ ನಾಶವಾಗುವುದು ಸಾಮಾಜಿಕ ಅವನತಿಯ ಸಂಕೇತವಾಗಿದೆ. ಸೀತಮ್ಮನ ಪ್ರಜ್ಞಾಶೂನ್ಯ ಅವಸ್ಥೆ ಇಡೀ ಸಂಸ್ಕೃತಿಯ ಸ್ಥಿತಿಯನ್ನು ಧ್ವನಿಸುವ ಶಕ್ತಿಯನ್ನು ಪಡೆದಿದೆ. ಅದುದರಿಂದ ಕಾದಂಬರಿಯ ವಿವರಗಳಲ್ಲಿ ವ್ಯಕ್ತಿಗಳು ತಮ್ಮ ಕರ್ಮಫಲವನ್ನುಣ್ಣುವ ಮೂಲಕ ಸಫಲವಾಗುವ ಮಾಡಿದ್ದುಣ್ಣೋ ಮಹಾರಾಯ ಎನ್ನುವ ಉಕ್ತಿ, ಸೀತೆಗೊದಗಿದ ಅವಸ್ಥೆ, ಆ ಕಂಟಕದಿಂದ ಆಕೆ ಪಾರಾದ ಸ್ಥಿತಿಗಳ ಮೂಲಕ ಸಾಮಾಜಿಕ ವ್ಯಾಖ್ಯಾನದ ಧ್ವನಿ ಶಕ್ತಿಯನ್ನು ಪಡೆಯುತ್ತದೆ. ಅಂದರೆ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ ಎರಡು ನೆಲೆಗಳಲ್ಲಿ ಮುಖ್ಯವಾಗಿದೆ. ಮೊದಲನೆಯದಾಗಿ ಅದು ಕಳೆದು ಹೋದ ಜೀವನಕ್ರಮವನ್ನು ಕುರಿತ ವಿಷಾದವನ್ನು ಪ್ರಕಟಿಸುತ್ತದೆ. ಎರಡನೆಯದಾಗಿ ಅದು ಈ ಪಲ್ಲಟದ ಎಳೆ ಎಳೆಯನ್ನೂ ಚಿತ್ರಿಸುತ್ತದೆ. ಸಾಂಪ್ರದಾಯಿಕತೆಯಲ್ಲಿ ನಂಬಿಕೆಯನ್ನು ಇರಿಸಿಕೊಂಡೇ ಅದನ್ನು ತನ್ನ ವಾಗರ್ಥಕ್ಕೆ

ತಂದುಕೊಳ್ಳುವೆ, ಹೀಗೆ ತಂದುಕೊಂಡುದನ್ನು ಪರಿವರ್ತನೆಗೊಂಡ ಬದುಕಿನ ಒಳಿತಿಗೆಂದು ಮಂಡಿಸುವ ಯತ್ನವನ್ನು ಪುಟ್ಟಣ್ಣನವರು ಮಾಡುತ್ತಾರೆ.

ಆದುದರಿಂದ ಈ ಕಾದಂಬರಿ ಕೇವಲ ಸೀತೆಯ ಪಾತಿವ್ರತ್ಯದ ಕಥೆಯಾಗಲೀ, ಸಂಪ್ರದಾಯಬದ್ಧ ಜೀವನಕ್ರಮದ ಅಥವಾ ಮುಮ್ಮಡಿಯವರ ಕಾಲದ ಬದುಕಿನ ಕೀರ್ತನೆಯಾಗಲೀ ಅಲ್ಲ. ಬದಲಾಗಿ ಜೀವನಕ್ರಮದ ಪಲ್ಲಟವನ್ನು ನಿರ್ವಹಿಸುವ ಕಥನ. ಜಾನಪದ ಪರಿಕರ, ರಾಮಾಯಣದ ಹಂದರಗಳನ್ನು ಹೊಂದಿಯೂ ಅದನ್ನು ಕಾದಂಬರಿಯನ್ನಾಗಿ ನಿರೂಪಿಸುವಲ್ಲಿ ಪುಟ್ಟಣ್ಣನವರು ಯಶಸ್ವಿಯಾಗಿದ್ದಾರೆ. ಈ ಅರ್ಥದಲ್ಲಿ ಮಾಡಿದ್ದುಣ್ಣೋ ಮಹಾರಾಯ ಮೊದಲ ಕನ್ನಡ ಕಾದಂಬರಿಗಳ ಪೈಕಿ ಮಹತ್ವದ ರಚನೆಯಾಗಿದೆ.

ಗುಲ್ವಾಡಿ ವೆಂಕಟರಾವ್- ಬೋಳಾರ ಬಾಬುರಾವ್ ಅವರ ಕಾದಂಬರಿಗಳಲ್ಲಿ ಸಾಕ್ಷಾತ್ಕಾರಗೊಳ್ಳುವ ಆದರ್ಶವನ್ನು, ಗಳಗನಾಥ-ಕೆರೂರ ವಾಸುದೇವಾಚಾರ್ಯರ ಕಾದಂಬರಿಗಳಲ್ಲಿ ಆದರ್ಶದ ವೈಭವೀಕರಣವನ್ನು ಕಾಣುತ್ತೇವಾದರೆ ಹಳೆ ಮೈಸೂರು ಪ್ರದೇಶದಿಂದ ಬಂದ ಎಂ.ಎಸ. ಪುಟ್ಟಣ್ಣನವರು ಈವೆರಡೂ ನೆಲೆಗಳಿಗೆ ವಿಭಿನ್ನವಾದ ಕಾದಂಬರಿಗಳನ್ನು ಬರೆದಿದ್ದಾರೆ. ಮೊದಲನೆಯದು ದೇಸೀಯ ಒಡಲೆನಲ್ಲಿದ್ದೇ ಅದನ್ನು ಟೀಕಿಸುವ ವಿಡಂಬಿಸುವ ಕ್ರಮ. ಎರಡನೆಯದು ದೇಸಿಯ ಆತ್ಮ ಸಮರ್ಥನೆಯ ಧಾಟಿ. ಪುಟ್ಟಣ್ಣನವರದು ದೇಸೀ ಜೀವನಕ್ರಮದಲ್ಲಿ ನಡೆಯುತ್ತಿರುವ ಪಲ್ಲಟವನ್ನು ಮತ್ತು ಅದರ ಅನಿವಾರ್ಯತೆಯನ್ನು ಅರಿವಿಗೆ ತಂದುಕೊಂಡು ಅತ್ಯಂತ ವಿಷಾದದಿಂದ ದಾಖಲಿಸುವ ರೀತಿ. ಪುಟ್ಟಣ್ಣನವರ ಆದರ್ಶವಿರುವುದು ಭಾರತದ ಸಾಂಪ್ರದಾಯಿಕ ಜೀವನ ಕ್ರಮದ ನೈತಿಕತೆಯಲ್ಲಿ. ಆದರೆ ತಾವು ನಂಬಿರುವ ಈ ಸಾಂಪ್ರದಾಯಿಕ ಜೀವನಕ್ರಮ ಉಳಿಯುವುದಿಲ್ಲ ಎನ್ನುವ ಖಚಿತ ಅರಿವುಅವರಿಗಿದೆ. ಒಂದು ಕಡೆ ತಮ್ಮ ನಂಬಿಕೆ ಮತ್ತು ಇನ್ನೊಂದೆಡೆ ಚಾರಿತ್ರಿಕ ಅನಿವಾರ್ಯತೆಯ ಅರಿವು- ಈ ಅರ್ಥದಲ್ಲಿ ಪುಟ್ಟಣ್ಣನವರ ಕಾದಂಬರಿ ಮಾರ್ಗವನ್ನು ನಾವು ಸಾಂಪ್ರದಾಯಿಕ ಕಾದಂಬರಿ ಮಾರ್ಗವೆಂದು ಕರೆಯಬಹುದು.

ಪುಟ್ಟಣ್ಣನವರು ತಮ್ಮ ಕಾದಂಬರಿಗಳಿಗೆ ಬಳಸುವ ಆಕರ ಸಾಮಗ್ರಿಯಲ್ಲಿಯೇ ಇದು ಎದ್ದು ಕಾಣುವ ಅಂಶವಾಗಿದೆ. ಅವರು ತಮ್ಮ ಕಥಾನಕಕ್ಕೆ ಬಳಸುವ ಸಾಮಗ್ರಿ ಮುಮ್ಮಡಿ ಕೃಷ್ಣರಾಜರ ಆಡಳಿತದ ಕಾಲಕ್ಕೆ ಸಂಬಂಧಿಸಿದ್ದು; ಆದರೆ ಪುಟ್ಟಣ್ಣನವರು ಬರೆಯುತ್ತಿರುವುದು ಸಮಾಜಿಕ ಕಾದಂಬರಿಗಳನ್ನು. ಮುಮ್ಮಡಿಯವರ ಔದಾರ್ಯ, ಅವರ ಆಸ್ಥಾನದ ವಿವರಗಳು, ಆಡಳಿತ ಯಂತ್ರ, ಜನಜೀವನದ ಸ್ಥಿತಿಗತಿಗಳನ್ನು ವಿವರಿಸುತ್ತಲೇ ಆ ಕಾಲದ ಮೈಸೂರಿನ ಸಾಮಾಜಿಕ ಅವಸ್ಥಾಂತರಗಳ ದಾಖಲೆಗಳಾಗಿ ಪುಟ್ಟಣ್ಣನವರ ಕಾದಂಬರಿಗಳು ಮೈದಾಳುತ್ತವೆ. ಇದನ್ನು ಡಾ.ಸುಜಾತಾ ಗುರುತಿಸಿದ್ದಾರೆ. ಐತಿಹಾಸಿಕವಾಗಲಿ, ಸಾಮಾಜಿಕವಾಗಲಿ ಕನ್ನಡ ಕಾದಂಬರಿಗಳಿಗೆ ವಸ್ತು ನಮ್ಮಲ್ಲೇ ವಿಪುಲವಾಗಿದೆ ಎಂಬುದನ್ನು ಕಂಡುಕೊಂಡ ಮೊದಲಿಗರಲ್ಲಿ ಪುಟ್ಟಣ್ಣನವರೂ ಒಬ್ಬರು ಎನ್ನುವ ಸುಜಾತಾ:

> "ಈ ಕಾದಂಬರಿಗಳಲ್ಲಿ ಪುಟ್ಟಣನವರು ಚಿತ್ರಿಸಿರುವುದು ಬ್ರಿಟಿಷ್ ಅಧಿಪತ್ಯದ ಆಶ್ರಿತ ಸಂಸ್ಥಾನವಾದ ಮೈಸೂರು. ಸುಮಾರು ನೂರು ವರುಷಗಳ ಹಿಂದಿನ

ಕನ್ನಡಿಗರ ಬಾಳು ಬದುಕು, ಅರಮನೆ ಗುರುಮನೆಗಳ ಪರಿಸರ, ಅವರ ಪೂರ್ವಾಚಾರ ಶ್ರದ್ಧೆ, ವಿದ್ಯಾಭ್ಯಾಸ, ಕುಟುಂಬ ಕಲಹಗಳು, ಜನರ ನೇರ ಕೊಂಕುಗಳು, ಇತ್ಯಾದಿ ವಿಷಯಗಳು ಇಲ್ಲಿ ಚಿತ್ರಿತವಾಗಿವೆ”[೨೯]ಎಂದು ಹೇಳುತ್ತಾರೆ.

ಅಂದರೆ, ಡಿ.ಎಲ್. ನರಸಿಂಹಾಚಾರ್ ಅವರು ಹೇಳುವಂತೆ’ಪುಟ್ಟಣ್ಣನವರ ಕೃತಿಗಳಲ್ಲಿ ಅವರು ಕಂಡು ಕೇಳಿದ ಅಥವ ಅವರ ಅನುಭವಕ್ಕೆ ಬಂದ ಪ್ರಪಂಚ ಪರಿಮಿತಿಯುಳ್ಳದಾದರೂ ರಮ್ಯವಾಗಿ ರೂಪುಗೊಂಡಿದೆ’[೩೦] ಅಥವಾ ಡಿ.ವಿ.ಜಿ.ಯವರು ಗುರುತಿಸಿರುವಂತೆ ಪುಟ್ಟಣ್ಣನವರ ಕಾದಂಬರಿಗಳು ‘ಇಂಗ್ಲಿಷ್ ನಾವೆಲ್‌ಗಳಂತೆ ಪ್ರತ್ಯಕ್ಷ ಜೀವನ ಚಿತ್ರಗಳು.’[೩೧]

ಮೇಲಿನ ಮಾತುಗಳು ಪುಟ್ಟಣ್ಣನವರ ಕಾದಂಬರಿಗಳಿಗೆ ಚೆನ್ನಾಗಿ ಅನ್ವಯಿಸುತ್ತವೆ. ಆದರೆ ಮೈಸೂರು ಪ್ರಾಂತದ ಜನಜೀವನವು ಪುಟ್ಟಣ್ಣನವರ ಕಾದಂಬರಿಗಳಲ್ಲಿ ಮಂಡನೆಯಾಗುವ ಕ್ರಮವನ್ನು, ವಾಸ್ತವಿಕತೆಯನ್ನು ಅವರು ಕಟ್ಟುವ ರೀತಿಯನ್ನು ಈ ಮಾತುಗಳು ವಿವರಿಸುವುದಿಲ್ಲ.

ಆದುದರಿಂದ ಪುಟ್ಟಣ್ಣನವರು ತಮ್ಮ ಸಮಕಾಲೀನ ಲೇಕಕರಿಗಿಂತ ಹೇಗೆ ವಿಶಿಷ್ಟ ಮತ್ತು ಈ ವಿಶಿಷ್ಟತೆಗೆ ಕಾರಣಗಳೇನು ಎನ್ನುವುದನ್ನು ನಾವು ಕಂಡುಕೊಳ್ಳಬೇಕು. ಅಂದರೆ, ಪುಟ್ಟಣ್ಣನವರ ವಿಚಾರಗಳು, ಅವರ ಕಾದಂಬರಿಗಳ ಸನ್ನಿವೇಶ ಮತ್ತು ಅವರ ಕಾದಂಬರಿಗಳ ‘ಆಕೃತಿ’ – ಇವುಗಳ ಪರಸ್ಪರ ಸಂಬಂಧವನ್ನು ವಿವರಿಸಿವುದು ಅಗತ್ಯ.

ಚಾರಿತ್ರಿಕವಾಗಿ ಬದುಕಿನಲ್ಲಿ ಬದಲಾವಣೆಯೊಂದು ಆರಂಭವಾಗಿದೆ. ಸಾಂಪ್ರದಾಯಿಕವಾದ ಜೀವನಕ್ರಮದಲ್ಲಿ ಪಲ್ಲಟವೊಂದು ತಲೆದೋರುತ್ತಿದೆ. ಹೊಸ ವಿದ್ಯಾವಂತ ವರ್ಗ ಹುಟ್ಟಿದೆ. ಒಂದೆಡೆ ಪಾಶ್ಚಿಮಾತ್ಯ ವೈಚಾರಿಕತೆಯನ್ನು ಮೈಗೂಡಿಸಿಕೊಂಡ ಹೊಸ ವಿದ್ಯಾವಂತ ವರ್ಗದಿಂದ ದೇಸೀ ಸಾಂಪ್ರದಾಯಿಕ ಆದರ್ಶವು ವಿಡಂಬನೆಗೆ, ಟೀಕೆಗೆ ಒಳಗಾಗುತ್ತಿದೆ. ಇನ್ನೊಂದೆಡೆ ಈ ಆದರ್ಶದ ವೈಭವೀಕರಣವೂ, ಪುರುತ್ಥಾನದ ಯತ್ನವೂ ನಡೆಯುತ್ತಿದೆ. ಆದರೆ ಸಾಂಪ್ರದಾಯಿಕ ಜೀವನಕ್ರಮ– ದೇಸೀ ಸಂಸ್ಕೃತಿ – ತನ್ನ ಒಳಗಿನಿಂದಲೇ ಒಂದು ಬಗೆಯ ಅಸಹಜವಾದ ಬದಲಾವಣೆಗೆ ಒಳಗಾಗಿದೆ. ಇದರ ಪರಿಣಾಮವಾಗಿ ಸಾಂಪ್ರದಾಯಿಕ ಮೌಲ್ಯಗಳು ವಿದಳನಗೊಳ್ಳುತ್ತಿವೆ. ವಿದ್ಯಾವಂತ ಮನಸ್ಸು ಈ ಬದಲಾವಣೆಗಳಿಗೆ ಪ್ರತಿಕ್ರಿಯಿಸಿದ ರರೀತಿಯಿಂದ ಪುಟ್ಟಣ್ಣನವರ ಕಾದಂಬರಿಗಳು ಮೈದಾಳಿವೆ.

ಹಳೆಯ ಬದುಕಿನ ಅನೇಕ ಉತ್ತಮ ಅಂಶಗಳು ಮರೆಯಾಗಿ ಹೋಗುತ್ತವೆ; ಅವುಗಳನ್ನು ಉಳಿಸುವುದು ಸಾಧ್ಯವಿಲ್ಲ ಎನ್ನುವ ವ್ಯಾಕುಲದ ತೀವ್ರತೆಯಲ್ಲಿ ಆ ಬದುಕನ್ನು ಎಳೆಎಳೆಯಾಗಿ ಪುಟ್ಟಣ್ಣನವರು ಚಿತ್ರಿಸುತ್ತಾರೆ. ಹೀಗಾಗಿ, ಜೀವನ ಕ್ರಮದಲ್ಲಿಯೇ ಆಗಿರುವ ಜೀವನಕ್ರಮದ ಪಲ್ಲಟದ ಅರಿವು ಮತ್ತು ಸಾಂಪ್ರದಾಯಿಕ ಮೌಲ್ಯಗಳು ವಿದಳನಗೊಳ್ಳುತ್ತಿರುವ ಮತ್ತು ಹೊಸ ಸಾಮಾಜಿಕ ಸಂಬಂಧಗಳು ರಊಪುಗೊಳ್ಳುತ್ತಿರುವ ಚಾರಿತ್ರಿಕ ಸತ್ಯ– ಇವೆರಡರ ಅಧಿಕೃತ ಚಿತ್ರವನ್ನು ಪುಟ್ಟಣ್ಣನವರ ಕಾದಂಬರಿಗಳಲ್ಲಿ ನಾವು ಕಾಣುತ್ತೇವೆ. ಆದುದರಿಂದ ‘ ಜೀವನಕ್ರಮದ ಪಲ್ಲಟ”[೩೨] ವನ್ನು ಪುಟ್ಟಣ್ಣನವರ ಕಾದಂಬರಿಗಳ ವಸ್ತುವೆನ್ನಬಹುದು.

ಈ ಬಗೆಯ ನಿಲುವಿಗೆ ಮತ್ತು ಪುಟ್ಟಣ್ಣನವರು ತಮಗಿಂತ ಸ್ವಲ್ಪ ಹಿಂದಿನ, ಕೃಷ್ಣರಾಜ ಭೂಪರನ್ನು ಕುರಿತ ಐತಿಹಾಸಿಕ ಸಾಮಗ್ರಿಯನ್ನು ಬಳಸಿಕೊಂಡಿರುವುದಕ್ಕೆ ಪರಸ್ಪರ ಸಂಬಂಧವಿದೆ.

ಮೊದಲೆಯದಾಗಿ, ಇತಿಹಾಸವನ್ನು ಆದಷ್ಟು ವಸ್ತುನಿಷ್ಠವಾಗಿ ಅರಿಯುವುದು, ಅದರಿಂದ ಪ್ರೇರಣೆಗಳನ್ನು ಪಡೆಯುವುದು, ಅದರ ಪುನರ್ ಸಂಘಟನೆಯಿಂದ ಪ್ರಜ್ಞಾಶೀಲತೆಯನ್ನು ಬೆಳೆಸಿಕೊಳ್ಳುವುದು ಮತ್ತು ಎರಡನೆಯದಾಗಿ, ತನ್ನ ಕಣ್ಣಮುಂದೆಯೇ ಬದುಕಿನಲ್ಲಿ ಆದ ಬದಲಾವಣೆಯನ್ನು ದಾಖಲಿಸುವುದು, ಅದರ ಕಾರಣಗಳನ್ನರಿಯಲು ಯತ್ನಿಸುವುದು ಈ ಆಯ್ಕೆಯ ಹಿಂದಿರುವ ತರ್ಕವಾಗಿದೆ. ಪುಟ್ಟಣ್ಣನವರ ಕಾದಂಬರಿಗಳ ಅಧ್ಯಯನದಿಂದ ಈ ಮಾತನ್ನು ಮನಗಾಣಬಹುದು.

ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹರಾಯ (೧೯೧೫) ಕಾದಂಬರಿಯ ಬಗ್ಗೆ ಕುರ್ತಕೋಟಿಯವರು ಹೀಗೆ ಹೇಳಿದ್ದಾರೆ.

"ಮುಖ್ಯ ಕಥಾನಕದಿಂದ ಸ್ವಲ್ಪ ಬೇರೆಯಾದ ಉಪಕತೆಗಳು ಬರುವದರಿಂದ ಬಂಧವೇನೋ ಸ್ವಲ್ಪ ಸಡಿಲಾಗಿರುವಂತೆ ಕಾಣಬಹುದು. ಇದರ ಅರಿವು ಲೇಖಕರಿಗೂ ಇದೆ. ಅತ್ತೆ ಸೊಸೆಯರ ಜಗಳ, ಸೀತಮ್ಮನ ಪಾತಿವ್ರತ್ಯ ಈಗ ಅತಿರಂಜಿತವಾಗಿ ತೋರಬಹುದು. ಕೊನೆಯಲ್ಲಿಯ ಮಂತ್ರವಾದಿಯ ಅದ್ಭುತ ಹಾಗೂ ಶಾಬರ ಪ್ರಯೋಗದ ಭಯಾನಕತೆಗಳು 'ದಶಕುಮಾರ ಚರಿತ್ರೆ'ಯನ್ನು ನೆನಪಿಗೆ ತಂದುಕೊಡಬಹುದು. ಮೈಸೂರೊಡೆಯರ ಔದಾರ್ಯದ ಕತೆಗಳು ಮೂಲಕತೆಗೆ ಸಹಜವಾಗಿಲ್ಲವೇನೋ ಎಂಬ ಸಂಶಯ ಬರಬಹುದು. ಇಷ್ಟಾದರೂ ಪುಟ್ಟಣ್ಣನವರ ಪ್ರಾಮಾಣಿಕವಾದ ಕಥನ ಶೈಲಿಯನ್ನು ಮರೆಯುವುದಾದರೂ ಹೇಗೆ?[೫೩]

ಈ ಮಾತನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಯಾಕೆಂದರೆ ಕಾದಂಬರಿಯ ವಿವರಗಳಿಗೆ ಮತ್ತು ಅದರ 'ಪ್ರಾಮಾಣಿಕವಾದ ಕಥನಶೈಲಿ'ಗೆ ವೈರುಧ್ಯದ ಸಂಬಂಧವಿರುವುದು ಸಾಧ್ಯವಿಲ್ಲ. ಬದಲಾಗಿ ಅತಿರಂಜಿತ ವಿವರಗಳು ಮತ್ತು ಸರಗತೆಗಳೇ ಪುಟ್ಟಣ್ಣನವರ ಕಾದಂಬರಿಗಳ ಮೂಲದ್ರವ್ಯ. ಪುಟ್ಟಣ್ಣನವರು ಇದನ್ನು ಸ್ಪಷ್ಟವಾಗಿ ಹೇಳಿಯೂ ಇದ್ದಾರೆ:

> "... ಶ್ರೀರಾಮ ಸೀತಾದೇವಿ, ಯುಧಿಷ್ಠಿರ ದ್ರೌಪದಿ, ಇವರುಗಳ ಗುಣಗಳಲ್ಲಿ ಕೆಲವು ಭಾಗವನ್ನು ಹೊಂದಿ, ಲೋಕದ ಲತಾಡಿಗೆ ಸಿಕ್ಕಿ ಕಷ್ಟಕ್ಕೆ ಗುರಿಯಾದರೂ, ತಮ್ಮ ಧೀರೋದತ್ತ ಗುಣಗಳನ್ನು ಬಿಡದೇ ಇರತಕ್ಕ ಪಾತ್ರಗಳನ್ನು ಮನುಷ್ಯ ಮಾತ್ರದವರಲ್ಲಿ ಆರಿಸಿಕೊಂಡೋ ಊಹಿಸಿಕೊಂಡೋ ವರ್ಣಿಸುವುದು ಮನಸ್ಸನ್ನು ಚೆನ್ನಗಿ ಆಕರ್ಷಣ ಮಾಡುವುದರಲ್ಲಿ ಸಂಶಯವಿಲ್ಲ. ಪುರಾಣ ಪ್ರಸಿದ್ಧರು ವ್ಯಾಕರಣದ ಸೂತ್ರಗಳಾಗಿದ್ದಾರೆ. ಮನುಷ್ಯ ಸಾಮಾನ್ಯರಲ್ಲಿ ಸಿಕ್ಕುವ ಧೀರರು ಉದಾಹರಣೆಗಳಾಗಿದ್ದಾರೆ.

ಈ ಭಾವವನ್ನು ಮನಸ್ಸಿನಲ್ಲಿಟ್ಟು ಈ ಗ್ರಂಥವನ್ನು ಬರೆದಿದ್ದೇನೆ. ಇದರಲ್ಲಿ ಬರುವ ಪಾತ್ರಗಳ ಗುಣದೋಷಗಳು ಮೊದಲು ಸ್ವಲ್ಪ ತಲೆದೋರಿ ಮುಂದಕ್ಕೆ ಸಂದರ್ಭಾನುಸಾರವಾಗಿ ವೃದ್ಧಿಯಾಗುವ ರೀತಿಯನ್ನು ತೋರಿಸಿದೆ. ಅಸಂಬದ್ಧವೆಂದು ತೋರುವ ಸಂದರ್ಭಗಳೆಲ್ಲಾ ಮುಖ್ಯವಾದ ಕಥೆಯ ಅಂಗಗಳಾಗಿವೆ.

ಪುಟ್ಟಣ್ಣನವರ ಕೊನೆಯ ಮಾತನ್ನು ಗಮನಿಸಿ. ಅವರ ಉಪಕಥೆ, ಸಂಗತಿಗಳೇ ಕಾದಂಬರೀ ರೂಪವನ್ನು ನಿರ್ಧರಿಸಿರುವ ಸಂಗತಿಗಳು ಮತ್ತು ಅವುಗಳನ್ನು ಕಥಾಸಂವಿಧಾನದ ಅಂಗವೆಂದೇ ನಾವು ಪರಿಭಾವಿಸಬೇಕು.

'ಪುಟ್ಟಣ್ಣನವರ ಕಾದಂಬರಿಗಳಿಗೆ ನಿಜವಾದ ಪರೋಕ್ಷ ನಾಯಕರೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು' ಎಂದು ತೀ ನಂ ಶ್ರೀ[೫೫] ಯವರು ಹೇಳಿದ್ದಾರೆ.

ಮಹಾರಾಜರ ಆಡಳಿತ, ಅದು ಪ್ರಕಟಿಸುವ ಮತ್ತು ಪ್ರತಿನಿಧಿಸುವ ಮೌಲ್ಯಗಳು ಪುಟ್ಟಣ್ಣನವರ ಕಾದಂಬರಿಗಳ ಆದರ್ಶ, ಕಾದಂಬರಿಯ ಸಾಮಗ್ರಿಯೂ ಇದೇ ಕಾಲದ್ದು. ಆದರೆ ವಾಸ್ತವದ ತರ್ಕ ಬೇರೆಯಾಗಿದೆ. ಮಹಾರಾಜರು ಪ್ರತಿನಿಧಿಸುವ ಆದರ್ಶ ಎಷ್ಟೇ ದೊಡ್ಡದಾದರೂ ಅದು ಉಳಿಯುವುದಿಲ್ಲ. ಕಾದಂಬರಿಯ ಬಂಧದುದ್ದಕ್ಕೂ ನಮಗೆ ಎದ್ದು ಕಾಣುವ ತರ್ಕ ಇದು. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ, (೧೯೧೫) ಮುಸುಗ ತೆಗೆಯೇ ಮಾಯಾಂಗನೆ (೧೯೨೯)[೫೬], ಅವರಿಲ್ಲದೋಟ (೧೯೫೯)೫೭ಕಾದಂಬರಿಗಳನ್ನು ಪರಿಶೀಲಿಸಿದಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ.

ಈ ಕಾದಂಬರಿಗಳಲ್ಲಿ ಚಿತ್ರಿತನಾದ ಕೃಷ್ಣರಾಜ ಪ್ರಭು ತಾನು ಸ್ವತ: ಮುಂದೆ ನಿಂತು ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಮಾಡಿಸುತ್ತಿದ್ದ ಧರ್ಮಪ್ರೇಮಿ. (ಮಾ.ಮ.೨೬–೨೮) ಸದ್ಗುಣಗಳನ್ನು ಸಾಮಾನ್ಯರಲ್ಲಿ ಕಂಡರೂ ಗುರುತಿಸಿ ಸನ್ಮಾನಿಸುತ್ತಿದ್ದ ಗುಣಾಗ್ರಣಿ (ಮಾ.ಮ.೨೯) ತನಗೆ ಇಷ್ಟರಾದ ಪ್ರಜೆಗಳ ಮನೆಗೂ ಬಿಜಯಂಗೈಯುತ್ತಿದ್ದ ಪ್ರಜಾವತ್ಸಲ, (ಮಾ.ಮ.೭೩–೭೭), ಸ್ನೇಹಪರ, ಉದಾರಿ (ಮು.ತೆ.ಮಾ.೩೯–೪೦), ಆದರೂ, ಬೆಳ್ಳಗಿರುವುದನ್ನೆಲ್ಲ ಹಾಲೆಂದು ನಂಬುತ್ತಿದ್ದ ಮುಗ್ಧ(ಮು.ತೆ.ಮಾ.೬೪–೬೫), ಅಷ್ಟೇ ನಿಷ್ಠುರ ನ್ಯಾಯವಾದಿಯೂ ಹೌದು (ಮು.ತೆ.ಮಾ.೭೭).

ಆದರೆ ಅವನ ಆಡಳಿತದ ಸ್ಥಿತಿ ಕೃಷ್ಣರಾಜ ಪ್ರಭುವಿನ ಈ ವ್ಯಕ್ತಿತ್ವಕ್ಕೆ ತದ್ವಿರುದ್ಧವಾಗಿತ್ತು. ಲಂಚಕೋರ ಅಧಿಕಾರಿಗಳು ಜನರನ್ನು ಸುಲಿಯುತ್ತಿದ್ದುದು (ಮಾ.ಮ.೧೬,೩೧–೩೨) ಸರ್ಕಾರೀ ಅಧಿಕಾರಿಗಳೇ ಕಳ್ಳಕಾಕರಿಗೆ ಒತ್ತಾಸೆಯಾಗಿರುವುದು (ಮಾ.ಮ.೧೮೩), ಅಧಿಕಾರಿಗಳು ಅತಿವಿನಯ ತೋರಿ ರಾಜನ ನಂಬಿಕೆಯ ಬಂಟರಾಗಿದ್ದುದು (ಮಾ.ಮ.೩೧) ಅವರ ಆರ್ಭಟ (ಮಾ.ಮ.೨೦), ಜಾತಿ ಕಲಹ ಮತ್ತು ಪೈಪೋಟಿ (ಮಾ.ಮ.೩೨–೮೮); ಮು.ತೆ.ಮಾ.೫೮–೬೯), ಪಾತಿವ್ರತ್ಯದ ಸೋಗು ಹಾಕಿರುವ ಸ್ತ್ರೀಯರು (ಅ.೧೧೨–೧೧೪), ಅರಸನ ಮೂಗಿನ ಕೆಳಗೇ ಮೈಸೂರಿನಲ್ಲಿಯೇ ನಡೆಯುತ್ತಿದ್ದ ವಂಚನೆ ಸುಲಿಗೆಗಳು ಮತ್ತು ಪಿತೂರಿ (ಮು.ತೆ.ಮಾ.೮೧–೧೧೬)ಗಳು ಸರ್ವೇಸಾಮಾನ್ಯವಾಗಿರುವ ಸ್ಥಿತಿಗಳನ್ನು ನಾವು ಈ ಕಾದಂಬರಿಗಳ ವಿವರಗಳಲ್ಲಿ ಗಮನಿಸುತ್ತೇವೆ.

ಒಂದು ಕಡೆ ಸದಾಶಿವ ದೀಕ್ಷಿತ, ಸೀತೆ, ಅಪ್ರಮೇಯ, ಕಿಸನ್ಬಾಲಾಜಿಯಂತಹ ಆದರ್ಶ ಪಾತ್ರಗಳು, ಇನ್ನೊಂದೆಡೆ ಅಪ್ಪಾಜಿ, ನಾಗರತ್ನಾಸಾನಿ, ಉಪಾಧ್ಯ, ನಾರಪ್ಪಯ್ಯ, ಹಯಾತ್‌ಸಾಬ್, ಬಸವೈಯ್ಯನಂತಹ ಪಾತ್ರಗಳು, ಇವುಗಳ ಪರಸ್ಪರ ಸಂಬಂಧದಿಂದ ಪುಟ್ಟಣ್ಣನವರ ಕೃತಿಗಳ 'ಆಕೃತಿ'ಯು ಪ್ರತೀತವಾಗುತ್ತದೆ. 'The defined heroes should be our rules of grammer and ordinary humand beings with an elevated conduct should be the

examples'.ಮಾಡಿದ್ದುಣ್ಣೋ ಮಹಾರಾಯದ ಪ್ರಸ್ತಾವನೆಯಲ್ಲಿ ಪುಟ್ಟಣ್ಣನವರೇ ಹೇಳುವ ಈ ಮಾತುಗಳು ಅವರ ಕಾದಂಬರಿಗಳಿಗೆ ಅಕ್ಷರಶ: ಅನ್ವಯಿಸುತ್ತವೆ.

ಪುಟ್ಟಣ್ಣನವರ ಕಾದಂಬರಿಗಳು ಆಧರಿಸುವ ಮುಮ್ಮಡಿಯವರ ಆಡಳಿತ ಕಾಲ ಮಹಾರಾಜರ ಆಡಳಿತದ ಉಜ್ವಲ ಅಧ್ಯಾಯವಲ್ಲ. 'ಕೃಷ್ಣರಾಜ ಭೂಪ ಮನೆಮನೆಗೆ ದೀಪ' ಎನ್ನುವುದು ಈಗ ಕೇವಲ ಗಾದೆಯ ಮಾತು. ಅಥವಾ ಅವರಿಲ್ಲದೂಟ ಕಾದಂಬರಿಯಲ್ಲಿ ಬರುವ ಉಲ್ಲೇಖದಂತೆ ಅದು 'ಸೂರ್ಯ ಅಸ್ತವಾದರೂ ಅವನ ಕಿರಣಗಳ ಪ್ರಭೆ ಇನ್ನೂ ಇರುತ್ತಾ ಸಂಧ್ಯಾಕಾಲವೆನಿಸಿಕೊಳ್ಳುವುದಿಲ್ಲವೇ ಹಾಗೆ'. ಪುಟ್ಟಣ್ಣನವರ ಕಾದಂಬರಿಗಳಲ್ಲಿ ಧ್ವನಿತವಾಗುವುದು ಇಂತಹ ಸ್ಥಿತಿಯೇ.

ಉದಾರಿಯೂ ಸದ್ಗುಣಿಯೂ ಆಗಿರುವ ಮುಮ್ಮಡಿ ಕೃಷ್ಣರಾಜನಿಗೆ ತನ್ನ ರಾಜ್ಯದಲ್ಲಿ ಸಜ್ಜನರು ಕಷ್ಟಕ್ಕೆ ಒಳಗಾಗುವುದನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಮಾಡಿದ್ದುಣ್ಣೋ ಮಹಾರಾಯದಲ್ಲಿ ಭಟಜಿ, ಕುಂಪಣೀ ಸರ್ಕಾರ; ಮುಸುಗು ತೆಗೆಯೇ ಮಾಯಾಂಗನೆಯಲ್ಲಿ ಅಪ್ರಮೇಯ; ಅವರಿಲ್ಲದೂಟದಲ್ಲಿ ಕಿಸನ್ ಬಾಲಾಜಿ– ನ್ಯಾಯವನ್ನು ರಕ್ಷಿಸುವ ಪಾತ್ರಗಳು. ಒಂದೆಡೆಯಲ್ಲಿ ಆದರ್ಶ–ಸಜ್ಜನ ಪಾತ್ರಗಳು, ಇನ್ನೊಂದೆಡೆ ಅವುಗಳಿಗೆ ಒದಗುವ ವಿವಂಚನೆಯ ಅತಂತ್ರಸ್ಥಿತಿ ಆದರೆ ಕೊನೆಯಲ್ಲೂ ಆದರ್ಶ ಪಾತ್ರಗಳು ಗೆಲುವನ್ನು ಪಡೆಯುವ ಮತ್ತು ಖಳ ಪಾತ್ರಗಳಿಗೆ ಶಿಕ್ಷೆಯಾಗುವ ಚಿತ್ರ– ಪುಟ್ಟಣ್ಣನವರ ಆಭಿವ್ಯಕ್ತಿಯ ವಿನ್ಯಾಸವಿದು. ಇಷ್ಟಾಗಿಯೂ ಇವು ಸಮಾಜ ಸುಧಾರಣಾವಾದಿ ಮತ್ತು ಪುರುತ್ಥಾನವಾದಿ ಕಾದಂಬರಿಗಳಿಗಿಂತ ಭಿನ್ನ. ದಟ್ಟ ವಿಷಾದ ಇವುಗಳ ಲಕ್ಷಣ.

ಈ ಅಭಿವ್ಯಕ್ತಿ ವಿನ್ಯಾಸದ ತರ್ಕವೇ ಪುಟ್ಟಣ್ಣನವರನ್ನು ಸಾಂಪ್ರದಾಯಿಕ ಕಾದಂಬರಿ ಮಾರ್ಗದ ಪ್ರವರ್ತಕರೆಂದು ಸೂಚಿಸುವಂತಹುದು. ಸಾಂಪ್ರದಾಯಿಕ ಸ್ಫಟಿಕ ಶುದ್ಧ ಮೌಲ್ಯಗಳೇ ಅವರ ಆದರ್ಶ. ಆದರೆ ಚಾರಿತ್ರಿಕ ಯುಗಪರಿವರ್ತನೆಯೊಂದು ನಡೆಯುತ್ತಿದೆ. ಪುಟ್ಟಣ್ಣನವರು ನಂಬಿದ ಆದರ್ಶ ಮರೆಯಾಗುತ್ತಿದೆ. ಈ ಚಾರಿತ್ರಿಕ ಅನಿವಾರ್ಯತೆಯು 'ನಿರೂಪಣಾ ಪ್ರಜ್ಞೆ' ಯಲ್ಲಿ ದಟ್ಟವಾಗಿ ಬೇರುಬಿಟ್ಟಿದೆ. ನಾಶವಾಗುತ್ತಿರುವ ಆದರ್ಶಕಲವನ್ನು ಅದರ ಎಲ್ಲ ಕೂಲಂಕುಷ ವಿವರಗಳೊಡನೆ ದಾಖಲಿಸುವ ಪರಿಕ್ರಮದಲ್ಲಿ ಪುಟ್ಟಣ್ಣನವರ ಕಾದಂಬರಿಯ ರೂಪವೆನ್ನುವುದು ಸಿದ್ಧವಾಗುತ್ತದೆ. ಸಾಂಪ್ರದಾಯಿಕ ಮೌಲ್ಯಗಳ ವಿದಳನವನ್ನು ಕುರಿತ ವಿಷಾದ ಈ ಕೃತಿಗಳ ಸ್ಥಾಯಿಯಾಗಿರುವುದು ಇದೇ ಕಾರಣದಿಂದ. ಆದುದರಿಂದ ಪುಟ್ಟಣ್ಣನವರ ಕಾದಂಬರಿಗಳು 'ನಾಶವಗುತ್ತಿರುವ ಆದರ್ಶವನ್ನು ಆಧರಿಸಿರುವ ಕಾದಂಬರಿಗಳು' ಎಂದು ಕರೆಯಬಹುದು.

ಉತ್ತರ ಕರ್ನಾಟಕದ ಭಾಗದಲ್ಲಿ ಕೆರೂರು ವಾಸುದೇವಾಚಾರ್ಯ ಮತ್ತು ಗಳಗನಾಥರು ಪ್ರಮುಖ ಕಾದಂಬರಿಕಾರರೆಂದು ಹೆಸರಾಗಿದ್ದು ಹೆಚ್ಚಾಗಿ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದರು. 'ಇಂದಿರಾ' ಕೆರೂರರ ಏಕೈಕ ಸಾಮಾಜಿಕ ಕಾದಂಬರಿ. ಅದನ್ನು ವಿಮರ್ಶಕರು ರಮ್ಯ ಪ್ರೇಮ ಕಥಾನಕವೆಂದು ಗುರುತಿಸುತ್ತಾರೆ. ಕೆರೂರರ ಈ ಪ್ರೇಮ ಕಥಾನಕ ತನ್ನ ಒಡಲಲ್ಲೇ ಪ್ರಧಾನ ಕತೆಗೆ ಪೂರಕವೆಂಬಂತೆ ಕೆಲವು ಸಂಗತಿಗಳನ್ನು ಚರ್ಚಿಸತೊಡಗುತ್ತದೆ. ಆ ಸಂಗತಿಗಳು ಕಾದಂಬರಿಯ ಹಿನ್ನೆಲೆಯಲ್ಲಿರುವ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳನ್ನು

ಹೇಳುತ್ತವೆ. "ಬದಲಾಗುತ್ತಿರುವ ಜೀವನ ಕ್ರಮವನ್ನು ಬಹಳ ಸಾರಿ ದಾಖಲಿಸುವವರು ಸಂಪ್ರದಾಯವಾದಿಗಳು"[೨] ಎನ್ನುವ ಡಿ.ಆರ್. ನಾಗರಾಜರ ಅಭಿಪ್ರಾಯ ಸರಿಯಾದ್ದೇ. ಕೆರೂರರು ತಮ್ಮನ್ನು ಆಧುನಿಕ ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ತೆರೆದುಕೊಂಡಿದ್ದರೂ, ತಮ್ಮ ಸಾಂಪ್ರದಾಯಿಕ ಆಲೋಚನೆಗಳಿಂದ ಮುಕ್ತವಾಗಿರಲಿಲ್ಲ. ಬದಲಾಗಿ ಹಿಂದೂ ಸಂಸ್ಕೃತಿಯನ್ನು ಪಾಶ್ಚಾತ್ಯ ಸಂಸ್ಕೃತಿಗೆ ಎದುರಾಗಿ ಪ್ರತಿರೋಧನ ಒಂದು ಅಸ್ತ್ರವನ್ನಾಗಿಸಿಕೊಂಡರು. ಹಿಂದೂ ಸಂಸ್ಕೃತಿಯ ವೈಭವೀಕರಣ ಮಾಡುತ್ತಾ 'ಉನ್ನತ ಸಂಸ್ಕೃತಿ'ಯನ್ನು (ಉನ್ನತ ಸಂಸ್ಕೃತಿ ಎಂದರೆ ವೈದಿಕ ಸಂಸ್ಕೃತಿಯೇ) ಪ್ರತಿಪಾದಿಸಿದರು. ಈ ಪ್ರಕ್ರಿಯೆ ಆ ಕಾಲಘಟ್ಟದ ಎಲ್ಲಾ ಕಾದಂಬರಿಗಳಲ್ಲೂ ಕಂಡುಬರುವ ದ್ವಂದ್ವವಾದರೂ, ಇಂದಿರಾ ಕಾದಂಬರಿಯಲ್ಲಿ ವಿಶೇಷವಾಗಿ ಪ್ರಜ್ಞೆಯ ನೆಲೆಯಲ್ಲಿ ಈ ಪ್ರಕ್ರಿಯೆ ನಡೆದಿರುವುದನ್ನು ಗಮನಿಸಬಹುದು.

ಕಾದಂಬರಿ ೧೯ನೆಯ ಶತಮಾನದಲ್ಲಿ ಸುಧಾರಣಾವಾದಿ ನೆಲೆಯಲ್ಲಿ ಬಹು ಚರ್ಚಿತಗೊಳ್ಳುತ್ತಿದ್ದ ಬಾಲ್ಯ ವಿವಾಹ, ವಿಧವಾ ವಿವಾಹ, ಸ್ತ್ರೀ ವಿದ್ಯಾಭ್ಯಾಸ ಮುಂತಾದ ಸಂಗತಿಗಳನ್ನೇ ಚರ್ಚೆಗೆ ಒಳಪಡಿಸುತ್ತದೆ. ಆರ್ಯ ಸಮಾಜವನ್ನು ಹೋಲುವ ಉಪಾಸನಾ ಸಮಾಜದಲ್ಲಿ ನಡೆಯುತ್ತಿದ್ದ ಆಚರಣೆಗಳನ್ನು ತೀವ್ರವಾಗಿ ಟೀಕಿಸುತ್ತದೆ. ಆದರ್ಶ ನಾಯಕ–ನಾಯಕಿ ಪಾತ್ರಗಳನ್ನು ಕಟ್ಟಿಕೊಡುವ ಕೆರೂರರು ತಮ್ಮ ಉಪ ಪಾತ್ರಗಳನ್ನು ಸೃಷ್ಟಿಸಿದ್ದು, ಮುಖ್ಯ ಪಾತ್ರಗಳ ಪೋಷಣೆಗಾಗಿ ಎಂಬಷ್ಟು ಅತಿಗೆ ಹೋಗುತ್ತಾರೆ. ಆಧುನಿಕತೆ ಮತ್ತು ಸಾಂಪ್ರದಾಯಿಕತೆ ಎರಡರ ಸಂಘರ್ಷವನ್ನು ತಮ್ಮ ಪಾತ್ರಗಳ ಮೂಲಕವೇ ನಿರ್ವಹಿಸುತ್ತಾರೆ. ರಾಧಾಬಾಯಿ, ಬಾಷ್ಕಳಪಂತ,ಮ ರಮಾಕಾಂತ, ಇಂದಿರೆ ಇವರುಗಳ ಸಂಭಾಷಣೆಯ ಮೂಲಕ ಕೆರೂರರು ಆಧುನಿಕತೆಯನ್ನು ಅಳವಡಿಸಿಕೊಂಡ ಸುಧಾರಣಾವಾದಿಗಳನ್ನು ತೀವ್ರವಾಗಿ ವಿಡಂಬಿಸುತ್ತಾ ಉನ್ನತ ಸಂಸ್ಕೃತಿಯ ವೈಭವೀಕರಣಕ್ಕೆ ತೊಡಗುತ್ತಾರೆ. ಕೆಳಗಿನ ಸಂಭಾಷಣೆಯ ಭಾಗವನ್ನು ವಿವರವಾಗಿ ಗಮನಿಸಬಹುದು.

"ರಮಾಕಾಂತರೇ ಪುನರ್ವಿವಾಹ, ಪ್ರಬುದ್ಧ ಕನ್ಯಾ–ವಿವಾಹ ಸ್ತ್ರೀ ಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನಿರುವುವು? ಸ್ತ್ರೀಯರ ಸ್ವಾತಂತ್ರ್ಯಕ್ಕೆ ನೀವು ಅನುಕೂಲರಿರುವಿರೇನು?" ಎಂದು ರಾಧಾಬಾಯಿಯು ಕೇಳಿದಳು.

"ಇವುಗಳ ಬಗ್ಗೆ ನಾನು ಓದಿರುವೆನು. ಆದರೆ ನನ್ನ ವ್ಮತವು ಈ ಕಾಲಕ್ಕೆ ಹೀಗೆ ಇರುವುದೆಂದು ಹೇಳಲಾರೆನು. ಸ್ತ್ರೀಯರು ಉಚ್ಚಪ್ರತಿಯ ಶಿಕ್ಷಣ ಹೊಂದುವುದು ಅವಶ್ಯ : ಅವರ ಸ್ವಾತಂತ್ರ್ಯಾತಿಶಯವು ಮಾತ್ರ ನನಗ ಸಹಿಸದು".

"ಸ್ತ್ರೀಯರಿಗೆ ಸ್ವಾತಂತ್ರ್ಯವಿರಬಾರದೆಂಬುದು ನಿಮ್ಮ ಮತವೋ? ಇಂಗ್ಲೀಷ್ ಸ್ತ್ರೀಯರನ್ನು ನೋಡಿರಿ ; ಎಷ್ಟು ಸ್ವತಂತ್ರರಾಗಿರುವರು ! ಅದಕ್ಕಾಗಿಯೇ ಇಂಗ್ಲೆಂಡು ಇಷ್ಟು ಘನತೆಗೇರುವದು".

ಇಷ್ಟರಲ್ಲಿ ನಮ್ಮ ಸುಶೀಲೆಯಾದ ಇಂದಿರೆಯು – "ನೀವು ಯಾತಕ್ಕೆ ಸ್ವಾತಂತ್ರ್ಯವೆನ್ನುತ್ತೀರೋ ನನಗೆ ತಿಳಿಯದು. ವಿವಾಹವಾದ ಕೂಡಲೇ ಬರಿಗೈಯಿಂದ ನಾವು ಅತ್ತೆ ಮನೆಗೆ ಹೋಗುವವರು. ಅಲ್ಲಿ ನಮ್ಮ ಅನ್ನ, ವಸ್ತ್ರ, ಆಭರಣ, ಅಧಿಕಾರಗಳನ್ನು ನಾವು ಪತಿರಾಜರ ಆಸ್ತಿಯ ಯೋಗ್ಯತೆಯ ಮೇರೆಗೆ ಅನುಭವಿಸುತ್ತೇವೆ. ಹೀಗಿದ್ದು ನಾವು ಯಾರಿಂದ ಸ್ವತಂತ್ರರಾಗಿರಬೇಕು? ತಮ್ಮ

ಪ್ರಾಣಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಸಂರಕ್ಷಿಸುವ ಪ್ರಾಣೇಶ್ವರರೂ ಕೂಡ ಹುರ್ರೆಂದು ಜಗಳವಾಡುವುದು ಸ್ವಾತಂತ್ರ್ಯವೇನು?" .... "ಹೆಂಗಸರಿಗೆ ಮನೆಬಿಟ್ಟು ಹೋಗಲಿಕ್ಕೆ ಪ್ರತಿಬಂಧವಿದೆಯೆಂದು ಹೇಳುವುದು ಅನ್ಯಥಾವಾದವು. ನಾವು ಹೂವೀಳ್ಯಕ್ಕೆ ಹೋಗುತ್ತೇವೆ. ವನ ಭೋಜನಕ್ಕೆ ಹೋಗುತ್ತೇವೆ, ಮಿತ್ರೆಯರ ಮನೆಗೆ ಹೋಗಿ ಚಾಟುಗೋಷ್ಟಿಯಾಡುತ್ತೇವೆ. ಇದಕ್ಕೆಲ್ಲಾ ಪ್ರತಿಬಂಧವೆನ್ನಬಹುದೆ" ಉತ್ ಶೃಂಖಲರಾಗಿ ತಿರುಗಾಡುವುದು ಪುರುಷರಲ್ಲಿ ಕೂಡ ನಿಂಧ್ಯವಿದ್ದ ಪಕ್ಷದಲ್ಲಿ ಅದು ಉತ್ತಮೆರಿಗುಚಿತವೆ? ಪತಿವ್ರತೆಯರೂ ಮಾನವಂತೆಯರೂ ಆದ ನಾರಿಯರ ವರ್ಚಸ್ವವು ಸಾರ್ವಭೌಮದ ಹೆಂಡತಿಗೆ ಬಾರದು. ಅಬಲೆಯರಾದ ನಾವು ಸಿಕ್ಕಸಿಕ್ಕಲ್ಲಿ ತಿರುಗಿದರೆ ನಮ್ಮ ಮಾನಕ್ಕೆ ಹಾನಿ ಬಾರದಿದ್ದೀತೆ! ಅಜ್ಞಾತ ಹೃದಯದವರಾದ ಪುರುಷರೂ ಕೂಡ ಮಾತಾಡಲಿಚ್ಛಿಸುವುದು ಪಾತಿವ್ರತ್ಯದ ಉನ್ನತವಾದ ಶಿಖರದಿಂದಿಳಿಯುವ ಸೋಪಾನವು ಈ ಪ್ರಕೃತಕ್ಕೆ ಇದೊಂದೆ ಸಾಮ್ಯ ಸಾಕು. ಮೂರನೇದು ನಾವು ಪತಿಸೇವೆ ಮಾಡಬಾರದೆಂಬುದು. ನಮ್ಮ ಪತಿಗಳು ಕಾಯಾ ವಾಚಾ ಸುಖೀಸಾಧನಗಳನ್ನು ದೊರಕಿಸುವುದು ನಮ್ಮ ಸಲುವಾಗಿಯೇ ಅಲ್ಲವೇ? ಸಾವಿರಾರು ರೂಪಾಯಿಗಳ ಆಭರಣಗಳು ನಮ್ಮ ಮೈಮೇಲಾದರೆ ಅವರ ಮೈಮೇಲೆ ಗುಂಜಿ ತೂಕವಾದರೂ ಬಂಗಾರವಿರುವುದಿಲ್ಲ. ನಮ್ಮನ್ನು ಪ್ರಾಣಪದಕವೆಂದು ತಿಳಿದು ಅತ್ಯಂತವಾಗಿ ಪ್ರೀತಿಸುವ ಪತಿರಾಜರ ಸೇವೆ ಮಾಡಿ ಯಾಕೆ ಅವರ ಮೇಲೆ ನಮ್ಮ ಜೀವಗಳನ್ನು ಕೂಡ ನಿವಾಳಿಸಿ ಚೆಲ್ಲಿದರೂ ಉಪಕಾರ ತೀರಬಹುದೇ? ನಾವಾದರೂ ಅವರ ಸೇವೆ ಮಾಡುವುದೇನು? ಅವರ ಧೋತ್ರಗಳಿಗೆ ನೀರು ಹಾಕಿಟ್ಟು ಭೋಜನವಾದ ಕೂಡಲೇ ತಾಂಬೂಲ ಸಿದ್ಧಮಾಡಿಟ್ಟರೆ ನಮ್ಮ ಸೇವೆ ತೀರಿತಲ್ಲವೇ?. ಸದ್ಗುಣೆಯೂ, ಸುಶೀಲಳೂ ಆದ ಹೆಂಡತಿಯನ್ನು ಅಂಗೈಯಲ್ಲಿಟ್ಟಾಡಿಸುವ ಪ್ರಾನವಲ್ಲಭನು ಅವಳನ್ನು ಬಡಿಯುತ್ತಾನೆಂಬ ಮಾತು ಎಷ್ಟರ ಮಟ್ಟಿಗೂ ವಿಶ್ವಾಸನೀಯವಾದದ್ದಲ್ಲ. ಚಂಡಿಯನ್ನು, ಗುಣಹೀನೆಯನ್ನು ಒಳಿತಾಗಿ ಥಳಿಸದೇ ಮತ್ತೇನು ಮಾಡಬೇಕು" (ಪುಟ ೭೫-೭೬) ಎಂಬ ಮಾತುಗಳು ಹಾಗೂ ರಮಾನಂದನು ಉಪಾಸನಾ ಪಂಥದ ಆಚರಣೆಗಳನ್ನು ಟೀಕಿಸಿ 'ಇದನ್ನು ಕಂಡು ಸನಾತನಧರ್ಮ ಪ್ರವರ್ತಕರ ಸಂತತಿಯ ಅವಸ್ಥೆ ಹೀಗಾಯಿತೇ ಎಂದು ನನಗತಿಶಯವಾದ ವಿಷಾದವಾಯಿತು' ಎನ್ನುತ್ತಾ ಮುಂದುವರೆದು, 'ಸುಧಾರಣೆಯೆಂದರೆ ಇದ್ದದ್ದನ್ನು ಸುಧಾರಿಸಿ ಚೆನ್ನಾಗಿ ಕಾಣುವಂತೆ ಮಾಡುವುದಲ್ಲವೆ" ಇದ್ದದ್ದು ನಿರ್ಮೂಲ ಮಾಡಿ ಅದರ ಸ್ಥಳದಲ್ಲಿ ವಿಜಾತಿಯದೊಂದು ತಂದಿಟ್ಟರೆ ಅದಕ್ಕೆ ಸುಧಾರಣೆಯೆನ್ನಕೂಡದು"[೩] (ಪುಟ ೭೦).

ಈ ಮೇಲಿನ ಮಾತುಗಳು ಕಾದಂಬರಿಕಾರರು ಕಟ್ಟಿಕೊಡುವ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಸಂಸ್ಕೃತಿಯೆಂಬುದೇ ಒಂದು ಕಟ್ಟೋಣವಾದ್ದರಿಂದ, ಅದು ಪ್ರತಿಪಾದಕ ನೆಲೆಯಿಂದಲೇ ರೂಪುಗಳ್ಳುತ್ತಿರುತ್ತದೆ. ಉನ್ನತ ಸಂಸ್ಕೃತಿಯೊಂದನ್ನು ಕಲ್ಪಿಸಿಕೊಡುವ ಕಾದಂಬರಿಕಾರರು ಮುಖ್ಯ ಪಾತ್ರಗಳಿಗೆ ಆದರ್ಶವನ್ನು ಆರೋಪಿಸುತ್ತಾ ಹೋಗುತ್ತಾರೆ. ಕಾದಂಬರಿಯ ನಾಯಕ ರಮಾಕಾಂತ ಇಂಜಿನಿಯರ್ ಆಗಿ. 'ಶಾಂತನು' ಸಿಗರೇಟನ್ನು ಸೇದಿ, 'ಬಂಧು', 'ಬಂಗಾಲೀ ಟೈಮ್ಸ್', 'ಇಂದುಪ್ರಕಾಶ', 'ಕೇಸರಿ' ಪತ್ರಿಕೆಗಳನ್ನು ಓದುತ್ತಿದ್ದ ಆಧುನಿಕ ಮನೋಭಾವದ ತರುಣನಂತೆ ಚಿತ್ರಿತನಾದರೂ ಆಂತರ್ಯದಲ್ಲಿ ಆತನು ಸಂಪ್ರದಾಯವಾದಿಯಾಗಿಯೇ, ಆತನು ಆದರ್ಶ

ವಿದ್ಯಾವಂತನಷ್ಟೇ, ಮೇಲ್ನೋಟಕ್ಕೆ ಕಾಣುವ ಸುಧಾರಣಾವಾದಿ ಚಿಂತನೆ ಬೌದ್ಧಿಕ ನೆಲೆಯದೇ ಹೊರತು ಬದುಕಿನ ಕ್ರಮವಾಗಿಯಲ್ಲ. ನಾಯಕಿ ಇಂದಿರೆ ಕೂಡ ಭಾರತೀಯ ಆದರ್ಶ ನಾರಿಯಾಗೇ ಚಿತ್ರಿತಗೊಂಡಿರುವುದು. ವಿದ್ಯಾವಂತ, ಬುದ್ಧಿವಂತ ಹುಡುಗಿಯಾದರೂ ಪತಿವ್ರತೆಯ ಎಲ್ಲಾ ಸಲಕ್ಷಣಗಳನ್ನು ಹೊಂದಿದವಳು ಆಗಿದ್ದಾಳೆ. ಕೆಳಗೆ ಉಲ್ಲೇಖಿತವಾಗಿರುವ ಸಂಭಾಷಣೆ ಈ ಮಾತುಗಳನ್ನು ಸ್ಪಷ್ಟೀಕರಿಸುತ್ತದೆ.

"ಆಧುನಿಕ ಶಿಕ್ಷಣದಿಂದ ಈಗಿನ ತರುಣರ ಮೇಲೆ ದುಷ್ಪರಿಣಾಮಗಳಾಗುತ್ತವೆಂದು ಕೆಲವು ಗುಣಾವಗುಣ ನಿರೀಕ್ಷಕರ ಮತವಿರುವದೆಂದು ಕೇಳುತ್ತೇನೆ. ಇಂಥ ಶಿಕ್ಷಣ ಹೊಂದಿದ ತರುಣ ತರುಣಿಯರಲ್ಲಿ ಆದ್ಯಕವಿಗಳು ವರ್ಣಿಸಿದಂತೆ ನಿರ್ಮಲಾಂತಃಕರಣದವರು ಸಿಕ್ಕವರೇನು? (ಇಂದಿರೆ).

ಅನೇಕರನ್ನು ಕಾಣಬಹುದು. ಶಿಕ್ಷಣ ಪಂಡಿತಳಾಗಿ ಪಂಪಾಜಲದಂತೆ ನಿರ್ಮಲ ಭಾವದವಳಾದ ಕುಲವಧುವೊಬ್ಬಳು ನನ್ನ ಹತ್ತಿರವೇ ಕುಳಿತಿರುವಳಲ್ಲ"[೪] (ರಮಾಕಾಂತ, ಪುಟ-೩೯).

ಮೇಲಿನ ಮಾತುಗಳು ಇಂದಿರೆಯನ್ನು ಆರ್ಯ ಕುಲಾಂಗನೆ, ಕುಲವಧುವಾಗಿ 'ಸ್ತ್ರೀತ್ವ'ದ ಮಾದರಿಯಾಗಿ ಚಿತ್ರಿಸಿರುವುದನ್ನು ಹೇಳುತ್ತವೆ. ದೇವಯಾನಿ ಕೂಡಾ ಇಂಥ ಆದರ್ಶದ ಭಾರ ಹೊತ್ತ ಪಾತ್ರವೇ! ಈ ಪಾತ್ರಗಳು ನಿಜದ ಬದುಕಿನಲ್ಲಿ ನಿರಾಳತೆಯನ್ನು ಹೊಂದಿಲ್ಲದ ಪಾತ್ರಗಳೇ ಆಗಿವೆ. ಇಂದಿರೆಯ ಪ್ರಕಾರ ಸ್ವಾತಂತ್ರ್ಯವೆಂದರೆ ಹೂವೀಳ್ಯಕ್ಕೆ, ವನಭೋಜನಕ್ಕೆ, ಮಿತ್ರೆಯರ ಮನೆಯಲ್ಲಿ ಚಾಟುಗೋಷ್ಠಿಯಾಡಲು ಹೋಗಲು ಇರುವ ಅವಕಾಶ ಮಾತ್ರವೇ.

ಇಂಥ ಆದರ್ಶ ಪಾತ್ರಗಳ ಎದುರಿನಲ್ಲಿ ಪಂಡಿತಾ ರಮಾಬಾಯಿ, ಕಮಲೆ, ನಟೇಶ್, ಭಾಷ್ಯಳಪಂತ, ಫಣೀಂದ್ರದಾಸಾಚಾರ್ಯರು ತೀರಾ ವಿಡಂಬನೆಯ ಮಾದರಿಗಳಾಗಿ ಚಿತ್ರಿತಗೊಂಡಿದ್ದಾರೆ. ಮುವರು ಪತಿಯರೊಂದಿಗಿದ್ದು ವಿಧವೆಯಾದವಳನ್ನು ಮದುವೆಯಾದ ಫಣೀಂದ್ರದಾಸಾಚಾರ್ಯರನ್ನು 'ಸರ್ವಾರಿಷ್ಟ ಕಳೆ ಸುರಿಯುತ್ತಿದ್ದ ಬ್ರಾಹ್ಮಣಧಮ' ಎಂದು ಚಿತ್ರಿಸಿದರೆ, ಮರ್ಯಾದೆಯನ್ನು ತಲೆಗೆ ಸುತ್ತಿ ಗಂಡಸರೆಂದರೇನೆಂದು ಧಿಕ್ಕರಿಸಿ ನಾಲ್ಕು ಜನ ನೆರೆದಲ್ಲಿ ಎದೆಯುಬ್ಬಿಸಿಕೊಂಡು ಕುಳಿತ ಗಂಡುರಾಮಿಯಾಗಿ ಕಮಲೆ ಚಿತ್ರಿತಗೊಂಡಿದ್ದಾಳೆ. ಪಂಡಿತ ರಾಧಾಬಾಯಿಯಂತೂ ಹಣಕ್ಕಾಗಿ ಏನನ್ನಾದರೂ ಮಾಡುವ ಹೆಂಗಸಾಗಿ ಚಿತ್ರಿತಗೊಂಡಿದ್ದಾರೆ. ನಟೇಶ್ ನಾಯಕ ರಮಾಕಾಂತನನ್ನು ನಿಷ್ಕಾರಣವಾಗಿ ದ್ವೇಷಿಸಿ ಸಾವನ್ನಪ್ಪಿದ ದುರಂತ ಪಾತ್ರವಾಗಿ, ಶ್ರೀಕಂಠ ಶ್ರೀಮಂತನಾದರೂ ಸಜ್ಜನಿಕೆಯಿಲ್ಲದ ಪಾತ್ರವಾಗಿದ್ದಾನೆ. ಜಯರಾಯ ಕುಟಿಲತನದಿಂದ ಕಮಲಾಕಾಂತ ದೇವಯಾನಿಯನ್ನು ಬೇರ್ಪಡಿಸಿದಂತೆ, ರಮಾಕಾಂತ-ಇಂದಿರೆಯನ್ನು ದೂರ ಮಾಡುವ ಗುಣಕ್ಕಿಂತ ಹಣಕ್ಕೆ ಮಹತ್ವ ಕೊಡುವ ವ್ಯಕ್ತಿಯಾಗಿ ಚಿತ್ರಿತಗೊಂಡಿದ್ದಾನೆ. ಇಂಥ ನೇತ್ಯಾತ್ಮಕ ಗುಣಗಳುಳ್ಳ ಪಾತ್ರಗಳ ಎದುರಿನಲ್ಲಿ ಕೊನೆಯವರೆಗೂ ದೇವಯಾನಿಯ ಪ್ರೀತಿಯನ್ನು ಮರೆಯಲಾಗದ ಕಮಲಾಕಾಂತ, ಕಮಲಾಕಾಂತನ ಹೊರತಾಗಿ ಬೇರೆಯವರನ್ನು ಮದುವೆಯಾಗಲೊಲ್ಲದ, ಅವನ ನೆಪದಲ್ಲೇ ಉಳಿದು, ಕಮಲಾಕಾಂತನ ಮಗ ರಮಾಕಾಂತ ಮತ್ತು ಜಯರಾಯನ ಮಗಳು ಇಂದಿರೆಯರ ವಿವಾಹಕ್ಕೆ ಒತ್ತಾಸೆಯಾಗಿ

ನಿಲ್ಲುವ ದೇವಯಾನಿ, ರಮಾಕಾಂತ ಇಂದಿರೆಯರು ಬಹಳ ಉಜ್ವಲವಾಗಿ ಮೂಡಿದ್ದಾರೆ. ಕಾದಂಬರಿಕಾರರ ಉದ್ದೇಶವೂ ಇಂಥ ಆದರ್ಶದ ವ್ಯಕ್ತಿಗಳನ್ನು ಚಿತ್ರಿಸುವುದೇ ಆಗಿದೆ. ಆ ಮೂಲಕ ಸುಧಾರಣೆಯ ಎರಡು ಮಾದರಿಗಳನ್ನು ಓದುಗರ ಮುಂದಿಡುತ್ತಾ ಪರ ಸಂಸ್ಕೃತಿಯ ವಿರುದ್ಧ ಸ್–ಸಂಸ್ಕೃತಿಯನ್ನು ವೈಭವೀಕರಿಸುತ್ತಾರೆ ಮತ್ತು ವೈದಿಕ ಧರ್ಮವನ್ನು ಎತ್ತಿ ಹಿಡಿಯುತ್ತಾರೆ.

ಕಾದಂಬರಿಕಾರರ ಈ ಸಾಂಪ್ರದಾಯಿಕ ಮನೋಭಾವ ೧೯ನೆಯ ಶತಮಾನದಲ್ಲಿದ್ದ ಅನೇಕ ಸುಧಾರಣವಾದಿಗಳ ದ್ವಂದ್ವವೂ ಆಗಿದೆ. ಈ ಕಾಲಘಟ್ಟದಲ್ಲಿ ಬಂದ ಹೆಚ್ಚಿನ ಕಾದಂಬರಿಗಳೆಲ್ಲಾ ಸ್ತ್ರೀ ಕೇಂದ್ರಿತವಾಗಿದ್ದು ಇವುಗಳ ಕೇಂದ್ರವೂ ಸ್ತ್ರೀಯ ಸಮಸ್ಯೆಗಳೇ ಆಗಿವೆ. ಕಾದಂಬರಿಗಳಲ್ಲಿ ಸ್ತ್ರೀಪರವೆಂದು ತೆಗೆದುಕೊಳ್ಳುವ ನಿರ್ಣಯಗಳೆಲ್ಲಾ ಪುರುಷಕೇಂದ್ರಿತ ನೆಲೆಯವಾಗಿರುವುದು ಕಂಡು ಬರುತ್ತದೆ. ಆ ನಿರ್ಣಯಗಳಿಂದ ಅವಳ ಬದುಕು ಬದಲಾದಂತೆ ಮೇಲ್ನೋಟಕ್ಕೆ ಕಂಡರೂ ವಾಸ್ತವದಲ್ಲಿ ಆ ನಿರ್ಣಯಗಳು ಸ್ತ್ರೀಯ ಬದುಕಿಗೆ ಬಿಡುಗಡೆಯ ಹಾದಿಗಳಾಗದೆ ಬಂಧನವೇ ಆಗಿರುವುದನ್ನು ಕಾಣಬಹುದು. ಇಂದಿರಾ ಕಾದಂಬರಿಯಲ್ಲಿಯೂ ನಾಯಕಿ ಇಂದಿರೆ ಮತ್ತು ದೇವಯಾನಿಯರು ಪ್ರೇಮದ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿದವರಂತೆ ಕಂಡರೂ ವಾಸ್ತವ ಹಾಗಿಲ್ಲ. ಪುನರ್ವಿವಾಹದ ಅವಕಾಶದಿಂದ ಕಮಲಕಾಂತನನ್ನು ದೇವಯಾನಿ ಪ್ರೀತಿಸಿದರೂ, ಸಂಶಯಕ್ಕೆ ಈಡಾಗಿ (ತನ್ನ ಸಂಶಯದಿಂದಲೇ ಆದರೂ) ಜನ್ಮವಿಡೀ ಬೇರೆಯವರ ಸಂತೋಷದಲ್ಲೇ ತನ್ನ ಬರಡು ಬದುಕನ್ನು ಕಳೆಯಬೇಕಾಗುತ್ತದೆ. ಇಂದಿರೆಯು ಬದುಕಿನಲ್ಲೂ ಕಾದಂಬರಿಕಾರರು ಪ್ರೇಮವನ್ನು ಪ್ರಗತಿಯ ಒಂದಂಶವೆಂಬಂತೆ ತರುತ್ತಾರೆ. ಆದರೆ ರಮಾಕಾಂತ–ಇಂದಿರೆ ಇಬ್ಬರೂ ಪ್ರೇಮದ ಆಯ್ಕೆಯನ್ನು ತಮ್ಮ ಬದುಕಿನ ಶಕ್ತ ಸಂಗತಿಯನ್ನಾಗಿ ರೂಪಿಸಿಕೊಳ್ಳುವಲ್ಲಿ ಸೋಲುತ್ತಾರೆ ಅಷ್ಟೇ. ಕೊನೆಗೂ ಕಾದಂಬರಿಯ ಕೊನೆಯ ಭಾಗದಲ್ಲಿ ಎಲ್ಲವೂ ಸುಖಾಂತವಾಗಿ ಮದುವೆಯಾದ ಸಂದರ್ಭದಲ್ಲಿನ ಮಾತುಗಳಿವು. "ಇಂದಿರೆಯು ರುಕ್ಮಿಣಿದೇವಿಯರ ಅನುಗ್ರಹದಿಂದ ಈ ಮೋಹನಾಂಗವನ್ನು ಸ್ಪರ್ಶಮಾಡುವ ಅಧಿಕಾರವು ನನಗೆ ಪ್ರಾಪ್ತವಾದರೆ ಸತ್ಯನಾರಾಯಣ ವ್ರತವನ್ನು ಮಾಡುವೆನೆಂದು ಬೇಡಿಕೊಂಡಿದ್ದೇನೆ" ಎಂದಾಗ ಅದಕ್ಕೆ ಉತ್ತರಿಸಿದ ರಮಾಕಾಂತ "ಆಗಲೀ ನಾಳೆಗೇ ಆ ವ್ರತವನ್ನು ಮುಗಿಸಿಬಿಡೋಣ, ಆ ಪ್ರಭುವಿನ ವ್ರತಾಚರಣೆಯಿಂದ ಮನುಷ್ಯ ಮಾತ್ರಕ್ಕೆ ನಿತ್ಯದಲ್ಲಿಯೂ ಶುಭಗಳಾಗುತ್ತವೆ"೫ (ಪುಟ, ೧೫೬). ಈ ಮಾತುಗಳು ಪ್ರೇಮವೆಂಬುದು ದೈವೀ ಕೃಪೆಯಿಂದ ಸಂಭವಿಸಿದ್ದೇ ಹೊರತು ವೈಯಕ್ತಿಕ ಜವಾಬ್ಧಾರಿಯ ಹೊಣೆಗಾರಿಕೆಯಿಂದಲ್ಲ ಎಂಬ ಅಂಶವನ್ನು ಹೇಳುತ್ತದೆ".

ಕಾದಂಬರಿಯಲ್ಲಿ ಸಂಭವಿಸುವ ಈ ವೈರುಧ್ಯವನ್ನು ಅಂದಿನ ಕಾಲದ ಸಾಂಸ್ಕೃತಿಕ, ಸಾಮಾಜಿಕ ಸಂದರ್ಭಗಳ ಹಿನ್ನೆಲೆಯಲ್ಲಿ ಗಮನಿಸಿದಾಗ, ೧೯ನೆಯ ಶತಮಾನದ ಪ್ರಾರಂಭ ಘಟ್ಟದಲ್ಲಿ ಬಂದ ಕಾದಂಬರಿಕಾರರು ತಮ್ಮ ಕಾದಂಬರಿಗಳ ಮೂಲಕ ಸ್ಪಂದಿಸಿದ, ಪ್ರತಿಕ್ರಿಯಿಸಿದ ಅನೇಕ ಬಗೆಗಳು ಅರಿವಾಗುತ್ತವೆ. ಕೆರೂರರ ಸಮಕಾಲೀನರಾದ ಗಳಗನಾಥರಲ್ಲಿ ಇಂಥದ್ದೇ ಆದರ್ಶೀಕರಣದ ಚಿತ್ರಣ ಕಂಡುಬಂದರೆ ಗುಲ್ವಾಡಿ ವೆಂಕಟರಾವ್, ಬೋಳಾರ ಬಾಬುರಾವ್,

ಎಂ.ಎಸ್. ಪುಟ್ಟಣ್ಣನವರು ಸಮಕಾಲೀನ ಸಮಾಜಿಕ ಸಮಸ್ಯೆಗಳನ್ನು ವಾಸ್ತವದ ನೆಲೆಕಟ್ಟಿನಲ್ಲಿ ಗ್ರಹಿಸಲು ಪ್ರಯತ್ನಿಸಿರುವುದನ್ನು ಗಮನಿಸಬಹುದು. ಕೆರೂರರು ವಾಸ್ತವತೆಗಿಂತ ಆದರ್ಶವನ್ನೇ ನೆಚ್ಚುವುದರಿಂದ ತಮ್ಮ ಸಮಕಾಲೀನರು ಕಟ್ಟಿಕೊಡುವ ಭಾಷೆ, ಶೈಲಿ, ವೈಚಾರಿಕತೆ, ಸಮಕಾಲೀನ ಸಂಗತಿಗಳ ಚಿತ್ರಣಗಳಿಗಿಂತ ಭಿನ್ನವಾಗಿ ತಮ್ಮ ಕಾದಂಬರಿ 'ಇಂದಿರಾ'ವನ್ನು ರಚಿಸಿದ್ದಾರೆ. ಅದೇ 'ಇಂದಿರಾ'ದ ವೈಚಾರಿಕ ಸಂದಿಗ್ಧತೆಗೆ ಕಾರಣವಾಗಿದೆ ಮತ್ತು 'ಒಂದು ನೂರು ವರ್ಷಗಳ ಕೆಳಗೆ ಇಂಗ್ಲೀಷ್ ವಿದ್ಯಾಭ್ಯಾಸ ಮತ್ತು ಅದರ ಪ್ರಭಾವದಿಂದ ಹಿಂದೂ ಧರ್ಮದ ಶ್ರೇಷ್ಠತೆಯ ಬಗ್ಗೆ ಇದ್ದ ಸಂದೇಹ, ವಿಶ್ವಾಸ ಇವುಗಳನ್ನು ಇಂದಿರಾ ಸಫಲವಾಗಿ ಪ್ರತಿಫಲಿಸುತ್ತದೆ"[೬] ಕಾದಂಬರಿಯ ಆಕೃತಿಯನ್ನು ವಿವರಿಸುವಾಗ ಕಾದಂಬರಿಯ ಬಂಧದಲ್ಲಿ ಆದರ್ಶ ಮತ್ತು ವಾಸ್ತವಗಳ ಸಂಬಂಧವು ನಿರ್ವಹಿಸಲ್ಪಡುವ ರೀತಿಯನ್ನು ಗಮನಿಸಬೇಕಾಗುತ್ತದೆ. ಯಾಕೆಂದರೆ ಕಾದಂಬರಿಯ ವಸ್ತು, ಅದರ ತತ್ವ ಮತ್ತು ಜೀವನದರ್ಶನ ಇವು ಮೂರನ್ನೂ ಆದರ್ಶ ಮತ್ತು ವಾಸ್ತವಗಳ ಸಂಘರ್ಷದ ರೀತಿಯಿಂದಲೇ ನಾವು ಗ್ರಹಿಸಬಹುದು.

ಕಾದಂಬರಿಯನ್ನು ರಚಿಸುವ 'ನಿರೂಪಣಾ ಪ್ರಜ್ಞೆ'ಗೆ ಆದರ್ಶದ ಅರಿವು ಇರುತ್ತದೆ. ಈ ಆದರ್ಶದ ಅರಿವಿನಿಂದಲೇ ಕಾದಂಬರಿಯಲ್ಲಿ ವಾಸ್ತವವನ್ನು ಕುರಿತ ಚಿಂತನೆಯು ಮಂಡಿತವಾಗುತ್ತದೆ. ಕಾದಂಬರಿಯ ಬಂಧದಲ್ಲಿ ಲೇಖಕರ ವೈಚಾರಿಕತೆಯು ನೇರವಾಗಿ ಮಂಡಿತವಾಗುವುದಿಲ್ಲ. ಬದಲಾಗಿ ಕಾದಂಬರಿಯ ವೈವಿಧ್ಯಮಯ ವಿವರಗಳನ್ನು ನಿರೂಪಿಸುವ ರೀತಿಯಲ್ಲಿಯೇ ಅದು ಓದುಗರ ಗಮನಕ್ಕೆ ಬರುವಂತೆ ಇರುತ್ತದೆ.

ಕಾದಂಬರಿಯಲ್ಲಿ ವಿವಿಧ ಪಾತ್ರಗಳ ತಾಕಲಾಟಗಳು, ಪರಿಸ್ಥಿತಿಯ ವಿರುದ್ಧ ಅವು ನಡೆಸುವ ಹೋರಾಟಗಳು ಕಂಡುಬರುತ್ತದೆ. ಕಾದಂಬರಿಯ ಕೊನೆ ತಲುಪುವ ಹೊತ್ತಿಗೆ ಈ ಪಾತ್ರಗಳು ಬೆಳವಣಿಗೆಯನ್ನು ಪಡೆದು ಪಾತ್ರ, ಘಟನೆ, ಕ್ರಿಯೆಗಳು ಒಂದು ನಿಲುಗಡೆಗೆ ತಲುಪುತ್ತವೆ. ಈ ಪ್ರಕ್ರಿಯೆಯಲ್ಲಿ ಕಾದಂಬರಿಯು ವಾಸ್ತವವನ್ನು ಕುರಿತ ತನ್ನ ಚಿಂತನೆಯನ್ನು ಮಂಡಿಸುತ್ತದೆ. ಈ ಮೂಲಕ ಒಂದು ಪ್ರಬುದ್ಧತೆಯ ಅರಿವನ್ನು ಮೂಡಿಸುತ್ತದೆ.

ಆದುದರಿಂದ 'ಆದರ್ಶ' ಮತ್ತು 'ವಾಸ್ತವ'ಗಳು ತಮ್ಮ ನಡುವಿನ ಘರ್ಷಣೆಯಿಂದ ಕಾದಂಬರಿಯ ಆಕಾರವನ್ನು ನಿರೂಪಿಸುತ್ತವೆ. ಆದರ್ಶದ ಅರಿವಿನಿಂದ, ವಾಸ್ತವಕ್ಕಿಂತ ಭಿನ್ನವಾದ ರಚನೆಯೊಂದರ ಮೂಲಕ ಕಾದಂಬರಿಕಾರ ವಾಸ್ತವವನ್ನು ಕುರಿತ ತನ್ನ ಚಿಂತನೆಯನ್ನು ಮಂಡಿಸುತ್ತಾನೆ. ವಾಸ್ತವದ ಅತಾರ್ಕಿತ ಅನುಭವಕ್ಕೆ ಒಂದು ರೂಪವು ಸಿದ್ದಿಸುವುದು ಹೀಗೆ. ಆದುದರಿಂದ ಕಾದಂಬರಿಯಲ್ಲಿ 'ಆದರ್ಶ'ವೆನ್ನುವುದು ಯಾವಾಗಲೂ ವಾಸ್ತವದ ಅನುಭವಗಳ ತರ್ಕದಿಂದಲೇ ಮೂಡಿಬರಬೇಕು. ಅಂದರೆ ಆದರ್ಶ ಮತ್ತು ವಾಸ್ತವಗಳ ತಾದಾತ್ಮ ಎನ್ನುವುದು ಕಾದಂಬರಿಯಲ್ಲಿ ಈ ಕಾರಣದಿಂದ ಕಂಡುಬರುವುದಿಲ್ಲ.

ಈ ರೀತಿಯ ಕಾದಂಬರಿಗಳು ಕನ್ನಡದಲ್ಲಿ ಕಾಣಿಸಿಕೊಂಡುದು ೧೯೩೦ರ ಅನಂತರದ ದಶಕಗಳಲ್ಲಿ. ಕಾರಂತ, ಪುಟ್ಟಣ್ಣ, ರಾವಬಹದ್ದೂರರ ಕೃತಿಗಳು ಇದಕ್ಕೆ ಉದಾಹರಣೆಗಳಾಗಿವೆ. ಆದರೆ ಮೊದಲ ಕಾದಂಬರಿಗಳು ಇದಕ್ಕಿಂತ ಭಿನ್ನವಾದುವು. ಆದರ್ಶವು ಸಾಕ್ಷಾತ್ಕಾರಗೊಳ್ಳುವ

ಕಾದಂಬರಿಯ ಬಂಧದಲ್ಲಿಯೇ ನಿಜವಾಗಿಬಿಡುವ, ವಾಸ್ತವವು ಸಂಪೂರ್ಣಬದಲಾಗುವ ಪರಿವರ್ತನೆ ಹೊಂದುವ ರೀತಿಯನ್ನು ಈ ಕಾದಂಬರಿಗಳಲ್ಲಿ ಕಾಣುತ್ತೇವೆ. ಮೊದಲ ಕಾದಂಬರಿಗಳನ್ನು ಕುರಿತ ತಮ್ಮ ಅಧ್ಯಯನದಲ್ಲಿ ಡಾ.ಡಿ. ಆರ್. ನಾಗರಾಜರು ಇದನ್ನು ಸಮರ್ಥವಾಗಿಯೇ ಗುರುತಿಸಿದ್ದಾರೆ.

> "ಇಂದಿರಾಬಾಯಿ ಕಾದಂಬರಿಯಲ್ಲಿ ಇರುವಂಥ ಆದರ್ಶ ಯಾವುದೆಂದರೆ ಕಾದಂಬರಿಯಲ್ಲಿಯೇ ನಿಜವಾಗಿಬಿಡುವ ಆದರ್ಶ ಅದು. ಈ ಕಾದಂಬರಿಯಲ್ಲಿ ವಾಸ್ತವ ಮತ್ತು ಆದರ್ಶಗಳೆರಡೂ ಬೆರೆತು ಹೋಗುತ್ತವೆ. ಇದು ನಿಂತಿರುವುದು ಕೃತಿಯಲ್ಲಿಯೇ ಸಾಕ್ಷಾತ್ಕಾರಗೊಳ್ಳುವ ಆದರ್ಶದ ಮೇಲೆ."

ಗುಲ್ವಾಡಿ ಮತ್ತು ಬೋಳಾರ ಬಾಬುರಾಯರ ಕಾದಂಬರಿಗಳಿಗೆ ಅನ್ವಯಿಸುವ ಮಾತು ಇದು. ಇಂದಿರಾಬಾಯಿ, (೧೮೯೯) ವಾಗ್ದೇವಿ (೧೯೦೫) ಕಾದಂಬರಿಗಳನ್ನು ಪ್ರಮುಖವಾಗಿ ಚರ್ಚಿಸಿ ಇದನ್ನು ಮನಗಾಣಬಹುದು.

ಇಂದಿರಾಬಾಯಿ ಮುಕ್ತಾಯವಾಗುವುದು ಮಂಗಳದ ಪ್ರಸ್ತಾವದಿಂದ. ಕಾದಂಬರಿಯ ಬಂಧದುದ್ದಕ್ಕೂ ಖಳನಾಯಕರಂತೆ ಚಿತ್ರಿತವಾದ ಪಾತ್ರಗಳು ಸಂಪೂರ್ಣವಾಗಿ ಸೋಲನ್ನು ಅನುಭವಿಸಿ, ಕಾದಂಬರಿಯಲ್ಲಿ ಆದರ್ಶವು ಸಾಕ್ಷಾತ್ಕಾರವಾಗುವುದು ಇದರ ಲಕ್ಷಣ.

ಇಂದಿರಾಬಾಯಿಯಲ್ಲಿ ಭೀಮರಾಯ ಅಂಬಾಬಾಯಿಯವರು ಸೋತು ಹೊಸ ಬದುಕನ್ನು ಅನಿವಾರ್ಯವಾಗಿ ಸ್ವೀಕರಿಸುತ್ತಾರೆ. ಭಾಸ್ಕರರಾಯ, ಅಮೃತರಾಯ, ಇಂದಿರಾಬಾಯಿಯವರು ಪ್ರತಿನಿಧಿಸುವ ವಿದ್ಯಾವಂತವರ್ಗದ ಸುಧಾರಣಾವಾದೀ ಮೌಲ್ಯಗಳನ್ನು ಇವರು ಸ್ವೀಕರಿಸುತ್ತಾರೆ. ಕಾದಂಬರಿಯ ಕೊನೆಯ ಭಾಗ ಇದನ್ನು ಸೂಚಿಸುತ್ತದೆ.

> ". . . . ಈ ವಿದ್ಯ ಮಾನವನ್ನು ಅಂಬಾಬಾಯಿಗೆ ತಿಳುಹಿಸಲು, ಆಕೆಯು ಒಂದೆರಡು ಗಳಿಗೆಯ ವರೆಗೆ ಆಲೋಚಿಸಿ" ನಮ್ಮ ದಶಾನಾಥನು ನಮ್ಮ ಕೈಯನ್ನು ಬಿಟ್ಟಿರುವುದಾಗಿ ನಾನು ನಂಬುತ್ತೇನೆ. ನಾವೆಷ್ಟು ಹಣ ವೆಚ್ಚ ಮಾಡಿದರೂ ಏನು ಮಾಡಿದರೂ ಇಡೀ ಊರೇ ಒಂದಾದ ಮೇಲೆ ಅವರೆಲ್ಲರೂ ಕೂಡಿ, ಶ್ರೀಗುರುಗಳಿಗೆ ಅನೇಕ ನ್ಯಾಯಗಳನ್ನು ಸೂಚಿಸಿ ಅವರ ಮನಸ್ಸನ್ನು ತಿರುಗಿಸುವುದು ಯಾ ವ ದೊಡ್ಡ ಮಾತು? ಇನ್ನು ನಾವು ಸಹಾ ಅವರ ಸಂಗಡ ಸೇರಿರುವುದೇ ಉತ್ತಮ. ನಮಗೀ ಧರ್ಮವಿಚಾರ ಸ್ಥಾನವೂ, ಯಾವನೊಬ್ಬನ ಹತ್ತಿರ ಜಗಳವೂ ಬೇಡ. ಇಷ್ಟು ದಿವಸ ಜಗಳವಾಡಿ ನಷ್ಟ ಭ್ರಷ್ಟ ಕಷ್ಟಗಳನ್ನನುಭವಿಸಿದ್ದೇ ಸಾಕು. ರನ್ನದಂತಿರುವ ಮಗಳನ್ನು ಸಹಾ ಕಳೆದುಕೊಂಡ ಹಾಗಾಯಿತು. ಈ ಹೊತ್ತೇ ತಮ್ಮ ಧರ್ಮ ವಿಚಾರಕ ಸ್ಥಾನಕ್ಕೆ ರಾಜೀನಾಮೆಯನ್ನು ಕಳುಹಿಸಬೇಕು. ನಾಳೆಯೇ ನಾವಿಬ್ಬರೂ ಹೋಗಿ, ಅಮೃತರಾಯ, ಜಲಜಾಕ್ಷಿ, ಸುಶೀಲೆ, ಭಾಸ್ಕರರಾಯ, ಇಂದಿರೆ, ಇವರ ಕ್ಷಮೆಯನ್ನು ಬೇಡಿ ಅವರೆಲ್ಲರನ್ನು ನಮ್ಮಲ್ಲಿಗೆ ಕರೆತಂದು ಯೋಗ್ಯವಾದ ರೀತಿಯಲ್ಲಿ ಊಟ ಉಪಚಾರಗಳನ್ನು ಮಾಡಿ ಮುಂದೆ ಸ್ನೇಹದಿಂದಲೂ ಪ್ರೀತಿಯಿಂದಲೂ ಇರೋಣ; ಇದೇ ನಮ್ಮ ಮುಂದಿನ ಪರಿಣಾಮ."[೧೩]

ಹೀಗೆ ಇಂದಿರಾಬಾಯಿ ಪ್ರತಿನಿಧಿಸುವ ಮೌಲ್ಯಗಳ ವಿಜಯ, ಅಂಬಾಬಾಯಿ ಭೀಮರಾಯರ ಪರಿವರ್ತನೆಗಳು ಕಾದಂಬರಿಯ ಆಕೃತಿಯಲ್ಲಿಯೇ ಸಾಧಿತವಾಗಿ 'ಸದ್ಧರ್ಮವಿಜಯ'ವೆನ್ನುವ ಕಾದಂಬರಿಯ ಇನ್ನೊಂದು ಹೆಸರು ಅನ್ವರ್ಥವಾಗುತ್ತದೆ.

ಬೋಳಾರ ಬಾಬುರಾಯರ ವಾಗ್ದೇವಿಯಲ್ಲಿ ಇಂದಿರಾಬಾಯಿ ಯಂತೆ ಸಜ್ಜನ ಪಾತ್ರಗಳಾಗಲೀ, ಹೊಸ ಮೌಲ್ಯಗಳ ವಾರಸುದಾರರಾಗಲೀ ಕಾಣಿಸುವುದಿಲ್ಲ. ಆದರೆ ಖಳಪಾತ್ರಗಳಾದ ಚಂಚಲನೇತ್ರ, ವಾಗ್ದೇವಿಯವರು ಕಾದಂಬರಿಯ ಆರಂಭದಿಂದಲೂ ಮೆರೆದಾಡಿ ಕೊನೆಯಲ್ಲಿ ತಮ್ಮ ಪಾಪದ ಭಾರಕ್ಕೆ ತಾವೇ ಕುಸಿದು ಹೋಗುತ್ತಾರೆ. ವಾಗ್ದೇವಿಯ ಜೀವಿತ ಸರ್ವಸ್ವದ ಆಸೆಯೆಂದರೆ ಚಂಚಲನೇತ್ರರಿಂದ ಆಕೆಯು ಪಡೆದ ಪುತ್ರ ಸೂರ್ಯನಾರಾಯಣನಿಗೆ ಮಠದ ಪಟ್ಟವು ಸಿಗಬೇಕೆಂಬುದು. ಚಂಚಲನೇತ್ರರಿಂದ ಸಿಕ್ಕ ಈ ಪೀಠಾಧಿಪತ್ಯ ನ್ಯಾಯಾಲಯದ ತೀರ್ಪಿನಿಂದ ಚ್ಯುತಗೊಳ್ಳುತ್ತದೆ.

> " ಈ ತೀರ್ಪು ಆಗುವ ಮೊದಲೇ ಸೂರ್ಯನಾರಾಯಣನ ದಿಗ್ವಿಜಯವು ಮುಗಿದಿತ್ತು. ಇನ್ನು ಮಠದಲ್ಲಿ ಉಳುಕೊಳ್ಳುವುದು ಸರಿಯಲ್ಲವೆಂದು ವಾಗ್ದೇವಿಯೂ ಶೃಂಗಾರಿಯೂ ಸೂರ್ಯನಾರಾಯಣನನ್ನು ಕರಕೊಂಡು ತಿಪ್ಪಾಶಾಸ್ತ್ರಿಯ ಯಜಮಾನಿಕೆಯಲ್ಲಿ ಕಳ್ಳರಂತೆ ಮಠದಲ್ಲಿದ್ದ ಒಡವೆಗಳನ್ನೆಲ್ಲಾ ಬಾಚಿಕೊಂಡು ಪಲಾಯನ ಮಾಡಿದರು"[೧೪].

ಕಾದಂಬರಿಯ ಮೊದಲ ಭಾಗದಲ್ಲಿ ವಿಡಂಬನೆಗೊಳಗಾದ ಚಂಚಲನೇತ್ರರ ಸ್ತ್ರೀ ವ್ಯಾಮೋಹ, ವಾಗ್ದೇವಿಯ ಅಟ್ಟಹಾಸದ ಜೀವನ, ಹೆಣ್ಣು ಮತ್ತು ಹಣದ ವಿಚಾರದಲ್ಲಿ ಸಂಪೂರ್ಣ ಭ್ರಷ್ಟಗೊಂಡಿರುವ ಪಟ್ಟಣದ ಆಡಳಿತ-ರಾಜಕೀಯ ಯಂತ್ರ, ವೈಯಕ್ತಿಕತೆಯಲ್ಲಿ ಮುಳುಗಿ ಹೋದ ಪೀಠಾಧಿಪತಿಗಳ ಜಂಜಾಟಗಳು ಹೀಗೆ ಸೋಲನ್ನು ಅನುಭವಿಸುತ್ತವೆ. ವಿಚಕ್ಷಣನಾದ ನ್ಯಾಯಾಧಿಪತಿ ಮತ್ತು ಅನ್ಯಾಯ ಪ್ರವರ್ತನೆಯಲ್ಲಿ ಸೇರದ ಉದ್ಯೋಗಸ್ಥರಿಂದಾಗಿ ಕುಮುದಪುರದ ಜನರು ನಿಶ್ಚಿಂತ, ಮರ್ಯಾದೆವಂತೆ ಬಾಳುವೆ ನಡೆಸುವಂತಾಗುತ್ತದೆ.

ವಾಗ್ದೇವಿ ಕಾದಂಬರಿಯುದ್ದಕ್ಕೂ ಖಳಳಂತೆ ಚಿತ್ರಿತಳಾದವಳು-ಬೀದಿಪಾಲಾಗಿ ಪಡಬಾರದ ಕಷ್ಟಗಳನ್ನು ಅನುಭವಿಸಿ ಕೊನೆಯಲ್ಲಿ ಆತ್ಮಹತ್ಯೆಗೆ ಯತ್ನಿಸುವ ಹೊತ್ತಿನಲ್ಲಿ ಮಗನಿಂದ ರಕ್ಷಿಸಲ್ಪಡುತ್ತಾಳೆ. ಆದರೆ ಮಗನಿಗಾಗಿ ಕುಮುದಪುರವನ್ನು ಅನೇಕ ಕಷ್ಟಗಳಲ್ಲಿ ತೊಡಗಿಸಿದ ಆಕೆ ಪುತ್ರವಿಯೋಗವನ್ನು ಅನುಭವಿಸಬೇಕಾಗುತ್ತದೆ. ಆಕೆಯ ಮಗ ಸೂರ್ಯನಾರಾಯಣ ಹೆಣ್ಣೊಂದನ್ನು ಕಟ್ಟಿಕೊಂಡು ಓಡಿಹೋಗುತ್ತಾನೆ. ತನ್ನ ಪಾಪದ ಭಾರಕ್ಕೆ ತಾನೇ ಕುಸಿದು ಹೋಗುವ ಚಿತ್ರವಿದು.

ಹೀಗೆ ಇಂದಿರಾಬಾಯಿ ಸದ್ಧರ್ಮ ವಿಜಯದ ಚರಿತ್ರೆಯಾದರೆ ವಾಗ್ದೇವಿ ಧರ್ಮ ಚ್ಯುತರಾದವರು ತಮ್ಮ ಕರ್ಮಫಲವನ್ನುಣ್ಣುವ ಕಥನ.

ಅಂದರೆ ಕಾದಂಬರಿಯಲ್ಲಿಯೇ ಸಾಕ್ಷಾತ್ಕಾರಗೊಳ್ಳುವ ಆದರ್ಶವು ಈ ಕಾದಂಬರಿಗಳ ತರ್ಕವನ್ನು ಕಟ್ಟಿದೆ. ಆದರ್ಶ ಮತ್ತು ವಾಸ್ತವಗಳ ಮುಖಾಮುಖಿ ನಡೆಯದೆಯೇ ಕಾದಂಬರಿಯ

ಆಶ್ರಯವು ಪೂರ್ಣಗೊಳ್ಳುವುದು ಈ ಕಾದಂಬರಿಗಳ ವೈಶಿಷ್ಟ್ಯ. ಉದಾಹರಣೆಗೆ ಇಂದಿರಾಬಾಯಿ ಕಾದಂಬರಿಯಲ್ಲಿ ಕಂಡುಬರುವ ಎರಡು ಲೋಕಗಳು. ಅಂಬಾಬಾಯಿ ಭೀಮಾರಾಯರು ಪ್ರತಿನಿಧಿಸುವ ಮತ್ತು ಇಂದಿರಾಬಾಯಿ, ಅಮೃತರಾಯ, ಭಾಸ್ಕರರಾಯ ವ್ಯವಹರಿಸುವ ಲೋಕಗಳು ಎಲ್ಲಿಯೂ ಒಂದು ಅರ್ಥಪೂರ್ಣವಾಗಿರುವ ಮುಖಾಮುಖಿಯನ್ನು ಮಾಡುವುದಿಲ್ಲ. ಕಾದಂಬರಿಯ ವಾಸ್ತವದ ಅನುಭವದಲ್ಲಿ ಆದರ್ಶ ಮತ್ತು ವಾಸ್ತವಗಳ ಸಂಘರ್ಷದ ಫಲವಾಗಿ ಈ ವಿಜಯವು ಸಾಧಿತವಾಗುವುದಿಲ್ಲ. ಬದಲಾಗಿ 'ಸದ್ಧರ್ಮ ವಿಜಯ ಅನಿವಾರ್ಯ' ಎನ್ನುವ ದನಿಯನ್ನು ಇಂದಿರಾಬಾಯಿ ಹೊಂದಿದೆ.

ಕಾದಂಬರಿಯ ಕೇಂದ್ರ ಪಾತ್ರವಾದ ಇಂದಿರಾಬಾಯಿಯನ್ನು ಪರಿಶೀಲಿಸಿದರೂ ನಮಗಿದು ಸ್ಪಷ್ಟವಾಗುತ್ತದೆ. ಅಂಬಾಬಾಯಿ, ಭೀಮರಾಯರ ಅನಾಚಾರದ ಮತ್ತು ಡಾಂಭಿಕತೆಯ ವಿವರಗಳನ್ನು ಕಾದಂಬರಿ ಅರ್ಧದ ಅನಂತರ ಪ್ರವೇಶಿಸುವ ಮತ್ತು ತೀರಾ ಜಡವಾಗಿರುವ ಪಾತ್ರ. ಆಕೆ ಮನೆಬಿಟ್ಟು ಅನಿವಾರ್ಯವಾಗಿ ಓಡಿಹೋಗುವ ಒಂದು ಪ್ರಸಂಗ ಬಿಟ್ಟರೆ ಇನ್ನುಳಿದಂತೆ ಇಂದಿರಾಬಾಯಿಯನ್ನು ಕುರಿತ ವಿವರಗಳು ಕಚಿತ್ತಾಗಿವೆ. ಅಂಬಾಬಾಯಿ, ಭೀಮರಾಯರ ಕ್ರಿಯಾಶೀಲತೆ, ಕುಟಿಲತೆಗಳಿಗೆ ಹೋಲಿಸಿದರೆ ಅಮೃತರಾಯ, ಜಲಜಾಕ್ಷಿ, ಭಾಸ್ಕರರಾಯರ ಪಾತ್ರಗಳೂ ಆಯಾಮಗಳೇ ಇಲ್ಲದ ಪಾತ್ರಗಳಾಗಿ ಕಂಡುಬರುತ್ತದೆ. ಕಾದಂಬರಿಯ ಖಳ ಪಾತ್ರಗಳು ನಿಜವಾದ ಘರ್ಷಣೆಯನ್ನು ಎದುರಿಸದೆಯೂ ಪರಿವರ್ತನೆ ಹೊಂದಿದ ಒಂದು ಸ್ಥಿತಿ, ನಿಜವಾಗಿ ಪರಸ್ಪರ ತಾತ್ವಿಕವಾಗಿ ಮುಖಾಮುಖಿಯಾಗಬೇಕಾದ ಸಂಗತಿಗಳು ಎದುರಾಗದಿರುವುದು ಇಲ್ಲಿ ಎದ್ದು ಕಾಣುತ್ತದೆ.

ವಾಗ್ದೇವಿಯಲ್ಲಿ ಈ ವ್ಯತ್ಯಾಸ ಇನ್ನಷ್ಟು ಸ್ಪಷ್ಟವಾಗಿದೆ. ಇಂದಿರಾಬಾಯಿಯಲ್ಲಿ ಬರುವ ಸುಧಾರಣಾವಾದಿ, ಸಜ್ಜನ ಪಾತ್ರಗಳೂ ಇಲ್ಲಿ ಗೈರುಹಾಜರಾಗಿವೆ. ಆದುದರಿಂದ ಇಲ್ಲಿ ಯಾವುದಾದರೊಂದು ಪಾತ್ರ ಪ್ರತಿನಿಧಿಸುವ ಮೌಲ್ಯಗಳ ವಿಜಯ ಮತ್ತು ಖಳಪಾತ್ರಗಳ ಪರಿವರ್ತನೆ ಎನ್ನುವುದು ಇಲ್ಲ. ಕಾದಂಬರಿಯ ಉದ್ದಕ್ಕೂ ಮೆರೆದಾಡುವ ಚಂಚಲನೇತ್ರ ವಾಗ್ದೇವಿಯವರು ತಮ್ಮ ಪಾಪದ ಕೆಸರಿನಲ್ಲಿ ತಾವೇ ಹೂತು ಹೋಗುವ ಸನ್ನಿವೇಶ ವಾಗ್ದೇವಿಯದು. ಚಂಚಲ ನೇತ್ರರನ್ನು ಎದುರಿಸುವ ವೇದವ್ಯಾಸ ಉಪಾಧ್ಯ, ಅಪರಾಜಿತ ಸೆಟ್ಟಿ, ಭೀಮಾಚಾರ್ಯ. ಮೊದಲಾದವು ತೀರಾ ದುರ್ಬಲ ಪಾತ್ರಗಳು. ಅವುಗಳಿಗೆ ವಾಗ್ದೇವಿ, ಚಂಚಲನೇತ್ರರ ಶಕ್ತಿಯೂ ಇಲ್ಲ. ಆದುದರಿಂದ ಇವುಗಳನ್ನೂ ಸೇರಿಸಿದಂತೆ ಕುಮುದಪುರದ ಮಠ, ಅದರ ಢಾಂಭಿಕತೆ, ಅದು ಪ್ರತಿಪಾದಿಸುವ ಮೌಲ್ಯಗಳ ಪತನ ಅನಿವಾರ್ಯ ಎನ್ನುವುದು ವಾಗ್ದೇವಿಯ ಮೂಲದ್ರವ್ಯ.

ಇಂದಿರಾಬಾಯಿಯಲ್ಲಿ ಹೃದಯ ಪರಿವರ್ತನೆ ಮತ್ತು ಸುಧಾರಣೆ ಮುಖ್ಯವಾಗಿದ್ದು ಆದರ್ಶವು ಕಾದಂಬರಿಯ ವಿವರಗಳಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿಗುತ್ತದೆ. ಹಳೆಯ ಕಟ್ಟಡವೊಂದು ತನ್ನ ಆಂತರಿಕ ಛಿದ್ರತೆಯ ಕಾರಣದಿಂದ ಕುಸಿಯಲೇ ಬೇಕು ಎನ್ನುವುದು ವಾಗ್ದೇವಿಯ ತರ್ಕ.

ಮೂಲತಃ ಇವೆರಡೂ ಕೃತಿಗಳೂ ಒಂದೇ ಮನೋಧರ್ಮದಿಂದ ಹುಟ್ಟಿಬಂದಿವೆ. ಸಾಂಪ್ರದಾಯಿಕ ಮೌಲ್ಯಗಳನ್ನು ಕುರಿತ ತೀವ್ರ ಟೀಕೆ ಮತ್ತು ವಿಡಂಬನೆ ಇವುಗಳಲ್ಲಿ ಸಮಾನವಾಗಿದೆ.

'ಈ ಕಾದಂಬರಿಯ ನಿಜವಾದ ಪ್ರೇರಣೆ ವಿಡಂಬನೆ' ಎಂದು ಆಮೂರರು ಇಂದಿರಾಬಾಯಿಯನ್ನು ಕುರಿತು ಹೇಳಿದುದನ್ನು[೧೫] ವಾಗ್ದೇವಿಗೂ ಅನ್ವಯಿಸಬಹುದು.

ಈ ಎರಡೂ ಕೃತಿಗಳಲ್ಲಿ ವಿಡಂಬನೆಗೆ ಗುರಿಯಾಗಿರುವುದು ಸಂಪ್ರದಾಯ ಶರಣತೆ, ಸಾಂಪ್ರದಾಯಿಕ ಧಾರ್ಮಿಕತೆ. ಆದರೆ ಧಾರ್ಮಿಕತೆಯ ಚೌಕಟ್ಟನ್ನು ಅದರ ಮೌಲ್ಯಗಳನ್ನು ಈ ಕೃತಿಗಳು ಪ್ರಶ್ನಿಸುವುದಿಲ್ಲ. ಅಪ್ಪಟ ದೇಶೀಯ ಮೌಲ್ಯಗಳು ಅವನತಿ ಹೊಂದಿರುವುದರಿಂದ ಸಂಪ್ರದಾಯಶರಣತೆ ಉಳಿಯುವುದು ಸಾಧ್ಯವಿಲ್ಲ ಎನ್ನುವುದು ಇವುಗಳ ತರ್ಕ. ಅಂದರೆ ಈ ಕಾದಂಬರಿಕಾರರಿಗೆ ಧರ್ಮವು ಒಂದು ನೈತಿಕ ನಿಲುವು. ಈ ನೈತಿಕ–ಧಾರ್ಮಿಕತೆಯು ಪ್ರಸ್ತುತ ಸಮಾಜದಲ್ಲಿ ಅವನತಿಗೊಂಡಿದೆ, ಭ್ರಷ್ಟವಾಗಿದೆ ಎನ್ನುವುದರಿಂದ ಕೆಟ್ಟ ಧರ್ಮ ಅಳಿದು ಹೊಸ ನೈತಿಕ ಧರ್ಮದ ಪ್ರತಿಷ್ಠಾಪನೆಯಾಗುತ್ತಿದೆ. ಎನ್ನುವುದು ಕಾದಂಬರಿಗಳ ಆದರ್ಶ. ಜಿ.ಎಚ್.ನಾಯಕರು ಹೇಳುವಂತೆ:

> "ಗುಲವಾಡಿಯವರು ಇವುಗಳಲ್ಲಿ ರಾಜಾರಾಮ ಮೋಹನರಾಯರ ಸುಧಾರಣಾ ಪಂಥದ ವಿಚಾರ ಸರಣಿಗೆ ಒಲಿದಿರುವಂತೆ ಕಾಣುತ್ತದೆ. ಅವರಿಗೆ ರಾಮಕೃಷ್ಣ, ವಿವೇಕಾನಂದರ ಆಧ್ಯಾತ್ಮಿಕ ಆಂದೋಲನದ ಬಗ್ಗೆ ಮನಸ್ಸಿನ ಎಳಿತವಿದ್ದಂತಿಲ್ಲ. ಹಾಗೆಂದು ಭಾರತದ ಪ್ರಾಚೀನ ಹಿರಿಮೆ ವಿವೇಕಗಳ ಬಗ್ಗೆ ಭಾವುಕ ಆಕರ್ಷಣೆ ಇಲ್ಲದಿದ್ದರೂ ಕಾರಣವಾದೀ ವಿಶ್ಲೇಷಣೆಯ ಕುತೂಹಲ ಇಲ್ಲವೆಂಬಂತಿಲ್ಲ. ಆದರೂ ಒಟ್ಟಿನಲ್ಲಿ ಮಧ್ಯಮ ಮಾರ್ಗೀಯ (moderate) ಎನ್ನಬಹುದಾದಂಥ ಒಂದು ದೃಷ್ಟಿಕೋನದಿಂದ ಕಾಲ ಪರಿಸ್ಥಿತಿಗೆ ಹೊಂದುವಂಥ ವ್ಯವಹಾರ ವಿವೇಕದಿಂದ ಕೂಡಿದ 'ಬದುಕುವ ದಾರಿ'ಯನ್ನು 'ಇಂದಿರಾಬಾಯಿ'ಯಲ್ಲಿ ಕಾಣಿಸಲು ಅವರು ಪ್ರಯತ್ನಿಸಿದಂತಿದೆ."[೧೬]

ಇದು ೧೯ನೆಯ ಶತಮಾನದ ವಿದ್ಯಾವಂತವರ್ಗದ ಮಧ್ಯಮ ಮಾರ್ಗೀಯರ ವಿಶಿಷ್ಟ ದೃಷ್ಟಿಕೋನ; ಪಾಶ್ಚಾತ್ಯ ವೈಚಾರಿಕತೆಯನ್ನು ಆಧರಿಸಿ ವ್ಯಕ್ತಿವಾದೀ ತಾತ್ವಿಕತೆಯ ನೆಲೆಯಲ್ಲಿ ಧರ್ಮವನ್ನು ಇವರು ವ್ಯಾಖ್ಯಾನಿಸುತ್ತಾರೆ. ಆದರೆ ತಮ್ಮ ಸಾಮಾಜಿಕ ಆಸ್ಮಿತೆಯ ಬೇರುಗಳನ್ನು ಭಾರತದಲ್ಲಿಯೇ ಇವರು ಕಂಡುಕೊಳ್ಳಬೇಕಾಗಿರುವುದರಿಂದ ಸುಧಾರಣಾವಾದ ಸಹಜವಾಗಿಯೇ ಇವರ ನೈತಿಕ ಮತ್ತು ಸೈದ್ಧಾಂತಿಕ ಕ್ರಿಯೆಯಾಗುತ್ತದೆ.

ಸಮಾಜವು ಅವನತಮುಖಿ ಏಕಾಗಿದೆಯೆಂದರೆ ಅದರ ಸದಸ್ಯರಾದ ವ್ಯಕ್ತಿಗಳ ನೈತಿಕ ಅಧಃಪತನದ ಕಾರಣಕ್ಕೆ ಎನ್ನುವುದು ಈ ಕೃತಿಗಳ ನಂಬಿಕೆ. ವ್ಯಕ್ತಿಯ ಮುಂದೆ ಶುದ್ಧಾಂಗವಾದ ಜೀವನಧರ್ಮದ ಆದರ್ಶವನ್ನು ಇರಿಸುವುದು ಈ ಕಾದಂಬರಿಗಳ ಉದ್ದೇಶ. ಗುಲ್ವಾಡಿ ವೆಂಕಟರಾಯರು ಅದನ್ನು ತಮ್ಮ ಪೀಠಿಕೆಯಲ್ಲಿ ಹೇಳಿದ್ದಾರೆ:

> "ಹಾಗಾದರೆ, ಈ ಪುಸ್ತಕದ ಉದ್ದೇಶವೇನೆಂದು ಓದುವವರು ಕೇಳಬಹುದು. ಅದೇನೆಂದರೆ – ಸತ್ಯತೆ, ಹೃದಯ ನಿರ್ಮಲತೆ ಇವೆರಡು ಸಾಧನಗಳೇ ನಮಗೆ

ಇಹಪರದಲ್ಲಿಯೂ ಸಾರ್ಥಕಗಳಾಗಿವೆ. ಇವುಗಳನ್ನು ಬಿಟ್ಟು ಸರ್ವಪ್ರಯತ್ನಗಳೂ ನಿರರ್ಥಕವೇ. ಇದನ್ನು ಸಾದೃಶ್ಯಗೊಳಿಸುವುದೇ ಈ ಪುಸ್ತಕದ ಉದ್ದೇಶವು"[೧೭]

ಪ್ರಾಚೀನ ಗ್ರಂಥಕರ್ತರು ಯಾವ ಉದ್ದೇಶದಿಂದ ತಮ್ಮ ಕೃತಿಗಳನ್ನು ರಚಿಸಿದರೋ ಅಂತಹುದೇ ಉದ್ದೇಶಕ್ಕಾಗಿ (ಅಂದರೆ ಬೋಧಕ ಉದ್ದೇಶಕ್ಕಾಗಿ) ಲಘು ಗ್ರಂಥ ರಚನೆಯನ್ನು ತಾನು ಕೈಗೊಂಡಿರುವುದಾಗಿ ಬೋಳಾರ ಬಾಬುರಾಯರು ತಮ್ಮ ಕೃತಿಯ ಪೀಠಿಕೆಯಲ್ಲಿ ಸೂಚ್ಯವಾಗಿ ಹೇಳಿದ್ದಾರೆ.[೧೮]

ಈ ಗ್ರಂಥಕಾರರಿಗೆ ತಮ್ಮ ಕಾದಂಬರಿಯಲ್ಲಿ 'ವಿಜಯ' ಪಡೆಯಬೇಕಾಗಿರುವ ಮೌಲ್ಯ ಯಾವುದು ಎನ್ನುವುದನ್ನು ಕುರಿತು ಖಚಿತತೆಯಿದೆ. ಕಾದಂಬರಿಯಲ್ಲಿ ವಾಸ್ತವದ ವಿವರಗಳ ಕೃತ್ರಿಮ ಜೋಡಣೆಯಿಂದ ಇದು ಸಾಧಿತವಾಗುತ್ತದೆ. ಇಂದಿರಾಬಾಯಿಯ ಆರಂಭದಲ್ಲಿ ಬರುವ ಸುಂದರರಾಯನ ಕೊಲೆಗೆ ಕಾದಂಬರಿ ಯಾವುದೇ ಗಂಭೀರ ಕಾರಣವನ್ನೂ ಸೂಚಿಸುವುದಿಲ್ಲ. ಕೊಲೆಗೆ ಪ್ರೇರೇಪಿಸುವ ಅಂಬಾಬಾಯಿಯು ಭೀಮರಾಯನಿಗೆ ಕೊಡುವ ಕಾರಣವು ತೀರಾ ಕ್ಷುಲ್ಲಕವಾದುದು. ಅವಳ ಮಾತುಗಳು ಇವು:

> "ನರಸಿಂಹ ಶಾಸ್ತ್ರೀಯು ಹೆಚ್ಚಾಗಿ ನಿಮ್ಮ ಮನೆಯಲ್ಲೇ ಕಾಣಸಿಕ್ಕುತ್ತಾನೆ. ಅದೇನು? ಎಂದು ಸೀತಾಬಾಯಿಯು ಅ ಎಲ್ಲಾ ಹೆಂಗಸರ ಮುಂದೆ ನನ್ನನ್ನು ಕುರಿತು ಕೇಳಿದಳು; ಹಾಗೆ ಕೇಳಿದ್ದರಲ್ಲಿಯೇ ವಿಪರೀತವೇನೂ ಇದ್ದಿಲ್ಲ. ಸಾವುಕಾರನು ತನ್ನ ಗುಮಾಸ್ತನಲ್ಲಿಗೆ ಬರುತ್ತಾ ಹೋಗುತ್ತಾ ಇರುವುದ ಅಪೂರ್ವವಾದ ಸಂಗತಿಯಲ್ಲ. ಪರಂತು ಸೀತಾಬಾಯಿಯು ಹಾಗೆ ಕೇಳುವಾಗ ಕಿರಿನಗೆ ನಗುತ್ತಾ ಹತ್ತಿರ ಕುಳಿತುಕೊಂಡಿದ್ದ ಲಲಿತಾ ಬಾಯಿಯ ತೊಡೆಯನ್ನು ಬೆರಳಿನಿಂದ ಕುಕ್ಕಿ, ತನ್ನ ಮುಖವನ್ನು ತಿರಿಗಿಸಿ ದೊಡ್ಡ ನಗೆ ಬಂದುದನ್ನು ಅಲ್ಲಲ್ಲೇ ಅಣಗಿಸಿದಳು. 'ಸುಂದರ ರಾಯನು ಆ ದಿವಸ ನಮ್ಮಲ್ಲಿಗೆ ಬಂದಾಗ ನರಸಿಂಹ ಶಾಸ್ತ್ರಿ, ನರಸಿಂಹ ಶಾಸ್ತ್ರಿ ಎಂದನೇಕ ಸಾರಿ ಹೆಸರು ತೆಗೆದು ಗಂಡಸರ ಹತ್ತಿರವೇನೋ ಮಾತಾಡಿಕೊಂಡಿದ್ದನು' ಎಂದು ಇನ್ನಷ್ಟು ನಕ್ಕಳು. ಕೂಡಿದ ಸ್ತ್ರೀಯರೆಲ್ಲ ಒಬ್ಬಾಕೆಯ ಮುಖ ಇನ್ನೊಬ್ಬಾಕೆ ನೋಡಿ ಸ್ವಲ್ಪ ನಗಾಡಿದರು. ತತ್ಕಾಲ ಯಾವುದಾದರೊಂದು ಉತ್ತರ ಕೊಡುವುದಕ್ಕೆ ನನಗೆ ಸೂಚಿಸದೆ ನಾನಲ್ಲಿ ಸತ್ತಂತಾದೆನು. ಇನ್ನು ಈ ಬಾಳುವೆ ಏಕೆ? ತ್ರಿಕರಣ ಶುದ್ಧವಾಗೆಯೂ ಯಾವುದೊಂದೂ ಅವಿಚಾರದ ಕೆಲಸಕ್ಕೆ ಹೋಗದೆಯೂ ಇರುವಾಗ ಹೀಗೆ ನಿಷ್ಕಾರಣವಾಗಿ ಅಪವಾದವನ್ನು ಹುಟ್ಟಿಸಿ ನಿವರ್ತಿಸಕೂಡದಾದ ಹಾವಳಿಯನ್ನುಂಟುಮಾಡಿದ ಸುಂದರರಾಯನನ್ನು ತಾವು ಕ್ಷಣೇ ಕ್ಷಣೇ ಹೊಗಳುವುದು, ತದ್ವಾರ ನನಗೆ ಸಹಿಸಕೂಡದ ಮನೋವೇದನೆಯನ್ನುಂಟು ಮಾಡುವುದು. ಅಯ್ಯೋ! ಏನು ಹೇಳಲಿ!"

ಈ ಸಂದರ್ಭವೇ ಅಂಬಾಬಾಯಿಯ ಮಾತುಗಳು ಸಂಪೂರ್ಣ ಕಲ್ಪಿತ ಮತ್ತು ಧೂರ್ತ ತನದವು ಎಂದು ಸೂಚಿಸುವಂತಿವೆ. ನಿಜವಾಗೆಯೂ ಒಳ್ಳೆಯವನಾದ ಸುಂದರರಾಯನನ್ನು

ದುಷ್ಟನೆಂದು ಪ್ರತಿಪಾದಿಸುವುದೇ ಈ ಮಾತುಗಳ ಮರ್ಮ. ಮಾತುಕತೆಯ ಕೊನೆಯಲ್ಲಿ ಭೀಮರಾಯನು ಇದನ್ನು ನಂಬುತ್ತಾನೆ. ಅಂಬಾಬಾಯಿಯು ಹೇಳುವ:

"ಹಾಗಾದರೆ ದುಷ್ಟರನ್ನು ನಿಗ್ರಹಿಸುವುದು ಬಹು ಯೋಗ್ಯವಾದ ಕಾರ್ಯವಲ್ಲವೇ? ಪರಮಾತ್ಮನು ಹತ್ತು ಅವತಾರಗಳನ್ನೆತ್ತಿದ್ದೇಕೆಂಬುದನ್ನು ಇಷ್ಟೆಲ್ಲ ಪುರಾಣಗಳನ್ನು ತಿಳಿದ ತಮಗೆ ಹೇಳಬೇಕೇ? ಅಯೋಗ್ಯವಾದ ಕೆಲಸವನ್ನು ದೇರು ಎಂದಾದರೂ ಮಾಡುವನೇ?"[೨೦]

ಈ ಮಾತುಗಳು ಸದ್ಧರ್ಮ ವಿಜಯಕ್ಕೆ ವ್ಯಂಗ್ಯದಂತಿದ್ದು ಕಾದಂಬರಿಯ ಕೊನೆಯಲ್ಲಿ ಸದ್ಧರ್ಮ ವಿಜಯವು ನಿಜವಾಗುವುದು.

ಆದರೆ ಅಂಬಾಬಾಯಿಯ ದ್ವೇಷಕ್ಕೆ ತಕ್ಕ ಕಾರಣಗಳು ಕಾದಂಬರಿಯ ಅನುಭವದಲ್ಲಿ ಕಂಡುಬರುವುದಿಲ್ಲ. ಕಾದಂಬರಿಗಳ ಪಾತ್ರಗಳ ಮನೋಲೋಕ, ಮತ್ತು ಹೊರಜೀವನಗಳು ಓದುಗರಿಗೆ ಸಂಪೂರ್ಣವಾಗಿ ತಿಳಿದಿರಬೇಕು ಎನ್ನುವ ಮಾತು ಇಲ್ಲಿ ನಿಜವಲ್ಲ. ಆದರೆ ಈ ವಿನಾಕರಣ ದ್ವೇಷದ ಹಿಂದೆ ಒಂದು ತರ್ಕ ಇದೆ. ಸಾಂಪ್ರದಾಯಿಕ ಬದುಕಿನಿಂದ ಬಂದ ಅಂಬಬಾಯಿಮ ಭೀಮರಾಯರು ಖಳರು ಎನ್ನುವುದೇ ಆ ತರ್ಕ. ಅವರ ಸೋಲು ನಿಶ್ಚಿತ ಎನ್ನುವುದು ಕಾದಂಬರಿಯ ಧ್ವನಿ. ಹೀಗೆ ಆದರ್ಶ ಮತ್ತು ವಾಸ್ತವದ ಸಮಸ್ಯೆ ಇಲ್ಲಿ ಮೊದಲೇ ಪರಿಹಾರವಾಗಿದೆ.

ವಾಗ್ದೇವಿಯಲ್ಲಿನ ಪಾತ್ರಗಳೆಲ್ಲವೂ ಧರ್ಮಚ್ಯುತ ಪಾತ್ರಗಳೇ. ಚಂಚಲನೇತ್ರರು ಯತಿಧರ್ಮವನ್ನು, ಅಬಾಚಾರ್ಯ ಪತಿಧರ್ಮವನ್ನು, ವಾಗ್ದೇವಿ ಸತಿಧರ್ಮವನ್ನು, ಆಕೆಯ ತಂದೆ ತಾಯಂದಿರು ತಮ್ಮ ತಮ್ಮ ಧರ್ಮವನ್ನು ಬಿಟ್ಟುಕೊಟ್ಟಿದ್ದಾರೆ. ಎರಡು ಉದಾಹರಣೆಗಳನ್ನು ಇಲ್ಲ ಗಮನಿಸಬಹುದು.

೧. *ಬ್ರಾಹ್ಮಣಳಾದ, ಪೂರ್ವಾಶ್ರಮದಲ್ಲಿನ ಚಂಚಲನೇತ್ರರ ಸಂಬಂಧಿಕಳಾದ, ವಾಗ್ದೇವಿಯ ತಾಯಿ ಆಡುವ ಮಾತುಗಳಿವು:*

   "ಎಷ್ಟು ಹೀನವೃತ್ತಿ ಮಾಡುವುದಾದರೂ ಸುಖ ದೊರಕಬೇಕು. ವಿಷಯಾಭಿಲಾಷೆ ಮಾಡುವ ಗಂಡಸರ ಮನಸ್ಸು ಕೆಸುವಿನ ಎಲೆಯ ಮೇಲೆ ನಿಂತ ನೀರಿನಂತಿರುವುದ ....

   ನಿತ್ಯವು ವಾಗ್ದೇವಿಯು ಶ್ರೀಪಾದಂಗಳವರನ್ನು ಅಗಲದೆ ಅವರ ದೃಷ್ಟಿಯು ಅವರ ಹೆಸರಿನಂತೆ ಅನ್ಯ ಸ್ತ್ರೀಯರ ಮೇಲೆ ಬಿದ್ದರೂ ಅವರ ಮನಸ್ಸನ್ನು ತನ್ನ ಕಡೆಗೇನೇ ಎಳಕೊಳ್ಳಲಿಕ್ಕೆ ಸುಲಭವಾಗುವ ಹಾಗೆ ಅವರ ಸಮೀಪದಲ್ಲಯೇ ಇರಬೇಕು"[೨೧]

೨. *ಚಂಚಲನೇತ್ರರು ವಾಗ್ದೇವಿಯ ಮೋಹಕ್ಕೆ ಒಳಗಾದಾಗ ಅವರ ಪಾರುಪತ್ಯದಾರನಾದ ವೆಂಕಟಪತಿ ಆಚಾರ್ಯನು ಚಂಚಲನೇತ್ರರಿಗೆ ಬುದ್ಧಿ ಹೇಳುತ್ತಾನೆ. 'ಕರ್ಮ ಭ್ರಷ್ಟನಾದ ಸನ್ಯಾಸಿಯು ಇತರ ಪಾಪಿಗಳಿಗಿಂತಲೂ ಕಡೆ' ಎಂದು ವೆಂಕಟಪತಿ ಆಚಾರ್ಯನು ಎಚ್ಚರಿಸುತ್ತಾನೆ. ಆದರೆ ಸ್ತ್ರೀ ವ್ಯಾಮೋಹಿಯಾದ ಚಂಚಲನೇತ್ರರಿಗೆ ಪಾರುಪತ್ಯಗಾರನ*

ಮಾತುಗಳು ಪಥ್ಯವಾಗುವುದಿಲ್ಲ. ಅವರು ಪಾರುಪತ್ಯಗಾರನಿಗೆ ಕೊಡುವ ಉತ್ತರ ಇದು:

"ಎಂಥಾ ಪಾಪಕ್ಕೂ ಪ್ರಾಯಶ್ಚಿತ್ತ ಉಚಿಟಷ್ಟೇ... ವಾಗ್ದೇವಿಯ ಚಿಂತನೆಯು ಅಂಥಾ ಪ್ರಾಯಶ್ಚಿತ್ತಕ್ಕೆ ಮೀರಿ ಹೋಗುವ ಪಾಪವಲ್ಲವೆಂದು ಚೆನ್ನಾಗಿ ತಿಳಿದುಕೋ. ದೊಡ್ಡ ಬುದ್ಧಿವಂತನೆಂಬಂತೆ ಹೆಚ್ಚು ಗಳಹುವದರಿಂದ ನಿನ್ನ ಹುಚ್ಚುತನವೇನಾದರೂ ಮರೆಯಲಾಗದು. ಇನ್ನೂ ನೀನು ಅಧಿಕ ಪ್ರಸಂಗ ಮಾಡಿ ಕಾಲಹರಣ ಮಾಡುವುದಕ್ಕೆ ನೋಡುತ್ತೀಯಾದರೆ ಬೇಗನೆ ನಮ್ಮ ಎದುರಿನಿಂದ ನಡೆದು ಬಿಡು. ವಾಗ್ದೇವಿಯನ್ನು ನಿನ್ನ ಪರಿಮುಖವಲ್ಲದೆ, ಅನ್ಯಥಾ ಕರೆಸಿಕೊಳ್ಳುವುದಕ್ಕೆ ಆಗುವುದಿಲ್ಲವಾದರೆ ನಿನ್ನನ್ನು ವಾದ್ಯದಿಂದ ತರಿಸಿಕೊಳ್ಳುವೆವು. ಇನ್ನು ನಿನ್ನ ಮುಖಾವಲೋಕನವೇ ನಮಗಾಗಬಾರದು."

ಈ ಭಾಗವು ಚಂಚಲನೇತ್ರರು ಮೂರ್ಖತನದ ಪರಮಾವಧಿ ಮುಟ್ಟಿದ ಸ್ಥಿತಿಯಂತೆ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಇಂದಿರಾಬಾಯಿಯಲ್ಲಿ ಕಾದಂಬರಿಯ ಖಳಪಾತ್ರಗಳಿಗೆ ಸಮಾನಾಂತರವಾಗಿ ವಿದ್ಯಾವಂತ,ಸುಧಾರಣಾವಾದೀ ಮನೋಧರ್ಮದ ಪಾತ್ರಗಳು ಕಂಡುಬಂದರೆ ವಾಗ್ದೇವಿ ಕಾದಂಬರಿಯಲ್ಲಿ ಖಳ ಮತ್ತು ದುರ್ಬಲ ಪಾತ್ರಗಳನ್ನು ಚಿತ್ರಿಸಿ– ಇವುಗಳೆಲ್ಲದರ ಸೋಲು ಅನಿವಾರ್ಯ ಎಂದು ತೋರಿಸುವ ಧೋರಣೆಯನ್ನು ಕಾಣುತ್ತೇವೆ.

ಭ್ರಷ್ಟ ಧಾರ್ಮಿಕತೆ, ಕಂದಾಚಾರಗಳನ್ನು ಗುಲವಾಡಿ, ಬೋಳಾರ ಇಬ್ಬರೂ ಉದ್ದೇಶ ಪೂರ್ವಕವಾಗಿ ವಿಡಂಬಿಸುತ್ತಾರೆ. ವಸಾಹತುಶಾಹಿ ಆಧುನಿಕತೆಯಲ್ಲಿ ರೂಪುಗೊಳ್ಳುವ ಹೊಸ ಮೌಲ್ಯಗಳು ಈ ವಿಡಂಬನೆಯ ತಳಹದಿಯಾಗಿವೆ. ಕಾದಂಬರಿಯ ಬಂಧದಲ್ಲಿ ಈ ಅಂಶವು ಸ್ಪಷ್ಟವಾಗಿ ಮೂಡಿದೆ. ಇಂದಿರಾಬಾಯಿ ಕಾದಂಬರಿಯ ಒಂದು ಉದಾಹರಣೆಯನ್ನು ಇಲ್ಲಿ ಪರಿಶೀಲಿಸಬಹುದು.

ಅಂಬಾಬಾಯಿ ಮತ್ತು ಇಂದಿರಾಬಾಯಿ ಇವರ ನಡುವೆ ನಡೆಯುವ ಸಂಭಾಷಣೆ ಇದು:

"ನೀನು ಓದುವ ಪುಸ್ತಕವೆಂದಾದ್ದು?"

"ನಾನು ನಿನ್ನೆಯವರೆಗೆ 'ಸ್ತ್ರೀ ಧರ್ಮನೀತಿ' ಎಂಬ ಪುಸ್ತಕವನ್ನು ಓದಿದೆ. ಈ ಹೋತ್ತು ಏಸೋಪನ ನೀತಿ ಕಥೆಗಳು ಎಂಬ ಪುಸ್ತಕ ಓದತೊಡಗಿದ್ದೇನೆ".

"ಅವುಗಳೆಲ್ಲಾ ಪಾದ್ರಿಗಳು ಛಾಪಿಸಿದ ಪುಸ್ತಕಗಳಲ್ಲವೇ?"

"ಅದೇನೋ ನಾನರಿಯೆ"

"ಅವುಗಳು ಜಾತಿ ಕೆಡಿಸುವುದಕ್ಕೆ ಛಾಪಿಸಿದ ಪುಸ್ತಕಗಳು"

"ನಾನು ಓದಿದ ಪುಸ್ತಕದಲ್ಲಿ ಜಾತಿ ಕೆಡುವ ಸಂಗತಿ ಯಾವುದೂ ಇರಲಿಲ್ಲ. ಪುಸ್ತಕ ಓದಿದ ಮಾತ್ರದಿಂದಲೇ ಜಾತಿ ಹೋಗುವುದುಂಟೇ?"

"ಅವುಗಳಲ್ಲಿ ನಮ್ಮ ಜಾತಿಗೆ ವಿರೋಧವಾದ ಸಂಗತಿಗಳಿವೆ"

"ನಾನು ಓದಿದ ಪುಸ್ತಕದಲ್ಲಿಲ್ಲ. ಅದರಲ್ಲಿ ಸ್ತ್ರೀಯರು ಹೆತ್ತವರ ಕಡೆಗೂ ಪತಿಗಳ ಕಡೆಗೂ ಬೇರೆಯವರ ಕಡೆಗೂ ಹೇಗೆ ನಡೆದುಕೊಳ್ಳಬೇಕೆಂಬ ಬಹು ಚಲೋದಾದ ಕ್ರಮಗಳೆಲ್ಲ ಹೇಳಲ್ಪಟ್ಟಿವೆ."[೨೩]

ಇಂದಿರೆ ನಿಂತಿರುವ ವೈಚಾರಿಕ ನೆಲೆಯನ್ನು ಮೇಲಿನ ಮಾತುಗಳು ಸೂಚಿಸುತ್ತವೆ. ಗಂಡನನ್ನು ಪರೀಕ್ಷಿಸಲು ಡಾಕ್ಟರ್ ದೊರೆಗಳು ಬರಬೇಕೆಂಬುದಕ್ಕೂ (ಪುಟ ೧೩೧) ಸಂತ ಮಂಡಳಿಯನ್ನು ಕುರಿತು ಔದಾಸೀನ್ಯ ತೋರುವುದಕ್ಕೂ (ಪುಟ ೧೫೯), ವಿಧವೆಯಾದ ಬಳಿಕ ಸೀರೆ ಕುಪ್ಪಸ ತೊಡುವುದಕ್ಕೂ (ಪುಟ ೧೫೨–೧೫೪) ಮುಂದೆ ಭಾಸ್ಕರರಾಯನೊಂದಿಗೆ ವಿವಾಹವಾಗುವುದಕ್ಕೂ ಈ ಓದಿಗೂ ಸಂಬಂಧವಿದೆ. ಕಾದಂಬರಿಯ ತೀರ್ಮಾನವೇ ಇಂದಿರಾಬಾಯಿಯ ಪರವಾಗಿರುವಂತಹುದು. ಸುಳ್ಳಾಗುವ ಜ್ಯೋತಿಷ್ಯ, ವಿಫಲವಾಗುವ ಪಂಡಿತರ ಔಷಧಿ, ಸಂತ ಮಂಡಳಿಯ ಧೂರ್ತತನ, ಹೊಸ ವಿದ್ಯಾವಂತನಾದ ಭಾಸ್ಕರರಾಯ ಕಮಲಪುರಕ್ಕೆ ಕಲೆಕ್ಟರ್ ಆಗಿ ಆಗಮಿಸುವ ವಿದ್ಯಮಾನಗಳು ಇದನ್ನೇ ಸೂಚಿಸುತ್ತವೆ.

ಕ್ರೈಸ್ತದೃಷ್ಟಿಕೋನದಿಂದ ಬರೆದಿರುವ ಬಾಬಾ ಪದಮಂಜೆಯ ಯಮುನಾ ಬಾಯಿಯ ಸಂಚಾರ (೧೮೯೯) ಮತ್ತು ಈ ಕಾದಂಬರಿಯ ಸಾಮ್ಯಗಳೂ ಇದನ್ನೇ ಸೂಚಿಸುವಂತಿವೆ. ವಿದ್ಯಾವಂತಳಾದ ಯಮುನಾಬಾಯಿಯ ಮಾತುಗಳು ಇವು:

> "ಅವ್ವಾ, ನಾನು ಹೊರಗೆ ಹಿಂದು ಧರ್ಮದ ಪ್ರಕಾರ ನಡಿಯುವವಳಂತೆ ಕಾಣಿಸುತ್ತೇನೆ. ಆದರೆ ಹೃದಯದಲ್ಲಿ ನನ್ನ ವಿಶ್ವಾಸ ಬೇರೊಂದು ಧರ್ಮ ಅದೆ ಮತ್ತು ಆ ಧರ್ಮ ಸತ್ಯವಾದದ್ದು ದೇವರಿಂದ ಬಂದದ್ದು ಅಂಬುವ ಹಾಗೆ, ನನಗೆ ಪೂರ್ಣ ಭರವಸವಾಗಿದೆ" [೨೪]

ಸಾಂಪ್ರದಯಿಕ ಕಟ್ಟುಕಟ್ಟಳೆಯ ಬದುಕಿನಲ್ಲಿ ಸಿಲುಕಿರು ಭೀಮರಾಯ, ಅಂಬಾಬಾಯಿಯವರು ಇಂದಿರಾಬಾಯಿ ಕಾದಂಬರಿಯಲ್ಲಿ ವಿಡಂಬನೆಗೆ ಒಳಗಾಗಿರುವಂತೆ ಆಧುನಿಕ ವಿದ್ಯಾವಂತರಾದ ಎಫ್.ಎ., ಬಿ.ಎ.ಗಳೂ ವಿಡಂಬನೆಗೆ ಒಳಗಾಗಿದ್ದಾರೆ. (ಪುಟ ೬೦–೬೧;೧೦೨–೧೦೫;೨೨೬–೨೩೧) ಆದರೆ ವಿದ್ಯಾವಂತ ಪಾತ್ರಗಳು ಎಂದೂ ಖಳಪಾತ್ರಗಳಾಗಿ ಚಿತ್ರಿತವಾಗಿಲ್ಲ ಎನ್ನುವುದು ಗಮನಾರ್ಹ ಇಂದಿರಾಬಾಯಿ ಕಾದಂಬರಿಯ ವೈಚಾರಿಕ ನೆಲೆಯನ್ನು ಆ ಅಂಶವೂ ಶ್ರೂತಪಡಿಸುತ್ತದೆ.

ಗುಲ್ವಾಡಿಯವರ ಇನ್ನೆರಡು ಕೃಗಿಗಳಾದ ಭಾಗೀರಥಿ (೧೯೦೭), ಸೀಮಂತಿನಿ (೧೯೦೭), ಕಾದಂಬರಿಗಳಿಗೂ ಮೇಲಿನ ಮಾತು ಅನ್ವಯವಾಗುತ್ತದೆ. ಭಾಗೀರಥಿ ಅಥವಾ ಮೂರ್ಖತ್ವದ ಯಾತನೆಗಳು ಕಾದಂಬರಿಯು ' ಕಟ್ಟಳೆ ಭಾಗೀರಥಿ'ಯ "ಸುಟ್ಟ ಚರಿತ್ರೆ" ಯಾದರೆ ಸೀಮಂತಿನಿ ವಿದ್ಯಾವಂತ ಸ್ತ್ರೀಯ ಯೋಗ್ಯತೆಯನ್ನು ನಿರೂಪಿಸುವ ಕಥನ.[೨೫.೨೬]

ವಾಗ್ದೇವಿ ಕಾದಂಬರಿಯಲ್ಲಿ ಖಳನಾಯಕ–ನಾಯಕಿಯರಂತೆ ಕಂಡುಬರುವ ಪಾತ್ರಗಳೆಂದರೆ ಕುಮುದಪುರದ ಪೀಠಾಧಿಪತಿ ಚಂಚಲನೇತ್ರ ಮತ್ತು ವಾಗ್ದೇವಿ ಅವರನ್ನು ಎದುರಿಸುವ ವೇದವ್ಯಾಸ ಉಪಧ್ಯನೂ ಪ್ರತಿನಿಧಿಸುವುದು ಮಠವು ಪ್ರತಿಪಾದಿಸುವ ಮೌಲ್ಯಳನ್ನೇ. ವೇದವ್ಯಾಸ ಉಪಧ್ಯಾಯನದು ತೀರಾ ದುರ್ಬಲ ವ್ಯಕ್ತಿತ್ವ, ಸಾಂಪ್ರದಾಯಿಕ ಸಮಾಜದ ಕೇಂದ್ರವಾದ 'ಮಠ'ವು ಭ್ರಷ್ಟವಾಗಿರುವುದರಿಂದ ಆ ಸಮಾಜವೂ ಉಳಿಯುವುದಿಲ್ಲ ಎನ್ನುವ ದನಿ ವಾಗ್ದೇವಿ ಕಾದಂಬರಿಯಲ್ಲಿದೆ.

ಆದುದರಿಂದ ಚಂಚಲನೇತ್ರರ ಮತ್ತು ವಾಗ್ದೇವಿಯವರ ಸೋಲಿನ ನಾಂದಿಯಾಗುವುದು ವೇದವ್ಯಾಸ ಉಪಾಧ್ಯನಿಂದಲ್ಲ. ವಾಗ್ದೇವಿಯ ಬಾಲ್ಯ ಸ್ನೇಹಿತನೂ, ಅವಳ ದುಷ್ಕೃತ್ಯಗಳಿಗೆ ಬೆಂಬಲಿಗನೂ ಆಗಿದ್ದ ತಿಪ್ಪಾ ಶಾಸ್ತ್ರೀಯ ಮೂರ್ಖತನದಿಂದಾಗಿ ಪಂಚಮಠಗಳೊಲಗೆ ಅಂತ: ಕಲಹದ ಬೀಜವು ಬಿತ್ತಲ್ಪಡುತ್ತದೆ. ಕಾದಂಬರಿಯಲ್ಲಿ ಈ ಅಂಶವು ಸಮರ್ಥವಾಗಿ ನಿರೂಪಿತವಾಗಿದೆ:

> "ನೃಸಿಂಹ ಮಠದ ಪಾರುಪತ್ಯಗಾರನ ಅಳಿಯ ಶೋಣಭದ್ರ ಭಟ್ಟನು ಕುಮುದಪುರದಲ್ಲಿರುವ ಆ ಮಠಕ್ಕೆ ಇರುವ ಭೂಮಿಗಳಿಂದ ಅದರ ಜೀರ್ಣೋದ್ಧಾರಕ್ಕೋಸ್ಕರ ಕೆಲವು ಮರಗಳನ್ನು ಕಡಿಸುವುದಕ್ಕೆ ಬಂದವನು ಅಂಜನೇಯಾಲಯದಲ್ಲಿ ಬಿಡಾರವಿದ್ದು ಮಾವನು ಕೊಟ್ಟ ಆಜ್ಞೆಗಳಂತೆ ಪ್ರವರ್ತಿಸುವ ವೇಳೆಯಲ್ಲಿ ತಿಪ್ಪಾಶಾಸ್ತ್ರಿಯು ಯಾರಿಗೂ ಹೇಳದೆ ಕೇಳದೆ ಶೋಣಭದ್ರನ ಕೂಡೆ ವಾಗ್ವಾದ ಮಾಡಲು ಪಕ್ರಮಿಸಿ ಅವನು ಕಡಿಸಲಿಕ್ಕೆ ನೋಡುವ ಮರಗಳ್ಲಿ ಹಲವು ಚಂಚಲನೇತ್ರರ ಭೂಮಿಗೆ ಸಂಬಂಧವಾದವುಗಳೆಂದು ಒಂದು ದುರ್ವಿವಾದ ಹುಟ್ಟಿಸಿ ಈ ಉಭಯ ಮಠಾಧಿಪತಿಗಳೊಳಗೆ ದ್ವೇಷದ ಬೀಜವನ್ನು ಬಿತ್ತಿಬಿಟ್ಟನು"

ವಾಗ್ದೇವಿ ಕಾದಂಬರಿಯ ಮಹತ್ತ್ವದ ತಿರುವು ಇದು. ತಿಪ್ಪಾಶಾಸ್ತ್ರಿಯು ಹುಟ್ಟಿಸಿದ ಈ ದ್ವೇಷದ ಕಿಡಿಯೇ ಮುಂದೆ ಚಂಚಲನೇತ್ರ – ವಾಗ್ದೇವಿಯವರ ಸೋಲಿಗೆ ಕಾರಣವಾಗುತ್ತದೆ. ಅಂದರೆ ಕಾದಂಬರಿಯ ನಿರೂಪಣಾ ಪ್ರಜ್ಞೆಯಲ್ಲಿ ಈ ಯತಿ, ವಾಗ್ದೇವಿ, ಮಠ ಮತ್ತು ಅದು ಪ್ರತಿನಿಧಿಸುವ ಸಂಪ್ರದಾಯಬದ್ಧ ಕಂದಚಾರದ ಸಮಾಜ ವ್ಯವಸ್ಥೆ ಮುಂದುವರಿಯಲು ಅನರ್ಹ ಎನ್ನುವ ತೀರ್ಮಾನವಿದೆ.

ಆದರೆ ಈ ಸಮಾಜದಿಂದಲೂ ಒಳ್ಳೆಯ ಪಾತ್ರಗಳು ಎದ್ದು ನಿಲ್ಲತ್ತವೆ. ಅಂಬಾಬಾಯಿ, ಭೀಮರಾಯರ ನಡುವಿನಿಂದ ಇಂದಿರಾಬಾಯಿ ಬೆಳೆದು ನಿಲ್ಲುತ್ತಾಳೆ. ಕಮಲಪೂರದಿಂದಲೇ ಭಾಸ್ಕರರಾಯ ಉದಿಸಿಬರುತ್ತಾನೆ. ಭ್ರಷ್ಟವಾಗಿರುವ ಷಟ್ಪುರದ ರಾಜಕೀಯ ಆಡಳಿತ ಯಂತ್ರದಿಂದಲೇ ನ್ಯಾಯ ವಿಚಕ್ಷಣ ನ್ಯಾಯಾಧಿಪತಿ ಕಾಣಿಸಿಕೊಳ್ಳುತ್ತಾನೆ.

ಈ ನಂಬಿಕೆಯಿಂದಾಗಿ ಈ ಕೃತಿಗಳಿಗೆ ಒಂದು ಬಗೆಯ ಗೆಲ್ಲುವ ದನಿ ಅಥವಾ ಚಾರಿತ್ರಿಕ ಖಚಿತತೆ ಬಂದಿದೆ. ಮಂಗಳಕರ ನಿಲುಗಡೆಯ ಸುಭದ್ರ ದೃಷ್ಟಿಕೋನ ಕಾದಂಬರಿಯ ಆರಂಭದಿಂದಲೂ ಬಂಧದಲ್ಲಿ ಎದ್ದು ಕಾಣುತ್ತದೆ. ಈ ಕೃತಿಗಳ ಕೃತ್ರಿಮ ಘಷನೆಗಳು, ಕಪ್ಪು-ಬಿಳಿ ಪಾತ್ರಗಳು, ವಿಡಂಬನೆಯ ಧಾಟಿಗೆ ಕಾರಣವಾಗಿರುವ ದೃಷ್ಟಿಕೋನವಿದು.

ಪಾಶ್ಚಿಮಾತ್ಯ ವೈಚಾರಿಕ ನೆಲೆಯಿಂದ ದೇಸಿಯನ್ನು ವಿಡಂಬಿಸಿದ, ಟೀಕಿಸಿದ, ಸುಧಾರಣಾವಾದವನ್ನು ಒಲಿದ ಸಾಮಾಜಿಕ ವರ್ಗದಿಂದ ಬಂದಿರುವ ಲೇಖಕರಿಗೆ ಅವರ ಪರಿಸರ ಸಹಜವಾಗಿಯೇ ಒದಗಿಸಿದ ವಸ್ತು ಇದು. ಈ ಅರ್ಥದಲ್ಲಿಯೇ ಡಾ. ಶಿವರಾಮ ಕಾರಂತರು ಇಂದಿರಾಬಾಯಿಯ ಮರುಮುದ್ರಣದ ಮುನ್ನುಡಿಯಲ್ಲಿ:

> "ಇಂದಿರಾಬಾಯಿಯಲ್ಲಿ ಶ್ರೀವೆಂಕಟರಾಯರು ಚಿತ್ರಿಸಿದ ಸಮಾಜ ಅವರದೇ ಆದ ಸಾರಸ್ವತ ಬ್ರಾಹ್ಮಣ ಸಮಾಜ. ಅವರು ಪೋಲಿಸ್ ನೌಕರಿಯಲ್ಲಿದ್ದವರು; ಆ ಕಾಲದಲ್ಲಿ ನಡೆದ ಘಷನೆಗಳನ್ನು ವಸ್ತುವಾಗಿಟ್ಟುಕೊಂಡು ಆಧುನಿಕ ಸಮಾಜಕ್ರಾಂತಿಗೆ ಗುರಿಯಾದ ಸಾರಸ್ವತ ಸಮಾಜದ ತಳಮಳವನ್ನು ಈ ಬರಹದಲ್ಲಿ ತೋರಿಸಿದ್ದಾರೆ."

ಎಂದಿರುವುದನ್ನು ನಾವು ಒಪ್ಪಿಕೊಳ್ಳಬಹುದು.

ಈ ಕಾಲದಲ್ಲಿ ಕಾದಂಬರಿ ಪ್ರಕಾರವು ಹೊಸದಾಗಿತ್ತು ಮತ್ತು ಅದರ ಸ್ವರೂಪವು ಬದಲಾಗುತ್ತಲಿತ್ತು. ಕಾದಂಬರಿಯ ಈ 'ಕಾಮರೂಪಿ' ಸ್ವರೂಪದಿಂದಾಗಿ ಅದರೊಳಗೆ "ಸಾರ್ವಜನಿಕ ವಲಯ"ದಲ್ಲಿ ಚರ್ಚಿತವಾಗುತ್ತಲಿದ್ದ ಸಮಕಾಲೀನ ಸಮಸ್ಯೆತೆಗಳನ್ನು ಚರ್ಚಿಸುವುದು ಸಾಧ್ಯವಾಯಿತು. ಸ್ವ, ವ್ಯಕ್ತಿತ್ವ, ಸಮುದಾಯ ಮತ್ತು ಸಮಾಜಗಳನ್ನು ಕುರಿತ ಹೊಸ ಪ್ರಶ್ನೆಗಳನ್ನು ಈ ಕಾದಂಬರಿಗಳು ನಿರೂಪಿಸಿವೆ. ಅಂದರೆ ಬರವಣಿಗೆಯ ಸನ್ನಿವೇಶದಲ್ಲಿ ಮೊದಲ ಕಾದಂಬರಿಗಳೂ ವ್ಯಕ್ತಿತ್ವ, ಸಮುದಾಯ, ಸಮಾಜ, ಸಂಸ್ಕೃತಿಗಳನ್ನು ಕುರಿತು ನಿಲುವನ್ನು ಪ್ರಕಟಿಸಿ ನಿರೂಪಿಸಿ ಸಾಮಾಜಿಕ ಸುಧಾರಣೆಯನ್ನು ಸಾಧನೆ ಮಾಡುತ್ತಿದ್ದವು. ಈ ಸುಧಾರಣೆಗಳ ವೈಶಿಷ್ಟ್ಯವೆಂದರೆ ಹಳೆಯ–ಹೊಸ ಸಾಮಾಜಿಕ ಸಂಬಂಧಗಳ ಸಹಬಾಳ್ವೆ ವಿಶಿಷ್ಟ ಆಧುನಿಕತೆಯ ರೂಪಣೆ. ಈ ಆಧುನಿಕತೆಯಲ್ಲಿ ವೈವಿಧ್ಯ, ವೈರುಧ್ಯಗಳೆರಡೂ ಇವೆ. ವಿಶ್ವಸ್ಥ ಆಧುನಿಕತೆಯ ಲಕ್ಷಣವಾದ ಸಮಾನತೆಯನ್ನು ಪ್ರತಿಪಾದಿಸುತ್ತಲೇ ವಸಾಹತು ಆಡಳಿತವು ಸಮುದಾಯಗಳನ್ನು ಅಂಕೆಗೊಳಪಡಿಸಿದ್ದರೆ, ಅದೇ ಆಧುನಿಕತೆಯನ್ನು ಪ್ರತಿಪಾದಿಸಿದ ಸುಧಾರಣಾವಾಗಿಗಳು ಹಳೆಯ ಸಾಮಾಜಿಕ ಸಂಬಂಧಗಳನ್ನು ಮುಂದುವರಿಸಲೂ ಯತ್ನಿಸಿದರು. ಮಹಿಳೆಯ ವಿಮೋಚನೆಯನ್ನು ಪ್ರತಿಪಾದಿಸುವ ಇಂದಿರಾಬಾಯಿ ಅವಳ ಸುತ್ತ ಲಕ್ಷ್ಮಣರೇಖೆಯನ್ನೂ ಎಳೆಯುತ್ತದೆ. ಕುರುಡು ಸಾಂಪ್ರದಾಯಿಕತೆಯನ್ನು ಟೀಕಿಸುವ ಕಾದಂಬರಿಯ ಜಾತಿ ಪದ್ಧತಿ ಜೀವಂತವಾಗಿದೆ. "ನಮ್ಮ ಆಧುನಿಕತೆ'ಯನ್ನು ಚರ್ಚಿಸುವಾಗ ಈ ಅಂಶಗಳು ಮುಖ್ಯವಾಗಿವೆ. ಒಂದು ಕಾಲದಲ್ಲಿ ನಿರ್ದಿಷ್ಟ ಸಾಮಾಜಿಕ ಸಮುದಾಯದ ಪ್ರಜ್ಞೆಗೆ ನಿಲುಕಿದ ನಿಲುಕದ, ಸಾಧ್ಯವಾದ ಸಾಧ್ಯವಾಗದ ಸಾಮಾಜಿಕ ಪರಿವರ್ತನೆಯ ಸ್ವರೂಪವನ್ನು ಈ ಕಾದಂಬರಿಗಳ ಇನ್ನಷ್ಟು ಆಳವಾದ ಅಧ್ಯಯನಗಳಿಂದ ಅರಿಯಬಹುದು.

ದಕ್ಷಿಣ ಕನ್ನಡದ ಸಾರಸ್ವತ ಬ್ರಾಹ್ಮಣ ಪರಿಸರವು ಒದಗಿಸಿದ ವಸ್ತುವನ್ನು ಕೇಂದ್ರವಾಗಿರಿಸಿಕೊಂಡ ಸಾಮಾಜಿಕ ಕಾದಂಬರಿಗಳಿಗಿಂತ ಉತ್ತರ ಕರ್ನಾಟಕದ ಹೆಚ್ಚಿನ ಕಾದಂಬರಿಗಳು ಭಿನ್ನವಾಗಿವೆ. ಗಳಗನಾಥರು ಮತ್ತು ಕೆರೂರ ವಾಸುದೇವಾಚಾರ್ಯರು ಈ ಧಾರೆಯನ್ನು ಪ್ರತಿನಿಧಿಸುವ ಲೇಖಕರು.

ಈ ಭಿನ್ನತೆಯು ಕಾದಂಬರಿಗಳ ವಸ್ತು ವೈವಿಧ್ಯದಲ್ಲಿಯೇ ಎದ್ದು ತೋರುವಂತಿದೆ. ಸುಧಾರಣಾವಾದೀ ದೃಷ್ಟಿಕೋನಕ್ಕೆ ನಿಲುಕುವ ಸಾಮಾಜಿಕ ವಸ್ತುಗಳನ್ನು ದಕ್ಷಿಣ ಕನ್ನಡದ ಲೇಖಕರು ಸ್ವೀಕರಿಸಿದರೆ, ಉತ್ತರ ಕರ್ನಾಟಕದ ಲೇಖರ ಕೃತಿಗಳಲ್ಲಿ ಚಾರಿತ್ರಿಕ ವಸ್ತುವಿನ ನಿರ್ವಹಣೆ ಪ್ರಧಾನವಾಗಿದೆ.

ಪದ್ಮನಯನಾ (೧೮೯೮) ಎನ್ನುವ ಅದ್ಭುತ ರಮ್ಯ ಕಥಾನಕದೊಂದಿಗೆ ತಮ್ಮ ಕಾದಂಬರಿ ಬರವಣಿಗೆಯನ್ನು ಆರಂಭಿಸಿದ ಗಳಗನಾಥರು ಮುಂದೆ ಮರಾಠ, ರಜಪೂತ ಮತ್ತು ಕನ್ನಡಿಗರ ಇತಿಹಾಸವನ್ನು ಕುರಿತ ಕಾದಂಬರಿಗಳನ್ನು ರಚಿಸಿದರು. ಅವರು ಒಂದಾದರೂ ಸಾಮಾಜಿಕ ಕಾದಂಬರಿಯ ರಚಯಿತರಾದ ಕೆರೂರ ವಾಸುದೇವಾಚಾರ್ಯರೂ ಮುಂದೆ ಐತಿಹಾಸಿಕ ಕೃತಿಗಳನ್ನು ರಚಿಸಿದರು.

ಗಳಗನಾಥ–ಕೆರೂರರ ಕಾದಂಬರೀ ಧಾರೆ ಮೊದಲ ಘಟ್ಟದ ಕಾದಂಬರಿಯ ಪ್ರಧಾನ ಧಾರೆ. ಗಳಗನಾಥರ ಮತ್ತು ವೆಂಕಟಾಚಾರ್ಯರ ಕಾದಂಬರಿಗಳು ಹಾಗೂ ಅನುವಾದಗಳು ಮೊದಲ ಹಂತದ ಕಾದಂಬರಿಗಳ ಪೈಕಿ ಅತ್ಯಂತ ಜನಪ್ರಿಯವಾದ ಕೃತಿಗಳು ಎನ್ನುವುದನ್ನೂ ಮರೆಯು ವಂತಿಲ್ಲ.

ಈ ಬಗೆಯ ಕೃತಿಗಳನ್ನು 'ರಾಷ್ಟ್ರೀಯವಾದಿ ಕಾದಂಬರಿ' ಎಂದು ಕರೆದಿರುವ ಡಾ.ಡಿ.ಆರ್.ನಾಗರಾಜರು:

> "ನಮ್ಮಲ್ಲಿ ಮೊದಲು ಉತ್ಕಟವಾಗಿ ಪ್ರಾರಂಭವಾದದ್ದೇ ಚಾರಿತ್ರಿಕ ಕಾದಂಬರಿಗಳೂ. ನ ಜತೆಯಲ್ಲಿ ಕಾದಂಬರಿ ಪ್ರಕಾರದ ಉಗಮ ಎಂದು ಪಾಶ್ಚಿಮಾತ್ಯ ವಿಮರ್ಶೆ ಹೇಳಿಕೊಂಡಿದೆ. ನಮ್ಮಲ್ಲಿ ಅದು ಕರ್ನಾಟಕತ್ವದ ಸಮಷ್ಟಿ ಹುಡುಕಾಟದೊಡನೆ ಪ್ರಬುದ್ಧ ಸ್ಥಿತಿಗೆ ಬಂತು. ಕನ್ನಡ ಕಾದಂಬರಿ ಪರಂಪರೆಯ ಬೇರುಗಳು ಇಳಿದದ್ದೇ ಸಮಷ್ಟಿ ಕರ್ನಾಟಕತ್ವದ ಹುಡುಕಾಟದಲ್ಲಿ. ಗಳಗನಾಥ ಈ ವಲಯದ ಪ್ರಮುಖ ಧ್ವನಿ"[೨೯]

ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಕರ್ನಾಟಕತ್ವದ ಸಮಷ್ಟಿ ಹುಡುಕಾಟವು ೧೯ನೆಯ ಶತಮಾನದ ವಿದ್ಯಾವಂತ ವರ್ಗದ ಅಸ್ಮಿತೆಯ ಹುಡುಕಾಟದೊಂದಿಗೆ ಸಂಬಂಧಿತವಾದುದು ಎಂದು ಹಿಂದೆಯೇ ನೋಡಿದ್ದೇವೆ. ತೀವ್ರವಾದ ರಾಷ್ಟ್ರೀಯವಾದಿ ಚಳುವಳಿಯ ಎರಡನೆಯ ಹಂತದೊಂದಿಗೆ ಇದು ಸಂಬಂಧವನ್ನು ಪಡೆದಿದೆ.

ಕನ್ನಡ ಕಾದಂಬರಿಯ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ಮಹತ್ವದ ಪ್ರಬಂಧವನ್ನು ಬರೆದಿರುವ ಜೆ.ಎಸ್.ಅಮೂರರು:

> "ಕಾದಂಬರಿಗಾಗಿ ಅಸಂಖ್ಯ ಓದುಗರನ್ನು ದೊರಕಿಸಿಕೊಟ್ಟವರಲ್ಲಿ ಗಳಗನಾಥ ಮತ್ತು ಬಿ. ವೆಂಕಟಾಚಾರ್ಯರುಗಳು ಚಿರಸ್ಮರಣೀಯರು. ಪಾತ್ರಸೃಷ್ಟಿಯ ಕಲೆಗೆ,

ಕಾದಂಬರೀ ಗದ್ಯದ ಬೆಳವಣಿಗೆಗೆ ಗಳಗನಾಥರು ನೀಡಿದ ಕೊಡುಗೆ ಅಮೂಲ್ಯವಾದುದು ಎನ್ನುವುದರಲ್ಲಿ ಸಂಶಯವೇ ಎಲ್ಲ. ಹೀಗಿದ್ದೂ ಕಾದಂಬರಿಯ ಅಂತಃಸ್ವರೂಪದ ವಿಕಾಸದ ಕಾರ್ಯದಲ್ಲಿ ಗಳಗನಾಥರು ಮಹತ್ವದ ಪಾತ್ರ ವಹಿಸಲಿಲ್ಲವೆನ್ನುವುದು ದುರ್ದೈವದ ಸಂಗತಿ."[೩೦]

ಎಂದು ಹೇಳಿದ್ದಾರೆ. ಅವರ ಪ್ರಕಾರ ಗಳಗನಾಥರ ಕೃತಿಗಳು 'ಅರ್ಧಸಾಹಸ ಕತೆ ಮತ್ತು ಇನ್ನರ್ಧ ತಾತ್ವಿಕ ಚರ್ಚೆಯಾಗಿ ಬಿಟ್ಟು ಕಾದಂಬರಿಯ ಸ್ವರೂಪವನ್ನೇ ಕಳೆದುಕೊಳ್ಳುತ್ತವೆ.'

ಗಳಗನಾರ ಮಾಧವ ಕರುಣಾವಿಲಾಸ (೧೯೨೩)ವನ್ನು ಕುರಿತ ವಿಮರ್ಶೆಯಲ್ಲಿ ಜಿ.ಎಚ್..ನಾಯಕರು ಈ ಕಾದಂಬರಿಯು ಗಾತ್ರದಲ್ಲಿ ಮಹಾಕಾದಂಬರಿಯಾದರೂ ಸತ್ವದಲ್ಲಿ ಮಹಾಕಾದಂಬರಿಯಾಗಲಿಲ್ಲ ಎಂದು ವಾದಿಸಿದ್ದಾರೆ. ತಾನು ಆಯ್ದುಕೊಂಡ ಚರಿತ್ರೆಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ತೆರೆದ ಮನಸ್ಸಿನಿಂದ ಅಭ್ಯಾಸ ಮಾಡಿ ಪ್ರತಿಭೆಯ ಕಣ್ಣಿನಿಂದ ಕಾಣಬೇಕಾದ; ವೈಯಕ್ತಿಕ ಚಾಪಲ್ಯ ಹತ್ತಿರ ಸುಳಿಯದಂತೆ ಸಾಕ್ಷೀಪ್ರಜ್ಞೆಯಿಂದ ಇಡೀ ಕಥಾನಕವನ್ನು ಒಂದು ಶಿಲ್ಪವಾಗಿ ಕಾಣಬೇಕಾದ ಎರಡು ದೃಷ್ಟಿಗಳಿಂದಲೂ ಈ ಕಥಾನಕ ಯಶಸ್ವಿಯಾಗಲಿಲ್ಲ. ಎನ್ನುವುದು ಅವರ ನಿಲುವು.[೩೧]

ಆದರೆ ಗಳಗನಾಥರ ಮತ್ತು ವೆಂಕಟಾಚಾರ್ಯರ ಕೃತಿಗಳ ಚಾರಿತ್ರಿಕ ಮಹತ್ವವನ್ನು ಕುರ್ತಕೋಟಿಯವರು ಗುರುತಿಸಿದ್ದಾರೆ. ಈ ಕಾದಂಬರಿಗಳು ಚರಿತ್ರೆಯ ಅಧಿಕೃತ ಚಿತ್ರಗಳಲ್ಲ ಎನ್ನುವ ಅವರು ಇತಿಹಾಸ ಸಂಶೋಧನೆಯ ಕೊರತೆಯಿಂದ ವಿಜಯನಗರದ ಜೀವನ ಕ್ರಮವನ್ನು ಊಹಿಸುವುದೂ ಕಠಿಣವಾಗಿತ್ತು. 'ಇದರಿಂದ ಗಳಗನಾಥರು ಸನ್ನಿವೇಶಗಳನ್ನು ಇತಿಹಾಸಕ್ಕೆ ಒಪ್ಪುವಂತೆ ನಿರ್ಮಿಸಲು ಸಮರ್ಥರಾಗಲಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸಾಹಿತ್ಯ ಜಾಗೃತಿ ಮತ್ತು ಜನಜಾಗೃತಿಗಳು ಈ ಕಾದಂಬರಿಗಳ ಸಾಧನೆ ಎಂದೂ ಅವರು ಹೇಳಿದ್ದಾರೆ.೩೨

ಗಳಗನಾಥರ ಕೃತಿಗಳನ್ನು ಕುರಿತು ವಿಶೇಷ ಅಧ್ಯಯನವನ್ನು ನಡೆಸಿದ ಡಾ.ಕೃಷ್ಣಮೂರ್ತಿ ಕಿತ್ತೂರರು:

"ಮುಖ್ಯವಾಗಿ ಗಳಗನಾಥರು ಕಾದಂಬರಿಯನ್ನು ಒಂದು ಕಲೆಯ ರೂಪವೆಂದು ಪರಿಗಣಿಸಲೇ ಇಲ್ಲ. ಈ ಮಾತು ಗಳಗನಾಥರಿಗೆ ಮಾತ್ರ ಪರಿಮಿತವಾಗುವುದಿಲ್ಲ. ಆ ಕಾಲದ ಎಲ್ಲ ಭಾರತಿಯ ಲೇಖಕರಿಗೂ ಅನ್ವಯಿಸುತ್ತದೆ."

ಎಂದು ಹೇಳುತ್ತಾರೆ. ಕಾದಂಬರಿಯು ಅಪರಿಪೂರ್ಣವೂ, ಪ್ರಾಕೃತ ಸ್ವರೂಪದ್ದೂ ಆಗಿದ್ದ ಪರಿಸರದಲ್ಲಿ ಗಳಗನಾಥರು ಕೆಲವು ಸ್ವತಂತ್ರ ಕಾದಂಬರಿಗಳನ್ನು ರಚಿಸಿದ್ದೇ ದೊಡ್ಡ ಮಾತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕಿತ್ತೂರರ ಪ್ರಕಾರ ಗಳಗನಾಥರ ಕಾದಂಬರಿಗಳ ಮಹತ್ವವನ್ನು ಅವು ಕಾದಂಬರಿಯ ಮೊದಲ ಹಂತದಲ್ಲಿ ಬಂದವು ಎನ್ನುವ ವಿನಾಯಿತಿಯೊಂದಿಗೇ ಅರ್ಥಮಾಡಿಕೊಳ್ಳಬೇಕು. ಇಂದಿನ ದೃಷ್ಟಿಯಿಂದ ಅಲ್ಲ.

ಡಾ.ಡಿಆರ್.ನಾಗರಾಜರನ್ನುಳಿದ ವಿಮರ್ಶಕರು ಈ ಕೃತಿಗಳನ್ನು ಒಂದು ಬಗೆಯ ಚಾರಿತ್ರಿಕ ರಿಯಾಯಿತಿಯನ್ನು ತೋರಿ ವಿಮರ್ಶಿಸಬೇಕು. ಎನ್ನುವ ನಿಲುವನ್ನು ತಳೆಯುತ್ತಾರೆ. ಅಂದರೆ ಈ ಅಧ್ಯಾಯದ ಆರಂಭದಲ್ಲಿಯೇ ನಾನು ವಿವರಿಸಿದ 'ಆದರ್ಶ ಮಾದರಿ' ಈ ವಿಮರ್ಶಕರೆಲ್ಲರ ಮುಂದಿರುವ ಆದರ್ಶ ಕಾದಂಬರಿಯಾಗಿದೆ. ಆದರೂ ಈ ಎಲ್ಲ ವಿಮರ್ಶೆಗಳನ್ನು ಗಮನಿಸಿದರೆ ರಾಷ್ಟ್ರೀಯವಾದಿ/ಚಾರಿತ್ರಿಕ ಕಾದಂಬರಿಗಳ ಬಗ್ಗೆ ನಾವು ಕೆಲವು ಸಂಗತಿಗಳನ್ನು ಗಮನಕ್ಕೆ ತಂದುಕೊಳ್ಳಬಹುದಾಗಿದೆ.

೧. ಚಾರಿತ್ರಿಕ/ಐತಿಹಾಸಿಕ ರಮ್ಯ ಕೃತಿಗಳು ಮೊದಲ ಕಾದಂಬರಿಗಳ ಪೈಕಿಹೆಚ್ಚಿನ ಜನಪ್ರಿಯತೆಯನ್ನು ಪಡೆದ ಕಾದಂಬರಿಗಳಾಗಿದ್ದವು.

೨. ಉತ್ತರ ಕರ್ನಾಟಕದ ಬಹುತೇಕ ಕಾದಂಬರಿಗಳು ಐತಿಹಾಸಿಕ ವಸ್ತುವನ್ನು ಒಳಗೊಂಡಿವೆ. ಹೀಗೆ ಐತಿಹಾಸಿಕ ವಿವರಗಳನ್ನು ಬಳಸಿಕೊಂಡಾಗಲೂ ಈ ಕೃತಿಗಳಲ್ಲಿ 'ಇತಿಹಾಸ'ದ ಛಾಯೆ ಮಾತ್ರ ಕಂಡುಬರುತ್ತದೆ. ಉಳಿದಂತೆ ಸಂಪೂರ್ಣ ವಿವರಗಳು 'ಕಲ್ಪಿತ' ವಿವರಗಳೇ ಆಗಿವೆ. ಇದನ್ನೆ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ–

೩. ಈ ಕೃತಿಗಳ ಜನಪ್ರಿಯತೆಗೆ ಇವುಗಳ ರಾಷ್ಟ್ರೀಯವಾದೀ ಉದ್ದೇಶ ಪ್ರಮುಖ ಕಾರಣವಾಗಿದೆ. ಭಾಷಾ ಜಾಗೃತಿ ಮತ್ತು ರಾಷ್ಟ್ರೀಯ ಉದ್ದೇಶಗಳು ಈ ಐತಿಹಾಸಿಕ ಸಾಹಸ ಕಥನಗಳಲ್ಲಿ ಪ್ರಖರವಾಗಿವೆ.

೪. ಕಲ್ಪಿತ ವಿವರಗಳ ರಚನೆಯಾಗಿರುವುದರಿಂದ ಮತ್ತು ರಮ್ಯತೆಯು ಮುಕ್ಯವಾದುದರಿಂದ ಈ ಕೃತಿಗಳಲ್ಲಿ ಒಂದು ಬಗೆಯ ಕೃತ್ರಿಮ ಶೈಲಿಯು ಕಂಡುಬರುತ್ತದೆ.

ಆದುದರಿಂದ ಈ ಪ್ರಾದೇಶಿಕ ವೈಶಿಷ್ಟ್ಯವನ್ನು ನಾವು ವಿವರಿಸಬೇಕಾಗಿದೆ. ಅಲ್ಲದೆ, ಮೇಲೆ ಉಲ್ಲೇಖಿಸಿದ ನಾಲ್ಕು ಮುಖ್ಯ ಅಂಶಗಳನ್ನೂ ವಿವರಿಸುವುದು ಅಗತ್ಯ.

ಇಂದಿರಾ ಕಾದಂಬರಿಯನ್ನುಳಿದು ಇತರ ಕೃತಿಗಳು ತಮ್ಮ ಐತಿಹಾಸಿಕ ವಸ್ತುಗಳಿಂದಲೇ ವಾಸ್ತವಕ್ಕೆ ಭಿನ್ನವಾದ ನೆಲೆಯನ್ನು ಸೂಚಿಸುತ್ತವೆ. ಸಮಕಾಲೀನ ವಾಸ್ತವದಿಂದ ಬೇರೆಯೇ ಎನ್ನಬಹುದಾದ ಸಾಮಗ್ರಿ ಈ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಹಿಂದಿನ ಭಾಗದಲ್ಲಿ (೨, ೩) ವಿವರಿಸಿರುವಂತೆ ದಕ್ಷಿಣ ಕನ್ನಡದ ಸಾಮಾಜಿಕ ಕಾದಂಬರಿಗಳ ಕಚ್ಚಾ ಸಾಮಗ್ರಿ ಸಮಕಾಲೀನ ವಾಸ್ತವವೇ. ಆದರೆ ಗಳಗನಾಥರ ಕೆರೂರರ ಕಾದಂಬರಿಗಳಲ್ಲಿ ಗತವೈಭವದ ಚಿತ್ರಣವೇ ಪ್ರಧಾನ.

ಅಧ್ಯಾಯ - ೨

ಕಾದಂಬರಿಗಳ ಔಚಿತ್ಯ ಮತ್ತು ಚರಿತ್ರೆ

ಕಾದಂಬರಿ ಎನ್ನುವುದು ಬಹುವಿಧದ ಸಂಗತಿಗಳನ್ನು ಒಂದು ನಿರ್ದಿಷ್ಟವಾದ ಚೌಕಟ್ಟಿಗೆ ತರುತ್ತದೆ. ಅದರಲ್ಲಿ ವಿವಿಧ ರೀತಿಯ ಸಂಘರ್ಷಗಳು ಇರುತ್ತವೆ. ಕಾದಂಬರಿಯಲ್ಲಿ ಬಹುತ್ವವವು ಇರುತ್ತದೆ. ಕಾದಂಬರಿಯಲ್ಲಿ ಬರುವ ಅನೇಕತೆಯು ಅನೇಕ ಧ್ವನಿಗಳನ್ನು ಹೇಳುತ್ತದೆ. ಅದರಲ್ಲಿ ಒಂದು ನಿರ್ದಿಷ್ಟವಾದ ರೀತಿಯು ಇರಬೇಕೆಂದು ಭಾವಿಸಬೇಕಾಗಿಲ್ಲ. ಕಾದಂಬರಿಯಲ್ಲಿ ಒಂದು ಏಕತೆಯು ಇರುತ್ತದೆ ಎನ್ನುವುದು ನಿಜ. ಅದರ ಆಂತರಿಕವಾದ ರೂಪವೇ ಈ ಏಕತೆಗೆ ಕಾರಣವಾಗುತ್ತದೆ. ಮತ್ತೊಂದು ಅಂಶವನ್ನು ನಾವು ಇಲ್ಲಿ ಗಮನಿಸಬೇಕು: ಕಾದಂಬರಿಯಲ್ಲಿ ಬರುವ ಆಶಯವು ಅನೇಕವನ್ನು ಸಂಯೋಜನೆ ಮಾಡುತ್ತದೆ. ಅಮೂರ್ತವಾದ್ದು ಮತ್ತು ಮೂರ್ತವಾದ್ದು ಜೊತೆಗೆ ಸೇರುವುದೂ ಇದೆ. ನಾವು ಅದನ್ನು ಅರ್ಥ ಮಾಡಿಕೊಳ್ಳಬೇಕು. ಕಾದಂಬರಿಕಾರನು ಒಂದು ವಸ್ತುವನ್ನು ಹೇಗೆ ಗ್ರಹಿಸುತ್ತಾನೆ ಎನ್ನುವುದರ ಆಧಾರದ ಮೇಲೆ ಕಾದಂಬರಿಯು ರಚನೆಯಾಗುತ್ತದೆ. ಚರಿತ್ರೆಯಲ್ಲಿ ಕಾದಂಬರಿಗೆ ಅದರದೇ ಆದ ಒಂದು ಜಾಗವು ಇದೆ. ಈ ಜಾಗ ಅತ್ಯಂತ ಮುಖ್ಯವಾದ್ದು. ಅದು ಅನೇಕ ಅವಕಾಶಗಳನ್ನು ಭರ್ತಿ ಮಾಡಿದೆ. ಕಾದಂಬರಿಯ ಆಶಯ ಎನ್ನುವುದು ನಮಗೆ ಅತ್ಯಂತ ಮುಖ್ಯವಾಗುವುದೂ ಇದೇ ಕಾರಣದಿಂದ. ವಸ್ತು ಮತ್ತು ರೂಪ ಎರಡೂ ಜೊತೆಗೆ ಇರುತ್ತವೆ. ಅದನ್ನು ನಾವು ಬೇರೆ ಮಾಡಬೇಕಾದ ಅಗತ್ಯವಿಲ್ಲ. ಕಾದಂಬರಿಯು ಈ ದೃಷ್ಟಿಯಿಂದ ಆಶಯ ಮತ್ತು ರೂಪಗಳ ಸಂಯೋಜನೆಯೂ ಆಗಿರುತ್ತದೆ. ಯಾವುದು ವಾಸ್ತವವಾಗಿದೆಯೋ ಅದು ಮಾತ್ರವೇ ಸಾಹಿತ್ಯದ ಆಶಯವು ಆಗಿರಬೇಕಾಗಿಲ್ಲ. ಆದರೆ ಅದು ಒಂದು ಮಾರ್ಗವಾಗಬಹುದು. ಲುಕಾಕ್ಸ್ ಆಲೋಚನೆ ಮತ್ತು ವಸ್ತುಗಳ ಸಂಬಂಧ ಎಂದು ಹೇಳುತ್ತಾನೆ. ಹಾಗೆ ನೋಡಿದರೆ ಇವುಗಳ ಮಧ್ಯೆ ಒಂದು ಖಾಲಿಯಾದ ಅವಕಾಶ ಎಂದು ಇರುವುದಿಲ್ಲ. ಲೇಖಕ ಮತ್ತು ಅವನ ವಿವೇಕವು ಕಾದಂಬರಿಯ ಮೂಲಕ ಓದುಗನಿಗೆ ತಲುಪುತ್ತದೆ. ಲೇಖಕನು ಇದನ್ನು ತನ್ನ ಪ್ರಜ್ಞೆಯ ಮೂಲಕವೇ

ಬರೆಯುತ್ತಾನೆ. ವಿವೇಕಕ್ಕೆ ಮತ್ತು ಸಾಹಿತ್ಯದ ರೂಪಗಳಿಗೆ ಒಂದು ಸಂಬಂಧವು ಇದೆ. ವಿವೇಕವೇ ಸಾಹಿತ್ಯದಲ್ಲಿ ರೂಪದ ನಿರ್ಧಾರವನ್ನು ಮಾಡುತ್ತದೆ. ಅದು ಒಂದು ಕೆಲಸವೂ ಹೌದು. ಕಾದಂಬರಿ ಎನ್ನುವುದು ಮನುಷ್ಯನ ಕೆಲಸವು ಅಲ್ಲ ಎಂದು ತಿಳಿಯಬಾರದು. ಒಬ್ಬ ಒಳ್ಳೆಯ ಕಾದಂಬರಿಕಾರನು ನಿಜವಾದ ಜೀವನವನ್ನು ತನ್ನ ಕಾದಂಬರಿಯಲ್ಲಿ ವಿವರಿಸಲು ಯತ್ನವನ್ನು ಮಾಡುತ್ತಾನೆ. ವಾಸ್ತವವನ್ನು ನಿರೂಪಿಸುತ್ತಾನೆ. ಈ ನಿರೂಪಣೆಯು ಕಾದಂಬರಿಯ ಆಶಯಕ್ಕೆ ಅನುಗುಣವಾಗಿಯೂ ಇರುತ್ತದೆ.

ಯಾವುದೇ ಅತ್ಯುತ್ತಮ ಕಾದಂಬರಿಯು ಸಮಾಜದ ಅನೇಕ ಸಂಗತಿಗಳನ್ನು ಹೇಳುತ್ತದೆ. ಅದು ಹೆಚ್ಚು ವಸ್ತು ನಿಷ್ಠವೂ ಆಗಿರುತ್ತದೆ. ಆದ್ದರಿಂದ ಅದರ ಆಯಾಮವು ಬೇರೆ. ಕಾದಂಬರಿಯ ನಾಯಕನು ಅನೇಕವನ್ನು ಜೀವನದಲ್ಲಿ ಕಲಿಯುತ್ತಾನೆ. ಬಳೆಯುತ್ತಾನೆ. ಆದ್ದರಿಂದ ವಾಸ್ತವಕ್ಕೆ ಕಾದಂಬರಿಯಲ್ಲಿ ಒಂದು ಬೆಲೆಯು ಇದೆ. ಕಾದಂಬರಿಯಲ್ಲಿ ಬರುವ ಅನೇಕ ಪಾತ್ರಗಳು ಹೆಚ್ಚು ಪ್ರಬುದ್ಧವಾಗಿರುತ್ತವೆ. ಅವುಗಳ ಚಿಂತನೆಗೆ ಮತ್ತು ಆಧುನಿಕ ಜೀವನದ ಕ್ರಮಕ್ಕೆ ಒಂದು ಸಂಬಂಧವು ಇದೆ. ಯಾವುದನ್ನು ನಾವು ಆಧುನಿಕವಾದ ಚಿಂತನೆ ಎಂದು ಹೇಳುತ್ತೇವೆಯೋ ಅದರ ರೂಪುಗೊಂಡದ್ದು ಪುನರುಜ್ಜೀವನದ ತರುವಾಯ ಎಂದು ಅರ್ಥ ಮಾಡಿಕೊಳ್ಳಬೇಕು. ಅದು ಹೊಸದಾದ ಜ್ಞಾನ ಮತ್ತು ಅದರ ಪ್ರಕ್ರಿಯೆಯನ್ನು ಹೇಳುತ್ತದೆ. ಆಧುನಿಕ ಜೀವನದ ಕ್ರಮವು ಹಿಂದೆ ಇದ್ದ ಜೀವನದ ಕ್ರಮದಂತೆ ಇಲ್ಲ ಎಂದು ಎಲ್ಲರಿಗೂ ಗೊತ್ತು.' ಆಧುನಿಕ ಜ್ಞಾನ ಮತ್ತು ಬದಲಾಗುತ್ತಿರುವ ವಾಸ್ತವ ಎರಡೂ ಕಾದಂಬರಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ಆದ್ದರಿಂದ ಇದು ಕಾದಂಬರಿಯ ಸಾಧ್ಯತೆಯೂ ಆಗುತ್ತದೆ. ದುರಂತ ನಾಟಕಗಳಲ್ಲಿ ನಾಯಕ ಮತ್ತು ವಿಧಿಯ ಪ್ರಶ್ನೆಯು ಮುಖ್ಯ. ಕಾದಂಬರಿಯಲ್ಲಿ ಈ ಪ್ರಶ್ನೆಗಳು ಮುಖ್ಯವಲ್ಲ. ಆದ್ದರಿಂದ ಎರಡೂ ಪ್ರಕಾರ ಮತ್ತು ಅದರ ಸಾಧ್ಯತೆಯು ಬೇರೆಯಾಗುತ್ತದೆ. ದುರಂತದಲ್ಲಿ ಜೀವನ ಮತ್ತು ಅದರ ಸಮಸ್ಯೆಗಳಿಂತ ಹೆಚ್ಚಾಗಿ ಆತ್ಮ ಮತ್ತು ಲೋಕದ ಸಂಬಂಧವು ಮುಖ್ಯ. ಕಾದಂಬರಿಯು ಇದನ್ನು ಎತ್ತುವುದಿಲ್ಲ. ಅದು ಬೇರೆ ನಿರೂಪಣೆಯನ್ನು ಹೊಂದಬೇಕಾಗುತ್ತದೆ. ಒಂದು ಅರ್ಥದಲ್ಲಿ ನಾಟಕದ ನಾಯಕನು ತನ್ನನ್ನು ತಾನೇ ಸ್ವಯಂಪ್ರಕಟ ಮಾಡಬೇಕಾದ ಅಗತ್ಯವು ಇಲ್ಲ. ಅದು ನಾಟಕದೊಳಗೆ ಸಿದ್ಧವಾಗುತ್ತದೆ. ನಾಟಕದ ಅನೇಕ ಘಟನೆಗಳು ಅವನ ಪಾತ್ರ ಮತ್ತು ಅವನ ಗುಣವನ್ನು ಹೇಳುತ್ತವೆ. ಕಾದಂಬರಿಯು ಅತ್ಯಂತ ಮುಖ್ಯವಾಗಿ ಲೇಖಕ ಮತ್ತು ಅವರ ಅನುಭವ ಹಾಗೂ ಅವನ ಮನಸ್ಸನ್ನು ಹೇಳುತ್ತದೆ. ದುರಂತ ನಾಟಕಗಳಲ್ಲಿ ಅವನು ಅತ್ಯಂತ ತೀವ್ರವಾದ ಪರೀಕ್ಷೆಗೆ ಗುರಿಯಾಗುತ್ತಾನೆ. ಅದರ ಮೂಲಕ ಅವನು ತನ್ನ ಘನತೆಯನ್ನು ಉಳಿಸಿಕೊಳ್ಳುತ್ತಾನೆ. ಅದಕ್ಕೆ ತಕ್ಕದಾದ ಘಟನೆಗಳು ನಡೆಯುತ್ತವೆ. ಆದರೆ ದುರಂತ ನಾಟಕದ ನಾಯಕನ ಹೋರಾಟ ಮತ್ತು ಅವನ ಸಾಧನೆಯು ಕೇವಲ ಒಂದು ದೃಷ್ಟಿಯನ್ನು ಹೊಂದಿರುವುದಿಲ್ಲ., ಕಾದಂಬರಿಯು ಈ ದೃಷ್ಟಿಯಿಂದ ಒಂದು ಸಾಮಾನ್ಯವಾದ ಜೀವನದ ಕಥನವನ್ನು ಮಾತ್ರವೇ ಹೇಳುತ್ತದೆ. ಅವನು ಲೋಕದ ಜೊತೆಗೆ ಇಟ್ಟುಕೊಳ್ಳುವ ಸಂಬಂಧ ಸಾಮಾಜಿಕವದ್ದು ಕೂಡಾ ಹೌದು. ಆದ್ದರಿಂದ ಇಲ್ಲಿ ಭಿನ್ನತೆಗಳು ಇರುತ್ತವೆ. ಕಾದಂಬರಿಯಲ್ಲಿ ದೇವರು, ದೈವ ಮುಂತಾದವುಗಳು ಅಷ್ಟು ಮುಖ್ಯವಲ್ಲ. ಕಾದಂಬರಿಗಳಲ್ಲಿ ಅದರ ಸುದ್ದಿಯು

ಬರುವುದಿಲ್ಲ ಎಂದು ಅರ್ಥವಲ್ಲ. ಕಾದಂಬರಿಯಲ್ಲಿ ಬರುವ ಆದರ್ಶ ಮತ್ತು ಅದರ ಜೊತೆಗೆ ಇರುವ ಆಲೋಚನೆಗೆ ಒಂದು ಸಂಬಂಧವು ಇದೆ. ಕಾದಂಬರಿಕಾರನು ಯಾವುದನ್ನು ಆಲೋಚನೆ ಮಾಡುತ್ತಾನೆಯೋ ಅದು ಕೃತಿಯ ರೂಪದಲ್ಲಿ ಬರುತ್ತದೆ. ಅವನಿಗೆ ವಾಸ್ತವ ಮತ್ತು ಅದರ ಗ್ರಹಿಕೆಯೂ ಅತ್ಯಂತ ಮುಖ್ಯವಾಗುತ್ತದೆ. ವಾಸ್ತವ ಮತ್ತು ಆಲೋಚನೆಯ ಮಧ್ಯದಲ್ಲಿ ಒಂದು ಅಂತರವು ಇದೆ ಎನ್ನುವುದು ಖಚಿತ. ಯಾವುದನ್ನು ನಾವು ಆಲೋಚನೆ ಎಂದು ಹೇಳುತ್ತೇವೆಯೋ ಅದು ಮನೋಸ್ಥಿತಿಯನ್ನು ಹೇಳುತ್ತದೆ. ಪುರಾಣ ಕೇಂದ್ರಿತ ಕಾದಂಬರಿ ಮತ್ತು ಪುರಾಣಗಳಲ್ಲಿ ಬರುವ ನಾಯಕರಿಗೆ ಅವರದೇ ಒಂದು ಶಕ್ತಿಯು ಇದೆ. ಆದರೆ ಅಷ್ಟು ಮಾತ್ರವೇ ಸಾಕಾಗುವುದಿಲ್ಲ. ಮಹಾಭಾರತದಲ್ಲಿ ಅರ್ಜುನನಿಗೆ ಸಹಾಯವನ್ನು ಮಾಡುವವನು ಕೃಷ್ಣ ದೇವರ ಮಾರ್ಗದರ್ಶನ ಎನ್ನುವುದು ಇಲ್ಲಿ ಮುಖ್ಯ. ಮನುಷ್ಯನ ಶಕ್ತಿ ಮತ್ತು ದೇವರ ಕೃಪೆ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ದೇವರು ಕೂಡಾ ನಾಯಕನ ಪರವಾಗಿ ಇರುತ್ತಾನೆ ಎಂದರೆ ಅದರಲ್ಲಿ ಒಂದು ಅರ್ಥವಿದೆ. ಅವನು ಖಳನಾಯಕನನ್ನು ಸಮರ್ಥನೆ ಮಾಡಲು ಆಗುವುದಿಲ್ಲ. ನಾಯಕ ಮತ್ತು ಅವನ ಜಯವು ಈ ದೃಷ್ಟಿಯಿಂದ ಭಿನ್ನವಾಗುತ್ತದೆ. ಆದರೆ ಇದರ ಅರ್ಥ ಅತ್ಯಂತ ಸರಳೀಕರಣವು ಮಾತ್ರವೇ ಕಾದಂಬರಿಯಲ್ಲಿ ಕಾಣುತ್ತದೆ ಎಂದು ಭಾವಿಸಬಾರದು. ನಾಯಕನಿಗೂ ಸೋಲು ಮತ್ತು ಗೆಲುವು ಬೇರೆ ಬೇರೆ ಕಾರಣದಿಂದ ಬರುತ್ತದೆ. ಆದರೂ ಆಧುನಿಕ ಕಾದಂಬರಿಗಳಲ್ಲಿ ನಾಯಕ ಮತ್ತು ಅವನ ಅಸ್ತಿತ್ವವು ಬೇರೆ ಥರ ಇರುತ್ತದೆ. ಕಾದಂಬರಿಯಲ್ಲಿ ನಾಯಕನೂ ತನ್ನದೇ ಆದ ಒಂದು ಚಟುಚಟಿಕೆಯನ್ನು ಹೊಂದಿರುತ್ತಾನೆ. ಅವನಿಗೂ ವಿವಿಧ ಮಾದರಿಯ ಕೆಲಸಗಳು ಇರುತ್ತವೆ ಹಾಗೆಯೇ ಅವನು ತನ್ನ ಅಸ್ತಿತ್ವವನ್ನು ಹಾಗೂ ತನ್ನ ಜೀವನವನ್ನು ತಾನೇ ನಿರೂಪಿಸುತ್ತಾನೆ. ಅದು ಅತ್ಯಂತ ಸಾಮಾನ್ಯವಾದ ಒಂದು ಜೀವನದ ಕ್ರಮವೂ ಹೌದು.

ಆಧುನಿಕ ಕಾದಂಬರಿಗಳ ನಾಯಕರು ಮಾಡುವ ಕೆಲಸಕ್ಕೆ ಒಂದು ಉದ್ದೇಶವು ಇರುತ್ತದೆ. ಅದನ್ನು ನಾವು ಸಾಮಾಜಿಕ ಉದ್ದೇಶವೆಂದು ಹೇಳಬಹುದು. ನಾಯಕರು ಮತ್ತು ಅವರ ಕೆಲಸವು ಸ್ಫೂರ್ತಿಯಿಂದ ಬರಬಹುದು , ಇಲ್ಲವೇ ಅದು ತಾತ್ವಿಕವೂ ಆಗಬಹುದು. ಜೀವನ ಮತ್ತು ಅದರ ಕ್ರಿಯೆಗೆ ಒಂದು ಅರ್ಥವು ಇರುತ್ತದೆ ಎನ್ನುವುದನ್ನು ಅನೇಕ ಕಾದಂಬರಿಗಳು ಹೇಳುತ್ತವೆ. ಕಾದಂಬರಿಗಳು ಹುಟ್ಟಿದಾಗ ಅದರ ಹಿಂದೆ ಕ್ರಿಶ್ಚಿಯನ್ ತಾತ್ವಿಕತೆಯೂ ಇತ್ತು. ಆದ್ದರಿಂದ ಅಲ್ಲಿನ ಕಾದಂಬರಿಗಳಲ್ಲಿ ಅತ್ಯಂತ ಸರಳವಾದ ಒಂದು ಚಿತ್ರವೂ ಕಾಣುತ್ತದೆ. ಅದರಲ್ಲಿ ದೇವರ ಕಲ್ಪನೆಯೂ ಸೇರುತ್ತದೆ. ಆದ್ದರಿಂದಲೇ ಅಲ್ಲನ ಅನೇಕ ಕಾದಂಬರಿಗಳಲ್ಲಿ ಆತ್ಮ ಮತ್ತು ದೇಹ ಎನ್ನುವುದು ಕೂಡಾ ಇಂಥಾ ಪರಿಕಲ್ಪನೆಯನ್ನು ಹೇಳುತ್ತದೆ. ಮನುಷ್ಯ ಮತ್ತು ಅವನ ಆತ್ಮ, ದೇವರು ಹಾಗೂ ಅವನ ಶಕ್ತಿ , ಮನುಷ್ಯರ ಮತ್ತು ಖಳರ ಮಧ್ಯೆ ಉಂಟಾಗುವ ಸಂಘರ್ಷಗಳು ಅತ್ಯಂತ ಅರ್ಥ ಪೂರ್ಣವಾದವು . ಆದರೆ ಆ ಬಗೆಯ ಕಾದಂಬರಿಗಳಲ್ಲಿ ಬಂದುದು ಕ್ರಿಶ್ಚಿಯನ್ ದೇವರು. ಆದ್ದರಿಂದ ಕರುಣಾಳುವಾದ ದೇವರನ್ನು ಮನುಷ್ಯರು ಪೂಜಿಸುತ್ತಾರೆ. ಇದು ದೇವರ ಪೂಜೆ. ಭೂತ ಮತ್ತು ದೆವ್ವಗಳು ಇಲ್ಲಿ ಆರಾಧನೆಗೆ ಗುರಿಯಾಗುವುದಿಲ್ಲ. ದೇವರನ್ನು ಬಿಟ್ಟರೆ ಈ ಜಗತ್ತಿನಲ್ಲಿ ಮನುಷ್ಯ ಒಂಟಿಯೂ ಹೌದು. ಮನುಷ್ಯ ದೇವರನ್ನು ಬಿಟ್ಟರೆ ಒಂಟಿಯೂ ಆಗಿರುತ್ತಾನೆ. ದೇವರು ಸರ್ವಶಕ್ತ ಎನ್ನುವುದೂ

ಕ್ರಿಶ್ಚಿಯಾನಿಟಿಯ ಮಹತ್ವದ ನಂಬಿಕೆ. ದೇವರು ಈ ಲೋಕವನ್ನು ಸೃಷ್ಟಿ ಮಾಡಿದ್ದಾನೆ. ಕರುಣಾಳುವಾದ ದೇವರಿಗೆ ನಾವು ಸೇವಕರಾಗುದ್ದೇವೆ. ಇದು ಅಲ್ಲಿನ ಮಹತ್ವದ ಪ್ರಶ್ನೆಯು ಆದರೆ ಇದರ ಜೊತೆಗೆ ಇನ್ನೂ ಒಂದು ಸಮಸ್ಯೆ ಇದೆ. ನಾಯಕನು ಅತ್ಯಂತ ಒಳ್ಳೆಯ ಗುಣದವನು ಆಗಿರಬೇಕಾಗುತ್ತದೆ. ಅವನು ತನ್ನ ಗುಣವನ್ನು ಆಧುನಿಕ ಸಮಾಜಕ್ಕೆ ಬೇಕಾದಂತೆ ರೂಢಿಗೊಳಿಸುತ್ತಾನೆ. ಅದು ನಾಗರಿಕ ಸಮಾಜದ ಅಗತ್ಯವೂ ಹೌದು. ಆದ್ದರಿಂದ ಇದರಲ್ಲಿ ಹೊಸದಾದ ದೃಷ್ಟಿಕೋನವೂ ಇರುತ್ತದೆ. ಹಾಗೆ ನೋಡಿದರೆ ಮೌಲ್ಯಗಳು ಬದಲಾಗುತ್ತವೆ. ಅದಕ್ಕೆ ಅನುಸಾರವಾಗಿ ಜೀವನ ಮತ್ತು ಅದರ ದೃಷ್ಟಿಕೋನಗಳು ವ್ಯತ್ಯಾಸವಾಗುತ್ತದೆ. ನಾಗರಿಕ ಮತ್ತು ಸಭ್ಯರು ಈ ಮೌಲ್ಯಗಳನ್ನು ಅನುಸರಿಸುತ್ತಾರೆ. ಅವನ ವ್ಯಕ್ತಿತ್ವಕ್ಕೆ ಒಂದು ಅಧಿಕೃತತೆಯು ಇದೆ. ಇದನ್ನು ಕುವೆಂಪು ಕಾದಂಬರಿಗಳಲ್ಲಿ ನಾವು ಕಾಣುತ್ತೇವೆ. ಯಾವುದೇ ಮಹತ್ವದ ಕಾದಂಬರಿಗಳಲ್ಲಿ ನಾವು ಗದ್ಯ ಮತ್ತು ನಾಟಕದ ಒಂದು ಮಿಶ್ರಣವನ್ನು ನಾವು ಕಾಣುತ್ತೇವೆ. ಹಾಗೆಯೇ ಮನುಷ್ಯನ ಘನತೆ ಮತ್ತು ಅವನು ಹೇಗೆ ತನ್ನ ವ್ಯಕ್ತಿತ್ವದಲ್ಲಿ ಔನತ್ಯವನ್ನು ಸಾಧಿಸಬೇಕು ಎನ್ನುವುದನ್ನು ಇದು ಹೇಳುತ್ತದೆ.ಆದ್ದರಿಂದ ಸಹಜವಾಗಿಯೇ ಕುವೆಂಪು ಕಾದಂಬರಿಗಳಲ್ಲಿ ಈ ಅಂಶಗಳನ್ನು ನಾವು ಕಾಣುತ್ತೇವೆ. ಒಂದು ಮಹಾಕಾವ್ಯಕ್ಕೆ ಇರುವ ವಿಶಾಲತೆಯೂ ಕುವೆಂಪು ಕಾದಂಬರಿಗಳಲ್ಲಿ ನಾವು ಕಾಣುತ್ತೇವೆ. ಅದರ ಜತೆಗೆ ಈ ಕಾದಂಬರಿಗಳು ನಮಗೆ ಅತ್ಯಂತ ಮಹತ್ವದ ಕಲಾಕೃತಿಯೂ ಆಗಿದೆ. ಸಮಾಜ ಮತ್ತು ಅದರ ಘರ್ಷಣೆಗಳು ಹೇಗೆ ಇರುತ್ತವೆ ಎಂದು ಕುವೆಂಪು ಬಹಳ ಚೆನ್ನಾಗಿ, ನಮ್ಮ ಮನಸ್ಸಿಗೆ ತಟ್ಟುವಂತೆ ಹೇಳಿದ್ದಾರೆ. ಕಾದಂಬರಿಯಲ್ಲಿ ಬರುವ ಸಮಾಜದ ಚಲನೆಯು ಕೂಡಾ ಅತ್ಯಂತ ಮುಖ್ಯವಾಗಿದೆ. ಒಂದು ಅಂಶವನ್ನು ನಾವು ಇಲ್ಲಿ ಗಮನಿಸಬೇಕು– ಈವತ್ತು ನಾವು ಹೆಚ್ಚು ಬರೆಯುವುದು ಗದ್ಯದಲ್ಲಿ. ಗದ್ಯ ಎನ್ನುವುದು ಈವತ್ತು ಅತ್ಯಂತ ಮುಖ್ಯವಾದ ಒಂದು ಪರಿಕರವೂ ಹೌದು. ಪದ್ಯವನ್ನು ಕೇಳುವುದು ಎನ್ನುವುದರ ಬದಲಿಗೆ ಈವತ್ತು ಪದ್ಯವನ್ನು ಓದುವುದು ಎಂದು ಹೇಳುತ್ತೇವೆ. ಜರ್ಮನಿಯು ಆದರ್ಶವಾದವು ಕಲೆಯನ್ನು ನೋಡಿದ್ದು ಮತ್ತು ಅದನ್ನು ಸ್ವೀಕಾರ ಮಾಡಿದ್ದು ಬೇರೆ ಕ್ರಮದಲ್ಲಿ. ಅದು ಸ್ವಲ್ಪ ಅಮೂರ್ತವಾದನ್ನು ಹೇಳಳು ಯತ್ನ ಮಾಡಿದ್ದು ಗಮನಾರ್ಹ.ಆದರೆ ಅದು ಮೂರ್ತ ಮತ್ತು ಅಮೂರ್ತಗಳ ನಡುವಣ ಸಂಬಂಧವನ್ನು ಹೇಳುತ್ತದೆ. ಜೀವನ ಎನ್ನುವುದು ಅತ್ಯಂತ ಸ್ಪಷ್ಟವಾಗಿದೆ ಎಂದು ಹೇಳುವುದು ಸಾಧ್ಯವಿಲ್ಲ. ಅದು ರೂಪುಗೊಳ್ಳುತ್ತದೆ. ಹೋರಾಟ ಮತ್ತು ಗೆಲುವು ಇಲ್ಲವೇ ಹೋರಾಟ ಮತ್ತು ಸೋಲು ಇರುತ್ತದೆ. ಯಾವ ಮನುಷ್ಯನು ಜೀವನ ಮತ್ತು ಅದರ ಹೋರಾಟದಲ್ಲಿ ಸೋಲುತ್ತಾನೆಯೋ ಅವನ ಪರಿಸ್ಥಿತಿಯು ಒಂದು ಥರ ಇರುತ್ತದೆ. ಅದರಲ್ಲಿ ವಿಷಯ ಮತ್ತು ವಸ್ತುನಿಷ್ಠತೆಯು ಕೆಲವು ವಿಭಜನೆಗಳನ್ನು ಮಾಡುತ್ತವೆ. ನಾಟಕಗಳಲ್ಲಿ ಇದು ಹೆಚ್ಚು ಖಚಿತವಾಗಿ ಬರುತ್ತದೆ. ವಾಸ್ತವ ಎನ್ನುವುದು ನಮ್ಮ ಜೀವನವನ್ನು ಹೇಗೆ ನಿರ್ದೇಶನ ಮಾಡುತ್ತದೆ ಎನ್ನುವುದೂ ಅದರಲ್ಲಿ ಒಂದು ಪ್ರಶ್ನೆ. ಇಲ್ಲಿ ಇದಕ್ಕೆ ಸಂಬಂಧ ಪಟ್ಟ ಮತ್ತೊಂದು ವಿಚಾರವನ್ನು ಹೇಳಬೇಕು. ದುರಂತ ನಾಟಕಗಳಲ್ಲಿ ವ್ಯಕ್ತಿ ಮತ್ತು ಅವನ ಮನೋಸ್ಥಿತಿಯು ದುರಂತದ ನಾಟಕಗಳಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. ಈ ದೃಷ್ಟಿಯಲ್ಲಿ ಮಹಾಕಾವ್ಯ ಮತ್ತು ಅದರ ಸ್ವರೂಪವು ಬೇರೆಯಾಗುತ್ತದೆ. ಒಂದು ಹಂತದಲ್ಲಿ

ಮಹಾಕಾವ್ಯ ಮತ್ತು ಕಾದಂಬರಿಗಳಿಗೆ ಅತ್ಯಂತ ಹತ್ತಿರದ ಸಂಬಂಧವೂ ಉಂಟಾಯಿತು. ಮಹಾಕಾವ್ಯ ಮತ್ತು ಅದರ ಕಲ್ಪನೆಯು ಬೇರೆಯಾಗಿದೆ. ಅದರಲ್ಲಿ ಔನ್ನತ್ಯದ ಪ್ರಶ್ನೆಯು ಹೆಚ್ಚು ಮುಖ್ಯವಾಗುತ್ತದೆ. ಆದರೆ ಔನ್ನತ್ಯ ಎನ್ನುವುದು ಬೃಹತ್ ಪ್ರತಿಮೆಯ ಶಕ್ತಿಯೂ ಆಗಿದೆ. ಈವತ್ತು ಅದನ್ನು ನಾವು ಅಮೂರ್ತವನ್ನು ಹೇಳುವ ವಿಧಾನ ಎಂದು ಕರೆಯುತ್ತೇವೆ. ನಮಗೆ ಇದನ್ನು ಇನ್ನೊಂದು ದೃಷ್ಟಾಂತದ ಮೂಲಕವೂ ಹೇಳಲು ಸಾಧ್ಯವಿದೆ. ಈ ದೃಷ್ಟಾಂತವನ್ನು ಕುವೆಂಪು ಮತ್ತು ಜಿ.ಎಸ್.ಎಸ್ ಹೇಳಿದ್ದಾರೆ. ಒಂದು ಪಂಪ ಭಾರತದಲ್ಲಿ ಬರುವ ವೈಶಂಪಾಯನ ಸರೋವರ.(ಕುವೆಂಪು) ಇನ್ನೊಂದು ದ್ರೌಪದಿಯ ಶ್ರೀಮುಡಿ. ಈ ವರ್ಣನೆಯನ್ನು ನೋಡಿದರೆ ನಮಗೆ ಇದು ಹಾಸ್ಯದ (ಕಾಮಿಕ್ ಶೈಲಿ) ಎಂದು ಅನಿಸುವುದಿಲ್ಲ.

ಕಾದಂಬರಿ ಮತ್ತು ದುರಂತ ನಾಟಕ ಎರಡರಲ್ಲಿಯೂ ಮನುಷ್ಯ ಮತ್ತು ಬಾಹ್ಯದ ಸಂಬಂಧಗಳ ವಿಶಿಷ್ಟವಾದ ಸಂಯೋಗವು ಇದೆ. ಅದು ಅತ್ಯಂತ ಮುಖ್ಯವೂ ಹೌದು. ಮಹಾಕಾವ್ಯದಲ್ಲಿ ಮನುಷ್ಯ ಮತ್ತು ಸಂಸ್ಕೃತಿಯ ಸಂಬಂಧಕ್ಕೆ ಅತ್ಯಂತ ಭಿನ್ನವಾದ ಒಂದು ಸಂಬಂಧವು ಇದೆ ಎನ್ನುವುದು ಇಲ್ಲಿ ಉಲ್ಲೇಖನೀಯ. ವಾಸ್ತವವಾಗಿ ನಾವು ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಮನುಷ್ಯನಾಗಿ ನಾಯಕನು ಎದುರಿಸುವ ಸಮಸ್ಯೆಗೆ ಅರ್ಥವಿದೆ. ಅವನಿಗೆ ಒಂದು ಮೌಲ್ಯವಿದೆ. ಅವನದು ಅತ್ಯಂತ ಕೆಟ್ಟದಾದ ಒಂದು ಮೌಲ್ಯ ಎಂದು ತಿಳಿಯಬೇಕಾದ ಅಗತ್ಯವೂ ಇಲ್ಲ. ಅವನಿಗೆ ಒಂದು ಗುರಿಯಿದೆ, ಅದು ಅವನ ಮಾನಸಿಕವಾದ ಒಂದು ರಚನೆಯೂ ಹೌದು. ಇದನ್ನು ನಾವು ಪಂಪನಲ್ಲಿ ಕಾಣುತ್ತೇವೆ. ನಾಯಕ ಸೂಳೆಗೇರಿಯಲ್ಲಿ ಹೋಗುವಾಗ ಅವನ ಗ್ರಹಿಕೆಯು ಒಂದೇ ರೀತಿಯಲ್ಲಿ ಇಲ್ಲ. ವೇಶ್ಯೆಯರು ಹಿಂದಿನ ದಿನ ಏನು ನಡೆದಿದೆಯೋ ಅದನ್ನು ಅವರು ಹೇಳುತ್ತಾರೆ. ಅದನ್ನು ಅರ್ಜುನ ಕೇಳಿಸಿಕೊಳ್ಳುತ್ತಾನೆ. ಇದು ಒಂದು ಬಗೆಯದು ಆದರೆ ಮತ್ತೊಂದು ಬಗೆಯನ್ನು ನಾವು ಕುವೆಂಪು ಕಾದಂಬರಿಯಲ್ಲಿ ಕಾಣುತ್ತೇವೆ. ಇದು ವಿಶೇಷವಾಗಿದೆ. ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಇದು ಸ್ಪಷ್ಟವಾಗಿ ಗೋಚರವಾಗುತ್ತದೆ. ಅದಕ್ಕೆ ಒಂದು ಔಚಿತ್ಯ ಇದೆ ಎನ್ನುವುದು ನಮಗೆ ಈ ಕಾರಣದಿಂದ ಹೆಚ್ಚು ಮುಖ್ಯವಾಗುತ್ತದೆ. ಕಾದಂಬರಿಗಳಿಗೆ ನಮ್ಮ ಚಾರಿತ್ರಿಕ ಹಿನ್ನಲೆಯಿಂದ ನೋಡೊದರೆ ಔಚಿತ್ಯವಿದೆ.

ಅಧ್ಯಾಯ - ೩

ವಾಸ್ತವತೆಯ ಮಾದರಿ ಮತ್ತು ರೊಮಾಂಟಿಸಿಸಂ

ಹತ್ತೊಂಬತ್ತನೆಯ ಶತಮಾನದಲ್ಲಿ ನಮಗೆ ಹೊಸತಾಗಿ ಬಂದು ಸಾಹಿತ್ಯದ ರೂಪಗಳಲ್ಲಿ ವಾಸ್ತವದ ಮಾದರಿಯೂ ಇದೆ. ಅದು ಚಾರಿತ್ರಿಕವಾದದ ಒಂದು ನೋಟವೂ ಆಗಿತ್ತು ಎನ್ನುವುದು ಅತ್ಯಂತ ಮುಖ್ಯ ಇದರಲ್ಲಿ ನಾವು ಅನೇಕ ಸಂಗತಿಗಳನ್ನು ಕಾಣಬಹುದು. ಒಂದು ರೀತಿಯಿಂದ ಆಧುನಿಕ ಕಾವ್ಯವು ಹುಟ್ಟಿದ್ದು ಒಂದು ರೋಚಕವಾದ ಚಾರಿತ್ರಿಕ ಸನ್ನಿವೇಶದಲ್ಲಿ. ವರ್ಡವರ್ತನ ಕಾವ್ಯವು ರೊಮಾಂಟಕ್ ಕಾವ್ಯಕ್ಕೆ ಕೊಟ್ಟ ಕಾಣಿಕೆಯು ಅತ್ಯಂತ ಮಹತ್ವದ್ದು. ರೆನೆವೆಲೆಕ್ ಮತ್ತು ಮೆಯೆರ್ ಅಬ್ರಾಹಂ ಒಂದು ಮಾತನ್ನು ಹೇಳುತ್ತಾರೆ. ಅವನ ಕವಿತೆಗಳ ಮೂಲಕ ನಾವು ಆ ಕಾಲದ ಚರಿತ್ರೆಯನ್ನು ನಾವು ಕಾಣಬಹುದು. ಅದು ಅವನ ಶಕ್ತಿಯೂ ಹೌದು. ಅದು ಪುನರುಜ್ಜೀವನ ಕಾಲದ ಕಥನವನ್ನು ಹೇಳುತ್ತದೆ. ಅದು ಬೌದ್ಧಿಕವಾದ ಪಯಣದ ಕತೆಯೂ ಹೌದು. ಅದು ಆ ಕಾಲದ ಜ್ಞಾನದ ರೂಪವನ್ನು ಹೇಳುತ್ತದೆ. ಅದು ಪುನರುಜ್ಜೀವನ ಕಾಲದ ಒಂದು ಅನ್ವಯವೂ ಹೌದು. ಜರ್ಮನಿ ಮತ್ತು ಫ್ರೆಂಚ್ ಕಾವ್ಯದಲ್ಲಿ ಇದ್ದ ಧೋರಣೆಯು ನಮಗೆ ಇಂಗ್ಲೆಂಡಿನಲ್ಲಿ ಕಾಣುವುದಿಲ್ಲ. ಅದರಲ್ಲಿ ಆಧುನಿಕ ಚಿಂತನೆಗಳು ಕಾಣುತ್ತವೆ. ರೊಮಾಂಟಿಕ್ ಪರಂಪರೆಯು ಬರುವಾಗ ಆಧುನಿಕತೆಯು ಇತ್ತು. ಲೇಖಕರು ಆಗಿನ ಚರಿತ್ರೆಯ ಜೊತೆಗೆ ಅನುಸಂಧಾನವನ್ನು ಮಾಡಿದೆ.

ಸಾಹಿತ್ಯದಲ್ಲಿ ರೊಮಾಂಟಿಕ್ ಪರಂಪರೆಯು ಯಜಮಾನಿಕೆಯನ್ನು ವಹಿಸಿದ್ದು. ಸತ್ಯ. ರೊಮಾಂಟಿಕ್ ಪರಂಪರೆಯಲ್ಲಿ ನಿರ್ದಿಷ್ಟವಾದ ಒಂದು ಕ್ರಮವು ಇತ್ತು. ಅದರ ಜೊತೆಗೆ ಅದರಲ್ಲಿ ಒಂದು ತಾತ್ವಿಕವಾದ ಆಯಾಮವನ್ನೂ ಮಂಡಿಸಿತು. ರೊಮಾಂಟಿಕ್ ಕಾಲದ ಆನ್ವಯಿಕವಾದ ವಿಮರ್ಶೆಯು ಕೂಡಾ ಅದರ ವಿಮರ್ಶೆಯ ಧಾಟಿಗೆ ಒಂದು ನಿರ್ದಿಷ್ಟವಾದ ಸ್ಥಾನವಿತ್ತು ಎನ್ನುವುದು ಸ್ಪಷ್ಟ. ವರ್ಡ್ಸವರ್ತ್ ಮತ್ತು ಅವನ ಸಮಕಾಲೀನರು ತಮ್ಮದೇ ಆದ

ನಿಲುವನ್ನು ಹೊಂದಿದ್ದರು. ಅದರ ಜಿತೆಗೆ ಅವರು ಜೀವನದ ಅನುಭವಗಳನ್ನು ಹೇಳಿದರು. ಇದು ಮುಖ್ಯವಾಗಿದೆ. ಅವರ ಜೀವನದ ಕ್ಷಣಗಳೂ ವ್ಯಕ್ತವಾಗಿವೆ. ಅನೇಕ ರೊಮಾಂಟಿಕ್ ಕಾವ್ಯಗಳು ಅತ್ಯಂತ ಸುದೀರ್ಘವಾದ ರೂಪದವುಗಳಲ್ಲ. ವರ್ಡ್ಸ್‌ವರ್ತನ ಲಿರಿಕಲ್ ಬ್ಯಾಲಡ್‌ನಲ್ಲಿ ಕೆಲವು ಸಂಗತಿಗಳನ್ನು ಹೇಳುತ್ತಾನೆ. ಅದರಲ್ಲಿ ಒಂದು ಮುಖ್ಯವಾದ ಅಂಶವೆಂದರೆ ಮನುಷ್ಯನನ್ನು ನಿಸರ್ಗವು ನಿಯಂತ್ರಣ ಮಾಡುತ್ತದೆ. ನಿಸರ್ಗವನ್ನು ಮನುಷ್ಯ ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತಾನೆ. ಇವಿಗಳಿಗೆ ಒಂದು ಆಂತರಿಕವಾದ ಬಂಧುವು ಇದೆ. ರೊಮಾಂಟಿಕ್ ಕಾವ್ಯದ ಆಂತರಿಕ ನೆಯ್ಗೆಯು ಕೂಡಾ ಅಷ್ಟೇ ಮುಖ್ಯ. ಕಾವ್ಯ ಎನ್ನುವುದು ಮುಕ್ತ. ಅದರಲ್ಲಿ ಯಾವುದೇ ಮುಖವಾಡಗಳು ಇಲ್ಲ ಎಂದು ರೊಮಾಂಟಿಕರು ಭಾವಿಸಿದ್ದರು. ಆಂತರಿಕವಾದ ಒಂದು ನೆಯ್ಗೆ ಎನ್ನುವುದು ರೊಮಾಂಟಿಕ್ ಕಾವ್ಯದಲ್ಲಿ ಅತ್ಯಂತ ಮುಖ್ಯ. ಕವಿಗಳು ಅದನ್ನು ಶಿಥಿಲಮಾಡಲು ಬಯಸುವುದಿಲ್ಲ. ಅದರ ಕಲ್ಪನೆ ಎನ್ನುವುದು ಹುಟ್ಟುವುದು ಒಂದು ಸ್ಫೂರ್ತಿಯಲ್ಲಿ. ರೊಮಾಂಟಿಕ್ ಕವಿತೆಯಲ್ಲಿ ಕಲ್ಪನೆಗೆ ಹೆಚ್ಚಿನ ಮಹತ್ವವಿದೆ. ರೊಮಾಂಟಿಕ್ ಕವಿತೆಯಲ್ಲಿ ಕಲ್ಪನೆ ಮತ್ತು ಸ್ಫೂರ್ತಿಯಲ್ಲಿ ಭಾಷೆಯು ಕಲ್ಪನೆಯನ್ನು ಹೇಳಲು ವಾಹಕವಾಗುತ್ತದೆ. ಮನಸ್ಸು ತನಗೆ ಬೇಕಾದ್ದನ್ನು ಕಲ್ಪಿಸಿಕೊಳ್ಳುತ್ತದೆ. ಅದರ ಜೊತೆಗೆ ಯಾವಾಗ ಸ್ಫೂರ್ತಿಯು ಬರುತ್ತದೆಯೋ ಆಗ ಕವಿತೆಯನ್ನು ಕವಿಯು ಬರೆಯುತ್ತಾನೆ. ಅದು ಒಂದು ವಿಶಿಷ್ಟವಾದ ಒಂದು ಚಾರಿತ್ರಿಕವಾದ ಸನ್ನಿವೇಶವೂ ಹೌದು. ಕಾವ್ಯವು ಅನುಕರಣೆಯೇ ಆದರೂ ಅದರಲ್ಲಿ ಅತ್ಯಂತ ಮುಖ್ಯವಾಗುವುದು ಇದು. ಕಲ್ಪನೆ ಎನ್ನುವುದು ಒಂದು ಶಕ್ತಿ. ಮನುಷ್ಯನಿಗೆ ಒದಗಿ ಬಂದ ವರ. ವಸಾಹತು ಕಾಲದ ಕೆಲವು ಸಂಗತಿಗಳನ್ನು ಮೊದಲು ಉಲ್ಲೇಖಿಸುವುದು ಹೆಚ್ಚು ಸೂಕ್ತವಾಗಿದೆ. ೧೯ನೇ ಶತಮಾನದ ಆದಿ ಭಾಗದ ಅನಂತರ ಅನೇಕ ವಿದ್ಯಮಾನಗಳು ನಡೆದವು. ಪ್ರದೇಶ ಮತ್ತು ಅದರ ಸ್ವರೂಪಗಳೂ ಬದಲಾವಣೆಯನ್ನು ಕಂಡವು. ಮತ್ತು ಅದರ ಅರ್ಥಗಳೂ ಬೇರೆಯಾದವು. ೧೯೬೦ರ ಅನಂತರ ಬುದ್ಧಿಜೀವಿಗಳು ತಮ್ಮ ವಾದವನ್ನು ಬದಲಿಸಿಕೊಂಡರು. ಇದಕ್ಕೆ ನಿರ್ದಿಷ್ಟವಾದ ಕಾರಣಗಳೂ ಇವೆ ಮತ್ತು ಅದನ್ನು ಗುರುತಿಸಲು ನಾವು ಆಧುನಿಕ ಚರಿತ್ರೆಯ ಕಡೆಗೆ ನಮ್ಮ ಗಮನವನ್ನು ನೀಡಬೇಕಾಗಿದೆ. ಬುದ್ಧಿಜೀವಿಗಳು ತಮ್ಮ ವಾದವನ್ನು ಅತ್ಯಂತ ಅನಿವಾರ್ಯವಾಗಿ ಬದಲಿಸಿ ಕೊಂಡರು. ಯೋಚನೆಯ ಕ್ರಮದಲ್ಲಿ ಬದಲಾವಣೆಯು ಕಾಣಿಸಿಕೊಂಡಿತು. ಯೋಚನೆ ಮತ್ತು ಅದರ ಕಾರ್ಯಗಳಲ್ಲಿ ಭಿನ್ನತೆಗಳು ಬಂದವು. ಚಿಂತನೆ ಮತ್ತು ಅದರ ಶೈಲಿಯಲ್ಲಿ ವ್ಯತ್ಯಾಸವು ಕಾಣಿಸಿತು. ಸಮಕಾಲೀನ ಚಿಂತಕರು ಪ್ರತಿಕ್ರಿಯಿಸಿದ ಕ್ರಮಗಳಲ್ಲಿ ಭಿನ್ನತೆಯು ಇದೆ.

ವಸಾಹತು ಮತ್ತು ಅದರ ಅನಂತರ ಉಂಟಾದ ಅನೇಕ ಪ್ರಕ್ರಿಯೆಗಳಲ್ಲಿ ವ್ಯತ್ಯಾಸವಿದೆ. ಅದಕ್ಕೆ ರಾಚನಿಕ ಮಿತಿಗಳೂ ಇವೆ. ವಸಾಹತು ಮತ್ತು ವಸಾಹತೀಕರಣ, ವಸಾಹತೋತ್ತರ ಸನ್ನಿವೇಶಗಳು ಸಾಮಾನ್ಯವಾದ ಒಂದು ಸರಳವಾದ ವಿಧಾನವೂ ಆಗಿರಲಿಲ್ಲ. ಚಾರಿತ್ರಿಕ ನಿರೂಪಣೆ ಮತ್ತು ಅದರ ಸ್ವರೂಪದಲ್ಲಿಯೂ ಕೆಲವು ವ್ಯತ್ಯಾಸವಿದೆ. ಮತ್ತು ಅದನ್ನು ಗ್ರಹಿಸುವ ಕ್ರಮಗಳೂ ಭಿನ್ನವಾಗಿವೆ. ಚರಿತ್ರೆಯನ್ನು ನೋಡಬೇಕೆ ಅಥವಾ ಬರೀ ಕೃತಿಯನ್ನು ನೋಡಬೇಕೆ ಎನ್ನುವುದೂ ಮೂಲಭೂತವಾದ ಸಮಸ್ಯೆಯು ಆಯಿತು. ಚರಿತ್ರೆಯು ಬದಲಾಯಿತು. ಆಯ್ಕೆಗಳಲ್ಲಿ ವ್ಯತ್ಯಾಸವು ಕಾಣಿಸಿತು. ವಸಾಹತು ದೇಶಗಳ ಚರಿತ್ರೆ ಮತ್ತು ಅದರ ಬದಲಾಣೆಗೆ

ವಿಭಿನ್ನವಾದ ಕಾರಣವು ಇದೆ. ಅದನ್ನು ಸರಳ ಮಾಡಲು ಬರುವುದೂ ಇಲ್ಲ. ಮತ್ತು ಅದರಲ್ಲಿ ರಾಜಕಾರಣ ಮತ್ತು ಅದರ ತಾತ್ವಿಕತೆಗಳಲ್ಲಿ ವ್ಯತ್ಯಾಸವೂ ಇದೆ. ಸಾಂಸ್ಕೃತಿಕ ಉತ್ಪಾದನೆ ಮತ್ತು ಅದರ ಸ್ವರೂಪದಲ್ಲಿ ವ್ಯತ್ಯಾಸವಿದೆ. ಚರಿತ್ರೆಯು ಕೆಲವು ಆಯ್ಕೆಗಳನ್ನು ಇಟ್ಟಿತು. ಮತೀಯವಾದ ಮತ್ತು ರಾಜಕಾರಣ, ಆರ್ಥಿಕತೆ ಮತ್ತು ಅದರ ಸ್ವರೂಪ ಮತ್ತು ಅದರ ಸಾಧ್ಯತೆಯು ಕೂಡಾ ಭಿನ್ನವಾದವು. ಯಾವಾಗ ವಸಾಹತುಶಾಹಿಯೆ ಅನೇಕ ಬದಲಾವಣೆಗೆ ಆಗ ಗುರಿಯಾಯಿತೋ ಅದು ಅನೇಕ ಸಂಗತಿಗಳನ್ನು ಹುಟ್ಟುಹಾಕಿತು. ಆದರೆ ಯಾವಾಗ ವಸಾಹತು ಮತ್ತು ಅದರ ಪರಿಣಾಮವು ಉಂಟಾಯಿತೋ ಆಗ ಅದರ ಸ್ವರೂಪದಲ್ಲಿಯೂ ವ್ಯತ್ಯಾಸವಾಯಿತು. ಆಗ ಹೊಸ ವಾಗ್ವಾದವು ಈ ಕಾಲದಲ್ಲಿ ಪ್ರಾರಂಭವಾಯಿತು. ಮತ್ತು ಇದರ ಪರಿಣಾಮವನ್ನು ನಾವು ಬೇರೆ ಬೇರೆ ವಿಷಯಗಳಲ್ಲಿಯೂ ಕಾಣಬಹುದು. ಅದು ಶಿಕ್ಷಣ, ಆಸ್ಪತ್ರೆ, ಕೈಗಾರಿಕೆಗಳಲ್ಲಿ ಕಾಣಿಸಿಕೊಂಡವು. ಮತ್ತು ಅದರ ಪರಿಣಾಮಗಳೂ ನಂತರವೂ ಕಾಣಿಸಿಕೊಂಡಿತು. ಇದರೊಂದಿಗೆ ಗಮನಿಸಬೇಕಾದ ಅಂಶವೆಂದರೆ ಇಂಗ್ಲೀಷ್ ರೂಪಿಸಿದ ಜ್ಞಾನ ಪರಂಪರೆ ಮತ್ತು ಭಾರತೀಯ ಜ್ಞಾನಪರಂಪರೆಗೆ ಇದ್ದ ಆಗಾಧ ವ್ಯತ್ಯಾಸ. ಈ ಮೊದಲು ಹೇಳಿರುವಂತೆ ಭಾರತೀಯ ಜ್ಞಾನ ಪರಂಪರೆಗೆ ಅದರದೇ ಆದ ಒಂದು ತಳಹದಿಯಿತ್ತು. ಅದು ವೈದಿಕವಿರಬಹುದು' ಅವೈದಿಕವಿರಬಹುದು. ಅದಕ್ಕೊಂದು ಜೀವನದ ದರ್ಶನವಿತ್ತು. ಭೌತಿಕ ಅವಶ್ಯಕತೆಗೆ ಅನುಸಾರವಾಗಿ ಅದು ರೂಪುಗೊಂಡಿತ್ತು. ಆದರೆ ಬ್ರಿಟೀಷ್ ಮಾದರಿಯ ಶಿಕ್ಷಣ ಕ್ರಮದ ಹಿಂದಿರುವ ಜ್ಞಾನ ಪರಂಪರೆಯ ಪುನರುಜ್ಜೀವನ ಕಾಲಘಟ್ಟದಲ್ಲಿ ಬಹು ದೊಡ್ಡ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂದಿತ್ತು. ಮುಂದುವರಿದು ಜ್ಞಾನ, ತಂತ್ರಜ್ಞಾನ ಒಂದೆಡೆಯಾದರೆ, ಪ್ರಭುತ್ವ ಮತ್ತು ಚರ್ಚುಗಳು ಒಂದೆಡೆಯಾದವು. ಯುರೋಪಿನಲ್ಲಿ ಚರ್ಚಿನ ಪರಮೋಚ್ಛ ಅಧಿಕಾರವು ಸ್ವಲ್ಪ ಮಟ್ಟಿಗೆ ತಲ್ಲಣಗೊಂಡಿತು. ಅದರಿಂದಾಗಿ ಚರ್ಚು ಮತ್ತು ಪ್ರಭುತ್ವ ಎರಡೂ ಶಿಕ್ಷಣ ಕ್ಷೇತ್ರಕ್ಕೆ ಕೈಯಿರಿಸಿದವು. ಭಾರತಕ್ಕೆ ಮಿಶನರಿಗಳ ಆಗಮನಕ್ಕೆ ಪ್ರಮುಖವಾಗಿ ಇದೂ ಕೂಡ ಒಂದು ಕಾರಣವಾಗಿತ್ತು. ಒಂದು ರಾಜ್ಯಾಂಗ ವ್ಯವಸ್ಥೆಯಲ್ಲಿ ನೈತಿಕ ಕಾನೂನು ತಿಳಿಯದ ಮನುಷ್ಯ ಸಾಮಾಜಿಕವಾಗಿ ತನ್ನ ವರ್ಚಸ್ಸನ್ನು ಕಳೆದುಕೊಂಡಿರುತ್ತಾನೆ. ಹಾಗಾಗಿ ಮನುಷ್ಯನಿಗೆ ನೈತಿಕ ಕಾನೂನಿನ ಅರಿವು ತುಂಬಾ ಮುಖ್ಯ. ಈ ಮೂಲಕ ವಸಾಹತುಕಾಲದ ಶಿಕ್ಷಣವು ಒಂದು ನಿರ್ದಿಷ್ಟ ತಾತ್ವಿಕತೆಯನ್ನು ರೂಪಿಸಲು ಪ್ರಯತ್ನಿಸಿತು. ಆದರೆ ಇದರೊಂದಿಗೆ ಭಾರತೀಯರಿಗೆ ಆಧುನಿಕ ಜ್ಞಾನ ಪರಂಪರೆಯ ಅರಿವು ಮೂಡಿತು ಎಂಬುದು ಅಷ್ಟೇ ಸತ್ಯ. ಉದಾ : ಇಂಗ್ಲೀಷ್ ವಿದ್ಯಾಭ್ಯಾಸದ ಉಪ ಉತ್ಪಾದನೆಯಾದ ರಾಷ್ಟ್ರೀಯತೆ, ಪಾಶ್ಚಾತ್ಯ ಉದಾರವಾದಿ ಮನೋಭಾವ, ಪ್ರಗತಿಪರತೆ, ವೈಜ್ಞಾನಿಕ ದೃಷ್ಟಿಕೋನ ಇತ್ಯಾದಿ. ಇಂಗ್ಲೀಷ್ ಶಿಕ್ಷಣದಿಂದ ನ್ಯಾಯ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆ ಬಂತು. ಭಾರತೀಯರಿಗೆ ಚರಿತ್ರೆ ಮತ್ತು ಸಾಮಾಜಿಕ ವಾಸ್ತವವನ್ನು ಬೇರೊಂದು ರೀತಿಯಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಅದು ಸಹಾಯ ಮಾಡಿತು. ಇದನ್ನು ಲೇಖಕ ಯಾರ ಸಾಮಾಜಿಕ ಚರಿತ್ರೆಯಲ್ಲಿ ನೋಡಬಹುದಾಗಿದೆ.

ಯುರೋಪ್ ನಮ್ಮನ್ನು ಮತ್ತು ನಮ್ಮ ಹೆಂಗಸರನ್ನು ತನಗೆ ಬೇಕಾದಂತೆ ವ್ಯಾಖ್ಯಾನಿಸಿದೆ. ಅದರ ನಿರೂಪಣೆಯು ಬೇರೆಯಿದೆ. ಅವರಿಗೆ ಇಲ್ಲಿಯ ಕೌಟುಂಬಿಕ ಸಂಬಂಧಗಳು ಸರಿಯಾಗಿ

ತಿಳಿದಿರಲಿಲ್ಲ. ಆದ್ದರಿಂದ ಅವರು ತಮಗೆ ಬೇಕಾದಂತೆ ನಿರೂಪಿಸಿದರು. ನಮ್ಮಲ್ಲಿ ತಾಯಿ ಮತ್ತು ಮಗುವಿನ ಸಂಬಂಧವು ಬೇರೆ ಥರ ಇದೆ. ನಮಗೆ ಭಾವನೆಗಳಿವೆ. ಅದು ಅವರಿಗೆ ಸರಿಯಾಗಿ ತಿಳಿಯಲಿಲ್ಲ. ನಮ್ಮಲ್ಲಿ ತಾಯಿ ಮತ್ತು ಮಗುವಿನ ಸಂಬಂಧವು ಭಿನ್ನ. ತಾಯಿಯ ಪ್ರಜ್ಞೆ ಮತ್ತು ಮಗುವಿನ ಪ್ರಜ್ಞೆಯು ಜೊತೆಗೆ ಹೋಗುತ್ತದೆ. ಮಹಿಳೆಯ ಬಿಡುಗಡೆಯು ಯಾವುದರಿಂದ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಇದನ್ನು ನಾವು ಈಗ ಯೋಚನೆಯನ್ನು ಮಾಡಬೇಕಾಗಿದೆ. ನವ ವಸಾಹತುಶಾಹಿ ಮತ್ತು ಆಧುನಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿಯೂ ಗಮನಿಸಬೇಕಾಗುತ್ತದೆ. ಹಾಗೆ ನೋಡಿದರೆ ಮಹಿಳೆಯು ಸಾಂಸ್ಕೃತಿಕ ಪ್ರಭುತ್ವವನ್ನು ಬಿಟ್ಟು ಯೋಚನೆಯನ್ನು ಮಾಡಬೇಕಾಗುತ್ತದೆ. ನಮ್ಮ ನಡುವೆ ಓದುತ್ತಿರುವ ಹುಡುಗರಿಗೆ ಮತ್ತು ಹುಡುಗಿಯರಿಗೆ ಮತ್ತು ನಮಗೆ ನಮ್ಮ ನಿಜವಾದ ಚರಿತ್ರೆಯು ಗೊತ್ತಿಲ್ಲ. ಯಾವುದನ್ನು ಬರೆಯಲಾಗಿದೆಯೋ ಅದನ್ನು ಮಾತ್ರವೇ ನಮ್ಮ ನಿಜವಾದ ಚರಿತ್ರೆ ಎಂದು ಭಾವಿಸಿದ್ದೇವೆ. ಆದ್ದರಿಂದ ಈವತ್ತು ಸಾಂಸ್ಕೃತಿಕ ಆಯ್ಕೆಯನ್ನು ಬಹಳ ಎಚ್ಚರದಿಂದ ಮಾಡಬೇಕಾಗುತ್ತದೆ. ನಿಜವಾದ ಅರ್ಥದಲ್ಲಿ ಅನೇಕವನ್ನು ಮತ್ತೆ ಮತ್ತೆ ವಿಮರ್ಶಾತ್ಮಕವಾಗಿ ನೋಡಬೇಕಾಗುತ್ತದೆ. ಈ ಮಾತನ್ನು ಯಾಕೆ ಹೇಳಬೇಕಾಯಿತು ಎಂದರೆ ನಮ್ಮ ಭಾರತದಲ್ಲಿ ಅನೇಕ ರೀತಿಯ ಸಮಾಜಗಳು ಇವೆ. ಅನೇಕ ಭಾಷೆಗಳು ಇವೆ. ಅನೇಕ ಸಂಸ್ಕೃತಿಯು ಕಂಡು ಬರುತ್ತದೆ. ಆದ್ದರಿಂದ ನಮ್ಮ ಗತಕಾಲವು ಕೂಡಾ ಅನೇಕ.,ಅದರ ಜೊತೆಗೆ ನಮ್ಮಲ್ಲಿ ಈವತ್ತು ಅನೇಕ ಬಗೆಯ ವಿವೇಕ ಮತ್ತು ಅನೇಕ ನಮೂನೆಯ ಜ್ಞಾನದ ರೂಪಗಳೂ ಇವೆ. ಇದನ್ನು ಯಾರೂ ಬರೆದು ಇಟ್ಟಿಲ್ಲ. ಆದರೆ ಅಸ್ತಿತ್ವದಲ್ಲಿ ಇದೆ. ಹೆಂಗಸರಿಗೂ ಇದು ಅನ್ವಯವಾಗುತ್ತದೆ. ಇದು ಒಂದು ಪ್ರಶ್ನೆಯಾದರೆ ಮತ್ತೊಂದು ಸಮಸ್ಯೆಯು ಇದೆ. ಹೆಂಗಸರು ನಾವು ಈಗ ಹೇಗೆ ಇದ್ದೇವೆ ಅದುವೇ ಸರಿಯಾದ್ದು ಎಂದು ಭಾವಿಸಿಕೊಂಡಿದ್ದಾರೆ. ಅವರಿಗೆ ನಿರ್ಬಂಧವು ಅವರನ್ನು ಹಾಗೆ ಮಾಡಿದೆ. ಸಾಂಪ್ರಾದಾಯಿಕ ಹೆಂಗಸರು ನಾವು ಹೀಗೆ ಇದ್ದೇವೆ ಎಂದು ತಿಳಿಯುವಾಗ ಅವರಿಗೆ ಅದು ಸಮಸ್ಯೆ ಎಂದು ಅನಿಸಿಲ್ಲ. ಲಂಕೇಶರ ಅವ್ವ ಪದ್ಯದಂತೆ. ನಾವು ಗಂಡಸರಿಗಿಂತ ಕೆಳಗೆ ಇದ್ದೇವೆ ಎಂದು ಕೊಂಡಿದ್ದಾರೆ. ಅಚಿಬೆಯಲ್ಲಿ ಈ ತರಹದ ಹೆಂಗಸರು ಬರುತ್ತಾರೆ. ಒಂದು ಸಮಾನವಲ್ಲದ ಸ್ಥಾನಮಾನವಿದೆ. ಹಾಗೆಂದು ಅವರು ತಮ್ಮ ಬಗಗೆ ಇರುವ ಆತ್ಮ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂದು ಅರ್ಥವಲ್ಲ. ಇದು ಈಗ ಬರೆಯುತ್ತಿರುವ ಅನೇಕರಿಗೆ ಅನ್ವಯವಾಗುವುದು ನಿಜ. ಒಂದು ಆತ್ಮ ವಿಶ್ವಾಸ ಮತ್ತೊಂದು ಒಂದು ಸಾಂಸ್ಕೃತಿಕವಾದ ಸನ್ನಿವೇಶ. ಆದ್ದರಿಂದ ನಾವು ಈಗಲೂ ಮತ್ತೆ ಒಂದು ಪ್ರಶ್ನೆಯನ್ನು ಎದುರು ಹಾಕಿಕೊಳ್ಳುವುದು ಅನಿವಾರ್ಯ. ನಾವು ಹೇಗೆ ಮತ್ತೆ ನಿರ್ವಸಾಹತೀಕರಣ ಆಗುವುದು ? ಈಗ ನಮ್ಮ ಜವಾಬ್ದಾರಿಯನ್ನು ನಾವೇ ಹೊರಬೇಕು. ಅದನ್ನು ಇನ್ನೊಬ್ಬರು ಹೊರಲು ಬರುವುದಿಲ್ಲ. ನಮಗೆ ನಿಜವಾದ ಸಮಸ್ಯೆಯು ಇರುವುದು ಈವತ್ತೂ ಮುಂದೆ ಇರುವ ವಸಾಹತು ಪ್ರಜ್ಞೆಯಿಂದ ಬಿಡುಗಡೆ ಆಗುವುದು ಹೇಗೆ ? ಮತ್ತೊಂದು ನಾವು ಸ್ತ್ರೀಯರನ್ನು ಎಲ್ಲಿ ಇರಿಸಿದ್ದೇವೆ ಎನ್ನುವುದು ಅರ್ಥವಾಗಬೇಕಾಗುತ್ತದೆ. ಹೆಂಗಸರು ಅಂಚಿನಲ್ಲಿ ಇದ್ದಾರೆಯೇ ಅಥವಾ ಅವರು ಕೇಂದ್ರದಲ್ಲಿ ಇದ್ದಾರೆಯೇ ? ಸಂಸ್ಕೃತಿ ಮತ್ತು ಅದರ ಉತ್ಪಾದನೆಯಲ್ಲಿ ಇದು ಬರುತ್ತದೆ. ನಾವು ಈಗ

ಒಂದು ಶೈಕ್ಷಣಿಕ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಅಪಾಯವಂತೂ ಇದ್ದೇ ಇದೆ. ಇಂಗ್ಲೀಷ್ ಒಮ್ಮೆ ಮಾತ್ರವೇ ಯಜಮಾನಿಕೆಯನ್ನು ವಹಿಸಿದೆ ಎಂದು ಭಾವಿಸಬೇಕಾಗಿಲ್ಲ. ಅದು ಮತ್ತೆ ಮತ್ತೆ ಮೂಮದುವರಿಯುತ್ತದೆ. ಯಾಕೆಂದರೆ ಅದು ವರ್ತಕರ ಭಾಷೆಯೂ ಹೌದು. ಇದನ್ನು ಮಾತಾಡುವಾಗ ನಾವು ಕಾರ್ಮಿಕರ ಭಾಷೆಯನ್ನು ಮರೆಯುವಂತೆ ಇಲ್ಲ. ಅದು ಸುಶಕ್ಷಿತ ಹೆಣ್ಣು ಮಕ್ಕಳ ಭಾಷೆಗಿಮತ ಬೇರೆಯಾದ್ದು. ಈವತ್ತು ಚರ್ಚ್‌ಗಳು, ಮಸೀದಿಗಳು ಮತ್ತು ಧಾರ್ಮಿಕ ಕೇಂದ್ರಗಳು ನಮ್ಮ ಜೀವನದ ಶೈಲಿಯನ್ನು ನಿರ್ಧಾರ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಆದ್ದರಿಮದಲೇ ನಮಗೆ ಒಂದು ಸಾಮೂಹಿಕವಾದ ಎಚ್ಚರವು ಬೇಕಾಗುತ್ತದೆ. ಇದು ಜಾತಿ ಮತ್ತು ಜನಾಂಗವನ್ನು ಹೇಳುತ್ತದೆ. ಮತ್ತೆ ಹೇಳುವುದಿದ್ದರೆ ಈಗ ನಮ್ಮ ಮುಂದೆ ಇರುವ ಅಧಿಕಾರದ ರೂಪವು ಯಾವುದು ಎನ್ನುವುದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಸಾಂಸ್ಕೃತಿಕ ವೈವಿಧ್ಯತೆ, ಬಹುಮುಖತೆಯೇ ಪ್ರಮುಖವಾದ ಭಾರತದಲ್ಲಿ ವಸಾಹತುಶಾಹಿಯನ್ನು ಬಲಗೊಳಿಸುವುದು ಬ್ರಿಟೀಷರ ಉದ್ದೇಶವಾಗಿತ್ತು. ಜತೆಗೆ ರಾಷ್ಟ್ರೀಯ ಕಲ್ಪನೆ ಭಾರತದ ನೆಲಕ್ಕೆ ಹೊಸದಾಗಿತ್ತು. ಪ್ರಾದೇಶಿಕ ಸಂಸ್ಕೃತಿಗಳ ವಿಶಿಷ್ಟತೆಯನ್ನು ನಾಶಮಾಡುವ ಅಮೂರ್ತ ಕೆಲಸಗಳನ್ನು ಬ್ರಿಟೀಷರು ಮಾಡಿದರು. ಈ ಮುಖೇನ ಭಾರತೀಯರ ಹೋರಾಟದ ಹಾದಿಯಲ್ಲಿ ಹುಟ್ಟಿಕೊಂಡ 'ರಾಷ್ಟ್ರೀಯತೆ' ರಾಜಕೀಯವಾಗಿ ಅನಿವಾರ್ಯವಾಗಿತ್ತಾದರೂ ಸಾಂಸ್ಕೃತಿಕವಾಗಿ ಅಷ್ಟೇ ಪರಕೀಯವಾಗಿತ್ತು. ಏಕೆಂದರೆ ಸ್ಥಳೀಯ ಸಂಸ್ಕೃತಿಗಳ ವಿರುದ್ಧ ಬ್ರಿಟೀಷ್ ಸಂಸ್ಕೃತಿ ಬಲವಾದ ಎದುರಾಳಿಯಾಗಿ ತಲೆ ಎತ್ತಿತು. ಈ ದಿಸೆಯಲ್ಲಿ ಪರಕೀಯ ಸಂಸ್ಕೃತಿಯೊಂದರ ಬಲವಾದ ಹೊಡೆತದಿಂದ ಪಾರಾಗಲು ಮತ್ತು ಎದುರಿಸಿ ನಿಲ್ಲಲು ಪ್ರಾದೇಶಿಕ ಸಂಸ್ಕೃತಿಗಳು ತಮ್ಮ ಪ್ರಾದೇಶಿಕ ವಾಸ್ತವಗಳ ಬಗ್ಗೆ ತನ್ನ ನಂಬಿಕೆಗಳನ್ನು ಹೆಚ್ಚು ಹೆಚ್ಚು ಬಲಗೊಳಿಸುವುದು ಅನಿವಾರ್ಯವಾಗಿತ್ತು. ಇದರ ಪರಿಣಾಮವಾಗಿಯೇ ಅಂದರೆ ವಸಾಹತುಶಾಹಿ ಉಂಟು ಮಾಡಿದ ಸಾಂಸ್ಕೃತಿಕ ಒತ್ತಡ ಸಾಂಸ್ಕೃತಿಕ ಪುನರ್ ಜೀವನ ಪ್ರಕ್ರಿಯೆಗೆ ಕಾರಣವಾಯಿತು. ಸ್ಥಳೀಯ ಸಂಸ್ಕೃತಿ ಈ ನಿಟ್ಟಿನಲ್ಲಿ ಎಷ್ಟೇ ಬಲವಂತವಾಗಿ ಕಂಡುಬಂದರೂ ವಸಾಹತುಶಾಹಿ ತನ್ನ ಸ್ವದೃಷ್ಟಿಕೋನದ ಒತ್ತಡವನ್ನೇ ಸ್ಥಳೀಯ ಸಂಸ್ಕೃತಿಯಮೇಲೂ ಹೇರಿತು. ಅಂದರೆ ದೇಶೀಯ ಸಂಸ್ಕೃತಿಯನ್ನು ವಸಾಹತುಶಾಹಿ ಸಂಸ್ಕೃತಿಯ ಕಣ್ಣುಗಳ ಮೂಲಕ ನೋಡುವ ಕೆಲಸ ಮಾಡುತ್ತಿತ್ತು. ದೇಶೀಯ ಸಂಸ್ಕೃತಿಗಳು ತಮ್ಮ ಸಂಸ್ಕೃತಿ, ಧಾರ್ಮಿಕ ಬದುಕಿನ ಕ್ರಮಗಳು, ನ್ಯಾಯ ಬದ್ಧತೆಯನ್ನು ಕಳೆದುಕೊಂಡವು. ಬ್ರಿಟಿಷ್ ವಸಾಹತುಶಾಹಿಗೆ ಇವುಗಳ ಮುಖೇನ ಬಲವಾದ ಪ್ರತಿಕ್ರಿಯೆ ನೀಡುವುದು ಸಾಧ್ಯವಾಗಲಿಲ್ಲ. ವಸಾಹತುಶಾಹಿ ಸಂದರ್ಭದಲ್ಲಿ ಬಂದ ಬಹಳ ಮುಖ್ಯವಾದ ಸಂಗತಿಯೆಂದರೆ ಮಾನವೀಯತೆಯ ಪ್ರಶ್ನೆ. ಮಾನವೀಯತೆಯನ್ನು ಕುರಿತು ನಾವು ಮಾತಾಡುವಾಗ ಅದು ಸ್ವಯಂ ಸಂಪೂರ್ಣವಾಗುವುದು ಮನುಷ್ಯನಲ್ಲಿಯೇ ಎಂಬುದನ್ನು ಮನಗಾಣಬೇಕು.ಮಾನವೀಯತೆಯೆನ್ನುವುದು ಒಂದು ಸರಳ ತೀರ್ಮಾನವಲ್ಲ. ಅದಕ್ಕೆ ಅದರದೇ ಆದ ಹಿನ್ನೆಲೆಯಿರುತ್ತದೆ.ಮಾನವೀಯತೆಯೆನ್ನವುದು ನಮ್ಮ ವಾಸ್ತವತೆಗಳಲ್ಲಿ ಒಂದು.ಈ ಕುರಿತು ಹೇಳುವಾಗ ಸಾರ್ತ್ರೆಯು ಮಾನವೀಯತೆಯನ್ನು ವಿಶಿಷ್ಟ ಅರ್ಥಗಳಲ್ಲಿ ಬಳಸುತ್ತಾನೆ.ಅದು ಮನುಷ್ಯನ ನಿಜಗಳಲ್ಲಿ ಒಂದು ಎನ್ನುವುದು ಅವನ ಪ್ರಮುಖ ನಿಲುವು.

ಆದರೆ ಯಾವುದನ್ನು ನಾವು ಮೌಲ್ಯವೆಂದು ಕರೆಯುತ್ತೇವೆಯೋ ಅದು ಅಸ್ಪಷ್ಟ. ಹಾಗೆ ನೋಡುವುದಿದ್ದರೆ ಮನುಷ್ಯತ್ವೆನ್ನುವುದು ನೈತಿಕತೆಗಳಲ್ಲಿ ಒಂದು. ನಾವು ಯಾವುದಕ್ಕೆ ಬದ್ಧವಾಗಿರುತ್ತೇವೆ ಎನ್ನುವುದೇ ಬಹಳ ಮುಖ್ಯ.ಅಷ್ಟೇ ಅಲ್ಲ–ಯಾವುದಕ್ಕೆ ಕಮಿಟ್ ಆಗಿದ್ದೇವೇಯೋ ಅದಕ್ಕೆ ಒಂದು ಸನ್ನಿವೇಶ ಎನ್ನುವುದು ,ಅಥವಾ ಒಂದು ಕ್ರಿಯೆ ಎನ್ನುವುದೇ ಇಲ್ಲ.ನಮ್ಮ ಯಾವುದೇ ಒಂದು ಚಟುವಟಿಕೆಯನ್ನು ಇಟ್ಟುಕೊಂಡು ಇದು ನಮ್ಮ ಬದ್ಧತೆ ಎಂದು ಹೇಳುವುದೇ ಕಷ್ಟ. ಬ್ರಿಟೀಶರ ಕಾಲದಲ್ಲಿ ಮಿಶನರಿಗಳು ನಡೆಸಿದ ಚಟುವಟಿಕೆಗಳು ಮಾನವೀಯತೆಯನ್ನು ಮೆರೆದವು ಆದರೆ ಅದರಲ್ಲಿ ಮತಾಂತರದ ಉದ್ದೇಶವೂ ಇತ್ತು ಎನ್ನವುದು ಇಲ್ಲಿ ಗಮನಾರ್ಹ. ಮತಾಂತರವು ಅನ್ಯವನ್ನು ಸ್ವ ಮಾಡುವ ಕ್ರಮವೂ ಹೌದು.

ವಸಾಹತುಶಾಹಿಯ ಪ್ರಭಾವಕ್ಕೆ ಪ್ರಮುಖವಾಗಿ ಎರಡೂ ಮುಖಗಳೀವೆ ಒಂದು ಸುಧಾರಣಾವಾದಿ ಮುಖವಾದರೆ, ಮತ್ತೊಂದು ಆಡಳಿತದ ಕ್ರೂರಹಸ್ತ, ಭಾರತದ ದಾಸ್ಯ ಸಂಕೋಲೆ, ಮೊದಲ ಹಂತದಲ್ಲೇ ವಸಾಹತುಶಾಹಿ ಹಲವಾರು ಬಗೆಗಳಲ್ಲಿ ತನ್ನ ಕ್ರೂರ ಹಸ್ತವನನು ಭಾರತೀಯ ಬದುಕಿನ ಮೇಲೆ ಹರಡಿತು. ರಾಜಕೀಯ ಮತ್ತು ಆರ್ಥಿಕ ಮುಖದ ಕ್ರೌರ್ಯ ಭಾರತವನ್ನು ಬರಿದು ಮಾಡಿತ್ತು. ಮಿಶನರಿಗಳ ನೆರವು ಸುಧಾರಣೆಯ ರೂಪದಲ್ಲೇ ತನ್ನ ಪಟ್ಟ ಭದ್ರ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವ ತಂತ್ರಗಾರಿಕೆಯಾಗಿತ್ತು. ಇದು ಸುಧಾರಣಾವಾದಿ ರಾಜಕೀಯದ ಜೊತೆ ಸಾಮ್ರಾಜ್ಯಶಾಹಿಯ ಆಕ್ರಮಣಶೀಲತೆಯ ಗುಣವನ್ನು ಹೊಂದಿದೆ. ವಸಾಹತುಶಾಹಿ ದುಷ್ಟ ಶಕ್ತಿಯು ನಯವಾಗಿ ಭಾರತೀಯ ಸಮಾಜವನ್ನು ಶೋಷಿಸುತ್ತಿತ್ತು. ಇಲ್ಲಿನ ರಾಜರ ಹಾಗೂ ಪಟ್ಟ ಭದ್ರರ ಸ್ವಾರ್ಥಗುಣಗಳನ್ನು ತನ್ನ ಲಾಭಕ್ಕೆ ಬಳಸಿಕೊಂಡಿತು. ವಸಾಹತುಶಾಹಿ ಹತೆಗೆ ಬಂದ ಇಂಗ್ಲೀಷ್ ಶಿಕ್ಷಣ, ಸಾಹಿತ್ಯ, ಇವು ಅನಾವರಣಗೊಳಿಸಿದ ಐರೋಪ್ಯ ಸಾಂಸ್ಕೃತಿಕ ಎಚ್ಚರದ ಜಗತ್ತಿನ ಪರಿಚಯ, ಉದ್ಯೋಗಾವಕಾಶ, ಆಡಡಳಿತ ವ್ಯವಸ್ಥೆ, ಭಾರತೀಯನ ಬದುಕಿನಲ್ಲಿ ಆಧುನಿಕತೆ ಮೂಡಿಸಿತು.

ಈ ಹಂತದಲ್ಲಿ ಆಧುನಿಕತೆ ಉಂಟು ಮಾಡಿದ ಪರಿಣಾಮ ಭಾರತೀಯ ಬದುಕಿಗೆ ಹೊಸದಾಗಿತ್ತು. ಜತೆಗೆ ಪರಂಪರೆಯಿಂದ ಬಂದ ಮೌಲ್ಯಗಳಿಗೆ ಆಘಾತಕಾರಿಯೂ ಆಗಿತ್ತು. ಇತಿಹಾಸದ ಉದ್ದಕ್ಕೂ ಪರಕೀಯ ಆಕ್ರಮಣಕ್ಕೆ ತುತ್ತಾಗುತ್ತಲೇ ಬಂದಿರುವ ಭಾರತೀಯ ಸಮಾಜ ಹಿಂದೆಂದೂ ಈ ಬಗೆಯ ಆಘಾತ ಎದುರಿಸಿರಲಿಲ್ಲ. ಈ ತನಕ ದಾಳಿ ನಡೆಸಿದ ಪರಕೀಯ ಸಂಸ್ಕೃತಿಗಳು ಒಂದು ಬಗೆಯ ಅಂತರವನ್ನು ಉಳಿಸಿಕೊಂಡೇ ಬಂದಿದ್ದವು. ಅವುಗಳ ಪ್ರಭಾವಕ್ಕೆ ಒಳಗಾಗಿದ್ದರೂ ಅದು ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಅಲುಗಾಡಿಸುವಷ್ಟು ಪ್ರಬಲವಾಗಿರಲಿಲ್ಲ. ಆದರೆ ವಸಾಹತುಶಾಹಿ ವ್ಯವಸ್ಥೆಯಲ್ಲಿ ಸಾಮ್ರಾಜ್ಯಶಾಹಿ ಆಕ್ರಮಣಶೀಲತೆ ಇರುವುದರ ಜೊತೆಗೆ ತನ್ನದು ಹೆಚ್ಚೆಂದು ತೋರಿಸುವ ಹೆಚ್ಚುಗಾರಿಕೆ ಇತ್ತು. ಅಷ್ಟೇ ಅಲ್ಲದೇ ಇಲ್ಲಿಯ ಜನರಿಗೆ ದೇವರಂತೆ, ದೇವತೆಗಳಂತೆ ಕಂಡ ಮೌಲ್ಯಗಳು ವಸಾಹತುಶಾಹಿ ಕಣ್ಣುಗಳಿಗೆ ಅತಿ ಕೀಳಾದ ಮೌಢ್ಯಗಳಾಗಿಯೂ ರಾಕ್ಷಸ ಗುಣಗಳಂತೆ ಕಂಡವು. ಇದರಿಂದಾಗಿ ಭಾರತೀಯ ಸಮಾಜ ಮೊತ್ತಮೊದಲ ಬಾರಿಗೆ ವಾಸ್ತವಕ್ಕೆ ತೆರೆದುಕೊಂಡಿತು. ಹೊರಶತ್ರುವಿನ ವಿರುದ್ಧ ದೇಶದ ಎಲ್ಲಾ ಜನರನ್ನು ಒಗ್ಗಟ್ಟಾಗಿಸುವುದು ತಕ್ಷಣದ ಅನಿವಾರ್ಯವಾಗಿತ್ತು. ದೇಶೀಯ

ಸಂಸ್ಕೃತಿ ಪರಕೀಯ ಸಂಸ್ಕೃತಿಯೊಂದರ ಮುಖಾಮುಖಿಯಲ್ಲಿ ತನ್ನೊಳಗೆ ಹೊಸತೊಂದು ಸುಧಾರಣವಾದಿ ಚಲನೆ ಪ್ರಾರಂಭಿಸಿತು. ಪರಕೀಯ ಆಳ್ವಿಕೆ ಮತ್ತು ಸಂಸ್ಕೃತಿಯ ವಿರುದ್ಧ ಸಮುದಾಯವಾಗಿ ಇಡೀ ದೇಶವನನು ಐಕ್ಯಗೊಳಿಸಲು 'ರಾಷ್ಟ್ರೀಯತೆ' ತುರ್ತಿನ ಅನಿವಾರ್ಯವಾಗಿ ಮೂಡಿಬಂತು.

ರಾಷ್ಟ್ರೀಯತೆಯ ಕಲ್ಪನೆಯ ಜತೆ ಸಾಂಸ್ಕೃತಿಕ ಪುನರ್ ಸ್ಥಾಪನೆ ಅಗತ್ಯವಾಗಿತ್ತು. ಇದಕ್ಕಾಗಿ ಸಾಂಪ್ರದಾಯಿಕ ಮೌಲ್ಯಗಳ ಕಡೆಗೆ ಮತ್ತು ಅದರ ಪುನರುತ್ಥಾನ ಪ್ರಕ್ರಿಯೆಯ ಕಡೆಗೆ ನೋಡುವುದು ಅನಿವಾರ್ಯವಾಗಿತ್ತು. ಒಳಗಿನ ಎಲ್ಲಾ ಶ್ರೇಣಿಕರಣ ವ್ಯವಸ್ಥೆ, ಪರಸ್ಪರ ವಿರೋಧಿ ನಿಲುವಗಳನ್ನು, ವರ್ಗಸಂಘರ್ಷಗಳನ್ನು, ಪ್ರಾದೇಶಿಕ, ಸಾಂಸ್ಕೃತಿಕ ಭಿನ್ನತೆಗಳನ್ನು ಮರೆತು 'ಆಧ್ಯಾತ್ಮಿಕ ಮೌಲ್ಯ, ಪರಂಪರೆಯ ಮೌಲ್ಯಗಳನ್ನೇ ಮೂಲಸ್ಥಾಯಿಯಾಗಿಸಿಕೊಂಡು ಹೋರಾಟಕ್ಕಿಳಿಯುವ ಅಥವಾ ಸ್ವರಕ್ಷಣೆಯ ತಂತ್ರಗಳಿಗೆ ಮಾರುಹೋಗಬೇಕಾಗಿತ್ತು.' ಏಕೆಂದರೆ ರಾಷ್ಟ್ರೀಯತೆ ನಮ್ಮ ಆಳಿವು ಉಳಿವಿನ ಪ್ರಶ್ನೆಯಾಗಿದ್ದಾಗ್ಯೂ ಸಾಂಸ್ಕೃತಿಕವಾಗಿ ಅಷ್ಟೇ ಪರಕೀಯವಾಗಿತ್ತು. ತತ್‌ಪರಿಣಾಮ ಸಾಂಸ್ಕೃತಿಕ ಪುನರ್‌ಸ್ಥಾಪನೆ ರಾಷ್ಟ್ರೀಯತೆಯಷ್ಟೇ ಪ್ರಮುಖವಾಗಿತ್ತು. ಪ್ರಾದೇಶಿಕ ಭಿನ್ನತೆಗಳೆಲ್ಲವನ್ನು ಮರೆತು 'ಧಾರ್ಮಿಕ, ಪಾರಂಪಾರಿಕ ಮೌಲ್ಯಗಳಿಗೆ ಪ್ರಾಮುಖ್ಯತೆ ನೀಡುವ ಮುಖೇನ ಏಕ ಸೂತ್ರವೊಂದರ ಸಿದ್ಧತೆ ನಡೆಯತೊಡಗಿತು. ಈ ನೆಲದ ಸಂಸ್ಕೃತಿಯ ಪ್ರತೀಕ ಮತ್ತು ಮೌಲ್ಯಗಳೆನಿಸಿದ ಧಾರ್ಮಿಕ ಮೌಲ್ಯಪ್ರತೀಕಗಳಾದ ಪುರಾಣ ಮೌಲ್ಯ, ಪಾರಂಪರಿಕ ಬದ್ಧತೆಗಳನ್ನು ತಬ್ಬಿಕೊಳ್ಳಬೇಕಾದದ್ದು ಅನಿವಾರ್ಯವಾಯ್ತು. ಈ ಮುಖೇನ ಭಾರತೀಯ ಸಮೂಹವನ್ನು ಒಂದು ಚೌಕಟ್ಟಿಗೆ, ಪರಂಪರೆಯ ಒಳಗೆ ತರುವ ಪ್ರಯತ್ನಗಳಾದವು. ಇಲ್ಲಿನ ಬಹುಮುಖ ಸಂಸ್ಕೃತಿಯಲ್ಲಿ ರಾಷ್ಟ್ರೀಯ ಕಲ್ಪನೆಯ ಮೌಲ್ಯಗಳನ್ನು ಕಂಡುಕೊಳ್ಳುವ ಸಾಧ್ಯತೆಗಳಿದ್ದುದು ಪುರಾಣಮೌಲ್ಯಗಳ ಮೂಲಕ. ಆದರೆ ಇದು ಕೂಡ ತಥಾಗತವಾಗಿ ಉಳಿದುಬಿಡಲಿಲ್ಲ. ಹದಿನೆಂಟನೆಯ ಶತಮಾನದ ಇಂಗ್ಲೆಂಡಿನಲ್ಲಿ ರಾಷ್ಟ್ರೀಯ ಪ್ರಭುತ್ವ ಮತ್ತು ನಾಗರಿಕ ಸಮಾಜದ ಹೊಸ ವ್ಯಾಖ್ಯೆಗೆ ಗುರಿಯಾಯಿತು. ಆಗಿನ ನಾಗರಿಕ ಸಮಾಜವು ಸ್ವತಂತ್ರ ಮನುಷ್ಯನ ಕುರಿತು ಮಾತಾಡಿತು. ಅಷ್ಟೇ ಅಲ್ಲ ಸಾಮಾಜಿಕ ಪ್ರಗತಿಯೆನ್ನುವುದು ಹೊಸ ವ್ಯಾಖ್ಯೆಗೆ ಗುರಿಯಾಯಿತು. ಸಾಂಪ್ರದಾಯಿಕ ಸಮಾಜಕ್ಕಿಂತ ಭಿನ್ನ ನೆಲೆಯನ್ನು ಸ್ಥಾಪಿಸುವ ಪ್ರಯತ್ನ ನಡೆಯಿತು. ನಾಗರಿಕ ಸಮಾಜದ ಮುಖ್ಯ ಸಂಸ್ಥೆಗಳಾದ ಚರ್ಚು, ಶಿಕ್ಷಣ, ನಾಗರಿಕ ಸಂಘಟನೆಗಳು ವ್ಯಕ್ತಿಯ ಹಿತಾಸಕ್ತಿಯ ಪರವಾಗಿದ್ದವು. ಇವು ಪ್ರಭುತ್ವಕ್ಕಿಂತ ಬೇರೆ ರೂಪವನ್ನು ಹೊಂದಿದ್ದವು

ವಸಾಹತುಶಾಹಿ ಪ್ರಗತಿಪರತೆ ಮತ್ತು ಪರಿಷ್ಕಾರಕ ಚಿಂತನೆಗಳನ್ನು ಒಳಗಿಂದೊಳಗೆ ಮೂಡಿಸತೊಡಗಿದ್ದು ಸತ್ಯ, ಜನಸಮೂಹದ 'ಒಳ ಬದುಕನ್ನು' ಸೂಕ್ಷ್ಮವಾಗಿ ನೋಡುವ ಮನೋಧರ್ಮವನ್ನು ವಸಾಹತುಶಾಹಿ ಹುಟ್ಟುಹಾಕಿತು. ಕೆಳಜಾತಿ, ವರ್ಗದ ಬದುಕು ವಸಾಹತುಶಾಹಿಯ ಪರೋಕ್ಷ ಪರಿಣಾಮಕ್ಕೆ ಒಳಗಾಗಿ ಅನಾವರಣಗೊಳ್ಳತೊಡಗಿತು. ಆಧ್ಯಾತ್ಮಿಕ ಸತ್ವ, ಮೌಲ್ಯಗಳನ್ನು ಪುರೋಹಿತಶಾಹಿ ಮತೀಯ ಮೌಢ್ಯಗಳೊಳಗೆ ಸೇರಿಸಿ ಹಾಳುಗೆಡವಿದೆ. ಆದ್ದರಿಂದ ಧಾರ್ಮಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಪಾರಂಪರಾಗತ ಶಕ್ತಿಗಳಿಂದ ಮುಕ್ತಗೊಳಿಸುವ ಕಾರ್ಯವೂ ನಡೆಯಿತು. "ಅಂದು ಬೆಳಿಗ್ಗೆ ಮುಂಚೆ, ಹೂವಳ್ಳಿ ಮನೆಯಲ್ಲಿ, ಕೋವಿಚೀಲವನ್ನು

ಬಗಲಿಗೆ ಸಿಕ್ಕಿಸಿಕೊಂಡು, ಕೋವಿಗೆ ಈಡು ತುಂಬದೆ ಬರಿಯ ಕೇಪನ್ನು ಮಾತ್ರ ಹಾಕಿಕೊಂಡು ಹೊರಗೆ ಹೊರಡಲನುವಾಗುತ್ತಿದ್ದ ಮುಕುಂದಯ್ಯನಿಗೆ ತಾನು, ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿ ಸಹೋದರಿ ಕ್ರಿಸ್ಟೈನ್‌ಗೆ ಹೇಳಿದ್ದ, ಆ ಶ್ರೀರಾಮಕೃಷ್ಣ ಲೋಕಸಂಗ್ರಹ ಕಾರ್ಯದ ಸಫಲತೆಗಾಗಿ ವಿಧಿಯ ಕೈಯಲ್ಲಿ ಒಂದು ಉಪಾಂಗೋಪಕರಣವಾಗುತ್ತಿದ್ದೇನೆ ಎಂಬುದು ಹೇಗೆತಾನೆ ಗೊತ್ತಾಗಬೇಕು. ಅವನು ತನ್ನ ಅಕ್ಕನಿಗೆ ಮಾತು ಕೊಟ್ಟಿದ್ದಂತೆಯೂ, ತನ್ನ ಬೆಟ್ಟಳ್ಳಿ ದೇವಯ್ಯ ಬಾವನನ್ನು, ಅವನ ಅಪೇಕ್ಷೆಯಂತೆಯೆ, ಕಿಲಸ್ತರ ಜಾತಿಗೆ ಸೇರುವುದನ್ನು ತಪ್ಪಿಸುವ ಸಲುವಾಗಿಯೂ ಮೇಗರವಳ್ಳಿಯ ಮಿಶನ್ ಇಸ್ಕೂಲಿಗೆ ಹೊರಟ್ಟಿದ್ದನು". [೧]

ಈ ರೀತಿಯ ಪ್ರಕ್ರಿಯೆಯನ್ನೇ 'ವಸಾಹತುಶಾಹಿ ಆಗಮನದ ಸಂಘರ್ಷ ಮತ್ತು ಸ್ವಾಗತ'ವೆಂದು ಗುರುತಿಸುವುದು, ಬ್ರಿಟಿಷ್ ಶಿಕ್ಷಣ ಮತ್ತು ಇಂಗ್ಲೀಷ್ ಶಿಕ್ಷಣದ ಮುಖೇನ ಹೊಸಬಗೆಯ ಸಾಂಸ್ಕೃತಿಕ – ಸಾಹಿತ್ಯಿಕ ಬದುಕು ರೂಪುಗೊಳ್ಳತೊಡಗಿತು.

ಅದೇ ವೇಳೆಗೆ ಆಧುನಿಕ ರಾಜಕೀಯ ಪ್ರಭುತ್ವವು ತಾತ್ವಿಕತೆ, ಮಿಲಿಟರಿ ಸೈನ್ಯ ಮುಂತಾದವುಗಳ ಬಗ್ಗೆ ಮಾತಾಡುತ್ತಿತ್ತು. ಹಳೆಯ ರಾಜಕೀಯ ಮತ್ತು ಸಾಮಾಜಿಕ ರೂಪಗಳಿಗಿಂತ ಭಿನ್ನವಾಗಿದ್ದ ಪ್ರಭುತ್ವ ಹಿಂದೆಂದಿಗಿಂತಲೂ ಹೆಚ್ಚು ಪ್ರಭಾವಶಾಲಿಯಾಗಿತ್ತು. ಸ್ಥಳೀಯ, ಹಳೆಯ ಶ್ರೇಣಿಕರಣದ ಬದಲು ಹೊಸ ಶ್ರೇಣೀಕರಣ ಪ್ರಾರಂಭವಾಯಿತು. ಹೊಸ ರೀತಿಯ ಸಾಮಾಜಿಕ ರಾಜಕೀಯ ಸಂಘಟನೆಗಳಿಂದ ಯುರೋಪಿನಲ್ಲಿ ಹೊಸ ರೀತಿಯ ಸಾಮಾಜಿಕ ವ್ಯವಸ್ಥೆಯೊಂದು ರೂಪುಗೊಳ್ಳಲು ಪ್ರಾರಂಭವಾಯಿತು. ಹದಿನೆಂಟನೆಯ ಶತಮಾನದ ಯುರೋಪ್ 'ಸಾಮಾಜಿಕ ತಂತ್ರಜ್ಞಾನ' ಮುದ್ರಣ ಮತ್ತು ಸಂವಹನ ಭಾಷೆಯ ಪ್ರಕರಣ. ಕಾನೂನಿನ ಸ್ವಯತ್ತತೆಯ ಕುರಿತು ಮಾತಾಡಲು ಪ್ರಾರಂಭಿಸಿತು. ಹೊಸದಾಗಿ ಪ್ರಾರಂಭವಾದ ಸಾಮಾಜಿಕ ವ್ಯವಸ್ಥೆಯಲ್ಲಿ ಬಡವ – ಶ್ರೀಮಂತರು ಗಂಡು ಹೆಣ್ಣು, ಯುವಕರು – ವೃದ್ಧರು ಎಂಬ ಪ್ರಭೇದಗಳಿಗೆ ಹೊಸ ರೀತಿಯ ನಿರ್ವಚನೆಗಳು ಪ್ರಾರಂಭವಾದವು. ವ್ಯಕ್ತಿಗೆ ಸ್ವ ಅನನ್ಯತೆಯೆಂಬುದಿದೆಯೆಂದು ಪ್ರತಿಪಾದಿಸಲಾಯಿತು. ಜೀವನ ಮತ್ತು ವಿವಾಹಕ್ಕೆ ಪ್ರಮಾಣ ಪತ್ರವನ್ನು ಕೊಡಲಾಯಿತು. ಹೆಬ್ಬೆರಳ ಗುರುತನ್ನು ತುಂಬಾ ವೈಜ್ಞಾನಿಕವೆಂದು ಕರೆಯಲಾಯಿತು. ಅವುಗಳ ಪರಿಣಾಮ ವಸಾಹತು ರಾಷ್ಟ್ರಗಳ ಮೇಲೂ ಆಯಿತೆಂಬುದಾಗಿ ಗಮನಾರ್ಹ. ಅಂದರೆ ಈ ರೀತಿಯ ಚಿಂತನಾ ಕ್ರಮದ ಪ್ರಭಾವ ವಸಾಹತು ರಾಷ್ಟ್ರಗಳ ಮೇಲೂ ಆದುದರಿಂದ ಸಾಂಪ್ರದಾಯಿಕ ಸಮಾಜಕ್ಕಿಂತ ಭಿನ್ನರೂಪವು ಚಾಲ್ತಿಗೆ ಬರತೊಡಗಿತು. ವಸಾಹತು ಕಾಲದಲ್ಲಿ ಸ್ಥಳೀಯ ಜ್ಞಾನ ಪರಂಪರೆ ಮತ್ತು ಯೂರೋಪ್ ಮೂಲದ ಜ್ಞಾನ ಪರಂಪರೆಯ ನಡುವೆ ಮೂರು ರೀತಿಯ ಪ್ರತಿಕ್ರಿಯೆಗಳು ಕಾಣಿಸಿಕೊಂಡವು.

೧. ಮೈತ್ರಿ.

೨. ಸ್ವ–ಅನನ್ಯತೆ.

೩. ತೀವ್ರ ಪ್ರತಿರೋಧ.

---

[೧] ಕುವೆಂಪು, ಮಲೆಗಳಲ್ಲಿ ಮದುಮಗಳು, ೧೯೬೭, ಪುಟ. ೬೮೫.

ಈ ಮೂರರಲ್ಲಿಯೂ ಚಾರಿತ್ರಿಕ ಸ್ಥಳೀಯತೆಯು ಭಿನ್ನ ಸಂದರ್ಭವನ್ನು ಸೃಷ್ಟಿಸಿಕೊಂಡಿತ್ತು. ವಸಾಹತು ಕಾಲದ ಅನುಭವವು ಈ ದೃಷ್ಟಿಯಿಂದ ಸರಳವಾದ ಒಂದು ನಿರ್ದಿಷ್ಟ ವ್ಯಾಖ್ಯೆಗೆ ಒಳಪಡುವುದಿಲ್ಲ.ಇದರ ಪರಿಣಾಮವಾಗಿ ಹುಟ್ಟಿಕೊಂಡ

ರಾಷ್ಟ್ರೀಯತೆ ಎನ್ನುವುದು ಒಂದು ಉದ್ದೇಶಿತ ಸಂಕಥನ. ಇದು ಪಶ್ಚಿಮದಿಂದ ಆಮದು ಮಾಡಿಕೊಂಡ ಆಲೋಚನಾ ಕ್ರಮ ಎಂದು ಹೇಳಲಾಗುತ್ತದೆ. ರಾಜ ಆಳುತ್ತಿದ್ದ ರಾಜ್ಯಾಂಗ ವ್ಯವಸ್ಥೆಯ ಕ್ರಮಕ್ಕೂ ಹೊಸದಾಗಿ ಪ್ರಾರಂಭವಾದ ರಾಷ್ಟ್ರೀಯತೆಯೆಂಬ ನಿರೂಪಣಾ ಕ್ರಮಕ್ಕೂ ಭಿನ್ನತೆಯಿದೆ. ಹೊಸದಾಗಿ ಪ್ರಾರಂಭವಾದ ರಾಷ್ಟ್ರೀಯತೆ ಎಂಬ ಸಂಕಥನದಲ್ಲಿ ಒಂದು ಆದರ್ಶ ರಾಜ್ಯದ ಕನಸಿತ್ತು. ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಸಣ್ಣಪುಟ್ಟ ಭಿನ್ನತೆಗಳು ಮುಖ್ಯವೆಂದು ಅನಿಸಲಿಲ್ಲ. ರಾಷ್ಟ್ರೀಯತೆಯನ್ನುವುದು ಅಂದು ಪ್ರಧಾನಧಾರೆಯೆಂದೂ, ಸಣ್ಣ ಪುಟ್ಟ ತೊರೆಗಳು ಈ ರಾಷ್ಟ್ರೀಯತೆಯಲ್ಲಿ ಸೇರಿಕೊಳ್ಳಬೇಕೆಂದು ಪ್ರತಿಪಾದಿಸಲಾಯಿತು.

ಈ ಸಾಹಿತ್ಯ ಸೃಷ್ಟಿಕ್ರಿಯೆ ಕೂಡ ಸಾಂಸ್ಕೃತಿಕ ಪ್ರತಿಭಟನೆಯ ಪ್ರಕ್ರಿಯೆ ಆಗಿಯೇ ಅಭಿವ್ಯಕ್ತಿಯಾಗಿದೆ. ಸಾಹಿತ್ಯದಲ್ಲಿ ಈ ಪ್ರಕ್ರಿಯೆ ಸ್ವಸಂಸ್ಕೃತಿ ಮೌಲ್ಯ ಶೋಧನೆ ಮತ್ತು ವೈಭವೀಕರಣ ಕ್ರಿಯೆಗಳಿಗೆ ಹೊರಳುತ್ತದೆ. ಇಂಗ್ಲೀಷ್ ಸಾಹಿತ್ಯ ಪ್ರಭಾವದಿಂದ ಬರೆದ ಸಾಹಿತ್ಯದ ರೂಪ ಹೊಸದಾಗಿ ಕಾಣಿಸಿದರೂ ವಸಾಹತುಶಾಹಿ ಇಲ್ಲಿನ ಸಂಸ್ಕೃತಿಯನ್ನು ಏಕಾಂಕಿಯಾಗಿ ಬೆತ್ತಲೆ ಮಾಡತೊಡಗಿದಾಗ ಇಲ್ಲಿನ ಸಂಸ್ಕೃತಿ ತನ್ನ ಮೌಲ್ಯಗಳಿಗಾಗಿ ಅಂತಃಸತ್ವಕ್ಕಾಗಿ ತಡಕಾಡಿದ್ದು ಪುರಾಣ ಮೌಲ್ಯಗಳ ಪುನರುತ್ಥಾನಕ್ಕೆ ದಾರಿ ಮಾಡಿಕೊಟ್ಟಿತು. ಜತೆಯಲ್ಲಿ ಆದರ್ಶವಾದ, ಮಾನವತಾವಾದ, ಗಾಂಧಿವಾದ ಹುಟ್ಟಿಕೊಂಡಿತು. ಕ್ರಮೇಣ ಈ ಪ್ರವೃತ್ತಿ ವಸಾಹತುಶಾಹಿ ವಿರೋಧದಿಂದಾಗಿ ವಾಸ್ತವವನ್ನು ಆದರ್ಶೀಕರಿಸುವ ಕ್ರಿಯೆಗೆ ಮೂಲವಾಯಿತು. ಗಾಂಧಿ ಸ್ವ ಮತ್ತು ಅನ್ಯವನ್ನು ಗುರುತಿಸಿದ ಕ್ರಮವು ಬೇರೆಯಾಗಿದೆ.

> "ಆದರೆ ರಾಷ್ಟ್ರೀಯತೆಯೂ ಕೂಡಾ ಎರಡು ಮಾದರಿಯಲ್ಲಿದೆ. ಒಂದು, ಗಾಂಧೀವಾದದಿಂದ ಪ್ರೇರಿತವಾದ ರಾಷ್ಟ್ರೀಯ ಆದರ್ಶವಾದ. ಇದಕ್ಕೆ ದೈನಂದಿನ, ಮಾನವನ ದೌರ್ಬಲ್ಯವನ್ನು ಮೀರುವ ಗುಣವಿದೆ ಮತ್ತು ಈ ಬಗೆಯ ರಾಷ್ಟ್ರೀಯವಾದವು ಅನೇಕ ಬರಹಗಳಲ್ಲಿ ನೇರವಾಗಿ ವ್ಯಕ್ತವಾಗಿದೆ. ಇನ್ನೊಂದು, ಆಗಿನ ರಾಷ್ಟ್ರೀಯ ಚಳುವಳಿಯಿಂದ ಪ್ರೇರಿತವಾದ ; ಆದರೆ ಪ್ರತ್ಯಕ್ಷವಲ್ಲದ ಪ್ರಕ್ರಿಯೆ. ವಾಸ್ತವವಾಗಿ ಉಪ್ಪಿನ ಸತ್ಯಾಗ್ರಹವು ೧೯೩೦ರಲ್ಲಿ ಪ್ರಾರಂಭವಾಯಿತು. ಅದು ಗಾಂಧೀಜಿಯವರ ಉದ್ದೇಶಿತ ರಾಜಕೀಯ ಚಟುವಟಿಕೆಯಾಗಿತ್ತು. ಈ ಉಪ್ಪಿನ ಸತ್ಯಾಗ್ರಹವು ಪ್ರಾರಂಭವಾದಾಗ ಭಾರತದಲ್ಲಿ ಯಾವ ರೀತಿಯ ಪ್ರಜಾಪ್ರಭುತ್ವ ಇರಬೇಕೆಂದು ಗೊತ್ತಿಲ್ಲವೆಂದು ಹೇಳುತ್ತಿದ್ದರು. ಗಾಂಧಿಯ ಪ್ರಕಾರ, ಜನರನ್ನು ತಲುಪಲು ಎರಡು ದಾರಿ ಇದೆ ; ಒಂದು ಬಲಾತ್ಕಾರ, ಮತ್ತೊಂದು ಸತ್ಯಾಗ್ರಹ. ರಾಷ್ಟ್ರೀಯತೆಯನ್ನು ಎತ್ತಿಹಿಡಿಯಲು ಗಾಂಧಿಯವರು ಬಳಸಿಕೊಂಡ ಸತ್ಯಾಗ್ರಹದ ಮಾರ್ಗವು ಸರಳ ರಾಷ್ಟ್ರೀಯತೆಯ ಪ್ರಶ್ನೆಯಾಗಿರಲಿಲ್ಲ. ಆದರೆ ಈ ಮಾದರಿಯ

ರಾಷ್ಟ್ರೀಯತೆಯ ಚಳುವಳಿ ಮತ್ತು ಅದರ ವ್ಯಕ್ತಿಗತ ಪರಿಣಾಮಗಳನ್ನು ಕುರಿತು ಹೇಳುತ್ತಾರೆ. ಈ ಮಾದರಿಯ ಪಲ್ಲಟ ; ಅದರ ಬಗೆಗಿನ ಭ್ರಮನಿರಸನ ; ರಾಷ್ಟ್ರೀಯ ಚಳುವಳಿಯು ಅನಂತರದ ದಿನಗಳಲ್ಲಿ ಅಪಮೌಲ್ಯಕ್ಕೆ ಗುರಿಯಾಗಿರುವುದು ಎದ್ದು ಕಾಣುತ್ತದೆ. ಇದಕ್ಕಿಂತ ಭಿನ್ನವಾದ ಮಾದರಿಯೂ ಇದೆ– ಅದು ಈ ಸರಳ ತೀರ್ಮಾನಗಳನ್ನು ಒಪ್ಪಿಕೊಳ್ಳುವುದಿಲ್ಲ. ಇದರಲ್ಲಿ ಪ್ರಾದೇಶಿಕ ; ಕೌಟುಂಬಿಕ; ಮಾದರಿಗಳ ಬದಲಾವಣೆ ಸೂಕ್ಷ್ಮವಾಗಿವೆ. ಸಾಮಾಜಿಕ ನ್ಯಾಯವೆಂಬುದು ಹಳೆಯ ವೈಚಾರಿಕ ಚೌಕಟ್ಟಿನಲ್ಲಿ ಸಾಧ್ಯವಿಲ್ಲ. ಪ್ರಗತಿ ; ಆಧುನಿಕತೆ ; ಮೌಢ್ಯಗಳ ವಿರೋಧ ಮುಂತಾದವುಗಳನ್ನು ಹೊಸ ಮಾದರಿಯ ಚೌಕಟ್ಟಿನಲ್ಲಿ ಇರಿಸಿಕೊಂಡು ನೋಡುವ ಕ್ರಮ ಇದರಲ್ಲಿ ಮುಖ್ಯ.

ಅಧ್ಯಾಯ – ೪

ನವೋದಯ ಕಾಲದ ಕಾದಂಬರಿಗಳಲ್ಲಿ ಭ್ರಮೆ ಮತ್ತು ಅದರ ನಿರಸನದ ಪ್ರಕ್ರಿಯೆಗಳು

'ಒಡ ಹುಟ್ಟಿದವರು' (೧೯೫೪) ಕಾದಂಬರಿಯ ಮುನ್ನುಡಿಯಲ್ಲಿ ಕಾರಂತರು ಒಂದೆರಡು ಮಾತುಗಳನ್ನು ಹೇಳುತ್ತಾರೆ:

> "ಇದು ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಕಾದಂಬರಿ. ಗಂಡು, ಹೆಣ್ಣುಗಳ ಸ್ನೇಹದ ಬಾಳಿಗೆ ಮದುವೆಗೆ, ಸಂಸ್ಕಾರಕ್ಕೆ ಎಷ್ಟೆಲ್ಲಾ ಮುಖಗಳು ಬಂದಾವೆಂದು ಹೇಳಲು ಬಂದೀತೆ ?".

ಅದರಲ್ಲಿಯೇ, "ಮನಸ್ಸು ಒಡೆಯಲು ದಾಂಪತ್ಯ ಕ್ಷೇತ್ರದಲ್ಲಿ ಎಷ್ಟೊ ಕಾರಣಗಳಿವೆ. ಅನಿವಾರ್ಯವೇ ಆದಲ್ಲಿ ಒಡೆದು ಬೇರೆಯಾದರೂ ಅಪರಾಧವಿಲ್ಲ. ಅನೇಕರಿಗೆ ಹಿತವೂ ಆದೀತು. ಆಗಿದೆ. ಆದರೆ ಒಡೆಯದಂತೆ ಕಾಪಾಡಬೇಕು ಎಂದು ಪ್ರಯತ್ನ ಪೂರ್ವಕವಾಗಿ ನಡೆದುಕೊಳ್ಳುವುದು ಅಷ್ಟೇ ಅವಶ್ಯಕ".

ಈ ಕಾದಂಬರಿಯು ಸ್ವಾತಂತ್ರ್ಯಕಾಲದ ಒಂದೆರಡು ವರ್ಷದ ಹಿಂದು ಮುಂದಿನ ಕತೆಯನ್ನು ಒಳಗೊಂಡಿದೆ. ಕಾದಂಬರಿಯಲ್ಲಿ ವಸಂತಿ ಮತ್ತು ಶೇವಂತಿಯರ ದಾಂಪತ್ಯ ಜೀವನದ ಏರಿಳಿತಗಳೇ ಮುಖ್ಯ. ವಸಂತಿ ಮತ್ತು ಶೇವಂತಿಯರು ಒಡಹುಟ್ಟಿದವರು. ವಸಂತಿಯು ಸುಧಾಕರನನ್ನು ಮದುವೆಯಾಗುತ್ತಾಳೆ. ಹಾಗೂ ಶೇವಂತಿಯು ವಾಸುದೇವರಾಯನನ್ನು ಮದುವೆಯಾಗುತ್ತಾಳೆ. ಅನಂತರದಲ್ಲಿ ಅವರಿಬ್ಬರ ದಾಂಪತ್ಯ ಜೀವನದಲ್ಲಿ ನಡೆಯುವ ನೈತಿಕ ಹಾಗೂ ಅನೈತಿಕ ಸಂಗತಿಗಳ ಘರ್ಷಣೆಗಳೇ ಪ್ರಧಾನವಾಗಿವೆ. ಇವರಿಬ್ಬರ ಮದುವೆಯು ಸಾಂಪ್ರದಾಯಿಕವಾಗಿಯೇ ಜರುಗುತ್ತದೆ.

ಕಾರಂತರ ಸಮೀಕ್ಷೆ ಕಾದಂಬರಿಯಲ್ಲಿ ಬರುವ ಸಂಗತಿಯೊಂದು ಈ ವಿಚಾರವನ್ನು ಮಂಡಿಸುತ್ತದೆ : ಕಾದಂಬರಿಯಲ್ಲಿ ಇದು ರಾಮಚಂದ್ರ ಮತ್ತು ಶ್ರೀನಿವಾಸರಿಗೆ ಸಂಬಂಧಿಸಿದಂತೆ ಬರುತ್ತದೆ.

"ಆದಿತ್ಯವಾರ ಬಂದಿತೆಂದರೆ, ಮಧ್ಯಾಹ್ನ ಅವರ ಬಿಡಾರವು ಒಂದು ಚರ್ಚೆಯ ಬೀಡಾಗುತ್ತಿತ್ತು. ಅದಕ್ಕೆ ಹೊರಗಿನ ನಾಲ್ವರು ಸ್ನೇಹಿತರೂ ಬರುತ್ತಿದ್ದರು. ಚರ್ಚಾ ಸಂಘವೊಂದನ್ನು ಏರ್ಪಡಿಸಿಕೊಂಡಿದ್ದರು. ನಿಕೇತನದ ಕೈ ಬರಹದ ಮಾಸ ಪತ್ರಿಕೆಯೂ ಇತ್ತು. ದೇಶದಲ್ಲಿ ಆಗಷ್ಟೇ ಗಾಂಧಿಯುಗ ತೊಡಗಿಬಿಟ್ಟಿತ್ತು. ಇವರು ಅಸಹಕಾರ ಚಳುವಳಿಕ್ಕೆ ಧುಮುಕದಿದ್ದುದು ಆಶ್ಚರ್ಯ. ಹಿರಿಯರ ಭಯದಿಂದ ಹಾಗೆ ಮಾಡಿರಲಿಲ್ಲ. ಅವರ ಶರೀರ ಅಸ್ವತಂತ್ರವಾಗಿದ್ದರೂ ಮನಸ್ಸು ಸ್ವತಂತ್ರವಾಗಿಲ್ಲ ; ಕನಸು ಕಾಣುವುದಕ್ಕೆ ಅದು ತೀರ ಸ್ವತಂತ್ರ. ಚಂದ್ರ ನಾಗೋರದ ಪತ್ರಿಕೆಗಳಿಂದ ಅರವಿಂದರ ಹೆಸರು ನೊಬೆಲ್ ಬಹುಮಾನದಿಂದಾಗಿ ರವೀಂದ್ರನಾಥರ ಹೆಸರು, ರಾಮಕೃಷ್ಣ ಪಂಥದವರಿಂದ ವಿವೇಕಾನಂದರ ಹೆಸರು – ಅವರಿಗೆ ಆದರ್ಶಪ್ರಾಯವಾಗಿತ್ತು. ಭಾರತದ ಸ್ವಾತಂತ್ರ್ಯ ಭಾರತದ ಉನ್ನತಿ, ಆತ್ಮೋದ್ಧಾರ, ದೇಶಸೇವೆ – ಮೊದಲಾದ ಮಾತುಗಳು ನೀರು ಕುಡಿದಷ್ಟು ಸುಲಭದಲ್ಲಿ ಅವರಿಗೆ ಒಗ್ಗಿಬಂದಿದ್ದವು" (ಸಮೀಕ್ಷೆ, ಪು. ೧೧). ಆದರೆ ಇದು ಯಾವುದೂ ಜೀವನದಲ್ಲಿ ಅರ್ಥಪೂರ್ಣವಾಗುವುದಿಲ್ಲ. ಕಾದಂಬರಿಯಲ್ಲಿ ದೇಶಸೇವಾ ಚಳುವಳಿಯಲ್ಲಿ ತೊಡಗಿದವರ ನಿಜ ಜೀವನದ ಭಗ್ನತೆಯು ಚಿತ್ರಿತವಾಗಿರುವುದು ಗಮನಾರ್ಹ. ಕಾರಂತರ ಕಾದಂಬರಿಗಳಲ್ಲಿ ಒಂದು ಜನವರ್ಗ ರಾಷ್ಟ್ರೀಯತೆ ; ಕರನಿರಾಕರಣೆ ; ಉಪ್ಪಿನ ಸತ್ಯಾಗ್ರಹ ; ಮದ್ಯಪಾನವಿರೋಧ ಮುಂತಾದವುಗಳನ್ನು ಯೋಚಿಸುತ್ತದೆ. ಇದಕ್ಕೆ ತದ್ವಿರುದ್ಧವಾದ ಮತ್ತೊಂದು ಮಾದರಿಯ ಜನವರ್ಗ ಈ ಯಾವುದರ ಕುರಿತೂ ಯೋಚಿಸುವುದಿಲ್ಲ. ಈ ವೈರುದ್ಯಗಳ ನಡುವಣ ಬಿಕ್ಕಟ್ಟನ್ನು ಕಾರಂತರು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಅಥವಾ ಬೇರೊಂದು ಮಾತಲ್ಲಿ ಹೇಳಬೇಕೆಂದರೆ ಕಾರಂತರ ಕಾದಂಬರಿಗಳ ವಿಸ್ತಾರ ಜಗತ್ತಿನಲ್ಲಿ ಕೆಲವರು ಮಾತ್ರ ರಾಷ್ಟ್ರೀಯತೆಯಲ್ಲಿ ತೊಡಗಿಸಿಕೊಂಡವರು. ಕಾರಂತರ ಕಾದಂಬರಿಗಳಲ್ಲಿ ಈ ಪ್ರಶ್ನೆಯು ಬೇರೆ ಬೇರೆ ಥರ ಬರುತ್ತದೆ,

ಅರ್ಥಶಾಸ್ತ್ರ ಮತ್ತು ಅದರ ತಾತ್ವಿಕಪ್ರಶ್ನೆಗಳನ್ನು ನಾವು ಸಾಮಾನ್ಯವಾಗಿ ಬೇರೆ ಎಂದು ಹೇಳುತ್ತೇವೆ. ಮತ್ತು ಅದಕ್ಕೂ ಸಾಹಿತ್ಯಕ್ಕೂ ಯಾವುದೇ ಸಂಬಂಧವಿಲ್ಲವೆನ್ನುವುದು ನಮ್ಮ ಅನೇಕರ ಗ್ರಹಿಕೆಯಾಗಿದೆ. ಆದರೆ ವಾಸ್ತವವಾಗಿ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆ, ಕಾನೂನು, ಮತ್ತು ನಾಗರಿಕತೆಯ ಪ್ರಶ್ನೆಗಳು ಒಂದಕ್ಕೊಂದು ಪೂರಕವಾದ ನಿಲುವನ್ನು ಹೊಂದಿರುತ್ತದೆ. ಯಾವುದನ್ನು ನಾವು ನಾಗರಿಕ ಬದುಕು ಎಂದು ಕರೆಯುತ್ತೇವೆಯೋ ಅದು ರಾಜಕೀಯ ಅರ್ಥಶಾಸ್ತ್ರಗಳಿಗಿಂತ ಭಿನ್ನವಲ್ಲ. ಅಂದರೆ ರಾಜಕೀಯ ಅರ್ಥಶಾಸ್ತ್ರವು ನಮ್ಮ ಜೀವನವನ್ನು ನಿಯಂತ್ರಿಸುತ್ತದೆ. ಆದರೆ ಯಾವುದನ್ನು ರಾಜಕೀಯ ಅರ್ಥಶಾಸ್ತ್ರವೆಂದು ಹೇಳುತ್ತೇವೆಯೋ ಅದು ಪ್ರಭುತ್ವಕ್ಕಿಂತ ಭಿನ್ನವಲ್ಲ. ರಾಜಕೀಯ ಅರ್ಥಶಾಸ್ತ್ರವನ್ನು ಕುರಿತು ಹೇಳುವಾಗ ಒಂದು ರೀತಿಯ ಎಚ್ಚರವು ಬೇಕಾಗುತ್ತದೆ. ರಾಜಕೀಯ ಈವತ್ತು ಹೇಳುತ್ತಿರುವ ಅಭಿವೃದ್ಧಿಯು ಬಡ ಜನರನ್ನು ಕೇಂದ್ರಿಕರಿಸಿಕೊಂಡಿಲ್ಲ. ರಾಜಕೀಯವು ಸಾಹಿತ್ಯ ಮತ್ತು ಅದರ ಹಿಂದಿರುವ ಒಲವುಗಳನ್ನು ನೋಡುವ ಕ್ರಮಗಳು ಬೇರೆ. ರಾಜಕೀಯ ಅರ್ಥಶಾಸ್ತ್ರವು ಪ್ರಾರಂಭವಾಗುವುದೇ ಖಾಸಗಿ

ಆಸ್ತಿಯ ಪರಿಕಲ್ಪನೆಯಿಂದ. ರಾಜಕೀಯ ಅರ್ಥಶಾಸ್ತ್ರವು ಮಾತ್ರವೇ ಅದನ್ನು ಸರಿಯಾಗಿ ವಿವರಿಸುತ್ತದೆ ಎಂದು ಮಾರ್ಕ್ಸ್ ಹೇಳಿದ್ದು ಉಲ್ಲೇಖನೀಯ. ಚೋಮನದುಡಿ ಕಾದಂಬರಿಯ ಮುಖ್ಯ ಪ್ರಶ್ನೆಯಿದು. ರಾಜಕಾರಣ ಮತ್ತು ಅದರ ಪರಿಣಾಮಗಳು ಭೂಮಿ, ಕಂದಾಯ, ಮೆಶಿನ್‌ಗಳು, ಬಂಡವಾಳ, ಉತ್ಪಾದನೆಯ ಕ್ರಮ, ವಿನಿಮಯ, ಸ್ಪರ್ಧೆಗಳು, ಹಣ ಮುಂತಾದವುಗಳು ರಾಜಕೀಯ ಅರ್ಥಶಾಸ್ತ್ರಗಳ ಪ್ರಶ್ನೆಯೇ ಆಗಿದೆ. ಯಾವಾಗ ಸಾಮಾಜಿಕ ಸಂಪನ್ಮೂಲದಲ್ಲಿ ಸಮಸ್ಯೆಯು ಉಂಟಾಗುತ್ತದೆಯೋ ಆಗ ಅದರ ಸಮಸ್ಯೆಯು ಸಾಮಾನ್ಯರ ಮೇಲೆ ಆಗುತ್ತದೆ. ಆರ್ಥಿಕ ಬಿಕ್ಕಟ್ಟು ಕಾರ್ಮಿಕರ ಮೇಲೆ ಪರಿಣಾಮವನ್ನು ಉಂಟು ಮಾಡುತ್ತದೆ. ಹಾಗೆಯೇ ಯಾವಾಗ ಸಂಪನ್ಮೂಲದಲ್ಲಿ ಹೆಚ್ಚಳವುಂಟಾಗುತ್ತದೆಯೋ ಆಗ ಅದರ ಲಾಭವನ್ನು ಮಾತ್ರ ಸಾಮಾನ್ಯರು ಪಡೆಯುವುದಿಲ್ಲ. ಜಾರುವ ದಾರಿಯಲ್ಲಿ ಈ ಪ್ರಶ್ನೆಯಿದೆ. ಅದೇ ಊರು ಅದೇ ಮರ ಕಾದಂಬರಿಯಲ್ಲಿಯೂ ಭಿನ್ನ ಚಿತ್ರಣವಿದೆ. (ಪುಟ. ೧೭೯) ಕಾರಂತರ ಇದ್ದರೂ ಚಿಂತೆ ಕಾದಂಬರಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್ ಪ್ರಶ್ನೆಯೂ ಬರುತ್ತದೆ. ಅಂಗಡಿಯ ನಷ್ಟದ ಸಮಸ್ಯೆ ಬರುತ್ತದೆ. (ಇದ್ದರೂ ಚಿಂತೆ. ಪುಟ ೧೧೪) ಇದು ಯಾವಾಗಲೂ ಒಂದು ಸಮಾಜದಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ. ಬಂಡವಾಳವು ಹೆಚ್ಚಾದ ವೇಳೆ ಬರುವ ಸಮಸ್ಯೆ ಎಂದರೆ ಅದು ವರ್ಗಗಳನ್ನು ಸ್ಪಷ್ಟವಾಗಿಯೇ ಬೇರೆ ಬೇರೆ ಮಾಡುತ್ತದೆ. ಸಂಪನ್ಮೂಲದಲ್ಲಿನ ಹಂಚಿಕೆಯು ಸರಿಯಾಗಿ ಇಲ್ಲದ ವೇಳೆ ಆಗುವ ಪರಿಣಾಮವಿದು. ಮತ್ತೆ ನಾವು ಗಮನಿಸಬೇಕಾದ ಅಂಶವೆಂದರೆ ಕೆಲಸದ ವರ್ಗೀಕರಣವು ಭಿನ್ನವಾದ ಪ್ರಶ್ನೆಗಳನ್ನು ಸೃಷ್ಟಿಸುತ್ತದೆ. ಆಧುನಿಕಯುಗದ ಯಂತ್ರಗಳು ಒಂದು ಮಾದರಿಯ ಕಾರ್ಮಿಕರನ್ನು ಸೃಷ್ಟಿ ಮಾಡುತ್ತದೆ. ಆಧುನಿಕ ಜಗತ್ತಿನಲ್ಲಿ ಯಾವುದನ್ನು ನಾಗರಿಕತೆಯೆಂದು ಕರೆಯುತ್ತೇವೆಯೋ ಅದರ ಹಿನ್ನೆಲೆಯಲ್ಲಿ ಬೇರೆ ಬೇರೆ ಪ್ರಶ್ನೆಗಳೂ ಉದ್ಭವವಾಗಿದೆ ಎನ್ನುವುದನ್ನು ನಾವು ಮರೆಯಬಾರದು. ಹೊಸ ಕಾನೂನುಗಳು ಹೇಗೆ ಬಂದವು. ಅದರ ಪರಿಣಾಮಗಳು ಏನು ಎಂಬುದನ್ನು ಅದೇ ಊರು, ಅದೇ ಮರದಲ್ಲಿ ವಿವರಿಸುತ್ತಾರೆ. (ಪುಟ. ೨೨೦) ಹೊಸ ಕಾಯಿದೆಯಗಳು ಮತ್ತು ಬಡ್ಡಿಯ ಹಣದ ಪ್ರಶ್ನೆಯನ್ನು ಇದು ಹೇಳುತ್ತದೆ. ದೊಡ್ಡ ಬಂಡವಾಳಶಾಹಿಗಳು ಸಣ್ಣ ಬಂಡವಾಳಶಾಹಿಗಳನ್ನು ನಾಶ ಮಾಡುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಸಮಾಜವು ಯಾರ ಪರ ಎನ್ನುವುದೇ ಜಾರುವದಾರಿಯಲ್ಲಿಯ ದೊಡ್ಡ ಪ್ರಶ್ನೆ. ಯಾವ ಸಮಾಜದಲ್ಲಿ ಬಂಡವಾಳವಾದವು ಅತ್ಯಂತ ತುರೀಯವಾದ ಅವಸ್ಥೆಗೆ ತಲುಪುತ್ತದೆಯೋ ಆಗ ಅಲ್ಲಿ ತಾರತಮ್ಯ ನೀತಿಗಳೂ ಹೆಚ್ಚಾಗುತ್ತವೆ. ಬಂಡವಾಳವಾದಿ ಸಮಾಜದಲ್ಲಿ ವ್ಯಕ್ತಿಯ ಕುರಿತಾದ ನಿರೂಪಣೆಗಳು ಬೇರೆಯಾಗುತ್ತವೆ. ಸಾಮಾಜಿಕ ಜೀವನವನ್ನು ನಾವು ಬಂಡವಾಳವಾದದ ಹಿನ್ನೆಲೆಯಿಂದ ಅರ್ಥ ಮಾಡಿಕೊಳ್ಳುವ ಕ್ರಮಗಳು ಭಿನ್ನ. ಬಂಡವಾಳವಾದವು ಮನುಷ್ಯರನ್ನು ನೋಡುವ ಕ್ರಮವು ಕೂಡಾ ಬೇರೆಯಾಗಿದೆ. ಯಾವ ಸಮಾಜಲ್ಲಿ ಬಂಡವಾಳವಾದ ಅತ್ಯಂತ ತುತ್ತ ತುದಿಗೆ ಹೋಗಿರುತ್ತದೆಯೋ ಆಗ ಅಲ್ಲಿ ವ್ಯಕ್ತಿಯ ಅಸ್ತಿತ್ವಕ್ಕೆ ಬೇರೆ ಅರ್ಥಗಳು ಬಂದಿರುತ್ತವೆ. ಆದರೆ ಬಂಡವಾಳವಾದವು ವ್ಯಕ್ತಿಯನ್ನು ಶ್ರೀಮಂತ ಮತ್ತು ಬಡವ ಎಂದು ವರ್ಗೀಕರಿಸುತ್ತದೆ. ಹಲವು ಬಡವರು ಮತ್ತು ಕೆಲವು ಶ್ರೀಮಂತರು ಎನ್ನುವ ವರ್ಗಗಳು ನಿರ್ಮಾಣವಾಗುತ್ತವೆ. ಅದೇ ಕಾದಂಬರಿ ವಟಪುರದ ದುಷ್ಕಾಲದ ಚಿತ್ರಣವೂ ಇದೆ. (ಪುಟ. ೮೨) ಗಂಜಿಗೆ ತತ್ವಾರ ಬಂದಿದೆ. ಜನರಿಗೆ ಆತಂಕವುಂಟಾಗಿದೆ. ಬದುಕಲು ದಾರಿಯಿಲ್ಲವಾಗಿದೆ.

ಈ ಪರಿಸ್ಥಿತಿಯು ಅವರು ಇವರು ಅಂತಲ್ಲ ಎಲ್ಲರಿಗೂ ಬಂದಿದೆ. ಗಂಜಿಯ ಬರಗಾಲವು ಬ್ರಾಹ್ಮಣ ಅಕ್ಕಸಾಲಿ, ಗಾಣಿಗ ಎಂಬ ಪ್ರಶ್ನೆಯಿಲ್ಲ. ಹಸಿದ ಬಾಯಿಗಳು ಜಾತಿಯನ್ನು ಗಣಿಸಲಿಲ್ಲ. (ಅದೇ ಮರ, ಪುಟ. ೮೩) ಎಲ್ಲಿ ಕಾರ್ಮಿಕರ ನಡುವೆ ಸ್ಪರ್ಧೆ ಇರುತ್ತದೆಯೋ ಅಲ್ಲಿ ಕಡಿಮೆ ಬೆಲೆಯ ಸರಕುಗಳು ಸಿಗುತ್ತವೆ. ಬಂಡವಾಳವಾದವು ಅಸಹಜವಾದ ಹಿಂಸೆಯನ್ನು ಸೃಷ್ಟಿಸುತ್ತದೆ. ಕೆಲವೇ ಶ್ರೀಮಂತರನ್ನು ಸಾಕಲು ಅದು ಅನಿವಾರ್ಯವೆಂಬಂತೆ ಹಿಂಸೆಯನ್ನು ಸೃಷ್ಟಿಸುತ್ತದೆ. ಅದಕ್ಕೆ ಅದು ಮುಖ್ಯವೆಂಬಂತೆ ಭಾಸವಾಗುತ್ತದೆ. ಬಂಡವಾಳವಾದದಲ್ಲಿ ಕಾರ್ಮಿಕರು ತಮ್ಮ ದೇಹ ಮತ್ತು ಮನಸ್ಸನ್ನು ತ್ಯಾಗ ಮಾಡಬೇಕಾಗುತ್ತದೆ. ವಾಸ್ತವವಾಗಿ ಕೆಲಸದ ವರ್ಗೀಕರಣ ಪರಿಕಲ್ಪನೆಯು ಹೆಚ್ಚು ಹೆಚ್ಚು ನಿರ್ದಿಷ್ಟ ಕೌಶಲವನ್ನು ರೂಪಿಸುತ್ತದೆ. ಮತ್ತು ನಿರ್ದಿಷ್ಟವಾದ ಜನರನ್ನು ಮೆಶಿನ್‌ಗಳ ಅಗತ್ಯಕ್ಕಾಗಿ ರೂಪಿಸಲಾಗುತ್ತದೆ. ಇದು ಮಾತ್ರವೇ ಅಲ್ಲ, ಜನರಿಗೆ ಮೆಶಿನ್‌ಗಳೇ ಸ್ಪರ್ಧೆಯನ್ನು ಉಂಟು ಮಾಡುತ್ತವೆ. ಇದ್ದರೂ ಚಿಂತೆ ಕಾದಂಬರಿಯಲ್ಲಿ ಭಾಂಡವಾಳು ಎಂದೂ ಕರೆಯುತ್ತಾರೆ. (ಪುಟ. ೧೧೫) ಹಾಗೆ ನೋಡಿದರೆ ಯಂತ್ರಗಳು ಮನುಷ್ಯರ ಸೃಷ್ಟಿ. ಆದರೆ ಅದುವೇ ಜನರಿಗಿಂತ ಹೆಚ್ಚಿನ ಉತ್ಪಾದನೆಯನ್ನು ಮಾಡುತ್ತದೆ. ಯಾವಾಗ ಯಂತ್ರಗಳಿಂದ ಉತ್ಪಾದನೆಯು ಹೆಚ್ಚು ನಡೆಯುತ್ತದೆಯೋ ಆಗ ವೇತನವು ಕಡಿಮೆಯಾಗುತ್ತದೆ ಎನ್ನುವುದೂ ನಿಜ.ಆದರೆ ನಾವು ಮತ್ತೊಂದು ಅಂಶವನ್ನು ಹೀಗೆ ಹೇಳಬಹುದು–ಅದು ಯಂತ್ರಗಳು ಅಪಾಯವಲ್ಲ, ಆದರೆ ಅದನ್ನು ಉಪಯೋಗಿಸುವ ಸಂದರ್ಭದಲ್ಲಿ ನಮಗೆ ವಿವೇಕ ಬೇಕು. ಕಾರ್ಮಿಕರು ಎಂದರೆ ಜೀವನ ಕ್ರಮವೂ ಹೌದು. ವ್ಯಾಪಾರ, ಉದ್ದಿಮೆ, ಕಾರ್ಮಿಕರು, ಸಂಸ್ಥೆಗಳ ಕುರಿತು ಇದ್ದರೂ ಚಿಂತೆಯಲ್ಲಿ ವಿವರಿಸಿದ್ದಾರೆ. (ಪುಟ. ೩೮) ಅದನ್ನು ಕೇವಲ ದುಡಿಮೆ ಎಂದು ಹೇಳಬೇಕಾಗಿಲ್ಲ. ಈ ಪ್ರಶ್ನೆಯು ಈಗ ಬಹಳ ಮಹತ್ವದ್ದೂ ಹೌದು. ಮಾರ್ಕ್ಸವಾದದ ಪ್ರಕಾರ ಎಲ್ಲಿ ಸಂಪನ್ಮೂಲದ ಕೊರತೆಯು ಆಗುತ್ತದೆಯೋ ಅಗ ಅದರ ಪರಿಣಾಮವು ಜನರ ಮೇಲೆ ಆಗುತ್ತದೆ. ಅದರಲ್ಲಿಯೂ ಅದು ಹೆಚ್ಚು ಪರಿಣಾಮವನ್ನು ಬೀರುವುದು ಕಾರ್ಮಿಕರ ಮೇಲೆ. ಯಾರೋ ಒಂದಿಬ್ಬರ ಖಾಸಗಿ ಆಸಕ್ತಿ ಮತ್ತು ಅವರು ಹಣವನ್ನು ಚಲಾಯಿಸುವ ರೀತಿಯನ್ನು ನೋಡಿ ನಾವು ಇಡಿಯ ಸಮಾಜವೇ ಅಭಿವೃದ್ಧಿಯಾಯಿತು ಎಂದು ಹೇಳುವುದು ಕಷ್ಟ. ಹಣವೆನ್ನುವುದನ್ನು ನಾವು ವಿವರಿಸುವುದು ಕಷ್ಟ. ಹಣವೆನ್ನುವುದರ ಮೌಲ್ಯ ನಿರ್ಧರಿತವಾಗುವುದೇ ರಾಷ್ಟ್ರ ; ಪ್ರಭುತ್ವ ಮತ್ತು ಮಾರುಕಟ್ಟೆಯಲ್ಲಿ ; ಅಂತರರಾಷ್ಟ್ರೀಯ ಮಾರುಕಟ್ಟೆ ಮತ್ತು ದರದ ಪ್ರಶ್ನೆ ಮುಖ್ಯ. ಖಾಸಗಿಯಾದ ಅಭಿವೃದ್ಧಿಯೇ ಸಾಮಾಜಿಕ ಅಭಿವೃದ್ಧಿ ಎಂದು ಹೇಳಲು ಬರುವುದೂ ಇಲ್ಲ. ಒಂದು ಸಮಾಜವು ಜನರ ಪರವಾಗಿ ಇಲ್ಲದೆ ಹೋದರೆ ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ಹೇಳುವುದು ಅಸಾಧ್ಯ. ಅನೇಕರು ರಾಜಕಾರಣವೆಂದರೆ ಅದು ಜನರಿಂದ ದೂರವಾದ ಮತ್ತು ಕೆಲವೇ ಜನರಿಗೆ ಅಗತ್ಯವಾದ ಚಟುವಟಿಕೆಯೆಂದು ಭಾವಿಸುತ್ತಾರೆ. ಈಗ ನಡೆಯುತ್ತಿರುವುದು ಇದು. ಬಂಡವಾಳವಾದಿ ವ್ಯವಸ್ಥೆಯಲ್ಲಿ ಕಾರ್ಮಿಕರು ಉತ್ಪನ್ನದ ಹೆಚ್ಚಿನ ಭಾಗವನ್ನು ಪಡೆಯುವುದಿಲ್ಲವೆನ್ನುವುದೂ ಅಷ್ಟೇ ಸತ್ಯ. ಹಾಗೆ ನೋಡುವುದಿದ್ದರೆ ಕಾರ್ಮಿಕರು ಪಡೆಯುವ ವೇತನವು ಉತ್ಪನ್ನದ ಅರ್ಧ ಭಾಗದಷ್ಟೂ ಆಗುವುದಿಲ್ಲ. ಲಾಭದ ನಾಲ್ಕನೆಯ ಒಂದು ಭಾಗವೂ ಕಾರ್ಮಿಕರಿಗೆ ತಲುಪುವುದೂ ಇಲ್ಲ. ರಾಜಕೀಯ ಆರ್ಥಿಕ ತಜ್ಞರ ಪ್ರಕಾರ ಕಾರ್ಮಿಕರ ಒಟ್ಟು ಶ್ರಮವನ್ನು ಲೆಕ್ಕ ಹಾಕದೇ

ಬಂಡವಾಳ, ಅದರ ಹೂಡಿಕೆ, ಅದರ ಲಾಭ, ಹಾಗೂ ಅದರ ಒಟ್ಟು ಉತ್ಪಾದನೆಯನ್ನು ಲೆಕ್ಕ ಹಾಕಬೇಕು. ಆದರೆ ಅದು ಆಗುವುದೂ ಇಲ್ಲ. ಬಂಡವಾಳವು ಒಂದು ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸುವಾಗ ಅದರ ಬೆಲೆ ಅದರ ಹಿಂದಿನ ಶಕ್ತಿ ಎರಡೂ ನಮ್ಮ ಗಮನಕ್ಕೇ ಬರಬೇಕು. ಹಣವು ಒಂದು ಸಂದರ್ಭದಲ್ಲಿ ಮನುಷ್ಯರನ್ನು ಸುಖದ ಕಡೆಗೆ ತಳ್ಳಿತು. ಕಾರ್ಮಿಕರ ಶಕ್ತಿಯನ್ನು ನಾವು ಮನಗಾಣುವುದೇ ಇಲ್ಲ. ಮನುಷ್ಯರಾಗಿ ಅವರು ತಮ್ಮ ಜೀವನವನ್ನು ವ್ಯವಸ್ಥೆಗೆ ಬಲಿ ನೀಡುತ್ತಾರೆ. ರಾಜಕೀಯ ಅರ್ಥ ಶಾಸ್ತ್ರಜ್ಞರ ಪ್ರಕಾರ ಕಾರ್ಮಿಕರ ದುಡಿಮೆಗೆ ಕೇವಲ ನಿಗದಿತ ಬೆಲೆಯಿದೆ. ಆದರೆ ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ ನಾವು ಅನೇಕ ವಿಷಯಗಳನ್ನು ನೋಡುವುದೇ ಇಲ್ಲ. ಬಂಡವಾಳವಾದವು ತನ್ನ ಲಾಭಕ್ಕೆ ತನ್ನ ಕಾರ್ಮಿಕರನ್ನೇ ಬಲಿ ತೆಗೆಯುತ್ತದೆ. ಅಷ್ಟೇ ಅಲ್ಲ ಅದು ಏನು ಮಾಡುತ್ತದೆ ಎಂದರೆ ಕಾರ್ಮಿಕರಿಗಾಗಿ ಕಾನೂನನ್ನು ರೂಪಿಸುತ್ತದೆ. ಕಾರ್ಮಿಕರು ಎಷ್ಟು ಹೊತ್ತು ಕೆಲಸವನ್ನು ಮಾಡಬೇಕು ಎನ್ನುವುದನ್ನು ನಿರ್ಧರಿಸುವುದು ಬಂಡವಾಳವಾದವೇ. ವಾಸ್ತವವಾಗಿ ಕಾರಂತರು ತಮ್ಮ ಕಾದಂಬರಿಗಳಲ್ಲಿ ಜೀವನ ಮತ್ತು ಅದರ ಹಿನ್ನೆಲೆಯನ್ನು ವಿಭಿನ್ನವಾಗಿ ಅರ್ಥ ಮಾಡಿಕೊಂಡಿದ್ದಾರೆ, ಅವರಿಗೆ ಜೀವನ ಎನ್ನುವುದು ಅತ್ಯಂತ ಮುಖ್ಯವಾಗಿದೆ.

ಹತ್ತೊಂಬತ್ತನೆಯ ಶತಮಾನದ ಸಾಹಿತ್ಯದಲ್ಲಿ ಕಾದಂಬರಿಯೂ ಒಂದು. ಬದಲಾಗುತ್ತಿರುವ ಸನ್ನಿವೇಶದಲ್ಲಿ ಇದು ಅತ್ಯಂತ ಅಗತ್ಯವಾದ ಒಂದು ಸಾಹಿತ್ಯ ಪ್ರಕಾರವೂ ಹೌದು. ಅಗಲೇ ಸಾಹಿತ್ಯದಲ್ಲಿ ಆತ್ಮ ಯಾವುದು ಮತ್ತು ಸಾಹಿತ್ಯದಲ್ಲಿ ದೇಹವು ಯಾವುದು ಎನ್ನುವ ಪ್ರಶ್ನೆಯು ಬಂದಿತ್ತು. ಆದ್ದರಿಂದ ಈವತ್ತು ನಾವು ಸಾಹಿತ್ಯದ ಪ್ರಶ್ನೆಯನ್ನು ಬೇರೆ ಬೇರೆ ಥರ ನೋಡಲು ನಮಗೆ ಅವಕಾಶವೂ ಇದೆ. ಇದಕ್ಕೆ ಒಂದು ರಾಚನಿಕವಾದ ಅರ್ಥವೂ ಇದೆ. ದೇಹ ಎನ್ನುವುದು ನಮಗೆ ರಚನೆ. ಆದರೆ ಅದರಲ್ಲಿ ಬರುವ ಆಶಯವು ಆತ್ಮದಂತೆ ಕೆಲಸವನ್ನು ಮಾಡುತ್ತದೆ. ಈ ಮಾತು ನಮ್ಮ ಜೀವನಕ್ಕೂ ಅನ್ವಯವಾಗುತ್ತದೆ. ಯಾವುದನ್ನು ನಾವು ಆಶಯ ಎಂದು ಹೇಳುತ್ತೇವೆಯೋ ಅದು ವಾಸ್ತವತೆಯ ಜೊತೆಗೆ ಒಂದು ಸಂಬಂಧವನ್ನು ಇಟ್ಟುಕೊಂಡಿರುತ್ತದೆ. ಬಾಹ್ಯದ ಜಗತ್ತು ಕೃತಿಯನ್ನು ನಿರ್ದೇಶಿಸುತ್ತದೆ. ಕಾದಂಬರಿ ಎನ್ನುವುದು ಈ ದೃಷ್ಟಿಯಿಂದ ಒಂದು ವಾಸ್ತವವನ್ನು ಹೇಳುತ್ತದೆ. ಬಾಹ್ಯ ಎಂದರೆ ಅದು ಮೇಲೆ ಕಾಣುವ ಒಂದು ಬಗೆಯ ಸತ್ಯವೂ ಮಾತ್ರವೇ ಅಲ್ಲ ಎನ್ನುವುದನ್ನು ನಾವು ಇಲ್ಲಿ ಒಪ್ಪಬೇಕಾಗುತ್ತದೆ. ಹಾಗೆಯೇ ಒಂದು ಕೃತಿಯಲ್ಲಿ ಬರುವ ಆಶಯವು ವಾಸ್ತವ ಎನ್ನುವುದನ್ನು ಕೇಂದ್ರ ಮಾಡಿಕೊಂಡಿರುತ್ತದೆ ಎಂದು ಲುಕಾಕ್ಸ್ ಹೇಳುತ್ತಾನೆ. ಅವನು ಹೇಳುವಂತೆ ನಿಜವಾದ ಒಂದು ವಾಸ್ತವತೆ ಎಂದರೆ ಅದು ಜಗತ್ತಿನ ಒಂದು ಸಾರ ರೂಪವೂ ಹೌದು. ಮೇಲು ನೋಟಕ್ಕೆ ಅತ್ಯಂತ ಸರಳವಾದ ಒಂದು ದ್ವಂದ್ವದಂತೆ ಕಾಣುತ್ತದೆ. ಈ ವಿಚಾರಗಳು ನಮಗೆ ಇನ್ನೊಂದು ಆಯಾಮವನ್ನು ಸೂಚಿಸುತ್ತದೆ. ಜಗತ್ತು ಮತ್ತು ಮನಸ್ಸು ಎನ್ನುವುದೂ ಒಂದು ದ್ವಂದ್ವಾತ್ಮಕವಾದ ಸಂಗತಿಯೂ ಆಗಿರುತ್ತದೆ. ಹಾಗೆಯೆ ಲೌಕಿಕ ಮತ್ತು ಆಗಮಿಕ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ನಮ್ಮ ನಿತ್ಯದ ಸಂಗತಿ ಹಾಗೂ ನಮ್ಮ ಆಗಮಿಕ ಸಂಗತಿಗಳಿಗೂ ಒಂದು ಸಂಬಂಧವಿದೆ. ಇಡೀ ಜಗತ್ತಿಗೂ ನಮಗೂ ಒಂದು ಸಂಬಂಧವಿದೆಯಾದರೆ ನಾವು ಅದನ್ನು ಗ್ರಹಿಸುವುದು ನಮ್ಮ ವಾಸ್ತವಕ್ಕೆ ಅನುಸಾರವಾಗಿ ಮಾತ್ರ. ನಾವು ಈಗ ಹೇಗೆ ಇದ್ದೇವೆ ಮತ್ತು ನಾವು ಹೇಗೆ ಆಗಬೇಕು ಎನ್ನುವುದೂ ಇದರ

ಒಂದು ಭಾಗ ಮಾತ್ರ. ಲುಕಾಕ್ಸ್ ಹೇಳುವುದನ್ನು ನಾವು ಇಲ್ಲಿ ಗಮನಿಸಬೇಕು : ಆದರ್ಶ ಮತ್ತು ವಾಸ್ತವ ಎನ್ನುವುದು ಪರಸ್ಪರ ಸಂಬಂಧವನ್ನು ಇಟ್ಟುಕೊಂಡಿರುವ ಸಮಸ್ಯೆಯೂ ಹೌದು. ಅದು ಜೀವನದ ಕ್ರಮವೂ ಹೌದು. ಅದು ದೃಷ್ಟಿಕೋನವನ್ನು ಸೂಚಿಸುತ್ತದೆ. ಮಹಾಕಾವ್ಯ ಮತ್ತು ಅದರ ಸಂಯೋಜನೆಯು ಕೂಡಾ ಸಂಕೇತವನ್ನು ಒಳಗೊಳ್ಳುವ ಸನ್ನಿವೇಶದಲ್ಲಿಯೂ ಲೌಕಿಕ ಮತ್ತು ಆಗಮಿಕ ಎನ್ನುವುದು ಒಂದು ವಿಶಿಷ್ಟವಾದ ಸಂಯೋಜನೆಯು ಇರುತ್ತದೆ. ಆದರೆ ಮಹಾಕಾವ್ಯದಲ್ಲಿ ಬರುವ ಸಂಕೇತಗಳು ಮಹತ್ವದ್ದೂ ಹೌದು. ಅದು ಕೂಡಾ ನಮಗೆ ಒಂದು ಭಾವನೆಯನ್ನು ಹೇಳುತ್ತದೆ. ಅದರ ಜೊತೆಗೆ ಅದಕ್ಕೂ ಮನೋಸ್ಥಿತಿಗೂ ಸಂಬಂಧವಿದೆ. ಅದು ಪ್ರಾತಿನಿಧಿಕವೂ ಹೌದು. ಯಾವುದು ಜೀವನದಲ್ಲಿ ಅರ್ಥಹೀನವಾಗಿದೆ ಮತ್ತು ಯಾವುದು ಜೀವನದಲ್ಲಿ ಅರ್ಥಪೂರ್ಣವಾಗಿದೆ ಎನ್ನುವುದನ್ನು ನಮಗೆ ಆದಿಪುರಾಣದಂಥ ಕೃತಿಯು ಹೇಳುತ್ತದೆ. ಅದರಲ್ಲಿ ಬರುವ ಧರ್ಮ ಮತ್ತಯ ಆತ್ಮದ ಪ್ರಶ್ನೆಯು ಕಾವ್ಯದಲ್ಲಿ ಯಾವ ಜಾಗವನ್ನು ಪಡೆದಿದೆ ಎನ್ನುವುದನ್ನು ಸೂಚಿಸುತ್ತದೆ. ಜೀವನ ಎನ್ನುವುದು ನಶ್ವರ ಎನ್ನುವುದು ಅದರ ಪ್ರಮುಖವಾದ ನಿಲುವು. ಇದನ್ನು ಎಲ್ಲರೂ ಒಪ್ಪುತ್ತಾರೆ.ಯಾವುದು ಜೀವನದಲ್ಲಿ ಸ್ವೀಕಾರಕ್ಕೆ ಅರ್ಹವಾಗಿದೆ ಮತ್ತು ತ್ಯಾಜ್ಯ ಎನ್ನುವುದು ಅತ್ಯಂತ ಮುಖ್ಯ. ಯಾಕೆಂದರೆ ಅದು ಜೀವನ ಅತ್ಯಂತ ಅನಿವಾರ್ಯವಾದ ಸಂಗತಿಯೂ ಹೌದು. ಪಂಪ ಜೀವನದ ವಿವಿಧ ಆಯಾಮಗಳನ್ನು ಹೇಳಿದ ಕವಿಯೂ ಹೌದು. ಅದರಲ್ಲು ಕುಟುಂಬ ಇದೆ, ಮದುವೆ ಇದೆ, ದಾಂಪತ್ಯದ ಸುಖ ಮತ್ತು ಅದರ ಶೃಂಗಾರದ ರಸ ಘಟ್ಟವೂ ಇದೆ. ದಾಯಾದಿಗಳ ಕಲಹವೂ ಇದೆ. ಆದ್ದರಿಂದ ನಮಗೆ ಜೀವನ ಮತ್ತು ವಿವಿಧ ಆಯಾಮಗಳನ್ನು ನಾವು ಈ ಕೃತಿಯಲ್ಲಿ ನೋಡಲು ಸಾಧ್ಯವಾಗುತ್ತದೆ. ನಮ್ಮ ಜೀವನವು ಅನೇಕ ರೀತಿಯ ಕಷ್ಟಗಳನ್ನು ಎದುರಿಸುತ್ತದೆ. ಅದರ ಜೊತೆಗೆ ನಮಗೆ ಬರುವ ಸಮಸ್ಯೆಗಳನ್ನು ಮುಕ್ತಾಯ ಮಾಡಲು ಬೇರೆ ದಾರಿಯೂ ಬೇಕಾಗುತ್ತದೆ. ಪರಿನಿರ್ವಾಣ ಎನ್ನುವುದು ಇದನ್ನು ದಾಟುವ ಕ್ರಮವೂ ಹೌದು. ಕಾದಂಬರಿಯಲ್ಲಿ ಬರುವ ನಾಯಕನ ಅನನ್ಯತೆಯು ಒಂದು ಬಗೆಯಲ್ಲಿ ಇದ್ದರೆ ಮಹಾಕಾವ್ಯದಲ್ಲಿ ಬರುವ ನಾಯಕನು ಮತ್ತೊಂದು ಬಗೆಯಲ್ಲಿ ಇರುತ್ತಾನೆ. ದೇವರ ನೆರವು ಮಹಾಕಾವ್ಯದ ನಾಯಕನಿಗೆ ಇರುತ್ತದೆ. ಅದಕ್ಕೆ ಅನುಗುಣವಾದ ಕ್ರಿಯೆ ಇರುತ್ತದೆ.

ಮಹಾಕಾವ್ಯವು ಯಾವತ್ತೂ ನಮ್ಮ ಬಾಹ್ಯದ ಸಂಗತಿಗಳನ್ನು ಮತ್ತು ವಾಸ್ತವವನ್ನು ನಿರೂಪಿಸುತ್ತದೆ. ಅದರ ಅಭಿವ್ಯಕ್ತಿಯೂ ಭಿನ್ನವಾಗುತ್ತದೆ. ಭಾವನೆ ಮತ್ತು ಅದರ ಸ್ವರೂಪಕ್ಕೆ ಅನುಸಾರವಾಗಿ ಕಾದಂಬರಿಯು ರಚನೆಗೊಳ್ಳುತ್ತದೆ. ಅದನ್ನು ನಾವು ಕಾದಂಬರಿಯ ರಚನೆಯ ಕ್ರಮದಲ್ಲಿಯೂ ಕಾಣಬಹುದು. ಅದು ಪ್ರಜ್ಞೆಗೆ ಸಂಬಂಧಪಟ್ಟದ್ದೂ ಹೌದು. ಕಾದಂಬರಿ ಮತ್ತು ಆಂತರಿಕತೆಗೆ ಹಾಗೂ ಮಹಾಕಾವ್ಯ ಮತ್ತು ಅದರ ಆಂತರಿಕತೆಗೆ ಈ ದೃಷ್ಟಿಯಿಂದ ಭಿನ್ನತೆಯು ಇದೆ. ಆದಿಪುರಾಣದ ಆಂತರಿಕತೆಗೆ ಮತ್ತು ಒಡಲಾಳದ ಆಂತರಿಕತೆಗೆ ಇರುವ ವ್ಯತ್ಯಾಸವನ್ನು ನಾವು ಇಲ್ಲಿ ಗಮನಿಸಬಹುದು. ಅದರ ಹಿಂದೆ ಆಲೋಚನೆ ಬೇರೆಯಾಗುತ್ತದೆ. ಇಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು. ಯಾವುದೇ ಕೃತಿಯ ಸಮಾಜದ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿದೆ. ಮಹಾಕಾವ್ಯವು ವಾಸ್ತವವನ್ನು ಇನ್ನೊಂದು ಥರ ನಿರೂಪಿಸುತ್ತದೆ. ಮನುಷ್ಯ ಮತ್ತು ಅವನ ಕನಸು,ಅವನ ಕಲ್ಪನೆಯ ಶಕ್ತಿ ಹಾಗೂ ಅವನ ಅನುಭವ ಎನ್ನುವುದು

ಕಾದಂಬರಿಯಲ್ಲಿ ಅನುರಣನವಾಗುತ್ತದೆ. ಅದರಲ್ಲಿ ಅವನ ಅನುಭವ ಕೂಡಾ ಅತ್ಯಂತ ಮುಖ್ಯ. ಮತ್ತೆ ನಾವು ತೇಜಸ್ವಿ ಮತ್ತು ಕಾರಂತರನ್ನು ನೆನುಪು ಮಾಡಿಕೊಳ್ಳುವುದು ಅತ್ಯಂತ ಸೂಕ್ತ. ಅವರು ಅನುಭವ ಮತ್ತು ತಮ್ಮ ಜೀವನದ ಅಪರೂಪದ ಸಂಗತಿಗಳನ್ನು ಹೇಳಿದರು. ಮನುಷ್ಯರು ಆಧುನಿಕ ಭಾರತದಲ್ಲಿ ಹೇಗೆ ವರ್ತನೆಯನ್ನು ಮಾಡುತ್ತಾರೆ ಎನ್ನುವುದನ್ನು ತೇಜಸ್ವಿ ಹೇಳುತ್ತಾರೆ .ಹಾಗೆ ನೋಡಿದರೆ ಜೀವನವನ್ನು ಕಾರಂತರು ಎಲ್ಲಾ ಕೋನದಲ್ಲಿ ಪರಿಶೀಲನೆ ಮಾಡುತ್ತಾರೆ. ಅವರಿಗೆ ಜೀವನ ಎನ್ನುವುದು ಒಂದು ಭ್ರಮೆಯು ಅಲ್ಲ. ಆದರೆ ಕಾದಂಬರಿಯಲ್ಲಿ ಕೆಲವು ಆಯ್ಕೆಗಳು ಇರುತ್ತವೆ. ನಾವು ಎಲ್ಲವನ್ನು ಕಾದಂಬರಿಯಲ್ಲಿ ಹೇಳಲಾಗದು.

ಮಹಾಕಾವ್ಯ ನಮಗೆ ಇನ್ನೊಂದು ಅನುಭವವನ್ನು ಕೊಡುತ್ತದೆ. ಅದರ ವೃತ್ತಾಂತವೇ ಬೇರೆ. ಅದರ ಚೌಕಟ್ಟನ್ನು ನಾವು ನಿರ್ಬಂಧ ಮಾಡಲು ಆಗದು. ಜೀವನದಲ್ಲಿ ಏನು ಆಗಿದೆಯೋ ಅದನ್ನು ಕಾದಂಬರಿಗಳು ಹೇಳುತ್ತವೆ. ಆದರೆ ಅದರಲ್ಲಿ ಬರೀ ನೀತಿಯನ್ನು ನಿರೂಪಣೆ ಮಾಡುವುದಿಲ್ಲ. ಅದರ ಉದ್ದೇಶವೂ ಅದಲ್ಲ. ಹಾಗಿದ್ದೂ ಅನೇಕ ಕಾದಂಬರಿಗಳು ನಾವು ಏನು ಮಾಡಬೇಕು, ಹೇಗೆ ಇರಬೇಕು, ಯಾವುದು ಉಚಿತ ಮತ್ತು ಯಾವುದು ಅನುಚಿತ ಎಂಬುದನ್ನು ಹೇಳುತ್ತವೆ. ಆಧುನಿಕ ಸಮಾಜದ ಸ್ಥಿತಿಗಳೂ ಅದಕ್ಕೆ ಮುಖ್ಯವಾಗುತ್ತವೆ. ಕಾರಂತರ ನಂಬಿದವರ ನಾಕ ನರಕವನ್ನು ಇಲ್ಲಿ ಉಲ್ಲೇಖಿಸಬಹುದು. ಕಾರಂತರು ಕಾದಂಬರಿಯಲ್ಲಿ ಜೀವನದ ಭ್ರಮೆಯನ್ನು ಒಪ್ಪುವುದಿಲ್ಲ. ಆಧುನಿಕ ಕಾದಂಬರಿಗಳು ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂದು ನೋಡಲು ನಮಗೆ ಕಾರಂತರ ಕಾದಂಬರಿಗಳು ಸಹಾಯವನ್ನು ಮಾಡುತ್ತದೆ. ಅವರ ಕಾದಂಬರಿಯು ಹೇಗೆ ಇದೆ ಎನ್ನುವುದಕ್ಕೆ ಒಂದು ಅರ್ಥವನ್ನು ನಾವು ಚರಿತ್ರೆಯಲ್ಲಿ ಗಮನಿಸಬೇಕು. ಇನ್ನೊಂದು ಅವರು ಹೇಳುವ ವ್ಯಕ್ತಿಗಳ ಜೀವನದ ಕ್ರಮದಲ್ಲಿ ಇದೆ. ಆಧುನಿಕ ಕಾದಂಬರಿಕಾರ ಹೊಸ ಸಮಾಜದಲ್ಲಿ ವಹಿಸಬೇಕಾದ ಕಾರ್ಯವು ಯಾವುದು ಎಂದು ಸ್ವತಃ ಕಾರಂತರು ಹೇಳಿದ್ದಾರೆ. ಚೋಮನದುಡಿಯು ಇದಕ್ಕೆ ಒಂದು ಉದಾಹರಣೆಯು ಆಗಿದೆ. ಅದು ಒಂದು ಕಾಲದ ಸಮಾಜ ಮತ್ತು ಒಂದು ಕಾಲದ ಜೀವನವನ್ನು ಹೇಳುತ್ತದೆ. ಅದರಲ್ಲಿ ಅರ್ಥವಿದೆ.

ಯಾವುದೇ ಕೃತಿಗಳು ಕಾಲಕ್ಕೆ ಬದ್ಧವಾಗಿರುತ್ತದೆ ಹಾಗೂ ಆಲೋಚನೆಯು ಕೂಡಾ ಕಾಲವನ್ನು ಹೇಳುತ್ತದೆ ಎಂದು ಲುಕಾಕ್ಸ್ ಹೇಳುತ್ತಾನೆ. ಕಥನವನ್ನು ನಾವು ತೆಗೆದು ಕೊಂಡರೆ ಇದರ ಅರ್ಥವು ತಿಳಿಯುತ್ತದೆ. ಆಧುನಿಕ ಕಾದಂಬರಿಯು ಹೇಗೆ ಇದೆ ಎಂದರೆ ಅದು ಸಮಕಾಲೀನವಾದ ತಲ್ಲಣವನ್ನು ವಿವಿಧ ಕೋನಗಳಲ್ಲಿ ನಿರೂಪಿಸುತ್ತವೆ. ವಸುಧೇಂದ್ರ ಅವರ ಕಥನಗಳು ಮತ್ತು ನಾಗವೇಣಿಯರ ಕಥನಗಳು ನಿರೂಪಿಸುತ್ತವೆ. ಸನ್ನಿವೇಶಗಳು ಬದಲಾಗಿವೆ. ಕಾಲದ ಕಲ್ಪನೆಯು ವ್ಯತ್ಯಾಸವಾಗಿದೆ. ಕಾಲವು ರಚನೆಗಳನ್ನು ಹುಟ್ಟು ಹಾಕುತ್ತವೆ. ಯಾಕೆ ನಮಗೆ ನಾಗವೇಣಿಯವರ ಬರರಹಗಳು ಮುಖ್ಯವಾಗಿವೆ ಎನ್ನುವುದಕ್ಕೆ ನಾವು ನಮ್ಮ ಸಮಕಾಲೀನವಾದ ಒಂದು ಸನ್ನಿವೇಶವನ್ನು ನೋಡಬೇಕಾಗುತ್ತದೆ ನಮ್ಮ ಜೀವನವು ಈವತ್ತು ಬದಲಾಗಿದೆ. ಅದರ ಜೊತೆಗೆ ನಾವು ಈವತ್ತು ಅನೇಕ ಪ್ರಭಾವಗಳಿಗೆ ಸಿಕ್ಕಿಹಾಕಿಕೊಂಡಿದ್ದೇವೆ. ಜೀವನವು ಬದಲಾಗಲು ಪರಿಸರವೂ ಒಂದು ಕಾರಣ. ಪರಿಸರವು ಬದಲಾಗುತ್ತದೆ ಎಂದರೆ ಅದರ ಕುರಿತಾದ ನಮ್ಮ ನೋಟವೂ ವ್ಯತ್ಯಾಸವಾಗಿದೆ. ಸಮಾಜದ ಬದಲಾವಣೆ ಮತ್ತು ಅದರ ಕುರಿತು ನಮ್ಮ ನಿಲುವು ವ್ಯತ್ಯಾಸವಾದರೆ ನಾವು ಮತ್ತೆ ಭೂತಕಾಲಕ್ಕೆ ಹೋಗುತ್ತೇವೆ. ಒಂದು

ಒಸಗೆ ಒಯ್ಯುವುದಿತ್ತು, ಸೀಳು ಲೋಟ ಕತೆಗಳನ್ನು ನಾವು ಈ ದೃಷ್ಟಿಯಿಂದ ಗಮನಿಸಬೇಕು. ವಿಶಿಷ್ಟವಾದ ಪ್ರತಿಮೆಗಳು ಇದರಲ್ಲಿ ಎದ್ದು ಕಾಣುತ್ತದೆ. ಜೀವನವನ್ನು ಮತ್ತೆ ಮತ್ತೆ ವಿವಿಧ ರೀತಿಯಲ್ಲಿ ನೋಡಲು ವಸುಧೇಂದ್ರ ಅವಕಾಶವನ್ನು ಕಲ್ಪಿಸುತ್ತಾರೆ. ನೆನೆಪು ಮತ್ತು ಅದರ ಪುನರ್ ನಿರ್ಮಾಣವನ್ನು ಈ ಕತೆಗಳು ಹೇಳುತ್ತವೆ. ನೆನಪು ಎನ್ನುವುದು ಹೇಗೆ ಸೃಜನಶೀಲತೆಗೆ ಅಗತ್ಯವಾಗಿದೆ ಎಂದು ಇವು ನಿರೂಪಿಸುತ್ತವೆ. ಬರಹ ಮತ್ತು ಅದರ ಮೂಡ್ ಎನ್ನುವುದನ್ನು ಅನೇಕ ಲೇಖಕರು ಹೇಳುತ್ತಾರೆ. ಬರೆಯುವುದು ಒಂದು ಮೂಡ್‌ಗೆ ಸಂಬಂಧಪಟ್ಟ ಕ್ರಿಯೆ ಕೂಡಾ ಹೌದು. ಆದರೆ ಅದು ಕೂಡಾ ನಿಯಂತ್ರಣಕ್ಕೆ ಗುರಿಯಾಗುತ್ತದೆ. ಅದು ನಮ್ಮ ವ್ಯಕ್ತಿತ್ವ ಮತ್ತು ಲೋಕದ ಸಂಬಂಧಗಳನ್ನು ಹೇಳುತ್ತದೆ. ಅದು ಅನುಭವಕ್ಕೆ ಸಂಬಂಧ ಪಟ್ಟಿದೆ. ಆದ್ದರಿಂದ ಸಾಹಿತ್ಯ ಮತ್ತು ಸಮಾಜ ಹಾಗೂ ಚರಿತ್ರೆಯ ಸಂಬಂಧವು ಅತ್ಯಂತ ನಿಕಟವಾಗಿದೆ. ಕಾದಂಬರಿ ರೂಪ ಎನ್ನುವುದು ಮಹಾಕಾವ್ಯದ ಬದಲಿಗೆ ಬಂದ ರೂಪ ಎಂದು ಅನೇಕರು ಹೇಳುತ್ತಾರೆ. ಅದು ಕನ್ನಡಕ್ಕೂ ಅನ್ವಯವಾಗುತ್ತದೆ. ಗಳಗನಾಥರು ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಕೆಲಸವನ್ನು ಮಾಡಿದರು ಕಾದಂಬರಿ ರೂಪಕ್ಕೆ ಒಂದು ಘನತೆಯನ್ನು ತಂದು ಕೊಟ್ಟರು. ಕಾದಂಬರಿ ರೂಪಕ್ಕೆ ಸಮಾಜವು ಒಂದು ತಾಯಿಬೇರು. ಮಹಾಕಾವ್ಯದಲ್ಲಿ ಒಂದು ವಾಸ್ತವ ಇದೆ. ಅದರಲ್ಲಿಯೂ ಆದರ್ಶವಿದೆ. ಆದರೆ ಇದರ ಜೊತೆಗೆ ಇನ್ನೊಂದು ಸಂಗತಿಯೂ ಇದೆ. ಅದರ ಸ್ಥಳ ಮತ್ತು ಕಾಲದ ಕಲ್ಪನೆಯು ಬೇರೆ ಥರ ಇದೆ. ಅಸ್ತಿತ್ವದಲ್ಲಿ ಯಾವುದು ಇದೆಯೋ ಅದನ್ನು ಮಾತ್ರವೇ ಹೇಳುವುದು ಅದರ ಗುರಿಯಲ್ಲ. ಅದೇ ಕಾದಂಬರಿ ರೂಪವು ನಮಗೆ ಮತ್ತೊಂದು ಸಾಧ್ಯತೆಯನ್ನು ಪರಿಚಯ ಮಾಡಿದವರು ಕಾರಂತರು. ಅವರ ಮರಳಿಮಣ್ಣಿಗೆ ಕಾದಂಬರಿಯ ವ್ಯಾಪ್ತಿಯು ದೊಡ್ಡದು. ಒಂದು ಕಾಲದ ಪಲ್ಲಟವನ್ನು ಅವರು ಹೇಳುತ್ತಾರೆ. ಆದರೆ ಇದ್ದುದು. ಜನರು ಮತ್ತು ನಿಸರ್ಗ ಕಾರಂತರಿಗೆ ಅತ್ಯಂತ ಮುಖ್ಯವಾಗುತ್ತದೆ. ಅವರ ಕಾದಂಬರಿಗಳು ಅನೇಕ ಸ್ಥಿತ್ಯಂತರವನ್ನು ಹೇಳುತ್ತದೆ. ಕುವೆಂಪು ಅವರ ಕಾದಂಬರಿಗಳನ್ನು ಓದುವಾಗ ನಾವು ಮಲೆನಾಡಿನಲ್ಲಿ ಸಂಚಾರ ಮಾಡಿದ ಅನುಭವ ಆಗುತ್ತದೆ. ಸಮಾಜ ಮತ್ತು ಅದರ ಸಾರವನ್ನು ನಮಗೆ ಕುವೆಂಪು ಕಟ್ಟಿಕೊಡುತ್ತಾರೆ. ಅದರಲ್ಲಿ ಮಹಾಕಾವ್ಯದ ಅಂಶವೂ ಇದೆ. ಮಲೆನಾಡಿನ ಅತ್ಯಂತ ದೊಡ್ಡ ಕಥನವನ್ನು ಅದು ನಿರೂಪಿಸುತ್ತದೆ. ಕಾಡು ಎನ್ನುವುದು ಕುವೆಂಪು ಅವರಿಗೆ ವಿಶೇಷವಲ್ಲ. ಅದರ ನಡುವೆ ಜನರು ಬದುಕುವುದು ಅವರಿಗೆ ಅಚ್ಚರಿಯನ್ನು ಉಂಟು ಮಾಡುವುದಿಲ್ಲ. ಕಾಡು ಎನ್ನುವುದು ಕುವೆಂಪು ಅವರಿಗೆ ಬೇರೆ ಥರದ್ದು ಎಂದು ಅನಿಸುವುದಿಲ್ಲ. ಅದನ್ನು ಓದುವಾಗ ನಮಗೆ ಕಾಡು ಮತ್ತು ಅದರ ವಾಸ್ತವವೂ ಅನುಭವಕ್ಕೆ ಬರುತ್ತದೆ. ಕುವೆಂಪು ಅವರ ಲೋಕದ ದೃಷ್ಟಿಕೋನವೂ ಬಹಳ ಮುಖ್ಯವಾದ್ದು. ಕಾಡಿನ ನಡವೆ ಜೀವನವನ್ನು ಸಾಗಿಸುತ್ತಿರುವ ಜನರು ನಿಜವಾಗಿಯೂ ಹೇಗೆ ಇದ್ದಾರೆ ಎನ್ನುವುದು ಕುವೆಂಪು ಅವರಿಗೆ ಅತ್ಯಂತ ಮುಖ್ಯ. ಅದರಲ್ಲಿ ಪ್ರೇಮವಿದೆ. ಆ ಪ್ರೇಮಕ್ಕೆ ಒಂದು ಆದರ್ಶವೂ ಇದೆ. ಮತ್ತೊಂದು ಅಂಶವೆಂದರೆ ಅವರಲ್ಲಿ ಬರುವ ವ್ಯಕ್ತಿಗಳು ಅತ್ಯಂತ ಸಹಜರೂ ಆಗಿದ್ದಾರೆ. ಮಲೆನಾಡನ್ನು ನೋಡಿದರೆ ನಮಗೆ ಮತ್ತೊಂದು ಅನುಭವ ಆಗುತ್ತದೆ. ಅಲ್ಲಿ ಮಾನವ ಸಂಬಂಧಗಳು ಬಯಲು ಸೀಮೆಯ ಥರ ಇಲ್ಲ. ಆದ್ದರಿಂದ ಅವರ ಬರಹವು ಅತ್ಯಂತ ಮುಖ್ಯವಾಗುತ್ತದೆ. ಹುಟ್ಟು,ಮದುವೆ, ಸಾವು, ಹಂದಿಯ ಬೇಟೆ – ಹೀಗೆ ಹತ್ತು ಹಲವು ಸಂಗತಿಗಳು ಅಲ್ಲಿ ಕಾಣುತ್ತವೆ. ಪ್ರೇಮ ಮತ್ತು ಮದುವೆ ಎನ್ನುವುದನ್ನು ಕುವೆಂಪು ಅನನ್ಯವಾಗಿ

ಹೇಳುತ್ತಾರೆ. ಅವರು ಅನಾವರಣ ಮಾಡುವ ವಾಸ್ತವ ಕೂಡಾ ಅನೇಕ ಮಡಿಕೆಗಳನ್ನು ಹೊಂದಿದೆ. ಅವರ ಕಾದಂಬರಿಗಳನ್ನು ನಾವು ಓದಿದರೆ ನಿಸರ್ಗ ಮನುಷ್ಯನ ಮೇಲೆ ಯಾವ ಪ್ರಭಾವವನ್ನು ಬೀರಿದೆ ಎಂದು ತಿಳಿಯುತ್ತದೆ. ಕುವೆಂಪು ಎರಡೂ ಕಾದಂಬರಿಗಳಲ್ಲಿ ನಿಜವಾದ ಜೀವನದ ವಿವರಣೆಯ ಮೂಲಕ ಮುಕ್ತಾಯವನ್ನು ಮಾಡುತ್ತಾರೆ. ಕುವೆಂಪು ಒಂದು ಹಂತದಲ್ಲಿ ಮನುಷ್ಯ ಮತ್ತು ಅವನ ಖಾಸಗಿಯಾದ ಸಂಗತಿಗಳನ್ನು ಹೇಳುತ್ತಾರೆ. ಮತ್ತೊಂದು ಹಂತದಲ್ಲಿ ಅವರು ಸಮಾಜವನ್ನು ವಿವರಿಸುತ್ತಾರೆ. ಜೀವನಕ್ಕೆ ಯಾವುದೇ ಗುರಿಯು ಇಲ್ಲ ಎನ್ನುವುದನ್ನು ಕುವೆಂಪು ಒಪ್ಪುವುದಿಲ್ಲ. ಅವರಿಗೆ ಜೀವನದ ದೃಷ್ಟಿಕೋನವು ಅತ್ಯಂತ ಮುಖ್ಯವಾಗುತ್ತದೆ ಎನ್ನುವುದಕ್ಕೆ ಹೂವಯ್ಯ ಮತ್ತು ಮುಕುಂದಯ್ಯರೇ ಸಾಕ್ಷಿಯಾಗಿದ್ದಾರೆ. ಅವರು ವಾಸ್ತವವನ್ನು ಅತ್ಯಂತ ಸಹಜವಾಗಿ ಹೇಳಿದ್ದಾರೆ. ಅದು ಮುಖ್ಯ. ಹೊಸದಾದ ಬಾಳ್ವೆ ಎನ್ನುವುದು ಹೇಗೆ ಇರಬಹುದು ಎನ್ನುವುದು ಕಾದಂಬರಿಗಳ ಮುಕ್ತಾಯವಾದರೂ ಅದರ ಆಚೆಗೆ ಒಂದು ಮೌನವು ಇದೆ. ಅದು ಅತ್ಯಂತ ಮುಖ್ಯವಾದ ಒಂದು ಸೂಚನೆಯೂ ಹೌದು.

ನಮಗೆ ಈವತ್ತು ಕಾದಂಬರಿ ಎನ್ನುವುದು ಅತ್ಯಂತ ಮಹತ್ವದ ಪ್ರಕಾರ. ಅದು ಈಗ ಒಂದು ಅಧಿಕೃತತೆಯನ್ನು ಪಡೆದಿದೆ. ಕಾದಂಬರಿ ಮತ್ತು ಅದರ ಶೈಲಿಯ ಚರ್ಚೆಯನ್ನು ಮಾಡುವ ಕ್ರಮವು ಇನ್ನೂ ಹೆಚ್ಚು ಬೆಳೆದ ಹಾಗೆ ಕಾಣುವುದಿಲ್ಲ. ಹದಿನಾರು ಮತ್ತು ಹದಿನೇಳನೆಯ ಶತಮಾನದ ತರುವಾಯ ಬಂದ ಕಾದಂಬರಿಯು ನಮಗೆ ಹೊಸದಾದ ಪ್ರಕಾರವೂ ಆಗಿದೆ. ಇಲ್ಲಿಯೇ ನಾವು ನಮ್ಮ ಹಿಂದೆ ಇದ್ದ ಕಾವ್ಯಗಳನ್ನು ನೋಡಬೇಕು: ನಮ್ಮಲ್ಲಿ ಚಂಪೂ ಕಾವ್ಯಗಳು ಇದ್ದವು. ಅದರ ಜೊತೆಗೆ ವಚನಗಳು ಇದ್ದವು. ಮತ್ತೆ ಷಟ್ಪದಿಗಳು ಬಂದವು. ಇದೆಲ್ಲಾ ನಡೆದ ಮೇಲೆ ನಮಗೆ ಗದ್ಯದ ರೂಪವು ಹೆಚ್ಚು ಪ್ರಚಲಿತವಾಯಿತು. ಇದನ್ನು ಹೇಳುವಾಗ ನಾವು ವಡ್ಡಾರಾಧನೆಯನ್ನು ಮರೆಯುತ್ತಿದ್ದೇವೆ ಎಂದು ಅರ್ಥವಲ್ಲ. ಕಾವ್ಯ ಮತ್ತು ಅದರ ಶೈಲಿಯು ಒಂದು ಥರ ಇದೆ ಎನ್ನುವುದನ್ನು ಈ ಮೊದಲು ಹೇಳಿದ ವಿಚಾರಗಳಿಂದ ಸ್ಪಷ್ಟವಾಗುತ್ತದೆ. ಸಾಹಿತ್ಯ ಮತ್ತು ಅದರ ಸಂವಹನದ ಮಾದರಿಗಳಿಗೆ ವಿವಿಧ ಆಯಾಮಗಳು ಇರುತ್ತವೆ ಎನ್ನುವುದನ್ನು ನಾವು ಮರೆಯಬಾರದು. ಒಂದು ವಿಶಾಲವಾದ ಅರ್ಥದಲ್ಲಿ ಹೇಳುವುದಿದ್ದರೆ ಸಂವಹನ ಎನ್ನುವುದು ಎಲ್ಲದರಲ್ಲಿ ಇರುತ್ತದೆ. ಅದು ಅಗತ್ಯ. ಚಿತ್ರದಲ್ಲಿ ನಾವು ಬಳಸುವ ಬಣ್ಣಗಳು ಒಂದು ಬಗೆಯ ಸಂವಹನವನ್ನು ಹೇಳುತ್ತದೆ. ಷಟ್ಪದಿಯಲ್ಲಿ ಗಮಕವು ಸಂವಹನವನ್ನು ಸೂಚಿಸುತ್ತದೆ. ನಾವು ಮಾತಾಡುತ್ತೇವೆ ಎಂದರೆ ಅದರಲ್ಲಿ ಒಂದು ಬಗೆಯ ಸಂವಹನ ಇದೆ ಎಂದು ಅರ್ಥ. ಸಾಹಿತ್ಯದಲ್ಲಿ ಭಾಷೆಯು ಸಂವಹನದ ಭಾಗ. ಕೈಯ ಸನ್ನೆಯು ಕೂಡಾ ಸಂವಹನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದು ಬೇರೆ ಪ್ರಶ್ನೆ. ಕಾದಂಬರಿ ಎನ್ನುವುದು ಕೆಲವು ವಿಷಯಗಳಲ್ಲಿ ಸ್ವತಂತ್ರವಾದ ಮತ್ತೆ ಕೆಲವು ವಿಷಯಗಳಲ್ಲಿ ಅದು ಅವಲಂಬಿತವೂ ಹೌದು. ದೇವನೂರರ ಕುಸುಮಬಾಲೆಯನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಅದನ್ನು ನಾವು ಕಾವ್ಯವೇ ಅಥವಾ ಅದು ಗದ್ಯದ ಮತ್ತೊಂದು ರೂಪವೇ ಎಂದು ಸುಲಭವಾಗಿ ಹೇಳುವುದು ಸಾಧ್ಯವಿಲ್ಲ. ಕಾವ್ಯದ ಗುಣ ಮತ್ತು ಗದ್ಯದ ಚಹರೆ ಎರಡೂ ಈ ಕಾದಂಬರಿಯಲ್ಲಿ ನಾವು ಕಾಣುತ್ತೇವೆ. ಕಾದಂಬರಿಯು ಹೀಗೆ ವಿವಿಧ ಅಂಶಗಳನ್ನು ಒಳಗೊಂಡಿದೆ. ಕನ್ನಡದ ಕೆಲವು ಕಾದಂಬರಿಗಳಲ್ಲಿ ನಾವು ವಾಗ್ವಿಲಾಸವೂ ಎದ್ದು ಕಾಣುತ್ತದೆ.

ಅನೇಕ ರೊಮಾಂಟಿಕ್ ವಿಮರ್ಶಕರು ಕಾದಂಬರಿಯನ್ನು ಗದ್ಯ ಮತ್ತು ಪದ್ಯದ ಒಂದು ವಿಶಿಷ್ಟವಾದ ಸಂಯೋಜನೆಯ ಸ್ವರೂಪದಲ್ಲಿ ಗುರುತಿಸುತ್ತಾರೆ. ಇಲ್ಲಿಂದ ಕಾದಂಬರಿ ಮತ್ತು ಅದರ ಶೈಲಿಯ ಪ್ರಶ್ನೆಯು ಬಂದಿದೆ. ವಾಸ್ತವವಾಗಿ ಈವತ್ತು ಅನೇಕರು ಕಾದಂಬರಿ, ಕಥೆಗಳು ಮತ್ತು ಗದ್ಯದ ವಿವಿಧ ಪ್ರಕಾರಗಳನ್ನು ಜೊತೆಗೆ ಇಟ್ಟು ನೋಡುತ್ತಾರೆ. ಅದರಲ್ಲಿ ಮತ್ತೆ ಮತ್ತೆ ಕಥನದ ಅಂಶಗಳನ್ನು ವಿವರಿಸಲು ಯತ್ನವನ್ನು ಮಾಡುತ್ತಾರೆ. ಕತೆಯನ್ನು ಎಲ್ಲರೂ ತಮಗೆ ಬೇಕಾದ ರೀತಿಯಲ್ಲಿ ಹೇಳುತ್ತಾರೆ ಎನ್ನುವ ಧ್ವನಿಯು ಇದೆ. ಆದರೂ ಕಥನ ಮತ್ತು ಅದರ ಬಹುತ್ವ ಎನ್ನುವುದನ್ನು ಅವರೂ ಒಪ್ಪುತ್ತಾರೆ. ಹಿಗೆ ಇದ್ದರೂ ಕಾದಂಬರಿಯನ್ನು ಚರ್ಚೆ ಮಾಡುವಾಗ ಅನೇಕರು ಅದರ ಆಶಯವನ್ನು ಮತ್ತು ಅದರ ವಿಚಾರವನ್ನು ಮಾತ್ರವೇ ಹೇಳುತ್ತಾರೆ. ಮತ್ತೆ ಮತ್ತೆ ಬಂದ ಒಂದು ಮುಖ್ಯವಾದ ಚರ್ಚೆಯೆಂದರೆ ಮಹಾಕಾವ್ಯ ಮತ್ತು ಕಾದಂಬರಿಗೆ ಇರುವ ಸಂಬಂಧದ ವಿವರಣೆಗಳು. ಸಾಹಿತ್ಯದಲ್ಲಿ ಈವತ್ತು ಯಾವುದನ್ನು ವಾಸ್ತವ ಎಂದು ಹೇಳುತ್ತೇವೆಯೋ ಅದು ಕೂಡಾ ಒಂದು ನಿರ್ದಿಷ್ಟವಾದ ನಿರೂಪಣೆಯನ್ನು ಹೇಳುತ್ತದೆ. ಈ ನಿರೂಪಣೆಯು ಕಣ್ಣಿಗೆ ಯಾವುದು ದಕ್ಕಿದೆಯೋ ಅಷ್ಟು ಮಾತ್ರವೇ ವಾಸ್ತವ ಎಂದು ಹೇಳುತ್ತಾರೆ.,ಮತ್ತೊಂದು ಬಗೆಯಲ್ಲಿ ಹೇಳುವುದಾದರೆ ವಾಸ್ತವ ಎನ್ನುವುದೂ ಈವತ್ತು ಒಂದು ಹಗಲು ಕನಸಿನ ಥರ ಕಾಣಿಸುತ್ತದೆ.

ವಾಸ್ತವ ಎನ್ನುವುದು ಕಾಣುತ್ತದೆ ಎನ್ನುವುದು ಸತ್ಯ. ಆದರೆ ಈ ಸತ್ಯವನ್ನು ನಾವು ನಮಗೆ ಕಂಡ ರೀತಿಯಲ್ಲಿ ನೋಡುತ್ತೇವೆ.,ಯಾವುದು ಯಾವ ಇಸವಿಯಲ್ಲಿ ನಡೆದಿದೆ ಅಷ್ಟು ಮಾತ್ರವೇ ನಿರೂಪಣೆಗೆ ದಕ್ಕುತ್ತದೆ. ಉಳಿದವುಗಳು ದಕ್ಕುವುದಿಲ್ಲ ಎಂದು ಅರ್ಥವಲ್ಲ. ಇಸವಿಗಳು ಮತ್ತು ಅದರ ಮಂಡನೆಗಳಿಗೆ ಒಂದು ಆಯಾಮವನ್ನು ಕೊಟ್ಟವರು ಯರೋಪಿಯನ್ನರು ಎನ್ನುವುದು ಸತ್ಯ. ಆದರೆ ಅವರು ಚರಿತ್ರಯನ್ನು ಗ್ರಹಿಸಿದ್ದು ಮತ್ತು ಅದರ ಕುರಿತು ಬರೆದದ್ದು ತಮ್ಮ ಅಸ್ತಿತ್ವ ಜಗತ್ತಿನ ಚರಿತ್ರೆಯಲ್ಲಿ ಎಲ್ಲಿದೆ ಎಂದು ಗುರುತಿಸುವುದಕ್ಕೆ ಮಾತ್ರ. ಆದ್ದರಿಂದ ಚರಿತ್ರೆ ಮತ್ತು ಅದರ ಸತ್ಯ ಹೇಗೆ ರೂಪಿತವಾಗಿದೆ ಎಂದು ಇದರ ಮೂಲಕ ಅರ್ಥವಾಗುತ್ತದೆ. ಅವರು ಚರಿತ್ರೆಯನ್ನು ಹೇಳುವಾಗ ತಮ್ಮ ವಾದವು ಲೋಕಕ್ಕೆ ಅನ್ವಯವಾಗುತ್ತದೆ ಎಂದು ಭಾವಿಸಿದರು. ಯುರೋಪಿನ ಸಂಸ್ಕೃತಿಗೆ ಮತ್ತು ಚರಿತ್ರೆಗೆ ಒಂದು ನಿರ್ದಿಷ್ಟವಾದ ಚಹರೆಯು ಇದೆ. ಇಲ್ಲಿ ನಾವು ಮತ್ತೊಂದು ಅಂಶವನ್ನು ಗಮನಕ್ಕೆ ತಂದು ಕೊಳ್ಳಬೇಕು. ಇಡೀ ವಿಶ್ವದ ಚರಿತ್ರೆಯಲ್ಲಿ ಕರ್ನಾಟಕವು ಎಲ್ಲಿದೆ ಮತ್ತು ಅದರ ಜಾಗವು ಯಾವುದು ಹಾಗೂ ಅದರಲ್ಲಿ ನಮ್ಮ ಪಂಪ ಎಲ್ಲಿದ್ದಾನೆ ಎಂದು ನೋಡಬೇಕಿದೆ. ಕನ್ನಡದಲ್ಲಿ ಕಾದಂಬರಿಯ ಕುರಿತು ಚರ್ಚೆಯ ಆದಾಗ ಮೇಲೆ ಹೇಳಿದ ಸಂಗತಿಗಳು ಪರಿಣಾಮವನ್ನು ಬೀರಿದೆ. ಕಾದಂಬರಿಯ ಚರ್ಚೆಯನ್ನು ಮಾಡುವಾಗ ಒಬ್ಬ ಲೇಖಕನನ್ನು ಮಾನದಂಡವಾಗಿ ಇಟ್ಟುಕೊಂಡು ಚರ್ಚೆಗಳು ಆಗಿವೆ. ಅದರ ಜೊತೆಗೆ ಒಂದು ಕಾದಂಬರಿಯನ್ನು ಇಟ್ಟುಕೊಂಡು ವಿಶ್ಲೇಷಣೆಯು ಆಗಿದೆ. ಕಾದಂಬರಿಕಾರರಾಗಿ ಕಾರಂತ ಎನ್ನುವುದು ಒಂದು ಬಗೆಯ ಕ್ರಮ. ಅದಕ್ಕೆ ವಿಶಿಷ್ಟತೆಯು ಇದೆ. ಅದರಲ್ಲಿ ಅನೇಕ ಒಳನೋಟಗಳೂ ಇವೆ. ಇದು ಒಂದು ಬಗೆಯಾದರೆ ಮತ್ತೊಂದು ಬಗೆಯು ಇದೆ. ಮರಳಿಮಣ್ಣಿಗೆ ಕಾದಂಬರಿಯನ್ನು ಮಾತ್ರವೇ ನಾವು ಅಧ್ಯಯನ ಮಾಡಬಹುದು. ಇದು ವಿಶಿಷ್ಟವಾದ ಒಂದು ಮಾದರಿಯೂ ಆಗಬಹುದು. ಗದ್ಯ ಎನ್ನುವುದೇ ಒಂದು ವಿಶಿಷ್ಟವಾದ

ಶೈಲಿಯು ಆಗಿರುತ್ತದೆ ಎಂದು ವಿಮರ್ಶಕರು ಅಭಿಪ್ರಾಯ ಹೊಂದಿದ್ದು ಗಮನಾರ್ಹ. ಒಂದು ಪ್ರಕಾರವಾಗಿ ಕಾದಂಬರಿಯು ತನ್ನದೇ ಆದ ಒಂದು ವಿಶಿಷ್ಟತೆಯನ್ನು ಹೊಂದಿರುವುದು ನಿಜ. ಕಾದಂಬರಿಕಾರರು ತಮಗೆ ಅನುಕೂಲವಾದ ಗದ್ಯವನ್ನು ಬಳಸುತ್ತಾರೆ.

ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ಕಾದಂಬರಿಯು ಹುಟ್ಟಿದೆ ಮತ್ತು ಅದರ ಹಿನ್ನೆಲೆಯೇನು ಎಂದು ವಿವರಿಸುವಾಗ ಅವನು ಸಂಸ್ಕೃತಿಯ ಪರಿಪ್ರೇಕ್ಷ್ಯದಲ್ಲಿ ಇಟ್ಟು ನೋಡಬೇಕು ಎಂದು ಅವನು ಹೇಳುತ್ತಾನೆ. ಅವನು ತನ್ನ ಮಾತುಗಳನ್ನು ವಿವರಿಸುವಾಗ ಬಳಸಿಕೊಂಡದ್ದು ಮಾರ್ಕ್ಸವಾದವನ್ನೇ. ಮಾರ್ಕ್ಸವಾದಿಗಳ ಪ್ರಕಾರ ಕಾದಂಬರಿಗೆ ಆಂತರಿಕ ತರ್ಕವಿರುತ್ತದೆ. ಮೊದ ಮೊದಲಿನ ಕಾದಂಬರಿಗಳು ವಿವರಣೆ, ಚಾರಿತ್ರಿಕ ಹಿನ್ನೆಲೆ, ವಿಶಿಷ್ಟ ರೀತಿಯ ವಿಷಯದ ಆಯ್ಕೆ ಹಾಗೂ ಜೀವನ ಕ್ರಮದ ವಿವರಣೆಗಳನ್ನು ಹೊಂದಿದ್ದವು. ಈ ರೀತಿಯ ವಿಷಯಗಳ ಆಯ್ಕೆಗೆ ಯಾವುದೇ ರೀತಿಯ ಸಮರ್ಥನೆಯು ಬೇಕಿರಲಿಲ್ಲ. ಪುಸ್ತಕಗಳು ಮಾರುಕಟ್ಟೆಗೆ ಬಂದಾಗ ಖಾಸಗಿಯಾದ ಜೀವನ ಕ್ರಮವು ಮಾರುಕಟ್ಟೆಗೆ ಬಂದಂತೆ ಆಯಿತು. ಹಾಗೂ ಹೊಸ ಸಾಮಾಜಿಕ ಪರಿಸ್ಥಿತಿಯ ಸಾಮಾಜಿಕ ಅಗತ್ಯವೂ ಆಯಿತು. ಹಾಗೆ ನೋಡುವುದಿದ್ದರೆ ಆಧುನಿಕ ಜಗತ್ತಿನಲ್ಲಿ ಕಾದಂಬರಿಯು ವಹಿಸಿದ ಪಾತ್ರವೂ ಬಹಳ ಮುಖ್ಯವಾದುದು. ಕಾದಂಬರಿಯ ಜಗತ್ತು ಲೇಖಕನ ಪ್ರಜ್ಞೆ ಮತ್ತು ಓದುಗನ ಪ್ರಜ್ಞೆ ಎರಡನ್ನೂ ಕಾದಂಬರಿಯು ಒಳಗೊಳ್ಳುತ್ತದೆ. ಕಾದಂಬರಿಗಳಲ್ಲಿ ಬರುವ ಅನೇಕ ಸಂಗತಿಗಳು ವೈಜ್ಞಾನಿಕ ಅಥವಾ ಅವೈಜ್ಞಾನಿಕ ಎಂದು ಕರೆಯಲು ಬರುವುದಿಲ್ಲ. ಕಾದಂಬರಿಗಳಲ್ಲಿ ಅಸ್ತಿತ್ವದ ಅನನ್ಯತೆ ಇರುವವರು ಅಥವಾ ಇಲ್ಲದೇ ಇರುವವರು ಎಂದು ವರ್ಗೀಕರಿಸಲು ಬರುವುದಿಲ್ಲ. ಕಾದಂಬರಿಯು ಮಹಾಕಾವ್ಯದಂತೆ ನಿರೂಪಣೆಯನ್ನು ಹೊಂದಿದೆ. ಕಾದಂಬರಿಯಲ್ಲಿ ಮನುಷ್ಯನ ಅನುಭವ ಮತ್ತು ಹೊರ ಪ್ರಪಂಚದ ಅರ್ಥ ಎರಡೂ ಇರುತ್ತದೆ. ಮತ್ತು ಅದು ವಿಷಯನಿಷ್ಟವೂ ಹೌದು. ಕಾದಂಬರಿ ಎನ್ನುವುದು ಅನೇಕ ಸಂದರ್ಭದಲ್ಲಿ ನೈತಿಕ ವ್ಯಾಖ್ಯಾನವೂ ಹೌದು. ರೊಮಾಂಟಿಕ್ ಯುಗದ ಕಾದಂಬರಿಗಳು ನಾಯಕನ ವಿಷಯನಿಷ್ಟ ಅನುಭವವನ್ನು ಹೇಳುತ್ತದೆ. ನಾಯಕನು ತನಗೆ ಬೇಕಾದಂತೆ ಲೋಕವನ್ನು ವ್ಯಾಖ್ಯಾನಿಸುತ್ತಾನೆ. ನಾಯಕನ ಜೀವನವು ಲಿರಿಕಲ್ ಗುಣವನ್ನು ಹೊಂದಿರುವುದಿಲ್ಲ. ಈ ಚರ್ಚೆಯ ಸಂದರ್ಭದಲ್ಲಿ ಬಂದ ಬಹಳ ಮುಖ್ಯವಾದ ಅಂಶವೆಂದರೆ ಸಾಹಿತ್ಯದ ಹಳಹಳಿಕೆಯು ಹಿಂದಿನ ದಿನಗಳನ್ನು ತುಂಬಾ ದಿವ್ಯವಾದುದು ಅಥವಾ ಯುಟೋಪಿಯಾ ಎಂದು ಭಾವಿಸಿಕೊಳ್ಳುತ್ತದೆ. ಕಾದಂಬರಿಯಲ್ಲಿ ಬರುವ ವಿಶ್ವಾತ್ಮಕತೆಯು ಮಧ್ಯಮ ವರ್ಗದ ತಾತ್ವಿಕತೆಯನ್ನು ಸೂಚಿಸುತ್ತದೆ.ಲುಕಾಕ್ಸ್ ಮತ್ತೆ ಹೀಗೆ ಹೇಳಿದ್ದಾನೆ–ಆಧುನಿಕ ಕಾದಂಬರಿಯು ವಿಜ್ಞಾನದ ಸತ್ಯವನ್ನು, ಅದರ ಜ್ಞಾನವನ್ನು ಮತ್ತು ನೀತಿಯ ವಿಷಯ ನಿಷ್ಟತೆಯನ್ನು ಏಕಕಾಲಕ್ಕೆ ಒದಗಿಸುತ್ತದೆ.ವಸ್ತು ಮತ್ತು ಪಾತ್ರಗಳ ವಿಶಿಷ್ಟತೆಯಿಂದಾಗಿ ವಾಸ್ತವತಾ ವಾದವು ತನ್ನದೇ ಆದ ವೈಶಿಷ್ಟ್ಯವನ್ನು ರೂಪಿಸಿದೆ ಎಂದು ಅವನ ವಾದ.ಚಾರಿತ್ರಿಕ ಕಾದಂಬರಿಗಳು ಅತಿ ವಿಜೃಂಭಣೆಯನ್ನು ಹೊಂದಿದೆ ಎಂದೂ ಅವನು ವಾದಿಸುತ್ತಾನೆ. ಸಾಹಿತ್ಯ ಮತ್ತು ಸಂಸ್ಕೃತಿ,ಹಾಗೂ ಸಾಹಿತ್ಯಕ ರೂಪ ಮತ್ತು ಸಂಸ್ಕೃತಿಯನ್ನು ಅವನು ವಿವರವಾಗಿಯೇ ಚರ್ಚಿಸಿದ್ದಾನೆ. ಆದರೆ ಅವನು ಹೇಳಿದ ಅನೇಕ ಮಾತುಗಳಿಗೆ ಅನಂತರ ವಾಗ್ವಾದವು ಪ್ರಾರಂಭವಾಯಿತು. ಅದು ಬೇರೆ ಪ್ರಶ್ನೆ. ವ್ಯಕ್ತಿ ಮತ್ತು ಅವನ ಬರವಣಿಗೆಗೂ ಸಂಸ್ಕೃತಿಗೂ

ಆರ್ಥಿಕತೆಗೂ ಇರುವ ಸಂಬಂಧ ಚರ್ಚೆಯು ತುಂಬಾ ಸೂಕ್ಷ್ಮವಾಯಿತು. ಸಮಾಜ ಮತ್ತು ಆರ್ಥಿಕತೆಗೆ ಸಾಹಿತ್ಯವು ಹೇಗೆ ವಾಹಕವಾಗಿದೆ ಎನ್ನುವುದು ಮುಖ್ಯ ಪ್ರಶ್ನೆಯೂ ಹೌದು. ಹೇಗೆ ಸಾಹಿತ್ಯದ ಕೃತಿಗಳು ವ್ಯಕ್ತಿ ಮತ್ತು ಜಗತ್ತಿನ ಸಂಬಂಧವನ್ನು ಸೂಚಿಸುತ್ತವೆ ಎನ್ನುವುದೂ ಪ್ರಾರಂಭವಾಗಿದ್ದು ಮಾರ್ಕ್ಸ್‌ರಿಂದಲೇ. ಅರ್ನೆಸ್ಟ್ ಬ್ಲಾಕ್ ಹೇಳಿರುವ ಮಾತು ಇಲ್ಲಿ ಉಲ್ಲೇಖನೀಯ. ಅವನು ಹೇಳುತ್ತಾನೆ – ಎಲ್ಲಾ ಸಾಂಸ್ಕೃತಿಕ ಪಠ್ಯಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಮುಂದೆ ಕೆಲವು ಆದರ್ಶಗಳನ್ನು ಇಡುತ್ತವೆ. ಬೈಬಲ್ ಹೇಗೆ ಆಧುನಿಕ ಪಠ್ಯಗಳ ಮೇಲೆ ಪ್ರಭಾವವನ್ನು ಬೀರಿದೆ ಮತ್ತು ಅದರ ಮೂಲಕ ಹೇಗೆ ಒಂದು ಆದರ್ಶವನ್ನು ಹೇಳಲಾಗುತ್ತದೆ ಎನ್ನುವುದು ಅವನ ಮಾತುಗಳಲ್ಲಿ ವ್ಯಕ್ತವಾಗಿದೆ. ಅವನ ಮಾತುಗಳಲ್ಲಿ ವ್ಯಕ್ತವಾದ ಮತ್ತೊಂದು ಅಂಶವೆಂದರೆ ನಾವು ಯಾವ ಪರಿಸರದಲ್ಲಿ ಬದುಕುತ್ತೇವೆಯೋ ಅದರಾಚೆಗೂ ನಾವು ಯೋಚನೆ ಮಾಡುವಂತೆ ಮಾಡುವುದೂ ಕೂಡಾ ಒಂದು ಆದರ್ಶವಾಗಿದೆ. ಯಾವುದು ನಮ್ಮ ಎದುರು ಇರುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವೆಂದರೆ ಕೃತಿಯು ಚಾರಿತ್ರಿಕ ಮತ್ತು ಅದರ ಒತ್ತಡದಿಂದ ಅಭಿವ್ಯಕ್ತಿಯನ್ನು ಭಿನ್ನವಾಗಿ ರೂಪಿಸುತ್ತದೆ.

ಲುಕಾಕ್ಸ್ ಅದನ್ನು ಆಲೋಚನೆಗಳ ಸಮಗ್ರತೆ ಎಂದು ಹೇಳುತ್ತಾನೆ. ಇಲ್ಲಿಯೇ ಪ್ರಸ್ತಾವಿಸಬೇಕಾದ ಅಂಶವೊಂದಿದೆ: ಚಾರಿತ್ರಿಕ ಭೌತವಾದವು ಸಂಸ್ಕೃತಿಯನ್ನು ವಿವರಿಸಲು ಸಾಮಾಜಿಕ ಕೌಶಲವನ್ನು ಮಾನದಂಡವಾಗಿಯೇ ಬಳಸಿಕೊಳ್ಳುತ್ತದೆ. ಆದರೆ ಕಾದಂಬರಿಯೆನ್ನವುದು ಬಹಳ ಮಹತ್ವದ್ದೂ ಹೌದು. ಅದು ಜನರನ್ನು ಪ್ರಭಾವಿಸುತ್ತದೆ. ಮತ್ತು ಅದರದೇ ಆದ ಓದುಗ ವರ್ಗವನ್ನು ಅದು ಸೃಷ್ಟಿಸುತ್ತದೆ. ಕಾದಂಬರಿಯಲ್ಲಿ ಅನೇಕ ಕಡಗೆ ಲೇಖಕರು ಕೃತಿಯಿಂದ ಹೊರಗೆ ಇರುತ್ತಾರೆ. ಕಾದಂಬರಿಯಿಂದ ಲೇಖಕರು ಹೊರಗೆ ಇರುವಾಗ ಅದನ್ನು ಬರೆಯುವ ಕ್ರಮವು ಬೇರೆಯಾಗಿರುತ್ತದೆ. ಅದು ಅವರ ತಾತ್ವಿಕ ಪ್ರಶ್ನೆಯೂ ಆಗಿರುತ್ತದೆ. ಕಾದಂಬರಿ ಮತ್ತು ಅದರ ಸಾಧ್ಯತೆಗಳು ಪ್ರಾರಂಭವಾದುದು ಒಂದು ವಿಶಿಷ್ಟವಾದ ಚಾರಿತ್ರಿಕ ಗಳಿಗೆಯಲ್ಲಿ ಎನ್ನವುದರ ಕುರಿತು ಮಾರ್ಕ್ಸ್‌ವಾದಕ್ಕೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅದನ್ನು ಅದು ಗ್ರಹಿಸುವಾಗ ಆಧುನಿಕ ಯುಗದ ಅಗತ್ಯವಾಗಿ ಕಾದಂಬರಿಯು ರೂಪುಗೊಂಡಿತು ಎಂದೇ ಹೇಳುತ್ತದೆ. ಕಾದಂಬರಿಯು ಹೇಳುವುದೇ ಪರೋಕ್ಷವಾದ ಒಂದು ಜೀವನದ ವಿಧಾನವನ್ನು ಎನ್ನುವುದನ್ನು ಇಲ್ಲ ಮರೆಯಬಾರದು. ಆದರೆ ಕಾದಂಬರಿಯ ಪ್ರಭಾವವು ಬಹಳ ದೊಡ್ಡದೇ ಆಗಿತ್ತು. ಹೆಚ್ಚಿನ ಕಾದಂಬರಿಗಳ ನಿರೂಪಣೆಯನ್ನು ನೋಡಿದರೆ ಅದರ ಹಿನ್ನೆಲೆಯು ಸ್ಪಷ್ಟವಾಗುತ್ತದೆ. ಯಾವುದೇ ಕಾದಂಬರಿಯು ವಿಶಿಷ್ಟವಾಗಿ ಒಂದು ಜೀವನದ ಕಥನವನ್ನು ಹೇಳುತ್ತದೆ. ಮತ್ತು ಅದನ್ನು ಅದು ನೋಡುವಾಗ ಲೇಖಕ ಕಣ್ಣಿನಿಂದ ನೋಡುತ್ತದೆ. ಕಾದಂಬರಿ ಮತ್ತು ಅದರ ಸಾಮಾಜಿಕ ಆವಶ್ಯಕತೆಗಳು ಆಧುನಿಕ ಜಗತ್ತಿನಲ್ಲಿ ಬೇರೆಯದೇ ಆಯಿತು. ಆದರೆ ಕಾದಂಬರಿಯೆನ್ನುವುದು ಬಹಳ ಮುಖ್ಯವಾಗಿ ಒಂದು ವರ್ಗಕ್ಕೆ ಪ್ರಿಯವಾದ ಸಂಗತಿಯೂ ಆಯಿತು. ಕಾದಂಬರಿಯನ್ನು ಲೇಖಕರು ಬರೆಯುವಾಗ ಅನುಸರಿರುವ ವಿಧಾನವೂ ಈ ಕಾರಣದಿಂದ ಭಿನ್ನವಾಗಿದೆ. ಕಾದಂಬರಿಯ ಒಳಗೆ ನಿಂತುಕೊಂಡು ಕಾದಂಬರಿಕಾರನು ಕಾದಂಬರಿಯನ್ನು ವಿವರಿಸಲು ಹೊರಟರೆ ಅದರ ಸ್ವರೂಪವೂ ಬೇರೆ ಆಗುತ್ತದೆ. ಕಾದಂಬರಿಯ ಒಳಗಿನ ಪಾತ್ರವಾಗಿ ಲೇಖಕನು ನಿರೂಪಣೆಗೆ ತೊಡಗಿದರೆ ಆಗ ಅದರ ವಸ್ತು ಮತ್ತು ಅದರ ವಿವರಣೆಯು

ಬೇರೆಯಾಗುತ್ತದೆ. ಅವನು ತನ್ನ ದೃಷ್ಟಿಕೋನಕ್ಕೆ ಅನುಸಾರವಾಗಿ ಎಲ್ಲವನ್ನೂ ವಿವರಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಮತ್ತು ಕಾದಂಬರಿಯು ಸ್ವಗತದ ರೀತಿಯಲ್ಲಿ ಇರುತ್ತದೆ. ಆದರೆ ಮತ್ತೊಂದು ರೀತಿಯಲ್ಲಿ ಕಾದಂಬರಿಯ ನಿರೂಪಣೆಯು ಇರುತ್ತದೆ. ಇಲ್ಲಿ ನಾವು ಮತ್ತೊಂದಿದೆ– ಕಾದಂಬರಿಯು ತನ್ನ ಭೂತಕಾಲವನ್ನು ಮಾತ್ರವೇ ಒಳಗೊಳ್ಳುತ್ತವೆ. ಅದರಲ್ಲಿ ಬರುವ ಅನೇಕ ನಿಲುವುಗಳು ಗತಕ್ಕೆ ಸಂಬಂಧಿಸಿದೆ. ಆದರೆ ಮತ್ತೆ ಅದರಲ್ಲಿ ಬರುವ ಆದರ್ಶವು ಭವಿಷ್ಯವನ್ನು ಸೂಚಿಸುತ್ತದೆ ಮಾತ್ರ. ಅದರಲ್ಲಿಬರುವ ಅನೇಕ ಸಂಗತಿಗಳು ಲೇಖಕನ ಮನೋಭಾವವನ್ನು ಸೂಚಿಸುತ್ತದೆ. ಹಾಗೂ ಅದನ್ನು ನೋಡುವಾಗ ಲೇಖಕನ ತಾತ್ವಿಕತೆಯನ್ನೂ ಗ್ರಹಿಸಿಕೊಳ್ಳುವುದು ಅನಿವಾರ್ಯ. ಆದರೆ ಅನೇಕ ಲೇಖಕರು ಕಾದಂಬರಿಯಲ್ಲಿ ನಿರೂಪಿಸುವುದು ತಮಗೆ ಯಾವುದು ಇಷ್ಟವಾಗುತ್ತದೆ ಅದನ್ನು ಮಾತ್ರವೇ ಹೇಳುತ್ತಾರೆ.

ಕಾದಂಬರಿಕಾರರ ನಿಲುವನ್ನು ನಾವು ನೋಡುವ ಅಗತ್ಯವೇ ಇಲ್ಲವೆಂದು ನವ್ಯ ವಿಮರ್ಶಕರು ಹೇಳುತ್ತಾರೆ. ಆದರೆ ಹಾಗೆ ಹೇಳುವಾಗ ಅವರು ನಿರೂಪಿಸುವುದು ತಮಗೆ ಯಾವುದು ಇಷ್ಟವಾಗುತ್ತದೆ ಅದನ್ನು ಮಾತ್ರವೇ. ಹೀಗೆ ಮಾಡುವಾಗ ನವ್ಯ ವಿಮರ್ಶಕರು ತಮ್ಮ ನಿಲುವನ್ನು ಮಾತ್ರವೇ ವ್ಯಕ್ತ ಪಡಿಸುವುದೂ ಅಷ್ಟೇ ನಿಜ. ಕಾದಂಬರಿಯ ತಾತ್ವಿಕತೆಯು ತಮಗೆ ಅಗತ್ಯವಿಲ್ಲವೆಂದು ಅವರು ಹೇಳುತ್ತಾರೆ. ಆದರೆ ವಿಷಯವು ಹಾಗೆ ಇಲ್ಲ. ಅದರ ಸಾಧ್ಯತೆಯು ಬೇರೆಯಾಗಿಯೂ ಇರುತ್ತದೆ. ಆದ್ದರಿಂದ ನಾವು ಕಾದಂಬರಿಯನ್ನು ಓದುವುದು ಎಂದರೆ ಕಾದಂಬರಿಯ ತಾತ್ವಿಕತೆಯೊಂದಿಗೆ ನಾವು ಮುಖಾಮುಖಿಯಾಗಿರುವುದು ಎಂದು ಅರ್ಥ. ಕಾದಂಬರಿಯ ಒಳಗೆ ನಿರೂಪಕನು ಭಾಗವಹಿಸಿದರೆ ಅದರ ಸ್ವರೂಪವನ್ನು ನಿರೂಪಕನೇ ನಿಯಂತ್ರಿಸುತ್ತಾನೆ. ಕಾದಂಬರಿಯ ವಸ್ತು ಮತ್ತು ಅದರ ನಿರೂಪಣೆಯು ಆಗ ಒಂದು ರೀತಿಯಲ್ಲಿ ಇರುತ್ತದೆ. ಆದರೆ ಯಾವಾಗ ಲೇಖಕನು ಕಾದಂಬರಿಯ ಹೊರಗೆ ಇದ್ದು ಕಾದಂಬರಿಯ ವಸ್ತುವನ್ನು ನಿರೂಪಿಸಲು ಹೋಗುತ್ತಾನೆಯೋ ಆಗ ಅದರ ಸ್ವರೂಪವು ಭಿನ್ನವಾಗುತ್ತದೆ.ಗೊಂಬೆಯಾಟದ ಥರ ಕಾದಂಬರಿಯ ವಸ್ತುವನ್ನು ಅವನು ನಿರೂಪಿಸಿಕೊಳ್ಳುತ್ತಾ ಹೋಗುತ್ತಾನೆ. ಆಗ ಲೇಖಕನ ಉದ್ದೇಶ ಮತ್ತು ಅವನ ತಾತ್ವಿಕ ದೃಷ್ಟಿಕೋನವು ವ್ಯಕ್ತವಾಗುವ ಕ್ರಮಗಳು ಬೇರೆಯಾಗುತ್ತವೆ. ಲೇಖನ ದೃಷ್ಟಿಕೋನ, ಅವನ ಮಾತಿನ ಚಹರೆಗಳು ಕಾದಂಬರಿಯಲ್ಲಿ ವ್ಯಕ್ತವಾಗುವ ಕ್ರಮಗಳು ಅನೇಕ ಸಂದರ್ಭದಲ್ಲಿ ಸಂಕೀರ್ಣವೂ ಆಗುತ್ತದೆ. ಅವನ ಪ್ರಜ್ಞೆ, ಅವನ ಮಾತುಗಳು, ಅವನ ನಿಲುವುಗಳು ಮತ್ತು ಅವನು ಆಯ್ಕೆ ಮಾಡಿಕೊಂಡ ವಸ್ತು,ಅವನ ಭಾಷೆ ಹಾಗೂ ಅವನ ಕಾದಂಬರಿಯ ಪಾತ್ರಗಳು ಎಲ್ಲವೂ ಜೊತೆಗೆ ಇರುತ್ತವೆ. ಮತ್ತು ಮುಖಾಮುಖಿಯಾಗುತ್ತವೆ. ಲೇಖಕನ ಧ್ವನಿ ಮತ್ತು ಕಾದಂಬರಿಯ ಧ್ವನಿ ಎರಡೂ ಜೊತೆಗೆ ಬರುತ್ತವೆ. ಆದರೆ ಲೇಖಕನು ಯಾವುದನ್ನು ನೋಡುತ್ತಾನೆ, ಅವನಿಗೆ ಯಾವುದು ಮುಖ್ಯವಾಗುತ್ತದೆ ಅದು ಮಾತ್ರವೇ ಕಾದಂಬರಿಯಲ್ಲಿ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಕಾದಂಬರಿಯ ವಸ್ತು ಪ್ರಪಂಚವು ಸೋಸಲ್ಪಡುತ್ತದೆ. ಕಾದಂಬರಿಯೆನ್ನುವುದು ಭೂತಕಾಲಕ್ಕೆ ಸಂಬಂಧಪಟ್ಟಿದೆ. ಅದರ ಸ್ವರೂಪವು ಯಾವುದು ಇದೆಯೋ ಅದನ್ನು ಹೇಳುತ್ತಾ ಮುಂದಿನ ಸಂಗತಿಗಳನ್ನು ನಿರೂಪಿಸುತ್ತದೆ. ಕಾದಂಬರಿಯ ಕಾಲವು ಹೇಳುವುದು ಭಿನ್ನವಾದ ದೃಷ್ಟಿಕೋನವನ್ನು. ಕಾದಂಬರಿಯಲ್ಲಿನ ಲೋಕದೃಷ್ಟಿಯು ಕಾದಂಬರಿಯ ವಸ್ತುವನ್ನು ಮತ್ತು ಅದರ ಸಾಧ್ಯತೆಯನ್ನು ಸೂಚಿಸುತ್ತದೆ.

ಅದು ಅನೇಕ ಸರ್ತಿ ಪ್ರತಿಮೆಗಳಾಗಿಯೂ ವ್ಯಕ್ತವಾಗುತ್ತದೆ. ಕಾದಂಬರಿ ಮತ್ತು ಅದರ ವಸ್ತುವು ಲೇಖಕನ ನಿಲುವನ್ನು ವ್ಯಕ್ತಪಡಿಸಿಕೊಳ್ಳುವುದರಿಂದಲೇ ಕಾದಂಬರಿಯ ಭಾಷೆಯೂ ನಿಯಂತ್ರಣಕ್ಕೆ ಒಳಗಾಗುತ್ತದೆ. ಕಾದಂಬರಿಯ ನಾಯಕನು ಜಗತ್ತಿನೊಂದಿಗೆ ಒಂದು ನಿರ್ಣಾಯಕವಾದ ಪಾತ್ರವನ್ನು ಹೊಂದಿರುತ್ತಾನೆ. ಮತ್ತು ಅದು ಕಾದಂಬರಿಯ ಅಗತ್ಯವೂ ಹೌದು. ಕಾದಂಬರಿಯ ನಾಯಕನು ಕಾದಂಬರಿಯ ಮುಖೇನ ಜಗತ್ತಿನೊಂದಿಗೆ ಸ್ಥಾಪಿಸುವ ಸಂಬಂಧವೇ ಕಾದಂಬರಿಯ ತಾತ್ವಿಕತೆಯನ್ನು ಸೂಚಿಸುತ್ತದೆ. ಕಾದಂಬರಿಕಾರನ ನಿಲುವುಗಳು ಕಾದಂಬರಿಯಲ್ಲಿ ಒಂದು ಯೋಚನೆಯ ಕ್ರಮವೂ ಆಗಿರುತ್ತದೆ.

ಲೇಖಕನು ತನ್ನ ಆಲೋಚನೆಯನ್ನು ಮತ್ತು ತನ್ನ ದೃಷ್ಟಿಕೋನವನ್ನು ಕಾದಂಬರಿಯ ವಸ್ತು ಪ್ರಪಂಚದ ಜೊತೆಗೆ ಸಮೀಕರಿಸುತ್ತಾನೆ. ಲೇಖಕನ ಯೋಚನೆಯೇ ಕಾದಂಬರಿಯಲ್ಲಿ ಒಂದು ಪಾತ್ರದ ಮೂಲಕವೂ ವ್ಯಕ್ತವಾಗುವ ಸಾಧ್ಯತೆಯೂ ಇರುತ್ತದೆ. ಅದು ಅಗತ್ಯವೆಂದು ಅವನು ಭಾವಿಸುವ ಸಾಧ್ಯತೆಯೂ ಇರುತ್ತದೆ. ಆದರೆ ಯಾವಾಗ ಲೇಖಕನು ಸರಿ ಮತ್ತು ತಪ್ಪುಗಳನ್ನು ನೋಡುವ ಕ್ರಮವೇ ಬೇರೆ. ತನ್ನ ದೃಷ್ಟಿಕೋನದಲ್ಲಿ ಯಾವುದು ಸರಿಯಲ್ಲವೋ ಆಗ ಅದನ್ನು ಅವನು ನಿರಾಕರಿಸುತ್ತಾನೆ. ಕಾದಂಬರಿಯ ನಾಯಕನು ಲೇಖಕನೇ ಆದಾಗ ಅವನು ಕಾದಂಬರಿಯನ್ನು ನಿಯಂತ್ರಿಸುತ್ತಾನೆ. ಅವನಿಗೆ ಅದು ಮುಖ್ಯವಾಗಲೂ ಬಹುದು. ಕಾದಂಬರಿಯಲ್ಲಿ ಮತ್ತೊಂದು ಅಂಶವೂ ಮುಖ್ಯವಾಗುತ್ತದೆ. ಯಾವಾಗ ಒಂದು ಪಾತ್ರವಾಗಿ ಲೇಖಕನು ಬಂದರೆ ಅದರ ಸ್ವರೂಪವೇ ಅವನಲ್ಲಿ ಕೇಂದ್ರೀಕರಣವಾಗುತ್ತದೆ. ಯಾವುದೇ ಒಂದು ಕಾದಂಬರಿಯಲ್ಲಿ ಬರುವ ಪಾತ್ರಗಳಿಗೆ ಅವುಗಳದೇ ಆದ ವರ್ತನೆಯು ಇರುತ್ತದೆ. ಮತ್ತು ಗುಣಧರ್ಮವೂ ಇರುತ್ತದೆ. ಅದು ವ್ಯಕ್ತಿಯ ಮಟ್ಟಿಗೆ ಸತ್ಯವೂ ಹೌದು. ಕಾದಂಬರಿಯ ಸ್ವಗತದ ಶೈಲಿಯೂ ಕೂಡಾ ಕಾದಂಬರಿಯನ್ನು ನಿಯಂತಿಸುತ್ತದೆ. ಆದರೆ ಅದನ್ನು ಲೇಖಕನು ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ ಎನ್ನುವುದೂ ಬಹಳ ಮುಖ್ಯ. ಕಾದಂಬರಿಯಲ್ಲಿ ಸ್ವಗತವು ಬಹಳ ಮುಖ್ಯವಾದ ಕ್ರಿಯೆ ಕೂಡಾ ಆಗಬಹುದು. ಆದರೆ ಇದರ ನೋಟವನ್ನು ಹೇಗೆ ಗ್ರಹಿಸಬೇಕು ಎನ್ನುವುದು ಬಹಳ ಮುಖ್ಯ. ಲೇಖಕನ ಉದ್ದೇಶ, ಅವನ ಪ್ರಜ್ಞೆಯು ಸಾಹಿತ್ಯದಲ್ಲಿ ಕೆಲಸವನ್ನು ಮಾಡುತ್ತದೆ ಎನ್ನವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಲೇಖಕನು ಯಾವುದನ್ನು ನೋಡುತ್ತಾನೆ, ಯಾವುದನ್ನು ತಿಳಿಯುತ್ತಾನೆ ಎನ್ನುವದೇ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಲೇಖನ ನಿಲುವು ಕಾದಂಬರಿಯ ನಿಲುವಾಗಿಯೂ ಪರಿವರ್ತನೆಯಾಗುತ್ತದೆ. ಕಾದಂಬರಿಯಲ್ಲಿ ಒಂದು ಪಾತ್ರವು ಯಾವ ಗುಣವನ್ನು ಹೊಂದಿರುತ್ತದೆಯೋ ಅದನ್ನು ನಾವು ಕಾದಂಬರಿಯಲ್ಲಿ ಗಮನಿಸುವುದು ತಾತ್ವಿಕತೆಯ ದೃಷ್ಟಿಯಿಂದ ಅಗತ್ಯವೂ ಹೌದು. ಆದರೆ ನಾವು ಅದನ್ನು ಪ್ರತ್ಯೇಕವಾದ ನಿಲುವು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಕಾದಂಬರಿಯು ಹೇಳುವುದು ಯಾವುದನ್ನು ಎಂದು ತಿಳಿಯಬೇಕಾದರೆ ಅದರ ತಾತ್ವಿಕ ನಿಲುವನ್ನು ಗ್ರಹಿಸಲೇ ಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯಲ್ಲಿ ಲೇಖಕನು ಯಾವುದನ್ನು ಹೇಳಲು ಬಯಸುತ್ತಾನೆಯೋ ಅದು ಅವನ ಕೃತಿಯಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗಲು ಸಾಧ್ಯ. ಲೇಖಕನ ವೈಯಕ್ತಿಕ ನಿಲುವು ಅವನ ಬರಹದಲ್ಲಿ ಹೇಗೆ ವ್ಯಕ್ತವಾಗುತ್ತದೆಯೋ ಅದನ್ನು ಅವನ ಭಾಷೆ, ಅವನ

ನಿರೂಪಣಾ ಕ್ರಮ, ಅವನ ಆಶಯಗಳು ಹೇಳುತ್ತವೆ. ವ್ಯಕ್ತಿ ಮತ್ತು ಅನುಭವ ಎರಡೂ ಕೃತಿಯಲ್ಲಿ ವ್ಯಕ್ತವಾಗುವಾಗ ಅದನ್ನು ಮಾತ್ರವೇ ಮಾನದಂಡವಾಗಿ ಇಡಬೇಕಾದ ಅಗತ್ಯವೂ ಇಲ್ಲ. ಕಾದಂಬರಿಯಲ್ಲಿ ಯಾವುದು ಹೇಗೆ ವ್ಯಕ್ತವಾಗುತ್ತದೆ ಎನ್ನುವುದು ಮಾತ್ರವೇ ಮುಖ್ಯ. ಆದರೆ ನವ್ಯದ ವಿಮರ್ಶಕರು ಹೇಳುವ ರೀತಿಯಲ್ಲಿ ಅನುಭವ ಮಾತ್ರವೇ ಮುಖ್ಯವಾಗುವ ಅಗತ್ಯವಿಲ್ಲ. ಇಲ್ಲಿ ಗಮನಿಸಬಹುದಾದ ಮತ್ತೊಂದು ಸಂಗತಿಯೂ ಇದೆ. ಲೇಖಕನ ಆಲೋಚನೆಯು ಕಾದಂಬರಿಯಲ್ಲಿ ವ್ಯಕ್ತವಾದ ಕೂಡಲೇ ಅದನ್ನು ಅವನು ಜೀವನ ಪೂರ್ತಿಯಾಗಿ ನಿರೂಪಿಸುತ್ತಾನೆ ಎಂದು ಹೇಳಲು ಬರುವುದೂ ಇಲ್ಲ.

ಕಾದಂಬರಿಕಾರನು ಯಾವುದನ್ನು ಹೇಳುತ್ತಾನೆಯೋ ಅದು ಅವನ ಉದ್ದೇಶಿತ ನಿಲುವೂ ಆಗಿರುತ್ತದೆ. ಕಾದಂಬರಿಯ ವಸ್ತು ಅವನ ನಿಲುವನ್ನು ಸೂಚಿಸುತ್ತದೆ. ಕಾದಂಬರಿಕಾರನ ಆಲೋಚನೆಯು ಕಾದಂಬರಿಯಲ್ಲಿ ವಿಭಿನ್ನವಾದ ಸಂವಾದವನ್ನು ಸೂಚಿಸುತ್ತದೆ. ಅವನ ನಿಲುವನ್ನು ನಾವು ಹೇಗೆ ನೋಡಬೇಕು ಎನ್ನುವುದೇ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ಕಾದಂಬರಿಯು ಹೇಳುವುದು ಒಂದು ಜೀವನದ ಕ್ರಮವನ್ನು. ಅದು ಅದಕ್ಕಿಂತ ಹೊರತಾಗಿರುವ ಸಾಧ್ಯತೆಯು ಇಲ್ಲ. ಆದ್ದರಿಂದ ಕಾದಂಬರಿಯನ್ನು ಓದುವಾಗ ಅದನ್ನು ನಮ್ಮ ಜೀವನದ ಭಾಗವೆಂಬಂತೆ ಓದುತ್ತೇವೆ. ನಮಗೆ ಯಾವುದು ಕಾಣಿಸುತ್ತದೆಯೋ ಅದನ್ನು ಮಾತ್ರವೇ ಕಾದಂಬರಿಕಾರನು ಹೇಳುತ್ತಾನೆ ಎಂದು ಅರ್ಥವಲ್ಲ. ಅವನು ಅದಕ್ಕಿಂತ ಭಿನ್ನವಾದುದನ್ನು ಹೇಳಬಹುದು. ಆದರೆ ಅದರಿಂದಲೇ ಅದು ಪೂರ್ಣವಾಯಿತು ಎಂದು ಅರ್ಥವಲ್ಲ. ಒಂದು ಸಾಮಾಜಿಕ ಜೀವನದ ಕ್ರಮವು ಒಂದೇ ಕ್ಷಣದಲ್ಲಿ ಮುಕ್ತಾಯವಾಗುವುದೂ ಇಲ್ಲ. ಅದು ಮುಂದುವರಿಯುತ್ತದೆ. ಅದಕ್ಕೆ ಚರಿತ್ರೆಯು ಇದೆ. ಅದೇ ರೀತಿಯಲ್ಲಿ ವ್ಯಕ್ತಿಗೂ ಅವನದೇ ಆದ ಚರಿತ್ರೆಯು ಇದೆ. ಜೀವನ ಎನ್ನುವುದು ಕೂಡಾ ಒಂದು ನಿಯಮವೇ ಆಗಿರುತ್ತದೆ. ಆದರೆ ಇದರನ್ನು ನಾವು ನೋಡುವಾಗ ಒಂದೊಂದು ರೀತಿಯಲ್ಲಿ ನೋಡುತ್ತೇವೆ. ಆದರೆ ಇದನ್ನು ನೋಡುವುದು ಎಂದರೆ ನಾವು ನಮ್ಮ ಜೀವನವನ್ನು ಒಂದು ನಮಗೆ ಬೇಕಾದಂತೆ ಗ್ರಹಿಸುವುದು ಎಂದು ಅರ್ಥವಲ್ಲ. ಕಾದಂಬರಿಯು ತನ್ನ ಆವಶ್ಯಕತೆಗೆ ತಕ್ಕಂತೆ ಜೀವನವನ್ನು ನೋಡುತ್ತದೆ. ಆದರೆ ಹೀಗೆ ನೋಡುವಾಗ ಅದರ ಸ್ವರೂಪವು ಭಿನ್ನವಾದ ಒಂದು ರಚನೆಯಂತೆಯೂ ಭಾಸವಾಗುತ್ತದೆ. ಹೆಗೆಲ್ ಜೀವನ ಮತ್ತು ಅದರ ತಾರ್ಕಿಕತೆಯನ್ನು ವಿವರಿಸುತ್ತಾನೆ. ಜೀವನವೇ ಮೂಲತಃ ಚಲನಶೀಲವಾದುದು. ಅದನ್ನು ಅದಕ್ಕಿಂತ ಭಿನ್ನವಾಗಿ ನೋಡಲು ಬರುವುದಿಲ್ಲ. ಅದಕ್ಕೆ ಗತಿಶೀಲತೆಯು ಇದೆ. ಅದನ್ನು ನೋಡುವಾಗ ನಮಗೆ ಇದರ ಅರಿವು ಇರಬೇಕಾಗುತ್ತದೆ.ಆದರೆ ಅದು ತಾರ್ಕಿಕವೇ ಎಂದರೆ ಶುದ್ಧ ತಾರ್ಕಿಕವಲ್ಲ. ಅದನ್ನು ರಾಜಕೀಯ ಮತ್ತು ಸಾಮಾಜಿಕ ಆಶಯದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಕಾದಂಬರಿಯಲ್ಲಿ ಜೀವನವನ್ನು ನಾವು ನೋಡುವ ಕ್ರಮಕ್ಕೆ ಅನುಸಾರವಾಗಿ ನಮ್ಮ ತಾತ್ವಿಕತೆಯು ರೂಪುಗೊಳ್ಳುತ್ತದೆ. ಕಾದಂಬರಿ ಎನ್ನುವುದು ಒಂದು ವಿಶಿಷ್ಟವಾದ ಗ್ರಹಿಕೆಯೂ ಹೌದು. ಅದನ್ನು ಓದುವಾಗ ನಾವು ಅದನ್ನು ಸಮಾಜಿಕ ಜೀವನದ ಭಾಗವಾಗಿಯೇ ನೋಡುತ್ತೇವೆ. ಅದರಿಂದ ನಮಗೆ ಬೇರೆ ಜೀವನ ಮತ್ತು ಅದರ ಸಂಕೀರ್ಣತೆಯ ಅರಿವೂ ಆಗುತ್ತದೆ. ಆದರೆ ಕಾದಂಬರಿಯನ್ನು ಓದುವುದು ಅಥವಾ ಗ್ರಹಿಸುವುದು ಎಂದರೆ ಕಾದಂಬರಿಯು ಹೇಳುವ ಅನೇಕ ಸಂಗತಿಯನ್ನು ನಾವು ನಮ್ಮ ಅರಿವಿನ ಲೋಕಕ್ಕೆ

ತಂದುಕೊಳ್ಳುವುದು ಎಂದೇ ಅರ್ಥ. ಆದರೆ ನಾವು ಅನೇಕ ಕಾದಂಬರಿಯನ್ನು ಗ್ರಹಿಸುವಾಗ ಅದನ್ನು ಕೇವಲ ಮನೋರಂಜನೆಯ ಭಾಗವಾಗಿ ಮಾತ್ರವೇ ನೋಡುತ್ತೇವೆ. ಕಾದಂಬರಿಯೆನ್ನುವುದೇ ಮೂಲತಃ ಒಂದು ಚಾರಿತ್ರಿಕ ಮತ್ತು ಸಾಮಾಜಿಕ ಜೀವನದ ಭಾಗವಾಗಿ ಬರುವುದರಿಂದ ಅದರ ನಿರೂಪಣೆಯಲ್ಲಿ ಭಿನ್ನತೆಯು ಇರುತ್ತದೆ. ಕಾದಂಬರಿಯು ಒಂದು ಅರ್ಥದಲ್ಲಿ ಭಿನ್ನವಾದ ಮಾದರಿಯೂ ಹೌದು. ಅದರ ಸಾಧ್ಯತೆಯು ಬೇರೆಯಾಗುತ್ತದೆ. ಅದರ ರೂಪವೇ ಮೂಲಭೂತವಾಗಿ ಬಿನ್ನವಾದ ಪ್ರಕ್ರಿಯೆಯೂ ಹೌದು. ಕಾದಂಬರಿಯನ್ನು ನಾವು ಓದುವುದು ಅದರ ಕಥನ ಗುಣದ ಕಾರಣಕ್ಕಾಗಿ. ಆದರೆ ಅದನ್ನು ಓದುವಾಗ ನಮಗೆ ಅದು ನೀಡುವ ಜೀವನದ ದರ್ಶನವೂ ನಮಗೆ ಅಷ್ಟೇ ಮುಖ್ಯವಾಗುತ್ತದೆ.

ಕಾದಂಬರಿಯು ಹೇಳುವ ಭಾಷೆಯು ಸುಲಭ ಸಂವಹನವೂ ಹೌದು. ಕಾದಂಬರಿಯು ರೂಪಿಸುವ ಸಂಕಥನವನ್ನು ನಾವು ಬೇರೆಯಾಗಿದೆ. ಕಲಾತ್ಮಕ ಭಾಷೆಯ ಪ್ರಶ್ನೆಯೆ ಮೂಲಭೂತವಾಗಿ ಬುದ್ಧಿಜೀವಿಗಳಿಗೆ ಸಂಬಂಧಪಟ್ಟದ್ದೂ ಹೌದು. ಅದು ಬೇರೆ ಪ್ರಶ್ನೆ. ಅವರು ಕಲಾತ್ಮಕತೆ, ಭಾಷೆಯ ಶೈಲಿ, ಭಾಷೆಯ ದಿಕ್ಪಲ್ಲಟ ಮುಂತಾದವುಗಳನ್ನು ಅವರು ಹೆಚ್ಚು ಬಳಸುತ್ತಾರೆ. ಕಾದಂಬರಿಕಾರರು ಮತ್ತೊಬ್ಬರು ಮಾತಾಡುವ ಭಾಷೆಯನ್ನು ಅಗತ್ಯಕ್ಕೆ ಸರಿಯಾಗಿ ಬಳಸುತ್ತಾರೆ. ಭಾಷೆ ಎನ್ನುವುದನ್ನು ಕಾದಂಬರಿಕಾರರು ಅನೇಕ ರೀತಿಯಲ್ಲಿ ಬಳಸುತ್ತಾರೆ. ಅದು ಅವರಿಗೆ ಅಗತ್ಯವೂ ಹೌದು. ಕಾದಂಬರಿಗೆ ಮಾತ್ರವೇ ಮೀಸಲಾದ ಭಾಷೆ ಎನ್ನವುದು ಇಲ್ಲ. ಅದನ್ನು ಹಾಗೆ ನೋಡಲು ಬರುವುದೂ ಇಲ್ಲ. ಕಾದಂಬರಿಯಲ್ಲಿ ನಾವು ಬಳಸುವ ಭಾಷೆಯನ್ನು ನೋಡುವಾಗ ಅದನ್ನು ಬೇರೆ ರೀತಿಯಲ್ಲಿಯೂ ಗ್ರಹಿಸಲು ಸಾಧ್ಯ. ಕಾದಂಬರಿಯ ಜಗತ್ತನ್ನು ವಾಸ್ತವದ ಜಗತ್ತಿನೊಂದಿಗೆ ನಾವು ತಳುಕು ಹಾಕುತ್ತೇವೆ. ಅದನ್ನು ನಿಜವೆಂದು ಭಾವಿಸುತ್ತೇವೆ. ಆದರೆ ಅದು ಲೇಖಕನ ದೃಷ್ಟಿಕೋನಕ್ಕೆ ಅನುಸಾರವಾಗಿ ಚಿತ್ರಿತವಾಗಿರುತ್ತದೆ. ಕಾದಂಬರಿಯೆನ್ನುವುದು ಅನೇಕರು ತಿಳಿದಂತೆ ಕೇವಲ ಕಥನವನ್ನು ಹೇಳುವ ಉದ್ದೇಶದಿಂದ ಮಾತ್ರವೇ ಹುಟ್ಟಿಲ್ಲ. ಅದರಾಚೆಗೂ ಅದರ ಕಾರ್ಯ ವ್ಯಾಪ್ತಿಯು ಇದೆ. ಕಾದಂಬರಿಯೆನ್ನುವುದು ಕೇವಲ ಭಾವನೆಗೆ ಮಾತ್ರವೇ ಸಂಬಂಧ ಪಟ್ಟಿಲ್ಲ. ಅದು ಒಂದು ವರ್ಗದ ಜೀವನದ ಕ್ರಮವನ್ನು ವಿವರಿಸುತ್ತದೆ. ಆದರೆ ಅದನ್ನು ನಾವು ನೋಡುವಾಗ ಸೀಮಿತವಾಗಿ ನೋಡುತ್ತೇವೆ. ಆದರೆ ಕಾದಂಬರಿಗಳು ಹೇಳುವ ಜಗತ್ತು ಒಬ್ಬನ ಗ್ರಹಿಕೆಗೆ ಮಾತ್ರವೇ ಸಂಬಂಧ ಪಟ್ಟಿಲ್ಲ. ಅದು ಪರಿವರ್ತನೆಯನ್ನು ದಾಖಲಿಸುತ್ತದೆ. ಅದರ ಆಯಾಮಗಳೂ ಕೂಡಾ ಭಿನ್ನವಾಗಿದೆ. ಲೇಖಕನ ಉದ್ದೇಶ ಮತ್ತು ಅವನ ಗ್ರಹಿಕೆಗಳು ಒಂದು ರೀತಿಯಲ್ಲಿ ಇರಲು ಸಾಧ್ಯ. ಲೇಖಕ ಉದ್ದೇಶವು ಕೃತಿಯಲ್ಲಿ ಹಾಜರಾಗುವುದಕ್ಕೆ ಕಾರಣವೂ ಇದೆ. ಅವನು ಹೇಗೆ ನೋಡುತ್ತಾನೆ ಮತ್ತು ಅವನ ಉದ್ದೇಶವೇನು ಎನ್ನವುದೇ ಬಹಳ ಮುಖ್ಯ. ನಾವು ಇದನ್ನು ಅಷ್ಟಾಗಿ ಗಮನಿಸುವುದೂ ಇಲ್ಲ. ಲೇಖಕನು ಯಾವುದನ್ನು ನೋಡುತ್ತಾನೆಯೋ ಅದನ್ನು ವಿವರಿಸುತ್ತಾನೆ. ಅದರಲ್ಲಿ ಅವನ ಗ್ರಹಿಕೆಯೆ ಪ್ರಧಾನವಾಗಿದೆ. ಕಾದಂಬರಿಯ ಧ್ವನಿ ಮತ್ತು ಅವನ ಉದ್ದೇಶವು ಜೊತೆಗೆ ಬರುತ್ತದೆ. ಅದು ಅವನ ನಿಲುವನ್ನು ಸೂಚಿಸುತ್ತದೆ. ಪ್ರತಿಯೊಂದು ಕೃತಿಯು ಕೂಡಾ ಭೂತಕಾಲದ ಸಂಗತಿಗಳನ್ನು ನಿರೂಪಿಸುತ್ತದೆ.

ಕಾದಂಬರಿಯು ಹೇಳುವುದು ಕಳೆದು ಹೋದುದನ್ನು. ಆದರೆ ಅದು ಕಳೆದು ಹೋಗಿದೆ ಆದರೆ ಅದು ಮತ್ತೆ ಮುಂದಿನ ಸೂಚನೆಯನ್ನು ನೀಡುತ್ತದೆ. ಇದನ್ನೇ ಮತ್ತೆ ಹೇಳಬಹುದಾದ ಸಂಗತಿಯೆಂದರೆ ಕಾದಂಬರಿಯು ನೀಡುವುದು ಮುಂದಿನ ಭವಿತ್ಯವದ ಸಂಗತಿಯನ್ನು. ಆದರೆ ಇದಕ್ಕೆ ವಿಶಿಷ್ಟವಾದ ಆಯಾಮವೂ ಇರುತ್ತದೆ. ಕಾದಂಬರಿಯು ಭಿನ್ನವಾದ ಸಂಕಥನವನ್ನು ಹೇಳುತ್ತದೆ. ಅದರ ಆಯಾಮವು ಭಿನ್ನವಾಗಿರುತ್ತದೆ. ಅದು ನಿರೂಪಣೆಗೆ ಸಂಬಂಧ ಪಟ್ಟಿದೆ. ಆದರೆ ಅದರದೇ ಆದ ವಿಶಿಷ್ಟವಾದ ಕಥನದ ಶೈಲಿಯೆಂದು ಹೇಳುತ್ತೇವೆ. ಆದರೆ ಇದನ್ನು ನಾವು ಭಾಷಿಕ ವಿಶಿಷ್ಟತೆ ಎಂದೂ ಹೇಳುತ್ತೇವೆ. ಕಾದಂಬರಿಗಳು ದಿನ ನಿತ್ಯದ ವಿವರಣೆಯನ್ನು ಭಾಷೆಯಲ್ಲಿ ನಿರೂಪಿಸುತ್ತವೆ. ಅವುಗಳಿಗೆ ಅವುಗಳದೇ ನಿರೂಪಣೆಯ ಕ್ರಮವು ಇದೆ ಎಂದ ಮಾತ್ರಕ್ಕೆ ಅವುಗಳು ಮತ್ತೆ ಏನೋ ಆಗಿರುತ್ತವೆ ಎಂದು ಹೇಳಲು ಬರುವುದಿಲ್ಲ. ಅಂದರೆ ಅದು ಕಾವ್ಯ ಅಲ್ಲ. ಅದು ಆಕರ್ಶಕ ಪದಗಳ ಗುಚ್ಚವೂ ಅಲ್ಲ. ಆದರೆ ಕಾದಂಬರಿಯು ಯಾವುದೇ ರೀತಿಯ ಲಯದ ವಿನ್ಯಾಸಗಳನ್ನು ಹೊಂದಿಲ್ಲವೆನ್ನುವುದರಿಂದ ಅದನ್ನು ಸಾಹಿತ್ಯವೇ ಅಲ್ಲವೆಂದು ಹೇಳಲು ಬರುವುದೂ ಇಲ್ಲ. ಕಾದಂಬರಿಯು ಯಾವಾಗಲೂ ವರ್ತಮಾನದ ವಿಷಯಗಳಿಗೆ ಸಂಬಂಧ ಪಟ್ಟಕೊಂಡೇ ವಿವರಣೆಯನ್ನು ಹೇಳುತ್ತದೆ ಎಂದು ಭಾವಿಸಬೇಕಾಗಿಲ್ಲ. ಕಾದಂಬರಿಯೆನ್ನವುದು ಮೂಲಭೂತವಾಗಿ ಅನೇಕ ವಿಷಯಗಳನ್ನು ವಿವರಿಸುತ್ತದೆ. ಆದರೆ ಅದನ್ನು ನಾವು ಹೀಗೂ ಹೇಳಬಹುದು – ಕಾದಂಬರಿಯು ತನ್ನ ಕಥನದ ಮಾದರಿಯಲ್ಲಿಯೇ ಚರಿತ್ರೆಗೆ ಸ್ಪಂದಿಸುತ್ತದೆ. ಆದ್ದರಿಂದ ಅದರ ಆಯಾಮಗಳು ಬೇರೆ. ಕತೆ ಮತ್ತು ಚರಿತ್ರೆಯ ಸಂಗತಿಗಳು ಜೊತೆಗೆ ಇರುತ್ತದೆ. ಅದು ಅದರ ಅಗತ್ಯವೂ ಆಗಿರುತ್ತದೆ. ವಾಸ್ತವವಾದವಂತೂ ಚರಿತ್ರೆಗೆ ಪ್ರತಿಕ್ರಿಯಿಸುವ ವಿಧಾನವು ಭಿನ್ನವಾಗಿದೆ. ಅದು ದಿನ ನಿತ್ಯದ ಸಂಗತಿಗಳನ್ನು ಹೇಳುತ್ತದೆ. ಕಾದಂಬರಿಯು ಹೇಳುವ ಅನೇಕ ಸಂಗತಿಗಳನ್ನು ಸಾಹಿತ್ಯದ ಪ್ರತ್ಯೇಕತೆ ಎಂದು ಹೇಳಲು ಬರುವುದೂ ಇಲ್ಲ.

ಕಾದಂಬರಿಯ ನಿರೂಪಣೆಯ ಕ್ರಮ ಅಥವಾ ಅದರ ಶೈಲಿಯನ್ನು ನಾವು ಉದ್ದೇಶ ರಹಿತವೆಂದು ಹೇಳುವಂತೆ ಇಲ್ಲ. ಯಾವುದನ್ನು ನಾವು ಭಾಷಿಕ ಅಸ್ತಿತ್ವವೆಂದು ಹೇಳುತ್ತೇವೆಯೋ ಅದರ ಸ್ವರೂಪವು ಇರುವುದು ವಾಸ್ತವಕ್ಕೆ ಪ್ರತಿಕ್ರಿಯಿಸುವ ವಿಧಾನದಲ್ಲಿ. ಭಾಷೆ ಮತ್ತು ಶೈಲಿಯನ್ನು ಕಾದಂಬರಿಯ ಸಂದರ್ಭದಲ್ಲಿ ಬೇರೆಯಾಗಿ ನೋಡಬಹುದಾದರೂ ಅದು ಕೂಡಾ ತಾತ್ವಿಕತೆಯನ್ನು ಹೊರತುಪಡಿಸಿದ್ದು ಎಂದು ಭಾವಿಸಬೇಕಾಗಿಲ್ಲ. ಅದಕ್ಕೂ ಅದರ ಕಾರಣವು ಇದ್ದೇ ಇರುತ್ತದೆ. ಕಾದಂಬರಿಯ ಶೈಲಿಯು ಮೂಲಭೂತವಾಗಿ ಸಂಕಥನವನ್ನು ಸೂಚಿಸುತ್ತದೆ. ಆದರೆ ಈ ಸಂಕಥನವನ್ನು ನಾವು ತಾತ್ವಿಕತೆಯೊಂದಿಗಿನ ಮುಖಾಮುಖಿ ಎಂದು ಹೇಳಬೇಕಾಗುತ್ತದೆ. ಲೇಖಕನು ನಿರೂಪಣೆಯಲ್ಲಿ ಭಾಗವಹಿಸುವ ಕ್ರಮವು ಬೇರೆ. ಆಂತರಿಕ ಕಾರಣಕ್ಕಾಗಿಯೇ ಕಾದಂಬರಿಯು ವಿಶಿಷ್ಟವೆಂದು ಅನಿಸುತ್ತದೆ. ಕಾದಂಬರಿಯ ಭಾಷೆಯನ್ನು ಲೇಖಕ ಉದ್ದೇಶದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕಾದಂಬರಿಯ ಭಾಷೆಯು ತನ್ನ ಅಗತ್ಯಕ್ಕೆ ಅನುಸಾರವಾಗಿ ರೂಪುಗೊಳ್ಳುತ್ತದೆ. ಮತ್ತು ಅದನ್ನು ನೋಡುವಾಗ ಭಾಷೆ ಮತ್ತು ಅದರ ಆಂತರಿಕ ತರ್ಕಗಳನ್ನು ಗಮನಿಸುವುದು ಅಗತ್ಯವೂ ಆಗಿದೆ. ಯಾವುದೇ ಕಾದಂಬರಿಯ ಭಾಷೆಯನ್ನು ನೋಡಿ ಅದನ್ನು ನಾವು ಅಥೆಂಟಿಕ್ ಅಥವಾ ಅನ್ ಅಥೆಂಟಿಕ್ ಎಂದು

ಹೇಳಬೇಕಾದ ಅಗತ್ಯವೂ ಇಲ್ಲ. ಕಥನ ಮತ್ತು ಅದರ ಮೌಲ್ಯವನ್ನು ನೋಡಿಕೊಂಡು ನಾವು ಯಾವುದೇ ನಿರ್ಧಾರ ಮಾಡಬೇಕೇ ವಿನಃ ಮತ್ತೆ ಯಾವುದೇ ಕಾರಣದಿಂದ ಅಲ್ಲ. ನಮ್ಮ ಸಾಮಾಜಿಕ ಜೀವನದಲ್ಲಿ ಹೇಗೆ ಅನೇಕ ಭಾಷಿಕ ಚಹರೆಗಳು ಇವೆಯೋ ಅದೇ ರೀತಿಯಲ್ಲಿ ಕಾದಂಬರಿಯ ಭಾಷೆಯೂ ಇರುತ್ತದೆ. ಅನೇಕತೆ, ಅದರ ಸಂಯೋಜನೆ, ಅದರ ಅನುಕ್ರಮತೆಯೇ ಕಾದಂಬರಿಯಲ್ಲಿ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ಬಹುಭಾಷೆಯನ್ನು ಕಾದಂಬರಿಯು ಒಂದು ಕೇಂದ್ರಕ್ಕೆ ತಂದು ನಿಲ್ಲಿಸುತ್ತದೆ. ಆದರೆ ಇದನ್ನು ನಾವು ನೋಡುವಾಗ ಎಚ್ಚರದಲ್ಲಿ ಇರುವುದೂ ಅಗತ್ಯವೂ ಆಗಿದೆ. ಯಾಕೆಂದರೆ ಕಾದಂಬರಿ ಈ ವಿಷಯಗಳನ್ನು ನಾವು ಕೇವಲ ಒಳಗಿನ ಕಾರಣಕ್ಕೆ ಮಾತ್ರವೇ ನೋಡಿದರೆ ಅದು ರೂಪನಿಷ್ಠರ ನಿಲುವೂ ಆಗುತ್ತದೆ.

ಕಾದಂಬರಿಯಲ್ಲಿ ಬಾಷೆಯ ಸಂಕರತೆಯು ಇರುತ್ತದೆ. ಮತ್ತೊಂದು ಅನುಕ್ರಮತೆಯನ್ನು ಕಾಪಾಡುತ್ತದೆ. ಮೂರನೆಯದಾಗಿ ಅದರಲ್ಲಿ ವಿಭಿನ್ನವಾದ ಸಂಯೋಜನೆಯೂ ಇರುತ್ತದೆ. ಕಾದಂಬರಿಯ ಭಾಷೆಯು ಹೆಚ್ಚು ಸಮ್ಮಿಶ್ರವಾಗಿರುತ್ತದೆ. ಅದು ಅದರ ನಿರೂಪಣೆಗೆ ಅಗತ್ಯವಾಗಿರುತ್ತದೆ. ಹಾಗೂ ಕಾದಂದಬರಿಯ ಭಾಷೆಯನ್ನು ನಾವು ಹೇಗೆ ನೋಡಬೇಕು ಎನ್ನವುದಕ್ಕೆ ರೂಪನಿಷ್ಠು ಒಂದು ವಾದವನ್ನು ಇಡುತ್ತಾರೆ. ಆದರೆ ಅವರು ಹೇಳಿದ ರೀತಿಯಲ್ಲಿಯೇ ಕಾದಂಬರಿಯ ಆಂತರಿಕ ಸ್ವರೂಪವಿರುವುದಿಲ್ಲ. ಆದನ್ನು ಕೃತಿಯ ತಾತ್ಕಲಿಕ ಅಗತ್ಯವೆಂದೂ, ಅದರ ಮಾತುಗಳು ಕಾದಂಬರಿಯ ರೂಪವನ್ನು ನಿರ್ಧರಿಸುತ್ತದೆ ಎಂದೂ ಹೇಳಲು ಬರುವುದಲ್ಲ. ಕಾದಂಬರಿಯು ವಾಸ್ತವವಾಗಿ ಭಾಷೆಯನ್ನು ಬಳಸುವುದೇ ಅನೇಕತೆಯನ್ನು ಸೂಚಿಸಲು. ಕೇವಲ ಕಲಾತ್ಮಕತೆಯ ಕಾರಣಕ್ಕಾಗಿಯೇ ಕಾದಂಬರಿಯಲ್ಲಿ ಅನೇಕ ಭಾಷಿಕ ಚಹರೆಗಳನ್ನು ನಾವು ಬಳಸುವುದೂ ಇಲ್ಲ. ಭಾಷೆಯ ಅನೇಕತೆಯು ಕಾದಂಬರಿಯ ಅಗತ್ಯವೂ ಆಗಿರುತ್ತದೆ. ಮತ್ತು ಅದರ ಹಿಂದೆ ನಿರ್ದಿಷ್ಟವಾದ ಉದ್ದೇಶವೂ ಇರುತ್ತದೆ. ಅನೇಕತೆಯ ಕಾದಂಬರಿಯಲ್ಲಿ ಬರುವುದೇ ಅದರ ಹಿಂದೆ ಇರುವ ಆಶಯದ ಕಾರಣಕ್ಕಾಗಿ. ಮತ್ತು ಅದನ್ನು ನಾವು ನೋಡುವಾಗ ಅದನ್ನು ವೈವಿಧ್ಯತೆಯೆಂದೇ ಪರಿಗಣಿಸಬೇಕಾಗುತ್ತದೆ. ಅನೇಕ ರೀತಿಯ ಭಾಷೆಯನ್ನು ಬಳಸುವುದಕ್ಕೆ ನಾವು ಕಾದಂಬರಿಯ ಭಾಷಿಕ ಸಂಕರವೆಂದು ಹೇಳಬಹುದು ಎಂದು ಭಕ್ತಿನ್ ಹೇಳುತ್ತಾನೆ. ಕಾದಂಬರಿಯ ಭಾಷೆಯು ಆಗಾಗ ಬದಲಾಗುತ್ತಾ ಬಂದಿದೆ. ಅದನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಕಾಣಬಹುದು ಎಂದು ಅವನು ಮತ್ತೊಂದು ಕಡೆಗೆ ಹೇಳುತ್ತಾನೆ. ಬಹುಭಾಷೆಯೇ ಕಾದಂಬರಿಯಲ್ಲಿ ಬಹಳ ಮುಖ್ಯವೆಂದೂ ಅದುವೇ ಕಾದಂಬರಿಯ ಸಂಕಥನವನ್ನು ಪ್ರಾರಂಭಿಸುತ್ತದೆ ಎಂದೂ ಹೇಳಬಹುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯು ಒಳಗೊಳ್ಳುವ ಸಾಹಿತ್ಯದ ಭಾಷೆ ಎನ್ನುವುದೇ ಮೂಲಭೂತವಾಗಿ ಸಾಮಾಜಿಕ ಭಾಷೆಯೇ ಆಗಿರುತ್ತದೆ. ಅದು ರಚಿತವಾಗಿದೆ. ಮತ್ತು ಅದು ಕಂಪೋಸ್ ಆಗಿದೆ. ಭಾಷಿಕ ಸಂಕರತೆಯೇ ಕಾದಂಬರಿಯನ್ನು ಒಂದು ಚೌಕಟ್ಟಿಗೆ ತಂದು ನಿಲ್ಲಿಸುತ್ತದೆ. ಆದರೆ ಅದನ್ನು ನೋಡುವಾಗ ಅದು ನಿಜವಾಗಿದೆಯೋ ಅಥವಾ ಬೇರೆ ರೀತಿಯಲ್ಲಿ ಇದೆಯೋ ಎಂದು ಪರಿಶೀಲಿಸುವುದೂ ಅಷ್ಟೇ ಆಗತ್ಯವೂ ಹೌದು. ಐತಿಹಾಸಿಕ ಕಾದಂಬರಿಗಳು ಇತಿಹಾಸವನ್ನು ನೋಡುವ ಕ್ರಮವು ಬೇರೆ. ಅದು ಗತವನ್ನು ಹೇಳುತ್ತದೆ. ಮತ್ತು ಅದರ ಹಿಂದೆ ಗತದ ಕುರಿತಾದ ಭ್ರಮೆಯೂ ಇರುತ್ತದೆ. ಹೀಗಿದ್ದರೂ ಕಾದಂಬರಿಯು ಹೇಳುವ ಸಂವಾದಗಳನ್ನು ನಾವು ಅನೇಕವಾಗಿದೆ ಎನ್ನವುದನ್ನು

ಮರೆಯಲಾಗುವುದಿಲ್ಲ. ಕಾದಂಬರಿಯನ್ನು ಓದುವಾಗ ನಾವು ಯಾವದನ್ನು ಅಂಗೀಕರಿಸುತ್ತೇವೆ ಎನ್ನವುದೂ ಮೂಲಭೂತವಾದ ಪ್ರಶ್ನೆ. ಆದರೆ ಈ ಕುರಿತು ನಾವು ಬೇರೆ ರೀತಿಯಲ್ಲಿಯೂ ಯೋಚನೆಯನ್ನು ಮಾಡಬೇಕಾಗುತ್ತದೆ. ಕಾದಂಬರಿಯ ವಸ್ತು ಮತ್ತು ಅದರ ವಿವರಗಳು ಮುಖ್ಯವಾಗುತ್ತದೆಯೇ ಅಥವಾ ಅದರ ನಿರೂಪಣೆಯೇ ಎನ್ನವುದು ಸಮಸ್ಯಾತ್ಮಕ. ಆದ್ದರಿಂದ ಅದನ್ನು ನಾವು ಬೇರೆ ರೀತಿಯಲ್ಲಿಯೇ ನೋಡಬೇಕಾಗುತ್ತದೆ. ಅದರ ಅಗತ್ಯವೂ ಇದೆ.

ಯಾವುದೇ ಕಾದಂಬರಿಯನ್ನು ಓದಿದರೂ ನಾವು ಮೊದಲು ನೋಡುವುದು ಅದರ ಆಶಯವನ್ನೇ ಮತ್ತೆ ಬೇರೆ ಯಾವುದನ್ನೂ ಅಲ್ಲವೆನ್ನುವುದು ಬಹಳ ಮುಖ್ಯವಾದ ನಿಲುವಾಗಿದೆ. ಅನೇಕರು ಹೇಳಿರುವಂತೆ ಒಬ್ಬ ಲೇಖಕನು ಯಾವ ರೀತಿಯಲ್ಲಿ ಹೇಳುತ್ತಾನೆ ಎನ್ನವುದು ಮಾತ್ರವೇ ಮುಖ್ಯವಾಗುವುದಿಲ್ಲ. ಯಾವುದೇ ಕಲಾಕೃತಿಗೆ ಸಾಮಾಜಿಕ ಅರ್ಥವಂತಿಕೆಯು ಇದ್ದೇ ಇರುತ್ತದೆ. ಆದರೆ ಇದನ್ನು ನೋಡುವುದು ಎಂದರೆ ಕಲಾಕೃತಿಯ ರೂಪವೂ ಕೂಡಾ ಚರ್ಚೆಗೆ ಒಳಗಾಗುವುದು ಅನಿವಾರ್ಯವೂ ಹೌದು. ಸಾಹಿತ್ಯವನ್ನು ಸಾಮಾಜಿಕತೆಯಿಂದ ಬೇರೆ ಎಂದು ತಿಳಿಯುವುದು ಎಂದರೆ ಇದನ್ನು ಭಿನ್ನವಾಗಿ ಗ್ರಹಿಸುವುದೂ ಹೌದು. ಯಾಕೆಂದರೆ ಅನೇಕ ವಿಮರ್ಶಾ ಪಂಥಗಳು ಕಾದಂಬರಿಯನ್ನು ನೋಡುವಾಗ ಕಾದಂಬರಿಯ ವಸ್ತು ಮತ್ತು ಅದರ ಸಾಧ್ಯತೆಯನ್ನು ಮಾತ್ರವೇ ಒಂದು ಚೌಕಟ್ಟಿನಲ್ಲಿ ಮಾತ್ರವೇ ಗ್ರಹಿಸುವುದು ಎಂದು ಭಾವಿಸುತ್ತಾರೆ. ಆದರೆ ಕಾದಂಬರಿಯು ಈ ರೀತಿಯಲ್ಲಿ ಮಾತ್ರವೇ ಅಸ್ತಿತ್ವವನ್ನು ಪಡೆದಿದೆ ಎಂದು ಭಾವಿಸಬೇಕಾಗಿಲ್ಲ. ಕಲೆಗೆ ಸಾಮಾಜಿಕ ಆವಶ್ಯಕತೆಯು ಇದ್ದೇ ಇರುತ್ತದೆ. ನಮಗೆ ಯಾವುದೇ ಆವಶ್ಯಕತೆಯು ಇಲ್ಲದೇ ಹೋಗಿದ್ದರೆ ನಾವು ಕಾದಂಬರಿಯೆಂಬ ಪ್ರಕಾರವನ್ನು ಸ್ವೀಕರಿಸಿಲು ಹೋಗುತ್ತಿರಲಿಲ್ಲ. ಆದರೆ ಕಾದಂಬರಿಯನ್ನು ನಾವು ನೋಡುವಾಗ ಅದರ ಹಿಂದೆ ಇರುವ ಸಾಮಾಜಿಕ ಒತ್ತಾಯವನ್ನು ಗಮನಿಸಬೇಕಾಗುತ್ತದೆ. ಅದು ಅಗತ್ಯವೂ ಹೌದು. ಆದರೆ ಯಾವಾಗ ಇದನ್ನು ಅರ್ಥ ಮಾಡಲು ಹೋಗುವುದೇ ಇಲ್ಲವೋ ಆಗ ಅದರ ಪ್ರಸ್ತುತತೆಯು ಗೌಣವಾಗಿ ಅದರ ಸೌಂದರ್ಯ ಮತ್ತು ಅದರ ಶಿಲ್ಪ ಮತ್ತು ಬಂಧದ ಪ್ರಶ್ನೆಯು ಮುಂದಕ್ಕೆ ಬರುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯನ್ನು ನಾವು ಓದುವುದು ಬರೀ ಒಂದು ಮನೋರಂಜನೆಗಾಗಿ ಎಂದು ಭಾವಿಸುವುದು ಅಗತ್ಯವೂ ಇಲ್ಲ.

ಆಶಯವನ್ನು ಆಧರಿಸಿಕೊಂಡು ಸಾಹಿತ್ಯವನ್ನು ವರ್ಗೀಕರಿಸುವುದು ಒಂದು ಕ್ರಮ. ಅದನ್ನು ನೋಡುವಾಗ ಅದರ ಆಶಯವು ಯಾವ ಬಗೆಯದು ಎನ್ನುವುದನ್ನು ನಾವು ಗ್ರಹಿಸಬೇಕಾದ ಅಗತ್ಯವೂ ಇದೆ. ಆಶಯ ಮತ್ತು ಜೀವನದ ದೃಷ್ಟಿಕೋನಗಳಿಗೆ ಒಂದು ಸಂಬಂಧವಿದೆ. ಸಮಾಜ ಮತ್ತು ಆರ್ಥಿಕತೆಯು ಜೀವನದ ದೃಷ್ಟಿಕೋನವನ್ನು ಸೂಚಿಸುತ್ತದೆ. ಸಾಹಿತ್ಯವನ್ನು ನಾವು ಒಂದು ಅರ್ಥದಲ್ಲಿ ಬಾಹ್ಯ ರಚನೆಯೆಂದು ಹೇಳಿದರೆ ಅದನ್ನು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಯಾವುದೇ ಸಾಹಿತ್ಯವನ್ನು ನಾವು ಸಾಮಾಜಿಕ ಹಿನ್ನೆಲೆಯಿಂದಲೇ ನೋಡಬೇಕಾಗುತ್ತದೆ. ಹಾಗೆಂದು ಇಡೀ ಸಾಮಾಜಿಕ ಜೀವನವನ್ನು ಸಾಹಿತ್ಯವೇ ವ್ಯಾಖ್ಯಾನಿಸುತ್ತದೆ ಎಂದು ಹೇಳುವುದು ಅಸಾಧ್ಯ. ಸಾಹಿತ್ಯವೆನ್ನುವುದು ಧಾರ್ಮಿಕ ಗ್ರಂಥವೂ ಅಲ್ಲ. ಅದು ಪ್ರತಿನಿಧಿಸುವುದು ಕೆಲವು ಪ್ರಾತಿನಿಧಿಕ ಅಂಶಗಳನ್ನು ಮಾತ್ರವೇ. ಅದರಲ್ಲಿ ಬೇರೆ ಬೇರೆ ಮಾದರಿಗಳು ಇರುತ್ತವೆ. ಅವುಗಳಿಗೆ ಸಾಮಾಜಿಕ ತಾತ್ವಿಕತೆಯೂ ಇರುತ್ತದೆ. ಮತ್ತು ಅವುಗಳನ್ನು ನೋಡುವುದು

ಎಂದರೆ ಜೀವನದ ಕೆಲವು ಅಂಶಗಳನ್ನು ಮಾತ್ರವೇ ನೋಡುವುದು. ಕಾದಂಬರಿಯೆನ್ನುವುದು ಜೀವನದ ಅನೇಕ ಮುಖಗಳನ್ನು ವಿವರಿಸುತ್ತದೆ. ಕಾದಂಬರಿ ಮತ್ತು ಅದರ ಸಾಧ್ಯತೆಯು ಬೇರೆಯಾಗಿರುತ್ತದೆ. ಅದನ್ನು ನೋಡುವಾಗ ಮತ್ತೆ ನಾವು ವಿವರಿಸಬೇಕಾದ್ದು ಮಹಾಕಾವ್ಯವನ್ನು. ಅದು ಸಾಮಾಜಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸಿತ್ತು. ಅದು ಮನುಷ್ಯರು ಸಮಾಜವನ್ನು ವಿಶಿಷ್ಟವಾಗಿಯೇ ನಿರೂಪಿಸಿತ್ತು. ಅದರಲ್ಲಿ ಒಂದು ಸಮಾಜದ ಅನೇಕ ಗುಣಗಳನ್ನು ನಾವು ಕಾಣಬಹುದು. ಈ ದೃಷ್ಟಿಯಿಂದ ಮಹಾಕಾವ್ಯದ ಸಂಕಥನವು ಭಿನ್ನವಾಗಿದೆ. ಅದರಲ್ಲಿ ಉಳಿದ ಪ್ರಕಾರಕ್ಕಿಂತ ಬೇರೆಯಾದ ಗುಣವಿದೆ. ಅದರಲ್ಲಿ ಯಾವುದೇ ಒಬ್ಬ ವ್ಯಕ್ತಿಯು ಮುಖ್ಯವಲ್ಲ. ಅದು ಕಟ್ಟುವ ಪ್ರತೀಕಗಳೇ ಬೇರೆ. ಅದರ ಸ್ವರೂಪವೂ ಭಿನ್ನ. ಕಾಲ ಮತ್ತು ಅದರ ಉದ್ದೇಶಗಳೇ ಭಿನ್ನವಾಗಿದೆ. ಅದರ ಹಿನ್ನೆಲೆಯಲ್ಲಿ ಸಾಮಾಜಿಕ ಏಳುಬೀಳುಗಳ ವಿಚಾರಗಳೂ ಇರುತ್ತವೆ.

ಕಾದಂಬರಿ ಮತ್ತು ಅದರ ಸ್ವರೂಪವು ಹೀಗೆ ಬೇರೆಯಾಗುತ್ತದೆ. ಕಾದಂಬರಿಯು ಹೇಗೆ ಭಿನ್ನವಾಗಿದೆ ಮತ್ತು ಅದರಲ್ಲಿ ಲೇಖಕನ ಪಾತ್ರವು ಏನಾಗಿರುತ್ತದೆ ಎನ್ನುವುದೂ ಒಂದು ಪ್ರಶ್ನೆ. ಅಭಿವ್ಯಕ್ತಿ ಮತ್ತು ಅದರ ಪ್ರಾತಿನಿಧಿಕತೆಗೆ ಇಲ್ಲಿ ಪ್ರಾಶಸ್ತ್ಯವು ಇದ್ದೇ ಇರುತ್ತದೆ. ಲೇಖಕ ಮತ್ತು ಅವನ ಜಾಗವು ಇಲ್ಲಿ ಜಿಜ್ಞಾಸೆಗೆ ಗುರಿಯಾಗುತ್ತದೆ. ಲೇಖಕನನ್ನು ಬಿಟ್ಟ ಕಾದಂಬರಿ ಮತ್ತು ಅದರ ಶೈಲಿ ಎಂದು ಹೇಳಲಾಗುವುದೇ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆ. ಕಾದಂಬರಿ ಮತ್ತು ಅದರ ಶೈಲಿ ಎಂದು ಹೇಳುವಾಗ ನಮಗೆ ಮತ್ತೊಂದು ಅಂಶವು ಹೆಚ್ಚು ಮುಖ್ಯವಾಗುತ್ತದೆ. ಕಾದಂಬರಿ ಮತ್ತು ಅದರ ಶೈಲಿಯನ್ನು ನೋಡುವಾಗ ಅದರ ಪರಿಣಾಮವು ಏನು ಎಂದೂ ಗಮನಿಸಬೇಕಾಗುತ್ತದೆ.

ಶೈಲಿಯನ್ನು ನೋಡುವಾಗ ನಾವು ಅದರ ವಿಶಿಷ್ಟತೆಯು ಈ ಸನ್ನಿವೇಶದಲ್ಲಿ ಏನು ಎಂದು ಗುರುತಿಸಬೇಕಾಗುತ್ತದೆ. ಕಾದಂಬರಿಯ ಶೈಲಿ ಮತ್ತು ಅದರ ಹಿಂದೆ ಇರುವ ಸನ್ನಿವೇಶವು ಅತ್ಯಂತ ಮುಖ್ಯ. ಚರಿತ್ರೆಗೆ ಮತ್ತು ಶೈಲಿಗೆ ಒಂದು ಸಂಬಂಧವು ಇದೆ. ಆದ್ದರಿಂದ ಕಾದಂಬರಿಯ ಶೈಲಿ ಎಂದರೆ ಅದು ನಿರ್ವಾತದ ಸಂಗತಿಯು ಅಲ್ಲ. ಕಾದಂಬರಿಯಲ್ಲಿ ಬರುವ ಶೈಲಿಯ ಪ್ರಶ್ನೆಯು ಯಾವತ್ತೂ ಪದ ಮತ್ತು ವಾಕ್ಯಗಳ ಸಮಸ್ಯೆಯು ಅಲ್ಲ. ಯಾವ ಪದವನ್ನು ಒಬ್ಬ ಲೇಖಕ ಹೇಗೆ ಬಳಸುತ್ತಾನೆ ಎನ್ನುವುದು ಮಾತ್ರವೇ ಶೈಲಿ ಎಂದು ಆಗುವುದಿಲ್ಲ. ಅದು ಅಭಿವ್ಯಕ್ತಿಯನ್ನು ಕೂಡಾ ಹೇಳುತ್ತದೆ. ಅದರ ಜೊತೆಗೆ ಅದರ ಹಿಂದೆ ಇರುವ ಆಲೋಚನೆಯ ಪಂಥದ ಪ್ರಶ್ನೆಯೂ ಆಗುತ್ತದೆ. ನಾವು ಕುವೆಂಪು ಮತ್ತು ಅನಂತ ಮೂರ್ತಿಯವರ ಕಾದಂಬರಿಗಳಲ್ಲಿ ಶೈಲಿಯಲ್ಲಿ ಬರುವ ವ್ಯತ್ಯಾಸವು ಬರೀ ವ್ಯಕ್ತಿಗಳ ಅಭಿವ್ಯಕ್ತಿಯ ಪ್ರಶ್ನೆಗಳು ಅಲ್ಲ. ವ್ಯಕ್ತಿ ಮತ್ತು ಅವನ ಆಲೋಚನೆ, ಅವನ ಹಿಂದೆ ಇರುವ ಆಲೋಚನೆಯ ಪಂಥ, ವ್ಯಕ್ತಿತ್ವದ ಪ್ರಶ್ನೆ, ಆಯಾ ಕಾಲದ ಶೈಲಿಗಳು ಹಾಗೂ ಸಾಹಿತ್ಯ ಮತ್ತು ಅದರ ಸೌಂದರ್ಯದ ಪ್ರಶ್ನೆಗಳು ಇರುತ್ತವೆ. ಒಂದು ಕಾಲದಲ್ಲಿ ಯಾವ ಶೈಲಿಯು ಇರುತ್ತದೆಯೋ ಪರಿಣಾಮಗಳು ಒಂದು ಪ್ರಕಾರದಮೇಲೆ ಪ್ರಭಾವವನ್ನು ಬೀರುತ್ತವೆ. ನಾವು ಈ ಅಂಶಗಳನ್ನು ನಿರಾಕರಿಸುವಂತಿಲ್ಲ. ಕಾರಂತರ ವಾಸ್ತವತೆಯು ಬಿರುಕು, ಗತಿಸ್ಥಿತಿ, ವಿಕ್ಷೇಪದಲ್ಲಿ ಕಾಣುವುದಿಲ್ಲ. ಕಾರಂತರಿಗೆ ಸಂಕೇತವಾದ ಮತ್ತು ಕಥನದ ತಂತ್ರಗಳು ಮುಖ್ಯವಾಗಲಿಲ್ಲ. ನಾವು ನಮ್ಮ ಚರಿತ್ರೆಯನ್ನು ಹೇಳುವಾಗ ಅದರಲ್ಲಿ ಯಾವ ಧ್ವನಿಯು ಇರುತ್ತದೆ ಎಂದೂ ನೋಡಬೇಕಾಗಿರುತ್ತದೆ. ಚರಿತ್ರೆಯನ್ನು ಬರೆಯುವವರು ಚಾರಿತ್ರಿಕ

ಘಟನೆಗಳನ್ನು ಶ್ರೇಣೀಕರಣ ಮಾಡುತ್ತಾರೆ. ಯಾವುದನ್ನು ನಾವು ಮೊದಲು ಹೇಳಬೇಕು ಮತ್ತು ಯಾವುದನ್ನು ಗಂಭೀರವಾಗಿ ಪರಿಗಣಿಸಬಾರದು ಎಂದು ಅವರೇ ತೀರ್ಮಾನವನ್ನು ಮಾಡುತ್ತಾರೆ. ಅದ್ದರಿಂದ ಚರಿತ್ರೆ ಮತ್ತು ಅದರ ಕಥನಗಳು ಒಬ್ಬ ಚರಿತ್ರೆ ಮತ್ತು ಅದರ ಪಠ್ಯಗಳು ತಮ್ಮದೇ ಆದ ಒಂದು ಪಾತ್ರವನ್ನು ವಹಿಸುತ್ತದೆ ಎಂದು ಇತಿಹಾಸಕಾರರು ಯಾವುದನ್ನು ಬರೆಯಲಾಗಿದೆ ಅದನ್ನು ದಾಖಲೆ ಎಂದು ಹೇಳುತ್ತೇವೆ. ಅದರಲ್ಲಿ ಕೆಲವು ಪರಿಕರಗಳೂ ಇರಬಹುದು.ನಾವು ಯಾವುದೇ ಸಾಹಿತ್ಯದ ಕೃತಿಗಳನ್ನು ನೋಡಿದರೂ ಅದರ ಸ್ವರೂಪವು ಅತ್ಯಂತ ಸಲೀಸಾಗುವಂತೆ ಬರೆಯಲಾಗಿದೆ ಎಂದು ಹೇಳುವಂತೆ ಇಲ್ಲ.

ಕಾದಂಬರಿಗೆ ಯಾವತ್ತೂ ಒಂದು ತಾಯ್ನೆಲ ಎನ್ನುವುದು ಇದ್ದೇ ಇರುತ್ತದೆ. ಅದರ ಜೊತೆಗೆ ಅದು ಅಂತರಂಗ ಮತ್ತು ಬಹಿರಂಗವನ್ನು ಹೇಳುತ್ತದೆ.,.ಲೇಖಕ ಮತ್ತು ಅವನ ಸ್ವಂತಿಕೆ ಮತ್ತು ಲೋಕದ ಗ್ರಹಿಕೆಗಳ ನಡುವೆ ಅದು ಹುಟ್ಟುತ್ತದೆ. ನಮ್ಮ ಅನುಭವ ಮತ್ತು ಅದರ ಜೊತೆಗೆ ಇರುವ ಅನೇಕ ಸಂಗತಿಗಳು ಕಾದಂಬರಿಯಲ್ಲಿ ಬರುತ್ತವೆ. ಲೇಖಕನು ಹೊರಗೆ ಮತ್ತು ಒಳಗೆ ಎಂದು ವ್ಯತ್ಯಾಸ ಮಾಡಲಾಗದಷ್ಟು ಅನುಭವ ಎನ್ನುವುದು ಇರುತ್ತದೆ. ಇದರಲ್ಲಿಯೂ ಸ್ಥಳ ಎನ್ನುವುದು ಹೇಗೆ ಬರುತ್ತದೆ ಮತ್ತು ಅದರ ಅಗತ್ಯವು ಏನು ಎನ್ನುವುದನ್ನು ನಮಗೆ ಅನೇಕ ಕಾದಂಬರಿಗಳು ಹೇಳುತ್ತವೆ. ಅದು ಅತ್ಯಂತ ವಿಶಿಷ್ಟವಾದ ಸಂಯೋಜನೆಯೂ ಹೌದು.. ಜೀವನ ಮತ್ತು ಅದರ ಮಹತ್ವ ಏನು ಎನ್ನುವುದನ್ನು ಕನ್ನಡದ ಅನೇಕ ಲೇಖಕರು ನಮಗೆ ಸೂಚಿಸುತ್ತಾರೆ. ನಮ್ಮ ಜೀವನ ಎಂದರೆ ಏನು, ಅದರ ಅರ್ಥವೇನು, ನಮಗೆ ಯಾವುದರ ಅಗತ್ಯವಿದೆ ಮುಂತಾದ ಪ್ರಶ್ನೆಗಳನ್ನು ಕಾರಂತರು, ತೇಜಸ್ವಿ, ಲಂಕೇಶರಂಥ ಲೇಖಕರು ಹೇಳಿದ್ದಾರೆ. ಜೀವನ ಮತ್ತು ಅದರ ಸಾರವು ಏನು ಎನ್ನುವುದನ್ನು ಲೇಖಕರು ಹೇಳುತ್ತಾರೆ. ಜೀವನದ ಸಾರ ಮತ್ತು ಅದರ ಸತ್ವವನ್ನು ಪಂಪನೂ ಹೇಳುತ್ತಾನೆ.

ವಾಸ್ತವವಾಗಿ ಕನ್ನಡದ ಚಂಪೂ ಕಾವ್ಯಗಳು ಜೀವನದ ಸಾರ ರೂಪವನ್ನು ಹೇಳಿದರು. ಅದರ ಜೊತೆಗೆ ನಾವು ಯಾವ ರೀತಿಯಲ್ಲಿ ಜೀವನವನ್ನು ಸಾಗಿಸಬೇಕು ಎಂದು ವಿವರಿಸಿದರು. ಮನುಷ್ಯ ಮತ್ತು ಅವನ ಮನೋಸ್ಥಿತಿ , ಚರಿತ್ರೆಯ ವಿವಿಧ ಆಯಾಮಗಳು ಪಂಪನ ಮಹಾಕವಿಯಲ್ಲಿ ಕಾಣುತ್ತದೆ. ಅವನು ಅನಂಗ. ಜಂಗಮ, ಲತೆ, ಲತಾಂಗಿಯರ ಜೊತೆಗೆ ಇರುವ ಜೀವನವೇ ಸಂಸಾರ ಸಾರೋದಯ ಎಂದು ತಿಳಿಯುತ್ತಾನೆ. ಜೀವನವೂ ನಮಗೆ ಅನೇಕವನ್ನು ಕಲಿಸುತ್ತದೆ ಎನ್ನುವುದರಲ್ಲಿ ಪಂಪನಿಗೆ ಯಾವುದೇ ಅನುಮಾನವಿಲ್ಲ. ಮನುಷ್ಯ ಮತ್ತು ಅವನ ಚರಿತ್ರೆಯು ಬದಲಾಗುತ್ತಾ ಹೋದಂತೆ ಚರಿತ್ರೆಯು ಬದಲಾಗುತ್ತದೆ. ಅದಕ್ಕೆ ಅನುಸಾರವಾಗಿ ಮನಸ್ಸಿನಲ್ಲಿ ಪಲ್ಲಟಗಳೂ ಆಗುತ್ತವೆ. ಇಲ್ಲಿ ಗ್ರೀಕರು ಮತ್ತು ಅವರ ಕಲೆಯ ಕುರಿತಾದ ಚರ್ಚೆಯನ್ನೂ ನಾವು ಗಮನಿಸಬೇಕು. ಅದು ಅವರ ಜಗತ್ತು ಮತ್ತು ಲೋಕದ ಕುರಿತಾದ ಒಂದು ದೃಷ್ಟಿಕೋನವನ್ನು ಹೇಳುತ್ತದೆ. ಅವರು ಕೆಲವು ಉತ್ತರಗಳನ್ನು ಕೊಡುತ್ತಾರೆ. ಆದರೆ ಅವರು ಯಾವುದೇ ಪ್ರಶ್ನೆಗಳನ್ನು ಕೇಳುವುದಿಲ್ಲ. ಆದ್ದರಿಂದ ಅವರ ಲೋಕದ ಗ್ರಹಿಕೆ ಬೇರೆಯಾಗುತ್ತದೆ. ಅವರು ಇರುವ ಸಮಸ್ಯೆಗಳಿಗೆ ಪರಿಹಾರವನ್ನು ಹೇಳುತ್ತಾರೆ. ಇದನ್ನು ನಾವು ಆಗಣ ಗ್ರೀಕ್ ಬರಹಗಳಲ್ಲಿ ಕಾಣುತ್ತೇವೆ. ಅವರಿಗೆ ಸಾಹಿತ್ಯ ಮತ್ತು ಅದರ ರೂಪಗಳನ್ನು ಕಟ್ಟುವ ಆಸಕ್ತಿಯು ಹೆಚ್ಚು. ಹಾಗೆಂದು ಅವರ ನಿಲುವುಗಳನನ್ನು ನಾವು ಅತಾರ್ಕಿಕ ಎಂದು ಹೇಳಲು ಬರುವುದಿಲ್ಲ.

ಅವರು ಅನೇಕ ವೈರುದ್ಧ್ಯಗಳ ನಡುವೆ ಇದನ್ನು ರೂಪಿಸಿದರು ಎನ್ನುವುದು ಇಲ್ಲಿ ಉಲ್ಲೇಖನೀಯ. ಇದು ಕೂಡಾ ಮತ್ತೊಂದು ಅರ್ಥದಲ್ಲಿ ಪೂರ್ಣತೆಗೆ ಹೋಗುವ ದಾರಿಯೂ ಹೌದು. ಆದರೆ ಅವರು ಮತ್ತೆ ಕೆಲವು ವಿಚಾರಗಳಲ್ಲಿ ಒಂದು ಬಗೆಯ ಸಂದೇಹವನ್ನು ಕೂಡಾ ಹುಟ್ಟುಹಾಕುತ್ತಾರೆ. ಅವರಿಗೆ ತರ್ಕ ಮತ್ತು ಸತ್ಯದ ವಾಗ್ವಾದಗಳು ಅತ್ಯಂತ ಮುಖ್ಯ. ಅವರು ಅದರ ಜೊತೆಗೆ ತತ್ವಜ್ಞಾನ, ಮನಸ್ಸು, ಸೌಂದರ್ಯಶಾಸ್ತ್ರ, ನಾಟಕಗಳು, ಸಮಾಜ ಮತ್ತು ಅದರ ನೈತಿಕತೆ ಮುಂತಾದವು ಮುಖ್ಯವಾಗಿತ್ತು. ಅವರ ನಾಟಕಗಳಲ್ಲಿ ಮುಖವಾಡವೂ ಅತ್ಯಂತ ಮುಖ್ಯ. ಅದರಲ್ಲಿಯೂ ಒಂದು ತತ್ವಜ್ಞಾನ ಮತ್ತು ಅದರ ಹೂರಣವು ಇದೆ.

ದೈವ ಮತ್ತು ಮನುಷ್ಯರು ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ಅದು ಜೀವನ ಮತ್ತು ಅದರ ಮೌಲ್ಯವನ್ನು ಹೇಳುತ್ತದೆ. ಅದರಲ್ಲಿ ಅವರು ಒಂದು ಅರ್ಥ ಪೂರ್ಣತೆಯನ್ನು ಕಾಣುತ್ತಾರೆ. ಹಾಗೆ ನೋಡಿದರೆ ದುರಂತ ನಾಟಕಗಳಲ್ಲೂ ನಾವು ಮಹತ್ವದ ವಿವರಣೆಯನ್ನು ಕಾಣುತ್ತೇವೆ. ಜೀವನ ಮತ್ತು ಅದರ ಭವ್ಯತೆಗೆ ವಿವಿಧ ಆಯಾಮಗಳು ಇರುವದನ್ನು ಅವರು ಹೇಳುತ್ತಾರೆ. ಈ ಮೂಲಕ ಅವರು ಸಾಹಿತ್ಯದಲ್ಲಿ ತಮ್ಮದೇ ಆದ ಒಂದು ವರ್ಚಸ್ಸನ್ನು ಕಾಪಾಡಿದರು. ಅವರ ಚಿಂತನೆಗಳಲ್ಲಿ ಆಳವಾದ ಒಂದು ಪ್ರಾತಿನಿಧಿಕವಾದ ಒಂದು ರೂಪವನ್ನು ನಾವು ಕಾಣುತ್ತೇವೆ. ಅವರ ನಾಟಕಗಳಲ್ಲಿ ಬರುವ ನಾಯಕರು ನಮಗೆ ನಿಜವಾದ ನಾಯಕರು ಎಂದು ಅನಿಸುತ್ತದೆ. ಆ ನಾಯಕರು ಕಷ್ಟವನ್ನು ಅನುಭವಿಸುತ್ತಾರೆ. ಅವರೂ ಅನೇಕ ವಿಧವಾದ ಸಮಸ್ಯೆಗಳನ್ನು ಎದುರಿಸುತ್ತಾರೆ. ಅವರಲ್ಲಿಯೂ ಶುದ್ಧ ಮತ್ತು ಮೈಲಿಗೆ ಎನ್ನುವುದು ಇದೆ. ಹೀಗೆ ಇದ್ದರೂ ವ್ಯಕ್ತಿಯು ತನ್ನದೇ ಆದ ಒಂದು ಪೂರ್ಣತೆಯನ್ನು ಕಾಪಾಡಬೇಕಾಗುತ್ತದೆ. ಅದು ವ್ಯಕ್ತಿಯ ಜೀವನದ ಚರಿತ್ರೆಯಲ್ಲಿ ಅತ್ಯಂತ ಮುಖ್ಯ. ಕಲೆಯ ದೃಷ್ಟಿಯಿಂದ ಗ್ರೀಕರು ತುಂಬಾ ಎತ್ತರಕ್ಕೆ ಏರಿದ್ದರು. ಅದರ ಅನಂತರವೇ ಉಳಿದ ದೇಶಗಳಲ್ಲಿ ತತ್ವಜ್ಞಾನ ಮತ್ತು ಸೌಂದರ್ಯಶಾಸ್ತ್ರದ ಪ್ರಶ್ನೆಗಳು ಬಂದವು. ಹಾಗೆ ನೋಡಿದರೆ ಅವರು ವಿಚಾರವನ್ನು ಮಾಡಿದ್ದಕ್ಕಿಂತಲೂ ಅವರ ರಚನೆಗಳು ಮಹತ್ವದ್ದಾಗಿತ್ತು. ಇನ್ನೊಂದು ಅತ್ಯಂತ ಮಹತ್ವದ ಪ್ರಶ್ನೆಯು ಇದೆ. ಅವರ ಅಲೌಕಿಕ ಎನ್ನುವುದರ ಚಿಂತನೆಗೆ ಮತ್ತೆ ಮತ್ತೆ ನಮಗೆ ವಿವಿಧ ಆಯಾಮಗಳು ಸಿಕ್ಕುತ್ತವೆ. ಅದಕ್ಕೂ ಒಂದು ಕಾರಣವು ಇದೆ. ಅವರು ಯೋಚನೆ ಮಾಡಿದ್ದಕ್ಕಿಂತಲೂ ಮಿಗಿಲಾದ ಒಂದು ಸಂಗತಿಯು ಇದೆ. ಅದನ್ನು ಅವರು ಒಂದು ನಮೂನೆಯ ಶಕ್ತಿ ಎಂದು ಹೇಳುತ್ತೇವೆ. ಅದನ್ನು ಅವರು ಅನ್ವಯ ಮಾಡಬೇಕಿತ್ತು. ಅದನ್ನು ನಾವು ಈವತ್ತು ಒಂದು ಮನೋಸ್ಥಿತಿ ಅಥವಾ ಅದನ್ನು ಒಂದು ಬಗೆಯ ಮಾನಸಿಕವಾದ ಸಮಸ್ಯೆ ಎಂದೂ ಹೇಳುತ್ತೇವೆ. ಹಾಗೆಂದು. ಅದನ್ನು ನಾವು ಈವತ್ತು ಅತಾತ್ವಿಕವಾದ ಸಮಸ್ಯೆ ಎಂದು ಹೇಳಲು ಆಗುವುದಿಲ್ಲ.

ಗ್ರೀಕರು ವಾಸ್ತವವವಾಗಿ ಪ್ರಶ್ನೆ ಮತ್ತು ಉತ್ತರಗಳನ್ನು ಭಿನ್ನವಾದ ರೀತಿಯಲ್ಲಿ ಕೇಳುತ್ತಾರೆ. ನಾವು ಯಾವುದನ್ನು ಜೀವನದಲ್ಲಿ ಎದುರಿಸುತ್ತೇವೆಯೋ ಅದನ್ನು ಅವರು ತಮ್ಮ ಉತ್ತರಗಳ ಮೂಲಕ ಕಂಡುಕೊಳ್ಳುತ್ತಾರೆ. ಅವುಗಳು ರಾಚನಿಕವಾಗಿ ಅತ್ಯಂತ ಮುಖ್ಯ. ಅದನ್ನು ನಾವು ಮರೆಯಬಾರದು. ಅದು ಸೃಜನಶೀಲವೂ ಹೌದು. ನಾವು ಇದನ್ನು ಅರಿಸ್ಟಾಟಲನ ಕಾವ್ಯ ಮೀಮಾಂಸೆಯಲ್ಲಿಯೂ ಕಾಣುತ್ತೇವೆ. ಅವನ ಕೆಥಾರ್ಸಿಸ್ ಸಿದ್ಧಾಂತ ಈ ದೃಷ್ಟಿಯಲ್ಲಿ ಒಂದು ಸೃಜನಾತ್ಮಕವಾದ ಪ್ರತಿಕ್ರಿಯೆ ಕೂಡಾ ಹೌದು. ಅವರು ಈ ಬಗೆಯ ಪ್ರಶ್ನೆಗಳನ್ನು ಕೇಳುವಾಗ

ಅವರ ದೃಷ್ಟಿಯಲ್ಲಿ ಸ್ಥಳ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಮತ್ತೊಂದು ಅಂಶವನ್ನು ಗ್ರೀಕರು ಹೇಳುತ್ತಾರೆ– ಅದರಲ್ಲಿ ಸ್ಥಳ ಮತ್ತು ಜ್ಞಾನಕ್ಕೆ ಇರುವ ಒಂದು ಸಂಬಂಧ. ಅವರು ಅನುಭವ ಮತ್ತು ಜ್ಞಾನಕ್ಕೆ ಒಂದು ಸಂಬಂಧವು ಇದೆ ಎಂದು ಹೇಳುತ್ತಾರೆಯೋ ಅದೇ ರೀತಿಯಲ್ಲಿ ಅವರು ಅದನ್ನು ಶಾಸ್ತ್ರ ಎನ್ನುವಂತೆ ನೋಡುತ್ತಾರೆ.ಇದು ಅತ್ಯಂತ ಕುತೂಹಲದಾಯಕವೂ ಆಗಿದೆ. ಯಾವುದು ನಿಜವಾದ ಪರಿಪೂರ್ಣವಾದ ಜ್ಞಾನ ಎಂದು ಅನಿಸುತ್ತದೆಯೋ ಅದಕ್ಕೆ ವಿವಿಧ ಹಾದಿಗಳು ಇವೆ ಎನ್ನುವುದು ಸತ್ಯ. ಮನುಷ್ಯ ಮತ್ತು ಜಗತ್ತು ಎನ್ನುವುದಕ್ಕೆ ಒಂದು ಸಂಬಂಧವು ಇದೆ. ಅದೇ ರೀತಿಯಲ್ಲಿ ನಾನು ಮತ್ತು ನೀನು ಹಾಗೂ ಮಧ್ಯೆ ಜಗತ್ತು ಇರುತ್ತದೆ, ಆದ್ದರಿಂದ ಲೋಕ ಮತ್ತು ಅದರ ಗ್ರಹಿಕೆಯಲ್ಲಿ ನಮ್ಮ ಆತ್ಮ ಎನ್ನುವುದಕ್ಕೆ ಒಂದು ಮಹತ್ವವವು ಇದೆ. ಅದರ ಮೂಲಕ ನಾವು ಜಗತ್ತನ್ನು ನಂಬುತ್ತೇವೆ. ಅದನ್ನು ಗ್ರಹಿಸುತ್ತೇವೆ. ನಮಗೆ ಬೇಕಾದ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತೇವೆ. ಒಂದು ಕಾರಣವನ್ನು ನಾವು ಇಲ್ಲಿ ಹೇಳಬೇಕು: ಜಗತ್ತನ್ನು ಅರ್ಥ ಮಾಡಿಕೊಳ್ಳುವಾಗ ನಮಗೆ ಅದರ ಜೊತೆಗೆ ಒಂದು ಸಂಬಂಧವು ಸಾಧ್ಯವಾಗುತ್ತದೆ. ನಾನು, ನೀನು, ಜಗತ್ತು ಮತ್ತು ಆತ್ಮ ಎನ್ನುವ ಪ್ರಶ್ನೆಗಳು ಪರಸ್ಪರ ಸೇರಿಕೊಂಡು ಒಂದು ಏಕತೆ ಉಂಟಾಗುತ್ತದೆ. ಅದರಲ್ಲಿ ಒಂದು ಸಮತೋಲನವು ಬರುತ್ತದೆ. ಇದರ ಅತ್ಯಂತ ಮುಖ್ಯವಾದ ಒಂದು ಅಂಶವೆಂದರೆ ಜೀವನ ಮತ್ತು ಅದರ ಸಾರ ಸರ್ವಸ್ವವನ್ನು ನಾವು ಕಾಪಾಡುವುದು. ಈ ಮಾತಿಗೆ ಒಂದು ನಿರ್ದಿಷ್ಟವಾದ ತತ್ವಜ್ಞಾನವೂ ಬೇಕಾಗುತ್ತದೆ.. ಇದರ ಜೊತೆಗೆ ಅತ್ಯಂತ ಮಹತ್ವದ ಇನ್ನೊಂದು ಪ್ರಶ್ನೆಯನ್ನು ಗ್ರೀಕರು ಕೇಳುತ್ತಾರೆ.

ವಾಸ್ತವವಾಗಿ ಇಲ್ಲಿ ಪ್ರೀತಿ, ಕುಟುಂಬ ಮತ್ತು ಪ್ರಭುತ್ವದ ಪ್ರಶ್ನೆಗಳೂ ಬಂದಿವೆ. ಗ್ರೀಕರು ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಚರಿತ್ರೆಯನ್ನು ನಮಗೆ ಕಟ್ಟಿಕೊಟ್ಟಿದ್ದಾರೆ. ಯಾವುದು ನಮ್ಮ ಜೀವನವನ್ನು ಹಾಳುಮಾಡುತ್ತದೆ ; ಅದು ಹೇಗೆ ಬಾಹ್ಯವನ್ನು ಸೂಚಿಸುತ್ತದೆ ಎನ್ನುವುದನ್ನು ಅವರ ತತ್ವಜ್ಞಾನವು ಹೇಳುತ್ತದೆ. ಜೀವನ ಮತ್ತು ಅದರ ಸಾಧ್ಯತೆಯನ್ನು ಅವರು ಹುಡುಕುವ ಕ್ರಮಗಳು ಬೇರೆಯಾಗಿವೆ. ಅದನ್ನು ವಿಧಿ ಮತ್ತು ಮನುಷ್ಯರ ಸಂಬಂಧ ಮೂಲಕ ಹೇಳುತ್ತಾರೆ. ಆಧ್ಯಾತ್ಮವು ನಮ್ಮನ್ನು ನಿಯಂತ್ರಣ ಮಾಡುತ್ತದೆ. ಒಂದು ಮುಕ್ತ ಎನ್ನುವ ಸ್ಥಿತಿಯು ಮನುಷ್ಯರಿಗೆ ಬೇಕಾಗುತ್ತದೆ. ಮನುಷ್ಯನು ತನ್ನ ಅಗತ್ಯವನ್ನು ರೂಪಿಸಿಕೊಳ್ಳಬಲ್ಲ. ಅದನ್ನು ಸಾಧಿಸಲು ನಮಗೆ ಶಕ್ತಿಯು ಬೇಕಾಗುತ್ತದೆ. ಯಾವುದೇ ಗಾಳಿ ಮತ್ತು ಬೆಳಕು ಇಲ್ಲದ ಒಂದು ಕೋಣೆಯಲ್ಲಿ ಹೆಚ್ಚು ಹೊತ್ತು ಕಳೆಯಲಾರೆವು. ಇದು ಒಂದು ತತ್ವಜ್ಞಾನದ ಹಾಗೆ ಕಾಣುತ್ತದೆ. ಆದರೆ ನಾವು ಮಾಡಿದ ಮೊದಲ ಕೆಲಸವೆಂದರೆ ರೂಪಗಳನ್ನು ಹುಟ್ಟುಹಾಕಿದ್ದು, ಆದ್ದರಿಂದ ಇದಕ್ಕೆ ಒಂದು ಚಾರಿತ್ರಿಕವಾದ ಮಹತ್ವವು ಇದೆ. ಆದ್ದರಿಂದ ನಾವು ಮೊದಲು ನಮ್ಮನ್ನು ನಾವೇ ಶೋಧಿಸಬೇಕಾದ ಅಗತ್ಯವಿದೆ. ಅದು ಸತ್ಯದ ಹುಡುಕಾಟವೂ ಹೌದು.

ಈ ಜಗತ್ತು ಅತ್ಯಂತ ವಿಶಾಲವಾಗಿದೆ. ಅದರಲ್ಲಿ ಅಪಾಯಗಳು ಇವೆ. ಅದರ ಜೊತೆಗೆ ಅದರಲ್ಲಿ ಸುಖವೂ ಇದೆ. ಅದರ ಜೊತೆಗೆ ಅತ್ಯಂತ ವಿಸ್ತಾರವಾದ ನಿಸರ್ಗವೂ ನಮ್ಮನ್ನು ಪೋಷಿಸುತ್ತದೆ. ಅದನ್ನು ನಾವು ಹೇಗೆ ಬೇಕಾದರೂ ಹೇಳಬಹುದು. ಅದರಲ್ಲಿ ಒಂದು

ಮುಖ್ಯವಾದ ಅಂಶವಿದೆ ಎಂದು ಗ್ರೀಕರು ನಂಬುತ್ತಾರೆ. ಗ್ರೀಕರು ಜಗತ್ತನ್ನು ನೋಡುವಾಗ ಒಂದು ಧನಾತ್ಮಕವಾದ ಅರ್ಥವನ್ನು ಕೊಡುತ್ತಾರೆ. ಅದನ್ನು ಅವರು ಗ್ರಹಿಸುವಾಗ ಅದರಲ್ಲಿ ಇರುವ ಸಮಗ್ರತೆಯನ್ನು ಹೇಳುತ್ತಾರೆ. ಇದಕ್ಕೆ ಚಾರಿತ್ರಿಕವಾದ ಒಂದು ಮಹತ್ವವು ಇದೆ. ಮನುಷ್ಯ ಮತ್ತು ನಿಸರ್ಗವನ್ನು ಒಂದು ಏಕತೆಯ ರೂಪದಲ್ಲಿ ಕಾಣುತ್ತಾರೆ. ಅವರ ಆಧ್ಯಾತ್ಮಿಕವಾದ ಚಿಂತನೆಯು ಅವರ ಕಾವ್ಯದ ಚರ್ಚೆಯಲ್ಲಿಯೂ ಬರುತ್ತದೆ. ಅವರು ನಿಜವಾದ ಅರ್ಥದಲ್ಲಿ ತತ್ವಜ್ಞಾನ ಮತ್ತು ಚರಿತ್ರೆಯನ್ನು ಜೊತೆಗೆ ಸೇರಿಸಿಕೊಂಡಿದ್ದಾರೆ. ಆದ್ದರಿಂದ ಅವರ ನಿಲುವುಗಳು ಮತ್ತು ಸಾಹಿತ್ಯದ ಚಿಂತನೆಗಳು ಜೊತೆಗೆ ಹೋಗುತ್ತವೆ. ಒಂದು ಅರ್ಥದಲ್ಲಿ ಕಾವ್ಯಗಳಿಗೆ ಹೆಚ್ಚು ಶಕ್ತಿಯನ್ನು ಒದಗಿಸಿದವು. ಅದರಲ್ಲಿಯೂ ಅದಕ್ಕೆ ಒಂದು ಮಹತ್ವದ ಚರಿತ್ರೆಯು ಇದೆ. ಅದು ಸೌಂದರ್ಯಶಾಸ್ತ್ರವನ್ನು ಹೇಳುತ್ತದೆ. ಅಲ್ಲಿನ ಸಂಸ್ಕೃತಿಯ ಚಿಂತನೆಯಲ್ಲಿಯೂ ನಾವು ಕಾಣಬಹುದು. ಜಗತ್ತಿಗೆ ಅವರು ತತ್ವಜ್ಞಾನ ಮತ್ತು ರಂಗಭೂಮಿಯನ್ನು ಕೊಟ್ಟರು. ಅದರ ಮೂಲಕ ಜಗತ್ತಿನ ಸಂಸ್ಕೃತಿಗೆ ಒಂದು ಕಾಣಿಕೆಯನ್ನು ಕೊಟ್ಟರು. ಮಹಾಕಾವ್ಯಗಳು ಜೀವನವನ್ನು ಹೇಳಿದ ಕ್ರಮವನ್ನು ನಾವು ಮತ್ತೊಮ್ಮೆ ನೆನಪು ಮಾಡಿಕೊಳ್ಳಬೇಕು. ಜೀವನಕ್ಕೆ ಒಂದು ಘನತೆಯು ಇದೆ. ಅದರ ಜೊತೆಗೆ ನಮ್ಮ ಜೀವನಕ್ಕೆ ಯಾವ ಅರ್ಥವಿದೆ ಎಂದು ನಾಟಕಗಳ ಮೂಲಕ ಹೇಳುತ್ತಾರೆ. ವಾಸ್ತವಗಳ ಮೂಲಕ ಜನರು ತಮ್ಮ ಜೀವನವನ್ನು ಕಟ್ಟುತ್ತಾರೆ. ಅದೇ ರೀತಿಯಲ್ಲಿ ನಾಟಕಗಳಲ್ಲಿ ನಾಯಕನೂ ಜೀವನ ಮತ್ತು ಅದರ ಅರ್ಥವಂತಿಕೆಯನ್ನು ಹುಡುಕುತ್ತಾನೆ. ದುರಂತ ಎನ್ನುವುದೂ ಜೀವನದ ಭಾಗವಾಗಿದೆ. ಅದು ಅದೃಶ್ಯದ ರೂಪಕವೂ ಅಲ್ಲ. ಅವನ ಆತ್ಮ ಎನ್ನುವುದು ಹೇಗೆ ಒಂದು ಶಕ್ತಿಯನ್ನು ಹೊಂದಿರುತ್ತದೆ ಎನ್ನುವುದು ಗ್ರೀಕ್ ನಾಟಕಗಳ ಅತ್ಯಂತ ಮುಖ್ಯವಾದ ಒಂದು ಆಶಯವೂ ಆಗಿದೆ. ಅವನು ಭೂಮಿಯಲ್ಲಿ ಇದ್ದಾನೆ. ಅವನಿಗೆ ಕೂಡಾ ಒಂದು ವಾಸ್ತವ ಇದೆ. ಜೀವನದ ಪ್ರಶ್ನೆಗಳಿಗೆ ದುರಂತ ನಾಟಕಗಳು ಉತ್ತರವನ್ನು ಕೊಡುತ್ತವೆ.

ಇದರ ನಡುವೆ ಪ್ಲೇಟೋ ವ್ಯಕ್ತಿ ಮತ್ತು ಅವನ ಅನನ್ಯತೆಯನ್ನು ಹುಡುಕುತ್ತಾನೆ. ಅವನಲ್ಲಿ ಮನುಷ್ಯನಿಗೆ ಒಂದು ವಿವೇಕವೂ ಇದೆ. ವ್ಯಕ್ತಿಗೆ ಒಂದು ಶಕ್ತಿಯೂ ಇದೆ. ಮನುಷ್ಯನಿಗೆ ಶಕ್ತಿಯು ಎಲ್ಲಿಂದ ಬರುತ್ತದೆ ಎನ್ನುವುದೂ ಗ್ರೀಕರಲ್ಲಿ ಮುಖ್ಯವಾದ ಪ್ರಶ್ನೆ. ಇದು ತತ್ವಜ್ಞಾನದ ಪ್ರಶ್ನೆಯೂ ಹೌದು. ಅದರ ಜೊತೆಗೆ ಗ್ರೀಕ್ ನಾಟಕಗಳು ನಮಗೆ ಆಸೆ ಮತ್ತು ಅದರ ಪರಿವರ್ತನೆ ಹಾಗೂ ವ್ಯಕ್ತಿ ಮತ್ತು ಅವನ ವಿನಾಶವನ್ನು ಹೇಳುತ್ತದೆ. ಆದ್ದರಿಂದಲೇ ನಮಗೆ ಗ್ರೀಕರ ದೃಷ್ಟಿಕೋನವು ಅತ್ಯಂತ ಮುಖ್ಯ ಎಂದು ಅನಿಸುತ್ತದೆ. ಅವರು ಜಗತ್ತನ್ನು ಮತ್ತು ವಿಶ್ವಾತ್ಮಕ ರಚನೆಗಳನ್ನು ಹೇಳಿದರು. ಇದು ಮಹತ್ವದ್ದು ಎಂದು ಕಾಣುತ್ತದೆ.

ಅಧ್ಯಾಯ - ೫

ಆದರ್ಶ ಮತ್ತು ವಾಸ್ತವತಾವಾದದ ನಡುವಣ ಸಂಬಂಧ

ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರಿಗೆ ವಿಶಿಷ್ಟವಾದ ಸ್ಥಾನ ಮಾನವಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಮಹಾಕಾವ್ಯ, ವಸ್ತು ವಿಮರ್ಶೆ ಹೀಗೆ ವಿವಿಧ ಆಧುನಿಕ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃತಿರಚನೆ ಮಾಡಿರುವ ಕುವೆಂಪು ಅವರು ಕನ್ನಡ ಸಾಹಿತ್ಯದ ರಸ ಋಷಿ ಎಂದೇ ಖ್ಯಾತರಾದವರು, ಸ್ವಾತಂತ್ರ್ಯಪೂರ್ವದಲ್ಲಿ ಬಂದ ಏಕೈಕ ಬ್ರಾಹ್ಮಣೇತರ ಕವಿಯಾದ ಇವರು ತಮ್ಮ ಬರಹದ ಧೋರಣೆ, ಚಿಂತನೆ ಮತ್ತು ಕೃತಿಗಳಿಂದ ಎಲ್ಲರ ಗಮನ ಸೆಳೆದವರು, ಇಂದಿಗೂ ತಮ್ಮ ಈ ವಿಚಾರಗಳಿಂದ ಗಮನ ಸೆಳೆಯುತ್ತಿರುವ ಕವಿ. ಇವರ 'ಕಾನೂರು ಹೆಗ್ಗಡತಿ' (೧೯೩೬) ಕನ್ನಡದ ಮೊದಲ ಪ್ರಾದೇಶಿಕ ಕೃತಿಯಾಗಿದೆ. ಇವರ ಮತ್ತೊಂದು ಪ್ರಮುಖ ಕಾದಂಬರಿ 'ಮಲೆಗಳಲ್ಲಿ ಮದುಮಗಳು' (೧೯೬೭). ಅಲ್ಲದೆ 'ಶ್ರೀರಾಮಾಯಣದರ್ಶನಂ' ಎಂಬ ಮಹಾಕಾವ್ಯ ಬರೆದ ಮಹಾನ್ ಕವಿ ಇವರು, ಕವಿ ಕುವೆಂಪು ತಮ್ಮ ಎರಡು ಕಾದಂಬರಿಗಳನ್ನು 'ಇವೆರಡು ಮಲೆನಾಡಿನ ಎರಡು ಬಿಂಬಗಳೆಂದು' ಕರೆದಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ಹರಿಕಾರರಲ್ಲಿ ಒಬ್ಬರಾದ ಕವಿ ಕುವೆಂಪು ಅವರು ಸಾಹಿತ್ಯಿಕ ನೋಟಕ್ಕೆ ಹೊಸ ಮಾರ್ಗ ಹಾಕಿಕೊಟ್ಟವರು. "ಕವಿ, ದಾರ್ಶನಿಕ, ವಿಮರ್ಶಕ, ಪ್ರಾಧ್ಯಾಪಕ, ಆಡಳಿತಗಾರರಾಗಿ, ಒಂದುಕಡೆ ಮಹತ್ವದ ಗದ್ಯಕಾರನಾಗಿ ಇನ್ನೊಂದು ಕಡೆ ಅವರು ಕನ್ನಡಕ್ಕೆ ನೀಡಿದ ಕೊಡುಗೆ ಯಾವ ಸಿದ್ಧಾಂತದ, ಯಾವ ಮಾನದಂಡದ ಮೂಲಕವು ನಗಣ್ಯವಾಗುವಂಥದ್ದಲ್ಲ" (ಡಾ.ಆರ್ಕೆ ಮಣಿಪಾಲ, ೨೦೦೬, ಪುಟ. ೩೩೩) ಡಾ.ಆರ್ಕೆ ಮಣಿಪಾಲ ಅವರ ಈ ಮಾತುಗಳು ಕುವೆಂಪು ಅವರ ಅಗಾಧವಾದ ಕವಿತಾಶಕ್ತಿಯನ್ನು ಮತ್ತು ಅವರ ಬಹುಮುಖ ವ್ಯಕ್ತಿತ್ವವನ್ನು ಗುರುತಿಸುತ್ತದೆ.

'ಕಾನೂರು ಹೆಗ್ಗಡತಿ' ಈ ಕೃತಿಯ ಹೆಗ್ಗಳಿಕೆಯೆಂದರೆ ಇದು ಕನ್ನಡದ ಮೊದಲ ಬೃಹತ್ ಕಾದಂಬರಿಯಾಗಿದೆ. ಇದೊಂದು ಕೌಟುಂಬಿಕ ವಿಘಟನೆಯ ಮಹಾಕಾವ್ಯವಾಗಿದೆ. "ಗಾತ್ರ

ಮಾತ್ರದಿಂದಲ್ಲ, ಅಂತಸತ್ವ, ಜೀವನ ವೈಶಾಲ್ಯ, ವಿವಿಧಗುಣ ಸ್ವಭಾವಗಳು, ಪಾತ್ರಗಳು, ಮನುಷ್ಯನ ಸಣ್ಣತನ, ದೊಡ್ಡತನ, ಹೀಗೆ ಬದುಕಿನ ಎಲ್ಲ ಮಗ್ಗುಲುಗಳ ವಸ್ತುನಿಷ್ಠ ದಾಖಲೆಗಳನ್ನೊಳಗೊಂಡ ಅಪೂರ್ವತೆ ಈ ಕಾದಂಬರಿಗೆ ದಕ್ಕಿದೆ. ಅಷ್ಟೇ ಅಲ್ಲದೆ ಒಂದು ಪ್ರದೇಶದ ಚೇತನಾಚೇತನ ವಸ್ತು ಸಂದೇಹ, ಪ್ರಕೃತಿ, ಜೀವರಾಶಿ, ಪಶುಪಕ್ಷಿ ಪ್ರಾಣಿಗಳು, ಮನುಷ್ಯನಷ್ಟೇ ಮುಖ್ಯತಮ ಚೇತನಗಳಾಗಿ ಕನ್ನಡ ಕಾದಂಬರಿ ಪ್ರಪಂಚದಲ್ಲಿ ಪ್ರವೇಶ ಪಡೆದದ್ದು ಈ ಕಾದಂಬರಿ ಮೂಲಕವೇ." (ದುರ್ಗಾದಾಸ್. ಕೆ.ಆರ್., ೨೦೦೦, ಪುಟ. ೫೬.) ಪ್ರಾದೇಶಿಕ ವೈಶಿಷ್ಯತೆಯೊಂದಿಗೆ ಈ ಕಾಥಂಬರಿಯು ಕನ್ನಡದಲ್ಲಿ ಅಸಂಖ್ಯ ಕಾದಂಬರಿಗಳ ರಚನೆಗೆ ಕಾರಣವಾಯಿತು ಎನ್ನುವ ಲೇಖಕರ ಮಾತು ಈ ಕೃತಿಯ ಶ್ರೇಷ್ಠತೆ, ವೈಶಿಷ್ಟ್ಯತೆ. ವೈಚಾರಿಕತೆ, ಮತ್ತು ಪ್ರಾದೇಶಿಕತೆಯ ಹೊಸ ನೋಟದಿಂದ ಹೆಚ್ಚು ಪ್ರಖರವಾಗಿರುವುದನ್ನು ಧ್ವನಿಸುತ್ತದೆ.

ಕುವೆಂಪು ಅವರ 'ಕಾನೂರು ಹೆಗ್ಗಡತಿ' ತನ್ನೊಳಗೆ ಆದರ್ಶ ವಾಸ್ತವದ ಪಾತ್ರಗಳನ್ನು ಹುದುಗಿಸಿಕೊಂಡಿರುವ ಕಾದಂಬರಿಯನ್ನು ಕುರಿತು ಬಂದ ವಿಮರ್ಶಕರ ವಿಮರ್ಶೆಗಳ ಮೂಲಕ ಗಮನಸೆಳೆಯುವ ಪಾತ್ರ ಹೂವಯ್ಯ, ಹೂವಯ್ಯನ ಬದುಕಿನ ಜೀವಿತತೆಯ ಆದರ್ಶದ ಬಗ್ಗೆ ಹೆಚ್ಚು-ಹೆಚ್ಚು ಮಾತನಾಡಿದಂತೆ, ಕೆಲವು ವಿಮರ್ಶಕರು ಈ ಪಾತ್ರ ಆದರ್ಶದ ಅತಿರೇಕ, ಅವಾಸ್ತವ ಎಂಬುದನ್ನು ಹೇಳುವ ಪ್ರಯತ್ನ ಮಾಡಿದುಂಟು. ಇಲ್ಲಿ ಹೂವಯ್ಯ ಹಳ್ಳಿ-ನಗರಗಳ ಪರಿಚಯ ಹೊಂದಿದವ, ಅಕ್ಷರಸ್ಥ ಜಗತ್ತಿನ ಪರಿಚಯವಿರುವ ಈತ ಪಾಶ್ಚಾತ್ಯ ಶಿಕ್ಷಣದ ಬಗ್ಗೆ ಹೆಚ್ಚು ಒಲವು ಹೊಂದಿದವ, ಕವಿ ಹೃದಯಿ, ಪ್ರಕೃತಿ ಪ್ರೇಮಿ, ಪ್ರತಿಯೊಂದನ್ನು ಪರಂಪರೆಯಿಂದ ಬಂದದ್ದು ಎಂದು ಒಪ್ಪಿಕೊಳ್ಳದೆ ವೈಚಾರಿಕತೆಯಿಂದ ಆಲೋಚಿಸುವ ವಿಭಿನ್ನ ವ್ಯಕ್ತಿತ್ವ ಆತನದು.

"ಉತ್ತಮ ಕಲಾಕೃತಿ ಜೀವನದ ಪ್ರತಿಬಿಂಬವಾಗಿರುವಂತೆ ಜೀವನಕ್ಕೆ ಮಾರ್ಗದರ್ಶಕವಾದದ್ದೂ ಆಗಿರುತ್ತದೆ. ಜೀವನ ಹೇಗಿದೆಯೆಂಬುದನ್ನು ತಿಳಿಸುವುದರ ಜತೆಯಲ್ಲೇ ಜೀವನ ಹೇಗೆ ಇರಬೇಕು ಎಂಬುದನ್ನು ಅದು ಸೂಚ್ಯವಾಗಿ ತಿಳಿಸುತ್ತದೆ, ಕಾದಂಬರಿಯಲ್ಲಿ ವಾಸ್ತವಿಕ, ಆದರ್ಶ ಕನಸುಗಳ ಸುಂದರ ಸಮ್ಮಿಲನವಾದಗಲೇ ಅದು ಶ್ರೇಷ್ಠ ಕೃತಿಯಾಗಿ ಪರಿಣಮಿಸುತ್ತದೆ. ಅಂಥ ಕೃತಿರತ್ನ ಕಾನೂರು ಸುಬ್ಬಮ್ಮ ಹೆಗ್ಗಡತಿ" (ಪ್ರೊ.ಅರವಿಂದಮಾಲಗತ್ತಿ, ೨೦೦೬, ಪುಟ. ೫೫೦.) ಎಂದಿದ್ದಾರೆ. ಕೃತಿಯ ವಸ್ತುವಿನ ಮಹತ್ವದ ಜೊತೆಗೆ ಅದರ ಪ್ರಸ್ತುತತೆಯನ್ನು ಹೇಳುವಲ್ಲಿ ಇದು ಒಪ್ಪುವಂತಹದು, ಸಮಾಜದಲ್ಲಿನ ಜನತೆಯ ಹಿತ ಕೃತಿಯ ಉದ್ದೇಶವಾಗಿರಬೇಕು. ಸಂಪೂರ್ಣವಾಗಿ ಒಂದು ಸಮಾಜವನ್ನು ಉತ್ತಮತೆಗೆ ಕೊಂಡ್ಯೊಯಲು ಒಂದು ಉತ್ತಮ ಕೃತಿಗೆ ಆಗದಿರಬಹುದು, ಆದರೆ ಸಮಾಜದ ಒಂದಷ್ಟು ಮನಸ್ಸುಗಳನ್ನಾದರೂ ಬದಲಾಯಿಸುವ ಶಕ್ತಿ ಬರಹಕ್ಕೆ ಇರುವುದರಿಂದ, ಅದರಲ್ಲೂ ವಾಸ್ತವನೆಲೆಯಲ್ಲಿ ಮೂಡಿಬರುವ ಕೃತಿಗಳಿಗೆ ಇರುವುದರಿಂದ ಅಂತಹ ಕೃತಿಗಳು ಎಲ್ಲ ಕಾಲಘಟ್ಟದಲ್ಲಿಯೂ ಪ್ರಸ್ತುತವೆನಿಸುತ್ತದೆ.

ಕಾದಂಬರಿಯಲ್ಲಿ ಹೂವಯ್ಯನ ಪಾತ್ರ ಭಿನ್ನವಾಗಿ ಮೂಡಿಬಂದಿದೆ, ನಾಗರೀಕತೆಯ ಸಂಪರ್ಕದಿಂದ ಸ್ವಲ್ಪ ದೂರದಲ್ಲಿರುವ ದಟ್ಟ ಮಲೆನಾಡಿನಲ್ಲಿ ಬೆಳೆದ ಈತ ಮೈಸೂರಿನ ತನಕ ಹೋಗಿ ವಿದ್ಯಾಭ್ಯಾಸ ಮಾಡುವುದು, ಇಲ್ಲಿ ಒಂದು ವಿಶೇಷ ಅವಕಾಶದಂತೆ ಮೂಡಿಬಂದಿದೆ. ಪಾಶ್ಚಿಮಾತ್ಯ ವಿಚಾರ, ನಾಗರೀಕತೆಗಳಿಗೆ ಹೆಚ್ಚೆಚ್ಚು ತೆರೆದುಕೊಂಡ ಹೂವಯ್ಯನ ಮನಸ್ಸು ಆ

ವಿಚಾರಗಳಿಂದ ಪ್ರಭಾವಿತವಾಯಿತು. ಕಾದಂಬರಿಯ ಹೆಸರಿನಂತೆ ಇಲ್ಲಿ ಸುಬ್ಬಮ್ಮನಾಗಲಿ ಅವಳ ಕೈಹಿಡಿದ ಚಂದ್ರಯ್ಯಗೌಡರಾಗಲಿ ಮುಖ್ಯರಲ್ಲ ಆದರ್ಶವ್ಯಕ್ತಿತ್ವ ಹೊಂದಿದ ಹೂವಯ್ಯನೇ ಇಲ್ಲಿ ನಾಯಕ. ಆದರ್ಶ, ಆಧ್ಯಾತ್ಮದ ವ್ಯಕ್ತಿತ್ವ ರೂಪಿಸಿಕೊಂಡ ಹೂವಯ್ಯನಿಗೆ ಬುದ್ಧನ ಜೀವನ ಈತನಿಗೆ ಆದರ್ಶವಾಗಿದೆ, ಮಹಾಪುರುಷರ ಜೀವನ ಚರಿತ್ರೆಗಳು ಇವನ ವ್ಯಕ್ತಿತ್ವ ಮತ್ತು ಮನೋಸ್ಥಿತಿಯ ಮೇಲೆ ಗಾಢವಾದ ಪ್ರಭಾವ ಬೀರಿವೆ. ಅವರಂತೆ ತಾನು ಆಗಬೇಕೆಂದು ನಿರ್ಧರಿಸುವಲ್ಲಿ ಹೂವಯ್ಯ ತನ್ನ ಜನರ ಅಸಂಸ್ಕೃತಿ, ಕಾಡುತನವನ್ನು ಕಂಡು ದೂರ ಸರಿಯದೆ ಅವರನ್ನು ದಾಸ್ಯತನದಿಂದ ಹೊರತರಲು ಪ್ರಯತ್ನಿಸುವಲ್ಲಿ ನಿಸ್ವಾರ್ಥ ಸೇವಾ ಮನೋಭಾವವಿದೆ. ಆದರ್ಶಬದುಕಿನ ಮಾರ್ಗವಿದೆ.

ಇಲ್ಲಿಯ ಹೂವಯ್ಯ ಏಕಾಏಕಿ ಆದರ್ಶದ ಮಾರ್ಗಹಿಡಿದವನಲ್ಲ ಮನುಷ್ಯ ಸಹಜಬದುಕಿನ ವಾಸ್ತವತೆಯಲ್ಲಿ ತನ್ನತನ ಗುರುತಿಸಿಕೊಂಡರೂ ಶಿಕ್ಷಣ, ಸಾಹಿತ್ಯ, ಮಹಾನ್ ಸಾಧಕರ ಓದಿನ ಪರಿಚಯದಿಂದ ಹಂತ–ಹಂತವಾಗಿ ಮಾಗುತ್ತಾಹೋದವನು, ತಾನು ಇಷ್ಟಪಟ್ಟ ಸೀತೆ ದೊರೆಯದೆ ಇದ್ದಾಗ ಸ್ವಲ್ಪ ಖಿನ್ನನಾದರೂ ಬಹುಬೇಗ ಅದರಿಂದ ಹೊರಬಂದು ಆಧ್ಯಾತ್ಮಿಕತೆಯಲ್ಲಿ ತೊಡಗಿಕೊಂಡು ತನ್ನ ಇಂದ್ರಿಯ ಸಹಜ ದುರ್ಬಲತೆಯನ್ನು ನಿಧಾನವಾಗಿ ಗೆಲ್ಲುತ್ತಾ ಹೋಗುತ್ತಾನೆ. ಆತ ಕೈಗೊಂಡ ಶ್ರೇಷ್ಠ ಕಾವ್ಯಗಳ ಪರಿಚಯ. ಜಗತ್ತಿನ ಮಹಾಪುರುಷರ ಓದು, ವಿದ್ಯೆಯ ಸಂಸ್ಕೃತಿ, ಸಂಯಮ, ದೃಢವಾದ ನಿರ್ಧಾರ ಆತನನ್ನು ಆದರ್ಶವಾದದ ಆಶಾದಾಯಕದ ಮೂಲಕ ಹೊಸಬದುಕಿಗೆ ಸಿದ್ಧಮಾಡುತ್ತದೆ.

ಹೂವಯ್ಯ ಕಾದಂಬರಿಯಲ್ಲಿ ಒಂದು ಮಹತ್ವದ ಪಾತ್ರದಂತೆ ಮೂಡಿ ಬಂದಿದ್ದಾನೆ. ಹೂವಯ್ಯನಿಗೆ ಮೊದಲಿನಿಂದ ಕೊನೆಯವರೆಗೂ ಎದುರಾಗುವುದು ಪಟ್ಟಭದ್ರಹಿತಾಸಕ್ತಿಯ ಪುರೋಹಿತವರ್ಗದ ವೆಂಕಪ್ಪಯ್ಯ ಜೋಯಿಸರೇ, ಜೋಯಿಸರು ಹೂವಯ್ಯನ ಸೊಂಟದ ನೋವಿಗೆ ಮಂತ್ರಹಾಕಿಸಿ ಪೂಜೆಮಾಡಿಸಿದರೆ ಗುಣವಾಗುತ್ತದೆ ಎಂದು ಹೇಳುವಾಗ, ಹೂವಯ್ಯ "ನೀವು ತಿಳಿದುಕೊಂಡವರೆಂದು ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶ ಮಾಡಿ, ನಿಮ್ಮಿತ್ತ ಹೇಳುವುದು, ವಿಭೂತಿಕೊಡುವುದು, ಸತ್ಯನಾರಾಯಣ ವ್ರತ ಮಾಡಿಸುವುದು, ದೆವ್ವ, ಪಿಶಾಚಿಗಳಿಗೆ ಬಲಿಕೊಡುವುದು ಇದರಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀರಿ, ಟ್ರಂಕುತಗುಲಿ ಬೆನ್ನು ನೋವಾಗಿದ್ದರೆ. ಔಷಧಿ ಮಾಡಿ ಎಂದು ಹೇಳುವ ಬದಲು ಬೂದಿ ಕುಂಕುಮ ಹಚ್ಚಿ ಮಂತ್ರಹಾಕಿಸಿ ಎಂದು ಹೇಳುತ್ತಿದ್ದೀರಲ್ಲಾ! ಇದು ಯಾವ ತತ್ವಶಾಸ್ತ್ರದಲ್ಲಿ ಹೇಳಿದೆ". (ಕಾನೂರು ಹೆಗ್ಗಡತಿ, ಪುಟ. ೧೦೪.) ಎಂದು ಪ್ರಶ್ನಿಸುವಲ್ಲಿ ವೈಚಾರಿಕತೆಯಿದೆ, ಪರಂಪರೆ ಶಾಸ್ತ್ರ ಸಂಪ್ರದಾಯದ ಹೆಸರಿನಲ್ಲಿ ಅನಕ್ಷರಸ್ತ ಮುಗ್ಧಜನರನ್ನು ಶತ–ಶತಮಾನಗಳಿಂದಲೂ ಶೋಷಣೆ ಮಾಡುತ್ತಾ ಬಂದಿರುವ ಸ್ವಹಿತಾಸಕ್ತಿಯ ಜನರ ಹುನ್ನಾರದ ವಿರುದ್ಧ ಹೂವಯ್ಯನಿಗೆ ಕೋಪವಿದೆ ಜೋಯಿಸರ ಬಗ್ಗೆ ಅಲ್ಲ. "ಭೂತ, ದೆವ್ವ, ಪಿಶಾಚಿಗಳ ಕುರುಡು ನಂಬಿಕೆಯ ಆಚಾರಗಳಲ್ಲಿ ಕೊಳೆಯುತ್ತಿರುವ ಜನರನ್ನು ಮೇಲೆತ್ತಲು ನವಜಾಗೃತಿಯಿಂದ ಬೋಧಿತವಾದ ಮಹಾಪ್ರತಿಭಾವಂತ ಹೂವಯ್ಯ, ತನ್ನ ಬದುಕನ್ನು ಮೀಸಲಿಡುತ್ತಾನೆ, ಹೂವಯ್ಯ ಮೊಟ್ಟ ಮೊದಲ ಕ್ರಾಂತಿಯ ಹರಿಕಾರ" (ಭಗವಾನ್ ಎಸ್.ಕೆ. ಸ ಪುಟ. ೬೭.) ಇಲ್ಲಿ ಹೂವಯ್ಯ ಇಲ್ಲಿಯವರೆಗೂ ಯಾರು ಪ್ರಶ್ನಿಸದ

ಹಳ್ಳಿಗರ ಬದುಕಲ್ಲಿ ಮನೆಮಾಡಿದ್ದ, ಮೂಢನಂಬಿಕೆ, ಭೂತ, ದೆವ್ವ, ಪಿಶಾಚಿಗಳ ಭಯ ನಮ್ಮ ಭ್ರಮೆ ಎಂಬ ಅರಿವು ಮೂಡಿಸಿ ಅಲ್ಲಿಯ ಜನರಲ್ಲಿ ಹೊಸ ಜಾಗೃತಿ ಉಂಟುಮಾಡಲು ಸಿದ್ಧನಾಗುತ್ತಾನೆ, ನಿಸ್ವಾರ್ಥತೆಯಿಂದ ತನ್ನ ಸಮುದಾಯದ ಜನರ ಅರಿವಿಗೆ ತಿಳಿಯುವಂತೆ ವೈಚಾರಿಕ ಮನೋಭಾವ ಮೂಡಿಸಲು ಪ್ರಯತ್ನಿಸುತ್ತಾನೆ.

ಇಲ್ಲಿಯ ಹೂವಯ್ಯನಿಗೆ ಆಧುನಿಕ ವಿದ್ಯಾಭ್ಯಾಸ ಅದರಿಂದ ದೊರೆತ ವಿವೇಕ, ಜವಬ್ಧಾರಿ ಆತನ ಪರಿಶುದ್ಧ ಅಂತಃಕರಣ ಅವನ ಸಮಾಜೋದ್ಧಾರ ಕಾರ್ಯಕ್ಕೆ ಸಾಥಾಗಿನಿಲ್ಲುತ್ತದೆ. ಇಲ್ಲಿ ಹೂವಯ್ಯ ಜೀವಿತದ ಅನಿಶ್ಚಿತತೆ ಬಗ್ಗೆ ವಿವೇಕನಂದ, ಬುದ್ಧರ ವಿಚಾರಗಳಿಂದ ಪ್ರಭಾವಿತನಾಗಿದ್ದ. ಸಾವು-ನೋವು, ಕೌಟುಂಬಿಕ ಜೀವನಕ್ಕಿಂತ ಹೆಚ್ಚು ಮುಖ್ಯವಾದುದು. ಅದರಾಚೆಗಿನ ಮಾನವೀಯ ಸಂಬಂಧಗಳ ಸುಧಾರಣಾಪರ ಬದುಕು ಎಂಬ ವಿಚಾರ ಅವನದಾಗಿತ್ತು. "ಕಾದಂಬರಿಯ ಚೌಕಟ್ಟಿನಲ್ಲಿ ರೂಢ ಎನ್ನಬಹುದಾದ ನಂಬಿಕೆಗಳ ತಳಹದಿಯ ಮೇಲೆ ನಿಂತ ಸಮಾಜ, ಅದಕ್ಕಿಂತ ಉತ್ತಮ ಎನ್ನಿಸುವ ನಂಬಿಕೆಗಳ ಆಧಾರದ ಮೇಲೆ ಪುನರ್ ನಿರ್ಮಾಣವಾಗುವುದು ಈ ಪುನರ್ ನಿರ್ಮಾಣದಲ್ಲಿ ಹೂವಯ್ಯ ಮುಖ್ಯ ಪಾತ್ರ ವಹಿಸುತ್ತಾನೆ." (ಕೃಷ್ಣಮೂರ್ತಿ ಎಂ.ಜಿ. ೧೯೯೪, ಪುಟ. ೧೨೬.) ಪರಂಪರೆಯಿಂದಲೂ ದೇವರಿಗೆ ಪ್ರಾಣಿಬಲಿ ಕೊಡುವುದು ನಮ್ಮ ಸಂಪ್ರದಾಯವೆಂದು ನಂಬಿಕೊಂಡು ಬಂದವರು ಕಾನೂರಿನ ಮುಗ್ಧ ಜನರು. ದೇವರನ್ನು ತೃಪ್ತಿಪಡಿಸಲು ಪ್ರಾಣಿಬಲಿಕೊಡುವುದು ನಮ್ಮ ರೂಢಿ. ಸಂಪ್ರದಾಯ ಎಂದು ನಂಬಿದವರು. ಅಹಿಂಸಾವಾದಿಯಾದ ಹೂವಯ್ಯ, ಹಿಂಸೆಯನ್ನು ಮಾನವೀಯ ನೆಲೆಯಲ್ಲಿ ಗುರುತ್ತಿಸಲಾಗುತ್ತಾ, ತಮ್ಮ ತಪ್ಪು ತಿಳಿವಳಿಕೆಯಿಂದ ಒಂದು ಜೀವಿ ಮತ್ತೊಂದು ಜೀವಿಯನ್ನು ಹತ್ತೆಗೈಯುವುದು ಅಮಾನವೀಯವೆಂದು, ದೈವಗಳು ಹಿಂಸೆಯನ್ನು ಬಯಸುವುದಿಲ್ಲವೆಂದು, ಅದೆಲ್ಲ ನಮ್ಮ ಭ್ರಮೆ ಎಂದು ಹೇಳಿ ಬಲಿಗೆ ಸಿದ್ಧವಾಗಿದ್ದ ಹೋತವನ್ನು ತಾನು ತೆಗೆದುಕೊಂಡು ಬಂದು 'ಬಲೀಂದ್ರ' ಎಂದು ಹೆಸರಿಟ್ಟು ತಾನೇ ಸಾಕುತ್ತಾನೆ. ಹೂವಯ್ಯ ತನ್ನ ಈ ವರ್ತನೆ. ವಿಚಾರಗಳಿಂದ ಅವರ ಮನಸ್ಸು ತಾತ್ವಿಕತೆಯ ಕಡೆಗೆ ಹೊರಳುವಂತೆ ಮಾಡುತ್ತಾನೆ. "ಕಾನೂರು ಹೆಗ್ಗಡತಿ ನನಗನಿಸುವಂತೆ ಎರಡು ಮಟ್ಟಗಳಲ್ಲಿ ಕೆಲಸ ಮಾಡುತ್ತದೆ. ರೂಢಿಗತ ಬದುಕಿನ ವಸ್ತು ಚಿತ್ರವನ್ನು ಕೊಡುತ್ತಿರುವ ಸಮಯದಲ್ಲಿಯೇ ಬದಲಾಗುತ್ತಿರುವ ಮೌಲ್ಯಗಳ ಕಡೆಗೂ ತೋರುಬೆರಳಾಗುತ್ತದೆ" (ಪ್ರೊ.ಬೋರಲಿಂಗಯ್ಯ ಎನ್. ೨೦೧೦, ಪುಟ. ೨.) ಹೂವಯ್ಯನ ತಿಳುವಳಿಕೆ ಸುಧಾರಣಾಪರ ನೀತಿಯಿಂದ ನೂರಾರುವರ್ಷಗಳಿಂದ ಬಂದ ಆಚರಣೆ ಸಂಪ್ರದಾಯದ ನಂಬಿಕೆಗಳ ಅವೈಚಾರಿಕತೆಯಲ್ಲಿ ನಲುಗಿ ಹೋಗಿದ್ದ ಅಲ್ಲಿಯ ಜನತೆ, ಹೂವಯ್ಯನ ಸುಧಾರಿತ ವಿಚಾರಗಳಿಗೆ, ಬದುಕಿಗೆ ಒಗ್ಗಿಕೊಂಡು ಬದಲಾಗುತ್ತಿದ್ದಾರೆ ಕತ್ತಲೆಯಿಂದ ಹೊರಬರಲು ಹವಣಿಸುತ್ತಿದ್ದಾರೆ. ಅವ ದೃಷ್ಟಿಯಲ್ಲಿ ಹೂವಯ್ಯ ಈಗ ದೇವರಂತೆ ಕಂಡುಬರುತ್ತಿದ್ದಾನೆ ಎನ್ನುವ ಮಾತು ಅಲ್ಲಿಯ ಜನತೆಯ ಮನಸ್ಸು, ಆಲೋಚನೆ, ಬದುಕು ಬದಲಾಗುತ್ತಿರುವುದರ ಸಂಕೇತ.

ಹೂವಯ್ಯ ಮತ್ತು ರಾಮಯ್ಯ ತಮ್ಮ ಮನೆಯ ಕೆಲಸದವರಾದ ಬೈರ, ಸಿದ್ದರಿಂದ ನೇಗಿಲು ಹೂಡಿದ ಎತ್ತುಗಳನ್ನು ಪಡೆದು ತಾವು ಹೊಲ ಉಳಲುಹೋಗಿ ಹೂವಯ್ಯ ನೊಗ ಮುರಿಯುತ್ತಾನೆ. ರಾಮಯ್ಯ ಎತ್ತುಗಳಿಗೆ ಗಾಯಮಾಡುತ್ತಾನೆ. ಇವರು ಮಾಡಿದತಪ್ಪಿಗೆ

ಚಂದ್ರಯ್ಯಗೌಡರಿಂದ ಶಿಕ್ಷೆಯಾಗಿದ್ದು ಬೈರ, ಸಿದ್ದರಿಗೆ. ಅಂದಿನ ದಿನದ ಪಡಿಯನ್ನು ಕೊಡದಂತೆ ಶೇರಿಗಾರನಿಗೆ ಚಂದ್ರಯ್ಯಗೌಡ ಹೇಳಿಹೋಗಿರುತ್ತಾನೆ. ಅಂದುಸಂಜೆ ಶೇರಿಗಾರ ಅವರಿಗೆ ಪಡಿಕೊಡಲು ನಿರಾಕರಿಸಿದಾಗ, ಹೂವಯ್ಯ ತಮ್ಮ ತಪ್ಪಿಗೆ ಅವರಿಗೆ ಯಾಕೆ ಶಿಕ್ಷೆ ಎಂದು ಪಡಿಕೊಡಿಸುತ್ತಾನೆ. ಅದನ್ನು ಒಯ್ಯುವ ಸಮಯದಲ್ಲಿ ಬರುವ ಚಂದ್ರಯ್ಯಗೌಡರು ಆಳುಗಳಿಗೆ ಗದರಿಸಿ ಹೊಡೆಯಲು ಹೋದಾಗ ಬೈರ ಪಡಿಯನ್ನು ಅಲ್ಲಿಯೇ ಬಿಟ್ಟು ಓಡಿಹೋಗುತ್ತಾನೆ. ಇದನ್ನೆಲ್ಲಾ ದೂರದಿಂದ ನೋಡುತ್ತಿದ್ದ ಹೂವಯ್ಯ ತಮ್ಮ ತಪ್ಪಿಗೆ, ನಿರಪರಾದಿಗಳಿಗೆ ನೋವುಂಟುಮಾಡುವುದೆ ಎಂದು ನೊಂದಿಕೊಂಡು, ಚಿಕ್ಕಪ್ಪನನ್ನು ತಡೆದು ಬೈರನಿಗೆ ನೆರವಾಗಲು ಹೊರಡಲು, ರಾಮಯ್ಯ ಅವನನ್ನು ತಡೆದು ಕುಡಿದ ಮತ್ತಿನಲ್ಲಿರುವ ತಂದೆಯ ಜೊತೆ ಮಾತು ಸರಿಯಲ್ಲವೆಂದು ತಡೆಯುತ್ತಾನೆ, ಆದರೆ ಹೂವಯ್ಯ ನಮ್ಮ ತಪ್ಪಿಗೆ ಅವರಿಗ್ಯಾಕೆ ಶಿಕ್ಷೆ ಎಂದು ಹೇಳಿ ಆ ಪಡಿಯ ಗಂಟನ್ನು ತಾನೇ ಬೈರನ ಗುಡಿಸಲಿಗೆ ಹೋಗಿ ಕೊಡುತ್ತಾನೆ.

ಬೈರನ ಮಗ ಗಂಗ ಮಂತ್ರಿಸಿದ ತೆಂಗಿನಕಾಯಿಯನ್ನು ಮುಟ್ಟಿ ಅದರಿಂದ ಹೆದರಿಕೊಂಡು ಜ್ವರದಿಂದ ನರಳುತ್ತಿರುವಾಗ ಹೂವಯ್ಯ ಬೈರನ ಗುಡಿಸಲಿಗೆ ತಾನೇ ಹೋಗಿ ಹುಡುಗನಿಗೆ ಧೈರ್ಯ ಹೇಳೀ ಅದೆಲ್ಲ ನಂಬಿಕೆ ಅಷ್ಟೆ ಅದರಿಂದ ಯಾವ ತೊಂದರೆಯೂ ಇಲ್ಲವೆಂದು ಧೈರ್ಯ ನೀಡಿ. ಔಷಧಿಕೊಟ್ಟು ಉಪಚಾರ ಮಾಡುತ್ತಾನೆ. ಬೈರನ ಹೆಂಡತಿ ಸೇಸಿ ಹಡೆದಾಗ ಬೈರ ಹೇಳುವುದು. "ಮನ್ನೆ ಅದು (ಬೈರನ ಹೆಂಡತಿ) ಹಡೆದಾಗ ಹೂವಯ್ಯ ಗೌಡರು ಎಷ್ಟು ಉಪಚಾರ ಮಾಡಿದ್ರು ಅಂದ್ರೆ! ಅಕ್ಕಿ, ಬೆಲ್ಲ, ತುಪ್ಪ, ಕಾಫಿ, ಹಾಲು, ಔಸ್ತಿ ಕೊಟ್ರು, ಏನು ನಮ್ಮ ಬಿಡಾರ ಮನೆಯಾಗಿ ಹೋಗಿತ್ತು ನಂಗಂತ್ತು ನನ್ಹೆಡ್ತಿ ದಿನಾ ಹಡೀತಾನೇ ಇದ್ದಿದ್ರೆ ಅನ್ನಿಸಿತ್ತು" (ಕಾನೂರು ಹೆಗ್ಗಡತಿ, ಪುಟ. ೫೮೨) ಈ ಎಲ್ಲ ಸಂದರ್ಭಗಳಲ್ಲಿ ಹೂವಯ್ಯ ಮೇಲು-ಕೀಳು ಎಂಬ ಭೇದವೆಣಿಸದೆ, ಮನುಷ್ಯ ಸಹಜ ಮಾನವೀಯತೆ ಮೆರೆಯುವುದು ಕಂಡುಬರುತ್ತದೆ. ಸುಶಿಕ್ಷಿತನಾದ ಈತ ಸ್ಪರ್ಶ, ಅಸ್ಪೃಶ್ಯ ಎಂಬ ಭಾವನೆ ತೊರೆದು ಮಾನವೀಯ ಅಂತಃಕರಣದಿಂದ ಅವರನ್ನೆಲ್ಲಾ ನೋಡುತ್ತಾನೆ. ತನ್ನ ಮನೆಯ ಕೆಲಸದವರನ್ನು ಕೆಲಸದವರೆಂದು ಕೀಳಾಗಿ ಕಾಣದೆ ತನ್ನ ಮನೆಯ ಸದಸ್ಯರಂತೆ ಆತ್ಮೀಯವಾಗಿ ನೋಡಿಕೊಳ್ಳುತ್ತಾನೆ. ಸೇಸಿ ಹಡೆದಾಗ ಅದಕ್ಕೆ ಒದಗಿಸುವ ಸೌಲಭ್ಯ, ಹುಡುಗ ಗಂಗನಿಗೆ ಹೇಳುವ ನೈತಿಕ ಧೈರ್ಯ ಇಲ್ಲೆಲ್ಲಾ ಹೂವಯ್ಯ ಸಜ್ಜನನಂತೆ ಕಂಡುಬರುತ್ತಾನೆ. ಓದಿನ ವೈಚಾರಿಕತೆಯ ಫಲವೆಂಬಂತೆ ಸರಿ-ತಪ್ಪುಗಳು, ಮಾನವೀಯತೆಯನ್ನು ಅರಿತ ಹೂವಯ್ಯ ಅಲ್ಲಿಯ ಜನರಿಗೆ ತಮ್ಮನ್ನು ಉದ್ಧಾರ ಮಾಡಲು ಬಂದ ದೇವಮಾನವನಂತೆ ಕಂಡಿರುತ್ತಾನೆ. ಅಲ್ಲದೆ ಹೂವಯ್ಯ, ಹಳ್ಳಿಗರ, ಮೌಢ್ಯತೆಯನ್ನು ಬಂಡವಾಳವನ್ನಾಗಿ ಮಾಡಿಕೊಂಡಿದ್ದ ವೆಂಕಪ್ಪಜೋಯಿಸರನ್ನು, ಅವರ ವ್ಯವಸ್ಥೆಯ ಉಪಟಳವನ್ನು ವಿರೋಧಿಸಿದ್ದರಿಂದ ವೆಂಕಪ್ಪ ಜೋಯಿಸರಿಗೆ ಹೂವಯ್ಯನನ್ನು ಕಂಡರೆ ಜಿಗುಪ್ಸೆ ಅವನು ತಮ್ಮ ವ್ಯಾಪಾರಕ್ಕೆ ಮೂಲದಂತ್ತಿದ್ದ ಹಳ್ಳಿಗರ ಮೌಢ್ಯವನ್ನು ನಿವಾರಿಸಲು ಮಾಡುತ್ತಿದ್ದ ಪ್ರಯತ್ನ ಜೋಯಿಸರ ಭಾವಕ್ಕೆ ಸಹಿಸದಾಗಿತ್ತು. ಹೂವಯ್ಯ ಇಲ್ಲಿ ವೆಂಕಪ್ಪಜೋಯಿಸರನ್ನು ವೈಯಕ್ತಿಕವಾಗಿ ದ್ವೇಷಿಸುವುದಿಲ್ಲ ಆದರೆ ಅವರ ತತ್ವಗಳನ್ನು ವಿರೋಧಿಸುತ್ತಾನೆ. ಅದರಂತೆ ತನ್ನ ಚಿಕ್ಕಪ್ಪನನ್ನು ಕುರಿತು ಅವರ ಅಮಾನವೀಯ ವರ್ತನೆ, ದಬ್ಬಾಳಿಕೆಯನ್ನು ನಯವಾಗಿಯೇ ತಿರಸ್ಕರಿಸುತ್ತಾನೆ.

ಆಸ್ತಿ ವಿಭಜನೆಯ ಸಂದರ್ಭದಲ್ಲಿ ತನ್ನ ಚಿಕ್ಕಪ್ಪ ಮಾಡುವ ಮೋಸದ ಬಗ್ಗೆ ಅರಿವಿದ್ದರೂ ಅದನ್ನು ಪ್ರತಿಭಟಿಸದೆ ಅಸ್ಥಿರತೆಯ ಬದುಕಿನಲ್ಲಿ ಯಾವುದು ಶಾಶ್ವತ ಸುಖಕೊಡಲಾರದು ಎಂದು ಅರಿತವನಾದ ಹೂವಯ್ಯ ಆ ಸತ್ಯವನ್ನು ತನ್ನ ತಾಯಿಗೂ ಹೇಳಿ ಅವಳಿಗೂ ಸಮಾಧಾನ ಪಡಿಸುತ್ತಾನೆ. ಹೂವಯ್ಯ ಹೋತವನ್ನು ಭೂತಕ್ಕೆ ಬಲಿಯಾಗುವುದನ್ನು ತಪ್ಪಿಸಿ ತಾನೇ ಸಾಕಿಕೊಂಡಾಗ, ಚಂದ್ರಯ್ಯಗೌಡರು ಸೋಮನನ್ನು ಆ ಹೋತಹಿಡಿದು ತರಲು ಕಳುಹಿಸುತ್ತಾನೆ. ಆಗ ಗೊಬ್ಬರದ ಗುಂಡಿಯಲ್ಲಿ ಸೋಮಬಿದ್ದು ಸಾಯುವ ಸ್ಥಿತಿಯಲ್ಲಿ ಇರುವಾಗ, ಹೂವಯ್ಯ ಅವನನ್ನು ರಕ್ಷಿಸುತ್ತಾನೆ. ಹೂವಯ್ಯ ತನ್ನ ಹೋತವನ್ನು ಕದ್ದೊಯ್ಯಲು ಬಂದ ಸೋಮನಿಗೆ ಗೊಬ್ಬರದ ಗುಂಡಿಯಿಂದ ಮೇಲೆತ್ತಿ ಪ್ರಾಣದಾನ ಮಾಡುತ್ತಾನೆ.

ಹೂವಯ್ಯ ಜೀತದಾಳುಗಳ ಸಮಸ್ಯೆಗೆ ಸ್ಪಂದಿಸುವಷ್ಟು ಓಬಯ್ಯ, ಅಣ್ಣಯ್ಯಗೌಡರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ. ಆಸ್ತಿಯನ್ನು ಪಾಲುಮಾಡಿಕೊಳ್ಳುವಾಗ "ಪಾತ್ರೆ ಪಗಡಿಗಳನ್ನು ಹಂಚಿಕೊಳ್ಳುವಾಗ ಜಿಗುಪ್ಸೆಪಡುತ್ತಾನೆ. ಹೊರತು, ಜೀತದಾಳುಗಳನ್ನು ಹಂಚಿಕೊಳ್ಳುವಾಗ ಮೌನಿಯಾಗಿರುತ್ತಾನೆ" (ವಿವರಗಳಿಗೆ ನೋಡಿ ಅಶೋಕ ಟಿ.ಪಿ. ೧೯೯೧, ಪುಟ. ೪೬.) ಎಂಬ ಟಿ.ಪಿ ಅಶೋಕ ಅವರ ಮಾತನ್ನು ಇಲ್ಲಿ ಗಮನಿಸಿದಾಗ, ಸಮಾಜದ ಜಡತ್ವದಿಂದ ಜನತೆಯನ್ನು ಮೇಲೆತ್ತಲು ಪ್ರಯತ್ನಿಸುವ ಹೂವಯ್ಯ, ಪ್ರಾಣಿಬಲಿಯಂತಹ ಕೆಟ್ಟ ಆಚರಣೆಯನ್ನು ತಪ್ಪಿಸುವ ಆತ ತನ್ನ ಚಿಕ್ಕಪ್ಪನ ಕೋಪ ದರ್ಪಿಷ್ಟ ವರ್ತನೆಗೆ ಆತನ ಅಸಹ್ಯಕರವಾದ ಮಾತುಗಳಿಗೆ ಬೇಸತ್ತು. ಆಸ್ತಿಯ ಪಾಲಿಗೆ ಸಿದ್ಧನಾಗುವುದರಿಂದ ಈತನಿಗೆ ಇವೆಲ್ಲ ಮೊದಲ ಅನುಭವ ಹಾಗಾಗಿ ಆತ ನೇರವಾಗಿ ಚಿಕ್ಕಪ್ಪನ ಈ ಕೃತ್ಯವನ್ನು ಪ್ರಶ್ನಿಸಲು ಸಾಧ್ಯವಾಗುತ್ತಿಲ್ಲ. ಟಿ.ಪಿ. ಅಶೋಕ ಅವರು ಮುಂದುವರೆದು ಹೇಳುವಂತೆ ಹೂವಯ್ಯ 'ಭೈರ, ಸೋಮರಿಗೆ ಸಹಾಯ ಮಾಡಿದ್ದು ಆತನ ಉದಾರವೃತ್ತಿಗೆ ಸಂಕೇತವಾಗಿದೆ ಹೊರತು ಆದರ್ಶಕ್ಕಲ್ಲ' ಎಂದು ಅವರೇ ಹೇಳುತ್ತಾರೆ.

ಇಲ್ಲಿಯ ಹೂವಯ್ಯ ಬಹುಮುಖಿ ಆದರ್ಶ ವ್ಯಕ್ತಿತ್ವ ಹೊಂದಿದವ ಅವನ ವರ್ತನೆ ಮಾತುಗಾರಿಕೆ, ನಡೆತೆ, ಎಂತಹವರನ್ನು ತನ್ನೆಡೆಗೆ ಸೆಳೆದುಕೊಳ್ಳುವಂತಹದ್ದು. ಒರಟಾದ ಚಂದ್ರಯ್ಯಗೌಡರ ಮೂರನೆಯ ಹೆಂಡತಿ ಸುಬ್ಬಮ್ಮ ತಮ್ಮ ಒರಟು, ಮೊಂಡುತನ ಬಿಟ್ಟು ಸುಸಂಸ್ಕೃತ ಗೃಹಿಣಿಯಾಗಿ ಪರಿವರ್ತನೆಯಾಗುವುದು ಹೂವಯ್ಯನ ಪ್ರಭಾವದಿಂದ. ಇಲ್ಲಿಯ ಹೂವಯ್ಯ ಮನುಷ್ಯ ಸಹಜವಾದ ಭಾವನೆಗಳಿಂದ, ಆಸೆಯಿಂದ ಹೊರತಾಗಿಲ್ಲ. ಆದರೆ ಅದರ ಸರಿತಪ್ಪುಗಳ ನಿರ್ಣಯ ಆತನಿಗೆ ತಿಳಿದಿರುವುದರಿಂದ ಬಹುಬೇಗ ತಪ್ಪಿನಿಂದ ಹೊರಬರುತ್ತಾನೆ. ಸುಬ್ಬಮ್ಮ ತಾನು ಕಾನೂರಿನಿಂದ ತಂದ ಒಡವೆಯನ್ನು ಕಾಪಾಡುವಂತೆ ಹೂವಯ್ಯನಿಗೆ ಕೊಡಲು ಬಂದಾಗ ಒಂದು ಕ್ಷಣ ಅವಳನ್ನು ಕಂಡು ಅಶ್ಲೀಲಭಾವನೆ ಮೂಡಿದಾಗ 'ಇಸ್ಸಿ ಏನು ಮನಸ್ಸು' ಎಂದು ತಾನೇ ನಾಚಿಕೊಂಡು ತಪ್ಪಿನಿಂದ ಹೊರಬರುತ್ತಾನೆ. ಪುಟ್ಟನ ಕೊಲೆಯ ಸುದ್ದಿ ಕೇಳಿದಾಗ ಗಂಗೆಯನ್ನು ಹೊಡೆಯುತ್ತಾನೆ. ಈ ಪ್ರಸಂಗಗಳಿಂದ ಪಶ್ಚಾತ್ತಾಪಗೊಂಡು ತನ್ನ ತಪ್ಪಿನ ಪ್ರಾಯಶ್ಚಿತ ಮಾರ್ಗವೆಂಬಂತೆ ಆಧ್ಯಾತ್ಮಕ್ಕೆ ಮೊರೆಹೋಗುತ್ತಾ ಉದಾತ್ತ ಜೀವನ ರೂಪಿಸಿಕೊಳ್ಳುವತ್ತ ಮುಖ ಮಾಡುತ್ತಾನೆ.

ಇಲ್ಲಿ ಹೂವಯ್ಯ ಕಾಯಕದಲ್ಲಿ ನಿಷ್ಠೆ ಉಳ್ಳವನೂ ಹೌದು ಗ್ರಂಥಗಳ ಅಧ್ಯಯನ, ಧ್ಯಾನ ಮತ್ತು ತಪಸ್ಸುಗಳ ಜೊತೆ–ಜೊತೆ ತನ್ನ ಒಡೆತನಕ್ಕೆ ಬಂದ ಗದ್ದೆ–ತೋಟಗಳಲ್ಲಿ ಅಷ್ಟೇ ಜತನದಿಂದ, ಬದುಕಿನ ಪ್ರೀತಿಯಿಂದ ದುಡಿಮೆ ಮಾಡುತ್ತಾನೆ. ಅವನ ಕಾರ್ಯದ ಬಗ್ಗೆ ಆತನಿಗೆ ಖುಷಿ, ಆಶ್ಚರ್ಯವಿದೆ. "ಅಲ್ಲದೆ ಗದ್ದೆಯ ಕೆಲಸ ಮಾಡಿಸುವಾಗಲೂ ಕತೆ ಹೇಳುವುದು, ಪದ್ಯ ಹಾಡುವುದು ವಿನೋದ ಮಾಡುವುದು ಮೊದಲಾದವುಗಳಿಂದ ತನ್ನೊಡನೆ ಕೆಲಸ ಮಾಡುವವರೆಲ್ಲರನ್ನು ಉತ್ಸಾಹಗೊಳಿಸುತ್ತಿದ್ದನು. ಉಳುವುದು, ಬಿತ್ತುವುದು ಇಂತಹ ಪ್ರಯೋಜನದ ಕಾರ್ಯಗಳಲ್ಲಿ ಬಲು ಸೋಮಾರಿಯೆಂದು ಹೆಸರುಗೊಂಡಿದ್ದ ಪುಟ್ಟಣನಂತೂ ಕಂಡವರೆಲ್ಲ ಬೆರಗಾಗುವಂತೆ ಹೂವಯ್ಯನೊಡನೆ ಕೆಲಸ ಮಾಡುತ್ತಿದ್ದನು" (ಕಾನೂರು ಹೆಗ್ಗಡತಿ, ಪುಟ. ೩೫೩.) ಬದುಕಿನ, ಕಾಯಕದ ಸ್ಫೂರ್ತಿಯಾದ ಹೂವಯ್ಯ ತಾನು ಮಾತಿನಲ್ಲಿ ಹೇಳುವುದಕ್ಕಿಂತ ಕಾರ್ಯರೂಪದಲ್ಲಿ ಮಾಡಿತೋರುವ ಮೂಲಕ ಎಲ್ಲರಿಗೂ ಮಾದರಿಯಾದವ, ಬಾಡುಗಳ್ಳ ಸೋಮು, ಸೇರೆಗಾರ ಸೋಮಯ್ಯ ಸೆಟ್ಟರಾಗಿದ್ದು ಈ ಕಾರಣದಿಂದಲೇ.

ತನ್ನ ಕಾರ್ಯದ ಬಿಡುವಿನ ವೇಳೆಯಲ್ಲಿ ಹೂವಯ್ಯ ತನ್ನ ಆತ್ಮೀಯರಿಗ ಬುದ್ಧ ಕ್ರೈಸ್ತರಂಥವರ ಉದಾತ ಜೀವನ ಚರಿತ್ರೆಯನ್ನು, ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳನ್ನು ಅವರಿಗೆ ಅರ್ಥವಾಗುವಂತೆ ಸರಳೀಕರಿಸಿ ಹೇಳುತ್ತಿದ್ದರಿಂದ ಅದರ ಪ್ರಚುರತೆ ವ್ಯಾಪಕವಾಗಿ ವಿಸ್ತರಿಸಿಕೊಂಡು ಅದನ್ನು ಕೇಳಲು ಕಾನೂರುನಿಂದ. ಸುತ್ತ–ಮುತ್ತಲಿನ ಹಳ್ಳಿಗಳಿಂದ ಜನರು ಬರತೊಡಗಿದರು. ಚಂದ್ರಯ್ಯಗೌಡರು ಹೂವಯ್ಯನ ಬಳಿಯಾರು ಹೋಗದಂತೆ ತಡೆವಡ್ಡಿದ್ದರೂ, ಸೇರೆಗಾರ ಕಡೆಯ ಕನ್ನಡ ಜಿಲ್ಲೆಯಾಳುಗಳು ಬೇಲರಲ್ಲಿ ಕೆಲವರು ಆಗಾಗ್ಗೆ ಒಡೆಯರಿಗೆ ತಿಳೀಯದಂತೆ ಗುಟ್ಟಾಗಿ ಬಂದು ಹೂವಯ್ಯನಿಂದ ಈ ಮೇಲಿನ ವಿಷಯಗಳನ್ನು ತಿಳಿದುಕೊಂಡು ಖುಷಿಪಡುತ್ತಿದ್ದರು. ಅದೇ ಸಮಯದಲ್ಲಿ ಹೂವಯ್ಯ ಸಮಾಜದ ಅಭಿವೃದ್ಧಿಗೆ ಪೂರಕವಾದ ಸಂಗತಿಗಳನ್ನು ಅವರಿಗೆ ಅರ್ಥವಾಗುವಂತೆ ಹಾಸ್ಯ, ವಿನೋದಗಳನ್ನು ಸೇರಿಸಿ ಅವರಿಗೆ ಅರಿವನ್ನು ಉಂಟುಮಾಡುತ್ತಿದ್ದ ಹೂವಯ್ಯನ ಈ ಪ್ರಯತ್ನದಿಂದಾಗಿ ಬೇಲರ ಸೇರೆಗಾರ ಸೋಮಯ್ಯಸೆಟ್ಟರೂ, ಗಟ್ಟದವರೂ ಕುರಿಮಂದೆಯಂತೆ. ಬಿಡಾರಗಳನ್ನು ಕಟ್ಟಿಕೊಂಡು ವಾಸ ಮಾಡುವುದನ್ನು ಬಿಟ್ಟು ವ್ಯವಸ್ಥಿತವಾದ ಸಣ್ಣ–ಸಣ್ಣ ಮನೆಗಳನ್ನು ನಿರ್ಮಿಸಿಕೊಂಡು ಬದುಕಲಾರಂಭಿಸಿದರು. ಹೂವಯ್ಯನ ವೈಚಾರಿಕತೆಯಿಂದಾಗಿ ಕಾಯಿಲೆ ಬಂದರೆ ಜೋಯಿಸರ ತಾಯತ, ಮಂತ್ರಕ್ಕೆ ಮೊರೆಹೋಗದೆ ಆಸ್ಪತ್ರೆಗೆ ಹೋಗಲಾರಂಭಿಸಿದರು. ಕಾನೂರು–ಮತ್ತಹಳ್ಳಿಗೆ ಮಧ್ಯೆ ರಸ್ತೆಗೆ ಸಮೀಪವಾಗಿ ಕಾಡಿನ ನಡುವೆ ಇದ್ದ ಕಳ್ಳಂಗಡಿ ಕುಸಿದು ಬಿದ್ದು ಒರಲೆ ಹಿಡಿದು ಪಾಳಾಗಿತ್ತು. ನಾಲ್ಕಾರು ಗ್ರಾಮಗಳಿಗೆ ಅನುಕೂಲವಾಗುವಂತ ಅಲ್ಲಿ ಒಂದು ಆಸ್ಪತ್ರೆ, ಸ್ಕೂಲು, ಪೋಸ್ಟಾಫೀಸು, ಅಂಗಡಿಗಳು ಪ್ರಾರಂಭವಾದವು. ಹೂವಯ್ಯನ ವಿಚಾರಗಳಿಂದ ಪ್ರಭಾವಿತಳಾಗಿದ್ದ ಸೀತೆ ನಿಂಗನ ಮಗ ಪುಟ್ಟ ಅಕ್ಷರಸ್ಥನಾಗಲು ಕಾರಣವಾಗುತ್ತಾಳೆ.

ವಿವಾಹವನ್ನು ಪವಿತ್ರ ಬಂಧನವೆಂದು ಅದು ಈ ನಾಡಿನ ಕೌಟುಂಬಿಕ ಬದುಕಿನ ಭದ್ರತೆಯ ಮೂಲವೆಂದು ಗ್ರಹಿಸಿ ದಾಂಪತ್ಯ ಚೌಕಟ್ಟಿನೊಳಗೆ ಆದರ್ಶ ಪ್ರೇಮದ ಪ್ರತಿಪಾದನೆಗೆ ತೊಡಗುವುದು ನವೋದಯ ಕಾಲಘಟ್ಟದ ಪ್ರಮುಖ ಲಕ್ಷಣಗಳಲ್ಲೊಂದು ಕಾದಂಬರಿಯಲ್ಲಿ ಹೂವಯ್ಯನ ವ್ಯಕ್ತಿತ್ವದಿಂದ ಆಕರ್ಷಿತಳಾದ ಸೀತೆ ಆದರ್ಶೀಕೃತಳಾಗಿ ಕಂಡುಬರುತ್ತಾಳೆ. ತನ್ನ ಸಮಾಜದ

ಸುತ್ತಲಿರುವ ಮೌಢ್ಯತೆ ಕಂದಾಚಾರ ಸಂಪ್ರದಾಯಗಳಿಂದ ಆಕೆ ಹೊರಬರಲಾರದ ಸ್ಥಿತಿಯಲ್ಲಿ ಇದ್ದರೂ ಹೂವಯ್ಯನ ವಿಚಾರ ಸಂಪರ್ಕದಿಂದ ತನ್ನ ವಿಚಾರ, ಸ್ವಭಾವ ಯೋಚನೆಗಳಲ್ಲಿ ವಿಕಾಸ ಹೊಂದುತ್ತಾಳೆ.

"ರಾಮಯ್ಯ ಸತ್ತ ಮೇಲಾದರೂ ಹೂವಯ್ಯ ಸೀತೆಯನ್ನು ಮದುವೆಯಾಗಬಹುದಿತ್ತೆಂಬ ಪ್ರಶ್ನೆಯೂ ಏಳುತ್ತದೆ. ವಿವಾಹ ಸುಲಭವಾಗಿಲ್ಲ ಎಂಬುದನ್ನು ಒಪ್ಪಬಹುದಾದರೂ ತನ್ನ ಸಹಜವಾದ ಭಾವನೆಗಳಿಗೆ ಅನುಗುಣವಾಗಿ ನಡೆದುಕೊಳ್ಳುವ ದಿಟ್ಟತನವನ್ನು ಹೂವಯ್ಯ ತೋರಿಸಿದಂತಾಗುತ್ತಿತ್ತು. ಆ ಇಬ್ಬರು ಪರಸ್ಪರ ಪ್ರೇಮಿಗಳಾಗಿ ಮದುವೆಯ ಕನಸನ್ನು ಕಾಣುತ್ತಿದ್ದವರು. ಸೀತೆಬಲವಂತಾಕ್ಕಾಗಿ ಇನ್ನೊಬ್ಬನ ತಾಳಿಗೆ ಕೊರಳೊಡ್ಡಿದ್ದಳು. ಆತನೇ ತಾಳಿಯನ್ನು ಕಟ್ಟಲಿಲ್ಲ ಎಂಬುದೂ ಗಮನಾರ್ಹ ಅದೆಲ್ಲಾ ಕಳೆದು ಹೋದ ಕೆಟ್ಟ ಕನಸಿನಂತಾಗಿದೆ ಈ ಇಬ್ಬರಿಗೆ ಮಾರ್ಗ ಸುಗಮವಾದಾಗಲೂ ಅಲೌಕಿಕ ಅತೃಪ್ತಿಯನ್ನು ಹೊತ್ತು ಕೊಂಡೇ ಕೊನೆಯವರೆಗೂ ಜೊತೆ ಜೊತೆಯಲ್ಲಿ ಬಾಳಿದರೂ ಎನ್ನುವುದು ಥಟ್ಟನೆ ಅವರಿಬ್ಬರನ್ನು ದೇವ ಮಾನವರನ್ನಾಗಿಸಿವೆ. ಅಸಹಜತೆಗೆ ಗುರಿಯಾಗುತ್ತದೆ ಎನಿಸುತ್ತದೆ ಎಂಬ ಅಭಿಪ್ರಾಯವಿದೆ" (ತಿಪ್ಪೇರುದ್ರಸ್ವಾಮಿ ಹೆಚ್. ಪುಟ. ೧೫೦.) ಆದರೆ ಹೂವಯ್ಯ ಆದರ್ಶ ಉದಾತ್ತ ವ್ಯಕ್ತಿಗಳ ವಿಚಾರದಿಂದ ಪ್ರಭಾವಿತನಾಗಿ, ಧ್ಯಾನ, ಅಧ್ಯಯನಗಳಿಂದ ಸಾಕಷ್ಟು ಪರಿವರ್ತನೆಯ ಮಾರ್ಗ ಕಂಡುಕೊಡವ ಲೌಕಿಕ ಜಗತ್ತಿನ ಅನಿಶ್ಚಿತತೆಯ ಅರಿವು ಆತನಿಗಿದೆ ಇಂತಹ ವಿಚಾರಗಳ ಪ್ರಭಾವವು ಸೀತೆಗೆ ಹೂವಯ್ಯನ ವಿಚಾರದ ಆಲಿಸುವಿಕೆಯಿಂದ ಬಂದಿರುವುದರಿಂದ ಅಲ್ಲದೇ ಈಗಾಗಲೇ ಅವರು ಮದುವೆಯ ವಿಚಾರದಲ್ಲಿ ಸಾಕಷ್ಟು ನೊಂದಿರುವುದರಿಂದ ಈಗ ಅವರಿಗೆ ಅದು ನಿಮಿತ್ತ ಎಂದು ಅನಿಸಿರುವುದರಿಂದ ಅವರಿಬ್ಬರು ಮದುವೆಯಾಗದೆ ಇರುವುದರಲ್ಲಿ ಸಹಜತೆಯಿದೆ.

ಕೊನೆಯಲ್ಲಿ ಈತನ ವ್ಯಕ್ತಿತ್ವವನ್ನು ಅರಿತವರಂತೆ ಕಂಡುಬರುವುದು ಚಂದ್ರಯ್ಯಗೌಡರು. ಇವರು ಹೂವಯ್ಯನನ್ನು ಹಲವು ರೀತಿಯಲ್ಲಿ ಹಿಂಸಿಸಿದ್ದರೂ ಅನಾರೋಗ್ಯದಿಂದ ಹಾಸಿಗೆ ಹಿಡಿದ ಸಮಯದಲ್ಲಿ ತಮ್ಮನ್ನು ನೋಡಿ ಮಾತನಾಡಿಸಲು ಬಂದ ಹೂವಯ್ಯನನ್ನು ಕಂಡು ಮಲಗಿದ್ದವರು ಎದ್ದು ಕೈಯತ್ತಿ ಮುಗಿಯುತ್ತಾರೆ. ಶಕ್ತಿ ಸಾಮರ್ಥ್ಯ ಇರುವವರೆಗೂ ದರ್ಪ ದಾರ್ಷ್ಟ್ಯದಿಂದ ವರ್ತಿಸುವ ವ್ಯಕ್ತಿ ತನ್ನ ಬದುಕಿನ ಕೊನೆಯಲ್ಲಿ ತಪ್ಪಿನ ಅರಿವು ಮೂಡಿಸಿಕೊಳ್ಳುವಂತೆ ಇಲ್ಲಿಯ ಚಂದ್ರಯ್ಯಗೌಡರು ಹೂವಯ್ಯನ ವ್ಯಕ್ತಿತ್ವವನ್ನು ಮೆಚ್ಚಿಕೊಳ್ಳುತ್ತಾರೆ.

ಈ ಕಾದಂಬರಿಯಲ್ಲಿ ಲೇಖಕರು ಹೂವಯ್ಯನನ್ನು ಆತನೊಬ್ಬ ಅತಿಮಾನುಷ ವ್ಯಕ್ತಿಯೆಂದು ಚಿತ್ರಿಸಿಲ್ಲ ಅವನ ವಿದ್ಯೆ, ಅವನು ರೂಢಿಸಿಕೊಂಡ ನಾಗರೀಕತೆ ಮೃದುತ್ವ, ಸಹನೆ, ಸಮಾನತೆ, ಮಾನವೀಯತೆ, ವೈಚಾರಿಕತೆ, ಬರಿಯ ಮಾತಿನಲ್ಲಿ ಹೇಳದೆ ಉಚಿತವಾದ ಕಾರ್ಯವನ್ನು ಕಾರ್ಯರೂಪದಲ್ಲಿ ಮಾಡಿತೋರುವ ಕ್ರಿಯಾಶೀಲತೆ ಹಳ್ಳಿಯ ಮುಗ್ಧರ ಮನಸ್ಸನ್ನು ಅರಿತು ಅವರ ಅನಕ್ಷರಸ್ಥ ಅಂಧ ಸಂಪ್ರದಾಯದ ಕೊಳೆತ ಮೆದುಳನ್ನು ಹೊಸ ವಿಚಾರಗಳೆಡೆಗೆ ಕೊಂಡೊಯ್ಯುವಲ್ಲಿ ತೋರುವ ಸೂಕ್ಷ್ಮತೆ ಸಹಜವಾಗಿ ಅಲ್ಲಿಯ ಜನರು ಆತನನ್ನು ಮೆಚ್ಚಿಕೊಳ್ಳಲು ಅನುಕರಿಸಲು ಕಾರಣವಾಯಿತು. ಇದು ಕಾದಂಬರಿಯ ಕುರಿತು ಬಂದಿರುವ ಚರ್ಚೆ.

ಕಾದಂಬರಿಯಲ್ಲಿ ವಾಸ್ತವತೆ ಮತ್ತು ಅದರ ನಿರೂಪಣೆಗಳು

ನಮಗೆ ಈವತ್ತು ಕಾದಂಬರಿ ಎನ್ನುವುದು ಅತ್ಯಂತ ಮಹತ್ವದ ಪ್ರಕಾರ. ಅದು ಈಗ ಒಂದು ಅಧಿಕೃತತೆಯನ್ನು ಪಡೆದಿದೆ. ಕಾದಂಬರಿ ಮತ್ತು ಅದರ ಶೈಲಿಯ ಚರ್ಚೆಯನ್ನು ಮಾಡುವ ಕ್ರಮವು ಇನ್ನೂ ಹೆಚ್ಚು ಬೆಳೆದ ಹಾಗೆ ಕಾಣುವುದಿಲ್ಲ. ಹದಿನಾರು ಮತ್ತು ಹದಿನೇಳನೆಯ ಶತಮಾನದ ತರುವಾಯ ಬಂದ ಕಾದಂಬರಿಯು ನಮಗೆ ಹೊಸದಾದ ಪ್ರಕಾರವೂ ಆಗಿದೆ. ಇಲ್ಲಿಯೇ ನಾವು ನಮ್ಮ ಹಿಂದೆ ಇದ್ದ ಕಾವ್ಯಗಳನ್ನು ನೋಡಬೇಕು: ನಮ್ಮಲ್ಲಿ ಚಂಪೂ ಕಾವ್ಯಗಳು ಇದ್ದವು. ಅದರ ಜೊತೆಗೆ ವಚನಗಳು ಇದ್ದವು. ಮತ್ತೆ ಷಟ್ಪದಿಗಳು ಬಂದವು. ಇದೆಲ್ಲಾ ನಡೆದ ಮೇಲೆ ನಮಗೆ ಗದ್ಯದ ರೂಪವು ಹೆಚ್ಚು ಪ್ರಚಲಿತವಾಯಿತು. ಇದನ್ನು ಹೇಳುವಾಗ ನಾವು ವಡ್ಡಾರಾಧನೆಯನ್ನು ಮರೆಯುತ್ತಿದ್ದೇವೆ ಎಂದು ಅರ್ಥವಲ್ಲ. ಕಾವ್ಯ ಮತ್ತು ಅದರ ಶೈಲಿಯು ಒಂದು ಥರ ಇದೆ ಎನ್ನುವುದನ್ನು ಈ ಮೊದಲು ಹೇಳಿದ ವಿಚಾರಗಳಿಂದ ಸ್ಪಷ್ಟವಾಗುತ್ತದೆ. ಸಾಹಿತ್ಯ ಮತ್ತು ಅದರ ಸಂವಹನದ ಮಾದರಿಗಳಿಗೆ ವಿವಿಧ ಆಯಾಮಗಳು ಇರುತ್ತವೆ ಎನ್ನುವುದನ್ನು ನಾವು ಮರೆಯಬಾರದು. ಒಂದು ವಿಶಾಲವಾದ ಅರ್ಥದಲ್ಲಿ ಹೇಳುವುದಿದ್ದರೆ ಸಂವಹನ ಎನ್ನುವುದು ಎಲ್ಲದರಲ್ಲಿ ಇರುತ್ತದೆ. ಅದು ಅಗತ್ಯ. ಚಿತ್ರದಲ್ಲಿ ನಾವು ಬಳಸುವ ಬಣ್ಣಗಳು ಒಂದು ಬಗೆಯ ಸಂವಹನವನ್ನು ಹೇಳುತ್ತದೆ. ಷಟ್ಪದಿಯಲ್ಲಿ ಗಮಕವು ಸಂವಹನವನ್ನು ಸೂಚಿಸುತ್ತದೆ. ನಾವು ಮಾತಾಡುತ್ತೇವೆ ಎಂದರೆ ಅದರಲ್ಲಿ ಒಂದು ಬಗೆಯ ಸಂವಹನ ಇದೆ ಎಂದು ಅರ್ಥ. ಸಾಹಿತ್ಯದಲ್ಲಿ ಭಾಷೆಯು ಸಂವಹನದ ಭಾಗ. ಕೈಯ ಸನ್ನೆಯು ಕೂಡಾ ಸಂವಹನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದು ಬೇರೆ ಪ್ರಶ್ನೆ. ಕಾದಂಬರಿ ಎನ್ನುವುದು ಕೆಲವು ವಿಷಯಗಳಲ್ಲಿ ಸ್ವತಂತ್ರವಾದ ಮತ್ತೆ ಕೆಲವು ವಿಷಯಗಳಲ್ಲಿ ಅದು ಅವಲಂಬಿತವೂ ಹೌದು. ದೇವನೂರರ ಕುಸುಮಬಾಲೆಯನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಅದನ್ನು ನಾವು ಕಾವ್ಯವೇ ಅಥವಾ ಅದು ಗದ್ಯದ ಮತ್ತೊಂದು ರೂಪವೇ ಎಂದು ಸುಲಭವಾಗಿ ಹೇಳುವುದು ಸಾಧ್ಯವಿಲ್ಲ. ಕಾವ್ಯದ ಗುಣ ಮತ್ತು ಗದ್ಯದ ಚಹರೆ ಎರಡೂ ಈ ಕಾದಂಬರಿಯಲ್ಲಿ ನಾವು ಕಾಣುತ್ತೇವೆ. ಕಾದಂಬರಿಯು ಹೀಗೆ ವಿವಿಧ ಅಂಶಗಳನ್ನು ಒಳಗೊಂಡಿದೆ. ಕನ್ನಡದ ಕೆಲವು ಕಾದಂಬರಿಗಳಲ್ಲಿ ನಾವು ವಾಗ್ವಿಲಾಸವೂ ಎದ್ದು ಕಾಣುತ್ತದೆ. ಅನೇಕ ರೊಮಾಂಟಿಕ್ ವಿಮರ್ಶಕರು ಕಾದಂಬರಿಯನ್ನು ಗದ್ಯ ಮತ್ತು ಪದ್ಯದ ಒಂದು ವಿಶಿಷ್ಟವಾದ ಸಂಯೋಜನೆಯ ಸ್ವರೂಪದಲ್ಲಿ ಗುರುತಿಸುತ್ತಾರೆ. ಇಲ್ಲಿಂದ ಕಾದಂಬರಿ ಮತ್ತು ಅದರ ಶೈಲಿಯ ಪ್ರಶ್ನೆಯು ಬಂದಿದೆ. ವಾಸ್ತವವವಾಗಿ ಈವತ್ತು ಅನೇಕರು ಕಾದಂಬರಿ, ಕಥೆಗಳು ಮತ್ತು ಗದ್ಯದ ವಿವಿಧ ಪ್ರಕಾರಗಳನ್ನು ಜೊತೆಗೆ ಇಟ್ಟು ನೋಡುತ್ತಾರೆ. ಅದರಲ್ಲಿ ಮತ್ತೆ ಮತ್ತೆ ಕಥನದ ಅಂಶಗಳನ್ನು ವಿವರಿಸಲು ಯತ್ನವನ್ನು ಮಾಡುತ್ತಾರೆ. ಕತೆಯನ್ನು ಎಲ್ಲರೂ ತಮಗೆ ಬೇಕಾದ ರೀತಿಯಲ್ಲಿ ಹೇಳುತ್ತಾರೆ ಎನ್ನುವ ಧ್ವನಿಯು ಇದೆ. ಆದರೂ ಕಥನ ಮತ್ತು ಅದರ ಬಹುತ್ವ ಎನ್ನುವುದನ್ನು ಅವರೂ ಒಪ್ಪುತ್ತಾರೆ. ಹೀಗೆ ಇದ್ದರೂ ಕಾದಂಬರಿಯನ್ನು ಚರ್ಚೆ ಮಾಡುವಾಗ ಅನೇಕರು ಅದರ ಆಶಯವನ್ನು ಮತ್ತು ಅದರ ವಿಚಾರವನ್ನು ಮಾತ್ರವೇ ಹೇಳುತ್ತಾರೆ. ಮತ್ತೆ ಮತ್ತೆ ಬಂದ ಒಂದು ಮುಖ್ಯವಾದ ಚರ್ಚೆಯೆಂದರೆ ಮಹಾಕಾವ್ಯ ಮತ್ತು ಕಾದಂಬರಿಗೆ ಇರುವ ಸಂಬಂಧದ ವಿವರಣೆಗಳು. ಈ ಮಾತು ಕಾನೂರು ಹೆಗ್ಗಡತಿಗೆ ಅನ್ವಯವಾಗುತ್ತದೆ.

ಸಾಹಿತ್ಯದಲ್ಲಿ ಈವತ್ತು ಯಾವುದನ್ನು ವಾಸ್ತವ ಎಂದು ಹೇಳುತ್ತೇವೆಯೋ ಅದು ಕೂಡಾ ಒಂದು ನಿರ್ದಿಷ್ಟವಾದ ನಿರೂಪಣೆಯನ್ನು ಹೇಳುತ್ತದೆ. ಈ ನಿರೂಪಣೆಯು ಕಣ್ಣಿಗೆ ಯಾವುದು ದಕ್ಕಿದೆಯೋ ಅಷ್ಟು ಮಾತ್ರವೇ ವಾಸ್ತವ ಎಂದು ಹೇಳುತ್ತಾರೆ.,ಮತ್ತೊಂದು ಬಗೆಯಲ್ಲಿ ಹೇಳುವುದಾದರೆ ವಾಸ್ತವ ಎನ್ನುವುದೂ ಈವತ್ತು ಒಂದು ಹಗಲು ಕನಸಿನ ಥರ ಕಾಣಿಸುತ್ತದೆ. ವಾಸ್ತವ ಎನ್ನುವುದು ಕಾಣುತ್ತದೆ ಎನ್ನುವುದು ಸತ್ಯ. ಆದರೆ ಈ ಸತ್ಯವನ್ನು ನಾವು ನಮಗೆ ಕಂಡ ರೀತಿಯಲ್ಲಿ ನೋಡುತ್ತೇವೆ.,ಯಾವುದು ಯಾವ ಇಸವಿಯಲ್ಲಿ ನಡೆದಿದೆ ಅಷ್ಟು ಮಾತ್ರವೇ ನಿರೂಪಣೆಗೆ ದಕ್ಕುತ್ತದೆ. ಉಳಿದವುಗಳು ದಕ್ಕುವುದಿಲ್ಲ ಎಂದು ಅರ್ಥವಲ್ಲ. ಇಸವಿಗಳು ಮತ್ತು ಅದರ ಮಂಡನೆಗಳಿಗೆ ಒಂದು ಆಯಾಮವನ್ನು ಕೊಟ್ಟವರು ಯರೋಪಿಯನ್ನರು ಎನ್ನುವುದು ಸತ್ಯ. ಆದರೆ ಅವರು ಚರಿತ್ರಯನ್ನು ಗ್ರಹಿಸಿದ್ದು ಮತ್ತು ಅದರ ಕುರಿತು ಬರೆದದ್ದು ತಮ್ಮ ಅಸ್ತಿತ್ವ ಜಗತ್ತಿನ ಚರಿತ್ರೆಯಲ್ಲಿ ಎಲ್ಲಿದೆ ಎಂದು ಗುರುತಿಸುವುದಕ್ಕೆ ಮಾತ್ರ. ಆದ್ದರಿಂದ ಚರಿತ್ರೆ ಮತ್ತು ಅದರ ಸತ್ಯ ಹೇಗೆ ರೂಪಿತವಾಗಿದೆ ಎಂದು ಇದರ ಮೂಲಕ ಅರ್ಥವಾಗುತ್ತದೆ. ಅವರು ಚರಿತ್ರೆಯನ್ನು ಹೇಳುವಾಗ ತಮ್ಮ ವಾದವು ಲೋಕಕ್ಕೆ ಅನ್ವಯವಾಗುತ್ತದೆ ಎಂದು ಭಾವಿಸಿದರು. ಯುರೋಪಿನ ಸಂಸ್ಕೃತಿಗೆ ಮತ್ತು ಚರಿತ್ರೆಗೆ ಒಂದು ನಿರ್ದಿಷ್ಟವಾದ ಚಹರೆಯು ಇದೆ. ಇಲ್ಲಿ ನಾವು ಮತ್ತೊಂದು ಅಂಶವನ್ನು ಗಮನಕ್ಕೆ ತಂದು ಕೊಳ್ಳಬೇಕು. ಇಡೀ ವಿಶ್ವದ ಚರಿತ್ರೆಯಲ್ಲಿ ಕರ್ನಾಟಕವು ಎಲ್ಲಿದೆ ಮತ್ತು ಅದರ ಜಾಗವು ಯಾವುದು ಹಾಗೂ ಅದರಲ್ಲಿ ನಮ್ಮ ಪಂಪ ಎಲ್ಲಿದ್ದಾನೆ ಎಂದು ನೋಡಬೇಕಿದೆ. ಕನ್ನಡದಲ್ಲಿ ಕಾದಂಬರಿಯ ಕುರಿತು ಚರ್ಚೆಯ ಆದಾಗ ಮೇಲೆ ಹೇಳಿದ ಸಂಗತಿಗಳು ಪರಿಣಾಮವನ್ನು ಬೀರಿದೆ. ಕಾದಂಬರಿಯ ಚರ್ಚೆಯನ್ನು ಮಾಡುವಾಗ ಒಬ್ಬ ಲೇಖಕನನ್ನು ಮಾನದಂಡವಾಗಿ ಇಟ್ಟುಕೊಂಡು ಚರ್ಚೆಗಳು ಆಗಿವೆ. ಅದರ ಜೊತೆಗೆ ಒಂದು ಕಾದಂಬರಿಯನ್ನು ಇಟ್ಟುಕೊಂಡು ವಿಶ್ಲೇಷಣೆಯು ಆಗಿದೆ. ಕಾದಂಬರಿಕಾರರಾಗಿ ಕಾರಂತ ಎನ್ನುವುದು ಒಂದು ಬಗೆಯ ಕ್ರಮ. ಅದಕ್ಕೆ ವಿಶಿಷ್ಟತೆಯು ಇದೆ. ಅದರಲ್ಲಿ ಅನೇಕ ಒಳನೋಟಗಳೂ ಇವೆ. ಇದು ಒಂದು ಬಗೆಯಾದರೆ ಮತ್ತೊಂದು ಬಗೆಯು ಇದೆ. ಮರಳಿಮಣ್ಣಿಗೆ ಕಾದಂಬರಿಯನ್ನು ಮಾತ್ರವೇ ನಾವು ಅಧ್ಯಯನ ಮಾಡಬಹುದು. ಇದು ವಿಶಿಷ್ಟವಾದ ಒಂದು ಮಾದರಿಯೂ ಆಗಬಹುದು. ಗದ್ಯ ಎನ್ನುವುದೇ ಒಂದು ವಿಶಿಷ್ಟವಾದ ಶೈಲಿಯು ಆಗಿರುತ್ತದೆ ಎಂದು ವಿಮರ್ಶಕರು ಅಭಿಪ್ರಾಯ ಹೊಂದಿದ್ದು ಗಮನಾರ್ಹ. ಒಂದು ಪ್ರಕಾರವಾಗಿ ಕಾದಂಬರಿಯು ತನ್ನದೇ ಆದ ಒಂದು ವಿಶಿಷ್ಟತೆಯನ್ನು ಹೊಂದಿರುವುದು ನಿಜ. ಕುವೆಂಪು ತಮಗೆ ಅನುಕೂಲವಾದ ಗದ್ಯವನ್ನು ಬಳಸುತ್ತಾರೆ.

ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ಕಾದಂಬರಿಯು ಹುಟ್ಟಿದೆ ಮತ್ತು ಅದರ ಹಿನ್ನೆಲೆಯೇನು ಎಂದು ವಿವರಿಸುವಾಗ ಅವನು ಸಂಸ್ಕೃತಿಯ ಪರಿಪ್ರೇಕ್ಷ್ಯದಲ್ಲಿ ಇಟ್ಟು ನೋಡಬೇಕು ಎಂದು ಅವನು ಹೇಳುತ್ತಾನೆ. ಅವನು ತನ್ನ ಮಾತುಗಳನ್ನು ವಿವರಿಸುವಾಗ ಬಳಸಿಕೊಂಡದ್ದು ಮಾರ್ಕ್ಸವಾದವನ್ನೇ. ಮಾರ್ಕ್ಸವಾದಿಗಳ ಪ್ರಕಾರ ಕಾದಂಬರಿಗೆ ಆಂತರಿಕ ತರ್ಕವಿರುತ್ತದೆ. ಮೊದ ಮೊದಲಿನ ಕಾದಂಬರಿಗಳು ವಿವರಣೆ, ಚಾರಿತ್ರಿಕ ಹಿನ್ನೆಲೆ, ವಿಶಿಷ್ಟ ರೀತಿಯ ವಿಷಯದ ಆಯ್ಕೆ ಹಾಗೂ ಜೀವನ ಕ್ರಮದ ವಿವರಣೆಗಳನ್ನು ಹೊಂದಿದ್ದವು. ಈ ರೀತಿಯ ವಿಷಯಗಳ ಆಯ್ಕೆಗೆ

ಯಾವುದೇ ರೀತಿಯ ಸಮರ್ಥನೆಯು ಬೇಕಿರಲಿಲ್ಲ. ಪುಸ್ತಕಗಳು ಮಾರುಕಟ್ಟೆಗೆ ಬಂದಾಗ ಖಾಸಗಿಯಾದ ಜೀವನ ಕ್ರಮವು ಮಾರುಕಟ್ಟೆಗೆ ಬಂದಂತೆ ಆಯಿತು. ಹಾಗೂ ಹೊಸ ಸಾಮಾಜಿಕ ಪರಿಸ್ಥಿತಿಯ ಸಾಮಾಜಿಕ ಅಗತ್ಯವೂ ಆಯಿತು. ಹಾಗೆ ನೋಡುವುದಿದ್ದರೆ ಆಧುನಿಕ ಜಗತ್ತಿನಲ್ಲಿ ಕಾದಂಬರಿಯು ವಹಿಸಿದ ಪಾತ್ರವೂ ಬಹಳ ಮುಖ್ಯವಾದುದು. ಕಾದಂಬರಿಯ ಜಗತ್ತು ಲೇಖಕನ ಪ್ರಜ್ಞೆ ಮತ್ತು ಓದುಗನ ಪ್ರಜ್ಞೆ ಎರಡನ್ನೂ ಕಾದಂಬರಿಯು ಒಳಗೊಳ್ಳುತ್ತದೆ. ಕಾದಂಬರಿಗಳಲ್ಲಿ ಬರುವ ಅನೇಕ ಸಂಗತಿಗಳು ವೈಜ್ಞಾನಿಕ ಅಥವಾ ಅವೈಜ್ಞಾನಿಕ ಎಂದು ಕರೆಯಲು ಬರುವುದಿಲ್ಲ. ಕಾದಂಬರಿಗಳಲ್ಲಿ ಅಸ್ತಿತ್ವದ ಅನನ್ಯತೆ ಇರುವವರು ಅಥವಾ ಇಲ್ಲದೇ ಇರುವವರು ಎಂದು ವರ್ಗೀಕರಿಸಲು ಬರುವುದಿಲ್ಲ. ಕಾದಂಬರಿಯು ಮಹಾಕಾವ್ಯದಂತೆ ನಿರೂಪಣೆಯನ್ನು ಹೊಂದಿದೆ. ಕಾದಂಬರಿಯಲ್ಲಿ ಮನುಷ್ಯನ ಅನುಭವ ಮತ್ತು ಹೊರ ಪ್ರಪಂಚದ ಅರ್ಥ ಎರಡೂ ಇರುತ್ತದೆ. ಮತ್ತು ಅದು ವಿಷಯನಿಷ್ಠವೂ ಹೌದು. ಕಾದಂಬರಿ ಎನ್ನುವುದು ಅನೇಕ ಸಂದರ್ಭದಲ್ಲಿ ನೈತಿಕ ವ್ಯಾಖ್ಯಾನವೂ ಹೌದು. ರೊಮಾಂಟಿಕ್ ಯುಗದ ಕಾದಂಬರಿಗಳು ನಾಯಕನ ವಿಷಯನಿಷ್ಠ ಅನುಭವವನ್ನು ಹೇಳುತ್ತದೆ. ನಾಯಕನು ತನಗೆ ಬೇಕಾದಂತೆ ಲೋಕವನ್ನು ವ್ಯಾಖ್ಯಾನಿಸುತ್ತಾನೆ. ನಾಯಕನ ಜೀವನವು ಲಿರಿಕಲ್ ಗುಣವನ್ನು ಹೊಂದಿರುವುದಿಲ್ಲ. ಈ ಚರ್ಚೆಯ ಸಂದರ್ಭದಲ್ಲಿ ಬಂದ ಬಹಳ ಮುಖ್ಯವಾದ ಅಂಶವೆಂದರೆ ಸಾಹಿತ್ಯದ ಹಳಹಳಿಕೆಯು ಹಿಂದಿನ ದಿನಗಳನ್ನು ತುಂಬಾ ದಿವ್ಯವಾದುದು ಅಥವಾ ಯುಟೋಪಿಯಾ ಎಂದು ಭಾವಿಸಿಕೊಳ್ಳುತ್ತದೆ.

ಕಾದಂಬರಿಯಲ್ಲಿ ಬರುವ ವಿಶ್ವಾತ್ಮಕತೆಯು ಮಧ್ಯಮ ವರ್ಗದ ತಾತ್ವಿಕತೆಯನ್ನು ಸೂಚಿಸುತ್ತದೆ.ಲುಕಾಕ್ಸ್ ಮತ್ತೆ ಹೀಗೆ ಹೇಳಿದ್ದಾನೆ–ಆಧುನಿಕ ಕಾದಂಬರಿಯು ವಿಜ್ಞಾನದ ಸತ್ಯವನ್ನು, ಅದರ ಜ್ಞಾನವನ್ನು ಮತ್ತು ನೀತಿಯ ವಿಷಯ ನಿಷ್ಠತೆಯನ್ನು ಏಕಕಾಲಕ್ಕೆ ಒದಗಿಸುತ್ತದೆ.ವಸ್ತು ಮತ್ತು ಪಾತ್ರಗಳ ವಿಶಿಷ್ಟತೆಯಿಂದಾಗಿ ವಾಸ್ತವತಾ ವಾದವು ತನ್ನದೇ ಆದ ವೈಶಿಷ್ಟ್ಯವನ್ನು ರೂಪಿಸಿದೆ ಎಂದು ಅವನ ವಾದ.ಚಾರಿತ್ರಿಕ ಕಾದಂಬರಿಗಳು ಅತಿ ವಿಜೃಂಭಣೆಯನ್ನು ಹೊಂದಿದೆ ಎಂದೂ ಅವನು ವಾದಿಸುತ್ತಾನೆ. ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ಸಾಹಿತ್ಯಕ ರೂಪ ಮತ್ತು ಸಂಸ್ಕೃತಿಯನ್ನು ಅವನು ವಿವರವಾಗಿಯೇ ಚರ್ಚಿಸಿದ್ದಾನೆ. ಆದರೆ ಅವನು ಹೇಳಿದ ಅನೇಕ ಮಾತುಗಳಿಗೆ ಅನಂತರ ವಾಗ್ವಾದವು ಪ್ರಾರಂಭವಾಯಿತು. ಅದು ಬೇರೆ ಪ್ರಶ್ನೆ. ವ್ಯಕ್ತಿ ಮತ್ತು ಅವನ ಬರವಣಿಗೆಗೂ ಸಂಸ್ಕೃತಿಗೂ ಆರ್ಥಿಕತೆಗೂ ಇರುವ ಸಂಬಂಧ ಚರ್ಚೆಯು ತುಂಬಾ ಸೂಕ್ಷ್ಮವಾಯಿತು. ಸಮಾಜ ಮತ್ತು ಆರ್ಥಿಕತೆಗೆ ಸಾಹಿತ್ಯವು ಹೇಗೆ ವಾಹಕವಾಗಿದೆ ಎನ್ನುವುದು ಮುಖ್ಯ ಪ್ರಶ್ನೆಯೂ ಹೌದು. ಹೇಗೆ ಸಾಹಿತ್ಯದ ಕೃತಿಗಳು ವ್ಯಕ್ತಿ ಮತ್ತು ಜಗತ್ತಿನ ಸಂಬಂಧವನ್ನು ಸೂಚಿಸುತ್ತವೆ ಎನ್ನುವುದೂ ಪ್ರಾರಂಭವಾಗಿದ್ದು ಮಾರ್ಕ್ಸಿಸ್ಟರಿಂದಲೇ. ಅರ್ನೆಸ್ಟ್ ಬ್ಲಾಕ್ ಹೇಳಿರುವ ಮಾತು ಇಲ್ಲಿ ಉಲ್ಲೇಖನೀಯ. ಅವನು ಹೇಳುತ್ತಾನೆ – ಎಲ್ಲಾ ಸಾಂಸ್ಕೃತಿಕ ಪಠ್ಯಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಮುಂದೆ ಕೆಲವು ಆದರ್ಶಗಳನ್ನು ಇಡುತ್ತವೆ. ಬೈಬಲ್ ಹೇಗೆ ಆಧುನಿಕ ಪಠ್ಯಗಳ ಮೇಲೆ ಪ್ರಭಾವವನ್ನು ಬೀರಿದೆ ಮತ್ತು ಅದರ ಮೂಲಕ ಹೇಗೆ ಒಂದು ಆದರ್ಶವನ್ನು ಹೇಳಲಾಗುತ್ತದೆ ಎನ್ನುವುದು ಅವನ ಮಾತುಗಳಲ್ಲಿ ವ್ಯಕ್ತವಾಗಿದೆ.

ಅವನ ಮಾತುಗಳಲ್ಲಿ ವ್ಯಕ್ತವಾದ ಮತ್ತೊಂದು ಅಂಶವೆಂದರೆ ನಾವು ಯಾವ ಪರಿಸರದಲ್ಲಿ ಬದುಕುತ್ತೇವೆಯೋ ಅದರಾಚೆಗೂ ನಾವು ಯೋಚನೆ ಮಾಡುವಂತೆ ಮಾಡುವುದೂ ಕೂಡಾ ಒಂದು ಆದರ್ಶವಾಗಿದೆ. ಯಾವುದು ನಮ್ಮ ಎದುರು ಇರುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವೆಂದರೆ ಕೃತಿಯು ಚಾರಿತ್ರಿಕ ಮತ್ತು ಅದರ ಒತ್ತಡದಿಂದ ಅಭಿವ್ಯಕ್ತಿಯನ್ನು ಭಿನ್ನವಾಗಿ ರೂಪಿಸುತ್ತದೆ. ಲುಕಾಕ್ಸ್ ಅದನ್ನು ಆಲೋಚನೆಗಳ ಸಮಗ್ರತೆ ಎಂದು ಹೇಳುತ್ತಾನೆ. ಕಾನೂರು ಹೆಗ್ಗಡಿತಿಯಲ್ಲಿ ಇದನ್ನು ಕಾಣಬಹುದು.

ಇಲ್ಲಿಯೇ ಪ್ರಸ್ತಾವಿಸಬೇಕಾದ ಅಂಶವೊಂದಿದೆ: ಚಾರಿತ್ರಿಕ ಭೌತವಾದವು ಸಂಸ್ಕೃತಿಯನ್ನು ವಿವರಿಸಲು ಸಾಮಾಜಿಕ ಕೌಶಲವನ್ನು ಮಾನದಂಡವಾಗಿಯೇ ಬಳಸಿಕೊಳ್ಳುತ್ತದೆ. ಆದರೆ ಕಾದಂಬರಿಯೆನ್ನವುದು ಬಹಳ ಮಹತ್ವದ್ದೂ ಹೌದು. ಅದು ಜನರನ್ನು ಪ್ರಭಾವಿಸುತ್ತದೆ. ಮತ್ತು ಅದರದೇ ಆದ ಓದುಗ ವರ್ಗವನ್ನು ಅದು ಸೃಷ್ಟಿಸುತ್ತದೆ. ಕಾದಂಬರಿಯಲ್ಲಿ ಅನೇಕ ಕಡಗೆ ಲೇಖಕರು ಕೃತಿಯಿಂದ ಹೊರಗೆ ಇರುತ್ತಾರೆ. ಕಾದಂಬರಿಯಿಂದ ಲೇಖಕರು ಹೊರಗೆ ಇರುವಾಗ ಅದನ್ನು ಬರೆಯುವ ಕ್ರಮವು ಬೇರೆಯಾಗಿರುತ್ತದೆ. ಅದು ಅವರ ತಾತ್ವಿಕ ಪ್ರಶ್ನೆಯೂ ಆಗಿರುತ್ತದೆ. ಕಾದಂಬರಿ ಮತ್ತು ಅದರ ಸಾಧ್ಯತೆಗಳು ಪ್ರಾರಂಭವಾದುದು ಒಂದು ವಿಶಿಷ್ಟವಾದ ಚಾರಿತ್ರಿಕ ಗಳಿಗೆಯಲ್ಲಿ ಎನ್ನವುದರ ಕುರಿತು ಮಾರ್ಕ್ಸವಾದಕ್ಕೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅದನ್ನು ಅದು ಗ್ರಹಿಸುವಾಗ ಆಧುನಿಕ ಯುಗದ ಅಗತ್ಯವಾಗಿ ಕಾದಂಬರಿಯು ರೂಪುಗೊಂಡಿತು ಎಂದೇ ಹೇಳುತ್ತದೆ. ಕಾದಂಬರಿಯು ಹೇಳುವುದೇ ಪರೋಕ್ಷವಾದ ಒಂದು ಜೀವನದ ವಿಧಾನವನ್ನು ಎನ್ನುವುದನ್ನು ಇಲ್ಲ ಮರೆಯಬಾರದು. ಆದರೆ ಕಾದಂಬರಿಯ ಪ್ರಭಾವವು ಬಹಳ ದೊಡ್ಡದೇ ಆಗಿತ್ತು. ಹೆಚ್ಚಿನ ಕಾದಂಬರಿಗಳ ನಿರೂಪಣೆಯನ್ನು ನೋಡಿದರೆ ಅದರ ಹಿನ್ನೆಲೆಯು ಸ್ಪಷ್ಟವಾಗುತ್ತದೆ. ಯಾವುದೇ ಕಾದಂಬರಿಯು ವಿಶಿಷ್ಟವಾಗಿ ಒಂದು ಜೀವನದ ಕಥನವನ್ನು ಹೇಳುತ್ತದೆ. ಮತ್ತು ಅದನ್ನು ಅದು ನೋಡುವಾಗ ಲೇಖಕ ಕಣ್ಣಿನಿಂದ ನೋಡುತ್ತದೆ. ಕಾದಂಬರಿ ಮತ್ತು ಅದರ ಸಾಮಾಜಿಕ ಆವಶ್ಯಕತೆಗಳು ಆಧುನಿಕ ಜಗತ್ತಿನಲ್ಲಿ ಬೇರೆಯದೇ ಆಯಿತು. ಆದರೆ ಕಾದಂಬರಿಯೆನ್ನುವುದು ಬಹಳ ಮುಖ್ಯವಾಗಿ ಒಂದು ವರ್ಗಕ್ಕೆ ಪ್ರಿಯವಾದ ಸಂಗತಿಯೂ ಆಯಿತು. ಕಾದಂಬರಿಯನ್ನು ಲೇಖಕರು ಬರೆಯುವಾಗ ಅನುಸರಿರುವ ವಿಧಾನವೂ ಈ ಕಾರಣದಿಂದ ಭಿನ್ನವಾಗಿದೆ. ಕಾದಂಬರಿಯ ಒಳಗೆ ನಿಂತುಕೊಂಡು ಕಾದಂಬರಿಕಾರನು ಕಾದಂಬರಿಯನ್ನು ವಿವರಿಸಲು ಹೊರಟರೆ ಅದರ ಸ್ವರೂಪವೂ ಬೇರೆ ಆಗುತ್ತದೆ. ಕಾದಂಬರಿಯ ಒಳಗಿನ ಪಾತ್ರವಾಗಿ ಲೇಖಕನು ನಿರೂಪಣೆಗೆ ತೊಡಗಿದರೆ ಆಗ ಅದರ ವಸ್ತು ಮತ್ತು ಅದರ ವಿವರಣೆಯು ಬೇರೆಯಾಗುತ್ತದೆ. ಅವನು ತನ್ನ ದೃಷ್ಟಿಕೋನಕ್ಕೆ ಅನುಸಾರವಾಗಿ ಎಲ್ಲವನ್ನೂ ವಿವರಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಮತ್ತು ಕಾದಂಬರಿಯು ಸ್ವಗತದ ರೀತಿಯಲ್ಲಿ ಇರುತ್ತದೆ. ಆದರೆ ಮತ್ತೊಂದು ರೀತಿಯಲ್ಲಿ ಕಾದಂಬರಿಯ ನಿರೂಪಣೆಯು ಇರುತ್ತದೆ. (ಕಾನೂರು ನಿರೂಪಣೆ).

ಇಲ್ಲಿ ನಾವು ಮತ್ತೊಂದಿದೆ– ಕಾದಂಬರಿಯು ತನ್ನ ಭೂತಕಾಲವನ್ನು ಮಾತ್ರವೇ ಒಳಗೊಳ್ಳುತ್ತವೆ. ಅದರಲ್ಲಿ ಬರುವ ಅನೇಕ ನಿಲುವುಗಳು ಗತಕ್ಕೆ ಸಂಬಂಧಿಸಿದೆ. ಆದರೆ ಮತ್ತೆ

ಅದರಲ್ಲಿ ಬರುವ ಆದರ್ಶವು ಭವಿಷ್ಯವನ್ನು ಸೂಚಿಸುತ್ತದೆ ಮಾತ್ರ. ಅದರಲ್ಲಿಬರುವ ಅನೇಕ ಸಂಗತಿಗಳು ಲೇಖಕನ ಮನೋಭಾವವನ್ನು ಸೂಚಿಸುತ್ತದೆ. ಹಾಗೂ ಅದನ್ನು ನೋಡುವಾಗ ಲೇಖಕನ ತಾತ್ವಿಕತೆಯನ್ನೂ ಗ್ರಹಿಸಿಕೊಳ್ಳುವುದು ಅನಿವಾರ್ಯ. ಆದರೆ ಅನೇಕ ಲೇಖಕರು ಕಾದಂಬರಿಯಲ್ಲಿ ನಿರೂಪಿಸುವುದು ತಮಗೆ ಯಾವುದು ಇಷ್ಟವಾಗುತ್ತದೆ ಅದನ್ನು ಮಾತ್ರವೇ ಹೇಳುತ್ತಾರೆ. ಕಾದಂಬರಿಕಾರರ ನಿಲುವನ್ನು ನಾವು ನೋಡುವ ಅಗತ್ಯವೇ ಇಲ್ಲವೆಂದು ನವ್ಯ ವಿಮರ್ಶಕರು ಹೇಳುತ್ತಾರೆ. ಆದರೆ ಹಾಗೆ ಹೇಳುವಾಗ ಅವರು ನಿರೂಪಿಸುವುದು ತಮಗೆ ಯಾವುದು ಇಷ್ಟವಾಗುತ್ತದೆ ಅದನ್ನು ಮಾತ್ರವೇ. ಹೀಗೆ ಮಾಡುವಾಗ ನವ್ಯ ವಿಮರ್ಶಕರು ತಮ್ಮ ನಿಲುವನ್ನು ಮಾತ್ರವೇ ವ್ಯಕ್ತ ಪಡಿಸುವುದೂ ಅಷ್ಟೇ ನಿಜ. ಕಾದಂಬರಿಯ ತಾತ್ವಿಕತೆಯು ತಮಗೆ ಅಗತ್ಯವಿಲ್ಲವೆಂದು ಅವರು ಹೇಳುತ್ತಾರೆ. ಆದರೆ ವಿಷಯವು ಹಾಗೆ ಇಲ್ಲ. ಅದರ ಸಾಧ್ಯತೆಯು ಬೇರೆಯಾಗಿಯೂ ಇರುತ್ತದೆ. ಆದ್ದರಿಂದ ನಾವು ಕಾದಂಬರಿಯನ್ನು ಓದುವುದು ಎಂದರೆ ಕಾದಂಬರಿಯ ತಾತ್ವಿಕತೆಯೊಂದಿಗೆ ನಾವು ಮುಖಾಮುಖಿಯಾಗಿರುವುದು ಎಂದು ಅರ್ಥ. ಕಾದಂಬರಿಯ ಒಳಗೆ ನಿರೂಪಕನು ಭಾಗವಹಿಸಿದರೆ ಅದರ ಸ್ವರೂಪವನ್ನು ನಿರೂಪಕನೇ ನಿಯಂತ್ರಿಸುತ್ತಾನೆ. ಕಾದಂಬರಿಯ ವಸ್ತು ಮತ್ತು ಅದರ ನಿರೂಪಣೆಯು ಆಗ ಒಂದು ರೀತಿಯಲ್ಲಿ ಇರುತ್ತದೆ. ಆದರೆ ಯಾವಾಗ ಲೇಖಕನು ಕಾದಂಬರಿಯ ಹೊರಗೆ ಇದ್ದು ಕಾದಂಬರಿಯ ವಸ್ತುವನ್ನು ನಿರೂಪಿಸಲು ಹೋಗುತ್ತಾನೆಯೋ ಆಗ ಅದರ ಸ್ವರೂಪವು ಭಿನ್ನವಾಗುತ್ತದೆ.ಗೊಂಬೆಯಾಟದ ಥರ ಕಾದಂಬರಿಯ ವಸ್ತುವನ್ನು ಅವನು ನಿರೂಪಿಸಿಕೊಳ್ಳುತ್ತಾ ಹೋಗುತ್ತಾನೆ. ಆಗ ಲೇಖಕನ ಉದ್ದೇಶ ಮತ್ತು ಅವನ ತಾತ್ವಿಕ ದೃಷ್ಟಿಕೋನವು ವ್ಯಕ್ತವಾಗುವ ಕ್ರಮಗಳು ಬೇರೆಯಾಗುತ್ತವೆ. ಲೇಖನ ದೃಷ್ಟಿಕೋನ, ಅವನ ಮಾತಿನ ಚಹರೆಗಳು ಕಾದಂಬರಿಯಲ್ಲಿ ವ್ಯಕ್ತವಾಗುವ ಕ್ರಮಗಳು ಅನೇಕ ಸಂದರ್ಭದಲ್ಲಿ ಸಂಕೀರ್ಣವೂ ಆಗುತ್ತದೆ. ಅವನ ಪ್ರಜ್ಞೆ, ಅವನ ಮಾತುಗಳು, ಅವನ ನಿಲುವುಗಳು ಮತ್ತು ಅವನು ಆಯ್ಕೆ ಮಾಡಿಕೊಂಡ ವಸ್ತು,ಅವನ ಭಾಷೆ ಹಾಗೂ ಅವನ ಕಾದಂಬರಿಯ ಪಾತ್ರಗಳು ಎಲ್ಲವೂ ಜೊತೆಗೆ ಇರುತ್ತವೆ. ಮತ್ತು ಮುಖಾಮುಖಿಯಾಗುತ್ತವೆ. ಲೇಖಕನ ಧ್ವನಿ ಮತ್ತು ಕಾದಂಬರಿಯ ಧ್ವನಿ ಎರಡೂ ಜೊತೆಗೆ ಬರುತ್ತವೆ. ಆದರೆ ಲೇಖಕನು ಯಾವುದನ್ನು ನೋಡುತ್ತಾನೆ, ಅವನಿಗೆ ಯಾವುದು ಮುಖ್ಯವಾಗುತ್ತದೆ ಅದು ಮಾತ್ರವೇ ಕಾದಂಬರಿಯಲ್ಲಿ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಕಾದಂಬರಿಯ ವಸ್ತು ಪ್ರಪಂಚವು ಸೋಸಲ್ಪಡುತ್ತದೆ. ಕಾದಂಬರಿಯೆನ್ನುವುದು ಭೂತಕಾಲಕ್ಕೆ ಸಂಬಂಧಪಟ್ಟಿದೆ. ಅದರ ಸ್ವರೂಪವು ಯಾವುದು ಇದೆಯೋ ಅದನ್ನು ಹೇಳುತ್ತಾ ಮುಂದಿನ ಸಂಗತಿಗಳನ್ನು ನಿರೂಪಿಸುತ್ತದೆ. ಕುವೆಂಪು ಇದನ್ನು ತುಂಬಾ ಚೆನ್ನಾಗಿ ಮುಂದುವರಿಸುತ್ತಾರೆ.

ಕಾದಂಬರಿಯ ಕಾಲವು ಹೇಳುವುದು ಭಿನ್ನವಾದ ದೃಷ್ಟಿಕೋನವನ್ನು. ಕಾದಂಬರಿಯಲ್ಲಿನ ಲೋಕದೃಷ್ಟಿಯು ಕಾದಂಬರಿಯ ವಸ್ತುವನ್ನು ಮತ್ತು ಅದರ ಸಾಧ್ಯತೆಯನ್ನು ಸೂಚಿಸುತ್ತದೆ. ಅದು ಅನೇಕ ಸರ್ತಿ ಪ್ರತಿಮೆಗಳಾಗಿಯೂ ವ್ಯಕ್ತವಾಗುತ್ತದೆ. ಕಾದಂಬರಿ ಮತ್ತು ಅದರ ವಸ್ತುವು ಲೇಖಕನ ನಿಲುವನ್ನು ವ್ಯಕ್ತಪಡಿಸಿಕೊಳ್ಳುವುದರಿಂದಲೇ ಕಾದಂಬರಿಯ ಭಾಷೆಯೂ ನಿಯಂತ್ರಣಕ್ಕೆ ಒಳಗಾಗುತ್ತದೆ. ಕಾದಂಬರಿಯ ನಾಯಕನು ಜಗತ್ತಿನೊಂದಿಗೆ ಒಂದು ನಿರ್ಣಾಯಕವಾದ ಪಾತ್ರವನ್ನು ಹೊಂದಿರುತ್ತಾನೆ. ಮತ್ತು ಅದು ಕಾದಂಬರಿಯ ಅಗತ್ಯವೂ ಹೌದು. ಕಾದಂಬರಿಯ

ನಾಯಕನು ಕಾದಂಬರಿಯ ಮುಖೇನ ಜಗತ್ತಿನೊಂದಿಗೆ ಸ್ಥಾಪಿಸುವ ಸಂಬಂಧವೇ ಕಾದಂಬರಿಯ ತಾತ್ವಿಕತೆಯನ್ನು ಸೂಚಿಸುತ್ತದೆ. ಕಾದಂಬರಿಕಾರನ ನಿಲುವುಗಳು ಕಾದಂಬರಿಯಲ್ಲಿ ಒಂದು ಯೋಚನೆಯ ಕ್ರಮವೂ ಆಗಿರುತ್ತದೆ. ಲೇಖಕನು ತನ್ನ ಆಲೋಚನೆಯನ್ನು ಮತ್ತು ತನ್ನ ದೃಷ್ಟಿಕೋನವನ್ನು ಕಾದಂಬರಿಯ ವಸ್ತು ಪ್ರಪಂಚದ ಜೊತೆಗೆ ಸಮೀಕರಿಸುತ್ತಾನೆ. ಲೇಖಕನ ಯೋಚನೆಯೇ ಕಾದಂಬರಿಯಲ್ಲಿ ಒಂದು ಪಾತ್ರದ ಮೂಲಕವೂ ವ್ಯಕ್ತವಾಗುವ ಸಾಧ್ಯತೆಯೂ ಇರುತ್ತದೆ. ಅದು ಅಗತ್ಯವೆಂದು ಅವನು ಭಾವಿಸುವ ಸಾಧ್ಯತೆಯೂ ಇರುತ್ತದೆ. ಆದರೆ ಯಾವಾಗ ಲೇಖಕನು ಸರಿ ಮತ್ತು ತಪ್ಪುಗಳನ್ನು ನೋಡುವ ಕ್ರಮವೇ ಬೇರೆ. ತನ್ನ ದೃಷ್ಟಿಕೋನದಲ್ಲಿ ಯಾವುದು ಸರಿಯಲ್ಲವೋ ಆಗ ಅದನ್ನು ಅವನು ನಿರಾಕರಿಸುತ್ತಾನೆ. ಕುವೆಂಪು ಕಾದಂಬರಿಯಲ್ಲಿ ನೀಡುವ ನೋಟವೇ ಬೇರೆ.

ಕಾದಂಬರಿಯ ನಾಯಕನು ಲೇಖಕನೇ ಆದಾಗ ಅವನು ಕಾದಂಬರಿಯನ್ನು ನಿಯಂತ್ರಿಸುತ್ತಾನೆ. ಅವನಿಗೆ ಅದು ಮುಖ್ಯವಾಗಲೂ ಬಹುದು. ಕಾದಂಬರಿಯಲ್ಲಿ ಮತ್ತೊಂದು ಅಂಶವೂ ಮುಖ್ಯವಾಗುತ್ತದೆ. ಯಾವಾಗ ಒಂದು ಪಾತ್ರವಾಗಿ ಲೇಖಕನು ಬಂದರೆ ಅದರ ಸ್ವರೂಪವೇ ಅವನಲ್ಲಿ ಕೇಂದ್ರೀಕರಣವಾಗುತ್ತದೆ. ಯಾವುದೇ ಒಂದು ಕಾದಂಬರಿಯಲ್ಲಿ ಬರುವ ಪಾತ್ರಗಳಿಗೆ ಅವುಗಳದೇ ಆದ ವರ್ತನೆಯು ಇರುತ್ತದೆ. ಮತ್ತು ಗುಣಧರ್ಮವೂ ಇರುತ್ತದೆ. ಅದು ವ್ಯಕ್ತಿಯ ಮಟ್ಟಿಗೆ ಸತ್ಯವೂ ಹೌದು. ಕಾದಂಬರಿಯ ಸ್ವಗತದ ಶೈಲಿಯೂ ಕೂಡಾ ಕಾದಂಬರಿಯನ್ನು ನಿಯಂತಿಸುತ್ತದೆ. ಆದರೆ ಅದನ್ನು ಲೇಖಕನು ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ ಎನ್ನವುದೂ ಬಹಳ ಮುಖ್ಯ. ಕಾದಂಬರಿಯಲ್ಲಿ ಸ್ವಗತವು ಬಹಳ ಮುಖ್ಯವಾದ ಕ್ರಿಯೆ ಕೂಡಾ ಆಗಬಹುದು. ಆದರೆ ಇದರ ನೋಟವನ್ನು ಹೇಗೆ ಗ್ರಹಿಸಬೇಕು ಎನ್ನುವುದು ಬಹಳ ಮುಖ್ಯ. ಲೇಖಕನ ಉದ್ದೇಶ, ಅವನ ಪ್ರಜ್ಞೆಯು ಸಾಹಿತ್ಯದಲ್ಲಿ ಕೆಲಸವನ್ನು ಮಾಡುತ್ತದೆ ಎನ್ನವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಲೇಖಕನು ಯಾವುದನ್ನು ನೋಡುತ್ತಾನೆ, ಯಾವುದನ್ನು ತಿಳಿಯುತ್ತಾನೆ ಎನ್ನುವದೇ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಲೇಖನ ನಿಲುವು ಕಾದಂಬರಿಯ ನಿಲುವಾಗಿಯೂ ಪರಿವರ್ತನೆಯಾಗುತ್ತದೆ. ಕಾದಂಬರಿಯಲ್ಲಿ ಒಂದು ಪಾತ್ರವು ಯಾವ ಗುಣವನ್ನು ಹೊಂದಿರುತ್ತದೆಯೋ ಅದನ್ನು ನಾವು ಕಾದಂಬರಿಯಲ್ಲಿ ಗಮನಿಸುವುದು ತಾತ್ವಿಕತೆಯ ದೃಷ್ಟಿಯಿಂದ ಅಗತ್ಯವೂ ಹೌದು. ಆದರೆ ನಾವು ಅದನ್ನು ಪ್ರತ್ಯೇಕವಾದ ನಿಲುವು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಕಾದಂಬರಿಯು ಹೇಳುವುದು ಯಾವುದನ್ನು ಎಂದು ತಿಳಿಯಬೇಕಾದರೆ ಅದರ ತಾತ್ವಿಕ ನಿಲುವನ್ನು ಗ್ರಹಿಸಲೇ ಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯಲ್ಲಿ ಲೇಖಕನು ಯಾವುದನ್ನು ಹೇಳಲು ಬಯಸುತ್ತಾನೆಯೋ ಅದು ಅವನ ಕೃತಿಯಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗಲು ಸಾಧ್ಯ. ಲೇಖಕನ ವೈಯಕ್ತಿಕ ನಿಲುವು ಅವನ ಬರಹದಲ್ಲಿ ಹೇಗೆ ವ್ಯಕ್ತವಾಗುತ್ತದೆಯೋ ಅದನ್ನು ಅವನ ಭಾಷೆ, ಅವನ ನಿರೂಪಣಾ ಕ್ರಮ, ಅವನ ಆಶಯಗಳು ಹೇಳುತ್ತವೆ. ವ್ಯಕ್ತಿ ಮತ್ತು ಅನುಭವ ಎರಡೂ ಕೃತಿಯಲ್ಲಿ ವ್ಯಕ್ತವಾಗುವಾಗ ಅದನ್ನು ಮಾತ್ರವೇ ಮಾನದಂಡವಾಗಿ ಇಡಬೇಕಾದ ಅಗತ್ಯವೂ ಇಲ್ಲ. ಕಾದಂಬರಿಯಲ್ಲಿ ಯಾವುದು ಹೇಗೆ ವ್ಯಕ್ತವಾಗುತ್ತದೆ ಎನ್ನುವುದು ಮಾತ್ರವೆ

ಮುಖ್ಯ. ಆದರೆ ನವ್ಯದ ವಿಮರ್ಶಕರು ಹೇಳುವ ರೀತಿಯಲ್ಲಿ ಅನುಭವ ಮಾತ್ರವೇ ಮುಖ್ಯವಾಗುವ ಅಗತ್ಯವಿಲ್ಲ. ಕುವೆಂಪು ಅನುಭವವನ್ನೂ ಮಾತ್ರ ಹೇಳುವುದಿಲ್ಲ.

ಇಲ್ಲಿ ಗಮನಿಸಬಹುದಾದ ಮತ್ತೊಂದು ಸಂಗತಿಯೂ ಇದೆ. ಲೇಖಕನ ಆಲೋಚನೆಯು ಕಾದಂಬರಿಯಲ್ಲಿ ವ್ಯಕ್ತವಾಗುವಾದ ಕೂಡಲೇ ಅದನ್ನು ಅವನು ಜೀವನ ಪೂರ್ತಿಯಾಗಿ ನಿರೂಪಿಸುತ್ತಾನೆ ಎಂದು ಹೇಳಲು ಬರುವುದೂ ಇಲ್ಲ. ಕಾದಂಬರಿಕಾರನು ಯಾವುದನ್ನು ಹೇಳುತ್ತಾನೆಯೋ ಅದು ಅವನ ಉದ್ದೇಶಿತ ನಿಲುವೂ ಆಗಿರುತ್ತದೆ. ಕಾದಂಬರಿಯ ವಸ್ತು ಅವನ ನಿಲುವನ್ನು ಸೂಚಿಸುತ್ತದೆ.

ಕಾದಂಬರಿಕಾರನ ಆಲೋಚನೆಯು ಕಾದಂಬರಿಯಲ್ಲಿ ವಿಭಿನ್ನವಾದ ಸಂವಾದವನ್ನು ಸೂಚಿಸುತ್ತದೆ. ಅವನ ನಿಲುವನ್ನು ನಾವು ಹೇಗೆ ನೋಡಬೇಕು ಎನ್ನುವುದೇ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ಕಾದಂಬರಿಯು ಹೇಳುವುದು ಒಂದು ಜೀವನದ ಕ್ರಮವನ್ನು. ಅದು ಅದಕ್ಕಿಂತ ಹೊರತಾಗಿರುವ ಸಾಧ್ಯತೆಯು ಇಲ್ಲ. ಆದ್ದರಿಂದ ಕಾದಂಬರಿಯನ್ನು ಓದುವಾಗ ಅದನ್ನು ನಮ್ಮ ಜೀವನದ ಭಾಗವೆಂಬಂತೆ ಓದುತ್ತೇವೆ. ನಮಗೆ ಯಾವುದು ಕಾಣಿಸುತ್ತದೆಯೋ ಅದನ್ನು ಮಾತ್ರವೇ ಕಾದಂಬರಿಕಾರನು ಹೇಳುತ್ತಾನೆ ಎಂದು ಅರ್ಥವಲ್ಲ. ಅವನು ಅದಕ್ಕಿಂತ ಭಿನ್ನವಾದುದನ್ನು ಹೇಳಬಹುದು. ಆದರೆ ಅದರಿಂದಲೇ ಅದು ಪೂರ್ಣವಾಯಿತು ಎಂದು ಅರ್ಥವಲ್ಲ. ಒಂದು ಸಾಮಾಜಿಕ ಜೀವನದ ಕ್ರಮವು ಒಂದೇ ಕ್ಷಣದಲ್ಲಿ ಮುಕ್ತಾಯವಾಗುವುದೂ ಇಲ್ಲ. ಅದು ಮುಂದುವರಿಯುತ್ತದೆ. ಅದಕ್ಕೆ ಚರಿತ್ರೆಯು ಇದೆ. ಅದೇ ರೀತಿಯಲ್ಲಿ ವ್ಯಕ್ತಿಗೂ ಅವನದೇ ಆದ ಚರಿತ್ರೆಯು ಇದೆ. ಜೀವನ ಎನ್ನವುದು ಕೂಡಾ ಒಂದು ನಿಯಮವೇ ಆಗಿರುತ್ತದೆ. ಆದರೆ ಇದರನ್ನು ನಾವು ನೋಡುವಾಗ ಒಂದೊಂದು ರೀತಿಯಲ್ಲಿ ನೋಡುತ್ತೇವೆ. ಆದರೆ ಇದನ್ನು ನೋಡುವುದು ಎಂದರೆ ನಾವು ನಮ್ಮ ಜೀವನವನ್ನು ಒಂದು ನಮಗೆ ಬೇಕಾದಂತೆ ಗ್ರಹಿಸುವುದು ಎಂದು ಅರ್ಥವಲ್ಲ. ಕಾದಂಬರಿಯು ತನ್ನ ಆವಶ್ಯಕತೆಗೆ ತಕ್ಕಂತೆ ಜೀವನವನ್ನು ನೋಡುತ್ತದೆ. ಆದರೆ ಹೀಗೆ ನೋಡುವಾಗ ಅದರ ಸ್ವರೂಪವು ಭಿನ್ನವಾದ ಒಂದು ರಚನೆಯಂತೆಯೂ ಭಾಸವಾಗುತ್ತದೆ. ಹೆಗೆಲ್ ಜೀವನ ಮತ್ತು ಅದರ ತಾರ್ಕಿಕತೆಯನ್ನು ವಿವರಿಸುತ್ತಾನೆ. ಜೀವನವೇ ಮೂಲತಃ ಚಲನಶೀಲವಾದುದು. ಅದನ್ನು ಅದಕ್ಕಿಂತ ಭಿನ್ನವಾಗಿ ನೋಡಲು ಬರುವುದಿಲ್ಲ. ಅದಕ್ಕೆ ಗತಿಶೀಲತೆಯು ಇದೆ. ಅದನ್ನು ನೋಡುವಾಗ ನಮಗೆ ಇದರ ಅರಿವು ಇರಬೇಕಾಗುತ್ತದೆ.ಆದರೆ ಅದು ತಾರ್ಕಿಕವೇ ಎಂದರೆ ಶುದ್ಧ ತಾರ್ಕಿಕವಲ್ಲ. ಅದನ್ನು ರಾಜಕೀಯ ಮತ್ತು ಸಾಮಾಜಿಕ ಆಶಯದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ.

ಕಾದಂಬರಿಯಲ್ಲಿ ಜೀವನವನ್ನು ನಾವು ನೋಡುವ ಕ್ರಮಕ್ಕೆ ಅನುಸಾರವಾಗಿ ನಮ್ಮ ತಾತ್ವಿಕತೆಯು ರೂಪುಗೊಳ್ಳುತ್ತದೆ. ಕಾದಂಬರಿ ಎನ್ನುವುದು ಒಂದು ವಿಶಿಷ್ಟವಾದ ಗ್ರಹಿಕೆಯೂ ಹೌದು. ಅದನ್ನು ಓದುವಾಗ ನಾವು ಅದನ್ನು ಸಮಾಜಿಕ ಜೀವನದ ಭಾಗವಾಗಿಯೇ ನೋಡುತ್ತೇವೆ. ಅದರಿಂದ ನಮಗೆ ಬೇರೆ ಜೀವನ ಮತ್ತು ಅದರ ಸಂಕೀರ್ಣತೆಯ ಅರಿವೂ ಆಗುತ್ತದೆ. ಆದರೆ ಕಾದಂಬರಿಯನ್ನು ಓದುವುದು ಅಥವಾ ಗ್ರಹಿಸುವುದು ಎಂದರೆ ಕಾದಂಬರಿಯು ಹೇಳುವ ಅನೇಕ ಸಂಗತಿಯನ್ನು ನಾವು ನಮ್ಮ ಅರಿವಿನ ಲೋಕಕ್ಕೆ ತಂದುಕೊಳ್ಳುವುದು ಎಂದೇ ಅರ್ಥ.

ಆದರೆ ನಾವು ಅನೇಕ ಕಾದಂಬರಿಯನ್ನು ಗ್ರಹಿಸುವಾಗ ಅದನ್ನು ಕೇವಲ ಮನೋರಂಜನೆಯ ಭಾಗವಾಗಿ ಮಾತ್ರವೇ ನೋಡುತ್ತೇವೆ. ಕಾದಂಬರಿಯೆನ್ನುವುದೇ ಮೂಲತಃ ಒಂದು ಚಾರಿತ್ರಿಕ ಮತ್ತು ಸಾಮಾಜಿಕ ಜೀವನದ ಭಾಗವಾಗಿ ಬರುವುದರಿಂದ ಅದರ ನಿರೂಪಣೆಯಲ್ಲಿ ಭಿನ್ನತೆಯು ಇರುತ್ತದೆ. ಕಾದಂಬರಿಯು ಒಂದು ಅರ್ಥದಲ್ಲಿ ಭಿನ್ನವಾದ ಮಾದರಿಯೂ ಹೌದು. ಅದರ ಸಾಧ್ಯತೆಯು ಬೇರೆಯಾಗುತ್ತದೆ. ಅದರ ರೂಪವೇ ಮೂಲಭೂತವಾಗಿ ಬಿನ್ನವಾದ ಪ್ರಕ್ರಿಯೆಯೂ ಹೌದು. ಕಾದಂಬರಿಯನ್ನು ನಾವು ಓದುವುದು ಅದರ ಕಥನ ಗುಣದ ಕಾರಣಕ್ಕಾಗಿ. ಆದರೆ ಅದನ್ನು ಓದುವಾಗ ನಮಗೆ ಅದು ನೀಡುವ ಜೀವನದ ದರ್ಶನವೂ ನಮಗೆ ಅಷ್ಟೇ ಮುಖ್ಯವಾಗುತ್ತದೆ. ಕಾದಂಬರಿಯು ಹೇಳುವ ಭಾಷೆಯು ಸುಲಭ ಸಂವಹನವೂ ಹೌದು. ಕಾದಂಬರಿಯು ರೂಪಿಸುವ ಸಂಕಥನವನ್ನು ನಾವು ಬೇರೆಯಾಗಿದೆ. ಕಲಾತ್ಮಕ ಭಾಷೆಯ ಪ್ರಶ್ನೆಯೆ ಮೂಲಭೂತವಾಗಿ ಬುದ್ಧಿಜೀವಿಗಳಿಗೆ ಸಂಬಂಧಪಟ್ಟದ್ದೂ ಹೌದು. ಅದು ಬೇರೆ ಪ್ರಶ್ನೆ. ಅವರು ಕಲಾತ್ಮಕತೆ, ಭಾಷೆಯ ಶೈಲಿ, ಭಾಷೆಯ ದಿಕ್ಪಲ್ಲಟ ಮುಂತಾದವುಗಳನ್ನು ಅವರು ಹೆಚ್ಚು ಬಳಸುತ್ತಾರೆ. ಕಾದಂಬರಿಕಾರರು ಮತ್ತೊಬ್ಬರು ಮಾತಾಡುವ ಭಾಷೆಯನ್ನು ಅಗತ್ಯಕ್ಕೆ ಸರಿಯಾಗಿ ಬಳಸುತ್ತಾರೆ. ಭಾಷೆ ಎನ್ನುವುದನ್ನು ಕಾದಂಬರಿಕಾರರು ಅನೇಕ ರೀತಿಯಲ್ಲಿ ಬಳಸುತ್ತಾರೆ. ಅದು ಅವರಿಗೆ ಅಗತ್ಯವೂ ಹೌದು. ಕಾದಂಬರಿಗೆ ಮಾತ್ರವೇ ಮೀಸಲಾದ ಭಾಷೆ ಎನ್ನವುದು ಇಲ್ಲ. ಅದನ್ನು ಹಾಗೆ ನೋಡಲು ಬರುವುದೂ ಇಲ್ಲ. ಕಾದಂಬರಿಯಲ್ಲಿ ನಾವು ಬಳಸುವ ಭಾಷೆಯನ್ನು ನೋಡುವಾಗ ಅದನ್ನು ಬೇರೆ ರೀತಿಯಲ್ಲಿಯೂ ಗ್ರಹಿಸಲು ಸಾಧ್ಯ. ಕಾದಂಬರಿಯ ಜಗತ್ತನ್ನು ವಾಸ್ತವದ ಜಗತ್ತಿನೊಂದಿಗೆ ನಾವು ತಳುಕು ಹಾಕುತ್ತೇವೆ. ಅದನ್ನು ನಿಜವೆಂದು ಭಾವಿಸುತ್ತೇವೆ. ಆದರೆ ಅದು ಲೇಖಕನ ದೃಷ್ಟಿಕೋನಕ್ಕೆ ಅನುಸಾರವಾಗಿ ಚಿತ್ರಿತವಾಗಿರುತ್ತದೆ. ಕಾದಂಬರಿಯೆನ್ನುವುದು ಅನೇಕರು ತಿಳಿದಂತೆ ಕೇವಲ ಕಥನವನ್ನು ಹೇಳುವ ಉದ್ದೇಶದಿಂದ ಮಾತ್ರವೇ ಹುಟ್ಟಿಲ್ಲ. ಅದರಾಚೆಗೂ ಅದರ ಕಾರ್ಯ ವ್ಯಾಪ್ತಿಯು ಇದೆ. ಕಾದಂಬರಿಯೆನ್ನುವುದು ಕೇವಲ ಭಾವನೆಗೆ ಮಾತ್ರವೇ ಸಂಬಂಧ ಪಟ್ಟಿಲ್ಲ. ಅದು ಒಂದು ವರ್ಗದ ಜೀವನದ ಕ್ರಮವನ್ನು ವಿವರಿಸುತ್ತದೆ. ಆದರೆ ಅದನ್ನು ನಾವು ನೋಡುವಾಗ ಸೀಮಿತವಾಗಿ ನೋಡುತ್ತೇವೆ. ಆದರೆ ಕಾದಂಬರಿಗಳು ಹೇಳುವ ಜಗತ್ತು ಒಬ್ಬನ ಗ್ರಹಿಕೆಗೆ ಮಾತ್ರವೇ ಸಂಬಂಧ ಪಟ್ಟಿಲ್ಲ. ಅದು ಪರಿವರ್ತನೆಯನ್ನು ದಾಖಲಿಸುತ್ತದೆ. ಅದರ ಆಯಾಮಗಳೂ ಕೂಡಾ ಭಿನ್ನವಾಗಿದೆ. ಲೇಖಕನ ಉದ್ದೇಶ ಮತ್ತು ಅವನ ಗ್ರಹಿಕೆಗಳು ಒಂದು ರೀತಿಯಲ್ಲಿ ಇರಲು ಸಾಧ್ಯ. ಲೇಖಕ ಉದ್ದೇಶವು ಕೃತಿಯಲ್ಲಿ ಹಾಜರಾಗುವುದಕ್ಕೆ ಕಾರಣವೂ ಇದೆ. ಅವನು ಹೇಗೆ ನೋಡುತ್ತಾನೆ ಮತ್ತು ಅವನ ಉದ್ದೇಶವೇನು ಎನ್ನವುದೇ ಬಹಳ ಮುಖ್ಯ. ನಾವು ಇದನ್ನು ಅಷ್ಟಾಗಿ ಗಮನಿಸುವುದೂ ಇಲ್ಲ. ಲೇಖಕನು ಯಾವುದನ್ನು ನೋಡುತ್ತಾನೆಯೋ ಅದನ್ನು ವಿವರಿಸುತ್ತಾನೆ. ಅದರಲ್ಲಿ ಅವನ ಗ್ರಹಿಕೆಯೆ ಪ್ರಧಾನವಾಗಿದೆ. ಕಾದಂಬರಿಯ ಧ್ವನಿ ಮತ್ತು ಅವನ ಉದ್ದೇಶವು ಜೊತೆಗೆ ಬರುತ್ತದೆ. ಅದು ಅವನ ನಿಲುವನ್ನು ಸೂಚಿಸುತ್ತದೆ. ಪ್ರತಿಯೊಂದು ಕೃತಿಯು ಕೂಡಾ ಭೂತಕಾಲದ ಸಂಗತಿಗಳನ್ನು ನಿರೂಪಿಸುತ್ತದೆ. ಕಾದಂಬರಿಯು ಹೇಳುವುದು ಕಳೆದು ಹೋದುದನ್ನು. ಆದರೆ ಅದು ಕಳೆದು ಹೋಗಿದೆ ಆದರೆ ಅದು ಮತ್ತೆ ಮುಂದಿನ ಸೂಚನೆಯನ್ನು ನೀಡುತ್ತದೆ. ಇದನ್ನೇ ಮತ್ತೆ ಹೇಳಬಹುದಾದ ಸಂಗತಿಯೆಂದರೆ

ಕಾದಂಬರಿಯು ನೀಡುವುದು ಮುಂದಿನ ಭವಿತ್ಯವದ ಸಂಗತಿಯನ್ನು. ಆದರೆ ಇದಕ್ಕೆ ವಿಶಿಷ್ಟವಾದ ಆಯಾಮವೂ ಇರುತ್ತದೆ. ಕಾದಂಬರಿಯು ಭಿನ್ನವಾದ ಸಂಕಥನವನ್ನು ಹೇಳುತ್ತದೆ. ಅದರ ಆಯಾಮವು ಭಿನ್ನವಾಗಿರುತ್ತದೆ. ಅದು ನಿರೂಪಣೆಗೆ ಸಂಬಂಧ ಪಟ್ಟಿದೆ. ಆದರೆ ಅದರದೇ ಆದ ವಿಶಿಷ್ಟವಾದ ಕಥನದ ಶೈಲಿಯೆಂದು ಹೇಳುತ್ತೇವೆ. ಆದರೆ ಇದನ್ನು ನಾವು ಭಾಷಿಕ ವಿಶಿಷ್ಟತೆ ಎಂದೂ ಹೇಳುತ್ತೇವೆ. ಕಾದಂಬರಿಗಳು ದಿನ ನಿತ್ಯದ ವಿವರಣೆಯನ್ನು ಭಾಷೆಯಲ್ಲಿ ನಿರೂಪಿಸುತ್ತವೆ. ಅವುಗಳಿಗೆ ಅವುಗಳದೇ ನಿರೂಪಣೆಯ ಕ್ರಮವು ಇದೆ ಎಂದ ಮಾತ್ರಕ್ಕೆ ಅವುಗಳು ಮತ್ತೆ ಏನೋ ಆಗಿರುತ್ತವೆ ಎಂದು ಹೇಳಲು ಬರುವುದಿಲ್ಲ. ಅಂದರೆ ಅದು ಕಾವ್ಯ ಅಲ್ಲ. ಅದು ಆಕರ್ಶಕ ಪದಗಳ ಗುಚ್ಚವೂ ಅಲ್ಲ. ಆದರೆ ಕಾದಂಬರಿಯು ಯಾವುದೇ ರೀತಿಯ ಲಯದ ವಿನ್ಯಾಸಗಳನ್ನು ಹೊಂದಿಲ್ಲವೆನ್ನುವುದರಿಂದ ಅದನ್ನು ಸಾಹಿತ್ಯವೇ ಅಲ್ಲವೆಂದು ಹೇಳಲು ಬರುವುದೂ ಇಲ್ಲ. ಕಾದಂಬರಿಯು ಯಾವಾಗಲೂ ವರ್ತಮಾನದ ವಿಷಯಗಳಿಗೆ ಸಂಬಂಧ ಪಟ್ಟಕೊಂಡೇ ವಿವರಣೆಯನ್ನು ಹೇಳುತ್ತದೆ ಎಂದು ಭಾವಿಸಬೇಕಾಗಿಲ್ಲ. ಕಾದಂಬರಿಯೆನ್ನವುದು ಮೂಲಭೂತವಾಗಿ ಅನೇಕ ವಿಷಯಗಳನ್ನು ವಿವರಿಸುತ್ತದೆ. ಆದರೆ ಅದನ್ನು ನಾವು ಹೀಗೂ ಹೇಳಬಹುದು – ಕಾದಂಬರಿಯು ತನ್ನ ಕಥನದ ಮಾದರಿಯಲ್ಲಿಯೇ ಚರಿತ್ರೆಗೆ ಸ್ಪಂದಿಸುತ್ತದೆ. ಆದ್ದರಿಂದ ಅದರ ಆಯಾಮಗಳು ಬೇರೆ. ಕತೆ ಮತ್ತು ಚರಿತ್ರೆಯ ಸಂಗತಿಗಳು ಜೊತೆಗೆ ಇರುತ್ತದೆ. ಅದು ಅದರ ಅಗತ್ಯವೂ ಆಗಿರುತ್ತದೆ. ಮಲೆನಾಡಿನ ಒಂದು ಕಾಲದ ಚರಿತ್ರೆ ಇದರಲ್ಲಿ ಅನಾವರಣವಾಗುತ್ತದೆ.

ವಾಸ್ತವವಾದವಂತೂ ಚರಿತ್ರೆಗೆ ಪ್ರತಿಕ್ರಿಯಿಸುವ ವಿಧಾನವು ಭಿನ್ನವಾಗಿದೆ. ಅದು ದಿನ ನಿತ್ಯದ ಸಂಗತಿಗಳನ್ನು ಹೇಳುತ್ತದೆ. ಕಾದಂಬರಿಯು ಹೇಳುವ ಅನೇಕ ಸಂಗತಿಗಳನ್ನು ಸಾಹಿತ್ಯದ ಪ್ರತ್ಯೇಕತೆ ಎಂದು ಹೇಳಲು ಬರುವುದೂ ಇಲ್ಲ. ಕಾದಂಬರಿಯ ನಿರೂಪಣೆಯ ಕ್ರಮ ಅಥವಾ ಅದರ ಶೈಲಿಯನ್ನು ನಾವು ಉದ್ದೇಶ ರಹಿತವೆಂದು ಹೇಳುವಂತೆ ಇಲ್ಲ. ಯಾವುದನ್ನು ನಾವು ಭಾಷಿಕ ಅಸ್ತಿತ್ವವೆಂದು ಹೇಳುತ್ತೇವೆಯೋ ಅದರ ಸ್ವರೂಪವು ಇರುವುದು ವಾಸ್ತವಕ್ಕೆ ಪ್ರತಿಕ್ರಿಯಿಸುವ ವಿಧಾನದಲ್ಲಿ. ಭಾಷೆ ಮತ್ತು ಶೈಲಿಯನ್ನು ಕಾದಂಬರಿಯ ಸಂದರ್ಭದಲ್ಲಿ ಬೇರೆಯಾಗಿ ನೋಡಬಹುದಾದರೂ ಅದು ಕೂಡಾ ತಾತ್ವಿಕತೆಯನ್ನು ಹೊರತುಪಡಿಸಿದ್ದು ಎಂದು ಭಾವಿಸಬೇಕಾಗಿಲ್ಲ. ಅದಕ್ಕೂ ಅದರ ಕಾರಣವು ಇದ್ದೇ ಇರುತ್ತದೆ. ಕಾದಂಬರಿಯ ಶೈಲಿಯು ಮೂಲಭೂತವಾಗಿ ಸಂಕಥನವನ್ನು ಸೂಚಿಸುತ್ತದೆ. ಆದರೆ ಈ ಸಂಕಥನವನ್ನು ನಾವು ತಾತ್ವಿಕತೆಯೊಂದಿಗಿನ ಮುಖಾಮುಖಿ ಎಂದು ಹೇಳಬೇಕಾಗುತ್ತದೆ. ಲೇಖಕನು ನಿರೂಪಣೆಯಲ್ಲಿ ಭಾಗವಹಿಸುವ ಕ್ರಮವು ಬೇರೆ. ಆಂತರಿಕ ಕಾರಣಕ್ಕಾಗಿಯೇ ಈ ಕಾದಂಬರಿಯು ವಿಶಿಷ್ಟವೆಂದು ಅನಿಸುತ್ತದೆ.

ಕಾದಂಬರಿಯು ಭಾಷೆಯುನ್ನು ಲೇಖಕ ಉದ್ದೇಶದ ಹಿನ್ನೆಲೆಯುಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕಾದಂಬರಿಯ ಭಾಷೆಯು ತನ್ನ ಅಗತ್ಯಕ್ಕೆ ಅನುಸಾರವಾಗಿ ರೂಪುಗೊಳ್ಳುತ್ತದೆ. ಮತ್ತು ಅದನ್ನು ನೋಡುವಾಗ ಭಾಷೆ ಮತ್ತು ಅದರ ಆಂತರಿಕ ತರ್ಕಗಳನ್ನು ಗಮನಿಸುವುದು ಅಗತ್ಯವೂ ಆಗಿದೆ. ಯಾವುದೇ ಕಾದಂಬರಿಯ ಭಾಷೆಯನ್ನು ನೋಡಿ

ಅದನ್ನು ನಾವು ಅಥೆಂಟಿಕ್ ಅಥವಾ ಅನ್ ಅಥೆಂಟಿಕ್ ಎಂದು ಹೇಳಬೇಕಾದ ಅಗತ್ಯವೂ ಇಲ್ಲ. ಕಥನ ಮತ್ತು ಅದರ ಮೌಲ್ಯವನ್ನು ನೋಡಿಕೊಂಡು ನಾವು ಯಾವುದೇ ನಿರ್ಧಾರ ಮಾಡಬೇಕೇ ವಿನಃ ಮತ್ತೆ ಯಾವುದೇ ಕಾರಣದಿಂದ ಅಲ್ಲ. ನಮ್ಮ ಸಾಮಾಜಿಕ ಜೀವನದಲ್ಲಿ ಹೇಗೆ ಅನೇಕ ಭಾಷಿಕ ಚಹರೆಗಳು ಇವೆಯೋ ಅದೇ ರೀತಿಯಲ್ಲಿ ಕಾದಂಬರಿಯ ಭಾಷೆಯೂ ಇರುತ್ತದೆ. ಅನೇಕತೆ, ಅದರ ಸಂಯೋಜನೆ, ಅದರ ಅನುಕ್ರಮತೆಯೇ ಕಾದಂಬರಿಯಲ್ಲಿ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ಬಹುಭಾಷೆಯನ್ನು ಕಾದಂಬರಿಯು ಒಂದು ಕೇಂದ್ರಕ್ಕೆ ತಂದು ನಿಲ್ಲಿಸುತ್ತದೆ. ಆದರೆ ಇದನ್ನು ನಾವು ನೋಡುವಾಗ ಎಚ್ಚರದಲ್ಲಿ ಇರುವುದೂ ಅಗತ್ಯವೂ ಆಗಿದೆ. ಯಾಕೆಂದರೆ ಕಾದಂಬರಿ ಈ ವಿಷಯಗಳನ್ನು ನಾವು ಕೇವಲ ಒಳಗಿನ ಕಾರಣಕ್ಕೆ ಮಾತ್ರವೇ ನೋಡಿದರೆ ಅದು ರೂಪನಿಷ್ಟರ ನಿಲುವೂ ಆಗುತ್ತದೆ. ಕಾದಂಬರಿಯಲ್ಲಿ ಭಾಷೆಯ ಸಂಕರತೆಯು ಇರುತ್ತದೆ. ಮತ್ತೊಂದು ಅನುಕ್ರಮತೆಯನ್ನು ಕಾಪಾಡುತ್ತದೆ. ಮೂರನೆಯದಾಗಿ ಅದರಲ್ಲಿ ವಿಭಿನ್ನವಾದ ಸಂಯೋಜನೆಯೂ ಇರುತ್ತದೆ. ಕಾದಂಬರಿಯ ಭಾಷೆಯು ಹೆಚ್ಚು ಸಮ್ಮಿಶ್ರವಾಗಿರುತ್ತದೆ. ಅದು ಅದರ ನಿರೂಪಣೆಗೆ ಅಗತ್ಯವಾಗಿರುತ್ತದೆ. ಹಾಗೂ ಕಾದಂದಬರಿಯ ಭಾಷೆಯನ್ನು ನಾವು ಹೇಗೆ ನೋಡಬೇಕು ಎನ್ನವುದಕ್ಕೆ ರೂಪನಿಷ್ಟ ಒಂದು ವಾದವನ್ನು ಇಡುತ್ತಾರೆ. ಆದರೆ ಅವರು ಹೇಳಿದ ರೀತಿಯಲ್ಲಿಯೇ ಕಾದಂಬರಿಯ ಆಂತರಿಕ ಸ್ವರೂಪವಿರುವುದಿಲ್ಲ. ಆದನ್ನು ಕೃತಿಯ ತಾತ್ಕಲಿಕ ಅಗತ್ಯವೆಂದೂ, ಅದರ ಮಾತುಗಳು ಕಾದಂಬರಿಯ ರೂಪವನ್ನು ನಿರ್ಧರಿಸುತ್ತದೆ ಎಂದೂ ಹೇಳಲು ಬರುವುದಲ್ಲ. ಈ ಕಾದಂಬರಿಯನ್ನು ಓದುವಾಗ ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಕಾದಂಬರಿಯು ವಾಸ್ತವವಾಗಿ ಭಾಷೆಯನ್ನು ಬಳಸುವುದೇ ಅನೇಕತೆಯನ್ನು ಸೂಚಿಸಲು. ಕೇವಲ ಕಲಾತ್ಮಕತೆಯ ಕಾರಣಕ್ಕಾಗಿಯೇ ಕಾದಂಬರಿಯಲ್ಲಿ ಅನೇಕ ಭಾಷಿಕ ಚಹರೆಗಳನ್ನು ನಾವು ಬಳಸುವುದೂ ಇಲ್ಲ. ಭಾಷೆಯ ಅನೇಕತೆಯು ಕಾದಂಬರುಯ ಅಗತ್ಯವೂ ಆಗಿರುತ್ತದೆ. ಮತ್ತು ಅದರ ಹಿಂದೆ ನಿರ್ದಿಷ್ಟವಾದ ಉದ್ದೇಶವೂ ಇರುತ್ತದೆ. ಅನೇಕತೆಯ ಕಾದಂಬರಿಯಲ್ಲಿ ಬರುವುದೇ ಅದರ ಹೀಂದೆ ಇರುವ ಆಶಯದ ಕಾರಣಕ್ಕಾಗಿ. ಮತ್ತು ಅದನ್ನು ನಾವು ನೋಡುವಾಗ ಅದನ್ನು ವೈವಿಧ್ಯತೆಯೆಂದೇ ಪರಿಗಣಿಸಬೇಕಾಗುತ್ತದೆ. ಅನೇಕ ರೀತಿಯ ಭಾಷೆಯನ್ನು ಬಳಸುವುದಕ್ಕೆ ನಾವು ಕಾದಂಬರಿಯ ಭಾಷಿಕ ಸಂಕರವೆಂದು ಹೇಳಬಹುದು ಎಂದು ಭಕ್ತಿನ್ ಹೇಳುತ್ತಾನೆ. ಕಾದಂಬರಿಯ ಭಾಷೆಯು ಆಗಾಗ ಬದಲಾಗುತ್ತಾ ಬಂದಿದೆ. ಅದನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಕಾಣಬಹುದು ಎಂದು ಅವನು ಮತ್ತೊಂದು ಕಡೆಗೆ ಹೇಳುತ್ತಾನೆ. ಬಹುಭಾಷೆಯೇ ಕಾದಂಬರಿಯಲ್ಲಿ ಬಹಳ ಮುಖ್ಯವೆಂದೂ ಅದುವೇ ಕಾದಂಬರಿಯ ಸಂಕಥನವನ್ನು ಪ್ರಾರಂಬಿಸುತ್ತದೆ ಎಂದೂ ಹೇಳಬಹುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಈ ಕಾದಂಬರಿಯು ಒಳಗೊಳ್ಳುವ ಸಾಹಿತ್ಯದ ಭಾಷೆ ಎನ್ನುವುದೇ ಮೂಲಭೂತವಾಗಿ ಸಾಮಾಜಿಕ ಭಾಷೆಯೇ ಆಗಿರುತ್ತದೆ. ಅದು ರಚಿತವಾಗಿದೆ. ಮತ್ತು ಅದು ಕಂಪೋಸ್ ಆಗಿದೆ. ಭಾಷಿಕ ಸಂಕರತೆಯೇ ಕಾದಂಬರಿಯನ್ನು ಒಂದು ಚೌಕಟ್ಟಿಗೆ ತಂದು ನಿಲ್ಲಿಸುತ್ತದೆ. ಆದರೆ ಅದನ್ನು ನೋಡುವಾಗ ಅದು ನಿಜವಾಗಿದೆಯೋ ಅಥವಾ ಬೇರೆ ರೀತಿಯಲ್ಲಿ ಇದೆಯೋ ಎಂದು

ಪರಿಶೀಲಿಸುವುದೂ ಅಷ್ಟೇ ಆಗತ್ಯವೂ ಹೌದು. ಐತಿಹಾಸಿಕ ಕಾದಂಬರಿಗಳು ಇತಿಹಾಸವನ್ನು ನೋಡುವ ಕ್ರಮವು ಬೇರೆ. ಅದು ಗತವನ್ನು ಹೇಳುತ್ತದೆ. ಮತ್ತು ಅದರ ಹಿಂದೆ ಗತದ ಕುರಿತಾದ ಭ್ರಮೆಯೂ ಇರುತ್ತದೆ. ಹೀಗಿದ್ದರೂ ಕಾದಂಬರಿಯು ಹೇಳುವ ಸಂವಾದಗಳನ್ನು ನಾವು ಅನೇಕವಾಗಿದೆ ಎನ್ನುವುದನ್ನು ಮರೆಯಲಾಗುವುದಿಲ್ಲ. ಕಾದಂಬರಿಯನ್ನು ಓದುವಾಗ ನಾವು ಯಾವುದನ್ನು ಅಂಗೀಕರಿಸುತ್ತೇವೆ ಎನ್ನವುದೂ ಮೂಲಭೂತವಾದ ಪ್ರಶ್ನೆ. ಆದರೆ ಈ ಕುರಿತು ನಾವು ಬೇರೆ ರೀತಿಯಲ್ಲಿಯೂ ಯೋಚನೆಯನ್ನು ಮಾಡಬೇಕಾಗುತ್ತದೆ. ಕಾದಂಬರಿಯ ವಸ್ತು ಮತ್ತು ಅದರ ವಿವರಗಳು ಮುಖ್ಯವಾಗುತ್ತದೆಯೇ ಅಥವಾ ಅದರ ನಿರೂಪಣೆಯೇ ಎನ್ನವುದು ಸಮಸ್ಯಾತ್ಮಕ. ಆದ್ದರಿಂದ ಅದನ್ನು ನಾವು ಬೇರೆ ರೀತಿಯಲ್ಲಿಯೇ ನೋಡಬೇಕಾಗುತ್ತದೆ. ಅದರ ಅಗತ್ಯವೂ ಇದೆ. ಯಾವುದೇ ಕಾದಂಬರಿಯನ್ನು ಓದಿದರೂ ನಾವು ಮೊದಲು ನೋಡುವುದು ಅದರ ಆಶಯವನ್ನೇ ಮತ್ತೆ ಬೇರೆ ಯಾವುದನ್ನೂ ಅಲ್ಲವೆನ್ನವುದು ಬಹಳ ಮುಖ್ಯವಾದ ನಿಲುವಾಗಿದೆ. ಅನೇಕರು ಹೇಳಿರುವಂತೆ ಒಬ್ಬ ಲೇಖಕನು ಯಾವ ರೀತಿಯಲ್ಲಿ ಹೇಳುತ್ತಾನೆ ಎನ್ನವುದು ಮಾತ್ರವೇ ಮುಖ್ಯವಾಗುವುದಿಲ್ಲ. ಯಾವುದೇ ಕಲಾಕೃತಿಗೆ ಸಾಮಾಜಿಕ ಅರ್ಥವಂತಿಕೆಯು ಇದ್ದೇ ಇರುತ್ತದೆ. ಆದರೆ ಇದನ್ನು ನೋಡುವುದು ಎಂದರೆ ಕಲಾಕೃತಿಯ ರೂಪವೂ ಕೂಡಾ ಚರ್ಚೆಗೆ ಒಳಗಾಗುವುದು ಅನಿವಾರ್ಯವೂ ಹೌದು. ಸಾಹಿತ್ಯವನ್ನು ಸಾಮಾಜಿಕತೆಯಿಂದ ಬೇರೆ ಎಂದು ತಿಳಿಯುವುದು ಎಂದರೆ ಇದನ್ನು ಭಿನ್ನವಾಗಿ ಗ್ರಹಿಸುವುದೂ ಹೌದು. ಯಾಕೆಂದರೆ ಅನೇಕ ವಿಮರ್ಶಾ ಪಂಥಗಳು ಕಾದಂಬರಿಯನ್ನು ನೋಡುವಾಗ ಕಾದಂಬರಿಯ ವಸ್ತು ಮತ್ತು ಅದರ ಸಾಧ್ಯತೆಯನ್ನು ಮಾತ್ರವೇ ಒಂದು ಚೌಕಟ್ಟಿನಲ್ಲಿ ಮಾತ್ರವೇ ಗ್ರಹಿಸುವುದು ಎಂದು ಭಾವಿಸುತ್ತಾರೆ. ಆದರೆ ಕಾದಂಬರಿಯು ಈ ರೀತಿಯಲ್ಲಿ ಮಾತ್ರವೇ ಅಸ್ತಿತ್ವವನ್ನು ಪಡೆದಿದೆ ಎಂದು ಭಾವಿಸಬೇಕಾಗಿಲ್ಲ. ಕಲೆಗೆ ಸಾಮಾಜಿಕ ಆವಶ್ಯಕತೆಯು ಇದ್ದೇ ಇರುತ್ತದೆ. ಕುವೆಂಪು ಮಲೆನಾಡಿನ ಸಮಾಜವನ್ನು ತೆರೆದಿಡುತ್ತಾರೆ.

ನಮಗೆ ಯಾವುದೇ ಆವಶ್ಯಕತೆಯು ಇಲ್ಲದೇ ಹೋಗಿದ್ದರೆ ನಾವು ಕಾದಂಬರಿಯೆಂಬ ಪ್ರಕಾರವನ್ನು ಸ್ವೀಕರಿಸಿಲು ಹೋಗುತ್ತಿರಲಿಲ್ಲ. ಆದರೆ ಕಾದಂಬರಿಯನ್ನು ನಾವು ನೋಡುವಾಗ ಅದರ ಹಿಂದೆ ಇರುವ ಸಾಮಾಜಿಕ ಒತ್ತಾಯವನ್ನು ಗಮನಿಸಬೇಕಾಗುತ್ತದೆ. ಅದು ಅಗತ್ಯವೂ ಹೌದು. ಆದರೆ ಯಾವಾಗ ಇದನ್ನು ಅರ್ಥ ಮಾಡಲು ಹೋಗುವುದೇ ಇಲ್ಲವೋ ಆಗ ಅದರ ಪ್ರಸ್ತುತತೆಯು ಗೌಣವಾಗಿ ಅದರ ಸೌಂದರ್ಯ ಮತ್ತು ಅದರ ಶಿಲ್ಪ ಮತ್ತು ಬಂಧದ ಪ್ರಶ್ನೆಯು ಮುಂದಕ್ಕೆ ಬರುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯನ್ನು ನಾವು ಓದುವುದು ಬರೀ ಒಂದು ಮನೋರಂಜನೆಗಾಗಿ ಎಂದು ಭಾವಿಸುವುದು ಅಗತ್ಯವೂ ಇಲ್ಲ. ಆಶಯವನ್ನು ಆಧರಿಸಿಕೊಂಡು ಸಾಹಿತ್ಯವನ್ನು ವರ್ಗೀಕರಿಸುವುದು ಒಂದು ಕ್ರಮ. ಅದನ್ನು ನೋಡುವಾಗ ಅದರ ಆಶಯವು ಯಾವ ಬಗೆಯದು ಎನ್ನುವುದನ್ನು ನಾವು ಗ್ರಹಿಸಬೇಕಾದ ಅಗತ್ಯವೂ ಇದೆ. ಆಶಯ ಮತ್ತು ಜೀವನದ ದೃಷ್ಟಿಕೋನಗಳಿಗೆ ಒಂದು ಸಂಬಂಧವಿದೆ. ಸಮಾಜ ಮತ್ತು ಆರ್ಥಿಕತೆಯು ಜೀವನದ ದೃಷ್ಟಿಕೋನವನ್ನು ಸೂಚಿಸುತ್ತದೆ. ಸಾಹಿತ್ಯವನ್ನು ನಾವು ಒಂದು ಅರ್ಥದಲ್ಲಿ ಬಾಹ್ಯ ರಚನೆಯೆಂದು ಹೇಳಿದರೆ ಅದನ್ನು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಯಾವುದೇ ಸಾಹಿತ್ಯವನ್ನು ನಾವು ಸಾಮಾಜಿಕ ಹಿನ್ನೆಲೆಯಿಂದಲೇ

ನೋಡಬೇಕಾಗುತ್ತದೆ. ಹಾಗೆಂದು ಇಡೀ ಸಾಮಾಜಿಕ ಜೀವನವನ್ನು ಸಾಹಿತ್ಯವೇ ವ್ಯಾಖ್ಯಾನಿಸುತ್ತದೆ ಎಂದು ಹೇಳುವುದು ಅಸಾಧ್ಯ. ಸಾಹಿತ್ಯವೆನ್ನುವುದು ಧಾರ್ಮಿಕ ಗ್ರಂಥವೂ ಅಲ್ಲ. ಅದು ಪ್ರತಿನಿಧಿಸುವುದು ಕೆಲವು ಪ್ರಾತಿನಿಧಿಕ ಅಂಶಗಳನ್ನು ಮಾತ್ರವೇ. ಅದರಲ್ಲಿ ಬೇರೆ ಬೇರೆ ಮಾದರಿಗಳು ಇರುತ್ತವೆ. ಅವುಗಳಿಗೆ ಸಾಮಾಜಿಕ ತಾತ್ವಿಕತೆಯೂ ಇರುತ್ತದೆ. ಮತ್ತು ಅವುಗಳನ್ನು ನೋಡುವುದು ಎಂದರೆ ಜೀವನದ ಕೆಲವು ಅಂಶಗಳನ್ನು ಮಾತ್ರವೇ ನೋಡುವುದು. ಕಾದಂಬರಿಯೆನ್ನುವುದು ಜೀವನದ ಅನೇಕ ಮುಖಗಳನ್ನು ವಿವರಿಸುತ್ತದೆ. ಕಾದಂಬರಿ ಮತ್ತು ಅದರ ಸಾಧ್ಯತೆಯು ಬೇರೆಯಾಗಿರುತ್ತದೆ. ಅದನ್ನು ನೋಡುವಾಗ ಮತ್ತೆ ನಾವು ವಿವರಿಸಬೇಕಾದ್ದು ಮಹಾಕಾವ್ಯವನ್ನು. ಅದು ಸಾಮಾಜಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸಿತ್ತು. ಅದು ಮನುಷ್ಯರು ಸಮಾಜವನ್ನು ವಿಶಿಷ್ಟವಾಗಿಯೇ ನಿರೂಪಿಸಿತ್ತು. ಅದರಲ್ಲಿ ಒಂದು ಸಮಾಜದ ಅನೇಕ ಗುಣಗಳನ್ನು ನಾವು ಕಾಣಬಹುದು. ಈ ದೃಷ್ಟಿಯಿಂದ ಮಹಾಕಾವ್ಯದ ಸಂಕಥನವು ಭಿನ್ನವಾಗಿದೆ. ಅದರಲ್ಲಿ ಉಳಿದ ಪ್ರಕಾರಕ್ಕಿಂತ ಬೇರೆಯಾದ ಗುಣವಿದೆ. ಅದರಲ್ಲಿ ಯಾವುದೇ ಒಬ್ಬ ವ್ಯಕ್ತಿಯು ಮುಖ್ಯವಲ್ಲ. ಅದು ಕಟ್ಟುವ ಪ್ರತೀಕಗಳೇ ಬೇರೆ. ಅದರ ಸ್ವರೂಪವೂ ಭಿನ್ನ. ಕಾಲ ಮತ್ತು ಅದರ ಉದ್ದೇಶಗಳೇ ಭಿನ್ನವಾಗಿದೆ. ಅದರ ಹಿನ್ನೆಲೆಯಲ್ಲಿ ಸಾಮಾಜಿಕ ಏಳುಬೀಳುಗಳ ವಿಚಾರಗಳೂ ಇರುತ್ತವೆ.

ಈ ಕಾದಂಬರಿ ಮತ್ತು ಅದರ ಸ್ವರೂಪವು ಹೀಗೆ ಬೇರೆಯಾಗುತ್ತದೆ. ಕಾದಂಬರಿಯು ಹೇಗೆ ಭಿನ್ನವಾಗಿದೆ ಮತ್ತು ಅದರಲ್ಲಿ ಲೇಖಕನ ಪಾತ್ರವು ಏನಾಗಿರುತ್ತದೆ ಎನ್ನುವುದೂ ಒಂದು ಪ್ರಶ್ನೆ. ಅಭಿವ್ಯಕ್ತಿ ಮತ್ತು ಅದರ ಪ್ರಾತಿನಿಧಿಕತೆಗೆ ಇಲ್ಲಿ ಪ್ರಾಶಸ್ತ್ಯವು ಇದ್ದೇ ಇರುತ್ತದೆ. ಲೇಖಕ ಮತ್ತು ಅವನ ಜಾಗವು ಇಲ್ಲಿ ಜಿಜ್ಞಾಸೆಗೆ ಗುರಿಯಾಗುತ್ತದೆ. ಲೇಖಕನನ್ನು ಬಿಟ್ಟ ಕಾದಂಬರಿ ಮತ್ತು ಅದರ ಶೈಲಿ ಎಂದು ಹೇಳಲಾಗುವುದೇ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆ. ಕಾದಂಬರಿ ಮತ್ತು ಅದರ ಶೈಲಿ ಎಂದು ಹೇಳುವಾಗ ನಮಗೆ ಮತ್ತೊಂದು ಅಂಶವು ಹೆಚ್ಚು ಮುಖ್ಯವಾಗುತ್ತದೆ. ಕಾದಂಬರಿ ಮತ್ತು ಅದರ ಶೈಲಿಯನ್ನು ನೋಡುವಾಗ ಅದರ ಪರಿಣಾಮವು ಏನು ಎಂದೂ ಗಮನಿಸಬೇಕಾಗುತ್ತದೆ.

ಇದರ ಶೈಲಿಯನ್ನು ನೋಡುವಾಗ ನಾವು ಅದರ ವಿಶಿಷ್ಟತೆಯು ಈ ಸನ್ನಿವೇಶದಲ್ಲಿ ಏನು ಎಂದು ಗುರುತಿಸಬೇಕಾಗುತ್ತದೆ. ಕಾದಂಬರಿಯ ಶೈಲಿ ಮತ್ತು ಅದರ ಹಿಂದೆ ಇರುವ ಸನ್ನಿವೇಶವು ಅತ್ಯಂತ ಮುಖ್ಯ. ಚರಿತ್ರೆಗೆ ಮತ್ತು ಶೈಲಿಗೆ ಒಂದು ಸಂಬಂಧವು ಇದೆ. ಆದ್ದರಿಂದ ಕಾದಂಬರಿಯ ಶೈಲಿ ಎಂದರೆ ಅದು ನಿರ್ವಾತದ ಸಂಗತಿಯು ಅಲ್ಲ. ಕಾದಂಬರಿಯಲ್ಲಿ ಬರುವ ಶೈಲಿಯ ಪ್ರಶ್ನೆಯು ಯಾವತ್ತೂ ಪದ ಮತ್ತು ವಾಕ್ಯಗಳ ಸಮಸ್ಯೆಯು ಅಲ್ಲ. ಯಾವ ಪದವನ್ನು ಒಬ್ಬ ಲೇಖಕ ಹೇಗೆ ಬಳಸುತ್ತಾನೆ ಎನ್ನುವುದು ಮಾತ್ರವೇ ಶೈಲಿ ಎಂದು ಆಗುವುದಿಲ್ಲ. ಅದು ಅಭಿವ್ಯಕ್ತಿಯನ್ನು ಕೂಡಾ ಹೇಳುತ್ತದೆ. ಅದರ ಜೊತೆಗೆ ಅದರ ಹಿಂದೆ ಇರುವ ಆಲೋಚನೆಯ ಪಂಥದ ಪ್ರಶ್ನೆಯೂ ಆಗುತ್ತದೆ. ನಾವು ಕುವೆಂಪು ಮತ್ತು ಅನಂತ ಮೂರ್ತಿಯವರ ಕಾದಂಬರಿಗಳಲ್ಲಿ ಶೈಲಿಯಲ್ಲಿ ಬರುವ ವ್ಯತ್ಯಾಸವು ಬರೀ ವ್ಯಕ್ತಿಗಳ ಅಭಿವ್ಯಕ್ತಿಯ ಪ್ರಶ್ನೆಗಳು ಅಲ್ಲ. ವ್ಯಕ್ತಿ ಮತ್ತು ಅವನ ಆಲೋಚನೆ, ಅವನ ಹಿಂದೆ ಇರುವ ಆಲೋಚನೆಯ ಪಂಥ, ವ್ಯಕ್ತಿತ್ವದ ಪ್ರಶ್ನೆ, ಆಯಾ ಕಾಲದ ಶೈಲಿಗಳು ಹಾಗೂ ಸಾಹಿತ್ಯ ಮತ್ತು ಅದರ ಸೌಂದರ್ಯದ ಪ್ರಶ್ನೆಗಳು ಇರುತ್ತವೆ. ಒಂದು

ಕಾಲದಲ್ಲಿ ಯಾವ ಶೈಲಿಯು ಇರುತ್ತದೆಯೋ ಪರಿಣಾಮಗಳು ಒಂದು ಪ್ರಕಾರದಮೇಲೆ ಪ್ರಭಾವವನ್ನು ಬೀರುತ್ತವೆ. ನಾವು ಈ ಅಂಶಗಳನ್ನು ನಿರಾಕರಿಸುವಂತಿಲ್ಲ. ಕಾರಂತರ ವಾಸ್ತವತೆಯು ಬಿರುಕು, ಗತಿಸ್ಥಿತಿ, ವಿಕ್ಷೇಪದಲ್ಲಿ ಕಾಣುವುದಿಲ್ಲ. ಕಾರಂತರಿಗೆ ಸಂಕೇತವಾದ ಮತ್ತು ಕಥನದ ತಂತ್ರಗಳು ಮುಖ್ಯವಾಗಲಿಲ್ಲ. ನಾವು ನಮ್ಮ ಚರಿತ್ರೆಯನ್ನು ಹೇಳುವಾಗ ಅದರಲ್ಲಿ ಯಾವ ಧ್ವನಿಯು ಇರುತ್ತದೆ ಎಂದೂ ನೋಡಬೇಕಾಗಿರುತ್ತದೆ. ಚರಿತ್ರೆಯನ್ನು ಬರೆಯುವವರು ಚಾರಿತ್ರಿಕ ಘಟನೆಗಳನ್ನು ಶ್ರೇಣೀಕರಣ ಮಾಡುತ್ತಾರೆ. ಯಾವುದನ್ನು ನಾವು ಮೊದಲು ಹೇಳಬೇಕು ಮತ್ತು ಯಾವುದನ್ನು ಗಂಭೀರವಾಗಿ ಪರಿಗಣಿಸಬಾರದು ಎಂದು ಅವರೇ ತೀರ್ಮಾನವನ್ನು ಮಾಡುತ್ತಾರೆ. ಅದ್ದರಿಂದ ಚರಿತ್ರೆ ಮತ್ತು ಅದರ ಕಥನಗಳು ಒಬ್ಬ ಚರಿತ್ರೆ ಮತ್ತು ಅದರ ಪಠ್ಯಗಳು ತಮ್ಮದೇ ಆದ ಒಂದು ಪಾತ್ರವನ್ನು ವಹಿಸುತ್ತದೆ ಎಂದು ಇತಿಹಾಸಕಾರರು ಯಾವುದನ್ನು ಬರೆಯಲಾಗಿದೆ ಅದನ್ನು ದಾಖಲೆ ಎಂದು ಹೇಳುತ್ತೇವೆ. ಅದರಲ್ಲಿ ಕೆಲವು ಪರಿಕರಗಳೂ ಇರಬಹುದು.ನಾವು ಯಾವುದೇ ಸಾಹಿತ್ಯದ ಕೃತಿಗಳನ್ನು ನೋಡಿದರೂ ಅದರ ಸ್ವರೂಪವು ಅತ್ಯಂತ ಸಲೀಸಾಗುವಂತೆ ಬರೆಯಲಾಗಿದೆ ಎಂದು ಹೇಳುವಂತೆ ಇಲ್ಲ. ಇದರಲ್ಲಿಯೂ ಸ್ಥಳ ಎನ್ನುವುದು ಹೇಗೆ ಬರುತ್ತದೆ ಮತ್ತು ಅದರ ಅಗತ್ಯವು ಏನು ಎನ್ನುವುದನ್ನು ನಮಗೆ ಅನೇಕ ಕಾದಂಬರಿಗಳು ಹೇಳುತ್ತವೆ. ಅದು ಅತ್ಯಂತ ವಿಶಿಷ್ಟವಾದ ಸಂಯೋಜನೆಯೂ ಹೌದು.. ಜೀವನ ಮತ್ತು ಅದರ ಮಹತ್ವ ಏನು ಎನ್ನುವುದನ್ನು ಕನ್ನಡದ ಅನೇಕ ಲೇಖಕರು ನಮಗೆ ಸೂಚಿಸುತ್ತಾರೆ. ನಮ್ಮ ಜೀವನ ಎಂದರೆ ಏನು, ಅದರ ಅರ್ಥವೇನು, ನಮಗೆ ಯಾವುದರ ಅಗತ್ಯವಿದೆ ಮುಂತಾದ ಪ್ರಶ್ನೆಗಳನ್ನು ಕಾರಂತರು, ತೇಜಸ್ವಿ, ಲಂಕೇಶರಂಥ ಲೇಖಕರು ಹೇಳಿದ್ದಾರೆ. ಜೀವನ ಮತ್ತು ಅದರ ಸಾರವು ಏನು ಎನ್ನುವುದನ್ನು ಲೇಖಕರು ಹೇಳುತ್ತಾರೆ. ಜೀವನದ ಸಾರ ಮತ್ತು ಅದರ ಸತ್ವವನ್ನು ಪಂಪನೂ ಹೇಳುತ್ತಾನೆ.

ವಾಸ್ತವವಾಗಿ ಕನ್ನಡದ ಚಂಪೂ ಕಾವ್ಯಗಳು ಜೀವನದ ಸಾರ ರೂಪವನ್ನು ಹೇಳಿದರು. ಅದರ ಜೊತೆಗೆ ನಾವು ಯಾವ ರೀತಿಯಲ್ಲಿ ಜೀವನವನ್ನು ಸಾಗಿಸಬೇಕು ಎಂದು ವಿವರಿಸಿದರು. ಮನುಷ್ಯ ಮತ್ತು ಅವನ ಮನೋಸ್ಥಿತಿ , ಚರಿತ್ರೆಯ ವಿವಿಧ ಆಯಾಮಗಳು ಪಂಪನ ಮಹಾಕವಿಯಲ್ಲಿ ಕಾಣುತ್ತದೆ. ಅವನು ಅನಂಗ. ಜಂಗಮ, ಲತೆ, ಲತಾಂಗಿಯರ ಜೊತೆಗೆ ಇರುವ ಜೀವನವೇ ಸಂಸಾರ ಸಾರೋದಯ ಎಂದು ತಿಳಿಯುತ್ತಾನೆ. ಜೀವನವೂ ನಮಗೆ ಅನೇಕವನ್ನು ಕಲಿಸುತ್ತದೆ ಎನ್ನುವುದರಲ್ಲಿ ಪಂಪನಿಗೆ ಯಾವುದೇ ಅನುಮಾನವಿಲ್ಲ. ಮನುಷ್ಯ ಮತ್ತು ಅವನ ಚರಿತ್ರೆಯು ಬದಲಾಗುತ್ತಾ ಹೋದಂತೆ ಚರಿತ್ರೆಯು ಬದಲಾಗುತ್ತದೆ. ಅದಕ್ಕೆ ಅನುಸಾರವಾಗಿ ಮನಸ್ಸಿನಲ್ಲಿ ಪಲ್ಲಟಗಳೂ ಆಗುತ್ತವೆ. ಇಲ್ಲಿ ಗ್ರೀಕರು ಮತ್ತು ಅವರ ಕಲೆಯ ಕುರಿತಾದ ಚರ್ಚೆಯನ್ನೂ ನಾವು ಗಮನಿಸಬೇಕು. ಅದು ಅವರ ಜಗತ್ತು ಮತ್ತು ಲೋಕದ ಕುರಿತಾದ ಒಂದು ದೃಷ್ಟಿಕೋನವನ್ನು ಹೇಳುತ್ತದೆ. ಅವರು ಕೆಲವು ಉತ್ತರಗಳನ್ನು ಕೊಡುತ್ತಾರೆ. ಆದರೆ ಅವರು ಯಾವುದೇ ಪ್ರಶ್ನೆಗಳನ್ನು ಕೇಳುವುದಿಲ್ಲ. ಆದ್ದರಿಂದ ಅವರ ಲೋಕದ ಗ್ರಹಿಕೆ ಬೇರೆಯಾಗುತ್ತದೆ. ಅವರು ಇರುವ ಸಮಸ್ಯೆಗಳಿಗೆ ಪರಿಹಾರವನ್ನು ಹೇಳುತ್ತಾರೆ. ಇದನ್ನು ನಾವು ಆಗಣ ಗ್ರೀಕ್ ಬರಹಗಳಲ್ಲಿ ಕಾಣುತ್ತೇವೆ. ಅವರಿಗೆ ಸಾಹಿತ್ಯ ಮತ್ತು ಅದರ ರೂಪಗಳನ್ನು ಕಟ್ಟುವ ಆಸಕ್ತಿಯು ಹೆಚ್ಚು. ಹಾಗೆಂದು ಅವರ ನಿಲುವುಗಳನನ್ನು ನಾವು ಅತಾರ್ಕಿಕ ಎಂದು ಹೇಳಲು ಬರುವುದಿಲ್ಲ.

ಅವರು ಅನೇಕ ವೈರುಧ್ಯಗಳ ನಡುವೆ ಇದನ್ನು ರೂಪಿಸಿದರು ಎನ್ನುವುದು ಇಲ್ಲಿ ಉಲ್ಲೇಖನೀಯ. ಇದು ಕೂಡಾ ಮತ್ತೊಂದು ಅರ್ಥದಲ್ಲಿ ಪೂರ್ಣತೆಗೆ ಹೋಗುವ ದಾರಿಯೂ ಹೌದು. ಆದರೆ ಅವರು ಮತ್ತೆ ಕೆಲವು ವಿಚಾರಗಳಲ್ಲಿ ಒಂದು ಬಗೆಯ ಸಂದೇಹವನ್ನು ಕೂಡಾ ಹುಟ್ಟುಹಾಕುತ್ತಾರೆ. ಅವರಿಗೆ ತರ್ಕ ಮತ್ತು ಸತ್ಯದ ವಾಗ್ವಾದಗಳು ಅತ್ಯಂತ ಮುಖ್ಯ. ಅವರು ಅದರ ಜೊತೆಗೆ ತತ್ವಜ್ಞಾನ, ಮನಸ್ಸು, ಸೌಂದರ್ಯಶಾಸ್ತ್ರ, ನಾಟಕಗಳು, ಸಮಾಜ ಮತ್ತು ಅದರ ನೈತಿಕತೆ ಮುಂತಾದವು ಮುಖ್ಯವಾಗಿತ್ತು. ಅವರ ನಾಟಕಗಳಲ್ಲಿ ಮುಖವಾಡವೂ ಅತ್ಯಂತ ಮುಖ್ಯ. ಅದರಲ್ಲಿಯೂ ಒಂದು ತತ್ವಜ್ಞಾನ ಮತ್ತು ಅದರ ಹೂರಣವು ಇದೆ. ದೈವ ಮತ್ತು ಮನುಷ್ಯರು ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ಅದು ಜೀವನ ಮತ್ತು ಅದರ ಮೌಲ್ಯವನ್ನು ಹೇಳುತ್ತದೆ. ಅದರಲ್ಲಿ ಅವರು ಒಂದು ಅರ್ಥ ಪೂರ್ಣತೆಯನ್ನು ಕಾಣುತ್ತಾರೆ. ಹಾಗೆ ನೋಡಿದರೆ ದುರಂತ ನಾಟಕಗಳಲ್ಲೂ ನಾವು ಮಹತ್ವದ ವಿವರಣೆಯನ್ನು ಕಾಣುತ್ತೇವೆ. ಜೀವನ ಮತ್ತು ಅದರ ಭವ್ಯತೆಗೆ ವಿವಿಧ ಆಯಾಮಗಳು ಇರುವದನ್ನು ಅವರು ಹೇಳುತ್ತಾರೆ. ಈ ಮೂಲಕ ಅವರು ಸಾಹಿತ್ಯದಲ್ಲಿ ತಮ್ಮದೇ ಆದ ಒಂದು ವರ್ಚಸ್ಸನ್ನು ಕಾಪಾಡಿದರು. ಅವರ ಚಿಂತನೆಗಳಲ್ಲಿ ಆಳವಾದ ಒಂದು ಪ್ರಾತಿನಿಧಿಕವಾದ ಒಂದು ರೂಪವನ್ನು ನಾವು ಕಾಣುತ್ತೇವೆ. ಅವರ ನಾಟಕಗಳಲ್ಲಿ ಬರುವ ನಾಯಕರು ನಮಗೆ ನಿಜವಾದ ನಾಯಕರು ಎಂದು ಅನಿಸುತ್ತದೆ. ಆ ನಾಯಕರು ಕಷ್ಟವನ್ನು ಅನುಭವಿಸುತ್ತಾರೆ. ಅವರೂ ಅನೇಕ ವಿಧವಾದ ಸಮಸ್ಯೆಗಳನ್ನು ಎದುರಿಸುತ್ತಾರೆ. ಅವರಲ್ಲಿಯೂ ಶುದ್ಧ ಮತ್ತು ಮೈಲಿಗೆ ಎನ್ನುವುದು ಇದೆ. ಹೀಗೆ ಇದ್ದರೂ ವ್ಯಕ್ತಿಯು ತನ್ನದೇ ಆದ ಒಂದು ಪೂರ್ಣತೆಯನ್ನು ಕಾಪಾಡಬೇಕಾಗುತ್ತದೆ. ಅದು ವ್ಯಕ್ತಿಯ ಜೀವನದ ಚರಿತ್ರೆಯಲ್ಲಿ ಅತ್ಯಂತ ಮುಖ್ಯ. ಕಲೆಯ ದೃಷ್ಟಿಯಿಂದ ಗ್ರೀಕರು ತುಂಬಾ ಎತ್ತರಕ್ಕೆ ಏರಿದ್ದರು. ಅದರ ಅನಂತರವೇ ಉಳಿದ ದೇಶಗಳಲ್ಲಿ ತತ್ವಜ್ಞಾನ ಮತ್ತು ಸೌಂದರ್ಯಶಾಸ್ತ್ರದ ಪ್ರಶ್ನೆಗಳು ಬಂದವು. ಹಾಗೆ ನೋಡಿದರೆ ಅವರು ವಿಚಾರವನ್ನು ಮಾಡಿದ್ದಕ್ಕಿಂತಲೂ ಅವರ ರಚನೆಗಳು ಮಹತ್ವದ್ದಾಗಿತ್ತು. ಇನ್ನೊಂದು ಅತ್ಯಂತ ಮಹತ್ವದ ಪ್ರಶ್ನೆಯು ಇದೆ. ಅವರ ಅಲೌಕಿಕ ಎನ್ನುವುದರ ಚಿಂತನೆಗೆ ಮತ್ತೆ ಮತ್ತೆ ನಮಗೆ ವಿವಿಧ ಆಯಾಮಗಳು ಸಿಕ್ಕುತ್ತವೆ. ಅದಕ್ಕೂ ಒಂದು ಕಾರಣವು ಇದೆ. ಅವರು ಯೋಚನೆ ಮಾಡಿದ್ದಕ್ಕಿಂತಲೂ ಮಿಗಿಲಾದ ಒಂದು ಸಂಗತಿಯು ಇದೆ. ಅದನ್ನು ಅವರು ಒಂದು ನಮೂನೆಯ ಶಕ್ತಿ ಎಂದು ಹೇಳುತ್ತೇವೆ. ಅದನ್ನು ಅವರು ಅನ್ವಯ ಮಾಡಬೇಕಿತ್ತು. ಅದನ್ನು ನಾವು ಈವತ್ತು ಒಂದು ಮನೋಸ್ಥಿತಿ ಅಥವಾ ಅದನ್ನು ಒಂದು ಬಗೆಯ ಮಾನಸಿಕವಾದ ಸಮಸ್ಯೆ ಎಂದೂ ಹೇಳುತ್ತೇವೆ. ಹಾಗೆಂದು. ಅದನ್ನು ನಾವು ಈವತ್ತು ಅತಾತ್ವಿಕವಾದ ಸಮಸ್ಯೆ ಎಂದು ಹೇಳಲು ಆಗುವುದಿಲ್ಲ.

ಗ್ರೀಕರು ವಾಸ್ತವವವಾಗಿ ಪ್ರಶ್ನೆ ಮತ್ತು ಉತ್ತರಗಳನ್ನು ಭಿನ್ನವಾದ ರೀತಿಯಲ್ಲಿ ಕೇಳುತ್ತಾರೆ. ನಾವು ಯಾವುದನ್ನು ಜೀವನದಲ್ಲಿ ಎದುರಿಸುತ್ತೇವೆಯೋ ಅದನ್ನು ಅವರು ತಮ್ಮ ಉತ್ತರಗಳ ಮೂಲಕ ಕಂಡುಕೊಳ್ಳುತ್ತಾರೆ. ಅವುಗಳು ರಾಚನಿಕವಾಗಿ ಅತ್ಯಂತ ಮುಖ್ಯ. ಅದನ್ನು ನಾವು ಮರೆಯಬಾರದು. ಅದು ಸೃಜನಶೀಲವೂ ಹೌದು. ನಾವು ಇದನ್ನು ಅರಿಸ್ಟಾಟಲನ ಕಾವ್ಯ ಮೀಮಾಂಸೆಯಲ್ಲಿಯೂ ಕಾಣುತ್ತೇವೆ. ಅವನ ಕೆಥಾರ್ಸಿಸ್ ಸಿದ್ಧಾಂತ ಈ ದೃಷ್ಟಿಯಲ್ಲಿ ಒಂದು

ಸೃಜನಾತ್ಮಕವಾದ ಪ್ರತಿಕ್ರಿಯೆ ಕೂಡಾ ಹೌದು. ಅವರು ಈ ಬಗೆಯ ಪ್ರಶ್ನೆಗಳನ್ನು ಕೇಳುವಾಗ ಅವರ ದೃಷ್ಟಿಯಲ್ಲಿ ಸ್ಥಳ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಮತ್ತೊಂದು ಅಂಶವನ್ನು ಗ್ರೀಕರು ಹೇಳುತ್ತಾರೆ– ಅದರಲ್ಲಿ ಸ್ಥಳ ಮತ್ತು ಜ್ಞಾನಕ್ಕೆ ಇರುವ ಒಂದು ಸಂಬಂಧ. ಅವರು ಅನುಭವ ಮತ್ತು ಜ್ಞಾನಕ್ಕೆ ಒಂದು ಸಂಬಂಧವು ಇದೆ ಎಂದು ಹೇಳುತ್ತಾರೆಯೋ ಅದೇ ರೀತಿಯಲ್ಲಿ ಅವರು ಅದನ್ನು ಶಾಸ್ತ್ರ ಎನ್ನುವಂತೆ ನೋಡುತ್ತಾರೆ.ಇದು ಅತ್ಯಂತ ಕುತೂಹಲದಾಯಕವೂ ಆಗಿದೆ. ಯಾವುದು ನಿಜವಾದ ಪರಿಪೂರ್ಣವಾದ ಜ್ಞಾನ ಎಂದು ಅನಿಸುತ್ತದೆಯೋ ಅದಕ್ಕೆ ವಿವಿಧ ಹಾದಿಗಳು ಇವೆ ಎನ್ನುವುದು ಸತ್ಯ. ಮನುಷ್ಯ ಮತ್ತು ಜಗತ್ತು ಎನ್ನುವುದಕ್ಕೆ ಒಂದು ಸಂಬಂಧವು ಇದೆ. ಅದೇ ರೀತಿಯಲ್ಲಿ ನಾನು ಮತ್ತು ನೀನು ಹಾಗೂ ಮಧ್ಯೆ ಜಗತ್ತು ಇರುತ್ತದೆ, ಆದ್ದರಿಂದ ಲೋಕ ಮತ್ತು ಅದರ ಗ್ರಹಿಕೆಯಲ್ಲಿ ನಮ್ಮ ಆತ್ಮ ಎನ್ನುವುದಕ್ಕೆ ಒಂದು ಮಹತ್ವವವು ಇದೆ. ಅದರ ಮೂಲಕ ನಾವು ಜಗತ್ತನ್ನು ನಂಬುತ್ತೇವೆ. ಅದನ್ನು ಗ್ರಹಿಸುತ್ತೇವೆ. ನಮಗೆ ಬೇಕಾದ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತೇವೆ. ಒಂದು ಕಾರಣವನ್ನು ನಾವು ಇಲ್ಲಿ ಹೇಳಬೇಕು: ಜಗತ್ತನ್ನು ಅರ್ಥ ಮಾಡಿಕೊಳ್ಳುವಾಗ ನಮಗೆ ಅದರ ಜೊತೆಗೆ ಒಂದು ಸಂಬಂಧವು ಸಾಧ್ಯವಾಗುತ್ತದೆ. ನಾನು, ನೀನು, ಜಗತ್ತು ಮತ್ತು ಆತ್ಮ ಎನ್ನುವ ಪ್ರಶ್ನೆಗಳು ಪರಸ್ಪರ ಸೇರಿಕೊಂಡು ಒಂದು ಏಕತೆ ಉಂಟಾಗುತ್ತದೆ. ಅದರಲ್ಲಿ ಒಂದು ಸಮತೋಲನವು ಬರುತ್ತದೆ. ಇದರ ಅತ್ಯಂತ ಮುಖ್ಯವಾದ ಒಂದು ಅಂಶವೆಂದರೆ ಜೀವನ ಮತ್ತು ಅದರ ಸಾರ ಸರ್ವಸ್ವವನ್ನು ನಾವು ಕಾಪಾಡುವುದು. ಈ ಮಾತಿಗೆ ಒಂದು ನಿರ್ದಿಷ್ಟವಾದ ತತ್ವಜ್ಞಾನವೂ ಬೇಕಾಗುತ್ತದೆ.. ಇದರ ಜೊತೆಗೆ ಅತ್ಯಂತ ಮಹತ್ವದ ಇನ್ನೊಂದು ಪ್ರಶ್ನೆಯನ್ನು ಗ್ರೀಕರು ಕೇಳುತ್ತಾರೆ. ವಾಸ್ತವವಾಗಿ ಇಲ್ಲಿ ಪ್ರೀತಿ, ಕುಟುಂಬ ಮತ್ತು ಪ್ರಭುತ್ವದ ಪ್ರಶ್ನೆಗಳೂ ಬಂದಿವೆ. ಗ್ರೀಕರು ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಚರಿತ್ರೆಯನ್ನು ನಮಗೆ ಕಟ್ಟಿಕೊಟ್ಟಿದ್ದಾರೆ. ಯಾವುದು ನಮ್ಮ ಜೀವನವನ್ನು ಹಾಳುಮಾಡುತ್ತದೆ ; ಅದು ಹೇಗೆ ಬಾಹ್ಯವನ್ನು ಸೂಚಿಸುತ್ತದೆ ಎನ್ನುವುದನ್ನು ಅವರ ತತ್ವಜ್ಞಾನವು ಹೇಳುತ್ತದೆ. ಜೀವನ ಮತ್ತು ಅದರ ಸಾಧ್ಯತೆಯನ್ನು ಅವರು ಹುಡುಕುವ ಕ್ರಮಗಳು ಬೇರೆಯಾಗಿವೆ. ಅದನ್ನು ವಿಧಿ ಮತ್ತು ಮನುಷ್ಯರ ಸಂಬಂಧ ಮೂಲಕ ಹೇಳುತ್ತಾರೆ. ಆಧ್ಯಾತ್ಮವು ನಮ್ಮನ್ನು ನಿಯಂತ್ರಣ ಮಾಡುತ್ತದೆ. ಒಂದು ಮುಕ್ತ ಎನ್ನುವ ಸ್ಥಿತಿಯು ಮನುಷ್ಯರಿಗೆ ಬೇಕಾಗುತ್ತದೆ. ಮನುಷ್ಯನು ತನ್ನ ಅಗತ್ಯವನ್ನು ರೂಪಿಸಿಕೊಳ್ಳಬಲ್ಲ. ಅದನ್ನು ಸಾಧಿಸಲು ನಮಗೆ ಶಕ್ತಿಯು ಬೇಕಾಗುತ್ತದೆ. ಯಾವುದೇ ಗಾಳಿ ಮತ್ತು ಬೆಳಕು ಇಲ್ಲದ ಒಂದು ಕೋಣೆಯಲ್ಲಿ ಹೆಚ್ಚು ಹೊತ್ತು ಕಳೆಯಲಾರೆವು. ಇದು ಒಂದು ತತ್ವಜ್ಞಾನದ ಹಾಗೆ ಕಾಣುತ್ತದೆ. ಆದರೆ ನಾವು ಮಾಡಿದ ಮೊದಲ ಕೆಲಸವೆಂದರೆ ರೂಪಗಳನ್ನು ಹುಟ್ಟುಹಾಕಿದ್ದು, ಆದ್ದರಿಂದ ಇದಕ್ಕೆ ಒಂದು ಚಾರಿತ್ರಿಕವಾದ ಮಹತ್ವವು ಇದೆ. ಆದ್ದರಿಂದ ನಾವು ಮೊದಲು ನಮ್ಮನ್ನು ನಾವೇ ಶೋಧಿಸಬೇಕಾದ ಅಗತ್ಯವಿದೆ. ಅದು ಸತ್ಯದ ಹುಡುಕಾಟವೂ ಹೌದು. ಈ ಜಗತ್ತು ಅತ್ಯಂತ ವಿಶಾಲವಾಗಿದೆ. ಅದರಲ್ಲಿ ಅಪಾಯಗಳು ಇವೆ. ಅದರ ಜೊತೆಗೆ ಅದರಲ್ಲಿ ಸುಖವೂ ಇದೆ. ಅದರ ಜೊತೆಗೆ ಅತ್ಯಂತ ವಿಸ್ತಾರವಾದ ನಿಸರ್ಗವೂ ನಮ್ಮನ್ನು ಪೋಷಿಸುತ್ತದೆ. ಅದನ್ನು ನಾವು ಹೇಗೆ ಬೇಕಾದರೂ ಹೇಳಬಹುದು. ಅದರಲ್ಲಿ ಒಂದು ಮುಖ್ಯವಾದ ಅಂಶವಿದೆ ಎಂದು ಗ್ರೀಕರು ನಂಬುತ್ತಾರೆ. ಗ್ರೀಕರು ಜಗತ್ತನ್ನು ನೋಡುವಾಗ ಒಂದು ಧನಾತ್ಮಕವಾದ ಅರ್ಥವನ್ನು

ಕೊಡುತ್ತಾರೆ. ಅದನ್ನು ಅವರು ಗ್ರಹಿಸುವಾಗ ಅದರಲ್ಲಿ ಇರುವ ಸಮಗ್ರತೆಯನ್ನು ಹೇಳುತ್ತಾರೆ. ಇದಕ್ಕೆ ಚಾರಿತ್ರಿಕವಾದ ಒಂದು ಮಹತ್ವವು ಇದೆ. ಮನುಷ್ಯ ಮತ್ತು ನಿಸರ್ಗವನ್ನು ಒಂದು ಏಕತೆಯ ರೂಪದಲ್ಲಿ ಕಾಣುತ್ತಾರೆ. ಅವರ ಆಧ್ಯಾತ್ಮಿಕವಾದ ಚಿಂತನೆಯು ಅವರ ಕಾವ್ಯದ ಚರ್ಚೆಯಲ್ಲಿಯೂ ಬರುತ್ತದೆ. ಅವರು ನಿಜವಾದ ಅರ್ಥದಲ್ಲಿ ತತ್ವಜ್ಞಾನ ಮತ್ತು ಚರಿತ್ರೆಯನ್ನು ಜೊತೆಗೆ ಸೇರಿಸಿಕೊಂಡಿದ್ದಾರೆ. ಆದ್ದರಿಂದ ಅವರ ನಿಲುವುಗಳು ಮತ್ತು ಸಾಹಿತ್ಯದ ಚಿಂತನೆಗಳು ಜೊತೆಗೆ ಹೋಗುತ್ತವೆ. ಒಂದು ಅರ್ಥದಲ್ಲಿ ಕಾವ್ಯಗಳಿಗೆ ಹೆಚ್ಚು ಶಕ್ತಿಯನ್ನು ಒದಗಿಸಿದವು. ಅದರಲ್ಲಿಯೂ ಅದಕ್ಕೆ ಒಂದು ಮಹತ್ವದ ಚರಿತ್ರೆಯು ಇದೆ. ಅದು ಸೌಂದರ್ಯಶಾಸ್ತ್ರವನ್ನು ಹೇಳುತ್ತದೆ. ಅಲ್ಲಿನ ಸಂಸ್ಕೃತಿಯ ಚಿಂತನೆಯಲ್ಲಿಯೂ ನಾವು ಕಾಣಬಹುದು. ಜಗತ್ತಿಗೆ ಅವರು ತತ್ವಜ್ಞಾನ ಮತ್ತು ರಂಗಭೂಮಿಯನ್ನು ಕೊಟ್ಟರು. ಅದರ ಮೂಲಕ ಜಗತ್ತಿನ ಸಂಸ್ಕೃತಿಗೆ ಒಂದು ಕಾಣಿಕೆಯನ್ನು ಕೊಟ್ಟರು. ಮಹಾಕಾವ್ಯಗಳು ಜೀವನವನ್ನು ಹೇಳಿದ ಕ್ರಮವನ್ನು ನಾವು ಮತ್ತೊಮ್ಮೆ ನೆನಪು ಮಾಡಿಕೊಳ್ಳಬೇಕು. ಜೀವನಕ್ಕೆ ಒಂದು ಘನತೆಯು ಇದೆ. ಅದರ ಜೊತೆಗೆ ನಮ್ಮ ಜೀವನಕ್ಕೆ ಯಾವ ಅರ್ಥವಿದೆ ಎಂದು ನಾಟಕಗಳ ಮೂಲಕ ಹೇಳುತ್ತಾರೆ. ವಾಸ್ತವಗಳ ಮೂಲಕ ಜನರು ತಮ್ಮ ಜೀವನವನ್ನು ಕಟ್ಟುತ್ತಾರೆ. ಅದೇ ರೀತಿಯಲ್ಲಿ ನಾಟಕಗಳಲ್ಲಿ ನಾಯಕನೂ ಜೀವನ ಮತ್ತು ಅದರ ಅರ್ಥವಂತಿಕೆಯನ್ನು ಹುಡುಕುತ್ತಾನೆ. ದುರಂತ ಎನ್ನುವುದೂ ಜೀವನದ ಭಾಗವಾಗಿದೆ. ಅದು ಅದೃಶ್ಯದ ರೂಪಕವೂ ಅಲ್ಲ. ಅವನ ಆತ್ಮ ಎನ್ನುವುದು ಹೇಗೆ ಒಂದು ಶಕ್ತಿಯನ್ನು ಹೊಂದಿರುತ್ತದೆ ಎನ್ನುವುದು ಗ್ರೀಕ್ ನಾಟಕಗಳ ಅತ್ಯಂತ ಮುಖ್ಯವಾದ ಒಂದು ಆಶಯವೂ ಆಗಿದೆ. ಅವನು ಭೂಮಿಯಲ್ಲಿ ಇದ್ದಾನೆ. ಅವನಿಗೆ ಕೂಡಾ ಒಂದು ವಾಸ್ತವ ಇದೆ. ಜೀವನದ ಪ್ರಶ್ನೆಗಳಿಗೆ ದುರಂತ ನಾಟಕಗಳು ಉತ್ತರವನ್ನು ಕೊಡುತ್ತವೆ. ಆದರೆ ಕನ್ನಡ ಕಾದಂಬರಿ ಜಗತ್ತಿಗೆ ಒಂದು ಇತಿಹಾಸವಿದೆ.

ಇದರ ನಡುವೆ ಪ್ಲೇಟೋ ವ್ಯಕ್ತಿ ಮತ್ತು ಅವನ ಅನನ್ಯತೆಯನ್ನು ಹುಡುಕುತ್ತಾನೆ. ಅವನಲ್ಲಿ ಮನುಷ್ಯನಿಗೆ ಒಂದು ವಿವೇಕವೂ ಇದೆ. ವ್ಯಕ್ತಿಗೆ ಒಂದು ಶಕ್ತಿಯೂ ಇದೆ. ಮನುಷ್ಯನಿಗೆ ಶಕ್ತಿಯು ಎಲ್ಲಿಂದ ಬರುತ್ತದೆ ಎನ್ನುವುದೂ ಗ್ರೀಕರಲ್ಲಿ ಮುಖ್ಯವಾದ ಪ್ರಶ್ನೆ. ಇದು ತತ್ವಜ್ಞಾನದ ಪ್ರಶ್ನೆಯೂ ಹೌದು. ಅದರ ಜೊತೆಗೆ ಗ್ರೀಕ್ ನಾಟಕಗಳು ನಮಗೆ ಆಸೆ ಮತ್ತು ಅದರ ಪರಿವರ್ತನೆ ಹಾಗೂ ವ್ಯಕ್ತಿ ಮತ್ತು ಅವನ ವಿನಾಶವನ್ನು ಹೇಳುತ್ತದೆ. ಆದ್ದರಿಂದಲೇ ನಮಗೆ ಗ್ರೀಕರ ದೃಷ್ಟಿಕೋನವು ಅತ್ಯಂತ ಮುಖ್ಯ ಎಂದು ಅನಿಸುತ್ತದೆ. ಅವರು ಜಗತ್ತನ್ನು ಮತ್ತು ವಿಶ್ವಾತ್ಮಕ ರಚನೆಗಳನ್ನು ಹೇಳಿದರು. ಇದು ಮಹತ್ವದ್ದು ಎಂದು ಕಾಣುತ್ತದೆ. ಕನ್ನಡ ನಾಟಕ ಸಾಹಿತ್ಯ ಪರಂಪರೆಗೆ ಮೂರು ಶತಮಾನಗಳ ಇತಿಹಾಸವಿದೆ. ಇದುವರೆಗೆ ಲಭ್ಯವಿರುವ ನಾಟಕ ಕೃತಿಗಳ ಆಧಾರದ ಮೇಲೆ, ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ'ವೇ ಕನ್ನಡದ ಪ್ರಥಮ ನಾಟಕ, ಸು.೧೬೮೦ ಈ ನಾಟಕ ಕಾರನ ಕಾಲ. (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨ ಡಾ.ಹರಿಕೃಷ್ಣ ಭರಣ್ಯ ಸದಸ್ವಪ್ನ ಬುಕ್ ಹೌಸ್ ಬೆಂಗಳೂರು)

೧೮೮೭ರಲ್ಲಿ ಸೂರಿ, ವೆಂಕಟರಮಣ ಶಾಸ್ತ್ರಿಗಳು ರಚಿಸಿದ 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ'ವು ಕನ್ನಡದ ಮೊತ್ತಮೊದಲಿನ ಸ್ವತಂತ್ರ ಸಾಮಾಜಿಕ ನಾಟಕ, ಇದು ಸಾಹಿತ್ಯಕವಾಗಿಯೂ ಸಾಮಾಜಿಕವಾಗಿಯೂ ಹೊಸ ದೃಷ್ಟಿ ಕೋನವನ್ನಿರಿಸಿ ಕೊಂಡು ರಚಿತವಾದ ಕೃತಿ, ಇದನ್ನು

ಉತ್ತರ ಕನ್ನಡದ ಹವ್ಯಕ ಆಡುನುಡಿಯಲ್ಲಿ ರಚಿಸಲಾಗಿದೆ. (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨ ಡಾ.ಹರಿಕೃಷ್ಣ ಭರಣ್ಯ ಸದಸ್ವಪ್ನ ಬುಕ್ ಹೌಸ್ ಬೆಂಗಳೂರು)

೧೯೦೮ರಲ್ಲಿ ವೀರಭದ್ರಪ್ಪನವರು ರಚಿಸಿದ 'ವಿಜಯನಗರ ಸಾಮ್ರಾಜ್ಯ' ೧೯೧೮ರಲ್ಲಿ ಬಿ.ಸಿ. ಬೆಳೂರರು ರಚಿಸಿದ 'ಬಸವೇಶ್ವರ ನಾಟಕ' ಹಾಗೂ ಎಂ.ಎನ್. ಕಾಮತರ 'ಮೌರ್ಯ ಸಿಂಹಾಸನ (೧೯೧೮)ಮೊದಲಾದವುಗಳೂ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಚಾರಿತ್ರಿಕ ನಾಟಕಗಳ ರಚನೆಯಾಗಿದೆ. (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨ ಡಾ.ಹರಿಕೃಷ್ಣ ಭರಣ್ಯ ಸದಸ್ವಪ್ನ ಬುಕ್ ಹೌಸ್ ಬೆಂಗಳೂರು) ಮೇಲ್ನೋಟಕ್ಕೆ ವಿಭಿನ್ನವೆಂದು ತೋರುವ ಕೆರೂರರ ಇಂದಿರಾಳ೨ ಕಾದಂಬರಿಯ ಮೂಲದ್ರವ್ಯವೂ ಆದರ್ಶದ ಪುನರುಜ್ಜೀವನವೇ ಆಗಿದೆ. ವಿಧವಾ ಸಮಸ್ಯೆ, ಶೃಂಗಾರಗಳನ್ನು ಒಳಗೊಂಡ ಈ ಕೃತಿಯ ಉದ್ದೇಶವೆಂದರೆ ಕುಲೀನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಆದರ್ಶ ಪಾತ್ರಗಳನ್ನು ವೈಭವೀಕರಿಸುವುದು. ಇದನ್ನು ವಿ.ಎಂ. ಇನಾಂದಾರರರು ಗುರುತಿಸಿದ್ದಾರೆ.

> "ನೇರವಾದ ಒಂದು ಮಾತಿನಿಂದ ಆತಂಕ ಪರಿಹಾರವಾದದ್ದನ್ನು ನೋಡಿದರೆ ಕಾದಂಬರಿಕಾರರಿಗೆ ಪ್ರಣಯಕ್ಕೆ ಒದಗಿಸ ಆತಂಕವನ್ನು ಪರಿಹರಿಸುವುದಕ್ಕಿಂತ ಅದು ಬೆಳೆದ ಬಗೆಯನ್ನು, ತಾಳ್ಮೆ ತಿಳುವಳಿಕೆಗಳಿಂದ ಅವರಿಬ್ಬರೂ ಸನ್ನಿವೇಶವನ್ನು ಎದುರಿಸಿದ ಬಗೆಯನ್ನು ವಿವರಿಸುವುದೇ ಮುಖ್ಯವೆನಿಸಿದಂತೆ ಕಾಣುತ್ತದೆ. ಅವರಿಬ್ಬರ ನಡುವಿನ ಪ್ರಣಯ ಸುಕುಮಾರವಾದದ್ದು. ಅದನ್ನು ಸುಕುಮಾರವಾಗಿಯೇ ಕಾದಂಬರಿಕಾರರು ಚಿತ್ರಿಸಿದ್ದಾರೆ. ಯಾವ ಸನ್ನಿವೇಶದಲ್ಲಿಯೂ ರಮಾಕಾಂತ ಇಂದಿರೆಯರು ಭಾವಾವಿಷ್ಟರಾಗುವುದಿಲ್ಲ... ಇದಕ್ಕೆ ಕಾರಣ ಅವರಿಬ್ಬರು ವಿದ್ಯಾವ್ಯಾಸಂಗದಿಂದ, ಲಲಿತಕಲೆಗಳಲ್ಲಿಯ ಪರಿಶ್ರಮದಿಂದ ಪಡೆದಿದ್ದ ಮನಸ್ಸಂಸ್ಕಾರ."[೪೩]

ಆಧುನಿಕ ವಿದ್ಯಾಭ್ಯಾಸವನ್ನು ಪಡೆದೂ ಪ್ರಾಚೀನ ಸಂಸ್ಕಾರಗಳನ್ನು ಮೈಗೂಡಿಸಿ–ಕೊಂಡಿರುವ ಪಾತ್ರಗಳಾದ ದೇವಯಾನಿ, ರಮಾಕಾಂತ, ಇಂದಿರೆಯರೇ ಈ ಕಾದಂಬರಿಯ ಆದರ್ಶ ಪಾತ್ರಗಳು. ಸುಧಾರಣಾವಾದಿಗಳನ್ನು ಕೆರೂರರು ತೀವ್ರ ವಿಡಂಬನೆಗೆ ಗುರಿಮಾಡಿರುವುದು ಗಮನಾರ್ಹ. ಭಾಷ್ಕಳಪಂತ, ಪಂಡಿತರ ರಮಾಬಾಯಿ, ಕಮಲೆಯರು ವಿಡಂಬನೆಗೆ ಗುರಿಯಾಗುವ ಪಾತ್ರಗಳು. ಈ ಕೃತಿಯ ನಿಜವಾದ ಖಳಪಾತ್ರಗಳಂತೆ ಪಂಡಿತಾ–ಕಮಲೆಯರು ಕಾಣಿಸಿಕೊಳ್ಳುತ್ತಾರೆ. ಸಾಮಾಜಿಕ ವಿಚಾರಗಳಲ್ಲಿ ಪ್ರಗತಿಪರ ದೃಷ್ಟಿಯನ್ನು ಹೊಂದಿದ್ದರೂ ಹೊಸ ಬದುಕು ಭಾರತೀಯ ನೆಲಗಟ್ಟಿನ ಮೇಲೆಯೇ ರೂಪಿತವಾಗಬೇಕೆಂದು ವಾದಿಸುತ್ತಿದ್ದ ಕೆರೂರರು ಇವೆರಡರ ವಿಚಿತ್ರ ಬೆಸುಗೆಯನ್ನು ಸಾಧಿಸುತ್ತಾರೆ. ಆದರೆ ಆದರ್ಶದ ವೈಭವೀಕರಣವೇ, 'ಇಂದಿರಾ' ಕಾದಂಬರಿಯ ಮೂಲ ಸೆಲೆಯಾಗಿದೆ.

ಇಂದಿರೆ–ರಮಾಕಾಂತರಾಯರ ಪ್ರೇಮದ ಸಂದರ್ಭವೊಂದನ್ನು ಗಮನಿಸಿರಿ:

"ನದಿಗೆ ಅತಿ ವಿಶಾಲವಾಗಿ ಕಟ್ಟಿದ ಘಾಟು ಇತ್ತು. ಪಾವಟಿಗೆಗಳನ್ನಿಳಿದು ಕಾವೇರಿಯ ರಮಣೀಯತೆಯನ್ನು ನಿರೀಕ್ಷಿಸುತ್ತ ನೀರಿಗೆ ತಗಲಿದ್ದ ಪಾವಟಿಗೆಯ ಮೇಲೆ ಕುಳಿತು ನದಿಯಲ್ಲಿ

ಕಾಲಿಳಿಬಿಟ್ಟುಕೊಂಡು ಈರ್ವರೂ ಕುಳಿತುಕೊಂಡರು. ನದಿಯ ತರಂಗಗಳು ತಮಗೆ ಪರಿಚಿತವಾದ ನೀರಜಗಳ ದರ್ಶನೋತ್ಸುಕತೆಯಿಂದಲೇನೋ ಎಂಬಂತೆ ಇಂದಿರೆಯ ಪಾದಾಂಬುಜಗಳಿಗೆ ಬಡಿಯುತ್ತಿರಲು ಆ ಉದ್ಧತವಾದ ತರಂಗಗಳನ್ನು ನಿರಾಕರಿಸುವಳೋ ಎಂಬಂತೆ ಆ ಮಾನಿನಿಯು ತನ್ನ ಕಾಲುಗಳನ್ನು ನೀರಿನಲ್ಲಿ ವಿನೋದದಿಂದ ಅಲ್ಲಾಡಿಸುತ್ತಿದ್ದಳು. ಸ್ಫಟಿಕದಂತೊಪ್ಪುವ ಆ ನಿರ್ಮಲವಾದ ಉದಕವನ್ನು ತನ್ನ ಕೈಯಿಂದೆತ್ತಿ ಹಾಕುತ್ತ ಕೌತುಕಪಟ್ಟು ಇಂದಿರೆಯು ಕೇಳಿದ್ದು.

"ರಮಾಕಾಂತರಾಯರೇ ಈ ವಿಶುದ್ಧವಾದ ಜಲವನ್ನು ನೋಡಿದಿರಾ, ರಮಾಯಣದಲ್ಲಿ ವಾಲ್ಮೀಕಿ ಮಹರ್ಷಿಗಳು ಪಂಪಾ ಸರೋವರದ ದಿವ್ಯವಾದ ಸಲಿಲದ ಮೇಲೊಂದುತ್ಪ್ರೇಕ್ಷೆ ಮಾಡಿರುವರು. ತಮ್ಮ ಜ್ಞಾಪಕಕ್ಕೆ ಬರುವುದೇನು"

ಅಹುದು. "ಸಜ್ಜನಾನಾಂ ಮನೋಯಥಾ" ಎಂದು ವರ್ಣಿಸಿರುವರು.

"ಓಹೋ! ಒಳ್ಳೇ ಸರಿಯಾಗಿ ಹೇಳಿದಿರಿ. ನಿಮ್ಮ ಗ್ರಂಥ ಪರಿಶೀಲನವು ಪರಿಪಕ್ವವಾದದ್ದು".

'ಇಷ್ಟು ಸ್ತುತಿಗೇನು ನಾನು ಪಾತ್ರನಲ್ಲ. ಏನೋ ಫಕ್ಕನೆ ನೆನಪಾಯಿತೇ ಹೊರ್ತಾಗಿ ಮತ್ತೇನಿಲ್ಲ" ಎಂದು ನುಡಿದು ರಮಾಕಾಂತನೊಂದು ಕಲ್ಲು ತಕ್ಕೊಂಡು ನೀರಲ್ಲಿ ನೂರಾರು ಸಾರೆ ಪುಟಿಯುವಂತೆಸೆದನು.

ಇಂದಿರೆಯು ರಮಾಕಾಂತನ ವಿನಯವನ್ನು ಕಂಡು ಆದರಯುಕ್ತವಾದ ದೃಷ್ಟಿಯಿಂದ ಅವನ ಮುಖವನ್ನು ನೋಡಿ,

"ಆಧುನಿಕ ಶಿಕ್ಷಣದಿಂದ ಈಗಿನ ತರುಣರ ಮೇಲೆ ದುಷ್ಪರಿಣಾಮಗಳಾಗುತ್ತವೆಂದು ಕೆಲವು ಗುಣಾವಗಣ ನಿರೀಕ್ಷಕರ ಮತವಿರುವುದೆಂದು ಕೇಳುತ್ತೇನೆ.

ಇಂಥ ಶಿಕ್ಷಣ ಹೊಂದಿದ ತರುಣ ತರುಣಿಯರಲ್ಲಿ ಆದ್ಯ ಕವಿಗಳು ವರ್ಣಿಸಿದಂತೆ ನಿರ್ಮಲಾಂತಃಕರಣದವರು ಸಿಕ್ಕುವರೇನು?"

"ಅನೇಕರನ್ನು ಕಾಣಬಹುದು. ಶಿಕ್ಷಣ ಮಂಡಿತಳಾಗಿ ಮಂಪಾಜಲದಂತೆ ನಿರ್ಮಲವಾದ ಭಾವದವಳಾದ ಕುಲವಧುವೊಬ್ಬಳು ನನ್ನ ಹತ್ತಿರವೇ ಕುಳಿತಿರುವಳಲ್ಲ!" ಎಂದು ದೇವರ ಹೆಸರು ತಕ್ಕೊಂಡು ರಮಾಕಾಂತನು ಆಡಿದನು. (ಅದೇ)

ವಿದ್ಯಾವಂತ ತರುಣ, ವಿದ್ಯಾವತಿಯಾದ 'ಕುಲವಧು' ವಿನ ಕಲ್ಪನೆ ಕೆರೂರರ ಆದರ್ಶ ಕಲ್ಪನೆಯಾಗಿದೆ. ರಮಾಕಾಂತ ರಮಾಯಣದಿಂದ ಸಲಿಲವಾಗಿ ಉದ್ಧರಿಸಿ ಮಾತನಾಡುತ್ತಿದ್ದರೆ, ಇಂದಿರೆ ಅತುಳ ಪ್ರೇಮಮಯಿಯಾಗಿದ್ದೂ ಲಜ್ಜೆಯನ್ನು ಮೀರದವಳು. ತನ್ನ ನಿರೂಪಣೆಯ ಮೂಲಕ ಈ ಕಾದಂಬರಿ ಆಧುನಿಕ ಪುರುಷ ಮತ್ತು ಆಧುನಿಕ ವ್ಯಕ್ತಿತ್ವಗಳನ್ನು ರೂಪಿಸುತ್ತಿರುತ್ತದೆ.

ಈ ರೀತಿಯಲ್ಲಿ 'ಆದರ್ಶ ವಿದ್ಯಾವಂತ ತರುಣ' ಮತ್ತು 'ಆದರ್ಶ ಕುಲವಧು' ಇವರ ಪ್ರಣಯದ ಸುಕುಮಾರ ಮನೋಹರತೆಯನ್ನು ಚಿತ್ರಿಸುವುದೇ ಉದ್ದೇಶವಾಗುಳ್ಳ ಇಂದಿರಾ ಕಾದಂಬರಿಯು ಸಮಕಾಲೀನ ವಾತಾವರಣವನ್ನು ಚಿತ್ರಿಸುತ್ತಲೆ ಆದರ್ಶವನ್ನು ವೈಭವೀಕರಿಸುತ್ತದೆ.

ಈ ಆದರ್ಶವು ಸಮಾಜ ಸುಧಾರಣಾವಾದೀ ಕಾದಂಬರಿಗಳಿಗಿಂತ ಭಿನ್ನವಾಗಿ ಗತಕಾಲದಲ್ಲಿ ಹುದುಗಿದೆ. ಪೂರ್ವ ಚರಿತ್ರೆಯ ಕಲ್ಪನೆ ಸಮಕಾಲಿನ ಸಮಸ್ಯೆಯನ್ನು ನಿರೂಪಿಸಲು ನೇರವಾಗಿ ಒದಗಿಬರುತ್ತದೆ. ಗಳಗನಾಥರಿಗೆ ಹೇಗೆ ಇತಿಹಾಸದ ಛಾಯೆ ಮಾತ್ರ ಮುಖ್ಯವೋ ಕೆರೂರರಿಗೂ ಹಾಗೆಯೇ: ಸಾಮಾಜಿಕತೆಯ ಛಾಯೆ ಮಾತ್ರ ಮುಖ್ಯ. ಆದುದರಿಂದ ಕೆರೂರರ ಕಾದಂಬರಿಯಲ್ಲಿ ಕಾವ್ಯಮಯ ಲೋಕವೊಂದು ಸೃಷ್ಟಿಯಾಗುತ್ತದೆ. ಮಧ್ಯಕಾಲೀನ ನಾಯಕರನ್ನು ಕುರಿತ ಸಾಮಗ್ರಿಯನ್ನು ಸ್ವೀಕರಿಸುವ ಮೂಲಕ ಗಳಗನಾಥರು ಸ್ಥಳ ಮತ್ತು ಕಾಲದ ನಿರ್ದಿಷ್ಟತೆಯನ್ನು ಮೀರುತ್ತಾರೆ. ಕೆರೂರರು ತಮ್ಮ ಇಂದಿರಾ ಕಾದಂಬರಿಯಲ್ಲಿ ಉತ್ತರ ಕರ್ನಾಟಕದ ಪರಿಸರಕ್ಕಿಂತ ಭಿನ್ನವಾದ ಪರಿಸರವನ್ನು ಚಿತ್ರಿಸುವ ಮೂಲಕ ಈ ನಿರ್ಧಿಷ್ಟತೆಯ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಾರೆ. ಶ್ರೀರಂಗಪಟ್ಟಣ ಬೆಂಗಳೂರುಗಳನ್ನು ಕಥೆಯ ವಾತಾವರಣಕ್ಕಾಗಿ ಆಯ್ಕೆ ಮಾಡಿಕೊಳ್ಳುವ ಮೂಲಕ ಕೆರೂರರು ಇದನ್ನು ಸಾಧಿಸುತ್ತಾರೆ. ಆದುದರಿಂದ ಇಂದಿರಾ 'ಅದ್ಭುತಾಂಶಗಳನ್ನು ಪೂರ್ತಿಯಾಗಿ ಬದಿಗಿರಿಸಿ ವಾಸ್ತವತೆಯ ಹೆದ್ದಾರೆಯಲ್ಲಿ ನಿಂತ ಕೃತಿಯಾಗಿದೆ." ಎನ್ನುವ ಇನಾಂದಾರರ ಮಾತನ್ನು ನಾವು ಒಪ್ಪಿಕೊಳ್ಳಲಾಗುವುದಿಲ್ಲ. ಡಿ.ಆರ್. ನಾಗರಾಜ್ ಹೇಳುವಂತೆ ಆದರ್ಶ ಮತ್ತು ವಾಸ್ತವಗಳ ಸಂಘರ್ಷವೆನ್ನುವುದು ಈ ಕಾದಂಬರಿಯಲ್ಲಿಯೂ ಅರ್ಥಪೂರ್ಣವಾಗಿ ನಡೆಯುವುದೇ ಇಲ್ಲ.

ವಾಸ್ತವಿಕ ವರ್ತಮಾನದಿಂದ ಭಿನ್ನವಾದ ಕಾಲ್ಪನಿಕ ಪ್ರಪಂಚವವೊಂದನ್ನು ಸೃಷ್ಟಿಸುವ ಈ ನಿಲುವೂ ಮೂಲತ: ವಾಸ್ತವಕ್ಕೆ ಒಂದು ಪ್ರತಿಕ್ರಿಯೆಯೇ ಆಗಿದೆ. ಮಧ್ಯಕಾಲೀನ ನಾಯಕರನ್ನು ವೈಭವೀಕರಿಸುವ ಮತ್ತು ಆದರ್ಶಪಾತ್ರಗಳನ್ನು ಮುಂದಿಡುವ ಈ ನಿಲುವೂ ೧೯ನೆಯ ಶತಮಾನದ ಭಾರತದ ಅವಸ್ಥಾಂತರಗಳ ಫಲವೇ ಆಗಿದೆ. ಈ ನಿಲುವು ಪುನರುತ್ಥಾನವಾದಿ ನೆಲೆಗೆ ಹೆಚ್ಚು ಹತ್ತಿರ.

ಉತ್ತರ ಕರ್ನಾಟಕದ ಕಾದಂಬರಿಕಾರರು ಈ ಪುನರುತ್ಥಾನವಾದೀ ನೆಲೆಯನ್ನು ತಮ್ಮ ಕೃತಿಗಳ ಭದ್ರ ತಳಪಾಯವನ್ನಾಗಿ ಆರಿಸಿಕೊಂಡರು. ವಿಜಯನಗರದ ವಿನಾಶದ ಅನಂತರದಲ್ಲಿ ಕನ್ನಡ ನಾಡಿನ ಛಿದ್ರೀಕರಣವಾಯಿತು ಎನ್ನುವುದನ್ನು ಅತ್ಯಂತ ತೀವ್ರವಾಗಿ ನಿರೂಪಿಸಿದವರಲ್ಲಿ ಮೊದಲಿಗರು ಉತ್ತರ ಕರ್ನಾಟಕದ ಲೇಖಕರೇ. ಅವರ ಪ್ರಕಾರ ಈ ದುರಂತವು ಪೂರ್ಣವಾದದ್ದು ವಸಾಹತುಶಾಹೀ ಆಡಳಿತದಲ್ಲಿ. ಕೂಗಳತೆಯ ದೂರದಲ್ಲಿ ಕನ್ನಡ ಮನೆಮಾತಿನ ಜನರಿರುವ ಅನೇಕ ರಾಜ್ಯಗಳಿದ್ದ ಸ್ಥಿತಿ ಉತ್ತರ ಕರ್ನಾಟಕದ್ದು. ಉತ್ಕಟವಾದ ಮತ್ತು ಭಾವುಕವಾದ ರಾಷ್ಟ್ರೀಯವಾದೀ ಕಾದಂಬರಿಗಳಿಗೆ ಈ ಸ್ಥಿತಿಯು ಕಾರಣವಾಯಿತು. ಕರ್ನಾಟಕ ಏಕೀಕರಣದ ದನಿ ಮುಂದೆ ಇದೇ ಭಾಗದಿಂದ ಆಲೂರ ವೆಂಕಟರಾಯರಂತಹವರ ನೇತೃತ್ವದಲ್ಲಿ ಮುನ್ನೆಲೆಗೆ ಬಂತು ಎನ್ನುವದೂ ಇಲ್ಲಿ ಉಲ್ಲೇಖನೀಯ.[೪೬]

ಕೆರೂರ ವಾಸುದೇವಾಚಾರ್ಯರಿಗಿದ್ದ ಪುಣೆಯ ಸಂಪರ್ಕ, ಗಳಗನಾಥರು ಶೇಷಾಚಲ ಸದ್ಗುರುವಿನ ಆಶ್ರಯದಲ್ಲಿಸಂಸ್ಕೃತ ಪಾಠಶಾಲೆ, ಗೋಸೇವೆ, ವಿದ್ಯಾದಾನಗಳಲ್ಲಿ

ತೊಡಗಿದ್ದುಕೊಂಡುದೂ ಈ ಕೃತಿಕಾರರ ಸಾಹಿತ್ಯಕ ಪ್ರೇರಣೆ, ಸಾಮಾಜಿಕ ಸ್ಥಾನಮಾನ ಮತ್ತು ಸಾಮಾಜಿಕ ಸಂಬಂಧಗಳನ್ನೂ ನಮಗೆ ತೆರೆದು ತೋರಿಸುವ ಅಂಶಗಳಾಗಿವೆ.

ಗಳಗನಾಥರು ತಮ್ಮ ಕೃತಿಗಳ ಉದ್ದೇಶವನ್ನು ಸ್ಪಷ್ಟವಾಗಿಯೇ ಹೇಳಿದ್ದಾರೆ:

> "ಈಗ ಸರಾಸರಿ ಮುನ್ನೂರಾ ಐವತ್ತು ವರ್ಷಗಳ ಹಿಂದೆ ವಿಜಯನಗರವೆಂ ಜಗತ್ಪ್ರಸಿದ್ಧ ಕನ್ನಡಿಗರ ರಾಜ್ಯವು ಪರಮ ವೈಭವದಿಂದ ಮೆರೆಯುತ್ತಿತ್ತೆಂಬುದನ್ನು ಕನ್ನಡಿಗರೆಲ್ಲರೂ ಬಲ್ಲರು. ಅಂದ ಬಳಿಕ ಕನ್ನಡಿಗರ ವೈಭವಗಳನ್ನು ವ್ಯಕ್ತಪಡಿಸಿ ಕನ್ನಡಿಗರ ಹೃದಯದಲ್ಲಿ ಚಲನವಲನವನ್ನುಂಟು ಮಾಡುವ ಕನ್ನಡಿಗರ ಕಾದಂಬರಿಗಳು ಪ್ರಕಟವಾಗದಿರುವುದು ಲಾಂಛನವಲ್ಲವೇ? ಇದರಿಂದ ಕನ್ನಡಿಗರ ಔದಾಸೀನ್ಯವೂ, ಅಭಿಮಾನಶೂನ್ಯತೆಯೂ ಚೆನ್ನಾಗಿ ವ್ಯಕ್ತವಾಗುವವು"

ಲೋಕಜಾಗೃತಿಯೇ ಗುರಿಯಾಗಿರುವ ಈ ಕೃತಿಗಳು ಆದರ್ಶನಿಷ್ಠವಾಗಿವೆ. ಈ ಕಾದಂಬರಿಗಳ ನಿರೂಪಣಾಪ್ರಜ್ಞೆ ವಾಸ್ತವದಲ್ಲದ್ದೂ ಆದರ್ಶದ ಕನಸನ್ನು ಕಾಣುವಂತಹುದು. ಕಾದಂಬರಿಯ ಪದಾರ್ಥವೂ ಹಳೆಯದು. ನಿರೂಪಣಾ ಪ್ರಜ್ಞೆಯಲ್ಲಿ ಹೊಸ ಬದುಕಿನ ಅನಿವಾರ್ಯತೆಯನ್ನು ಕುರಿತ ತಿಳುವಳಿಕೆಯೂ ದಟ್ಟವಾಗಿಲ್ಲ. ಆದರ್ಶದ ವೈಭವೀಕರಣ ಈ ಕಾರಣದಿಂದ ಇವುಗಳ ಲಕ್ಷಣವಾಗಿದೆ.

ಗುಲ್ವಾಡಿ, ಬೋಳಾರರಂತೆ ಗಳಗನಾಥ 'ಸಮಾಜ ಸುಧಾರಕ'ರಲ್ಲ. ಅವರದು ತಿಲಕವಾದಿ ನೆಲೆ. ಅವರ ದೇಸೀಯ ಆದರ್ಶವೆಂದರೆ ಶಿಷ್ಟ ವೈದಿಕ ಆದರ್ಶವೇ ಆಗಿದೆ. ಆದುದರಿಂದ ಉಲ್ವಾಡಿಯವರಂತೆ ಧರ್ಮ ಒಂದು ನೈತಿಕ ನಿಲವು ಮಾತ್ರವಲ್ಲ ವೈದಿಕ ಧರ್ಮವೇ ಆಗಿ ಗಳಗನಾಥರಲ್ಲಿ ಕಾಣಿಸಿಕೊಳ್ಳುತ್ತದೆ.

> "ಒಟ್ಟಿಗೆ ಮಾನವ ಜಾತಿಯಲ್ಲಿ ವೈದಿಕರಾದ ನಮ್ಮ ದೃಷ್ಟಿಯಿಂದ ವೈದಿಕ, ಅವೈದಿಕ, ಅಸ್ಪೃಶ್ಯ ಎಂಬ ಮೂರು ವರ್ಗದ ಜನರು ಇರುತ್ತಿದ್ದು ವೈದಿಕರಲ್ಲಿಯ ಎರಡು ವರ್ಗಗಳನ್ನು ಹಿಡಿದರೆ ಮೇಲೆ ಹೇಳಿದಂತೆ–ಮುಸಲ್ಮಾನ, ಜಂಗಮ, ಬ್ರಾಹ್ಮಣ, ಒಬ್ಬ ಹೊಲೆಯ ಈ ನಾಲ್ವರು ಜತ್ತಾದರೆ ಜಗತ್ತೆ ಜತ್ತಾದಂತಾಗುವುದು."

ಮಾಧವಾಚಾರ್ಯರು ಕರುಣಾವಿಲಾಸದಲ್ಲಿ ತೋರುವ ಆದರ್ಶವಿದು. ಈ ನೆಲೆಯನ್ನು ಬಿಡದ ಪ್ರಗತಿಪರತೆಗೆ ಮಾತ್ರ ಗಳಗನಾಥರಲ್ಲಿ ಸ್ಥಾನವಿದೆ.

ಅಂದರೆ ಕನ್ನಡ ಕಾದಂಬರಿಯ ಮೊದಲ ಘಟ್ಟದ ಚರಿತ್ರೆಯಲ್ಲಿ ಕೆರೂರ–ಗಳಗನಾಥರದು ಹಾಗೂ ಬೋಳಾರ– ಗುಲ್ವಾಡಿಯವರದು ವಿಭಿನ್ನ ರೀತಿ. ಇವರ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವಗಳ ಸಂಬಂಧವು ವ್ಯಕ್ತವಾಗುವ ರೀತಿಯಲ್ಲಿಯೇ ಈ ವ್ಯತ್ಯಾಸವು ಗೋಚರವಾಗುತ್ತದೆ. ಸಮಕಾಲೀನ ಸಾಮಾಜಿಕ ಅನಿಷ್ಟಗಳ ವಿರುದ್ಧ ಗುಲ್ವಾಡಿ– ಬೋಲಾರರ ಪಠ್ಯಗಳು ದನಿ ಎತ್ತರಿಸಿ ಮಾತನಾಡುತ್ತವೆ. ಆದರೆ ಕೆರೂರ–ಗಳಗನಾಥರ ಕೃತಿಗಳು ಮಧ್ಯಕಾಲೀನ ಚರಿತ್ರೆಯನ್ನು ಕೀರ್ತಿಸುವ ಕಾವ್ಯಮಯ ಪ್ರಪಂಚವನ್ನು ಸೃಷ್ಟಿಸುತ್ತವೆ.

ಈ ಎರಡೂ ಧೋರಣೆಗಳು ಕೂಡಾ ಒಂದೇ ವಸಾಹತೀಕರಣದ ಪ್ರಕ್ರಿಯೆಯ ಫಲಗಳು ಎನ್ನುವುದು ನಮಗೆ ಪ್ರಸ್ತುತವಾಗಿರುವ ಅಂಶವಾಗಿದೆ.

ಗುಲ್ವಾಡಿ ವೆಂಕಟರಾವ್– ಬೋಳಾರ ಬಾಬುರಾವ್ ಅವರ ಕಾದಂಬರಿಗಳಲ್ಲಿ ಸಾಕ್ಷಾತ್ಕಾರಗೊಳ್ಳುವ ಆದರ್ಶವನ್ನು, ಗಳಗನಾಥ–ಕೆರೂರ ವಾಸುದೇವಾಚಾರ್ಯರ ಕಾದಂಬರಿಗಳಲ್ಲಿ ಆದರ್ಶದ ವೈಭವೀಕರಣವನ್ನು ಕಾಣುತ್ತೇವಾದರೆ ಹಳೆ ಮೈಸೂರು ಪ್ರದೇಶದಿಂದ ಬಂದ ಎಂ.ಎಸ. ಪುಟ್ಟಣ್ಣನವರು ಎವೆರಡೂ ನೆಲೆಗಳಿಗೆ ವಿಭಿನ್ನವಾದ ಕಾದಂಬರಿಗಳನ್ನು ಬರೆದಿದ್ದಾರೆ. ಮೊದಲನೆಯದು ದೇಸೀಯ ಒಡಲೆನಲ್ಲಿದ್ದೇ ಅದನ್ನು ಟೀಕಿಸುವ ವಿಡಂಬಿಸುವ ಕ್ರಮ. ಎರಡನೆಯದು ದೇಸಿಯ ಆತ್ಮ ಸಮರ್ಥನೆಯ ಧಾಟಿ. ಪುಟ್ಟಣ್ಣನವರದು ದೇಸೀ ಜೀವನಕ್ರಮದಲ್ಲಿ ನಡೆಯುತ್ತಿರುವ ಪಲ್ಲಟವನ್ನು ಮತ್ತು ಅದರ ಅನಿವಾರ್ಯತೆಯನ್ನು ಅರಿವಿಗೆ ತಂದುಕೊಂಡು ಅತ್ಯಂತ ವಿಷಾದದಿಂದ ದಾಖಲಿಸುವ ರೀತಿ. ಪುಟ್ಟಣ್ಣನವರ ಆದರ್ಶವಿರುವುದು ಭಾರತದ ಸಾಂಪ್ರದಾಯಿಕ ಜೀವನ ಕ್ರಮದ ನೈತಿಕತೆಯಲ್ಲಿ. ಆದರೆ ತಾವು ನಂಬಿರುವ ಈ ಸಾಂಪ್ರದಾಯಿಕ ಜೀವನಕ್ರಮ ಉಳಿಯುವುದಿಲ್ಲ ಎನ್ನುವ ಖಚಿತ ಅರಿವುಅವರಿಗಿದೆ. ಒಂದು ಕಡೆ ತಮ್ಮ ನಂಬಿಕೆ ಮತ್ತು ಇನ್ನೊಂದೆಡೆ ಚಾರಿತ್ರಿಕ ಅನಿವಾರ್ಯತೆಯ ಅರಿವು– ಈ ಅರ್ಥದಲ್ಲಿ ಪುಟ್ಟಣ್ಣನವರ ಕಾದಂಬರಿ ಮಾರ್ಗವನ್ನು ನಾವು ಸಾಂಪ್ರದಾಯಿಕ ಕಾದಂಬರಿ ಮಾರ್ಗವೆಂದು ಕರೆಯಬಹುದು.

ಪುಟ್ಟಣ್ಣನವರು ತಮ್ಮ ಕಾದಂಬರಿಗಳಿಗೆ ಬಳಸುವ ಆಕರ ಸಾಮಗ್ರಿಯಲ್ಲಿಯೇ ಇದು ಎದ್ದು ಕಾಣುವ ಅಂಶವಾಗಿದೆ. ಅವರು ತಮ್ಮ ಕಥಾನಕಕ್ಕೆ ಬಳಸುವ ಸಾಮಗ್ರಿ ಮುಮ್ಮಡಿ ಕೃಷ್ಣರಾಜರ ಆಡಳಿತದ ಕಾಲಕ್ಕೆ ಸಂಬಂಧಿಸಿದ್ದು; ಆದರೆ ಪುಟ್ಟಣ್ಣನವರು ಬರೆಯುತ್ತಿರುವುದು ಸಾಮಾಜಿಕ ಕಾದಂಬರಿಗಳನ್ನು. ಮುಮ್ಮಡಿಯವರ ಔದಾರ್ಯ, ಅವರ ಆಸ್ಥಾನದ ವಿವರಗಳು, ಆಡಳಿತ ಯಂತ್ರ, ಜನಜೀವನದ ಸ್ಥಿತಿಗತಿಗಳನ್ನು ವಿವರಿಸುತ್ತಲೇ ಆ ಕಾಲದ ಮೈಸೂರಿನ ಸಾಮಾಜಿಕ ಅವಸ್ಥಾಂತರಗಳ ದಾಖಲೆಗಳಾಗಿ ಪುಟ್ಟಣ್ಣನವರ ಕಾದಂಬರಿಗಳು ಮೈದಾಳುತ್ತವೆ. ಇದನ್ನು ಡಾ.ಸುಜಾತಾ ಗುರುತಿಸಿದ್ದಾರೆ. ಐತಿಹಾಸಿಕವಾಗಲಿ, ಸಾಮಾಜಿಕವಾಗಲಿ ಕನ್ನಡ ಕಾದಂಬರಿಗಳಿಗೆ ವಸ್ತು ನಮ್ಮಲ್ಲೇ ವಿಪುಲವಾಗಿದೆ ಎಂಬುದನ್ನು ಕಂಡುಕೊಂಡ ಮೊದಲಿಗರಲ್ಲಿ ಪುಟ್ಟಣ್ಣನವರೂ ಒಬ್ಬರು ಎನ್ನುವ ಸುಜಾತಾ:

> “ಈ ಕಾದಂಬರಿಗಳಲ್ಲಿ ಪುಟ್ಟಣನವರು ಚಿತ್ರಿಸಿರುವುದು ಬ್ರಿಟಿಷ್ ಅಧಿಪತ್ಯದ ಆಶ್ರಿತ ಸಂಸ್ಥಾನವಾದ ಮೈಸೂರು. ಸುಮಾರು ನೂರು ವರುಷಗಳ ಹಿಂದಿನ ಕನ್ನಡಿಗರ ಬಾಳು ಬದುಕು, ಅರಮನೆಗುರುಮನೆಗಳ ಪರಿಸರ, ಅವರ ಪೂರ್ವಾಚಾರ ಶ್ರದ್ಧೆ, ವಿದ್ಯಾಭ್ಯಾಸ, ಕುಟುಂಬ ಕಲಹಗಳು, ಜನರ ನೇರ ಕೊಂಕುಗಳು, ಇತ್ಯಾದಿ ವಿಷಯಗಳು ಇಲ್ಲಿ ಚಿತ್ರಿತವಾಗಿವೆ”[೪೯] ಎಂದು ಹೇಳುತ್ತಾರೆ.

ಅಂದರೆ, ಡಿ.ಎಲ್. ನರಸಿಂಹಾಚಾರ್ ಅವರು ಹೇಳುವಂತೆ'ಪುಟ್ಟಣ್ಣನವರ ಕೃತಿಗಳಲ್ಲಿ ಅವರು ಕಂಡು ಕೇಳಿದ ಅಥವ ಅವರ ಅನುಭವಕ್ಕೆ ಬಂದ ಪ್ರಪಂಚ ಪರಿಮಿತಿಯುಳ್ಳದಾದರೂ ರಮ್ಯವಾಗಿ ರೂಪುಗೊಂಡಿದೆ'[೫೦] ಅಥವಾ ಡಿ.ವಿ.ಜಿ.ಯವರು ಗುರುತಿಸಿರುವಂತೆ ಪುಟ್ಟಣ್ಣನವರ ಕಾದಂಬರಿಗಳು 'ಇಂಗ್ಲಿಷ್ ನಾವೆಲ್‌ಗಳಂತೆ ಪ್ರತ್ಯಕ್ಷ ಜೀವನ ಚಿತ್ರಗಳು.'[೫೧]

ಮೇಲಿನ ಮಾತುಗಳು ಪುಟ್ಟಣ್ಣನವರ ಕಾದಮಬರಿಗಳಿಗೆ ಚೆನ್ನಾಗಿ ಅನ್ವಯಿಸುತ್ತವೆ. ಆದರೆ ಮೈಸೂರು ಪ್ರಾಂತದ ಜನಜೀವನವು ಪುಟ್ಟಣ್ಣನವರ ಕಾದಂಬರಿಗಳಲ್ಲಿ ಮಂಡನೆಯಾಗುವ ಕ್ರಮವನ್ನು, ವಾಸ್ತವಿಕತೆಯನ್ನು ಅವರು ಕಟ್ಟುವ ರೀತಿಯನ್ನು ಈ ಮಾತುಗಳು ವಿವರಿಸುವುದಿಲ್ಲ.

ಆದುದುರಿಂದ ಪುಟ್ಟಣ್ಣನವರು ತಮ್ಮ ಸಮಕಾಲೀನ ಲೇಕಕರಿಗಿಂತ ಹೇಗೆ ವಿಶಿಷ್ಟ ಮತ್ತು ಈ ವಿಶಿಷ್ಟತೆಗೆ ಕಾರಣಗಳೇನು ಎನ್ನುವುದನ್ನು ನಾವು ಕಂಡುಕೊಳ್ಳಬೇಕು. ಆಂದರೆ, ಪುಟ್ಟಣ್ಣನವರ ವಿಚಾರಗಳು, ಅವರ ಕಾದಂಬರಿಗಳ ಸನ್ನಿವೇಶ ಮತ್ತು ಅವರ ಕಾದಂಬರಿಗಳ 'ಆಕೃತಿ' – ಇವುಗಳ ಪರಸ್ಪರ ಸಂಬಂಧವನ್ನು ವಣಿವರಿಸುವುದು ಅಗತ್ಯ.

ಚಾರಿತ್ರಿಕವಾಗಿ ಬದುಕಿನಲ್ಲಿ ಬದಲಾವಣೆಯೊಂದು ಆರಂಭವಾಗಿದೆ. ಸಾಂಪ್ರದಾಯಿಕವಾದ ಜೀವನಕ್ರಮದಲ್ಲಿ ಪಲ್ಲಟವೊಂದು ತಲೆದೋರುತ್ತಿದೆ. ಹೊಸ ವಿದ್ಯಾವಂತ ವರ್ಗ ಹುಟ್ಟಿದೆ. ಒಂದೆಡೆ ಪಾಶ್ಚಿಮಾತ್ಯ ವೈಚಾರಿಕತೆಯನ್ನು ಮೈಗೂಡಿಸಿಕೊಂಡ ಹೊಸ ವಿದ್ಯಾವಂತ ವರ್ಗದಿಂದ ದೇಸೀ ಸಾಂಪ್ರದಾಯಿಕ ಆದರ್ಶವು ವಿಡಂಬನೆಗೆ, ಟೀಕೆಗೆ ಒಳಗಾಗುತ್ತಿದೆ. ಇನ್ನೊಂದೆಡೆ ಈ ಆದರ್ಶದ ವೈಭವೀಕರಣವೂ, ಯತ್ನವೂ ನಡೆಯುತ್ತಿದೆ. ಆದರೆ ಸಾಂಪ್ರದಾಯಿಕ ಜೀವನಕ್ರಮ– ದೇಸೀ ಸಂಸ್ಕೃತಿ – ತನ್ನ ಒಳಗಿನಿಂದಲೇ ಒಂದು ಬಗೆಯ ಅಸಹಜವಾದ ಬದಲಾವಣೆಗೆ ಒಳಗಾಗಿದೆ. ಇದರ ಪರಿಣಾಮವಾಗಿ ಸಾಂಪ್ರದಾಯಿಕ ಮೌಲ್ಯಗಳು ವಿದಳನಗೊಳ್ಳುತ್ತಿವೆ. ವಿದ್ಯಾವಂತ ಮನಸ್ಸು ಈ ಬದಲಾವಣೆಗಳಿಗೆ ಪ್ರತಿಕ್ರಿಯಿಸಿದ ರೀತಿಯಿಂದ ಪುಟ್ಟಣ್ಣನವರ ಕಾದಂಬರಿಗಳು ಮೈದಾಳಿವೆ.

ಹಳೆಯ ಬದುಕಿನ ಅನೇಕ ಉತ್ತಮ ಅಂಶಗಳು ಮರೆಯಾಗಿ ಹೋಗುತ್ತವೆ; ಅವುಗಳನ್ನು ಉಳಿಸುವುದು ಸಾಧ್ಯವಿಲ್ಲ ಎನ್ನುವ ವ್ಯಾಕುಲದ ತೀವ್ರತೆಯಲ್ಲಿ ಆ ಬದುಕನ್ನು ಎಳೆಎಳೆಯಾಗಿ ಪುಟ್ಟಣ್ಣನವರು ಚಿತ್ರಿಸುತ್ತಾರೆ. ಹೀಗಾಗಿ, ಜೀವನ ಕ್ರಮದಲ್ಲಿಯೇ ಆಗಿರುವ ಜೀವನಕ್ರಮದ ಪಲ್ಲಟದ ಅರಿವು ಮತ್ತು ಸಾಂಪ್ರದಾಯಿಕ ಮೌಲ್ಯಗಳು ವಿದಳನಗೊಳ್ಳುತ್ತಿರುವ ಮತ್ತು ಹೊಸ ಸಾಮಾಜಿಕ ಸಂಬಂಧಗಳು ರಊಪುಗೊಳ್ಳುತ್ತಿರುವ ಚಾರಿತ್ರಿಕ ಸತ್ಯ– ಇವೆರಡರ ಅಧಿಕೃತ ಚಿತ್ರವನ್ನು ಪುಟ್ಟಣ್ಣನವರ ಕಾದಂಬರಿಗಳಲ್ಲಿ ನಾವು ಕಾಣುತ್ತೇವೆ. ಆದುದರಿಂದ 'ಜೀವನಕ್ರಮದ ಪಲ್ಲಟ"[೫೨] ವನ್ನು ಪುಟ್ಟಣ್ಣನವರ ಕಾದಂಬರಿಗಳ ವಸ್ತುವೆನ್ನಬಹುದು.

ಈ ಬಗೆಯ ನಿಲುವಿಗೆ ಮತ್ತು ಪುಟ್ಟಣ್ಣನವರು ತಮಗಿಂತ ಸ್ವಲ್ಪ ಹಿಂದಿನ, ಕೃಷ್ಣರಾಜ ಭೂಪರನ್ನು ಕುರಿತ ಐತಿಹಾಸಿಕ ಸಾಮಗ್ರಿಯನ್ನು ಬಳಸಿಕೊಂಡಿರುವುದಕ್ಕೆ ಪರಸ್ಪರ ಸಂಬಂಧವಿದೆ. ಮೊದಲೆಯದಾಗಿ, ಇತಿಹಾಸವನ್ನು ಆದಷ್ಟು ವಸ್ತುನಿಷ್ಠವಾಗಿ ಅರಿಯುವುದು, ಅದರಿಂದ ಪ್ರೇರಣೆಗಳನ್ನು ಪಡೆಯುವುದು, ಅದರ ಪುನರ್ ಸಂಘಟನೆಯಿಂದ ಪ್ರಜ್ಞಾಶೀಲತೆಯನ್ನು

ಬೆಳೆಸಿಕೊಳ್ಳುವುದು ಮತ್ತು ಎರಡನೆಯದಾಗಿ, ತನ್ನ ಕಣ್ಣಮುಂದೆಯೇ ಬದುಕಿನಲ್ಲಿ ಆದ ಬದಲಾವಣೆಯನ್ನು ದಾಖಲಿಸುವುದು, ಅದರ ಕಾರಣಗಳನ್ನರಿಯಲು ಯತ್ನಿಸುವುದು ಈ ಆಯ್ಕೆಯ ಹಿಂದಿರುವ ತರ್ಕವಾಗಿದೆ. ಪುಟ್ಟಣ್ಣನವರ ಕಾದಂಬರಿಗಳ ಅಧ್ಯಯನದಿಂದ ಈ ಮಾತನ್ನು ಮನಗಾಣಬಹುದು.

ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹರಾಯ (೧೯೧೫) ಕಾದಂಬರಿಯ ಬಗ್ಗೆ ಕುರ್ತಕೋಟಿಯವರು ಹೀಗೆ ಹೇಳಿದ್ದಾರೆ.

"ಮುಖ್ಯ ಕಥಾನಕದಿಂದ ಸ್ವಲ್ಪ ಬೇರೆಯಾದ ಉಪಕತೆಗಳು ಬರುವದರಿಂದ ಬಂಧವೇನೋ ಸ್ವಲ್ಪ ಸಡಿಲಾಗಿರುವಂತೆ ಕಾಣಬಹುದು. ಇದರ ಅರಿವು ಲೇಖಕರಿಗೂ ಇದೆ. ಅತ್ತೆ ಸೊಸೆಯರ ಜಗಳ, ಸೀತಮ್ಮನ ಪಾತಿವ್ರತ್ಯ ಈಗ ಅತಿರಂಜಿತವಾಗಿ ತೋರಬಹುದು. ಕೊನೆಯಲ್ಲಿಯ ಮಂತ್ರವಾದಿಯ ಅದ್ಭುತ ಹಾಗೂ ಶಾಬರ ಪ್ರಯೋಗದ ಭಯಾನಕತೆಗಳು 'ದಶಕುಮಾರ ಚರಿತ್ರೆ'ಯನ್ನು ನೆನಪಿಗೆ ತಂದುಕೊಡಬಹುದು. ಮೈಸೂರೊಡೆಯರ ಔದಾರ್ಯದ ಕತೆಗಳು ಮೂಲಕತೆಗೆ ಸಹಜವಾಗಿಲ್ಲವೇನೋ ಎಂಬ ಸಂಶಯ ಬರಬಹುದು. ಇಷ್ಟಾದರೂ ಪುಟ್ಟಣ್ಣನವರ ಪ್ರಾಮಾಣಿಕವಾದ ಕಥನ ಶೈಲಿಯನ್ನು ಮರೆಯುವುದಾದರೂ ಹೇಗೆ?೫೩

ಈ ಮಾತನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಯಾಕೆಂದರೆ ಕಾದಂಬರಿಯ ವಿವರಗಳಿಗೆ ಮತ್ತು ಅದರ 'ಪ್ರಾಮಾಣಿಕವಾದ ಕಥನಶೈಲಿ'ಗೆ ವೈರುಧ್ಯದ ಸಂಬಂಧವಿರುವುದು ಸಾಧ್ಯವಿಲ್ಲ. ಬದಲಾಗಿ ಅತಿರಂಜಿತ ವಿವರಗಳು ಮತ್ತು ಸರಗತೆಗಳೇ ಪುಟ್ಟಣ್ಣನವರ ಕಾದಂಬರಿಗಳ ಮೂಲದ್ರವ್ಯ. ಪುಟ್ಟಣ್ಣನವರು ಇದನ್ನು ಸ್ಪಷ್ಟವಾಗಿ ಹೇಳಿಯೂ ಇದ್ದಾರೆ:

> "... ಶ್ರೀರಾಮ ಸೀತಾದೇವೆ, ಯುಧಿಷ್ಠಿರ ದ್ರೌಪದಿ, ಇವರುಗಳ ಗುಣಗಳಲ್ಲಿ ಕೆಲವು ಭಾಗವನ್ನು ಹೊಂದಿ, ಲೋಕದ ಲತಾಡಿಗೆ ಸಿಕ್ಕಿ ಕಷ್ಟಕ್ಕೆ ಗುರಿಯಾದರೂ, ತಮ್ಮ ಧೀರೋದತ್ತ ಗುಣಗಳನ್ನು ಬಿಡದೇ ಇರತಕ್ಕ ಪಾತ್ರಗಳನ್ನು ಮನುಷ್ಯ ಮಾತ್ರದವರಲ್ಲಿ ಆರಿಸಿಕೊಂಡೋ ಊಹಿಸಿಕೊಂಡೋ ವರ್ಣಿಸುವುದು ಮನಸ್ಸನ್ನು ಚೆನ್ನಗಿ ಆಕರ್ಷಣ ಮಾಡುವುದರಲ್ಲಿ ಸಂಶಯವಿಲ್ಲ. ಪುರಾಣ ಪ್ರಸಿದ್ಧರು ವ್ಯಾಕರಣದ ಸೂತ್ರಗಳಾಗಿದ್ದಾರೆ. ಮುನುಷ್ಯ ಸಾಮಾನ್ಯರಲ್ಲಿ ಸಿಕ್ಕುವ ಧೀರರು ಉದಾಹರಣೆಗಳಾಗಿದ್ದಾರೆ.

ಈ ಭಾವವನ್ನು ಮನಸ್ಸಿನಲ್ಲಿಟ್ಟು ಈ ಗ್ರಂಥವನ್ನು ಬರೆದಿದ್ದೇನೆ. ಇದರಲ್ಲಿ ಬರುವ ಪಾತ್ರಗಳ ಗುಣದೋಷಗಳು ಮೊದಲು ಸ್ವಲ್ಪ ತಲೆದೋರಿ ಮುಂದಕ್ಕೆ ಸಂದರ್ಭಾನುಸಾರವಾಗಿ ವೃದ್ಧಿಯಾಗುವ ರೀತಿಯನ್ನು ತೋರಿಸಿದೆ. ಅಸಂಬದ್ಧವೆಂದು ತೋರುವ ಸಂದರ್ಭಗಳೆಲ್ಲಾ ಮುಖ್ಯವಾದ ಕಥೆಯ ಅಂಗಗಳಾಗಿವೆ.

ಪುಟ್ಟಣ್ಣನವರ ಕೊನೆಯ ಮಾತನ್ನು ಗಮನಿಸಿ. ಅವರ ಉಪಕಥೆ, ಸರಗತೆಗಳೇ ಕಾದಂಬರೀ ರೂಪವನ್ನು ನಿರ್ಧರಿಸಿರುವ ಸಂಗತಿಗಳು ಮತ್ತು ಅವುಗಳನ್ನು ಕಥಾಸಂವಿಧಾನದ ಅಂಗವೆಂದೇ ನಾವು ಪರಿಭಾವಿಸಬೇಕು.

'ಪುಟ್ಟಣ್ಣನವರ ಕಾದಂಬರಿಗಳಿಗೆ ನಿಜವಾದ ಪರೋಕ್ಷ ನಾಯಕರೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು' ಎಂದು ತೀ ನಂ ಶ್ರೀಯವರು ಹೇಳಿದ್ದಾರೆ.

ಮಹಾರಾಜರ ಆಡಳಿತ, ಅದು ಪ್ರಕಟಿಸುವ ಮತ್ತು ಪ್ರತಿನಿಧಿಸುವ ಮೌಲ್ಯಗಳು ಪುಟ್ಟಣ್ಣನವರ ಕಾದಂಬರಿಗಳ ಆದರ್ಶ, ಕಾದಂಬರಿಯ ಸಾಮಗ್ರಿಯೂ ಇದೇ ಕಾಲದ್ದು. ಆದರೆ ವಾಸ್ತವದ ತರ್ಕ ಬೇರೆಯಾಗಿದೆ. ಮಹಾರಾಜರು ಪ್ರತಿನಿಧಿಸುವ ಆದರ್ಶ ಎಷ್ಟೇ ದೊಡ್ಡದಾದರೂ ಅದು ಉಳಿಯುವುದಿಲ್ಲ. ಕಾದಂಬರಿಯ ಬಂಧದುದ್ದಕ್ಕೂ ನಮಗೆ ಎದ್ದು ಕಾಣುವ ತರ್ಕ ಇದು. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ, (೧೯೧೫) ಮುಸುಗ ತೆಗೆಯೇ ಮಾಯಾಂಗನೆ (೧೯೨೯)೫೬, ಅವರಿಲ್ಲದೋಟ (೧೯೫೯) ಕಾದಂಬರಿಗಳನ್ನು ಪರಿಶೀಲಿಸಿದಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ.

ಈ ಕಾದಂಬರಿಗಳಲ್ಲಿ ಚಿತ್ರಿತನಾದ ಕೃಷ್ಣರಾಜ ಪ್ರಭು ತಾನು ಸ್ವತಃ ಮುಂದೆ ನಿಂತು ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಮಾಡಿಸುತ್ತಿದ್ದ ಧರ್ಮಪ್ರೇಮಿ. (ಮಾ.ಮ.೨೬-೨೮) ಸದ್ಗುಣಗಳನ್ನು ಸಾಮಾನ್ಯರಲ್ಲಿ ಕಂಡರೂ ಗುರುತಿಸಿ ಸನ್ಮಾನಿಸುತ್ತಿದ್ದ ಗುಣಾಗ್ರಣಿ (ಮಾ.ಮ.೨೯) ತನಗೆ ಇಷ್ಟರಾದ ಪ್ರಜೆಗಳ ಮನೆಗೂ ಬಿಜಯಂಗೈಯುತ್ತಿದ್ದ ಪ್ರಜಾವತ್ಸಲ, (ಮಾ.ಮ.೭೩-೭೭), ಸ್ನೇಹಪರ, ಉದಾರಿ (ಮು.ತೆ.ಮಾ.೩೯-೪೦), ಆದರೂ, ಬೆಳ್ಳಗಿರುವುದನ್ನೆಲ್ಲ ಹಾಲೆಂದು ನಂಬುತ್ತಿದ್ದ ಮುಗ್ಧ(ಮು.ತೆ.ಮಾ.೬೪-೬೫), ಅಷ್ಟೇ ನಿಷ್ಠುರ ನ್ಯಾಯವಾದಿಯೂ ಹೌದು (ಮು.ತೆ.ಮಾ.೭೭).

ಆದರೆ ಅವನ ಆಡಳಿತದ ಸ್ಥಿತಿ ಕೃಷ್ಣರಾಜ ಪ್ರಭುವಿನ ಈ ವ್ಯಕ್ತಿತ್ವಕ್ಕೆ ತದ್ವಿರುದ್ಧವಾಗಿತ್ತು. ಲಂಚಕೋರ ಅಧಿಕಾರಿಗಳು ಜನರನ್ನು ಸುಲಿಯುತ್ತಿದ್ದುದು (ಮಾ.ಮ.೧೬,೩೧-೩೨) ಸರ್ಕಾರೀ ಅಧಿಕಾರಿಗಳೇ ಕಳ್ಳಕಾಕರಿಗೆ ಒತ್ತಾಸೆಯಾಗಿರುವುದು (ಮಾ.ಮ.೧೮೩), ಅಧಿಕಾರಿಗಳು ಅತಿವಿನಯ ತೋರಿ ರಾಜನ ನಂಬಿಕೆಯ ಬಂಟರಾಗಿದ್ದುದು (ಮಾ.ಮ.೩೧) ಅವರ ಆರ್ಭಟ (ಮಾ.ಮ.೨೦), ಜಾತಿ ಕಲಹ ಮತ್ತು ಪೈಪೋಟಿ (ಮಾ.ಮ.೩೨-೮೮); ಮು.ತೆ.ಮಾ.೫೮-೬೯), ಪಾತಿವ್ರತ್ಯದ ಸೋಗು ಹಾಕಿರುವ ಸ್ತ್ರೀಯರು (ಅ.೧೧೨-೧೧೪), ಅರಸನ ಮೂಗಿನ ಕೆಳಗೇ ಮೈಸೂರಿನಲ್ಲಿಯೇ ನಡೆಯುತ್ತಿದ್ದ ವಂಚನೆ ಸುಲಿಗೆಗಳು ಮತ್ತು ಪಿತೂರಿ (ಮು.ತೆ.ಮಾ.೮೧-೧೧೬)ಗಳು ಸರ್ವೇಸಾಮಾನ್ಯವಾಗಿರುವ ಸ್ಥಿತಿಗಳನ್ನು ನಾವು ಈ ಕಾದಂಬರಿಗಳ ವಿವರಗಳಲ್ಲಿ ಗಮನಿಸುತ್ತೇವೆ.

ಒಂದು ಕಡೆ ಸದಾಶಿವ ದೀಕ್ಷಿತ, ಸೀತೆ, ಅಪ್ರಮೇಯ, ಕಿಸನ್ಬಾಲಾಜಿಯಂತಹ ಆದರ್ಶ ಪಾತ್ರಗಳು, ಇನ್ನೊಂದೆಡೆ ಅಪ್ಪಾಜಿ, ನಾಗರತ್ನಾಸಾನಿ, ಉಪಾಧ್ಯ, ನಾರಪ್ಪಯ್ಯ, ಹಯಾತ್‌ಸಾಬ್, ಬಸವೈಯ್ಯನಂತಹ ಪಾತ್ರಗಳು, ಇವುಗಳ ಪರಸ್ಪರ ಸಂಬಂಧದಿಂದ ಪುಟ್ಟಣ್ಣನವರ ಕೃತಿಗಳ 'ಆಕೃತಿ'ಯು ಪ್ರತೀತವಾಗುತ್ತದೆ. 'The defined heroes should be our rules of grammer and ordinary humand beings with an elevated conduct should be the examples'.ಮಾಡಿದ್ದುಣ್ಣೋ ಮಹಾರಾಯದ ಪ್ರಸ್ತಾವನೆಯಲ್ಲಿ ಪುಟ್ಟಣ್ಣನವರೇ ಹೇಳುವ ಈ ಮಾತುಗಳು ಅವರ ಕಾದಂಬರಿಗಳಿಗೆ ಅಕ್ಷರಶಃ ಅನ್ವಯಿಸುತ್ತವೆ.

ಪುಟ್ಟಣ್ಣನವರ ಕಾದಂಬರಿಗಳು ಆಧರಿಸುವ ಮುಮ್ಮಡಿಯವರ ಆಡಳಿತ ಕಾಲ ಮಹಾರಾಜರ ಆಡಳಿತದ ಉಜ್ವಲ ಅಧ್ಯಾಯವಲ್ಲ. 'ಕೃಷ್ಣರಾಜ ಭೂಪ ಮನೆಮನೆಗೆ ದೀಪ' ಎನ್ನುವುದು ಈಗ ಕೇವಲ ಗಾದೆಯ ಮಾತು. ಅಥವಾ ಅವರಿಲ್ಲದೂಟ ಕಾದಂಬರಿಯಲ್ಲಿ ಬರುವ ಉಲ್ಲೇಖದಂತೆ ಅದು 'ಸೂರ್ಯ ಅಸ್ತವಾದರೂ ಅವನ ಕಿರಣಗಳ ಪ್ರಭೆ ಇನ್ನೂ ಇರುತ್ತಾ ಸಂಧ್ಯಾಕಾಲ–ವೆನಿಸಿಕೊಳ್ಳುವುದಿಲ್ಲವೇ ಹಾಗೆ'. ಪುಟ್ಟಣ್ಣನವರ ಕಾದಂಬರಿಗಳಲ್ಲಿ ಧ್ವನಿತವಾಗುವುದು ಇಂತಹ ಸ್ಥಿತಿಯೇ.

ಉದಾರಿಯೂ ಸದ್ಗುಣಿಯೂ ಆಗಿರುವ ಮುಮ್ಮಡಿ ಕೃಷ್ಣರಾಜನಿಗೆ ತನ್ನ ರಾಜ್ಯದಲ್ಲಿ ಸಜ್ಜನರು ಕಷ್ಟಕ್ಕೆ ಒಳಗಾಗುವುದನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಮಾಡಿದ್ದುಣ್ಣೋ ಮಹಾರಾಯದಲ್ಲಿ ಭಟಜಿ, ಕುಂಪಣೀ ಸರ್ಕಾರ; ಮುಸುಗ ತೆಗೆಯೇ ಮಾಯಾಂಗನೆಯಲ್ಲಿ ಅಪ್ರಮೇಯ; ಅವರಿಲ್ಲದೂಟದಲ್ಲಿ ಕಿಸನ್ ಬಾಲಾಜಿ– ನ್ಯಾಯವನ್ನು ರಕ್ಷಿಸುವ ಪಾತ್ರಗಳು. ಒಂದೆಡೆಯಲ್ಲಿ ಆದರ್ಶ–ಸಜ್ಜನ ಪಾತ್ರಗಳು, ಎನ್ನೊಂದೆಡೆ ಅವುಗಳಿಗೆ ಒದಗುವ ವಿವಂಚನೆಯ ಅತಂತ್ರಸ್ಥಿತಿ ಆದರೆ ಕೊನೆಯಲ್ಲೂ ಆದರ್ಶ ಪಾತ್ರಗಳು ಗೆಲುವನ್ನು ಪಡೆಯುವ ಮತ್ತು ಖಳ ಪಾತ್ರಗಳಿಗೆ ಶಿಕ್ಷೆಯಾಗುವ ಚಿತ್ರ– ಪುಟ್ಟಣ್ಣನವರ ಅಭಿವ್ಯಕ್ತಿಯ ವಿನ್ಯಾಸವಿದು. ಇಷ್ಟಾಗಿಯೂ ಇವು ಸಮಾಜ ಸುಧಾರಣಾವಾದಿ ಮತ್ತು ಪುರುತ್ಥಾನವಾದಿ ಕಾದಂಬರಿಗಳಿಗಿಂತ ಭಿನ್ನ. ದಟ್ಟ ವಿಷಾದ ಇವುಗಳ ಲಕ್ಷಣ.

ಈ ಅಭಿವ್ಯಕ್ತಿ ವಿನ್ಯಾಸದ ತರ್ಕವೇ ಪುಟ್ಟಣ್ಣನವರನ್ನು ಸಾಂಪ್ರದಾಯಿಕ ಕಾದಂಬರಿ ಮಾರ್ಗದ ಪ್ರವರ್ತಕರೆಂದು ಸೂಚಿಸುವಂತಹುದು. ಸಾಂಪ್ರದಾಯಿಕ ಸ್ಫಟಿಕ ಶುದ್ಧ ಮೌಲ್ಯಗಳೇ ಅವರ ಆದರ್ಶ. ಆದರೆ ಚಾರಿತ್ರಿಕ ಯುಗಪರಿವರ್ತನೆಯೊಂದು ನಡೆಯುತ್ತಿದೆ. ಪುಟ್ಟಣ್ಣನವರು ನಂಬಿದ ಆದರ್ಶ ಮರೆಯಾಗುತ್ತಿದೆ. ಈ ಚಾರಿತ್ರಿಕ ಅನಿವಾರ್ಯತೆಯು 'ನಿರೂಪಣಾ ಪ್ರಜ್ಞೆ' ಯಲ್ಲಿ ದಟ್ಟವಾಗಿ ಬೇರುಬಿಟ್ಟಿದೆ. ನಾಶವಾಗುತ್ತಿರುವ ಆದರ್ಶಕಲವನ್ನು ಅದರ ಎಲ್ಲ ಕೂಲಂಕಷ ವಿವರಗಳೊಡನೆ ದಾಖಲಿಸುವ ಪರಿಕ್ರಮದಲ್ಲಿ ಪುಟ್ಟಣ್ಣನವರ ಕಾದಂಬರಿಯ ರೂಪವೆನ್ನುವುದು ಸಿದ್ಧವಾಗುತ್ತದೆ. ಸಾಂಪ್ರದಾಯಿಕ ಮೌಲ್ಯಗಳ ವಿದಳನವನ್ನು ಕುರಿತ ವಿಷಾದ ಈ ಕೃತಿಗಳ ಸ್ಥಾಯಿಯಾಗಿರುವುದು ಇದೇ ಕಾರಣದಿಂದ. ಆದುದರಿಂದ ಪುಟ್ಟಣ್ಣನವರ ಕಾದಂಬರಿಗಳನ್ನು 'ನಾಶವಾಗುತ್ತಿರುವ ಆದರ್ಶವನ್ನು ಆಧರಿಸಿರುವ ಕಾದಂಬರಿಗಳು' ಎಂದು ಕರೆಯಬಹುದು.

ಅಧ್ಯಾಯ – ೬

ಇಂದಿರಾಬಾಯಿ

ವಸಾಹತು ಅಧಿಕಾರ ಬಲಪಟ್ಟಂತೆ ಮತ್ತು ವಸಾಹತು ಆಧುನಿಕತೆಯು ಮುಂದಡಿಯಿಟ್ಟಂತೆಲ್ಲ ಸಾಂಸ್ಕೃತಿಕ ರಂಗದಲ್ಲಾದ ಪರಿವರ್ತನೆಯ ಆಳ ಅಗಲಗಳನ್ನು ವಿಶ್ಲೇಷಿಸಬಹುದಾದ ವಿಮರ್ಶಾ ದೃಷ್ಟಿಕೋನವೊಂದನ್ನು ಒದಗಿಸುವ ಹಲವು ಅಧ್ಯಯನಗಳು ಈಗಾಗಲೇ ಪ್ರಕಟವಾಗಿವೆ.೧ ೧೯ನೆಯ ಶತಮಾನದ ಸಮಾಜ ಸುಧಾರಣಾವಾದಿ ಚಳುವಳಿಗಳನ್ನು ಹೊಸ ನೆಲೆಯಲ್ಲಿ ನೋಡುವಂತೆ ಈ ಅಧ್ಯಯನಗಳು ಒತ್ತಾಯಿಸುತ್ತವೆ. ಹೆಚ್ಚಿನ ಸಮಾಜ ಸುಧಾರಣಾ ಪ್ರಯತ್ನಗಳು 'ಮಹಿಳಾ ಪ್ರಶ್ನೆ'ಯೊಂದಿಗೆ ಕಡಿದುಕೊಳ್ಳಲಾರದಂತೆ ಬೆಸೆದುಕೊಂಡಿರುವುದನ್ನು ಈ ಅಧ್ಯಯನಗಳು ಎತ್ತಿ ತೋರಿಸಿವೆ. ಆಧುನಿಕ 'ಸೆಕ್ಯುಲರ್ ಸ್ವ'ದ ರೂಪಣೆ ಮತ್ತು ಸಾಂಪ್ರದಾಯಿಕ ಸಮಾಜವನ್ನು ಆಧುನಿಕತೆಯೆಡೆಗೆ ತಿರುಗಿಸುವ ಎಲ್ಲ ಮುಂತೊಡಗುವಿಕೆಗಳೂ ಕುಟುಂಬ ಮತ್ತು ಸಮಾಜದಲ್ಲಿ ಸ್ತ್ರೀಯ ಪಾತ್ರವನ್ನು ಕುರಿತು ಮರುಚಿಂತನೆಯನ್ನು ನಡೆಸಿವೆ. ಈ ಅಧ್ಯಯನದುದ್ದಕ್ಕೂ ಉಲ್ಲೇಖಿಸಲಾದ ಅನೇಕ ಉಲ್ಲೇಖಗಳು ಈ ಮಾತಿಗೆ ಪುರಾವೆಯಾಗಿವೆ. ಕುಟುಂಬದ ಒಳ–ಹೊರಗೆ ಸ್ತ್ರೀ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎನ್ನುವ ಪ್ರಶ್ನೆಯನ್ನು ಎತ್ತುತ್ತಲೇ ಆಧುನಿಕ ಸ್ತ್ರೀಯ ಪ್ರತಿಮೆಯನ್ನು ಬಹುತೇಕ ಮೊದಲ ಕಾದಂಬರಿಗಳು ಕಟ್ಟುತ್ತವೆ. ಈ ಕಾರ್ಯಯೋಜನೆಯನ್ನು ಅಭಿವ್ಯಕ್ತಿಸಲು ಕಾದಂಬರಿ ಒಳ್ಳೆಯ ಮಾಧ್ಯಮ. ಆದುದರಿಂದ 'ಸಂಪ್ರದಾಯ' ಮತ್ತು 'ಆಧುನಿಕತೆ' ಈ ಎರಡನ್ನೂ ವಿವೇಚಿಸುತ್ತಲೇ ಸೆಕ್ಯುಲರ್ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವ ಪ್ರಯತ್ನದ ಚಿತ್ರಣವನ್ನು ಮೊದಲ ಕಾದಂಬರಿಗಳಲ್ಲಿ ನಾವು ಕಾಣುತ್ತೇವೆ. ಕಾದಂಬರಿಯು ಒದಗಿಸುವ ನಿರೂಪಣಾ ಅವಕಾಶದಲ್ಲಿ 'ಆಧುನಿಕತೆ' ಮತ್ತು 'ಸಂಪ್ರದಾಯ'ಗಳು ಎದುರುಬದುರಾಗಿ, ಘರ್ಷಿಸಿ ಸಾಮರಸ್ಯವನ್ನು ಸಾಧಿಸುತ್ತವೆ. ಈ ಅರ್ಥದಲ್ಲಿ ಕಾದಂಬರಿಯನ್ನು 'ಸೆಕ್ಯುಲರ್ ವ್ಯಕ್ತಿತ್ವಗಳ ಆತ್ಮಕಥನ'೨ ಎಂದು ಕರೆಯಬಹುದು.

ಇಂದಿರಾಬಾಯಿ ಕಾದಂಬರಿಯಲ್ಲಿ ಆಧುನಿಕೀಕರಣದ ಪ್ರಶ್ನೆ ಧರ್ಮ ಮತ್ತು ಆಧುನಿಕತೆಗಳ ನಡುವಣ ಘರ್ಷಣೆಯ ರೂಪವನ್ನು ಪಡೆಯುತ್ತದೆ. ಇಂದಿರಾಬಾಯಿ ಧಾರ್ಮಿಕ ವಲಯವನ್ನು 'ಪರಿಶುದ್ಧ ಮೌಲ್ಯಗಳು' ಮತ್ತು 'ಭ್ರಷ್ಟ ಆಚರಣೆಗಳು' ಎಂದು ಎರಡಾಗಿ ವಿಭಾಗಿಸುತ್ತದೆ. ಪರಿಶುದ್ಧ, ಸಾರ್ವಕಾಲಿಕ, ಸರ್ವಜನ ಕ್ಷೇಮ ಚಿಂತನೆಯ ಧಾರ್ಮಿಕ ಮೌಲ್ಯಗಳು ಆಧುನಿಕ ಕಾಲದಲ್ಲೂ ಅಗತ್ಯ. ಆದರೆ ಧಾರ್ಮಿಕ ಜೀವನ ಕ್ರಮದೊಳಗೆ ಹೇಗೋ ನುಸುಳಿದ ಅರ್ಥಹೀನ ಆಚರಣೆಗಳು, ಕಟ್ಟುಕಟ್ಟಲೆಗಳು, ಕುರುಡು ನಂಬಿಕೆಗಳನ್ನು ಮುಂದುವರಿಸುವುದು ಹಾಸ್ಯಾಸ್ಪದ. ಅಂತಹ ಅತಾರ್ಕಿಕ ಆಚರಣೆಗಳನ್ನು ಆಧುನಿಕರು ಕೈಬಿಡುವುದೇ ವ್ಯವಹಾರ ವಿವೇಕ ಎನ್ನುವುದನ್ನು ಈ ಕಾದಂಬರಿ ಸಾದರಪಡಿಸುತ್ತದೆ. ವಿಧವಾವಪನ, ವಿಧವೆಯರ ಮೇಲೆ ಬಲದಂತವಾಗಿ ಹೇರಿದ ಕಟ್ಟುಕಟ್ಟಲೆಗಳು, ಸಮುದ್ರ ಪ್ರಯಾಣ ನಿಷೇಧ ಮೊದಲಾದವುಗಳನ್ನು ವಿರೋಧಿಸುವ ಈ ಕೃತಿ ತಾನು 'ಅನೈತಿಕ' 'ಅನ್ಯಾಯ' 'ಅರ್ಥಹೀನ' ಎಂದು ತಿಳಿದ ಧಾರ್ಮಿಕ ಆಚರಣೆಗಳನ್ನು ವಿಡಂಬಿಸುತ್ತದೆ. ಅಂತಹ ಕ್ರಿಯಾಚರಣೆಗಳನ್ನು ಕುರಿತ ವಾಙ್ಮಯದಲ್ಲಿ ಸ್ತ್ರೀ ಸುಧಾರಣೆಯ ವಸ್ತುವಾಗಿ ಚಿತ್ರಿತಳಾಗುತ್ತಾಳೆ. ಕಾದಂಬರಿಯುದ್ದಕ್ಕೂ ಸ್ತ್ರೀತ್ವವನ್ನು ಕುರಿತು ಚರ್ಚಿಸುವವರು, ಅವಳ ಸೆಕ್ಷುಯಾಲಿಟಿಯನ್ನು ಶಿಸ್ತಿಗೊಳಪಡಿಸುವವರು, ಒಟ್ಟಾಗಿ 'ಸ್ತ್ರೀತ್ವ'ವನ್ನು ನಿರ್ವಚಿಸುವವರು ಗಂಡಸರು ಎನ್ನುವುದು ಗಮನಾರ್ಹ. ಆದುದರಿಂದ ಕೆ. ರಾಘವೇಂದ್ರ ರಾಯರು ಸರಿಯಾಗಿಯೇ ಗುರುತಿಸಿರುವಂತೆ "ಧರ್ಮವು ಕೇವಲ ಪರವನ್ನು ಕುರಿತ ಪರಾಮರ್ಶೆಗಾಗಿ ಮಾತ್ರವಲ್ಲ, ಅದಕ್ಕಿಂತಲೂ ಮುಖ್ಯವಾಗಿ ಸೆಕ್ಯುಲರ್ ಮತ್ತು ಪಾವಿತ್ರ್ಯದ ಹಂಗಿಲ್ಲದ ಸಾಮಾಜಿಕ ವಲಯದಲ್ಲಿಯೂ ಮಾರ್ಗದರ್ಶನ, ಪ್ರೇರಣೆ ಮತ್ತು ನಿರ್ದೇಶನಗಳನ್ನು ನೀಡುವ ಅಂಶವಾಗಿ" ಈ ಕಾಲದ ವಿದ್ಯಾವಂತರಿಗೆ ಕಾಣಿಸಿತು.೩ ಹಳೆಗಾಲವನ್ನು ವಿಡಂಬಿಸುತ್ತಲೇ ಇಂದಿರಾಬಾಯಿ ಧರ್ಮದ ಹೊಸ ಕಲ್ಪನೆಯನ್ನೂ ಮುಂದಿಡುತ್ತದೆ. ಅಂತಹ ಧಾರ್ಮಿಕರಾದ ಆಧುನಿಕ ವ್ಯಕ್ತಿತ್ವಗಳನ್ನೂ ಕಡೆಯುತ್ತದೆ.

ಗುಲ್ವಾಡಿಯವರು ಈ ಕೆಲಸವನ್ನು ತಮ್ಮ ಕಾದಂಬರಿಯಲ್ಲಿ ಹೇಗೆ ಸಾಧಿಸುತ್ತಾರೆ ಎಂದೀಗ ವಿವರವಾಗಿ ನೋಡಬಹುದು. ಇಂದಿರಾಬಾಯಿ ಸಾಂಪ್ರದಾಯಿಕ ಮತ್ತು ಆಧುನಿಕ ಜೀವನ ಕ್ರಮಗಳೆರಡನ್ನೂ ವಿಡಂಬಿಸುತ್ತದೆ, ಟೀಕಿಸುತ್ತದೆ. ಹೀಗೆ ಟೀಕಿಸುವಾಗ ಮೌಲ್ಯಗಳನ್ನು ಗುಲ್ವಾಡಿಯವರು 'ವ್ಯಕ್ತಿ ನೈತಿಕತೆ'ಯ ಮೂಲಕ ಜರಡಿ ಹಿಡಿಯುತ್ತಾರೆ. ಕಾದಂಬರಿಯ ಆರಂಭದ ಪುಟದಲ್ಲಿ ಮುದ್ರಿಸಿದ ಗಿರಿದುರ್ಗಂ ವನದುರ್ಗಂ/ ಜಲದುರ್ಗಂ ಯಂತ್ರ ತಂತ್ರಬಲಂ ಕಾಯ್ವವೇ?/ ನಿರುತಂ ಕಾಯ್ವುದು ಸತ್ಯಂ/ ಶರಣಂ ಸತ್ಯಂ ಶರಣಂ ಸತ್ಯಂ ನಿಜಮಿದು ತನಯಾ॥ ಎನ್ನುವ ಮಾತು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಇಂದಿರಾಬಾಯಿಯನ್ನು ಕುರಿತು ಬರೆದ ಡಾ. ಕೀರ್ತಿನಾಥ ಕುರ್ತಕೋಟಿ, ಜಿ. ಎಸ್. ಆಮೂರ, ಡಾ.ಸಿ ಎನ್. ರಾಮಚಂದ್ರನ್, ಡಾ.ಬಿ.ದಾಮೋದರ ರಾವ್, ಜಿ. ಎನ್. ರಂಗನಾಥ ರಾವ್, ಜಿ. ಎಚ್. ನಾಯಕ, ವಿ.ಎಂ. ಇನಾಂದಾರ, ಶ್ರೀನಿವಾಸ ಹಾವನೂರ ಮೊದಲಾದವರು ಇದನ್ನು ಈಗಾಗಲೇ ಗುರುತಿಸಿದ್ದಾರೆ.

ಆದುದರಿಂದ ಕಾದಂಬರಿಯ ನಿರೂಪಣಾ ಕ್ರಮದಲ್ಲಿ ಬೇರೆ ಬೇರೆ ಅಂಶಗಳು ಒಂದರೊಡನೊಂದು ಸಂಬಂಧವನ್ನು ಪಡೆದು ಹೊಸ ಅರ್ಥಗಳನ್ನು, ಹೊಸ ವ್ಯಕ್ತಿತ್ವಗಳನ್ನು ನಿರ್ಮಿಸುವ ಒಂದೆರಡು ಉದಾಹರಣೆಗಳನ್ನು ಮುಂದೆ ಚರ್ಚಿಸಲಾಗಿದೆ.

ಕಾದಂಬರಿ ಪ್ರಕಾರಕ್ಕೆ ಸಂಬಂಧಪಟ್ಟ ಹಾಗೆ ವಾಸ್ತವಿಕತೆಯ ಪ್ರಶ್ನೆ ಗುಲವಾಡಿಯವರಿಗೆ ಅಷ್ಟಾಗಿ ಕಾಡಿಲ್ಲ.

> "ಈ ಪುಸ್ತಕದಲ್ಲಿ ಬರೆದಿರುವುದು ಇಂದಿರಾಬಾಯಿ ಎಂಬವಳ ಜನ್ಮ ಚರಿತ್ರೆಯಾಗಿರುತ್ತೆ. ಬರೆದಾತನು ಭಾಷಾಭಿಜ್ಞನೆಂತಾಗಲೀ ಕಾವ್ಯ ವಿಶಾರದನೆಂತಾಗಲಿ ಕುಶಲನೆಂತಾಗಲಿ ತೋರ್ಪಡಿಸುವುದಕ್ಕೆ ಇದನ್ನು ಬರೆಯಲಿಲ್ಲ."

'ಸತ್ಯತೆ ಹೃದಯ ನಿರ್ಮಲತೆಗಳೇ ಇಹಪರದಲ್ಲಿಯೂ ಸಾರ್ಥಕಗಳು' ಎಂದು ತೋರ್ಪಡಿಸುವುದುಕ್ಕೆ ಇಂದಿರಾಬಾಯಿಯನ್ನು ಬರೆದಿರುವ ಲೇಖಕರು ಧಾರ್ಮಿಕ ಕಟ್ಟುಕಟ್ಟಲೆಗಳು ಹಿಂದು ಸ್ತ್ರೀಯರ ಬದುಕನ್ನು ಬಾಧಿಸುವ ರೀತಿಯನ್ನು ಚಿತ್ರಿಸಿದ್ದಾರೆ. ಈ ಪ್ರಯತ್ನದಲ್ಲಿ ಅವರು ಸಾರಸ್ವತ ಸಮಾಜ ಮತ್ತು ಆಧುನಿಕ ಮೌಲ್ಯಗಳನ್ನು ಕಠಿಣವಾದ ನೈತಿಕ ಪರೀಕ್ಷೆಗೆ ಒಡ್ಡುತ್ತಾರೆ.

ತನ್ನ ಉದ್ದೇಶ ಸಾಧನೆಗೆ ಅನೇಕ ನಿರೂಪಣಾ ತಂತ್ರಗಳನ್ನು ಇಂದಿರಾಬಾಯಿ ಬಳಸುತ್ತದೆ. ಮೊದಲನೆಯದಾಗಿ, ಗುಲ್ವಾಡಿಯವರು ಬಳಸುವ ವಿಡಂಬನೆಯ ಶೈಲಿಯು ಸಾಂಪ್ರದಾಯಿಕತೆ, ಆಧುನಿಕ ಸಂಸ್ಥೆಗಳು, ಹಳೆಗಾಲದ ಹೊಸಗಾಲದ ಜನರ ನಡವಳಿಕೆಗಳು, ಅರ್ಥಹೀನ ಆಚರಣೆಗಳು, ಕುರುಡು ನಂಬಿಕೆಗಳು ಮೊದಲಾದವುಗಳನ್ನು ತೀವ್ರವಾಗಿ ಟೀಕಿಸುತ್ತದೆ. ಭಿನ್ನಾಭಿಪ್ರಾಯ, ಭಿನ್ನಮತ, ಪ್ರತಿಮಾತಿಗೆ ಈ ಶೈಲಿ ಅವಕಾಶವನ್ನು ಕೊಡುವುದಿಲ್ಲ. ವಿಡಂಬನೆ ತನ್ನನ್ನು ತಾನು ಎಲ್ಲ ವಿಮರ್ಶೆಗಳಿಂದ ಮೇಲೆ ಇರಿಸುತ್ತದೆ. ಅದು ಯಾವುದೇ ಸಂವಾದದ ಸಾಧ್ಯತೆಯನ್ನು ನಿರಾಕರಿಸುತ್ತದೆ.

ಮೇಲ್ನೋಟಕ್ಕೇ ಗುಲವಾಡಿಯವರ ಪಠ್ಯ ಅಂತರ್ ಪಠ್ಮೀಯವಾಗಿದೆ. ಅಭಿಜಾತ ಪಠ್ಯಗಳು, ಪುರಾಣ, ಶೋಬಾನೆ ಹಾಡುಗಳು, ಗಾದೆ ಮಾತುಗಳು, ತಾಳಮದ್ದಳೆಯಂತಹ ಕಲಾರೂಪಗಳು ಕಾದಂಬರಿಯ ಉದ್ದೇಶಿತ ಅರ್ಥಗಳನ್ನು ಉತ್ಪಾದಿಸುವ ಹಾಗೆ ಇಂದಿರಾಬಾಯಿಯಲ್ಲಿ ಬಳಕೆಯಾಗಿವೆ. ಒಂದು ಕೊಲಾಜ್ ಚಿತ್ರದ ಹಾಗೆ ಇವುಗಳನ್ನು ಜೊತೆಗಿರಿಸಿ ಕೃತಿ ತನ್ನ ಆಶಯವನ್ನು ಸಾಧಿಸುತ್ತದೆ. ಸಂಸ್ಕೃತಿಯ ಎಲ್ಲ ಕೇಂದ್ರಗಳಿಂದಲೂ ಬೇಕಾದುದನ್ನು ಬೇಕಾದಂತೆ ಪಡೆದು ಗುಲವಾಡಿಯವರು ತಮ್ಮ ಪಠ್ಯವನ್ನು 'ವಿರಚಿಸು'ತ್ತಾರೆ. ಆದುದರಿಂದ ಇರುವುದನ್ನು ಇರುವಂತೆಯೇ ಚಿತ್ರಿಸಲು ವಾಸ್ತವವಾದೀ ಶೈಲಿಯ ಬಳಕೆಯಾಗುವುದಿಲ್ಲ. ಅದು ಒಂದು ದೃಷ್ಟಿಕೋನವಾಗಿ ನಿರೂಪಣಾತಂತ್ರವಾಗಿ ಕಂಡುಬರುತ್ತದೆ. ವಾಸ್ತವವಾಗಿ ನಿರೂಪಣೆಯ 'ಅವಾಸ್ತವಿಕತೆ'ಯನ್ನು ಗುಲವಾಡಿಯವರು ಚೆನ್ನಾಗಿಯೇ ಅರಿತಿದ್ದಾರೆ. ಅವರ ಕಾದಂಬರಿ ಉಂಟು ಮಾಡುವುದು ವಾಸ್ತವದ ಪರಿಣಾಮವನ್ನು. ನಿಜವೆಂದು ನಂಬಬಹುದಾದ ಲೋಕವನ್ನು ಇಂದಿರಾಬಾಯಿ ಕಟ್ಟುತ್ತದೆ.

'ಸದ್ಧರ್ಮ ವಿಜಯ' ಎನ್ನುವ ತನ್ನ ಇನ್ನೊಂದು ಶೀರ್ಷಿಕೆಯು ನಿಜವಾಗುವ ಹಾಗೆ ಮಾಡಲು ಇಂದಿರಾಬಾಯಿಯಲ್ಲಿ ಕಪ್ಪು-ಬಿಳುಪು ಪಾತ್ರಗಳ ಸೃಷ್ಟಿಯಾಗುವುದನ್ನು ಮತ್ತು ಅದರ ಸಂಘರ್ಷಹೀನ ಆಕೃತಿಯನ್ನು ಕುರಿತು ಈಗಾಗಲೇ ಚರ್ಚಿಸಿದ್ದೇವೆ. ಈ ಪಾತ್ರ ಸೃಷ್ಟಿ ಮತ್ತು ವ್ಯಕ್ತಿತ್ವ ಕಲ್ಪನೆಯನ್ನು ಮಾಡಲು ಗುಲವಾಡಿಯವರು ಬೇರೆ ಬೇರೆ ಪಠ್ಯಗಳನ್ನು ತಮ್ಮ

ಕೃತಿಯಲ್ಲಿ ಅಂತರ್ಗತ ಮಾಡಿಕೊಳ್ಳುತ್ತಾರೆ. ಅವು ಇಲ್ಲಿ ಹೊಸರೀತಿಯಲ್ಲಿ 'ಬೆಳಗಿ' ಹೊಸ ಅರ್ಥಗಳನ್ನು ಸೂಚಿಸುತ್ತವೆ.

ಉದಾಹರಣೆಗೆ, ಯಕ್ಷಗಾನ ತಾಳಮದ್ದಳೆಯನ್ನು ಅವರು ಬಳಸುವ ರೀತಿಯನ್ನು ನೋಡಬಹುದು. ಭೀಮರಾಯನ ಮನಸ್ಸಿನ ತಲ್ಲಣವನ್ನು ತೋರಿಸುತ್ತಲೇ ಈ ಭಾಗವು ವ್ಯಂಗ್ಯ ಪರಿಣಾಮವನ್ನೂ ಬೀರುತ್ತದೆ. ಭೀಮರಾಯನು ಆರಿಸಿಕೊಳ್ಳುವ ಕಥಾಬಾಗ ವಾಲಿ ವಧೆ. ಈ ಹೊತ್ತಿಗೆ ಸುಂದರರಾಯನ ಕೊಲೆಯ ವಿಚಾರಣೆ ನಡೆಯುತ್ತಿರುತ್ತದೆ. ಸ್ವತ: ಭಾಗವತನಾದ ಭೀಮರಾಯ ವಧಾ ಪ್ರಸಂಗವನ್ನು ಹಾಡುತ್ತಿರುವಾಗ ಮಾತು ತೊದಲಿ, ಬೆವರಿ ಮೂರ್ಛೆ ಹೋಗುತ್ತಾನೆ! ಇದು ಅವನ ಮನ:ಸ್ಥಿತಿಯ ಸೂಚನೆ. ಇಲ್ಲಿ ಎನ್ನೊಂದು ಸೂಚ್ಯಾರ್ಥವೂ ಇದೆ. ಆ ಕಾಲದಲ್ಲಿ ತಾಳಮದ್ದಳೆ ಉನ್ನತ ಅಭಿರುಚಿಯ ಪ್ರತೀಕವಾಗಿರಲಿಲ್ಲ. ಭೀಮರಾಯ ನಂತಹ ಢಂಬಾಚಾರಿಗಳು ಮತ್ತು ಅವನ ಸುತ್ತ ಭೋಜನಕ್ಕೆ ಸೇರುವ ಮಂದಿ ಮಾತ್ರ ತಾಳಮದ್ದಳೆಯಲ್ಲಿ ಭಾಗವಹಿಸುತ್ತಾರೆ. ಶಬ್ದಾಡಂಬರದ ಈ ಕಲೆಯ ಬಳಕೆಗೂ ಭೀಮರಾಯನ ಢಂಬಾಚಾರಕ್ಕೂ ನಿಕಟ ಸಂಬಂಧವಿದೆ. ಇಂದಿರಾಳ ಮೊದಲ ಮದುವೆ, ಮರು ಮದುವೆಗಳ ಚಿತ್ರಣವೂ ಈ ಬಗೆಯದ್ದು. ಮೊದಲ ಮದುವೆಯಲ್ಲಿ ಆಡಂಬರ ಹೆಚ್ಚು. ಎರಡನೆಯ ಮದುವೆಯಲ್ಲಿ ಸುಸಂಸ್ಕೃತತೆಗೆ ಒತ್ತು. ಅಲ್ಲಿ ಹಾಡುವ ಶೋಬಾನೆಗಳು ಆದರ್ಶ ದಾಂಪತ್ಯವನ್ನು ಕೀರ್ತಿಸುತ್ತವೆ. ಅಂದರೆ ತಮ್ಮ ನಿರೂಪಣೆಗಳ ಮೂಲಕ ಗುಲವಾಡಿಯವರು ಸಂಸ್ಕೃತಿಯನ್ನು ನಿಯಂತ್ರಿಸುತ್ತಾರೆ. ಯಾವುದು ಉತ್ತಮ ಸಾಂಸ್ಕೃತಿಕ ಅಭಿರುಚಿ ಮತ್ತು ನಡವಳಿಕೆ, ಯಾವುದು ಅಲ್ಲ ಎನ್ನುವುದನ್ನು ಸೂಚಿಸುತ್ತಾರೆ.

ಈ ಕಾದಂಬರಿಯುದ್ದಕ್ಕೂ ಕೊಂಕಣಿ, ತುಳು ಮತ್ತು ಕನ್ನಡ-ಇಂಗ್ಲಿಷ್ ಭಾಷಾ ಮಿಶ್ರಣಗಳನ್ನು ಗುಲವಾಡಿಯವರು ಬಳಸಿದ್ದಾರೆ. ಇದನ್ನು ವಿಮರ್ಶಕರು ವಾಸ್ತವಿಕತೆಗೆ ಸಂಬಂಧ ಪಟ್ಟಂತೆ ಮಾತ್ರ ಗಮನಿಸಿದ್ದಾರೆ. ಆಯಾ ಸಮುದಾಯಗಳ ಭಾಷೆಯನ್ನು ಬಳಸುವ ಮೂಲಕ ವೆಂಕಟರಾಯರು ಕನ್ನಡದಲ್ಲಿ ವಾಸ್ತವವಾದಿ ಪರಂಪರೆಯನ್ನು ಆರಂಭಿಸಿದ್ದಾರೆ ಎಂದು ಗ್ರಹಿಸಲಾಗಿದೆ.

ಈ ಮಾತು ಪಾರ್ಶ್ವಿಕ ಸತ್ಯ ಮಾತ್ರ. ತಮ್ಮ ಭಾಷೆಯಲ್ಲಿ ಯಾರು ಮಾತನಾಡುತ್ತಾರೆ, ಯಾವಾಗ ಮತ್ತು ಯಾಕೆ ಎನ್ನುವುದನ್ನೂ ನಾವು ಎದುರಾಗಬೇಕು. ಗುಲವಾಡಿಯವರ ಕಾದಂಬರಿಯ ಮುಖ್ಯ ಪಾತ್ರಗಳು ಸಾರಸ್ವತರು. ಆದರೆ ಅವರು ಮಾತನಾಡುವುದು ಕನ್ನಡದಲ್ಲಿ, ಕೊಂಕಣಿಯಲ್ಲಿ ಅಲ್ಲ! ಯಾಕೆಂದರೆ ಗುಲವಾಡಿಯವರು ಬರೆಯುತ್ತಿರುವುದು ಕನ್ನಡ ಕಾದಂಬರಿಯನ್ನು. ಪೋಲೀಸ್ ಪೇದೆಗಳು, ಕೆಳಜಾತಿಯ ಕೂಲಿಯಾಳುಗಳು, ಧೋಬಿಗಳು ತಮ್ಮ ಮನೆಮಾತನ್ನು ಬಳಸಿದರೆ, ಇಂಗ್ಲಿಷ್ ವಿದ್ಯಾವಂತರು ಕನ್ನಡ-ಇಂಗ್ಲಿಷ್ ಮಿಶ್ರಿತ ಭಾಷೆಯನ್ನು ಒಳಸುತ್ತಾರೆ. ಮೊದಲನೆಯದಾಗಿ, ಕಾದಂಬರಿಯ ಲೋಕದಲ್ಲಿ ಇದು ಮಂಗಳೂರು ಜೆಲ್ಲೆಯ ಜಾತಿ ವ್ಯತ್ಯಾಸಗಳನ್ನು ಮತ್ತು ಶ್ರೇಣೀಕರಣಗಳನ್ನು ಸೂಚಿಸುತ್ತದೆ. ಇಲ್ಲಿ ಬಳಸಲಾದ ಬಹು ಭಾಷಾ ಸಂಜ್ಞೆ ಜಾತಿ ಶ್ರೇಣೀಕರಣವನ್ನೂ ಬರಿಯುತ್ತದೆ. ಈ ಭಾಷೆ ಸಾಮಾಜಿಕ ಸಂಬಂಧಗಳನ್ನು ಸೂಚಿಸುವ ಮತ್ತು ರೇಖಿಸುವ ಭಾಷೆ. ಇರಡನೆಯದಾಗಿ

ಬೇರೆ ಬೇರೆ ಭಾಷೆಯಲ್ಲಿ ಮಾತನಾಡುವ ಮಂದಿ ಭೀಮರಾಯ, ಭಾಸ್ಕರರಾಯ, ಇಂದಿರೆಯರನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಿರುತ್ತಾರೆ. ಅವರ ಮಾಡು ಈ ಪಾತ್ರಗಳನ್ನು ಕುರಿತ· ಸಾರ್ವಜನಿಕ ಅಭಿಪ್ರಾಯವೂ ಹೌದು. ಬೇರೆ ಬೇರೆ ಭಾಷೆಗಳಲ್ಲಿ ಭೀಮರಾಯ ಅಂಬಾಬಾಯಿಯವರು ಖಳರಾಗಿಯೂ, ಭಾಸ್ಕರ, ಇಂದಿರೆಯರು ಆದರ್ಶಪಾತ್ರಗಳಾಗಿಯೂ ರೂಪಿತರಾಗುತ್ತಾರೆ. ಭೀಮರಾಯ, ಮತ್ತು ಅಂಬಾಬಾಯಿಗೆ ಅವರ ಬಗೆಗೆ ಜನರು ಏನು ಹೇಳುತ್ತಾರೆ ಎಂದು ಗೊತ್ತಿಲ್ಲದಿರಬಹುದು. ಆದರೆ ಆ ಮಾತುಗಳನ್ನು ಅನುವಾದಿಸುವ ಗುಲವಾಡಿಯವರು ತಮ್ಮ ಓದುಗರಿಗೆ ಒಂದು ಸ್ಪಷ್ಟ ಚಿತ್ರವನ್ನು ಕೊಡುತ್ತಾರೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಗುವಾಡಿಯವರು ಬಹುಭಾಷೆಗಳಲ್ಲಿ ಸಾರ್ವಜನಿಕ ಅಭಿಪ್ರಾಯವೊಂದನ್ನು ರೂಪಿಸುತ್ತಿರುತ್ತಾರೆ. ಹೀಗೆ ಸಾಂಪ್ರದಾಯಿಕ ಸಮಾಜದ ಟೀಕೆ, ಸೂಕ್ಷ್ಮವಾಗಿ ಬೇರೆ ಬೇರೆ ಭಾಷೆಗಳಲ್ಲಿ ವ್ಯಕ್ತವಾಗಿ ಗುವಾದದಲ್ಲಿ ಜೀವ ಪಡೆಯುತ್ತದೆ.

ಎರಡು ಪೀಳಿಗೆಗಳ ನಡುವಿನ ಸಂಘರ್ಷ, ವಿದ್ಯಾಭ್ಯಾಸ ಮತ್ತು ಸ್ತ್ರೀ ಸೆಕ್ಷುಯಾಲಿಟಿ (sexuality) ಗಳನ್ನು ಇಂದಿರಾಬಾಯಿ ಒಂದಾಗಿ ಹೆಣೆಯುತ್ತದೆ. ಆದುದರಿಂದಲೇ ಸಮಾಜ ಸುಧಾರಣೆಯ ಮುಖ್ಯ ವಸ್ತುವಾಗಿ ಸ್ತ್ರೀ ಈ ಕಾದಂಬರಿಯಲ್ಲಿ ಮೂಡಿ ಬರುತ್ತಾಳೆ. ಕೆಳಜಾತಿಯ ಹೆಂಗಸರು ಮತ್ತು ಮೇಲ್ಜಾತಿಯ 'ಕಟ್ಟುಕಟ್ಟಲೆ ಭಾಗೀರಥಿ'ಯರ ನಡುವಿನಿಂದ ಆಧುನಿಕ ವಿದ್ಯಾವಂತಳಾದ ಇಂದಿರಾ ಆದರ್ಶ ಭಾರತೀಯ ಸ್ತ್ರೀತ್ವದ ಪ್ರತೀಕವೆಂಬಂತೆ ಮೂಡಿ ಬರುತ್ತಾಳೆ. ಭಾರತೀಯ ಭಾಷೆಗಳ ಮೊದಲ ಕಾದಂಬರಿಗಳ ಪೈಕಿ ಕಾದಂಬರಿಯ ಬಂಧದಲ್ಲಿಯೇ ವಿಧವಾವಿವಾಹವನ್ನು ಸಾಧ್ಯ ಮಾಡಿ ತೋರಿಸಿದ ಕಾದಂಬರಿ ಇಂದಿರಾಬಾಯಿ-ಯೊಂದೇ ಎನ್ನುವುದನ್ನು ಇಲ್ಲಿ ದಾಖಲಿಸಬೇಕು.

ಇಂದಿರಾಬಾಯಿ ಮುಂದಿಡುವ ಆಧುನಿಕತೆಯ ಆದರ್ಶದ ಸ್ವರೂಪ ಯಾವುದು ಮತ್ತು ಅದು ಎಷ್ಟರ ಮಟ್ಟಿಗೆ ಸಾಧಿತವಾಯಿತು ಎನ್ನುವುದು ಮುಂದಿನ ಪ್ರಶ್ನೆ. ಮೇಲ್ಜಾತಿ ವಿದ್ಯಾವಂತರಿಂದ ನಿರೂಪಿತವಾದ ಈ ಆಧುನಿಕತೆ ಸಮಾಜದಲ್ಲಿ ಕ್ರಾಂತಿಕಾರಕವಾದ ಪರಿವರ್ತನೆಯನ್ನೇನೂ ತರಲಿಲ್ಲ. ಉಳಿದ ಸಮುದಾಯಗಳಿಗೆ ಅದರಿಂದ ದೊಡ್ಡ ಪ್ರಯೋಜನವೂ ಆಗಲಿಲ್ಲ. ಹಳೆಯ ವಾರಸುದಾರಿಕೆ, ಶ್ರೇಣೀಕರಣಗಳನ್ನು ಹೊಸ ಅಚ್ಚಿನಲ್ಲಿ ಎರಕ ಹೊಯ್ಯುವಷ್ಟರ ಮಟ್ಟಿಗೆ ಮಾತ್ರ ವಸಾಹತು ಆಧುನಿಕತೆಯು ಯಶಸ್ವಿಯಾಯಿತು. ಒಂದರ್ಥದಲ್ಲಿ ಭಾಸ್ಕರ ಮತ್ತು ಇಂದೆರೆಯರ ವಿವಾಹ ಹಳೆಯ ಕೌಟುಂಬಿಕ ಮೌಲ್ಯಗಳ ಮುಂದುವರಿಕೆಯನ್ನು ಸೂಚಿಸಿದರೆ, ಇಂದಿರೆ ಓದುವ 'ಸ್ತ್ರೀ ಧರ್ಮನೀತಿ' ಯಂತಹ ಪುಸ್ತಕಗಳು ಅದನ್ನು ಸಮರ್ಥಿಸುತ್ತವೆ. ಶಾಸ್ತ್ರ ಮತ್ತು ದೇಶ ಪದ್ಧತಿಗಳ ಪೈಕಿ ಇಂದಿರಾಬಾಯಿ ದೇಶಪದ್ಧತಿಯನ್ನು ನಿರಾಕರಿಸಿ ಸಾಸ್ತ್ರವನ್ನು ನೆಮ್ಮುತ್ತದೆ.[೫]

ಭಾಸ್ಕರ-ಇಂದಿರಾರ ಮದುವೆಯ ಬಳಿಕ ಅಂಬಾಬಾಯಿ-ಭೀಮರಾಯರ ನಡುವ ನಡೆಯುವ ಸಂಭಾಷಣೆ ಇದು:

"ಉಡಿಗೆಯ ಅಲಂಕಾರವೆಲ್ಲ ಹೇಗೆ?"

"ಜರಿಕಂಬಿಯ ನೀಲ ಬಣ್ಣದ ಪಟ್ಟೇ ಶೀರೆ, ಗುಲಾಬಿ ರಂಗಿನ ರೇಶ್ಮೆಯ ಕುಪ್ಪಸ, ಆಭರಣಗಳೆಲ್ಲ ನಮ್ಮ ಜೇತಿಗೆ ಒಪ್ಪಿದವುಗಳೇ, ನಿಡುಜಡೆಕಟ್ಟಿ ಮಲ್ಲಗೆ, ಗುಲಾಬಿ ಹೂ ಮುಡಿದುಕೊಂಡಿದ್ದಾಳೆ; ಕುಂಕುಮದ ಬೊಟ್ಟು, ಸಣ್ಣದೂ ದೊಡ್ಡದೂ ಅಲ್ಲದ ಒಂದು ವಿಧದ್ದು, ಕಣ್ಣಿಗೆ ಕಾಡಿಗೆ, ಮುಖಕ್ಕೂ ಕೈಗಲಿಗೂ ಅರಸಿನ ಹಚ್ಚಿಕೊಂಡಂತೆ ಕಣುತ್ತೆ."

"ಆ ಗಂಡನೆಂಬವನ ಅಲಂಕಾರ ಹೇಗೆ?"

"ಪಟ್ಟೇ ಕಂಬಿಯ ಹನ್ನೆರಡು ಮೊಳದ ಧೋತ್ರ, ಕಪ್ಪು ನಿಲುವಂಗಿ, ಶ್ಯಾಮಲವರ್ಣದ ಸಣ್ಣ ಪಾಗೋಟಿ, ಹಣೆಯಲ್ಲಿ ಗೀರು ಗಂಧ, ರಕ್ತಚಂದನದ ಬೊಟ್ಟು- ಅದಕ್ಕೆಲ್ಲ ಏನು ಕಡಿಮೆ? ಇಂಗ್ರೇಜಿ ಕಲಿತವರ ಹತ್ತಿರ ಏನೇನೆಲ್ಲ ಠಕ್ಕಿದೆ!"[೫]

ಇದು ಆಧುನಿಕರ ವಿವಾಹ ಎನ್ನುವುದನ್ನು ಇಲ್ಲಿ ನೆನಪಿಡಬೇಕು. ಇಂದೆರೆ ತನ್ನ ಮೊದಲ ಗಂಡನೊಡನೆ ಒಂದು ದಿನವನ್ನೂ ಕಳೆಯಲಿಲ್ಲ ಎನ್ನುವ ಮಾತು ಕಾದಂಬರಿಯಲ್ಲಿ ವಿಶೇಷವಾಗಿ ಬರುತ್ತದೆ. 'ಪವಿತ್ರ'ಳಾಗಿರುವುದರಿಂದಲೇ ಅವಳ ಪುನರ್ವಿವಾಹ ಸಾಧ್ಯವಾಗುತ್ತದೆ. ಚಿಕ್ಕ ಕನ್ನಿಕೆಯರಿಗೆ ಪ್ರಥಮ ವಿವಾಹವೇ ಯೋಗ್ಯವಲ್ಲ ಎನ್ನುವ ಭಾಸ್ಕರರಾಯ ವಿಧವಾವಿವಾಹವನ್ನು ಸಮರ್ಥಿಸುವುದು ಹೀಗೆ:

"ಪುನರ್ವಿವಾಹವಿಲ್ಲದೆ ಬೇರೆ ನಿವೃತ್ತಿ ಇಲ್ಲವೇ?"

ಇದು ಅಮೃತರಾಯನ ಪ್ರಶ್ನೆ. ಅದಕ್ಕೆ ಭಾಸ್ಕರನ ಉತ್ತರ ಹೀಗೆ:

"ಇದೆ. ಜನ್ಮಾಂತ್ಯ ಪರ್ಯಂತ ಬ್ರಹ್ಮಚರ್ಯದಲ್ಲಿರುವುದೇ ಹೆಚ್ಚು ಸಾರ್ಥಕವಾದದ್ದು. ಆದರೆ ಈಗಿನ ಕಲಸ್ಥಿತಿಗೂ ಮನುಷ್ಯ ಶರೀರ ಸ್ವಭಾವಗಳಿಗೂ ಅದು ಅಸಾಧ್ಯ"[೬]

ಬದಲಾದ ಸಾಮಾಜಿಕ ಸನ್ನಿವೇಶದಲ್ಲಿ ಬಾಲ ವಿಧವೆಯರು ಅನೈತಿಕ ಸಂಬಂಧಕ್ಕೆಳಸುವ ಸಂದರ್ಭಗಳು ಹೇರಳ. ಗುಪ್ತವಾಗಿ ಅಂತಹ ಸಂಬಂಧ ಬೆಳೆಸಿದರೆ ಸಾಂಪ್ರದಾಯಿಕ ಸಮಾಜ ಸಹಿಸಿಕೊಂಡೀತು. ಯಾಕೆಂದರೆ ಸತ್ಯತೆ, ಹೃದಯ ನಿರ್ಮಲತೆಗಳು ಈ ಸಮಾಜದಲ್ಲಿ ಪೂರ್ತಿಯಾಗಿ ಮರೆಯಾಗಿವೆ. ಆದರೆ ಹೊಸ ಪೀಳಿಗೆ ಈ ಬಗ್ಗೆ ನಿಜವಾದ ಕಳಕಳಿಯನ್ನು ಹೊಂದಿದೆ. ಯಾಕೆಂದರೆ ಈ ಪೀಳಿಗೆಗೆ ಹೃದಯ ನಿರ್ಮಲತೆ ಎಲ್ಲಕ್ಕಿಂತ ದೊಡ್ಡ ಮೌಲ್ಯವಾಗಿದೆ. ಹೀಗೆ ಮದುವೆ. ಸಂಸಾರಗಳ ಸುತ್ತ ಚರ್ಚೆಯನ್ನು ನಡೆಸಿ ನೈತಿಕ ಪರಿಶುದ್ಧ ಸ್ತ್ರೀ ಪ್ರತಿಮೆಯನ್ನು ಇಂದಿರಾಬಾಯಿ ಕಡೆಯುತ್ತದೆ.

ಇಂದಿರಾಬಾಯಿಯಲ್ಲಿ ಸಾಕ್ಷಾತ್ಕಾರವಾದ ಸಮಾಜ ಪರಿವರ್ತನೆ ಅದೇ ಸಮಾಜದ ಕೆಳಜಾತಿ ಜನರನ್ನು ಹೇಗೆ ತಟ್ಟಿತು? ಅವರ ಬದುಕನ್ನು ಅದು ಎಷ್ಟರ ಮಟ್ಟಿಗೆ ಪರಿವರ್ತಿಸಿತು? ಶಾಸ್ತ್ರೋಕ್ತವಾಗಿ, ಸರಳವಾಗಿ, ಮಂತ್ರಘೋಷದೊಡನೆ, ಶೋಬಾನೆ ಹಾಡಿನೊಂದಿಗೆ, ಮಂಡಿತ

ಸಜ್ಜನರ ಶುಭಾಶೀರ್ವಾದದೊಡನೆ ನಡೆದ ಇಂದಿರಾ–ಭಾಸ್ಕರರ ವಿವಾಹದ ಮರುದಿನವ ಭೋಜನ ವ್ಯವಸ್ಥೆ ಈ ಸುಧಾರಣೆಯ ಸ್ವರೂಪವನ್ನು ಬಯಲು ಮಾಡುವಂತಿದೆ.

"ಮರುದಿವ ಸಮೃತರಾಯನಲ್ಲಿ ಸ್ವಜಾತಿ ಬಾಂಧವರೆಲ್ಲರಿಗೂ, ಬೇರೆ ಜಾತಿಯವರಿಗೆ ಅವರವರ ದೇವಾಲಯಗಳಲ್ಲಿಯೂ ಪಂಚಭಕ್ಷ್ಯ ಪರಮಾನ್ನಗಳಿಂದ ಊಟಗಳಾದವು. ಅನಂತರ ಅಮೃತರಾಯನು ಐನೂರು ರೂಪಾಯಿಯ ವಿಧವಿಧವಾದ ವಸ್ತ್ರಗಳನ್ನು ತರಿಸಿ, ತನ್ನ ಮನೆಯ ಎಲ್ಲ ಸೇವಕರಿಗೂ ಹಂಚಿಕೊಡಲು ಅವರೆಲ್ಲರೂ ಸಂತೋಷಪಟ್ಟು ವಧೂವರರಿಗಾ–ಶೀರ್ವದಿಸಿದರು"

ಕರ್ನಾಟಕದಲ್ಲಿ ಈ ಕಾಲದಲ್ಲಿ ಅಡಿಯಿಟ್ಟ ಆಧುನಿಕತೆಯ ಜಾತಿ/ಲಿಂಗ ಪ್ರಭೇದಗಳ್ನೂ ಹೊಸ ರೀತಿಯಲ್ಲಿ ರೂಪಿಸಿತು. ಇಂದಿರಾಬಾಯಿ ಸೂಚಿಸುವುದು ಆ ವಾಸ್ತವವನ್ನು.

ನಾವು ಈವತ್ತು ಚಂಪೂ ಮತ್ತು ಕಾದಂಬರಿಗಳನ್ನು ನೋಡುವ ಕ್ರಮಗಳು ಬೇರೆಯಾಗಿವೆ. ಕಾದಂಬರಿಯು ಅತ್ಯಂತ ಹೆಚ್ಚು ಜನಪ್ರಿಯವಾಗಿದೆ. ಮಹಾಕಾವ್ಯ ಮತ್ತು ಕಾದಂಬರಿ ಪ್ರಕಾರಗಳು ಅತ್ಯಂತ ಪ್ರಮುಖವಾದ ಪ್ರಕಾರಗಳೂ ಹೌದು. ಅದನ್ನು ನಾವು ನೋಡುವಾಗ ಅದರ ಹಿನ್ನೆಲೆಯನ್ನು ಕೂಡಾ ಗಮನಿಸಬೇಕಾಗುತ್ತದೆ ಎಂದು ಲುಕಾಕ್ಸ್ ಹೇಳುತ್ತಾನೆ. ಅವನ ಪ್ರಕಾರ ಇದರ ಜೊತೆಗೆ ಒಂದು ಚಾರಿತ್ರಿಕವಾದ ಸಮಸ್ಯೆ ಇದೆ. ಹಾಗೆಯೇ ಇದು ತತ್ವಜ್ಞಾನದ ಪ್ರಶ್ನೆಯನ್ನು ಎತ್ತುತ್ತದೆ. ಈ ಎರಡು ಪ್ರಕಾರಗಳೂ ಮತ್ತೊಂದು ಅರ್ಥದಲ್ಲಿ ಕಾದಂಬರಿಯು ನಮಗೆ ಜೀವನದ ಪೂರ್ಣವಾದ ಸಂಗತಿಗಳನ್ನು ಪರಿಚಯ ಮಾಡುತ್ತದೆ. ಅದರ ಜೊತೆಗೆ ಚಂಪೂ ಕಾವ್ಯದಂಥ ಪ್ರಕಾರಗಳು ಕೂಡಾ ಜೀವನ ಮತ್ತು ಅದರ ಸಂಕೀರ್ಣತೆಯನ್ನು ಹೇಳಿವೆ. ಆದಿಪುರಾಣವನ್ನು ನೋಡಿ ಈ ಮಾತನ್ನು ಮುಂದುವರಿಸಬಹುದು. ಅದರಲ್ಲಿ ಬರುವ ಭವಾವಳಿಯನ್ನು ನೋಡಿದರೆ ನಮಗೆ ಇದು ಅರ್ಥವಾಗುತ್ತದೆ. ಜೀವನದಲ್ಲಿ ಯಾವುದು ಶಾಶ್ವತವಾದ ಮೌಲ್ಯ ಮತ್ತು ಯಾವುದು ಈ ಭೂಮಿಯಲ್ಲಿ ನಶ್ವರವಾಗಿದೆ ಎನ್ನುವುದರ ಚರ್ಚೆಯು ಮುಖ್ಯ. ಮತ್ತೆ ಮತ್ತೆ ತಿರುಗುತ್ತಲೇ ಬರುವ ಜನ್ಮ ನಮಗೆ ವಿವಿಧ ಸೂಚನೆಗಳನ್ನು ಕೊಡುತ್ತದೆ. ಒಂದು ಸಾವು ಮತ್ತೊಂದು ಹುಟ್ಟಿಗೆ ಕಾರಣವಾಗುತ್ತದೆ. ಅದರ ಜೊತೆಗೆ ಪ್ರತಿಯೊಂದು ಜೀವನದಲ್ಲಿಯೂ ಬೇರೆ ಬೇರೆ ಅನುಭವಗಳ ಸಾರ ರೂಪಗಳು ಇವೆ. ಜೀವನ ಮತ್ತು ಅದರ ಸಾರ ರೂಪವನ್ನು ಅದು ಹೇಳುತ್ತದೆ. ವೈಭವ, ತೀವ್ರವಾದ ಜೀವನದ ವಿಮುಖತೆ, ಗಂಡ ಮತ್ತು ಹೆಂಡತಿಯ ರತಿಕೇಳಿ ಮತ್ತು ಸಾವು, ಯುದ್ಧ ಮತ್ತು ವೈರಾಗ್ಯ– ಹೀಗೆ ಅದು ಮುಂದುವರಿಯುತ್ತದೆ. ಚಂಪೂ ಕಾವ್ಯವು ಗದ್ಯ ಮತ್ತು ಪದ್ಯದ ವಿಶಿಷ್ಟವಾದ ಎರಕ. ಇದು ಅತ್ಯಂತ ಅಪರೂಪವೂ ಹೌದು. ಪದ್ಯಗಳಿಗೆ ಒಂದು ಲಯವಿದೆ. ಅದರಲ್ಲಿ ಛಂದಸ್ಸು ಇದೆ. ಗದ್ಯವು ಕಥನದ ಮುಂದುವರಿಕೆಗೆ ಸಹಾಯವನ್ನು ಮಾಡುತ್ತದೆ. ಆದರೆ ಕಾದಂಬರಿಯು ಬೇರೆ ಥರ. ಅದು ಸಂಪೂರ್ಣವಾಗಿ ಗದ್ಯವೇ ಆಗಿರುತ್ತದೆ. ಆದರೆ ಗದ್ಯವನ್ನು ಒಂದು ಮಾನದಂಡವಾಗಿ ಇಟ್ಟುಕೊಂಡು ನಾವು ದುರಂತ ನಾಟಕಗಳನ್ನು ಗಮನಿಸಲಾಗುವುದಿಲ್ಲ. ಅದರ ಜೊತೆಗೆ ಮಹಾಕಾವ್ಯಗಳು ಕೂಡಾ ಈ ದೃಷ್ಟಿಯಿಂದ ಅತ್ಯಂತ ವಿಶಿಷ್ಟವಾದ ನಿರೂಪಣೆಯನ್ನು ಹೊಂದುತ್ತದೆ. ದುರಂತ ನಾಟಕದಲ್ಲಿ ಗದ್ಯವು ಬರುತ್ತದೆ. ನಿಜ. ಆದರೆ ಅದುವೇ ಅತ್ಯಂತ ಮುಖ್ಯ ಎಂದು ತಿಳಿಯಬೇಕಾಗಿಲ್ಲ. ಅದರಲ್ಲಿ ಬರುವ ಹಾಡುಗಳು ಕೂಡಾ

ಈ ದೃಷ್ಟಿಯಿಂದ ಭಿನ್ನವಾದ್ದು ಅದು ಕಥನವನ್ನು ಹೇಳಲು ಅವಕಾಶವನ್ನು ಕಲ್ಪಿಸುತ್ತದೆ. ಅಥವಾ ಮುಂದೆ ಏನು ನಡೆಲಿದೆ ಎಂದೂ ನಿರೂಪಿಸುತ್ತದೆ. ಅದು ಕೆಲವೊಮ್ಮೆ ಪ್ರೇಕ್ಷಕ ಮತ್ತು ನಾಟಕದ ನಡುವೆ ಒಂದು ನಿರ್ದಿಷ್ಟವಾದ ಅಂತರವನ್ನು ಕಾಪಾಡಲು ಅವಕಾಶವನ್ನು ಕೊಡುತ್ತದೆ. ಇದನ್ನು ನಾವು ಇಲ್ಲಿ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ನಾಯಕ ಮತ್ತು ಅವನ ಅವಸ್ಥಾಂತರಗಳನ್ನು ಮೇಳವು ಹೇಳುತ್ತದೆ. ಅದು ಅತ್ಯಂತ ಮಹತ್ವದ್ದು. ಅದರ ಜೊತೆಗೆ ಮೇಳವು ಕತೆಯನ್ನು ಬೆಳೆಸಲು ಸಹಾಯವನ್ನು ಮಾಡುತ್ತದೆ. ದುರಂತದ ನಾಯಕನು ಮನುಷ್ಯ. ಅವನು ಅವನು ತನಗೆ ತಿಳಿಯದ ಒಂದು ಹುನ್ನಾರದಲ್ಲಿ ಸಿಕ್ಕುತ್ತಾನೆ. ಅವನನ್ನು ನಾವು ಹಾಗೆಯೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಇನ್ನೊಂದು ಸಂಗತಿಯನ್ನು ಅರ್ಥ ಮಾಡಿಕೊಳ್ಳಬೇಕು. ನಾಟಕೀಯವಾದ ಗದ್ಯದಲ್ಲಿ ಒಂದು ಕಲಾತ್ಮಕವಾದ ಸ್ವರೂಪವನ್ನು ಕಾಣುತ್ತೇವೆ. ಅದು ಉದ್ದೇಶ ಪೂರ್ವಕವಾಗಿರುತ್ತದೆ. ಅದರ ಜೊತೆಗೆ ಗದ್ಯವು ಹೆಚ್ಚು ಆಕರ್ಶಕವೂ ಆಗಿರುತ್ತದೆ. ಅದು ಚೂಪಾದ ಮೊನೆಯಿರುವ ಅಲಗಿರುಂತೆ ಇರುತ್ತದೆ. ಭಾಷೆಯು ಇದರಲ್ಲಿ ಹೆಚ್ಚು ಉನ್ನತವಾದ ಮಟ್ಟದಲ್ಲಿ ಇರುತ್ತದೆ. ನಾಟಕೀಯತೆ ಎನ್ನುವುದೂ ಇಲ್ಲಿ ಅರ್ಥಪೂರ್ಣ. ಒಬ್ಬ ಲೇಖಕನು ಇದನ್ನು ಹೇಗೆ ಬಳಸುತ್ತಾನೆ ಎನ್ನುವುದರ ಮೂಲಕ ಇದು ಮಹತ್ವದ್ದು. ಭಾಷೆಯು ಇಲ್ಲಿ ಯಾಕೆ ಮಹತ್ವದ್ದು ಎಂದರೆ ಇಡೀ ನಾಟಕವು ಅತ್ಯಂತ ಗಂಭೀರವಾದ್ದು ಕೂಡಾ ಹೌದು. ವಸ್ತುವಿಗೆ ಅನುಗುಣವಾಗಿ ಭಾಷೆಯೂ ಹೆಚ್ಚು ತೂಕದ್ದು ಆಗಬೇಕಾಗುತ್ತದೆ. ಹಾಸ್ಯದ ನುಡಿಗಳು ದುರಂತಕ್ಕೆ ಅವಕಾಶವನ್ನು ಕಲ್ಪಿಸಲಾರವು. ದುರಂತ ಎನ್ನುವುದು ಇದರಲ್ಲಿ ಅತ್ಯಂತ ಮುಖ್ಯ.

ಉದಾಹರಣೆಗೆ ಮರಳಿಮಣ್ಣಿಗೆ ಕಾದಂಬರಿಯಲ್ಲಿ ರಾಮೈತಾಳ, ಲಚ್ಚ, ರಾಮ ಹೀಗೆ ವಿಭಿನ್ನವಾದ ತಲೆಮಾರುಗಳು ವಿಭಿನ್ನವಾದ ಕಥನಗಳನ್ನು ಹೊಂದಿವೆ. ಆದರೆ ಈ ಕಾದಂಬರಿಯನ್ನು ನೋಡುವಾಗ ನಮಗೆ ಅದರ ಕಥನಗಳು ಒಂದಕ್ಕೆ ಒಂದು ಸೇರಿಕೊಂಡು ಕಾದಂಬರಿಯು ಆಗಿದೆ. ಇದು ಒಂದು ಉದಾಹರಣೆ ಮಾತ್ರ. ಕಾದಂಬರಿಗಳು ಹೀಗೆ ಆಗುತ್ತದೆ. ಒಂದು ಕಾದಂಬರಿಯು ಹೇಗೆ ಆಗುತ್ತದೆ ಎಂದು ಕೇಳಿದರೆ ಅದೂ ಒಂದು ನಿಯಮದ ಮೂಲಕವೇ ಸಾಧಿತವಾಗುತ್ತದೆ. ಕಾದಂಬರಿಯಲ್ಲಿ ಜೀವನ ಕ್ರಮದ ಒಂದು ನಿಯಮಬದ್ಧತೆಯು ಇರುತ್ತದೆ. ಅದನ್ನು ಬಿಡಿ ರೂಪಗಳ ಸಮಗ್ರೀಕರಣ ಎಂದೂ ಹೇಳಬಹುದು. ಒಬ್ಬ ಕಾದಂಬರಿಕಾರನು ಹೊರಗಿನ ವಸ್ತುವನ್ನು (ಅದನ್ನು ವಸ್ತುನಿಷ್ಟ ಎಂದೂ ಕರೆಯಬಹುದು) ಸಾಹಿತ್ಯದ ಒಳಗಿನ ವಸ್ತುವಾಗಿ ತರುತ್ತಾನೆ ಹೀಗೆ ತರುವಾಗ ಅದು ಕಾದಂಬರಿಯ ವಿಷಯವಾಗಿ ಪರಿವರ್ತನೆಯಾಗಿ ಬದಲಾಗುತ್ತದೆ. ಹೀಗೆ ಪರಿವರ್ತನೆಯಾಗುವಾಗ ಅದರ ಆಂಶಿಕ ಅಗತ್ಯಗಳು ಬೇರೆ ಇರುತ್ತವೆ.. ಬರೆಯುವುದು ಅಂದರೆ ಅದರಲ್ಲಿ ನಾವು ನಿಯಮದ ಚೌಕಟ್ಟಿನೊಳಗೆ ಬರುವುದೂ ಹೌದು., ಕಾದಂಬರಿಯು ಬರೆಯುವ ಮೊದಲು ಅಮೂರ್ತವಾಗಿರುತ್ತದೆ. ಬರೆದ ಮೇಲೆ ಅದು ಪೂರ್ಣವಾದ ರೂಪವನ್ನು ಹೊಂದುತ್ತದೆ. ಹೆಗೆಲ್ ಇದನ್ನು ಅಮೂರ್ತ ಎಂದು ಹೇಳುತ್ತಾನೆ. ಆದರೆ ಅದು ಯಾವುದು ವಾಸ್ತವ ಆಗಿದೆಯೋ ಅದನ್ನು ಬರಹದ ಮೂಲಕ ಒಂದು ಅಸ್ತಿತ್ವಕ್ಕೆ ತರುತ್ತದೆ. ಕಾದಂಬರಿ ರೂಪಕ್ಕೆ ಮತ್ತು ಸಮಾಜದ ರಚನೆಗೆ ಈ ಕಾರಣದಿಂದ ಒಂದು ಸಂಬಂಧವು ಇದೆ.,ಅದಕ್ಕೂ ಒಂದು ಉದ್ದೇಶವೂ ಇರುತ್ತದೆ.

ಕಾದಂಬರಿ ಎನ್ನುವುದು ಒಂದು ಹಂತದ ವರೆಗೆ ಈ ಕಾರಣದಿಂದ ಅಮೂರ್ತವೂ ಹೌದು. ಅದನ್ನು ಓದುವಾಗ ನಾವು ಕೆಲವನ್ನು ಕಲ್ಪಿಸಿಕೊಳ್ಳುವುದು ಅತ್ಯಂತ ಅನಿವಾರ್ಯವಾಗುತ್ತದೆ. ಅದರಲ್ಲಿ ವಾಸ್ತವ ಎನ್ನುವುದು ಹೆಚ್ಚು ಮುಖ್ಯವಾಗಿರುವುದರಿಂದ ಅದನ್ನು ನಾವು ಭಾವಗೀತೆ, ನಾಟಕ ಮುಂತಾದ ಪ್ರಕಾರಗಳ ಜೊತೆಗೆ ನೋಡುವುದು ಕಷ್ಟವಾಗುತ್ತದೆ. ಭಾವಗೀತೆಯು ವಾಸ್ತವವನ್ನು ಅತ್ಯಂತ ನೇರವಾದ ಒಂದು ದೃಷ್ಟಿಕೋನದಲ್ಲಿ ನೋಡುವುದಿಲ್ಲ. ಅದು ಆ ರೂಪದಲ್ಲಿ ಅತ್ಯಂತ ಕಷ್ಟವೂ ಹೌದು. ಅದನ್ನು ನಾವು ಒಂದು ಮನೋರಂಜನಾತ್ಮಕವಾದ ಕಲೆ ಎಂದು ಹೇಳುವುದೂ ಸಾಧ್ಯವಿಲ್ಲ. ಭಾವಗೀತೆಯನ್ನು ನಾವು ಮನೋರಂಜನೆಯ ಹಿನ್ನೆಲೆಯಲ್ಲಿ ಗಮನಿಸುವುದು ಕಷ್ಟ. ಕಾದಂಬರಿಯು ಒಂದು ಕಡೆಯಿಂದ ಸೌಂದರ್ಯವನ್ನು ನಿರೂಪಿಸುತ್ತದೆ. ಮತ್ತೊಂದು ಕಡೆಯಿಂದ ಅದು ಸಮಾಜವನ್ನು ನಿರೂಪಿಸುತ್ತದೆ. ಆದ್ದರಿಂದ ನಾವು ಕಾದಂಬರಿಯನ್ನು ಓದುವಾಗ ಅದರಲ್ಲಿ ತನ್ಮಯರಾಗುತ್ತೇವೆ. ಮತ್ತೊಂದು ಅರ್ಥದಲ್ಲಿ ಕಾದಂಬರಿಗೆ ಮತ್ತು ಮಹಾಕಾವ್ಯಕ್ಕೆ ಇರುವ ನಂಟು ಸಾಹಿತ್ಯದ ಸಾಧ್ಯತೆಯನ್ನು ಹೇಳುತ್ತದೆ. ಒಂದು ಕಲಾಕೃತಿಯಾಗಿ ಕಾದಂಬರಿಯು ಗಮನವನ್ನು ಸೆಳೆಯುವ ಗುಣವನ್ನು ಹೊಂದಿದೆ. ಕಾದಂಬರಿಯು ಒಂದು ಹಂತದಲ್ಲಿ ಮುಗಿಯುತ್ತದೆ. ಇನ್ನೊಂದು ಹಂತದಲ್ಲಿ ಅದರ ಪ್ರಾರಂಭವೂ ಹೌದು. ಕಾದಂಬರಿಯು ಆಗುತ್ತದೆ. ಅಥವಾ ಅದು ಆಗುವಿಕೆಯ ದಾರಿಯಲ್ಲಿ ಸಾಗುತ್ತದೆ. ಅದು ಒಂದು ಅಭಿರುಚಿಯನ್ನು ನಿರ್ಮಾಣ ಮಾಡುವುದೂ ಅಷ್ಟೆ ಸತ್ಯ. ಕಾದಂಬರಿಯಲ್ಲಿ ವಸ್ತು ಮತ್ತು ಅದರ ನಿರೂಪಣೆಗೆ ಒಂದು ಮಹತ್ವವು ಇದೆ. ಅದು ಜಗತ್ತನ್ನು ನೋಡುವುದು ಮತ್ತು ಅದನ್ನು ನಿರೂಪಿಸುವುದು ಭಿನ್ನವಾಗಿ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಅದರಲ್ಲಿ ಜೀವನದ ಬಗ್ಗೆ ಒಂದು ನೋಟವೂ ಇದೆ. ಅದು ನಮಗೆ ಒಂದು ನೋಟವನ್ನು ಕಲಿಸುತ್ತದೆ. ಕಾದಂಬರಿ ಮತ್ತು ಅದರ ಕೇಂದ್ರವನ್ನು ನಾವು ಉಳಿದ ಪ್ರಕಾರಕ್ಕೆ ಹೋಲಿಸಲು ಸಾಧ್ಯವಿಲ್ಲ. ಅದು ಜೀವನವನ್ನು ಅತ್ಯಂತ ಹತ್ತಿರದಿಂದ ನೋಡುವ ಕಾರಣದಿಂದ ಅದಕ್ಕೆ ಒಂದು ವಿಶಿಷ್ಟವಾದ ಮೌಲ್ಯವೂ ಇರುತ್ತದೆ. ಕಾದಂಬರಿಯ ಉದ್ದೇಶವು ಎಷ್ಟೋ ಸರ್ತಿ ಮೇಲು ನೋಟಕ್ಕೆ ಕಾಣುವುದಿಲ್ಲ. ಅದು ಕಾದಂಬರಿಯಲ್ಲಿ ಅಡಗಿರುತ್ತದೆ. ಈ ದೃಷ್ಟಿಯಿಂದ ಇಂದಿರಾಬಾಯಿ ಕಾದಂಬರಿಯು ನಮಗೆ ಹೊಸದಾದ ಅನುಭವವನ್ನು ಕೊಟ್ಟಿದೆ. ಈ ಕಾದಂಬರಿಯು ಕೂಡಾ ಒಂದು ಪರಿಕಲ್ಪನೆಯಲ್ಲಿ ಕೆಲಸವನ್ನು ಮಾಡುವ ಥರ ಕಾಣುತ್ತದೆ. ಇನ್ನೊಂದು ಕಡೆಯಿಂದ ಇದು ಸ್ಥಳೀಯತೆಯನ್ನು ನಿರೂಪಿಸುತ್ತದೆ. ಇದರಲ್ಲಿ ಸಮಾಜ ಮತ್ತು ಜೀವನ ಎನ್ನುವುದರ ಒಂದು ವಿಶಿಷ್ಟವಾದ ಕಲ್ಪನೆಯೂ ಇದೆ.

ಕಾದಂಬರಿಯಲ್ಲಿ ಒಂದು ನಿಯಮ ಮತ್ತು ಪ್ರಾತಿನಿಧಿಕತೆಯು ಇದೆ. ಮರಳಿ ಮಣ್ಣಿಗೆ ಕಾದಂಬರಿಯನ್ನು ಓದಿದರೆ ನಮಗೆ ಅದು ಜೀವನದ ಚಿತ್ರದಂತೆ ಭಾಸವಾಗುತ್ತದೆ. ಅವರ ಬೆಟ್ಟದ ಜೀವ ಕಾದಂಬರಿಯನ್ನು ಓದಿದರೆ ನಮಗೆ ಅದರಲ್ಲಿ ಒಂದು ಜೀವಂತಿಕೆಯು ಕಾಣಿಸುತ್ತದೆ. ಈ ಜಗತ್ತಿನಲ್ಲಿ ಯಾವುದೇ ಸಮಸ್ಯೆಯಿಲ್ಲದ ನಾಯಕ ಮತ್ತು ನಾಯಕಿಯರು ಇಲ್ಲ. ಅವರು ಒಂದಲ್ಲಾ ಒಂದು ಸಮಸ್ಯೆಗೆ ಸಿಕ್ಕಿ ಹಾಕಿಕೊಂಡಿದ್ದಾರೆ.ಆದ್ದರಿಂದ ಅವರನ್ನು ನಾವು ಅತ್ಯಂತ ಲೋಲುಪರಾದ ಜೀವಿಗಳು ಎಂದು ಹೇಳಲು ಸಾಧ್ಯವಿಲ್ಲ. ಅವರಿಗೆ ಅವರದೇ ಆದ ಸಮಸ್ಯೆಯು ಇದೆ. ಅದರ ಜೊತೆಗೆ ಅವರು ಆದರ್ಶವನ್ನು ಇಟ್ಟುಕೊಂಡಿದ್ದಾರೆ. ಅವರ ಆಲೋಚನೆ ಮತ್ತು ಅವರ ಆದರ್ಶವನ್ನು ನಾವು ಈ ರೀತಿಯಲ್ಲಿ ನೋಡಲು ಸಾಧ್ಯ.

ಕಾದಂಬರಿಗಳಲ್ಲಿ ರಾಚನಿಕವಾದ ಭಿನ್ನತೆಯು ಹೇಗೆ ಇದೆಯೋ ಅದೇ ರೀತಿಯಲ್ಲಿ ನಾಯಕರಿಗೆ ಒಂದು ನಿಲುವು ಕೂಡಾ ಇರುತ್ತದೆ. ಈ ದೃಷ್ಟಿಯಿಂದ ಕಾದಂಬರಿಯು ನಮಗೆ ನಿಜವಾದ ಅನುಭವದ ಲೋಕವನ್ನು ಹೇಳುತ್ತದೆ. ಕಾದಂಬರಿಯಲ್ಲಿ ಬರುವ ನಿಜವಾದ ಅನುಭವ ಮತ್ತು ಅದರ ಸ್ವಾರಸ್ಯವು ಬೇರೆ. ಅದು ಸ್ವ ವಿಮರ್ಶೆಯ ಹಾದಿಯನ್ನು ಕೂಡಾ ನಮಗೆ ಸೂಚಿಸುತ್ತದೆ. ಕಾದಂಬರಿಯಲ್ಲಿ ಬರುವ ವಾಸ್ತವ ಎನ್ನುವುದು ಕೂಡಾ ಭಿನ್ನವಾದ್ದು. ಅದರ ಕಾದಂಬರಿಯಲ್ಲಿ ಒಡಮೂಡಿದೆ ಎಂದು ಮಾತ್ರವೇ ಯೋಚನೆ ಮಾಡಬೇಕು. ಅದರ ಹಿಂದೆ ಒಂದು ಬೌದ್ಧಿಕತೆಯು ಇದೆ. ಅದು ಜೀವನದ ಜೊತೆಗೆ ನೇರವದ ಸಂಬಂಧವನ್ನು ಹೊಂದಿದೆ. ಹೊರಗಿನ ಜಗತ್ತು ಕಾದಂಬರಿಯ ಒಳಗೆ ಬರುವಾಗ ಅದರ ಅರ್ಥಪೂರ್ಣತೆಯನ್ನು ಕಾಪಾಡುತ್ತದೆ. ಅದು ಅದರ ಸಾದ್ಯತೆಯೂ ಹೌದು. ಆದರೆ ರೊಮಾಂಟಿಕರು ಮಾತ್ರ ಕಾದಂಬರಿಯನ್ನು ಕುರಿತು ಹೇಳುವಾಗ ಅದು ಇತರ ಪ್ರಕಾರಗಳ ಜೊತೆಗೆ ಯಾವ ಸಂಬಂಧವನ್ನು ಇಟ್ಟುಕೊಂಡಿದೆ ಎಂದು ಹೇಳುತ್ತಾರೆ. ತುಂಬಾ ಶುದ್ಧವಾದ ಭಾವಗೀತೆಯು ತನ್ನ ವಿಶಿಷ್ಟತೆಯನ್ನು ಕಾಪಾಡುತ್ತದೆ ಎನ್ನುವುದು ಅವರ ನಿಲುವು. ಕಾದಂಬರಿ ಮತ್ತು ಅದರ ಆಂತರಿಕವಾದ ರೂಪವು ನಿರ್ದಿಷ್ಟವಾದ ಆಶಯವನ್ನು ಹೊಂದಿರುತ್ತದೆ ನಮ್ಮ ಜೀವನ ಕ್ರಮದ ವಿಶಿಷ್ಟತೆಯನ್ನು ಕಾದಂಬರಿಯು ಹೇಳುತ್ತದೆ. ಕಾದಂಬರಿಯ ಪ್ರಾರಂಭ ಮತ್ತು ಅಂತ್ಯವು ಅದರ ಸತ್ವವನ್ನು ಹೇಳುತ್ತದೆ. ಅದು ಮುಖ್ಯ.

ಶತಮಾನದ ಯುರೋಪಿನ ಪ್ರಾಬಲ್ಯವು ಜಗತ್ತಿನಲ್ಲಿ ಮಹತ್ವದ ಕ್ರಾಂತಿಯನ್ನು ಉಂಟು ಮಾಡಿದ್ದು ನಿಜ. ಅದರ ಮೂಲಕ ಅದು ಜಗತ್ತಿನ ಮೇಲೆ ಒಂದು ಹಿಡಿತವನ್ನು ಸಾಧಿಸಿತು. ಒಂದು ಹೊಸದಾದ ಉತ್ಪಾದನೆಯ ಶಕ್ತಿಯು ನಮ್ಮ ಮೇಲೆ ಪರಿಣಾಮವನ್ನು ಬೀರಿತು. ಅದರಲ್ಲಿ ಅನೇಕ ನ್ಯೂನತೆಗಳು ಇವೆ ಎಂದು ಸೈಂಟ್ ಸೈಮನ್ ಹೇಳುತ್ತಾನೆ. ಮುಂದುವರಿದ ರಾಷ್ಟ್ರಗಳು ವಿಜ್ಞಾನ ಮತ್ತು ಅದರ ಬೆಳವಣಿಗೆಯಿಂದ ಹೊಸದಾದ ಶಸ್ತ್ರಗಳು ಬಂದವು. ಇದು ಅಪಾಯಕಾರಿಯಾಗಿದ್ದು ನಿಜ. ಶಸ್ತ್ರಾಸ್ತ್ರಗಳು ರಾಷ್ಟ್ರಗಳನ್ನು ಬೇರೆ ಬೇರೆ ಕಾರಣಗಳಿಂದ ಹೆಚ್ಚು ಶಕ್ತಿಯುತವಾದ ಒಂದು ನೆಲೆಯನ್ನು ಸ್ಥಾಪಿಸಲು ನೆರವನ್ನು ಪಡೆಯಿತು. ಮಧ್ಯಕಾಲೀನವಾದ ಆದರ್ಶಗಳು ಗೈರುಹಾಜರಿಯಾದ್ದು ಕೂಡಾ ಇಲ್ಲಿ ಉಲ್ಲೇಖನೀಯ. ಬಂಡವಾಳವಾದವು ಹೆಚ್ಚು ಉತ್ಕರ್ಷವಾದ ಸ್ಥಿತಿಯನ್ನು ಪಡೆದಿರುವುದು ನಿಜ. ವರ್ಗಗಳು ವಿಭಿನ್ನವಾದ ರೀತಿಯಲ್ಲಿ ಬೆಳವಣಿಗೆಯನ್ನು ಸಾಧಿಸಿದ್ದು ಇಲ್ಲಿ ಉಲ್ಲೇಖನೀಯ. ಧಾರ್ಮಿಕ ನಂಬಿಕೆ ಎನ್ನುವುದು ಅವನತಿಯನ್ನು ಕಂಡಿತು. ಎರಡನೆಯ ಜಾಗತಿಕ ಯುದ್ಧವು ವಿಜ್ಞಾನದ ಒಂದು ವಿಕಾರವಾದ ಪರಿಣಾಮವೂ ಹೌದು. ಅದು ಒಂದು ದುರಂತ. ಈ ದುರಂತವೇ ಜನರಲ್ಲಿ ಒಂದು ಬಗೆಯ ನಿರಾಶೆಯನ್ನು ಹುಟ್ಟು ಹಾಕಿದ್ದು ನಿಜ. ಇಪ್ಪತ್ತನೆಯ ಶತಮಾನದಲ್ಲಿ ಇನ್ನಷ್ಟು ಬದಲಾವಣೆಯನ್ನು ನಾವು ಕಾಣುತ್ತೇವೆ. ಅದರಲ್ಲಿ ಬದಲಾದ ತತ್ವಶಾಸ್ತ್ರವೂ ಇದೆ. ರಾಜಕೀಯ ಮತ್ತು ಸಾಂಸ್ಕೃತಿಕ ವಿಶ್ಲೇಷಣೆಯನ್ನು ಮಾರ್ಕ್ಸವಾದವು ಮಾಡಿದ್ದರ ಹಿನ್ನಲೆಯೂ ಇದೇ ಆಗಿದೆ.

ಮತ್ತೊಂದು ಅಂಶವನ್ನು ನಾವು ಕಾಣಬೇಕು: ಉದಾರವಾದ ಎನ್ನುವುದು ಕೂಡಾ ಹೆಚ್ಚು ಪ್ರಸಿದ್ಧಿಯನ್ನು ಪಡೆಯಿತು. ಇದನ್ನು ಗಮನಿಸಿದ ಫುಕೋ ಒಂದು ಮಾತನ್ನು ಹೇಳುತ್ತಾನೆ.

ವಸ್ತುನಿಷ್ಠವಾದ ತಾತ್ವಿಕತೆ ಮತ್ತು ರಾಜಕಾರಣ ಎನ್ನುವುದು ಇದೆಯೇ ಎಂದು ಅವನು ಪ್ರಶ್ನೆಯನ್ನು ಮಾಡಿದ. ಒಂದು ಅಂಶವನ್ನು ನಾವು ಇಲ್ಲಿ ಗಮನಿಸಬೇಕು: ಮಾರ್ಕ್ಸವಾದವು ಮುಖ್ಯವಾಗಿ ಜನರು ಮತ್ತು ದುಡಿಮೆ ಹಾಗೂ ಅವರ ಶಕ್ತಿಯ ವಿನಿಮಯ ಮೌಲ್ಯವನ್ನು ಕುರುತು ಹೇಳಿದರು. ಹೇಗೆ ರಾಜಕಾರಣವು ಒಂದು ವಿಕೃತಿಯನ್ನು ಪಡೆಯುತ್ತಿದೆ ಎಂದು ವಿಶ್ಲೇಷಣೆಯನ್ನು ಮಾಡಿದರು. ಕೈಗಾರಿಕತೆಯು ಹೇಗೆ ಸಾಹಿತ್ಯವನ್ನು ಪ್ರಭಾವಿಸಿತು ಎಂದು ಅನೇಕ ಲೇಖಕರು ವಿವರಿಸಿದ್ದಾರೆ. ಆದುನಿಕ ಕೈಗಾರಿಕತೆಯು ಹೇಗೆ ಹೊಸತನ್ನು ಹುಟ್ಟು ಹಾಕಿತೋ ಅದನ್ನು ಅದನ್ನು ರೊಮಾಂಟಕ್ ಪಂಥವು ನಿರಾಕರಿಸಿತು. ಕೈಗಾರಿಕತೆಯು ಯಾವುದನ್ನು ಹೇಳಿತೋ ಆ ವಾಸ್ತವವವು ಮಾತ್ರವೇ ಮುಖ್ಯವಲ್ಲ. ಅದರಲ್ಲಿ ಒಂದು ವರ್ಗ ಮತ್ತು ಅದರ ಹಿತಾಸಕ್ತಿಯು ಮಾತ್ರವೇ ಮುಖ್ಯವಾಗಿರುತ್ತದೆ. ಕೈಗಾರಿಕಾ ಸಮಾಜ ಎನ್ನುವುದು ಒಂದು ಭಾಗವು ಮಾತ್ರವೇ ಆಗಿರುತ್ತದೆ. ಆದರೆ ಅದರ ಮತ್ತೊಂದು ಮುಖವು ಬೇರೆಯಿರುತ್ತದೆ.. ಕೈಗಾರಿಕತೆಯು ಹೊಸ ಬಗೆಯ ಬುದ್ಧಿಜೀವಗಳನ್ನು ಹುಟ್ಟು ಹಾಕಿತು ಎನ್ನುವುದು ಸತ್ಯ. ಆದರೆ ಈ ಲೇಖಕರು ಕೈಗಾರಿಕಾ ಕ್ರಾಂತಿಯನ್ನು ಆಳದಲ್ಲಿ ನಿರಾಕರಿಸಿದರು. ಅದು ಮನುಷ್ಯ ವಿರೋಧಿಯಾದ ಒಂದು ಚಟುವಟಿಕೆಯನ್ನು ಹೊಂದಿದೆ ಎನ್ನುವುದು ಆಗಣ ಬುದ್ಧಿಜೀವಿಗಳ ಅಭಿಪ್ರಾಯವಾಗಿತ್ತು. ಕೈಗಾರಿಕ ಜಗತ್ತು ಎನ್ನುವುದು ಮಾನವೀಯ ಸಂಬಂಧಗಳಿಗೆ ಹೆಚ್ಚು ಬೆಲೆಯನ್ನು ಕೊಡುವುದಿಲ್ಲ ಎನ್ನುವುದು ಅವರ ನಿಲುವು ಕೂಡಾ ಹೌದು. ಕೈಗಾರಿಕ ಕ್ರಾಂತಿಯು ನಮ್ಮನ್ನು ಹೇಗೆ ಆವರಿಸಿಕೊಂಡಿದೆ ಮತ್ತು ಅದು ಹೇಗೆ ನಮ್ಮ ಸಂವೇದನೆಯನ್ನು ಹೇಳಿದೆ ಎಂದು ಚರ್ಚೆಯು ನಡೆಯಿತು. ಬೃಹತ್ ಕೈಗಾರಿಕೆ ಎನ್ನುವುದು ಮನುಷ್ಯ ಸಂಬಂಧಗಳನ್ನು ಬೇರೆ ಮಾಡಿ ನೋಡುತ್ತದೆ. ಇದರಿಂದ ಏಕಮುಖವಾದ ಬುದ್ಧಿಜೀವಿಗಳ ನಿರ್ಮಾಣವಾಗುತ್ತದೆ. ಅವರಿಗೆ ಸಮಾಜದ ಬಗ್ಗೆಹೆಚು ಕಾಳಜಿಯು ಇರುವುದಿಲ್ಲ ಎನ್ನುವುದು ಕೂಡಾಗ ಬಂದ ವಾದವಾಗಿದೆ. ಅದು ನಮ್ಮ ಸಂವೇದನೆಯನ್ನು ಬದಲು ಮಾಡಿದೆ. ಅದು ಜತೆಗೆ ಅದರಲ್ಲಿ ಜಗತ್ತನ್ನು ಹೊತಾಗಿ ನೋಡುವ ದೃಷ್ಟಿಕೋನವೂ ಇದೆ. ಆದ್ದರಿಂದಲೇ ನವೋದಯ ಲೇಖಕರು ಮತ್ತೆ ನಿಸರ್ಗ ಎನ್ನುವುದನ್ನು ಹೆಚ್ಚು ಒತ್ತು ಕೊಟ್ಟು ಹೇಳಿದರು. ನಮ್ಮ ಜೀವನ ಎನ್ನುವುದು ನಮಗೆ ಹೊಸದಾದ ಅರ್ಥವನ್ನು ಕೊಟ್ಟಿದೆ. ಮಾವು ಈಗ ಯೋಚನೆಯನ್ನು ಮಾಡಬೇಕಾದ್ದು ವಿಚಾರಗಳನ್ನು ಎಂದು ನವೋದಯದ ಲೇಖಕರು ಹೇಳಿದರು. ಜೀವನ ಮತ್ತು ಭಾವನೆ ಎನ್ನುವುದಕ್ಕೆ ಒಂದು ಹೊಸದಾದ ಶಕ್ತಿಯು ಇದೆ. ಅದರ ಶಕ್ತಿಯು ಬೇರೆ ಬಗೆಯಾದ್ದು ಎನ್ನುವುದು ರೊಮಾಂಟಿಕರ ವಾದ.

ಕೈಗಾರಿಕಾ ಕ್ರಾಂತಿಗೆ ರೊಮಾಂಟಿಕ್ ವಾದವು ಪ್ರತಿಕ್ರಿಯೆಯನ್ನು ಕೊಟ್ಟಿದೆ. ಒಂದು ಹಂತದಲ್ಲಿ ಅದು ತನ್ನ ವಾದವನ್ನು ಮಂಡಿಸುವಾಗ ಕಾರ್ಯ ಮತ್ತು ಕಾರಣ ವಾದವನ್ನು ನಿರಾಕರಿಸಿದ್ದು ಸತ್ಯ. ಕಾರಣವಾದವನ್ನು ಅದು ನಿರಾಕರಿಸುತ್ತದೆ. ಎಲ್ಲದರಲ್ಲಿಯೂ ನಾವು ಕಾರಣವಾದವನ್ನು ಅನ್ವಯಮಾಡುವುದು ಸಾಧ್ಯವಿಲ್ಲ ಎನ್ನುವುದು ರೊಮಾಂಟಿಕರ ವಾದ. ಕೈಗಾರಿಕಾ ಕ್ರಾಂತಿಯು ನಮ್ಮ ಸಂವೇದನೆಯನ್ನು ಅತ್ಯಂತ ಒರಟಾಗಿ ಹೇಳುತ್ತದೆ ಎನ್ನುವುದು ಅದರ ವಾದ. ಇದರ ಬದಲಾಗಿದೆ ರೊಮಾಂಟಕ್ ವಾದವು ಆದರ್ಶವನ್ನು ಹೇಳುತ್ತದೆ. ಆದುನಿಕ ಶಿಕ್ಷಣ ಪದ್ಧತಿಯು

ಕೂಡಾ ನವೋದಯದ ಮೇಲೆ ಪ್ರಭಾವವನ್ನು ಬೀರಿದೆ. ಹದಿನೇಳನೆಯ ಶತಮಾನದ ಕೊನೆಯ ಬಾಗ ಮತ್ತು ಹದಿನೆಂಟನೆಯ ಶತಮಾನದ ಮೊದಲ ಭಾಗದಲ್ಲಿ ಶಿಕ್ಷಣವು ಬದಲಾದ್ದು ಸತ್ಯ. ಅದರ ಪರಿಣಾಮವನ್ನು ಕೂಡಾ ನಾವು ರೊಮಾಂಟಕ್ ಪಂಥದಲ್ಲಿ ಕಾಣಬಹುದು ಎನ್ನುವುದು ವಿದ್ಯಾವಂತರ ಅಭಿಪ್ರಾಯ. ಹೊಸದಾದ ಶಿಕ್ಷಣ ಮತ್ತು ಹೊಸದಾದ ಆಲೋಚನೆಯ ಕ್ರಂವು ನವೋದಯದಲ್ಲಿ ಹೊಸದಾದ ಹುಟುಕಾಟಕ್ಕೆ ಕಾರಣವೂ ಆಗಿತ್ತು. ನವೋದಯದಲ್ಲಿ ನಾನು ಉದಾರತೆಯನ್ನು ಕಾಣುತ್ತೇವೆ. ಮತ್ತೊಂದು ಕಡೆಯಿಂದ ಅದರಲ್ಲಿ ನಾವು ಆದರ್ಶವನ್ನು ಗುರುತಿಸುತ್ತೇವೆ. ಇನ್ನೊಂದು ಕಡೆಯಿಂದ ಅದರಲ್ಲಿ ನಾವು ಸಂಪ್ರದಾಯ ಬದ್ಧತೆಯನ್ನು ಕಾಣಬಹುದಾಗಿರುತ್ತದೆ. ೧೭೮೯ರ ಅನಂತರ ಫ್ರಾನ್ಸಿನಲ್ಲಿ ನಾವು ಇದನ್ನು ಕಾಣುತ್ತೇವೆ. ಮನುಷ್ಯನ ಹಕ್ಕುಗಳು ಮತ್ತು ಅವರ ಕರ್ತವ್ಯವು ಇದರಲ್ಲಿ ಮುಖ್ಯವಾಗಿತ್ತು. ಮನುಷ್ಯನು ಅನೇಕ ವಿಷಯಗಳಲ್ಲಿ ಹೆಚ್ಚು ಸ್ವತಂತ್ರನಾಗಿದ್ದಾನೆ ಎನ್ನುವುದು ರೊಮಾಟಿಕರ ವಾದ. ಬದಲಾದ ಸನ್ನಿವೇಶವನ್ನು ಸಂಪ್ರದಾಯವಾದಿಗಳು ಅತ್ಯಂತ ಸುಲಭವಾಗಿ ಎತ್ತಿಕೊಳ್ಳುತ್ತಾರೆ. ಅದರ ಜೊತೆಗೆ ರಾಜ್ಯ ಮತ್ತು ನಾಗರಿಕತೆಗೆ ಹೆಚ್ಚು ಅವಕಾಶವನ್ನು ರೊಮಾಂಟಿಕ್ ಪಂಥವು ಒದಗಿಸುತ್ತದೆ. ಇಲ್ಲಿ ಯೋಚನೆಯನ್ನು ಮಾಡಬೇಕಾದ ಮತ್ತೊಂದು ಅಂಶವು ಇದೆ. ನಾಗರಿಕ ಮತ್ತು ಅವನ ಸ್ವಾತಂತ್ರ್ಯ ಎನ್ನುವುದು ಒಂದು ಪರಿಧಿಗೆ ಮಾತ್ರವೇ ಸೀಮಿತವಾದ ಸಂಗತಿಯು ಅಲ್ಲ. ವ್ಯಕ್ತಿಯು ಅತ್ಯಂತ ಹೆಚು ಸದ್ಗುಣ ಶೀಲನಾಗಿರಬೇಕು ಎನ್ನುವುದು ರೊಮಾಂಟಿಕರ ವಾದ. ಅವರರು ಶಾಂತಿಯನ್ನು ಬಯಸುತ್ತಾರೆ. ಸ್ಥಳ ಮತ್ತು ರಾಷ್ಟ್ರೀಯತೆ ಎನ್ನುವುದು ರೊಮಾಟಿಕ್ ಪಂಥದ ಅತ್ಯಂತ ಮುಖ್ಯವಾದ ಲಕ್ಷಣವೂ ಆಗಿರುವುದು ನಿಜ. ಪ್ರತಿಯೊಂದು ರಾಷ್ಟ್ರವು ತನ್ನದೇ ಆದ ಕೆಲವು ವಿಶಿಷ್ಟತೆಯನ್ನು ಹೊಂದಿರುತ್ತದೆ., ರಾಷ್ಟ್ರ ಮತ್ತು ಅದರ ತತ್ವಜ್ಞಾನವು ರೊಮಾಂಟಿಕರಿಗೆ ಹೆಚ್ಚು ಮುಖ್ಯ. ಚಿತ್ರ ಕಲೆಯಲ್ಲಿ ಇದು ಅಂತಃ ಪ್ರಜ್ಞೆಯ ದ್ಯೋತಕವೂ ಹೌದು. ಇದು ಸಾಮಾಜಿಕ ಚಿಂತನೆಯನ್ನು ಬದಲಸಿತು. ನವೋದಯದಲ್ಲಿ ಸೌಂದರ್ಯ ಮತ್ತು ಅದರ ದೃಷ್ಟಿಕೋನವು ಮನಸ್ಸು ಮತ್ತು ಅದರ ವರ್ತನೆಯನ್ನೂ ಹೇಳುತ್ತದೆ. ಉದಾಹರಣೆಗೆ ಕುವೆಂಪು ಕಾದಂಬರಿಯಲ್ಲಿ ಬರುವ ಮುಕುಂದಯ್ಯ. ನವೋದಯದಲ್ಲಿ ಉದಾರತೆ ಮತ್ತು ಜ್ಞಾನೋದಯ ಎನ್ನುವುದಕ್ಕೆ ಹೆಚ್ಚು ಅರ್ಥವಿದೆ. ಒಂದು ಹಂತದಲ್ಲಿ ಅದು ವ್ಯಕ್ತಿವಾದವನ್ನು ಅಂಗೀಕರಿಸಿದ್ದು ಸತ್ಯ. ಒಂದು ಸಮಾಜದಲ್ಲಿ ವ್ಯಕ್ತಿಗೆ ಅವನದೇ ಆದ ಒಂದು ಪ್ರಾಮುಖ್ಯತೆಯು ಇದೆ ಎನ್ನುವುದನ್ನು ನವೋದಯವು ಹೇಳುತ್ತದೆ. ಈ ಮೊದಲು ಹೇಳಿದಂತೆ ರೊಮಾಂಟಿಕ್ ಪರಂಪರೆಯಲ್ಲಿ ಭಾವ ಮತ್ತು ಅದರ ಅಭಿವ್ಯಕ್ತಿಯು ಹೆಚ್ಚು ಮುಖ್ಯ. ರೊಮಾಂಟಿಕ್ ಪರಂಪರೆಯು ಚಿತ್ರಕಲೆಯ ಮೇಲೆ ಪ್ರಭಾವವನ್ನು ಬೀರಿದೆ ಎಂದು ವಿದ್ವಾಂಸರು ಹೇಳುತ್ತಾರೆ.. ಇದಕ್ಕೆ ಉದಾಹರಣೆಯಾಗಿ ಲಿಯೋನಾಡ್ ಡಾವಿಂಚಿಯನ್ನು ಉದಾಹರಿಸುತ್ತಾರೆ. ೧೮೦೦ರ ಸಾಹಿತ್ಯದ ವಿಮರ್ಶೆಯನ್ನು ಗಮನಿಸದರೆ ನಮಗೆ ಆಗ ನವೋದಯವನ್ನು ಸೌಂದರ್ಯದ ಶಾಸ್ತ್ರದ ಪಟ್ಟಿಗೆ ಸೇರಿಸಿದ್ದನ್ನು ನಾವು ಕಾಣುತ್ತೇವೆ.ಸೌಂದರ್ಯದ ಅತ್ಯಂತ ತೀವ್ರವಾದ ಭಾವನೆಯನ್ನು ಇಇದು ಹೇಳುತ್ತದೆ ಎನ್ನುವುದೇ ಇದಕ್ಕೆ ಮುಖ್ಯವಾದ ಕಾರಣವು ಆಗಿದೆ ಎನ್ನುವುದು ಇಲ್ಲಿ ಉಲ್ಲೇಖನೀಯ.

ಅಧ್ಯಾಯ - ೭

ಕಾದಂಬರಿಯ ನಿರೂಪಣೆ

'ಗ್ರಾಮಾಯಣ'ದ ರಚನೆಯಲ್ಲಿ 'ಪಾದಳ್ಳಿ'ಯ ಅವನತಿಯು ಹೇಗೆ ಸಂಭವಿಸುತ್ತದೆ ಎಂಬುದನ್ನು ಅಲ್ಲಿ ಘಟಿಸುವ ಕೆಲವು ಘಟನೆಗಳ ಹಿನ್ನೆಲೆಯಲ್ಲಿ ಹೇಳುವ ಆಶಯ ಲೇಖಕರಿಗಿರುವುದರಿಂದ ಅದಕ್ಕೆ ಅನುಗುಣವಾಗಿ ಇಲ್ಲಿ ಕೇಂದ್ರವಾಗಿ 'ಪಾದಳ್ಳಿ'ಯಿದೆ. ವಾಡೆ, ವಾಡೆಯ ವಾರಸುದಾರಿಕೆಯ ಪ್ರಶ್ನೆ, ಲಕ್ಷ್ಮೀಬಾಯಿ, ಪುತಳಾಬಾಯಿಯರ ಸಂಘರ್ಷ, ಅಲ್ಲಿಯ ಅನೈತಿಕ ಸಂಬಂಧಗಳು, ದೈವಪಾಲಕನಂತೆ ಬಂದ ಪಡದಯ್ಯ ಆತನ ಅನೈತಿಕತೆ, ಮೌಢ್ಯತೆಗಳು ಮೊದಲಾದವು. ಲೇಖಕರ ಆಶಯಕೇಂದ್ರಿತವಾದ ಪ್ರಾದೇಶಿಕ ಭಾಷೆಯ ಸೊಗಡಿನೊಂದಿಗೆ ಕಾದಂಬರಿ ಸಾಗುತ್ತದೆ.

ಲೇಖಕರ ಉದ್ದೇಶಕ್ಕೆ ಅನುಗುಣವಾದ ರಚನಾ ಕ್ರಮದಲ್ಲಿ ಅವನತಿಯ ಹಾದಿಯ ಮಾರ್ಗಗಳು ಒಂದಕ್ಕೊಂದು ತಗಲಿಕೊಂಡೇ ಸಹ-ಸಂಬಂಧದ ನೆಲೆಯಲ್ಲಿ ನಿರೂಪಣೆಗೊಂಡಿದೆ. ಕಾದಂಬರಿ ಮೊದಲು ತೆರೆದುಕೊಳ್ಳುವುದು ನಾನಾನ ಮಗಳು ಚಿಮಣಾಳ ಕೌಮಾರ್ಯ ಭಂಗದೊಂದಿಗೆ, ಇದರ ಹಿನ್ನೆಲೆಯಲ್ಲಿ ಅನೇಕ ಅನೈತಿಕ ಸಂಬಂಧಗಳು ಹೊರಬರುತ್ತವೆ. ಚಿಮಣಾಳ ತಂದೆ ನಾನಾನು ವಾಡೆಯ ಒಡತಿ ಪುತಳಾಬಾಯಿಯ ಜೊತೆ ಈಗಾಗಲೇ ಅನೈತಿಕ ಸಂಬಂಧ ಹೊಂದಿದ್ದರೂ ಅದು ಗೌಪ್ಯವಾಗಿರುತ್ತದೆ, ನೈತಿಕ ಮೌಲ್ಯಗಳನ್ನು ಮೀರಿ ಅವನತಿಗೆ ಸಾಗುವ ದುರಂತದ ಮಾರ್ಗ ಜಾಗೀರ್‌ದಾರರ ವಾಡೆಯಿಂದಲೇ ಪ್ರಾರಂಭವಾಗಿದೆ. ಇದರ ಮತ್ತೊಂದು ಮುಖ ನಾನಾನಕೊಲೆ, ಪುತಳಾಬಾಯಿ ನಾನಾನಿಂದ ತನ್ನ ಅನೈತಿಕ ಸಂಬಂಧ ಹೊರ ಬೀಳುವುದೆಂಬ ಭಯದಿಂದ ಆತನಿಗೆ ವಿಷಹಾಕಿ ಕೊಲೆ ಮಾಡಿಸುತ್ತಾಳೆ. ಮಠದ ರಚನೆಯಲ್ಲಿ ಸದಾನಂದಶಿವಯೋಗಿಗಳು, ಗುರುಪಾದ ಸ್ವಾಮಿಗಳು ಗಂಗಾಧರಯ್ಯನವರು, ಪಡದಯ್ಯ ಶಿವಯೋಗಿ ಸ್ವಾಮಿಗಳು ರಚನೆಯ ಒಳಗೆ ಇದ್ದಾರೆ, ಮಠದ ಊರಿನ ಅವನತಿಯ ಕೇಂದ್ರಪಾತ್ರ ಪಡದಯ್ಯ, ಪರಊರಿನಿಂದ ಬಂದು ಧರ್ಮಪರಿಪಾಲಕನಂತೆ ಮಠ ಸೇರಿ ಅಲ್ಲಿಯ ಜವಬ್ದಾರಿ

ಹೊತ್ತುಕೊಂಡ ಈತ ಧರ್ಮಕ್ಕೆ, ಜನಕ್ಕೆ ನ್ಯಾಯ ಒದಗಿಸುವವನಲ್ಲ, ಇವನ ಲಂಪಟತನದಿಂದ ಚಿಮಣಾಳ ಅತ್ಯಾಚಾರವಾಗುತ್ತದೆ. ಲಿಂಗಪ್ಪಗೌಡ, ಶಂಕರಪ್ಪಗೌಡನ ಹೊಲದ ಮೇಲೆ ಅಧಿಕಾರ ಸ್ಥಾಪಿಸುತ್ತಾನೆ. ಇದೆಲ್ಲಾ ಧರ್ಮದ ಹೆಸರಿನಲ್ಲಿ ನಡೆಸುವ ದಬ್ಬಾಳಿಕೆ ದೌರ್ಜನ್ಯವಾಗಿದೆ.

ಇಲ್ಲಿ ಯಾವೊಂದು ಪಾತ್ರ ರಚನೆಯು ಮುಖ್ಯ ನೆಲೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ. ಇಲ್ಲಿಯ ವಾಡೆ, ಮಠ, ಅದರ ಅಧಿಕಾರ, ಮತ್ತು ದುರ್ಬಳಕೆ, ನ್ಯಾಯ ತೀರ್ಮಾನಗಳ ರೀತಿ, ಅನೈತಿಕ ಸಂಬಂಧಗಳು ಎಲ್ಲವೂ ಒಂದು ನೆಲಯಲ್ಲಿ ಅಲ್ಲಿಯ ಸೃಷ್ಟಿತ ಪಾತ್ರಗಳ ಮೂಲಕ ನಿರೂಪಣೆಯಾಗುತ್ತಾ ಹೋಗುತ್ತದೆ. ಇಲ್ಲಿ ಕೆಲವು ಮುಗ್ಧ ಅಸಹಾಯಕ ಪಾತ್ರಗಳಿವೆ. ಥಾಂಬಿಕತೆಯಿಂದ ಕೂಡಿದ ಪಾತ್ರಗಳಿವೆ. ಹಣ ಅಧಿಕಾರದ ಆಸೆಯಿರುವವರಿದ್ದಾರೆ. ಸ್ವವಿಮರ್ಶೆ ಮಾಡಿಕೊಳ್ಳುವ ಪಾತ್ರಗಳೂ ಇವೆ. ಇಲ್ಲಿಯ ಪ್ರತಿಯೊಂದು ಪಾತ್ರಕ್ಕೂ ಅದರದ್ದೇ ಆದ ವಸ್ತು ವಿಶೇಷತೆಯಿದೆ, ಅದರ ಮೂಲಕವೇ ಅವು ಕಾದಂಬರಿಯಲ್ಲಿ ಸಾಗಿ ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವುದರೊಂದಿಗೆ ಅವುಗಳ ಶ್ರೇಷ್ಠತೆ, ಅವನತಿ ದುರ್ವರ್ತನೆ ಗುರುತಿಸುವಿಕೆ ಕಂಡುಬರುತ್ತದೆ. ಇದು ಪ್ರಾದೇಶಿಕ ಕಾದಂಬರಿಯಾದರೂ ಹೆಚ್ಚಾಗಿ ಪ್ರದೇಶದ ಬಗ್ಗೆ ಮಾತನಾಡುವುದಿಲ್ಲ. ಕೌಟುಂಬಿಕ ನಿರ್ವಹಣೆಯ, ಅಲ್ಲಿಯ ಸಂಬಂಧಗಳ ಬಗ್ಗೆಯೂ ಇದು ಮಾತನಾಡುವುದಿಲ್ಲ. ಇದು ಉತ್ತರ ಕರ್ನಾಟಕದ ಪ್ರಾದೇಶಿಕ ಕಥಾವಸ್ತುವಿನೊಂದಿಗೆ, ವಾಡೆ, ಮಠ. ಇವುಗಳೊಂದಿಗೆ ಪ್ರಸ್ತಾಪ ಬಂದಿದ್ದರೂ ಅದರ ಗಾಢತೆಯ ಪ್ರಭಾವವು ಇಲ್ಲಿ ಕಂಡುಬರುವುದಿಲ್ಲ. ಆದರೆ ಇದು ಅಲ್ಲಿಯ ಜನರ ಮನೋಸ್ಥಿತಿಯ ಬಗ್ಗೆ ಹೆಚ್ಚು ಹೇಳುತ್ತಾ ಹೋಗುತ್ತದೆ.

ಕಾರಹುಣ್ಣಿಮೆಯಂದು ಚಿಮಣಾಳ ಅತ್ಯಾಚಾರವಾಗುವುದು. ಮತ್ತೊಂದು ಕಾರಹುಣ್ಣಿಮೆಯದಿನ ಗೌಡತಿ ಮತ್ತು ದಾದಾನ ನಡುವೆ ವಿರಸ ಉಂಟಾಗುತ್ತದೆ, ಗಿಬ್ಸನ್ ಸಾಹೇಬರು ನೀಡುವ ತೀರ್ಮಾನಗಳನ್ನು ಅವರ ಬೇಟೆಯ ಆರಂಭದಲ್ಲಿಯೇ ಮಹಾರಾಜರ ನಾಯಿಯನ್ನು ಕೊಲ್ಲುವುದರ ಮೂಲಕ ಸೂಚಿಸಲಾಗಿದೆ. ಬೇಟೆಗಾರರಿಗೆ ಇರಬೇಕಾದ ಎಚ್ಚರಿಕೆ ಗಿಬ್ಸನ್‌ಗೆ ಇಲ್ಲ, ಆತನ ಈ ವರ್ತನೆ ಪಾದಳ್ಳಿಯ ಜನತೆ, ಊರಿನ ಬಗ್ಗೆ ತೆಗೆದುಕೊಳ್ಳುವ ಕಾನೂನುಗಳ, ತೀರ್ಮಾನಗಳ ಬಗ್ಗೆ ಸ್ಪಷ್ಟತೆಮೂಡಿಸುತ್ತದೆ. ಕಾಯ್ದೆಯ ಪ್ರಕಾರ ಪಡದಯ್ಯನನ್ನು ಮಠದ ಅಧಿಕಾರಿಯನ್ನಾಗಿ ಮಾಡುವುದು. ಲಿಂಗಪ್ಪನನ್ನು ಗೌಡರವಾರಸುದಾರನನ್ನಾಗಿ ಮಾಡುವುದು ಭ್ರಷ್ಟವ್ಯಕ್ತಿಗಳನ್ನು ಊರಿನ ಹಿತ ಕಾಯುವ ಸ್ಥಾನದಲ್ಲಿ ಕೂರಿಸುವುದು ಇವೆಲ್ಲ ಪಾದಳ್ಳಿಯ ಅಧಃಪತನಕ್ಕೆ ಕಾರಣವಾಗುತ್ತದೆ. ಇದರ ಗ್ರಹಿತ ನೆಲೆಯಲ್ಲಿ ಬೋರಲಿಂಗಯ್ಯ.ಎನ್. ನವರು ಹೇಳುವಂತೆ "ಪ್ರಾದೇಶಿಕವಾದ ಭೌತಿಕ ಹಿನ್ನೆಲೆಯನ್ನು ರೂಪಿಸುವಲ್ಲಿ ತೋರುತ್ತಿಲ್ಲ, ಇದಕ್ಕೆ ಇನ್ನು ಒಂದು ಸೂಕ್ಷ್ಮ ಕಾರಣವಿದೆ. ಇಲ್ಲಿಯ ಘಟನೆಗಳು ಶತಮಾನಗಳ ಸಂಕ್ರಮಣ ಕಾಲದ ಮಹಿಮೆಯಿಂದ ಹುಟ್ಟಿಕೊಳ್ಳುತ್ತವೆಯೆ ಹೊರತು ಪ್ರಾದೇಶಿಕವಾದ ಅದಮ್ಯ ಒತ್ತಡದ ಪರಿಣಾಮದಿಂದಲ್ಲ" (ಬೋರಲಿಂಗಯ್ಯ ಎನ್., ೧೯೭೨, ಪುಟ. ೧೪೪-೧೪೫.) ಪ್ರಾದೇಶಿಕವಾಗಿ ಪಾದಳ್ಳಿಯ ಮಿತಿಯಲ್ಲಿ ರೂಪು ಪಡೆಯುತ್ತಿರುವ ಗ್ರಾಮಾಯಣ ವಸ್ತು

ವಿನ್ಯಾಸ ಹಾಗೂ ಸಂಕೇತ ಕಲ್ಪನೆಗಳಲ್ಲಿ ತೋರುವ ಪ್ರೌಢಿಮೆಯನ್ನು ಅನುಭವಗಳ ಅವಿಷ್ಕಾರಗೊಂಡಿದೆ ಎಂಬ ಅರ್ಥ ಗ್ರಹಿಕೆಯಾಗಿದೆ.

ವಾಸ್ತವವವಾದ ಮತ್ತು ಅದರ ನಿರೂಪಣೆಗಳಿಗೂ ಚರಿತ್ರೆ ಮತ್ತು ಅದರ ನಿರೂಪಣೆಗೂ ಒಂದು ಸಂಬಂಧವು ಇದೆ. ವಾಸ್ತವ ಎನ್ನುವುದು ನಮಗೆ ಒಂದು ಶಬ್ಧಚಿತ್ರದಂತೆ ಕಾಣುತ್ತದೆ. ಚರಿತ್ರೆ ಕೂಡಾ ನಮಗೆ ಯಾವುದೇ ರೂಪಕದ ಆಶ್ರಯವು ಇಲ್ಲದೆ ನಮಗೆ ಯಾವುದು ತಿಳಿಯಬೇಕೋ ಅದನ್ನು ಹೇಳುತ್ತದೆ. ಎರಡರಲ್ಲಿಯೂ ತರ್ಕಗಳು ಕೆಲಸವನ್ನು ಮಾಡುತ್ತವೆ ಎನ್ನುವುದು ಸ್ಪಷ್ಟ ಚರಿತ್ರೆಯಲ್ಲಿ ಏನಾಗಿದೆಯೋ ಅದನ್ನು ಇತಿಹಾಸಕರರು ನಮಗೆ ವಿಷಯಗಳನ್ನು ಕೊಡುತ್ತಾರೆ. ಆದರೆ ಚಾರಿತ್ರಿಕ ಸಂಕಥನಗಳು ಉದ್ದೇಶವನ್ನು ಇಟ್ಟುಕೊಂಡು ಒಂದು ಸಂವಾದವನ್ನು ರೂಪಿಸುತ್ತವೆ. ಎರಡನ್ನು ಉತ್ಪತ್ತಿ ಮಾಡುವುದು ನಮ್ಮ ಮನಸ್ಸು. ವಾಸ್ತವ ಮಾರ್ಗದ ಕನ್ನಡ ಕಾದಂಬರಿಯ ಮೂಲ ಪ್ರೇರಣೆಯನ್ನು 'ಇಂದಿರಾಬಾಯಿ' ಯಂಥ ಕೃತಿಗಳಲ್ಲಿಯೇ ಹುಡುಕಬೇಕಾಗುತ್ತದೆ. ಕಾದಂಬರಿಯ ಮೊದಲ ಭಾಗದಲ್ಲಿ ಬರುವ ಭೀಮರಾಯ ಅಂಬಾಬಾಯಿ ಇವರ ಅಪರಾಧ ಮತ್ತು ಅಪರಾಧಿಗಳ ಮೇಲೆ ಮಾಡುವ ಮಾನಸಿಕ ಪರಿಣಾಮ ಇವುಗಳ ಚಿತ್ರಣದಲ್ಲಿ Macbeth ದಂಥ ಕೃತಿಗಳ ಪ್ರಭಾವವನ್ನು ಗುರುತಿಸಬಹುದಾದರೂ, ಗುಲ್ವಾಡಿಯವರ ಶೈಲಿ ಹಾಸ್ಯವನ್ನೇ ಹೆಚ್ಚಾಗಿ ಅವಲಂಬಿಸುತ್ತದೆ. ಅವರ ಕೃತಿ ತನ್ನ ಸತ್ವವನ್ನು ಪಡೆದುಕೊಳ್ಳುವುದು ಆಧುನಿಕ ಸಮಾಜ ಪ್ರಜ್ಞೆಯ ಮೂಲಕ. ಈ ಸಮಾಜ ಪ್ರಜ್ಞೆ ಪಾತ್ರ, ಘಟನೆ, ಭಾಷೆಗಳ ಮೂಲಕ ಅಭಿವ್ಯಕ್ತಿಯನ್ನು ಹೊಂದುವುದು ಈ ಕಾದಂಬರಿಯ ಮಹತ್ವದ ಸಾಧನೆಯಾಗಿದೆ. (ಅಮೂರ, ಜಿ.ಎಸ್.೧೯೮೩, ಪುಟ. ೧೨.)

ನಮಗೆ ಈವತ್ತು ಕಾದಂಬರಿ ಎನ್ನುವುದು ಅತ್ಯಂತ ಮಹತ್ವದ ಪ್ರಕಾರ. ಅದು ಈಗ ಒಂದು ಅಧಿಕೃತತೆಯನ್ನು ಪಡೆದಿದೆ. ಕಾದಂಬರಿ ಮತ್ತು ಅದರ ಶೈಲಿಯ ಚರ್ಚೆಯನ್ನು ಮಾಡುವ ಕ್ರಮವು ಇನ್ನೂ ಹೆಚ್ಚು ಬೆಳೆದ ಹಾಗೆ ಕಾಣುವುದಿಲ್ಲ. ಹದಿನಾರು ಮತ್ತು ಹದಿನೇಳನೆಯ ಶತಮಾನದ ತರುವಾಯ ಬಂದ ಕಾದಂಬರಿಯು ನಮಗೆ ಹೊಸದಾದ ಪ್ರಕಾರವೂ ಆಗಿದೆ. ಸಾಹಿತ್ಯ ಮತ್ತು ಅದರ ಸಂವಹನದ ಮಾದರಿಗಳಿಗೆ ವಿವಿಧ ಆಯಾಮಗಳು ಇರುತ್ತವೆ ಎನ್ನುವುದನ್ನು ನಾವು ಮರೆಯಬಾರದು. ಒಂದು ವಿಶಾಲವಾದ ಅರ್ಥದಲ್ಲಿ ಹೇಳುವುದಿದ್ದರೆ ಸಂವಹನ ಎನ್ನುವುದು ಎಲ್ಲದರಲ್ಲಿ ಇರುತ್ತದೆ. ಅದು ಅಗತ್ಯ. ಚಿತ್ರದಲ್ಲಿ ನಾವು ಬಳಸುವ ಬಣ್ಣಗಳು ಒಂದು ಬಗೆಯ ಸಂವಹನವನ್ನು ಹೇಳುತ್ತದೆ. ಷಟ್ಪದಿಯಲ್ಲಿ ಗಮಕವು ಸಂವಹನವನ್ನು ಸೂಚಿಸುತ್ತದೆ. ನಾವು ಮಾತಾಡುತ್ತೇವೆ ಎಂದರೆ ಅದರಲ್ಲಿ ಒಂದು ಬಗೆಯ ಸಂವಹನ ಇದೆ ಎಂದು ಅರ್ಥ. ಸಾಹಿತ್ಯದಲ್ಲಿ ಭಾಷೆಯು ಸಂವಹನದ ಭಾಗ. ಕೈಯ ಸನ್ನೆಯು ಕೂಡಾ ಸಂವಹನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದು ಬೇರೆ ಪ್ರಶ್ನೆ. ಕಾದಂಬರಿ ಎನ್ನುವುದು ಕೆಲವು ವಿಷಯಗಳಲ್ಲಿ ಸ್ವತಂತ್ರವಾದ ಮತ್ತೆ ಕೆಲವು ವಿಷಯಗಳಲ್ಲಿ ಅದು ಅವಲಂಬಿತವೂ ಹೌದು. ದೇವನೂರರ ಕುಸುಮಬಾಲೆಯನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಅದನ್ನು ನಾವು ಕಾವ್ಯವೇ ಅಥವಾ ಅದು ಗದ್ಯದ ಮತ್ತೊಂದು ರೂಪವೇ ಎಂದು ಸುಲಭವಾಗಿ ಹೇಳುವುದು ಸಾಧ್ಯವಿಲ್ಲ. ಕಾವ್ಯದ ಗುಣ ಮತ್ತು ಗದ್ಯದ ಚಹರೆ ಎರಡೂ ಈ ಕಾದಂಬರಿಯಲ್ಲಿ

ನಾವು ಕಾಣುತ್ತೇವೆ. ಕಾದಂಬರಿಯು ಹೀಗೆ ವಿವಿಧ ಅಂಶಗಳನ್ನು ಒಳಗೊಂಡಿದೆ. ಕನ್ನಡದ ಕೆಲವು ಕಾದಂಬರಿಗಳಲ್ಲಿ ನಾವು ವಾಗ್ವಿಲಾಸವೂ ಎದ್ದು ಕಾಣುತ್ತದೆ. ಅನೇಕ ರೊಮಾಂಟಿಕ್ ವಿಮರ್ಶಕರು ಕಾದಂಬರಿಯನ್ನು ಗದ್ಯ ಮತ್ತು ಪದ್ಯದ ಒಂದು ವಿಶಿಷ್ಟವಾದ ಸಂಯೋಜನೆಯ ಸ್ವರೂಪದಲ್ಲಿ ಗುರುತಿಸುತ್ತಾರೆ. ಇಲ್ಲಿಂದ ಕಾದಂಬರಿ ಮತ್ತು ಅದರ ಶೈಲಿಯ ಪ್ರಶ್ನೆಯು ಬಂದಿದೆ. ವಾಸ್ತವವವಾಗಿ ಈವತ್ತು ಅನೇಕರು ಕಾದಂಬರಿ, ಕಥೆಗಳು ಮತ್ತು ಗದ್ಯದ ವಿವಿಧ ಪ್ರಕಾರಗಳನ್ನು ಜೊತೆಗೆ ಇಟ್ಟು ನೋಡುತ್ತಾರೆ.

ಜ್ಞಾನ ಮತ್ತು ಅದರ ಪರಿವೀಕ್ಷಣೆ ಎನ್ನುವುದು ಒಂದು ಪರಿಕರವು ಅತ್ಯಂತ ಮುಖ್ಯವಾದ್ದು. ಆದರೆ ಇಲ್ಲಿ ಇನ್ನೊಂದು ತೊಡಕಿನ ಪ್ರಶ್ನೆಯೂ ಇದೆ. ಜ್ಞಾನ ಮತ್ತು ಅದರ ಉಪಯೋಗವನ್ನು ನಾವು ಸಂಪಾದನೆಗೆ ಎಂದು ತಿಳಿದಾಗ ಅದರ ಅರ್ಥವು ಭಿನ್ನವಾಗುತ್ತದೆ. ನಿಸರ್ಗದ ಮೇಲೆ ಮನುಷ್ಯನ ಅಧಿಕಾರ ಎನ್ನುವುದು ಬೇರೆ ಆಯಾಮವೂ ಹೌದು. ಇದನ್ನು ಕಾರಂತರು ನಮಗೆ ಸ್ವಪ್ನದ ಹೊಳೆ ಕಾದಂಬರಿಯಲ್ಲಿಯೂ ಸೂಚಿಸುತ್ತಾರೆ. ಸಂಪನ್ಮೂಲ ಮತ್ತು ಅಧಿಕಾರ ಎನ್ನುವುದೇ ಇಲ್ಲಿ ದ್ವಂದ್ವಾತ್ಮಕವೂ ಆಗಿರುತ್ತದೆ. ಬುದ್ಧಿವಂತರು ಮತ್ತು ಸಾಮಾನ್ಯರು ಎನ್ನುವುದು ಒಂದು ವರ್ಗೀಕರಣವಾಗಲು ಇದೂ ಒಂದು ಕಾರಣವಾಗಿದೆ. ಅನ್ವೇಷಣೆ ಎನ್ನುವುದಕ್ಕೂ ಪುನರುಜ್ಜೀವನಕ್ಕೂ ಒಂದು ಸಂಬಂಧವಿದೆ. ನಾವು ಆಳಬಹುದು ಎನ್ನುವುದೇ ಒಂದು ಮಹತ್ವದ ಸಂಗತಿಯೂ ಆಗಿರುತ್ತದೆ. ಜ್ಞಾನ ಮತ್ತು ಅದರ ಅಗತ್ಯಗಳು ಯಾಕೆ ಮುಖ್ಯವಾಗಿದೆ ಎನ್ನುವುದು ಈ ಕಾಲದಲ್ಲಿ ಅತ್ಯಂತ ಮುಂಚೂಣಿಗೆ ಬಂದಿತು. ಭೂಮಿ ಮತ್ತು ನಿಸರ್ಗದ ಮೇಲೆ ಅಧಿಪತ್ಯ ಎನ್ನುವುದು ಹೇಗೆ ಒಂದು ಪರಂಪರೆಯನ್ನು ಹುಟ್ಟುಹಾಕುತ್ತದೆ ಎನ್ನುವುದು ಗೊತ್ತು. ಇದು ಅತ್ಯಂತ ಮಹತ್ವದ ಪರಿಭಾಷೆ ಎನ್ನುವುದು ನಮಗೆ ತಿಳುವಳಿಕೆಗೆ ಬಂದುದು ಮುಖ್ಯವಾದ ಒಂದು ಅಂಶವೂ ಹೌದು. ಬೇಕನ್ ಜ್ಞಾನ ಮತ್ತು ನಿಸರ್ಗದ ನಡುವೆ ಇರುವ ಸಂಬಂಧವನ್ನು ಹೇಳುವಾಗ ಜ್ಞಾನ ಹೇಗೆ ಅತ್ಯಂತ ಮುಖ್ಯವಾದ ಒಂದು ಪರಿಕರವೂ ಆಗಿತ್ತು ಎಂದು ನಿರೂಪಿಸುತ್ತಾನೆ.

ಐತಿಹಾಸಿಕ ಕಾದಂಬರಿಯ ನಿಜವಾದ ಪ್ರಕಾರವನ್ನು ರಚಿಸಿದವನು ವಾಲ್ಟರ್ ಸ್ಕಾಟ್. ಅವರು ಇತಿಹಾಸವನ್ನು ಅಲಂಕಾರಿಕ ಹಿನ್ನೆಲೆಯಾಗಿ ಅಥವಾ ವಿಚಿತ್ರವಾದ ಅಪರಿಚಿತ ಪ್ರಪಂಚದ ಚಿತ್ರವಾಗಿ ಬಳಸಲಿಲ್ಲ, ಆದರೆ ಅವರು ಅದನ್ನು ನಿರ್ವಿವಾದವಾದ ಸತ್ಯಗಳ ಪಾಂಡಿತ್ಯವನ್ನು ಬಳಸಿದರು ಮತ್ತು ಹಿಂದೆಂದೂ ಸಾಧಿಸದಂತಹ ಸತ್ಯದ ಪ್ರಭಾವವನ್ನು ಸೃಷ್ಟಿಸಿದರು. ಒಂದು ನಿರ್ದಿಷ್ಟ ಕಾದಂಬರಿಗಾಗಿ ಅವರು ಯಾವುದೇ ಅವಧಿಯನ್ನು ಆರಿಸಿಕೊಂಡರೂ, ಅದು ಎಲ್ಲಾ ಇತರ ಅವಧಿಗಳಿಗಿಂತ ವಿಶಿಷ್ಟವಾದ ಮತ್ತು ವಿಶಿಷ್ಟವಾದದ್ದು. ಎಚ್ಚರಿಕೆಯಿಂದ ಶೋಧಿಸಿದ ಅವರು ಹಿಂದಿನ ಸತ್ಯಗಳ ಸಮೂಹದ ಮೂಲಕ, ಕಾಲದ ಚೈತನ್ಯವನ್ನು ಸೆಳೆದರು ಮತ್ತು ಚೈತನ್ಯವನ್ನು ಒಳಗೊಂಡಿರುವ ಜೀವನವನ್ನು ಅವರು ನಿಜವಾದ ಪುರುಷರು ಮತ್ತು ಮಹಿಳೆಯರ ಪಾತ್ರಗಳಲ್ಲಿ ಸಾಕಾರಗೊಳಿಸಿದರು. ಮಧ್ಯಯುಗವು ಎಲಿಜಬೆತನ್ನರಿಂದ ಮತ್ತು ಎಲಿಜಬೆತ್ ಸ್ಟುವರ್ಟ್ನಿಂದ ಸಾಕಷ್ಟು ಭಿನ್ನವಾಗಿದೆ ಎಂದು ಸ್ಕಾಟ್ ಗುರುತಿಸಲಾಗಿದೆ. ಐತಿಹಾಸಿಕ ಅವಧಿಗಳು ನೀರು-ಬಿಗಿಯಾದ ಸ್ವಯಂ ಸುತ್ತುವರಿದ ವಿಭಾಗಗಳಾಗಿರಲಿಲ್ಲ,ಆದರೆ ಅವರು ಪರಸ್ಪರ

ತೆರೆದುಕೊಂಡರು ಮತ್ತು ಅದೇ ಜೀವನದ ಪ್ರವಾಹವು ಅವರೆಲ್ಲರ ಮೂಲಕ ಹರಿಯಿತು, ಐತಿಹಾಸಿಕ ವೈವಿಧ್ಯತೆಗೆ ನಿಜವಾದ ಮಾನವ ಆಸಕ್ತಿಯನ್ನು ನೀಡಲಾಗುತ್ತದೆ. ಹೀಗೆ ಅವರು ಸಮಯವನ್ನು ನಿರ್ಮಿಸಿದರು ಮತ್ತು ಇದು ಐತಿಹಾಸಿಕ ಕಾದಂಬರಿ ಮೂಲತತ್ವವಾಗಿದೆ. ಇದು ಒಂದು ನಿರ್ದಿಷ್ಟ ವಯಸ್ಸು ಮತ್ತು ಪರಿಸರದಲ್ಲಿ ವಾಸಿಸುವ ಕೆಲವು ಸಾಮಾನ್ಯ ಪುರುಷರು ಮತ್ತು ಮಹಿಳೆಯರು ಹಾಕುವ ಸಂದರ್ಭವಲ್ಲ: ಈ ಪುರುಷರು ಅವರ ನಡವಳಿಕೆಗಳು, ಮೂಢನಂಬಿಕೆಗಳು ಮತ್ತು ಆದರ್ಶಗಳೊಂದಿಗೆ, ಸಾಮಾನ್ಯ ಮಾನವ ಆಸಕ್ತಿಯನ್ನು ಉಳಿಸಿಕೊಂಡು. ಸ್ಕಾಟ್ ನ ಕಾದಂಬರಿಗಳ ಬಗ್ಗೆ ಲುಕಾರ್ಕ್ಸನ ಮಾತುಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು.

ಸ್ಕಾಟ್ ಇದನ್ನು ಎಷ್ಟು ಅದ್ಭುತವಾಗಿ ಮಾಡಲು ಸಾಧ್ಯವಾಯಿತು ಎಂದರೆ ಅವನು ವಿಶೇಷವಾಗಿ ಮಹೋನ್ನತ ನಾಯಕನ ಬಗ್ಗೆ ಆಕರ್ಷಿತನಾಗದ ಮುಖದ ವ್ಯಕ್ತಿತ್ವವು ತನ್ನ ವಯಸ್ಸನ್ನು ಸುಲಭವಾಗಿ ಮೀರಬಹುದು ಮತ್ತು ಅಲಂಕರಿಸುವ ವ್ಯಕ್ತಿಯಾಗಬಹುದು, ಅದು ಗಮನವನ್ನು ಸೆಳೆಯುತ್ತದೆ. ಅವನ ವಯಸ್ಸು ಪ್ರತೀಕವಾಗಬೇಕಿತ್ತು. ಸ್ಕಾಟ್ನ ಹೀರೋಗಳು ಎಲ್ಲಾ ಸಾಧಾರಣ ವ್ಯಕ್ತಿಗಳು, ಅವರು ಅಪರೂಪವಾಗಿ ಏನನ್ನಾದರೂ ಸಾಧಿಸುತ್ತಾರೆ ಅಥವಾ ಅದ್ಭುತವಾದದ್ದನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ನಿಜವಾದ ಐತಿಹಾಸಿಕ ಕಾದಂಬರಿಯು ಮಹಾಕಾವ್ಯದ ಗುಣವನ್ನು ಒಳಗೊಂಡಿದೆ. ಅದರಲ್ಲಿ ಅದರ ತತ್ವಜ್ಞಾನಿ ಬೆಸ್ಕಿ ಚುರುಕಾಗಿ ಸೂಚಿಸಿದಂತೆ, ನಾಯಕನು ಜೀವನದಷ್ಟೇ ವೈಯಕ್ತಿಕವಲ್ಲ. ಮಹಾಕಾವ್ಯದ ನಾಯಕರು ಭಿನ್ನರಾಗುತ್ತಾರೆ. ಹೆಗೆಲ್ ಹೇಳಿದರು, "ರಾಷ್ಟ್ರೀಯ ಪಾತ್ರದಲ್ಲಿ ಬೇರೆ ರೀತಿಯಲ್ಲಿ ಚದುರಿಹೋಗಿರುವುದನ್ನು ಭವ್ಯವಾಗಿ ತಮ್ಮಲ್ಲಿ ಕೇಂದ್ರೀಕರಿಸುತ್ತಾರೆ: ನಾಯಕನು ಸರಾಸರಿ ಕ್ಷೀಣಿಸುವ ಪ್ರಕಾರವಲ್ಲದಿದ್ದರೆ ಅವನು ನಿಜವಾದ ವಯಸ್ಸಿನ ಪಾತ್ರವನ್ನು ಪ್ರತಿನಿಧಿಸಲು ಸಾಧ್ಯವಿಲ್ಲ.ಸ್ಕಾಟ್ನ ಕಾದಂಬರಿಯ ಐತಿಹಾಸಿಕ ಪಾತ್ರಗಳು ಸಹ – ಉದಾಹರಣೆಗೆ, ರಿಚರ್ಡ್, ಎಲಿಜಬೆತ್ ಅಥವಾ ಕ್ರೋಮ್ವೆಲ್ – ಕಾರ್ಲೈಲ್ ತುಂಬಾ ಮಾಡಿದ ರೊಮ್ಯಾಂಟಿಕ್ ನಾಯಕ–ಆರಾಧನೆಯನ್ನು ಪ್ರಚೋದಿಸಲು ಪ್ರಯತ್ನಿಸಿದರು ತಮ್ಮ ಐತಿಹಾಸಿಕ ಹಿರಿಮೆಯನ್ನು ಉಳಿಸಿಕೊಂಡರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಿಜವಾದ ಐತಿಹಾಸಿಕ ಕಾದಂಬರಿಯಲ್ಲಿ, ಭೂಮಿಯ ಮೇಲಿನ ಮಹನೀಯರ ಕಾರ್ಯಗಳಿಂದ ಜನಜೀವನವು ಅಸ್ಪಷ್ಟವಾಗದಿರುವುದು ಮೂಲಭೂತವಾಗಿದೆ.

ಮುಂದೆ, ಕಾದಂಬರಿಯು ನಿರ್ದಿಷ್ಟ ಅವಧಿಯ ಪ್ರಾತಿನಿಧಿಕ ಅಡ್ಡ–ವಿಭಾಗವನ್ನು ಪ್ರಸ್ತುತಪಡಿಸಲು ಪಾತ್ರಗಳನ್ನು ಸಮಾಜದ ಎಲ್ಲಾ ವರ್ಗಗಳಿಂದ ಸೆಳೆಯಬೇಕು. ಅವರನ್ನು ಸಮಾಜದ ವಿವಿಧ ಸ್ತರಗಳಿಂದ ತೆಗೆದುಕೊಳ್ಳಬೇಕು ಮತ್ತು ಅವರು ಪ್ರತಿನಿಧಿಸುವ ಸಾಮಾಜಿಕ ಸಂಘರ್ಷಗಳನ್ನು ಸಂಪೂರ್ಣವಾಗಿ ಪ್ರದರ್ಶಿಸಬೇಕಾಗುತ್ತದೆ. ಈ ಸಂಘರ್ಷಗಳು ಮತ್ತು ವಿರೋಧಾಭಾಸಗಳ ಅಭಿವ್ಯಕ್ತಿ ಜೀವನದ ಅರ್ಥವನ್ನು ಸೃಷ್ಟಿಸುವ ಶಕ್ತಿಯಾಗಿದೆ. ಅದೇ ಸಮಯದಲ್ಲಿ, ನಿಜವಾಗಿಯೂ ಐತಿಹಾಸಿಕವಾಗಿರಲು, ರಾಷ್ಟ್ರೀಯ ಜೀವನದಲ್ಲಿ ಆ ಅಂಶಗಳನ್ನು ಮೂಲಭೂತವಾಗಿ ತಟಸ್ಥವಾಗಿ ಪ್ರತಿನಿಧಿಸುವುದು ಅಗತ್ಯವಿಲ್ಲ –ಅದು ಹೆಚ್ಚು ಕಡಿಮೆ ಪರಿಣಾಮ

ಬೀರುವುದಿಲ್ಲ ಮತ್ತು ಕಥಾವಸ್ತುವಲ್ಲಿನ ಕೇಂದ್ರ ಹೋರಾಟಗಳಿಂದ ದೂರವಿರುತ್ತದೆ, ಏಕೆಂದರೆ ಕಾದಂಬರಿಕಾರ ತನ್ನ ಅನಿಸಿಕೆಗಳನ್ನು ಉಂಟುಮಾಡಬೇಕು. ಜೀವನದ ಓಟವು ಅಡೆತಡೆಯಿಲ್ಲದೆ ಹರಿಯುತ್ತದೆ, ಕ್ರಮೇಣ ಪಾತ್ರಗಳನ್ನು ಪರಿವರ್ತಿಸುತ್ತದೆ, ವಿಕಾಸದ ಕ್ರಿಯಾತ್ಮಕ ಪ್ರಕ್ರಿಯೆಯಲ್ಲಿ ಜೀವನದ ಅರ್ಥವು ಉದ್ಭವಿಸುತ್ತದೆ. ಒಂದು ಪದದಲ್ಲಿ, ಪಾತ್ರಗಳು ವಯಸ್ಸಿನ ಒತ್ತಡದಿಂದ ಬೆಳೆಯಬೇಕು ಮತ್ತು ವಯಸ್ಸನ್ನು ಶ್ರೇಷ್ಠ ಪಾತ್ರದ ದೃಷ್ಟಿಕೋನದಿಂದ ಅರ್ಥೈಸುವ ಪ್ರಣಯದ ಪ್ರಲೋಭನೆಯನ್ನು ವಿರೋಧಿಸಬೇಕು. ಹಾಗೆ ಮಾಡುವುದನ್ನು ಕಲೆಯಲ್ಲಿ ಕಳಂಕ ಎಂದು ಪರಿಗಣಿಸಬೇಕು.. ಟಾಲ್‌ಸ್ಟಾಯ್‌ನನ್ನು ಅನಂತ ಶ್ರೇಷ್ಠ ಐತಿಹಾಸಿಕ ಕಾದಂಬರಿಕಾರನನ್ನಾಗಿ ಮಾಡುವುದು, ನಂತರದ ಪ್ರತಿಯೊಂದು ಪಾತ್ರವು ಐತಿಹಾಸಿಕ ಘಟನೆಗಳಲ್ಲಿ ತೊಡಗಿಸಿಕೊಂಡಿದೆ, ಸಂವೇದನೆಯ ಪರಿಣಾಮವಾಗಿದೆ ಎನ್ನುವ ಕಾರಣಕ್ಕೆ. ಆದರೆ ಯುದ್ಧ ಮತ್ತು ಶಾಂತಿ ಮಾತ್ರವೇ ನಮಗೆ ನೀಡುವ ಜೀವನದ ಸಂಪೂರ್ಣವಾದ ಅರ್ಥವಲ್ಲ.

ಐತಿಹಾಸಿಕ ಕಾದಂಬರಿಯಲ್ಲಿ ಸಮಯದ ಅರ್ಥವು ಎರಡು ಅಂಶಗಳನ್ನು ಹೊಂದಿದೆ – ಒಂದು ನಿರ್ದಿಷ್ಟ ಅವಧಿಯ ಕಾಲ. ಇನ್ನೊಂದು ನಿರಂತರ ಚಲನೆ. ನಿರ್ದಿಷ್ಟ ವಯಸ್ಸಿಗೆ ನಿರ್ದಿಷ್ಟವಾಗಿರುವ ನಡವಳಿಕೆಗಳು, ವೇಷಭೂಷಣ ಸಂಪ್ರದಾಯಗಳು ಮತ್ತು ಇತರ ಅಂಶಗಳನ್ನು ವಿವರಿಸುವ ಮೂಲಕ ಅವಧಿಯನ್ನು ಸೂಚಿಸಲಾಗುತ್ತದೆ. ಈ ಕಾರಣಕ್ಕಾಗಿ ಸಂಭಾಷಣೆಯು ಮುಖ್ಯವಾಗಿದೆ: ಇದು ತೀವ್ರವಾಗಿ 'ನಿಯತಕಾಲಿಕ'ವಾಗಿರಬೇಕು, ಪುರಾತತ್ವಗಳು ನಿರ್ದಿಷ್ಟ ಸಮಯ ಮತ್ತು ಸ್ಥಳವನ್ನು ಸೂಚಿಸುವ ಸ್ಥಳೀಯ ಸಂಗತಿಯನ್ನು ಹೊಂದಿರಬೇಕು. ಐತಿಹಾಸಿಕ ಕಾದಂಬರಿಯ ಬರಹಗಾರನು ಹಿಂದಿನದನ್ನು ಆಳವಾಗಿ ಪರಿಶೀಲಿಸಬೇಕು ಮತ್ತು ನಿಖರತೆಗೆ ಕಟ್ಟುನಿಟ್ಟಾದ ಕಣ್ಣಿನಿಂದ ತನ್ನ ವಸ್ತುಗಳನ್ನು ಸಂಗ್ರಹಿಸಬೇಕು. ಕಾದಂಬರಿಯ ಹಾದಿಯಲ್ಲಿ ಬದಲಾವಣೆಯ ನಿಧಾನ ಪ್ರಕ್ರಿಯೆಯನ್ನು ಪ್ರತಿನಿಧಿಸುವ ಮೂಲಕ ನಿರಂತರತೆಯ ಅರ್ಥವನ್ನು ಸೂಚಿಸಬೇಕು. ಬೇರೆ ರೀತಿಯಲ್ಲಿ ಹೇಳುವುದಾದರೆ, ಐತಿಹಾಸಿಕ ಕಾದಂಬರಿಕಾರರು ಇತಿಹಾಸವನ್ನು ಬೇರ್ಪಟ್ಟ ಅವಧಿಗಳಲ್ಲ, ಆದರೆ ಆಡುಭಾಷೆಯ ಚಳುವಳಿಯಾಗಿ ನೋಡಬೇಕು. ಗಳಗನಾಥರ ಕನ್ನಡಿಗರ ಕರ್ಮಕಥೆಯನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಲುಕಾಕ್ಸ್‌ನನ ಮಾತುಗಳಲ್ಲಿ ಸಂಕ್ಷಿಪ್ತವಾಗಿ ಹೇಳುವುದಾದರೆ, "ಐತಿಹಾಸಿಕ ಸನ್ನಿವೇಶಗಳು ಮತ್ತು ಪಾತ್ರಗಳು ನಿಖರವಾಗಿ ಅಸ್ತಿತ್ವದಲ್ಲಿದ್ದವು ಎಂಬುದನ್ನು ಐತಿಹಾಸಿಕ ಕಾದಂಬರಿಯು ಕಲಾತ್ಮಕ ವಿಧಾನಗಳಿಂದ ಪ್ರದರ್ಶಿಸಬೇಕು ... ಇದು ಜನಸಾಮಾನ್ಯರ ಸ್ವಾಭಾವಿಕ ಪ್ರತಿಕ್ರಿಯೆ ಮತ್ತು ಐತಿಹಾಸಿಕ ಪ್ರಜ್ಞೆಯ ನಡುವಿನ ಪರಿಕಲ್ಪನೆಯನ್ನು ಕಲಾತ್ಮಕವಾಗಿ ಬಹಿರಂಗಪಡಿಸಬೇಕು.".

"ಸಣ್ಣ ಕತೆ ಬರೆಯುವಾತ – ಚಿಕ್ಕ ಚಿತ್ರ ಬರೆಯುತ್ತಾನೆ. ಒಂದೆರಡು ಕ್ಷಣದ ಗೋಚರ ಅದು. ಒಂದು ಘಟನೆ, ಒಂದು ಅನುಭವ, ಒಂದೆರಡು ವ್ಯಕ್ತಿಗಳು – ಇವುಗಳನ್ನೇ ಬಿಂಬಿಸಿ, ಶೀಲದ ಒಂದು ಮುಖ್ಯ ಗುಣ ತೋರಿಸುತ್ತಾನೆ. ಕಾದಂಬರಿಕಾರನ ಚಿತ್ತ ಭಿತ್ತಿ – ವಿಶಾಲವಾದುದು; ಗುರಿ ಇನ್ನೂ ದೊಡ್ಡದು. ಅವನ ಮನಸೆಳೆಯುವ ಪ್ರಶ್ನೆ – ಒಬ್ಬ ವ್ಯಕ್ತಿಗೆ ಸಂಬಂಧಿಸಲಿ, ಸಮಾಜಕ್ಕೆ ಸಂಬಂಧಿಸಿರಲಿ, ಅವನು ಬರೆಯುವ ಚಿತ್ರ – ಒಂದು ಶೀಲದ, ಒಂದು ಸಮಸ್ಯೆಯ ವಿಶಾಲ, ಪೂರ್ಣನೋಟ ಕೊಡಲು ಬಯಸುತ್ತದೆ. ಹಿನ್ನೆಲೆ, ಹಿನ್ನೆಲೆಯಿಂದಾಗಿ ಬಂದ ಆವರಣ,

ವ್ಯಕ್ತಿ, ಅವನ ವಿಕಸಿತ ನಡತೆ – ಎಲ್ಲ ಒಂದು. ಇಷ್ಟೆಲ್ಲಗಳಿಂದಾಗಿ, ಜೀವನದಲ್ಲಿ ಕೋಟಿಗಟ್ಟಲೆಯಿಂದ ಜೀವಿಗಳು, ಅವುಗಳಿಗೆ ಸಂಬಂಧಿಸಿದ ಸಮಸ್ಯೆಗಳೂ ಉಂಟಾಗಲೇಬೇಕು. ಕಾಲಗತಿಯಿಂದ, ದೇಹಸಂಪರ್ಕದಿಂದ, ಗುಂಪುಗುಂಪುಗಳ ಸಂಸ್ಕಾರ ಭಿನ್ನತೆಯಿಂದ, ವ್ಯಕ್ತಿಸ್ವಾರ್ಥ, ಗುಂಪಿನ ನೀತಿಗಳ – ಸಂಘರ್ಷಣೆಯಿಂದ, ವ್ಯಕ್ತಿ ವ್ಯಕ್ತಿಗಳೊಳಗಿನ ತಾಕಲಾಟದಿಂದ ಏನೇನಾಗುವುವು? ಆಗಲಾರವು".[೭] (ಶಿವರಾಮ ಕಾರಂತರ ಲೇಖನಗಳು, ಸಂಪುಟ–೪, ೧೯೯೪ ಪು. ೧೪೮) ಎಂದು ಕಾರಂತರು ಹೇಳುತ್ತಾರೆ.[೬]

ವಾಸ್ತವವಾದದಲ್ಲಿ ಗಂಡು ಮತ್ತು ಹೆಣ್ಣು ಎನ್ನುವ ವ್ಯತ್ಯಾಸವೂ ಇಲ್ಲ. ಆದ್ದರಿಂದ ಈವತ್ತು ನಾವು ವಾಸ್ತವದಲ್ಲಿ ಏನು ಕಾಣುತ್ತೇವೆಯೋ ಅದು ಪ್ರಾಯೋಗಿಕವೂ ಹೌದು. ಯಾವುದು ಕಳೆದು ಹೋಗಿದೆಯೋ ಅದನ್ನು ಲೇಖಕರು ವಿವಿಧ ರೀತಿಯಲ್ಲಿ ಹೇಳುತ್ತಾರೆ. ಕಥನವೂ ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಗುತ್ತದೆ. ಯಾವುದು ಕಳೆದು ಹೋಗಿದೆಯೋ ಅದರ ರಾಜಕಾರಣವನ್ನು ನಮಗೆ ಚರಿತ್ರೆಯು ಕಾದಂಬರಿಯು ಹೇಳುತ್ತದೆ. ನಿಜವಾಗಿ ಯಾವುದು ನಡೆದು ಹೋಗಿದೆಯೋ ಅದನ್ನು ಲೇಖಕರು ಒಂದು ಸಂಕಥನದ ಮಾದರಿ ಎಂದು ಭಾವಿಸುತ್ತಾರೆ. ಕಾರಂತರ ಬೆಟ್ಟದ ಜೀವ ಕಾದಂಬರಿಯಲ್ಲಿ ನಾಯಕನು ನಿರೂಪಕನೂ ಹೌದು. ಅವನು ಏನು ನೋಡಿದ್ದಾನೆ ಮತ್ತು ಅವನು ಯಾವುದನ್ನು ವರ್ಣನೆ ಮಾಡುತ್ತಿದ್ದಾನೆ ಎನ್ನುವುದಕ್ಕೆ ಒಂದು ಚಿತ್ರವು ಇದೆ. ನಿರೂಪಕನು ಕಾದಂಬರಿಯ ಒಳಗೆ ಇದ್ದಾನೆ. ಅವನು ಕಥನದ ಒಂದು ಭಾಗವೂ ಹೌದು. ಅವನ ಮಾತುಕತೆಯಲ್ಲಿ ಭೂತಕಾಲವು ನಿಧಾನವಾಗಿ ವ್ಯಕ್ತವಾಗುತ್ತದೆ. ಕಾಯುತ್ತಿರುವ ತಂದೆ ಮತ್ತು ತಾಯಿಯನ್ನು ಬಿಟ್ಟು ಹೋದ ಮಗ ಒಂದು ಕಡೆ ಇದ್ದಾನೆ. ಮತ್ತೊಂದು ಕಡೆಯಲ್ಲಿ ನಿರೂಪಕನೂ ಇದ್ದಾನೆ. ತಂದೆ ತಾಯಿ ಇಬ್ಬರಲ್ಲಿ ಮನೆ ಮಾಡಿರುವ ಒಂದು ಶೂನ್ಯತೆಯು ನಾಯಕನಿಗೆ ತಟ್ಟುತ್ತದೆ. ಹೀಗೆ ಕಳೆದು ಹೋದ ಸಂಗತಿಯು ಈ ಕೃತಿಯಲ್ಲಿ ಪ್ರತಿಧ್ವನಿಸುತ್ತದೆ. ಎಲ್ಲೋ ಹೊರಟವನು ಮತ್ತೆ ಎಲ್ಲೋ ತಂಗುತ್ತಾನೆ. ಅದರ ಜೊತೆಗೆ ಅವನು ತನಗೆ ಪರಿಚಯವಿಲ್ಲದ ಜೀವಿಗಳನ್ನು ಕಾಣುತ್ತಾನೆ. ಆದರೆ ಇದನ್ನು ಓದುವಾಗ ನಮಗೆ ನಿಜವಾದ ಒಂದು ಸಂಗತಿಯನ್ನು ಕಾರಂತರು ಹೇಳುತ್ತಿದ್ದಾರೆ ಎಂದು ಅನಿಸುತ್ತದೆ. ಪ್ರಯೋಗ ಮತ್ತು ಅದರ ಸಾಧ್ಯತೆಗಳು ಕಾದಂಬರಿ ಪ್ರಕಾರದಲ್ಲಿ ಏನು ಆಗಲು ಸಾಧ್ಯ ಎಂದು ಕಾರಂತರು ಹೇಳುತ್ತಾರೆ. ಮೇಲು ನೋಟಕ್ಕೆ ಗೊಂಡಾರಣ್ಯ ಬಹಳ ದೊಡ್ಡ ವಿಡಂಬನೆಯ ಕಾದಂಬರಿಯಂತೆ ಕಾಣುತ್ತದೆ. ಆದರೆ ಅದು ಅಷ್ಟರಲ್ಲಿ ಮುಗಿಯುವುದೂ ಇಲ್ಲ. ಅದು ಮುಂದೆ ಸಾಗುತ್ತದೆ.

ಕುವೆಂಪು ಅವರ "ರಸೋ ವೈ ಸಃ" ಇದಕ್ಕೆ ಒಂದು ಉದಾಹರಣೆಯಾಗಿದೆ. ಹಾಗೆಯೇ ಅವರ ಎರಡು ಕಾದಂಬರಿಯನ್ನು ನಾವು ನೆನಪಿಗೆ ತಂದುಕೊಳ್ಳಬಹುದು. ಅದು ಮಲೆನಾಡನ್ನು ನಿರ್ದಿಷ್ಟ ಕ್ರಮದಲ್ಲಿ ಪರಿಶೀಲಿಸುತ್ತದೆ. ಎರಡನೆಯದು ಹೂವಯ್ಯ ಮತ್ತು ಮುಕುಂದಯ್ಯ ಮಲೆನಾಡಿನಿಂದ ಬಂದವರು ಮಲೆನಾಡನ್ನು ಬಿಟ್ಟು ಹೊರಗೆ ಹೋಗಿ ಕಲಿತು ಬಂದ ಮೇಲೆ ಅವರು ಮಲೆನಾಡನ್ನು ನೋಡುವ ಕ್ರಮವೇ ಬೇರೆಯಾಗಿದೆ. ಆದರೆ ಈ ಕಾದಂಬರಿಗಳು ಮಲೆನಾಡಿನ ವಿಶಿಷ್ಟ ಪ್ರದೇಶ ಸಂಸ್ಕೃತಿ ಮತ್ತು ಕಾಲವನ್ನು ಹೊಂದಿದೆ. ಅದೇ ರೀತಿಯಲ್ಲಿ

ಚಾರಿತ್ರಿಕ ಸನ್ನಿವೇಶವನ್ನು ಅದು ಅನಾವರಣ ಮಾಡುತ್ತದೆ. ಆದರೆ ಈ ಚರಿತ್ರೆಯು ವಸಾಹತು ಸಂದರ್ಭಕ್ಕೆ ಸೇರಿದ್ದು. ಇವುಗಳ ಜೊತೆಗೆ ಕ್ರೈಸ್ತ ಮಿಶನರಿಗಳ ವಿವರಗಳಿವೆ. ಕಾದಂಬರಿಯೆಂಬ ನಿರ್ದಿಷ್ಟ ಸಾಹಿತ್ಯದಲ್ಲಿಯೂ ಕೂಡಾ ರಾಷ್ಟ್ರೀಯತೆಯ ಸ್ವರೂಪವು ಕೂಡಾ ಒಂದು, ದೇಶೀಯ ಪ್ರೀತಿಯ ಪರಿಕಲ್ಪನೆಯನ್ನು ಕಾಣಬಹುದು. ದೇಶೀಯತೆಯು ಒಂದು ಜನಾಂಗಿಕ ಬದುಕಿನ ಕ್ರಮವಾಗಿ; ಪ್ರಾದೇಶಿಕ ಪ್ರೇಮವಾಗಿ ಅಭಿವ್ಯಕ್ತಗೊಂಡಿತು. ಕಾದಂಬರಿಯೆಂಬ ನಿರ್ದಿಷ್ಟ ಸಾಹಿತ್ಯಕ ರೂಪವು ಆ ಕಾಲದ ಬೌದ್ಧಿಕ ಏಕಾಂತವಾದಿಗಳಿಂದ ಹುಟ್ಟಿಕೊಂಡಿತು. ದ್ವಿಭಾಷಿಕ ಏಕಾಂತವಾದಿಗಳಿಂದ (Bilingual Elite) ಹುಟ್ಟಿರುವ ಕಾದಂಬರಿಗೆ ಮುದ್ರಣ ಬಂಡವಾಳವಾದವು ತುಂಬಾ ಸಹಾಯಮಾಡಿತು (Partha Chatterjee, ೧೯೯೨, ಪು. ೮).

ಅಷ್ಟೇ ಅಲ್ಲ ಇವುಗಳಲ್ಲಿ ಬರುವ ಜನಸಮುದಾಯವು ಮಲೆನಾಡಿನ ನಿಸರ್ಗದೊಂದಿಗೆ ಸೇರಿಕೊಂಡಿವೆ. ಇಷ್ಟಿದ್ದರೂ ಕುವೆಂಪು ಕಾದಂಬರಿಗಳಲ್ಲಿ ಬರುವ ಸಾಮಾಜಿಕ ವ್ಯವಸ್ಥೆಯು ಅನೇಕ ವೈರುದ್ಧ್ಯಗಳನ್ನು ಒಳಗೊಂಡಿವೆ. ಇದರಲ್ಲಿ ಬರುವ ಪ್ರಭುತ್ವ ಬ್ರಿಟೀಷ್ ಕಂಪನಿಗಳಗೆ ಬ್ರಿಟೀಶ್ ರಾಜಕೀಯ ನಿಲುವುಗಳಿಗೆ ಮಾತ್ರ ಸಂಬಂಧಿಸಿದವುಗಳಲ್ಲ. ಇದರ ಅಧಿಕಾರ ಸ್ವರೂಪವು ನಿರ್ದಿಷ್ಟ ನಿಯಮಾವಳಿಗೆ ಸಂಬಂಧಿಸಿಲ್ಲ. ಬ್ರಿಟೀಶ್ ಅರಸೊತ್ತಿಗೆಯ ಕಠೋರ ರಾಜಕಾರಣದ ಮುಖ ಕುವೆಂಪು ಕಾದಂಬರಿಗಳಲ್ಲಿ ಕಾಣಿಸುವುದಿಲ್ಲ. ಆದರೆ ಕಲೋನಿಯಲ್ ಆಡಳಿತದ ಅಧಿಕಾರದ ಬದಲು ಸ್ಥಳೀಯ ರಾಜಕಾರಣ ಮತ್ತು ಅದರ ಹಿಂದಿರುವ ಕ್ರೌರ್ಯದ ರೂಪಗಳನ್ನು ಕುವೆಂಪು ದಟ್ಟವಾಗಿ ವಿವರಿಸುತ್ತಾರೆ. ಸ್ಥಳೀಯ ಯಜಮಾನಿಕೆಯ ವಿವಿಧ ರೂಪಗಳು ಕುವೆಂಪು ಕಾದಂಬರಿಗಳ ಜೀವ ದ್ರವ್ಯವಾಗಿದೆ.

ಕುವೆಂಪು ಅವರ "ಮಲೆನಾಡಿನ ಚಿತ್ರಗಳು" ಬರಿಯ ಒಂದು ಲಲಿತ ಪ್ರಬಂಧದ ಕೃತಿಯಾಗಿ ನೋಡಲಾಗುವುದುಲ್ಲ. ಅದು ವಸಾಹತುವಾದದ ವಿರುದ್ಧವಿರುವ ಚಿತ್ರಣವೂ ಹೌದು, ಹಾಗೆ ನೋಡುವುದಿದ್ದರೆ ಕನ್ನಡದಲ್ಲಿ ಮೊದ ಮೊದಲು ಬಂದ ಕಾದಂಬರಿಗಳನ್ನು ಬೇರೆ ಬೇರೆ ರೀತಿಯಲ್ಲಿ ಅಧ್ಯಯನ ನಡೆಸಲು ಸಾಧ್ಯವಿದೆ. 'ಇಂದಿರಾಬಾಯಿ' 'ಮಾಡಿದ್ದುಣ್ಣೋ ಮಹಾರಾಯ' ಮುಂತಾದ ಕೃತಿಗಳು ಸಾಮಾನ್ಯ ಕಾರಣಗಳಿಗಾಗಿ ಕನ್ನಡದಲ್ಲಿ ಹುಟ್ಟಿಲ್ಲ. ಈ ಎಲ್ಲಾ ಕಾದಂಬರಿಗಳು ನೇರವಾಗಿ ವಸಾಹತು ಧೋರಣೆಗಳನ್ನು ಪ್ರಶ್ನಿಸಿವೆ. ಹಾಗೂ ಅವುಗಳು ಎತ್ತಿಕೊಂಡ ಪ್ರಶ್ನೆಗಳು ಬಹುದೊಡ್ಡವು.

ಮೇಲು ನೋಟಕ್ಕೆ ಕುವೆಂಪು ಕಾದಂಬರಿಯಲ್ಲಿ ಚಿನ್ನಮ್ಮನಿಗೆ ವಸಾಹತು ಜಗತ್ತು ರೂಪಿಸಿದ ಜ್ಞಾನರೂಪಗಳು ತಿಳಿದಿಲ್ಲ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಬರುವ ಸರಸೋತಿಗೆ ರಾಷ್ಟ್ರೀಯತೆಯ ಹೋರಾಟವೇ ತಿಳಿದಿಲ್ಲ. ಲೇಖಕರು ತಮ್ಮ ವರ್ತಮಾನಕ್ಕೆ ಅನುಸಾರವಾಗಿ ಬರೆದರು. ಅವರ ಬರಹಗಳು ಎಂದರೆ ಅದು ವಸಾಹತುಶಾಹಿ ಅನುಭವಕ್ಕೆ ನೀಡಿದ ಪ್ರತಿಕ್ರಿಯೆಗಳು. ಈ ಪ್ರತಿಕ್ರಿಯೆಗಳು ಏಕರೂಪಿಯಲ್ಲ. ಏಕರೂಪಿಯೂ ಆಗಬೇಕಾಗಿಲ್ಲ. ಅದು ಅನೇಕ ರೀತಿಯ ವೈರುದ್ಧ್ಯಗಳಿಂದ ಕೂಡಿಕೊಂಡಿತ್ತು. ಬರಹದ ಸಂಸ್ಕೃತಿಯಲ್ಲಿಯೂ ಎರಡೆರಡು ಮಾದರಿಗಳು ಕಾಣಿಸಿಕೊಂಡವು. ಒಂದು ಶುದ್ಧ ಶೈಕ್ಷಣಿಕ. ಇದು ಚರಿತ್ರೆಯ ಬರಹದಿಂದ ಪ್ರಾರಂಭಿಸಿದರೆ ಸಾಹಿತ್ಯ ಪಠ್ಯಗಳ ರಚನೆಯತನಕ ಮುಂದುವರಿಯಿತು. ಇನ್ನೊಂದು ಶುದ್ಧ ಶೈಕ್ಷಣಿಕವಲ್ಲದ

ಮತ್ತೊಂದು ಮಾದರಿ. ಇವುಗಳು ಬೇರೆ ಬೇರೆ ವಿಷಯಗಳ ಕುರಿತಂಥ ಚರ್ಚೆಗಳು ಗೋಧಿಯ ಆಮದು; ಸುಂಕದ ಪದ್ಧತಿ; ಉಪ್ಪಿನತೆರಿಗೆ; ರಾಷ್ಟ್ರೀಯತೆ; ಸ್ವದೇಶಾಭಿಮಾನ; (ಎಂ. ಎಸ್. ಪುಟ್ಟಣ್ಣ–ನೀತಿ ಚಿಂತಾಮಣಿಯೆಂದೇ ಕೆಲವು ಪುಸ್ತಕ ಬರೆದಿದ್ದರು) ಪ್ರಾದೇಶಿಕತೆ–ಹೀಗೆ. ಇವೆಲ್ಲವೂ ವಸಾಹತು ಕಾಲದ ಪ್ರಮುಖ ಸಮಸ್ಯೆಗಳೇ ಸ್ವದೇಶದ ಬಗೆಗಿನ ಹೋರಾಟ ಯಾವ ಮಾದರಿಯದಾಗಬೇಕು; ಬುಡಕಟ್ಟಿನ ಸಮಸ್ಯೆಯೇನು ಸಂಸ್ಕೃತಿಯ ಅನನ್ಯತೆಯು ಯಾವ ಬಗೆಯದು. ರಾಷ್ಟ್ರ ಯಾವ ರೀತಿಯಲ್ಲಿರಬೇಕು ಇವೆಲ್ಲವೂ ಹೊಸ ಹೊಸ ಮಾದರಿಯ ಪ್ರಶ್ನೆಗಳಾಗಿದ್ದವು. ಈ ಸಂದರ್ಭದ ಒಂದು ವರ್ಗದ ಜನರು (ಮುಖ್ಯವಾಗಿ ಕಲಿತವರು; ವಿದ್ಯಾವಂತರು) ಗ್ರಾಮೀಣ ಜನರಿಗೆ ಇಂಗ್ಲೀಷರಂತೆ ಕಾಣಿಸತೊಡಗಿದರು. ಯಾಕೆಂದರೆ, ಅವರ ವೇಷಭೂಷಣ ಮತ್ತು ಮಾತಿನ ಕ್ರಮವು ಇಂಗ್ಲೀಷರಂತೆ ಇತ್ತು. (Fanon.) ಅಷ್ಟೇ ಅಲ್ಲ. ಆಗ ಕಲಿತ ವಿದ್ಯಾವಂತ ವರ್ಗಕ್ಕೆ ಪರಂಪರೆಯೆನ್ನುವುದು ಅನುಮಾನವನ್ನು ಹುಟ್ಟಿಸಿತು ಹಾಗೂ ಆಗ ಪ್ರಾರಂಭವಾಗಿದ್ದ ರಾಷ್ಟ್ರೀಯ ಕಾಳಜಿಯು ಜಾತಿ ಮತ್ತು ಮತಗಳನ್ನು ಬಿಟ್ಟು ರಾಷ್ಟ್ರವನ್ನು ಕಟ್ಟಬೇಕೆಂಬ ತುಡಿತವನ್ನು ತೋರಿಸತೊಡಗಿತು. (ಅದೇ. ೧೩೪) ಅಷ್ಟೇ ಅಲ್ಲ. ಸಾಂಸ್ಕೃತಿಕ ವೈವಿಧ್ಯತೆಯನ್ನು ನಿರಾಕರಿಸಿ ವಿದ್ಯಾವಂತ ಜನರನ್ನು ಒಂದು ರೂಪದೊಳಗೆ ತಂದು ಅದನ್ನು ತಾಯ್ನಾಡಿನ ನೆಲೆಯೆಂದು ಅವರು ಪ್ರತಿಪಾದಿಸಬೇಕಾಯಿತು. (ಅದೇ. ೧೬೮).

ಕಾರಂತರ 'ಕುಡಿಯರ ಕೂಸು' ಕಾದಂಬರಿಯಲ್ಲಿ ಈ ಮಾದರಿಯ ಚಿತ್ರಣಗಳಿವೆಯೆಂಬುದು ಗಮನಾರ್ಹವಾಗಿದೆ. ಕೆಳಜಾತಿಯವರ ಮೇಲೆ 'ಅವರ' ಗಮನವಿತ್ತು. ಇಲ್ಲಿ ಎರಡು ಅಂಶಗಳಿವೆ: ಒಂದು ಕೆಳಜಾತಿಯವರಿಗೆ ಇದ್ದ ಸ್ಥಾನದ ಸಮಸ್ಯೆ; ಇನ್ನೊಂದು ಬಡತನ. ಆದರೆ ಮತಾಂತರ ಹೊಂದಿದವರು ತುಂಬಾ ಒಳ್ಳೆಯ ಸ್ಥಾನಮಾನ ಪಡೆದಿರಲಿಲ್ಲವೆಂಬುದು ಗಮನಾರ್ಹ. ಮಿಶನರಿಗಳು ಈ ಮೂಲಕ ತಮ್ಮ ಹಿಡಿತದೊಳಗೆ ಸಾಮಾನ್ಯರನ್ನು ನಿಯಂತ್ರಿಸುವ ಪ್ರಯತ್ನ ಮಾಡಿದರು. ಆದರೆ ಈ ಕೆಲಸ ಕಾರ್ಯಗಳು ಅಧಿಕಾರದಿಂದ ಅಥವಾ ಬಲಾತ್ಕಾರದಿಂದ ಉಂಟಾದ ಪ್ರಕ್ರಿಯೆಯಲ್ಲ. ಹಾಗೆಯೇ ಆದರೆ ಅವರು ಹೇರಿರುವ ಮೌಲ್ಯಗಳು ಏಕ ಮುಖಿಯಾಗಿರಲಿಲ್ಲ. (ಅಡಿಟಿಪ್ಪಣೀಗೆ ಮತಾಂತರವು ಕ್ರಿಶ್ಚಿಯನ್ ಧರ್ಮದ ಪ್ರಾಯೋಗಿಕ ಸಾಧ್ಯತೆಯನ್ನು ಒಳಗೊಂಡಿತ್ತು. ಎಲ್ಲರಿಗೂ ತಿಳಿದಿರುವಂತೆ ಕ್ರಿಶ್ಚಿಯನ್ ಧರ್ಮವು 'ಪುನರ್ ಜನ್ಮ'ವನ್ನು ನಿರಾಕರಿಸುತ್ತದೆ. ಈ ರೀತಿಯ ಮತಾಂತರವು ವ್ಯಕ್ತಿತ್ವದಲ್ಲಿ ಮಹತ್ವಪೂರ್ಣವಾದ ಬದಲಾವಣೆಯನ್ನು ತರುತ್ತದೆ. ಈ ಮೂಲಕ ಮಿಶನರಿಗಳು ಪ್ರಾರಂಭಿಸಿದ ಶಾಲೆ–ಕಾಲೇಜುಗಳು ಮಾನಸಿಕ ಪರಿವರ್ತನೆಗಳನ್ನು ತಂದವು. ಇವು ಹೊಸ ರೀತಿಯ ಬೌದ್ಧಿಕ ಸಂವಾದಗಳನ್ನು ಸೃಷ್ಟಿಸಿದವು. ಈ ಮೂಲಕ 'ಪ್ರಗತಿಪರತೆ' ಮತ್ತು ವೈಯಕ್ತಿಕತೆಯ ಪ್ರಾಶಸ್ತ್ಯವು ಹೆಚ್ಚಾಯಿತು. ಚಾರ್ಲ್ಸ್ ಗ್ರಾಂಟ್ ಭಾರತದ ಕಾನೂನು, ಕಲೆ, ಕೃಷಿ ಪದ್ಧತಿ, ಕರಕುಶಲ ಕಲೆಗಳು, ಜನರ ವರ್ತನೆಗಳು, ಅವರ ಅಭ್ಯಾಸಗಳನ್ನು ಕಟುವಾಗಿ ಟೀಕಿಸುತ್ತಾನೆ (Eric Stokes, p. ೩೧ ೩೧). ಬ್ರಿಟೀಶ್ ಸರಕಾರ, ಕಾನೂನು, ಆಡಳಿತ ವ್ಯವಸ್ಥೆಯು ಭಾರತೀಯ ಧರ್ಮಕ್ಕಿಂತ ಮೇಲಿನದು. ಅನೇಕ ಬ್ರಿಟೀಶ್ ಗವರ್ನರ್‌ಗಳು ಭಾರತೀಯ ಕೃಷಿ ಪದ್ಧತಿಯನ್ನು ಇದೇ ರೀತಿ ನೋಡಿದರು. ಕೃಷಿ ಎಂದರೆ ಮಾರುಕಟ್ಟೆ, ಕೃಷಿಯ ಜಮೀನು ಎಂದರೆ ಖಾಸಗಿ ಆಸ್ತಿ.

ಕೃಷಿಯ ಉತ್ಪನ್ನವೆಂದರೆ ಮಾರುಕಟ್ಟೆಗೆ ಇಳಿಯುವ ಸ್ಪರ್ಧಾತ್ಮಕ ಕ್ರಮವೆಂದು ಅವರ ಭಾವನೆಯಾಗಿತ್ತು. ಆದರೆ ಭಾರತೀಯ ರೈತ ಸಮುದಾಯ ಈ ರೀತಿಯ ಚೌಕಟ್ಟನ್ನು ಹೊಂದಿರಲಿಲ್ಲ. ಕಾರಂತರ 'ಕುಡಿಯರ ಕೂಸು' ಕಾದಂಬರಿಯಲ್ಲಿ ಬರುವ ಚಿತ್ರಣಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಲ್ಲಿ ಮುಕ್ತ ಮಾರುಕಟ್ಟೆಯಾಗಲೀ, ಅದರ ಸ್ಪರ್ಧಾತ್ಮಕ ಸಂಗತಿಯಾಗಲಿ ಮುಖ್ಯವಲ್ಲ. ಮತ್ತು ಕುಡಿಯರು ಖಾಸಗಿ ಜಮೀನು ಹೊಂದಿರಲಿಲ್ಲ. ಅವರ ಕೃಷಿ ಪದ್ಧತಿಯು 'ಕುಮ್ಮರಿ' ಬೇಸಾಯವನ್ನು ಒಳಗೊಂಡಿತ್ತು. ಈ ಸಂಗತಿಗಳು ಬ್ರಿಟೀಷ್ ಮಾದರಿಯ ಆಢಳಿತ ಕ್ರಮಕ್ಕೆ ಅರ್ಥವಾಗುವುದು ಸಾಧ್ಯವಿರಲಿಲ್ಲ. ಭಾರತದ ಒಟ್ಟು ಬದಲಾಗಬೇಕಾದ ಪರಿಸ್ಥಿತಿಯನ್ನು ಬ್ರಿಟೀಷರು ಪ್ರತಿಪಾದಿಸಿದರು. ಗ್ರಾಂಟ್ ಮತ್ತೊಂದು ಸಂದರ್ಭದಲ್ಲಿ ಹೇಳುತ್ತಾನೆ: ಯುರೋಪ್ ಮಾದರಿಯಲ್ಲಿ ಪುನರ್‌ಸ್ಥಾಪನ (Eric Stokes, p. ೩೧) ಅಗತ್ಯ. ದೈವದ ನಂಬಿಕೆಯಿಂದ ಜನರು ಬಿಡುಗಡೆಯಾಗಲು ಭಾರತದಲ್ಲಿಯೂ ಯುರೋಪ್ ಮಾದರಿಯ ಶಿಕ್ಷಣ ಅಗತ್ಯವೆಂದು ಅವನು ಪ್ರತಿಪಾದಿಸಿದ. ಇದರ ಮೂಲಕ ಸಮಾಜದ ಪರಿವರ್ತನೆಯಾಗುತ್ತದೆ. ಜನರನ್ನು ಹೆಚ್ಚು ನಾಗರಿಕರನ್ನಾಗಿ ಮಾಡಿದಂತಾಗುತ್ತದೆ. ವೈಯಕ್ತಿಕ ಅಭಿವೃದ್ಧಿ ಸಾಧ್ಯ. ಜನರ ಜ್ಞಾನವು ಉತ್ತುಂಗಕ್ಕೇರುತ್ತದೆ.)

ಕುವೆಂಪು ಕಾದಂಬರಿಗಳನ್ನು ಓದಿದಾಗ ಮಲೆನಾಡಿನ ದಟ್ಟ ಅರಣ್ಯದೊಳಗೆ ಎಷ್ಟೆಲ್ಲಾ ಜೀವನ ವಿಧಾನಗಳಿವೆ? ಎಷ್ಟೊಂದು ಹೊಸದಾರಿಗಳು ವಸಾಹತುಕಾಲದಲ್ಲಿ ಪ್ರಾರಂಭವಾದವು? ಕನ್ನಡ ಕಾದಂಬರಿಗಳು ಈ ರೀತಿಯ ಪ್ರಾದೇಶಿಕತೆಯನ್ನು ಇರಿಸಿಕೊಂಡು ವಸಾಹತುಕಾಲದ ಸನ್ನಿವೇಶಗಳನ್ನು ಕುರಿತು ಚಿತ್ರಿಸಿದವು. ಇವುಗಳಿಗೆ ಒಂದು ತಾಯ್ನೆಲವಿದೆ. ನಿರ್ದಿಷ್ಟ ಸಾಮಾಜಿಕ-ಸಾಂಸ್ಕೃತಿಕ ಬೇರುಗಳಿವೆ. ಎರಡನೆಯದು ಈ ಸಂದರ್ಭದ ಲೇಖಕರಿಗೆ ತಮ್ಮ ಬರವಣಿಗೆ ಅದರ ವಸ್ತು ನಿರೂಪಣೆಯ ಬಗೆಗಿನ ಆಯ್ಕೆಗಳು ಖಚಿತವಿದ್ದವು ಅವರ ಬರಹಗಳು ನಿಷ್ಕಾರಣವಲ್ಲ. ನಿರ್ವಸಹಾತೀಕರಣದ ರಾಜಕಾರಣವು ಸುಲಭದ ಹಾದಿಯಾಗಿರಲಿಲ್ಲ. ಈ ದೃಷ್ಟಿಯಿಂದ ವಸಾಹತುಕಾಲದ ಸಾಮಾಜಿಕ ಚಾರಿತ್ರಿಕ ಪ್ರತಿಕ್ರಿಯೆಗಳು ಬಹು ರೂಪಿಯಾದವು ಆದುದರಿಂದ ವಸಾಹತುಕಾಲದ ಬರಹಗಳ ಬಗ್ಗೆ ನಾವು ಹೇಳಬಹುದಾದ ಮಾತುಗಳೆಂದರೆ ಅವು ಮುಕ್ತಾಯಗೊಂಡಿಲ್ಲ. ಅವುಗಳಿಗೆ ಬೇರೆ ಬೇರೆ ಹಾದಿಗಳಿವೆ. ಅವುಗಳ ಚರ್ಚೆಯನ್ನು ಎಲ್ಲಿಂದಲೂ ಪ್ರಾರಂಭಿಸಬಹುದು-ತಿರುಮಲಾಂಬಾ ಅವರ 'ನಭಾ'ವದಿಂದ ಪ್ರಾರಂಭಿಸಬಹುದು

ಆದರೆ ಕುಡಿಯರ ಕೂಸು ಕಾದಂಬರಿ ಬೇರೆ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತದೆ. ಇಲ್ಲಿ ಒಂದಂಶವನ್ನು ನಾವು ಗಮನಿಸಬೇಕು. ಅದೇನೆಂದರೆ ಪುನರುಜ್ಜೀವನದ ಅನಂತರ ಯುರೋಪಿನಲ್ಲಿ ಜ್ಞಾನ ಮತ್ತು ನಿಯಮಾವಳಿಗಳು ಬದಲಾದವು. ಸಮಾಜದಲ್ಲಿ ಒಬ್ಬ ವ್ಯಕ್ತಿ, ಅವನ ಸ್ಥಾನಮಾನ, ಅವನ ಕರ್ತವ್ಯ ಮತ್ತು ಜವಾಬ್ದಾರಿಗಳು ಮುಖ್ಯವಾದವು. ಯುರೋಪಿನ ನಾಗರಿಕ ಸಮಾಜದ ಪರಿಕಲ್ಪನೆಗೆ ಅನುಸಾರವಾಗಿ ವ್ಯಕ್ತಿಯನ್ನು ನಿರ್ಣಯಿಸುವ ಸ್ಥಿತಿ ಬಂದಿತು. ಇದನ್ನು 'ಸಿವಿಕ್ ಸೊಸೈಟಿ'ಯ ವ್ಯಾಖ್ಯೆ ಎಂದು ಕರೆಯಬಹುದು. ಇದರಿಂದ 'ವ್ಯಕ್ತಿ'ಯನ್ನು ಒಂದು ಸಾಮುದಾಯಿಕ ಜೀವನ ಕ್ರಮದಿಂದ ಬೇರೆಯಾಗಿ ನೋಡುವ ಸಾಧ್ಯತೆಯು ರೂಪುಗೊಂಡಿತು. ಅದನ್ನು ಭಾರತಕ್ಕೆ ಅನ್ವಯಿಸಲಾಯಿತು. ಭಾರತೀಯರು ಅದನ್ನು ಒಪ್ಪುತ್ತಾರೋ ಬಿಡುತ್ತಾರೋ ಅದು

ಬ್ರಿಟೀಶ್ ಸರಕಾರಕ್ಕೆ ಮುಖ್ಯವಾಗಲಿಲ್ಲ. ಮೊದಲಿಗೆ ಒಂದು ಪರೋಕ್ಷ ಹೇರಿಕೆಯಾದ ಆಢಳಿತ ಕ್ರಮವು ಭಾರತದಲ್ಲಿ ಅನಂತರ ಅಧಿಕೃತವಾಯಿತು.

೧. ಇದರಿಂದ "ಒಬ್ಬ ವ್ಯಕ್ತಿ" ಎನ್ನುವ ಪರಿಕಲ್ಪನೆ ಬ್ರಿಟೀಶರಿಗೆ ಮುಖ್ಯವಾಯಿತು.

೨. ಭೂಮಿ ಮತ್ತು ಅದರ ಖಾಸಗಿ ಒಡೆತನ ಬ್ರಿಟೀಶ್ ನೀತಿಗೆ ಮುಖ್ಯ.

೩. ಬ್ರಿಟೀಶ್ ಅಧಿಕಾರ ಕೇಂದ್ರವನ್ನು ಸ್ವೀಕರಿಸುವಂತೆ ಮಾಡಲಾಯಿತು.

೪. ಭಾರತದಲ್ಲಿ "ಒಂದು ಅಧಿಕಾರ"ದ ಪರಿಕಲ್ಪನೆಯು ಜಾರಿಗೆ ಬಂದಿತು (One Power and one mind ನ ರೂಪೀಕರಣ).

ಒಂದೇ ಭೂ ಪ್ರದೇಶ ಮತ್ತು ಅದಕ್ಕೆ ಬೇಕಾದ ಒಂದೇ ನಿಯಮಾವಳಿಯು ಕ್ರಮೇಣ ಜಾರಿಗೆ ಬಂದವು (ಮೊದಮೊದಲು ಕಲ್ಕತ್ತಾ (ಬಂಗಾಳ) ಪ್ರೆಸಿಡೆನ್ಸಿ : ಮದರಾಸು ಪ್ರೆಸಿಡೆನ್ಸಿ, ಬಾಂಬೆ ಪ್ರೆಸಿಡೆನ್ಸಿಗಳಲ್ಲಿ ಬೇರೆ ಬೇರೆಯಾದ ನಿಯಮಗಳಿದ್ದವು. ಅನಂತರ ಅವುಗಳನ್ನು ಒಟ್ಟು ಸೇರಿಸಲಾಯಿತು. ಇದರ ಹಿಂದೆ ಇದ್ದ ತತ್ವಜ್ಞಾನವೆಂದರೆ ಒಬ್ಬ ವ್ಯಕ್ತಿಯ ಅನನ್ಯತೆ, ಒಂದು ಅಧಿಕಾರ, ಜನರನ್ನು ಒಂದೇ ಮನೋಸ್ಥಿತಿಗೆ ತರುವ ಪ್ರಯತ್ನ (One Individual: One Power: One territory and one mind). ಇದು ಬ್ರಿಟೀಶ್ ಅಧಿಕಾರದ ಮೂಲ ತತ್ವಗಳು. ಭಾರತೀಯರನ್ನು ಇದಕ್ಕೆ ಬೇಕಾದಂತೆ ರೂಪಿಸಲಾಯಿತು. ಪುನರುಜ್ಜೀವನದ ಅನಂತರ ಯುರೋಪಿನಲ್ಲಿ ಉಂಟಾದ ತಂತ್ರಜ್ಞಾನ, ವಿಜ್ಞಾನ, ಕೈಗಾರೀಕರಣ, ಬಂಡವಾಳವಾದ ಮೂಲತಃ ಅಲ್ಲಿಯೇ ಚರ್ಚೆಗೆ ಒಳಗಾಗಿತ್ತು. ಚರ್ಚುಗಳು ಮತ್ತು ಅಧಿಕಾರದ ನಡುವೆ ಬೇರೆ ಬೇರೆ ರೀತಿಯ ಸಂವಾದಗಳು ನಡೆದವು. ಅದರ ಪರಿಣಾಮಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡ ಬಂದ ಗವರ್ನರ್ ಜನರಲ್‌ಗಳು ಅವಕ್ಕೆ ಪೂರಕವಾಗಿ ಕೆಲಸ ಮಾಡಿದರು. ಮೂಲತಃ ನಾಗರಿಕ ಸಮಾಜದ (Civil Society) ಪರಿಕಲ್ಪನೆಯಲ್ಲಿಯೇ ಸಮಸ್ಯೆಗಳಿವೆ. ಬ್ರಿಟೀಶ್ ಕಾನೂನು, ಕೋರ್ಟು, ನಿಯಮ ಸಂಹಿತೆಗಳು ಜನ ಸಾಮಾನ್ಯರ ದೃಷ್ಟಿಯಲ್ಲಿ ಪರಕೀಯವಾಗಿದ್ದವು. ಆದರೆ ಅದು ದೇಶೀಯ ಜ್ಞಾನ ಪರಂಪರೆ : ಆಢಳಿತ ಕ್ರಮವನ್ನು ಪಲ್ಲಟಗೊಳಿಸಿ ಅದರ ಜಾಗದಲ್ಲಿ ತನಗೆ ಬೇಕಾದ ಜ್ಞಾನ ಪರಂಪರೆ ಮತ್ತು ಅಧಿಕಾರವನ್ನು ಸ್ಥಾಪಿಸಿತು. ಅವರ ಕಾನೂನುಗಳು ಜ್ಞಾನದ ಮಾದರಿಯೊಂದಿಗೆ ಅನುಸಂಧಾನ ನಡೆಸಿರಲಿಲ್ಲ. ಹಾಗೆ ನೋಡುವುದಿದ್ದರೆ, ಅಧಿಕಾರ ಸ್ಥಾಪನೆಯೇ ಒಂದು ವಿಚಿತ್ರ ಜಗತ್ತು. ಅಧಿಕಾರವೆಂದರೆ ಒಂದರ ಮೇಲೆ ಮತ್ತೊಂದು ನಿಯಂತ್ರಣ ಸಾಧಿಸುವುದು, ಇದರಲ್ಲಿ ಸಮತೋಲನದ ದೃಷ್ಟಿಕೋನವಿರುವುದಿಲ್ಲ. ಸಮಾನತೆಯೆನ್ನುವುದಕ್ಕಂತೂ ಈ ಪರಿಸ್ಥಿತಿಯಲ್ಲಿ ಯಾವ ಅರ್ಥವೂ ಉಳಿಯುವುದಿಲ್ಲ. ಒಂದು ದೃಷ್ಟಿಯಿಂದ ಭಾರತೀಯರ ಪ್ರಜ್ಞೆಯನ್ನು ಬ್ರಿಟೀಶ್ ಅಧಿಕಾರವು ತನ್ನ ಕಾನೂನುಗಳಿಂದ ನಿಯಂತ್ರಣ ಸಾಧಿಸಿತು. ಅಧಿಕಾರದ ಪ್ರಮುಖ ಗುಣವೇ ಅದು : ನಿಯಂತ್ರಣ ಸಾಧಿಸುವುದು. ಸರಕಾರ ರಚನೆಯಲ್ಲಿ ಬ್ರಿಟೀಶರು ಭೌತಿಕ ಅಧಿಕಾರ ಸ್ಥಾಪಿಸಿದರು. ಅದಕ್ಕೆ ಕಾನೂನು, ನ್ಯಾಯಾಂಗ ಮುಖ್ಯ ಪರಿಕರಗಳಾದವು. ಶಾಲೆ-ಕಾಲೇಜುಗಳ ಸ್ಥಾಪನೆಗಳ ಮೂಲಕ ಅದು ಭಾರತೀಯರ ಪ್ರಜ್ಞೆಯ ಮೇಲೆ ನಿಯಂತ್ರಣ ಸಾಧಿಸಿತು. ಇದರಿಂದ ಭಾರತದಲ್ಲಿ ಬೌದ್ಧಿಕ ಕಾರ್ಮಿಕರನ್ನು

ಸೃಷ್ಟಿಸುವುದು ಮತ್ತು ಭೌತಿಕವಾಗಿ (ದೈಹಿಕ) ದುಡಿಮೆಯಲ್ಲಿ ತೊಡಗಿದವರ ಮೇಲೆ ಕಾನೂನಿನ ಮೂಲಕ ಹಿಡಿತ ಸಾಧಿಸುವುದು ಇದರ ಮುಖ್ಯ ಉದ್ದೇಶವಾಯಿತು.

ಈ ಮೂಲಕ ಬ್ರಿಟೀಶ್ ಅಧಿಕಾರವು ಭಾರತೀಯ ಸಂಸ್ಕೃತಿಯನ್ನು ಒಂದು ಅನುಕ್ರಮತೆಯಲ್ಲಿ (ಒಂದು ಖಾಲಿಯಾದ ಜಾಗದಲ್ಲಿ) ರೂಪಿಸಿತು. ನಿರ್ದಿಷ್ಟ ಸಾಂಸ್ಕೃತಿಕ ಚಹರೆಗಳನ್ನು ಹೇರುವುದರ ಮೂಲಕ ಎಲ್ಲವನ್ನೂ ಒಂದು ಚೌಕಟ್ಟಿನೊಳಗೆ ತಂದಿತು. ಇದರಲ್ಲಿ ಜನಸಾಮಾನ್ಯರು, ರೈತರು, ಹೆಂಗಸರು ಎಂಬ ಭೇದಗಳು ಬ್ರಿಟೀಶ್ ಕಾನೂನಿಗೆ ಮುಖ್ಯವಾಗಲಿಲ್ಲ. ಅದೊಂದು ನಿಯಮ (System) ತರುವ ಪ್ರಯತ್ನ. ಇದರಿಂದ ಹೊಸ ಸಾಂಸ್ಕೃತಿಕ ಚೌಕಟ್ಟು ಏರ್ಪಟ್ಟಿತು.ಒಮ್ಮೊಮ್ಮೆ ವ್ಯಕ್ತಿತ್ವಕ್ಕೂ ಭೂಮಿಗೂ ಸಂಬಂಧವಿದೆ. ಭೂಮಿಯನ್ನು ಹೊಂದಲು ನಾವು ನಗರಾಭಿವೃದ್ಧಿಯಿಂದ ಅನುಮತಿಯನ್ನು ಪಡೆಯಬೇಕಾಗಿಲ್ಲ. ಜಮೀನನನ್ನು ನಾವು ಲೀಸಿಗೆ ಮಾಡಿಕೊಳ್ಳಬಹುದು. ಬೆಳೆಯನ್ನು ನಾವು ಮಾರುಕಟ್ಟೆಯ ವಸ್ತುವಾಗಿಯೂ ಪರಿವರ್ತಿಸಬಹುದು. ಖಾಸಗಿ ಆಸ್ತಿಯೆನ್ನುವುದು ಕೇವಲ ರಾಜಕೀಯವಾದ ನಿಲುವು ಕೂಡಾ ಅಲ್ಲ. ಜಮೀನಿನ ಯಜಮಾನ ಎಂದರೆ ಅವನು ಆಯಾ ಜಮೀನಿನ ರಾಜನೂ ಹೌದು. ಹಾಗೆಂದು ಅವನನ್ನು ನಾವು ವೈಭವೀಕರಿಸಬೇಕಾಗಿಲ್ಲ. ಜಮೀನಿಗೆ ಸಾಮಾನ್ಯವಾಗಿ ಒಂದು ದರವೂ ಇರುತ್ತದೆ. ನಾವು ರಾಜಕೀಯವಾದ ನಿಲುವನ್ನು ಬೇರೆ ವಿಷಯಗಳಲ್ಲಿ ವ್ಯಕ್ತ ಪಡಿಸಬಹುದು, ಆದರೆ ಜಮೀನಿನ ವಿಷಯಕ್ಕೆ ಬಂದಾಗ ಮಾತ್ರ ಆ ರೀತಿಯ ನಿಲುವನ್ನು ತಳೆಯಲು ಸಾಧ್ಯವಿಲ್ಲ.ಇದಕ್ಕೆ ಸಂಬಂದಪಟ್ಟಂತೆ ಮತ್ತೊಂದು ಉದಾಹರಣೆಯನ್ನು ಕೊಡಬಹುದು–ಹಣಕ್ಕೆ ಯಜಮಾನನಿಲ್ಲ. ಆದರೆ ಜಮೀನಿಗೆ ಯಜಮಾನನಿದ್ದಾನೆ. ಜಮೀನು ಎನ್ನುವುದು ಏಕಸ್ವಾಮ್ಯಕ್ಕೆ ಸಂಬಂಧಪಟ್ಟದ್ದು. ವಸ್ತುವನ್ನು ಅನೇಕ ರೀತಿಯಲ್ಲಿ ಉತ್ಪಾದಿಸಬಹುದು, ಆದರೆ ಜಮೀನನ್ನು ಹಲವು ರೀತಿಯಲ್ಲಿ ಉತ್ಪಾದಿಸವುದು ಅಸಾಧ್ಯ. ಅದು ದ್ವಿಗುಣ ಮೌಲ್ಯವನ್ನು ಹೊಂದುವುದಿಲ್ಲ. ವಸಾಹೋತ್ತರ ಎನ್ನುವುದು ನಮಗೆ ಈವತ್ತು ಅಂತರ್ರಾಷ್ಟ್ರೀಯವಾದ ಸಂಬಂಧವನ್ನು ಹೇಳುತ್ತದೆ. ಆಧುನಿಕ ಸಮಾಜವಿಜ್ಞಾನ ಮತ್ತು ಸಾಹಿತ್ಯದ ಅಧ್ಯಯನಗಳಲ್ಲಿ ಇದು ಇವತ್ತು ಅತ್ಯಂತ ಹೆಚ್ಚು ಬಳಕೆಯು ಆಗುತ್ತದೆ. ಚರಿತ್ರೆಯಲ್ಲಿ ಎಲ್ಲವೂ ಅನುಕ್ರಮವಾಗಿಲು ಬೆಳೆದು ಬಂದಿಲ್ಲ ಎನ್ನುವುದು ಸ್ಪಷ್ಟ. ಇಲ್ಲಿ ಇನ್ನೊಂದು ಮಾತನ್ನು ನಾವು ಹೇಳಬೇಕು: ವಸಾಹತುಕಾಲದಲ್ಲಿ ಅನೇಕ ಕೃತಿಗಳು ಕನ್ನಡಕ್ಕೆ ಬಂದವು. ಅನೇಕವು ಇಂಗ್ಲೀಷಿನಿಂದ ಕನ್ನಡಕ್ಕೆ ರೂಪಾಂತರಗೊಂಡವು ಎನ್ನುವುದೂ ಅಷ್ಟೇ ಸತ್ಯ. ಈ ಅನುವಾದಗಳು ಕೂಡ ಆ ನಮಗೆ ಒಂದು ಬಗೆಯಲ್ಲಿ ವಿಶಿಷ್ಟವಾದ ಸಂಕಥನಗಳನ್ನು ಹೇಳುತ್ತವೆ. ಅನುವಾದಗಳು ನಮಗೆ ಸಹಯೋಗವನ್ನು ಹೇಳುತ್ತವೆ. ಅನುವಾದಗಳು ಹೇಗೆ ಮತ್ತು ಯಾರನ್ನು ಉದ್ದೇಶ ಮಾಡಿಕೊಂಡಿವೆ ಎಂದು ನೋಡಿದರೆ ಇದರ ಅರ್ಥವು ತಿಳಿಯುತ್ತದೆ. ಇಂಗ್ಲೀಷಿನಿಂದ ಕನ್ನಡಕ್ಕೆ ಬಂದವುಗಳು ಕನ್ನಡದ ಓದುಗರನ್ನು ಆಶ್ರಯಿಸಿವೆ. ಅದು ಕನ್ನಡದ ಓದುಗರಿಗೆ ಅತ್ಯಂತ ಅಗತ್ಯವಾಗಿತ್ತು ಕನ್ನಡದ ಓದುಗರಿಗೆ ಇದು ವಿಶಿಷ್ಟವಾದ ಅನುಭವವನ್ನು ಕೊಟ್ಟಿತು. ಯಾರನ್ನು ಉದ್ದೇಶ ಮಾಡಿಕೊಂಡು ಆ ರಚನೆಗಳು ಆದವೋ ಅದರ ಹಿಂದೆ ಕೆಲವು ಸಾಂಸ್ಕೃತಿಕವಾದ ಒತ್ತಡಗಳೂ ಇದ್ದವು. ಈವತ್ತು ನಾವು ಮಾತಾಡುತ್ತಿರುವ ವಸಾಹೋತ್ತರ ಎನ್ನುವುದು ಈ ಅರ್ಥದಲ್ಲಿ ಆಧುನಿಕ ಸನ್ನಿವೇಶವನ್ನು ಹೇಳುತ್ತದೆ. ವಸಾಹತೋತ್ತರ ಎನ್ನುವುದು ನಿಜವಾದ ಅರ್ಥದಲ್ಲಿ ಅಂತರ್ ಶಿಸ್ತನ್ನು ಹೇಳುತ್ತದೆ.

ಅದರಲ್ಲಿ ವಿವಿಧ ಜ್ಞಾನಪರಂಪರೆಗಳು ಜೊತೆಗೆ ಸೇರಿಕೊಂಡಿವೆ. ವಸಾಹಾತೋತ್ತರ ಎನ್ನುವುದು ಅತ್ಯಂತ ಮುಖ್ಯವಾಗಿ ಚರಿತೆಯನ್ನು ಮತ್ತು ಮನೋಸ್ಥಿತಿಯನ್ನು ನೆನಪು ಮಾಡುತ್ತದೆ. ಇದರ ಜೊತೆಗೆ ಈಗ ಇದು ಏನಾಗಿದೆ ಎಂದರೆ ನಮ್ಮ ಹಳೆಯ ಸಂಸ್ಕೃತಿ ಮತ್ತು ಅದರ ಭಿನ್ನ ಚಹರೆಗಳನ್ನು ಹುಡುಕುವ ಒಂದು ಪ್ರಯತ್ನವೂ ಆಗಿದೆ. ಇದರಲ್ಲಿ ಅನೇಕ ರೀತಿಯ ಪ್ರಾರಂಭಗಳೂ ಇವೆ. ಸಂಸ್ಕೃತಿಯ ತತ್ವಜ್ಞಾನದ ಪ್ರಶ್ನೆಯೆಂದರೆ ಅದು ವಿಜ್ಞಾನ ಮತ್ತು ರಾಜಕಾರಣದಿಂದ ಹೊರತಾದುದೂ ಅಲ್ಲ. ಹಾಗೆ ನೋಡುವುದಿದ್ದರೆ ಸಂಸ್ಕೃತಿಯ ಪ್ರಶ್ನೆಯು ರಾಜಕಾರಣವನ್ನು ಮೀರುವುದು ಸಾಧ್ಯವಿಲ್ಲ. ಆದರೆ ಅನೇಕರು ರಾಜಕಾರಣಕ್ಕೆ ಸಂಸ್ಕೃತಿಯ ಪ್ರಶ್ನೆಯನ್ನು ಒಂದು ಆಯುಧವಾಗಿ ಬಳಸಿಕೊಳ್ಳುತ್ತಾರೆ. ಆದರೆ ನಮಗೆ ಇರುವ ಆಲೋಚನೆಯನ್ನು ನಾವು ಸಂಸ್ಕೃತಿಗೆ ಹೇರುತ್ತೇವೆ. ಸಾಂಸ್ಕೃತಿಕವಾದ ಚಲನೆಯನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಹಾಗೆಂದು ಸಂಸ್ಕೃತಿಯನ್ನು ನೋಡುವಾಗ ಅದನ್ನು ಅಭಿವೃದ್ಧಿಯಿಂದ ಹೊರತು ಪಡಿಸಿಕೊಂಡು ನೋಡಲಾಗುವುದಿಲ್ಲ. ಹಾಗೆ ನೋಡುವುದಿದ್ದರೆ ಸಂಸ್ಕೃತಿ ಮತ್ತು ಅದರ ಪರಿಣಾಮಗಳು ನಮ್ಮ ಎಲ್ಲರ ಮೇಲೆ ಆಗುತ್ತದೆ. ಮತ್ತು ನಮ್ಮ ಚಿಂತನೆಗೂ ಸಂಸ್ಕೃತಿಗೂ ನೇರವಾದ ಸಂಬಂಧವಿದೆ. ಮತ್ತು ಯಾವುದನ್ನು ನಾವು ಭೌತಿಕ ಜಗತ್ತು ಎಂದು ಕರೆತ್ತೇವೆಯೋ ಅದಕ್ಕೂ ನಮ್ಮ ಚಿಂತನೆಯ ಕ್ರಮಕ್ಕೂ ಸಂಬಂಧವಿದೆ. ಸಾಂಸ್ಕೃತಿಕ ಅನನ್ಯತೆ ಮತ್ತು ಚಲನೆಯ ನಮಗೆ ಬಹಳ ಮುಖ್ಯ. ಅದು ಅಸ್ತಿತ್ವದ ಭಾಗವೂ ಹೌದು. ನಾವು ನಾಗರಿಕ ಜಗತ್ತಿಗೆ ಸಂಬಂಧಪಟ್ಟಿದ್ದೇವೆ ಎನ್ನುವ ಕಾರಣದಿಂದಲೇ ಸುಸಂಸ್ಕೃತರಾಗುವುದೂ ಇಲ್ಲವೆನ್ನುವುದನ್ನು ಮನದಟ್ಟು ಮಾಡಬೇಕಾಗುತ್ತದೆ. ನಮ್ಮ ಚಿಂತನೆಗೂ ಮತ್ತು ನಮ್ಮ ಇರುವಿಕೆಗೆ ಸಂಬಂಧವಿದೆ. ಹಾಗಯೇ ನಾವು ನಮ್ಮ ಆತ್ಮ ಎಂದು ಯಾವುದನ್ನು ಕರೆಯುತ್ತೇವೆಯೋ ಅದಕ್ಕೂ ನಿಸರ್ಗಕ್ಕೂ ಸಂಬಂಧವಿದೆ. ನಿಸರ್ಗಕ್ಕಿಂತ ಆತ್ಮವು ಮೊದಲು ಎಂದು ಭಾವಿಸಬೇಕಾಗಿಲ್ಲ. ನಿಸರ್ಗವೆನ್ನವುದನ್ನು ಸ್ವಾಭಾವಿಕವಾದುದು ಎಂದು ಹೇಳಿದರೆ ಸಂಸ್ಕೃತಿಯು ಕೃತಕವಾದುದು ನಿಜ. ಆದರೆ ನಮಗೆ ಯಾವುದು ಆವಶ್ಯಕ ಎಂದು ಹೇಳುತ್ತೇವೆಯೋ ಅದನ್ನು ಮಾತ್ರವೇ ನಾವು ಕಟ್ಟುತ್ತೇವೆ. ಆದುದರಿಂದ ಸಂಸ್ಕೃತಿಯೆನ್ನುವುದು ನಮ್ಮ ಆವಶ್ಯಕತೆಯನ್ನು ಸಂಕೇತಿಸುತ್ತದೆ. ಮತ್ತು ಅದು ನಮ್ಮ ಚಲನೆಯ ಒಂದು ಭಾಗವೂ ಹೌದು. ನಮ್ಮ ಎದುರು ನಿಸರ್ಗವಿದೆ. ಅದನ್ನು ನಾವು ಕಟ್ಟಿದ್ದು ಎಂದು ಹೇಳುವುದಿಲ್ಲ. ಹಾಗೆಂದು ಸಂಸ್ಕೃತಿಯನ್ನು ನಿಸರ್ಗವೆಂದೂ ಕರೆಯುವುದಿಲ್ಲ.

ಈ ಮಾತನ್ನು ನಿರಚನದ ಹಿನ್ನೆಲೆಯಲ್ಲಿಯೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆದುದರಿಂದ ನಮ್ಮ ಎದುರು ಇರುವ ಸಂಸ್ಕೃತಿಯನ್ನು ನಮ್ಮ ಭೌತಿಕತೆಯಿಂದಲೇ ಕಟ್ಟಬೇಕಾಗುತ್ತದೆ. ಕಾರಂತರ 'ಬೆಟ್ಟದಜೀವ', 'ಸ್ವಪ್ನದ ಹೊಳೆ', 'ಚಿಗುರಿದ ಕನಸು' ಕಾದಂಬರಿಗಳು ಈ ದೃಷ್ಟಿಯಿಂದ ಮಹತ್ವದವುಗಳು. ಆದರೆ ನಿರಚನವಾದಿಗಳು ಸಂಸ್ಕೃತಿಯನ್ನು ಒಂದು ಖಾಲಿಯಾದ ಜಾಗವೆಂದು ಭಾವಿಸಿಕೊಂಡಂತೆ ಇದೆ. ಸಂಸ್ಕೃತಿ ಮತ್ತು ಮೌನ, ಸಂಸ್ಕೃತಿ ಮತ್ತು ಬರಹ, ಸಂಸ್ಕೃತಿ ಮತ್ತು ಮಾತುಗಳನ್ನು ನಿರಚನವು ಅರ್ಥ ಮಾಡಿಕೊಳ್ಳುವಾಗ ಅದನ್ನು ಒಂದು ಖಾಲಿಯಾದ ಅವಕಾಶದಲ್ಲಿ ಇಡುತ್ತದೆ. ನಿರಚನವಾದಿಗಳು ವಾಸ್ತವವಾಗಿ ಸಂಸ್ಕೃತಿ ಮತ್ತು ಅದರ ಬಹತ್ವದ ಕಡೆಗೆ ಮಾತ್ರವೇ ಗಮನವನ್ನು ನೀಡುತ್ತಾರೆ. ಆದರೆ ನಾವು ಸಂಸ್ಕೃತಿಯನ್ನು ನಿರ್ದಿಷ್ಟವಾದ ವಾಸ್ತವದೊಂದಿಗೆ

ಇಡಬೇಕಾಗುತ್ತದೆ. ಆದರೆ ಭೌತಿಕ ಉತ್ಪಾದನೆಯು ನಮ್ಮ ಕೌಶಲದ ನಿಲುವು ಕೂಡಾ ಹೌದು. ನಮ್ಮ ಸಾಮಾಜಿಕ ಪ್ರಶ್ನೆಯು ನಿರ್ದಿಷ್ಟವಾದ ರೂಪಗಳನ್ನು ಸೂಚಿಸುತ್ತದೆ. ನಮ್ಮ ಅನೇಕ ವಾದ ಮತ್ತು ವಿವಾದಗಳು ಯಾವುದರ ಸುತ್ತು ಮತ್ತು ಹೇಗೆ ನಡೆಯುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಮನುಷ್ಯನ ಪ್ರಜ್ಞೆ ಮತ್ತು ಅದರ ಪರಿಣಾಮದ ಪ್ರಶ್ನೆಯು ಬಹಳ ಮುಖ್ಯವೂ ಹೌದು. ಮೂರ್ಛಿತಾವಸ್ಥೆಯಲ್ಲಿ ಯಾರೂ ಸಂಸ್ಕೃತಿಯನ್ನು ಕಟ್ಟುವುದಿಲ್ಲ. ಮತ್ತು ಸಂಸ್ಕೃತಿಯು ಯಾವುದನ್ನು ಮರೆಯುತ್ತದೆ ಮತ್ತು ಹೇಗೆ ಮರೆಯುತ್ತದೆ ಎನ್ನವುದು ಗಂಭೀರವಾದ ಪ್ರಶ್ನೆ. ಮರೆಯುವಿಕೆ ಎನ್ನವುದೇ ಬಹಳ ಅಸ್ಪಷ್ಟವಾದ ಪದ. ಯಾಕೆಂದರೆ ಒಂದು ಸಂಸ್ಕೃತಿಯು ತನಗೆ ಬೇಡವಾದುದನ್ನು ಮರೆಯುತ್ತದೆ. ಅಥವಾ ಬಿಡುತ್ತದೆ. ಯಾಕೆಂದರೆ ಆ ವಿಷಯಗಳಿಗೆ ಯಾವುದೇ ವಿನಿಮಯದ ಮೌಲ್ಯವಿರುವುದಿಲ್ಲ. (೧೮೨೦ ರಿಂದ ೧೮೭೦ ರ ಅವಧಿಯು ಸಾಮಾಜಿಕ ಪರಿವರ್ತನೆಯ ಯುಗ ಎಂಬುದನ್ನು ಪಾರ್ಥಚಟರ್ಜಿಯವರು ಹೇಳುತ್ತಾರೆ (೧೯೯೭, ಪು. ೫). ಶಿಕ್ಷಣ ಮತ್ತು ಕ್ರಿಶ್ಚಿಯಾನಿಟಿಯು ಭಾರತದಲ್ಲಿ ಅನೇಕ ಪರಿವರ್ತನೆಗಳನ್ನು ತಂದಿತು. 'ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು' ವೈಜ್ಞಾನಿಕ ಚಿಂತನೆಯು ಬೆಳೆಯಬೇಕು – ಮುಂತಾದವು ಇದರ ಪ್ರತಿಫಲವಾಗಿದೆ. ೧೯೧೪ರ ಸುಮಾರಿಗೆ ಅವರು (ಎಂ.ಎನ್. ಕಾಮತ್), ಎಸ್.ವಿ.ಎಸ್. ಶಾಲೆಯ ಮುಖ್ಯೋಪಾಧ್ಯಾಯರಾದರು. ಗಾಂಧೀವಾದದಿಂದ ಪ್ರೇರಿತರಾಗಿದ್ದ ಕಾಮತರು ಪ್ರಗತಿಪರ ದೃಷ್ಟಿ, ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದು ಬಂಟ್ವಾಳದಲ್ಲಿದ್ದಾಗ ಅಸ್ಪೃಶ್ಯರೊಂದಿಗೆ ಸಹ–ಪಂಕ್ತಿ ಭೋಜನ ಮಾಡಿದರೆಂಬ ಕಾರಣದಿಂದ ಜಾತಿಯಿಂದ ಬಹಿಷ್ಕೃತರಾದರು. ಆದರೆ ಶ್ರೀ ವೆಂಕಟರಮಣ ದೇವರನ್ನು ಕುರಿತು ಕಾಮತರು ಈ ಮೊದಲೇ ರಚಿಸಿದ್ದ ವಟಪುರಾಧೀಶ್ವರ ಶತಕವೆಂಬ ಕಾವ್ಯವನ್ನು ಕೇಳಿದ ಅಂದಿನ ಕಾಶೀ ಮಠಾಧೀಶರು ಅವರ ವಿಷಯದಲ್ಲಿ ಅತಿ ಪ್ರಸನ್ನರಾದರು. ಸ್ವಾಮೀಜಿಯ ಆದೇಶದಂತೆ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳಲಾಯಿತು (ಎಂ. ರಾಮಚಂದ್ರ, ೨೦೦೫, ಪು. ತು). ಕನ್ನಡ ನಾಡಿನಲ್ಲಿ ಉಂಟಾದ ಪರಿವರ್ತನೆಗಳನ್ನು ಇದು ಸಂಕೇತಿಸುತ್ತದೆ. ಗ್ರಾಂಟ್‌ನ ಕಾಲದಲ್ಲಿ ಬ್ರಿಟೀಶ್ ಸರಕಾರದ ಆಡಳಿತ ನೀತಿಯು ಪ್ರಗತಿಯನ್ನು ಸಾಧಿಸಿತು. ಬ್ರಿಟೀಶ್ ಸರಕಾರದ ಆರ್ಥಿಕ ನೀತಿಯು ವರ್ತಕ ಶಾಹಿಯನ್ನು ಉದಾರವಾಗಿ ನೋಡಿತು. ಇದು ಯುರೋಪಿನ ಜನರು ನೆಲೆಯೂರುವುದಕ್ಕೆ ಸಹಾಯ ಮಾಡಿತು. 'ಪಾಶ್ಚಾತ್ಯ ಸಂಸ್ಕೃತಿಯ ಸಾಹಿತ್ಯದ ಮತ್ತು ವಿಜ್ಞಾನದ ಪ್ರಭಾವದಿಂದ ದೂರವಾಗಲೀ ತಪ್ಪಿಸಿಕೊಳ್ಳುವುದಾಗಲೀ ಸಾಧ್ಯವೂ, ಶ್ರೇಯಸ್ಸೂ ಅಲ್ಲ' (ಕುವೆಂಪು, ೧೯೩೭, ಕನ್ನಡ ಸಾಹಿತ್ಯ) ಮಿಶನರಿಗಳ ಕೆಲಸವು ಒಂದೆಡೆಯಿಂದ ತನ್ನ ಉದ್ದೇಶವನ್ನು ಈಡೇರಿಸಿಕೊಂಡಂತೆ, ಮತ್ತೊಂದು ಕಡೆಯಿಂದ ವಾಣಿಜ್ಯ ಕ್ಷೇತ್ರವು ಪ್ರಗತಿಯನ್ನು ಕಂಡುಕೊಂಡಿದ್ದರಿಂದ ಬೇರೆ ಬೇರೆ ಪರಿಣಾಮಗಳು ವಸಾಹತು ದೇಶಗಳಲ್ಲಿ ಕಾಣಿಸಿಕೊಂಡವು. ಬೇರೆ ಬೇರೆ ಗವರ್ನರ್ ಜನರಲ್‌ಗಳು ಬಂದಾಗಲೆಲ್ಲಾ ಕಾನೂನುಗಳು ಬದಲಾಗುತ್ತಾ ಹೋಗಿರುವುದು ಅವರ ನಿರ್ಣಯಗಳನ್ನು ಮಾತ್ರ ಸೂಚಿಸುವುದಿಲ್ಲ. ಅದರ ಹಿನ್ನೆಲೆಯಲ್ಲಿ ಬ್ರಿಟನ್‌ನಲ್ಲಿ ಉಂಟಾದ ಏರುಪೇರುಗಳು ಕೂಡಾ ಕಾರಣವಾಗಿವೆ.

"ರಾಷ್ಟ್ರೀಯ ಮಟ್ಟದ ಒಂದು ಬೌದ್ಧಿಕ ವಲಯವು ಅಖಿಲ ಭಾರತ ವಲಯಕ್ಕೆ ತೆರೆದುಕೊಂಡಿತು. ಇದು ವಸಾಹತು ಕಾಲದಲ್ಲಿ ಭಾರತದಲ್ಲಿ ಕಾಣಿಸಿಕೊಂಡ ಒಂದು ರೀತಿಯ

ಪ್ರಕ್ರಿಯೆಯಾಗಿದೆ. ಉಚ್ಚ ವರ್ಗದವರು ಮತ್ತು ಮಧ್ಯ ವರ್ಗದವರು ವಸಾಹತು ಆಢಳಿತ, ಕಾನೂನು, ವ್ಯವಹಾರ ನೀತಿ, ಇಂಗ್ಲೀಷ್ ಭಾಷೆಯ ಕಲಿಕೆ, ಪತ್ರಿಕೋದ್ಯಮ, ಕಾಲೇಜುಗಳಲ್ಲಿ ಉಪನ್ಯಾಸಕ ವೃತ್ತಿಗೆ ತೊಡಗಿದರು. ಈ ಮೂಲಕ ಬ್ರಿಟೀಶ್ ಪ್ರಭುತ್ವಕ್ಕೆ ಹತ್ತಿರವಾದರು"[೪] (ಏಜಾಜ್ ಅಹಮದ್, ೧೯೯೯, In Theory, p. ೭೬)

೧ ೧೩೨೮ರ ಹೊತ್ತಿಗೆ ಕರಾವಳಿಯ ಎರಡು ಜಿಲ್ಲೆಗಳಲ್ಲಿ ಕ್ರೈಸ್ತ ಮತಕ್ಕೆ ಬಹಳಷ್ಟು ಜನರು ಮತಾಂತರ ಹೊಂದಿದ್ದರು. ೧೫೨೧ರಲ್ಲಿ ಸೈಂಟ್ ಫ್ರಾನ್ಸಿಸ್ ಪಂಥಕ್ಕೆ ಸೇರಿದವರು ಉಲ್ಲಾಳ, ಫರಂಗಿ ಪೇಟೆ, ಮಂಗಳೂರಿನಲ್ಲಿ ಚರ್ಚ್ ಪ್ರಾರ್ಥನ ಮಂದಿರ ಕಟ್ಟಿದರು. ಕೊಂಕಣಿಯಲ್ಲಿ ರಚಿತವಾದ 'ರಿಗ್ಲೊಜೇಸು' ಫಾದರ್ ಜೋಕಿಮ್ ಮಿರಾಂಡ ಅವರಿಂದ ರಚಿತವಾಯಿತು. ೧೭೮೩ರಲ್ಲಿ ಕರಾವಳಿಯಲ್ಲಿ ೨೭ ಚರ್ಚ್‌ಗಳಿದ್ದವು. ಮಂಗಳೂರಿನ ಮಿಲಾಗ್ರಿಸ್ ಚರ್ಚ್ ಕರ್ನಾಟಕದಲ್ಲಿ ಅತ್ಯಂತ ಹಳೆಯದು. ಬ್ರಿಟೀಶರು ಬಂದ ಮೇಲೆ ಪ್ರೊಟೋಸ್ಟೆಂಟ್‌ರು ಬಂದರು. ಬಾಸೆಲ್ ಮಿಷನ್ (೧೮೩೪) ಮಂಗಳೂರು, ೧೮೩೭ರಲ್ಲಿ ಧಾರವಾಡದಲ್ಲಿ ಬೀಡು ಬಿಟ್ಟದ್ದವು. 'ದಿ ಸೊಸೈಟಿ ಆಫ್ ಜೀಸಸ್', ೧೮೭೮ರಲ್ಲಿ ಮಂಗಳೂರಿನಲ್ಲಿ ಸೈಂಟ್ ಅಲೋಶಿಯಸ್ ಕಾಲೇಜು ಪ್ರಾರಂಭಿಸಿತು. ೧೮೯೧ರಲ್ಲಿ ಮಂಗಳೂರಿನ ಕಂಕನಾಡಿಯಲ್ಲಿ ೧೮೯೧ರಲ್ಲಿ ಹೋಮಿಯೋಪತಿ ಆಸ್ಪತ್ರೆ ಪ್ರಾರಂಭವಾಯಿತು (ಚೆಲುವ ಕನ್ನಡ ನಾಡು).

೨ ಮೊಟ್ಟಮೊದಲಿನದು ಎನ್ನಲಾಗದಿದ್ದರೂ ಮೊದಲಿನವುಗಳಲ್ಲಿ ಒಂದಾದ ಬಾಸೆಲ್ ಮಿಶನ್ ಪ್ರೆಸ್ ಕನ್ನಡದ ಪುಸ್ತಕಗಳನ್ನು ಬಲು ಮುದ್ದಾಗಿ ಅಚ್ಚುಕಟ್ಟಾಗಿ ಸೊಗಸಾದ ರಟ್ಟು ಹಾಕಿಸಿದ ಕಾರಣ ಭಾಷೆಗೆ ಹೊಸ ಶಕ್ತಿ, ಹೊಸ ಕಳೆ ಬಂತು. ಕನ್ನಡದ ಬಗೆಗೆ ಜನಾನುರಾಗ ಬೆಳೆಯಿತು (ಚೆಲುವ ಕನ್ನಡ ನಾಡು, ೧೯೮೫, ಪು. ૩೮). ಕನ್ನಡಕ್ಕೆ ಹೆಚ್ಚಿನ ಬಲವನ್ನು ಕೂಡಿಸಿಕೊಟ್ಟ ಸಂಸ್ಥೆಗಳೆಂದರೆ 'ಕರ್ನಾಟಕ ಭಾಷೋಜ್ಜೀವಿನಿ ಸಭಾ' (೧೮೮೬), ಸಂಸ್ಕೃತ ವಿದ್ಯಾ ಶಾಲಾ (೧೮೮೯) ಹಾಗೂ ಓರಿಯಂಟಲ್ ಲೈಬ್ರರಿ (೧೮೮೭) (ಅದೇ.). ಇದೇ ಸಮಯದಲ್ಲಿ 'ಕನ್ನಡಪರಕಾಳಜಿಗಳು' ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾದವು.

ಮುಂಬೈ ಕರ್ನಾಟಕ ಧಾರವಾಡದಲ್ಲಿ, ರಾಮಚಂದ್ರ ಹನುಮಂತ ದೇಶಪಾಂಡೆಯವರು ೧೮೯೦ರಲ್ಲಿ ಕಟ್ಟಿ ಬೆಳೆಸಿದ ಕರ್ನಾಟಕ ವಿದ್ಯಾವರ್ಧಕ ಸಂಘವು 'ವಾಗ್ಭೂಷಣ' ಎಂಬ ನಿಯತಕಾಲಿಕವನ್ನು ೧೮೯೬ರಿಂದಲೇ ಪ್ರಕಟಿಸತೊಡಗಿತು.

ವಿಶ್ವೇಶ್ವರಯ್ಯನವರ ಕಾಲದಲ್ಲಿ ಕನ್ನಡದ ಚಟುವಟಿಕೆಯು ಪ್ರಾರಂಭವಾಯಿತು. ೧೯೧೪ರಲ್ಲಿ ಹೆಸರಾಂತ 'ಸಂಪದಭ್ಯುದಯ ಸಮಾಜ' ವಾರ್ಷಿಕ ಸಭೆಯಲ್ಲಿ ಕರ್ನಾಟಕ ರಾಜ್ಯದ ಮಸೂದೆಯೊಂದನ್ನು ಮಂಡಿಸಲಾಯಿತು. ಲೇಖಕರನ್ನು ಪ್ರೋತ್ಸಾಹಿಸುವ ಸಲುವಾಗಿ ಸರಕಾರದಿಂದ ಮನ್ನಣೆ ಪಡೆದ ಸ್ವಾಯತ್ತ ಸಂಸ್ಥೆ (ಪರಿಷತ್) ಸ್ಥಾಪಿಸುವ ಅವಶ್ಯಕತೆ ಇರುವುದರಿಂದ, ಅಂಥ ಸಂಸ್ಥೆಗೆ ವಿಶೇಷವಾದ ನೆರವು ಕೊಡಮಾಡಬೇಕೆಂದು ಸಂಪದಭ್ಯುದಯ ಸಮಾಜವು ಸರಕಾರಕ್ಕೆ ಸಲಹೆ ಮಾಡಬೇಕು (ಚೆಲುವ ಕನ್ನಡ ನಾಡು, ಪು. ૩೯).

೩ **ಎಲೆಯೆನ್-ಲೂಯಿ ಶಾರ್ಬೊನೋ (೧೮೦೬-೧೮೭೩) ರಚಿಸಿದ ಕೃತಿಗಳು :**
೧) ಲತೀನ್-ಕನಾರಿಸ್ (೧೮೫೧), ಕನಾರಿಸ್-ಲತೀನ್ (೧೮೫೫), ಪೂರ್ವಿಕ ಮತದ ವ್ಯಾಖ್ಯಾನವು (೧೮೬೧), ವೇದ ಬೋಧಕರ ಕ್ರಮವು (೧೮೬೧), ಲೋಕ ಮದುವೆ ಪ್ರಸ್ತದ ಕ್ರಮವು (೧೮೬೧) ಪ್ರಕಟವಾಯಿತು. (ಹೆಚ್ಚಿನ ವಿವರಗಳಿಗೆ : ಕರ್ನಾಟಕ ಸಂಗಾತಿ, ಪು. ೨೮೯-೨೯೯).

ಹಾಗೆಯೇ ಮಾರ್ಕ್ ಕಬ್ಬನ್ (೧೮೩೪-೬೧) ಎಲ್.ಬಿ. ಬೌರಿಂಗ್ (೧೮೬೩-೭೦) ಕಮಿಷನರುಗಳಾಗಿ ಬಂದರು. ಕಬ್ಬನ್ ರೈತವಾರಿ ಭೂ ಕಂದಾಯ ವ್ಯವಸ್ಥೆಯನ್ನು ಜಾರಿಗೆ ತಂದನು. ೧೮೫೫ ಲಾರ್ಡ್ ಡಾಲ್‌ಹೌಸಿಯು ಬಂದಾಗ ನ್ಯಾಯಾಂಗ, ಸಾರ್ವಜನಿಕ ಇಲಾಖೆ, ಶಿಕ್ಷಣದಲ್ಲಿ ಬದಲಾವಣೆಗಳು ಕಂಡು ಬಂದವು. ಆಯ-ವ್ಯಯ ಅಂದಾಜು, ನೋಟಿನ ವ್ಯವಸ್ಥೆ, ಬ್ರಿಟೀಶ್ ಮಾದರಿಯ ಅಳತೆ ಮಾಪನಗಳು ಜಾರಿಗೆ ಬಂದವು.

೪ ಇದಕ್ಕೆ ಪೂರಕವಾಗಿ ಈ ಕೆಳಗಿನ ಅಂಶಗಳನ್ನು ಗಮನಕ್ಕೆ ತಂದುಕೊಳ್ಳಬಹುದು. ಸೆಂಟ್ರಲ್ ಕಾಲೇಜು ಕರ್ನಾಟಿಕ ಸಂಘ (೧೯೧೮) ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘ (೧೯೩೦), ಶಿವಮೊಗ್ಗ ಕರ್ನಾಟಕ ಸಂಘ ಇಲ್ಲಿ ನೆನೆಯಬೇಕಾದ ಸಂಘಗಳು.

ಕನ್ನಡದ ಮೊದಲ ದಿನಪತ್ರಿಕೆ 'ಸೂರ್ಯೋದಯ ಪ್ರಕಾಶನ' (೧೮೮೮), ಮಂಗಳ ವೃತ್ತಾಂತ ಬೋಧಿನಿ (೧೮೫೬), ಕರ್ನಾಟಕ ಪ್ರಕಾಶಿಕಾಗಳು ಗಮನಾರ್ಹ ಸಾಧನೆಗಳನ್ನು ಮಾಡಿದ್ದವು. ಬೆಳಗಾವಿಯ 'ಜ್ಞಾನ ಬೋಧಕ' ಮಂಗಳೂರಿನಿಂದ ಪ್ರಕಟವಾಗುತ್ತಿದ್ದ 'ಹಿತಬೋಧಿನಿ' (೧೮೮೨), ತಿರುಮಲೆತಾತಾಚಾರ್ಯ (ವಿಶ್ವ ಕರ್ನಾಟಕ, ೧೯೨೦), ಆಲೂರರ ಜಯ ಕರ್ನಾಟಕ (೧೯೧೮), ಕರೋಡಿ ಸುಬ್ಬರಾಯರ ಶ್ರೀ ಕೃಷ್ಣ ಸೂಕ್ತಿ (೧೯೦೬), ಹನುಮಾನ್ ದಾಸರ ಮಧುರವಾಣಿ (೧೯೧೨), ಎಂ.ವಿ. ರಾಮಾನುಜ ಅಯ್ಯಂಗಾರರ 'ಆರ್ಯಮಾತಾಸಂಜೀವಿನಿ', 'ಕಾವ್ಯಕಲಾನಿಧಿ' ಗಳಗನಾಥರ ಸುಭೋದ ಚಂದ್ರಿಕೆ (೧೯೦೭) ಮಾಸ್ತಿಯವರ ಜೀವನ ಪತ್ರಿಕೆಗಳು, ಪತ್ರಿಕಾರಂಗದ ಸಾಧನೆಗಳಾಗಿವೆ.

ಬ್ರಿಟೀಶ್ ಮಾದರಿಯ ರೈತರನ್ನು ರೂಪಿಸುವುದು ಆಗಿನ ಅಧಿಕಾರಿಗಳಿಗೆ ಮುಖ್ಯವಾಗಿತ್ತು. ಕೃಷಿಯ ಉತ್ಪಾದನೆಯು ರಫ್ತು ಮಾಡುವುದರಿಂದ ಆಗುವ ಲಾಭವನ್ನು ಕೃಷಿಕರಿಗೆ ತೋರಿಸಬೇಕಾಗಿತ್ತು. ಹಾಗೆಯೇ ಪ್ರಭುತ್ವವು ತನ್ನ ಕೈಗಾರಿಕೆಗಳಿಂದ ತಯಾರಾದ ವಸ್ತುಗಳನ್ನು ಭಾರತದ ಮಾರುಕಟ್ಟೆಯಲ್ಲಿ ಮಾರಬೇಕಾಗಿತ್ತು. ೧೮೧೩ರ ಹೊತ್ತಿಗಾಗಲೇ ಲಾಂಕಶೈರ್ ಬಟ್ಟೆಗಳು ಭಾರತೀಯ ಮಾರುಕಟ್ಟೆಯಲ್ಲಿ ಸಿಕ್ಕತೊಡಗಿದವು. ಆಗಿನ ವಿದೇಶಿ ವರ್ತಕ ಜನಾಂಗಗಳು ಇಂಗ್ಲೀಷ್ ಕಾನೂನು, ಅದರ ಬೆಳವಣಿಗೆಗೆ ಪೂರಕವಾಗಿದ್ದವು.

ಇಲ್ಲಿಯ ಜನರನ್ನು ಬೌದ್ಧಿಕವಾಗಿ ಬೆಳೆಯಬೇಕೆಂದೂ, ಅವರಿಗೆ ಹೊಸ ಜ್ಞಾನ ರೂಪಿತವಾಗಬೇಕೆಂದು ಭಾವಿಸಿದ್ದ. ಬ್ರಿಟೀಶ್ ಆಢಳಿತ ಅದರಿಂದ ಅವರ ಜೀವನದಲ್ಲಿ

ಸುಧಾರಣೆಯಾಗುತ್ತದೆ. ಈ ದೃಷ್ಟಿಯಿಂದ ಯುರೋಪಿನ ನಾಗರಿಕತೆಯು ಭಾರತದ ಬಗ್ಗೆ ಸ್ವ ಕೇಂದ್ರಿತ ಮನೋಭಾವ ಇಟ್ಟುಕೊಳ್ಳಬಾರದು ಎಂದು ಪ್ರತಿಪಾದಿಸಿತು. ಫೋರ್ಟ್ ವಿಲಿಯಂ ಕಾಲೇಜು ೧೮೦೦ರಲ್ಲಿ ಪ್ರಾರಂಭವಾಯಿತು. ೧೮೫೭-೫೮ರ ಕಾಲಾವಧಿಯಲ್ಲಿ ಮೂರು ವಿಶ್ವವಿದ್ಯಾನಿಲಯಗಳೂ ಶುರುವಾದವು. ಇಂಡಿಯಾದ ಜನರಿಗೆ ಅವರದೇ ಆದ ಅರಸರಿದ್ದರು. ಆದರೂ ಇಲ್ಲಿಯ ಜನರು ನಮ್ಮ ಬಟ್ಟೆಗಳನ್ನು ಕೊಂಡುಕೊಳ್ಳುತ್ತಾರೆ. ನಮ್ಮ ಅಂಗಡಿಗಳಲ್ಲಿ ದುಡಿಯುತ್ತಾರೆ. ಭಾರತೀಯರು ಇಂಗ್ಲಿಷ್ ಕಲೆಕ್ಟರುಗಳಿಗೆ, ಇಂಗ್ಲಿಷ್ ಮ್ಯಾಜಿಸ್ಟ್ರೇಟರುಗಳಿಗೆ ಸಲಾಂ ಹೊಡೆಯುತ್ತಾರೆ. ಅವರ ಮೌಲ್ಯಗಳು ಅವರಿಗೆ ತಿಳಿಯದಷ್ಟು ಮುಗ್ಧರಾಗಿದ್ದಾರೆ. ಯುರೋಪಿನ ವಾಣಿಜ್ಯ ನೀತಿಯು ಅವರನ್ನು ನಾಗರಿಕರನ್ನಾಗಿಸುತ್ತದೆ. ಆದುದರಿಂದ ಅವರನ್ನು ಗುಲಾಮರ ರೀತಿ ನೋಡುವುದಕ್ಕೆ ಅರ್ಥವಿಲ್ಲ. ಅವರನ್ನು ನಮ್ಮ ಗಿರಾಕಿಗಳ ಥರ ನೋಡಬೇಕೇ ಹೊರತು ಗುಲಾಮರಂಥಲ್ಲ ಎಂದು ಗ್ರಾಂಟ್ ಪ್ರತಿಪಾದಿಸಿದ.

ಇಂಗ್ಲೀಷಿನ ರೊಮ್ಯಾಂಟಿಕ್ ಯುಗದಲ್ಲಿಯೂ ಸಾಹಿತ್ಯದಲ್ಲಿ ಸಮಾಜಶಾಸ್ತ್ರವೆಂಬ ಪ್ರಶ್ನೆಯು ಶುರುವಾಯಿತು. ಇದರಿಂದ ರೊಮ್ಯಾಂಟಿಕ್ ಯುಗದ ಕಾದಂಬರಿಗಳು ಕೆಲವು ಅಂಶಗಳಿಗೆ ಪ್ರಾಶಸ್ತ್ಯವನ್ನು ನೀಡಿತು ಎಂದು ಫೆಡ್ರಿಕ್ ಜೇಮಸನ್ಸ್ ಹೇಳುತ್ತಾನೆ. (Fredric Jameson. ೧೯೭೪. P. ೫) ಪುನರುಜ್ಜೀವನ ಎನ್ನುವುದು ಒಂದು ಸಾಮಾಜಿಕವಾದ ಸಂಭ್ರಮ ಎನ್ನುವಂತೆ ಅನೇಕರು ಭಾವಿಸಿದ್ದು ಸತ್ಯ. ನಮಗೆ ಬಂದ ಇಂಗ್ಲೀಷಿನ ವಿದ್ಯಾಭ್ಯಾಸವು ನಮಗೆ ಹಳೆಯದನ್ನು ಬೇರೆ ಥರ ನೋಡಲು ಕಲಿಸಿತು ಎನ್ನುವುದು ನಿಜ. ಇದರಿಂದ ಪಾಂಡಿತ್ಯ ಮತ್ತು ಅದರ ಅಭಿವ್ಯಕ್ತಿಗೆ ಬೇರೆ ಸಾಧ್ಯತೆಯು ಉಂಟಾದ್ದು ಸತ್ಯ. ಅದು ನಮಗೆ ವಸಾಹತು ಮತ್ತು ಅದರ ಓದಿನ ಕ್ರಮವನ್ನು ಹೇಳುತ್ತದೆ, ವಸಾಹತು ಆಳಿತವು ಕೆಲವನ್ನು ಅಧಿಕೃತವಾದ ಜ್ಞಾನವೆಂದೂ ಮತ್ತೆ ಕೆಲವನ್ನು ಅನಧಿಕೃತವೆಂದು ಹೇಳಿದ್ದರ ಪರಿಣಾಮವೂ ಸಾಧಾರಣವಾಗಿಲ್ಲ.

ಓದುಗ ಕೇಂದ್ರಿತ ವಿಮರ್ಶೆಯು ಹೆಚ್ಚು ಗಮನಹರಿಸಿರುವುದು ಕಾದಂಬರಿಯ ರೂಪದ ಬಗ್ಗೆ. ಕಾದಂಬರಿಯನ್ನು ಓದುವುದು ಒಂದು ಮಾದರಿಯಲ್ಲಿ. ಜನಪ್ರಿಯ ಕಾದಂಬರಿಗಳಿಗೆ ಉದ್ದೇಶಿತ (Implied reader) ಓದುಗನಿರುತ್ತಾನೆ. ಜನಪ್ರಿಯ ಕಾದಂಬರಿಗಳು ಓದುಗನ ನಿರೀಕ್ಷೆಯನ್ನು ಈಡೇರಿಸುತ್ತದೆ. ವೇನ್‌ಬೂತ್ (Wayne Booth, 1961, Rhetoric of Fictions) ಕೃತಿಯಲ್ಲಿ ಈ ಕುರಿತು ವಿವರಿಸಿದ್ದಾನೆ. ಇದಕ್ಕಿಂತ ಭಿನ್ನವಾಗಿ ನಾವು ಭಾವಗೀತೆಯನ್ನು ಗ್ರಹಿಸುವ ಕ್ರಮ ಬೇರೆ. ಅದು ಹಾಡು. ಆದುದರಿಂದ ಅದು ನೆನಪಿನ ಮೇಲೆ ಗಾಢ ಪ್ರಭಾವವನ್ನು ಬೀರುತ್ತದೆ.

ಕಾದಂಬರಿಯನ್ನು ಓದುವುದೆಂದರೆ ಅದು ಸಂತೋಷವನ್ನು ಕೊಡುತ್ತದೆ ಆದರೆ ರಸ್ತೆಯ ಬದಿಯಲ್ಲಿ ಹಾಕಿರುವ ಬೇರೆ ಬೇರೆ ಸೂಚನೆಯನ್ನು ಓದುತ್ತೇವೆ. ಅದು ಕಾದಂಬರಿಯಂತೆ ಸಂತೋಷ ನೀಡಲಾರದು.

ಬುದ್ಧಿಜೀವಿಗಳು ಮತ್ತು ಅವರ ಕಾರ್ಯ ವಿಧಾನವು ಅರ್ಥವು ಆಗದೇ ಹೋದರೆ ಅಂದರೆ ಜನರು ಅದನ್ನು ಗ್ರಹಿಸದೇ ಹೋದರೆ ಅದರ ಅರ್ಥವು ಏನಾಗುತ್ತದೆ ಎನ್ನುವುದನ್ನೇ

ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯ ರಾಮ, ಭಾರತೀಪುರದ ಜಗನ್ನಾಥ, ಕುವೆಂಪು ಕಾದಂಬರಿಗಳ ಮುಕುಂದಯ್ಯ ಮತ್ತು ಹೂವಯ್ಯರು ಹೇಳುತ್ತಾರೆ. ರಾಜಕೀಯ ಮತ್ತು ಅದರಲ್ಲಿ ಭಾಗವಹಿಸುವುದು ಬೇಂದ್ರೆ ಮತ್ತು ಗೊರೂರು, ಕಾರಂತರಿಗೆ ಅಪಥ್ಯವಾಗಲಿಲ್ಲ. ಅದರಲ್ಲಿ ಬರುವ ಪಶ್ಚಿಮ ಮತ್ತು ಪೂರ್ವದ ಪ್ರಶ್ನೆಗಳು ಅತ್ಯಂತ ಸಂಕೀರ್ಣವೂ ಆಗುತ್ತದೆ.ಯಾವುದು ಹೆಚ್ಚು ಸಾಂಪ್ರದಾಯಿಕ ಮತ್ತು ಯಾವುದು ಹೆಚ್ಚು ಆಧುನಿಕ ಎನ್ನುವುದೂ ಮೂಲಭೂತವಾದ ಪ್ರಶ್ನೆಗಳು ಆಗಿವೆ.

ಭಾಷೆಯನ್ನು ಶಾಲೆಯಲ್ಲಿ ಕಲಿಸುವುದು ಮುಖ್ಯವಾದ್ದರಿಂದಲೇ ಶಾಲೆ ಎನ್ನುವ ಕಲ್ಪನೆಗೆ ಹೆಚ್ಚಿನ ಮಹತ್ವವು ಬಂತು. ಅದು ಯಜಮಾನಿಕೆಯ ಒಂದು ರೂಪ. ಶಾಲೆ ಎನ್ನುವುದನ್ನು ಒಂದು ಕೈಗಾರಿಕೆಯ ರೀತಿಯಲ್ಲಿಯೇ ಅವರು ರೂಪಿಸಿದರು. ಆದರೆ ಇದರಲ್ಲಿ ಇರುವ ಸೂಚನೆಗಳು ಬೇರೆ. ಆವಾಗ ಶುರುವಾದ ಶಾಲೆಯು ವ್ಯಾಪಾರಕ್ಕೆ ಪೂರಕವೂ ಆಗಿತ್ತು. ಓದುಗರು ಬದಲಾದರು, ಓದುಗರಿಗೆ ಹೊಸದಾದ ಅಭಿರುಚಿಯು ಬಂತು., ಅದರಲ್ಲಿ ಬೇರೆ ಬೇರೆ ವರ್ಗದ ಮತ್ತು ಬೇರೆ ಜಾತಿಯ ಜನರು ಇದ್ದರು. ಹೊಸದಾದ ಓದುಗರಿಗೆ ಹೊಸದಾದ ಸಾಹಿತ್ಯವು ಬೇಕಿತ್ತು. ಇದರ ಪರಿಣಾಮವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಕಾದಂಬರಿ ಮತ್ತು ಅದರ ಹುಟ್ಟು ಇದನ್ನು ಹೇಳುತ್ತದೆ. ಅದನ್ನು ಸಂಸ್ಕೃತಿಯ ಪ್ರಶ್ನೆಯಾಗಿಯೂ ನಾವು ನೋಡಬೇಕಾಗುತ್ತದೆ. ಸಮಾಜ ಮತ್ತು ಅದರ ಪರಿವರ್ತನೆಗೂ ಸಾಹಿತ್ಯಕ್ಕೂ ಈ ದೃಷ್ಟಿಯಲ್ಲಿ ದ್ವಂದ್ವಾತ್ಮಕವಾದ ಸಂಬಂಧವು ಇರುತ್ತದೆ. ವಸಾಹತು ದೇಶಗಳಲ್ಲಿ ಬರಹ ಮತ್ತು ಅದರ ಅರ್ಥವೂ ಈ ದೃಷ್ಟಿಯಿಂದ ಬದಲಾಯಿತು. ಬರಹವನ್ನು ಒಂದು ಕ್ರಿಯೆ ಮತ್ತು ಅದನ್ನು ಈ ಹಿಂದೆ ಹೇಳಿದಂತೆ ಹೇಳಲು ಆಗುವುದೂ ಇಲ್ಲವೆನ್ನುವ ಅರಿವು ಉಂಟಾದ್ದರಿಂದ ಅದಕ್ಕೆ ಹೊಸ ರೂಪಗಳು ಬಂದವು. ಹೊಸಾದ ಓದುಗರು ಮತ್ತು ಹೊಸದಾದ ಲೇಖಕರು ಇವರ ನಡುವೆ ಬೇರೆ ಬೇರೆ ಸಂಬಂಧಗಳು ಬಂದವು, ಆದರೆ ಹಳೆಯ ಓದುಗರು ಸಾಹಿತ್ಯದಿಂದ ಬಳಸಿದ ಮಾಡಿದ ನಿರೀಕ್ಷೆಗಳು ಬೇರೆಯಾಗಿವೆ. ವಸಾಹತು ಮತ್ತು ವಸಾಹತೋತ್ತರಕಾಲದ ಅನೇಕ ಬರಹಗಳ ವೈಚಾರಿಕ ಚೌಕಟ್ಟು ಈ ದೃಷ್ಟಿಯಿಂದ ಬೇರೆಯಾಗಿದೆ. ಹೊಸದಾದ ಪ್ರಾತಿನಿಧೀಕರಣ ಮತ್ತು ಹೊಸದಾದ ವಸ್ತುವು ನಮಗೆ ಹೊಸದಾದ ತಿಳುವಳಿಕೆಯನ್ನು ಕೊಟ್ಟದ್ದು ಸತ್ಯವಾಗಿದೆ. ಬದಲಾಗುತ್ತಿರುವ ಚರಿತ್ರೆ ಮತ್ತು ಅದರ ಸ್ವರೂಪವನ್ನು ಕನ್ನಡದ ಓದುಗರು ಗ್ರಹಿಸಬೇಕಾದ ಕ್ರಮಗಳನ್ನು ದೇವುಡು, ಮಾಸ್ತಿ ಮುಂತಾದವರು ಅರ್ಥ ಮಾಡಿಕೊಂಡಿದ್ದರು.ಬರಹವು ಒಂದು ಜನಾಂಗದ ಮತ್ತು ಒಂದು ಪ್ರದೇಶದ ಪ್ರಾತಿನಿಧಿಕವಾದ ಒಂದು ರೂಪವೂ ಆಗಿದೆ ಎನ್ನುವುದು ಕನ್ನಡದ ಲೇಖಕರ ಗಮನಕ್ಕೆ ಬಂದಿತ್ತು. ಭಾಷೆ ಮತ್ತು ಅದರ ಆಯ್ಕೆಗಳು ಅನೇಕವನ್ನು ಹೇಳುತ್ತದೆ. ಅದು ರೈತರ ಮಾತುಗಳು, ಅದು ಸಾಮಾನ್ಯರಾದ ವ್ಯಕ್ತಿಗಳ ಮಾತುಗಳು ಹಾಗೂ ಅದರಲ್ಲಿ ನಮ್ಮತನವನ್ನು ನಾವು ನಿರೂಪಿಸಲು ಸಾಧ್ಯ ಎನ್ನುವುದು ಅನೇಕರಿಗೆ ಗೊತ್ತಿತ್ತು. ಅದರ ಮೂಲಕವೇ ಇಡೀ ಸಮಾಜವು ಅಭಿವ್ಯಕ್ತಿಯು ಆಗುತ್ತದೆ ಎಂದು ಭಾವಿಸದ್ದರಿಂದ ಬೇಂದ್ರಯರು ಆ ರೀತಿಯ ಹಾಡುಗಳನ್ನು ಬರೆದರು. ಅವರಿಗೆ ಯುರೋಪ್ ಮುಖ್ಯವಾಗಲಿಲ್ಲ. ಯುರೋಪ್ ಮತ್ತು ಕನ್ನಡದ ದ್ವಂದ್ವಗಳು ಎದ್ದು ಕಾಣಿಸುತ್ತವೆ.

ಕನ್ನಡ ಮತ್ತು ಅದರ ಅನನ್ಯತೆಯ ಪ್ರಶ್ನೆಯು ಬೇಂದ್ರೆ ಮುಂತಾದವರಿಗೆ ಮುಖ್ಯವಾಗಿತ್ತು. ಅವರಿಗೆ ಇಂಗ್ಲಿಷ್ ಗೊತ್ತಿರಲಿಲ್ಲ ಎಂದು ಅರ್ಥವಲ್ಲ. ಹಾಗೆ ನೋಡಿದರೆ ಅನಂತಮೂರ್ತಿ, ದೇಸಾಯಿ, ದೇವನೂರ ಮಹಾದೇವ ಮುಂತಾದವರು ಕನ್ನಡದ ಅನನ್ಯತೆಯನ್ನೇ ಹೇಳಿದರು. ಯಾವ ಭಾಷೆಯನ್ನು ಉಪಯೋಗ ಮಾಡಬೇಕು ಮತ್ತು ಅದನ್ನು ಹೇಗೆ ಹೇಳಬೇಕು ಎನ್ನುವುದೂ ಅತಾತ್ವಿಕ ಪ್ರಶ್ನೆಯು ಅಲ್ಲ. ಆದರೆ ಶಿಷ್ಟವಾದ ಕನ್ನಡವನ್ನು ಈ ಸಂದರ್ಭದಲ್ಲಿ ಬೇರೆ ಮಾಡಿಕೊಂಡು ನೋಡಲಾಗಿದೆ. ಅದು ಚಾರಿತ್ರಿಕ ಚಲನೆಯೂ ಆಗಿದೆ. ಕನ್ನಡವೇ ಸತ್ಯ ಮತ್ತು ಕನ್ನಡವೇ ನಿತ್ಯ ಎನ್ನುವುದನ್ನು ಕುವೆಂಪು ಹೇಳಿದ್ದು ಅತ್ಯಂತ ವಿಶಾಲವಾದ ಅರ್ಥದಲ್ಲಿ. ಅದು ಸಾವೇ ಇಲ್ಲದ ಜಗತ್ತು. ಹಾಗೆಯೇ ಸಿದ್ಧಲಿಂಗಯ್ಯ ಹೇಳಿದ ಮಾತಿಗೆ ವಿಶಾಲತೆಯು ಬರುವುದು ಈ ಕಾರಣದಿಂದ. ಅದರಲ್ಲಿ ಹೊಸದಾದ ಪದಗಳು ಇವೆ. ಅದರಲ್ಲಿ ಹೊಸದಾದ ಸೂಚನೆಗಳು ಇವೆ. ಹಾಗೂ ಅದರಲ್ಲಿ ಹೊಸದಾದ ಸೂಚನೆಗಳು ಇವೆ. ಬುದ್ಧಿಜೀವಿಗಳು ಹೇಗೆ ಹೇಳಬೇಕು ಎನ್ನುವ ಸೂಚನೆಗಳು ಅದರಲ್ಲಿ ಇವೆ. ಹಾಗೆ ನೋಡುವುದಿದ್ದರೆ ಕನ್ನಡದಲ್ಲು ದಲಿತರು, ಹೊಸ ಲೇಖಕರನ್ನು ಸೃಷ್ಟಿಮಾಡಿದರು. ಅದು ರಾಜಕೀಯ ಹೊಸತನವೂ ಆಗಿದೆ. ಅದು ಪರಿವರ್ತನೆಯನ್ನು ಹೇಳುತ್ತದೆ. ಒಡಲಾಳವು ಮೂಲಭೂತವಾಗಿ ಒಂದು ಅತ್ಯಂತ ಶಕ್ತಿಯುತವಾದ ಕೆಲಸವೂ ಆಗಿದೆ. ಪಶ್ಚಿಮದ ಅಧಿಕಾರಿಗಳು ಅನೇಕವನ್ನು ಪರಿವರ್ತನೆ ಮಾಡಿರುವುದೂ ಅಷ್ಟೇ ಸತ್ಯವಾಗಿದೆ. ಸ್ಥಳೀಯ ಉದ್ದಿಮೆದಾರರು ಮತ್ತು ಅವರ ಕೆಲಸವನ್ನು ಅವರು ಬೇರೆ ಮಾಡಿಕೊಂಡು ನೋಡಿದರು. ಯುರೋಪಿನ ಮಿಶಿನರಿಗಳಿಗೆ ಇಂಗ್ಲಿಷ್ ಕಲಿಸುವ ತರಾತುರಿಯು ಇತ್ತು. ಆದರೆ ಅದರ ಪರಿಣಾಮವಾಗಿ ಕನ್ನಡದಲ್ಲಿ ಹೊಸದಾದ ಸಂವಾದವು ಪ್ರಾರಂಭವಾಯಿತು. ಇಂಗ್ಲಿಷರಿಗೆ ಇಲ್ಲಿ ಜನಾಂಗದೊಂದಿಗೆ ಮಾತಾಡಬೇಕಾದ ಅಗತ್ಯವು ಇದ್ದರೆ ಇಲ್ಲಿನವರಿಗೆ ಅವರೊಂದಿಗೆ ಮಾತಾಡಬೇಕಾದ ಅಗತ್ಯವಿತ್ತು.

ಇಂಗ್ಲಿಷ್ ಒಂದು ಸ್ಥಾನಮಾನದ ಪ್ರಶ್ನೆಯೂ ಆಗಿತ್ತು. ಯಾರಿಗೆ ಇಂಗ್ಲಿಷ್ ಬರುವುದೇ ಇಲ್ಲವೋ ಅವರು ಕೀಳರಿಮೆಯಿಂದ ಬಳಲುವಂತೆ ಆಗಿರುವುದೂ ಸತ್ಯವಾಗಿದೆ. ಆದರೆ ಕನ್ನಡದ ಮಾತುಗಳು ಹಾಗೆ ಇಲ್ಲ. ಅದು ಪ್ರಭುತ್ವ ಮತ್ತು ಅದರ ವಿರುದ್ಧದ ಪಪರಿಕಲ್ಪನೆಯೂ ಆಗುತ್ತದೆ. ಕುವೆಂಪು ಭಾಷೆಯಲ್ಲಿ ಹೊಸ ಕಸುವು ಬೇಕಾಗುತ್ತದೆ ಎಂದು ಹೇಳಿದ್ದು ಈ ಕಾರಣದಿಂದ. ಅವರಿ ಇಂಗ್ಲಿಷಿನ ಜ್ಞಾನವನ್ನು ಕನ್ನಡದ ಅರಿವಿಗೆ ತರಬೇಕು ಎನ್ನುವ ದೃಷ್ಟಿಕೋನವನ್ನು ಹೊಂದಿದ್ದರು. ಅದರಲ್ಲಿ ಪ್ರಭುತ್ವ ಮತ್ತು ಅದರ ವಿರೋಧದ ನೆಲೆಯೂ ಇದೆ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ವಸಾಹತು ಮತ್ತು ಅರ ಚರಿತ್ರೆಯು ವಾಸ್ತವಗಿ ಎರಡು ವರ್ಗೀಕರಣವನ್ನು ಮಾಡಿತು. ಆಳುವವರು ನಾವು ಬೇರೆ ನೀವು ಬೇರೆ ಎಂದರು. ಅದೇ ಮಾತನ್ನು ಆಳಿಸಿಕೊಳ್ಳುವವರೂ ಹೇಳಿದರು. ಆಳುವವರು ಇಡೀ ವಿಶ್ವವೇ ನಮ್ಮದು ಎಂದು ಹೇಳಿದರೆ ಅಳಿಸಿಕೊಂಡವರು ನಮಗೆ ನೀವು ಬೇಕಾಗಿಯೇ ಇಲ್ಲವೆಂದು ಪ್ರತಿಪಾದಿಸಿದರು. ಎರಡರಲ್ಲಿ ವ್ಯತ್ಯಾಸವಿದೆ. ಆಗ ಇಂಗ್ಲೆಂಡು ಒಂದು ಕೇಂದ್ರ. ಮತ್ತು ಅದರಲ್ಲಿ ಏನು ನಡೆಯುತ್ತದೆಯೋ ಅದನ್ನು ಇಲ್ಲಿ ಪ್ರಯೋಗ ಮಾಡಲು ಅನೇಕ ಅಧಿಕಾರಿಗಳು ಯತ್ನವನ್ನು ಮಾಡಿದರು. (ನೂರು ಮಿಲಿಯ ಜನರು ನಮ್ಮ ಗಿರಾಕಿಗಳು. ಇದರ ಮೂಲಕ ಅವರನ್ನು ನಮ್ಮ ಮೇಲೆ ಅವಲಂಬಿತರನ್ನಾಗಿ ಮಾಡಬೇಕು ಎಂಬುದು ಮೆಕಾಲೆಯ ನೀತಿ. ಈ ಮೂಲಕ

ಇಂಡಿಯಾದ ಮನಸ್ಸುಗಳ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಪಟ್ಟ, ಅವನ ಕೈಯಲ್ಲಿ ಖಡ್ಗವಿರಲಿಲ್ಲ. ಯುರೋಪ್ ಮಾದರಿಯ ಚಿಂತನೆಯ ಕ್ರಮವಿತ್ತು. ಅದರ ಪ್ರಭಾವವು ಭಾರತೀಯರ ಮೇಲಾಗುವಂತೆ ನೋಡಿದ. ಅದಕ್ಕಾಗಿ ಪ್ರಭುತ್ವವು ಶಿಕ್ಷಣದ ಮೂಲಕ ಭಾರತೀಯರ ಮನಸ್ಸಿನ ಮೇಲೆ ಆಢಳಿತ ನಡೆಸುವತ್ತ ಅವನು ಗಮನ ಹರಿಸಿದ. ಹೊಸ ಜ್ಞಾನ ಪರಂಪರೆಯ ಅರಿವು ಮೂಡಲು ಅವನು ಯುರೋಪಿನ ಶಿಕ್ಷಣ ಕ್ರಮವನ್ನು ಜಾರಿಗೆ ತಂದ. ಯುರೋಪಿನ ಶಿಕ್ಷಣ ಕ್ರಮವು ಭಾರತೀಯರಿಗೆ ಹೇಗೆ ಉತ್ತಮ ನಡೆನುಡಿಯನ್ನು ಕಲಿಸಬಹುದು ಎಂಬುದು ಮಾತ್ರ ಅವನ ಗುರಿಯಾಗಿತ್ತು. ಅನೇಕರು ಅದನ್ನು ಒಪ್ಪಿದ್ದರು. ಮೆಕಾಲೆಯ ಶಿಕ್ಷಣದ ನೀತಿ (ಮೆಕಾಲೆಯ ಮಿನಿಟ್, ೧೮೩೫)ಯ ಹಿಂದಿನ ದೃಷ್ಟಿಕೋನವಿದು.

ಕೆಲವು ಉದ್ದಿಮೆಗಳು ಅವರ ಕೈಯಲ್ಲಿದ್ದವು. ೧೯೮೦ರಿಂದ ವಸಾಹತು ಮತ್ತು ಅದರ ಅನಂತರದ ಪ್ರಶ್ನೆಗಳು ಬೇರೆಯಾದವು. ಅದನ್ನು ನೋಡಲು ನಮಗೆ ಬೇರೆ ಬೇರೆ ದಾರಿಗಳು ಸಿಕ್ಕವು. ಬುದ್ಧಿಜೀವಗಳು ಅನೇಕ ಪ್ರಶ್ನೆಗಳನ್ನು ಎತ್ತಿಕೊಂಡರು. ವಸಾಹತು ಕಾಲದಲ್ಲಿ ಬಂದ ಅನೇಕ ಪ್ರಶ್ನೆಗಳು ನಮಗೆ ಮೂಲವನ್ನು ಹುಡುಕುವಂತೆ ಮಾಡಿರುವುದೂ ಅಷ್ಟೇ ನಿಜ. ರಾಜಕಾರಣ ಮತ್ತು ಅದರ ಪ್ರಶ್ನೆಗಳನ್ನು ಅನೇಕರು ಬೇರೆ ಬೇರೆ ಮೂಲದಲ್ಲಿ ಹುಡುಕಲು ಯತ್ನವನ್ನು ಮಾಡಿರುವುದೂ ಅಷ್ಟೇ ನಿಜ. ನೆಹರೂ ಇಂಡಿಯಾದ ಮರು ಹುಡುಕಾಟವನ್ನು ಮಾಡುತ್ತಾರೆ. ಹಾಗೆಯೇ ನಮಗೆ ಅನೇಕ ಹೋರಾಟಗಾರರು ಮತ್ತು ಸನ್ಯಾಸಿಗಳು ಮತ್ತು ತೀವ್ರ ಮತ್ತು ಮಂದಗಾಮಿಗಳು ಅದರ ಸ್ವರೂಪವನ್ನು ಬೇರೆ ರೀತಿಯಲ್ಲಿಯೂ ಅರ್ಥವನ್ನು ಮಾಡಿಕೊಳ್ಳುವ ಯತ್ನವನ್ನು ಮಾಡಿದರು. ಅದರ ಪರಿಣಾಮವಾಗಿ ಕೆಲವು ವಿಚಾರಗಳನ್ನು ಮತ್ತೆ ಚಾಲ್ತಿಗೆ ತರಲಾಯಿತು. ಇದರಲ್ಲಿ ಸನಾತನ ಒಂದು. ಸನಾತನ ಎನ್ನುವುದನ್ನು ತುಂಬಾ ಜನರು ಹಿಂದಿನಿಂದ ಬಂದದ್ದು ಎಂದು ಅರ್ಥ ಮಾಡಿಕೊಂಡರು. ಅದು ವಿಶ್ವಾತ್ಮಕತೆಯನ್ನು ಮತ್ತು ಅದರ ಮೂಲಕ ಜಗತ್ತಿನ ಕೆಲವು ನಿಯಮವನ್ನು ಅರ್ಥ ಮಾಡಿಕೊಳ್ಳುವ ಕ್ರಮವೂ ಆಯಿತು. ಇಲ್ಲಿ ಸನಾತನ ಎಂದರೆ ಆರ್ಷೇಯ ಎನ್ನುವುದು ಮಾತ್ರವೇ ಮುಖ್ಯವಾಯಿತು. ನವೋದಯದ ಅನೇಕ ಲೇಖಕರು ಚರಿತ್ರೆಯನ್ನು ಆಗ ಹೊಸದಾದ ಮಾತಿಗಳ ಮೂಲಕವೇ ನೋಡಿದರು ಮತ್ತು ಇತಿಹಾಸವನ್ನು ಗ್ರಹಿಸುವ ಯತ್ನವನ್ನು ಮಾಡಿದರು. ಆಗ ಅಧಿಕಾರ ಮತ್ತು ಜ್ಞಾನಕ್ಕೆ ಇದ್ದ ಸಂಬಂಧವನ್ನು ನಾವು ಸುಲಭವಾಗಿಯೇ ಹೇಳಿಕೊಳ್ಳುವುದು ಕಷ್ಟ ಸಾಧ್ಯವಾಗಿತ್ತು. ಮಂಜೇಶ್ವರ ಗೋವಿಂದ ಪೈಯವರು ಇತಿಹಾಸವನ್ನು ಗುರುತಿಸುವ ಕ್ರಮ, ಮುಳಿಯರು ಪಂಪನನ್ನು ಗುರುತಿಸುವಾಗ ಅನ್ವಯಿಸಿಕೊಂಡ ಕ್ರಮ, ಅವರ ಮಾರ್ಗ ಮತ್ತು ದೇಸಿಯ ಚರ್ಚೆಗಳು ಕೂಡಾ ಅತ್ಯಂತ ಮಹತ್ವದ್ದು ಆಗಿದೆ. ಆದರೆ ಅದೇ ವೇಳೆಗೆ ಕಲೋನಿಯಲ್ ಶಿಕ್ಷಣವು ಮಾತ್ರವೇ ಬೇರೆ ವಿಷಯಗಳನ್ನು ಹೇಳಿತು. ನೀವು ಷೇಕ್ಸ್‌ಪಿಯರನನ್ನು, ವರ್ಡ್ಸ್‌ವರ್ತ್‌ನನ್ನು ಓದದೇ ಹೋದರೆ ಶಿಕ್ಷಣವೇ ಅಪೂರ್ಣವಾಗುತ್ತದೆ ಎಂದು ಆಗಿನ ಶಿಕ್ಷಣ ವಿವರಗಳು ನಮಗೆ ಹೇಳುತ್ತವೆ.

ಅದರಲ್ಲಿಯೂ ಆಗಿನ ಶಿಕ್ಷಣ ನೀತಿಯ ಉದ್ದೇಶವು ಬೇರೆಯಾಗಿತ್ತು. ಆಗಣ ವೈಸರಾಯ್‌ಗಳು ಒಂದು ನಂಬಿಕೆಯಲ್ಲಿದ್ದರು. ಅವರ ಪ್ರಕಾರ ಒಂದು ರಾತ್ರಿಯಲ್ಲಿಯೇ ನಾವು ಕಾನೂನು

ಬದಲಿಸಿ ಹೊಸತನ್ನು ತರಬಲ್ಲೆವು ಎಂದು ಭಾವಿಸಿದ್ದರು. ಅದರೆ ಅದು ಬೇರೆಯಾಗಿತ್ತು. ಅದು ಸುಲಭ ವಿಚಾರವು ಆಗಿರಲಿಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಷಯವು ಇದೆ. ಆಗಲೇ ನಮ್ಮ ಲೇಖಕರು ಬೇರೆ ಬೇರೆ ಹೊಸದಾದ ಪ್ರತಿಮೆಯನ್ನು ಮತ್ತು ರೂಪಕವನ್ನು ಕಟ್ಟಿಕೊಟ್ಟಿದ್ದರು. ಯಾರಿಗೆ ಯಾವ ರೀತಿಯ ಶಿಕ್ಷಣವನ್ನು ಕೊಡಬೇಕು ಎಂದು ಅವರು ತೀರ್ಮಾನವನ್ನು ಮಾಡಿದ್ದು ನಿಜ. ಆದರೆ ಅದರ ಫಲವು ಮಾತ್ರ ಬೇರೆಯಾಗಿತ್ತು. ಹೊಸ ಸಂದರ್ಭ ಮತ್ತು ಹೊಸದಾದ ನಿರೂಪಣೆಯು ಮುಖ್ಯವಾಯಿತು.

ಸಂಸ್ಕೃತಿ ಮತ್ತು ಅದರ ಸ್ವರೂಪದ ಚರ್ಚೆಯು ಬೇರೆಯಾಯಿತು. ಅನೇಕ ಪುರಾಣಗಳನ್ನು ಮತ್ತು ಹಳೆಯ ಕಾವ್ಯಗಳನ್ನು ಓದುವ ಮತ್ತು ಗ್ರಹಿಸಿದ ಕ್ರಮಗಳು ಬೇರೆಯಾದವು. ಸ್ಥಳೀಯತೆ ಮತ್ತು ಅದರ ರೂಪವೇ ನಮಗೆ ಅತ್ಯಂತ ಮುಖ್ಯವೆಂದು ಭಾವಿಸುವ ಮತ್ತು ಅದನ್ನು ಬೇರೆ ಗ್ರಹಿಕೆಯಲ್ಲಿ ಮಂಡಿಸುವ ಕ್ರಮಗಳ ಅಗತ್ಯವೂ ಬೆಳಕಿಗೆ ಬಂತು. ಆದ್ದರಿಂದಲೇ ನಮಗೆ ರನ್ನ, ಕುಮಾರವ್ಯಾಸ ಮುಂತಾದವರ ಕುರಿತು ಬೇರೆ ಚರ್ಚೆಯು ಸಾಧ್ಯವಾಯಿತು, ವರ್ಡ್ಸ್‌ವರ್ತನಲ್ಲಿ ಚರಿತ್ರೆಯ ಇಲ್ಲ ಅದರ ಬದಲು ನಮ್ಮ ಚರಿತ್ರೆಯು ಪ್ರಾರಂಭವಾಗುವುದು ಭರತ ಮುನಿಯಲ್ಲಿ. ಹಾಗೂ ನಮಗೆ ಕಾಳಿದಾಸನೂ ಅತ್ಯಂತ ಮುಖ್ಯವೆಂದು ಅನೇಕ ಲೇಖಕರು ಭಾವಿಸಿದ್ದರ ಪರಿಣಾಮವು ಭಿನ್ನವೂ ಆಗಿತ್ತು. ಟಿ.ಎಸ್.ವೆಂಕಣ್ಣಯ್ಯರು ಅನುವಾದ ಮಾಡಿರುವ ಪ್ರಾಚೀನ ಸಾಹಿತ್ಯವು ಇದರ ಒಂದು ಮಾದರಿಯು ಮಾತ್ರವೇ ಆಗಿದೆ. ಷೇಕ್ಸಪಿಯರ್ ನಮ್ಮನ್ನು ಹೇಳ್ತಾ ಇಲ್ಲ ಎನ್ನುವುದರ ಅರಿವು ಮಾತ್ರವೇ ಇಲ್ಲಿ ಮುಖ್ಯವಾಗಿದೆ. ಆದರೆ ಇದರಲ್ಲಿ ಅನ್ಯವನ್ನು ನೋಡಿದ ಕ್ರಮವೂ ಇದೆ ಎನ್ನುವುದೂ ಸ್ಪಷ್ಟವಾಗಿದೆ. ಅಲೆಮಾರಿಗಳಿಗೆ ಮತ್ತು ಬುಡಕಟ್ಟು ಜನರಿಗೂ ಒಂದು ಇತಿಹಾಸವು ಇದೆ, ಅದು ಪಶ್ಚಿಮವು ನೋಡಿದ ಕ್ರಮವಲ್ಲ ಎನ್ನುವುದರ ಅರಿವು ಅನೇಕ ಲೇಖಕರಿಗೆ ಇತ್ತು. ಇದರ ಒಂದು ದೃಷ್ಟಾಂತ ಚೋಮನ ದುಡಿ. ನಾವು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗಬೇಕು ಮತ್ತು ಅದರ ಸ್ವರೂಪವೇ ಭಿನ್ನವೆಂದು ಅನೇಕರು ಭಾವಿಸಿದ್ದರ ಪರಿಣಾಮವಾಗಿಯೇ ನಮಗೆ ಲೋಕಾಯತ ಮುಂತಾದ ಪುಸ್ತಕಗಳು ಸಿಕ್ಕಿದ್ದು. ಮತ್ತು ಅದನ್ನು ನಾವು ಭಿನ್ನವಾಗಿಯೂ ನೋಡಿದ್ದು. ಇಲ್ಲಿ ಉಲ್ಲೇಖಿಸಬೇಕಾದ ಅತ್ಯಂತ ಮಹತ್ವದ ಕೃತಿಯೆಂದರೆ ಧರ್ಮಶಾಸ್ತ್ರದ ಇತಿಹಾಸ. ಇದರಲ್ಲಿ ಒಂದು ಕಟ್ಟು ಎನ್ನುವುದೇ ಇಲ್ಲ. ಕಾಣೆಯವರು ಬಹಳ ದೊಡ್ಡ ವಿದ್ವಾಂಸರು. ಅದರಲ್ಲಿ ಬಂದ ಅನೇಕ ವಿವರಗಳು ಅತ್ಯಂತ ಅಪರೂಪವಾದ್ದು ಹೌದು. ಇದರ ಮೂಲಕ ನಮಗೆ ನಮ್ಮದೇ ಆದ ಒಂದು ಇತಿಹಾಸವು ಇದೆ ಎಂದೇ ಗೊತ್ತಾದ್ದು ಒಂದು ಒಳ್ಳೆಯ ಬೆಳವಣಿಗೆ ಕೂಡಾ ಆಯಿತು.

ರಾಷ್ಟ್ರ ಮತ್ತು ಅದರ ಕಥನಕಾರರು ಬೇರೆ ವಿಷಯಗಳನ್ನು ಪ್ರಸ್ತಾಪಿಸಿದ್ದರು. ಆದರೆ ಇದರ ಮತ್ತೊಂದು ಮಗ್ಗಲು ಸಬಾಲ್ಟ್ರನ್ ಅಧ್ಯಯನಗಳು. ಇಲ್ಲಿ ನಾವು ಹೇಳಬೇಕಾದ ಮತ್ತೊಂದು ಸಂಗತಿಯೆಂದರೆ ಆಗ ನಾವು ಪಠ್ಯವನ್ನು ಓದುವ ಮತ್ತು ಗ್ರಹಿಸುವ ಕ್ರಮಗಳನ್ನು ಬದಲು ಮಾಡಿಕೊಂಡೆವು. ಆಕರಗಳ ಸಮಸ್ಯೆಯೂ ಬೇರೆಯಿತ್ತು. ಮಹಾನ್ ನಿರೂಪಣೆ ಮತ್ತು ಅದರ ಸ್ವರೂಪವೇ ನಮಗೆ ಹೆಚ್ಚು ಮುಖ್ಯವಾಯಿತು. ಕೆಲವು ಮೌನಗಳು ಏನಿದ್ದವೋ ಅದನ್ನು ಅನೇಕ ಲೇಖಕರು ಗುರುತಿಸಿದ್ದೂ ಅಷ್ಟೇ ಸತ್ಯವಾಗಿದೆ. ಸಂತರ ಬಗ್ಗೆ ಮತ್ತು ಮಹಾರಾಷ್ಟ್ರದ ಪರಂಪರೆಯ ಬಗ್ಗೆ ಬೇಂದ್ರೆಯವರು ಬರೆದದ್ದು ಈ ದೃಷ್ಟಿಯಿಂದ. ಇಂಗ್ಲೆಂಡಿನ

ಅಭಿರುಚಿ ಮತ್ತು ಅದರ ಮೌಲ್ಯಮಾಪನದ ಕ್ರಮಕ್ಕಿಂತ ಭಿನ್ನವಾದ ಚಟುವಟಿಕೆಯು ಇದರ ಮೂಲಕವೇ ರೂಪುಗೊಂಡಿತು. ಚರಿತ್ರೆ ಮತ್ತು ಅದರ ಅಭಿವ್ಯಕ್ತಿಯನ್ನು ನಾವು ಸಾಹಿತ್ಯದಲ್ಲಿ ಮಾತ್ರವೇ ನೋಡಲು ಆಗುವುದೂ ಇಲ್ಲ. ವಾಸ್ತವವಾಗಿ ಒಂದು ಚರಿತ್ರೆಯನ್ನು ನಾವು ಅದರ ಅನೇಕ ಕಾರ್ಯಗಳ ಮೂಲಕವೇ ನೋಡಬೇಕಾಗುತ್ತದೆ. ಅಂದರೆ ಸಾಹಿತ್ಯವು ಒಂದು ಸಂಗತಿಯು ಮಾತ್ರವೇ ಆಗಿದೆ. ಭಾರತದಲ್ಲಿ ಚರಿತ್ರೆಗೆ ಆಳವಾದ ಒಂದು ಅರ್ಥವೂ ಇದೆ. ವಸಾಹತು ಕಾಲವು ಚರಿತ್ರೆಯನ್ನು ನೋಡುವಾಗ ಅದರ ಅರ್ಥವು ಬೇರೆಯಾಯಿತು. ಹಾಗೂ ಅದರ ಅರ್ಥವನ್ನು ಗ್ರಹಿಸಿದ ಕ್ರಮಗಳು ಬೇರೆಯಾದ್ದರಿಂದ ಅದರ ಕುರಿತಾದ ನಿಲುವುಗಳೂ ಕೂಡಾ ಬೇರೆಯಾದವು. ವಸಾಹತು ಮತ್ತು ಅದರ ಪರಿಣಾಮವನ್ನು ಕುರಿತು ಹೇಳುವಾಗ ನಾವು ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗವೆಂದು ಬೇರೆ ಮಾಡುತ್ತೇವೆ. ಆದರೆ ಅದರ ನಡುವೆಯೇ ಕೆಲವು ರೀತಿಯ ಸಂಕಥನಗಳು ಇರುತ್ತವೆ. ಬ್ರಿಟೀಶರು ಬರುವ ಮೊದಲು ಚರಿತ್ರೆಯು ಇತ್ತು ಮತ್ತು ಅದರ ಅನಂತರವೂ ಚರಿತ್ರೆಯು ಇದೆ. ಭಾರತದಲ್ಲಿ ಸಂಸ್ಕೃತಿಗೆ ಬೇರೆ ಬೇರೆ ದಿಕ್ಕುಗಳು ಇವೆ.

ಚರಿತ್ರೆಯು ಬೇರೆ ಬೇರೆ ಸಂಪ್ರದಾಯಗಳಲ್ಲಿ ಅಭಿವ್ಯಕ್ತಗೊಂಡಿದೆ. ರಾಜಕಾರಣ ಮತ್ತು ಅದರ ಅಗತ್ಯಗಳು ಈ ದೃಷ್ಟಿಯಿಂದ ಬೇರೆಯಾಗಿದೆ. ಅದರ ಅರ್ಥವೂ ವ್ಯತ್ಯಾಸವೂ ಆಗುತ್ತದೆ. ಅದನ್ನು ಪಶ್ಚಿಮದ ಮೂಲಕವೇ ನೋಡುವುದು ಅಸಾಧ್ಯವೆಂದು ಗಾಂಧಿಯವರು ಭಾವಿಸಿದ್ದರು, ಆದ್ದರಿಂದಲೇ ಅವರ ಬರಹಗಳು ಸಂಸ್ಕೃತಿ ಮತ್ತು ಚರಿತ್ರೆಯನ್ನು ನೋಡುವ ಕ್ರಮವು ಬೇರೆಯಾಗುತ್ತವೆ. ರಾಜಕಾರಣ ಮತ್ತು ಅದರ ಅರ್ಥವು ಗಾಂಧಿಯವರ ಮಟ್ಟಿಗೆ ಭಿನ್ನವಾಗುತ್ತವೆ. ತಾಯ್ನಾಡು ಮತ್ತು ಅದರ ಅರ್ಥವೂ ಆಗ ಬೇರೆಯಾಯಿತು. ತಾಯ್ನಾಡು ಎನ್ನುವುದು ಒಂದು ರೂಪಕವು ಮಾತ್ರವೇ ಅಲ್ಲ, ಅದು ನಮ್ಮ ಜೀವನವನ್ನು ಕಟ್ಟಿಕೊಡಲು ಇರುವ ಒಂದು ಸಾಧ್ಯತೆಯೂ ಆಗಿದೆ ಎಂದೇ ಗಾಂಧಿ ಭಾವಿಸಿದ್ದರು. ಗಾಂಧಿ ದೈಹಿಕವಾದ ಹಿಂಸೆ ಮತ್ತು ಅದರ ಸ್ವರೂಪವನ್ನು ಖಂಡಿಸಿದರು ಮಾತ್ರವೇ ಅಲ್ಲ ಅದರ ವಿರುದ್ಧ ನಿಲ್ಲಲು ಒಂದು ಉಲ್ಲಂಘನೆಯ ಪದವನ್ನು ಹೆಚ್ಚು ಚಾಲ್ತಿಗೆ ತಂದರು. ಅವರ ಅಹಿಂಸೆ ಎನ್ನುವ ಪದವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗಿದೆ. ನಮಗೆ ನಮ್ಮದೇ ಆದ ಒಂದು ಅವಿಚ್ಛಿನ್ನವಾದ ಪರಂಪರೆಯು ಇದೆ. ಅದನ್ನು ನಾವು ನೋಡಬೇಕಾಗುತ್ತದೆ ಯಾವುದನ್ನು ಭಾರತದ ಅತ್ಯಂತ ದೊಡ್ಡ ಪರಂಪರೆ ಎನ್ನುವುದು ಇದೆಯೋ ಅದರ ಸಾರ ರೂಪವು ಭಿನ್ನವಾಗಿದೆ. ದೇಶ ಮತ್ತು ಪ್ರದೇಶಗಳಿಗೆ ಒಂದು ವಿಶಿಷ್ಟವಾದ ಮನೋಸ್ಥಿತಿಯು ಇದೆ. ಅದನ್ನು ನಾವು ನೋಡಬೇಕಾಗಿದೆ. ಅದರಲ್ಲಿ ವಿವಿಧ ಅಭಿಪ್ರಾಯಗಳೂ ಇರುತ್ತವೆ. ಯುರೋಪಿನ ವ್ಯಾಖ್ಯಾನವು ಬೇರೆಯಾಗಿದೆ. ಅದು ಭೋಗದ ಸಂಸ್ಕೃತಿಯ ಹಿಂದೆ ಹೋಗುತ್ತದೆ. ಅದರ ಬದಲು ನಾವು ಭಿನ್ನವಾದ ಹಾದಿಯನ್ನು ಕಾಣುವುದು ಅತ್ಯಂತ ಅಗತ್ಯವೆಂದು ಅನೇಕ ರಾಷ್ಟ್ರೀಯ ಹೋರಾಟಗಾರರು ಭಾವಿಸಿದ್ದು ಸತ್ಯವಾಗಿದೆ. ಪಶ್ಚಿಮ ಮತ್ತು ಅದರ ರಚನೆಗಳು ಬೇರೆಯಾಗುತ್ತವೆ. ಅದರ ರಚನೆಯ ಕಾರಣದಿಂದ ಅದರ ಮೌಲ್ಯಗಳು ಭಿನ್ನವಾಗುತ್ತವೆ ಎಂದು ಅವರು ಭಾವಿಸಿದ್ದರು. ಪಶ್ಚಿಮದ ಆಧುನಿಕತಕ್ಕಿಂತ ಬೇರೆಯಾದ ನಿಲುವು ಸಾಧ್ಯವಾಯಿತು.

ವಸಾಹತು ಕಾಲದಲ್ಲಿ ಜನಾಂಗ ಮತ್ತು ಅದರ ಆಂತರಿಕವಾದ ಅನುಭವವು ಬೇರೆಯಾಗಿತ್ತು. ಆದರೆ ವಸಾಹತು ಆಡಳಿತಕಾರರು ಈ ದೃಷ್ಟಿಕೋನವನ್ನು ಹೊಂದಿರಲಿಲ್ಲ. ಅದರಲ್ಲಿ ವ್ಯತ್ಯಾಸವೂ ಇದೆ. ವಾಸ್ತವವಾಗಿ ಜನಾಂಗದ ಭಾವನೆಗಳ ಸ್ವರೂಪವನ್ನು ನೋಡುವ ಕ್ರಮವು ಈ ದೃಷ್ಟಿಯಿಂದ ಬೇರೆಯಾಗಿದೆ. ವಾಸ್ತವವಾಗಿ ನಾವು ಯಾವುದನ್ನು ನೋಡಬೇಕು ಮತ್ತು ಇಲ್ಲಿ ಯಾವುದನ್ನು ಮಾಡಬೇಕು ಎನ್ನುವುದು ಅವರಿಗೆ ಹೆಚ್ಚು ಮುಖ್ಯವಾಗಲಿಲ್ಲ. ಅದರ ಬದಲು ಅವರು ಮಾಡಿದ್ದು ಬೇರೆ. ಅವರಿಗೆ ಭಾರತವು ಒಂದು ವಾಣಿಜ್ಯದ ಕ್ಷೇತ್ರವೂ ಆಗಿದೆ. ಆದ್ದರಿಂದ ಅವರು ಇಲ್ಲಿ ಮನೋಸ್ಥಿಯನ್ನು ಬದಲು ಮಾಡಲು ನೋಡಿದರು. ವ್ಯಕ್ತಿಗಳು ಮತ್ತು ಅವರ ಮನಸ್ಥಿತಿಯನ್ನು ಬದಲು ಮಾಡುವುದು ಅತ್ಯಂತ ಅಗತ್ಯವೆಂದು ಅವರು ಆಲೋಚನೆ ಮಾಡಿದ್ದರು. ಆಗಲೇ ನಮ್ಮ ಸಾಹಿತ್ಯವು ಬೇರೆ ಬೇರೆ ನಿರೂಪಣೆಗಳನ್ನು ತಂದಿತು. ರೈತರು ಮತ್ತು ಅವರ ಮನೋಭಾವ ಹಾಗೂ ಅವರ ಸಮಸ್ಯೆಗಳ ಅರಿವನ್ನು ನಮ್ಮ ಅನೇಕ ಲೇಖಕರು ಮಂಡಿಸಿದರು. ಅಷ್ಟೇ ಅಲ್ಲ ಇಲ್ಲಿನ ಹೆಂಗಸರು ಅವರ ಸಮಸ್ಯೆಗಳು ಬೇರೆಯಿವೆ ಎಂದು ಅವರು ತಿಳಿದರು. ಅದು ವಾಸ್ತವಾಗಿ ಬೇರೆ ಮಾದರಿಯ ಕಥನಗಳೂ ಆಗಿವೆ. ಕನ್ನಡದ ಕಾದಂಬರಿಗಳು ಬರೀ ಒಂದು ವರ್ಗವನ್ನು ಮಾತ್ರವೇ ಹೇಳ್ತಾ ಇಲ್ಲ. ಅದರಲ್ಲಿ ಬರೀ ಮಧ್ಯಮವರ್ಗದ ಸುಖದ ವಿವರಣೆಯು ಮಾತ್ರವೇ ನಿರೂಪಿತವಾಗಿಲ್ಲ. ಅದರಲ್ಲಿ ಓದುಗರು ಒಂದು ವರ್ಗವನ್ನು ಸೂಚಿಸುತ್ತಾ ಇಲ್ಲ. ಆದರೆ ಓದುವ ಮತ್ತು ಗ್ರಹಿಸುವ ಕ್ರಮದಲ್ಲಿ ವ್ಯತ್ಯಾಸವಿದೆ. ಹಳೆಗನ್ನಡದ ಓದು ಮತ್ತು ಅದರ ಖುಷಿಯು ಬೇರೆಯೆಂದು ಆಗಿನ ಬುದ್ಧಿಜೀವಿಗಳು ಹೇಳಿದರು. ಆದ್ದರಿಂದಲೇ ಆದರಲ್ಲಿ ಹಳೆಗನ್ನಡ ಮತ್ತು ಅದರ ವಿಮರ್ಶೆಯು ಇದೆ.ಅದು ನಿರ್ದಿಷ್ಟವಾದ ಅಭಿರುಚಿಯ ದ್ಯೋತಕ. ಓದು ಮತ್ತು ಅದರ ಕ್ರಮವು ಒಂದು ತಂತ್ರಗಾರಿಕೆಯೂ ಆಗಿದೆ. ಅದರ ಮೇಲೆ ಭೌಗೋಳಿಕವಾದ ಸನ್ನಿವೇಶವೂ ಇದೆ.

ಆದರೆ ಆಧುನಿಕ ಬರಹಗಳು ಆಧುನಿಕವಾದ ಅನೇಕ ಸಂಗತಿಗಳನ್ನು ಹೇಳುತ್ತವೆ. ಅದರಲ್ಲಿ ಆಧುನಿಕವಾದ ನಾಗರಿಕವಾದ ಸಂಗತಿಗಳನ್ನು ಹೇಳುತ್ತವೆ. ಅದಕ್ಕೆ ಒಂದು ತಾತ್ವಿಕತೆಯು ಇದೆ. ಆಗಿನ ಪ್ರಭುತ್ವವು ಜನಾಂಗ, ಭಾಷೆ, ಸಾಮಾಜಿಕವಾದ ಸಂಗತಿಗಳನ್ನು ನೋಡಿದ ಕ್ರಮವು ಬೇರೆಯಾಗಿದೆ. ಅದರ ಆಢಳಿತಾತ್ಮಕವಾದ ದೃಷ್ಟಿಕೋನವು ಬೇರೆಯಿವೆ. ಅನನ್ಯತೆ ಮತ್ತು ವ್ಯತ್ಯಾಸವು ಅದರಲ್ಲಿ ಎದ್ದು ಕಾಣಿಸುತ್ತದೆ. ಹಾಗೆಂದು ಅದರ ಧೋರಣೆಯನ್ನು ಗಮನಿಸಿದ ಇಲ್ಲಿ ಲೇಖಕರು ಕೆಲವು ಪರ್ಯಾಯವನ್ನು ಕಟ್ಟಿಕೊಟ್ಟರು. ಪರ್ಯಾಯವಾದ ಒಂದು ನೆಲೆಯನ್ನು ನೋಡುವುದು ಎಂದರೆ ಅದರಲ್ಲಿ ಗಂಭೀರಾವದ ರೂಪವೂ ಇದೆ. ಸನಾತನ ಎನ್ನವುದು ಇದರಲ್ಲಿ ಒಂದು ನಿಲುವು ಮಾತ್ರವೇ. ನಾವು ಜನಾಂಗದ ದೃಷ್ಟಿಯಲ್ಲಿಯೂ ನಿಮಗಿಂತ ಬೇರೆ ಎನ್ನುವುದು ಇಲ್ಲಿ ಪ್ರಜ್ಞೆಯ ರೂಪಗಳನ್ನು ಹೇಳುತ್ತವೆ. ಆದ್ದರಿಂದಲೇ ಇಲ್ಲಿ ಒಂದು ಹೊಸದಾದ ಪ್ರತೀಕಗಳು ಹುಟ್ಟಿದವು. ವಸಾಹತು ಆಢಳಿತಗಾರರು ಬರೆದ ಪತ್ಯಗಳು ಒಂದು ರೀತಿಯಲ್ಲಿವೆ. ಆದರೆ ಆಳಿಸಿಕೊಂಡವರ ಕೃತಿಗಳು ಬೇರೆಯಿವೆ. ಅದರಲ್ಲಿ ಬರುವ ಪ್ರತಿಮೆಗಳಲ್ಲಿ ಭಿನ್ನತೆಯಿದೆ. ವಸಾಹತು ಮತ್ತು ಅದರ ಸ್ವರೂಪವನ್ನು ಆಗಿನ ದಾಖಲೆಗಳು ಹೇಳುತ್ತವೆ. ಆದರೆ ಇಲ್ಲಿ ಬರೆದವರು ಅದನ್ನು ನಿರೂಪಿಸಿದ ಕ್ರಮವು ಭಿನ್ನ. ಅದು ಪರಕೀಯತೆಯನ್ನು ಹೇಳುತ್ತದೆ.

ಕಲ್ಪಿತವಾದ ಕೃತಿಗಳು ಒಂದು ರೀತಿಯಲ್ಲಿವೆ. ಸಾಂಕೇತಿಕವಾದ ಕೃತಿಗಳು ಮತ್ತೊಂದು ರೀತಿಯಲ್ಲಿವೆ. ಅದರಲ್ಲಿಯೂ ಕಲ್ಪನೆಯನ್ನು ಹೇಳುವ ಕೃತಿಗಳು ವಿವರಿಸುವುದು ಭಿನ್ನವಾದ ಒಂದು ಚೌಕಟ್ಟನ್ನು. ಅದರಲ್ಲಿ ನಿರ್ದಿಷ್ಟವಾದ ಜನಾಂಗ ಮತ್ತು ಅದರ ಕಷ್ಟ ಮತ್ತು ಸುಖಗಳು ವ್ಯಕ್ತವಾಗಿವೆ. ಅದರ ಉದ್ದೇಶಗಳು ಕೂಡಾ ಭಿನ್ನವಾಗಿದೆ. ವಾಸ್ತವವಾಗಿ ಕಲ್ಪನೆಯನ್ನು ಹೇಳುವಾಗ ಲೇಖಕರು ಕೆಲವು ವಿಧಾನಗಳನ್ನು ಅನ್ವಯಿಸಿಕೊಂಡರು. ಅದರ ಪಶ್ಚಿಮದ ಪರಂಪರೆಗಿಂತ ಬೇರೆ ಎನ್ನುವುದೇ ಬಹಳ ಮುಖ್ಯವಾಯಿತು.

ಅವುಗಳು ನಿಜವಾಗಿಯೂ ಬೇರೆ ನಿಲುವನ್ನು ತಳೆದಿವೆ. ಅವುಗಳು ಹೆಚ್ಚು ಭಾವನಾತ್ಮಕವಾದ ನಿಲುವನ್ನು ಹೊಂದಿವೆ. ಅವುಗಳ ಸಾರವೂ ಬೇರೆ.ಅದರಲ್ಲಿ ತೀವ್ರತೆಯೂ ಇದೆ. ಬೇಂದ್ರೆ ಮುಂತಾದವರ ಪದ್ಯಗಳನ್ನು ನೋಡಿದರೆ ಇದರ ಅರಿವು ನಮಗೆ ಆಗುತ್ತವೆ. ಸಾನೆಟ್ ಎನ್ನುವುದನ್ನು ನಾವು ಬೇರೆ ರೀತಿಯಲ್ಲಿ ಅಳವಡಿಸಿಕೊಳ್ಳ ಬಲ್ಲೆವು ಎಂದು ಅನಿಸಿದ್ದರಿಂದಲೇ ಕುವೆಂಪು ಭಿನ್ನವಾಗಿಯೂ ಬರೆಯಲು ಸಾಧ್ಯವಾಯಿತು. ಅದರಲ್ಲಿ ಒಂದು ಸ್ಪರ್ಧಾತ್ಮಕವಾದ ಭಾವವೂ ಇದೆ. ಪಶ್ಚಿಮ ಮತ್ತು ಅದರ ಕೇಡನ್ನು ಈ ಮಾದರಿಯ ಕೃತಿಗಳು ಪ್ರಶ್ನೆ ಮಾಡಿವೆ. ಅದನ್ನು ಕನ್ನಡದ ಹೊಸದಾದ ಪ್ರಜ್ಞೆ ಎಂದೂ ಕರೆಯಬಹುದು. ವಾಸ್ತವವಾಗಿ ಈ ಮಾದರಿಯು ನಮಗೆ ಹೊಸದಾದ ಅರಿವನ್ನು ಹೇಳುತ್ತದೆ. ಸ್ಥಳ ಮತ್ತು ಅದರ ಅರಿವು ನಮಗೆ ಹೆಚ್ಚು ಮುಖ್ಯವೆಂದು ಈ ಮಾದರಿಯ ಬರಹಗಳು ತಿಳಿಸಿಕೊಡುತ್ತವೆ. ಕನ್ನಡದ ಓದುಗರು ಮತ್ತು ಕನ್ನಡದ ಕವಿಗಳು ಒಂದು ಗುಂಪು ಎಂದು ತಿಳಿದ ದೆಸೆಯಿಂದ ಕನ್ನಡದ ಕವಿಗಳು ಸೂಚಿಸಿದ ನೆಲೆಗಳೂ ಬೇರೆಯಾಗುತ್ತವೆ. ನಮ್ಮ ಲೇಖಕರು ಮತ್ತು ನಮ್ಮ ಓದುಗರು ಎಂದು ತಿಳಿಯುವುದು ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಯಿತು. ದೇಸಿ ಜನರು ಎನ್ನುವ ಕಲ್ಪನೆಯೇ ಭಿನ್ನವಾದ್ದು. ನಾವು ಹೊಸ ಕಲ್ಪನೆಯನ್ನು ಹೇಳುತ್ತೇವೆ ಎನ್ನುವುದೂ ಇಲ್ಲಿ ಪ್ರಧಾನವಾದ ಆಶಯವೂ ಆಗಿದೆ. ಹೊಸದಾದ ಕಲ್ಪನೆ ಮತ್ತು ಅದರ ವೈರುಧ್ಯಗಳು ಇಲ್ಲಿ ಗಮನಾರ್ಹವಾಗಿದೆ. ಹೊಸದಾದ ಕಲ್ಪನೆ ಎನ್ನುವುದು ಇಲ್ಲಿ ಹೊಸದಾದ ವಾಸ್ತವವೂ ಹೌದು. ಇದನ್ನು ನಿಸರ್ಗ , ಗ್ರಾಮಾಯಣ, ಮುಂತಾದ ಕೃತಿಗಳಲ್ಲಿ ಕಾಣುತ್ತೇವೆ. ವಿರೋಧವೂ ಇಲ್ಲಿ ಹೆಚ್ಚು ಸ್ಪಷ್ಟವಾಗುತ್ತದೆ. ಸಾಹೇಬರನ್ನು ಮತ್ತು ಅದರ ಮಧ್ಯವರ್ತಿಗಳನ್ನು ಇದರಲ್ಲಿ ಟೀಕಿಸಲು ಸಾಧ್ಯವಾಗಿದೆ. ಸಾಹೇಬರು ಮತ್ತು ಅದರ ಏಜೆಂಟರು ಅನ್ಯರು ಮತ್ತು ಚೋಮ, ನಭಾ (ತಿರುಮಲಾಂಬ) ದಾದ (ಗ್ರಾಮಾಯಣ) ಚಿಮಣಾ (ಅದೇ) ನಮ್ಮವರು. ಅವರ ನೋವು ಮತ್ತು ಅವರ ದುಃಖವು ಭಿನ್ನವಾಗಿದೆ ಎನ್ನುವುದರ ಅರಿವು ಮುಖ್ಯವಾಯಿತು. ಇದರಲ್ಲಿ ಶತ್ರುತ್ವ ಮತ್ತು ಮಿತ್ರತ್ವದ ವಾಖ್ಯೆಗಳು ಬೇರೆಯಾಗುತ್ತವೆ. ನಿರ್ದಿಷ್ಟವಾದ ಶತ್ರುಗಳು ಮತ್ತು ನಿರ್ದಿಷ್ಟವಾದ ಮಿತ್ರರು. ಎನ್ನುವುದೂ ಒಂದು ಅರಿವು. ಅವರು ನಮ್ಮ ದಬ್ಬಾಳಿಕೆಯನ್ನು ಮಾಡುತ್ತಾರೆ ಎಂದು ತಿಳಿದರೆ ಅದರಲ್ಲಿ ವಿರೋಧದ ಭಾವನೆಯು ಇರುತ್ತದೆ. ಆದರೆ ಅದರೊಂದಿಗೆ ಸ್ವ ಮತ್ತು ಅನ್ಯವು ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಗುತ್ತದೆ. ಇದಕ್ಕಾಗಿಯೇ ಅನೇಕ ಲೇಖಕರು ನಮ್ಮ ಪುರಾಣಗಳನ್ನು ಬೇರೆ ಬೇರೆ ರೀತಿಯಲ್ಲಿ ಅನ್ವಯವನ್ನು ಮಾಡಿದರು.

ಅಹಲ್ಯೆ, ಗೋಕುಲ ನಿರ್ಗಮನ, ಸ್ಮಶಾನ ಕುರುಕ್ಷೇತ್ರದಂಥ ಕೃತಿಗಳು ಈ ದೃಷ್ಟಿಯಿಂದ ಹೆಚ್ಚು ಮಹತ್ವದ್ದು. ಅದು ನಮ್ಮ ಪುರಾಣ ಮತ್ತು ಅದರ ಮೌಲ್ಯಮಾಪನವನ್ನು ನಾವು ಪಶ್ಚಿಮದವರ ರೀತಿಯಲ್ಲಿ ಮಾಡಲು ಸಾಧ್ಯವೇ ಇಲ್ಲವೆನ್ನುವುದೆ ಇಲ್ಲಿ ಮುಖ್ಯವಾದ ತಾತ್ವಿಕ ಭಿತ್ತಿಯೂ ಆಯಿತು. ಮನೋಸ್ಥಿತಿ ಮತ್ತು ಅದರ ಸ್ವರೂಪವೂ ಇಲ್ಲಿ ಬೇರೆಯಾಗುತ್ತದೆ. ತನ್ನ ಪ್ರದೇಶ ಮತ್ತು ತನ್ನ ಜನರು ಎನ್ನುವುದು ಭಾವನಾತ್ಮಕವೂ ಆಗಿದೆ. ಇಲ್ಲಿ ನೋಡಬೇಕಾದ ಅಂಶವೆಂದರೆ ಯಾವುದನ್ನು ಕಲ್ಪನೆ, ಕುಲ ಮತ್ತು ಸೃಜನಶೀಲತೆಯೆಂದು ಹೇಳುತ್ತೇನೆ ಅದಕ್ಕೆ ಒಂದು ರೂಪವೂ ಇದೆ. ಆದರೆ ಸಂಕೇತವಾದ ಮತ್ತು ಅದರ ಪರಿಣಾಮಗಳು ಕೂಡಾ ವಸಾಹತು ದೇಶಗಳಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿವೆ. ಅದರಲ್ಲಿಯೂ ವಸಾಹತು ಮತ್ತು ತದ ನಂತರದ ಬೆಳವಣಿಗೆ ಕೊಂಚ ಭಿನ್ನವಾಗಿದೆ. ಸಂಕೇತವಾದಿಗಳ ಪಠ್ಯವು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಅವರು ಬರೆದದ್ದು ಮತ್ತು ಅದನ್ನು ಹೆಚ್ಚು ತೀವ್ರಗೊಳಿಸದ್ದರ ಸ್ವರೂಪವು ಬೇರೆಯಿದೆ. ಯರೋಪಿನ ಅನೇಕ ನಿಲುವುಗಳನ್ನು ಇವರು ಒಪ್ಪಿಕೊಂಡರು. ಅದರಲ್ಲಿಯೂ ಅವರು ನೇರವಾಗಿ ಅಲ್ಲಿಯ ಕೆಲವು ಅಭಿಪ್ರಾಯಗಳನ್ನು ಯಾವುದೇ ವಿಮರ್ಶಾತ್ಮಕವಾದ ಅಂತರವು ಇಲ್ಲದೆ ಅನುಸರಿಸಿದರು. ಯುರೋಪ್ ಮತ್ತು ಅದರ ಸ್ವರೂಪವನ್ನು ಈ ದೃಷ್ಟಿಯಿಂದ ಇವರು ನೋಡಿದ ಕ್ರಮವು ಬೇರೆ. ಒಂದು ಹಂತದಲ್ಲಿ ಇವರು ಯುರೋಪನ್ನು ಒಪ್ಪಿಕೊಂಡರು. ಯುರೋಪಿನ ಮೌಲ್ಯ ಮತ್ತು ಅದರ ತೀರ್ಮಾನವನ್ನು ಇವರು ಒಪ್ಪಿಕೊಂಡದ್ದರಿಂದ ಯಾವುದನ್ನು ಸ್ವೀಕರಿಸಬೇಕು ಎನ್ನುವುದಕ್ಕೆ ಬೇರೆ ಬೇರೆ ಉದಾಹರಣೆಗಳನ್ನು ಕೊಟ್ಟರು. ಇದನ್ನು ಸರಳವಾಗಿ ವಸಾಹತು ಮನೋಭಾವ ಎಂದು ಕರೆಯುತ್ತಾರೆ. ಇದರಿಂದ ಈ ದೃಷ್ಟಿಕೋನದಲ್ಲಿ ಲೇಖಕ ಮತ್ತು ಅವನ ಕೆಲಸಗಳು ಬೇರೆಯಾಗುತ್ತವೆ. ಇದು ಕಲ್ಪಿತ ಪಠ್ಯಕ್ಕೆ ಭಿನ್ನವಾದ ನೆಲೆಯನ್ನು ಹೊಂದಿತು.

ಕಲ್ಪಿತವಾದ ನೆಲೆಯಲ್ಲಿ ಇರುವ ಚಹರೆಯು ಇಲ್ಲಿ ಬೇರೆಯಾಗುತ್ತದೆ. ಅನ್ಯವನ್ನು ನೋಡುವುದು ಮತ್ತು ಅದನ್ನು ಸ್ವೀಕರಿಸುವುದು ಬೇರೆ ಬೇರೆ ಪ್ರಶ್ನೆಗಳೇ ಆದರೂ ಇದರ ಅರ್ಥವ್ಯಾಪ್ತಿ ಬೇರೆಯಾಗುತ್ತದೆ. (ಅಡಿಟಿಪ್ಪಣಿಗೆ ಜಾನ್ ಸ್ಟುವರ್ಟ್‌ಮಿಲ್ (೧೮೨೩) ಅವನ ತಂದೆ ಜೇಮ್ಸ್ ಮಿಲ್‌ನ ಕುರಿತು ಹೀಗೆ ಹೇಳುತ್ತಾನೆ: "ಅವನು ಒಳ್ಳೆಯ ಸರಕಾರ ಕೊಟ್ಟ. ಭಾರತೀಯ ಪ್ರಜೆಗಳನ್ನು ಯಾವುದೇ ರೀತಿಯಲ್ಲಿ ಒತ್ತಡ ಹೇರದೆ. ಅವರು ಒಂದು ರೀತಿಯಲ್ಲಿ ಕಂಪೆನಿಯ ಸರಕಾರದಿಂದ ಪ್ರಯೋಜನ ಪಡೆಯುವಂತೆ ಮಾಡಿದ. ಅವನಿಗೆ ಪ್ರಾಯೋಗಿಕತೆ ಅರಿವು ಇತ್ತು. ಭಾರತೀಯ ವಾಸ್ತವ ಗೊತ್ತಿತ್ತು. ಕಂಪೆನಿಯ ಸರಕಾರವು ಅವರಿಗೆ ನೀಡಬಹುದಾದ ಸಕಲ ಪ್ರಯೋಜನವನ್ನು ಪಡೆಯಲಿ ಎಂಬ ಉದ್ದೇಶವಿತ್ತು. ೧೮೨೪ ಕಂಪೆನಿಯು ಆರ್ಥಿಕ ಪ್ರಯೋಜನ ಪಡೆಯಲಿ ಎಂಬ ಕಾರಣಕ್ಕೆ ತನ್ನ ಆರ್ಥಿಕ ಚಟುವಟಿಕೆಯನ್ನು ಪ್ರಾರಂಭಿಸಿದ. ಇದು ಇಂಗ್ಲೀಷರ ಉಪಯುಕ್ತತಾ ಸಿದ್ಧಾಂತವನ್ನು (Utilitarian Theory) ರೂಪಿಸಲು ಕಾರಣವಾಯಿತು. ವಿಲಿಯಂ ಬೆಂಟಿಂಕ್ ಭಾರತೀಯ ಪ್ರಜೆಗಳಿಗೆ ಹೊಸ ರೀತಿಯ ಮಾಪನ ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಿಸಿದ. ಆದರೆ ರಾಜಕೀಯವಾಗಿ ಬೆಂಟಿಂಕ್ ಸರಳ ವ್ಯಕ್ತಿಯಾಗಿರಲಿಲ್ಲ.

ಚರಿತ್ರೆ ಮತ್ತು ಅದರ ಜೊತೆಗೆ ಇರುವ ಸತ್ಯಗಳನ್ನು ಯಾವುದು ನಿರೂಪಣೆ ಮಾಡುತ್ತದೆ ಎಂದೂ ನೋಡಬೇಕು. "ಕಾದಂಬರಿಯ ರೂಪದ ಬೆಳವಣಿಗೆಯಲ್ಲಿ ಕೆಲವು ಆಂತರಿಕವಾದ ಕೆಲವು ತರ್ಕಗಳನ್ನು ಕಾಣಬಹುದು: ಮೊದಮೊದಲಿನ ವಾಸ್ತವವಾದಿ ಕಾದಂಬರಿಗಳಲ್ಲಿ ವಿವರಣೆ; ಚಾರಿತ್ರಿಕ ಹಿನ್ನೆಲೆ; ನಿರ್ದಿಷ್ಟ ವಿಷಯ ಹಾಗೂ ನಿರ್ದಿಷ್ಟ ಬಗೆಯ ಜೀವನ ಕ್ರಮ (ಉದಾ : ವೈದವ್ಯ ; ಭಾರತೀಯ ಸಮಾಜದಲ್ಲಿ ಬ್ರಾಹ್ಮಣರು: ಗೌಡರು ಇತ್ಯಾದಿ) ಮುಂತಾದವುಗಳ ಕುರಿತು ವಿವರಣಾತ್ಮಕ ತಳಹದಿಯ ವಿಷಯಗಳಿದ್ದವು. 'ಈ ರೀತಿಯ ವಿವರಣೆಯನ್ನು ಕಾದಂಬರಿಕಾರರು ಕಾದಂಬರಿಯಲ್ಲಿ ನೀಡುವುದಕ್ಕೆ ಯಾವುದೇ ರೀತಿಯ ನ್ಯಾಯ ಸಮ್ಮತವಾದ ರೀತಿ ರಿವಾಜುಗಳು ಬೇಕಿರಲಿಲ್ಲ' (Fredric Jameson. ೧೯೭೪. p.೩೦.)

೧೯೦೦ರಲ್ಲಿ ಇಂಗ್ಲೀಷ್ ಪರಂಪರೆಯಲ್ಲಿ ಎರಡು ಮಾದರಿಯ ವಾಸ್ತವ ಕಾದಂಬರಿಗಳಿದ್ದವು: ಒಂದು ಸಾಮಾಜಿಕ ಕಾದಂಬರಿಗಳು ಮತ್ತು ಮತ್ತೊಂದು ವೈಯಕ್ತಿಕ ಕಾದಂಬರಿಗಳು. ಸಾಮಾಜಿಕ ಕಾದಂಬರಿಯೆಂದು ಕರೆಯಲಾದ ಕಾದಂಬರಿಗಳಲ್ಲಿ ಮತ್ತೆರಡು ಬಗೆ: ವಿವರಣಾತ್ಮಕ ಸಾಮಾಜಿಕ ಕಾದಂಬರಿಗಳು ಮತ್ತು ದಾಖಲು ಮಾದರಿಯ (Documentary) ಕಾದಂಬರಿಗಳು. ಆದರೆ ಈ ಮಾದರಿಯ ಕಾದಂಬರಿಗಳು ವಿಶಾಲವಾದ ಸಾಧ್ಯತೆಯನ್ನು ಒಳಗೊಂಡಿರುತ್ತವೆ. ಆದರೆ ಜನಪ್ರಿಯವೆನ್ನಬಹುದಾದ ಕಾದಂಬರಿಗಳಲ್ಲಿ ನಿರ್ದಿಷ್ಟವಾದ ಪ್ರಮೇಯವಿರುತ್ತದೆ. ಜನರು ಕೂಡಾ ಈ ಪ್ರಮೇಯಗಳಲ್ಲಿ ಬದುಕುತ್ತಾರೆ. ಈ ರೀತಿಯಲ್ಲಿ ವಾಸ್ತವವಾದಿ ಕಾದಂಬರಿಗಳು ಕೂಡಾ ಸಾಮಾಜಿಕ ಮತ್ತು ವೈಯಕ್ತಿಕವೆಂದು ಎರಡು ಮಾದರಿಗಳು. ಸಾಮಾಜಿಕ ಕಾದಂಬರಿಗಳನ್ನು ಮತ್ತೆರಡು ಬಗೆಯಲ್ಲಿ ವರ್ಗೀಕರಿಸಲಾಗುತ್ತದೆ – ಸಾಮಾಜಿಕ ದಾಖಲೆ ಮಾದರಿಯದು ಮತ್ತು ಸಾಮಾಜಿಕ ಪ್ರಮೇಯದ ಮಾದರಿಯದು. ಹಾಗೆಯೇ ವೈಯಕ್ತಿಕ ಕಾದಂಬರಿಗಳಲ್ಲಿಯೂ ದಾಖಲೆಯ ಮಾದರಿಯದು ಮತ್ತು ಪ್ರಮೇಯ ಮಾದರಿಯದು ಎಂದು ಎರಡು ಬಗೆ (ಅದೇ) ಅನ್ಯೋಕ್ತಿ ಎನ್ನುವುದು ನಮಗೆ ಕಾವ್ಯವನ್ನು ಪ್ರವೇಶ ಮಾಡಲು ಇರುವ ಹಾದಿಯೂ ಹೌದು. ಎಷ್ಟೋ ಸರ್ತಿ ಅದು ಒಂದು ಶಬ್ದದ ಚಿತ್ರವೂ ಆಗಿರುತ್ತದೆ. ಆದರೆ ಅದು ವಾಸ್ತವ ಎನ್ನುವುದನ್ನು ಹೇಳುವುದಿಲ್ಲ. ಅದರ ಅರ್ಥವೂ ಬೇರೆಯಾಗಿರುತ್ತದೆ. ಇಲ್ಲಿ ಇದರ ಮತ್ತೊಂದು ರೂಪವನ್ನು ನಾವು ಗಮನಿಸಬೇಕು: ಅನೇಕ ವೇಳೆ ನಾವು ಯಾವುದನ್ನು ನಮಗೆ ಹೇಳಲಾಗಿದೆಯೋ ಅದರ ಆಧಾರದ ಮೇಲೆ ನಾವು ಸಂಕೇತವನ್ನು ಅಧ್ಯಯನ ಮಾಡುತ್ತೇವೆ. ಆದರೆ ಸಂಕೇತ ಎನ್ನುವುದು ನಮಗೆ ದತ್ತವಾಗಿ ಬಂದುದು ಚರಿತ್ರೆಯಿಂದ ಎನ್ನುವುದು ಸ್ಪಷ್ಟ. ಅದಕ್ಕೆ ಅರ್ಥವಿದೆ.. ಅದು ನಮಗೆ ವಾಸ್ತವವನ್ನು ಬೇರೆ ಥರ ನೋಡುವ ಅವಕಾಶವನ್ನು ಕಲ್ಪಿಸುತ್ತದೆ.

ಸಂಕೇತ ಮತ್ತು ಅನ್ಯೋಕ್ತಿ ಎರಡೂ ನಮಗೆ ಬಹಳ ಹಿಂದಿನಿಂದಲೂ ನಮಗೆ ಪರಿಚಿತವಾದ್ದು. ವಾಸ್ತವದಲ್ಲಿ ನಾವು ಯಾವ ವಿವರಣೆಯನ್ನು ನೋಡುತ್ತೇವೆಯೋ ಅದರ ರೂಪವು ನಮಗೆ ತಕ್ಷಣ ಅರ್ಥವಗುತ್ತದೆ. ವ್ಯಂಗ್ಯ ಎನ್ನುವುದು ನಮಗೆ ಕಾವ್ಯದ ಒಂದು ಅಭಿವ್ಯಕ್ತಿ ಎಂದು ಭಾವಿಸಬೇಕಾದ ಅಗತ್ಯವಿಲ್ಲ ಎಂದು ಜೇಮ್ಸನ್ ಹೇಳುತ್ತಾನೆ. ಸಂಕೇತ ಮತ್ತು ವ್ಯಂಗ್ಯ ಎನ್ನುವುದಕ್ಕೆ

ಅತ್ಯಂತ ವಿಶಿಷ್ಟವಾದ ಅರ್ಥವನ್ನು ಕೊಟ್ಟದ್ದು ಫ್ರೆಂಚ್ ಸಾಹಿತ್ಯ. ಸಂಕೇತವನ್ನು ಅದು ಮೂರ್ತ ಮತ್ತು ಅಮೂರ್ತದ ನಡುವಣ ಇರುವ ಒಂದು ಸ್ಥಿತಿಯೂ ಹೌದು.ಎರಡರ ನಡುವೆ ಅದು ಬರುತ್ತದೆ, ಒಂದು ಮೂರ್ತ ಮತ್ತೊಂದು ಅಮೂರ್ತ. ಅಮೂರ್ತವಾದ್ದನ್ನು ಹೇಳುವುದು ಹೇಗೆ ಎನ್ನುವುದು ಬಂದಾಗ ಸಂಕೇತದ ಪ್ರಶ್ನೆಯು ಬಂದಿತು. ಇದರ ಜೊತೆಗೆ ಫ್ರಾಯ್ಡ್ ಹೇಳಿದ ಸಂಗತಿಯನ್ನು ನೆನಪು ಮಾಡಿಕೊಳ್ಳುವುದು ಅತ್ಯಂತ ಸೂಕ್ತ. ನಮ್ಮ ಅನುಭವ ಎನ್ನುವುದು ಮಾತ್ರವೇ ಮುಖ್ಯವಲ್ಲ, ಅದರ ಜೊತೆಗೆ ಅದು ನಮ್ಮ ಅತ್ಯಂತ ಸುಪ್ತವಾದ ಒಂದು ಪ್ರಜ್ಞೆಯನ್ನು ನಿರೂಪಿಸುತ್ತದೆ. ಆದ್ದರಿಂದ ನಮ್ಮ ಕನಸು ಅನ್ಯವಾದ್ದನ್ನು ಹೇಳುತ್ತದೆ. ಅದರ ಅನ್ವಯವನ್ನು ಮಾಡುವುದು ಅತ್ಯಂತ ಅಗತ್ಯ. ಇದನ್ನೇ ನಾವು ವ್ಯಂಗ್ಯ ಮತ್ತು ಅನ್ಯೋಕ್ತಿಗೆ ಅನ್ವಯ ಮಾಡಲು ಸಾಧ್ಯ. ಯಾವುದು ಸಂಕೇತವಾಗುತ್ತದೆಯೋ ಅದು ಕೂಡಾ ಒಂದು ಹಂತದಲ್ಲಿ ನಮಗೆ ಅನ್ಯವನ್ನು ಹೇಳುತ್ತದೆ. ಆದರೆ ಇಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು: ಪುತಿನ ಅವರ ಯದುಗಿರಿಯ ಮೌನ ವಿಕಾಸವು ನಮಗೆ ಒಂದು ಅದ್ಭುತವಾದ ನುಡಿ ಚಿತ್ರವೂ ಆಗಿದೆ. ಅದು ಉತ್ತಮವದ ಒಂದು ಅಭಿವ್ಯಕ್ತಿಯೂ ಆಗಿದೆ. ಆಗ ಎರಡು ಪ್ರಶ್ನೆಗಳು ಇದ್ದವು. ಒಂದು ಕಾವ್ಯವನ್ನು ಹೇಗೆ ಅಭಿವ್ಯಕ್ತಿ ಮಾಡಬೇಕು ಎನ್ನುವುದು ಒಂದು ಅಂಶವಾದರೆ ಕಾವ್ಯವನ್ನು ಹೇಗೆ ಸುಂದರವಾಗಿ ಹೇಳಬೇಕು ಎನ್ನುವುದು ಮತ್ತೊಂದು ಅಂಶ. ಅದು ಭಾಷೆಯ ವಸ್ತ್ರವೂ ಹೌದು. ಹೇಗೆ ಅದು ಒಂದು ವರ್ಗದ ಪ್ರಾತಿನಿಧಿಕವಾದ ಅಂಶವೂ ಆಗಿತ್ತು ಎಂದು ಬೆಂಜಮಿನ್ ಹೇಳುತ್ತಾನೆ. ರೂಪಕ ಮತ್ತು ಸಂಕೇತದಲ್ಲಿ ಮಾತಾಡುವುದು ಅಂದರೆ ಅದು ಅಭಿರುಚಿಯ ಪಲ್ಲಟವನ್ನು ಹೇಳುತ್ತದೆ.

ಹಾಗೆ ನೋಡಿದರೆ ನಮಗೆ ಸಂಕೇತ ಮತ್ತು ಅನ್ಯೋಕ್ತಿಗೆ ಸಂಬಂಧವು ಹೇಗೆ ಇದೆಯೋ ಅದೇ ರೀತಿಯಲ್ಲಿ ಅವಗಳ ನಡುವೆ ಅಂತರವೂ ಇದೆ. ಅನ್ಯೋಕ್ತಿಯಲ್ಲಿ ಉಕ್ತಿ ಮತ್ತು ಅದರ ವೈಚಿತ್ರ್ಯ ಮುಖ್ಯ. ಆದರೆ ಸಂಕೇತವು ನಮಗೆ ಸ್ಪಷ್ಟವಾದ ಒಂದು ಸೂಚನೆಯನ್ನು ಕೊಡುವುದಿಲ್ಲ ಎಂದು ಅರ್ಥಮಾಡಿಕೊಳ್ಳಬೇಕು. ಒಂದು ಉಕ್ತಿಯಲ್ಲಿ ವಿಶಿಷ್ಟವಾದ ಸಾಧ್ಯತೆಯು ಇರುತ್ತದೆ. ಆದರೆ ಒಂದಲ್ಲಾ ಒಂದು ಅರ್ಥದಲ್ಲಿ ಸಂಕೇತ ಮತ್ತು ಅನ್ಯೋಕ್ತಿಯು ಸಾಹಿತ್ಯದಲ್ಲಿ ತನ್ನದೇ ಒಂದು ಅನಿವಾರ್ಯತೆಯನ್ನು ಸೃಷ್ಟಿ ಮಾಡುತ್ತದೆ. ನಿರೂಪಣೆಯು ಅತ್ಯಂತ ಮುಖ್ಯವಾಗಿ ತನ್ನ ಭಿನ್ನತೆಯನ್ನು ಕಾಪಾಡುತ್ತದೆ. ಅದು ಅತ್ಯಂತ ಮುಖ್ಯ. ಅದರಲ್ಲಿಯೂ ಅದಕ್ಕೆ ಅತ್ಯಂತ ಮುಖ್ಯವದ್ದು ಅದು ಧ್ವನಿಸುವ ಅರ್ಥವು ಅತ್ಯಂತ ಪ್ರಧಾನ. ರೂಪಕ ಮತ್ತು ಉಪಮೇಯಗಳು ಸಾಹಿತ್ಯದಲ್ಲಿ ಹೇಗೆ ಮುಖ್ಯವಾಗುತ್ತದೆಯೋ ಅದೇ ರೀತಿಯಲ್ಲಿ ಉಕ್ತಿ ಮತ್ತು ಅದರ ವೈಚಿತ್ರ್ಯಗಳು ಕೂಡಾ ಅತ್ಯಂತ ಮುಖ್ಯವಾಗುತ್ತದೆ. ಒಂದರೆಡು ಉದಾಹರಣೆಯನ್ನು ನಾವು ಇಲ್ಲಿ ಹೇಳಬೇಕು:

ಕಾರಂತರ 'ಬೆಟ್ಟದ ಜೀವ' 'ಚಿಗುರಿದ ಕನಸು' ಕಾದಂಬರಿಗಳಲ್ಲಿ ನಿಸರ್ಗವನ್ನು ಮಣಿಸುವ ಮನುಷ್ಯನ ಸ್ವಭಾವವನ್ನು ಈ ಹಿನ್ನೆಲೆಯಲ್ಲಿಯೂ ಗ್ರಹಿಸಲು ಸಾಧ್ಯ.

ಕಾರಂತರ ಕಾದಂಬರಿಗಳಲ್ಲಿ ಎದ್ದು ಕಾಣುವ ಅಂಶವೆಂದರೆ – ದ್ವಂದ್ವ. ಇದು ಬಹಿರಂಗ ಮತ್ತು ಅಂತರಂಗದ ನಡುವಣ ದ್ವಂದ್ವವೆಂಬ ಅರ್ಥದಲ್ಲಿ ಬಳಸುತ್ತಿಲ್ಲ. ಒಳ್ಳೆಯ ಮೌಲ್ಯ ಯಾವುದು ಮತ್ತು ಕೆಡುಕು ತರುವ ಮೌಲ್ಯಗಳು ಯಾವುವು ಎಂಬುದನ್ನು ಅವರ ಪ್ರಮುಖ

ಕಾದಂಬರಿಗಳು ಶೋಧಿಸಲು ಪ್ರಯತ್ನಿಸುತ್ತವೆ. ಬೇರೊಂದು ಮಾದರಿಯಲ್ಲಿ ಹೇಳಬೇಕೆಂದರೆ – ಸಾಮಾಜಿಕ ಪ್ರಗತಿಗೆ ಯಾವುದು ಅವಶ್ಯ ಮತ್ತು ಯಾವುದು ಪ್ರಗತಿವಿರೋಧದ ತಕ್ಕಿನ ನಿಲುವು ಎಂಬುದನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಶೋಧಿಸುತ್ತಾರೆ. ಇದನ್ನು ನಾವು ಕಾರಂತರ ದೃಷ್ಟಿಕೋನವೆಂದು ಕರೆಯಬೇಕಿಲ್ಲ. ಇದೇ ತರಹದ ಮನೋಭಾವದಿಂದ ಕುವೆಂಪು ಅವರು ಕೂಡಾ ಹೊರಡುತ್ತಾರೆ. ಯಾವುದನ್ನು ನಾವು ಕಾರಂತರನ್ನು ; ಕುವೆಂಪು ಅಂಥವರನ್ನು ರೂಪಿಸಿದ ಸಾಮಾಜಿಕ – ಸಾಂಸ್ಕೃತಿಕ ಬೌದ್ಧಿಕವಲಯವೆಂದು ಗುರುತಿಸುತ್ತೇವೋ ಅದರಲ್ಲಿಯೂ ಈ ಮಾದರಿಯ ಸಂಘರ್ಷಗಳಿದ್ದವು. ಬೌದ್ಧಿಕರನ್ನು ಬಹುತೇಕವಾಗಿ ಕಾಡಿದ ರಾಷ್ಟ್ರೀಯ ಚಳುವಳಿಗಳು ಕೂಡಾ ಅನೇಕ ವೈರುದ್ಧ್ಯಗಳನ್ನು ಒಳಗೊಂಡಿತ್ತು. ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನದ ಭಾರತದ ಚರಿತ್ರೆಯಲ್ಲಿ ಪ್ರತಿಗಾಮಿ ಮತ್ತು ಪ್ರಗತಿಪರ ಚಿಂತನೆಗಳ ನಡುವೆ ಸಂಘರ್ಷಗಳಿದ್ದವು. ಇನ್ನೊಂದು ತರ ಹೇಳಬೇಕೆಂದರೆ, ಸಾಂಪ್ರದಾಯಿಕ, ಪರಂಪರಾಗತವಾದಿಗಳು ಮತ್ತು ಪ್ರಗತಿವಾದಿ; ಆಧುನಿಕರ ನಡುವೆ ರೂಪುಗೊಂಡ ಬಿಕ್ಕಟ್ಟು ಅದು (Partha Chatterjee, ೧೯೮೬, ಪು. ೨೩)

ಆಗಿನ ಕಾದಂಬರಿಗಳ ರೂಪವೂ ಇದಕ್ಕೆ ಒಂದು ಉದಾಹರಣೆಯು ಆಗಿದೆ. ಆದ್ದರಿಂದ ಜನರು ಮತ್ತು ಅವರ ಮನೋಸ್ಥಿತಿಯೆನ್ನುವುದು ಒಂದು ಖಾಲಿಯಾದ ಅವಕಾಶವನ್ನು ಹೊಂದುವುದು ಸಾಧ್ಯವೇ ಇರಲಿಲ್ಲ. ಹಾಗೆ ನೋಡಿದರೆ ನಮಗೆ ಆಗ ಅನೇಕ ಸ್ವಗತವೂ ಸಿಗುತ್ತದೆ ಎಂದೂ ಹೇಳುತ್ತಾರೆ. ಸಂವೇದನೆಯು ಬದಲಾಗುವ ಸಂದರ್ಭದಲ್ಲಿ ಮನುಷ್ಯ ಮತ್ತು ಅವನ ಸುಖದ ಕಲ್ಪನೆಯು ಬದಲಾಗುತ್ತದೆ. ಹೊಸ ಬಯಕೆಗಳು ಹುಟ್ಟುತ್ತವೆ. ಯಜಮಾನಿಕೆ ಮತ್ತು ಅದರ ಶಕ್ತಿಗಳು ಇಮ್ಮಡಿಯಾದವು. ಇದು ಬಹಳ ದೊಡ್ಡದಾದ ತಿರುವು ಕೂಡಾ ಆಗಿದೆ. ಯಜಮಾನಿಕೆ ಮತ್ತು ಅದರ ಸ್ವಭಾವವು ಬದಲಾಗುತ್ತಾ ಹೋದಂತೆ ಅದರ ಸುಖದ ಕಲ್ಪನೆಯೂ ವ್ಯತ್ಯಾಸವಾಯಿತು. ಹೆಡಗ ನಮ್ಮ ಆಲೋಚನೆ ಮತ್ತು ಅದರ ಕ್ರಮಗಳು ಬೇರೆಯಾಗುತ್ತವೆ ಎಂದು ಪ್ರಾಯ್ಡ್ ಹೇಳುತ್ತಾನೆ. ಅಹಂಕಾರ ಮತ್ತು ಅಧಿಕಾರ ಅಥವಾ ಶಕ್ತಿಗೆ ಇರುವ ಸಂಬಂಧಗಳು ಅವನು ವಿವರಿಸಿದ್ದಾನೆ (ನೋಡಿ: ಪ್ರಾಯ್ಡ್ ಕಂಪ್ಲೀಟ್ ವರ್ಕ್ಸ್ ಪುಟ ೪೦೨) ಅಹಂಮಿಕೆಗೆ ಮತ್ತು ಅದರ ಒತ್ತಡಕ್ಕೆ ಹಾಗೂ ಸ್ವಯಂಬಲಕ್ಕೆ ಒಂದು ಸಂಬಂಧವೂ ಇದೆ. (ಅದೇ) ಅವನು ಯಾವುದೇ ಭಾವನೆಗಳು ಸುಮ್ಮನೆ ಉಂಟಾಗುವುದೂ ಇಲ್ಲವೆಂದು ಹೇಳುತ್ತಾನೆ. (ಅದೇ ಪುಟ ೯೭) ಸುಖ ಮತ್ತು ದುಃಖ ಎನ್ನುವುದು ನಮ್ಮ ನಮ್ಮ ಭಾವನೆಗೆ ಸಂಬಂಧಪಟ್ಟಿದೆ ಎಂದು ಅವನು ಹೇಳುತ್ತಾನೆ (ಪ್ರಾಯ್ಡ್ – ಸ್ಟಡೀಸ್ ಆನ್ ಹಿಸ್ಟಿರೀಯಾ) ಪ್ರಾಯ್ಡ್ ಅತ್ಯಂತ ಗಂಭೀರವಾಗಿ ಹೇಳಿದ ಮತ್ತೊಂದು ವಿಚಾರವು ವಿಧಿ ಮತ್ತು ನಿಷೇಧಕ್ಕೆ ಸಂಬಂಧಪಟ್ಟಿದೆ. ಅದು ಹೇಗೆ ಮನುಷ್ಯನ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವವನ್ನು ವಹಿಸಿದೆ ಎಂದೂ ಅವನು ಹೇಳುತ್ತಾನೆ. (ಪ್ರಾಯ್ಡ್ ೧೯೧೨ ಟೊಟೆಮ್ ಅಂಡ್ ಟಬೂ ೧೩) ನೀತಿಯು ಹೇಗೆ ಕನಸುಗಳ ಮೇಲೆ ಪ್ರಭಾವವನ್ನು ಬೀರುತ್ತದೆ ಎಂದೂ ಅವನು ವಿವರಿಸುತ್ತಾನೆ. (ಫ್ರಾಯ್ಡ್ – ಇಂಟ್ರಪ್ರಟೇಶನ್ ಆಫ್ ಡ್ರೀಂ ಪುಟ ೫೭೪) ಒಂದು ಹಂತದಲ್ಲಿ ಕಾಂಟ್ ಹೇಳುವ ಕಾರಣವನ್ನು ಒಪ್ಪುತ್ತಾನೆ. ಕಲ್ಪನೆ, ಕಾರಣ ಮತ್ತು ಕನಸುಗಳು ಸಂಬಂಧದ

ವಿವೇಚನೆಯನ್ನು ಅವನು ಮಾಡಿದ್ದಾನೆ. (ಅದೇ ಪುಟ ೫೭೫ ಅಡಿಟಿಪ್ಪಣಿ) ಆದರೆ ಪುನರುಜ್ಜೀವನ ಕಾಲದ ಅನಂತರ ಕಾರಣ ಎನ್ನುವುದು ಒಂದು ಅತ್ಯಂತ ಮಹತ್ವದ ಪರಿಭಾಷೆಯೂ ಆಯಿತು. ಕಾರಣ ಮತ್ತು ಜ್ಞಾನವು ಹೇಗೆ ಪರಸ್ಪರ ಸಂಬಂಧವನ್ನು ಹೊಂದಿದೆ ಎಂದೂ ವಿವರಿಸಲಾಯಿತು. ಒಂದು ಸಾಮಾಜಿಕ ಅಸ್ಪಷ್ಟತೆಯು ಏನು ಮಾಡಬಹುದು ಎನ್ನುವುದಕ್ಕೂ ಪುನರುಜ್ಜೀವನ ಕಾಲಘಟ್ಟವು ಉದಾಹರಣೆಯು ಆಗಿದೆ. ಇದೇ ಕಾಲಕ್ಕೆ ಅದು ವ್ಯಾಪಾರ ಮತ್ತು ಉದ್ದಿಮೆಯನ್ನು ಪ್ರಚಾರ ಮಾಡಿದ್ದೂ ನಿಜ. ೧೮೫೦ರ ಅನಂತರದಲ್ಲಿನ ಕೌಟುಂಬಿಕ ಪರಿವರ್ತನೆಗಳನ್ನು ; ಮತ್ತು ಜಾತಿಯ ಪರಿವರ್ತನೆಗಳನ್ನು ಕಾರಂತರ ಕಾದಂಬರಿಗಳು ಗುರುತಿಸುತ್ತವೆ. ಈ ಕಾಲಘಟ್ಟದಲ್ಲಿ ಚಾರಿತ್ರಿಕ ಮತ್ತು ಸಾಮಾಜಿಕವಾದ ಕೆಲವು ಪರಿವರ್ತನೆಗಳನ್ನು ನಾವು ಕಾಣುತ್ತೇವೆ : ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನದ ಭಾರತದ ಚರಿತ್ರೆಯಲ್ಲಿ ಪ್ರತಿಗಾಮಿ ಮತ್ತು ಪ್ರಗತಿಪರ ಚಿಂತನೆಗಳ ನಡುವೆ ಅನೇಕ ಸಲ ಘರ್ಷಣೆಗಳಿದ್ದವು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ – ಸಾಂಪ್ರದಾಯಿಕ ಪರಂಪರಾಗತವಾದಿಗಳ ಮತ್ತು ಪ್ರಗತಿಪರ ಆಧುನಿಕತಾವಾದಿಗಳ ನಡುವಣ ಬಿಕ್ಕಟ್ಟು ಅದು (Parthachatterjee ೧೯೮೬, ಪು. ೨೩). ಈ ಮಾದರಿಯ ಚಿಂತನೆಯ ಕ್ರಮವು ಸಮಾಜ ಮತ್ತು ಕುಟುಂಬವನ್ನು ನೋಡುವ ಕ್ರಮದ ಮೇಲೆ ಪ್ರಭಾವ ಬೀರಿರುವುದು ಸತ್ಯ. ಹಾಗೆಯೇ ಈ ಕಾಲಘಟ್ಟ ಸಾಮಾಜಿಕ – ಆರ್ಥಿಕ ಬದಲಾವಣೆಗಳನ್ನು ಕಂಡ ಕಾಲಘಟ್ಟವೂ ಹೌದು. ಹದಿನಾರು ಮತ್ತು ಹದಿನೇಳನೆಯ ಶತಮಾನದಲ್ಲಿ ಇಂಗ್ಲೆಂಡ ಯಾವ ಪರಿವರ್ತನೆಯನ್ನು ಕಂಡಿತೋ ಅದೇ ಮಾದರಿಯ ಮತ್ತು ಅದಕ್ಕಿಂತ ಕೊಂಚ ಭಿನ್ನವಾದ ಪರಿವರ್ತನೆಯನ್ನು ಭಾರತೀಯ ಸಮಾಜವು ಕಂಡಿತು. ಭಾರತೀಯ ಸಮಾಜದ ಸಂದಿಗ್ಧವಾದ ಸ್ಥಿತಿಯಲ್ಲಿ ಲೇಖಕರು ಬರೆಯತೊಡಗಿದ್ದರಿಂದ ಇವುಗಳ ಬಗೆಗಿನ ಪ್ರತಿಕ್ರಿಯೆಗಳು ಕಾದಂಬರಿಗಳಲ್ಲಿ ರೂಪುಗೊಂಡವು.

ಕಾದಂಬರಿಯನ್ನು ಓದುವಾಗ ಒಬ್ಬ ಓದುಗನು ಈ ಕತೆಯು ಎಲ್ಲಿ ಯಾವ ತಿರುವನ್ನು ಪಡೆಯುತ್ತದೆ ಎಂದು ನೋಡುತ್ತಾನೆ. ಈ ಪ್ರಶ್ನೆಯು ಕತೆಯಲ್ಲಿ ಆಶಯದ ಪ್ರಶ್ನೆಯು ಆಗಿರುತ್ತದೆ. ಇದೇ ಪ್ರಶ್ನೆಯನ್ನು ಇನ್ನೊಂದು ಥರ ಕೇಳುತ್ತೇವೆ: ಈ ಕತೆಯ ನಿಜವಾದ ಒಂದು ಉದ್ದೇಶ ಯಾವುದು ? ಆದರೆ ಯಾವುದೇ ಆಶಯವು ಇಲ್ಲದೆ ಒಂದು ಕತೆಯು ಆಗುವುದಿಲ್ಲ,. ಅದು ಸ್ಪಷ್ಟ. ಕಥನವನ್ನು ಮಾಡುವುದು ಅಂದರೆ ಅದು ನಮಗೆ ಒಂದು ಸೂಚನೆಯನ್ನು ಕೊಡುವುದು ಎಂದೂ ಆಗುತ್ತದೆ. ಇದು ಯಾರಿಗೆ ಯಾವ ಬಗೆಯ ಸಂಬಂಧವನ್ನು ಹೊಂದಿರುತ್ತದೆ ಎನ್ನುವುದು ಅತ್ಯಂತ ಮುಖ್ಯ. ಕಂಬಾರರು ನಿರೂಪಿಸುವುದು ಈಗಾಗಲೇ ಪ್ರತಿಷ್ಠಿತವಾದ ಜೀವನದ ದರ್ಶನವನ್ನು ಅಲ್ಲ. ಸಮಾಜದ ಅನೇಕ ಬಿಂಬಗಳು ಅವರಲ್ಲಿ ಕಾಣುವುದಕ್ಕೆ ಇದೂ ಒಂದು ಕಾರಣವಾಗಿದೆ. ಯಜಮಾನಿಕೆಯನ್ನು ವಹಿಸಿದ ನಿರೂಪಣೆಗಳನ್ನು ದರ್ಶನಗಳನ್ನು ಅವರು ನಿರಾಕರಿಸುತ್ತಾರೆ. ಮತ್ತೊಂದು ಅರ್ಥದಲ್ಲಿ ನಿತ್ಯ ಮತ್ತು ಅನಿತ್ಯ ಎರಡೂ ಇಲ್ಲಿ ಸಂಬಂಧವನ್ನು ಸ್ಥಾಪಿಸಿಕೊಳ್ಳುವಾಗ ಒಂದು ದೊಡ್ಡ ಎಚ್ಚರವನ್ನು ಇಟ್ಟುಕೊಂಡಿದ್ದಾರೆ. ಇದಕ್ಕೆ ಪೂರಕವಾಗಿ ಗ್ರಾಂಸಿಯ ಮಾತನ್ನು ಅವಲೋಕಿಸಬೇಕು. "ತತ್ವಜ್ಞಾನ ಮತ್ತು ಸಾಮಾನ್ಯ ಜ್ಞಾನವನ್ನು; ಸಾಮಾನ್ಯ ಜ್ಞಾನವನ್ನು ಮತ್ತು ಧರ್ಮವನ್ನು ಒಂದೇ ಅರ್ಥದಲ್ಲಿ ಪರಿಭಾವಿಸುವುದಿಲ್ಲ. ಧರ್ಮ ಸಾಮಾನ್ಯ ಜ್ಞಾನವನ್ನು ತತ್ವಜ್ಞಾನಕ್ಕೆ ಪರ್ಯಾಯವೆಂದು ಭಾವಿಸುವುದೂ ಇಲ್ಲ. ಆದರೆ

ಧಾರ್ಮಿಕ ಅಂಶಗಳಿಗೂ ನಮ್ಮ ಸಾಮಾನ್ಯವಾದ ಸಂವೇದನೆಗೂ ಕೆಲವು ಸಂಬಂಧವು ಕಲ್ಪಿತವಾಗಿದೆ. ಸಾಮಾನ್ಯವಾದ ಸಂವೇದನೆಯು ಚರಿತ್ರೆಯ ಉತ್ಪನ್ನವಾಗಿದೆ. ಅದು ಚರಿತ್ರೆಯ ಬೆಳವಣಿಗೆಯಲ್ಲಿ ರೂಪುಗೊಂಡಿದೆ. ತತ್ವಜ್ಞಾನವು ವಾಸ್ತವವಾಗಿ ಒಂದು ವಿಮರ್ಶೆ, ಅದು ಧರ್ಮ ಮತ್ತು ಸಾಮಾನ್ಯವಾದ ಸಂವೇದನೆ ಅಥವಾ ಸಾಮಾನ್ಯವಾದ ಜ್ಞಾನವನ್ನು ಮೀರಿ ನಡೆಯುತ್ತದೆ. ತತ್ವಜ್ಞಾನವು ಒಳ್ಳೆಯದು ಮತ್ತು ಅದು ಸಾಮಾನ್ಯಜ್ಞಾನಕ್ಕಿಂತ ಭಿನ್ನವಾದ್ದು.

೧೯೩೦ ರಲ್ಲಿ ಗಾಂಧೀಜಿಯವರು ಅಸ್ಪೃಶ್ಯವರ್ಗದವರನ್ನು ಹರಿಜನರು ಎಂದು ಕರೆದರು.[೨೧] ಅದೇ ವರ್ಷ ಸೆಪ್ಟಂಬರ್ ೩೦– ಪಂಡಿತ ಮದನ ಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ 'ಅಸ್ಪೃಶ್ಯತಾ ನಿರೋಧಕ ಸಂಘ' ಪ್ರಾರಂಭವಾಯಿತು. 'ಚೋಮನ ದುಡಿ' ಕಾದಂಬರಿ ಪ್ರಕಟವಾದುದು ೧೯೩೧ ರಲ್ಲಿ. ಇದು ಕಾಕತಾಳೀಯ ಇರಲಾರದು. ಹಿಂದೂ ಸಮಾಜದ ಮೂಲಭೂತವಾದ ಕಾನೂನು ವೈಯಕ್ತಿಕ ಕಾನೂನಿಗೆ ಸಂಬಂಧಪಟ್ಟಂತೆ ಇದೆ. ಇದು ಜಾತಿಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಇದಕ್ಕೆ ಯಾವುದೇ ಪ್ರಾದೇಶಿಕ ಮಿತಿಯಿಲ್ಲ ಮತ್ತು ಕಾಲವಿಲ್ಲ. ಜಾತಿಯೆನ್ನುವುದು ಅವನ ಕರ್ಮದಿಂದ ಬಂದಿರುವಂಥದ್ದು. ಕರ್ಮ ಅವನ ವರ್ತಮಾನವನ್ನು ಆಳುತ್ತದೆ – (Valentine Chirol (1926) Imaging India. 1990. Ronald Inden. p. 65).

ಗುಲ್ವಾಡಿಯವರು; ಬೋಳಾರ ಬಾಬುರಾಯರು ಕಾದಂಬರಿಗಳನ್ನು ಬರೆದಿದ್ದರು. ಗಳಗನಾಥರ ಕಾದಂಬರಿಯ ಮಾರ್ಗಕ್ಕೆ ಒಂದು ನಿರ್ದಿಷ್ಟ ಚಹರೆಯಿದೆ : ಅದು ಸಂಸ್ಕೃತಿಯ ವೈಭವೀಕರಣ ಅಥವಾ ಆದರ್ಶಕ್ಕೆ ಸಂಬಂಧಿಸಿದ ಮಾರ್ಗ. ಗಳಗನಾಥರ ಕಾದಂಬರಿಗಳು ಮುಖ್ಯವಾಗಿ ಸಾಂಸ್ಕೃತಿಕ ಆದರ್ಶವನ್ನು ಎತ್ತಿಹಿಡಿಯುವುದರೊಂದಿಗೆ ವಸಾಹತುಶಾಹಿ ಅನುಭವಕ್ಕೆ ವಿದ್ರೋಹಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ. ಬ್ರಿಟೀಶ್ ಪ್ರಭುತ್ವ ; ಅದು ರೂಪಿಸಿದ ಜ್ಞಾನದ ಮಾದರಿಗಳು: ಅದು ರೂಪಿಸಿದ ಸಾಂಸ್ಕೃತಿಕ ಒತ್ತಾಸೆಗಳ ವಿರುದ್ಧ ಸ್ವಸಾಂಸ್ಕೃತಿಕ ಅನನ್ಯತೆ ಮತ್ತು ಅದರ ಆರಾಧನೆಯು ಗಳಗನಾಥರಿಗೆ ಮುಖ್ಯವಾಯಿತು. ದೈನಂದಿನ ವಾಸ್ತವಕ್ಕಿಂತ ಐತಿಹಾಸಿಕ ವಸ್ತುಗಳನ್ನು ಆಧರಿಸಿದ ಕಾದಂಬರಿಯ ರಚನೆಯಲ್ಲಿ ಗಳಗನಾಥರು ಉತ್ಸಾಹಿಗಳಾದರು ಎನ್ನುವುದಕ್ಕೆ ಉತ್ತರ ಸ್ಪಷ್ಟ. ಇದು ಗಳಗನಾಥರೊಬ್ಬರ ಸಮಸ್ಯೆಯೆಂದು ಅನಿಸುವುದಿಲ್ಲ.

ಅಧ್ಯಾಯ – ೮

ನವೋದಯ ಕಾಲದ ವಾಸ್ತವವಾದಿ ಕಾದಂಬರಿಗಳು

ರಾಜಕೀಯ ಚರಿತ್ರೆಯ ಒಂದು ಮುಖವು ಈ ಕಾದಂಬರಿಯ ಒಡಲಲ್ಲಿ ಇದೆ. ಚರಿತ್ರೆಯು ಕಾದಂಬರಿಯ ನಿರೂಪಣೆಯ ಭಾಗವಾಗಿದೆ. ಒಂದು ಘಟನೆಯು ಚಾರಿತ್ರಿಕವಾಗಿ ನಡೆದರೆ ಅದನ್ನು ಚರಿತ್ರೆಯೆಂದು ಕರೆಯುತ್ತೇವೆ. ಚರಿತ್ರೆಗೂ ಒಂದು ನಿರೂಪಣೆಯಿರುತ್ತದೆ. ಚರಿತ್ರೆಯು ಅನೇಕ ಸಂದರ್ಭಗಳಲ್ಲಿ ಸರಳವಾದ ನಿರೂಪಣೆಯಾದರೂ ಅದು ಕತೆಯಂತೆಯೇ ಇರುತ್ತದೆ.

(೧೯೨೦ರಲ್ಲಿ 'ಮುತ್ತಿನ ಸರ' ಎಂಬ ಸಣ್ಣ ಕಥೆಗಳ ಸಂಕಲನವೊಂದು ಕನ್ನಡದಲ್ಲಿ ಪ್ರಕಟವಾಗಿದೆ. ಬಂಗಾಳದ ಬೇರೆ ಬೇರೆ ಬರಹಗಾರರ ಆರು ಸಣ್ಣ ಕಥೆಗಳನ್ನು ಆಯ್ದುಕೊಂಡು ವೆಂಕಟಾದ್ರಿ ಶಾಸ್ತ್ರಿಗಳು ಅನುವಾದಿಸಿದ್ದಾರೆ. ಪ್ರಿಯನಾಥ ಮುಖ್ಯೋಪಾಧ್ಯಾಯರ 'ಅನಾಥ ಪ್ರೇತ', ಸ್ವರ್ಣ ಕುಮಾರಿ ಘೋಷಾಲರ 'ಸನ್ಯಾಸಿನಿ' ಕಾಶೀಪ್ರಸನ್ನದಾಸಗುಪ್ತರ 'ಸುಷಮಾ' ಹಾಗೂ ಬಿಂಕುಬಿಹಾರಿಧರ ಮೊದಲಾದವರ ಸಣ್ಣ ಕಥೆಗಳು ಇಲ್ಲಿವೆ. ಲೇಖಕರು ಈ ಕೃತಿಯನ್ನು 'ಕಾದಂಬರಿ ಮಾಲೆ' ಎಂಬುದಾಗಿ ಕರೆದಿದ್ದಾರೆ. ಇವೆಲ್ಲವೂ ಮಂಗಳೂರಿನ 'ಕಂಠೀರವ' ವಾರಪತ್ರಿಕೆಯಲ್ಲಿ ಹಾಗೂ ಉಡುಪಿಯ 'ಶ್ರೀಕೃಷ್ಣ ಸೂಕ್ತಿ' ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨ ಡಾ.ಹರಿಕೃಷ್ಣ ಭರಣ್ಯ ಸದಸ್ವಪ್ನ ಬುಕ್ ಹೌಸ್ ಬೆಂಗಳೂರು).

ಕತೆ: ಕಾದಂಬರಿಗಳು ಕೂಡಾ ನಿರೂಪಣೆಯೇ. ಚರಿತ್ರೆಯೆನ್ನುವುದು ಸತ್ಯದ ಕತೆಯಾದರೆ, ಕತೆಯು ಹೇಳುವ ಸತ್ಯ ನಿರೂಪಣೆಯ ಒಳಗೆ ಹುದುಗಿರುತ್ತದೆ. ಚರಿತ್ರೆಯ ನಿರೂಪಣೆಯ ರಚನೆಗೂ, ಕತೆಯು ಹೇಳುವ ನಿರೂಪಣೆಗೂ ಭಿನ್ನತೆಯಿದೆ. ಅಷ್ಟೆ ವ್ಯತ್ಯಾಸ!. ಆಗಿನ ಹೆಚ್ಚಿನ ಕಾದಂಬರಿಗಳು ಬೇರೆ ಬೇರೆ ಪ್ರಾದೇಶಿಕ ಚಾರಿತ್ರಿಕ ನಿರೂಪಣೆಯ ಭಾಗಗಳು. ಅವರ

ಮನಸ್ಸು ಕೂಡಾ ಆಧುನಿಕ ಚರಿತ್ರೆಯಿಂದ ಪ್ರೇರಿತವಾದುದು. ಅವರ ಆಲೋಚನೆಯ ಕ್ರಮ ನಿರ್ದಿಷ್ಟ ಕಾಲಕ್ಕೆ ಸಂಬಂಧಿಸಿದ್ದು. ಮೊದಮೊದಲಿನ ಕಾದಂಬರಿಗಳ ಗಂಭೀರ ಜೀವನ ದೃಷ್ಟಿಯೇ ಅನಂತರದ ಕಾದಂಬರಿಗಳಲ್ಲಿ ಅಂದರೆ ವಸಾಹತೋತ್ತರ ಸಂದರ್ಭದ ಸಾಮಾಜಿಕ ವಿಶ್ಲೇಷಣೆಗಳ ಕಾರಂತರ ಕಾದಂಬರಿಗಳು (ಅವು ವಾಸ್ತವದ ಹತ್ತಿರವಿರುವುದರಿಂದ) ವಸಾಹತುಶಾಹಿ ಚರಿತ್ರೆ; ವಸಾಹತೋತ್ತರ ಚರಿತ್ರೆ; ಜಮೀನುದಾರಿ ಪದ್ಧತಿಯ ಸಾಮಾಜಿಕ ಜೀವನದ ಚರಿತ್ರೆ: ಎರಡನೆಯ ಮಹಾಯುದ್ಧ ಮತ್ತು ಭಾರತೀಯ ಸಮಾಜ ಜೀವನದ ಮೇಲೆ ಅದರ ಪರಿಣಾಮ ಮುಂತಾದವುಗಳನ್ನು ವಿವರಿಸುತ್ತವೆ. ಕುತೂಹಲದ ಸಂಗತಿಯೆಂದರೆ ಕಾರಂತರು ಕಾದಂಬರಿಗಳಲ್ಲಿ ಕಾರ್ಯ–ಕಾರಣ ಸಂಬಂಧವನ್ನು ವಿವರಿಸುತ್ತಾರೆ. ಕಾರಣಗಳ ಹುಡುಕಾಟ ಕಾರಂತರ ಕಾದಂಬರಿಗಳ ಗುಟ್ಟು. ಪಶ್ಚಿಮದ ಪುನರುಜ್ಜೀವನ ಕಾಲಘಟ್ಟದ ಚಿಂತನೆಗೂ ಈ ತರಹದ ವಿಚಾರಧಾರೆಗೂ ಇರುವ ಸಂಬಂಧವನ್ನು ಗಮನಿಸಬೇಕು. ಇಂಗ್ಲಿಷ್ನಿಂದ ಮೊತ್ತಮೊದಲ ಬಾರಿಗೆ ಕನ್ನಡಕ್ಕೆ ಅನುವಾದಿತವಾದ ಕಾದಂಬರಿಯೆಂದರೆ "ಯಾತ್ರಿಕನ ಸಂಚಾರ." ೧೮೪೭ರಲ್ಲಿ ಆರ್. ವೈಗಲ್ ಎಂಬವರು ಇದನ್ನು ಅನುವಾದಿಸಿದ್ದಾರೆ. (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨ ಡಾ.ಹರಿಕೃಷ್ಣ ಭರಣ್ಯ ಸದಸ್ವಪ್ನ ಬುಕ್ ಹೌಸ್ ಬೆಂಗಳೂರು)

ಆಧುನಿಕ ಕಾಲದ ಚರಿತ್ರೆಯು ಅತ್ಯಂತ ಸಂಕೀರ್ಣವಾದುದು. ಹಾಗೆಯೇ ಆಧುನಿಕತೆ ಹುಟ್ಟುಹಾಕಿದ ಚರಿತ್ರೆಯಲ್ಲಿ ಬೇರೆ ಬೇರೆ ಮಾದರಿಯ ಕೌಶಲಗಳಿವೆ. ಬೇರೆ ಬೇರೆ ತಾತ್ವಿಕತೆಗಳಿವೆ. ಹಾಗೂ ವಸಾಹತುಶಾಹಿ ಸಂದರ್ಭದ ಚರಿತ್ರೆಗೆ ಭಾರತೀಯ ಚಿಂತನೆಯ ಕ್ರಮಗಳು ತೋರಿಸಿದ ಪ್ರತಿಕ್ರಿಯೆಗಳು ಕೂಡಾ ಬೇರೆ ಬೇರೆ. ಇಂದಿರಾಬಾಯಿ, ಮಾಡಿದುಣ್ಣೋ ಮಹಾರಾಯ, ಇಂದಿರೆ – ಈ ಮೂರೂ ಕಾದಂಬರಿಗಳಲ್ಲಿಯೂ ಲೇಖಕನಿಗೆ ಮಹತ್ವದ ಪಾತ್ರವಿರುವುದು ಸೂಚಕವಾಗಿದೆ. ರಾಷ್ಟ್ರೀಯತೆಯ ಸಮಸ್ಯೆಯೆನ್ನುವುದು ಒಂದೇ ಬಾಗಿಲಲ್ಲಿ ಹೊರಬಂದ ಪ್ರಕ್ರಿಯೆಗಳು ಎಂದು ಕರೆಯುವುದು ಕಷ್ಟ. ಬರಹಗಳು ಆ ಕಾಲದ ಸಾಂಸ್ಕೃತಿಕ ಪ್ರತಿಕ್ರಿಯೆಗಳಾದರೆ ರಾಜಕೀಯ ಚಟುವಟಿಕೆಗಳು ಬೇರೊಂದು ಪ್ರತಿಕ್ರಿಯೆಗಳು. ಬರಹವೆನ್ನುವುದು – ಅದು ಯಾವುದೇ ರೂಪದಲ್ಲಿರಲಿ ಅದಕ್ಕೆ ಆ ಸಂದರ್ಭದ ಮಹತ್ವಗಳು ಬೇರೆ. ಆಧುನಿಕಕಾಲದ ಕಾದಂಬರಿಗಳು ಈ ಅರ್ಥದಲ್ಲಿ ಲೌಕಿಕದ ಪುರಾಣಗಳೆಂದರೂ ಸರಿಯಾಗುತ್ತದೆ. ಕಾದಂಬರಿಗಳು ಆಗಮಿಕದ ಮಾದರಿಯವು ಅಲ್ಲ. ಆಗಿನ ಕೆಲವು ಕಾದಂಬರಿಗಳಲ್ಲಿ ಸಾಂಸ್ಕೃತಿಕ ಆಶಾವಾದವಿದೆ. ಭವಿಷ್ಯದ ಕುತೂಹಲವಿದೆ. ಮತ್ತು ಕೆಲವು ಕಾದಂಬರಿಗಳು ಜೀವನದ ಇತ್ಯಾತ್ಮಕವಾದ ಸುಖಾಂತದ ಭರವಸೆಗಳಿವೆ.

ಆಧುನಿಕ ಚರಿತ್ರೆಯೇ ಹೊಸ ಯುಗದ ಮಹತ್ವದ ಸಂಕೇತವಾಗಿದೆ. ಇದರಿಂದಾಗಿ ಹೊಸಯುಗದ ಚರಿತ್ರೆಯ ಒಂದು ಮುಖ ಸಾಂಸ್ಕೃತಿಕ ಪಲ್ಲಟ. ಈ ಪಲ್ಲಟದಲ್ಲಿ ಸುಶಿಕ್ಷಿತವರ್ಗದ ಆಶಾವಾದವಿದೆ. ವಸಾಹತುಯುಗದ ಆಧುನಿಕ; ಶಿಕ್ಷಣ; ಸಂವಹನ ಮಾಧ್ಯಮಗಳು; ಚಳುವಳಿ; ಹಳೆಯ ರಾಜಕೀಯ ಪರಂಪರೆಗಳ ನಾಶ; ನಾಗರಿಕತೆಯ ಉದಯ – ಇವುಗಳ ಬಳುವಳಿಯು ಸಾಮಾನ್ಯವಾದುದಲ್ಲ. ಹೊಸ ಯುಗದ ಈ ತರಹದ ಸಂವೇದನೆಯನ್ನು; ಅದು ಮಾಡುತ್ತಿರುವ ಅದಲು ಬದಲಾದ ಕ್ರಮವನ್ನು ಬುದ್ಧಿಜೀವಿಗಳು ಮತ್ತು ರಾಜಕೀಯ ಚಿಂತಕರು ಬೇರೆ

ಮಾದರಿಗಳಲ್ಲಿ ಅಭಿವ್ಯಕ್ತಿಸುವ ಪ್ರಯತ್ನವನ್ನು ಮಾಡಿದರು. ಜನರ ಮತ್ತು ಸಮಾಜದ ಅನುಭವ ಲೋಕವನ್ನು ಲೇಖಕರು ಬರಹ ಮೂಲಕ ಅನಾವರಣ ಮಾಡಿದರು. ಆಯಾ ಕಾಲದ ಸಾಮಾಜಿಕ ಅನುಭವವನ್ನು ಅವರು ವಿವರಿಸುತ್ತಾರೆ. ಮತ್ತು ಅದು ಪ್ರಾತಿನಿಧೀಕರಣದ ಪ್ರಕ್ರಿಯೆಗೆ ಗುರಿಯಾಗಿದೆ.

ಹೊಸ ಸಂದರ್ಭದಲ್ಲಿ ಮಧ್ಯಮವರ್ಗದ ಲೇಖಕರು ಆಗ ತಾನೇ ಹೊಸದಾಗಿ ಅರಿವಿಗೆ ಬಂದ ಮತ್ತು ಅವರು ನಿರ್ವಚಿಸಬೇಕಾದ ಸಂಗತಿಗಳ ಕುರಿತು ಬರಹಗಳ ದಾರಿಯಲ್ಲಿ ಆಗಬೇಕಿತ್ತು. ಕನ್ನಡದ ಉದಾಹರಣೆಯನ್ನೇ ತೆಗೆದುಕೊಂಡು ಹೇಳುವುದಾದರೆ ನಮ್ಮ ಆ ಕಾಲದ ಲೇಖಕರು ಬೇರೆ ಬೇರೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರು. ಅವರಿಗೆ ಅದು ಚಾರಿತ್ರಿಕ ಅನಿವಾರ್ಯತೆ ಕೂಡಾ. ರಾಜಕೀಯ ಮತ್ತು ತತ್ವಜ್ಞಾನ; ರಾಜಕಾರಣ ಮತ್ತು ನಾಡಿನ ಪರಿಸ್ಥಿತಿ; ನಾಡಿನ ಆದರ್ಶ ಮತ್ತು ಚಟುವಟಿಕೆ – ಹೀಗೆ ಪ್ರಭೇದಗಳಿಲ್ಲದೆ ಬರಹಗಾರರು ಬರಹಗಳನ್ನು ಮತ್ತು ಚಳುವಳಿಯನ್ನು ಒಂದು ಅಂಗುಲದಲ್ಲಿ ನೋಡಿದ ಪ್ರಯತ್ನ ಬಹಳ ಮುಖ್ಯವಾದುದು. ಚಾರಿತ್ರಿಕವಾಗಿಯೂ ಈ ಲೇಖಕರು ಬರಹಗಳನ್ನು ಕೂಡಾ ರಾಜಕೀಯ ಚಟುವಟಿಕೆಯ ಅಂತಸ್ಥ ಪ್ರಣಾಲಿಯನ್ನು ಇಟ್ಟುಕೊಂಡಿದ್ದಾರೆ.

೧೮೯೮ರಲ್ಲಿ ಮರಾಠಿಯಲ್ಲಿ ರಚಿಸಲಾದ ಅಣಿ ಮಾಧವ (ಕಾಶೀನಾಥ ರಘುನಾಥ ಮಿತ್ರ)ವನ್ನು ಬೆನಗಲ್ ರಾಮರಾಯರು 'ರಮಾ ಮಾಧವ' ಎಂಬುದಾಗಿ ಅನುವಾದಿಸಿದರು. ಇದು ೧೯೦೦ರಲ್ಲಿ ಸುವಾಸಿನಿ (ಮಂಗಳೂರು) ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ಮುಂದೆ ಚಿಕ್ಕಪುಟ್ಟ ತಿದ್ದುಪಡಿ ಗಳೊಂದಿಗೆ ೧೯೧೫ರಲ್ಲಿ ಪುಸ್ತಕ ರೂಪವಾಗಿ ಪ್ರಕಟವಾಯಿತು. (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨೨ ಡಾ.ಹರಿಕೃಷ್ಣ ಭರಣ್ಯ ಸದಸ್ವಪ್ನ ಬುಕ್ ಹೌಸ್ ಬೆಂಗಳೂರು).

ವಸಾಹತುಶಾಹಿ ರಾಷ್ಟ್ರಗಳಲ್ಲಿಯೂ ಇದರ ಪರಿಸ್ಥಿತಿಯು ತುಂಬಾ ಭಿನ್ನವಾದುದಲ್ಲ. ಇಂಗ್ಲೀಷ್ ಶಿಕ್ಷಣ; ಉದಯವಾದ ನವ ಶಿಕ್ಷಿತ ವರ್ಗ; ಮುದ್ರಣ ತಂತ್ರಜ್ಞಾನ ಮುಂತಾದರ ದೆಸೆಯಿಂದ ವಸಾಹತುಶಾಹಿ ರಾಷ್ಟ್ರಗಳಲ್ಲಿಯೂ ಕಾದಂಬರಿಯ ಉಗಮಕ್ಕೆ ಬೇಕಾದ ಭೂಮಿಕೆಯು ಸಿದ್ಧವಾಯಿತು. ವಸಾಹತುಶಾಹಿ ಅನುಭವದ ಸಂದರ್ಭದಲ್ಲಿಯೂ "ಲೇಖಕರ" ಸ್ಥಾನಮಾನ ಮತ್ತು "ಓದುಗರ ಸ್ಥಾನಮಾನ"ವು ಬೇರೆಯಾಯಿತು. ಲೇಖಕರು ಹೊಸ ಸಾಮಾಜಿಕ ಸನ್ನಿವೇಶದಲ್ಲಿ ಹೊಸ ರೀತಿಯ ಬರಹ ಮುಖೇನದ ಪ್ರದರ್ಶಕರಾದರು. ಹೊಸ ಸನ್ನಿವೇಶ ಮತ್ತು ಹೊಸ ನಿರ್ವಹಣೆಯು ಇಂಗ್ಲೀಷ್ ಶಿಕ್ಷಣದ ಅನುಕರಣೆಯಿಂದ ಬಂತು. ವಸಾಹತುಶಾಹಿ ಅನುಭವ ಮತ್ತು ಅದರ ಪರಿಣಾಮಗಳ ಕಡೆಗೆ ಲೇಖಕರು ಗಮನ ನೀಡಬೇಕಾಗಿ ಬಂದುದರಿಂದ ಕಾದಂಬರಿಯ ಉಗಮವಾಯಿತು. ಹೊಸ ಭಾವ ಮತ್ತು ಹೊಸ ರೂಪಗಳ ಅಗತ್ಯ ಒಂದು ಬೌದ್ಧಿಕ ಅವಶ್ಯಕತೆಯೂ ಹೌದು. ಸಾಹಿತ್ಯದ ನಿರ್ವಚನ ಮತ್ತು ಅದರ ಅಗತ್ಯವು ವಸಾಹತುಶಾಹಿ ಅನುಭವಕ್ಕೆ ಒಳಗಾದ ಸನ್ನಿವೇಶದಲ್ಲಿ ಅತ್ಯಂತ ಸಂಕೀರ್ಣವಾದ ಸಮಸ್ಯೆಗಳನ್ನು ಒಳಗೊಂಡಿತ್ತು. ವಸಾಹತುಶಾಹಿ ಅನುಭವಕ್ಕಿಂತ ಪೂರ್ವದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದ ಸಾಹಿತ್ಯ ರೂಪಗಳು

ಹೊಸ ಶಿಕ್ಷಣ ನೀತಿಯ ಕಾರಣದಿಂದ ಸ್ವಲ್ಪಮಟ್ಟಿಗೆ ಮೂಲೆ ಗುಂಪಾಗತೊಡಗಿದವು. ಮಹಾಕಾವ್ಯದ ಪರಂಪರೆಯೊಂದು ಕಾಣೆಯಾಯಿತು. ಕಾದಂಬರಿಯು ಆ ಜಾಗವನ್ನು ತುಂಬತೊಡಗಿತು. ಕಾದಂಬರಿಯೆಂಬ ಸಾಹಿತ್ಯ ಪ್ರಕಾರವು ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿಯೂ ಕಾಣಿಸತೊಡಗಿತು. ವಿಶೇಷವೆಂದರೆ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಕಾಣಿಸಿಕೊಂಡ ಕಾದಂಬರಿಗಳಲ್ಲಿಯೂ ವಸಾಹತುಶಾಹಿ ಅನುಭವದ ಕುರಿತು ವಿಶಿಷ್ಟ ಚಿಂತನೆಗಳಿವೆ. ಎರಡನೆಯದಾಗಿ ಭಾರತದಲ್ಲಿ ಬಂದ ಮೊದಮೊದಲಿನ ಕಾದಂಬರಿಗಳು ವಸಾಹತುಶಾಹಿಯುಗವು ತಂದುಕೊಟ್ಟ ಮೌಲ್ಯಗಳು ಮತ್ತು ಹಳೆಯ ಸಾಂಪ್ರದಾಯಿಕ ಸಮಾಜದ ವಿದಾಯದ ಕುರಿತು ಪರಿಕಲ್ಪನಾತ್ಮಕವಾಗಿ ಮಾತಾಡುತ್ತವೆ. ಮೂರನೆಯದಾಗಿ ಎಲ್ಲಾ ಕಾದಂಬರಿಗಳು ಒಂದಲ್ಲ ಒಂದು ಅರ್ಥದಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಪ್ರತಿಪಾದಿಸುತ್ತವೆ.

ಕಾದಂಬರಿ ವಸಾಹತು ರಾಷ್ಟ್ರ ಕಲ್ಪನೆಯ ಒಡಹುಟ್ಟಿರುವುದು ಮಾತ್ರವಲ್ಲ ಅದನ್ನು ನಿರೂಪಿಸುವ ಕಥನ ರೂಪ ಕೂಡ, ಸಂರಚನಾತ್ಮಕವಾಗಿ ಅದು ರಾಷ್ಟ್ರವನ್ನು ಹೋಲುವ ರಚನೆ, ರಾಷ್ಟ್ರದ ಗಡಿರೇಖೆಗಳು, ಜೊತೆಗೂಡಿ ಬದುಕುವ ಜನ ಮತ್ತು ಸಮುದಾಯಗಳು, ರಾಷ್ಟ್ರದ ಚರಿತ್ರೆ, ಅದರ ಅಭೂತಪೂರ್ವ ಸುವರ್ಣಯುಗ, ಬಹುಭಾಷಿತ್ವ ಮೊದಲಾದವುಗಳನ್ನು ಕಾದಂಬರಿಯೂ ಒಳಗೊಂಡಿದೆ. ಕಾದಂಬರಿಯಲ್ಲಿ ಕಾಣಿಸುವುದು ಅನೇಕ ದನಿಗಳು ಮತ್ತು ಸಂವಾದಗಳು ಹಾಗೂ ಪರಂಪರೆ ಮತ್ತು ಶೈಲಿಗಳು. ಭಕ್ತಿನ್‌ನ ಈಗಾಗಲೇ ಉಲ್ಲೇಖಿಸಿದ ಬಹುಭಾಷಿತ್ವ ಕಾದಂಬರಿಯ ಪ್ರಧಾನ ಲಕ್ಷಣ. ಇಂಗ್ಲಿಷ್ನಿಂದ ಮೊತ್ತಮೊದಲು ಅನುವಾದಿತವಾದ ಕೃತಿ 'ಯಾತ್ರಿಕನ ಸಂಚಾರ'(೧೮೪೭)ದ ಅನಂತರ ೧೮೫೪ರಲ್ಲಿ ರಾಬಿನ್ಸನ್ ಕ್ರೂಸೋ ವೃತ್ತಾಂತಗಳ ಅನುವಾದವಾಯಿತು. ನಾಟಕಗಳು ೧೮೭೦-೮೦ರಿಂದ ಈಚೆಗೆ ಅನುವಾದವಾಗಲು ತೊಡಗಿದವು. ಕಾದಂಬರಿಗೆ ಪಾಶ್ಚಾತ್ಯ ಪ್ರಭಾವವು ತಡವಾಗಿ ಬಂದಿದೆ. ಕನ್ನಡ ಸಾಹಿತ್ಯಕ್ಕೆ ಪಾಶ್ಚಾತ್ಯ ಪ್ರಭಾವವು ತಟ್ಟುವ ಮೊದಲೇ ಮೂರು ಕಾದಂಬರಿಯಂಥಾ ರಚನೆಗಳು ಬಂದಿವೆ. ಇವುಗಳಲ್ಲಿ ೧೮೧೫ರಲ್ಲಿ ರಚಿಸಲಾದ ಯಾದವನ 'ಕಲಾವತಿ ಪರಿಣಯ'ವು ಮೊದಲನೆಯದು. ಇದು ವಚನ ಪ್ರಬಂಧವೆಂಬುದಾಗಿ ನಮೂದಿತ ವಾಗಿದೆ. ಗೋವಿಂದ ಪೈಗಳು ಇದನ್ನು ಕನ್ನಡದ ಆರಂಭದ ಕಾದಂಬರಿ ಎಂದು ಕರೆದಿದ್ದಾರೆ. (ನೋ: ಕ.ಹ.ಕಂ. ಪು: ೮೮) (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨೨ ಡಾ.ಹರಿಕೃಷ್ಣ ಭರಣ್ಯ ಸದಸ್ವಪ್ನ ಬುಕ್ ಹೌಸ್ ಬೆಂಗಳೂರು).

ಎರಡನೆಯದಾಗಿ ಕಾದಂಬರಿ ಮುಂದಿಡುವುದು ಸಂಯುಕ್ತ ಸಂಸ್ಕೃತಿಯನ್ನು ಶ್ರೇಣೀಕೃತ ಸಮಾಜದ ಉನ್ನತ ಮತ್ತು ಸಾಮಾನ್ಯರನ್ನು ಅದು ಒಂದೆಡೆಗೆ ತರುತ್ತದೆ. ಅವರ ಜೀವನ ಶೈಲಿ, ಭಾಷೆಯ ಶೈಲಿಗಳು ಕಾದಂಬರಿಯಲ್ಲಿ ಜೊತೆಯಾಗಿ ಅನುಸಂಧಾನಿಸುತ್ತವೆ, ಹೀಗೆ ಅನುಸಂಧಾನಿಸಿಯೂ ತಮ್ಮ ಅಂತರ ಉಳಿಸಿಕೊಳ್ಳುತ್ತವೆ. ವಿಕ್ರಮಾರ್ಕ ಪುರಾಣಗಳನ್ನನುಸರಿಸಿಕೊಂಡು ರಚಿಸಲಾದ ಕೆಲವೊಂದು ಕೃತಿಗಳು ಹೊಸ ಗನ್ನಡದಲ್ಲಿ ಬಂದಿವೆ. ಇವುಗಳಲ್ಲಿ ಮೊದಲನೆಯದು ೧೮೭೪ರಲ್ಲಿ ಜೆ, ಸೀತಾರಾಮ ಶಾಸ್ತ್ರಿಗಳು ರಚಿಸಿದ “ವಿಕ್ರಮಾರ್ಕ ಚರಿತ್ರೆ' ಎಂಬ ಪೌರಾಣಿಕಕೃತಿ. (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨ ಡಾ.ಹರಿಕೃಷ್ಣ ಭರಣ್ಯ ಸದಸ್ವಪ್ನ ಬುಕ್ ಹೌಸ್ ಬೆಂಗಳೂರು)

ಕಾಲದ ದೃಷ್ಟಿಯಿಂದಲೂ ಕಾದಂಬರಿ ಮತ್ತು ರಾಷ್ಟ್ರಗಳ ನಡುವೆ ಸಾಮ್ಯವಿದೆ. ರಾಷ್ಟ್ರ ಕಾದಂಬರಿ ಎರಡಕ್ಕೂ ಆಧುನಿಕ ಮನುಷ್ಯ ಮತ್ತು ಕಾಲಾನುಕ್ರಮವಾದ ಕೆಲೆಂಡರ್ ಸಮಯವೆನ್ನುವುದು ಮುಖ್ಯ. ಒಂದು ಸಮುದಾಯವು ಸರಳ ರೇಖಾತ್ಮಕವಾದ ಕಾಲದಲ್ಲಿ ಮುಂದುವರಿಯುತ್ತಾ ಉನ್ನತಿ, ಅವನತಿಯನ್ನು ಹೊಂದುವುದನ್ನು ಕಾದಂಬರಿ ಚಿತ್ರಿಸುತ್ತದೆ. ಐತಿಹಾಸಿಕ ಕಾದಂಬರಿಗಳನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ೧೯(ವಿವರಗಳಿಗೆ ನೋಡಿ: ಶಿವರಾಮ ಪಡಿಕ್ಕಲ್ – ನಾಡು ನುಡಿಯ ರೂಪಕ ಪುಟ, ೪೫)

ಆಗಿನ ಲೇಖಕರು ಕಾದಂಬರಿಗಳನ್ನು ಬರೆಯಲು ತೊಡಗಿರುವ ಚಾರಿತ್ರಿಕ ಕಾಲವು ಕನ್ನಡದ ಮಟ್ಟಿಗೆ ಮಹತ್ವಪೂರ್ಣವಾದುದು. ಕನ್ನಡದಲ್ಲಿ ಇವರಿಬ್ಬರು ಬರೆಯಲು ಪ್ರಾರಂಭಿಸಬೇಕಾದ ಮೊದಲು ಗಳಗನಾಥ; ಎಂ.ಎಸ್. ಪುಟ್ಟಣ್ಣ; ಗುಲ್ವಾಡಿ ವೆಂಕಟರಾಯ, ತಿರುಮಲಾಂಬಾ, ಕಾರಂತ, ಕುವೆಂಪು ಮುಂತಾದವರು ಬರೆಯಲು ಪ್ರಾರಂಭಿಸಿಯಾಗಿತ್ತು. ಕಾದಂಬರಿಗಳನ್ನು ಓದುವ ರುಚಿಯು ಓದುಗರಿಗೆ ದೊರಕಿತ್ತು. ಆ ಮೂಲಕ ಪರಿವರ್ತನೆಗೆ ಒಳಗಾಗಿರುವ ಮತ್ತು ಒಳಗಾಗುತ್ತಲೇ ಇರುವ ಜೀವನದ ಚಿತ್ರಣವು ಅವರ ಕಾದಂಬರಿಗಳಲ್ಲಿ ಕಾಣಿಸುತ್ತದೆ.

೧೯೨೮ರಲ್ಲಿ ಮಾಸ್ತಿರವರ 'ಚಿಕವೀರರಾಜೇಂದ್ರ' ಕಾರಂತರ 'ದೇವದೂತರು' ಪ್ರಕಟವಾದವು. ೧೯೨೧ ಕಾರಂತರ ಮರಳು ಮಣ್ಣಿಗೆ, ಬೆಟಗೇರಿಕೃಷ್ಣ ಶರ್ಮರ 'ಸುದರ್ಶನ' ಪ್ರಕಟಗೊಂಡವು. ೧೯೨೪ರಲ್ಲಿ ರಂ.ಶ್ರೀ ಮುಗುಳಿರವರು ಬಾಳುರಿ, ಅನಕೃರವರ 'ಜೀವನಯಾತ್ರೆ' ಮತ್ತು 'ಉದಯರಾಗ' ೧೯೩೫ರಲ್ಲಿ ಗೋಕಾಕ್ರ 'ಇಜ್ಜೋಡು' ಜಡಭರತರ 'ಧರ್ಮಸೆರೆ' ಅನಕೃರವರ 'ಸಂಧ್ಯಾರಾಗ' ಮತ್ತು ಆನಂದಕಂದರ 'ರಾಜಯೋಗಿ' ಪ್ರಕಟವಾದವು. ಇದಲ್ಲದೇ ಶ್ರೀನಿವಾಸರ 'ಸುಬ್ಬಣ್ಣ' ಕಾರಂತರ 'ಬೆಟ್ಟದ ಜೀವ' 'ಹೆತ್ತಾಳತಾಯಿ' ನಾಕಸ್ತೂರಿರವರ 'ಚಕ್ರದೃಷ್ಟಿ ವಿ.ಎಂ' ಇನಾಂದಾರರ 'ಎರಡುದೃವ' ನವೋದಯ ಸಾಹಿತ್ಯದಲ್ಲಿ ಹೆಸರಿಸಲೇಬೇಕಾದ ಕಾದಂಬರಿಗಳು. (೧೯೦೦ರಲ್ಲಿ ಪಂಜೆಯವರು ರಚಿಸಿದ 'ನನ್ನ ಚಿಕ್ಕ ತಾಯಿ'ಯು ಹೊಸ ಗನ್ನಡದ ಮೊದಲ ಸಣ್ಣ ಕಥೆಯಾಗಿದೆ. (ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ೨೦೨ ಡಾ.ಹರಿಕೃಷ್ಣ ಭರಣ್ಯ ಸ್ವಪ್ನ ಬುಕ್ ಹೌಸ್ ಬೆಂಗಳೂರು).

ನವೋದಯ ಸಾಹಿತ್ಯದ ಕಾದಂಬರಿಯಲ್ಲಿ ಗಾಢ ಪ್ರಭಾವ ಬೀರಿದವರು ಕಾರಂತರು, ಇವರ ನವೋದಯ ಸಾಹಿತ್ಯದ ಪ್ರಮುಖ ಲಕ್ಷಣವಾದ ಭಾವುಕತೆಯನ್ನು ಮೀರಿ ಬರೆದವರು. "ಮರಳಿಮಣ್ಣಿಗೆ" ಕಾದಂಬರಿ ಮೂರು ತಲೆಮಾರುಗಳ ಜೀವನವನ್ನು ಒಳಗೊಂಡಿದ್ದಾಗಿರುತ್ತೆ. ನಿಸರ್ಗ ಕಾದಂಬರಿಯ ಜೀವಂತ ಭಾಗವಾಗಿದೆ. ಯಾವುದೇ ತತ್ವ, ನೀತಿ ಬೋಧನೆಗಳು ಇಲ್ಲಿಲ್ಲ. ಪಾತ್ರಗಳು ತಾವಾಗಿಯೇ ಬೆಳೆದು ತಮ್ಮ ವ್ಯಕ್ತಿತ್ವವನ್ನು ತೋರಿಸಿಕೊಂಡತಿವೆ.

ಕಾರಂತರ ಕಾದಂಬರಿಗಳೆಲ್ಲಾ ಅನುಭವದ ಆಧಾರದಿಂದ ಮೂಡಿವೆ. ಅವರ ಬರಹದಲ್ಲಿ ಆವೇಶವಿಲ್ಲ, ನೈಜತೆಗೆ ತೀರಾ ಸಮೀಪವಾದ ಜೀವಂತಿಕೆಯಿಂದ ತುಂಬಿದ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಅವರದು ಬಹಳ ಕ್ಲಿಷ್ಟಕರವಾದ ಮಾರ್ಗದ ಆದಿಯ ಬರವಣಿಗೆ. ಆಗಾಗಿ

ಇವರನ್ನು ಹಿಂಬಾಲಿಸಿದ ಕಾದಂಬರಿಕಾರರು ಬಹಳ ವಿರಳ. ಅವರಲ್ಲಿದ್ದ ಸಂಯಮ, ಗಟ್ಟಿ ಅನುಭವ, ತಂತ್ರಗಾರಿಕೆ, ಅಪರಿಮಿತ ಜ್ಞಾನ ಅವರಿಗಷ್ಟೇ ಸೀಮಿತ, ಕಾವ್ಯದಲ್ಲಿ ಬೇಂದ್ರೆ, ಕುವೆಂಪು ಹೆಸರಾದಂತೆ ಕಾದಂಬರಿ ಕ್ಷೇತ್ರದಲ್ಲಿ ಕಾರಂತರು ಹೆಸರಾಗಿದ್ದಾರೆ.

ತಿರುಮಲಾಂಬಾ ಅವರು ಕಾದಂಬರಿ: ಕಾವ್ಯ: ಲೇಖನ, ಸಂಪಾದಕೀಯ – ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ತಮ್ಮ ಬರವಣಿಗೆಯನ್ನು ಸಾಧಿಸಿದ್ದರು. ಅವರು ಮೊದಲು ಬರೆದುದು ಕಾವ್ಯವನ್ನೇ ಆದರೂ ಅವರಿಗೆ ಹೆಚ್ಚಿನ ಜನಪ್ರಿಯತೆಯನ್ನು ತಂದುಕೊಟ್ಟಿದ್ದು, ಕಾದಂಬರಿಗಳು ಅವರ 'ಸುಶೀಲೆ' ಕಾದಂಬರಿಯು ೧೯೧೩ರಲ್ಲಿ ಪ್ರಕಟವಾಯಿತು. ಆದರೆ ಇದಕ್ಕಿಂತ ಮೊದಲು 'ನಭಾ', 'ವಿದ್ಯುಲ್ಲತಾ' ಮತ್ತು 'ವಿರಾಗಿಣಿ' ಕಾದಂಬರಿಗಳನ್ನು ಬರೆದಿದ್ದರು. ಸಂದರ್ಶನವೊಂದರಲ್ಲಿ ತಿರುಮಲಾಂಬಾ ಅವರು ಹೀಗೆ ಹೇಳಿಕೊಂಡಿದ್ದಾರೆ. 'ನಾನು ಮೊದಲು ಬರೆದ ಪುಸ್ತಕವು ಮೇಲೆ ಹೇಳಿರುವಂತೆ ನಭಾ, ವಿದ್ಯಲ್ಲತಾ, ವಿರಾಗಿಣಿ, ಆದರೆ ಮೊದಲು ಪ್ರಕಟವಾದುದು ಸುಶೀಲೆ ಎಂಬ ಸಾಂಸಾರಿಕ ಚಿಕ್ಕ ಕಾದಂಬರಿ. ೧೯೧೩ ಅಕ್ಟೋಬರ್ – ನವೆಂಬರ್‌ನಲ್ಲಿ ಇದು ಪ್ರಕಟವಾಯಿತು. 'ಅವರು ಮತ್ತೊಂದು ಕಡೆ ಈ ರೀತಿಯಾಗಿ ಹೇಳಿಕೊಂಡಿದ್ದಾರೆ'. ಆದುವರೆಗೆ ಬರೆದಿರಿಸಿದ್ದ ನಭಾ, ವಿದ್ಯುಲ್ಲತಾ, ವಿರಾಗಿಣಿ, ಲೇಖನಗಳನ್ನು ತೋರಿಸಲು ಅವರದನ್ನು ನೋಡಿ (ಪ್ರಕಾಶಕರು) ಗ್ರಂಥಮೂಲೆಯಲ್ಲಿ ಪ್ರಥಮತ; ಶೋಕ ಪ್ರಧಾನವಾದ ಗ್ರಂಥಗಳು ಬೇಡ ಮುಂದೆ ಅವನ್ನು ಪ್ರಕಟಿಸಬಹುದು. ಮೊದಲು ಸುಲಭ ಶೈಲಿಯಲ್ಲಿ ಸಣ್ಣದೊಂದು ಸಾಂಸಾರಿಕ ಚಿತ್ರವನ್ನೊಳಗೊಂಡ ಕಾದಂಬರಿಯನ್ನು ಬರೆದಿದ್ದರೆ ತೋರಿಸಿರಿ ಎಂದರು. ತಿರುಮಲಾಂಬ ಅವರು ಬರೆಯಲು ಪ್ರಾರಂಭಿಸಿದ್ದು ವಸಾಹತು ಶಾಹಿ ಅನುಭವದ ಸಂದರ್ಭದಲ್ಲಿ. ಅವರ ಮೊದಲ ಕಾದಂಬರಿಯು ಪ್ರಕಟವಾದುದು ೧೯೧೩ರಲ್ಲಿ. ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಪ್ರಕಾಶನ ಸಂಸ್ಥೆಯು ೧೯೪೮ರಲ್ಲಿ ಸ್ಥಗಿತವಾಯಿತು. ಅವರ ಮಾಣಿ ಮಾಲಾ ಕೃತಿಯು ೧೯೩೯ರಲ್ಲಿ ಪ್ರಕಟವಾಯಿತು. ಅಂದರೆ ತಿರುಮಲಾಂಬ ಅವರ ಸಾಹಿತ್ಯ ಕೃಷಿಯು ಪ್ರಾರಂಭವಾದುದು ಅವರ ಮಹತ್ವದ ಕೃತಿಗಳು ಪ್ರಕಟವಾದುದು ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ. ಸ್ವಾತಂತ್ರ್ಯ ಪೂರ್ವದ ಕಥನಗಳ ಪರಂಪರೆಯ ದೃಷ್ಟಿಯಿಂದ ತಿರುಮಲಾಂಬ ಅವರ ಬರವಣಿಗೆಯು ಮಹತ್ವದ ಕೊಡುಗೆಯಾಗಿದೆ. ಹಾಗೆ ನೋಡಿದರೆ ನಮಗೆ ಲೇಖಕಿಯರ ಬರಹಗಳು ಮತ್ತು ಅವರ ವಾದಗಳು ತಿರುಮಲಾಂಬ ಬರೆಯುವಾಗ ತುಂಬಾ ಭಿನ್ನ ಎಂದು ಅನಿಸಿತ್ತು. ತಿರುಮಲಾಂಬ ಬರೆಯುವಾಗ ನಮಗೆ ಸ್ವಾತಂತ್ರ್ಯವು ಬಂದಿರಲಿಲ್ಲ. ಆದ್ದರಿಂದ ಮಹಿಳೆ ಮತ್ತು ಅವಳ ಸಮಸ್ಯೆ ಎನ್ನುವುದಕ್ಕೆ ವಿವಿಧ ಮುಖಗಳು ಇದ್ದವು. ಅದನ್ನು ವಿವಿಧ ಮಾದರಿಯ ವಸಾಹತು ಎಂದು ಎಂದು ಕರೆದರೂ ಸರಿಯಾಗುತ್ತದೆ. ಇದನ್ನು ಅನ್ಯತೆ ಎಂದೂ ಕರೆಯುತ್ತಾರೆ. ಜಾತಿ, ಕುಲ, ಮಹಾನ್ ಯಜಮಾನಿಕೆ ಮತ್ತು ಕೌಟುಂಬಿಕ ಯಜಮಾನಿಕೆ ಎಂದು ಹೇಳುತ್ತಾರೆ.

ವಸಾಹತು ದೇಶಗಳಲ್ಲಿ ಯಜಮಾನಿಕೆ ಎನ್ನುವುದು ವಿವಿಧ ಅರ್ಥಗಳು ಇವೆ ಎನ್ನುವುದು ನಿಜ. ಹೆಣ್ಣು ಅಂಚಿಗೆ ತಳ್ಳಲ್ಪಟ್ಟಿದ್ದಾಳೆ ಎನ್ನುವುದು ಕೂಡಾ ಒಂದು ಮಹತ್ವದ ಪ್ರಶ್ನೆ. ವಸಾಹತು ದೇಶಗಳಲ್ಲಿ ಯಜಮಾನಿಕೆ ಎನ್ನುವುದು ಪ್ರಭುತ್ವ ಮತ್ತು ಅದರ ವಿವಿಧ ರೂಪಗಳನ್ನು ಹೇಳುತ್ತದೆ.

ಅದರ ನಿಯಮಗಳು ಕೂಡಾ ಬೇರೆಯಾಗುತ್ತದೆ. ನಿರ್ವಹಾಸತೀಕರಣ ಎನ್ನುವುದು ಕೂಡಾ ಏಕ ಮುಖವಾದ್ದು ಅಲ್ಲ ಎನ್ನುವುದು ಇಲ್ಲಿ ಉಲ್ಲೇಖನೀಯ. ಸ್ತ್ರೀವಾದ ಎನ್ನುವುದು ಒಂದು ಬಗೆಯಲ್ಲಿ ವಿಕಾಸವೂ ಹೌದು. ಮತ್ತೊಂದು ಕಡೆಯಲ್ಲಿ ಅದು ಚರಿತ್ರೆಯ ಪ್ರಶ್ನೆಯೂ ಹೌದು. ಅದು ಒಂದು ಎಚ್ಚರಿಕೆಯ ಪ್ರಶ್ನೆಯೂ ಆಗಿತ್ತು. ಆ ವಿಚಾರವನ್ನು ಕುರಿತು ಹೇಳುವಾಗ ಬಹಳ ಎಚ್ಚರವನ್ನು ವಹಿಸಬೇಕಾಗುತ್ತದೆ. ತಿರುಮಾಲಂಬ ಮತ್ತು ಇತರ ಲೇಖಕಿಯರು ಬರೆದಿರುವುದು ಒಂದು ಮಹತ್ವದ ಪ್ರಶ್ನೆಯು ಆಗಿತ್ತು. ಅದು ಸಮಾಜವನ್ನು ಹೇಳಿದರೆ ಅದರ ಜೊತೆಗೆ ಅದು ಸಂಸ್ಕೃತಿಯು ಬದಲಾಗುತ್ತದೆ ಎನ್ನುವುದನ್ನು ಹೇಳಿತ್ತು. ತಿರುಮಲಾಂಬ ಬರೆದಿರುವುದು ನಮ್ಮ ಸಮಾಜವನ್ನು ಕುರಿತು ಎನ್ನುವುದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿರುವುದು ಅತ್ಯಂತ ಅಗತ್ಯ. ಅವರು ಇಂಗ್ಲೆಂಡಿನಲ್ಲಿ ಇದ್ದಿರಲಿಲ್ಲ. ಅದರ ಬದಲು ಅವರು ಇದ್ದುದು ನಂಜನ ಗೂಡಿನಲ್ಲಿ ಎನ್ನುವುದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅವರು ಬರೆದಿರುವುದಕ್ಕೆ ಒಂದು ಸಾಂಸ್ಕೃತಿಕವಾದ ಮೌಲ್ಯವು ಇದೆ. ತಾತ್ವಿಕವಾದ ಆಯಾಮವೂ ಇದೆ. ಅವರ ಬರಹಗಳು ಸಾಂಸ್ಕೃತಿಕವಾದ ಮೌಲ್ಯವನ್ನು ಮಾತ್ರವೇ ಹೇಳುತ್ತದೆ ಎಂದು ಭಾವಿಸಬಾರದು. ಯಾವುದನ್ನು ನಾವು ಈವತ್ತು ವಸಾಹತು ಪ್ರಶ್ನೆ ಎಂದು ಹೇಳುತ್ತೇವೆಯೋ ಅದರ ಸ್ವರೂಪವು ಬೇರೆಯಾಗಿರುತ್ತದೆ. ನಮಗೆಲ್ಲಾ ತಿಳಿರುವಂತೆ ವಸಾಹತು ಆಡಳಿತವು ತನಗೆ ಬೇಕಾದ ಸಂಸ್ಥೆಗಳನ್ನು ಹುಟ್ಟು ಹಾಕಿದ್ದು ಸತ್ಯ. ಅದರಲ್ಲಿ ಶಿಕ್ಷಣವೂ ಸೇರಿದೆ.

ವಸಾಹತು ಕಾಲದ ಲೇಖಕರು ಮತ್ತು ಲೇಖಕಿಯವರು ಪ್ರಭುತ್ವವನ್ನು ನೋಡಿದ ಕ್ರಮಗಳು ಬೇರೆ. ಅದನ್ನು ಅನೇಕ ಲೇಖಕಿಯರು ಹೇಳುತ್ತಾರೆ ಎನ್ನುವುದು ಇಲ್ಲಿ ಉಲ್ಲೇಖನೀಯ. ಲೇಖಕಿಯರು ದ್ವಿ ರೂಪದ ಪ್ರಭುತ್ವಕ್ಕೆ ಗುರಿಯಾಗಬೇಕಾಯಿತು. ಬರೆಯುವುದೆ ಅತ್ಯಂತ ಕಷ್ಟ ಎನ್ನುವುದ ದಿನಗಳಲ್ಲಿ ತಿರುಮಲಾಂಬ ಬರೆದರು ಎನ್ನುವುದು ಇಲ್ಲಿ ಅತ್ಯಂತ ಮಹತ್ವದ ಪ್ರಶ್ನೆಯೂ ಹೌದು. ಭಾರತದಲ್ಲಿ ಸ್ತ್ರೀಯರು ಸಂಪ್ರದಾಯವನ್ನು ಹೊಂದಿದ್ದಾರೆ. ಅದನ್ನು ರೂಪಿಸಲಾಗಿದೆ. ಅದು ಅವರನ್ನು ನಿಯಂತ್ರಣ ಮಾಡಿದೆ ಎನ್ನುವುದು ಕೂಡಾ ಸತ್ಯ. ಭಾರತದಲ್ಲಿ ಕುಟುಂಬ ಎನ್ನುವುದಕ್ಕೆ ಒಂದು ಮಾನ್ಯತೆಯು ಇದೆ. ಅದನ್ನು ಅವರು ಹೇಳುತ್ತಿದ್ದಾರೆ. ಅದರ ಜೊತೆಗೆ ಭಾರತೀಯ ಸಂಪ್ರದಾಯವನ್ನು ನಾವು ಬೇರೆ ಥರ ನೋಡಬೇಕಾಗುತ್ತದೆ. ಜಾತಿ ಮತ್ತು ಜನಾಂಗವು ನಮ್ಮನ್ನು ನಿಯಂತ್ರಣ ಮಾಡಿದೆ. ನಾವು ಅದನ್ನು ಒಪ್ಪಿದ್ದೇವೆ ಹೀಗೆ ಅದನ್ನು ಒಪ್ಪುವಾಗ ನಮಗೆ ಅದರ ಬಗ್ಗೆ ಒಂದು ವಿಮರ್ಶಾತ್ಮಕವಾದ ಎಚ್ಚರವು ಇತ್ತು ಎಂದು ಹೇಳಲಾಗುವುದಿಲ್ಲ. ನಾವು ಅದನ್ನು ಮರು ಪರಿಶೀಲನೆ ಮಾಡಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಭಾರತದಲ್ಲಿ ಸಂಪ್ರದಾಯವನ್ನು ನೋಡುವಾಗ ಅದರ ಬಗ್ಗೆ ನಮಗೆ ಇದ್ದ ಅರಿವು ಬೇರೆ ಮಾದರಿಯದು. ಗಂಡಸರು ಹೀಗೆ ಇರುವುದು ಸರಿ ಎನ್ನುವುದು ಒಂದು ನಿಲುವು ಕೂಡಾ ಆಗಿತ್ತು. ಉದಾಹರಣೆಗೆ ಭಾರತದ ಬ್ರಾಹ್ಮಣ ಜನಾಂಗದ ಸ್ತ್ರೀಯವರು ಹೀಗೆ ಇರಬೇಕು ಎನ್ನುವುದು ಒಂದು ನಿಯಮ. ಅವರ ಮಂಡೆಯನ್ನು ಬೋಳಿಸಬೇಕು. ಅವರು ಮಡಿಯಲ್ಲಿ ಇರಬೇಕು. ಅವರು ಯಾವುದೇ ಅಲಂಕಾರವನ್ನು ಮಾಡಬಾರದು. ಮನೆಯ ಆಗು ಹೋಗುಗಳನ್ನು ನಿರ್ಧಾರ ಮಾಡುವುದು ಗಂಡಸು ಎನ್ನುವುದು

ಇಲ್ಲಿ ಪ್ರಧಾನ. ಅದರ ಬಗ್ಗೆ ತಿರುಮಲಾಂಬರಿಗೆ ಯಾವುದೇ ಅಸಮಾಧಾನವು ಇರುವ ಹಾಗೆ ಕಾಣುವುದಿಲ್ಲ. ನಿಜವಾದ ಸಾಂಸ್ಕೃತಿಕ ಸ್ವಾತಂತ್ರ್ಯ ಎಂದರೆ ಅದು ಮಹಿಳೆಯ ಬಿಡುಗಡೆಯ ಪ್ರಶ್ನೆಯೂ ಹೌದು.

ತಿರುಮಾಲಾಂಬರ ಬರಹದಲ್ಲಿ ಒಂದು ಸಮಾಜದ ಎಚ್ಚರವು ಕಾಣಿಸುತ್ತದೆ. ಅದರಲ್ಲಿ ಎರಡು ಮಾತಿಲ್ಲ. ನಿರ್ವಾಸೀಹತೀಕರಣ ಎನ್ನುವುದು ಒಂದು ಸರಳವಾದ ಪ್ರಕ್ರಿಯೆಯು ಅಲ್ಲ . ಅದು ಎರಡು ಪ್ರಧಾನವಾದ ಅಂಶವನ್ನು ಎದುರು ಹಾಕಿಕೊಳ್ಳಬೇಕಾಗಿತ್ತು. ಅದರಲ್ಲಿ ಒಂದು ಪಶ್ಚಿಮದ ಪ್ರಭುತ್ವದ ವಿರೋಧ. ಎರಡನೆಯದಾಗಿ ಅದರಲ್ಲಿ ಯಾವುದನ್ನು ನಾವು ಸ್ವೀಕಾರ ಮಾಡಬೇಕು ಮತ್ತು ಯಾವುದನ್ನು ನಾವು ನಿರಾಕರಿಸಬೇಕು. ಇದು ಸಮಾಜದ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಪ್ರಶ್ನೆಯೂ ಹೌದು. ಯುರೋಪ್ ಆಗ ತನಗೆ ಬೇಕಾದ ಜ್ಞಾನದ ಮಾದರಿಯನ್ನು ಹುಟ್ಟು ಹಾಕಿದ್ದು ಸತ್ಯ. ಆದ್ದರಿಂದ ಅದರ ಒಳಗೆ ಬದಲಾವಣೆಯನ್ನು ಮಾಡುವುದು ಹೇಗೆ ಎನ್ನುವುದು ಅತ್ಯಂತ ಮಹತ್ವದ ಪ್ರಶ್ನೆಯೂ ಆಗಿರುವುದು ಸತ್ಯ. ರಾಷ್ಟ್ರೀಯತಾವಾದಿ ಲೇಖಕರು ಇದನ್ನು ಒಂದು ಸಾಂಸ್ಕೃತಿಕ ಪ್ರಶ್ನೆಯಾಗಿ ನೋಡಿದರು. ಸರಳವಾಗಿ ಹೇಳಬೇಕೆಂದರೆ ಪಶ್ಚಿಮದ ಸಾಂಸ್ಕೃತಿಕ ನಿರಾಕರಣೆಯನ್ನು ಮಾಡುವುದು ಹೇಗೆ? ಇಂಥ ವಿಷಯವನ್ನು ನೋಡುವಾಗ ನಾವು ಅದನ್ನು ಸಿದ್ಧಾಂತ ಮತ್ತು ಪ್ರಯೋಗದ ಪ್ರಶ್ನೆಯಾಗಿ ನೋಡಬೇಕು ಎನ್ನುವುದು ಕೇತು . ಎಚ್. ಕರ್ತಕ್ಕನ ವಾದ (ಕೇತು .ಎಚ್ ಕತರಕ್ – ಡಿ ಕಲೋನಿಯಸಿಂ ಕಲ್ಚರ್) ಪೋಸ್ಟ್ ಕಲೋನಿಯಲ್ ಸ್ಟಡೀಸ್ ರೀಡರ್ – ೩ ಪಾರ್ಟ್ ೬ – ಬಿಲ್ ಅಶ್ ಕ್ರಾಫ್ಟ್) ಪಶ್ಚಿಮದ ಮಾನದಂಡಕ್ಕಿಂತ ಬೇರೆಯಾದ್ದನ್ನು ನಾವು ಈ ಸನ್ನಿವೇಶದಲ್ಲಿ ಹುಡುಕುವುದು ಹೇಗೆ ಎನ್ನುವುದು ಅತ್ಯಂತ ಮಹತ್ವದ ಪ್ರಶ್ನೆಯೂ ಹೌದು. ಅಲ್ಲಿನ ಶೈಕ್ಷಣಿಕ ಅಗತ್ಯಗಳು ಬೇರೆ ನಮ್ಮ ಅಗತ್ಯಗಳು ಬೇರೆ. ಅದನ್ನು ನಾವು ತಿರುಮಲಾಂಬರ ಬರಹದಲ್ಲಿ ಕಾಣುತ್ತೇವೆ. ಅವರ ಕಾದಂಬರಿಗಳು ನಿಜವಾದ ಅರ್ಥದಲ್ಲಿ ನಮಗೆ ಹೊಸದಾದ ಒಂದು ನಿರ್ವಚನದ ಹಾಗೆ ಕಾಣಿಸಿದೆ. ತಿರುಮಲಾಂಬ ಬರೆಯುವಾಗ ಅದರಲ್ಲಿ ಹೊಸದಾದ ಸಾಂಸ್ಕೃತಿಕ ನಿರ್ವಚನವೂ ಇತ್ತು ಎನ್ನುವುದು ಸತ್ಯ. ಅನ್ಯ ಮತ್ತು   ವ್ಯತ್ಯಾಸ ಎನ್ನುವುದು ಅವರ ಪಠ್ಯಗಳಿಗೆ ಚೆನ್ನಾಗಿ ಅನ್ವಯವಾಗುತ್ತದೆ. ನಾವು ಅವರಿಗಿಂತ ಭಿನ್ನ. ಎರಡನೆಯದಾಗಿ ನಾವು ನಮ್ಮ ಮೌಲ್ಯಗಳ ಭಿನ್ನತೆಯನ್ನು ಕಾಣಬೇಕು. ನಾವು ಯಾವುದನ್ನು ಹೇಳುತ್ತಿದ್ದೇವೆಯೋ ಅದನ್ನು ನಾವು ಹೇಳುತ್ತಿರುವುದು ಕನ್ನಡದಲ್ಲಿ ಎನ್ನುವುದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬೇಕು. ಒಂದು ಹಂತದಲ್ಲಿ ತಿರುಮಲಾಂಬ ಪಿತೃಕೇಂದ್ರಿತವಾದ ಅಧಿಕಾರವನ್ನು ಪ್ರಶ್ನೆ ಮಾಡುತ್ತಾರೆ ಎನ್ನುವುದು ಸತ್ಯ. ಸ್ಥಳೀಯ ಗಂಡಸರು ಮತ್ತು ಅವರ ಯಜಮಾನಿಕೆಯನ್ನು ಕೂಡಾ ತಿರುಮಲಾಂಬ ಪ್ರಶ್ನೆ ಮಾಡುತ್ತಾರೆ. ಅದು ಅವರಿಗೆ ಸಾಧ್ಯವಾಗಿದೆ. ಅವರ ಬರಹದ ಬಗ್ಗೆ ಕಟುವಾದ ಟೀಕೆಯು ಬಂದಾಗಲೂ ಅವರು ಅದನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಲಿಲ್ಲ. ಹಾಗೆ ನೋಡಿದರೆ ಯಾವುದೇ ಲೇಖಕರು ಮತ್ತು ಲೇಖಕಿಯರು ನಿರ್ವಾಸಹತೀಕರಣ ಎನ್ನುವುದು ಒಂದು

ಗಳಿಗೆಯಲ್ಲಿ ಮುಗಿಯುವ ಕೆಲಸವು ಅಲ್ಲ ಎಂದು ತಿಳಿದಿದ್ದರು. ಅದನ್ನು ನಾವು ಬೇಂದ್ರೆ, ಮಾಸ್ತಿ ಮುಂತಾದವರಲ್ಲಿಯೂ ಕಾಣುತ್ತೇವೆ.

ಮಹಿಳೆ ಮತ್ತು ಅವಳ ಪ್ರಶ್ನೆಯನ್ನು ನಾವು ಒಂದು ಸಾಧಾರಣವಾದ ಚೌಕಟ್ಟಿನಲ್ಲಿ ನೋಡಲು ಬರುವುದಿಲ್ಲ ಎಂದು ಅನೇಕ ಚಿಂತಕರು ಭಾವಿಸಿದ್ದರು. ಮೌಖಿಕ ಸಂಸ್ಕೃತಿಯಿಂದ ಬರಹದ ಸಂಸ್ಕೃತಿಯ ಕಡೆಗೆ ಬರುವುದೇ ಅತ್ಯಂತ ಮುಖ್ಯವಾದ ಸಂಗತಿಯು ಆಗಿದೆ. ಅದನ್ನು ತಿರುಮಲಾಂಬ ಮಾಡಿದರು. ಅತ್ಯಂತ ಆಳವಾಗಿ ನೋಡಿದರೆ ನಮಗೆ ತಿರುಮಲಾಂಬರ ಬರಹದಲ್ಲಿ ಒಂದು ಬಗೆಯ ಪ್ರತಿಭಟನೆಯು ಕಾಣುತ್ತದೆ. ಒಂದು ಹೊಸದಾದ ಬಿಂಬವು ಕಾಣುತ್ತದೆ.

ಮೂರನೆಯ ಜಗತ್ತಿನ ಸ್ತ್ರೀಯರನ್ನು ಪಶ್ಚಿಮವು ಒಂದು ನಿರ್ದಿಷ್ಟವಾದ ಚೌಕಟ್ಟಿನಲ್ಲಿ ನೋಡಿದೆ. ಅದು ಮೂರನೆಯ ಜಗತ್ತಿನ ಸ್ತ್ರೀಯರು ಸಂಪ್ರದಾಯದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ ಎಂದು ಭಾವಿಸಿದೆ. ಅಷ್ಟೇ ಅಲ್ಲ ಮೂರನೆಯ ಜಗತ್ತಿನ ಸ್ತ್ರೀಯರು ಒಂದೇ ರೀತಿಯಲ್ಲಿ ಇದ್ದಾರೆ ಎಂದು ಭಾವಿಸಿದೆ. ಆದರೆ ವಾಸ್ತವವು ಹಾಗೆ ಇಲ್ಲ. ಅದು ವ್ಯತಿರಿಕ್ತವಾಗಿದೆ. ಕರ್ನಾಟಕವನ್ನು ನೋಡಿದರೂ ನಮಗೆ ಇದು ತಿಳಿಯುತ್ತದೆ. ಇಲ್ಲಿ ಬೇರೆ ಬೇರೆ ಜಾತಿಗಳು ಇವೆ. ಅದರ ಜೊತೆಗೆ ಬೇರೆ ಬೇರೆ ಸಂಪ್ರದಾಯಗಳೂ ಇವೆ. ಬೇರೆ ಬೇರೆ ಸಂಕಥನಗಳೂ ಇವೆ. ಹಾಗೆಯೇ ತಾತ್ವಿಕತೆಗಳು ಭಿನ್ನವಾಗುತ್ತಾ ಹೋಗಿವೆ. ತಿರುಮಲಾಂಬರಲ್ಲಿ ಇದು ಎದ್ದು ಕಾಣುತ್ತದೆ. ತಿರುಮಲಾಂಬರು ಹೇಳುವ ಕತೆಗಳು ಒಂದು ಜಾತಿಗೆ ಸಂಬಂಧಪಟ್ಟದ್ದು ಎನ್ನುವುದು ಸತ್ಯ. ಆದರೆ ಅದರ ಮೂಲಕ ಅವರು ಸ್ಥಾಪಿತ ಹಿತಾಸಕ್ತಿಗಳು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಹೇಳುತ್ತಾರೆ.

ಬ್ರಾಹ್ಮಣರು ಮತ್ತು ಅವರ ಜಾತಿ ನಿಯಮಗಳು ಒಂದು ಥರ ಇದೆ. ಅದು ಕೆಲವನ್ನು ಹೀಗೆ ಇರಬೇಕು ಎಂದು ನಿರೂಪಿಸಿದೆ. ಈ ಬಗೆಯ ಕಟ್ಟು ನಿಟ್ಟುಗಳು ನಮಗೆ ಉಳಿದ ಜಾತಿಗಳಲ್ಲಿ ಸಿಗುವುದಿಲ್ಲ. ನಿರ್ದಿಷ್ಟವಾದ ಸಂಸ್ಕೃತಿಯನ್ನು ಅವರು ಹೇಳುತ್ತಿದ್ದಾರೆ. ಬ್ರಾಹ್ಮಣರಲ್ಲಿ ಹೆಂಗಸರು ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಅದರ ಜೊತೆಗೆ ವಿಧವೆಯರ ಕಷ್ಟವಂತೂ ಹೇಳಲು ಅಸಾಧ್ಯ. ಅದನ್ನು ಹೊರಗಿನವರು ಹೇಳಲಾರರು. ಅದು ಅವರಿಗೆ ಅಗತ್ಯವೂ ಇಲ್ಲ. ಪಶ್ಚಿಮದ ನಿರೂಪಣೆಯು ಬೇರೆ ರೀತಿಯಲ್ಲಿ ಇದೆ. ಅದರಲ್ಲಿ ನಾವು ಮಹಾನ್ ನಿರೂಪಣೆಯನ್ನು ಮಾತ್ರವೇ ಕಾಣಬಲ್ಲೆವು. ಅದು ಮೂರನೆಯ ಜಗತ್ತನ ಬಗ್ಗೆ ಕೊಡುವ ವಿವರಣೆಗಳು ಕೂಡಾ ಅದಕ್ಕೆ ತಕ್ಕಂತೆ ಇದೆ. ಬಹುತೇಕ ಪಶ್ಚಿಮದ ಸ್ತ್ರೀವಾದಿಗಳು ಲಿಂಗ ತಾರತಮ್ಯವನ್ನು ಮಾತ್ರವೇ ಹೇಳುತ್ತಾರೆ. ಅದರ ಆಚೆಗೆ ಇರುವ ಸಾಮಾಜಿಕ, ಆರ್ಥಿಕ ನೆಲೆಗಳನ್ನು ಹೆಚ್ಚು ವಿವರಿಸಲು ಹೋಗುವುದಿಲ್ಲ. ಇದು ಅವರಿಗೆ ಹೆಚ್ಚು ಅನುಕೂಲವಾಗಿದೆ ಎನ್ನುವುದು ನಿಜ. ಮೈಯ ಬಿಳಿ ಬಣ್ಣ ಮತ್ತು ಕಪ್ಪು ಬಣ್ಣ ಎನ್ನುವುದು ತಾರತಮ್ಯವನ್ನು ಹೇಳುತ್ತದೆ. ಇದನ್ನು ಅಂತರ್‌ರಾಷ್ಟ್ರೀಯತೆಗೆ ಹೊಂದಾಣಿಕೆ ಮಾಡುವುದು ಹೇಗೆ ಎನ್ನುವುದು ಸಮಸ್ಯೆ. ಆದ್ದರಿಂದ ನಾವು ಸನ್ನಿವೇಶವನ್ನು ಹೊರತು ಮಾಡಿಕೊಂಡು ಸ್ತ್ರೀವಾದವನ್ನು ವಿವರಿಸಲು ಆಗುವುದಿಲ್ಲ. ಎರಡನೆಯದಾಗಿ ನಾವು ಒಂದು ವಿಮರ್ಶಾತ್ಮಕವಾದ ಎಚ್ಚರವನ್ನು ಇಟ್ಟುಕೊಳ್ಳದೆ ಸ್ತ್ರೀವಾದವನ್ನು ಅನ್ವಯ ಮಾಡಲು

ಬರುವುದಿಲ್ಲ. ಸಂಪ್ರದಾಯ, ಅನಕ್ಷರತೆ ಮತ್ತು ಬಡತನವು ಮೂರನೆಯ ಜಗತ್ತಿನ ಸ್ತ್ರೀಯರನ್ನು ಕಾಡುವುದು ನಿಜ. ಅದರಿಂದ ಹೊರಗೆ ಬರುವುದು ಹೇಗೆ ಎನ್ನುವುದು ಸಮಸ್ಯೆ. ಮೂರನೆಯ ಜಗತ್ತಿನ ಸ್ತ್ರೀಯರು ಬೇರೆ ಬೇರೆ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಅವರಿಗೆ ಅದು ಅತ್ಯಂತ ಮುಖ್ಯ. ಜೀವನದ ನಿರ್ವಹಣೆಗೆ ಅದು ಅತ್ಯಂತ ಅಗತ್ಯ. ಅದನ್ನು ತಿರುಮಲಾಂಬ ಕೂಡಾ ಹೇಳುತ್ತಾರೆ. ಜಗತ್ತಿನ ಉದ್ದಗಲಕ್ಕೂ ಹೆಣ್ಣು ಮಕ್ಕಳು ಶೋಷಣೆಗೆ ಒಳಗಾಗಿದ್ದಾರೆ ಎನ್ನುವುದು ಸತ್ಯ. ಈ ವಿಷಯದಲ್ಲಿ ಅವರೆಲ್ಲರೂ ಸಮಾನ ದುಃಖಿಗಳು. ಆದರೆ ಜಾತಿ ಮತ್ತು ಕೋಮು ಎನ್ನುವ ವಿಷಯಗಳು ಬರುವಾಗ ವ್ಯತ್ಯಾಸಗಳು ಕಾಣುತ್ತವೆ. ಈ ದೃಷ್ಟಿಯಿಂದ ತಿರುಮಲಾಂಬರ ಬರಹವು ಸ್ತ್ರೀ ಸಂಕಥನವನ್ನು ಹೇಳುತ್ತದೆ. ಅದಕ್ಕೆ ಸೀಮೆಯು ಇದೆ. ಸೀಮಾತೀತವಾದ ನೆಲೆಯೂ ಇದೆ. ಕುಟುಂಬ ಮತ್ತು ಅದರ ಭಾವನಾತ್ಮಕವಾದ ನೆಲೆಗಳನ್ನು ತಿರುಮಲಾಂಬ ಎತ್ತಿಕೊಳ್ಳುತ್ತಾರೆ. ಆಗಿನ ಅತ್ಯಂತ ಮಹತ್ವದ ಪ್ರಶ್ನೆಯೂ ಅದೇ ಆಗಿತ್ತು ಎನ್ನುವುದು ಇಲ್ಲಿ ಗಮನಾರ್ಹ. ಅವರು ಕಾದಂಬರಿ. ನಾಟಕ ಮತ್ತು ಇತರ ಪ್ರಬಂಧಗಳನ್ನು ಬರೆದರು. ಬರೆಯುವುದು ಎನ್ನುವುದೇ ಒಂದು ಬದ್ಧತೆಯ ಪ್ರಶ್ನೆ. ಅದು ಮಾತು ಅಲ್ಲ. ಅದು ಬರಹ. ಬರಹ ಹೆಚ್ಚು ಪ್ರಜ್ಞಾಪೂರ್ವಕವಾದ್ದು ಎನ್ನುವುದು ಇಲ್ಲಿ ಉಲ್ಲೇಖನೀಯ. ಅದಕ್ಕೆ ಒಂದು ತರ್ಕವೂ ಇರುತ್ತದೆ.

ಭಾರತೀಯತೆ ಮತ್ತು ಕನ್ನಡ ಎನ್ನುವುದನ್ನು ನಾವು ಬಿಡಲಾಗುವುದಿಲ್ಲ. ಆದ್ದರಿಂದ ಆರ್ಯ ಕುಲಾಂಗನೆಗೆ ಯಾವುದು ಹೆಚ್ಚು ಮುಖ್ಯ ಎನ್ನುವುದನ್ನು ತಿರುಮಲಾಂಬ ಕೇಳುತ್ತಾರೆ. ಆರ್ಯ ಕುಲಾಂಗನೆಯು ಆಧುನಿಕ ವಿದ್ಯಾಭ್ಯಾಸದಿಂದ ಸ್ವಯಂಸಂಪೂರ್ಣತೆಯನ್ನು ಹೊಂದುವುದು ಸಾಧ್ಯವಿಲ್ಲ. ಅದನ್ನು ಅವರ ಕಾದಂಬರಿಗಳು ಹೇಳುತ್ತವೆ. ಹೆಣ್ಣು ಕುಟುಂಬ ಮತ್ತು ಅದರ ಮೌಲ್ಯಕ್ಕಿಂತ ಪ್ರತ್ಯೇಕವಾಗಿ ಇರಲು ಸಾಧ್ಯವಿಲ್ಲ ಎನ್ನುವುದು ಅವರ ಕಾದಂಬರಿಗಳ ಸಾರ. ನಮಗೆ ಈಗ ಯಾವುದು ಮುಖ್ಯವಾಗಿದೆ ಎಂದು ಅವರು ಕೇಳುತ್ತಾರೆ. ಅದನ್ನು ಹೇಳುವಾಗ ಪಾಶ್ಚಿಮಾತ್ಯದ ಮಾದರಿಯು ಹೆಚ್ಚು ಮುಖ್ಯವಲ್ಲ. ಅದರ ಅನುಕರಣೆಗೆಯು ನಮ್ಮನ್ನು ಹಾಳು ಮಾಡುತ್ತದೆ ಎಂದು ಅವರು ಭಾವಿಸುತ್ತಾರೆ. ತಿರುಮಲಾಂಬರ ಕೃತಿಗಳನ್ನು ಓದುವವರು ಬೇರೆ. ಅವರ ವರ್ಗವೂ ಭಿನ್ನ. ಆದ್ದರಿಂದ ಅವರ ಕಾದಂಬರಿಗಳಲ್ಲಿ ಬರುವ ಸಮಸ್ಯೆಯು ಭಿನ್ನವಾದ್ದು ಎಂದು ಅನಿಸುತ್ತದೆ. ಒಂದು ಅಥೆಂಟಿಕ್ ಸೆಲ್ಫ್ ಎನ್ನುವುದು ಅವರ ಬರಹದಲ್ಲಿ ನಮಗೆ ಎದ್ದು ಕಾಣುತ್ತದೆ. ಅವರ ಕಾದಂಬರಿಗಳನ್ನು ಹೊರತು ಮಾಡಿ ನೋಡಿದರೂ ಅವರ ಜೀವನದ ಸ್ಥಿತಿಯು ಏನಾಗಿತ್ತೋ ಅದರ ಪ್ರತಿಫಲನವು ಬರಹಗಳಲ್ಲಿ ಕಾಣುತ್ತದೆ. ತಿರುಮಲಾಂಬ ಬಾಲ್ಯದಲ್ಲಿಯೇ ವಿಧವೆ ಆದವರು. ಆ ಅನುಭವ ಅವರ ಕಾದಂಬರಿಗಲ್ಲಿ ಕಾಣಿಸುತ್ತದೆ. ಒಂದು ಅರ್ಥದಲ್ಲಿ ಅವರ ಬರಹ ಮತ್ತು ಅವರ ಜೀವನದ ಸ್ಥಾಯಿ ಒಂದಾಗಿದೆ. ಕಾದಂಬರಿಯನ್ನು ಮತ್ತು ಅವರ ಜೀವನವನ್ನು ನಾವು ಬೇರೆ ಮಾಡಿಕೊಂಡು ನೋಡಲು ಆಗುವುದಿಲ್ಲ.

ಅವರ ಕಾದಂಬರಿಗಲ್ಲಿ ಬರುವ ಮೌಲ್ಯಗಳು ಕೂಡಾ ಅತ್ಯಂತ ಆಳದಲ್ಲಿ ಇದೆ. ಅದು ಬಂದುದು ನಮಗೆ ಬಹಳ ಹಿಂದಿನಿಂದ ಎನ್ನುವುದು ಇಲ್ಲಿ ಉಲ್ಲೇಖನೀಯ. ಅದಕ್ಕೂ ಒಂದು ಚರಿತ್ರೆಯು ಇದೆ. ಅದನ್ನು ನಾವು ಮರೆಯುವಂತೆ ಇಲ್ಲ. ಇಲ್ಲಿ ನಾವು ಮತ್ತೊಂದು ವಿಚಾರವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು: ಅವರ ಕಾದಂಬರಿಯು ಹೇಳುವುದು ಆಧುನಿಕ ಜಗತ್ತಿನಲ್ಲಿ,

ಅದೂ ಪರಿವರ್ತನೆಯಾಗುತ್ತಿರುವ ಸನ್ನಿವೇಶದಲ್ಲಿ ಹೆಣ್ಣು ಹೇಗೆ ಇರಬೇಕು ಎನ್ನುವುದನ್ನು ಮಾತ್ರ. ಪಶ್ಚಿಮ ಕೇಂದ್ರಿತವಾದ ಮೌಲ್ಯಗಳನ್ನು ಅವರು ಒಪ್ಪುವುದಿಲ್ಲ. ಪರಿಧಿಯಲ್ಲಿ ಇರುವ ಬ್ರಾಹ್ಮಣ ಹೆಂಗಸರು , ಅದರಲ್ಲಿಯೂ ವಿಧವೆಯರು ಹೀಗೆ ಜೀವನವನ್ನು ನಡೆಸುತ್ತಾರೆ ಎನ್ನುವುದು ತಿರುಮಲಾಂಬರಿಗೆ ಹೆಚ್ಚು ಮುಖ್ಯ. ಬಯಕೆ ಮತ್ತು ಅದರ ನಿಯಂತ್ರಣ ಹಾಗೂ ಜೀವನದಲ್ಲಿ ಒಂದು ಆದರ್ಶ ಎನ್ನುವುದು ಹೇಗೆ ನಮ್ಮನ್ನು ಕಟ್ಟಿ ಹಾಕುತ್ತದೆ ಎನ್ನುವುದು ಇಲ್ಲಿ ಮುಖ್ಯ. ಇಲ್ಲಿ ಒಂದು ಪ್ರಶ್ನೆಯನ್ನು ನಾವು ಕೇಳಬಹುದು: ಕಾಮ ಎನ್ನುವುದು ಮನುಷ್ಯನಿಗೆ ಅತ್ಯಂತ ಮುಖ್ಯ. ಅದರ ನಿಯಂತ್ರಣ ಮಾಡುವುದು ಹೇಗೆ ? ಹೆಣ್ಣು ಮಕ್ಕಳು ಯಾವುದನ್ನು ಓದಬೇಕು ಎನ್ನುವುದು ಮಾತ್ರವೇ ಇಲ್ಲಿ ಅತ್ಯಂತ ಮುಖ್ಯ. ಇಂದ್ರಿಯದ ನಿಗ್ರಹ ಎನ್ನುವುದು ಅತ್ಯಂತ ಕಷ್ಟ. ಅದುವೇ ಒಂದು ಹೋರಾಟ. ಬ್ರಾಹ್ಮಣ ವಿಧವೆಯು ಅಲಂಕಾರವನ್ನು ಮಾಡಬಾರದು. ಅವಳ ತಲೆಗೂದಲನ್ನು ತೆಗೆಯಬೇಕು. ಅವಳು ಅನ್ಯರ ಮೇಲೆ ಆಸೆಯನ್ನು ಇಟ್ಟು ಕೊಳ್ಳಬಾರದು. ಬಿಳಿಯ ಸೀರೆಯನ್ನು ಉಟ್ಟುಕೊಳ್ಳಬೇಕು. ನಿಗ್ರಹದ ಕಷ್ಟವನ್ನು ಇಲ್ಲಿ ನಾವು ಮಾನವೀಯವಾಗಿ ನೋಡಬೇಕು. ಬ್ರಾಹ್ಮಣ ಸ್ತ್ರೀಗೆ ಎರಡನೆಯ ಮದುವೆ ಎನ್ನುವುದು ಇಲ್ಲ. ಎಲ್ಲವನ್ನೂ ತ್ಯಾಗ ಮಾಡಿಕೊಂಡು ಬದುಕಬೇಕು.

ತನ್ನ ಬರಹವನ್ನು ತಾನು ಹೇಗೆ ನಿರೂಪಿಸಿದೆ ಎಂದು ತಿರುಮಾಲಾಂಬ ಹೀಗೆ ಹೇಳುತ್ತಾರೆ:

"ನಾನಿನ್ನೂ ಅಂತಹುದನ್ನು ಬರೆದಿಲ್ಲ. ಬರೆದು ಕಳುಹುವೆನೆಂದೆ. ಅದಕ್ಕೊಪ್ಪಿ ಮತ್ತೆ ಬರುವೆನೆಂದು ಹೇಳಿ ಮೈಸೂರಿಗೆ ತೆರಳಿದೆ. ಒಂದು ವಾರದೊಳಗಾಗಿ. 'ಸುಶೀಲೆ' ಎಂಬ ಹೆಸರಿನಲ್ಲಿ ಒಂದು ಪುಸ್ತಕವನ್ನು ಬರೆದು ಕಳಿಸಿದೆನು' ೧(ವಿಜಯಾ ದಬ್ಬೆ (ಸಂ) ಹಿತೈಷಿಣಿಯ ಹೆಜ್ಜೆಗಳು ೧೯೯೨ ಪು. ೭೭೨) ಸುಶೀಲೆಯೂ ೧೯೧೩ನೆಯ ಅಕ್ಟೋಬರ್ ನವೆಂಬರ್‌ನಲ್ಲಿ ಮೈಸೂರಿನಲ್ಲಿ ಶ್ರೀ ಹನುಮಾನ್‌ರವರ ಹೆಸರಿನಿಂದ ಪ್ರಕಟವಾಯ್ತು೨(ಅದೇ) ಇವುಗಳು ತಿರುಮಲಾಂಬಾ ಅವರ ಮೊದಲ ಕೃತಿಗಳು ಕುರಿತಂತೆ ಮಾಹಿತಿಯನ್ನು ನೀಡುತ್ತದೆ. 'ಸುಶೀಲೆಯ ನಂತರ ಒಂದರ ಹಿಂದೊಂದು ಕಾದಂಬರಿಗಳು ಪ್ರಕಟವಾದವು. ಹನ್ನೊಂದು ಸಾಂಸಾರಿಕ ವಿಚಾರಗಳನ್ನೊಳಗೊಂಡ ಕಾದಂಬರಿಗಳುನ್ನು ಎರಡು ಪತ್ತೇದಾರಿ ಕಾದಂಬರಿಗಳನ್ನು ಪ್ರಕಟಿಸಿರುವುದಾಗಿ ತಮ್ಮ ಪರಿಚಯವನ್ನು ಮಾಡಿಕೊಡುವ ಒಂದು ಟಿಪ್ಪಣಿಯಲ್ಲಿ ಲೇಖಕಿ ಹೇಳಿದ್ದಾರೆ. ಸುಶೀಲೆ, ನಭಾ, ವಿದ್ಯಲ್ಲತಾ, ವಿರಾಗಿಣಿ, ದಕ್ಷಕನ್ಯಾ, ಮಾತೃನಂದಿನಿ, ವಿಕ್ರಮ, ಪೂರ್ಣಕಲಾ, ನಿಶಾಕಾಂತ, ಗಿರಿಜಾ ಬಾಯಿಗಳನ್ನು ಆ ಟಿಪ್ಪಣಿಯಲ್ಲಿ ಹೆಸರಿಸಿದ್ದಾರೆ. ಈ ಪಟ್ಟಿಗೆ ಸೇರಿಸಬೇಕಾದ ಹನ್ನೆರಡು ಕಾದಂಬರಿಗಳು ರವಿವರ್ಮ ಮತ್ತು ಮಣಿಮಾಲೆ, ಕಾಂತಿಮತಿ ಎಂಬ ಅವರ ಕಾದಂಬರಿ ಹಸ್ತ ಪ್ರತಿಯಲ್ಲೇ ಉಳಿದಿದೆ. ಅಕಾಶವಾಣಿಗೆ ೧೯೭೦ ರಲ್ಲಿ ಕೊಟ್ಟ ಸಂದರ್ಶನದಲ್ಲಿ ಈ ಕಾದಂಬರಿಯ ಕುರಿತು ಪ್ರಸ್ತಾಪಮಾಡಿದ್ದಾರೆ. ೩(ವಿಜಯಾದಬ್ಬೆ ೧೯೯೨– ಪು. ೨೩) ವಿಜಯಾದಬ್ಬೆಯವರು ಹೇಳುವಂತೆ; ಒಟ್ಟಿನಲ್ಲಿ ಪೂರ್ಣವಾಗಿ ಅಚ್ಚಾದ ಕಾದಂಬರಿಗಳು ಹನ್ನೆರಡು. ಅಪೂರ್ಣವಾಗಿ ಅಚ್ಚಾದ ಕಾದಂಬರಿಗಳು ಎರಡು. ಹಸ್ತಪ್ರತಿಯಲ್ಲಿರುವ ಕಾದಂಬರಿ ಒಂದು ಮತ್ತು ಉಲ್ಲೇಖಗೊಂಡ ಕಾದಂಬರಿ ಎರಡು ಎಂದು ಈಗಿರುವ ಮಾಹಿತಿಗಳಿಂದ ಹೇಳಬಹುದು. ಪ್ರಕಟಣೆ ಪಟ್ಟಿ ವಿವರಿಸುವಂತೆ ದಕ್ಷಕನ್ಯಾ, ವಿಕ್ರಮ, ನಿಶಾಕಾಂತ ಕಾದಂಬರಿಗಳು

ಪತ್ತೇದಾರಿ ಕಾದಂಬರಿಗಳು ೪(ಪು. ೨೪). ಅವರ 'ಸುಶೀಲೆ' ಕಾದಂಬರಿಯು ೧೯೧೩ರಲ್ಲಿ ಪ್ರಕಟವಾಯಿತು. ೧೯೧೫, ೧೯೨೨, ೧೯೨೯ರಲ್ಲಿ ಮೂರು ಮುದ್ರಣಗಳನ್ನು ಇದು ಕಂಡಿದೆ. ಇದು ಮೈಸೂರು ಮತ್ತು ಮದರಾಸು ವಿಶ್ವವಿದ್ಯಾನಿಲಯಕ್ಕೆ ಪಠ್ಯಪುಸ್ತಕವೂ ಆಗಿತ್ತು. ಹೆಸರು ಸೂಚಿಸುವಂತೆ ಈ ಕಾದಂಬರಿಯಲ್ಲಿ ಸುಶೀಲೆಯು ಕಥಾನಾಯಕಿಯಾಗಿದ್ದಾಳೆ. ಇವಳ ಗಂಡ ದಾರಿ ತಪ್ಪಿರುತ್ತಾನೆ. ಗಂಡನಿಂದ ಮತ್ತು ಇತರರಿಂದ ಸುಶೀಲೆಯು ಕಷ್ಟವನ್ನು ಅನುಭವಿಸುತ್ತಾಳೆ. ಕಾದಂಬರಿಯ ಕೊನೆಯಲ್ಲಿ ಸುಶೀಲೆಯ ಗಂಡನು ಒಳ್ಳೆಯವನಾಗುತ್ತಾನೆ. ಹೀಗೆ ಕಾದಂಬರಿಯು ಸುಖಾಂತವಾಗುತ್ತದೆ.

ತಿರುಮಲಾಂಬಾ ಅವರ ಇತರ ಕಾದಂಬರಿಗಳಲ್ಲಿರುವಂತೆ ಈ ಕಾದಂಬರಿಯಲ್ಲಿಯೂ ಸ್ತ್ರೀ ಶಿಕ್ಷಣದ ಪ್ರಸ್ತಾಪವಿದೆ. 'ಇಂಥ ಸಂದರ್ಭದಲ್ಲಿ ಸ್ತ್ರೀ ವಿದ್ಯಾಭ್ಯಾಸವನ್ನು ಸಮರ್ಥಿಸುವ, ಪ್ರಚಾರ ಮಾಡುವ ಕೆಲಸವನ್ನು ತಿರುಮಲಾಂಬ ಕಾದಂಬರಿಯಲ್ಲೂ ಮಾಡಿದ್ದಾರೆ. ಇದರೊಂದಿಗೆ ಈ ಕಾದಂಬರಿಯು ಓದುಬರಹವಿಲ್ಲದೆ ಕಾಡು ಹರಟೆಯಲ್ಲಿ, ಅವರಿವರನ್ನು ಟೀಕಿಸುವುದರಲ್ಲಿ ಕಳೆಯುವ ಹೆಂಗಸರನ್ನು ಟೀಕಿಸಿದೆ: (ಪೂರ್ವೋಕ್ತ ಸಂ.೨೭) ದುಷ್ಟಶಕ್ತಿ, ಸಜ್ಜನ ಸುಖಪ್ರಾಪ್ತಿಯನ್ನು ಕಾದಂಬರಿಯು ಹೇಳುತ್ತದೆ. ಕಾಂದಬರಿಯು ಸರಳವಾಗಿದೆ. ಇದರಲ್ಲಿ ಹೆಚ್ಚಿನ ಪಾತ್ರಗಳು ಒಳ್ಳೆಯ ಮತ್ತು ಕೆಟ್ಟ ಸ್ವಭಾವವನ್ನು ಒಳಗೊಂಡಿವೆ'. ಈ ಕಾದಂಬರಿಯಲ್ಲಿ ಬಳಕೆಯಾದ ತಂತ್ರ, ಶೈಲಿಯ ಸ್ವರೂಪ ಮತ್ತು ಮಿತಿಗಳನ್ನು ಅಂದಿನ ಕಾದಂಬರಿ ಪ್ರಕಾರದ ಬೆಳವಣಿಗೆಗೆಯ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬಹುದಾಗಿದೆ. ತಿರುಮಲಾಂಬ ಅವರ ಕಾದಂಬರಿಯ ಪ್ರಧಾನ ಲಕ್ಷಣಗಳು ಮೊದಲನೆಯ ಈ ಪ್ರಕಟಿತ ಕಾದಂಬರಿಯಲ್ಲಿರುವಂತೆ ಸ್ಪಷ್ಟವಾಗಿಯೆ ಕಾಣಿಸಿಕೊಂಡಿದೆ. ನೀತಿಬೋಧನೆಗೆ ಅವರ ಕಾದಂಬರಿಗಳಲ್ಲಿ ಸಂದಿರುವ ಪ್ರಾಶಸ್ತ್ಯ ಸ್ಪಷ್ಟವಾಗಿದೆ. 'ಸುಶೀಲೆ'ಯಲ್ಲೂ ಈ ಒಲವು ಇದೆಯಾದರೂ ಸಮಾಧಾನವಿಲ್ಲದ ಕಾದಂಬರಿಯ ನಡಿಗೆ ವಿರಾಮವಾದ ಉಪದೇಶಕ್ಕೆ ಹೆಚ್ಚಿನ ಅವಕಾಶವಿಲ್ಲ. ತಮ್ಮ ಬರವಣಿಗೆಯುದ್ದಕ್ಕೂ ತಿರುಮಲಾಂಬ ಪ್ರತಿಪದಿಸುವ ಸತೀತ್ವ, ಸ್ತ್ರೀ ವಿದ್ಯಾಭ್ಯಾಸ ಮನ್ನಣೆ, ದುಷ್ಟಶಿಕ್ಷೆ ಶಿಷ್ಟರಕ್ಷೆ ಮೊದಲಾದ ಅಂಶಗಳು ಇಲ್ಲಿಯೂ ಯಥಾವತ್ತಾಗಿ ಬಂದಿವೆ. (ವಿಜಯಾದಬ್ಬೆ ಪು.೨೮) ತಿರುಮಲಾಂಬಾ ಅವರ ಸುಶೀಲೆ ಕಾದಂಬರಿಗೆ ಚಾರಿತ್ರಿಕ ಮಹತ್ವವಿದೆ. ಈ ಕಾದಂಬರಿಯು ಕನ್ನಡ ಮೊದಲ ಲೇಖಕಿಯಿಂದ ರಚಿತವಾದ ಕಾದಂಬರಿ, ಎರಡನೆಯದಾಗಿ ಈ ಕಾದಂಬರಿಯಲ್ಲಿ ಸ್ತ್ರೀ ವಿದ್ಯಾಭ್ಯಾಸದ ಬಗೆಗೆ ವಿಶೇಷ ಚರ್ಚೆಯಿದ್ದು ಅದಕ್ಕೆ ಚಾರಿತ್ರಿಕ ಮಹತ್ವವಿದೆ. ಹೆಚ್ಚಿನ ಲೇಖಕರು ಈ ಕಾದಂಬರಿಯನ್ನು ಹೊಗಳಿದ್ದಾರೆ'. ಸ್ತ್ರೀಯರು ಇಷ್ಟು ಚೆನ್ನಾಗಿ ಗ್ರಂಥವನ್ನು ಬರೆದಿರುವ ವಿಷಯದಲ್ಲಿ ಸಂತೋಷಿಸದಿರಲಾರೆವು (ವೃತ್ತಾಂತ ಪತ್ರಿಕೆ) ಇಷ್ಟು ಕಾಲಾ ನಂತರವಾದರೂ ಸುಶಿಕ್ಷಿತ ಕರ್ನಾಟಕ ಸ್ತ್ರೀ ಮಂಡಲಿಯಲ್ಲಿ ನಿಜ ವಿದ್ಯಾಭ್ಯಾಸದ ಇಚ್ಛಿತ ಫಲವು ಪರಿಪಕ್ವಸ್ಥಿತಿಗೆ ಬಂದುದನ್ನು ಕಂಡು ಅತ್ಯಾನಂದಗೊಂಡೆನು. (ಎಚ್.ಭೀಮರಾವ್) ಈ ತರಹದ ಪ್ರೋತ್ಸಾಹ ನುಡಿಗಳು ಈ ಕಾದಂಬರಿಯ ಬಗ್ಗೆ ಬಂದಿರುವುದು ಗಮನಾರ್ಹವಾಗಿದೆ.

ಅವರ ವಿದ್ಯುಲ್ಲತಾ ಕಾದಂಬರಿಯು ೧೯೧೪ರಲ್ಲಿ ಪ್ರಕಟವಾಯಿತು. ಇದು ಸತೀ ಹಿತೈಷಿಣಿ ಗ್ರಂಥ ಮಾಲೆಯ ಮೂರನೆಯ ಕೃತಿ. 'ವಿದ್ಯುಲ್ಲತೆಯ ಸ್ವ ವಿಷಯದಲ್ಲಿ ಅವರು ಹೇಳಿರುವ

ಕೆಲವು ಮಾತುಗಳು ಹೀಗಿವೆ'. ಶೀಲ ಸತ್ಯ ಪ್ರಕಾಶಕ್ಕೆ ಸುಶಿಕ್ಷಾ ಪೂರ್ವಕ ವಿದ್ಯಾಪ್ರೌಢಿಮೆಯೂ ಸಹಕರಿಸಿದಲ್ಲಿ ಲೋಕ ಶಿಕ್ಷಣ ಮಹತ್ಕಾರ್ಯವೂ ಉಚಿತ ರೀತಿಯಲ್ಲಿ ಸುಧಾರಿಸಲ್ಪಡುವುದೆಂದೂ ಅಂತಿಲ್ಲದೆ ಅಶಿಕ್ಷಿತ ಭಾಷಾ ಪಾಂಡಿತ್ಯವು ಮನಸ್ವಿ ವರ್ತನಕ್ಕೆ ಸಹಕಾರಿಯಾಗಬಹುದೆಂದು ಲೋಕಾನುಭವಜ್ಞರ ಉಪದೇಶವಾಗಿರುವುದರಿಂದ, ಮಾಲೆಯಲ್ಲಿ ತೃತೀಯ ಸೂಕ್ಷ್ಮವಾಗಿ ವಿದ್ಯುಲ್ಲತೆಯನ್ನೇ ಪ್ರಚಾರ ಪಡಿಸಿ, ಸ್ತ್ರೀ ಜಗತ್ತಿಗೆ ಶಾಂತಿ, ಧೃತಿಗಳು ಕಾಂತಿಯನ್ನುಂಟು ಮಾಡುತ್ತಿರಲೆಂದು ಪ್ರಾರ್ಥಿಸುವೆವಲ್ಲದೆ ಶಿಕ್ಷಣ, ಸ್ತ್ರೀ ಧರ್ಮ, ಧ್ಯೇಯ, ಕರ್ತವ್ಯಗಳ ಸೂಕ್ಷ್ಮ ವಿಚಾರಗಳ ಪ್ರತಿಪಾದನೆ ಇಲ್ಲಿದೆ. (ವಿಜಯಾದಬ್ಬೆ ಪು.೩೪) ಅದು ವಾಸ್ತವವಾದಿ ಕಾದಂಬರಿ. ಇದರಲ್ಲಿ ಬರುವ ಮಣಿ ಮಾಲೆಯ ಕತೆ ಮಣಿಮಾಲೆ ಕಾದಂಬರಿಯಲ್ಲಿ ಮುಕ್ತಾಯ ಹೊಂದುತ್ತದೆ. ವಿದ್ಯುಲ್ಲತಾ ಮತ್ತು ಮಣಿಮಾಲೆ ಕಾದಂಬರಿಗಳಲ್ಲಿ ಅವಳ ಜೀವನದ ಮೂರು ಹಂತದ ಚಿತ್ರಣವಿದೆ. ಅದರಲ್ಲಿ ಮೊದಲನೆಯ ಹಂತ ಅವಳ ವಿವಾಹದ ಪೂರ್ವದ ಅಂಶ. ಇದು ಕಾದಂಬರಿಯಲ್ಲಿ ನೇರವಾಗಿ ವ್ಯಕ್ತಗೊಂಡಿಲ್ಲ. ಅಮರನಾಥನ ಮಾವನ ಮಗಳು ಮಣಿಮಾಲೆ, ಅವಳನ್ನು ಅಮರನಾಥನು ಮದುವೆಯಾಗುವನೆಂಬ ನಿಶ್ಚಯವಾಗಿತ್ತು. ಆದರೆ ಮಾವನ ಮರಣದ ಅನಂತರ ಅಮರನ ಮಿತ್ರನಾದ ಶಚೀಕಾಂತನು ಮಣಿಮಾಲೆಯನ್ನುವರಿಸುತ್ತಾನೆ. ಇದರಿಂದ ಹತಾಶನಾದ ಮಣಿಕಾಂತನು ಮನೆಯ ಸಮೇತ ಮಣಿಮಾಲೆಯ ತಾಯಿಯನ್ನು ಸುಟ್ಟು ಮಣಿಮಾಲೆಯನ್ನು ಅಪಹರಿಸುತ್ತಾನೆ. ಅಲ್ಲಿಂದ ತಪ್ಪಿಸಿಕೊಂಡು ಮಣಿಮಾಲೆಯು ಸಮಾಜ ಸುಧಾರಕರಾದ ಗೋಪಿನಾಥರಲ್ಲಿಗೆ ಬಂದು ವಿದ್ಯಾವತಿಯಾಗುತ್ತಾಳೆ. ಈ ಹಂತದಿಂದ ವಿದ್ಯುಲ್ಲತಾ ಕಾದಂಬರಿಯು ಪ್ರಾರಂಭವಾಗುತ್ತದೆ. ವಿದ್ಯುಲ್ಲತಾದಲ್ಲಿ ಹರಿಣಿಯು ಮತ್ತೆ ಅಮರನಾಥಾದಿಗಳಿಂದ ಅಪಹೃತಗಳಾಗಿ ಕಾಮಪಾಲನೆ ಭವನದಲ್ಲಿದ್ದು ಅಮರನಾಥನನ್ನುವರಿಸುವಂತೆ ನಟಿಸಿ ಅಂದೇ ಕಣ್ಮರೆಯಾಗುತ್ತಾಳೆ. ಕಣ್ಮರೆಯಾದ ಹರಿಣಿ ಮತ್ತೆ ಮಣಿಮಾಲೆಯಲ್ಲಿ ಕಾಣಿಸಿಕೊಳ್ಳುತ್ತಾಳೆ.

ಇದು ಕಾದಂಬರಿಯ ದೃಷ್ಟಿ 'ಚಿಕ್ಕಂದಿನಲ್ಲೇ ಗಂಡನೆಂದು ಅಂಕಿತವಾಗಿದ್ದ ಅಮರನಾಥನೊಂದು ಕಡೆ ವರಿಸಿದಶಚೀಕಾಂತನೊಂದುಕಡೆ, ಅಮರನಾಥನಿಂದಲೇ ಅಪಹೃತಳಾಗಿ ಕಿರುಕುಳಕ್ಕೊಳಗಾದರೂ ಅವನ ಮನಸ್ಸು ಸ್ವಚ್ಛವಾಗಿ, ತಾನು ಶುದ್ಧೆಯೆಂಬುದು ಎಲ್ಲರ ಮನಸ್ಸಿಗೂ ಸ್ಪಷ್ಟವಾಗಿ, ಅಮರನಾಥನು ಪರಿವರ್ತಿತನಾಗಿ ತಾನು ಶಚೀಕಾಂತನಿಂದ ಸ್ವೀಕರಿಸಲ್ಪಡಬೇಕೆಂಬುದು ಹರಿಣಿಯ ಹಂಬಲ. ಅದಕ್ಕಾಗಿ ಅವಳ ಎಲ್ಲ ಗೂಢಚಾರ್ಯ, ರಹಸ್ಯ ಪರಿವೇಷಾಧಿಗಳು. ಈ ಕಾದಂಬರಿಯಲ್ಲಿ ತಿರುಮಲಾಂಬ ಹೇಳಲು ಉದ್ದೇಶಿಸಿರುವ ವಿಚಾರ ಮಾತ್ರ ಇಂದಿಗೂ ಅಷ್ಟೇ ಸಮಕಾಲೀನವಾಗಿದೆ'. (೮ ಪೂರ್ವೋಕ್ತ. ಪು. ೩೬) ಈ ಕಾದಂಬರಿಯು ಬಾಲ್ಯ ವಿವಾಹ ಪದ್ಧತಿಯ ಬಗ್ಗೆ ಪ್ರತಿರೋಧವನ್ನು ವ್ಯಕ್ತಪಡಿಸುತ್ತದೆ. ಈ ಕಾದಂಬರಿಯಲ್ಲಿಯೂ ಆಧುನಿಕ ಶಿಕ್ಷಣದ ಬಗ್ಗೆ ಚಿಂತನೆಗಳಿವೆ. ಸಾಮಾಜಿಕ ಪರಿಸ್ಥಿತಿಯ ಬಗ್ಗೆ ವಿಮರ್ಶಾತ್ಮಕವಾದ ಧೋರಣೆಯು ಈ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ತಿರುಮಲಾಂಬಾ ಅವರ ವಿಚಾರಧಾರೆಯು ಈ ಕಾದಂಬರಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ದಕ್ಷಾಕನ್ಯಾ ಪತ್ತೆದಾರಿ ಮಾದರಿಯ ಕಾದಂಬರಿಯಾಗಿದೆ. 'ಈ ಗ್ರಂಥವು ಕಲ್ಪನೆಯಲ್ಲಿ, ಕೇವಲ ಭಾಗವತಿಯೊಲ್ಮೆಯೊಂದಲ್ಲದೆ. ಇತರ ಸಹಾಯ ಸಂಪತ್ತಿಯಾಗಲೀ ದೇಶಭಾಷೆಯೊಂದಲ್ಲದೆ

ಮತ್ತಾವ ಭಾಷಾ ಪರಿಜ್ಞಾನವಾಗಲೀ, ಸೇರಿವುದಿಲ್ಲ. ಆದುದರಿಂದ ಈ ಕ್ಷುದ್ರ ಗ್ರಂಥವು ಪಂಡಿತ ಮಾನ್ಯರಿಗೆ ನೀರಸವಾಗಿಯೂ, ಅಬದ್ಧ ಕಲ್ಪನೆಯಾಗಿಯೂ, ಅಸಮಂಜಸವಾಗಿಯೂ ಕಂಡು ಬರಬಹುದು' ಎಂದು ಲೇಖಕಿಯು ಹೇಳಿಕೊಂಡಿದ್ದಾರೆ. 'ತಮ್ಮ ಬರಹದ ಉದ್ದೇಶವನ್ನು ತಿರುಮಲಾಂಬಾ ಇಲ್ಲಿಯೂ ಮರೆತಿಲ್ಲ. ಸತೀ ಹಿತೈಷಿಣಿ ಗ್ರಂಥಮಾಲೆಯ ಆದರ್ಶಗಳು ಈ ಪತ್ತೇದಾರಿ ಕಾದಂಬರಿಯಲ್ಲಿಯೂ ಮರೆಯಾಗಿಲ್ಲ'. ಸ್ತ್ರೀ ಜನಾಂಗದ ಪುರೋಭಿವೃದ್ಧಿಗೆ ಅವಶ್ಯವಾಗಿ ಬೇಕಾದ ರೀತಿ ನೀತಿ ಎಂದು ಯಾವುದನ್ನು ಲೇಖಕಿ ಭಾವಿಸುತ್ತಾರೋ ಅವುಗಳನ್ನು ಕಾದಂಬರಿಯಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಹೇಳಿದ್ದಾರೆ. ಇಲ್ಲಿ ಬರುವ ವಿಂದ್ಯಾ ಸುಕನ್ಯಾ, ಸುನಂದಾ, ಗಂಗಾ, ಯಮುನಾ ಮೊದಲಾದವರಲ್ಲಿ ಇರುವ ಕರ್ತವ್ಯ ಕ್ಷಮತೆ, ನಿರಂತರೋದ್ಯಮ ಶೀಲತೆಯನ್ನು ಎಲ್ಲ ನಾರಿಯರಲ್ಲೂ ಕಾಣುವಂತಾಗಬೇಕು ಎಂಬುದೇ ಲೇಖಕಿಯ ಕನಸು, ಹಾಗಾದಾಗಲೇ ತನ್ನ ಲೇಖನದ ಪರಿಶ್ರಮವೂ, ಉದ್ದೇಶವೂ ಸಾರ್ಥಕ್ಯ ಹೊಂದುವುದೆಂದು ಅವರು ತಿಳಿಯುತ್ತಾರೆ. (ಪೂರ್ವೋಕ್ತ ಪು.೪೩).

ಈ ಕಾದಂಬರಿಯಲ್ಲಿ ನಾಲ್ಕು ಭಾಗಗಳಿವೆ. ತಾರಾಪತಿರಾಯ ಮೊದಲ ಪತ್ನಿ ಸುನಂದೆ. ಅವಳು ಕಣ್ಮರೆಯಾದ ಮೇಲೆ ತಾರಾತಿರಾಯನು ಗಂಗಾಬಾಯಿಯನ್ನು ಮದುವೆಯಾಗಿದ್ದ. ಅನಂತರ ಸುನಂದಯ ಸಂದೇಶವು ತಾರಾಪತಿರಾಯನಿಗೆ ಬರುತ್ತಾನೆ. ಕೆಲ ಸಮಯದಲ್ಲಿ ಸುನಂದೆಯು ತನ್ನ ಮಗನೊಂದಿಗೆ ಬರುತ್ತಾಳೆ. ಮಧ್ಯೆದಾರಿಯಲ್ಲಿ ಅವರ ಮಗಳು ವಿಂದೆಯು ಕಳ್ಳರ ಪಾಲಾಗುತ್ತಳೆ. ವಿಂದೆಯು ಧೈರ್ಯದಿಂದ ಕಳ್ಳರನ್ನು ಎದುರಿಸಿ, ಅವರನ್ನು ಸೋಲಿಸುತ್ತಾಳೆ. ಕೊನೆಗೆ ಶ್ರೀದತ್ತಕುಮಾರನೊಂದಿಗೆ ವಿಂದೆಯ ಮದುವೆಯಾಗುತ್ತದೆ. ವಿಂದೆಯ ಹೆಸರೇ 'ದಕ್ಷಕನ್ಯಾ' ಕಾದಂಬರಿಯಲ್ಲಿ ಸುಖಾಂತ್ಯವಿದೆ. ಮಾತೃನಂದಿನಿ ಕಾದಂಬರಿಯು ೧೯೧೬ರಲ್ಲಿ ಪ್ರಕಟವಾಯಿತು. ಈ ಕಾದಂಬರಿಯು ಕೂಡಾ ತಿರುಮಲಾಂಬಾ ಅವರ ಇತರೆ ಕಾದಂಬರಿಗಳಂತೆ ಸ್ತ್ರೀ ಪ್ರಜ್ಞೆಯನ್ನು ಕೇಂದ್ರವಾಗಿರಿಸಿಕೊಂಡಿದೆ. ಇದರಲ್ಲಿ ಹದಿನೇಳು ಅಧ್ಯಾಯಗಳಿವೆ. ಈ ಕಾದಂಬರಿಯ ನಾಯಕಿಯು ನಂದಿನಿ. ಎಂಟು ವರ್ಷದಲ್ಲಿ ತನ್ನ ತಾಯಿಯನ್ನು ಕಳೆದುಕೊಳ್ಳುತ್ತಾಳೆ. ಅವಳ ತಂದೆ ಸತ್ಯಾನಂದನು ಅವಳು ನಾಲ್ಕು ವರ್ಷದವಳಿರುವಾಗ ತೀರ್ಥಯಾತ್ರೆಗೆ ಹೋಗುತ್ತಾನೆ. ಅನಂತರ ಅನಂದವನಕ್ಕೆ ಬಂದು ದೇವಿಯ ಸೇವೆಯಲ್ಲಿ ನಿಲ್ಲುತ್ತಾನೆ. ಅನಂತರ ಮಗಳನ್ನು ವಿದ್ಯಾವಂತಳನ್ನಾಗಿ ಮಾಡುತ್ತಾನೆ.

ಸತ್ಯಾನಂದನು ಅನಂತರ ಅವಳನ್ನು ನಾಗೇಶರಾಯನ ಪೋಷಣೆಗೆ ಒಪ್ಪಿಸಿದನು. ನಂದಿನಿಯ ಮೇಲೆ ಮನಸ್ಸಿಟ್ಟನಾದಾನಂದನನ್ನು ನಂದಿನಿಯು ಮನಃ ಪರಿವರ್ತನೆ ಮಾಡುತ್ತಾಳೆ. ಅಚಲನ ವಧುವಾದ ಸ್ವರ್ಣೆಯನ್ನು ಶಿಕ್ಷಣಕೊಟ್ಟು ತಿದ್ದುತ್ತಾಳೆ. 'ಬಾಲ್ಯ ವಿವಾಹ, ವರದಕ್ಷಿಣೆ, ಸ್ತ್ರೀ ವಿದ್ಯಾಭ್ಯಾಸ ವಿರೋಧ, ಮದುವೆಯ ದುಂದುವೆಚ್ಚ ಮೊದಲಾದವುಗಳನ್ನು ವಿರೋಧಿಸುವುದರಿಂದಾಗಿ ನಾಗೇಶರಾಯ, ನಂದಿನಿ ಮೊದಲಾದವರು ಸನಾತನಿಗಳ, ಗುರು ಮಠದ ಬಹಿಷ್ಕಾರಕ್ಕೆ ಒಳಗಾಗುತ್ತಾರೆ. ಅಚಲಚಂದ್ರ, ಕಲೆಕ್ಟರ್ ಮೊದಲಾದವರು ನಾಗೇಶರಾಯನೊಂದಿಗೆ ಸೇರಿ ಬಹಿಷ್ಕರಿಸಿದವರಿಗೆ ಬುದ್ಧಿಕಲಿಸುತ್ತಾರೆ. ಆನಂದವನದ ಮಾತೃಮಂದಿರದಲ್ಲಿ ಸತ್ಯಾನಂದ ಪರಮಹಂಸ, ತಪಸ್ವಿನಿ, ಅಚಲಚಂದ್ರ ಮತ್ತು ಸ್ವರ್ಣ

ಕುಮಾರಿಯರು ದೇಶ ಮಾತೃಸೇವೆಯಲ್ಲಿ ಮದುವೆಯಾಗುವುದರೊಂದಿಗೆ ಕಾದಂಬರಿ ನಿಲುಗಡೆಗೆ ಬಂದಿದೆ'.[೧೦] (ಪೂರ್ವೋಕ್ತ ಪು. ೪೬) ಈ ಕಾದಂಬರಿಯ ಕೇಂದ್ರ ಪಾತ್ರ ನಂದಿನಿ, ಆಕೆಯದು ಆದರ್ಶಮಯ ವ್ಯಕ್ತಿತ್ವ. ತಿರುಮಲಾಂಬಾ ಅವರು ಯಾವುದನ್ನು ಆದರ್ಶವೆಂದು ಗ್ರಹಿಸಿದ್ದರೋ ಅದನ್ನು ನಂದಿನಿಯ ಪಾತ್ರದ ಮೂಲಕ ಹೇಳಿದ್ದಾರೆ. ಈ ಕಾದಂಬರಿಯಲ್ಲಿ ವರದಕ್ಷಿಣೆ ಪದ್ಧತಿಯ ಬಗ್ಗೆ ತೀವ್ರವಾದ ಟೀಕೆಯಿದೆ. 'ವರವಿಕ್ರಮವೆಂಬ ಸಾಂಕ್ರಮಿಕ ರೋಗವು ಹುಟ್ಟಡಗಿ ಹೋಗುವವರೆಗೂ ನಾನು ನನ್ನ ಪಾಳೆ ಪರಿವಾರದವರೂ ಕನ್ಯೆಯರನ್ನು ವೃಥಾಕಟುಕರ ಬಾಯಲ್ಲಿ ಹಾಕಲಾರೆವು' (ಅದೇ ಪು. ೨೨) ಬುದ್ಧಿ ಇಲ್ಲದೆ ಕೊಡುವವರು ಕೆಡಲಿ ಜೀವಿತವನ್ನು ಕಲ್ಪಿಸಿಕೊಳ್ಳಲಾರದೆ. ಹೆರವರ ಹಣಕ್ಕೆ ಕಯ್ಯೊಡ್ಡಿ, ಜೀವಿಸಬೇಕೆಂಬ ಹೇಡಿಗಳಿಗೆ ನಿಮ್ಮ ಹೆಣ್ಣಮಕ್ಕಳನ್ನು ನಾವು ಹೇಗೂ ಕೊಡಲೊಲ್ಲವು.[೧೨] (ಅದೇ ಪು. ೪೫) ಈ ತರಹದ ಮಾತುಗಳು ಈ ಕಾದಂಬರಿಯಲ್ಲಿ ಬಂದಿದೆ. ಸರಳ ವಿವಾಹ ಪದ್ಧತಿಯನ್ನು ಈ ಕಾದಂಬರಿಯಲ್ಲಿ ಎತ್ತಿಹಿಡಿಯಲಾಗಿದೆ. ಮದುವೆಗಾಗಿ ನಡೆಯುವ ಆಡಂಬರದ ಖರ್ಚನ್ನು ನಿರಾಕರಿಸಿ, ದೇಶ ಸೇವೆಯ ಮಹತ್ವವನ್ನು ಈ ಕಾದಂಬರಿಯಲ್ಲಿ ಉನ್ನತ ಆದರ್ಶವೆಂದು ವಿವರಿಸಲಾಗಿದೆ. ಈ ದೃಷ್ಟಿಯಿಂದ ತಿರುಮಲಾಂಬ ಅವರ ಕಾದಂಬರಿಗಳಲ್ಲಿ ಈ ಕಾದಂಬರಿಯು ವಿಶಿಷ್ಟವಾಗಿದೆ. ಕಾದಂಬರಿಯು ಸುಧಾರಣ ಪರವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಉಂಟಾಗಬೇಕಾದ ಪರಿವರ್ತನೆಯನ್ನು ಈ ಕಾದಂಬರಿಯು ಹೇಳುತ್ತದೆ. ನವೋದಯ ಕಾಲದ ಅನೇಕ ಬರಹಗಾರರಿಗೆ ಇರುವಂತೆ ತಿರುಮಲಾಂಬಾ ಅವರು ಸನಾತನತೆಯಲ್ಲಿ ಉಂಟಾಗಬೇಕಾದ ಪರಿವರ್ತನೆಯನ್ನು ಈ ಕಾದಂಬರಿಯಲ್ಲಿ ಹೇಳುತ್ತಾರೆ. 'ಮಾತೃ ನಂದಿನಿಯ ವಿಚಾರದಲ್ಲೂ ನಾವು ಹೇಳತಕ್ಕುದು ಬಹಳವಿಲ್ಲ. ಸಮಾಜ ಸಂಸ್ಕರಣದ ಜನರೂ ಮನೆಗಳಲ್ಲಿಯೇ ಮದುವೆ ಮಾಡುತ್ತಾರೆ. ಈ ಪುಸ್ತಕದಲ್ಲಿಯ ನಾಯಕ ನಾಯಕಿಯರಾದರೆ ಯಾವುದೋ ಒಂದು ವನದಲ್ಲಿ ಎಂತದೋ ಒಂದು ಋಷ್ಯಾಶ್ರಮದಲ್ಲಿ ಮದುವೆ ಮಾಡಿಕೊಳ್ಳುತ್ತಾರೆ. ನವೀನ ನಾಗರೀಕತೆಯಲ್ಲಿ ಮುಂದಕ್ಕೆ ಬರಬಹುದಾದ ವಿಚಾರವಿದ್ದು, ಮೊದಲಿಂದ ಕೊನೆಯವರೆಗೂ ಹೊಸ ಹೊಸ ರೀತಿಯಲ್ಲಿ ನಡೆಯುವ ಪಾತ್ರಗಳೇ ಪುಸ್ತಕದಲ್ಲಿ ಮುಖ್ಯವಾಗಿರುವುದರಿಂದ ಯಾವುದೂ ಅಸಂಭವವೆಂದು ಮನಸ್ಸಿಗೆ ತೋರುವುದಿಲ್ಲ. ಅಭ್ಯಾಸಬಲದಿಂದ ಮನಸ್ಸು ಸ್ವಸ್ಥವಾಗಿರುತ್ತದೆ'. ಈ ಕಾದಂಬರಿಯ ಮುಖ್ಯಾಂಶದ ಬಗೆಗೆ ವಿಮರ್ಶೆ ಹೇಗೆ ಕಣ್ಣು ಮುಚ್ಚಿಕೊಂಡಿತು ಎಂಬುದಕ್ಕೆ ಈ ಮಾತುಗಳು ಸಾಕ್ಷಿಯಾಗಿದೆ. (ಪೂರ್ವೋಕ್ತ ಪು.೫೩) ಒಟ್ಟಿನಲ್ಲಿ ಈ ಕಾದಂಬರಿಯು ಸ್ತ್ರೀಪರವಾದ ನಿಲುವನ್ನು ತಳೆಯುತ್ತದೆ.

ಅವರ 'ವಿಕ್ರಮ' ಕೂಡಾ ಪತ್ತೇದಾರಿ ಕಾದಂಬರಿ. ೧೯೧೬ರಲ್ಲಿ ಪ್ರಕಟವಾದ ಈ ಕಾದಂಬರಿಯು ೧೯೨೭ ಮತ್ತು ೧೯೩೧ ರಲ್ಲಿ ಮರು ಪ್ರಕಟಣೆ ಕಂಡಿದೆ. ಕಲ್ಯಾಣ ನಗರದ ನ್ಯಾಯಾಧಿಕಾರಿಯಾದ ದಯಾನಾಥನಿಗೆ ಗುಪ್ತಸಂಘದವರು ಸೂಚನಾ ಪತ್ರವನ್ನು ನೀಡುತ್ತಾರೆ. ಇದು ಪೋಲಿಸ್ ಸೂಪರಿಂಟೆಂಟ್ ದುರ್ಗಾ ಪ್ರಸಾದನಿಗೆ ತಿಳಿಯುತ್ತದೆ. ಈ ವಿಷಯವನ್ನು ಪತ್ತೇದಾರನಾದ ವಿಕ್ರಮನಿಗೆ ತಿಳಿಸಲಾಗುತ್ತದೆ. ವಿಕ್ರಮನ ಪತ್ನಿಯೂ ಶೂರೆಯಾಗಿದ್ದಾಳೆ. ಕಾದಂಬರಿಯಲ್ಲಿ ಅನೇಕ ನಿಗೂಢ ಕೃತ್ಯಗಳು ನಡೆಯುತ್ತದೆ. ಕಾದಂಬರಿಯ ಎರಡನೆಯ

ಭಾಗದಲ್ಲಿ ವಿಕ್ರಮನ ಸಾಹಸ ನಡೆಯುತ್ತದೆ. ನಾಪತ್ತೆಯಾದ ಉಪಾಧ್ಯಾಯರ ಪತ್ನಿ ಲಲಿತೆಯ ಬಂಧ ವಿಮೋಚನೆಯಾಗುತ್ತದೆ. ಕಾದಂಬರಿಯ ಮೂರನೆಯ ಭಾಗದಲ್ಲಿ ಪ್ರಮದೆಯ ಪಶ್ಚಾತ್ತಾಪದ ಚಿತ್ರಣವಿದೆ. ಹಾಗೂ ಪ್ರಮದೆಯಲ್ಲಿ ಅವಳ ಪೂರ್ವ ಪ್ರೇಮಿ ಮಧುಕರನು ಪ್ರಣಯ ಭಿಕ್ಷೆಯನ್ನು ಬೇಡುತ್ತಾನೆ. ಕಥೆಯ ಕೊನೆಯಲ್ಲಿ ಕುಮಾರ ಶೇಖರ ಮತ್ತು ಮಧುಕರರ ಪಶ್ಚಾತ್ತಾಪದ ಚಿತ್ರವಿದೆ. ಈ ಕಾದಂಬರಿಯಲ್ಲಿಯ ಭವಾನಿಯಂಥ ಉದಾತ್ತ ಗುಣದ ಹೆಂಗಸಿನ ಚಿತ್ರವಿದೆ. ಪೂರ್ಣಕಲಾ ಸತೀ ಹಿತೈಷಿಣಿ ಗ್ರಂಥ ಮಾಲೆಯ ಹತ್ತನೆಯ ಕಾದಂಬರಿಯಿದು. ಈ ಕಾದಂಬರಿಯಲ್ಲಿಯೂ ಉದಾತ್ತಭಾವಗಳು ವಿಜೃಂಭಿಸಿದೆ. ಮಧು ಮಿತ್ರ ಎಳೆಯ ವಯಸ್ಸಿನಲ್ಲಿ ತನ್ನ ತಂದೆಯನ್ನು ಕಳೆದುಕೊಳ್ಳುತ್ತಾನೆ. ಅವನಿಗೆ ದುರ್ಗುಣಗಳು ಅಂಟಿಕೊಳ್ಳುತ್ತದೆ. ಗುರುಕುಲದಲ್ಲಿ ಅವನ ಗುಣವನ್ನು ಗುರುಗಳು ತಿದ್ದುತ್ತಾರೆ. ಕಲಾಧನ, ಅಕ್ಷಯ, ಕುಮುದ, ಮಿತ್ರರು ಆದರ್ಶ ವಿದ್ಯಾರ್ಥಿಗಳು ಇವರಿಗೆ ದೈವಭಕ್ತಿ, ಗುರುಭಕ್ತಿ, ಧರ್ಮನಿಷ್ಠೆಯಿರುತ್ತದೆ. ಕಾದಂಬರಿಯಲ್ಲಿ ತಾರಾಕಾಂತ ಬಾಬು ಮತ್ತು ರೋಹಿಣಿಯರ ದಾಂಪತ್ಯ ಚಿತ್ರಣ ಬರುತ್ತದೆ. ರೋಹಿಣೀಯು ವಿದೇಶಿ ಆಚಾರದ ಬಗ್ಗೆ ಅಸಕ್ತಳಾಗಿರುತ್ತಾಳೆ. ಕೊನೆಗೆ ಅವಳು ಬದಲಾಗುತ್ತಾಳೆ. ಗುರುಕುಲದ ಕೆಲವು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿಸಿದ ಮೇಲೆ ವಿವಾಹವಾಗುತ್ತಾರೆ. ಮತ್ತೆ ಕೆಲವರು ಗುರುಗಳ ಅಪ್ಪಣೆ ಪಡೆದು ದೇಶಾಟನೆ ಹೊರಡುತ್ತಾರೆ.

'ಈ ಕಾದಂಬರಿ ಅಪೂರ್ಣವಾಗಿದೆಯೆಂದು ಕಾದಂಬರಿಯ ಕೊನೆಯಲ್ಲಿ ಲೇಖಕಿ ಹೇಳಿದ್ದಾರೆ. ಕಲಾಧನ ಮೊದಲಾದವರು ಪ್ರತಿಜ್ಞೆಯನ್ನು ಪಾಲಿಸಿ, ದೇಶಾಟನೆಯಿಂದಹಿಂದಿರುಗಿ ಕನ್ಯೆಯರ ಕೈ ಹಿಡಿಯುವ ಮುನ್ನವೇ ಈ ಕಾದಂಬರಿಯನ್ನು ನಿಲ್ಲಿಸಬೇಕಾಗಿ ಬಂದಿದೆಯೆಂದೂ ಈ ಕಾದಂಬರಿಯ ಮುಂದಿನ ಭಾಗವಾದ 'ಕುಮುದ ಪಾತ್ರ'ದಲ್ಲಿ ಈ ಎಲ್ಲ ಘಟನೆಗಳನ್ನು ಪೂರ್ಣಗೊಳಿಸುವ ಅಭಿಲಾಶೆ ತಮಗಿದೆಯೆಂದು ಹೇಳಿದ್ದಾರೆ. ಆದರೆ ಅ ಬರವಣಿಗೆಯನ್ನು ಅವರು ಮಾಡಿದ್ದಕ್ಕೆ ಮಾಹಿತಿಯಿಲ್ಲ". (ಪೂರ್ವೋಕ್ತ ಪು.೫೭)ಈ ಕಾದಂಬರಿಯಲ್ಲಿಯೂ ಆರ್ಯ ಧರ್ಮದ ವೈಭವೀಕರಣವಿದೆ. ಕಾದಂಬರಿಯಲ್ಲಿ ಹೇರಳವಾಗಿ ಸನಾತನತೆಯ ಸಂಕೀರ್ತನೆಯಿದೆ. ಪಾಶ್ಚಾತ್ಯ ಪದ್ಧತಿಯ ನಿರಾಕರಣೆಯಿದೆ. ಹಾಗೆಯೇ ಈ ಕಾದಂಬರಿಯಲ್ಲಿ ಸ್ತ್ರೀ ವಿದ್ಯಾಭ್ಯಾಸದ ಬಗೆಗೂ ಚರ್ಚೆಗಳಿವೆ. "ನಿಶಾಕಾಂತ"೧೯೨೧ ರಲ್ಲಿ ಈ ಕೃತಿಯು ಮರು ಮುದ್ರಣ ಕಂಡಿತು. ಕಾದಂಬರಿಯಲ್ಲಿ ವಿಸ್ಮಯಕಾರಿ ಘಟನೆಗಳ ವಿವರಗಳಿವೆ. ಕುಮುದ್ವತಿಯ ಯುವರಾಜ ನಿಶಾಕಾಂತ. ಅವನ ತಾಯಿಯ ಹೆಸರು ಸುಗಂಧಿಸಿ. ರಾಮಪುರ ಆ ರಾಜ್ಯದ ಸಾಮಂತ ರಾಜ್ಯ, ಅಲ್ಲಿನ ರಾಜ ಕುಮಾರಿ ಶಶಿಕಲೆ. ಅವಳು ನಿಶಾಕಾಂತನ ಮಾವನ ಮಗಳು. ಅವಳು ಮತ್ತು ನಿಶಾಕಾಂತ ಅನುರಕ್ತರಾಗಿದ್ದರು. ಇದನ್ನು ಚಿತ್ರಾಂಗಿಯೆಂಬವಳು ಸಹಿಸುವುದಿಲ್ಲ. ಅದಕ್ಕಾಗಿ ಅವಳು ಡಕಾಯಿತರಾಜ ಅತಿಬಲನ ಮೊರೆ ಹೋಗುತ್ತಾಳೆ. ಅತಿ ಬಲನು ಶಶಿಕಲೆ ಮತ್ತು ಆಕೆಯ ಸೋದರನನ್ನು ಅಪಹರಿಸುತ್ತಾನೆ. ನಿಶಾಕಾಂತನು ಅತಿಬಲನನ್ನು ಕೊಲ್ಲುತ್ತಾನೆ. ಶಶಿಕಲೆಯಲ್ಲಿ ನಿಶಾಕಾಂತನಿಗೆ ಪ್ರಣಯ ಭಾವ ಬೆಳೆಯುತ್ತದೆ. ಅತಿ ಬಲನಿಂದ ತಪ್ಪಿಸಿಕೊಂಡ ಶಶಿಕಲೆಯು ವಿಕ್ರಮ ಬಾಹುವಿನಲ್ಲಿ ಆಶ್ರಯ ಪಡೆಯುತ್ತಾಳೆ. ಅಲ್ಲಿ ಶ್ಯಾಮಲೆಯನ್ನು ಭೇಟಿಯಾಗುತ್ತಾಳೆ. ಶ್ಯಾಮಲೆ ಮತ್ತು ಮಧುರಾನಾಥರ ಪ್ರಣಯ ಬೆಳೆಯುತ್ತದೆ. ಕಾದಂಬರಿಯ

ಕೊನೆಯಲ್ಲಿ ನಿಶಾಕಾಂತ ಶಶಿಕಲೆ; ಶಶಿಕಲೆಯ ಸೋದರ ದೇವಸೇನೆಯರ ವಿವಾಹಗಳು ನಡೆಯುತ್ತವೆ. ಈ ಕಾದಂಬರಿಯಲ್ಲಿಯೂ ಆದರ್ಶವಾದಿ ನಿಲುವು ವ್ಯಕ್ತವಾಗಿದೆ.

ಗಿರಿಜಾಬಾಯಿ ಕಾದಂಬರಿಯು ೧೯೨೪ ರಲ್ಲಿ ಪ್ರಕಟವಾಗಿದೆಯೆಂದು ಹೇಳಲಾಗಿದೆ. ಗಿರಿಜೆಯು ಈ ಕಾದಂಬರಿಯ ಕೇಂದ್ರಪಾತ್ರ. ಈಕೆ ಸಮಾಜ ಸೇವಕಿ. ಅನಾರೋಗ್ಯದ ಕಾರಣದಿಂದ ತನ್ನ ಸಮಾಜ ಸೇವಾ ಕಾರ್ಯ ನಿಲ್ಲಿಸಿ. ಹರಪುರಕ್ಕೆ ಬರುತ್ತಾಳೆ. ಅಲ್ಲಿ ಅವಳಿಗೆ ಬಂದಿದ್ದ ಮೂರು ಪತ್ರಗಳನ್ನು ಓದುತ್ತಾಳೆ. ಮೊದಲನೆಯ ಪತ್ರ ಅವಳ ಅಕ್ಕನದು. ಎರಡನೆಯ ಪತ್ರ ಕಾರ್ಯದರ್ಶಿನಿ ಮಣಿಬಾಯಿಯದು. ಮೂರನೆಯ ಪತ್ರ ಅವಳ ಪತಿಯದು. ಗಿರಿಜಿಯು ಲೋಕದಲ್ಲಿ ವಿರಕ್ತಗೊಂಡು ದೇವಮಾಧವನಲ್ಲಿ ಆಸಕ್ತಳಾಗುತ್ತಾಳೆ. ಅದೇ ಸಮಯಕ್ಕೆ ಅವಳ ಪತಿ ಯೋಗಾನಂದನು ಬರುತ್ತಾನೆ. ಗಿರಿಜೆಗೆ ತನ್ನ ದೇಹ ತ್ಯಜಿಸಬೇಕೆಂಬ ಭಾವ ಬರುತ್ತದೆ. ಆ ಭಾವವನ್ನು ಅವಳ ಗಂಡನಿಗೆ ಹೋಗಲಾಡಿಸಲು ಆಗುವುದಿಲ್ಲ. ಯೋಗಾನಂದನು ಗಿರಿಜೆಯನ್ನು ಹಿರಿಯರನ್ನು ಕೇಳದೇ ವಿವಾಹವಾಗಿರುತ್ತಾನೆ. ಹೀಗಾಗಿ ಗಿರಿಜೆಯು ಸಹಜವಾಗಿ ಗಂಡನ ಮನೆಗೆ ಹೋಗಲಾರದವಳಾಗಿದ್ದಾಳೆ. ಗಿರಿಜೆಯು ತನ್ನ ಗಂಡನನ್ನು ಸರಿಯಾಗಿ ಭೇಟಿಯಾಗಲು ಆಗುವುದಿಲ್ಲ. ಕಾದಂಬರಿಯ ಕೊನೆಯಲ್ಲಿ ಅವಳು ದೇಶ ಸೇವಾ ಕಾರ್ಯಕ್ಕೆ ತೊಡಗುತ್ತಾಳೆ. ದೈವಭಕ್ತಿ; ಪ್ರತಿಭಕ್ತಿ; ದೇಶಭಕ್ತಿಗಳು ಈ ಕಾದಂಬರಿಯಲ್ಲಿ ಮೇಳೈಸಿಕೊಂಡಿವೆ. ತಿರುಮಲಾಂಬ ಅವರ ಕಾದಂಬರಿ ಬರವಣಿಗೆಯಲ್ಲಿ ಇದು ಸ್ವಲ್ಪ ಭಿನ್ನವಾದ ಪ್ರಯತ್ನದಂತೆ ಕಾಣಿಸುತ್ತದೆ. 'ಆನಂದ ಮಯಿ'ಈ ಕಾದಂಬರಿಯು ಸಂಪೂರ್ಣ ಅಚ್ಚಾಗಿದೆಯೇ ಇಲ್ಲವೇ ಎಂದು ಸರಿಯಾಗಿ ತಿಳಿಯದು ಎಂದು ವಿಜಯಾದಬ್ಬೆಯವರು ಹೇಳುತ್ತಾರೆ.

ಈ ಕಾದಂಬರಿಯ ನಾಯಕಿ ಆನಂದೆ, ಅವಳ ಶಾಲಾ ದಿನಗಳ ವರ್ಣನೆಯು ಈ ಕಾದಂಬರಿಯಲ್ಲಿದೆ. 'ಬ್ರಹ್ಮಚಾರಣಿ' ಕಾದಂಬರಿಯೂ ಅಪೂರ್ಣವಾಗಿದೆ. ಬ್ರಹ್ಮಚಾರಿಣಿಯು ಈ ಕಾದಂಬರಿಯ ನಾಯಕಿಯಾಗಿದ್ದಾಳೆ. ಪ್ರಾರಂಭದಲ್ಲಿ ಆಕೆಯ ಪರಿಚಯವನ್ನು ಲೇಖಕಿ ಮಾಡಿಕೊಟ್ಟಿದ್ದಾರೆ. ಕಾದಂಬರಿಯು ಕನ್ನಡಸುತ್ತಿಯೊಂದಿಗೆ ಪ್ರಾರಂಭವಾಗಿದೆ. ಕಾದಂಬರಿಯ ಆರಂಭದಲ್ಲಿ ಬ್ರಹ್ಮಚಾರಿಣಿಯ ಪರಿಚಯವಿದೆ. ಈ ಕಾದಂಬರಿಯಲ್ಲಿ ನಾಡು ನುಡಿಯ ಪರಿಚಯವಿದೆ. 'ಕಾದಂಬರಿಯ ಮುಂದಿನ ಭಾಗದಲ್ಲಿ ಆತ್ಮಹತ್ಯೆಗೆ ತೊಡಗಲಿದ್ದ ವಿಧವೆ ಅಶೋಕೆಯನ್ನು ಬ್ರಹ್ಮಚಾರಿಣಿಯು ಉಳಿಸುವ ಸಂದರ್ಭವನ್ನು ಕಾಣಿಸುತ್ತವೆ. ಆತ್ಮ ಘಾತಕ್ಕೆ ತೊಡಗಬಾರದೆಂಬುದನ್ನು ಬ್ರಹ್ಮಚಾರಿಣೀ ಅಶೋಕೆಗೆ ವಿವರಿಸುವಲ್ಲಿಗೆ ಕಾದಂಬರಿಯು ನಿಂತಿದೆ'೧೫ (ಪೂರ್ವೋಕ್ತ ಪು.೭೩). ರವಿವರ್ಮ ಕಾದಂಬರಿಯ ೧೯೩೬ರಲ್ಲಿ ಪ್ರಕಟವಾಯಿತು. ಕಥಾಚೌಕಟ್ಟು ಪೂರ್ಣಕಲಾ ಕಾದಂಬರಿಯ ರೀತಿಯಲ್ಲಿಯೇ ಇದೆಯೆಂದು ವಿಜಯಾದಬ್ಬೆಯವರು ಹೇಳುತ್ತಾರೆ. ೧೬ (ಅದೇ ಪು.೭೪) ಅಲ್ಲಿಯಂತೆ ಇಲ್ಲಿಯು ಒಂದು ವಿದ್ಯಾಶ್ರಮ ಅಲ್ಲಿನ ಹಾಗೆಯೇ ಇಲ್ಲಿ ಒಬ್ಬ ದುಷ್ಟ ಮತ್ತೊಬ್ಬ ಆದರ್ಶ ವಿದ್ಯಾರ್ಥಿ. ಅಲ್ಲಿಯಂತೆಯೇ ಇಲ್ಲಿಯೂ ದುಷ್ಟನ ಪರಿವರ್ತನೆ, ಆದರ್ಶ ವಿದ್ಯಾರ್ಥಿಯಾದ ವಿಜಯ, ತಿರುಮಲಾಂಬರ ಅನೇಕ ಕಾದಂಬರಿಗಳಂತೆ ಅದು ಕೂಡ ನ್ಯಾಯವಿಚಾರಣೆ, ಸದ ವ್ಯಕ್ತಿಯ ಗೆಲುವು ಮತ್ತು ಉತ್ಸವದೊಂದಿಗೆ ಕೊನೆಯಾಗಿದೆ. ರವಿವರ್ಮಪೂರ್ಣಕಲಾಕ್ಕಿಂತ ಕೆಲವೆಡೆ ಬೇರೆಯಾಗಿದೆ. ಈ ಕಾದಂಬರಿಯಲ್ಲಿ

ಮುಖಾಮುಖಿಯಾಗಿ ನಿಲ್ಲುವವರು ಅಣ್ಣ ತಮ್ಮಂದಿರು. ರವಿವರ್ಮ ದುಷ್ಟನಾದರು ಮಧು ಮಿತ್ರನಷ್ಟು ದುಷ್ಟನಲ್ಲ. (ವೇಶ್ಯಾಸಂಗ, ಪಾನಮತ್ತತೆಯ ಪ್ರಸ್ತಾಪವಿಲ್ಲ) ಇಲ್ಲಿಯ ಆಶ್ರಮ ಶಾಂತಿನಿಕೇತನದಷ್ಟು ದೊಡ್ಡದು ಸಂಕೀರ್ಣವಾದದ್ದು ಅಲ್ಲ. ಒಟ್ಟಿನಲ್ಲಿ ಪೂರ್ಣಕಲಾ ಕಾದಂಬರಿಯ ಒಂದು ಸರಳ ಸಂಕ್ಷಿಪ್ತ (೮೬ ಪುಟಗಳು) ರೂಪ ಇದು ಎನ್ನಬಹುದು (ಪೂರ್ವೋಕ್ತ ಪು.೭೫).

ಮಣಿಮಾಲಾ ಕಾದಂಬರಿಯು ೧೯೩೩ರಲ್ಲಿ ಪ್ರಕಟವಾಯಿತು. ವಿದ್ಯುಲ್ಲತಾ ಕಾದಂಬರಿಯಲ್ಲಿ ಕಣ್ಮರೆಯಾದ ಹರಿಣಿಯ ಕತೆಯೆ ಈ ಕಾದಂಬರಿಯಲ್ಲಿಯೂ ಮುಂದುವರಿದಿದೆ. ಈ ಕಾದಂಬರಿಯು ಕೊಂಚ ಪತ್ತೇದಾರಿ ಕಾದಂಬರಿಯನ್ನು ಹೋಲುತ್ತದೆ. ಇದರಲ್ಲಿಯೂ ಪತ್ತೇದಾರಿ ಕಾದಂಬರಿಯಲ್ಲಿರುವಂತೆ ನಿಗೂಢತೆ, ಸಾಹಸ ಮುಂತಾದವುಗಳು ಇವೆ. ಈ ಕಾದಂಬರಿಯಲ್ಲಿ 'ಮಣಿಮಾಲೆ'ಯೇ ಕೇಂದ್ರ ಪಾತ್ರವಾಗಿದೆ. ಮಣಿಮಾಲೆಯ ದರೋಡೆಕೋರರದಿಂದ ತಪ್ಪಿಸಿಕೊಂಡು ಬಂದು ಹರಿಣಿಯೆಂಬ ಹೆಸರಿಟ್ಟುಕೊಳುತ್ತಾಳೆ. ಅಲ್ಲಿ ಅವಳು ಜಯಲತೆ, ಗೋಪಿನಾಥರ ಆಶ್ರಯ ಪಡೆದು ಪ್ರೌಢವಿದ್ಯಾಭ್ಯಾಸ ಪಡೆಯುತ್ತಾಳೆ. ಶಚೀಕಾಂತನಿಗೆ ಅವಳನ್ನು ಮದುವೆ ಮಾಡಿಕೊಡುವುದೆಂಬ ನಿಶ್ಚಯವಾಗಿರುತ್ತದೆ. ಅದನ್ನುತಿಳಿದ ಅಮರನಾಥನು ಅವಳನ್ನು ಅಪಹರಿಸಿ ಕಾಮಪಾಲನ ಧರ್ಮ ಭವನದಲ್ಲಿಡುತ್ತಾನೆ. ಅಲ್ಲಿ ಹರಿಣಿ ನವೀನಗೋಪಾಲನೆಂಬ ಹೆಸರಿನಿಂದ ದುಷ್ಕರ್ಮಿಗಳನ್ನು ಹಿಡಿದು ಅವರ ಮನಃ ಪರಿವರ್ತನೆಯಾಗುವಂತೆ ಮಾಡುತ್ತಾಳೆ. ಮಣಿಮಾಲೆಯು ಅನಂತರ ಶಚೀಕಾಂತನನ್ನು ಸೇರುತ್ತಾಳೆ. ಇದು ಕಾದಂಬರಿಯ ಸಾರ. ಬರವಣಿಗೆಯ ರೀತಿಯಲ್ಲಿ ಈ ಕಾದಂಬರಿ ಸಾಕಷ್ಟು ಸುಧಾರಣೆಯನ್ನು ತೋರಿದೆ. ಉದ್ದುದ್ದವಾದ ಹಿತೋಪದೇಶಗಳು ಇಲ್ಲವೆನ್ನುವಷ್ಟು ಕಡಿಮೆ ಇಲ್ಲಿಯ ನಾಯಕಿ ಬಿಡುವಿಲ್ಲದವಳಾಗಿರುವುದು. ಅವರಿಗೆ ಬಂದ ತಮ್ಮ ಕಾದಂಬರಿಗಳ ವಿಮರ್ಶೆಯನ್ನು ಲೇಖಕಿ ಗಮನಿಸಿರುವುದು ಹಾಗೂ ಈ ಕಾದಂಬರಿಯ ಬರವಣಿಗೆ ಹೊತ್ತಿಗೆ ಮಾಗಿದ ಲೇಖಕಿಯ ಅನುಭವ ಇವು ಈ ಬದಲಾವಣೆಗೆ ಕಾರಣವಾಗಿರಬಹುದು. ನಿರೂಪಣೆಯು ತುಲನಾತ್ಮಕವಾಗಿ ಸಹಜತೆಯನ್ನು ಪಡೆದಿದೆ. ಇಲ್ಲಿಯ ಬರವಣಿಗೆಯ ಈ ಗುಣಗಳು ತಿರುಮಲಾಂಬ ಅವರ ಮುಂದಿನ ಬರವಣಿಗೆಯ ಬಗ್ಗೆ ಹೊಸ ಆಸೆಯನ್ನು ಮೂಡಿಸುವುದು ಸಹಜ. ಆದರೆ ಅವರ ಪ್ರಕಟಿತ ಕಾದಂಬರಿಗಳಲ್ಲಿ ಇದು ಕೊನೆಯದು ನಂತರದ ಅವರ ಬರವಣಿಗೆಗಳು ಇದ್ದಿರಬಹುದೆಂದು ಊಹಿಸಿದರೂ ಉಪಲಬ್ಧವಿಲ್ಲವೆಂದು ವಿಜಯಾದಬ್ಬೆಯವರು ಹೇಳುತ್ತಾರೆ. (ಅದೇ ಪು. ೮೦).ಕಾಂತಿಮತಿಈ ಕಾದಂಬರಿಯೂ ಅಪ್ರಕಟವಾಗಿದೆ. ಹೆಸರು ಸೂಚಿಸುವಂತೆ ಈ ಕಾದಂಬರಿಯಲ್ಲಿ ಕಾಂತಿಮತಿಯು ನಾಯಕಿಯಾಗಿದ್ದಾಳೆ. ತಿರುಮಲಾಂಬ ಅವರ ಇತರೆ ಕೆಲವು ಕಾದಂಬರಿಗಳಂತೆ ಈ ಕಾದಂಬರಿಯಲ್ಲಿಯೂ ನಾಯಕಿಯು ಸಾಹಸಿ, ಸಾರ್ವಭೌಮನ ಪತ್ನಿಯಾಗುವನೆಂದು ಚಿಕ್ಕಂದಿನಲ್ಲಿ ಪಣತೊಟ್ಟ ಅವಳು ಚೋರರನ್ನು ಎದುರಿಸುತ್ತಾಳೆ. ಸೇನಾನಿಯಾಗುತ್ತಾಳೆ. ಅನಂತರ ಅಣ್ಣನ ರಾಜ್ಯಕ್ಕೆ ಮುಳುವಾಗಿದ್ದ ಚಂದ್ರದೇವನನ್ನು ಸೆರೆಹಿಡಿಯುತ್ತಾಳೆ. ಮತ್ತೆ ಮತ್ತೆ ಕಣ್ಮರೆಯಾಗುತ್ತಾಳೆ. ಕೊನೆಗೆ ವಿಮಲಾಮಗನನ್ನು ವರಿಸುತ್ತಾಳೆ. ಒಟ್ಟಿನಲ್ಲಿ ಕಾದಂಬರಿ ಕ್ಷೇತ್ರಕ್ಕೆ ತಿರುಮಲಾಂಬಾ ಅವರು ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ತಿರುಮಲಾಂಬಾ ಅವರು ಸ್ತ್ರೀಯರಿಗೆ ದೊರೆಯಬೇಕಾದ ಶಿಕ್ಷಣ ಕ್ರಮ ಪುರುಷರಿಗೆ ದೊರೆಯುವ ಶಿಕ್ಷಣ ಕ್ರಮದಿಂದ ಬೇರೆ ರೀತಿಯಾಗಿರಬೇಕೆಂದು ಪ್ರತಿಪಾದಿಸುತ್ತಾರೆ.

೧೯(ಹಿತೈಷಿಣಿಯ ಹೆಜ್ಜೆಗಳು ೧೯೯೨ ಪು. ೧೧೦) ತಿರುಮಲಾಂಬಾ ಅವರ ಪ್ರಕಾರ ಹೆಣ್ಣು ಮಕ್ಕಳಿಗೆ, ಪುರುಷರಿಗೆ ದೊರೆಯುವ ರೀತಿಯ ಶಿಕ್ಷಣದ ಅಗತ್ಯವಿಲ್ಲ. "ಇಂತಹ ನವೀನ ವಿದ್ಯಾಭ್ಯಾಸದಿಂದ ನಮ್ಮ ಬಾಲಿಕೆಯರು ಯಾವುದನ್ನು ಸಂಪಾದಿಸಬೇಕಾಗಿದೆ? ಅವರಿಗೇನು ಕೊರತೆ? ಗಂಡಸರು ದುಡಿದು ತಂದುದನ್ನು ಆಯವರಿತು ವೆಚ್ಚ ಮಾಡಿ ಸಮಯಕ್ಕೆ ಒದಗುವಂತೆ ಗಳಿಸಿಟ್ಟುಕೊಂಡು, ತಮ್ಮ ತಮ್ಮ ಮನೆ, ಮಾರು, ಮಠ, ಮಕ್ಕಳನ್ನು ಜೋಪಾನವಾಗಿಟ್ಟುಕೊಳ್ಳುವುದೇ, ಮನೆಯಲ್ಲಿರುವ ಅಶಕ್ತರು, ದಿನಗಳೆದವರು, ಆರ್ತರು ಇರುವ ಲಾಲನೆ – ಪಾಲನೆಗಳಲ್ಲಿ ನಿರತರಾಗಿ, ದುಡಿದು ಬೇಸತ್ತು ಬರುವ ಗಂಡಸರಿಗೆ ತಮ್ಮ ಕೋಮಲ ಹೃದಯದಿಂದ ಆದರವನ್ನು ತೋರಿಸಿ, ಅವರ ಮನಸ್ಸಿಗೆ ಅಪಾಯಮಾನವಾಗುವಂತೆ ಆರೈಕೆಯನ್ನು ಮಾಡಿಕೊಂಡರೆ, ಅವರ ಕರ್ತವ್ಯವೆಲ್ಲಾ ನೆರವೇರಿದಂತೆಯೇ ಸರಿ" (ಅದೇ, ಪು ೭೫) ಇದು ತಿರುಮಲಾಂಬಾ ಅವರ ಅಭಿಪ್ರಾಯ. ವಸಾಹತು ಕಾಲದ ಶಿಕ್ಷಣದ ಬಗ್ಗೆ ಬಂದಿರುವ ಒಂದು ಮಾದರಿಯ ಅಭಿಪ್ರಾಯ ಈ ರೀತಿಯದು. ಈ ಮಾದರಿಯ ಪ್ರತಿಕ್ರಿಯೆಯಲ್ಲಿ ಸಾಂಪ್ರದಾಯಿಕವಾದ ದೃಷ್ಟಿಕೋನವಿದೆ. ಆದರೆ ತಿರುಮಲಾಂಬಾ ಅವರ ಪ್ರತಿಕ್ರಿಯೆಯಲ್ಲಿ ಮತ್ತೊಂದು ಮಾದರಿಯಿದೆ. "ಸ್ತ್ರೀಯರ ಉನ್ನತಿ ಅವನತಿಗಳ ಪ್ರತಿಯೊಂದು ವಿಚಾರದಲ್ಲಿಯೂ ಪುರುಷ ವರ್ಗದವರಲ್ಲಿ ಕಂಡು ಬರುವುದಕ್ಕೆ ಸ್ತ್ರೀಯರ ಬುದ್ಧಿ, ಮನಸ್ಸು, ಅಂತಃಕರಣಗಳ ಪ್ರಾಕೃತಿಕ ರಚನೆ, ಸ್ವಭಾವಗಳ ಉಪಯುಕ್ತವಾಗಿಯೂ, ಸಾವಿರಾರು ವರ್ಷಗಳಿಂದ ಅನುವಂಶಿಕವಾಗಿಯೂ, ಅವರ ಮನಸ್ಸಿನ ಮೇಲೆ ಉಂಟಾಗಿರುವ ಸಂಸ್ಕಾರ ವಿಷಯವಾಗಿಯೂ ಪುರುಷರಿಗಿಂತ ಅಪೂರ್ಣ ಪರಿಚಯವೇ ಕಾರಣವಾಗಿರುವುದೆಂದು ನಮ್ಮ ಮತವಾಗಿರುವುದು" (೧೯೨೦).

ತಿರುಮಲಾಂಬಾ ಅವರ ಮಾತಿನಲ್ಲಿ ಗೊತ್ತಾಗುತ್ತಿರುವಂತೆ ಅವರ ವಿಮರ್ಶೆಯ ನಿಲುವಿನ ಮಾನದಂಡ ದೈಹಿಕ ವ್ಯತ್ಯಾಸವನ್ನೇ ಅಂಗೀಕರಿಸಿದೆ. ದೇಹದ ವ್ಯತ್ಯಾಸವು ಗುಣ ಮತ್ತು ಬರವಣಿಗೆಯ ಪ್ರಭಾವ ಬೀರುವತ್ತದೆ. ಆ ರೀತಿಯ ನಂಬಿಕೆಗೆ ಸಾವಿರಾರು ವರ್ಷದ ಇತಿಹಾಸವಿದೆಯೆಂದು ಅವರ ಅಭಿಪ್ರಾಯ. ತಿರುಮಲಾಂಬಾ ಅವರ ಬರಹವನ್ನು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಆದರೆ ಅವರ ಬರವಣಿಗೆಗೆ ಚಾರಿತ್ರಿಕ ಮಹತ್ತ್ವವಿದೆ. ಸಾಂಪ್ರದಾಯಿಕ ಪಿತೃರೂಪಿ ಸಂಸ್ಕೃತಿಯ ನಡುವೆ ಅವರಿಗೆ (ವಿಧವೆಯಾಗಿದ್ದು) ಲಿಖಿತ ರೂಪವಾಗಿ ಬರೆಯಲು ಸಾಧ್ಯವಾಯಿತು. ವಾಸ್ತವವಾಗಿ ಮೌನವನ್ನು ಭೇದಿಸಿ ಬರೆಯಲು ಸಾಧ್ಯವಾಗಿರುವುದೇ ಚಾರಿತ್ರಿಕವಾಗಿ ಮಹತ್ತ್ವದ ಪ್ರಕ್ರಿಯೆಯಾಗಿದೆ. ಸಾಂಪ್ರದಾಯಿಕ ಪಿತೃರೂಪಿ ಸಂಸ್ಕೃತಿಯಲ್ಲಿ ಬರೆಯಲು ಪ್ರಾರಂಭಿಸಿದ ಚಟುವಟಿಕೆಯು ಮುಖ್ಯವಾದುದು. ಚಾರಿತ್ರಿಕವಾಗಿ ಈ ರೀತಿಯ ಬರೆವಣಿಗೆಗಳ ಮಾದರಿಗಳು ಗಂಡು – ಹೆಣ್ಣಿನ ನಡುವಣ ತಾರತಮ್ಯ ಮತ್ತು ಅದರ ಹಿಂದಿರುವ ರಾಜಕಾರಣಗಳನ್ನು ಬಯಲಿಗೆಳೆಯುತ್ತವೆ. ಇದು ಮುಖ್ಯವಾದುದು.

ತಿರುಮಲಾಂಬಾ ಅವರ ಚಿಂತನೆಯಲ್ಲಿ ಆ ಹೊತ್ತಿನ (ಅಂದರೆ ವಸಾಹತು ಕಾಲಘಟ್ಟದ) ಮಹಿಳಾ ಸ್ಥಿತಿಗತಿ ಮತ್ತು ಅವರ ಮುಂದಿರುವ ಆಯ್ಕೆಯ ಸಂಗತಿಗಳಿವೆ. ಪಶ್ಚಿಮದ ಮಾದರಿಯು ಬೇಡವೆಂಬುದು ಅವರ ಖಚಿತವಾದ ನಿಲುವು. ವಸಾಹತು ಆಳ್ವಿಕೆಯಲ್ಲಿ ಒಳಗಾದ ಸ್ತ್ರೀಯರ ಶಿಕ್ಷಣ. ಅವರ ಜೊತೆಗಿರುವ ಸಂಪ್ರದಾಯ, ಕೌಟುಂಬಿಕ ಭಾವನಾತ್ಮಕ ಸಂಬಂಧಗಳ

ನಿರೂಪಣೆಯೇ ತಿರುಮಲಾಂಬಾ ಅವರಲ್ಲಿ ಮುಖ್ಯವಾಗಿವೆ. ಮೂರನೆಯ ಜಗತ್ತಿನ ಸ್ತ್ರೀಯರು ಆಧುನಿಕತೆ ಮತ್ತು ಸಂಪ್ರದಾಯಗಳ ಹಿಡಿತದಲ್ಲಿರುತ್ತಾರೆಂಬ ಗಾಯತ್ರಿ ಸ್ಪಿವಾಕ್ ಅವರ ಮಾತು ಇಲ್ಲಿ ಉಲ್ಲೇಖನೀಯ. ತಿರುಮಲಾಂಬಾ ಅಂಥವರು ಬರೆದುದೇ ಈ ದೃಷ್ಟಿಯಿಂದ ಸಾಂಸ್ಕೃತಿಕ ಬಿಡುಗಡೆಯ ದ್ಯೋತಕವಾಗಿದೆ ಮತ್ತು ಹೀಗೆ ತಿರುಮಲಾಂಬಾ ಅವರ ಬರಹಗಳು ಆ ಕಾಲದ ಸಾಮಾಜಿಕ, ರಾಜಕೀಯ ಸಂವಹನವಾಗಿವೆ. . 'ಸತೀ ಹಿತೈಷಿಣೀ ಗ್ರಂಥಮಾಲೆ' ಯಲ್ಲಿ ತಿರುಮಲಮ್ಮ ನವರ ಕೃತಿಗಳು ಪ್ರಕಟವಾಗಿದ್ದವು. ಅವುಗಳ ಕುರಿತು ಮಾಸ್ತಿಯವರು ಸುಧೀರ್ಘವಾದ ಲೇಖನವೊಂದನ್ನು ಬರೆದು ತಿರುಮಲಮ್ಮನವರ ವಿಚಾರದ ಬಗ್ಗೆ ತಮ್ಮ ಭಿನ್ನಾಭಿಪ್ರಾಯವನ್ನು ಹೇಳುತ್ತಾರೆ. "ಸ್ತ್ರೀಯರು ವಿದ್ಯಾವತಿಯರಾಗುವುದು ದೇಶದ ಏಳಿಗೆಗೆ ಅತ್ಯವಶ್ಯಕವೆಂದು ಎಲ್ಲರೂ ಒಪ್ಪುವರು. ಈ ವಿಷಯವನ್ನು ಈ ಪುಸ್ತಕಗಳಲ್ಲಿ ಗ್ರಂಥಕರ್ತರು ಒತ್ತಿ ಒತ್ತಿ ಹೇಳಿದ್ದಾರೆ. ಆದರೆ ವಿದ್ಯೆ ಎಂದರೆ ಓದು ಬರಹ ಬರುವುದು ಎಂದು ಸಾಮಾನ್ಯವಾಗಿ ಜನರೆಲ್ಲರೂ ತಿಳಿದಿರುವ ಹಾಗೆಯೇ ಇವರೂ ಎಣಿಸುತ್ತಾರೆಂದು ತೋರುತ್ತದೆ". ಮಾಸ್ತಿಯವರು ಹೀಗೆ ತಿರುಮಲಾಂಬಾ ಅವರ ಪುಸ್ತಕಗಳ ಹಿಂದಿರುವ ತಾತ್ತ್ವಿಕತೆಯನ್ನೇ ಪ್ರಶ್ನಿಸುತ್ತಾರೆ. ಆದರೆ ಒಟ್ಟು ವಿಮರ್ಶೆಯಲ್ಲಿ ಮಾಸ್ತಿಯವರ ನಿಲುವು ಕೃತಿಯ ಬಂಧದಲ್ಲಿಯೂ ಪೂರ್ಣವಾಗಿರಬೇಕೆಂಬುದೇ ಆಗಿದೆ.

ಅಧ್ಯಾಯ – ೯

ಅವಕಾಶ ಮತ್ತು ಕಾಲ ಹಾಗೂ ಕಾದಂಬರಿಯ ಪ್ರಶ್ನೆಗಳು

ಕಾಲ ಮತ್ತು ಅವಕಾಶಗಳ ಕುರಿತು ಬೇರೆ ಬೇರೆ ವಿಧವಾದ ಚರ್ಚೆಗಳು ಬಂದಿವೆ. ಭಕ್ತಿನ್ ಇದನ್ನು ಅತ್ಯಂತ ವಿಶೇಷವಾದ ಅರ್ಥದಲ್ಲಿ ಬಳಸಿದ್ದಾನೆ. ಕಾಲವನ್ನು ನಾವು ಚರಿತ್ರೆ ಎನ್ನುವ ಅರ್ಥದಲ್ಲಿ ಬಳಸಬಹುದು. ಅವಕಾಶವನ್ನು ನಾವು ಇನ್ನೊಂದು ಅರ್ಥದಲ್ಲಿ ಬಳಸುವುದಕ್ಕೆ ಸಾಧ್ಯವಿದೆ. ನಮ್ಮ ಮಾತುಗಳು ಇನ್ನೊಬ್ಬನಿಗೆ ಇರುತ್ತದೆ. ಆದ್ದರಿಂದ ನಾವು ಇನ್ನೊಬ್ಬರಿಗೆ ಮಾತನ್ನು ಹೇಳುತ್ತೇವೆ. ಆದು ಕ್ರಿಯಾಶೀಲವಾದ್ದು ಹೌದು. ಕಾದಂಬರಿಯು ಏನು ಮಾಡುತ್ತದೆ ಎಂದು ಇಲ್ಲಿ ಯೋಚನೆಯನ್ನು ಮಾಡಬೇಕು: ಕಾದಂಬರಿ ಮತ್ತು ಅದರ ರೂಪವನ್ನು ನೋಡಿದರೆ ಅದು ಹೇಳುವುದು ನಮಗೆ ಅನ್ಯರ ಕತೆಯನ್ನು . ಯಾಕೆಂದರೆ ಅದರಲ್ಲಿ ಕಥನವು ನಮ್ಮಲ್ಲಿ ಆ ತರಹದ ಭಾವವನ್ನು ಹೇಳುತ್ತದೆ. ಅನ್ಯ ಎನ್ನುವುದು ಕಾದಂಬರಿಯಲ್ಲಿ ವಿವಿಧ ಕಾರ್ಯವನ್ನು ಹೇಳುತ್ತದೆ. ಕಾದಂಬರಿ ಎನ್ನುವುದು ನಮಗೆ ಸಮಾಜ ಮತ್ತು ಅದರ ಸಂಬಂಧವನ್ನು ನಿರೂಪಿಸುತ್ತದೆ. ಕಾದಂಬರಿಯಲ್ಲಿ ನಾಯಕನನ್ನು ಅಪರಿಪೂರ್ಣವಾಗಿ ಹೇಳಿದರೆ ಅದನ್ನು ನಾವು ಅದನ್ನು ಕಾದಂಬರಿ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಕಾದಂಬರಿ ಎನ್ನುವುದು ಹೇಗೆ ನಾಯಕನ ಜೊತೆಗೆ ಸಾಗುತ್ತೆ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅದರಲ್ಲಿ ಸ್ವಾರಸ್ಯ ಇರುವುದೂ ಇಲ್ಲ. ಕಾದಂಬರಿಯಲ್ಲಿ ಬರುವ ಪಾತ್ರಗಳು ಮುಖ್ಯವಾಗಿ ಸಮಾಜ ಮತ್ತು ಅದರ ಆವರಣವನ್ನು ಹೇಳುತ್ತದೆ. ಭಕ್ತಿನ್ ಹೇಳುವ ಮತ್ತೊಂದು ಮಹತ್ವದ ವಿಚಾರವೆಂದರೆ ಯಾವುದೇ ಕಲಾಕೃತಿಯು ಜನರ ನಡುವೆ ಇರುತ್ತವೆ. ಅದು ಮನುಷ್ಯರ ನಡುವಣ ಸಂಬಂಧವನ್ನು ಬೆಸೆಯುತ್ತದೆ. ಅಷ್ಟೇ ಅಲ್ಲ ಅದು ಮನುಷ್ಯ ನಡುವೆ ಇರುವ ವಿವಿಧ ಅಭಿವ್ಯಕ್ತಿಯನ್ನು ನಿರೂಪಿಸುತ್ತದೆ ಸಾಹಿತ್ಯ ಮತ್ತು ಅದರ ಕೆಲಸವನ್ನು ನೋಡಿದರೆ ಅಲ್ಲಿಯೂ ಕೆಲಸದ ವರ್ಗೀಕರಣವು ಇರುತ್ತದೆ. ಆದರೆ ಮಾರ್ಕ್ಸ್‌ವಾದವು ಚರಿತ್ರೆ ಮತ್ತು ಅದರ ವಾಸ್ತವತೆ, ಸಮಾಜ ಮತ್ತು ಅದರಲ್ಲಿ ಇರುವ ವರ್ಗಗಳಿಗೂ ಸಾಹಿತ್ಯಕ್ಕೂ ಸಂಬಂಧವಿದೆ. ನಾವು ಯಾವ ಭಾಷೆಯಲ್ಲಿ ಮಾತಾಡುತ್ತೇವೆಯೋ

ಅದು ಕೂಡಾ ಸಾಮಾಜಿಕ ಜೀವನದ ಭಾಗವೂ ಆಗಿದೆ. ಅದರಲ್ಲಿಯೂ ಸಮಾಜದ ಅನೇಕ ಪರಿಣಾಮಗಳನ್ನು ನಾವು ಕಾಣುತ್ತೇವೆ. ಅದಕ್ಕೂ ಸಾಮಾಜಿಕ ಅಸ್ತಿತ್ವ ಮತ್ತು ಸಮಾಜದ ಅರ್ಥಗಳು ಇರುತ್ತವೆ.

ಪಶ್ಚಿಮದಲ್ಲಿ ವ್ಯಕ್ತಿವಾದ ಮತ್ತು ಸಮಾಜದ ವರ್ಗಗಳಿಗೆ ಸಂಬಂಧವು ಇದೆ. ಅದರ ಜೊತೆಗೆ ಕಾದಂಬರಿ ಮತ್ತು ಅದರ ರೂಪಕ್ಕೆ ಸಂಬಂಧವಿದೆ. ಯಾವಾಗ ಬಂಡವಾಳವಾದವು ಮುಂದೆ ಬಂದಿತೋ ಆಗ ವ್ಯಕ್ತಿವಾದವೂ ಮುಂದೆ ಬಂದಿತು. ವ್ಯಕ್ತಿವಾದವು ಮುಖ್ಯವಾಗಿ ಸಾಮೂಹಿಕ ಜೀವನ ಕ್ರಮವನ್ನು ಒಪ್ಪುವುದಿಲ್ಲ. ಸಮಾಜವು ಬದಲಾಗುತ್ತದೆ. ಅದರ ಜೊತೆಗೆ ನಾವು ಮಾತಾಡುವ ಭಾಷೆ, ನಮ್ಮ ಪರಿಸರ, ನಮ್ಮ ಬರಹಗಳ ಮಾದರಿಗಳು ಬದಲಾಗುತ್ತವೆ. ಸಮಾಜವು ಬದಲಾಗುತ್ತದೆ ಎಂದರೆ ಅದು ಸುಮ್ಮನೆ ಪರಿವರ್ತನೆಯಾಗುವದೂ ಇಲ್ಲಿ ರೂಪನಿಷ್ಠರ ವಾದನ್ನು ಗಮನಿಸಬೇಕು. ಅವರು ನಿತ್ಯದ ಭಾಷೆ ಮತ್ತು ಸಾಹಿತ್ಯದ ಭಾಷೆ ಎರಡೂ ಬೇರೆ ಎಂದು ಹೇಳುತ್ತಾರೆ. ಅವರು ನಿತ್ಯದ ಭಾಷೆ ಮತ್ತು ಕಾವ್ಯದ ಭಾಷೆ ಬೇರೆ ಎಂದು ಹೇಳುತ್ತಾರೆ. ಕಾವ್ಯವನ್ನು ಓದುವಾಗ ನಮಗೆ ಒಂದು ಬೆಚ್ಚನೆಯ ಅನುಭವ ಆಗಬೇಕು ಎಂದು ಅವರು ತಿಳಿಯುತ್ತಾರೆ. ಆದ್ದರಿಂದ ಕಾವ್ಯ ಎಂದರೆ ಅದು ನಮ್ಮ ಮನಸ್ಸಿನಲ್ಲಿ ಒಂದು ವಿಶಿಷ್ಟವಾದ ಅನುಭವನ್ನು ಕೊಡುತ್ತದೆ. ಕಾವ್ಯಕ್ಕೆ ಆಕರ್ಶಿಸುವ ಗುಣವೂ ಇದೆ. ಅದು ಸಾಧ್ಯವಾಗುವುದು ಅದರ ಭಾಷೆಯಲ್ಲಿ. ಇದು ನವ್ಯದ ನಿಲುವು. ಆದರೆ ಈ ಚರ್ಚೆಯಲ್ಲಿ ನಮಗೆ ಕಾವ್ಯ ಮತ್ತು ಆಶಯವು ಕಾಣುವುದಿಲ್ಲ. ಅದಕ್ಕೆ ಭಿನ್ನವಾದ ಒಂದು ನಿಲುವು ಸಾಧ್ಯವಿದೆ ಎಂದು ಮಾರ್ಕ್ಸವಾದಿಗಳು ನಂಬುತ್ತಾರೆ. ಕಾವ್ಯದ ಭಾಷೆ ಎನ್ನುವುದು ನಮ್ಮ ಸಮಾಜದ ಭಾಷೆಯೂ ಆಗಿರುತ್ತದೆ. ನವ್ಯವು ನಿತ್ಯದ ಭಾಷೆ ಮತ್ತು ಕಾವ್ಯದ ಭಾಷೆ ಎಂದು ಹೇಳುವಾಗ ಅವುಗಳಿಗೆ ಒಂದು ಅರ್ಥ ಕಾವ್ಯ ಎನ್ನುವುದು ಇರುವುದೇ ಒಂದು ಅರ್ಥ ಮತ್ತು ಆಶಯದಲ್ಲಿ. ಭಾಷೆ ಮತ್ತು ಆಶಯದ ನಡುವೆ ಇರುವುದು ಒಂದು ದ್ವಂದ್ವಾತ್ಮಕವಾದ ಸಂಬಂಧ. ಒಂದು ಆಲೋಚನೆ ಮತ್ತು ಒಂದು ವಸ್ತುವು ಕಾವ್ಯಕ್ಕೆ ಬರುವಾಗ ಬೇರೆ ರೀತಿಯಲ್ಲಿ ಇರುತ್ತದೆ ಎನ್ನುವ ಮಾತ್ರಕ್ಕೆ ಅದನ್ನು ನಾವು ಪ್ರತ್ಯೇಕವಾಗಿದೆ ಎಂದು ಹೇಳುವಂತೆ ಇಲ್ಲ. ೧೯೫೦ರ ಅನಂತರ ಅತ್ಯಂತ ಹೆಚ್ಚು ಚಾಲ್ತಿಗೆ ಬಂದ ರಚನಾವಾದವು ಕೆಲವು ವಿಚಾರಗಳಲ್ಲಿ ರೂಪನಿಷ್ಠತೆಯನ್ನು ಒಪ್ಪಿಕೊಂಡದ್ದು ಸತ್ಯ. ಕಾವ್ಯ ಉಂಟು ಮಾಡುವ ಚಕಿತತೆಯನ್ನು ಮತ್ತು ಆಧುನಿಕೋತ್ತರವಾದದಲ್ಲಿ ಬಂದ ವ್ಯತ್ಯಾಸ (ಡಿಫರೆನ್ಸ್) ವನ್ನು ಈ ದೃಷ್ಟಿಯಿಂದಲೂ ನಾವು ಗಮನಿಸಬೇಕಾಗುತ್ತದೆ. ಕಾವ್ಯದಲ್ಲಿ ಅರ್ಥ ಮತ್ತು ಮೌಲ್ಯ ಎನ್ನುವುದಕ್ಕೆ ಬೆಲೆಯು ಇದೆ.

ಕುವೆಂಪು ಅವರ ಕಾದಂಬರಿಗಳು ನಮಗೆ ಒಂದು ವಿಶಿಷ್ಟವಾದ ಸೂಚನೆಗಳನ್ನು ಕೊಡುತ್ತವೆ. ಅದರಲ್ಲಿ ಅತ್ಯಂತ ಮುಖ್ಯವಾದ್ದು ಕುಟುಂಬ. ಕಾರಂತರ ಕಾದಂಬರಿಗಳು ಕೂಡಾ ಬಹುತೇಕ ಇದೇ ಮಾದರಿಯಿಂದ ಹೊರಡುತ್ತವೆ. ಆದರೆ ಅವರ ಜಾರುವ ದಾರಿಯಲ್ಲಿ ಕಾದಂಬರಿಯು ರಾಜಕಾರಣವನ್ನು ಹೇಳುತ್ತದೆ. ಸ್ವದೇಶಿ ಹೋರಾಟ ಮತ್ತು ಅದರ ಅಗತ್ಯವನ್ನು ಹೇಳುತ್ತಿರುವ ಹಾಗೆಯೇ ಅದರಲ್ಲಿ ಅದರ ಪರಿಣಾಮವೂ ಕಾಣುತ್ತವೆ. ಗೊಂಡಾರಣ್ಯ ಕಾದಂಬರಿಯಲ್ಲಿ ನಾವು ಕಾಣುವುದು ರಾಜಕಾರಣವನ್ನೇ. ಗೊರೂರು ರಾಮಸ್ವಾಮಿ ಅಯ್ಯಾಂಗಾರರ ಮೆರವಣಿಗೆ

ಕಾದಂಬರಿಯಲ್ಲಿ ನಾವು ಕಾಣುವುದು ಸ್ವದೇಶಿ ಚಳುವಳಿಯನ್ನು ಎನ್ನುವುದು ಗಮನಾರ್ಹ. ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ನಾವು ಕಾಣುವುದು ಮನೆಯ ಕತೆಯನ್ನು. ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು, ಮರಳಿಮಣ್ಣಿಗೆ, ಗ್ರಾಮಾಯಣ, ನಿಸರ್ಗ ಕಾದಂಬರಿಗಳು ಒಂದು ಸಾಲಿನಲ್ಲಿ ನಿಲ್ಲುತ್ತವೆ. ಮತ್ತೊಂದು ಕಡೆಯಿಂದ ಇವುಗಳು ನಮಗೆ ಆಗಣ ರಾಜಕಾರಣವನ್ನೂ ಹೇಳುತ್ತವೆ. ಇದು ಅತ್ಯಂತ ಮುಖ್ಯ. ಇಲ್ಲಿ ನಾವು ಸ್ವಲ್ಪ ವಿಷಯವನ್ನು ಬದಲು ಮಾಡಿಕೊಂಡು ನೋಡುವುದು ಅಗತ್ಯವಿದೆ.

೧. ಕಲಾವತಿ ಪರಿಣಯ ೧೮೮೫

೨. ಮುದ್ರಾಮಂಜೂಷ ೧೮೨೩

   ೧. ಸೂರ್ಯಕಾಂತ ೧೮೫೨

   ೨. ಇಂದಿರಾಬಾಯಿ ೧೮೯೯

   ೩. ಕುಮುದಿನಿ ೧೯೧೦

   ೪. ಮಾಡಿದುಣ್ಣೋ ಮಹರಾಯ ೧೯೧೫

   ೫. ೧೯೨೧ಮರಳಿ ಮಣ್ಣಿಗೆ

ಇವುಗಳು ನಮಗೆ ಇರುವ ಬಯಕೆಗಳು ಮತ್ತು ನಮ್ಮ ಸುಪ್ತವಾದ ಪ್ರಜ್ಞೆಯಲ್ಲಿ ಇರುವ ಕೆಲವು ಅಂಶಗಳು ಬಹುತ್ವವನ್ನು ಸೂಚಿಸುತ್ತವೆ. ಪ್ರಾಯ್ಡ್ ಕೂಡಾ ಆಲೋಚನೆ ಮತ್ತು ಅದರ ಬಹುತ್ವವನ್ನು ಹೇಳುತ್ತಾನೆ. ಬಹುತ್ವ ಮತ್ತು ವೈರುದ್ಧ್ಯಗಳು ಹೇಗೆ ಕೆಲಸವನ್ನು ಮಾಡುತ್ತವೆ ಎಂದು ಅವನೂ ಸೂಚಿಸುತ್ತಾನೆ. ಸಮಾಜ ಮತ್ತು ಭಾಷೆ, ಹಾಗೆಯೇ ಅದರ ಬಹುತ್ವ ಮತ್ತು ಸಾಧ್ಯತೆಗಳು ಯಾವತ್ತೂ ಬೇರೆಯಾಗುತ್ತವೆ. ಲೇಖಕ ಭಾಷೆಯಲ್ಲಿ ಹೇಳುತ್ತಾನೆ ಎಂದರೆ ಅವನು ಸಾಂಸ್ಕೃತಿಕವಾದ ಕಟ್ಟುವಿಕೆಯಲ್ಲಿ ಭಾಗವಹಿಸುತ್ತಾನೆ ಎಂದು ಅರ್ಥ. ಫ್ರಾಯ್ಡ್ ದೇಹ ಮತ್ತು ಅದರ ರಚನೆಗೆ ಹಾಗೂ ಭಾಷೆಗೆ ಒಂದು ಸಂಬಂಧವನ್ನು ಕಲ್ಪಿಸುತ್ತಾನೆ. ದೇಹದ ರಚನೆ ಎನ್ನುವುದು ಹೇಗೆ ಕಲ್ಪಸಿಕೊಳ್ಳುತ್ತಾನೆಯೋ ಅದೇ ರೀತಿಯಲ್ಲಿ ಅವನು ಮನುಷ್ಯ ಮತ್ತು ಅವನ ವರ್ತನೆಯನ್ನು ಗಮನಿಸುತ್ತಾನೆ ಆದರೆ ಇಲ್ಲಿ ಅತ್ಯಂತ ಮುಖ್ಯವಾಗಿ ನಾವು ಗಮನಿಸಬೇಕಾದ್ದು ಸಮಾಜವನ್ನು. ಫ್ರಾಯ್ಡ್ ಸುಪ್ತವಾದ ಪ್ರಜ್ಞೆ ಮತ್ತು ಪ್ರಜ್ಞೆ ಎನ್ನುವುದನ್ನು ಬೇರೆ ಮಾಡುತ್ತಾನೆ. ಆದರೆ ಇದು ಕೂಡಾ ಸಮಾಜ ಮತ್ತು ಭಾಷೆಗೆ ಇರುವ ಸಂಬಂಧವನ್ನು ಹೇಳಬೇಕಾಗುತ್ತದೆ. ಭಾಷೆ ಮತ್ತು ಅದರ ಸಂಕೇತಗಳು ನಮಗೆ ಅತ್ಯಂತ ಅಗತ್ಯ. ಅದನ್ನು ಯಾರೂ ಅಲ್ಲಗಳೆಯಲು ಆಗುವುದಿಲ್ಲ. ಆದರೆ ಆ ಸಂಕೇತವು ಒಂದು ಪ್ರತ್ಯೇಕ ಅಂಶವೆಂದು ಹೇಳಬಹುದೇ ಎನ್ನುವುದು ಪ್ರಶ್ನೆ. ಭಾಷೆ ಮತ್ತು ಅದರ ಸಂಕೇತಗಳು ಭೌತಿಕವಾದ್ದು ಆಗಿದೆ. ಸಂಕೇತಗಳಿಗೂ ಅರ್ಥ ಇರುತ್ತದೆ ಒಂದು ಪದವನ್ನು ನಾವು ಉಚ್ಚಾರ ಮಾಡುವಾಗ ಅದರ ಅರ್ಥವು ಬೇರೆ ಇರುತ್ತದೆ. ಭಾಷೆಯಲ್ಲಿ ಅಕ್ಷರಗಳು ಒಂದು ಅರ್ಥವನ್ನು ಸೂಚಿಸಲು ಪ್ರಯೋಗವಾದರೆ ಅದೇ ಅಕ್ಷರವು ಇನ್ನೊಂದು ಪದವನ್ನು ಕಟ್ಟುವಾಗ ಅದರ ಅರ್ಥವು ಬೇರೆಯಾಗುತ್ತದೆ. ಅದರಿಂದಲೂ ಆನೇಕ ಸಾಧ್ಯತೆಗಳು ಹುಟ್ಟುತ್ತವೆ. ಸನ್ನಿವೇಶಕ್ಕೆ ಅನುಸಾರವಾಗಿ

ಬೇರೆಯಾಗುತ್ತದೆ. ವಸ್ತು ಮತ್ತು ಅದರ ಹೆಸರುಗಳನ್ನು ಹೇಳುವಾಗ ನಾವು ಹೇಗೆ ಸಂಕೇತವನ್ನು ಬಳಸುತ್ತೇವೆಯೋ ಅದೇ ರೀತಿಯಲ್ಲಿ ನಾವು ವಿವಿಧ ವಸ್ತುಗಳನ್ನು ಬೇರೆ ಬೇರೆ ಹೆಸರುಗಳ ಮೂಲಕ ಕರೆಯುತ್ತೇವೆ. ವಸ್ತುಗಳನ್ನು ಹಾಗೆಯೇ ಗುರುತಿಸುತ್ತೇವೆ. ಮರವೆಂದು ಹೇಳುವಾಗ ನಮಗೆ ಮನಸ್ಸಿನಲ್ಲಿ ಮರದ ಚಿತ್ರವು ಬರುತ್ತದೆ. ಈ ಕಾರಣದಿಂದಲೇ ವಸ್ತುವಿಗೆ ಮತ್ತು ಸಾಮಾಜಿಕ ಸಂಬಂಧವಿರುತ್ತದೆ. ಒಂದು ಮಾತನ್ನು ನಾವು ಇಲ್ಲಿ ನೆನಪುಮಾಡಿಕೊಳ್ಳಬೇಕು. ಸಾಹಿತ್ಯದಲ್ಲಿ ಬಳಸುವ ಭಾಷೆಯನ್ನು ವ್ಯಾಕರಣದಿಂದ ಹೊರತಾದ್ದು ಎಂದು ಹೇಳಬೇಕಾದ ಅಗತ್ಯವಿಲ್ಲ. ಆದರೆ ಇಲ್ಲಿ ನಾವು ಯಾವುದನ್ನು ಮಾತಾಡುತ್ತೇವೆಯೋ ಅದನ್ನು ಮಾತ್ರವೇ ಕಾವ್ಯವು ಬಳಸುತ್ತದೆ ಎಂದು ಅರ್ಥವಲ್ಲ. ಅದರಲ್ಲಿಯೂ ಕೆಲವು ಮಾದರಿಯ ಪಲ್ಲಟಗಳು ಆಗುತ್ತವೆ. ಆದರೆ ಭಾಷೆ ಎನ್ನುವುದು ಒಂದು ಬಗೆಯಲ್ಲಿ ಪ್ರಾತಿನಿಧಿಕ ಎನ್ನುವುದು ವಲೋಶಿನೋವ್‌ನ ನಿಲುವು. ಅದು ನಮಗೆ ಬೇರೆ ಪ್ರಶ್ನೆ. ಕನ್ನಡದ ಮೊದಲ ಕಾದಂಬರಿಗಳಲ್ಲಿ ನಾವು ಇದನ್ನು ಕಾಣುತ್ತೇವೆ.

ಕಾಲ ಮತ್ತು ಅವಕಾಶಗಳನ್ನು ಚರಿತ್ರೆಯು ಹೇಳುವ ಕ್ರಮ ಬೇರೆಯಾಗಿದೆ. ಆದರೆ ಅದು ಸಾಹಿತ್ಯಕ್ಕೆ ಬರುವಾಗ ಅದರ ಅರ್ಥವು ಬೇರೆಯಾಗುತ್ತದೆ. ವಾಸ್ತವ ಮತ್ತು ಅದರ ಕಾಲವನ್ನು ನಾವು ಬೇರೆ ಥರ ನೋಡುತ್ತೇವೆ. ಕಾಲ ಮತ್ತು ಅವಕಾಶಗಳನ್ನು ನೋಡುವಾಗ ಸಾಹಿತ್ಯದಲ್ಲಿ ಯಾವುದು ಪ್ರಾತಿನಿಧಿಕವಾಗಿ ಬರುತ್ತದೆಯೋ ಅದನ್ನು ನಾವು ಕೃತಿಯ ಅಂತರಂಗದಲ್ಲಿಯೂ ನೋಡಬೇಕಾಗುತ್ತದೆ. ಕೃತಿಗೆ ಬರುವಾಗ ಕಾಲ ಮತ್ತು ಅವಕಾಶಗಳು ಪಠ್ಯದ ಕಾಲ ಮತ್ತು ಅವಕಾಶವಾಗಿ ಪರಿವರ್ತನೆಯಾಗುತ್ತದೆ. ಭಕ್ತಿನ್ ಇದರ ಸ್ವರೂಪವನ್ನು ಹೇಳುವಾಗ ಕಾಲ ಮತ್ತು ಅವಕಾಶಗಳು ಕ್ರೊನೊಟಾಪ್ ಎನ್ನುವುದನ್ನು ಬಳಸುತ್ತಾನೆ. ಅದು ವಾಸ್ತವವಾಗಿ ಕಾಲವನ್ನು ಮತ್ತು ಅವಕಾಶವನ್ನು ಹೇಳಲು ಒಂದೇ ಪರಿಭಾಷೆಯಾಗುತ್ತದೆ. ಸಾಹಿತ್ಯದಲ್ಲಿ ಕಾಲವು ಹೇಗೆ ಬರುತ್ತದೆ ಮತ್ತು ಅವಕಾಶವು ಹೇಗೆ ಬರುತ್ತದೆ ಎನ್ನುವುದು ಸಾಹಿತ್ಯದಲ್ಲಿ ಕಾಲ ಮತ್ತು ಅವಕಾಶಗಳು ಪ್ರತ್ಯೇಕವಾಗುತ್ತದೆ. ಆದ್ದರಿಂದ ಇದಕ್ಕೆ ಒಂದು ವಿಶೇಷವಾದ ಅರ್ಥವೂ ಇದೆ. ಕಾಲ ಮತ್ತು ಅವಕಾಶಗಳ ಪ್ರಶ್ನೆಯು ಕಾದಂಬರಿಗಳಲ್ಲಿ ಒಂದು ಕಲ್ಪನೆಗೆ ಅವಕಾಶವನ್ನು ಕಲ್ಪಿಸುತ್ತದೆ. ಐನ್‌ಸ್ಟೈನ್ ಸಾಮಾನ್ಯ ಮತ್ತು ಸಾಪೇಕ್ಷ ಸಿದ್ಧಾಂತವನ್ನು ಮಂಡಿಸಿದನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಭೌತಿಕವಾದ ನಿಯಮಗಳು ಎಲ್ಲಾ ಕಡೆಗೆ ಒಂದೇ ಆಗಿರುತ್ತದೆ. ನಿರ್ವಾತದಲ್ಲಿ ಬೆಳಕು ಮತ್ತು ಅದರ ವೇಗವು ಒಂದೇ ಆಗಿರುತ್ತವೆ ಎನ್ನುವುದು ಅವನ ಮುಖ್ಯವಾದ ಒಂದು ತತ್ವ. ಸಾಮಾನ್ಯ ಸಾಪೇಕ್ಷತಾ ಸಿದ್ಧಾಂತದಲ್ಲಿ ಇನ್ನೊಂದು ಮುಖ್ಯವಾದ ವಿಚಾರವನ್ನು ಮಂಡಿಸುತ್ತಾನೆ. ಮೊದಲನೆಯದಾಗಿ ಎರಡು ದೇಹಗಳ ನಡುವೆ ಒಂದು ಗುರುತ್ವಾಕರ್ಷಣೆಯು ಕೆಲಸವನ್ನು ಮಾಡುತ್ತದೆ. ಅವನಲ್ಲಿ ಕಾಲ ಎನ್ನುವುದು ಒಂದು ಬಗೆಯಲ್ಲಿ ಸಂವಾದಿಯೂ ಆಗಿರುತ್ತದೆ. ಸ್ಥಳ ಮತ್ತು ಸಮಯ ಸಾಮಾನ್ಯವಾಗಿ ಅಂಗೀಕಾರವದ ಸಿದ್ಧಾಂತ. ಇದನ್ನು ಅಳವಡಿಸಿಕೊಂಡರೂ ಸಾಹಿತ್ಯದಲ್ಲಿ ಕಾಲ ಮತ್ತು ಅವಕಾಶವು ಬೇರೆ ಸಂಗತಿಯನ್ನು ಸೂಚಿಸುತ್ತದೆ. ಭಕ್ತಿನ್ ಇದರ ಕುರಿತು ವಿವರಣೆಯನ್ನು ಕೊಟ್ಟಿದ್ದಾನೆ. ಅವನು ಕ್ರೊನೊಟೋಪ್ ಎನ್ನುವುದು ಮುಖ್ಯವಾಗಿ ಒಂದು ಸಮಗ್ರತೆಯನ್ನು ಹೇಳುತ್ತದೆ.

ಕಾಲ ಎನ್ನುವುದು ಕಾದಂಬರಿಯಲ್ಲಿ ಆಶಯ, ಸಂವಿಧಾನ, ಚರಿತ್ರೆಯನ್ನು ಸೂಚಿಸುತ್ತದೆ. ಕಾದಂಬರಿಯಲ್ಲಿ ಇದಕ್ಕೆ ಹೆಚ್ಚು ಅರ್ಥವಿದೆ. ಯಾವುದೇ ಪ್ರಕಾರದಲ್ಲಿ ಕಾಲ ಮತ್ತು ಅವಕಾಶಗಳು ಬೇರೆಯಾಗುತ್ತದೆ. ಭಾವಗೀತೆಯ ಕಲ್ಪನೆಗೆ ಮತ್ತು ಸಮಯ ಸೂಚನೆಗೆ ಭಿನ್ನತೆಯು ಇದೆ. ಕಾದಂಬರಿಯಲ್ಲಿ ಇದರ ನಿರ್ವಹಣೆಗಳು ಭಿನ್ನ. ಕೃತಿಯಲ್ಲಿ ಇದು ಆಂತರಂಗಿಕ ಕೂಡಾ ಹೌದು. ಅರಿಸ್ಟಾಟಲ್ ಕ್ರಿಯೆ, ಕಾಲ ಮತ್ತು ವಸ್ತು ಹೇಗೆ ಕೃತಿಯಲ್ಲಿ ಏಕತೆಯನ್ನು ಸಾಧಿಸುತ್ತದೆ ಎಂದು ಹೇಳುತ್ತಾನೆ. ಅದನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಭಕ್ತಿನ್ ಹೇಳುವ ಕ್ರೊನೊಟೋಪ್ ಪ್ರಕಾರಗಳು ಮತ್ತು ಅವುಗಳ ಭಿನ್ನ ಅಸ್ತಿತ್ವಗಳನ್ನು ಹೇಳುತ್ತದೆ. ಗ್ರೀಕ್ ಸಾಹಿತ್ಯದಲ್ಲಿಯೂ ಹೀಗೆ ಕಾಲ ಮತ್ತು ಅವಕಾಶಗಳನ್ನು ಹೇಳುತ್ತದೆ. ಕ್ರೊನೊಟೋಪ್ ಪ್ರಕಾರಗಳು ಮತ್ತು ಪ್ರಕಾರಗಳ ನಡುವೆ ಇರುವ ವ್ಯತ್ಯಾಸವನ್ನು ಸೂಚಿಸುತ್ತದೆ. ಈ ಪ್ರಕ್ರಿಯೆಗಳು ಸಾಹಿತ್ಯದಲ್ಲಿ ಮಾತ್ರವೇ ನಡೆಯುತ್ತದೆ ಎನ್ನುವುದನ್ನು ನಾವು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಸಾಹಿತ್ಯದಲ್ಲಿ ಕಾಲ, ಅವಕಾಶ ಹಾಗೂ ಸ್ಥಳವು ಜೊತೆಗೆ ಹೋಗುತ್ತವೆ. ಅದರಲ್ಲಿ ಮನುಷ್ಯ ಮತ್ತು ಅವನ ವ್ಯಕ್ತಿತ್ವವೂ ಸೇರುತ್ತದೆ. ಸಾಹಿತ್ಯದಲ್ಲಿ ಬರುವ ವ್ಯಕ್ತಿ ಮತ್ತು ಅವನ ಚಿತ್ರಣವು ನಿಜವಾದ ಮನುಷ್ಯ ಮತ್ತು ಅವನ ಜೀವನದ ವಿಧಾನಕ್ಕಿಂತ ಬೇರೆಯಾಗುತ್ತವೆ. ನಿಜವಾದ ವ್ಯಕ್ತಿ ಮತ್ತು ಅವನ ಬದುಕು ಇರುವುದು ಭಿನ್ನ, ಆದರೆ ನಾವು ಇಲ್ಲಿ ಯೋಚನೆಯನ್ನು ಮಾಡಬೇಕಾಗಿದೆ.

ಚೋಮನದುಡಿಯಲ್ಲಿ ಬರುವ ಚೋಮ ಮತ್ತು ಕಾದಂಬರಿಯಲ್ಲಿ ಬರುವ ಚೋಮನಿಗೆ ಈ ಕಾರಣದಿಂದ ವ್ಯತ್ಯಾಸವಿದೆ. ಕಾದಂಬರಿಯ ಚೋಮ ನಿಜವಾದ ಚೋಮ ಇಬ್ಬರೂ ಬೇರೆ ಮಾತ್ರವೇ ಅಲ್ಲ, ಅವರ ಅಸ್ತಿತ್ವಕ್ಕೂ ವ್ಯತ್ಯಾಸವಿದೆ. ನಿಜವಾದ ಚೋಮನು ಅಷ್ಟೆಲ್ಲಾ ಯೋಚನೆ ಮಾಡುತ್ತಾನೆ ಎಂದು ಹೇಳಲು ಸಾಧ್ಯವಿಲ್ಲ. ಕಾಲದ ಕಾರಣವು ಅವನಿಗೆ ಕೆಲವು ಗಡಿರೇಖೆಯನ್ನು ತಂದಿದೆ. ನಿರೂಪಣೆಯು ನಮಗೆ ಒಂದು ಕಲ್ಪನೆಯನ್ನು ಕಟ್ಟಿಕೊಡುತ್ತದೆ. ಅದರಲ್ಲಿ ಕಾಲ ಮತ್ತು ಅವಕಾಶಗಳು ಭಿನ್ನವಾಗುತ್ತವೆ. ಯಾವುದನ್ನು ಲೇಖಕನು ನಿರೂಪಣೆ ಮಾಡುತ್ತಾನೆಯೋ ಅದನ್ನು ಒಬ್ಬ ಓದುಗನು ಕಲ್ಪಿಸಿಕೊಳ್ಳುತ್ತಾನೆ. ಕ್ರೊನೋಟೋಪ್ ಇನ್ನೊಂದು ವಿಷಯವನ್ನು ನಮಗೆ ಹೇಳುತ್ತದೆ. ಪ್ರಕಾರಗಳು ಎಲ್ಲಾ ಕಡೆಗೆ ಒಂದೇ ರೀತಿಯಲ್ಲಿ ಇರುತ್ತವೆ. ಅದೇ ರೀತಿಯಲ್ಲಿ ಪ್ರಕಾರಗಳು ತನ್ನದೇ ಆದ ಒಂದು ಲೋಕದೃಷ್ಟಿಯನ್ನು ಹೊಂದಿರುತ್ತವೆ. ಭಕ್ತಿನ್ ಹೇಳುವ ಈ ವಿಚಾರಗಳು ನಮಗೆ ಅತ್ಯಂತ ಮುಖ್ಯವಾಗಿವೆ. ಕಾದಂಬರಿಗಳಲ್ಲಿ ಬರುವ ಸಾಹಸಗಳು ನಮಗೆ ಜಾನಪದದ ಕತೆಗಳಲ್ಲಿಯೂ ಬರುತ್ತವೆ. ಸಾಹಸ ಕತೆಗಳು ಮತ್ತು ಜಾನಪದ ಕತೆಗಳಲ್ಲಿ ತಮ್ಮದೇ ಆದ ಅವಕಾಶಗಳನ್ನು ಹೊಂದಿರುತ್ತವೆ. ಚೋಮನ ಕತೆಯನ್ನು ಮತ್ತೆ ನೆನಪಿಸಿಕೊಳ್ಳಬೇಕಾಗುತ್ತದೆ. ಚೋಮನ ಅವಕಾಶ ಮತ್ತು ಅವನ ಕಾಲವು ಒಂದು ಕಡೆಗೆ ಇದೆ. ನಿರೂಪಕರು ಇಲ್ಲಿ ಒಂದು ಕಾಲವನ್ನು ಮತ್ತು ಅವಕಾಶಗಳನ್ನು ಹೇಳುತ್ತಾರೆ. ಅದೇ ರೀತಿಯಲ್ಲಿ ಇಲ್ಲಿ ಒಂದು ಚಲನೆಯು ಇದೆ. ಕಾದಂಬರಿಯಲ್ಲಿ ಬರುವ ಶೈಲಿಯು ಅತ್ಯಂತ ಸಂಕೀರ್ಣವಾಗುತ್ತದೆ. ಅದರ ಜೊತೆಗೆ ಯಾವುದೇ ಕಾದಂಬರಿಯಲ್ಲಿ ಬರುವ ಪಾತ್ರಗಳಿಗೂ ಪ್ರದೇಶ ಮತ್ತು ಕಾಲವು ಇರುತ್ತವೆ. ಅದನ್ನು ಹೊರತುಪಡಿಸಿದರೆ ಕಾಲ ಮತ್ತು ಅವಕಾಶಗಳಿಗೆ ಯಾವ ಅರ್ಥವೂ ಇರುವುದಿಲ್ಲ. ಆದರೆ ಆಧುನಿಕ ಕಾವ್ಯ

ಮೀಮಾಂಸೆ ಮತ್ತು ಪ್ರಾಚೀನವಾದ ಮೀಮಾಂಸೆಗೆ ವ್ಯತ್ಯಾಸವು ಇದೆ. ನಮ್ಮ ಪ್ರಾಚೀನವಾದ ಸೌಂದರ್ಯ ಮೀಮಾಂಸೆಯು ಸಂಸ್ಕೃತದಿಂದ ಬಂದಿದೆ, ಸಂಸ್ಕೃತದಲ್ಲಿ ಇದು ಇದೆ ಎಂದ ಮಾತ್ರಕ್ಕೆ ಅದು ನಮಗೆ ಯಾವುದೇ ಕಾರಣಕ್ಕೆ ಅನ್ವಯವಾಗುವುದಿಲ್ಲ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಆಧುನಿಕ ತತ್ವಗಳಿಗೆ ಇದನ್ನು ಹೇಗೆ ಅನ್ವಯ ಮಾಡಬಹುದು ಎಂದು ಕುವೆಂಪು, ಬೇಂದ್ರೆ, ಮುಳಿಯರು ಹೇಳಿದರು. ಮೀಮಾಂಸೆ ಎನ್ನುವುದಕ್ಕೆ ಒಂದು ಚಲನಶೀಲತೆಯು ಇದೆ. ಅದರ ಜೊತೆಗೆ ಅದಕ್ಕೆ ಒಂದು ದೊಡ್ಡದಾದ ಚರಿತ್ರೆಯು ಇದೆ. ಚರಿತ್ರೆಯ ಜೊತೆಗೆ ಕೆಲವು ಕಾವ್ಯ ತತ್ವಗಳು ಸಮೀಕರಣವು ಇದೆ. ಅದರ ಜೊತೆಗೆ ಕೆಲವು ಕಾವ್ಯ ತತ್ವಗಳು ನೀರಿನೊಡನೆ ಹಾಲು ಬೆರೆಯುವಂತೆ ಬೆರೆತು ಬಿಟ್ಟಿವೆ. ಇದನ್ನು ಮತ್ತೊಂದು ರೀತಿಯಲ್ಲಿ ನೋಡುವುದಕ್ಕೆ ಸಾಧ್ಯವಿದೆ. ಗ್ರೀಕ್ ಸೌಂದರ್ಯ ಶಾಸ್ತ್ರವು ಹೇಗೆ ಯುರೋಪಿನ ಸೌಂದರ್ಯಶಾಸ್ತ್ರದ ಮೇಲೆ ಪ್ರಭಾವವನ್ನು ಬೀರಿದೆಯೋ ಅದರಂತೆ ಪ್ರಾಚೀನವಾದ ಕಾವ್ಯ ಮೀಮಾಂಸೆಗಳು ಕನ್ನಡದ ಮೇಳೆ ಪ್ರಭಾವವನ್ನು ಬೀರಿದ್ದು, ಒಂದು ಚರಿತ್ರೆಯು ಒಂದು ಮೀಮಾಂಸೆಯ ಮೇಲೆ ಪ್ರಭಾವವನ್ನು ಬೀರುತ್ತದೆ ಎನ್ನುವುದು ನಿಜ. ಪ್ರಾಚೀನವಾದ ಪರಂಪರೆಯು ಹೀಗೆಯೂ ಮುಂದುವರಿಯಲು ಸಾಧ್ಯವಿದೆ. ಮುಂದುವರಿಕೆಯು ಚರಿತ್ರೆ ವಿಚ್ಛೇದನವಲ್ಲ. ಅದು ಚರಿತ್ರೆಯ ಜೊತೆಗೆ ನಾವು ಮಾಡುವ ಅನುಸಂಧಾನ. ಹಾಗೆ ನೋಡಿದರೆ ಕಾದಂಬರಿ ಮತ್ತು ಅದರ ಪ್ರಕಾರವು ವಿಶ್ವಾತ್ಮಕವಾಗಿರುತ್ತದೆ. ಎಲ್ಲಿಯ ಗ್ರೀಕ್ ಮತ್ತು ಎಲ್ಲಿಯ ಕನ್ನಡ ಎಂದು ಯೋಚನೆ ಮಾಡುವುದು ಸೂಕ್ತ. ದುರಂತ ನಾಟಕಗಳು , ಸಾನೆಟ್‌ಗಳು ನಮಗೆ ಆಧುನಿಕ ಸಾಹಿತ್ಯದ ಪ್ರಭಾವ ಬೀರಿದೆ. ನಮಗೆ ಅನೇಕ ವಿವಿಧ ಸಾಹಿತ್ಯ ಪರಿಚಯವಾದ್ದು ಆಧುನಿಕ ಶಿಕ್ಷಣದ ದೆಸೆಯಿಂದ. ಪ್ರಕಾರಗಳ ದೃಷ್ಟಿಯಿಂದ ಹೇಳುವುದಿದ್ದರೆ ದುರಂತ ನಾಟಕಗಳು ಮತ್ತು ಕಾದಂಬರಿಯ ಸ್ವರೂಪಗಳು ಹತ್ತಿರ ಹತ್ತಿರವಿದೆ. ಅದರ ಜೊತೆಗೆ ಗ್ರೀಕ್ ಭಾಷೆಯ ರೊಮಾಂಟಿಕ್ ಕಲ್ಪನೆಯು ಕಾದಂಬರಿಯಲ್ಲಿ ಹೊಸದಾದ ಭಾವಗಳ ಪ್ರಕಟಣೆಗೆ ಸಾಧ್ಯವಾಯಿತು. ಒಂದು ಪ್ರಕಾರವು ಮತ್ತೊಂದು ಪ್ರಕಾರದ ಮೇಲೆ ಪ್ರಭಾವ ಬೀರುವುದು ಅತ್ಯಂತ ಸಹಜ. ಇಲ್ಲಿ ಒಂದು ಮಾತನ್ನು ನಾವು ನೆನಪು ಮಾಡಿಕೊಳ್ಳಬೇಕು. ಯಾವುದೇ ಪ್ರಕಾರವು ಒಂದು ಸನ್ನಿವೇಶ ಮತ್ತು ಒಂದು ಕಾಲದ ಪರಿಣಾಮಗಳೂ ಆಗಿರುತ್ತವೆ.

ಕಾದಂಬರಿ ಎನ್ನುವುದಕ್ಕೆ ಅತ್ಯಂತ ಪ್ರಾಚೀನವಾದ ಒಂದು ಇತಿಹಾಸವೂ ಇದೆ. ಹಿಂದೆಯೂ ಕಾಲ ಮತ್ತು ಅವಕಾಶಗಳ ಕುರಿತು ವಿವರವಾದ ಚರ್ಚೆಯನ್ನು ಅನೇಕರು ಮಾಡಿದ್ದಾರೆ. ಆಗಲೂ ಇದೆ ಚರ್ಚೆಗಳು ಬಂದಿದ್ದವು. ಕಾಲ ಮತ್ತು ದೇಶ ಮತ್ತು ಅವಕಾಶಗಳು. ಇವು ಅತ್ಯಂತ ವಿಶಿಷ್ಟವಾದ ಪರಿಕಲ್ಪನೆಯಾಗಿದ್ದು ಇದಕ್ಕೆ ಸಂಬಂಧ ಪಟ್ಟ ಅನೇಕ ಬಗೆಯಲ್ಲಿ ಚರ್ಚೆಗಳು ಬಂದಿವೆ. ಹಳೆಯ ಕಾದಂಬರಿಗಳು ನಮಗೆ ಕೆಲವು ಸೂಚನೆಗಳನ್ನು ಕೊಡುತ್ತವೆ. ಸಾಹಿತ್ಯದಲ್ಲಿ ಇದು ನಮಗೆ ವಿವರಣೆಯನ್ನು ಕೊಡುತ್ತದೆ. ಹಳೆಯ ಕಾದಂಬರಿಗಳಲ್ಲಿ ಮನುಷ್ಯರ ಸಾಹಸವನ್ನು ವರ್ಣಿಸುತ್ತಾರೆ ಅದರಲ್ಲಿ ಸ್ಥಳವು ಕೂಡಾ ಅತ್ಯಂತ ಖಚಿತವಾದ್ದು. ಗಳಗನಾಥರನ್ನು ನೆನಪು ಮಾಡಿಕೊಳ್ಳಬಹುದು ಹಾಗೆಂದು ಅದು ಅತ್ಯಂತ ಮಹತ್ವದ ಕೊಡುಗೆ ಕೂಡಾ ಹೌದು ಭೂಮಿ ಮತ್ತು ಸಾಹಸಗಳು ಇದರಲ್ಲಿ ಅತ್ಯಂತ ಮುಖ್ಯ ಹಾಗೆ ನೋಡಿದರೆ

ಕಾದಂಬರಿಗಳಲ್ಲಿ ಸಮಯ ಎನ್ನುವುದು ಅತ್ಯಂತ ಮುಖ್ಯವಾದ ಒಂದು ನೆಲೆಗಟ್ಟು ಕೂಡಾ ಹೌದು. ಇದೇ ಪ್ರಶ್ನೆಯನ್ನು ಮತ್ತೆ ಬೇರೆ ನಿಟ್ಟಿನಲ್ಲಿಯೂ ನಾವು ನೋಡಬಹುದು. ಕಾಲ ಎನ್ನುವುದು ನಮಗೆ ಬೇರೆ ಬೇರೆ ರೀತಿಯಲ್ಲಿ ಕಾಣಿಸುತ್ತದೆ. ಅದನ್ನು ಹೀಗೆಯೂ ಹೇಳಬಹುದು. ಮರಳಿಮಣ್ಣಿಗೆ ಕಾದಂಬರಿಯಲ್ಲಿ ಕಾಲವು ಮೂರು ತಲೆಮಾರಿನ ವ್ಯಾಪಿಸುತ್ತದೆ. ಅದರಲ್ಲಿ ಪ್ರತಿಯೊಂದು ಪಾತ್ರಕ್ಕೂ ಒಂದು ನಿರ್ದಿಷ್ಟವಾದ ಅವಕಾಶಗಳು ಇವೆ. ಲಚ್ಚ ಮೈಸೂರಿನ ತನಕ ಹೋಗುತ್ತಾನೆ ಆದ್ದರಿಂದ ಅವನ ಅವಕಾಶವು ಬೇರೆ. ಆದರೆ ರಾಮೈತಾಳರು ಗಾಂಧಿ ಚಳುವಳಿಯನ್ನು. ನೋಡಿದವರು ಮತ್ತು ಐಗಳ ಮಠವನ್ನು ಬಿಟ್ಟು ನಾಲ್ಕು ಅಕ್ಷರವನ್ನು ಕಲಿಸುವ ಶಾಲೆಗೆ ಮಗನನ್ನು ಕಳಿಸುವುದನ್ನು ಸ್ವಲ್ಪ ವಿರೋಧ ವ್ಯಕ್ತ ಪಡಿಸಿದವರೂ ಹೌದು. ರಾಮ ಸ್ವಾತಂತ್ರ್ಯ ಅನಂತರ ಜೀವನವನ್ನು ಕಂಡವನು. ಮೂವರ ಕಾಲಗಳು ಬೇರೆ ಬೇರೆ ಸಂಕೇತಗಳನ್ನು ಹೇಳುತ್ತವೆ. ಅಷ್ಟೇ ಅಲ್ಲ ಕಾಲ ನಮಗೆ ವಿಶಾಲವಾದ ಒಂದು ಅವಕಾಶವನ್ನು ಕೊಡುತ್ತದೆ ಎನ್ನುವುದನ್ನು ಕಾರಂತರು ಹೇಳುತ್ತಾರೆ. ಕಾಲ ಅಂದರೆ ಅದು ಕಾದಂಬರಿಯನ್ನು ಬರೆದ ಕಾಲ ಎಂದು ಹೇಳುವುದಲ್ಲ. ಹಳೆಯ ಕಾದಂಬರಿಗಳು ಕಾಲವನ್ನು ಅನುಕ್ರಮವಾಗಿ ಜೋಡಿಸುತ್ತವೆ. ಗ್ರೀಕ್ ಪರಂಪರೆಯಲ್ಲಿ ಬಂದ ರೊಮಾಂಟಿಕ್ ಆದ ಕತೆಗಳಲ್ಲಿ ಪ್ರೇಮ ಮತ್ತು ಅದರ ಸಾಧನೆಗೆ ಹೋರಾಟ ಎನ್ನುವುದು ಮಾಮೂಲಿಯಾಗಿತ್ತು. ಹೆಣ್ಣಿನ ಪ್ರೇಮ ಮತ್ತು ಅದಕ್ಕಾಗಿ ಹೋರಾಟ ಮಾಡುವ ಕ್ರಮ ಹಾಗೂ ಕೊನೆಗೆ ಪ್ರೇಮಿಯು ವಿಜಯವನ್ನು ಹೊಂದುವುದು ಸಾರವಾಗಿತ್ತು. ಇದರ ಮತ್ತೊಂದು ರೀತಿಯನ್ನು ಗ್ರೀಕಿನ ನಾಟಕಗಳಲ್ಲಿಯೂ ಕಾಣುತ್ತೇವೆ. ಪ್ರೇಮಿಗಳು ಮತ್ತು ಅವರ ಮಧ್ಯೆ ಬರುವ ಇತರ ಶಕ್ತಿಗಳನ್ನು ನಿರೂಪಿಸುವುದು ಕೂಡಾ ಅತ್ಯಂತ ಮುಖ್ಯ. ಪ್ರೇಮಿಗಳ ಸತ್ವವು ಇಂಥಾ ಸಂದರ್ಭದಲ್ಲಿ ಎದ್ದು ಕಾಣುತ್ತದೆ. ಯಾವುದೇ ಸಮಸ್ಯೆಯು ಇಲ್ಲದೆ ಹೋದರೆ ಅವರ ಪ್ರೇಮಕ್ಕೆ ಹೆಚ್ಚಿನ ಮಹತ್ವವು ಬರುವುದಿಲ್ಲ. ನಾಯಕ ಮತ್ತು ನಾಯಕಿ ಎನ್ನುವದು ಇಲ್ಲಿ ಎಷ್ಟು ಮುಖ್ಯವಾಗುತ್ತದೆಯೋ ಅಷ್ಟೇ ಮುಖ್ಯ ಅಡತಡೆಗಳು. ಇವು ಇಲ್ಲವಾದರೆ ಹೆಚ್ಚು ಸಾಧನೆಯು ಆಗುವುದೂ ಇಲ್ಲ. ನಾಯಕನಿಗೆ ಭವಿಷ್ಯವನ್ನು ಹೇಳಲು ಕೆಲವರು ಇರುತ್ತಾರೆ. ಅದು ಅವನಿಗೆ ಸಹಾಯವನ್ನು ಮಾಡುತ್ತದೆ. ಆದರೆ ಈ ಮಾದರಿಯ ಕಾದಂಬರಿಗಳು ಸುಖಾಂತ್ಯದಲ್ಲಿ ಮುಕ್ತಾಯವಾಗುತ್ತವೆ.

ಒಂದು ಕೃತಿಯಲ್ಲಿ ಬರುವ ಕ್ರಿಯೆಗಳು ಕೂಡಾ ಅತ್ಯಂತ ಮಹತ್ವದ್ದು. ಕಾಲ ಮತ್ತು ಅದರ ಪರಿಣಾಮವು ಬೇರೆಯಾಗಿರುತ್ತದೆ. ಆದರೆ ಪ್ರದೇಶಕ್ಕೆ ಅನುಸಾರವಾಗಿ ಕಥನ ಮತ್ತು ಅದರ ನಿರೂಪಣೆಗಳು ಬೇರೆಯಾಗುತ್ತವೆ. ಪ್ರದೇಶವನ್ನು ಕಥನದ ಮೂಲವೆಂದು ಹೇಳಿದರೂ ನಡೆಯುತ್ತದೆ. ಅದು ಕಥನದಲ್ಲಿ ತಳಹದಿಯೂ ಹೌದು. ಇದನ್ನೇ ಕೆಲವರು ತಾಯ್ನೆಲ ಎಂದೂ ಹೇಳುತ್ತಾರೆ. ಕಾರಂತರ ತಾಯ್ನೆಲ ಕುಂದಾಪುರ ಮತ್ತು ಪುತ್ತೂರು ಸೀಮೆಗಳು. ಈ ಸೀಮೆಗಳು ಯಾವತ್ತು ಒಂದು ಲಕ್ಷಣವನ್ನು ಹೊಂದಿರುತ್ತವೆ. ಪ್ರತಿಪ್ರದೇಶಕ್ಕೂ ಅದರದೇ ಆದ ಒಂದು ಸ್ವರೂಪವು ಇರುತ್ತದೆ. ಅದನ್ನು ನಾವು ಗಮನಿಸಬೇಕಾಗುತ್ತದೆ. ಕಥನಗಳು ಮತ್ತು ಪ್ರದೇಶಗಳು ಜೊತೆಗೆ ಇರುತ್ತವೆ. ಆದ್ದರಿಂದ ನಾವು ಕುವೆಂಪು ಕಾದಂಬರಿಯ ಸ್ಥಳವನ್ನು ಪಲ್ಲಟ ಮಾಡಲಾರೆವು.ಅದೇ ರೀತಿಯಲ್ಲಿ ಬರೆದ ಚಾರಿತ್ರಿಕ ಸನ್ನಿವೇಶವನ್ನು ಬದಲಿಸುವುದು ಸಾಧ್ಯವೇ ಇಲ್ಲ. ಅದರ ವಿವರಣೆಗಳೇ ಈ ಸಂಗತಿಗಳನ್ನು ಹೇಳುತ್ತವೆ. ಆದರೆ ಅದೇ

ಸ್ಥಳವನ್ನು ನಾವು ಮಿರ್ಜಿಯವರ ಕಾದಂಬರಿಯಲ್ಲಿ ನೋಡಲು ಸಾಧ್ಯವಿಲ್ಲ. ಒಂದು ಪ್ರದೇಶವೆಂದು ನಾವು ಅತ್ಯಂತ ಸುಲಭವಾಗಿ ಗುರುತಿಸುವುದಲ್ಲ. ಅದು ವಿವರಣೆಯೂ ಆಗಿರುತ್ತದೆ. ಒಂದು ಪ್ರದೇಶದಲ್ಲಿ ಬರುವ ವಿವಿಧ ಜಾತಿಗಳು ಕೂಡಾ ಕಾದಂಬರಿಗಳಲ್ಲಿ ಅಸ್ತಿತ್ವವವನ್ನು ಪಡೆಯುತ್ತವೆ. ಇದರಲ್ಲಿ ಅನೇಕವು ಚಿತ್ರದಲ್ಲಿಯೂ ಮೂಡುತ್ತವೆ. ಇಲ್ಲಿ ಮತ್ತೊಂದು ಉದಾಹರಣೆಯನ್ನು ಕೊಡಬಹುದು. ನಮಗೆ ಪ್ರದೇಶಗಳಲ್ಲಿ ಏನು ಕಾಣುತ್ತದೆಯೋ ಅದರ ಪರಿಣಾಮವು ನಮ್ಮ ಬರಹಗಳ ಮೇಲೆ ಕಾಣಿಸುತ್ತದೆ. ಕುವೆಂಪು ಹೇಳುವ ಬೈಸಿಕಲ್, ಅವರು ಹೇಳುವ ನಾಯಿ ಅವರಲ್ಲಿ ಒಂದು ಅನನ್ಯವಾದ ಪಾತ್ರವನ್ನು ವಹಿಸುತ್ತದೆ. ಇದನ್ನು ನಾವು ಮರುಭೂಮಿಯ ಹೂ ಬರಹದಲ್ಲಿ ಕಾಣುವುದಿಲ್ಲ. ಅಲ್ಲಿ ಮೇಕೆಯು ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಅರೇಬಿಯಾದ ಕತೆಗಳು ತುಂಬಾ ಜನಪ್ರಿಯ. ಆ ಕಥನಗಳಿಗೆ ಬೇರೆ ಆಯಾಮಗಳೂ ಇವೆ. ಜಗತ್ತಿನ ಅನೇಕ ಕಥನಗಳನ್ನು ನಾವು ನೋಡಿದರೆ ಅವುಗಳಲ್ಲಿ ಧರ್ಮ ಇವೆ. ಅಷ್ಟೇ ಅಲ್ಲ, ಅವುಗಳಲ್ಲಿ ಮನುಷ್ಯನ ನೋವು ಮತ್ತು ನಲಿವುಗಳಿವೆ. ಪ್ರದೇಶ ಮತ್ತು ಅಲ್ಲಿಯ ರಾಜಕಾರಣವೂ ಇದೆ. ಜನರ ಸಾಹಸಗಳು ಇವೆ. ಅಲ್ಲಾವುದ್ದಿನ ಅದ್ಭುತ ದೀಪ ಕಥನಗಳಲ್ಲಿ ಪ್ರೇಮ ಮತ್ತು ಇತರ ಪ್ರಶ್ನೆಗಳೂ ಇವೆ. ಪಂಚತಂತ್ರದ ಕತೆಗಳು ನಮಗೆ ವಿವಿಧ ನೆಲೆಗಳು ಕಾಣುತ್ತವೆ. ಹಾಗಿದ್ದರೆ ಕಥನ ಮತ್ತು ಅದರ ಹಿಂದೆ ಇರುವ ದೃಷ್ಟಿಕೋನವನ್ನು ನೋಡುವುದು ಹೇಗೆ ಎನ್ನುವುದು ನಮಗೆ ಇವತ್ತು ಒಂದು ಮುಖ್ಯವಾದ ಪ್ರಶ್ನೆ. ಆದರೆ ಇದನ್ನು ನೋಡುವಾಗ ನಾವು ಕಥನದ ಪಾತ್ರಗಳನ್ನು ಗಮನಿಸಬೇಕು. ಕಥನ ಮತ್ತು ಅದರ ಪಾತ್ರಗಳು ಕೆಲವು ವಿಚಾರಗಳನ್ನು ನಮಗೆ ಹೇಳುತ್ತವೆ.

ಗ್ರೀಕ್ ಪರಂಪರೆಯ ಕಥನದ ರೂಪಗಳು ಬೇರೆ. ಅವು ನಮಗೆ ಇನ್ನಿತರ ಸೂಚನೆಗಳನ್ನು ಕೊಡುತ್ತದೆ. ಅದರಲ್ಲಿ ಗುಣಾತ್ಮಕವಾದ ಮೌಲ್ಯವನ್ನು ನಾವು ಕಾಣುತ್ತೇವೆ. ಒಳಿತು ಮತ್ತು ಕೆಡುಕು ಹೇಗೆ ಇರುತ್ತದೆ ಎನ್ನುವುದೂ ಅವುಗಳಲ್ಲಿ ಕಂಡು ಬರುತ್ತವೆ. ಈ ಮೊದಲು ಹೇಳಿರುವ ಅಂಶಗಳನ್ನು ಗಮನಿಸಿ ಹೇಳುವುದಿದ್ದರೆ ಒಂದು ಒಂದು ಬಗೆಯ ಅಭಿವ್ಯಕ್ತಿಯನ್ನು ಇವು ಹೇಳುತ್ತವೆ. ಕಥನ ಶೈಲಿ ಮತ್ತು ವಿವರಣೆಯಲ್ಲಿ ಕಾಣುವ ವಿಶಿಷ್ಟತೆಯು ನಮಗೆ ಅತ್ಯಂತ ಪ್ರಧಾನವಾದ್ದು ಎಂದು ತಿಳಿಯುತ್ತದೆ. ಪ್ರಾಚೀನ ಕಥನಗಳಲ್ಲಿ ಪ್ರೇಮ ಎನ್ನುವುದು ಆಶಯ, ಇದರಲ್ಲಿ ನಾಯಕ ಮತ್ತು ನಾಯಕಿಯರು ಮೊದಲು ಭೇಟಿಯಗುತ್ತಾರೆ. ಅವರ ಮಧ್ಯೆ ಮೊದಲ ನೋಟದ ಪ್ರೇಮವು ಉಂಟಾಗುತ್ತದೆ. ಅದರ ನಂತರವೇ ಅವರ ಪ್ರೇಮವು ಇಕ್ಕಟ್ಟಿಗೆ ಸಿಕ್ಕುತ್ತದೆ, ಪ್ರಾಚೀನ ಮಹಾಕಾವ್ಯಗಳಿಗೆ ಇದೇ ಆಸಕ್ತಿಯ ಕೇಂದ್ರವಾಗಿರುತ್ತದೆ. ಪ್ರೇಮ ಮತ್ತು ವಿಜಯ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ನಾವು ಹಿಂದೆ ಇದ್ದ ಮಹಾಕಾವ್ಯಗಳ ಆಶಯವನ್ನು ಇದೇ ಹಿನ್ನೆಲೆಯಲ್ಲಿ ನೋಡಬೇಕು ಇದನ್ನು ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿಯೂ ನೋಡಬಹುದು. ಪಂಪನ ಕಾವ್ಯದಲ್ಲಿ ಪ್ರೇಮ ಮತ್ತು ಸಂಘರ್ಷ ಹಾಗೂ ಸಾವು ಜೊತೆಯಲ್ಲಿ ಹೋಗುತ್ತವೆ. ಆದಿಪುರಾಣವನ್ನು ಈ ಹಿನ್ನೆಲೆಯಲ್ಲಿಯೂ ನೋಡಬಹುದು. ಹುಟ್ಟು ಮತ್ತು ಸಾವು ಎನ್ನುವುದು ಜೊತೆಯಲ್ಲಿ ಇವೆ. ಪ್ರೇಮ ಮತ್ತು ಸಾವು ಕೂಡಾ ಹೀಗೆಯೇ ಇರುತ್ತದೆ. ಜೀವನವು ಮುಖ್ಯವಲ್ಲ. ಮೋಕ್ಷವೇ ಅತ್ಯಂತ ಮುಖ್ಯ. ಜೀವಿಯೊಬ್ಬನ ಪರಮ ಗುರಿಯು ಇದೆ. ಒಮ್ಮೆ ಮನುಷ್ಯ ಮೋಕ್ಷವನ್ನು ಪಡೆದ ಮೇಳೆ ಮತ್ತೆಮರು ಹುಟ್ಟು ಇಲ್ಲ. ಈ ಉದ್ದೇಶವನ್ನು

ಇಟ್ಟುಕೊಂಡು ಪಂಪ ಆದಿಪುರಾಣವನ್ನು ಬರೆದ. ಕೊನೆಗೆ ಪಡೆಯುವ ಸಾವು ನಿಜವಾದ ಅರ್ಥದಲ್ಲಿ ದುರಂತವಲ್ಲ. ಆದರೆ ಅದನ್ನು ಆ ಚೌಕಟ್ಟಿನಿಂದ ಹೊರೆಗೆ ನಿಂತು ನೋಡಿದರೆ ಅದು ದುರಂತ ಎಂದೇ ಅನಿಸಲೂ ಬಹುದು. ಅದೆ ನಮ್ಮ ಅತ್ಯಂತ ಮಹತ್ವದ ಕಾವ್ಯಗಳು ನಮಗೆ ಇನ್ನೊಂದು ರೂಪವನ್ನು ಕೊಟ್ಟಿವೆ. ಪಂಪ ಭಾರತದಲ್ಲಿ ಯುದ್ಧ ಮತ್ತು ಅದರ ಭೀಕರತೆಯು ವಿವರವಾದ ಚಿತ್ರವಾಗಿ ನಮ್ಮ ಕಣ್ಣಿಗೆ ಬೀಳುತ್ತವೆ ಕೌರವ ತನ್ನ ಎಲ್ಲವನ್ನು ಕಳೆದುಕೊಡು ಅಸಹನೀಯವಾಗಿ ಯದ್ಧಭೂಮಿಯಲ್ಲಿ ನಡೆಯುತ್ತಾನೆ ಆದರೆ ಅದರ ಜೊತೆಗೆ ಅವನು ಸತ್ತವರ ಹೆಣಗಳನ್ನು ನೋಡುತ್ತಾನೆ. ಇದು ಪರಿಸ್ಥಿತಿ. ಯಾವುದೇ ಕಥನಗಳನ್ನು ಓದಿದರೆ ನಮಗೆ ಮತ್ತೊಂದು ಅಂಶವು ಕಾಣುತ್ತದೆ. ಪ್ರತಿಯೊಂದು ಕಥನಗಳಲ್ಲಿ ಆಶಯ ಮತ್ತು ಅದರ ವಿನ್ಯಾಸವು ಅತ್ಯಂತ ಮುಖ್ಯ. ಆಶಯವನ್ನು ಬಿಟ್ಟು ನಾವು ಕಥನವನ್ನು ಗ್ರಹಿಸುವುದು ಸಾಧ್ಯವಿಲ್ಲ. ಕಥನವು ಕೆಲವು ನಿಯಮವನ್ನು ಇಟ್ಟು ಕೊಳ್ಳುತ್ತದೆ. ಅದನ್ನು ನಾವು ಬಿಟ್ಟು ಕತೆಯನ್ನು ಹೇಳಲು ಸಾಧ್ಯವಿಲ್ಲ. ಆದನ್ನು ಆ ರೂಪದ ಅತ್ಯಂತ ಪ್ರಾಥಮಿಕವಾದ ಅಂಶ ಎಂದು ಹೇಳಿದರೂ ಸರಿಯಾಗುತ್ತದೆ. ಕಥನಗಳಲ್ಲಿ ಕಥನಕ್ಕೆ ಭಾಷೆ, ನಿರೂಪಣೆ ಮತ್ತು ಪಾತ್ರಗಳು ಅತ್ಯಂತ ಅಗತ್ಯ. ಆಶಯವನ್ನು ಆಧಾರ ಮಾಡಿಕೊಂಡು ರಚನೆಯು ಉಂಟಾಗುತ್ತದೆ. ಹಾಗೆ ನೋಡಿದರೆ ಕಥನಗಳು ತಮ್ಮದೇ ಆದ ಒಂದು ನಿರೂಪಣೆಯನ್ನು ಹೊಂದಿರುತ್ತವೆ. ಆದ್ದರಿಂದ ಕಥನದಲ್ಲಿ ಸ್ಥಳ ಮತ್ತು ಅದರ ಕಾಲಗಳು ಅತ್ಯಂತ ಮುಖ್ಯ. ಕಥನ ಎನ್ನುವುದು ಅತ್ಯಂತ ಪ್ರಾಚೀನವಾದ ರೂಪವೂ ಇದೆ ಕಥನವು ವಾಸ್ತವವನ್ನು ಹೇಳುತ್ತದೆ ಎಂದು ಭಾವಿಸುವುದು ಸರಿಯಾದ ಕ್ರಮವಲ್ಲ. ಕಥನವು ಕೂಡಾ ಅದರದೇ ಆದ ಒಂದು ಕಾಲವನ್ನು ಹೇಳುತ್ತದೆ. ಇನ್ನೊಂದು ಕಡೆಯಿಂದ ಕಥನಗಳು ಆವರಣವನ್ನು ಹೊಂದಿರುತ್ತವೆ. ಆದರೆ ಕಥನವು ನಮಗೆ ಭಿನ್ನವಾದ ಪರಂಪರೆಯನ್ನು ಹೇಳುತ್ತವೆ. ಹಾಗೆ ನೋಡಿದರೆ ಕತೆಯನ್ನು ಕೇಳದೇ ಇರುವವರು ಇಲ್ಲ. ಪದ್ಯವನ್ನು ಕೇಳದೇ ಇರುವವರೂ ಇಲ್ಲ. ಹಾಗೆಂದರೆ ಅದನ್ನು ಒಂದು ಗ್ರೀಕ್ ರೊಮಾಂಟಿಕ್ ಕಥನಗಳಲ್ಲಿ ಸಾಹಸ ಇರುತ್ತದೆ. ಅದು ರಚನಾತ್ಮಕವಾದ ಪ್ರಕ್ರಿಯೆ ನಿಜ. ಗ್ರೀಕರಲ್ಲಿ ಸಾಹಸ ಮತ್ತು ಅದರ ಪ್ರಕ್ರಿಯೆಯು ಪ್ರಧಾನವಾದ್ದರಿಂದ ಆ ಸಾಹಸವು ಪ್ರತ್ಯೇಕವಾಗಿದೆ. ಅದರಲ್ಲಿ ಸಾಹಸ ಎನ್ನುವುದೇ ಕಾಲವನ್ನು ಸೂಚಿಸುತ್ತವೆ. ಈವತ್ತು ನಾವು ಕಥನಗಳು ಮತ್ತು ಅವುಗಳ ಆಶಯವನ್ನು ಅಷ್ಟಾಗಿ ಗಮನಿಸಲು ಹೋಗುವುದಿಲ್ಲ. ಅದರ ಕಥನವನ್ನು ಹೇಗೆ ನಿರೂಪಿಸಲಾಗಿದೆ ಎಂದು ಮಾತ್ರವೇ ನೋಡುತ್ತೇವೆ.

ಗ್ರೀಕ್ ಕಥನವನ್ನು ನೋಡಿದರೆ ಇದು ಹೀಗೆ ಇರುವುದಿಲ್ಲ. ನಾಯಕ ಮತ್ತು ಅವನ ಸಾಹಸವು ಅತ್ಯಂತ ಮುಖ್ಯ. ಆದ್ದರಿಂದ ಸಾಹಸ ಮತ್ತು ಪ್ರೇಮ ಜೊತೆಗೆ ಹೋಗುತ್ತವೆ. ಅದರ ಜೊತೆಗೆ ಪ್ರೇಮವೇ ಕಥನದ ಮುಂದುವರಿಕೆಗೆ ಕಾರಣವೂ ಆಗುತ್ತದೆ. ಅಷ್ಟೇ ಅಲ್ಲ ಅದರ ಜೊತೆಗೆ ಅದು ಒಂದು ಸಾರವನ್ನು ನಿರೂಪಿಸುತ್ತದೆ. ಆದರೆ ಹೇಗೆ ನೋಡಿದರೂ ನಮಗೆ ಈ ಬಗೆಯ ಕಥನಗಳಲ್ಲಿ ಸಾಹಸ ಮತ್ತು ಪ್ರೇಮವು ಒಂದು ನಿರ್ದಿಷ್ಟವಾದ ಹಂತವನ್ನು ಹೇಳುತ್ತದೆ. ಗ್ರೀಕ್ ಕಥನಗಳಲ್ಲಿ ಬರುವ ಸಾಹಸವನ್ನು ಒಳಗೆ ಇರುವ ಕಾಲದ ಹಿನ್ನೆಲೆಯಲ್ಲಿ ನೋಡುವುದು ಅತ್ಯಂತ ಅಗತ್ಯ. ಸಾಹಸ ಕಥನಗಳು ಮತ್ತು ಅದರ ನಾಯಕನ ಚಲನೆಗೆ

ಒಂದು ಸಂಬಂಧವು ಇದೆ. ಒಂದೇ ಸ್ಥಳದಲ್ಲಿ ಸಾಹಸವು ಕಾಣುವುದೂ ಇಲ್ಲ ಸಾಹಸ ಮತ್ತು ಪ್ರಯಾಣ ಅದರಲ್ಲಿ ಅತ್ಯಂತ ಮುಖ್ಯ. ಆದರೆ ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು: ಕಾದಂಬರಿಗಳು ಕೂಡಾ ಇದೇ ಸಂಗತಿಗಳನ್ನು ಬೇರೆ ಥರ ಬಳಸುತ್ತದೆ. ಕಾದಂಬರಿಗಳಲ್ಲಿ ಕೂಡಾ ಸ್ಥಳ ಮತ್ತು ಕಾಲಗಳು ಕೆಲಸವನ್ನು ಮಾಡುತ್ತವೆ. ಕಾದಂಬರಿಗಳ ಕ್ರಿಯೆಗಳು ಮಹತ್ವವನ್ನು ಪಡೆಯುತ್ತವೆ. ನಾಯಕ ಮತ್ತು ನಾಯಕಿಯರ ನಡುವೆ ನಡೆಯುವ ಪ್ರೇಮ ಹಾಗು ಅದರ ಸಂಗತಿಗಳನ್ನು ನಾವು ಈ ದೃಷ್ಟಿಯಿಂದಲೂ ಗಮನಿಸಬೇಕಾಗುತ್ತದೆ. ನಾಯಕ ಮತ್ತು ನಾಯಕಿಯರ ನಡುವೆ ಪ್ರೇಮವು ಸುಮ್ಮನೆ ಉಂಟಾಗುವುದೂ ಇಲ್ಲ. ಅದರ ಜೊತೆಗೆ ಅದು ಬೇರೆ ಕಾರಣಗಳನ್ನು ಹೊಂದಿರುತ್ತವೆ. ಪ್ರೇಮ ಎನ್ನುವುದು ಗಂಡು ಮತ್ತು ಹೆಣ್ಣುಗಳ ನಡುವೆ ನಡೆಯುವ ಒಂದು ಕ್ರಿಯೆ. ನಾಯಕ ಮತ್ತು ನಾಯಕಿಯರ ನಡುವೆ ನಡೆಯುವ ಪ್ರೇಮ ಎಂಬ ಸೂತ್ರವೂ ಕೂಡಾ ಸ್ಥಳ ಮತ್ತು ಕಾರ್ಯವನ್ನು ಹೇಳುತ್ತದೆ. ಅದರ ಜೊತೆಗೆ ಕಾಲವೂ ಇರುತ್ತದೆ. ಆದ್ದರಿಂದ ನಮ್ಮ ಹಿರಿಯರು ಪದೇ ಪದೇ ಕಾಲ ಕೂಡಿ ಬಂದಿದೆ ಎಂದು ಹೇಳುತ್ತಿದ್ದರು. ಗಂಡು ಮತ್ತು ಹೆಣ್ಣಿನ ದಾಂಪತ್ಯದ ಪೂರ್ವದ ಮಾತುಕತೆಗಳು, ಅವರ ವಿಹಾರಗಳು ಕೂಡಾ ಇದೇ ವ್ಯಾಪ್ತಿಯಲ್ಲಿ ಬರುತ್ತದೆ. ಅದು ಅವರ ಜೀವನದ ಅತ್ಯಂತ ಪ್ರಧಾನವಾದ ಒಂದು ಸಾರ ರೂಪವೂ ಹೌದು. ಒಂದು ಕಾದಂಬರಿಯಲ್ಲಿ ಬರುವ ನಾಯಕ ಮತ್ತು ನಾಯಕಿಯರ ಚಿತ್ರವು ನಮಗೆ ಒಂದು ಜೀವನದ ಚಿತ್ರದಂತೆ ಕಾಣುತ್ತವೆ. ನಾಯಕ ಮತ್ತು ನಾಯಕಿಯರ ಜೀವನದ ಕಾಲದಲ್ಲಿ ಮದುವೆ ಎನ್ನುವುದು ಒಂದು ಘಟನೆ. ಅದನ್ನು ಕಾದಂಬರಿಯಲ್ಲಿ ಒಂದು ಸನ್ನಿವೇಶ ಎಂದು ಹೇಳಹುದು. ಇದನ್ನು ಕಾಲ ಮತ್ತು ಸನ್ನಿವೇಶ ಎಂದು ಹೇಳುತ್ತೇವೆ. ಅವರ ಜೀವನದ ಅತ್ಯಂತ ಮಹತ್ವದ ಕ್ಷಣವೂ ಹೌದು. ಭಯ ಎನ್ನುವುದು ಹೇಗೆ ಜೀವನದಲ್ಲಿ ಪರಿಣಾಮವನ್ನು ಬೀರುತ್ತದೆ ಎನ್ನುವುದೂ ಇಲ್ಲಿ ಅತ್ಯಂತ ಮುಖ್ಯ.

ಸನ್ನಿವೇಶ ಎನ್ನುವುದು ನಾಯಕ ಮತ್ತು ನಾಯಕಿಯರಿಗೆ ಅತ್ಯಂತ ಅಗತ್ಯ. ಒಂದು ಗಳಿಗೆ ಅಥವಾ ಒಂದು ಮುಹೂರ್ತ ಎನ್ನುವುದು ಹೇಗೆ ಕಾಲವನ್ನು ಹೇಳುತ್ತದೆಯೋ ಅದೇ ರೀತಿಯಲ್ಲಿ ಅದು ನಮಗೆ ನಿರ್ದಿಷ್ಟವಾದ ಒಂದು ಅವಕಾಶವನ್ನು ಕಲ್ಪಿಸುತ್ತದೆ ನಮ್ಮ ಹಿಂದೆ ಇದ್ದ ಕಥನಗಳನ್ನು ನಾವು ಮತ್ತೊಮ್ಮೆ ಯೋಚನೆ ಮಾಡಬೇಕಾಗುತ್ತದೆ. ಪಂಪಭಾರತದ ಅರ್ಜುನ ಉದಾತ್ತ ನಾಯಕ. ಅವನು ಶೌರ್ಯವಂತ. ಅವನು ರಸಿಕ. ಅವನು ಅನೇಕ ಕಡೆಗೆ ಯುದ್ಧವನ್ನು ಮಾಡಿದ್ದಾನೆ. ಅದರ ಜೊತೆಗೆ ಅವನು ದೇವರ ಕೃಪೆಯಲ್ಲಿ ಇದ್ದಾನೆ. ಆದರೆ ಸುಯೋಧನ ಹಾಗಲ್ಲ. ಅವನು ಒಂದು ಅರ್ಥದಲ್ಲಿ ದೈವ ಬಲದ ಅನುಕೂಲ ಇಲ್ಲದವನು. ಅವನು ಕೇಡಿನ ಗುಣವನ್ನು ಹೊಂದಿದವನು. ಯುದ್ಧ ಅವರ ನಡುವೆ ಇರುವ ಒಂದು ಅವಕಾಶ. ಅದು ಸಾಹಸ ಮತ್ತು ಶೌರ್ಯದ ಪ್ರಶ್ನೆಯೂ ಆಗಿದೆ. ಸಾಹಸ ಎನ್ನುವುದು ನಮಗೆ ಒಂದು ಜಾಗದಲ್ಲಿ ದೊರೆಯುವ ಸಂಗತಿಯಲ್ಲ. ಸಾಹಸ ಎಂದರೆ ಅದಕ್ಕೆ ಒಂದು ಮುಖವೂ ಇಲ್ಲ. ಬೆಟ್ಟದ ತುದಿಯಲ್ಲಿ ಅಡಿಕೆಯ ತೋಟವನ್ನು ಮಾಡುವುದು ಕೂಡಾ ಒಂದು ಬಗೆಯ ಸಾಹಸ. ತಮ್ಮ ನಿತ್ಯದ ಜೀವನವನ್ನು ಸಾಗಿಸುವುದಕ್ಕೆ ಅರಣ್ಯದ ಉತ್ಪನ್ನವನ್ನು ಮಾರುವುದು ಕೂಡಾ ಒಂದು ಬಗೆಯ ಸಾಹಸವೇ. ಈಗ ನಮಗೆ ಕಾರಂತರ ಕಾದಂಬರಿಗಳು ಅರ್ಥ ಪೂರ್ಣವಾಗಿದೆ ಎಂದು ಅನಿಸುತ್ತದೆ. ಒಮ್ಮೆ ಗ್ರೀಕರ ಸಾಹಸ ಕತೆಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು

ಕೊಟ್ಟ ವಾಲ್ಟೇರ್ ಸಾಹಸದ ಕಥನಗಳನ್ನು ನಿರೂಪಿಸಿದ. ಆಗಲೇ ಕಾಲದ ಪ್ರಶ್ನೆಗಳು ನಮ್ಮ ಮುಂದೆ ಬಂದವು. ಜೀವನ ಮತ್ತು ಕಾಲ ಎನ್ನುವುದು ಮಾತ್ರವೇ ಮುಖ್ಯವಾಯಿತು ಎಂದು ಭಾವಿಸಬಾರದು. ಅದರ ಒಳಗೆ ಅನೇಕ ಪ್ರಶ್ನೆಗಳೂ ಇರುತ್ತವೆ. ಅನೇಕ ಸಂದರ್ಭದಲ್ಲಿ ನಮ್ಮ ವಿಧಿಯೇ ನಮ್ಮ ಜೀವನವನ್ನು ನಿರ್ಧಾರ ಮಾಡುತ್ತದೆ ಎಂದು ಗ್ರೀಕರು ನಂಬಿದ್ದರು. ಒಂದು ವಿಷಯವನ್ನು ನಾವು ಇಲ್ಲಿ ಹೆಚ್ಚು ಸ್ಪಷ್ಟಮಾಡಿಕೊಳ್ಳಬೇಕಾಗುತ್ತದೆ. ಈ ದುರಂತ ಎನ್ನುವುದು ನಮಗೆ ಕಾಡುತ್ತದೆ ಎಂದರೆ ಅದು ಎಲ್ಲರನ್ನೂ ಕಾಡುತ್ತದೆ ಎಂದು ಅರ್ಥವಲ್ಲ. ಕನಕದಾಸರ ನಳಚರಿತ್ರೆಯಲ್ಲಿ ಶನಿಯು ಕಾಡುವುದು ಅವನಿಗೆ ಮಾತ್ರವೇ. ಸಾಮಾನ್ಯರಲ್ಲಿ ಸಾಮಾನ್ಯರಾದ ಮನುಷ್ಯರಿಗೆ ಶನಿಯು ಕಾಡುವ ಪ್ರಶ್ನೆಯೇ ಇಲ್ಲ. ಅದು ನಳನಿಗೆ ಅತ್ಯಂತ ವಿಶೇಷವಾದ ಒಂದು ಪ್ರಭಾವವನ್ನು ಬೀರಿತು.

ನಾವು ಇಲ್ಲಿ ನಮ್ಮ ನಿತ್ಯದ ಕ್ರಿಯೆಗಳನ್ನು ಗಮನಿಸಬೇಕಾಗುತ್ತದೆ.ಯಾವುದು ನಮ್ಮ ನಿತ್ಯದ ಸಂಗತಿಯು ಆಗಿದೆಯೋ ಅದರಲ್ಲಿ ಸಾಹಸವನ್ನು ಹುಡುಕಲು ಬರುವುದಿಲ್ಲ. ಉದಾಹರಣೆಗೆ ನಾವು ನಿತ್ಯ ಹಲ್ಲುಜ್ಜುವುದು ಸಾಹಸವಾಗಲಾರದು.ಆದರೆ ನಾಯಕಿಗಾಗಿ ದುಷ್ಟರನ್ನು ಸದೆ ಬಡಿಯುವುದು ಸಾಹಸವಾಗುತ್ತದೆ. ನಿತ್ಯದ ಕೆಲಸ ಎನ್ನುವುದು ಒಂದು ಬಗೆಯಲ್ಲಿ ಆವರ್ತನವೂ ಆಗಿರುತ್ತದೆ. ಅದು ನಿತ್ಯ ಬರುತ್ತದೆ , ಮತ್ತೆ ಹಾಗೆಯೇ ಹೋಗುತ್ತದೆ. ಆದರೆ ನಿತ್ಯವನ್ನು ರೊಮಾಂಟಿಕ್ ಕಾವ್ಯ ಮತ್ತು ಕಾದಂಬರಿಗಳು ಬೇರೆ ಥರ ನಿರೂಪಣೆ ಮಾಡುತ್ತವೆ. ಸಹಜವಾದ ಸಂಗತಿಯನ್ನು ಅದು ಬೇರೆ ಥರ ಗ್ರಹಿಸುತ್ತದೆ. ವಾಲ್ಟೇರ್ ನಿಜವಾದ ಕಾಲ ಮತ್ತು ಅದರ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಾನೆ ಸಾಹಿತ್ಯದ ಕಾಲ ಮತ್ತು ನಿತ್ಯದ ಕಾಲ ಎನ್ನುವುದು ಬೇರೆ ಎನ್ನುವ ಅರಿವು ಅವನಿಗೂ ಇದೆ. ಯಾವುದೇ ರೊಮಾಂಟಿಕ್ ಕಥನಗಳಲ್ಲಿ ಒಂದು ಅಂಶವು ಪ್ರಾತಿನಿಧಿಕವಾಗಿ ಬರುತ್ತದೆ. ಪ್ರೇಮ ಎನ್ನುವುದು ಅತ್ಯಂತ ವಿಶಿಷ್ಟವಾದ ಹಾಗೂ ವ್ಯಕ್ತಿಗಳ ಜೀವನದಲ್ಲಿ ಬರುವ ಸಂಗತಿಯು ನಿಜ. ಆದರೆ ಪ್ರೇಮವನ್ನು ನಾವು ಎಲ್ಲಾ ಕಲೆಗಳಲ್ಲಿ ಕಾಣುತ್ತೇವೆ. ಪ್ರೇಮ ಎನ್ನುವುದು ವ್ಯಕ್ತಿ ಮತ್ತು ಅವನ ಅಭಿರುಚಿಗೆ ಸಂಬಂಧ ಪಟ್ಟದ್ದೂ ಹೌದು. ಈ ದೃಷ್ಟಿಯಲ್ಲಿ ಕಾಲ ಎನ್ನುವುದು ಅತ್ಯಂತ ಮುಖ್ಯ. ಅದರಲ್ಲಿ ಭಾವನೆಗಳಿವೆ. ಮನುಷ್ಯನ ಆಸೆಗಳು ಇವೆ.ಅದು ಶೂನ್ಯವಾದ್ದು ಅಲ್ಲ.

ಕಾಲವನ್ನು ನಾವು ಇನ್ನೊಂದು ಥರ ನೋಡುತ್ತೇವೆ. ಮನುಷ್ಯ ಮತ್ತು ಅವನ ಆಯುಷ್ಯವನ್ನು ನಾವು ಕಾಲದ ಮೂಲಕವಾಗಿ ಗ್ರಹಿಸುತ್ತೇವೆ. ಸಾಹಸ ಮತ್ತು ಅದರ ಕಾಲವು ನಾವು ಗ್ರಹಿಸಿದ ಕ್ರಮಕ್ಕಿಂತ ಭಿನ್ನವಾಗಿದೆ. ಜೈನ ಕಾವ್ಯಗಳಲ್ಲಿ ಬರುವ ಭವಾಂತರಗಳು ಇದಕ್ಕೆ ಒಂದು ಉದಾಹರಣೆ ಮಾತ್ರ. ಒಂದು ಜನ್ಮ ಎಂದರೆ ನೂರು ವರ್ಷಗಳು. ಅಂದರೆ ಆ ಕಾಲವನ್ನು ಜೈನಕಾವ್ಯಗಳು ಉಲಂಘಿಸುತ್ತವೆ. ಗ್ರೀಕ್ ಕಾದಂಬರಿಯು ಮೊದಲು ಪ್ರಾರಂಭವದ್ದು ಕ್ರಿ.ಶ. ಮೊದಲನೆಯ ಶತಮಾನದಲ್ಲಿ ಅದು ಕೂಡಾ ರೊಮಾಂಟಿಕ್ ಕಾದಂಬರಿಗಳು ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಅದರಲ್ಲಿ ಬರೀ ರೊಮಾಂಟಿಕ್ ಕಲ್ಪನೆಯು ಇದೆ ಎಂದು ಅರ್ಥವಲ್ಲ. ಅದರಲ್ಲಿ ಸಾಹಸ ಎನ್ನುವುದು ಜೊತೆಯಲ್ಲಿ ಇತ್ತು.ಯಾವುದು ರೊಮಾಂಟಿಕ್ ಆಗಿದೆಯೋ ಅದು ಕೂಡಾ ಸನ್ನಿವೇಶವನ್ನು ಆಧರಿಸಿಕೊಂಡಿದೆ. ರೊಮಾಂಟಿಕ್ ಎನ್ನುವುದು ನಮ್ಮ

ಭಾವನೆಯನ್ನು ಹೇಳುತ್ತದೆ. ಅದು ಒಂದು ಕ್ಷಣದ್ದೂ ಆಗಬಹುದು. ಇಲ್ಲಿ ಇದಕ್ಕೆ ಪೂರಕವಾದ ಮತ್ತೊಂದು ಅಂಶವನ್ನು ಗಮನಿಸಬೇಕು. ನಾವು ಆಗಾಗ ಒಂದು ಪದವನ್ನು ಹೇಳುತ್ತೇವೆ. ಅದು ಅಚಾನಕ್ಕಾಗಿ ಅಥವಾ ಆಕಸ್ಮಿಕ ಎನ್ನುವ ಪದ. ಇದು ಒಂದು ಸೀಮಿತವಾದ ಕಾಲವನ್ನು ಹೇಳುತ್ತದೆ. ಆದರೆ ಈ ಕಾಲವನ್ನು ನಾವು ಒಂದು ತಾರ್ಕಿಕವದ ಸಂಗತಿಯೆಂದು ಹೇಳಬೇಕಾಗಿಲ್ಲ. ಯಾವುದನ್ನು ನಾವು ಆಕಸ್ಮಿಕ ಎಂದು ಹೇಳುತ್ತೇವೆಯೋ ಅದು ಈ ಮೊದಲು ಬಂದಿಲ್ಲ. ಈಗ ನಮ್ಮ ಎದುರು ಬಂದಿದೆ. ಅದನ್ನು ಗಮನಿಸಿದರೆ ನಮಗೆ ಇದು ಆಕಸ್ಮಿಕವಾದ ರೀತಿಯಲ್ಲಿ ಬಂದಿದೆ. ಅದು ಒಂದು ಕ್ಷಣದಲ್ಲಿ ನಮ್ಮ ಮುಂದೆ ಬಂದು ನಿಂತಿದೆ. ಹಾಗೆಂದು ಇದು ನಮಗೆ ಇನ್ನೊಂದು ರೀತಿಯ ಪ್ರಸ್ತಾವನೆಯನ್ನು ಮುಂದೆ ಇಡುತ್ತದೆ. ಶಿಕಾರಿ ಕಾದಂಬರಿಯು ಪ್ರಾರಂಭವಾಗುವುದು ಈ ತರಹ. ಅದು ಬಂದು ನಾಗಪ್ಪನ ಎದುರು ಹಾಜರಾಗಿದೆ. ಅದನ್ನು ಅವನು ಎದುರಿಸುವುದು ಹೇಗೆ ಎಂದು ಭಾವಿಸಿಕೊಳ್ಳುತ್ತಾನೆ. ಈ ಬಗೆಯ ಕ್ಷಣಗಳು ಹೇಗೆ ಇರುತ್ತವೆ ಎಂದೂ ಗಮನಿಸಬಹುದು. ಸಂಸ್ಕಾರ ಕಾದಂಬರಿಯಲ್ಲಿ ನಾರಣಪ್ಪ ಸತ್ತದ್ದೂ ಇಂಥದ್ದೇ ಆದ ಒಂದು ಕಾಲದಲ್ಲಿ. ಆ ಕಾಲವು ಪ್ಲೇಗನ್ನು ಹೊತ್ತು ಈ ತೀರ್ಥಹಳ್ಳಿಗೆ ಬಂದಿದೆ. ಅದನ್ನು ನಿರಾಕರಿಸುವುದೇ ಅತ್ಯಂತ ಕಷ್ಟ ತಾನು ಮೆಚ್ಚಿದ ಹುಡುಗಿಯನ್ನು ಮದುವೆಯಾಗುವುದೂ ಶುಭ ಲಗ್ನ ಮತ್ತು ಶುಭ ಕರಣಗಳಲ್ಲಿ. ಸಾವು ಮತ್ತು ಹುಟ್ಟು ಎರಡೂ ಕಾಲವನ್ನು ನಿರೂಪಿಸುತ್ತವೆ. ಮದುವೆ ಮತ್ತು ಅದರ ಆಚರಣೆಗೆ ಕೂಡಾ ಕಾಲವು ಕೂಡಿ ಬರಬೇಕಾಗುತ್ತದೆ. ಆದ್ದರಿಂದ ನಮಗೆ ಕೂಡಾ ಕಾಲ ಎನ್ನುವುದು ಅತ್ಯಂತ ಮುಖ್ಯ.

ಕಾಲ ಮತ್ತು ಜೀವನದ ಕ್ರಮಗಳಿಗೆ ಹೇಗೆ ಸಂಬಂಧಗಳು ಇರುತ್ತವೆ ಎನ್ನುವುದನ್ನು ಇದು ಸೂಚಿಸುತ್ತದೆ. ಭಾರತದಲ್ಲಿ ಇದನ್ನು ಇನ್ನೊಂದು ಥರ ಹೇಳುತ್ತಾರೆ. ಅದನ್ನು ಗಳಿಗೆ ಎಂದು ಹೇಳುತ್ತಾರೆ. ಹುಟ್ಟುವ ಗಳಿಗೆ ಮತ್ತು ಸಾವಿನ ಗಳಿಗೆ ಎನ್ನುವುದಕ್ಕೆ ಈ ಕಾರಣದಿಂದ ಅತ್ಯಂತ ಮಹತ್ವ ಇದೆ. ಕ್ಷಣವನ್ನು ನಾವು ಇನ್ನೊಂದು ರೀತಿಯಲ್ಲಿ ಹೇಳುತ್ತೇವೆ. ಆಯಾ ಗಳಿಗೆಯಲ್ಲಿ ಆಗುವ ಕೆಲಸ ಎನ್ನುವುದು ಭಾವಾರ್ಥ. ಒಂದು ಕ್ಷಣದಲ್ಲಿ ಬರುವ ಭಾವನೆಗಳು ನಮಗೆ ಭಾವಗೀತೆಗಳು ಆದವು. ಒಂದು ಕ್ಷಣದಲ್ಲಿ ಆದ ಕಣ್ಣಿನ ನೋಟವು ಪ್ರೇಮಕ್ಕೂ ಕಾರಣವಾಗುತ್ತದೆ. ಜೀವನದಲ್ಲಿ ಒಂದು ಕ್ಷಣವೂ ಅತ್ಯಂತ ಮಹತ್ವದ ಬದಲಾವಣೆಯನ್ನು ತರುತ್ತದೆ. ಹಾಗೆಯೇ ಜೀವನದಲ್ಲಿ ಒಂದು ವರ್ಷವೂ ಯಾವುದೇ ಬದಲಾವಣೆಯವನ್ನು ತರದೇ ಹೋಗಬಹುದು. ಜೀವನದಲ್ಲಿ ಒಮ್ಮೊಮ್ಮೆ ಅದೃಷ್ಟ ಎನ್ನುವುದನ್ನು ನಾವು ಅನೇಕ ಕಾವ್ಯಗಳಲ್ಲಿ ಕಾಣುತ್ತೇವೆ. ಒಮ್ಮೆ ಪ್ರತಿಕೂಲ ದೈವವಾಗುವುದೂ ಸತ್ಯ. ಜೀವನದಲ್ಲಿ ಕೆಲವು ಆಗುತ್ತವೆ. ಮತ್ತೆ ಕೆಲವನ್ನು ನಾವು ಮಾಡಿಕೊಳ್ಳುತ್ತೇವೆ. ಅದೃಷ್ಟವು ಕೂಡಾ ನಮಗೆ ಅನುಕೂಲವನ್ನು ಮಾಡುತ್ತದೆ. ಈ ದೃಷ್ಟಿಯಲ್ಲಿ ಕಾಲವು ನಮಗೆ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಗ್ರೀಕ್ ಪರಂಪರೆಯ ಕಥನಗಳು ಹೀಗೆ ಸಾಹಸ ಮತ್ತು ರೊಮಾಂಟಿಕ್ ಪರಂಪರೆಯನ್ನು ಎತ್ತಿ ಹಿಡಿಯುತ್ತದೆ. ಆದರೆ ಯುರೋಪಿನ ಪರಂಪರೆಯು ನಮಗೆ ಬೇರೆ ದಿಕ್ಕನ್ನು ಹೇಳುತ್ತದೆ. ಅದರ ರೊಮಾಂಟಿಕ್ ಆದ ನಿಲುವು ಬೇರೆ ತರಹದ್ದು. ಅದರಲ್ಲಿ ಬರುವ ಖಳನಾಯಕನೂ ಭಿನ್ನವಾಗಿದ್ದಾನೆ. ಅದರ ಜೊತೆಗೆ ಯುರೋಪಿಯನ್ ದೇಶಗಳ ಕಾದಂಬರಿಗಳು ಅತ್ಯಂತ ಮಹತ್ವದ ಪ್ರಶ್ನೆಗಳನ್ನು

ಎತ್ತಿಕೊಂಡಿವೆ. ಹದಿನೇಳನೆಯು ಶತಮಾನದಲ್ಲಿ ಒಂದು ಮಹತ್ವದ ಪ್ರಕ್ರಿಯೆಯನ್ನು ನಾವು ಕಾಣಬಹುದು. ಅರಸೊತ್ತಿಗೆ. ರಾಷ್ಟ್ರದ ಪ್ರಶ್ನೆಗಳು ಮತ್ತು ಸಂಸ್ಕೃತಿಯನ್ನು ಈ ಹೊತ್ತಿಗೆ ಹೇಗೆ ನೋಡಬೇಕು ಎನ್ನುವುದು ಅವರ ಪ್ರಶ್ನೆಗಳೂ ಆಗಿದ್ದವು. ಅದರಲ್ಲಿಯೂ ನಮಗೆ ಚಾರಿತ್ರಿಕವಾದ ಕಾದಂಬರಿಗಳು ಬೇರೆ ವಿಚಾರಗಳನ್ನು ತಿಳಿಸಿದವು. ಚರಿತ್ರೆಯನ್ನು ಕಾದಂಬರಿಯ ಮೂಲಕವೂ ನಾವು ಹೇಳಬಹುದು ಎಂದು ಆಗಿನ ಕಾದಂಬರಿಕಾರರು ಎಂದು ಭಾವಿಸಿದ್ದು ಅತ್ಯಂತ ಮುಖ್ಯವಾದ ಚಲನೆಯೂ ಆಗಿದೆ. ಕೆಲವು ಚಾರಿತ್ರಿಕ ಕಾದಂಬರಿಗಳು ನಮಗೆ ಸಂಗತಿಗಳನ್ನು ಹೇಳುವುದು ಒಂದು ಕ್ರಮದಲ್ಲಿ. ಅದು ಚರಿತ್ರೆಯನ್ನು ವೈಭವೀಕರಿಸುತ್ತದೆ. ವಾಸ್ತವವಾಗಿ ಚರಿತ್ರೆ ಎನ್ನುವುದೂ ನಮಗೆ ಕಾಲವನ್ನು ಸೂಚಿಸುತ್ತದೆ. ಚರಿತ್ರೆಯು ವೈಭವೀಕರಣಕ್ಕೆ ಸಿಕ್ಕ ಕಾದಂಬರಿಗಳು ನಮಗೆ ತಿಳಿಯಾದ ಒಂದು ಸತ್ಯವನ್ನು ಹೇಳುತ್ತದೆ ಎಂದು ನಂಬುವ ಹಾಗೆ ಇಲ್ಲ. ಅದರ ಪಾತ್ರಗಳು ಕೂಡಾ ಇದೇ ರೀತಿಯಲ್ಲಿ ಇರುತ್ತದೆ. ಹೀಗಾಗಿ ಈ ಮಾದರಿಯ ಕಾದಂಬರಿಗಳಲ್ಲಿ ನಾವು ಚಾರಿತ್ರಿಕವಾದ ಕಥನಗಳು ರಮ್ಯ ಕಥನದ ರೀತಿಯಲ್ಲಿ ಇರುವುದಿಲ್ಲ. ಅದರ ಸ್ವರೂಪವು ಬೇರ ಥರ ಇರುತ್ತದೆ. ಅದರ ಮಾದರಿಗಳಲ್ಲಿ ಒಂದು ಭಿನ್ನತೆಯನ್ನು ನಾವು ಕಾಣಬಹುದು. ವಸಾಹತುಶಾಹಿ ಸಂಸ್ಕೃತಿಯೊಳಗೆ ಒಡಮೂಡಿ ಬಂದ ಮತ್ತೊಂದು ಕಲ್ಪನೆ ರಾಷ್ಟ್ರೀಯತೆ. ಬ್ರಿಟೀಷ್ ಪ್ರಭುತ್ವದ ವಿರುದ್ಧ ನಡೆಸಲಾಗಿರುವ ಚಳುವಳಿಯ ಉಪ ಉತ್ಪನ್ನವಿದು. ರಾಷ್ಟ್ರೀಯತೆಯಲ್ಲಿ ಸಾಂಸ್ಕೃತಿಕ ಅಂಶಗಳು ಒಳಗೊಂಡಿದೆ. ಪಾರ್ಥೊಚಟರ್ಜಿಯವರು ಎರಡು ರೀತಿಯ ರಾಷ್ಟ್ರೀಯತೆಯ ವಾದಗಳನ್ನು ಗುರುತಿಸುತ್ತಾರೆ. ಮೊದಲನೆಯದು ಪಶ್ಚಿಮ ಯೂರೋಪಿನಲ್ಲಿಯ ಮಾದರಿ. ಈ ಮಾದರಿಯೊಳಗೆ ಮನುಷ್ಯ, ಮನುಷ್ಯನ ಸಂಬಂಧ, ನೈತಿಕತೆ, ಸಮಾಜ ಎನ್ನುವ ಆಲೋಚನಾ ಕ್ರಮವಿದೆ. ಪಶ್ಚಿಮದ ಯುರೋಪಿನಲ್ಲಿ ರಾಷ್ಟ್ರೀಯತೆಯು ಅಲ್ಲಿಯ ಸಾಮಾಜಿಕ ಮತ್ತು ಬೌದ್ಧಿಕ ಸ್ತರಗಳನ್ನು ಒಳಗೊಂಡಿದೆ. ಇನ್ನೊಂದು ಮಾದರಿ ಪೂರ್ವ ಯುರೋಪಿನದು. ಈ ಪೂರ್ವ ಯುರೋಪಿನ ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಸಾಂಸ್ಕೃತಿಕ ಅನನ್ಯತೆಯು ಪ್ರಧಾನವಾದುದು. ಈ ಸಾಂಸ್ಕೃತಿಕ ಅನನ್ಯತೆಯ ಜೊತೆಗೆ ರಾಷ್ಟ್ರೀಯ ಅಭಿವೃದ್ಧಿಯ ಸಂಗತಿಗಳು ಸೇರಿಕೊಂಡಿವೆ. ಹೀಗಾಗಿ ರಾಷ್ಟ್ರೀಯ ಸಂಸ್ಕೃತಿಯ ವ್ಯಾಖ್ಯಾನವು ಪರಿವರ್ತನೆಯ ಅಂಶಗಳನ್ನು ಒಳಗೊಂಡಿದೆ (Partho Chatterjee, 1986, p. 1). ಪಾರ್ಥೊ ಚಟರ್ಜಿಯವರು ಚರ್ಚೆಯನ್ನು ಮುಂದಿಡುವಾಗ ಜಾನ್‌ಪೊಮೇನಾಟ್ಸ್‌ನ ವಾದವನ್ನು ಅಂಗೀಕರಿಸಿದ್ದಾರೆ.

ರಾಷ್ಟ್ರೀಯತೆಯ ಮಾದರಿಯನ್ನು ಸ್ಪಷ್ಟ ಅರ್ಥದಲ್ಲಿ ವಿವರಿಸಬೇಕಾದರೆ ರಾಷ್ಟ್ರದ ಕಲ್ಪನೆಯೇ ಒಂದು ರೀತಿಯಿಂದ ಭ್ರಮಾತ್ಮಕವಾದುದು. ಈ ಕುರಿತಂತೆ ಡಿ.ಆರ್. ನಾಗರಾಜ್ ಹೀಗೆ ಹೇಳುತ್ತಾರೆ. "ಈ ರಾಷ್ಟ್ರೀಯತೆ ಎನ್ನುವ ಪರಿಕಲ್ಪನೆಯನ್ನು ಮಾರ್ಕ್ಸ್‌ವಾದ ಗ್ರಹಿಸುವ ಚಿಂತನಾಕ್ರಮ ಬೇರೆ " ರಾಷ್ಟ್ರೀಯತೆಯ ಶಕ್ತಿ ಮತ್ತು ಮಿತಿಗಳನ್ನು ಮಾರ್ಕ್ಸ್‌ವಾದ ಸಮರ್ಥವಾಗಿ ವಿವರಿಸುತ್ತದೆ ಎಂದು ನಾಗರಾಜ್ ಒಪ್ಪಿಕೊಳ್ಳುತ್ತಾರೆ. ರಾಷ್ಟ್ರೀಯತೆಯ ಪ್ರಮುಖ ಲಕ್ಷಣಗಳನ್ನು ಅವರು ಹೀಗೆ ಗುರುತಿಸುತ್ತಾರೆ.

೧. ಸಮಾನ ಪ್ರಾದೇಶಿಕತೆ

೨. ಸಮಾಜ ಮಾರುಕಟ್ಟೆ

೩. ಸಮಾನ ಭಾಷೆ (ಹಲವಾರು ಭಾಷೆಗಳಿದ್ದರೂ ಸರಿ ಎಂಬ ನಿಲುವು ಕೂಡಾ ಸಮರ್ಥನೀಯವೇ. ಉದಾ : ಭಾರತ, ರಷ್ಯಾ ಮುಂತಾದೆಡೆಗಳಲ್ಲಿ)

೪. ರಾಷ್ಟ್ರೀಯ ಪ್ರಭುತ್ವ (ನೇಷನ್ ಸ್ಟೇಟ್ ಎಂಬರ್ಥದಲ್ಲಿ)

೫. ಸಮಾನ ಮಾನಸಿಕ ಸ್ವರೂಪ (ಇದನ್ನೇ ಕೆಲವರು ಹಿಗ್ಗಿಸಿ ಸಂಸ್ಕೃತಿ ಎಂಬರ್ಥದಲ್ಲಿ ಬಳಸಿರುವುದುಂಟು)

(ವಿವರಗಳಿಗಾಗಿ ನೋಡಿ : ಶಿವರುದ್ರಪ್ಪ ಜಿ.ಎಸ್., ೧೯೮೮, ಪು. ೪).

ಆದರೆ ಹೆಗಲ್‌ನ ಪ್ರಕಾರ ರಾಷ್ಟ್ರೀಯತೆಯ ಕಲ್ಪನೆ ಒಂದು ಸಾಂಸ್ಕೃತಿಕ ಪರಿಕಲ್ಪನೆಯನ್ನು ಹೊಂದಿಕೊಂಡಿರುತ್ತದೆ. ಸಾಂಸ್ಕೃತಿಕ ಬೆಳವಣಿಗೆಯ ವಾಹಕವನ್ನು ಮಾತ್ರ ರಾಷ್ಟ್ರೀಯ ಪರಿಕಲ್ಪನೆಯ ಜೊತೆಗೆ ಹೆಗಲ್ ಚರ್ಚಿಸುತ್ತಾನೆ (೧೯೮೭, P. ೬). ಅವನು ರಾಷ್ಟ್ರೀಯ ಪರಿಕಲ್ಪನೆಯನ್ನು ವಿವರಿಸುವಾಗ ಅದರ ಚಾರಿತ್ರಿಕ ಪಾತ್ರವನ್ನು ವಿವರಿಸಿಕೊಳ್ಳುತ್ತಾನೆ. ಅನಾಗರಿಕ ಜನರಿಗೆ ಚರಿತ್ರೆಯಿಲ್ಲ. ಅವರು ರಾಜ್ಯವನ್ನು ಕಟ್ಟಲಾರರು ಎಂದು ಆತ ತಿಳಿದುಕೊಂಡಿದ್ದ. ಮತ್ತು ಪರಿಕಲ್ಪನೆಗಳನ್ನು ಹೆಗಲ್ ಭಿನ್ನವಾಗಿ ಕಾಣುತ್ತಾನೆ. ನೇಷನ್ ಕಲ್ಪನೆಯಲ್ಲಿ ಬಂಧುತ್ವ ಮತ್ತು ಭಾಷೆ ಮುಖ್ಯ ಪರಿಭಾಷೆಯಾಗಿದ್ದರೆ ಸ್ಟೇಟ್‌ನ ಕಲ್ಪನೆಯಲ್ಲಿ ನೈತಿಕ ಆದರ್ಶಗಳೇ ಪ್ರಧಾನವಾಗಿರುತ್ತದೆ (೧೯೮೫, m. ೧೦೫). ಇಷ್ಟಿದ್ದರೂ ಲೆನಿನ್‌ನ ಪರಿಭಾಷೆ ಭಿನ್ನವಾದುದು. ರಾಷ್ಟ್ರೀಯ ವ್ಯವಸ್ಥೆಯನ್ನು ಲೆನಿನ್ ಒಂದು ರಾಜಕೀಯ ಪರಿಭಾಷೆಯಾಗಿ ಪರಿಭಾವಿಸುತ್ತಾನೆ. ಲೆನಿನ್ ಸಾಂಸ್ಕೃತಿಕ ಐಕ್ಯತೆಯ ಕುರಿತು ಹೆಚ್ಚು ಚರ್ಚೆಗಳನ್ನು ಎತ್ತುವುದಿಲ್ಲ. ಈ ಎಲ್ಲಾ ಚರ್ಚೆಗಳನ್ನು ಬಹಳ ಸ್ಥೂಲವಾಗಿ ಗ್ರಹಿಸಲಾಗಿದೆ.

ಸಾಮಾಜಿಕ, ಆರ್ಥಿಕ, ತಾಂತ್ರಿಕ ಸಂಚಲನೆಯ ಪರಿಣಾಮವಾಗಿ ಸಾರ್ವಜನಿಕ (Public) ಅನ್ನುವ ಪರಿಕಲ್ಪನೆಯು ಒಡಮೂಡಿ ಬಂತು. ಈ ಸಂದರ್ಭದಲ್ಲಿ ಪಶ್ಚಿಮದ ಮಾದರಿ ಶ್ರೇಷ್ಠವಾದುದು ಎನ್ನುವ ಪರಿಭಾಷೆಯು ಬಂದದ್ದು ಆಧುನಿಕತೆಯ ಜೊತೆ. ದೇಸೀಯ ಪರಿಕಲ್ಪನೆಯನ್ನು ವಿವರಿಸುವಾಗ ಗಾಂಧಿ ಸಾರ್ವಜನಿಕ ಹಿತಾಸಕ್ತಿಯೆನ್ನುವುದನ್ನು ಚಾಲ್ತಿಗೆ ತಂದರೆ, ಆಧುನಿಕತೆಯ ಪರಿವಾಗಿದ್ದ ನೆಹರೂ ದೃಷ್ಟಿಕೋನ ಇದಕ್ಕಿಂತ ಭಿನ್ನವಾದುದು. ಸಾರ್ವಜನಿಕ ಹಿತಾಸಕ್ತಿಯೇ ನೆಹರೂ ಪರಿಭಾಷೆಯಾಗಿತ್ತೆಂಬುದು ಇಲ್ಲಿ ಉಲ್ಲೇಖಾರ್ಹ. ಈ ದೃಷ್ಟಿಯಿಂದ ಗಾಂಧಿಯ ಮಾರ್ಗ ಒಂದಾದರೆ ನೆಹರೂ ಮಾರ್ಗ ಮತ್ತೊಂದು. ಕನ್ನಡದಲ್ಲಿ ನೆಹರೂ ಪ್ರಭಾವಕ್ಕಿಂತ ಗಾಂಧಿ ಪ್ರಭಾವವೇ ಹೆಚ್ಚು. ಅವರಿಬ್ಬರದು ಭಿನ್ನ ರಾಜಕೀಯ ಶೈಲಿಯಾದರೂ ಕನ್ನಡದ ಬರಹಗಾರರ ಆಯ್ಕೆ ಗಾಂಧಿಯ ಪರವಾಗಿತ್ತು. ಹಾಗೆ ನೋಡುವುದಿದ್ದರೆ ಇದು ಗಾಂಧಿ, ನೆಹರೂ ಪ್ರಶ್ನೆಯಲ್ಲ ! ರಾಷ್ಟ್ರೀಯತೆಯ ಆಂದೋಲನದಲ್ಲಿ ಮಹತ್ವದ ಪಾತ್ರ ವಹಿಸಿದ "ಕಾಂಗ್ರೆಸ್‌ನಲ್ಲಿ ಕೆಲವರು ಮದ್ಯಪಾನ ನಿಷೇಧ, ಗೋರಕ್ಷಣೆಯ ಬಗೆಗೂ, ಕೆಲವರು ಉಕ್ಕಿನ ಕಾರ್ಖಾನೆಯ ಬಗ್ಗೆ ಮಾತನಾಡಿದರು. ಇದು ದೊಡ್ಡ ಸಮಸ್ಯೆಯೆಂದು ಕಾಂಗ್ರೆಸ್‌ನವರಿಗೆ ಅನ್ನಿಸಲಿಲ್ಲ"(T.B. Bottomore, 1975, ಪು. 145).

ಕಾದಂಬರಿಗಳಲ್ಲಿ ಸ್ಥಳ ಮತ್ತು ಅವಕಾಶಗಳು ಹಾಗೂ ಕಾಲವು ಬೇರೆ ಬೇರೆ ಥರ ಕೆಲಸವನ್ನು ಮಾಡುತ್ತವೆ. ಅದು ಬರುವುದಕ್ಕೆ ಕಾದಂಬರಿಗಳಲ್ಲಿ ಒಂದು ಆಶಯವೂ

ಇರಬೇಕಾಗುತ್ತದೆ. ಇಲ್ಲವಾದರೆ ಅದರಲ್ಲಿ ಹೆಚ್ಚು ಮಹತ್ವವು ಇಲ್ಲ. ನಾವು ಅದನ್ನು ಗುರುತು ಮಾಡಬೇಕಾಗುತ್ತದೆ. ಯಾವುದೇ ಕಾದಂಬರಿಗಳು ಮತ್ತು ಅದರ ಆಶಯಗಳನ್ನು ಅಥವಾ ಅವುಗಳ ಉದ್ದೇಶವನ್ನು ನೋಡಿದರೆ ನಮಗೆ ಒಂದು ವಿಷಯವನ್ನು ಬೇಗನೆ ತಿಳಿಯುತ್ತದೆ. ಅದು ಒಂದು ಜೀವನದ ಕ್ರಮಕ್ಕೂ ಲೋಕಕ್ಕೂ ಒಂದು ಸಂಬಂಧವನ್ನು ಬೆಸೆಯುತ್ತದೆ. ಅದು ಅತ್ಯಂತ ಮಹತ್ವದ್ದೂ ಹೌದು. ಯಾವಾಗ ನಮ್ಮ ಬರಹಗಳು ಜಗತ್ತಿನ ಜೊತೆಗೆ ಸಂಬಂಧವನ್ನು ಬೆಸೆಯುತ್ತದೆಯೋ ಆಗ ಅದು ಹೆಚ್ಚು ಪ್ರಸ್ತುತ ಎಂದು ಅನಿಸುತ್ತದೆ. ಬರಹ ಎನ್ನುವುದು ಒಂದು ಬಗೆಯ ಸಾಮಾಜಿಕ ಸಂಬಂಧವೂ ಆಗಿರುತ್ತದೆ. ಆದರೆ ಅದು ಉದ್ದೇಶವು ಯಾವುದು ಎಂದು ನಮಗೆ ಗೊತ್ತಿರಬೇಕು. ಹೆಚ್ಚು ವ್ಯಕ್ತಿವಾದಿಯ ಸಾಹಿತ್ಯವು ನಮಗೆ ಹೆಚ್ಚು ದಿಕ್ಕೆಟ್ಟ ದಾರಿಯನ್ನು ಸೂಚಿಸುತ್ತದೆ. ಅದರ ಜೊತೆಗೆ ವ್ಯಕ್ತಿವಾದದ ಸ್ವರೂಪವನ್ನು ಒಳಗೊಂಡ ಸಾಹಿತ್ಯವು ನಮಗೆ ವ್ಯಕ್ತಿಯ ಅಮೂರ್ತವಾದ ವಿಚಾರವನ್ನು ಮಾತ್ರವೇ ಹೇಳುತ್ತವೆ. ಆಗ ನಮಗೆ ಅದು ಅಸ್ಪಷ್ಟವಾಗುವ ಸಾಧ್ಯತೆಯು ಇರುತ್ತದೆ. ಅಡಿಗರ ಅನೇಕ ಪದ್ಯಗಳು ಜನರಿಗೆ ಅರ್ಥವಾಗದೇ ಹೋದುದಕ್ಕೆ ಇದು ಒಂದು ಕಾರಣ. ಒಂದು ಅತ್ಯಂತ ಸಣ್ಣದಾದ ಆಶಯವೂ ಕೂಡಾ ಜಾಗತಿಕವಾದ ಆಶಯದ ಜೊತೆಗೆ ಸೇರುತ್ತದೆ. ನಮ್ಮ ಜೀವನ ಮತ್ತು ಅದರ ಸರಿಯಾದ ಕ್ರಮಗಳು ನಮಗೆ ಒಂದು ಆಯಾಮವನ್ನು ಕೊಡುತ್ತದೆ. ಅತ್ಯಂತ ಖಚಿತವಾದ ಜೀವನ ಮತ್ತು ಅದರ ಕ್ರಮಗಳು ಜಗತ್ತನ್ನು ಅರ್ಥಮಾಡಿಕೊಳ್ಳಲು ಸಹಾಯವನ್ನು ಮಾಡುತ್ತದೆ. ಇದು ತಾತ್ವಿಕವಾದ ಸಂಗತಿಯೂ ಹೌದು. ಆದರೆ ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು ಇದು ಸಾಹಿತ್ಯದಲ್ಲಿ ಮತ್ತು ಜೀವನದಲ್ಲಿ ಎರಡರಲ್ಲಿಯೂ ನಡೆಯುತ್ತದೆ. ಸಣ್ಣ ಆಶಯವು ದೊಡ್ಡ ಆಶಯದ ಜೊತೆಗೆ ಸೇರುವುದೂ ನಿಜ. ಹಾಗೆ ನೋಡಿದರೆ ನಮಗೆ ಜೀವನದಲ್ಲಿ ಇರುವ ಆಶಯವೂ ಕೂಡಾ ನಿರ್ದಿಷ್ಟವಾದ ರೀತಿಯಲ್ಲಿ ಕೆಲಸವನ್ನು ಮಾಡುತ್ತದೆ. ನಾವು ಅನೇಕರು ಆಶಯ ಎನ್ನುವುದನ್ನು ಬರೀ ಸಾಹಿತ್ಯದ ಸಂಗತಿ ಎಂದು ಭಾವಿಸುತ್ತೇವೆ. ನಮಗೆ ನಿಜ ಜೀವನದಲ್ಲಿಯೂ ಆಶಯ ಎನ್ನುವುದು ಬೇಕಾಗುತ್ತದೆ. ಬರಹ ನಮ್ಮ ಜೀವನ ಕ್ರಮ ಮತ್ತು ಅದರ ಸಾಧ್ಯತೆಯನ್ನು ನಿರೂಪಿಸುತ್ತದೆ ಅದು ನಮ್ಮ ವಾಸ್ತವ ಮತ್ತು ಅದು ನಮಗೆ ಅತ್ಯಂತ ಅಗತ್ಯವಾದ ಒಂದು ದಾರಿಯೂ ಹೌದು. ಆದ್ದರಿಂದ ಸಮಯ ಮತ್ತು ಅವಕಾಶ ಎನ್ನುವುದು ಶೂನ್ಯವಾದ ಒಂದು ಪ್ರಕ್ರಿಯೆ ಅಲ್ಲ. ಅದರ ಮೂಲಕ ಅದು ನಮಗೆ ಸಮಾಜ ಮತ್ತು ಅದರ ಒಪ್ಪಂದದ ರೂಪವನ್ನು ಹೇಳುತ್ತದೆ. ಅದರಲ್ಲಿ ಸಂಸ್ಕೃತಿಯ ಪ್ರಶ್ನೆಯೂ ಇದೆ. ಆದ್ದರಿಂದ ಈವತ್ತು ನಾವು ಕಾಲವನ್ನು ಅವಕಾಶವನ್ನು ಬೇರೆ ಥರ ನೋಡುತ್ತೇವೆ. ಕಾಲವನ್ನು ಅವಕಾಶವನ್ನು ನಾವು ಒಂದು ತಾಂತ್ರಿಕವಾದ ಪದ ಎಂದು ಭಾವಿಸಬಾರದು. ಅದೇ ರೀತಿಯಲ್ಲಿ ಅದನ್ನು ನಾವು ಒಂದು ಐತಿಹ್ಯ ಎಂದೂ ತಿಳಿಯಬಾರದು. ಅವಕಾಶ ಮತ್ತು ಕಾಲ ಎನ್ನುವುದನ್ನು ನಾವು ವಿಜ್ಞಾನದಲ್ಲಿ ಒಂದು ಅರ್ಥದಲ್ಲಿ ಹೇಳುತ್ತೇವೆ. ಅದು ನಮಗೆ ವೈಜ್ಞಾನಿಕವಾದ ವಾಸ್ತವವನ್ನು ಹೇಳುತ್ತದೆ. ಅದನ್ನೇ ಕಾದಂಬರಿಗಳು ಬೇರೆ ಥರ ನಿರೂಪಿಸುತ್ತವೆ. ನಮ್ಮ ನಿಜವಾದ ಜೀವನದಲ್ಲಿ ಕೊಕ್ಕರ್ಣೆ ಮತ್ತು ಕುಂದಾಪುರವು ಬೇರೆ ಅರ್ಥವನ್ನು ಕೊಡುತ್ತದೆ. ಕಾದಂಬರಿಯಲ್ಲಿ ಬರುವಾಗ ಕಾರಂತರು ಇನ್ನೊಂದು ಥರ ಹೇಳಿರುವುದೂ ನಿಜ. ಗ್ರೀಕ್ ರೊಮ್ಯಾಂಟಿಕ್ ಕಥನಗಳಲ್ಲಿ

ಕಾಲವನ್ನು ಮತ್ತು ಅವಕಾಶವನ್ನು ಸಾಹಸದ ಅನುಕ್ರಮಣದ ರೀತಿಯಲ್ಲಿ ನಿರೂಪಿಸಿವೆ. ಆದರೆ ಅದರ ಹಿಂದೆಯೂ ಒಂದು ರಾಜಕೀಯವಾದ ನೆಲೆಯು ಇರುತ್ತದೆ. ಗ್ರೀಕಿನ ರೊಮಾಂಟಿಕ್ ಭಾವನೆಯು ಒಂದು ಪ್ರತ್ಯೇಕತೆಯನ್ನು ಹೇಳುತ್ತದೆ. ಗ್ರೀಕಿನ ಮಟ್ಟಿಗೆ ಹೇಳುವುದಿದ್ದರೆ ಅದು ಪ್ರತ್ಯೇಕವಾದ ಸಂಗತಿ. ಅದು ಸಾವಯವ ಸಂಬಂಧವನ್ನು ಹೇಳುತ್ತದೆ. ಆದರೆ ಇಲ್ಲಿ ಇನ್ನೊಂದು ವಿಚಾರವನ್ನು ಹೇಳಬಹುದು. ನಮ್ಮ ಮುಂದೆ ವಾಸ್ತವ ಎನ್ನುವುದು ಸತ್ಯದ ಹಾಗೆ ಕಾಣುತ್ತದೆ. ಯಾವುದು ನಮಗೆ ವಾಸ್ತವ ಎಂದು ಭಾಸವಾಗುತ್ತದೆಯೋ ಅದು ಒಂದು ಸ್ಥಳ ಮತ್ತು ಕಾಲದಲ್ಲಿ ಅತ್ಯಂತ ಅನಿವಾರ್ಯವಾಗುತ್ತದೆ. ಆದರೆ ಈ ಸಂಗತಿಯು ಸ್ಥಳಾಂತರವಾದ ಸನ್ನಿವೇಶದಲ್ಲಿ ನಮಗೆ ಬೇರೆ ಅರ್ಥವನ್ನು ಕೊಡುತ್ತದೆ. ಈವತ್ತು ಗೋವನ್ನು ದೇವರು ಎಂದು ಭಾವಿಸಬಹುದು. ಆದರೆ ಅದೆ ಸತ್ಯವಾಗ ಬೇಕಾಗಿಲ್ಲ. ಜಾನಪದದ ಕಥನಗಳಲ್ಲಿ ಇದನ್ನು ನಾವು ಗಮನಿಸುತ್ತೇವೆ. ಒಂದು ಕತೆಯು ಇನ್ನೊಂದು ಪ್ರದೇಶಕ್ಕೆ ಹೋದರೆ ಅದು ನಿರರ್ಥಕ ಎಂದೂ ಅನಿಸಬಹುದು. ಆಗ ಅದು ಪ್ರತ್ಯೇಕವಾಗುತ್ತದೆ, ಇಲ್ಲವೇ ಅದು ತನ್ನ ಚಹರೆಯನ್ನು ಬದಲಿಸುತ್ತದೆ.. ಆಗ ಅದನ್ನು ನಾವು ಹೀಗೆಯೂ ನೋಡಬೇಕಾಗುತ್ತದೆ. ಅನ್ಯ ಪ್ರದೇಶದಲ್ಲಿ ಅದು ಬೇರೆ ಎಂದು ಅನನ್ಯತೆಯನ್ನು ಸಾಧಿಸುತ್ತದೆ.

ಜಾನಪದ ಕಥನಗಳು ಕ್ತಿಯೆಯು ಬೇರೆ ಥರ ಇರುತ್ತದೆ. ಅದರಲ್ಲಿ ಬರುವ ನಾಯಕನಿಗೆ ಸಾಹಸ ಮತ್ತು ಸ್ವರೂಪವು ಇರುವ ಹಾಗೆಯೇ ಅದರಲ್ಲಿ ಭೂಮಿ ಮತ್ತು ಆಕಾಶ ಹಾಗೂ ಅದರ ಜೊತೆಗೆ ಪಾತಾಳ ಮುಂತಾದ ಜಗತ್ತು ಇರುತ್ತದೆ. ನಾಯಕನಿಗೆ ಸಹಾಯವನ್ನು ಮಾಡಲು ದೇವರು ಇರುತ್ತಾನೆ. ಸ್ಥಳವನ್ನು ವ್ಯಕ್ತಿಯು ಬೇರೆ ಕಡೆಗೆ ಪ್ರಯಾಣ ಮಾಡುತ್ತಾನೆ. ಈ ಪ್ರಯಾಣವನ್ನು ಮಾಡಲು ಅವನಿಗೆ ಬೇರೆ ಬೇರೆ ಸಂಗತಿಗಳು ಸಹಾಯನ್ನು ನೀಡುತ್ತವೆ. ಆದರೆ ಅವನಿಗೆ ಸಾತ್ವಿಕ ಶಕ್ತಿಗಳು ಬೆಂಬಲವನ್ನು ನೀಡುತ್ತವೆ. ಅವನಿಗೆ ಬೆಂಬಲವನ್ನು ನೀಡುವವು ಒಂದು ಚಹರೆಯನ್ನು ಹೊಂದಿದ್ದರೆ ಖಳನಾಯಕನು ಮತ್ತೊಂದು ಬಗೆಯ ಶಕ್ತಿಗಳನ್ನು ಹೊಂದಿರುತ್ತಾನೆ. ಹಾಗೆಂದು ಇವುಗಳನ್ನು ಲೌಕಿಕವಾದ ಅರ್ಥದಲ್ಲಿ ಮಾತ್ರವೇ ಗ್ರಹಿಸುವುದು ಸಾಧ್ಯವಿಲ್ಲ. ಅತಿ ಮಾನುಷ ಎನ್ನುವುದು ಹೇಗೆ ಮನುಷ್ಯರಿಗೆ ಸಹಾಯವನ್ನು ಮಾಡುತ್ತವೆ ಮತ್ತು ಯಾವುದು ಅವನಿಗೆ ತೊಂದರೆ ಕೊಡುತ್ತದೆ ಎಂದು ಜಾನಪದ ಕಥನಗಳು ನಮಗೆ ಹೇಳುತ್ತವೆ. ಈ ಸಂಗತಿಗಳು ನಮಗೆ ಮತ್ತೊಂದು ಕಾರಣಕ್ಕೆ ಅಗತ್ಯವಾಗಿದೆ. ಈ ಸಾಹಸವನ್ನು ನಾವು ಜನಪದರ ದೃಷ್ಟಿಕೋನದಲ್ಲಿ ನೋಡಿದರೆ ಅದರ ಸ್ವರೂಪಕ್ಕೆ ಒಂದು ತರ್ಕವು ಇದೆ . ಅದು ಸಾಹಸ ಮತ್ತು ಖಳತ್ವದ ನಿರ್ನಾಮ. ಯಾವುದು ನಮಗೆ ಕೇಡು ಎಂದು ಅನಿಸುತ್ತದೆಯೋ ಅದನ್ನು ನಾವು ನಿರಾಕರಣೆ ಮಾಡುತ್ತೇವೆ. ಯಾವುದೇ ಖಳ ನಾಯಕನು ಸತ್ಯ, ಧರ್ಮ. ನ್ಯಾಯವನ್ನು ಪಾಲಿಸುವುದಿಲ್ಲ. ಆದರೆ ನಾಯಕನು ಅದನ್ನೇ ಪ್ರತಿಪಾದಿಸುತ್ತಾನೆ. ಇದನ್ನು ಹೇಳುವಾಗ ಭಕ್ತಿನ್ ಒಂದು ವಿಷಯವನ್ನು ನಮ್ಮ ಗಮನಕ್ಕೆ ತರುತ್ತಾನೆ. ನಾವು ಹೇಳುವ ರೊಮಾಂಟಿಕ್ ಕಲ್ಪನೆಯು ಹೇಗೆ ಇದೆ ಎಂದರೆ ಪ್ರತ್ಯೇಕವಾದ ಒಂದು ಅಸ್ತಿತ್ವದ ತರ ಅದು ಭಾಸವಾಗುತ್ತದೆ. ಆದ್ದರಿಂದ ನಾವು ಅನೇಕರು ಅದನ್ನು ಮಾತ್ರವೇ ಸೂಚಿಸುತ್ತೇವೆ. ನಾನು ಮತ್ತು ನನ್ನ ಅಸ್ತಿತ್ವ ಎನ್ನುವುದು ಹೇಗೆ ಇರುತ್ತದೆ ಎನ್ನುವುದನ್ನು ಸಾರ್ತ್ರೆ ಅನೇಕ ಬಾರಿ

ಹೇಳಿದ್ದಾನೆ. ಅವನ ಪ್ರಕಾರ ಅದು ಸಮಗ್ರ ಮತ್ತು ಸ್ವಾಯತ್ತ. ಆದರೆ ನಮಗೆ ಯಾವಾಗ ಇದೆ ಅರಿವು ಬರುತ್ತದೆಯೋ ಆಗ ನಾವು ನಮ್ಮ ಹುಡುಕಾಟವನ್ನು ಶುರು ಮಾಡುತ್ತೇವೆ. ಭಕ್ತಿನ್ ಹೇಳುವುದು ಹೀಗೆ: ಗ್ರೀಕ್ ಪರಂಪರೆಯ ರೊಮಾಂಟಿಕ್ ಜಗತ್ತು ಸಾಹಸ, ಕಾಲ ಮತ್ತು ತನ್ನ ಅಸ್ತಿತ್ವವನ್ನು ನಿಖರವಾಗಿ ಸೂಚಿಸುವುದು. ಕನ್ನಡ ನವೋದಯ ಕವಿತೆಗಳಲ್ಲಿ ಬಂದಿರುವ ಭಾವನಾತ್ಮಕ ಪ್ರತಿಕ್ರಿಯೆಯು ಒಂದು ರೀತಿಯಿಂದ ಆಂತರಿಕ ಪರಿವರ್ತನೆಯನ್ನು ಸೂಚಿಸುತ್ತದೆ. ಪಶ್ಚಿಮದ ರೊಮ್ಯಾಂಟಿಕ್ ಕವಿಗಳಲ್ಲಿ ವಿಶ್ರಾಂತಿ ರಹಿತ ಮಹತ್ವಾಕಾಂಕ್ಷೆಯು ಪ್ರಧಾನವಾಗಿದೆ. ಇದನ್ನು ಗೌರಿ ವಿಶ್ವನಾಥನ್ ಅವರೂ ವಿವರಿಸುತ್ತಾರೆ. ರೊಮ್ಯಾಂಟಿಕ್ ಕವಿಗಳಿಗೆ ಚರಿತ್ರೆಯ ಜೊತೆಗೆ ಅನುಸಂಧಾನ ನಡೆಸಲು ಸಾಧ್ಯವಾಗಲಿಲ್ಲ ಎಂದು ಹೇಳುವ ಟೆರ್ರಿ ಈಗಲ್‌ಟನ್ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತಾರೆ. ರೊಮ್ಯಾಂಟಿಕ್ ಕವಿಗಳು ಕವಿತೆಗಾಗಿ ಆಯ್ಕೆ ಮಾಡಿಕೊಂಡ ವಿಷಯ ವಿಶ್ವಕ್ಕೆ ಸಂಬಂಧಿಸಿವೆ. ಕವಿತೆಗಾಗಿ ಆಯ್ಕೆ ಮಾಡಿಕೊಂಡ ವಸ್ತು ಆಧ್ಯಾತ್ಮಿಕವಾದದ್ದು ಹಾಗೆಯೇ ರೊಮ್ಯಾಂಟಿಕ್ ಕವಿತೆಗಳಲ್ಲಿರುವ ನಿಯಮವೂ ಕೂಡಾ ಈ ಹಿನ್ನೆಲೆಯಲ್ಲಿ ಭಾವನಾಮಯತೆಯನ್ನು ಒಳಗೊಂಡಿರುತ್ತದೆ (Terry Eagleton, ೧೯೮೯, ಪು. ೨೦). ಈ ರೀತಿಯ ಪೂರ್ಣ ಪ್ರತಿಕ್ರಿಯೆಯನ್ನು ಕನ್ನಡ ನವೋದಯದಲ್ಲಿ ಕಾಣುವಂತಿಲ್ಲ. ಕನ್ನಡ ನವೋದಯ ಕವಿಗಳು ಚರಿತ್ರೆಯ ಚಕ್ರದಿಂದ ದೂರ ಉಳಿಯಲಿಲ್ಲ. ಹೀಗಾಗಿ ಕನ್ನಡ ಮಾತೆ, ಭಾರತ ಮಾತೆ ಮೊದಲಾದವು ರಾಷ್ಟ್ರೀಯ ಸಂಸ್ಕೃತಿಯ ಪರಿಕಲ್ಪನೆಯಲ್ಲಿ ಒಡಮೂಡಿದವುಗಳಾಗಿವೆ. ಆದೆ ಅದರ ಜೊತೆಗೆ ವಿಶ್ವಾತ್ಮಕ ಮೌಲ್ಯ ನವೋದಯ ಸಂದರ್ಭದಲ್ಲಿ 'ಆಗು ನೀ ಅನಿಕೇತನ' ಎಂದು ಹೇಳುವಂತೆ ಮಾಡಿದೆ. ರೊಮ್ಯಾಂಟಿಕ್ ಕಾವ್ಯದ ಬಗೆಗೆ ಚರ್ಚೆಯನ್ನೆತುತ್ತಾ 'ರೊಮಾಂಟಿಕ್ ಕಾವ್ಯದ ಮಾದರಿಯು ಕೈಗಾರಿಕಾ ಸಂಸ್ಕೃತಿಯ ನಿರಾಕರಣೆಯಲ್ಲಿದೆ' ಎಂದು ಲುಕಾಕ್ಸ್ ಹೇಳಿರುವ ಅಂಶವು ಇಲ್ಲಿ ಉಲ್ಲೇಖನೀಯ. ಕನ್ನಡದ ಸ್ಥಿತಿಯೂ ವಾಸ್ತವವಾಗಿ ಈ ರೀತಿಯಲ್ಲಿ ಜರುಗಿತು. ಕನ್ನಡ ನವೋದಯ ಕವಿಗಳು ವಸಾಹತುಶಾಹಿ ಸಂಸ್ಕೃತಿ ಆಧುನಿಕ ಸಂಸ್ಕೃತಿಯ ಸ್ಥಿತ್ಯಂತರದಲ್ಲಿ ಭಾವಗೀತೆಯನ್ನು ಆಯ್ಕೆ ಮಾಡಿಕೊಂಡರು. ಭಾವಗೀತೆಯ ಪ್ರಕಾರವು ಒಂದರ್ಥದಲ್ಲಿ ವ್ಯಕ್ತಿ ಸಂಸ್ಕೃತಿಯನ್ನು ಎತ್ತಿಹಿಡಿಯುತ್ತದೆ. ಈ ರೀತಿಯ ಪ್ರಯೋಗಶೀಲತೆಯ ಸಂದರ್ಭದಲ್ಲಿ ಇಂಗ್ಲೀಷ್ ಸಾಹಿತ್ಯದ ಜೊತೆಗಿನ ಸಂಬಂಧವು ನವೋದಯ ಬರಹಗಾರರಿಗೆ ಒಂದು ನೈತಿಕ ತೀರ್ಮಾನದ ಸಂಗತಿ ಆಗಿರಲಿಲ್ಲ. ಹೀಗೆ ನೋಡುವುದಿದ್ದರೆ ವರ್ಡ್ಸ್‌ವರ್ತ್, ಶೆಲ್ಲಿ ಮೊದಲಾದವರು ತಮ್ಮ ಸಾಂಸ್ಕೃತಿಕ ಹಿನ್ನೆಲೆಯಿಂದ ಬರೆದರು. ಕನ್ನಡದ ಬರಹಗಾರರು ಅವರನ್ನು ಮೂಲ ಮಾದರಿಯನ್ನಾಗಿ ಆಯ್ಕೆ ಮಾಡಿಕೊಂಡಾಗ ಸಮಸ್ಯೆ ಅವರಿಗೆ ಎದುರಾಗಲಿಲ್ಲ. ಅದು ಮೂಲತಃ ಇಂಗ್ಲೀಷ್ ಭಾಷೆಯ ಕಲಿಕೆ ಜೊತೆ ಬಂದ ವೈರುಧ್ಯ ಕೂಡಾ ಹೌದು.

ಕೆಲವು ಸಾಹಿತ್ಯ ಪ್ರಕಾರಗಳ ಆಶಯಗಳು ನಮಗೆ ಹೆಚ್ಚು ಮಿತಿಗೊಳಿಸಿದ ಪ್ರಕಾರಗಳಂತೆ ಕಾಣುತ್ತವೆ. ಅವುಗಳು ಹೆಚ್ಚು ನಿಖರವಾಗಿಯೂ ಇರುತ್ತವೆ. ಉದಾಹರಣೆಗೆ ಬೇಂದ್ರೆಯವರ "ನೀ ಹೀಂಗ ನೋಡಬ್ಯಾಡ ನನ್ನ". ಇದು ಕಾದಂಬರಿಯ ನಿರೂಪಣೆಯನ್ನು ಹೊಂದಿಲ್ಲ. ಒಂದು ಮಾತು ಚಾಲ್ತಿಯಲ್ಲಿ ಇದೆ. ಇಡೀ ಜಗತ್ತಿನಲ್ಲಿ ರೊಮಾಂಟಿಕ್ ಎನ್ನಬಹುದಾದ

ಕೃತಿಗಳು ಮತ್ತು ಮಹಾಕಾವ್ಯದಂಥ ಕೃತಿಗಳು ಹೆಚ್ಚು ಜನಪ್ರಿಯವಾದವು. ಅಷ್ಟೇ ಅಲ್ಲ ಅವುಗಳು ನಿರ್ದಿಷ್ಟವಾದ ಕೇಂದ್ರವನ್ನು ಒಳಗೊಂಡಿದ್ದವು. ಪ್ರೇಮ ಮತ್ತು ದುರಂತಗಳು ಅತ್ಯಂತ ಸಾಮಾನ್ಯವಾಗಿ ಮನುಷ್ಯನು ಎದುರಿಸುವ ಸಮಸ್ಯೆಗಳು. ಅದನ್ನು ಕಾವ್ಯಗಳು ಹೇಳುತ್ತವೆ. ಆದರೆ ಒಂದು ಸಂಗತಿಯನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ರಮ್ಯತೆ ಎನ್ನುವುದನ್ನು ನಾವು ಗಮನಿಸಬೇಕಾಗುತ್ತದೆ. ಅದು ಒಂದು ವಿಶಿಷ್ಟವಾದ ಕಲ್ಪನೆಯೂ ಆಗಿರುತ್ತವೆ, ಆದರೆ ಈ ಪ್ರಕಾರಗಳಲ್ಲಿ ಮೂಲ ಜಗ ಎನ್ನುವುದು ಒಂದು ಇರುತ್ತದೆ. ಅದರ ಮೂಲಕವೇ ಸಾಹಸ, ರಮ್ಯ ಎನ್ನುವುದು ಸೃಷ್ಟಿಯಾಗಿತ್ತದೆ. ಯಾವುದೇ ಕೃತಿಗಳು ಪ್ರಯಾಣವನ್ನು ಮಾತ್ರವೇ ಹೇಳುತ್ತವೆಯೋ ಅದರಲ್ಲಿ ಸ್ಥಳ ಎನ್ನುವುದು ಇರುತ್ತದೆ. ನಮ್ಮ ನವೋದಯ ಕಾವ್ಯಗಳು ಸ್ಥಳವನ್ನು ಬಿಟ್ಟು ಇಲ್ಲ. ನಮ್ಮ ಪ್ರಾಚೀನ ಕಾವ್ಯಗಳು ಕೂಡಾ ನಮಗೆ ಆಯಾ ಸ್ಥಳವನ್ನು ಹೇಳುತ್ತವೆ. ಅದು ಅಯೋಧ್ಯೆ ಅಥವಾ ಹಸ್ತಿನಾಪುರ ಇರುತ್ತವೆ. ಈಗ ಇದರ ಮತ್ತೊಂದು ಸಂಗತಿಯನ್ನು ಗಮನಿಸಬೇಕು: ನಮ್ಮ ಅನೇಕ ಕಾದಂಬರಿಗಳು ಪ್ರದೇಶವನ್ನು ಹೊಂದಿರುವುದು ಆಕಸ್ಮಿಕ ಅಲ್ಲ. ಅದು ಉದ್ದೇಶಿತ. ಮನೆಗಳಿಂದ ಕಥನ ಶುರುವಾಗುತ್ತವೆ. ಹೀಗಾಗಿ ಕಥನಗಳು ಜೀವನ ಮತ್ತು ಅದರ ಕ್ರಮಗಳನ್ನು ಹೇಳುವಾಗ ಅದರಲ್ಲಿ ನಾಯಕರು ನಿರ್ದಿಷ್ಟವಾದ ಒಂದು ಮನೋಧರ್ಮವನ್ನು ಹೊಂದಿರುತ್ತಾರೆ. ಹಿಂದೆ ಬಂದ ನಮ್ಮ ಮಹಾಕಾವ್ಯಗಳು ಕೂಡಾ ರಾಜಕಾರಣ ಮತ್ತು ತತ್ವಜ್ಞನವನ್ನು ಒಟ್ಟಿಗೆ ನಿರೂಪಿಸಿಕೊಳ್ಳುತ್ತವೆ. ಅದನ್ನು ನಾವು ಇವತ್ತು ಕಾದಂಬರಿಗಳಲ್ಲಿ ಕಾಣಬಹುದು. ಕನ್ನಡದ ಅನೇಕ ಕಾದಂಬರಿಗಳು ರಾಜಕಾರಣ ಮತ್ತು ತತ್ವಜ್ಞಾನವನ್ನು ಜೊತೆಗೆ ಕೊಂಡೊಯ್ಯುತ್ತವೆ. ಕುವೆಂಪು ಅವರ ಎರಡೂ ಕಾದಂಬರಿಗಳು ಪ್ರಾರಂಭವಾಗುವುದು ಮಲೆನಾಡಿನಲ್ಲಿ. ಅದು ಸ್ಥಳ ರಹಿತವಲ್ಲ. ಆದರೆ ಅವುಗಳ ದೃಷ್ಟಿಕೋನವು ತತ್ವಜ್ಞಾನವನ್ನು ಹೇಳುತ್ತವೆ. ಹಾಗೆಂದು ಅದನ್ನು ನಾವು ಅವಾಸ್ತವ ಎಂದು ಹೇಳಬೇಕಾಗಿಲ್ಲ. ಆ ಕಾದಂಬರಿಗಳಲ್ಲಿ ಒಂದು ನಿಯಮವೂ ಇದೆ.

ಒಬ್ಬ ವ್ಯಕ್ತಿಯು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗುವುದು ಎಂದರೆ ಒಂದು ಜಾಗವನ್ನು ನಾವು ಬಿಡುವುದು ಎಂದು ಅರ್ಥ. ಇದರಲ್ಲಿ ವಾಸ ಮತ್ತು ಜೀವನದ ಕ್ರಮಗಳು ಬೇರೆಯಾಗುತ್ತವೆ. ಅನೇಕ ಕಾವ್ಯಗಳು ನಮಗೆ ಇದನ್ನು ಹೇಳುತ್ತವೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ನಾವು ಹೋದಾಗ ನಮಗೆ ಮೊದಲು ಎದುರಾಗುವುದೇ ಅಲ್ಲಿನ ಸಂಸ್ಕೃತಿ. ಇಂದಿರಾಬಾಯಿ ಕಾದಂಬರಿಯಲ್ಲಿ ಮೊದಲು ಬರುವ ಒಂದು ವಿಚಾರವೆಂದರೆ ಪರದೇಶಕ್ಕೆ ಯಾತ್ರೆ. ಪರದೇಶಕ್ಕೆ ನಾವು ಯಾತ್ರೆಯನ್ನು ಮಾಡಿದರೆ ಅದು ಮೈಲಿಗೆ. ಅದಕ್ಕೆ ಪರಿಹಾರ ಎಂದರೆ ಜಾತಿಯಿಂದ ಹೊರಗೆ ಹಾಕುವುದು. ಜಾತಿಯಿಂದ ಒಬ್ಬ ವ್ಯಕ್ತಿಯನ್ನು ಹೊರಗೆ ಹಾಕುವುದು ಅಂದರೆ ಅದು ಆ ವ್ಯಕ್ತಿಗೆ ಮಾಡುವ ಅವಮಾನವೂ ಹೌದು.

ಗ್ರೀಕ್ ನಾಟಕಗಳು ನಮಗೆ ಮತ್ತೊಂದು ಸಂದೇಶವನ್ನು ಕೊಡುತ್ತದೆ. ಅದರ ಪ್ರಕಾರ ಒಂದು ಪರಿಸರವನ್ನು ಮತ್ತು ನಿಸರ್ಗವನ್ನು ಸೃಷ್ಟಿ ಮಾಡಿದ್ದು ಮನುಷ್ಯ. ದುರಂತ ನಾಟಕಗಳು ನಮಗೆ ಕಾಲ ಮತ್ತು ದೇಶವನ್ನು ಹೇಗೆ ಹೇಳುತ್ತದೆಯೋ ಹಾಗೆಯೇ ಅದು ಕ್ರಿಯೆ ಮತ್ತು ಅದರ ಐಕ್ಯವನ್ನು ಹೇಳಿತ್ತು. ಇದನ್ನು ಅರಿಸ್ಟಾಟಲ್ ನಮ್ಮ ಮುಂದೆ ಇಡುತ್ತಾನೆ. ಈ ಸಂಗತಿಗಳು

ಒಂದು ನಾಟಕದಲ್ಲಿ ಅತ್ಯಂತ ಮುಖ್ಯ ಎಂದು ಅವನು ಭಾವಿಸುತ್ತಾನೆ. ಕ್ರಿಯೆಯ ಐಕ್ಯ, ದೇಶದ ಐಕ್ಯ, ವಸ್ತುವಿನ ಐಕ್ಯ ಹಾಗೂ ಅದರ ಜೊತೆಗೆ ಕಾಲದ ಐಕ್ಯವು ಒಂದು ನಾಟಕದಲ್ಲಿ ಅತ್ಯಂತ ಮುಖ್ಯ. ಇದು ಅಲ್ಲಿನ ನಾಟಕದ ಸಂಹಿತೆಯೂ ಹೌದು.

ಗ್ರೀಕ್ ಪರಂಪರೆಯಲ್ಲಿ ಎರಡು ಅತ್ಯಂತ ಮುಖ್ಯವಾದ ಧಾರೆಗಳು ಇವೆ: ಅದನ್ನು ಹೀಗೆ ಹೇಳಬಹುದು. ಜಾನಪದ ಮತ್ತು ಐತಿಹ್ಯಗಳ ಪ್ರಕಾರಗಳು. ಇನ್ನೊಂದು ನಾಟಕದ ಪ್ರಕಾರ. ನಾಟಕದಲ್ಲಿ ಒಂದು ವಿಶಿಷ್ಟತೆಯನ್ನು ಕಾಣಬಹುದು. ಹಾಗೆ ನೋಡಿದರೆ ನಮಗೆ ಗ್ರೀಕ್ ಮಹಾಕಾವ್ಯಗಳು, ನಾಟಕಗಳು ಮತ್ತು ಜಾನಪದದ ಕಾವ್ಯಗಳು ನಮಗೆ ಇನ್ನೊಂದು ವಿಚಾರವನ್ನು ಹೇಳುತ್ತವೆ. ಅವುಗಳ ಕಾಲದ ಮತ್ತು ದೇಶದ ಪ್ರಶ್ನೆಗಳು ಬೇರೆಯಾಗಿತ್ತು. ಮನುಷ್ಯನು ನಿಸರ್ಗವನ್ನು ನಿರ್ಮಾಣ ಮಾಡಿದ ಎಂದರೆ ಅದರಲ್ಲಿ ನಾಗರಿಕತೆಯು ಸೇರಿದೆ. ಗ್ರೀಕ್ ತನ್ನ ನಾಗರಿಕತೆಯನ್ನು ರೂಪಿಸುವಾಗ ಅದರಲ್ಲಿ ಆ ಕಾಲದ ನಗರಗಳು., ಪ್ರಭುತ್ವವೂ ಸೇರಿಕೊಂಡಿದೆ. ಇದರ ಮೂಲಕವೇ ಅವರು ಐತಿಹ್ಯ ಮತ್ತು ಅದರ ಸ್ವರೂಪವನ್ನು ಕಟ್ಟಿದ್ದು ಈಗ ನಮಗೆ ಒಂದು ಇತಿಹಾಸದ ಹಾಗೆ ಭಾಸವಾಗುತ್ತದೆ. ಅಷ್ಟೇ ಅಲ್ಲ ಆಗ ಕಾಲವನ್ನು ಐತಿಹ್ಯದ ಮೂಲಕ ಕಾಣುವ ಒಂದು ಪ್ರಯತ್ನವೂ ಕಂಡು ಬಂತು. ಕಾಲ ಮತ್ತು ಪುರಾಣ ಹಾಗೂ ಅದರ ತಾತ್ವಿಕತೆಗಳು ನಮಗೆ ಮುಖ್ಯ ಎಂದು ಗ್ರೀಕರು ಭಾವಿಸಿಕೊಂಡಂತೆ ಕಾಣುತ್ತದೆ. ಐತಿಹ್ಯ ಮತ್ತು ಅದರ ಸಂಯೋಜನೆ ಎನ್ನುವುದು ಕಾಲಕ್ಕೂ ಅನ್ವಯವಾಗುತ್ತದೆ. ಐತಿಹ್ಯವನ್ನು ಗ್ರೀಕರು ಕಾಲ ಮತ್ತು ವಸ್ತುವಿಗೆ ಹೇಗೆ ಅನ್ವಯವನ್ನು ಮಾಡಬಹುದು ಅವರು ಭಾವಿಸಿದ್ದರಿಂದ ಅವರ ಕಾವ್ಯ ಮತ್ತು ನಾಟಕಗಳಲ್ಲಿ ಒಂದು ಮಹತ್ವ ಪ್ರಯತ್ನವನ್ನು ನಾವು ಕಾಣುತ್ತೇವೆ.

ಈಡಿಪಸ್ ನಾಟಕವನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಇದು ಅತ್ಯಂತ ಮಹತ್ವದ ಪ್ರಶ್ನೆಗಳನ್ನು ಎತ್ತುತ್ತದೆ. ಲಂಕೇಶ್ ಇದನ್ನು ತುಂಬಾ ಚೆನ್ನಾಗಿ ಅನುವಾದ ಮಾಡಿದ್ದಾರೆ. ಅದರಲ್ಲಿ ಬಾಲ್ಯ, ಯೌವನ, ಮದುವೆ , ಮಾಡಿದ ಕೆಲಸಕ್ಕೆ ಒಂದು ಪ್ರಾಯಶಿತ್ತ ನಡೆಯುತ್ತವೆ. ಅದರಲ್ಲಿ ಬರುವ ವಿಧಿಯೂ ಸಾಮಾನ್ಯವಾದ್ದು ಅಲ್ಲ ಎನ್ನುವುದು ನಮಗೆ ಗೊತ್ತಿರಬೇಕು. ಅದು ವ್ಯಕಿಯ ಜೀವನದಲ್ಲಿ ಆಟವನ್ನು ಆಡುತ್ತದೆ. ಗ್ರೀಕರ ಅಥೆನ್ಸ್ ನಗರವು ಅತ್ಯಂತ ಮುಖ್ಯವಾದ ಒಂದು ನಗರವೂ ಹೌದು.

ಹಾಗೆ ನೋಡಿದರೆ ನಮಗೆ ಅಲ್ಲಿಯ ನಾಟಕಗಳು ಮತ್ತು ಐತಿಹ್ಯಗಳು ವಿವಿಧ ಸೂಚನೆಗಳನ್ನು ನೀಡುತ್ತವೆ. ನಾಟಕಗಳಲ್ಲಿ ಒಂದೇ ಆಶಯವು ಕೆಲಸವನ್ನು ಮಾಡುತ್ತದೆ ಎಂದು ಭಾವಿಸುವುದು ಸರಿಯಾಗಲಾರದು. ರಮ್ಯತೆ, ಸಾಹಸ, ವಲಸೆ ಮುಂತಾದವುಗಳು ಅವುಗಳಲ್ಲಿ ನಮಗೆ ಕಾಣುತ್ತವೆ. ಗ್ರೀಕರ ರೊಮಾನ್ಸ್ ಎನ್ನುವುದು ಆಗ ಹೇಗೆ ಚಾಲ್ತಿಯಲ್ಲಿ ಇತ್ತು ಎನ್ನುವುದು ನಮಗೆ ಇರುವ ಒಂದು ಪ್ರಶ್ನೆಯಾದರೆ ಮತ್ತೊಂದು ಅದರ ಪ್ರಭಾವ ಹೇಗಿತ್ತು ಎಂದೂ ನೋಡಬೇಕಾಗುತ್ತದೆ ಕಥನ ಎನ್ನುವುದು ನಮಗೆ ಅನೇಕ ಅಂಶಗಳು ಸೇರಿರುವ ಸಂಗತಿಗಳೂ ಆಗಬಹುದು. ಹಾಗೆ ನೋಡಿದರೆ ನಮಗೆ ಹಿಂದೆ ಇದ್ದ ಕಾದಂಬರಿಗಳು ಒಂದು ಎಳೆಯನ್ನು ಮಾತ್ರವೇ ಹೊಂದಿರಲಿಲ್ಲ. ಅದರಲ್ಲಿ ಬೇರೆ ಬೇರ ಅಂಶಗಳು ಸೇರಿಕೊಂಡಿವೆ. ಇದನ್ನು ನಾವು ಇಂದಿರಾ ಬಾಯಿ

ಕಾದಂಬರಿಯಲ್ಲಿಯೂ ಕಾಣಬಹುದು. ಅದರಲ್ಲಿ ನಾಟಕದ ಅಂಶಗಳು ಇವೆ. ಮತ್ತೊಂದು ಕಡೆಯಿಂದ ವಿವಿಧ ಸಣ್ಣ ವಿವರಗಳೂ ಇರುತ್ತವೆ. ಭಾಷೆ ಮತ್ತು ಅದರ ವೈವಿಧ್ಯತೆಗಳೂ ಇವೆ. ಇವತ್ತು ನಾವು ಸ್ಥಳ ಮತ್ತು ಕಾಲವನ್ನು ನೋಡುವಾಗ ಅದರ ಜೊತೆಗೆ ಅವಕಾಶ ಎಂದೂ ಹೇಳುತ್ತೇವೆ. ಈ ಅವಕಾಶವನ್ನು ಒಮ್ಮೊಮ್ಮೆ ನಾವು ಅದೃಷ್ಟ ಎಂದೂ ಹೇಳುತ್ತೇವೆ. ಆದರೆ ಈ ಅದೃಷ್ಟ ಎನ್ನುವುದು ಎಲ್ಲರಿಗೆ ಸಿದ್ದಿಸುವ ಕಲೆಯು ಅಲ್ಲವೆಂದು ಹೇಳುತ್ತೇವೆ. ಈಡಿಪಸ್ ನಾಟಕದಲ್ಲಿ ಅವನನ್ನು ವಂಚನೆ ಮಾಡಿದ್ದು ಅಥವಾ ಅವನ್ನು ಅಷ್ಟೊಂದು ಪೀಡಿಸಿದ್ದು ವಿಧಿ. ಆದರೆ ನಮಗೆ ಒಂದು ಸಂಗತಿಯು ಗೊತ್ತು. ಅದು ಜೀವನ ಮತ್ತು ವಿಧಿಗೆ ಸಂಬಂಧಪಟ್ಟದ್ದೂ ಹೌದು. ವ್ಯಕ್ತಿ ಮತ್ತು ಅವನ ಕ್ರಿಯೆಗಳು ಒಮ್ಮೊಮ್ಮೆ ಅವನ ವಿಧಿಯನ್ನು ಹೇಳುತ್ತವೆ. ಆದರೆ ವಿಧಿಯಿಂದ ತಪ್ಪಿಸುವ ಉದ್ದೇಶದಿಂದ ಹೊರಟ ಈಡಿಪಸ್ ಅದರ ಬಲೆಗೆ ಸಿಕ್ಕುತ್ತಾನೆ. ಅದು ಅವನ ಅದೃಷ್ಟ. ಆದರೆ ಈ ಅದೃಷ್ಟವನ್ನು ದುರಾದೃಷ್ಟ ಎಂದು ಹೇಳುತ್ತೇವೆ. ಮನುಷ್ಯ ಮತ್ತು ಅವನ ಅಸ್ತಿತ್ವದ ಮೇಲೆ ಇದು ಹೇಗೆ ಪ್ರಭಾವ ಬೀರುತ್ತದೆ ಎಂದು ಗ್ರೀಕಿನ ಅನೇಕ ನಾಟಕಕಾರರು ಹೇಳುತ್ತಾರೆ. ವಿಧಿಯು ಮನುಷ್ಯರ ಜೀವನದ ಮೇಲೆ ಆಟವನ್ನು ಆಡುತ್ತದೆ. ಅವನು ಆಟವನ್ನು ಆಡುತ್ತಿದ್ದಾನೆ ಎಂದು ಗೊತ್ತಿದ್ದರೂ ಮನುಷ್ಯರು ಅದಕ್ಕೆ ಸಿಕ್ಕಿ ಹಾಕಿಕೊಳ್ಳಲೇ ಬೇಕಾಗುತ್ತದೆ. ಆದ್ದರಿಂದ ಗ್ರೀಕಿನವರು ಅದೃಷ್ಟ ಮತ್ತು ವಿಧಿಯನ್ನು ಹೇಳಿದ್ದಾರೆ. ಹಾಗೆ ನೋಡಿದರೆ ನಮಗೆ ಸಿಕ್ಕುವ ಅವಕಾಶ ಮತ್ತು ವಿಧಿಗೆ ಅಂಥಾ ದೊಡ್ಡ ಸಂಬಂಧವಿಲ್ಲ. ಅದೃಷ್ಟ ಎನ್ನುವುದು ಯಾವಾಗಲೋ ನಮಗೆ ಸಂಭವಿಸುತ್ತದೆ. ವಿಧಿಯು ನಮ್ಮನ್ನು ನಿಯಂತ್ರಣ ಮಾಡಲು ಯತ್ನವನ್ನು ವ್ಯಕ್ತಿ ಮತ್ತು ಅವನ ಅನನ್ಯತೆಯು ಒಂದು ಬಗೆಯಲ್ಲಿ ಇರುತ್ತದೆ. ಅದಕ್ಕೂ ನಾವು ಸ್ವಂತಿಕೆ ಎಂದು ಹೇಳುತ್ತೇವೆ. ಕಾರಂತರೂ ಇದನ್ನು ತಮ್ಮ ಕಾದಂಬರಿಗಳಲ್ಲಿ ಹೇಳಿದ್ದಾರೆ. ಚೋಮನಿಗೆ ಕಲ್ಕುಡನ ಮೇಲೆ ನಂಬಿಕೆಯು ಇದೆ. ಯಾವುದೇ ಕಾದಂಬರಿಗಳಲ್ಲಿ ಇರಲು ಸಾಧ್ಯ.

ಗ್ರಾಮಾಯಣ, ನಿಸರ್ಗದಂಥ ಕಾದಂಬರಿಗಳನ್ನು ಓದಿದರೆ ನಮಗೆ ಉತ್ತರ ಕಾರ್ನಾಟಕದ ಕೆಲವು ಭಾಗಗಳ ನೆನಪು ಹೇಗೆ ಇವೆ ಎಂದು ತಿಳಿಯುತ್ತವೆ. ಅವುಗಳಲ್ಲಿ ಬರುವ ಜೀವನದ ಚಿತ್ರಣಕ್ಕೂ ಕಾರಂತರು ಬರೆಯುವ ಜೀವನದ ಚಿತ್ರಣಕ್ಕೂ ಅಗಾಧವಾದ ಒಂದು ವ್ಯತ್ಯಾಸವು ಇದೆ. ನಾವು ಮತ್ತೊಮ್ಮೆ ಕುವೆಂಪು ಅವರನ್ನು ನೆನಪುಮಾಡಿಕೊಳ್ಳಬೇಕು.ಅವರ ಕಾದಂಬರಿಗಳಲ್ಲಿ ಬರುವ ಹೂವಯ್ಯ, ಮುಕುಂದಯ್ಯ, ಸೀತೆ, ಮೊದಲಾದ ಪಾತ್ರಗಳನ್ನು ನೋಡಿದರೆ ನಮಗೆ ಬೇರೆ ಅನುಭವ ಆಗುತ್ತದೆ. ಅದರ ನಾಯಕರಿಗೆ ಒಂದು ಸ್ವಂತ ಎನ್ನಬಹುದಾದ ಅನನ್ಯತೆಯು ಇದೆ. ಅದರ ಜೊತೆಗೆ ಆ ಪಾತ್ರಗಳು ಇಡೀ ಕಾದಂಬರಿಯನ್ನು ವ್ಯಾಪಿಸುತ್ತವೆ. ಆದರ್ಶ ಮತ್ತು ಸ್ವಂತಿಕೆಯ ಪ್ರಶ್ನೆಯನ್ನು ಕುವೆಂಪು ಎತ್ತಿಕೊಳ್ಳುವ ಕ್ರಮವೂ ಅತ್ಯಂತ ಭಿನ್ನವಾದ್ದು. ಆದರೆ ಈ ಪ್ರಶ್ನೆಗಳನ್ನು ಕುವೆಂಪು ಒಂದು ಚಾರಿತ್ರಿಕವಾದ ಸನ್ನಿವೇಶದಲ್ಲಿ ಕಟ್ಟಿಕೊಡುತ್ತಾರೆ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕು. ಅವರು ಕಾದಂಬರಿಯಲ್ಲಿ ಸ್ವಂತಿಕೆಯ ಹುಡುಕಾಟದಲ್ಲಿ ಇದ್ದಾರೆ ಬಹುತೇಕ ರೊಮಾಂಟಿಕ್ ಕಾದಂಬರಿಗಳಲ್ಲಿ ಅನ್ಯತೆ ಮತ್ತು ಅನನ್ಯತೆ, ಹುಡುಕಾಟ ಮತ್ತು ಪ್ರತ್ಯೇಕತೆ ಎನ್ನುವುದು ಜೊತೆಯಲ್ಲಿ ಹೋಗುತ್ತವೆ. ಇದನ್ನು ನಾವು ಬೇರೆ ಬೇರೆ ಕಾದಂಬರಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ನಡೆಯುತ್ತವೆ.

ಕೆಲವು ಕಾದಂಬರಿಗಳು ನಾಯಕನನ್ನು ವೈಭವೀಕರಿಸುತ್ತೇವೆ. ಅಷ್ಟೇ ಅಲ್ಲ, ಅವುಗಳು ನಾಯಕ ಮತ್ತು ಅವನ ಸಾಹಸದ ಸ್ವರೂಪವನ್ನು ಹೇಳುತ್ತವೆ. ಇದರಲ್ಲಿ ಪಾತ್ರಗಳ ಮಾದರಿಗಳು ಬದಲಾಗಬಹುದು. ಗಳಗನಾಥರಿಂದ ಪ್ರಾರಂಭ ಮಾಡಿ ನಾಗವೇಣಿಯವರ "ಗಾಂಧಿ ಬಂದ " ಕಾದಂಬರಿಗಳ ತನಕ ನಾಯಕರು ಸಾಧನೆಯನ್ನು ಮಾಡುತ್ತಾರೆ. ಅದರ ಜೊತೆಗೆ ನಾಯಕರು ಕೆಲವು ವಿಷಯಗಳಲ್ಲಿ ವಿವಿಧ ರೀತಿಯ ಸಂಗ್ರಾಮವನ್ನು ಮಾಡುತ್ತಾರೆ. ಅದು ಪಾರಲೌಕಿಕ ಆಗಬೇಕೆಂದು ಇಲ್ಲ. ಕಾರಂತರ ಸ್ವಪ್ನದ ಹೊಳೆ, ಚಿಗುರಿದ ಕನಸು ಕಾದಂಬರಿಗಳನ್ನು ನೆನಪು ಮಾಡಿಕೊಳ್ಳಬೇಕು. ಕಷ್ಟ ಎನ್ನುವುದು ಮನುಷ್ಯರನ್ನು ಕಾಡುತ್ತದೆ. ಅದು ಪೀಡಿಸುತ್ತದೆ. ಮನುಷ್ಯ ಅದರಲ್ಲಿ ಗೆದ್ದು ಬಂದರೆ ಅವನು ಸಾಹಸಿ. ಅವನಿಗೆ ಉಳಿದವರಿಗಿಂತ ಹೆಚ್ಚು ಸಮರ್ಥ. ಸಾಹಸವನ್ನು ಕೇಂದ್ರ ಮಾಡಿಕೊಂಡು ಇರುವ ಕಾದಂಬರಿಗಳಲ್ಲಿ ಪ್ರಣಯ ಕೇಂದ್ರಿತವಾದ ಕಾದಂಬರಿಗಿಂತ ಭಿನ್ನವಾದ ಒಂದು ಆಶಯವು ಇರಲು ಸಾದ್ಯ. ಸಾಹಸವನ್ನು ಕೇಂದ್ರ ಮಾಡಿಕೊಂಡು ಅದರ ಜೊತೆಗೆ ನಿಜವಾದ ಒಂದು ಪ್ರೇಮವನ್ನು ಸೂಚಿಸುತ್ತದೆ ಎಂದು ಹೇಳಬಹುದಾದ ಒಮ್ಮೊಮ್ಮೆ ಆದರ್ಶ, ಸಾಹಸ , ನಿರ್ಭೀತಿ, ಮನುಷ್ಯನ ಬುದ್ಧಿವಂತಿಕೆ ಮುಂತಾದ ಅಂಶಗಳನ್ನು ಹೇಳುತ್ತವೆ. ಅವುಗಳಿಗೆ ಒಂದು ಚೌಕಟ್ಟು ಇರುತ್ತದೆ. ಅದರಲ್ಲಿನ ವ್ಯಕ್ತಿಗೂ ರೊಮಾನ್ಸ್ ಕೇಂದ್ರಿತವಾದ ವ್ಯಕ್ತಿಗೂ ವ್ಯತ್ಯಾಸವಿದೆ. ಈ ಮಾದರಿಯ ಕಾದಂಬರಿಗಳು ಮುಖ್ಯವಾಗಿ ಇನ್ನೊಂದು ಬಗೆಯ ಆಶಯವನ್ನು ಹೊಂದಲು ಸಾಧ್ಯ. ನರಸಿಂಹಯ್ಯರ ಕಾದಂಬರಿಗಳಲ್ಲಿ ನಾವು ಕಾಣುವುದು ಸಾಹಸವನ್ನು. ಪುರುಷೋತ್ತಮ ಅವರ ಕಾದಂಬರಿಗಳಲ್ಲಿ ಬರುವ ನಾಯಕ. ಅವನು ಎರಡು ರೀತಿಯಲ್ಲಿ ಕಾಣಿಸಿಕೊಂಡಿದ್ದಾನೆ. ಒಂದು ಅವನು ಪೋಲಿಸರಿಗೆ ಸಹಾಯ ಮಾಡುವುದು. ಎರಡನೆಯದಾಗಿ ಅವನು ಕೆಲವೊಮ್ಮೆ ಸ್ವತಃ ಸಾಹಸವನ್ನು ರೂಪಿಸಿಕೊಳ್ಳುವುದು. ಜೀವನ ಮತ್ತು ಅದರ ಸಾಧ್ಯತೆಗಳಲ್ಲಿ ಇದು ಒಂದು. ಆದರೆ ಪತ್ತೇದಾರಿ ಕಾದಂಬರಿಗಳ ಆಳದಲ್ಲಿ ಒಂದು ವ್ಯವಸ್ಥೆಯ ಪರವಾದ ಒಂದು ನುಡಿಗಟ್ಟು ಇರುವುದು ನಿಜ. ರೊಮಾಂಟಿಕ್ ಸ್ವಭಾವದ ಕಾದಂಬರಿಗಳು ಜೀವನ ಮತ್ತು ಅದರ ಸಾಧ್ಯತೆಯನ್ನು ಒಂದು ಥರ ನಿರೂಪಣೆ ಮಾಡಿದರೆ ಆಗ ಅದರ ಅರ್ಥವು ಬೇರೆಯಾಗುತ್ತದೆ. ಆದರೆ ಸಾಹಸವನ್ನು ಕೇಂದ್ರ ಮಾಡಿಕೊಂಡ ಕಾದಂಬರಿಗಳು ಇನ್ನೊಂದು ಪ್ರಮುಖವಾದ ಅಂಶವನ್ನು ಹೇಳುತ್ತವೆ. ಅದರಲ್ಲಿ ಒಂದು ಬಗೆಯ ಕುತೂಹಲವನ್ನು ಕೆರಳಿಸುವ ಅಂಶಗಳು ಇರುತ್ತವೆ. ಜೀವನ ಎನ್ನುವುದು ಅತ್ಯಂತ ಸುಲಭವಾದ ಒಂದು ಕ್ರಿಯೆ ಅಲ್ಲ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ಇಲ್ಲಿ ತಾತ್ವಿಕವಾದ ಆಶಯಗಳು ಬೇರೆಯಗುತ್ತವೆ. ಆಯ್ಕೆ ಎನ್ನುವುದೇ ಇಲ್ಲಿ ಬೇರೆ. ಕಾರಂತರು ಕಾದಂಬರಿಗೆ ಆಯ್ಕೆ ಮಾಡಿಕೊಂಡ ವಿಚಾರಗಳು ಕಡಲ ಬದಿಯ ಜೀವನವನ್ನು ಹೇಳುತ್ತವೆ.

ತೇಜಸ್ವಿಯವರ ಕಾದಂಬರಿಗಳಲ್ಲಿ ಬರುವುದು ಇನ್ನೊಂದು ಬಗೆಯ ದೃಷ್ಟಿಕೋನ. ಚಿದಂಬರ ರಹಸ್ಯ ಕಾದಂಬರಿಯು ನಮಗೆ ಪ್ರೇಮ ಮತ್ತು ಸಾಹಸವನ್ನು ಹೇಳುತ್ತದೆ. ಗ್ರೀಕಿನ ರೊಮಾಂಟಿಕ್ ಕಲ್ಪನೆಗೆ ಇನ್ನೊಂದು ಆಯಾಮವು ಇದೆ. ಅದನ್ನು ನಾವು ನಮ್ಮ ಚರ್ಚೆಯಲ್ಲಿ ಹೆಚ್ಚು ಬಳಸಿಕೊಂಡ ಹಾಗೆ ಕಾಣುವುದಿಲ್ಲ. ಅವರು ಸಾಹಸವನ್ನು ಒಂದು ಕೇಂದ್ರ ಮಾಡಿಕೊಂಡರು. ಆದರೆ ಇಲ್ಲಿ ನಾವು ಗಮನಿಸಲೇ ಬೇಕು. ಯುರೋಪಿನ ಸಾಹಸ ಕಾದಂಬರಿಗಳು ಬೇರೆ ಮಾದರಿಗಳನ್ನು

ಹೇಳಿವೆ. ಅದರಲ್ಲಿ ಪ್ರಕಾರ ಮತ್ತು ಅದರ ಬಳಕೆಯು ಬೇರೆಯಾಗುತ್ತದೆ. ಅದರಲ್ಲಿಬ ಆಶಯವು ಗ್ರೀಕ್ ರೊಮಾಂಟಿಕ್ ಪರಂಪರೆಯು ಯಾವುದನ್ನು ಹೇಳುತ್ತದೆಯೋ ಅದನ್ನು ಬಿಟ್ಟು ಯರೋಪಿನಲ್ಲಿ ಕಾದಂಬರಿಗಳು ವ್ಯಕ್ತಿತ್ವವನ್ನು ಬೇರೆ ತರ ಪರಿಚಯ ಮಾಡುತ್ತದೆ, ಗ್ರೀಕಿನಲ್ಲಿ ವ್ಯಕ್ತಿಯನ್ನು ಗುರುತಿಸುವುದೇ ಭಿನ್ನವಾದ ಒಂದು ನೆಲೆಯಲ್ಲಿ. ವ್ಯಕ್ತಿ ಮತ್ತು ಅವನ ಅನ್ಯತೆಯನ್ನು ಕುರಿತು ಹೇಳುವಾಗ ಅದು ಪರೀಕ್ಷೆಯ ಮೂಲಕವೇ ವ್ಯಕ್ತಿತ್ವವನ್ನು ಗ್ರಹಿಸಲು ಯತ್ನವನ್ನು ಮಾಡುತ್ತದೆ. ಆದ್ದರಿಂದ ಪರೀಕ್ಷೆ ಎನ್ನುವುದು ಒಂದು ಮಹತ್ವದ ವಿದ್ಯಮಾನವಾಗುತ್ತದೆ. ಆದರೆ ಇದನ್ನು ನಾವು ಯುರೋಪಿನ ಕಾದಂಬರಿಗಳಲ್ಲಿ ನೋಡಲು ಸಾಧ್ಯವಿಲ್ಲ. ಯುರೋಪನ ಕಥನಗಳು ಈ ದೃಷ್ಟಿಯಿಂದ ಬೇರೆಯಗುತ್ತದೆ. ಗ್ರೀಕ್ ಕಾದಂಬರಿಗಳಲ್ಲಿ ಹೋರಾಟ ಮತ್ತು ಪ್ರೇಮವು ಜೊತೆಗೆ ಹೋಗುತ್ತವೆ. ಆದ್ದರಿಂದ ಪ್ರೇಮ ಎನ್ನುವುದು ಒಂದು ವಿಷಯವೂ ಹೌದು. ಅದರ ಜೊತೆಗೆ ಅದು ಒಂದು ಸಾರ್ವಜನಿಕವಾದ ಸಂಗತಿಯು ಆಗುತ್ತದೆ ಎಂದು ಆ ಕಾದಂಬರಿಗಳು ತಿಳಿಸುತ್ತವೆ ಹೀಗೆ ಆಗುವಾಗ ಅದರಲ್ಲಿ (ರೊಮಾನ್ಸ್) ಶೃಂಗಾರವಾಗುತ್ತದೆ. ಅದು ಭಾವನೆಗಳಿಗೆ ಸಂಬಂಧ ಪಟ್ಟದ್ದು ಎನ್ನುವುದನ್ನು ನಾವು ಮರೆಯಬಾರದು. ಆದರೆ ಸಾರ್ವಜನಿಕ ಎನ್ನುವುದು ಸಾಮಾಜಿಕ ಮತ್ತು ರಾಜಕೀಯವಾದ ಅಂಶಗಳನ್ನು ಹೊಂದಿರುತ್ತವೆ. ಮತ್ತೊಂದು ಕಡೆಯಿಂದ ಪ್ರೇಮ ನ್ನುವುದು ಖಾಸಗಿಯೂ ಕೂಡ ಹೌದು. ಈ ಮಾದರಿಯ ಕಾದಂಬರಿಗಳು ಒಂದು ಪರಂಪರೆಯನ್ನು ಹುಟ್ಟು ಹಾಕಿವೆ.

"ಕಾದಂಬರಿ ಒಂದು ಮೇಜರ್ ಸಾಹಿತ್ಯ ಪ್ರಕಾರವಾದರೆ, ಸಣ್ಣಕತೆ ಒಂದು ಮೈನರ್ ಸಾಹಿತ್ಯ ಪ್ರಕಾರ. ಮೂಲಭೂತವಾಗಿಯೇ ಕಾದಂಬರಿಯೂ ಒಳಗೊಳ್ಳುವ ಜೀವನದ ಹರವು. ಗುಣ, ಸಂಕೀರ್ಣತೆ, ವಿವರ, ಸೂಕ್ಷ್ಮಗಳನ್ನು ಸಣ್ಣಕತೆ ಮೈನರ್ ಸಾಹಿತ್ಯದ ಪ್ರಕಾರವಾಗಿ ಒಳಗೊಳ್ಳುವುದು ಸಾಧ್ಯವಿಲ್ಲ. ಕಾದಂಬರಿಗೆ ಇಡೀ ಜೀವನ ಅಥವಾ ಸಮಾಜವೇ ಪರಾಮರ್ಶೆಯ ಚೌಕಟ್ಟಾಗಿದೆ. ಅಲ್ಲಿ ಚಿತ್ರಿತವಾಗುವ ಜೀವನ. ಕಾಲಾವಧಿ. ಸಮಾಜಗಳನ್ನು ಅವುಗಳ ವಿಶಾಲ ಅರ್ಥದಲ್ಲಿ ನೋಡಬಹುದು. ಅಂತೆಯೇ ಕಾದಂಬರಿ ಒಂದು ಜನಾಂಗದ, ಇಲ್ಲವೆ ಒಂದು ಸಮಾಜದ, ಇಲ್ಲವೆ ಒಂದು ಕಾಲಾವಧಿಯ ಕಥೆಯಾಗಬಹುದು. ಅದರಿಂದಾಗಿ ಕಾದಂಬರಿಯ ಲೋಕದರ್ಶನವೂ ವಿಶಾಲವಾಗುತ್ತದೆ. ಮಹತ್ವದ್ದಾಗುತ್ತದೆ. ಆದರೆ ಸಣ್ಣಕತೆಗೆ ಈ ಹರವು ಇಲ್ಲ. ಅದು ಮುಖ್ಯವಾಗಿ ವೈಯಕ್ತಿಕ ಕಲೆ, ಸ್ವಭಾವತಃ ಅದು ರೊಮ್ಯಾಂಟಿಕ್ ಜಾತಿಯದು"[೨]. (ಗಿರಡ್ಡಿ ಗೋವಿಂದರಾಜ, ಸಾತತ್ಯ, ೧೯೯೨, ಪುಟ. ೧೫೫.)

ಕಾದಂಬರಿಯನ್ನು ಒಂದು ವೈಜ್ಞಾನಿಕವಾದ ಕಾದಂಬರಿಯಲ್ಲಿ ನೋಡಬಹುದು ಎನ್ನುವುದನ್ನು ಮಾರ್ಕ್ಸವಾದವು ಹೇಳಿತು. ಮತ್ತು ಅದುವೇ ನಮಗೆ ಹೊಸದಾದ ಗ್ರಹಿಕೆಯನ್ನು ಕೊಟ್ಟಿತು. ರೂಪನಿಷ್ಠರ ಪರಿಕರವನ್ನು ಬಳಸಿಕೊಂಡು ಹೇಗೆ ಕಾದಂಬರಿಯನ್ನು ಗ್ರಹಿಸಬಹುದು ಎನ್ನುವುದನ್ನೂ ಲುಕಾಕ್ಸ್ ಹೇಳಿದ. ಆದರೆ ರೂಪದ ಪ್ರಶ್ನೆಗಿಂತ ಅದರ ತಾತ್ವಿಕವಾದ ಪ್ರಶ್ನೆಯೇ ಬಹಳ ಮುಖ್ಯವೆಂದು ಬ್ರೆಕ್ಟ್‌ನ ಪ್ರತಿಪಾದನೆ. ಬ್ರೆಕ್ಟ್‌ನ ವಾಸ್ತವತೆ ಮತ್ತು ಅದರ ಪರಿಣಾಮಕಾರಿಯಾದ ನಿರೂಪಣೆಯನ್ನು ಒಳಗೊಂಡಿತ್ತು. ಮತ್ತು ಅದನ್ನು ಅವನು ಹೇಳುವಾಗ ಹೇಗೆ ಹೇಳಬೇಕಾಗುತ್ತದೆ ಎಂದೂ ಪ್ರತಿಪಾದಿಸಿದ್ದ. ಅವನಲ್ಲಿ ವಾಸ್ತವತೆಯು ಈ ದೃಷ್ಟಿಯಿಂದ ಬೇರೆಯಾಗಿದೆ. ಅವನು

ಸಾಮಾನ್ಯರು ಹೇಗೆ ರಂಗಕ್ಕೆ ಬರಬೇಕು ಮತ್ತು ಅದರಿಂದ ನೋಡುವವರ ಮೇಲೆ ಏನು ಪರಿಣಾಮವು ಆಗಲು ಸಾಧ್ಯ ಎನ್ನುವುದನ್ನೇ ಚರ್ಚಿಸಿದ್ದ. ವಸ್ತು ಮತ್ತು ಅದರ ರೂಪದ ವಿಶ್ಲೇಷಣೆಗೆ ಲುಕಾಕ್ಸ್ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾನೆ. ಅವನ ಪ್ರಕಾರ ವಸ್ತು ಮತ್ತು ಅದರ ನಿರೂಪಣೆಯು ವಾಸ್ತವವಾದದಲ್ಲಿ ಬೇರೆಯಾಗುತ್ತದೆ. ಇಲ್ಲಿ ಮತ್ತೆ ಆಧುನಿಕತಾವಾದದ ಮತ್ತೊಂದು ನಿಲುವನ್ನು ನೋಡಬೇಕಾಗುತ್ತದೆ. ಆಧುನಿಕತವಾದವು ಸಾಮಾನ್ಯರು ಮತ್ತು ಅವರ ತಲ್ಲಣಗಳನ್ನು ಹೇಳುವುದೇ ಇಲ್ಲ. ಅದರಲ್ಲಿ ಒತ್ತಡಕ್ಕೆ ಒಳಗಾದ ಜನರ ಚಿತ್ರಣವೂ ಇಲ್ಲವಾಗಿದೆ. ಅದು ಚರಿತ್ರೆಯನ್ನು ನಿರಾಕರಿಸುತ್ತದೆ. ಸಮಾಜ ಮತ್ತು ರಾಜಕಾರಣವು ಅದರಲ್ಲಿ ಬರುವುದೇ ಇಲ್ಲ. ಸಮಾಜ ಮತ್ತು ರಾಜಕಾರಣವನ್ನು ಅದು ನಿರಾಕರಿಸುತ್ತದೆ. ವ್ಯಕ್ತಿಯ ಅನುಭವಕ್ಕೆ ಕೊಡಬೇಕಾದ ಪ್ರಾಶಸ್ತ್ಯವನ್ನು ಅದು ಒಂದು ಪ್ರಮಾಣವೆಂದು ಭಾವಿಸುತ್ತದೆ. ಲುಕಾಕ್ಸನಲ್ಲಿ ಕಲೆ ಅದರ ತಾತ್ವಿಕತೆ, ಮತ್ತು ಅದರ ಹಿಂದೆ ಇರುವ ರಾಜಕಾರಣವು ಬಹಳ ಮುಖ್ಯವಾಗುತ್ತದೆ. ರಾಜಕಾರಣ ಮತ್ತು ಅದರ ಅನನ್ಯತೆಯು ಅದಕ್ಕೆ ಮುಖ್ಯವೆಂದು ಅವನ ಅಭಿಪ್ರಾಯವೂ ಆಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಮಾರ್ಕ್ಸವಾದಿ ವಿಮರ್ಶೆಯಲ್ಲಿ ಚರಿತ್ರೆ ಮತ್ತು ವರ್ಗದ ಪ್ರಜ್ಞೆ ಎರಡೂ ಬಹಳ ಮುಖ್ಯವಾಗಿದೆ. ಮತ್ತು ಅದರ ಯಾವುದೇ ಪ್ರಕಾರಕ್ಕೆ ಸೀಮಿತವಾದ ಒಂದು ವಿಮರ್ಶೆಯ ಪದ್ಧತಿಯು ಅಲ್ಲ. ಅದು ರೂಪವನ್ನು ನೋಡುವುದೂ ಕೂಡಾ ಸಾಮಾಜಿಕ ಹಿನ್ನೆಲೆಯಲ್ಲಿ. ಸಮಾಜವು ಮಾತ್ರವೇ ಅದಕ್ಕೆ ಅತ್ಯಂತ ಮುಖ್ಯವಾದ ಸಂಗತಿಯೂ ಹೌದು. ಸಾಮಾಜಿಕ ಜೀವನ ಮತ್ತು ಅದರ ಸಾಧ್ಯತೆಯೇ ಬಹಳ ಮುಖ್ಯವಾಗುತ್ತದೆ. ಸಾಹಿತ್ಯದ ರೂಪವನ್ನು ನೋಡುವುದರಿಂದ ಅದು ಗೈರು ಹಾಜರಿಯಾಗುವ ಸಾಧ್ಯತೆಯು ಇದೆ ಎನ್ನುವುದು ಇಲ್ಲಿ ಉಲ್ಲೇಖನೀಯ. ಆದರೆ ಯಾವುದೇ ವಾಸ್ತವವಾದಿ ಕಲೆಯನ್ನು ನೋಡಿದರೆ ಅದರಲ್ಲಿ ಪ್ರಾತಿನಿಧಿಕತೆಯು ಭಿನ್ನವಾಗುತ್ತದೆ. ಅದನ್ನು ನೋಡುವಾಗ ಅದರ ರೂಪವನ್ನು ಮಾತ್ರವೇ ನಾವು ಗಮನಿಸಬೇಕಾದ ಯಾವ ಅಗತ್ಯವೂ ಇಲ್ಲ. ಅದರ ಬದಲು ಅದು ತಳೆಯುವ ಸಾಮಾಜಿಕ ನಿಲುವನ್ನು ನೋಡಬೇಕಾಗುತ್ತದೆ. ಅಂದರೆ ಅದರಲ್ಲಿ ಭಿನ್ನತೆಯು ಇದೆ.

ಮಾರ್ಕ್ಸವಾದವು ಸಮಾಜ ಮತ್ತು ಸೂಚಕ ಹಾಗೂ ಸೂಚಿತರ ನಡುವಣ ಸಂಬಂಧವನ್ನು ನೋಡುವ ಕ್ರಮಗಳು ಬೇರೆ. ಸಾಹಿತ್ಯದ ಕೃತಿಯನ್ನು ಅದು ಅಸಹಜವೆಂದು ಹೇಳುವುದೂ ಇಲ್ಲ. ಅನುಭವ ಮತ್ತು ಸಮಾಜದ ನಡುವೆ ಕೆಲವು ಹೊಂದಾಣಿಕೆಗಳು ಇವೆ. ಅದನ್ನು ನೋಡಬೇಕೆಂದು ಮಾರ್ಕ್ಸವಾದವು ಹೇಳುತ್ತದೆ. ವಾಸ್ತವವಾದ ಮತ್ತು ಅದರ ನಿರೂಪಣೆಯನ್ನು ನಾವು ಈ ದೃಷ್ಟಿಯಿಂದ ಬಹಳ ಗಂಭೀರವಾದದ್ದು ಎಂದು ಭಾವಿಸಿದರೂ ಅದರ ರೂಪವು ಚರ್ಚೆಗೆ ಅರ್ಹವಾದದ್ದು ಎಂದು ಲುಕಾಕ್ಸ್ ಭಾವಿಸುತ್ತಾನೆ. ಅದನ್ನು ಅತ್ಯಂತ ಕುತೂಹಲಕಾರಿಯಾದದ್ದು ಎಂದು ಹೇಳುತ್ತಾನೆ. ಅದು ಸಂಕೀರ್ಣವಾಗಿದೆ ಎಂದು ಅವನ ಅಭಿಪ್ರಾಯವಾಗಿದೆ. ಮತ್ತು ಅದನ್ನು ನೋಡುವುದೂ ಎಂದರೆ ಸಮಾಜದ ಒಂದು ಕಾಲದ ಸ್ಥಿತಿಯನ್ನು ನೋಡುವುದೂ ಹೌದು. ಅದನ್ನು ಹೀಗೆಯೂ ಹೇಳಬಹುದು : ವಾಸ್ತವವಾದವು ನಿಜವನ್ನು ತನ್ನದೇ ಆದ ರೀತಿಯಲ್ಲಿ ನೋಡುತ್ತದೆ. ಮತ್ತು ಅದಕ್ಕೆ ಪ್ರತಿಕ್ರಿಯಿಸುತ್ತದೆ. ಅದನ್ನು ನಾವು ನೋಡಬೇಕಾಗುತ್ತದೆ ಎಂದು ಅವನ ವಾದವಾಗಿದೆ. ಆದರೆ ಬ್ರೆಕ್ಟ್‌ನಲ್ಲಿ ವಿಜ್ಞಾನಪರವಾದ

ನಿಲುವು ಹೆಚ್ಚು ಕೆಲಸವನ್ನು ಮಾಡುತ್ತದೆ. ಅದರಲ್ಲಿ ಶಾಸ್ತ್ರೀಯತೆಯು ಇದೆ ಎಂದು ಅವನ ಭಾವನೆಯು ಆಗಿದೆ. ಆದರೆ ವಾಸ್ತವತೆಯು ಮೂಲಭೂತವಾಗಿ ಜಗತ್ತನ್ನು ಪ್ರತಿನಿಧಿಸುತ್ತದೆ. ಮತ್ತು ಅದರ ಮೂಲಕವೇ ಅನೇಕವನ್ನು ಅದು ಸಾಧಿಸುತ್ತದೆ. ವಾಸ್ತವವಾಗಿ ಅದೂ ಒಂದು ಬಗೆಯ ಉತ್ಪಾದನೆಯೂ ಆಗಿದೆ. ಅದನ್ನು ನಾವು ಬರೀ ಒಂದು ರೂಪವೆಂದು ಕಾಣಬಾರದು. ಮತ್ತು ಅದರಲ್ಲಿ ಬರೀ ಕಲಾತ್ಮಕತೆಯು ಮಾತ್ರವೇ ಭಾವಿಸಬಾರದು ಎನ್ನುವುದು ಬ್ರೆಕ್ಟನ ನಿಲುವು. ಅವನಲ್ಲಿ ಅದು ಒಂದೂ ಪ್ರಯೋಗವಾಗಿದೆ. ಬ್ರೆಕ್ಟ್ ಹೇಳುವ ಸಂಗತಿಗಳನ್ನು ನಾವು ಗ್ರಹಿಸಬೇಕು. ಅವನು ಹೇಳುವುದು ವೈಜ್ಞಾನಿಕವಾದ ನಿಲುವುಗಳು ಕಲೆಯ ಚರ್ಚೆಯಲ್ಲಿ ಅತ್ಯಂತ ಅಗತ್ಯ. ಅದು ಜ್ಞಾನವನ್ನು ಸೂಚಿಸುತ್ತದೆ. ಮತ್ತು ಅದರ ಅಗತ್ಯವು ಬಹಳವಿದೆ. ಅದು ಭಾವುಕವಾದ ಒಂದು ನಿಲುವು ಅಲ್ಲವೆನ್ನುವುದು ಅವನ ವಾದವಾಗಿದೆ. ಅದರಲ್ಲಿ ಶಾಸ್ತ್ರೀಯತೆಯ ಅಂಶವೂ ಇದೆ ಎನ್ನುವುದು ಅವನ ವಾದ. ವಾಸ್ತವವಾದ ಎನ್ನುವುದು ಈ ದೃಷ್ಟಿಯಿಂದ ಸರಿಯಾದ ಒಂದು ಪ್ರಕ್ರಿಯೆ ಎಂದೂ ಭಾವಿಸಬೇಕಾಗುತ್ತದೆ.

ಆದರೆ ಭೂಮಿಯನ್ನು ಕಾರಂತರು ನೋಡುವ ಕ್ರಮವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು ಎಂದು ತಿಳಿಯಬೇಕಾಗಿದೆ. ರಾಷ್ಟ್ರ ಮತ್ತು ಭೂಮಿಯು ಎರಡೂ ಹೇಗೆ ಮಹತ್ವದ ಪ್ರಶ್ನೆಗಳು ಆದವು ಎನ್ನುವುದನ್ನು ಇಲ್ಲಿ ನೋಡಬೇಕಾಗಿದೆ. ಆದರೆ ಈ ಪ್ರಶ್ನೆಗಳು ಕುವೆಂಪು ಅವರಲ್ಲಿ ಬರುವುದಿಲ್ಲವೆನ್ನುವುದೂ ಇಲ್ಲಿ ಮುಖ್ಯವಾಗಿದೆ. ಕುವೆಂಪು ತನ್ನ ಎರಡೂ ಕಾದಂಬರಿಗಳಲ್ಲಿ ರಾಷ್ಟ್ರ ಮತ್ತು ಅದರ ಪರಿಣಾಮ ಹಾಗೂ ಜಾತಿಯನ್ನು ತರುತ್ತಾರೆ. ಆದರೆ ಭೂಮಿ ಮತ್ತು ಅದರ ಹಂಚಿಕೆಯನ್ನು ತರುವುದೇ ಇಲ್ಲ. ರಾಷ್ಟ್ರ ಮತ್ತು ಅದರ ಪ್ರಶ್ನೆಗಳನ್ನು ಆಧುನಿಕ ನೆಲೆಗಳು ಗ್ರಹಿಸಿದ ಕ್ರಮವು ಬೇರೆಯಾಗಿದೆ. ರಾಷ್ಟ್ರ ಮತ್ತು ಸಂಸ್ಕೃತಿಯನ್ನು ಆಧುನಿಕ ಜಗತ್ತು ನೋಡಿದ ಮತ್ತು ಗ್ರಹಿಸಿದ ನೆಲೆಗಳು ಭಿನ್ನವೂ ಆಗಿದೆ. ಅದು ಪುರಾಣವನ್ನು ಬೇರೆ ರೀತಿಯಲ್ಲಿ ಅನ್ವಯವನ್ನು ಮಾಡಿದೆ. ಮತ್ತು ಅದರಲ್ಲಿ ಸಂಸ್ಕೃತಿ ಮತ್ತು ಅದರ ಸ್ವರೂಪವೂ ಬೇರೆಯಾಗಿದೆ. ವ್ಯಕ್ತಿ ಮತ್ತು ಅವನ ಘನತೆಯನ್ನು ಭಿನ್ನವಾಗಿ ನೋಡುವುದು ಶುರುವಾದ್ದು ಮಾತ್ರ ವಸಾಹತು ಕಾಲದಲ್ಲಿ. ವಾಸ್ತವವಾಗಿ ಈ ಪ್ರಶ್ನೆಗಳು ನಮಗೆ ಬೇರೆ ರೀತಿಯನ್ನು ಹೇಳುತ್ತವೆ. ವಸಾಹತು ಕಾಲದ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಶ್ನೆಗಳು ಬರೀ ಲಿಖಿತ ಪಠ್ಯವನ್ನು ಆಧರಿಸಿಕೊಂಡು ಮಾತ್ರವೇ ನಡೆದಿಲ್ಲ. ಅದು ಹೊಸದಾದ ಎಚ್ಚರವನ್ನು ಸೂಚಿಸಿದೆ. ಒಂದು ವಾಸ್ತವವು ಮತ್ತೊಂದು ವಾಸ್ತವವಾಗಿಲ್ಲ ಎನ್ನುವುದನ್ನು ಅದು ಹೇಳಿತು. ಕಾರಂತರ ಕಾದಂಬರಿಗಳ ವಾಸ್ತವವಾದವು ಕುವೆಂಪು ಕಾದಂಬರಿಗಳ ವಾಸ್ತವ ಆಗಿಲ್ಲ. ಅದರಲ್ಲಿ ವ್ಯತ್ಯಾಸವೂ ಇದೆ. ಆಗ ಎಲ್ಲರೂ ಒಂದು ರೀತಿಯಿಂದ ಬೇರೆ ಬೇರೆ ಮಾದರಿಗಳನ್ನು ನೋಡಿದರು ಮತ್ತು ಅದನ್ನು ಬರಹದ ಮೂಲಕವೇ ಗ್ರಹಿಸಿದರು. ಅದರಲ್ಲಿ ಮಲೆನಾಡು ಮತ್ತು ಅದರ ವಾಸ್ತವವು ಒಂದು ಬಗೆಯಾಗಿದ್ದರೆ ಕರಾವಳಿ ಮತ್ತು ಅದರ ವಾಸ್ತವವು ಬೇರೆಯಾಗಿದೆ. ಕಾರಂತರ ಕಾದಂಬರಿಗಳ ವಾಸ್ತವವು ಒಂದು ಬಗೆಯದು. ಕುವೆಂಪು ಆದರ್ಶ ಮತ್ತು ಅದರ ಹುಡುಕಾಟವನ್ನು ಮಾಡುತ್ತಾರೆ. ಈ ದೃಷ್ಟಿಕೋನವೇ ಅತ್ಯಂತ ಭಿನ್ನವಾಗುತ್ತದೆ. ಅದರಲ್ಲಿ ಬರುವ ಪಶ್ಚಿಮ ಮತ್ತು ಪೂರ್ವದ ಪ್ರಶ್ನೆಗಳು ಅತ್ಯಂತ ಸಂಕೀರ್ಣವೂ ಆಗುತ್ತದೆ. ಯಾವುದು ಹೆಚ್ಚು ಸಾಂಪ್ರದಾಯಿಕ

ಮತ್ತು ಯಾವುದು ಹೆಚ್ಚು ಆಧುನಿಕ ಎನ್ನುವುದೂ ಮೂಲಭೂತವಾದ ಪ್ರಶ್ನೆಗಳು ಆಗಿವೆ. ಮುಳಿಯರು ಇದನ್ನು ಮಾರ್ಗ ಮತ್ತು ದೇಸಿಯಲ್ಲಿ ಹುಡುಕುತ್ತಾರೆ

ನವೋದಯದ ಕಾಲದಲ್ಲಿ ಬಂದ ಅತ್ಯಂತ ಮಹತ್ವದ ಪ್ರಶ್ನೆಗಳಲ್ಲಿ ಮುಖ್ಯವಾದ್ದು ಇದು. ದೇಹ ಮತ್ತು ಅದರ ಹಿಂಸೆಯು ಯಾವ ಬಗೆಯದು ಮತ್ತು ಆಗಿನ ಪೋಲೀಸರು ಯಾವ ರೀತಿಯ ಕ್ರೌರ್ಯವನ್ನು ಹೊಂದಿದ್ದರು ಎನ್ನುವುದನ್ನು ಕಾರಂತರು ಕಾದಂಬರಿಗಳಲ್ಲಿ ವಿವರಿಸಿದ್ದಾರೆ. ಅವರಿಗೆ ಅದು ಮುಖ್ಯವಾಗಿತ್ತು. ನಾಗವೇಣಿ ಕೂಡಾ ಅದನ್ನು ವಿವರಿಸಿದ್ದಾರೆ. ದೇಹ ಮತ್ತು ಅದರ ಹಿಂಸೆಗೆ ಒಂದು ಆಯಾಮವು ಇದ್ದರೆ ಮನಸ್ಸು ಮತ್ತು ಅದರ ಹಿಂಸೆಗೆ ಬೇರೆ ಆಯಾಮವೂ ಇದೆ. ಅದನ್ನು ನಮಗೆ ಬೇರೆ ನಿರೂಪಣೆಗಳು ಹೇಳಿವೆ. ಸತಿ ಹೋಗುವಂತೆ ಮಾಡುವುದೂ ಒಂದು ಹಿಂಸೆಯೇ. ಮನಸ್ಸು ಮತ್ತು ಅದರ ಹಿಂಸೆಗೆ ಇರುವ ಇನ್ನೊಂದು ಆಯಾಮವು ನಮಗೆ ತಿರುಮಲಾಂಬರಲ್ಲಿ ಸಿಗುತ್ತದೆ. ವಿಧವೆಯು ದೇಹ ಮತ್ತು ಮನಸ್ಸುಗಳ ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಅದರಲ್ಲಿ ಬೇರೆ ವಿಚಾರಗಳೂ ಇರುತ್ತವೆ. ಆದರೆ ಇಲ್ಲಿ ಅವರು ಹೇಳುವ ವಿವರಗಳನ್ನು ಹಾದಿ ತಪ್ಪಿ ಚರ್ಚಿಸಿದರೆ ಅದರ ಅರ್ಥವೂ ಬೇರೆಯಾಗುತ್ತದೆ. ಬರಹ ಮತ್ತು ಅದರ ಸ್ವರೂಪವನ್ನು ನಮಗೆ ಒಂದು ದಿಕ್ಕಿನಲ್ಲಿ ಕರೆದುಕೊಂಡು ಹೋಗಲು ಅವಕಾಶವನ್ನು ಕಲ್ಪಿಸಿದ್ದು ಕೂಡಾ ಗಮನಾರ್ಹವಾಗಿದೆ. ಅದರ ಸಾಧ್ಯತೆಗಳು ನಮಗೆ ಬೇರೆಯಾದವು. ಬರಹವು ಬೇರೆಯಾಯಿತು ಮತ್ತು ಮಾತುಗಳ ಅಧಿಕೃತತೆಯು ಬರಹಕ್ಕೆ ಇಳಿಯಿತು. ಮಾತು ಮತ್ತು ಬರಹವನ್ನು ನೋಡಿದರೆ ಇದರ ವ್ಯಾಪ್ತಿಯು ನಮಗೆ ಅರ್ಥವಾಗುತ್ತದೆ. ಕಾರಂತರ ಕಾದಂಬರಿಗಳಲ್ಲಿ ಬರುವ ಅನೇಕ ಪಾತ್ರಗಳು ನಿಜ ಜೀವನದಲ್ಲಿ ಮಾತಾಡುವುದು ತುಳು ಮತ್ತು ಕುಂದಾಪುರ ಕನ್ನಡದಲ್ಲಿ. ಅದನ್ನು ಕಾರಂತರು ಬದಲಿಸಿದರು ಮತ್ತು ಅವರ ಮಾತುಗಳಿಗೆ ಗದ್ಯವನ್ನು ಕೊಟ್ಟರು. ಕಾರಂತರು ಮತ್ತು ಅವರ ಆಯ್ಕೆಗಳು ಒಂದು ರೀತಿಯಿಂದ ಭಿನ್ನವಾಯಿತು. ಕಾರಂತರು ಕಾದಂಬರಿಯನ್ನು ಬರೆದದ್ದು ಇಂಗ್ಲಿಷಿನ ಲಾರ್ಡ್ ಮೆಕಾಲೆಗೆ ಅಲ್ಲ. ಕನ್ನಡವು ಅವರ ಆಯ್ಕೆ. ಕನ್ನಡದ ಓದುಗರಿಗೆ ಅವರು ಕಾದಂಬರಿಯನ್ನು ಬರೆದರು. ಅದರ ಅರ್ಥವೂ ಹೆಚ್ಚು ಸ್ಪಷ್ಟವಾಗಿದೆ. ಒಂದು ನಿರ್ದಿಷ್ಟವಾದ ಭಾಷೆಯನ್ನು ಆಯ್ಕೆ ಮಾಡುವುದು ಎಂದರೆ ಅದೂ ಒಂದು ತಾತ್ವಿಕತೆಯು ಆಗುತ್ತದೆ. ಮಾತೃಭಾಷೆಯಲ್ಲಿ ಬರೆಯುವುದು ಅಂದರೆ ಅದು ನಿರ್ದಿಷ್ಟವಾದ ಜನಸಮೂಹದೊಂದಿಗೆ ಮಾತಾಡುವುದು ಎಂದೇ ಆಗುತ್ತದೆ. ಕಾರಂತರು ಹೇಳಿದ್ದು ಕನ್ನಡದ ಕಥನವನ್ನು ಕೂಡಾ ಹೌದು. ಅದು ಬದಲಾಗಲು ಶುರುವಾಗಿತ್ತು. ಚೋಮನನ್ನು ಮಾತಾಡಿಸಿದ್ದು ಮತ್ತು ಅವನ ಮನೋಭಾವವನ್ನು ತಿಳಿಸಿದ್ದು ಕಾರಂತರೇ. ಕಾರಂತರ ಮೂಲಕವೇ ಚೋಮ, ಸೂರ, ಬೆಳ್ಳಿಯಂಥವರು ಮಾತಾಡುತ್ತಾರೆ. ಕನ್ನಡದ ಆಲೋಚನೆಯನ್ನು ಹೀಗೆ ಕಾರಂತರು ಹೇಳುತ್ತಾರೆ. ರಾಷ್ಟ್ರ ಮತ್ತು ಅದರ ಚರ್ಚೆಯಲ್ಲಿ ವಾಸ್ತವವಾಗಿ ಈ ಮಾದರಿಯ ಜನರು ಇದ್ದಿಲ್ಲ. ಅವರಿಗೆ ಅದು ಗೊತ್ತಿರಲಿಲ್ಲ. ಕಾರಂತರು ಕುಡಿಯರನ್ನು, ಮಾರಿಹೊಲೆಯರನ್ನು ಕಾದಂಬರಿಯಲ್ಲಿ ನಾಯಕರನ್ನಾಗಿ ಮಾಡಿದ್ದೇ ಒಂದು ಕನ್ನಡದ ಕೌತುಕ. ಇಂಥದನ್ನು ಕನ್ನಡದಲ್ಲಿ ಒಂದು ಕಾದಂಬರಿಯು ದಾಖಲಿಸಿದೆ. ನಮಗೆ ಅನೇಕ ಕಲ್ಪನೆಗಳು ಮತ್ತು ಹೊಸ ರೀತಿಯ ರೂಪಕಗಳು ಬಂದದ್ದು ಆಧುನಿಕ ಕಾಲದಲ್ಲಿ. ಅದನ್ನು ನಾವು ನಿರೂಪಿಸುವಾಗ ನಮಗೆ ಹೊಸ ಅನುಭವದ ದೃಷ್ಟಿಕೋನವೂ ಇತ್ತು.

ಕಾರಂತರೂ ಅದೇ ರೀತಿಯಲ್ಲಿ ಇದ್ದರು. ಗಾಂಧಿ ಮತ್ತು ಅವರ ಆದರ್ಶಗಳು ಆಗ ಬರೀ ಒಂದು ಘೋಷಣೆಯು ಮಾತ್ರವೇ ಆಗಿರಲಿಲ್ಲ. ಕೊಡಗಿನ ಗೌರಮ್ಮನವರೂ ಹೊರತಲ್ಲ. ಕುವೆಂಪು ಮಾನವತೆ ಮತ್ತು ವಿಶ್ವಾತ್ಮಕತೆಯನ್ನು ಬರಹಗಳಲ್ಲಿ ಹೇಳಿದರು. ಕನ್ನಡದ ಮತ್ತೆ ಬೇರೆ ಬೇರೆ ಸಾಧ್ಯತೆಗಳು ನಮಗೆ ರಾವ್ ಬಹಾದ್ದೂರ್ ಮುಂತಾದ ಬರಹಗಾರರ ಮೂಲಕ ಕನ್ನಡದ ಅರಿವಿನ ಮೂಲಕವೇ ನಮಗೆ ಸಿಕ್ಕಿತು. ಬರಹ ಮತ್ತು ಸಾಹಿತ್ಯದ ಪ್ರಶ್ನೆಯು ಆಗ ಸರಳವಾದ ಒಂದು ಪ್ರತಿಕ್ರಿಯೆಯು ಅಲ್ಲ. ಅದರಲ್ಲೂ ವ್ಯತ್ಯಾಸಗಳು ಇವೆ. ವಸಾಹತು ಮತ್ತು ಅದರ ಪರಿಣಾಮಗಳು ಹಾಗೂ ಮುದ್ರಣ ಯಂತ್ರಗಳು ಮತ್ತು ಅದರ ಪ್ರಭಾವಗಳು ನಮ್ಮ ಸಾಹಿತ್ಯದ ಮೇಲೆ ಬೀರಿದ ಪರಿಣಾಮುಗಳನ್ನು ನಾವು ವಿವಿಧ ದೃಷ್ಟಿಕೋನದಲ್ಲಿ ನೋಡಬೇಕಾಗುತ್ತದೆ. ತಿರುಮಲಾಂಬರು ಪತ್ರಿಕೆಯನ್ನು ಮಾಡಿದರು. ಅದರಲ್ಲಿ ಮಹಿಳೆಯ ಸಮಸ್ಯೆಯನ್ನು ನೋಡಿದರು. ಅವರ ಕಾದಂಬರಿಗಳು ಅದನ್ನು ಹೇಳುತ್ತವೆ. ಕಾರಂತರು ಹರ್ಷ ಮುದ್ರಣಾಲಯವನ್ನು ಮಾಡಿದರು. ಮಾಸ್ತಿಯವರದು ಜೀವನ ಪತ್ರಿಕೆ. ಅಂದರೆ ಇವುಗಳು ಬದಲಾದ ಪರಿಸರವನ್ನು ಹೇಳುತ್ತವೆ. ಭಾಷೆಯು ಹೇಗೆ ಮುದ್ರಣಕ್ಕೆ ಒಗ್ಗಿಕೊಂಡಿತು ಎನ್ನುವುದೂ ಅತ್ಯಂತ ಮಹತ್ವದ ಪ್ರಶ್ನೆಯೂ ಆಗಿದೆ. ಗದ್ಯವನ್ನು ಮುದ್ರಣಕ್ಕೆ ತರುವುದು ಎಂದರೆ ಹೊಸದಾದ ಒಂದು ಪ್ರಕ್ರಿಯೆಯನ್ನು ರೂಪಿಸುವುದು ಎಂದು ಅರ್ಥವಾಗುತ್ತದೆ. ಕುಮಾರವ್ಯಾಸ ಮೊದಲಾದವರು ಮುದ್ರಣವನ್ನು ನಂಬಿ ಬರದವರು ಅಲ್ಲ. ಕುಮಾರವ್ಯಾಸ ಮತ್ತು ಅವನ ಭಾಷೆಯನ್ನು ಗ್ರಹಿಸಲು ನಮಗೆ ಬೇರೆ ಸಲಕರಣೆಗಳು ಬೇಕಾಗುತ್ತದೆ. ಹಾಗೆ ನೋಡಿದರೆ ನಮಗೆ ಕುಮಾರವ್ಯಾಸ ಮತ್ತು ಲಕ್ಷ್ಮೀಶ ಮೊದಲಾದವರು ಗಮಕಿಗಳ ಮೂಲಕವೇ ನಮಗೆ ಪರಿಚಿತರು.ಗದ್ಯವನ್ನು ಓದಿ ಹೇಳಬೇಕು ಆದರೆ ಪದ್ಯವನ್ನು ಆದರೆ ಹಾಡಿದರೆ ಸಾಕಾಗುತ್ತದೆ. ಎರಡರ ಸಂವಹನ ಪ್ರಕ್ರಿಯೆಯು ಬೇರೆಯಾಗುತ್ತದೆ. ನಮಗೆ ಕುವೆಂಪು ಬರಹಗಳಲ್ಲಿ ಬರುವ ಸಂಗತಿಗಳು ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಗುತ್ತದೆ. ಮಾತು ಬರಹಗಳ ನಡೆಯು ಬೇರೆಯಾಯಿತು. ಅದನ್ನು ನಾವು ಆಗಿನ ಸಾಮಾಜಿಕ ಮತ್ತು ಚಾರಿತ್ರಿಕ ಸನ್ನಿವೇಶದಲ್ಲಿ ಕಾಣಬಹುದು. ಕನ್ನಡವನ್ನು ಬರೆಯುವುದು ಮತ್ತು ಅದನ್ನು ಪ್ರತಿಮಾಡುವುದು ಎನ್ನುವ ಸಂಗತಿಯು ಬದಲಾಯಿತು. ಈ ಸಮಸ್ಯೆಯನ್ನು ನೋಡಿದರೆ ಬಂಡವಾಳ ಮತ್ತು ಅದರ ರೂಪಗಳ ಪ್ರಶ್ನೆಯು ಬೇರೆಯಾಯಿತು ಎನ್ನುವುದೂ ಸ್ಪಷ್ಟವಾಗುತ್ತದೆ. ಮಾತಿನ ಭಾಷೆ ಮತ್ತು ಅದರ ಅಭಿವ್ಯಕ್ತಿಯು ಒಂದು ಬಗೆಯದು. ಆದರೆ ಬರಹ ಅದರ ಮತ್ತೊಂದು ರೂಪವು ಭಿನ್ನವಾಗಿದೆ. ಅಂದರೆ ಬರಹವನ್ನು ಮುದ್ರಣಕ್ಕೆ ಕೊಡುವುದು ಮತ್ತು ಅದರ ಪ್ರತಿಯನ್ನು ಓದುಗರಿಗೆ ತಲುಪಿಸುವುದು ಬಹಳ ಮುಖ್ಯವಾಯಿತು. ಮುದ್ರಣ ಮತ್ತು ಅದರ ಕೈಗಾರಿಕೆಗಳು ಒಂದು ರೀತಿಯವು. ಅದನ್ನು ನೋಡುವುದು ಒಂದು ರೂಪದಲ್ಲಿ. ಕನ್ನಡದ ನವೋದಯದ ಲೇಖಕರು ಬರೆಯುವಾಗ ಅವರ ಎದುರು ಬೇರೆ ಬೇರೆ ಪ್ರಶ್ನೆಗಳು ಇದ್ದವು. ಕೈಗಾರಿಕೆ ಮತ್ತು ಬರಹ, ಕೈಗಾರಿಕೆ ಮತ್ತು ಪ್ರಜಾಪ್ರಭುತ್ವ, ಮುದ್ರಣ ಮತ್ತು ಅದರ ಹಂಚುವಿಕೆ– ಹೀಗೆ ಬೇರೆ ಇದ್ದವು. ಮಾತು ಅದರ ಅನಾವರಣವು ಒಂದು ರೀತಿಯಿಂದ ಸ್ಥಳ ಮತ್ತು ಕಾಲವನ್ನು ನೇರವಾಗಿಯೇ ಹೊಂದಿರುತ್ತದೆ. ಆದರೆ ಮುದ್ರಣವನ್ನು ಈ ದೃಷ್ಟಿಯಿಂದ ನೋಡಲು ಸಾಧ್ಯವೇ ಇಲ್ಲ. ಮುದ್ರಣದಲ್ಲಿ ಬರಹವು ಬರುವಾಗ ಅದರ ಸ್ವರೂಪವು ಸೋಸಲ್ಪಡುತ್ತದೆ. ಮುದ್ರಣದ

ಪ್ರತಿಯನ್ನು ಓದುವಾಗ ಅದರ ಸಂಬಂಧವು ಬೇರೆಯಾಗಿರುತ್ತದೆ. (ಒಂದು ಕಾಲದಲ್ಲಿ ವಿಧವೆ ಬ್ರಾಹ್ಮಣ ಹೆಂಗಸರು ಭಜನೆಯನ್ನು ಹೇಳಿದರು).

ಕಾದಂಬರಿ ಮತ್ತು ಅದರ ಹುಟ್ಟು ಇದನ್ನು ಹೇಳುತ್ತದೆ. ಅದನ್ನು ಸಂಸ್ಕೃತಿಯ ಪ್ರಶ್ನೆಯಾಗಿಯೂ ನಾವು ನೋಡಬೇಕಾಗುತ್ತದೆ. ಸಮಾಜ ಮತ್ತು ಅದರ ಪರಿವರ್ತನೆಗೂ ಸಾಹಿತ್ಯಕ್ಕೂ ಈ ದೃಷ್ಟಿಯಲ್ಲಿ ದ್ವಂದ್ವಾತ್ಮಕವಾದ ಸಂಬಂಧವು ಇರುತ್ತದೆ. ವಸಾಹತು ದೇಶಗಳಲ್ಲಿ ಬರಹ ಮತ್ತು ಅದರ ಅರ್ಥವೂ ಈ ದೃಷ್ಟಿಯಿಂದ ಬದಲಾಯಿತು. ಬರಹವನ್ನು ಒಂದು ಕ್ರಿಯೆ ಮತ್ತು ಅದನ್ನು ಈ ಹಿಂದೆ ಹೇಳಿದಂತೆ ಹೇಳಲು ಆಗುವುದೂ ಇಲ್ಲವೆನ್ನುವ ಅರಿವು ಉಂಟಾದ್ದರಿಂದ ಅದಕ್ಕೆ ಹೊಸ ರೂಪಗಳು ಬಂದವು. ಹೊಸದಾದ ಓದುಗರು ಮತ್ತು ಹೊಸದಾದ ಲೇಖಕರು ಇವರ ನಡುವೆ ಬೇರೆ ಬೇರೆ ಸಂಬಂದಗಳು ಬಂದವು, ಆದರೆ ಹಳೆಯ ಓದುಗರು ಸಾಹಿತ್ಯದಿಂದ ಬಳಸಿದ ಮಾಡಿದ ನಿರೀಕ್ಷೆಗಳು ಬೇರೆಯಾಗಿವೆ. ವಸಾಹತು ಮತ್ತು ವಸಾಹತೋತ್ತರಕಾಲದ ಅನೇಕ ಬರಹಗಳ ವೈಚಾರಿಕ ಚೌಕಟ್ಟು ಈ ದೃಷ್ಟಿಯಿಂದ ಬೇರೆಯಾಗಿದೆ. ಹೊಸದಾದ ಪ್ರಾತಿನಿಧೀಕರಣ ಮತ್ತು ಹೊಸದಾದ ವಸ್ತುವು ನಮಗೆ ಹೊಸದಾದ ತಿಳುವಳಿಕೆಯನ್ನು ಕೊಟ್ಟದ್ದು ಸತ್ಯವಾಗಿದೆ.

ಕನ್ನಡದ ಕಾದಂಬರಿಗಳು ಬರೀ ಒಂದು ವರ್ಗವನ್ನು ಮಾತ್ರವೇ ಹೇಳ್ತಾ ಇಲ್ಲ. ಅದರಲ್ಲಿ ಬರೀ ಮಧ್ಯಮವರ್ಗದ ಸುಖದ ವಿವರಣೆಯು ಮಾತ್ರವೇ ನಿರೂಪಿತವಾಗಿಲ್ಲ. ಅದರಲ್ಲಿ ಓದುಗರು ಒಂದು ವರ್ಗವನ್ನು ಸೂಚಿಸುತ್ತಾ ಇಲ್ಲ. ಆದರೆ ಓದುವ ಮತ್ತು ಗ್ರಹಿಸುವ ಕ್ರಮದಲ್ಲಿ ವ್ಯತ್ಯಾಸವಿದೆ. ಹಳೆಗನ್ನಡದ ಓದು ಮತ್ತು ಅದರ ಖುಷಿಯು ಬೇರೆಯೆಂದು ಆಗಿನ ಬುದ್ಧಿಜೀವಿಗಳು ಹೇಳಿದರು. ಆದ್ದರಿಂದಲೇ ಆದರಲ್ಲಿ ಹಳೆಗನ್ನಡ ಮತ್ತು ಅದರ ವಿಮರ್ಶೆಯು ಇದೆ.

ಅದು ನಿರ್ದಿಷ್ಟವಾದ ಅಭಿರುಚಿಯ ದ್ಯೋತಕ. ಓದು ಮತ್ತು ಅದರ ಕ್ರಮವು ಒಂದು ತಂತ್ರಗಾರಿಕೆಯೂ ಆಗಿದೆ. ಅದರ ಮೇಲೆ ಭೌಗೋಳಿಕವಾದ ಸನ್ನಿವೇಶವೂ ಇದೆ. ಆದರೆ ಆಧುನಿಕ ಬರಹಗಳು ಆಧುನಿಕವಾದ ಅನೇಕ ಸಂಗತಿಗಳನ್ನು ಹೇಳುತ್ತವೆ. ಅದರಲ್ಲಿ ಆಧುನಿಕವಾದ ನಾಗರಿಕವಾದ ಸಂಗತಿಗಳನ್ನು ಹೇಳುತ್ತವೆ. ಅದಕ್ಕೆ ಒಂದು ತಾತ್ವಿಕತೆಯು ಇದೆ. ಆಗಿನ ಪ್ರಭುತ್ವವು ಜನಾಂಗ, ಭಾಷೆ, ಸಾಮಾಜಿಕವಾದ ಸಂಗತಿಗಳನ್ನು ನೋಡಿದ ಕ್ರಮವು ಬೇರೆಯಾಗಿದೆ. ಅದರ ಆಳಿತಾತ್ಮಕವಾದ ದೃಷ್ಟಿಕೋನವು ಬೇರೆಯಿವೆ. ಅನನ್ಯತೆ ಮತ್ತು ವ್ಯತ್ಯಾಸವು ಅದರಲ್ಲಿ ಎದ್ದು ಕಾಣಿಸುತ್ತದೆ. ಹಾಗೆಂದು ಅದರ ಧೋರಣೆಯನ್ನು ಗಮನಿಸಿದ ಇಲ್ಲಿ ಲೇಖಕರು ಕೆಲವು ಪರ್ಯಾಯವನ್ನು ಕಟ್ಟಿಕೊಟ್ಟರು. ಪರ್ಯಾಯವಾದ ಒಂದು ನೆಲೆಯನ್ನು ನೋಡುವುದು ಎಂದರೆ ಅದರಲ್ಲಿ ಗಂಭೀರವಾದ ರೂಪವೂ ಇದೆ. ಸನಾತನ ಎನ್ನುವುದು ಇದರಲ್ಲಿ ಒಂದು ನಿಲುವು ಮಾತ್ರವೇ. ನಾವು ಜನಾಂಗದ ದೃಷ್ಟಿಯಲ್ಲಿಯೂ ನಿಮಗಿಂತ ಬೇರೆ ಎನ್ನುವುದು ಇಲ್ಲಿ ಪ್ರಜ್ಞೆಯ ರೂಪಗಳನ್ನು ಹೇಳುತ್ತವೆ. ಆದ್ದರಿಂದಲೇ ಇಲ್ಲಿ ಒಂದು ಹೊಸದಾದ ಪ್ರತೀಕಗಳು ಹುಟ್ಟಿದವು. ವಸಾಹತು ಆಳಿತಗಾರರು ಬರೆದ ಪತ್ರಗಳು ಒಂದು ರೀತಿಯಲ್ಲಿವೆ. ಆದರೆ ಆಳಿಸಿಕೊಂಡವರ ಕೃತಿಗಳು ಬೇರೆಯಿವೆ. ಅದರಲ್ಲಿ ಬರುವ ಪ್ರತಿಮೆಗಳಲ್ಲಿ ಭಿನ್ನತೆಯಿದೆ.

(ಅಡಿಟಿಪ್ಪಣಿಗೆ ಜೇಮ್ಸ್ ಮಿಲ್ (೧೮೨೦) History of India ಕೃತಿಯನ್ನು ರಚಿಸಿದ. ಅವನ ವಾದಗಳು ಹೀಗಿವೆ :

೧. ಶಿಕ್ಷಣವು ವ್ಯಕ್ತಿಯ ಮನಸ್ಸನ್ನು ತಿದ್ದುತ್ತದೆ.

೨. ಇದು ಭಾರತದಲ್ಲಿ ಅತ್ಯಂತ ಅಗತ್ಯವಾಗಿ ರೂಪುಗೊಳ್ಳಬೇಕಾದ ಪ್ರಕ್ರಿಯೆಯಾಗಿದೆ.

೩. ಅದು ಸಾರ್ವಜನಿಕರ ನಡೆ-ನುಡಿಗಳನ್ನು ತಿದ್ದುತ್ತದೆ.

ಇದಕ್ಕೆ ಪ್ರತಿಕ್ರಿಯೆ ಎಂಬ ರೀತಿಯಲ್ಲಿ ಗಾಂಧಿ ಹೀಗೆ ಹೇಳುತ್ತಾರೆ : ಈಗ ನನ್ನ ಅಭಿಪ್ರಾಯವೇನೆಂದರೆ, ಭಾರತ ವರ್ಷದಲ್ಲಿರುವ ಎಲ್ಲ ಶಿಕ್ಷಣ ಕ್ರಮದಲ್ಲಿಯೂ ಮಾತ್ರ ಭಾಷೆಯಲ್ಲದೆ ಹಿಂದಿ, ಸಂಸ್ಕೃತ, ಪಾರ್ಸಿ, ಅರಬ್ಬಿ ಮತ್ತು ಇಂಗ್ಲೀಷ್‌ಗೆ ಸ್ಥಾನ ಕೊಡಬೇಕು (ಗಾಂಧಿ, ಸತ್ಯ ಶೋಧನೆ ಐ, ಪು. ೨೦).

ಮಿಲ್‌ನ ಸಿದ್ಧಾಂತವು ಕಾನೂನು ಮತ್ತು ತೆರಿಗೆಯ ಪದ್ಧತಿಯಲ್ಲಿ ಹೊಸ ಮಾದರಿಯನ್ನು ರೂಪಿಸಿತು. ೧೯೫೮ರಲ್ಲಿ ಹಿಂದೂ ಕಾನೂನಿನ ಸಂಸ್ಥೆಯನ್ನು ವರ್ಣ ಸಿದ್ಧಾಂತವನ್ನು ಕೆಲಸದ ವರ್ಗೀಕರಣ Division of Labour ಪರಿಕಲ್ಪನೆಯಿಂದ ವಿವರಿಸುತ್ತಾನೆ. ಮತ್ತು ಇದು ಹಿಂದೂ ಸಮಾಜದ ಪ್ರಾಥಮಿಕ ಅಂಶಗಳು ಎಂದು ಭಾವಿಸುತ್ತಾನೆ (Ronald Inden, 1990, p. 57).

ಮಿಲ್ಲನ ಪ್ರತಿಪಾದನೆಯ ಪ್ರಮುಖ ಅಂಶಗಳು ಹೀಗಿವೆ :

೧. ಶಿಕ್ಷಣವು ಭಾರತೀಯರಲ್ಲಿ ಒಂದು ನೈತಿಕ ಪ್ರಜ್ಞೆಯನ್ನು ರೂಪಿಸಲು ಕಾರಣವಾಗುತ್ತದೆ.

೨. ಅದು ಭಾರತೀಯ ಸಮಾಜದ ತಿದ್ದುಪಡಿಗೆ ಅನುಕೂಲ ಕಲ್ಪಿಸುತ್ತದೆ.

೩. ಕಾನೂನು ಇರುವುದು ಸರಕಾರದ ನಿಲುವುಗಳನ್ನು ಅರ್ಥೈಸಿಕೊಳ್ಳುವುದಕ್ಕೆ.

೪. ಭಾರತೀಯ ಬಡ ಜನರು ಮುಗ್ಧರಾಗಿದ್ದಾರೆ.

೫. ಬಡ ಜನರ ಮುಗ್ಧತೆಯು ಕೆಟ್ಟ ಕಾನೂನು ಮತ್ತು ಕೆಟ್ಟ ಸರಕಾರಕ್ಕೆ ಕಾರಣವಾಗಿದೆ.

೬. ಸರಕಾರವು ಈ ಅಂಶಗಳ ಬಗ್ಗೆ ಗಮನವನ್ನು ಕೊಡಬೇಕು.

ಮೆಕಾಲೆಯು ಇದೇ ನೆರಳಿನಲ್ಲಿ ಮುಂದುವರಿಯುತ್ತಾನೆ. ಇವರಲ್ಲಿ ನೈತಿಕ ಮೌಲ್ಯ ಮತ್ತು ನೈತಿಕ ಅಧಿಕಾರ ಕೇಂದ್ರವನ್ನು ರೂಪಿಸಲು ಕಾರಣವಾಯಿತು. ಡಫ್‌ನ ಶೈಕ್ಷಣಿಕ ಸಿದ್ಧಾಂತವು ಧರ್ಮ ಮತ್ತು ಶಿಕ್ಷಣವು ಬೇರೆ ಬೇರೆಯೆ ಎಂದು ಪ್ರತಿಪಾದಿಸಿತು.

ಭಾರತದಲ್ಲಿ ಉದಾರ, ಸ್ವತಂತ್ರ ಅರ್ಥಶಾಸ್ತ್ರವನ್ನು ಬ್ರಿಟೀಷ್ ಯುಗವು ಹುಟ್ಟುಹಾಕಿತು. ಇದು ರಿಕಾರ್ಡೊ (Ricardo) ಅರ್ಥಶಾಸ್ತ್ರವನ್ನು ಅವಲಂಬಿಸಿದುದು, ಕುವೆಂಪು ಇದನ್ನು 'ಬಂಡವಾಳದ ಜಿಗಣೆ' ಎಂದು ಕರೆಯುತ್ತಾರೆ. ಇಲ್ಲಿ ಫುಕೋ ಹೇಳುವ ಮಾತೊಂದನ್ನು ನೆನಪಿಸಿಕೊಳ್ಳಬೇಕು. ಹಣದ ಎರಡು ಕೆಲಸವೆಂದರೆ ಸಾಮಾನ್ಯ ಮಾಪನವನ್ನು (Common Measure) ವಸ್ತುವಿಗೆ ಅನ್ವಯಿಸಿ ಅದರ ಬೆಲೆಯನ್ನು ನಿಗದಿಗೊಳಿಸುವುದು. ವಸ್ತುವಿಗೆ ಇರುವ ನಿಜವಾದ ಮೌಲ್ಯವನ್ನು ನಿರ್ಧರಿಸಿ, ಅದಕ್ಕೆ ವಿನಿಮಯ ಮೌಲ್ಯವೇನು ಎಂದು

ತಿಳಿದುಕೊಳ್ಳುವುದು (೧೯೯೭, ಪು. ೧೬೯). ವಿದೇಶಿ ವರ್ತಕ ಶಾಹಿ ಮತ್ತು ಅದರ ಶೈಕ್ಷಣಿಕ ವ್ಯವಸ್ಥೆಯು ಒಂದಕ್ಕೊಂದು ಪೂರಕವಾಗಿದ್ದವು. ಇಂಗ್ಲಿಷ್ ಶಿಕ್ಷಣ ಪದ್ಧತಿಯಲ್ಲಿ ಜ್ಞಾನದ ಪರಿಕಲ್ಪನೆಯು ಬದಲಾಯಿತು. ಆಧುನಿಕ ಮಾನವನ ನವೀನ ದೃಷ್ಟಿಯು ರಚನೆಯಲ್ಲಿ ವಿಜ್ಞಾನದ ಪ್ರಭಾವವು ಬಹು ಮುಖ್ಯವಾದ ಭಾಗವಹಿಸಿಕೊಂಡಿದೆ (ಕುವೆಂಪು, ಹೊಸ ಸಾಹಿತ್ಯ, ಹೊಸ ದೃಷ್ಟಿ).

ಮಿಲ್ ಮತ್ತೊಂದು ಅಂಶವನ್ನು ಹೇಳುತ್ತಾನೆ. ಭಾರತದಲ್ಲಿರುವ ಬಡತನವು ಕ್ರಿಮಿನಲ್ ಮನೋವೃತ್ತಿಗೂ ಕಾರಣವಾಗಿದೆ.

ಪಾರ್ಥ ಚಟರ್ಜಿಯವರು ಹೇಳುತ್ತಾರೆ : 'ವಸಾಹತುಶಾಹಿ ಅನುಭವದ ಕಾಲದಲ್ಲಿ ಸಾಮಾನ್ಯ ಮನುಷ್ಯ. ಅಕ್ಷರ ಸ್ಥರ ನಡುವೆ ಅಂತರ ಬೆಳೆಯಿತು. ಸುಶಿಕ್ಷಿತರು ಯುರೋಪ್ ರೂಪಿಸಿದ ಜ್ಞಾನ ಜಗತ್ತಿನ ಚೌಕಟ್ಟಿನೊಳಗೆ ಪ್ರವೇಶಿಸಿದರು'. ಈ ದೃಷ್ಟಿಯಿಂದ ವಸಾಹತು ಸಂದರ್ಭ ಭಾರತದಲ್ಲಿ ಹೊಸದೊಂದು ಸಂದರ್ಭವನ್ನು ಹುಟ್ಟುಹಾಕಿತು.

ವಸಾಹತು ಮತ್ತು ಅದರ ಸ್ವರೂಪವನ್ನು ಆಗಿನ ದಾಖಲೆಗಳು ಹೇಳುತ್ತವೆ. ಆದರೆ ಇಲ್ಲಿ ಬರೆದವರು ಅದನ್ನು ನಿರೂಪಿಸಿದ ಕ್ರಮವು ಭಿನ್ನ. ಅದು ಪರಕೀಯತೆಯನ್ನು ಹೇಳುತ್ತದೆ. ಕಲ್ಪಿತವಾದ ಕೃತಿಗಳು ಒಂದು ರೀತಿಯಲ್ಲಿವೆ. ಸಾಂಕೇತಿಕವಾದ ಕೃತಿಗಳು ಮತ್ತೊಂದು ರೀತಿಯಲ್ಲಿವೆ. ಅದರಲ್ಲಿಯೂ ಕಲ್ಪನೆಯನ್ನು ಹೇಳುವ ಕೃತಿಗಳು ವಿವರಿಸುವುದು ಭಿನ್ನವಾದ ಒಂದು ಚೌಕಟ್ಟನ್ನು. ಅದರಲ್ಲಿ ನಿರ್ದಿಷ್ಟವಾದ ಜನಾಂಗ ಮತ್ತು ಅದರ ಕಷ್ಟ ಮತ್ತು ಸುಖಗಳು ವ್ಯಕ್ತವಾಗಿವೆ. ಅದರ ಉದ್ದೇಶಗಳು ಕೂಡಾ ಭಿನ್ನವಾಗಿದೆ. ವಾಸ್ತವವಾಗಿ ಕಲ್ಪನೆಯನ್ನು ಹೇಳುವಾಗ ಲೇಖಕರು ಕೆಲವು ವಿಧಾನಗಳನ್ನು ಅನ್ವಯಿಸಿಕೊಂಡರು. ಅದರ ಪಶ್ಚಿಮದ ಪರಂಪರೆಗಿಂತ ಬೇರೆ ಎನ್ನುವುದೇ ಬಹಳ ಮುಖ್ಯವಾಯಿತು. ಅವುಗಳು ನಿಜವಾಗಿಯೂ ಬೇರೆ ನಿಲುವನ್ನು ತಳೆದಿವೆ. ಅವುಗಳು ಹೆಚ್ಚು ಭಾವನಾತ್ಮಕವಾದ ನಿಲುವನ್ನು ಹೊಂದಿವೆ. ಅವುಗಳ ಸಾರವೂ ಬೇರೆ.ಅದರಲ್ಲಿ ತೀವ್ರತೆಯೂ ಇದೆ. ಬೇಂದ್ರೆ ಮುಂತಾದವರ ಪದ್ಯಗಳನ್ನು ನೋಡಿದರೆ ಇದರ ಅರಿವು ನಮಗೆ ಆಗುತ್ತವೆ. ಸಾನೆಟ್ ಎನ್ನುವುದನ್ನು ನಾವು ಬೇರೆ ರೀತಿಯಲ್ಲಿ ಅಳವಡಿಸಿಕೊಳ್ಳ ಬಲ್ಲೆವು ಎಂದು ಅನಿಸಿದ್ದರಿಂದಲೇ ಕುವೆಂಪು ಭಿನ್ನವಾಗಿಯೂ ಬರೆಯಲು ಸಾಧ್ಯವಾಯಿತು. ಅದರಲ್ಲಿ ಒಂದು ಸ್ಪರ್ಧಾತ್ಮಕವಾದ ಭಾವವೂ ಇದೆ. ಪಶ್ಚಿಮ ಮತ್ತು ಅದರ ಕೇಡನ್ನು ಈ ಮಾದರಿಯ ಕೃತಿಗಳು ಪ್ರಶ್ನೆ ಮಾಡಿವೆ. ಅದನ್ನು ಕನ್ನಡದ ಹೊಸದಾದ ಪ್ರಜ್ಞೆ ಎಂದೂ ಕರೆಯಬಹುದು. ವಾಸ್ತವವಾಗಿ ಈ ಮಾದರಿಯು ನಮಗೆ ಹೊಸದಾದ ಅರಿವನ್ನು ಹೇಳುತ್ತದೆ. ಸ್ಥಳ ಮತ್ತು ಅದರ ಅರಿವು ನಮಗೆ ಹೆಚ್ಚು ಮುಖ್ಯವೆಂದು ಈ ಮಾದರಿಯ ಬರಹಗಳು ತಿಳಿಸಿಕೊಡುತ್ತವೆ. ಕನ್ನಡದ ಓದುಗರು ಮತ್ತು ಕನ್ನಡದ ಕವಿಗಳು ಒಂದು ಗುಂಪು ಎಂದು ತಿಳಿದ ದೆಸೆಯಿಂದ ಕನ್ನಡದ ಕವಿಗಳು ಸೂಚಿಸಿದ ನೆಲೆಗಳೂ ಬೇರೆಯಾಗುತ್ತವೆ. ನಮ್ಮ ಲೇಖಕರು ಮತ್ತು ನಮ್ಮ ಓದುಗರು ಎಂದು ತಿಳಿಯುವುದು ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಯಿತು. ದೇಸಿ ಜನರು ಎನ್ನುವ ಕಲ್ಪನೆಯೇ ಭಿನ್ನವಾದ್ದು. ನಾವು ಹೊಸ ಕಲ್ಪನೆಯನ್ನು ಹೇಳುತ್ತೇವೆ ಎನ್ನುವುದೂ ಇಲ್ಲಿ

ಪ್ರಧಾನವಾದ ಆಶಯವೂ ಆಗಿದೆ. ಹೊಸದಾದ ಕಲ್ಪನೆ ಮತ್ತು ಅದರ ವೈರುಧ್ಯಗಳು ಇಲ್ಲಿ ಗಮನಾರ್ಹವಾಗಿದೆ. ಹೊಸದಾದ ಕಲ್ಪನೆ ಎನ್ನುವುದು ಇಲ್ಲಿ ಹೊಸದಾದ ವಾಸ್ತವವೂ ಹೌದು

ಕುವೆಂಪು ಕಾದಂಬರಿಗಳಲ್ಲಿ ಈ ನೋಟಗಳು ಬೇರೆಯಾಗಿವೆ. ಸಮಾಜ ಮತ್ತು ವ್ಯಕ್ತಿ ಹಾಗೂ ಅವನ ಜೀವನದ ಪಲ್ಲಟಗಳು ಹೇಗೆ ಬೇರೆ ಬೇರೆ ಸಂದರ್ಭದಲ್ಲಿ ವಿಭಿನ್ನವಾಗುತ್ತವೆ ಎಟಿಜಿಟಿಣವುದು ಅವರ ಪ್ರಧಾನವಾದ ಪ್ರಶ್ನೆಯು ಆಗುತ್ತದೆ. ಅವುಗಳು ಪರಸ್ಪರ ಸಂಧಿಸುತ್ತವೆ. ಅದರಲ್ಲಿಯೂ ವ್ಯಕ್ತಿ ಮತ್ತು ಅದರ ಭಾವನೆಗಳು ಅತ್ಯಂತ ಮಹತ್ವದ್ದೂ ಆಗುತ್ತದೆ. ನಮ್ಮ ಬಹುತೇಕ ಲೇಖಕರಲ್ಲಿ ವ್ಯಕ್ತಿ ಮತ್ತು ಅವನ ಪರಿಪೂರ್ಣತೆಯ ಪ್ರಶ್ನೆಯು ಇರುತ್ತದೆ. ಅದನ್ನು ಅವರು ತಮ್ಮ ಬರಹಗಳಲ್ಲಿ ಹೇಳಿದ್ದಾರೆ. ನಿಸರ್ಗದ ಬಗೆಗೆ ಇರುವ ಒಂದು ರೊಮ್ಯಾಂಟಿಕ್ ಆದ ನೆಲೆಗಳು ಆಗ ಕಾಣಿಸಿಕೊಂಡದ್ದು ಇದಕ್ಕೆ ಸಾಕ್ಷಿಯೂ ಆಗಿವೆ. ಅದರಲ್ಲಿ ಸಮಾಜದ ಒಂದು ತತ್ವಜ್ಞಾನವೂ ಕಾಣಿಸಿಕೊಂಡಿದೆ. ರಾಷ್ಟ್ರ ಮತ್ತು ಅದರ ಕುರಿತಾಗಿ ಹೋರಾಟ ಮಾಡುವವರ ನೆಲೆಗಳು ಹೇಗೆ ಇವೆ ಅವರ ಸಮಸ್ಯೆಯು ಯಾವುದು ಮಹಾಯುದ್ಧವು ಏನು ಮಾಡಿತು, ಅದನ್ನು ನಮ್ಮವರು ಹೇಗೆ ನೋಡಿದರು ಎನ್ನುವುದಕ್ಕೆ ಕಾರಂತರ ಬರಹಗಳು ಸಾಕ್ಷಿಯನ್ನು ಹೇಳುತ್ತವೆ. ಈ ಕುರಿತು ಹೇಗೆ ಬರೆಯಬೇಕು ಎನ್ನುವುದೂ ಸಮಸ್ಯೆ ಆಗಿತ್ತು. ಬರಹ ಎನ್ನುವುದು ಕಲೋನಿಯಲ್ ಕಾಲದಲ್ಲಿ ಒಂದು ಸಂಕೀರ್ಣವಾದ ಚಟುವಟಿಕೆಯೂ ಆಗಿತ್ತು. ಅವರು ಹಣದ ಹಿಂದೆ ಹೋಗುತ್ತಿದ್ದಾರೆ ಮತ್ತು ಅದರಿಂದ ಜನರು ಅಪಮೌಲ್ಯವನ್ನು ಅನುಭವಿಸುತ್ತಿದ್ದಾರೆ ಎನ್ನುವುದನ್ನು ಬೇಂದ್ರೆಯವರು ಹೇಳುತ್ತಾರೆ. ಅವರ ಕುರುಡು ಕಾಂಚಾಣವೇ ಸಾಕ್ಷಿಯು ಆಗಿದೆ. ಕೆಲವು ಭಿನ್ನವಾದ ಅನುಭವಗಳು ನಮಗೆ ಆಗುತ್ತಿದೆ ಎನ್ನುವುದೂ ಆಗಿನ ಪ್ರಧಾನವಾದ ನಿಲುವು ಆಗಿದೆ. ಕುವೆಂಪು ಕ್ರಾಂತಿಕಾರಕತೆಯು ಬರೀ ಸ್ವಾತಂತ್ರ್ಯವನ್ನು ಮಾತ್ರವೇ ಹೇಳ್ತಾ ಇಲ್ಲ. ಅದು ಗುಣಾತ್ಮಕವಾದ ಬದಲಾವಣೆಯನ್ನು ಹೇಳುತ್ತದೆ. ಅದರಲ್ಲಿ ಕಾಲ ಮತ್ತು ಹೊಸದಾದ ಸನ್ನಿವೇಶಗಳ ಪ್ರಶ್ನೆಯು ಇದೆ. ಲೇಖಕ ಮತ್ತು ಓದುಗರ ಸಂಬಂಧದ ಪ್ರಶ್ನೆಯೂ ಇದೆ. ಆದ್ದರಿಂದಲೇ ಆಗಿನ ಕಾದಂಬರಿಗಳು ವಿಭಿನ್ನವಾದ ಒಂದು ಸನ್ನಿವೇಶವನ್ನು ಹೇಳುತ್ತದೆ. ಅದು ವಿಶಿಷ್ಟವಾದ ಒಂದು ಬರಹದ ಉತ್ಪಾದನೆಯೂ ಆಗಿದೆ. ನಾವು ಹೇಗೆ ಹೊಸತನ್ನು ಕಲ್ಪಿಸಿಕೊಳ್ಳಬಹುದು ಮತ್ತು ಅದರ ಮೂಲಕವೇ ನಾವು ಹೊಸತನ್ನು ಹೇಳಬಹುದು ಎನ್ನುವುದು ಆಗಿನ ಲೇಖಕರ ಸಮಸ್ಯೆಯೂ ಆಗಿತ್ತು. ಸ್ವತಂತ್ರ ಲೇಖಕರ ಪ್ರಶ್ನೆಯು ಆಗ ಮಹತ್ವದ ತಿರುವಿಗೆ ಕಾರಣವೂ ಆಯಿತು. ಪ್ರಕಾಶನ ಸಂಸ್ಥೆಗಳು ಮತ್ತು ಅದರ ಹುಟ್ಟು ಹೊಸ ಸನ್ನಿವೇಶವನ್ನು ಹೇಳಿದವು. ಸಾಹಿತ್ಯವು ಮಾರುಕಟ್ಟೆಯನ್ನು ಪ್ರವೇಶ ಮಾಡಿದವು. ಇದರಿಂದ ಲೇಖಕನ ಸ್ಥಾನಮಾನವು ಬದಲಾಯಿತು. ಕನ್ನಡದ ಸೃಜನಶೀಲರು ಬರಹದ ಮೂಲಕವೂ ಒಂದು ಅನನ್ಯತೆಯನ್ನು ಸಾಧಿಸಿಕೊಂಡರು. ಕನ್ನಡದ ಬುದ್ಧಿಜೀವಿಗಳ ಚರಿತ್ರೆಯಲ್ಲಿ ಕಾರಂತ, ಕುವೆಂಪು ಶಂಬಾ ಮುಂತಾದವರು ಇದ್ದಾರೆ.

ಕಾರಂತರು ಒಬ್ಬ ವ್ಯಕ್ತಿ ಮಾತ್ರವೇ ಅಲ್ಲ ಅವರು ಪ್ರತಿನಿಧಿಯೂ ಆಗಿದ್ದಾರೆ. ಒಂದು ಕಾಲದ ಸಮಾಜ ಮತ್ತು ಸಂಸ್ಕೃತಿಯನ್ನು ಅವರು ಪ್ರತಿನಿಧಿಸುತ್ತಾರೆ. ಕಾರಂತರಲ್ಲಿ ಕಾರಣಗಳ ಪ್ರಶ್ನೆಯೂ ಆಗುತ್ತದೆ. ಅದರಲ್ಲಿ ಪ್ರತ್ಯೇಕವಾದ ಮನೋಸ್ಥಿತಿಯೂ ಇದೆ. ಅದು ನಮಗೆ ಒಂದು

ಪ್ರಗತಿಪರತೆಯನ್ನು ಕೊಟ್ಟಿದೆ. ಅವರ ಬರಹಗಳಿಗೆ ಇರುವ ಆಯಾಮವೂ ಭಿನ್ನವಾಗಿದೆ. ಅದರಲ್ಲಿ ಒಂದು ಕಡೆಯಿಂದ ತತ್ವಜ್ಞಾನ ಮತ್ತೊಂದು ಕಡೆಯಿಂದ ಸೃಜನಶೀಲತೆಯು ಇದೆ. ಸಮಾಜದ ದೃಷ್ಟಿಕೋನವೂ ಇದೆ. ಅದರಲ್ಲಿ ಜೀವನವನ್ನು ಹೇಗೆ ಗ್ರಹಿಸಬೇಕು ಎನ್ನುವುದರ ನಿಲುವೂ ಇದೆ. ನಾಗರಿಕತೆಯ ಪ್ರಶ್ನೆಗಳು ಅದರಲ್ಲಿ ಬೇರೆಯಾಗುತ್ತವೆ. ಸ್ವ ಮತ್ತು ಅದರ ಆಸಕ್ತಿಯನ್ನು ಲೇಖಕರು ನಿರೂಪಿಸುವ ಕ್ರಮಗಳು ಅತ್ಯಂತ ಅನನ್ಯವೂ ಆಗಿದೆ. ಸ್ವಂತಿಕೆ ಮತ್ತು ಅದರ ಸ್ವಾತಂತ್ರ್ಯದ ಪ್ರಶ್ನೆಯನ್ನು ಲೇಖಕರು ನಿರೂಪಿಸುತ್ತಾರೆ. ಬುದ್ಧಿಜೀವಿಗಳಿಗೆ ಇರುವ ನೈತಿಕ ಪ್ರಶ್ನೆಗಳನ್ನು ನವೋದಯದ ಲೇಖಕರು ನೋಡಿದ ಕ್ರಮಗಳೂ ಈ ದೃಷ್ಟಿಯಿಂದ ಬೇರೆಯಾಗುತ್ತವೆ. ನವೋದಯದ ಕಾಲದಲ್ಲಿ ವಾಸ್ತವವಾಗಿ ಅನೇಕ ಪ್ರಶ್ನೆಗಳು ಬಂದಿದ್ದವು.

ವಾಸ್ತವವಾದ ಕಾದಂಬರಿಗಳ ಮತ್ತೊಂದು ವಿಶೇಷವೆಂದರೆ ಅದರಲ್ಲಿ ಸಾಮಾನ್ಯವಾದ ಭಾಷೆಯೂ ಇರುತ್ತದೆ. ಅದೇ ಅದರ ಶಕ್ತಿ. ಚಾರಿತ್ರಿಕತೆಯ ಅನೇಕ ಸಂಘರ್ಷಗಳನ್ನು ಅದು ಬಿಡಿಸಿ ಹೇಳಿಕೊಳ್ಳುತ್ತದೆ. ಒಂದು ದೃಷ್ಟಿಯಿಂದ ಅದು ಪ್ರಾಕ್ತನವಾದ ಭೂತಕಾಲವನ್ನು ಹೇಳುತ್ತದೆ. ಅಂದರೆ ಅದರಲ್ಲಿ ಕಳೆದ ಸಂಗತಿಗಳ ವಿಶಿಷ್ಟವಾದ ನಿರೂಪಣೆಯೂ ಇರುತ್ತದೆ. ವಾಸ್ತವವಾದವು ಅದನ್ನು ವಿಶಿಷ್ಟವಾಗಿ ನಿರೂಪಿಸುತ್ತದೆ. ವಾಸ್ತವತೆಯು ಕೆಲವು ಕೇಂದ್ರಗಳನ್ನು ಒಳಗೊಂಡಿರುತ್ತದೆ. ಮತ್ತು ಅದರಲ್ಲಿ ವಿಶಿಷ್ಟವಾದ ಒಂದು ಶಕ್ತಿಯಿರುತ್ತದೆ. ಆದರೆ ಯಾವುದನ್ನು ನಾವು ಹೀಗೆ ಹೇಳುತ್ತೇವೆಯೋ ಅದರ ಬಗ್ಗೆ ರಚನೋತ್ತರವಾದವು ಕೆಲವು ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ವರ್ಗೀಕರಣವೇ ಬೇಡವೆಂದು ಅದರ ಅಭಿಪ್ರಾಯವಾಗಿದೆ. ರಚನೋತ್ತರವಾದವು ಮಾಧ್ಯಮ ಮತ್ತು ಅದರ ಪರಿಣಾಮಗಳನ್ನು ಹೇಳುತ್ತದೆ. ಲುಕಾಕ್ಸ್ ಕಾದಂಬರಿ ಮತ್ತು ಅದರ ಪರಿಣಾಮಗಳನ್ನು ಹೇಳುವಾಗ ಮತ್ತೆ ಕೆಲವು ವಿಷಯಗಳನ್ನು ಹೇಳುತ್ತಾನೆ. ಅವನು ಕಾದಂಬರಿ ಮತ್ತು ಸಂಸ್ಕೃತಿಯೆರಡನ್ನೂ ವಿವರಿಸುತ್ತಾನೆ. ಕಾದಂಬರಿಯೂ ಒಂದು ಬಗೆಯಲ್ಲಿ ಸಾಂಸ್ಕೃತಿಕ ಉತ್ಪಾದನೆ ಎನ್ನುವುದರಲ್ಲಿ ಎರಡು ಮಾತಿಲ್ಲ. ನಿಸರ್ಗವಾದವನ್ನು ವಾಸ್ತವವಾದವು ನಿರಾಕರಿಸಿದರೆ ಅದನ್ನು ಆಧುನಿಕವಾದವು ನಿರಾಕರಿಸಿತು. ಆಧುನಿಕತೆಯನ್ನು ಆಧುನಿಕೋತ್ತರವಾದವು ನಿರಾಕರಿಸಿತು. ಆದರೆ ಇದರಲ್ಲಿ ಭಿನ್ನತೆಗಳು ಇವೆ. ಆಧುನಿಕತೆ ಮತ್ತು ಅದರ ಪ್ರಭಾವವು ಒಂದು ಬಗೆಯದೇ ಆದರೆ ಅದರ ಅನಂತರದ ತರ್ಕಗಳು ಬೇರೆಯಾದವು. ಆದರೆ ಆಧುನಿಕತೆಯನ್ನು ಸಮರ್ಥಿಸುವವರು ಹೇಳುವುದೇ ಬೇರೆ. ಅವರ ಪ್ರಕಾರ ಆಧುನಿಕತೆಯು ಜೀವನದ ಅತ್ಯಂತ ಮುಖ್ಯವಾದ ಮೌಲ್ಯಗಳಲ್ಲಿ ಒಂದು. ಅದರಲ್ಲಿ ವಿವಿಧ ನೆಲೆಗಟ್ಟುಗಳು ಇವೆ. ಅದನ್ನು ನೋಡುವಾಗ ನಿಜವಾಗಿಯೂ ನಾವು ಯಾವುದಕ್ಕೆ ಬದ್ಧರಾಗಿರಬೇಕೆಂದು ಅನಿಸುವುದೇ ಇಲ್ಲವೆನ್ನುವುದು ಅದರ ಪ್ರತಿಪಾದನೆಯೂ ಆಗಿದೆ. ವಾಸ್ತವವಾದವು ಅನೇಕ ರೀತಿಯಲ್ಲಿ ತನ್ನದೇ ಆದ ಶಕ್ತಿಯನ್ನು ಹೊಂದಿದೆ. ಮತ್ತು ಅದು ಚಾರಿತ್ರಿಕವಾದ ಅಂಶಗಳನ್ನು ಹೊಂದಿದೆ. ಅಂದರೆ ಅದರಲ್ಲಿ ಬರುವ ವಿವರಗಳಲ್ಲಿ ಚರಿತ್ರೆಯ ಭಾಗಗಳೂ ಇರುತ್ತವೆ. ಅದು ದ್ವಂದ್ವಾತ್ಮಕವಾದ ಪ್ರತಿಫಲನವನ್ನು ಹೊಂದಿರುತ್ತದೆ. ಅದರಲ್ಲಿ ಅನೇಕ ವೈರುಧ್ಯಗಳೂ ಇರುತ್ತವೆ. ವಾಸ್ತವವಾದವು ಯಾವುದೇ ಒಂದು ಕ್ಷಣವನ್ನು ಮಾತ್ರವೇ ಹೇಳುವುದೂ ಇಲ್ಲ. ಅದರಲ್ಲಿ ಅನೇಕ ವಿಷಯಗಳ ನಿರೂಪಣೆಯು ಚರಿತ್ರೆ ಮತ್ತು ಅದರ ವಿವಿಧ ಘಟಕಗಳನ್ನು ಹೇಳುತ್ತದೆ. ವಾಸ್ತವವಾದದಲ್ಲಿ ಇರುವುದು ಮೂಲಭೂತವಾಗಿ ಸಾಮಾನ್ಯವಾದ ಒಂದು ಭಾಷೆಯ ಕ್ರಮವು ಮಾತ್ರವೇ

ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಈ ಅಂಶಗಳು ವ್ಯಕ್ತವಾಗಿದೆ. ಕುವೆಂಪುರವರ ಎರಡು ಕಾದಂಬರಿಗಳಲ್ಲಿ ಬರುವ ಮುಖ್ಯ ಪಾತ್ರಗಳು ಇದನ್ನು ಹೇಳುತ್ತವೆ. ಮುಕುಂದಯ್ಯ (ಮಲೆಗಳಲ್ಲಿ ಮದುಮಗಳು) "ಆದ್ದರಿಂದ ಅವೊತ್ತು ಹೊತ್ತಾರೆ ಮುಂಚೆ ಕೋಣೂರಿನಿಂದ ಬಂದ ಐಗಳು, ಪಾದ್ರಿ ಜೀವರತ್ನಯ್ಯ ಕೊಟ್ಟಿದ್ದ ಸುದ್ದಿಯ ಪ್ರಕಾರ, ದೊಡ್ಡಣ್ಣ ಹೆಗ್ಗಡೆಯನ್ನು ಮಂಡಗದ್ದೆಯ ಹತ್ತಿರ ಬೀಡುಬಿಟ್ಟಿದ್ದ ಗೋಸಾಯಿಗಳ ಗುಂಪಿನಲ್ಲಿ ಗುರುತಿಸಿದ್ದಾರಂತೆ ಎಂದು ಸುಬ್ಬಣ್ಣ ಹೆಗ್ಗಡೆಯವರಿಗೆ ತಿಳಿಸಿ, ಅವರನ್ನು ಮೇಗರವಳ್ಳಿಯ ಹತ್ತಿರ ಸಿದ್ಧವಾಗುತ್ತಿದ್ದ ಮಿಶನ್ ಇಸ್ಕೂಲಿನ ಮೇಲ್ವಿಚಾರಣೆಗೆಂದು ಅಲ್ಲಿಗೆ ಬಂದಿದ್ದ ಪಾದ್ರಿಯನ್ನೆ ಕಂಡು ಮುಖಾಮುಖಿಯಾಗಿ ಮಾತನಾಡಿ ಮುಂದಿನ ಕ್ರಮ ಕೈಗೊಳ್ಳುವಂತೆ ಪ್ರೇರಿಸಿ ಕರೆದೊಯ್ದಾಗ, ತಿಮ್ಮಪ್ಪ ಹೆಗ್ಗಡೆ ಯಾರೋ ತನ್ನಿಂದ ಏನನ್ನೊ ಕಸಿದುಕೊಳ್ಳಲು ಒಳಸಂಚು ನಡೆಸಿದ್ದಾರೆ ಎಂಬಂತೆ ಕನಲಿದ್ದನು. ಶುಭವಾದರೂ ಆಗಬಹುದಾಗಿದ್ದ ಆ ವಾರ್ತೆಯನ್ನು ಅತ್ತಿಗೆಗಿರಲಿ ತಂಗಿಗೂ ತಿಳಿಸದೆ ಬಿಮ್ಮಗಿದ್ದನು: ಆ ಮನಃಸ್ಥಿತಿಯೂ ಒಂದು ಪ್ರಬಲ ಪ್ರಚೋದನೆಯಾಗಿತ್ತು. ಆ ಧೂರ್ತನಿಗೆ ಅತ್ತಿಗೆಯ ಮೇಲೆ ಕೈ ಮಾಡುವುದಕ್ಕೆ"[೩]. ಹೂವಯ್ಯ (ಕಾನೂರು ಹೆಗ್ಗಡತಿ)ಆದರೆ ಸಂದರ್ಭ ಎನ್ನುವುದನ್ನು ನಾವು ಬೇರೆ ಬೇರೆ ಸನ್ನಿವೇಶಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಬಳಸುತ್ತೇವೆ. ಆದರೆ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಬಳಸುವಾಗ ಅದರ ಅರ್ಥವು ಬೇರೆಯಾಗುತ್ತದೆ. ಜಾನಪದ ಅಧ್ಯಯನದಲ್ಲಿ ಸಂದರ್ಭ ಎನ್ನುವುದು ಈಚೆಗೆ ಕನ್ನಡದಲ್ಲಿ ಹೆಚ್ಚು ಪ್ರಚಲಿತವಿರುವ ಸಿದ್ಧಾಂತವಾಗಿದೆ. ಜಾನಪದದ ಹಾಡು, ಪ್ರದರ್ಶನ ಇತ್ಯಾದಿಗಳು ಆಯಾ ಸಂದರ್ಭಕ್ಕೆ ತಕ್ಕಂತೆ (ಅಂದರೆ ಪ್ರೇಕ್ಷಕ, ಶ್ರೋತೃ, ಸ್ಥಳ, ಕಾಲ, ಅವಕಾಶ, ಅನುಸಾರವಾಗಿ) ಬೇರೆ ಬೇರೆ ರೂಪಗಳನ್ನು ಪಡೆಯಬಹುದು. ಇಲ್ಲಿ ಪ್ರದರ್ಶನ ವಿಸ್ತಾರವಾಗಬಹುದು ಅಥವಾ ಕುಂಠಿತವಾಗಬಹುದು.

ಕಾರಂತರ ಕಾದಂಬರಿಯನ್ನು ಕುರಿತು ಕೀರ್ತಿನಾಥ ಕೋಟಿಯವರು ಹೀಗೆ ಹೇಳುತ್ತಾರೆ.

"'ಅಳಿದ ಮೇಲೆ'ಯಲ್ಲಿಯ ಜೀವನದ ಅನ್ವೇಷಣೆ ಮಾತ್ರ ನೈತಿಕ ಹೊಣೆಗಾರಿಕೆಯಿಂದ ಪ್ರೇರಿತವಾದದ್ದು. ಅಲ್ಲದೆ ಯಶವಂತರ ಪಾರ್ಥಿವದೇಹ ಇಲ್ಲವಾದ್ದರಿಂದ ಲೇಖಕರು ಯಶವಂತರ ಪತ್ರಗಳು, ದಿನಚರಿ, ಅವರು ರಚಿಸಿದ್ದ ಸಾಂಕೇತಿಕ ಚಿತ್ರಗಳು ಮತ್ತು ಅವರ ಗತಸಂಬಂಧಗಳು. ಇವುಗಳ ಮೂಲಕ ಯಶವಂತರ ಚದರಿಹೋದ ವ್ಯಕ್ತಿತ್ವದ ಅಂಶಗಳನ್ನು ಒಟ್ಟುಗೂಡಿಸಬೇಕಾಗಿದೆ. ತನ್ಮಯತೆಯ ಬದಲಾಗಿ ಒಂದು 'ಪ್ರಾಮಾಣಿಕ ಸಂದೇಹ' ಈ ಅನ್ವೇಷಣೆಯಲ್ಲಿ ಬೆಳಕಾಗುತ್ತದೆ. ಓರ್ವ ವ್ಯಕ್ತಿಯೊಡನೆ ಭಾವನಾತ್ಮಕ ಸಂಬಂಧದ ಬದಲಾಗಿ, ಜೀವನದ ಅಸ್ತಿತ್ವ ಅಳಿದ ಮೇಲೆ ಉಳಿಯುವದೆಷ್ಟು ಎಂಬ ಲೆಕ್ಕಾಚಾರಕ್ಕೆ ತೊಡಗುತ್ತದೆ. ಯಶವಂತರು ಕಾದಂಬರಿಯ ಪ್ರಾರಂಭದಲ್ಲಿಯೇ ಸತ್ತುಹೋಗುವದು ಒಂದು ದೃಷ್ಟಿಯಿಂದ ಮೌಲ್ಯ–ಮಾಪನ–ಕ್ರಿಯೆಗೆ

---

[೩] ಪುಟ್ಟಪ್ಪ ಕೆ. ವಿ., ಮಲೆಗಳಲ್ಲಿ ಮದುಮಗಳು, ೧೯೬೭, ಪುಟ.೨೭೭.

ಅನುಕೂಲವಾಗಿದೆ; ಸತ್ಯ, ಅದು ಹಿಡಿಬೂದಿಯೇ ಇರಲಿ, ವಸ್ತು ನಿಷ್ಠವಾಗುತ್ತದೆ. ಈ ಕಾದಂಬರಿಯಲ್ಲಿ ವ್ಯಕ್ತಿತ್ವದ ಮೌಲ್ಯಮಾಪನ ಸಂಪೂರ್ಣವಾಗಿ ಯಶಸ್ವಿಯಾಗಿದೆ ಎಂದು ಹೇಳಲಾಗದಿದ್ದರೂ ಈ ಬಗೆಯ ಸನ್ನಿವೇಶ ರಚನೆ ಕಾದಂಬರಿಕಾರ ಕಾರಂತರ ಸಂವೇದನೆಯ ಪರಿಪಾಕದ ಚಿತ್ರವಾಗಿದೆಯೆಂದು ಒಪ್ಪಿಕೊಳ್ಳಲೇಬೇಕು.' (ವಿಮರ್ಶೆಯ ವಿನಯ ಪು.೪೮–೪೯).

'ಮಲೆಗಳಲ್ಲಿ ಮದುಮಗಳು' ಮತ್ತು 'ಚೋಮ' ಕಾದಂಬರಿಯಲ್ಲಿ ಬರುವ, ನಾಯಿಗುತ್ತಿ ಮತ್ತು ಚೋಮನನ್ನು ತೌಲನಿಕವಾಗಿ ನೋಡುತ್ತಾ ಯು.ಆರ್. ಅನಂತ ಮೂರ್ತಿಯವರು ಹೇಳಿರುವ ಮಾತನ್ನು ಇಲ್ಲಿ ಉಲ್ಲೇಖಿಸಬಹುದು: "ಅವುಗಳನ್ನು ಸದ್ಯಕ್ಕೆ ಕಡೆಗಾಣಿಸಿ, ಗಂಭೀರನಾದ ಚೋಮನನ್ನೂ, ಮೃದು ಹಾಸ್ಯದಲ್ಲಿ ತನ್ನ ಜೀವಂತಿಕೆಯಿಂದ ಹೊಳೆಯುವ ವೈನೋದಿಕ ಪಾತ್ರವಾದ ಗುತ್ತಿಯನ್ನೂ ದಲಿತ ಇರುವ ಸ್ಥಿತಿ ಮತ್ತು ಭವಿಷ್ಯದ ಸಾಧ್ಯತೆಗಳನ್ನು ಒಟ್ಟಾಗಿ ಬಿಂಬಿಸಬಲ್ಲ ಎರಡು ಸಾಹಿತ್ಯ ಮಾದರಿಗಳೆಂದು ತಿಳಿದು ಮುಂದುವರಿಯುವೆ. ಚೋಮ ತಾನು ಹಾಯಲಾರದ ಗೋಡೆಗಳಿಗೆ ತಲೆಚಚ್ಚಿಕೊಂಡು ಸಾಯುತ್ತಾನೆ. ತನ್ನ ಹೋರಾಟದಲ್ಲಿ, ಹಠದಲ್ಲಿ ನಮ್ಮ ಅನುಕಂಪವನ್ನೂ ಗೌರವವನ್ನೂ ಗಳಿಸಿಕೊಳ್ಳುತ್ತಾನೆ. ದುಃಖ ದುಮ್ಮಾನಗಳನ್ನು ಹೇಳಿಕೊಳ್ಳಲು ದುಡಿಯನ್ನು ಉನ್ಮಾದದಲ್ಲಿ ಬಾರಿಸುವ ಚೋಮ ನಮಗೆ ಗೊತ್ತಿರಬಹುದಾದ ಯಾವ ವಿಶಿಷ್ಟ ಹರಿಜನನಿಗಿಂತಲೂ ದೊಡ್ಡವನು. ಅವನ ಗಾತ್ರ ಹೀಗೆ ವಾಸ್ತವಕ್ಕಿಂತ ಸ್ವಲ್ಪ ದೊಡ್ಡದಾದುದು ಎನಿಸುವುದರಿಂದಲೇ ಅವನು ಎಲ್ಲಾ ಕಾಲದ, ದೇಶದ ದಲಿತರನ್ನೂ ಪ್ರತಿನಿಧಿಸಬಲ್ಲ ಕಾವ್ಯ ಪ್ರತಿಮೆಯಾಗಿರುತ್ತಾನೆ. ಇಂಗ್ಲೀಷ್‌ನಲ್ಲಿ 'ಹೈ ಮೈಮಟಿಕ್' (Highmemitic – ಘನ ಅನುಕರಣೆ?) ಎಂಬ ಬಗೆಯ ಚಿತ್ರಣ ಚೋಮನದು. ನಾಯಿಗುತ್ತಿಯಾದರದೋ 'ಲೋ ಮೈಮಟಿಕ್' (Low memitic - ಅನುಕರಣೆ?) ಎಂಬ ಬಗೆಯದು, ಇವನು ತಲೆ ಘಟ್ಟಿಸಿಕೊಳ್ಳುವುದಿಲ್ಲ. ಇವನಿಗೆ ತಾಳಿ ಬಾಳುವ ಒಳದಾರಿಗಳು ಗೊತ್ತು"[೫]. (ಅನಂತಮೂರ್ತಿ ಯು. ಆರ್., 'ಋಜುವಾತು',. ೧೯೮೯).

ಕಾರಂತರ ಕಾದಂಬರಿಗಳು ಹೇಳುವ ತಲ್ಲಣಗಳು ಭಿನ್ನವಾಗುತ್ತದೆ. ಅಂದರೆ ಅದರ ಅರ್ಥವು ಭಿನ್ನವಾಗುತ್ತದೆ. ಕಾರಂತರು ಬದಲಾಗುತ್ತಿರುವ ವೈಚಾರಿಕ ಆಕೃತಿಯನ್ನು ಹೇಳುತ್ತಾರೆ. ವಾಸ್ತವವಾಗಿ ಯಾವುದನ್ನು ನಾವು ಈವತ್ತು ಕಲೋನಿಯಲ್ ಆದ ಸ್ಥಿತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವನ್ನು ಈಗ ವ್ಯಾಖ್ಯಾನಿಸುವುದು ಅತ್ಯಂತ ಕಷ್ಟವಾಗಿದೆ. ಕಲೋನಿಯಲ್ ಎನ್ನುವುದು ಬೇರೆ ಬೇರೆ ರೀತಿಯ ಸಂಕಥನಗಳೂ ಆಗುತ್ತವೆ. ಅದು ಬೇರೆ ವಿಚಾರ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ವಿಚಾರಗಳು ಇವೆ. ಅದನ್ನು ಹೀಗೆ ಹೇಳಬಹುದು – ಒಂದು ಪುಸ್ತಕವು ಪ್ರಕಟವಾದರೆ ಅದರ ನೂರಾರು ಪ್ರತಿಗಳು ಯಾರಿಗೋ ತಲುಪುತ್ತವೆ. ಮತ್ತು ಅವು ಒಂದು ಸಂಸ್ಕೃತಿಯನ್ನು ಹುಟ್ಟುಹಾಕುತ್ತವೆ. ಸಿನಿಮಾ ಕೂಡಾ ಜನರ ಮೇಲೆ ಪ್ರಭಾವವನ್ನು ಬೀರುತ್ತದೆ. ಅದರ ಪರಿಣಾಮವು ಒಂದು ಬಗೆಯದು ಅಲ್ಲ. ಅದರಲ್ಲಿ ಬೇರೆ ಸಂಗತಿಗಳೂ ಜೊತೆಗೆ ಸೇರುತ್ತವೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ.

---

[೪] ಕೀರ್ತಿನಾಥ ಕುರ್ತಕೋಟಿ, ವಿಮರ್ಶೆಯ ವಿನಯ ಪುಟ. ೪೮–೪೯.

[೫] ಅನಂತಮೂರ್ತಿ ಯು. ಆರ್., 'ಋಜುವಾತು',. ೧೯೮೯,

ಯಾವುದೇ ಪುಸ್ತಕಗಳು ಮತ್ತು ಅವುಗಳ ಕುರಿತಾದ ಪ್ರತಿಕ್ರಿಯೆಗಳು ಮೂಲಭೂತವಾಗಿ ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ್ದೂ ಆಗಿದೆ. ಅದು ಅಗತ್ಯವೂ ಆಗುತ್ತದೆ. ಪುಸ್ತಕಗಳು ಮತ್ತು ಅವುಗಳ ಕುರಿತಾದ ಪ್ರತಿಕ್ರಿಯೆಗಳು ಹಾಗೂ ಅದರ ಅನುವಾದಗಳು ಮುಖ್ಯವಾದ ಸೂಚನೆಯನ್ನು ಕೊಡುತ್ತದೆ. ಅನುವಾದಗಳು ಮೂಲವನ್ನು ಅನುಕರಿಸುತ್ತವೆ. ಅನುಕರಣೆ ಎನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅನುಕರಣೆ ಎನ್ನುವುದು ಅತ್ಯಂತ ಸಾಮಾನ್ಯವಾದ ಪದದ ಹಾಗೆ ಕಾಣಿಸುತ್ತದೆ. ಆದರೆ ವಾಸ್ತವವಾಗಿ ಅನುಕರಣೆಯನ್ನು ಮಾಡುವ ಮಗುವು ಕೂಡಾ ಅನೇಕ ಅಂಶವನ್ನು ಕಲಿಯುತ್ತದೆ. ಈ ಅರ್ಥದಲ್ಲಿ ಇದಕ್ಕೆ ಹೆಚ್ಚು ಮಹತ್ವವು ಇದೆ. ಅನುಕರಣೆಯ ಮೂಲಕ ಮಗುವು ಹೆಚ್ಚು ಕಲಿಯುತ್ತದೆ. ಬರಹವೂ ಹೊರಗೆ ಇರುವುದನ್ನು ಅನುಕರಿಸುತ್ತದೆ. ಅದರ ಅಗತ್ಯವೇ ಅದು. ಅನುಕರಣೆಯು ಅತ್ಯಂತ ಮಹತ್ವದ್ದೂ ಆಗುತ್ತದೆ. ಆದರೆ ಅದರಲ್ಲಿ ಕೆಲವು ಆಯ್ಕೆಗಳು ಇರುತ್ತವೆ. ಬರಹವೇ ಉದ್ದೇಶ ಪೂರ್ವಕವಾದ ಒಂದು ಚಟುವಟಿಕೆಯೂ ಆಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಬರಹವು ಒಂದು ಕಾರಣದಿಂದ ಹುಟ್ಟಿರುತ್ತದೆ. ಆದರೆ ಅದರಲ್ಲಿ ವ್ಯಕ್ತಿ ಮತ್ತು ಅವನ ವೈಯಕ್ತಿಕ ಆಯ್ಕೆಗಳು ಹೆಚ್ಚು ಮುಖ್ಯವಾಗುತ್ತದೆ. ಬರಹವು ನಮ್ಮ ಆಸಕ್ತಿಯನ್ನು ಹೇಳುತ್ತದೆ. ಬರೆಯುವುದು ವೈಯಕ್ತಿಕವಾದ ನಿಲುವು ಹೌದು. ಅದರಲ್ಲಿ ನಾವು ಯಾವುದನ್ನು ಹೇಳಬೇಕೆಂದು ಕೊಂಡಿದ್ದೇವೆಯೋ ಅದರ ನಿಲುವು ಬಹಳ ಮುಖ್ಯವಾಗುತ್ತದೆ. ಬರಹವು ಒಂದು ಸನ್ನಿವೇಶ ಮತ್ತು ಅದರ ಸಂಗತಿಯನ್ನು ಹೇಳುತ್ತದೆ. ಬರಹವು ವ್ಯಕ್ತಿಯ ಕಾರಣವನ್ನು ಹೇಳುತ್ತದೆ. ಮತ್ತು ಅದರಲ್ಲಿ ಖಾಸಗಿಯಾದ ನೆಲೆಯೂ ಇರುತ್ತದೆ. ಅದರಲ್ಲಿ ಗುರಿಯೂ ಬಹಳ ಮುಖ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ಅಗತ್ಯಗಳ ಬಹಳ ಪ್ರಶ್ನೆಯು ಅತ್ಯಂತ ಮುಖ್ಯವಾಗುತ್ತದೆ. ಅದರಲ್ಲಿ ಬಹಳ ಮುಖ್ಯವಾಗುವ ಸಂಗತಿಯೆಂದರೆ ವ್ಯಕ್ತಿಯ ಅಭಿರುಚಿಯು ಮುಖ್ಯವಾಗುತ್ತದೆ. ನಾವು ನೋಡಬೇಕಾದ ಅಂಶವೆಂದರೆ ಯಾವುದು ಅವನನ್ನು ಬರೆಯುವ ಹಾಗೆ ಮಾಡುತ್ತದೆ ಎನ್ನುವುದು ಮಾತ್ರವೇ.

ಉದಾಹರಣೆಗೆ ಕಾರಂತರ ಕಾದಂಬರಿಗಳಲ್ಲಿ ಬರುವ ನೀತಿ ಮತ್ತು ಅದರ ಸ್ವರೂಪವು ಒಂದು ಬಗೆಯಲ್ಲಿದ್ದರೆ ಅದರಲ್ಲಿ ಕುವೆಂಪು ಕಾದಂಬರಿಗಳಲ್ಲಿ ಬರುವ ನೀತಿ ಮತ್ತು ಅದರ ಪ್ರಶ್ನೆಯು ಮತ್ತೊಂದು ಬಗೆಯಲ್ಲಿ ಇರುತ್ತದೆ. ಅವುಗಳು ಕಾದಂಬರಿಯಲ್ಲಿ ಸಂಘರ್ಷಕ್ಕೆ ಕಾರಣವಾಗುತ್ತದೆ. ವಾಸ್ತವವಾಗಿ ಸಾಹಿತ್ಯವು ನಿಜವಾಗಿ ಬೇರೆ ಬೇರೆ ಸಂಘರ್ಷವನ್ನು ಹೇಳುತ್ತವೆ. ಕಾದಂಬರಿ ಮತ್ತು ಅದರ ಸ್ವರೂಪದಲ್ಲಿ ಬರುವ ಕೆಲವು ನೀತಿಗಳು ಒಂದು ಬಗೆಯಲ್ಲಿ ಇರುತ್ತವೆ. ಯಾವುದನ್ನು ನೀತಿ ಮತ್ತು ಅದರ ಆಯ್ಕೆಗಳು ಎಂದು ಹೇಳುತ್ತೇವೆಯೋ ಅದರಲ್ಲಿ ವ್ಯಕ್ತಿಯು ನಿಯಂತ್ರಣಕ್ಕೆ ಗುರಿಯಾಗುತ್ತಾನೆ. ಸಾಹಿತ್ಯ ಮತ್ತು ಅದರ ರೂಪವೂ ಒಂದು ಕಾರಣದಿಂದ ಸಂಘರ್ಷವನ್ನು ಹೇಳುತ್ತದೆ. ಕಾದಂಬರಿಗಳಲ್ಲಿ ಬರುವ ನೀತಿ ಮತ್ತು ಅದರ ಸ್ವರೂಪವನ್ನು ನಾವು ಇತ್ಯಾತ್ಮಕವಾಗಿಯೂ ನೋಡಬೇಕಾಗುತ್ತದೆ. ಸಮಾಜ ಮತ್ತು ಚರಿತ್ರೆಗಳು ನೀತಿಯನ್ನು ಮತ್ತು ಅದರ ಸಂಘರ್ಷವನ್ನು ಒಂದು ರೀತಿಯಲ್ಲಿ ಹೇಳುತ್ತವೆ. ಸೋಫೋಕ್ಲಿಸ್ ಮತ್ತು ಅವನಲ್ಲಿ ಬರುವ ನೀತಿಯ ಪ್ರಶ್ನೆಯು ಒಂದು ಬಗೆಯಲ್ಲಿ ಇರುತ್ತದೆ. ಆದರೆ ಷೇಕ್ಸಪಿಯರ್ ತನ್ನ ಕಾಲದ ನೀತಿಯನ್ನು ಹೇಳುತ್ತಿದ್ದಾನೆ. ಎರಡೂ ದುರಂತವೇ ಆದರೂ ಅದರ ಸ್ವರೂಪ

ಮತ್ತು ಅದರ ವಿವರಣೆಗಳು ಬೇರೆಯಾಗುತ್ತವೆ. ಹಾಗೆ ನೋಡುವುದಿದ್ದರೆ ದುರಂತವು ವ್ಯಕ್ತಿ ಮತ್ತು ಅವನ ಮನೋಸ್ಥಿತಿಯನ್ನು ಹೇಳುತ್ತದೆ. ಆದರೆ ಹಾಸ್ಯ ನಾಟಕಗಳು ಮತ್ತೊಂದು ಬಗೆಯವು. ಅದರಲ್ಲಿ ನಗೆಯು ಮಾತ್ರವೇ ಮುಖ್ಯವಾಗುತ್ತದೆ. ನಗೆ ನಾಟಕವೂ ನಗೆಯನ್ನು ಮುಖ್ಯವಾದ ಬುನಾದಿಯನ್ನಾಗಿ ಮಾಡುತ್ತದೆ. ವ್ಯಕ್ತಿ ಮತ್ತು ಅವನ ನಡವಳಿಕೆಗಳು ನಗೆಗೆ ಕಾರಣವಾಗುತ್ತದೆ.

ಕಾರಂತರನ್ನು ಓದುವಾಗ ಅವರು ಯಾಕೆ ಕಾದಂಬರಿಯನ್ನು ಬರೆದರು ಮತ್ತು ಆ ರೀತಿಯಲ್ಲಿ ಹೇಗೆ ಪ್ರತಿಕ್ರಿಯೆಯನ್ನು ನೀಡಿದರು ಎಂದೂ ನೋಡಬೇಕಾಗುತ್ತದೆ. ಅಂದರೆ ಇದರಲ್ಲಿ ಅಭಿವ್ಯಕ್ತಿ ಮತ್ತು ಅದರ ಸ್ವರೂಪವೂ ಇದೆ. ಕಾರಂತರು ಕಾದಂಬರಿಯನ್ನು ಬಳಸಿಕೊಂಡ ವಿಧಾನವೂ ಅತ್ಯಂತ ಮಹತ್ವದ್ದು. ಅವರು ಕಾದಂಬರಿಯನ್ನು ಒಂದು ವಾಹಕವಗಿ ಬಳಸಿಕೊಂಡರು. ಕಾರಂತರಿಗೆ ಅತ್ಯಂತ ಮಹತ್ವದ್ದಾಗಿ ಕಂಡದ್ದು ಈ ಮಾಧ್ಯಮ. ಅಂದರೆ ಇದು ಆ ಕಾಲಕ್ಕೆ ಅಗತ್ಯವೂ ಆಗಿತ್ತು. ಅವರ ಬರಹ ಮತ್ತ ಅದರ ಅಗತ್ಯವನ್ನು ನಾವು ಈ ದೃಷ್ಟಿಯಿಂದ ಆಗಿನ ಅಗತ್ಯವೆಂದು ಹೇಳಿದರು ಅದರ ಹಿಂದೆ ಚಾರಿತ್ರಿಕವಾದ ಒತ್ತಡವೂ ಇದೆ. ಗೋಲ್ಡ್‌ಮನ್ ಈ ಮಾದರಿಗಳನ್ನು ಕಾಲ ಮತ್ತು ಸ್ಥಳವನ್ನು ಆಧರಿಸಿಕೊಂಡು ನೋಡಬೇಕಾಗುತ್ತದೆ ಎಂದು ಹೇಳಿದ್ದು ಇಲ್ಲಿ ಉಲ್ಲೇಖನಿಯವಾಗಿದೆ. ಆದರೆ ಇಲ್ಲಿ ಮತ್ತೆ ಗಮನಿಸಬೇಕಾಗುತ್ತದೆ. ಅಬಿವ್ಯಕ್ತಿ ಮತ್ತು ಅದರ ಸಾಧ್ಯತೆಗಳು ಯಾವಾಗಲೂ ಅದರ ಚಹರೆಯನ್ನು ಭಿನ್ನವಾಗಿಯೂ ನೋಡುತ್ತದೆ. ವಸಾಹತುಕಾಲದಲ್ಲಿ ಕಾದಂಬರಿಯ ಓದು ಎನ್ನುವುದೂ ಕೂಡಾ ಭಿನ್ನವಾದ ಅಗತ್ಯವಾಗಿತ್ತು. ಅದು ಹೊಸನಮೂನೆಯ ಓದು. ಕಾದಂಬರಿ ಮತ್ತು ಅದರ ಓದು ಸಾಮಾನ್ಯವರ್ಗಕ್ಕೆ ಹೆಚ್ಚು ಪ್ರಿಯವೆಂದು ಅನಿಸಿತು. ಯಾರೂ ಕಾದಂಬರಿಯನ್ನು ಓದದೇ ಹೋಗಿದ್ದರೆ ಕಾದಂಬರಿ ಎನ್ನುವ ಪ್ರಕಾರವೇ ಹುಟ್ಟುತ್ತಿರಲಿಲ್ಲ. ಅಭಿವ್ಯಕ್ತಿ ಮತ್ತು ಅದರ ಹಿಂದೆ ಇರುವ ಲೇಖಕನ ಮನೋಭಾವವು ಬೇರೆ ಬೇರೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಮತ್ತು ಅದರಲ್ಲಿ ಲೇಖಕನೂ ಭಾಗವಹಿಸುತ್ತಾನೆ. ಅದು ದ್ವಂದ್ವಾತ್ಮಕವಾದ ಅಗತ್ಯವೂ ಅಗಿರುತ್ತದೆ. ಅಂದರೆ ಕಾದಂಬರಿಯಲ್ಲಿ ಯಾವುದನ್ನು ಹೇಳಬೇಕು ಎನ್ನುವುದೂ ಅವನ ಆಯ್ಕೆ. ಲೇಖಕ ಮತ್ತು ಸಾಮಾಜಿಕ ಆಯ್ಕೆಗಳು ಮಾತ್ರವೇ ಅವನ ನಿಲುವನ್ನು ಹೇಳುತ್ತವೆ.

ಕಾರಂತರು ಬರೆದಿರುವುದು ಮತ್ತು ಜನರಿಗೆ ಕೊಟ್ಟದ್ದು ಬರೀ ಕಾದಂಬರಿಯೆಂದು ಭಾವಿಸಬಾರದು. ಅದರಲ್ಲಿ ಅವರ ನಿಲುವು ಇದೆ. ಮತ್ತು ಅದರ ಕಾದಂಬರಿಗಳಲ್ಲಿ ಪಾತ್ರಗಳು, ನಿರೂಪಣೆ ಮತ್ತು ತಾಂತ್ರಿಕತೆಯ ಮೂಲಕ ಹರಡಿಹೋಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕಾರಂತರು ಕಾದಂಬರಿಯನ್ನು ಬರೆದದ್ದು ಮತ್ತು ಅದನ್ನು ಕನ್ನಡದ ಓದುಗರು ಸ್ವೀಕರಿಸಿದ್ದು ಕನ್ನಡದಲ್ಲಿ ಮಹತ್ವದ ಚಾರಿತ್ರಿಕ ಘಟನೆಯೂ ಹೌದು. ಅದನ್ನು ನಾವು ನಿರಾಕರಿಸಲು ಬರುವುದೂ ಇಲ್ಲ. ಅದು ಓದುಗರ ಚರಿತ್ರೆಯನ್ನು ಹೇಳುತ್ತದೆ. ಮತ್ತು ಆ ಓದುಗರು ಬ್ರಿಟೀಷ್ ಮಾದರಿಯ ಶಿಕ್ಷಣದ ಕ್ರಮದಲ್ಲಿಯೇ ಪಳಗಿದವರು. ಆ ಓದುಗ ವರ್ಗಕ್ಕೆ ಹಳೆಯ ಮಾದರಿಯ ಕತೆಗಳು ಇಷ್ಟವಾಗಿರಿಲ್ಲ. ಅವರಿಗೆ ಬಂಕಿಂಚಂದ್ರರೇ ಇಷ್ಟವಾಗಿರಲಿಲ್ಲ. ಅವರೂ ಗಳಗನಾಥರನ್ನು ಓದಲು ಪ್ರಾರಂಬಿಸಿದರು. ಆದರೆ ಅದರ ಹಿನ್ನಲೆಯಲ್ಲಿ ಸಮಾಜದಲ್ಲಿ ಎಲ್ಲರೂ ಕಾದಂಬರಿಯನ್ನು

ಓದಿದರು ಎಂದು ಭಾವಿಸಬೇಕಾಗಿಯೂ ಇಲ್ಲ. ಕಾದಂಬರಿಯು ಆಗ ಇದ್ದ ಅವಕಾಶಗಳನ್ನು ತುಂಬಿತು. ಅಭಿರುಚಿಯನ್ನು ಬದಲಿಸಿತು. ವಸಾಹತುಕಾಲವು ಒಂದು ಭಿನ್ನವಾದ ಸಂಗತಿಯನ್ನು ನಮಗೆ ಹೇಳಿತು. ಅದರಲ್ಲಿ ಹೊಸದಾದ ಸಾಹಿತ್ಯದ ಸಂಗತಿಗಳು ಬಹಳ ಮುಖ್ಯವಾಗಿದ್ದವು. ಅಭಿವ್ಯಕ್ತಿಯು ಬದಲಾಗುವುದಕ್ಕೂ ಕಾಲಕ್ಕೂ ಒಂದು ನಿರ್ಣಾಯಕವಾದ ಸಂಬಂಧವಿದೆ ಸಾಹಿತ್ಯವನ್ನು ಓದುವ ಮತ್ತು ಗ್ರಹಿಸುವ ವಿಧಾನದಲ್ಲಿಯೂ ವ್ಯಾಪಕವಾದ ಬದಲಾವಣೆಯು ಕಾಣಿಸಿತು. ವ್ಯಕ್ತಿ ಮತ್ತು ಪಠ್ಯದ ಸಂಬಂಧವನ್ನು ಅದು ಬದಲಿಸಿದ್ದೂ ಅಷ್ಟೇ ನಿಜ. ಆಗಿನ ಕೆಲವು ಸಿದ್ಧಾಂತಗಳೂ ಸಾಹಿತ್ಯವನ್ನು ನೋಡುವ ಮತ್ತು ಗ್ರಹಿಸುವ ಕ್ರಮವನ್ನು ಬದಲಿಸಿದವು. ಹಾಗೆ ನೋಡುವುದಿದ್ದರೆ ಯಾವುದೇ ಸಿದ್ಧಾಂತಗಳೂ ನಮ್ಮ ಓದಿನ ಕ್ರಮವನ್ನು ಬದಲಿಸುತ್ತವೆ. ಸಾಹಿತ್ಯ ಮತ್ತು ಅದರ ಸಿದ್ಧಾಂತಗಳು ಅನೇಕವಿವೆ. ಆದರೆ ವಸಾಹತುದೇಶದಲ್ಲಿ ಆಗ ಅತ್ಯಂತ ಹೆಚ್ಚು ಯಾವುದನ್ನು ಓದಿದರೋ ಅಥವಾ ಓದಿಸಿದರೋ ಅದು ಹೆಚ್ಚು ಪ್ರಭಾವಶಾಲಿಯೂ ಆದವು. ರೊಮಾಂಟಿಕ್ ಪಂಥ ಮತ್ತು ಅದರ ಪರಿಣಾಮವು ಭಾರತದಲ್ಲಿ ಒಂದು ವಿಧವಾದ ಓದನ್ನು ರೂಪಿಸಿತು. ಆಗ ದೊರಕಿದ ಕೆಲವು ಪಠ್ಯಗಳು ಅದಕ್ಕೆ ಪೂರಕವಾಗಿದ್ದವು. ಎರಡನೆಯದಾಗಿ ಆಗ ಯಾವುದನ್ನು ಓದಬೇಕು ಮತ್ತು ಹೇಗೆ ಓದಬೇಕು ಎನ್ನುವುದಕ್ಕೆ ನಡೆದ ತರಬೇತಿಗಳ ಪರಿಣಾಮವು ಸಾಮಾನ್ಯವಾದದು ಅಲ್ಲ. ಅಂದರೆ ಆಗಿನ ಕೃತಿಗಳು ನಿರೂಪಿಸಿದ ಕೃತಿಗಳ ತಾತ್ವಿಕತೆಯೇ ಹೆಚ್ಚು ಭಾವುಕವಾದದ್ದೂ ನಿಜ. ಆಗ ಅನೇಕರು ಅನೇಕ ರೀತಿಯ ಕೃತಿಗಳನ್ನು ಓದಿದರು. ಮತ್ತು ಅದರ ಪರಿಣಾಮವನ್ನೂ ಗಮನಿಸಿದರು. ಸಾಹಿತ್ಯ ಮತ್ತು ಅದರ ಕಲಿಕೆಯು ನಮ್ಮಲ್ಲಿ ಬೇರೆ ವಿಧದ ಪ್ರಭಾವವನ್ನು ಬೀರಿತು. ಕಾರಂತರು ಆಗ ಬರೆದ ಅನೇಕ ಕಾದಂಬರಿಗಳು ಒಂದು ಅರ್ಥದಲ್ಲಿ ಅತ್ಯಂತ ಮಹತ್ವದ್ದೂ ಹೌದು. ಅದು ಕಲೋನಿಯಲ್ ಕಾಲದ ಚರಿತ್ರೆಯನ್ನು ಹೇಳುತ್ತವೆ. ಅದರ ಹಿಂದೆ ಇರುವ ತಾತ್ವಿಕತೆಯನ್ನು ನಾವು ಹೇಗೆ ನೋಡಬೇಕು ಎನ್ನವುದೂ ಈಗ ಮಹತ್ವದ ಪ್ರಶ್ನೆಯೇ ಆಗಿದೆ. ವಸಾಹತುಕಾಲದ ಚರಿತ್ರೆಯೆಯೇ ಅತ್ಯಂತ ಸಂಕೀರ್ಣವಾದದ್ದು. ಮತ್ತು ಅದರ ಪರಿಣಾಮವು ಆರ್ಥಿಕತೆಯ ಮೇಲೆ ಆಗಿತ್ತು. ಆದರೆ ಒಂದು ಮಾತನ್ನು ಇಲ್ಲಿ ಹೇಳಬೇಕು: ಕಾರಂತರಿಗೆ ವರ್ಡ್ಸ್‌ವರ್ತನ ಪ್ರಭಾವವಿಲ್ಲ. ಕಾಲ್‌ರಿಜ್ ಅವರಿಗೆ ಹೆಚ್ಚು ಮುಖ್ಯವಾಗಲಿಲ್ಲ. ಅವರಿಗೆ ಹೆಚ್ಚು ಮುಖ್ಯವಾದದ್ದು ಚೋಮ ಮತ್ತು ಸಂಕಪ್ಪಯ್ಯರೇ. ಕಾರಂತರಿಗೆ ಒಂದು ನಿರ್ದಿಷ್ಟವಾದ ಗುರಿಯು ಇರುವ ಹಾಗೆ ಕಾಣುತ್ತದೆ. ಇದೇ ಮಾತು ನಮ್ಮ ರಾವ್‌ಬಹಾದ್ದುರಿಗೆ ಅನ್ವಯವಾಗುತ್ತದೆ. ಪಡದಯ್ಯನ ಕೌರ್ಯವು ಅನ್ಯರಿಗಿಂತ ಕಡಿಮೆಯದು ಅಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಆಗಿನ ವಾಸ್ತವತವಾದಿ ಲೇಖಕರ ಗಮನವು ಬೇರೆಯಿತ್ತು. ಮತ್ತು ಅದರಲ್ಲಿ ಹಿಡುವಳಿ,ಆಚಾರ, ಜೀವನ ಶ್ರದ್ಧೆಯ ಪ್ರಶ್ನೆಗಳೂ ಇದ್ದವು.

ಆಗ ಇದ್ದ ಕಾಲವೂ ಅದರ ಪರಿಣಾಮವೂ ಮತ್ತೆ ಬೇರೆ ವಿಧವಾಗಿದ್ದವು. ಅಂದರೆ ಲೇಖಕ ಮತ್ತು ಅವನು ಕೊಟ್ಟ ಸೂಚನೆಗಳು ಮತ್ತು ಅವುಗಳು ಪ್ರಾರಂಬಿಸಿದ ಸಂಕಥನಗಳು ಒಂದು ವಿಧವಾದದ್ದೂ ಅಲ್ಲ. ಸೂಚಕರು ಬದಲಾಗಿದ್ದಾರೆ. ಸೂಚನೆಗಳು ಬದಲಾಗಿವೆ. ಮತ್ತು ಸೂಚಿತರೂ ಬದಲಾಗಿದ್ದಾರೆ. ಅವರು ಹಿಂದಿನ ಕಾಲದ ಓದುಗರು ಅಲ್ಲ. ಆದ್ದರಿಂದ ಆಗ ಪ್ರಾರಂಭವಾದ ಸಂಕಥನಗಳು ಒಂದು ವಿಧವಾಗಿವೆ. ಸೂಚಕರಾದ ಕಾರಂತರು ಸೂಚಿತರಾದ

ನಮಗೆ ತಮ್ಮ ಕಾದಂಬರಿಯೆನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ಮತ್ತು ಅದರಲ್ಲಿ ಅರ್ಥವಿದೆ. ಆ ಅರ್ಥವನ್ನು ಅವರ ಕಾಲವನ್ನು ನೋಡಿಕೊಂಡು ಗಮನಿಸುತ್ತೇವೆ. ನಾವು ಎಲ್ಲರೂ ನಮಗೆ ಬೇಕಾದ ಸಂಗತಿಯನ್ನು ಮತ್ತು ನಾವು ಹೇಳಬೇಕಾದ್ದದನ್ನು ಮಾತಿನಲ್ಲಿ ಹೇಳುತ್ತೇವೆ. ಆದರೆ ಅದನ್ನು ಹೇಳುವುದು ನಮ್ಮ ಉದ್ದೇಶಕ್ಕೆ ಅನುಸಾರವಾಗಿ ಮಾತ್ರವೇ. ನಮಗೆ ಗೊತ್ತಿರುವ ಸತ್ಯವನ್ನು ನಾವು ನಮಗೆ ಬೇಕಾದ ರೀತಿಯಲ್ಲಿ ಹೇಳುತ್ತೇವೆ. ಅಂದರೆ ಅದನ್ನು ನಾವು ರೂಪುಗೊಳಿಸುತ್ತೇವೆ. ಅದೇ ರೀತಿಯಲ್ಲಿ ಲೇಖಕನೂ ತನಗೆ ಬೇಕಾದ್ದನ್ನು ನಮಗೆ ಕೊಡುತ್ತಾನೆ. ಕಾರಂತರು ಅವರಿಗೆ ಯಾವುದು ಸರಿಯೆಂದು ಅನಿಸಿದೆಯೋ ಅಥವಾ ಯಾವುದನ್ನು ಹೇಳಬಹುದು ಎಂದು ಅನಿಸಿದೆಯೋ ಅದನ್ನು ಮಾತ್ರವೇ ಹೇಳಿದ್ದಾರೆ. ಅದು ಅವರ ದೃಷ್ಟಿಕೋನ. ನಮಗೆ ಅವರು ಹೇಳಿದ ಕಾದಂಬರಿಗಳು ಸರಿಯಾಗಿದೆಯೇ ಅಥವಾ ಇಲ್ಲವೇ ಎಂದು ಹೇಳಲು ಅವಕಾಶವಿದೆ. ಕೃತಿಗೆ ಮತ್ತು ಅದರ ಅವಕಾಶವು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಮತ್ತು ಅದರ ಅರ್ಥವೂ ಭಿನ್ನವಾಗಿದೆ. ಕೃತಿಯೆನ್ನುವುದೂ ಒಂದು ದೃಷ್ಟಿಯಿಂದ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಸಂಯೋಜನೆ. ಅದು ವ್ಯಕ್ತಿಯೊಬ್ಬನ ದರ್ಶನವೆಂದು ಕುವೆಂಪು ಹೇಳುತ್ತಾರೆ. ಈ ದರ್ಶನವು ವ್ಯಕ್ತಿ ಮತ್ತು ಅವನ ನೋಟವನ್ನು ಮತ್ತು ಅದರ ಹಿಂದೆ ಇರುವ ಸತ್ಯವನ್ನು ಹೇಳುತ್ತದೆ. ಅದು ಅವನ ತಾತ್ವಿಕತೆಯ ಪ್ರಶ್ನೆಯೂ ಹೌದು. ಆದರೆ ಇದೇ ಕಾರಣಕ್ಕೆ ನಮಗೆ ಸಾಹಿತ್ಯವನ್ನು ಗ್ರಹಿಸಲು ಮತ್ತು ಅದರ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ತಾತ್ವಿಕತೆಯೂ ಬೇಕಾಗುತ್ತದೆ. ವಿಮರ್ಶೆಯೂ ಒಂದು ತಾತ್ವಿಕವಾದ ಉದ್ದೇಶವಾಗಿದೆ. ಕೃತಿಗೆ ಯಾವ ರೀತಿಯ ನಿಯಮವು ಇದೆಯೋ ಅದೇ ರೀತಿಯಲ್ಲಿ ವಿಮರ್ಶೆಗೂ ಒಂದು ಬಗೆಯಲ್ಲಿ ಉದ್ಧೇಶವಿರುತ್ತದೆ. ವಿಮರ್ಶೆಗೆ ಉದ್ಧೇಶವಿದೆ. ಮತ್ತು ಆ ಉದ್ಧೇಶವೇ ನಿಯಮವನ್ನು ಹೇಳುತ್ತವೆ. ನಿಯಮರಹಿತವಾದ ಉದ್ಧೇಶವು ಇರುವುದೂ ಅಸಾಧ್ಯ. ಸಾಹಿತ್ಯದಲ್ಲಿ ಬರುವ ಸಂಕೇತಶಾಸ್ತ್ರವನ್ನು ನೋಡುವುದೂ ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಆದರೆ ನವ್ಯ ವಿಮರ್ಶಕರು ಸಂಕೇತವನ್ನು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾದ ನೆಲೆಗಳಿಂದ.

ಕಾರಂತರು ಯಾವುದನ್ನು ಹೇಗೆ ಹೇಳಿದ್ದಾರೆ ಎನ್ನವುದನ್ನು ಓದುವುದು ಮಾತ್ರವೇ ಅಲ್ಲ: ಅವರು ಹೇಳಿದ್ದನ್ನು ನಾವು ನಿರ್ದಿಷ್ಟವಾದ ಕಾಲದ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅಂದರೆ ಅವರು ನಿರ್ದಿಷ್ಟವಾದ ಒಂದು ಚರಿತ್ರೆಯಲ್ಲಿ ನಿಂತುಕೊಂಡು ಚೋಮನ ಪ್ರಶ್ನೆಯನ್ನು ಎತ್ತಿಕೊಂಡರು. ಅವರ ಪ್ರಜ್ಞೆಯೇ ಅವರ ನುಡಿಯನ್ನು ನಿಯಂತ್ರಿಸಿದೆ. ಮತ್ತು ಅದರಲ್ಲಿ ನಿಜವಾದ ಅರ್ಥವೂ ಇದೆ. ಅದು ಚೆನ್ನಾಗಿದೆಯೇ ಇಲ್ಲವೇ ಎಂದು ಹೇಳುವಾಗ ಅನೇಕರು ಅದರ ಸ್ವರೂಪವನ್ನು ಅದರ ನಿಲುವನ್ನು ಒಂದು ದೃಷ್ಟಿಕೋನದಲ್ಲಿ ಮಾತ್ರವೇ ಹೇಳುತ್ತಾರೆ. ಅಂದರೆ ಅವರ ನಿಲುವನ್ನು ನಾವು ಮುಖ್ಯವಾಗಿ ಪಠ್ಯವನ್ನು ಮಾತ್ರವೇ ಆಧರಿಸುತ್ತಾರೆ. ಆ ಆಧಾರವು ಮಾತ್ರವೇ ನಮಗೆ ಸಾಕಾಗುವುದೂ ಇಲ್ಲ. ಅದರಲ್ಲಿ ವ್ಯತ್ಯಾಸವಿದೆ. ಅವರು ಹೇಳುವುದನ್ನು ಅವರು ಆಧರಿಸಿದ ಸ್ಥಳವನ್ನು ನೋಡಿಕೊಂಡು ಮಾತಾಡಬೇಕಾಗುತ್ತದೆ. ಮತ್ತು ಅದರಲ್ಲಿ ಒಂದು ಕಾಲದ ಜೀವನ ಮತ್ತು ಅದರ ಪರಿವರ್ತನೆಯ ರೂಪಗಳೂ ಇವೆ. ವಾಸ್ತವವಾದ ಒಂದು ಪ್ರಶ್ನೆಯನ್ನು ಹೇಗೆ ಎತ್ತಲು ಸಾಧ್ಯವೋ ಅದೇ ರೀತಿಯಲ್ಲಿ ಕಾದಂಬರಿಯು

ಎತ್ತುತ್ತದೆ. ಆಗ ದಕ್ಷಿಣಕನ್ನಡದಲ್ಲಿ ಕಾರ್ನಾಡ ಸದಾಶಿವ ರಾಯರು ಕೆಲಸವನ್ನು ಮಾಡುತ್ತಿದ್ದರು. ಮತ್ತೊಂದು ಕಡೆಗೆ ಕುದ್ಮಲ್ ರಂಗರಾಯರು ಕೆಲಸವನ್ನು ಮಾಡುತ್ತಿದ್ದರು. ಬೇರೆ ಕಡೆಗೆ ಗಾಂಧಿಯವರ ನಿಲುವುಗಳೂ ಇದ್ದವು. ಹಾಗೂ ವಿನೋಬಾಭಾವೆಯರು ಭೂದಾನವನ್ನು ಹೇಳುತ್ತಿದ್ದರು. ಅಂದರೆ ಆಗಿನ ಅನೇಕ ಚರ್ಚೆಗಳು ಅಸ್ಪೃಶ್ಯರ ಸಮಸ್ಯೆಯನ್ನು ಬೇರೆ ರೀತಿಯಲ್ಲಿ ಗ್ರಹಿಸುವ ಪ್ರಯತ್ನಗಳು ಆಗುತ್ತಿದ್ದವು. ಕಾರಂತರ ಅನುಭವವೂ ಇದರ ಜೊತೆಗೆ ಇತ್ತು ಅಂದರೆ ವಾದವು ಇಷ್ಟೆ: ಯಾವುದೇ ಕಾದಂಬರಿಕಾರರು ಹೇಳುವ ವಿಷಯಗಳು ಬರೀ ಒಂದು ನೀತಿಯನ್ನು ಮಾತ್ರವೇ ಹೇಳುವುದಿಲ್ಲ. ಅದು ಅನೇಕವನ್ನು ಹೇಳುತ್ತವೆ. ಕಾರಂತರ ಭಾಷೆ ಮತ್ತು ಅದರ ಚಹರೆಗಳು ಕೂಡಾ ಆಗಿನ ಸಂಗತಿಗಳನ್ನು ಹೇಳುತ್ತವೆ. ಸಾಹಿತ್ಯ ಮತ್ತು ಅದರ ಸಂಹಿತೆಗಳು ಆಗ ಒಂದು ರೀತಿಯಲ್ಲಿ ಇದ್ದವು. ಮತ್ತು ಅದರ ಅರ್ಥಗಳು ಬೇರೆಯಾಗಿದ್ದವು. ಇಲ್ಲಿ ನೋಡಬೇಕಾದ ಮತ್ತೊಂದು ಅಂಶವಿದೆ. ಕಾರಂತರು ಆಗಿನ ವಾಸ್ತವವನ್ನು ಹೇಳುತ್ತಾರೆ. ಆಗ ಇದ್ದ ಮತ್ತೊಂದು ಮನೋಭಾವವನ್ನು ಕಾರಂತರು ಹೇಳುತ್ತಾರೆ. ಕಾದಂಬರಿಯಲ್ಲಿ ದನ ಮತ್ತು ಅದರ ಪ್ರಶ್ನೆಗಳನ್ನು, ಅಸ್ಪೃಶ್ಯರ ಸಮಸ್ಯೆಗಳನ್ನು ಸಮಾಜವು ಹೇಗೆ ನೋಡಿದೆ ಎಂದು ಕಾರಂತರು ಹೇಳುತ್ತಾರೆ. ಅದು ಸರಿಯೇ ಅಥವಾ ಅದು ನಿಜವಾಗಿ ಏನು ಮಾಡುತ್ತದೆ ಎನ್ನವುದು ಅವರ ಆಸಕ್ತಿಯ ವಿಷಯವಾಗಿದೆ. ಆಗ ಅಸ್ಪೃಶರ ಸಮಸ್ಯೆಯನ್ನು ಹೇಗೆ ನೋಡಲಾಗಿತ್ತು ಎನ್ನುವುನ್ನು ಮಾತ್ರವೇ ಅವರು ಹೇಳುತ್ತಾರೆ.ಅದರಲ್ಲಿ ಮೇಲು ಜಾತಿಯವರ ಮನೋಸ್ಥಿತಿಯ ಪ್ರಶ್ನೆಯು ಇದೆ. ತಾತ್ವಿಕ ಸಂಘರ್ಷದ ಪ್ರಶ್ನೆಯೂ ಇದೆ. ಚರಿತ್ರೆಯ ಪ್ರಶ್ನೆಯೂ ಇದೆ.ಹೀಗಾಗಿ ಕಾರಂತರು ಈ ಕಾದಂಬರಿಯಲ್ಲಿ ಅತ್ಯಂತ ಮಹತ್ವದ ಪ್ರಶ್ನೆಯನ್ನು ಹೇಳುತ್ತಿದ್ದಾರೆ.ಅದರಲ್ಲಿ ನಿರ್ದಿಷ್ಟವಾದ ಉದ್ದೇಶವೂ ಇದೆ. ಗಂಭೀರವಾದ ಪ್ರಶ್ನೆಗಳು ನಿಜವಾಗಿಯೂ ಅನೇಕ ಸಮಸ್ಯೆಗಳನ್ನು ಎತ್ತುತ್ತವೆ. ದಲಿತರ ಪ್ರಶ್ನೆ, ಭೂಮಿಯ ಪ್ರಶ್ನೆ. ಜಾತಿಯ ಪ್ರಶ್ನೆಗಳನ್ನು ಆಗಿನ ಲೇಖಕರು ವಿವರಿಸಿದ ಕ್ರಮವು ಅತ್ಯಂತ ಕುತೂಹಲಕಾರಿಯಾಗಿದೆ. ಅದು ಸಾಹಿತ್ಯ ಮತ್ತು ಸಾಮಾಜಿಕ ಜೀವನವನ್ನು ನೋಡಿದ ಕ್ರಮಗಳು ಭಿನ್ನವಾಗಿವೆ.

ಸಮಾಜ ಮತ್ತು ಅದರ ಭಾಷಿಕ ಕ್ರಮವನ್ನು ಆಗ ಗ್ರಹಿಸದ ಕ್ರಮವೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಸಮಾಜ ಮತ್ತು ಅದರ ಭಾಷೆಯನ್ನು ಆಗ ಅನೇಕರು ಬೇರೆ ರೀತಿಯಲ್ಲಿಯೂ ಎತ್ತಿಕೊಂಡರು. ಸಾಹಿತ್ಯದ ಭಾಷೆಯು ಕೆಲವು ವರ್ಗಾಂತರವನ್ನು ಮಾಡುವುದು ನಿಜ. ಆದರೆ ಅದರ ಮಾರ್ಗಾಂತರವನ್ನು ಮತ್ತು ಅದರ ಸ್ವರೂಪವನ್ನು ಬರೀ ಸಾಹಿತ್ಯದಲ್ಲಿ ಮಾತ್ರವೇ ನೋಡಲು ಸಾಧ್ಯವಾಗುವುದೂ ಇಲ್ಲ. ಅದು ಸಮಾಜವನ್ನು ಹೇಳುತ್ತದೆ. ಸಮಾಜದಲ್ಲಿ ಅಸ್ತಿತ್ವದಲ್ಲಿ ಇಲ್ಲದ ಯಾವುದೇ ಭಾಷೆಯನ್ನು ಒಬ್ಬ ಲೇಖಕ ಬಳಸಲಾರ. ಭಾಷೆಗೆ ಕೆಲವು ಪ್ರಾಥಮಿಕವಾದ ನಿಯಮವು ಇರುತ್ತದೆ. ಮತ್ತು ಆ ನಿಯಮವನ್ನೇ ಲೇಖಕನು ಬಳಸುತ್ತಾನೆ. ಬೇರೆ ಬೇರೆ ಕಾಲದ ಅನೇಕ ಸಂಗತಿಗಳನ್ನು ಅವನು ಹೇಳುತ್ತಾನೆ. ಲೇಖಕ ಪರಿಶೀಲಿಸುತ್ತಾನೆ. ಮತ್ತು ಅನ್ವಯವನ್ನೂ ಮಾಡುತ್ತಾನೆ. ಅನ್ವಯದಲ್ಲಿಯೇ ಅವನ ಜ್ಞಾನವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಅನ್ವಯವು ಎಷ್ಟರ ಮಟ್ಟಿಗೆ ಸತ್ಯದ ಹತ್ತಿರವಿದೆ ಮತ್ತು ಅದರ ಅನ್ವಯವು ಹೇಗಿದೆ ಎನ್ನುವುದೂ ಬಹಳ ಮುಖ್ಯವಾಗುತ್ತದೆ.

ಸಾಮಾಜಿಕ ಜೀವನ ಮತ್ತು ಅದರ ಆಳವನ್ನು ಲೇಖಕ ಗಮನಿಸದಷ್ಟು ಅವನ ಬರಹವು ಹೆಚ್ಚು ಆಪ್ತವಾಗುತ್ತದೆ. ಸತ್ಯವನ್ನು ಅವನು ನಿರಾಕರಿಸಿದರೆ ಅವನ ಬರಹವು ತೆಳುವಾಗುತ್ತದೆ. ಒಬ್ಬ ಲೇಖಕ ವೀಕ್ಷಕ. ಅವನು ನೋಡುತ್ತಾನೆ. ಮತ್ತು ಕೆಲವನ್ನು ಅನುಭವಿಸುತ್ತಾನೆ. ಅನುಭವಿಸಿದ್ದನ್ನು ಅಥವಾ ವೀಕ್ಷಿಸಿದ್ದನ್ನು ಅನ್ವಯಿಸುತ್ತಾನೆ. ಅನ್ವಯವು ಎರಡು ವಿಷಯಗಳ ನಡುವೆಯೇ ನಡೆಯುತ್ತದೆ. ಕಾರಂತರು ಚೋಮನನ್ನು ನೋಡಿದ್ದು ಮತ್ತು ಅವನ ಸ್ಥಿತಿಗತಿಯನ್ನು ಗಮನಿಸಿದ್ದು ಸುಳ್ಳು ಎಂದು ಹೇಲಲು ಬರುವುದೇ ಇಲ್ಲ. ಅದರಲ್ಲಿ ಅರ್ಥವಿದೆ. ಆದರೆ ಅದರಲ್ಲಿ ಕಾರಂತರ ದೃಷ್ಟಿಕೋನವೂ ಸೇರಿಕೊಂಡಿದೆ.ವಾಸ್ತವವಾಗಿ ವಿಶ್ಲೇಷಣೆ ಮತ್ತು ಅದರ ಹಿಂದೆ ಮನಸ್ಸಿನ ವಿವರಗಳು ಕಾರಂತರಿಗೆ ಬಹಳ ಮುಖ್ಯವಾಗುತ್ತದೆ. ಕಾರಂತರು ನೋಡಿದ ಚೋಮನಿಗೂ ಕಾದಂಬರಿಯಲ್ಲಿ ಬರುವ ಚೋಮನಿಗೂ ವ್ಯತ್ಯಾಸವಿದೆ. ಅಥವಾ ಇರಬಹುದು. ಚೋಮನೂ ಒಂದು ಮಾದರಿ. ಆಗ ನಡೆಯುತ್ತಿದ್ದ ಮತಾಂತರವನ್ನು ಒಪ್ಪವುದಿಲ್ಲವೆಂದರೆ ಅವನು ಅನ್ಯವನ್ನು ಸ್ವೀಕರಿಸುತ್ತಿಲ್ಲ. ಅವನಿಗೆ ಅಸ್ಪೃಶ್ಯತೆಯ ನೋವು ಇದೆ. ಭೂಮಿಯ ಸಮಸ್ಯೆಯೂ ಇದೆ. ಚೋಮನಿಗೆ ಚೋಮನೇ ಮಾದರಿಯಾಗಿದ್ದಾನೆ. ಕಾರಂತರು ಸಂಕಪ್ಪಯ್ಯ ಭೂಮಿಯನ್ನು ಕೊಡಲಿಲ್ಲವೆಂಬ ಸತ್ಯವನ್ನು ಹೇಳುತ್ತಿದ್ದಾರೆ. ಅವರ ಮಟ್ಟಿಗೆ ಅದು ಸಮಾಜದ ವಾಸ್ತವ. ಗ್ರಾಮಾಯಣದಲ್ಲಿ ದಾದನದೂ ಒಂದು ವಾಸ್ತವ. ಆದರೆ ಅದರ ಸಮಸ್ಯೆಯು ಭಿನ್ನ. ಕಾರಂತರೇ ಆಗಲಿ, ಮಿರ್ಜಿಯವರೇ ಆಗಲಿ ಇರುವ ವ್ಯವಸ್ಥೆಯು ಸರಿಯಿದೆ ಎಂದು ಹೇಳುತ್ತಿಲ್ಲ. ಒಂದು ಪ್ರಗತಿಪರತೆಯ ಅಗತ್ಯವನ್ನು ಹೇಳುತ್ತಿದ್ದಾರೆ. ಇದರ ಮತ್ತೊಂದು ರೂಪವನ್ನು ನಾವು ನೋಡಬೇಕು: ಸಂಕಪ್ಪಯ್ಯನು ತನಗೆ ಬೇಕಾದುದನ್ನು ಹೇಳುತ್ತಿದ್ದಾನೆ. ಅವನ ಪ್ರಜ್ಞೆಯು ಒಂದು ಬಗೆಯಲ್ಲಿ ಇದೆ. ಚೋಮನದು ಆಳಿಸಿಕೊಂಡವರ ಪ್ರಾತಿನಿಧಿಕವಾದ ಪ್ರಜ್ಞೆ. ಎರಡೂ ವಾಸ್ತವವಾಗಿ ಮುಖಾಮುಖಿಯಾಗುತ್ತವೆ. ಚೋಮನನ್ನು ಆಳುವವರು ಒಬ್ಬರು ಮಾತ್ರವೇ ಅಲ್ಲ. ಸಂಕಪ್ಪಯ್ಯ, ಅವನ ತಾಯಿ, ಕಲ್ಕುಡ, ಕಲ್ಲುರ್ಟಿಯರೂ ಆಳುತ್ತಾರೆ. ಕಾಫಿತೋಟದವರೂ ಅವನನ್ನು ಅವನ ಸಾಲವನ್ನು ಮರೆಯುವುದೂ ಇಲ್ಲ. ಕಾಸು ಕೊಡು ಇಲ್ಲವಾದರೆ ನಿನ್ನ ಮಕ್ಕಳನ್ನು ಕೂಲಿಗೆ ಕಳಿಸು ಎನ್ನುವುದೂ ಇಲ್ಲಿ ಮುಖ್ಯವಾದ ಪ್ರಶ್ನೆ. ಸಾಲವೂ ಹೇಗೆ ವ್ಯಕ್ತಿಯನ್ನು ನಿಯಂತ್ರಸುತ್ತದೆ ಎನ್ನುವುದನ್ನು ಕಾದಂಬರಿಯು ಹೇಳುತ್ತದೆ. ಇದು ಆಗಿನ ಚರಿತ್ರೆಯನ್ನು ಹೇಳುತ್ತದೆ. ಮನ್ವೇಲನ ಕೇಡಿನ ಸ್ವಭಾವವೂ ಗಮನಸೆಳೆಯುವ ಅಂಶವಾಗಿದೆ. ಮತ್ತು ಇದರಲ್ಲಿ ಅಡಕವಾಗಿರುವ ನಿಲುವನ್ನು ನಾವು ನಮಗೆ ಬೇಕಾದಂತೆ ಹೇಳುವ ಅವಕಾಶವೂ ಇಲ್ಲ. ಅದರಂತೆ ಇಲ್ಲಿ ಬೇರೆ ಬೇರೆ ಸಮಾಜದ ರಚನೆಗಳು ಇವೆ. ಒಂದು ಕಡೆಯಿಂದ ಸಂಕಪ್ಪಯ್ಯ ಮತ್ತು ಅವನ ಕುಟುಂಬ. ಮತ್ತೊಂದು ಕಡೆಯಿಂದ ಚೋಮ. ಬೇರೆ ಕಡೆಯಿಂದ ಕಿರಿಸ್ತಾನರು. ಆ ಕಾಲದ ರಚನೆಗಳನ್ನು ಮತ್ತು ಆಂತರಿಕ ವೈರುದ್ಧ್ಯವನ್ನು ಹೇಳುತ್ತದೆ. ಇದು ಚಾರಿತ್ರಿಕವಾದ ಸತ್ಯವೂ ಹೌದು. ಆ ರಚನೆಗಳು ಮನುಷ್ಯ ಮತ್ತು ಅವನ ತಲ್ಲಣವನ್ನು ಹೇಳುತ್ತದೆ. ಅದರ ಸಂವೇದನೆಗಳು ಭಿನ್ನವಾಗುತ್ತವೆ.

ಕುತೂಹಲದಾಯಕವಾದ ಸಂಗತಿಯೆಂದರೆ ಈ ಸಮಾಜವೂ ಬದಲಾಗುತ್ತದೆ. ಜಾತಿ ಮತ್ತು ಅದರ ರಚನೆಗಳಲ್ಲಿ ಬೇರೆಯಾಗುತ್ತವೆ.ಮನುಷ್ಯರ ಕೆಲವು ಲಕ್ಷಣಗಳನ್ನು ಮಾತ್ರವೇ

ಕಾರಂತರು ಹೇಳುತ್ತಾರೆ. ಒಂದು ರಚನೆಯು ಮತ್ತೊಂದು ರಚನೆಯ ಜೊತೆಗೆ ಸಂಬಂಧವನ್ನು ಇಟ್ಟುಕೊಳ್ಳುತ್ತದೆ. ಯಾವುದು ಆಭಿವ್ಯಕ್ತಿಯಾಗುತ್ತದೆ ಮತ್ತು ಅದರ ಹಿಂದೆ ಏನು ಇದೆ ಎನ್ನುವುದೂ ಇಲ್ಲಿ ಮುಖ್ಯವಾದ ಪ್ರಶ್ನೆಯೂ ಆಗಿದೆ. ಕಾರಂತರು ಯಾವುದನ್ನು ಹೇಳಿದ್ದಾರೆ ಮತ್ತು ಅವರು ಅಭಿವ್ಯಕ್ತಿ ಮಾಡಿದ ವಸ್ತುವು ಯಾವುದು ಎನ್ನುವುದು ಮಾತ್ರವೇ ಇಲ್ಲಿ ಮುಖ್ಯ. ಕಾರಂತರು ಯಾವುದನ್ನು ಹೆಚ್ಚು ಕೇಂದ್ರೀಕರಿಸುತ್ತಾರೆ. ಅಂದರೆ ಅವರ ಗಮನವು ಯಾವುದರ ಕುರಿತಾಗಿ ಇದೆ ಎನ್ನುವುದೂ ಇಲ್ಲಿ ಅಧ್ಯಯನ ಮಾಡಬೇಕಾದ ಅಗತ್ಯವೂ ಇದೆ. ಅದನ್ನು ಕಾರಂತರು ಆಯ್ಕೆಯನ್ನು ಮಾಡಿಕೊಂಡಿದ್ದಾರೆ ಮತ್ತು ಅದನ್ನು ನಮಗೆ ಕಾದಂಬರಿಯ ಮೂಲಕ ದಾಟಿಸಿದ್ದಾರೆ. ದಿನ ನಿತ್ಯವು ನಡೆಯುವ ಅನೇಕ ಸಂಗತಿಗಳು ಕಾರಂತರಿಗೆ ಮುಖ್ಯವಾಗಿದೆ. ವಾಸ್ತವವಾಗಿ ಸಾಹಿತ್ಯವೂ ಒಂದು ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಸಾಹಿತ್ಯವು ಭಾಷೆಯ ಮೂಲಕ ವ್ಯಕ್ತವಾಗುತ್ತವೆ. ಸಂಗೀತದಲ್ಲಿಯೂ. ಭಾಷೆಯು ಇರುತ್ತದೆ. ಮಾನವಿಕ ಅಧ್ಯಯನದಲ್ಲಿಯೂ ಭಾಷೆಯು ಅತ್ಯಂತ ಮಹತ್ವದ್ದು. ಆದರೆ ಲೆವಿಸ್ಟ್ರಾಸ್ ಸಂಗೀತದ ಭಾಷೆಯು ಯಾವುದೇ ಒಬ್ಬನ ಮಾತುಕತೆಯನ್ನು ಹೇಳುವುದಿಲ್ಲವೆಂದು ಅಭಿಪ್ರಾಯ ಪಡುತ್ತಾನೆ. ಸಂಗೀತದಲ್ಲಿಯೂ ಹಾಡುವವನಿಗೆ ಅನುಸಾರವಾಗಿಯೇ ಬೇರೆಯಾಗುತ್ತದೆ. ದಿನನತ್ಯದ ಮಾತು ಅದರ ಸತ್ಯವು ಒಂದು ರೀತಿಯಲ್ಲಿ ಇರುತ್ತದೆ. ಸಾಹಿತ್ಯ ಮತ್ತು ಅದು ಸೂಚಿಸುವ ಚಿಹ್ನಗಳು ಒಂದು ಮಾದರಿಯಲ್ಲಿ ಇರುತ್ತವೆ. ಅದರ ಸಂಕೇತ ಮತ್ತು ಅದರ ಅರ್ಥಗಳು ಸಂಗೀತದಂತೆ ಅಲ್ಲವೆನ್ನುವುದು ಎಲ್ಲರಿಗೂ ತಿಳಿದಿದೆ. ಸಾಹಿತ್ಯದಲ್ಲಿ ಭಾಷೆ ಮತ್ತು ಅದರ ಸಂಕೇತಗಳು ಹಾಗೂ ಅದರ ಅರ್ಥಗಳು ಬೇರೆಯಾಗುತ್ತವೆ. ಹಾಗೆಂದು ಸಾಹಿತ್ಯ ಮತ್ತು ಅದರ ಭಾಷೆಯನ್ನು ನಾವು ಅನಿರ್ದಿಷ್ಟವೆಂದು ಹೇಳಲಾಗುವುದೂ ಇಲ್ಲ. ಕಾವ್ಯದ ಭಾಷೆಯು ಒಂದು ಅನಿರ್ದಿಷ್ಟ ಅರ್ಥದ ವಲಯವೆಂದು ಹೇಳಬೇಕಾಗಿಯೂ ಇಲ್ಲ. ಸಂಕೇತ ಮತ್ತು ಅದರ ಸ್ವರೂಪವನ್ನು ಈಗ ನಾವು ಈ ಅರ್ಥದಲ್ಲಿ ಬೇರೆ ಮಾಡಬೇಕಾಗಿಯೂ ಇಲ್ಲ. ಅದು ಸಂಕೇತವಾಗಿದೆ ಎಂದರೆ ಅದರಲ್ಲಿ ಅನಿರ್ದಿಷ್ಟವಾದ ಅಸ್ಪಷ್ಟವಾದ ಅರ್ಥವು ಇದೆ ಎಂದು ತಿಳಿಯಬೇಕಾಗಿಯೂ ಇಲ್ಲ. ಬಯಕೆ ಮತ್ತು ಭಾಷೆಗೆ ಸಂಬಂಧವಿದೆ.

ಕೃತಿಯನ್ನು ನೋಡಿದರೆ ಕೃತಿಯ ಹಿಂದೆ ಕೆಲವು ಭಾವನೆಗಳು ಇವೆ ಎಂದೂ ಹೇಳಬೇಕಾಗುತ್ತದೆ. ಅದು ಬಯಕೆಯನ್ನು ಸೂಚಿಸುತ್ತಾ ಬಂದಿದೆ. ಬಯಕೆ ಮತ್ತು ಕೃತಿಗಳ ನಡುವೆ ಇರುವ ಸಂಬಂಧವನ್ನು ಈ ದೃಷ್ಟಿಯಿಂದ ಗಂಭೀರವಾಗಿಯೇ ನೋಡಬೇಕಾಗುತ್ತದೆ. ಸಾಹಿತ್ಯ ಮತ್ತು ಅದರ ಚಹರೆಗಳು ಬೇರೆಯಾಗುವುದು ಅದರ ಕಾರ್ಯದ ವಿಧಾನದಿಂದ.ಅದರ ಸ್ವರೂಪವು ಅದರ ಉದ್ದೇಶವನ್ನು ಹೇಳುತ್ತದೆ. ಅದರ ಉದ್ದೇಶವು ಯಾವ ರೀತಿಯಲ್ಲಿ ಇರುತ್ತದೆಯೋ ಅದರ ಅಗತ್ಯವನ್ನು ಅವಲಂಬಿಸಿಕೊಂಡು ಅದರ ಅರ್ಥವನ್ನು ಯೋಚಿಸಬೇಕಾಗುತ್ತದೆ. ಅರ್ಥವನ್ನು ನಾವು ಹೇರಲು ಹೊರಟಾಗ ಅದು ಅರ್ಥದ ಹಿಂಸೆಯು ಮಾತ್ರವೇ ಆಗುತ್ತದೆ. ಅದರ ಸಾರ್ವಜನಿಕವಾದ ಅಸ್ತಿತ್ವವು ಮಾತ್ರವೇ ಅಗ ಮುಖ್ಯವಾಗುತ್ತದೆ. ಅಂದರೆ ಅದರಲ್ಲಿ ವಿವಿಧತೆಯು ಹೋಗಿ ಅದರ ಒಂದು ಅರ್ಥವನ್ನು ನಮ್ಮ ಓದಿಗೆ ಮತ್ತು ಜ್ಞಾನಕ್ಕೆ ಸರಿಯಾಗಿ ಹೇಳುತ್ತೇವೆ. ಅನೇಕ ಸಂದರ್ಭದಲ್ಲಿ ಈ ಸಹಯೋಗವನ್ನು ಮರೆಯುತ್ತೇವೆ.

ಮತ್ತು ಅದರ ಅರ್ಥವನ್ನು ಮಾತ್ರವೇ ಕೇಂದ್ರಮಾಡಿಕೊಂಡು ನೋಡುತ್ತೇವೆ. ಆದರೆ ಭಾಷೆಯು ಹೇಳುಗನನ್ನು ಹೊರತುಪಡಿಸಿಕೊಂಡು ಇರುವುದೂ ಇಲ್ಲ. ಹೇಳುವವನು ಯಾರು ಮತ್ತು ಹೇಳುಗನು ಯಾವ ರೀತಿಯಲ್ಲಿ ಇರುತ್ತಾನೆ ಎನ್ನುವುದೂ ಬಹಳ ದೊಡ್ಡ ಪ್ರಶ್ನೆಯೂ ಆಗಿದೆ. ರೊಮಾಂಟಿಕ್ ಯಗವು ವಾಸ್ತವವಾಗಿ ಸುಂದರ ಆತ್ಮವನ್ನು ಹೇಳಿಕೊಂಡಿತ್ತು. ಸುಂದರವಾದದು ಯಾವುದು ಇದೆಯೋ ಅದರ ಸ್ವಭಾವವನ್ನು ಮಾತ್ರವೇ ಹೇಳಿದರೆ ಸಾಕು ಎಂದೇ ಭಾವಿಸಿಕೊಂಡಿತ್ತು. ಆದರ ಆಶಯವು ಹಾಗೆ ಇದ್ದುದರಿಂದ ಅದರ ಅರ್ಥವನ್ನು ಮಾತ್ರವೇ ನೋಡಿದರೆ ಸಾಕಾಗುವುದೂ ಇಲ್ಲ. ಅದರ ಅರ್ಥವು ಅದರ ಅಭಿವ್ಯಕ್ತಿಯಲ್ಲಿ ಮಾತ್ರವೇ ಇರುವುದು ಇಲ್ಲ. ಅಂದರೆ ರೊಮಾಂಟಿಕರು ಹೇಳಿದ್ದರಲ್ಲಿ ಮಾತ್ರವೇ ಅರ್ಥವು ಇಲ್ಲ. ಅದು ಹೇಳಿದ್ದರ ಹಿಂದೆ ಅಮೂರ್ತವಾದ್ದು ಅನೇಕವು ಇದೆ. ಅದು ತನ್ನ ಸದ್ಯತನವನ್ನು ಹೇಳಿತು. ತಕ್ಷಣವೇ ಯಾವುದು ಮುಖ್ಯವೆಂದು ಅದಕ್ಕೆ ಅನಿಸಿತೋ ಅದನ್ನು ಮಾತ್ರವೇ ಪ್ರತಿಪಾದಿಸಿತು.

ನಿಸರ್ಗ ಕಾದಂಬರಿಯು ಒಂದು ಅಥೆಂಟಿಕ್ ಎನ್ನಬಹುದಾದ ಕೃತಿ. ಇದರಲ್ಲಿ ಸೂಚಿತವಾದ ಸಮಾಜವನ್ನು ನೋಡಿದರೆ ಅನೇಕ ಸಂಗತಿಗಳು ನಮ್ಮ ಗಮನಕ್ಕೆ ಬರುತ್ತವೆ. ಅದರಲ್ಲಿ ಭಾಷೆಯೇ ಹೆಚ್ಚು ಮುಖ್ಯವಲ್ಲ. ಸತ್ಯವೇ ಅದರ ಮಾನದಂಡವಾಗಿದೆ. ಕಥನವೇ ಮುಖ್ಯವಾದ ಸಂಗತಿಯೂ ಆಗಿದೆ.. ನಿಸರ್ಗದಲ್ಲಿ ಕಥನ ಮತ್ತು ವಾಸ್ತವವನ್ನು ಬೇರೆ ಮಾಡದಷ್ಟು ಒಂದಾಗಿದೆ. ಹಳ್ಳ ಬಂತು ಹಳ್ಳ ಕಾದಂಬರಿಗೂ ಇದು ಅನ್ವಯವಾಗುತ್ತದೆ. ಈ ಕಾದಂಬರಿಗಳಲ್ಲಿ ಯಾವುದಕ್ಕೆ ಹೆಚ್ಚು ಆದ್ಯತೆಯನ್ನು ಕೊಡಲಾಗಿದೆ ಎಂದು ನೋಡಿದರೂ ಈ ಮಾತು ಅರ್ಥವಾಗುತ್ತದೆ. ಮಿರ್ಜಿಯವರು ತಮ್ಮ ಪ್ರಜ್ಞೆಗೆ ಯಾವುದು ದಕ್ಕಿದೆಯೋ ಅದನ್ನು ಮಾತ್ರವೇ ಹೇಳಿದ್ದಾರೆ. ಆದ್ದರಿಂದ ನಿಸರ್ಗದಲ್ಲಿ ಪ್ರಜ್ಞೆಯನ್ನು ಹೊರತು ಪಡಿಸಿದ ಸಂಗತಿಯು ಇಲ್ಲವಾಗಿದೆ. ಯಾವುದನ್ನು ಹೆಚ್ಚು ಫೋಕಸ್ ಮಾಡಬೇಕು ಎನ್ನುವುದು ಆಯಾ ಲೇಖಕರಿಗೆ ಬಿಟ್ಟ ವಿಷಯವೂ ಆಗಿದೆ. ಸಾಹಿತ್ಯದ ಭಾಷೆ ಮತ್ತು ಅದರ ಪ್ರಾಥಮಿಕ ಸಂಗತಿಗಳು ಮಾತ್ರವೇ ಈ ಕಾದಂಬರಿಗಳಲ್ಲಿ ಮುಖ್ಯವಾಗುತ್ತದೆ. ಈ ಕಾದಂಬರಿಗಳು ನಮಗೆ ಒಂದು ಅಚಾರಿತ್ರಿಕ ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಬೇಕಾದ ಆವರಣವನ್ನು ಮಾತ್ರವೇ ಸೃಷ್ಟಿ ಮಾಡುತ್ತವೆ. ಆದ್ದರಿಂದ ಈ ಕಾದಂಬರಿಗಳಲ್ಲಿ ಶುದ್ಧ ಭಾಷೆಯೆ ಮುಖ್ಯವಾದ ಪ್ರಶ್ನೆಯು ಅಲ್ಲ. ನಮ್ಮ ನವ್ಯರು ತಳೆದ ನಿಲುವಿಗೂ ಅಮೇರಿಕ ಹಾಗೂ ಯರೋಪಿನ ನವ್ಯರು ಬಳಸಿಕೊಂಡ ಪರಿಕರಕ್ಕೂ ಅಗಾಧ ವ್ಯತ್ಯಾಸವಿದೆ. ಹಾಗೆ ನೋಡುವುದಿದ್ದರೆ ಯಾವುದೇ ಸಾಹಿತ್ಯವು ತನ್ನ ಅನನ್ಯತೆಯನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುತ್ತದೆ. ಸಾಹಿತ್ಯ ಮತ್ತು ಅದರ ಹಿಂದೆ ಇರುವ ನಿಜವಾದ ಸಂಗತಿಯು ಯಾವ ಬಗೆಯದು ಎನ್ನುವುದೂ ಮುಖ್ಯವಾಗುತ್ತದೆ. ಚರಿತ್ರೆಯ ಜ್ಞಾನ ಮತ್ತು ಅದರ ಹಿಂದೆ ಇರುವ ನಿಜವಾದ ಶಕ್ತಿಯ ಅರಿವು ನಮಗೆ ಗಂಭೀರವಾದ ಸಂವೇದನೆಗೆ ಕಾರಣವಾಗುತ್ತದೆ. ಆದರೆ ಯಾವಾಗ ನಾವು ನಮ್ಮ ಚರಿತ್ರೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲವೋ ಆಗ ಅದರ ಅರ್ಥವು ಬೇರೆಯಾಗುತ್ತದೆ. ಅಂದರೆ ಅದರಲ್ಲಿ ಅಚಾರಿತ್ರಿಕ ವಿಧಾನವು ಕಾಣಿಸಿಕೊಳ್ಳುತ್ತದೆ.

ಈಗ ನಾವು ನಮ್ಮ ಅಧ್ಯಯನದ ಕ್ರಮದಲ್ಲಿ ಹೆಚ್ಚಿನ ವಿಶಿಷ್ಟತೆಯನ್ನು ಮತ್ತು ವಿಶೇಷ ತಜ್ಞತೆಯನ್ನು ಹೇಳುತ್ತಾ ಬರುತ್ತಿದ್ದೇವೆ. ಅದರಿಂದ ನಮಗೆ ಕೆಲವು ಜ್ಞಾನ ಮತ್ತು ಅದರ

ವಿಶಿಷ್ಟತೆಯು ಮಾತ್ರವೇ ಮುಖ್ಯವಾಗುತ್ತದೆ. ಜ್ಞಾನವನ್ನು ವರ್ಗೀಕರಿಸಿಕೊಂಡು ನೋಡುತ್ತಾ ಬಂದಿರುವುದರಿಂದ ನಮಗೆ ಬಹುಜ್ಞಾನ ಪರಂಪರೆಯು ಅಳಿದು ಹೋಗುತ್ತಿದೆ. ವಿಶೇಷ ತಜ್ಞತೆಯೇ ನಮಗೆ ಬೇಲಿಯಾಗಿದೆ. ಬುದ್ಧಿ ಎನ್ನುವುದೇ ಸ್ವಾಯತ್ತವಾದ ಒಂದು ಚಟುವಟಿಕೆಯೂ ಆಗಿದೆ ಎಂದೂ ಭಾವಿಸಿಕೊಳ್ಳುತ್ತಿದ್ದೇವೆ. ಆದರೆ ಇದರ ಮೂಲಕ ಕೆಲವನ್ನು ಜ್ಞಾನವಾಗಿ ವರ್ಗೀಕರಿಸಿಕೊಂಡಿದ್ದೇವೆ. ಸಾಹಿತ್ಯವನ್ನು ಪ್ರತ್ಯೇಕವಾಗಿ ನೋಡುವುದೂ ಈಗ ಅನೇಕರಿಗೆ ಅತ್ಯಂತ ಮುಖ್ಯವಾಗಿದೆ. ಸಾಹಿತ್ಯದ ಉದ್ಧೇಶ ಯಾವುದು ಮತ್ತು ಅದು ಏನು ಮಾಡುತ್ತದೆ ಎನ್ನುವುದರ ಬದಲು ಅದರ ಉದ್ದೇಶವನ್ನು ವ್ಯವಸ್ಥಿತವಾಗಿ ನಿರಾಕರಿಸುವ ಯತ್ನವನ್ನು ಅನೇಕರು ಮಾಡುತ್ತಾರೆ. ಸಾಹಿತ್ಯವು ಅತ್ಯಂತ ಹೆಚ್ಚಿನ ಮಟ್ಟದ ಸ್ವಾತಂತ್ರ್ಯವನ್ನು ಹೊಂದಬೇಕು ಮತ್ತು ಸಾಹಿತಿಗೆ ಯಾರ ಹಂಗೂ ಇಲ್ಲವೆಂದು ಅನೇಕರು ಹೇಳುತ್ತಾರೆ. ಆದರೆ ನಿಜವಾದ ಸ್ವಾಯತ್ತತೆಯು ಇದೆಯೇ ಎನ್ನುವ ಪ್ರಶ್ನೆಗೆ ಅನೇಕರು ಉತ್ತರವನ್ನು ಕೊಡಲು ಹೋಗುವುದೂ ಇಲ್ಲ. ಸಾಹಿತ್ಯ ಮತ್ತು ಅದರ ಕಾರ್ಯಗಳನ್ನು ಕೆಲವರು ಬರೀ ಸೀಮಿತವಾದ ಉದ್ಧೇಶಕ್ಕಾಗಿ ಮಾತ್ರವೇ ಬಳಸುತ್ತಾರೆ. ಆದ್ದರಿಂದ ಅದರ ಉಳಿದ ಅಂದರೆ ಅದರ ಚಾರಿತ್ರಿಕ ಸನ್ನಿವೇಶ, ಅದರ ತಾತ್ವಿಕತೆ ಮತ್ತು ಅದರ ಕಾರಣಗಳ ವಿಷಯಗಳು ಗೌಣವಾಗುತ್ತವೆ. ನಮಗೆ ಗೊತ್ತಿರಬೇಕಾದ ಮತ್ತೊಂದು ಅಂಶವೆಂದರೆ ಅಮೇರಿಕಾದ ರೂಪನಿಷ್ಠರು ಸಾಹಿತ್ಯ ಮತ್ತು ಅದರ ಸ್ವಾಯತ್ತತೆಯನ್ನು ಹೇಗೆ ನೋಡಿದರು ಎಂದು ಮಾತ್ರವೇ. ಭಾಷೆಯನ್ನು ರೂಪಿಸುವ ಪ್ರಜ್ಞೆಯು ಅವರಿಗೆ ಹೆಚ್ಚು ಮುಖ್ಯವಾಗಲಿಲ್ಲ. ಸಾಹಿತ್ಯದ ಭಾಷೆಯನ್ನು ನಾವು ಪ್ರಜ್ಞಾಪೂರ್ವಕವಾಗಿಯೇ ರೂಪಿಸುತ್ತೇವೆ. ಈ ದೃಷ್ಟಿಯಿಂದ ಸಾಹಿತ್ಯ ಮತ್ತು ಅದರ ಭಾಷೆಯನ್ನು ರೂಪನಿಷ್ಠರು ನೋಡುವ ರೀತಿಯಲ್ಲಿ ನೋಡಲು ಸಾಧ್ಯವಿಲ್ಲ. ಸಾಹಿತ್ಯದ ರೂಪಕ್ಕೂ ಒಂದು ಉದ್ಧೇಶವಿದೆ. ಅದನ್ನು ರೂಪನಿಷ್ಠರ ರೀತಿಯಲ್ಲಿ ನೋಡುವುದರ ಅಗತ್ಯವಿಲ್ಲ. ಅದರ ಬದಲು ಅದನ್ನು ಲೇಖಕನು ಆ ರೀತಿಯಲ್ಲಿ ನೋಡಿದ್ದಾನೆ ಎಂದು ಹೇಳಬೇಕಾಗುತ್ತದೆ. ನಾವು ಯಾವುದನ್ನು ಹೇಳುತ್ತೇವೆಯೋ ಅದಕ್ಕೂ ನಿರ್ದಿಷ್ಟವಾದ ಒಂದು ಮೌಲ್ಯವು ಇದೆ. ಅದನ್ನು ನಾವು ಹೊರತು ಮಾಡಿಕೊಂಡು ನೋಡಲು ಸಾಧ್ಯವಿಲ್ಲ. ಹೇಳುವ ಕ್ರಮಕ್ಕೂ ಅದರ ಮೌಲ್ಯಕ್ಕೂ ಇರುವ ಸಂಬಂಧವನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಬರಹಗಾರನಿಗೂ ಅದರ ಗುಣಗಳಿಗೂ ಸಂಬಂಧವಿದೆ. ಅದನ್ನು ನೋಡುವುದು ಮತ್ತು ಅದನ್ನು ಗ್ರಹಿಸುವುದು ಕೂಡಾ ಅತ್ಯಂತ ಅಗತ್ಯವಾಗಿದೆ. ಶೈಲಿಗೂ ಲೇಖಕನ ಮನೋಸ್ಥಿತಿಗೂ ಒಂದು ಸಂಬಂಧವಿದೆ.

ಕೆಲವು ಸಂಗತಿಗಳಿವೆ. ಅದನ್ನು ನಾವು ಗ್ರಹಿಸುತ್ತೇವೆ. ಅದು ಸಂವೇದನೆಯ ಭಾಗ. ಮಾತು, ಬರಹ, ಧ್ವನಿ, ಕಲ್ಪನೆಗಳು ಸಂವೇದನೆಯ ಭಾಗವೂ ಆಗಿದೆ. ಮಾತು ಮತ್ತು ಬರಹವೂ ಕೂಡಾ ನಮ್ಮ ಭಾಗವೇ ಆಗಿದೆ. ನಾವು ಯಾವ ಸಂದರ್ಭದಲ್ಲಿ ನಿಂತು ಮಾತಾಡುತ್ತೇವೆ ಎನ್ನುವುದೂ ಬಹಳ ಮುಖ್ಯ. ನಾವು ಬರೆಯುವಾಗ ಕೆಲವನ್ನು ಆಯ್ಕೆ ಮಾಡುತ್ತೇವೆ. ಮತ್ತು ನಮಗೆ ಬೇಕಾದಂತೆ ಅದನ್ನು ಪರಿವರ್ತನೆ ಮಾಡುತ್ತೇವೆ. ಈ ಪರಿವರ್ತನೆಗಳಿಗೆ ಒಂದು ಉದ್ದೇಶವೂ ಇದೆ. ಆಯ್ಕೆ ಮತ್ತು ಅದರ ಪರಿವರ್ತನೆಯನ್ನು ನಾವು ಬೇಕಾ ಬಿಟ್ಟಿಯಾದ ಸಂಗತಿಯೆಂದು ಭಾವಿಸಬೇಕಾದ ಅಗತ್ಯವಿಲ್ಲ. ಕಾರಂತರು ಬರೆದ ಕುಡಿಯರ ಕೂಸು ಕಾದಂಬರಿಗೂ ಅವರ ಆಲೋಚನೆಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಬೇಕಾಗಿಲ್ಲ.

ಅದನ್ನು ಅವರು ಉದ್ದೇಶ ಪೂರ್ವಕವಾಗಿ ಬರೆದಿದ್ದಾರೆ. ನವ್ಯ ವಿಮರ್ಶೆಯು ಭಾವನೆ ಮತ್ತು ಅದರ ಹಾಜರಾತಿಯನ್ನು ನಿರಾಕರಿಸುತ್ತದೆ. ಮತ್ತು ಅದು ಯಾವುದು ಪಠ್ಯದಲ್ಲಿ ಹಾಜರಾಗಿದೆಯೋ ಅದನ್ನು ಮಾತ್ರವೇ ನೋಡುತ್ತದೆ. ಕೃತಿ ಮತ್ತು ಅದರ ಸಾರಂಶವು ಮಾತ್ರವೇ ಅದಕ್ಕೆ ಮುಖ್ಯವಾಗಿದೆ. ಮತ್ತು ಅದು ಭಾಷೆಯನ್ನು ಒಂದು ಮಾನದಂಡವೆಂದು ಹೇಳುತ್ತದೆ. ಹೀಗೆ ಮಾಡುವಾಗ ಅದು ಅದನ್ನು ಉದ್ದೇಶ ಪೂರ್ವಕವಾಗಿ ನೋಡುತ್ತದೆ. ಆದ್ದರಿಂದಲೇ ನಿರಚನವಾದಿಗಳು ಕೃತಿಯನ್ನು ಭಾಷೆಯಿಂದ ಮುಕ್ತಮಾಡಿ ಎಂದು ಹೇಳಿದರು. ಭಾಷೆಯನ್ನು ವಾಸ್ತವವಾಗಿ ಲೇಖಕನು ಒಂದು ವಾಹಕವಾಗಿ ನೋಡುತ್ತಾನೆ. ಅವನು ಅದರ ಮೂಲಕ ತನ್ನ ಅಭಿಪ್ರಾಯವನ್ನು ರವಾನೆ ಮಾಡುತ್ತಾನೆ. ಅಭಿವ್ಯಕ್ತಿಯನ್ನು ಅವನು ವಿಸ್ತರಿಸುತ್ತಾನೆ. ಕಾವ್ಯವೆನ್ನುವುದೂ ಒಂದು ಅಭಿವ್ಯಕ್ತಿ ಮಾತ್ರವೇ ಆಗಿದೆ. ಕಾವ್ಯಾತ್ಮಕ ಪ್ರಜ್ಞೆ ಮತ್ತು ಮಾತಿನ ಜೋಡಣೆಗೆ ಒಂದು ಸಂಬಂಧವೂ ಇದೆ. ಪಠ್ಯವನ್ನು ಈ ದೃಷ್ಟಿಯಲ್ಲಿ ನಾವು ನೋಡಬೇಕಾದ ಕ್ರಮವು ಬೇರೆಯಾಗುತ್ತದೆ. ಯಾವುದನ್ನು ನಾವು ಹೇಳಬೇಕೆಂದು ಕೊಂಡಿದ್ದೇವೆಯೋ ಅದರ ರೂಪಕ್ಕೂ ಅದರ ಶೈಲಿಗೂ ಮತ್ತು ಅದರ ಆಶಯಕ್ಕೂ ಒಂದು ಸಂಬಂಧವಿದೆ. ವಾಸ್ತವವಾಗಿ ಯಾವುದನ್ನು ನಾವು ಈಗ ಹೇಳಬೇಕು ಎನ್ನುವುದೂ ಗೊತ್ತಿರಬೇಕಾದ ಅಗತ್ಯವಿದೆ. ಅಂದರೆ ನಮ್ಮ ಮಾತು ಮತ್ತು ನಮ್ಮ ಬರಹವು ಕೊಂಚ ವ್ಯತ್ಯಾಸವಾದರೂ ಅದು ಅರಾಜಕತೆಯನ್ನು ಸೃಷ್ಟಿಸುವ ಅಪಾಯವೂ ಇದೆ. ಅಷ್ಟೇ ಅಲ್ಲ ಅದರ ಮೂಲಕವೇ ನಾವು ಮತ್ತೊಂದು ಪಂಥವನ್ನು ಬೆಳೆಸುವ ಅಪಾಯವೂ ಇರುತ್ತದೆ. ಉದ್ದೇಶವು ಭೌತಿಕ ಮತ್ತು ಮಾನಸಿಕವೂ ಆಗಿರುತ್ತದೆ. ಅಂದರೆ ಅದು ನಮ್ಮ ಮನೋಸ್ಥಿತಿಯನ್ನು ಹೇಳುತ್ತದೆ. ಮನಸ್ಸು ಮತ್ತು ಬರಹಕ್ಕೆ ಯಾವುದೇ ಸಂಬಂಧವೇ ಇಲ್ಲವೆಂದು ಹೇಳಬೇಕಾಗಿಲ್ಲ. ಮತ್ತು ಅದರ ಆಶಯವು ಒಂದು ರೀತಿಯಲ್ಲಿ ಇರಬೇಕಾಗುತ್ತದೆ. ಬದ್ಧತೆಯವರು ಮಾತಾಡವುದಕ್ಕೂ ಅರಾಜಕತಾವಾದಿಗಳು ಮಾತಾಡುವುದಕ್ಕೂ ಬಲಪಂಥೀಯರು ಮಾತಾಡುವುದಕ್ಕೂ ಅನೇಕ ವ್ಯತ್ಯಾಸವಿದೆ. ಉದ್ದೇಶ ಮತ್ತು ಅದರ ಗುರಿಗಳು ಈ ದೃಷ್ಟಿಯಿಂದ ಬಹಳ ಮುಖ್ಯ. ಹಾಗೆ ನಮ್ಮ ಚಟುವಟಿಕೆ ಮತ್ತು ಅದರ ಅಗತ್ಯವನ್ನು ಈಗ ಬೇರೆ ರೀತಿಯಲ್ಲಿಯೂ ನೋಡಬೇಕು. ಯಾವುದೇ ಉದ್ದೇಶವಲ್ಲದೆ ಯಾರೂ ಕೆಲಸವನ್ನು ಮಾಡುವುದೂ ಇಲ್ಲ. ಕೆಲಸವನ್ನು ಮಾಡುವುದು ಮತ್ತು ಅದರಿಂದ ಪರಿಣಾಮವನ್ನು ಊಹಿಸುವುದು ನಮಗೆ ಅತ್ಯಂತ ಅಗತ್ಯವಾದ ಸಂಗತಿಯೂ ಆಗಿದೆ. ನಾವು ನಮ್ಮ ಕೆಲಸವನ್ನು ಮಾಡುವುದು ಮತ್ತು ಅದರಿಂದ ಕೆಲವನ್ನು ಸಾಧಿಸುವುದು ಅತ್ಯಂತ ಅಗತ್ಯವಾದ ಪ್ರಕ್ರಿಯೆ ಕೂಡಾ ಆಗಿದೆ. ನಾನು ಬರೆಯುವುದರಿಂದ ಯಾರಿಗೆ ಉಪಯೋಗವೆಂದು ಕುವೆಂಪು ಕೇಳಿದ್ದರೆ ಅಥವಾ ಅನಂತಮೂರ್ತಿ ಭಾವಿಸಿದ್ದರೆ ಪರಿಣಾಮವೂ ಭಿನ್ನವಾಗುತ್ತಿತ್ತು. ಒಂದು ನಿರ್ವಾತವು ಸೃಷ್ಟಿಯಾಗುತ್ತಿತ್ತು. ಮತ್ತೆ ಒಂದು ಅಂಶವನ್ನು ನೋಡಬೇಕು: ನಾವು ಉದ್ದೇಶವನ್ನು ಯಾಕೆ ನಿರಾಕರಿಸಬೇಕು ಎನ್ನುವುದಕ್ಕೆ ನಿಜವಾಗಿಯೂ ಸರಿಯಾದ ಉತ್ತರವು ಇಲ್ಲವಾಗಿದೆ. ಒಂದು ಕೃತಿಯಲ್ಲಿ ಬರುವ ಕೆಲವು ಅನುಕ್ರಮತೆಯನ್ನು ನಾವು ನಿರಾಕರಿಸಬೇಕಾಗಿಯೂ ಇಲ್ಲ. ಲೇಖಕನು ಯಾವುದನ್ನು ಮೊದಲು ಹೇಳಬೇಕು ಮತ್ತು ಯಾವುದನ್ನು ಅಂತಿಮವಾಗಿ ತಿಳಿಸಬೇಕು ಎನ್ನುವುದನ್ನು ನಿರ್ಧರಿಸುತ್ತಾನೆ. ನವ್ಯವು ಈ ಸಂಗತಿಗಳನ್ನು ಗಮನಿಸಿಲ್ಲ. ಕೃತಿ ಮತ್ತು ಅದರ ಉದ್ದೇಶವು ಅದಕ್ಕೆ ಹೆಚ್ಚು ಮುಖ್ಯವಾಗಲಿಲ್ಲ. ಉದ್ಧೇಶ ಮತ್ತು ಅದರ ರೂಪವನ್ನು ಅದು ಹೆಚ್ಚು ಅಧಿಕೃತವಾಗಿ ವಿವರಿಸಲು ಹೋಗುವುದೂ

ಇಲ್ಲ. ಯಾವುದನ್ನು ಈಗ ಅತ್ಯಂತ ನಿಕಟವಾದ ಓದು ಎಂದು ಹೇಳುತ್ತೇವೆಯೋ ಅದರ ಸ್ವರೂಪವೂ ಮತ್ತೊಂದು ಬಿಕ್ಕಟ್ಟನ್ನು ರೂಪಿಸಿದೆ. ನಿಕಟ ಓದು ಎನ್ನುವುದು ಮೂಲಭೂತವಾಗಿ ಅನೇಕವನ್ನು ಪ್ರತ್ಯೇಕ ಮಾಡುತ್ತದೆ. ಅದಕ್ಕೆ ಕೃತಿ ಮತ್ತು ಅದರ ಆಶಯವು ಮುಖ್ಯವಾಗುವುದೂ ಇಲ್ಲ. ಅದು ಕೃತಿಯನ್ನು ಬರೀ ತುಂಡಾಗಿಯೂ ನೋಡುತ್ತದೆ. ರೂಪವನ್ನು ಅದು ಈ ಅರ್ಥದಲ್ಲಿ ನಿರಾಕರಿಸುತ್ತದೆ. ಮತ್ತು ಅದರ ರೂಪಭೇದ ಗುಣವೇ ಅದಕ್ಕೆ ಮುಳುವಾಗಿದೆ. ನಿಕಟ ಓದು ಎನ್ನುವುದು ಬರೀ ಒಂದು ತಂತ್ರ ಮಾತ್ರವೇ ಆಗಿದೆ. ಸಾಲು ಮತ್ತು ಸಾಲುಗಳು ಮತ್ತು ಅದರರ್ಥ ವಿನ್ಯಾಸವು ಮಾತ್ರವೇ ಅದಕ್ಕೆ ಅತ್ಯಂತ ಮುಖ್ಯವಾಗುತ್ತದೆ. ಸಾಲುಗಳಲ್ಲಿ ಸಾಹಿತ್ಯವನ್ನು ಗ್ರಹಿಸುವುದು ಮಾತ್ರವೇ ಅದಕ್ಕೆ ಅತ್ಯಂತ ಗಂಭೀರವಾದ ಚಟುವಟಿಕೆಯ ಥರ ಕಾಣಿಸುತ್ತದೆ.ಕಾವ್ಯ ಮತ್ತು ಅದರ ವ್ಯಂಗ್ಯವನ್ನು ಅದು ಅಂಗೀಕರಿಸುವ ವಿಧಾನವೂ ಭಿನ್ನವಾಗುತ್ತದೆ. ಕಾವ್ಯವನ್ನೇ ಅದು ಒಂದು ಲೋಕವೆನ್ನುವಂತೆ ನೋಡುತ್ತದೆ. ಮತ್ತು ಅದರ ಮೂಲಕ ಒಂದು ಹಿತಾಸಕ್ತಿಯನ್ನು ಸ್ಥಾಪಿಸುತ್ತದೆ. ಆದರೆ ಓದುವುದು ಮತ್ತು ಅದರಲ್ಲಿಯೇ ಮಗ್ನವಾಗುವುದು ಸರಿಯಾದ ಕ್ರಮವು ಅಲ್ಲ. ಓದುವುದು ಮತ್ತು ಅದರ ಅರ್ಥವನ್ನು ಗ್ರಹಿಸುವುದು ಮುಖ್ಯವಾಗಬಾರದು. ಅದರ ಬದಲಿಗೆ ಕೃತಿಯು ಯಾವುದನ್ನು ಹೇಳುತ್ತದೆ ಮತ್ತು ಹೇಗೆ ಹೇಳುತ್ತದೆ ಹಾಗೂ ಯಾವುದನ್ನು ಹೇಳುತ್ತದೆ ಎನ್ನುವುದೂ ಮುಖ್ಯವಾಗಬೇಕು. ಆದರೆ ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳನ್ನು ನವ್ಯವು ಎತ್ತುತ್ತದೆ. ಲೇಖಕನು ಯಾರೆ ಆಗಿರಲಿ ಅವನ ಕುರಿತಾಗಿ ಯಾವುದೇ ಆಸಕ್ತಿಯನ್ನು ನಾವು ತಳೆಯಬೇಕಾದ ಅಗತ್ಯವಿಲ್ಲ. ಆದರೆ ಕೃತಿಯನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಅದರ ಸಾಲುಗಳನ್ನು ಮಾತ್ರವೇ ನೋಡುವುದು ಎಂದು ನಿಕಟ ಓದು ಹೇಳುತ್ತದೆ. ಕಾವ್ಯದ ಸಾಲನ್ನು ಓದುವುದು ಮತ್ತು ಗ್ರಹಿಸುವುದು ಮಾತ್ರವೇ ಮುಖ್ಯವೆಮದು ಅದರ ಪ್ರತಿಪಾದನೆಯು ಆಗಿದೆ. ಯಾವುದನ್ನು ಅನ್ವಯಿಸಬೇಕು ಎಂದೂ ಭಾವಿಸುತ್ತದೆ. ಅರ್ಥವಿಸಿಕೊಳ್ಳುವುದು ಮತ್ತು ಅದರ ಗ್ರಹಿಸುವುದು ಮಾತ್ರವೇ ಮುಖ್ಯವೆಂದು ಅದರ ನಿಲುವು. ಆದರೆ ಕಣ್ಣಿಗೆ ಕಾಣಿಸುವುದು ಮಾತ್ರವೇ ಸತ್ಯವೂ ಅಲ್ಲ. ಪಠ್ಯವನ್ನು ಓದಿಗೆ ಮುಕ್ತ ಮಾಡುವುದು ಅಂದರೆ ಅದನ್ನು ಬೇಕಾದ ರೀತಿಯಲ್ಲಿ ಓದುವುದು ಅಲ್ಲ. ಅದರ ನಿಯಮವು ಒಂದು ನೆಲೆಗೆ ಮಾತ್ರವೇ ಮುಖ್ಯವಾಗಬೇಕಾದ ಅಗತ್ಯವೂ ಇಲ್ಲ.

ಸಾಹಿತ್ಯದ ಕೃತಿಗಳೆಂದರೆ ಅದು ರೋಗಿಯೆಂದೂ ಓದುಗನು ಅದನ್ನು ಮರುಪರೀಕ್ಷೆ ಮಾಡಿದರೆ ಸಾಕು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಕೃತಿ ಮತ್ತು ಅದರ ಓದು ಅನೇಕ ರೀತಿಯ ಸಂಬಂಧವನ್ನು ನಿರೂಪಿಸುತ್ತದೆ. ವಾಸ್ತವವಾಗಿ ಅದರಲ್ಲಿ ಈಗಾಗಲೇ ಹೇಳಲಾಗಿರುವ ಅರ್ಥವು ಇಲ್ಲ. ಮತ್ತು ಈಗಾಗಲೇ ವಿಧಿಸಿರುವ ಅರ್ಥವನ್ನು ಮಾತ್ರವೇ ನೋಡಬೇಕು ಎನ್ನುವುದು ಸರಿಯಾದ ನಿಲುವು ಅಲ್ಲ. ಕೃತಿಯ ಸತ್ಯವು ಕೃತಿಯ ಒಳಗೆ ಮಾತ್ರವೇ ಇಲ್ಲ. ಅದು ಅದರಾಚೆಗೂ ಇದೆ. ಮತ್ತು ಅದರ ಅರ್ಥವು ಸೀಮಿತವಾದ ಒಂದು ಚಟುವಟಿಕೆಯು ಮಾತ್ರವೇ ಅಲ್ಲವಾಗಿದೆ. ಅನೇಕ ಸರ್ತಿ ವೈಜ್ಞಾನಿಕ ಸತ್ಯವನ್ನು ನಾವು ಬೇರೆ ಬೇರೆ ರೀತಿಯಲ್ಲಿ ಶೋಧಿಸಬೇಕಾಗುತ್ತದೆ. ಅದಕ್ಕೆ ಕೆಲವು ರೀತಿಯಲ್ಲಿ ನಿರ್ಣಯವನ್ನು ನೀಡಬೇಕಾಗುತ್ತದೆ. ಮತ್ತು ಅದನ್ನು ಬೇರೆ ಬೇರೆ ರೀತಿಯಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ. ಯಾವುದೇ ಕವಿತೆಯನ್ನು ಓದುವಾಗ ನಮಗೆ ಕೆಲವು ರೀತಿಯ ಪೂರ್ವಜ್ಞಾನವು ಇರಬೇಕಾಗುತ್ತದೆ.

ಅಷ್ಟೇ ಅಲ್ಲ ರಚನೆಯು ಆಗಿರುತ್ತದೆ. ಮತ್ತು ಅದಕ್ಕಿಂತ ಪೂರ್ವದಲ್ಲಿಯೂ ಬೇರೆ ಬೇರೆ ಮಾದರಿಯ ರಚನೆಗಳು ಇರುತ್ತವೆ. ಮತ್ತು ಕೃತಿಯೇ ಜ್ಞಾನವೆಂದು ಹೇಳಬೇಕಾದ ಅಗತ್ಯವೂ ಇಲ್ಲ. ಆನ್ವಯಿಕತೆಯು ಯಾವುದನ್ನು ಹಿಡಿದಿಡುತ್ತದೆ ಎನ್ನುವುದು ಮಾತ್ರವೇ ಮುಖ್ಯವಲ್ಲ. ಕೃತಿಯನ್ನು ನೋಡಲು ನಾವು ನಮಗೆ ಇರುವ ಜ್ಞಾನವನ್ನು ಅವಲಂಬಿಸುತ್ತದೆ. ಸಾಮಾನ್ಯವಾದ ನಮ್ಮ ಜ್ಞಾನವು ಕೃತಿಯನ್ನು ಓದಲು ಸಹಾಯವನ್ನು ಮಾಡುತ್ತದೆ. ಸಾಮಾನ್ಯವಾದ ನಮ್ಮ ಭಾಷೆಯು ಒಂದು ರೂಪವನ್ನು ನಮಗೆ ಕಟ್ಟಿಕೊಡುತ್ತದೆ. ಒಂದು ರೂಪವಾಗಿ ಅದು ಪರಿವರ್ತನೆಯಾಗುತ್ತದೆ.

ಕೃತಿಕಾರ ಮತ್ತು ವಿಮರ್ಶಕರ ನಡುವೆ ಒಂದು ಸಂಬಂಧವು ಇರುತ್ತದೆ. ಮತ್ತು ಅದನ್ನು ನಾವು ದ್ವಂದ್ವಾತ್ಮಕವಾಗಿ ನೋಡಬೇಕಾಗುತ್ತದೆ. ಕೃತಿಯನ್ನು ವಿಮರ್ಶೆ ಮಾಡುವುದೂ ಕೂಡಾ ಒಂದು ಕ್ರಿಯೆ. ಕೃತಿಯನ್ನು ಓದುವುದು ಮತ್ತು ಅದರ ಕುರಿತಾದ ಒಂದು ಅನ್ವಯವನ್ನು ಮಾಡುವುದು ಎಂದರೆ ಅದು ಮುಕ್ತಾಯವೇ ಇಲ್ಲದ ಚಟುವಟಿಕೆಯೂ ಆಗಿದೆ. ನವ್ಯ ವಿಮರ್ಶೆಯು ವಾಸ್ತವವಾಗಿ ಕೆಲವೊಂದು ಸಂದರ್ಭದಲ್ಲಿ ವಿವರಣಾತ್ಮಕವೂ ಆಗಿರುತ್ತದೆ. ಮತ್ತು ಅದು ಏಕಪಕ್ಷೀಯವಾದ ನಿಲುವನ್ನು ಹೊಂದಿರುತ್ತದೆ. ಅದು ಭಾಷೆಯನ್ನು ಗುರುತಿಸುತ್ತರದೆ. ಫ್ರೆಂಚ್ ಭಾಷೆಯ ಅನೇಕ ನಿಲುವುಗಳನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅದು ಲೇಖಕ ಮತ್ತು ಸಾಹಿತ್ಯ ವಿಮರ್ಶೆಯನ್ನು ಒಂದು ರೂಪವಾಗಿ ನೋಡಲು ಯತ್ನವನ್ನು ಮಾಡುತ್ತದೆ. ವಾಸ್ತವವಾಗಿ ಮನುಷ್ಯ ಮತ್ತು ಅವನ ನಿಲುವನ್ನು ನೋಡಬೇಕಾದ ಅಗತ್ಯವೂ ಇದೆ. ಅಂದರೆ ಮನುಷ್ಯನು ಕೆಲವು ಕಲ್ಪನೆಯನ್ನು ಕಟ್ಟುತ್ತಾನೆ. ಅದು ವಾಸ್ತವ. ಆದ್ದರಿಂದ ವ್ಯಕ್ತಿ ಮತ್ತು ಅವನ ಚಟುವಟಿಕೆಯನ್ನು ನಾವು ಭಿನ್ನವಾಗಿ ನೋಡಬೇಕಾಗುತ್ತದೆ. ಮನುಷ್ಯನು ತನ್ನ ಕಲ್ಪನೆಯನ್ನು ಒಂದು ನಿರ್ದಿಷ್ಟವಾದ ಕಾರಣಕ್ಕೆ ಕಟ್ಟುತ್ತಾನೆ. ಅದು ಅವನ ವ್ಯಕ್ತಿತ್ವದ ಪ್ರದರ್ಶನವೂ ಹೌದು. ವ್ಯಕ್ತಿತ್ವಕ್ಕೆ ಚಾರಿತ್ರಿಕವಾದ ಒಂದು ಅಸ್ತಿತ್ವವು ಇರುತ್ತದೆ. ಸಾಹಿತ್ಯ ಮತ್ತು ಅದರ ಕೆಲಸವನ್ನು ಅವಾಸ್ತವ ಎಂದೂ ಹೇಳಬೇಕಾದ ಅಗತ್ಯವಿಲ್ಲ. ಆದರೆ ಇಲ್ಲಿ ಮತ್ತೆ ನೋಡಬೇಕಾದ ಅಂಶಗಳೂ ಇವೆ. ಸಾಹಿತ್ಯವು ಮನಸ್ಸನ್ನು ಹೇಳುತ್ತದೆ. ಯಾವುದನ್ನು ನಾವು ಕೇಳಿದ್ದೇವೆ, ನೋಡಿದ್ದೇವೆ ಮತ್ತು ಆಸ್ವಾದಿಸಿದ್ದೇವೆ ಅದನ್ನು ಮಾತ್ರವೇ ಹೇಳುತ್ತೇವೆ. ಮತ್ತು ಅದರ ಅರ್ಥವೂ ವ್ಯತ್ಯಾಸವಾಗುತ್ತಾ ಬಂದಿದೆ. ನೋಟ ಮತ್ತು ಮನಸ್ಸು ಮಹತ್ವದ ಪಾತ್ರವನ್ನು ವಹಿಸುತ್ತದೆ. ಫುಕೋ ಆಲೋಚನೆ ಮತ್ತು ಅದರ ಪ್ರಾತಿನಿಧಿಕತೆಯನ್ನು ಹೇಳುತ್ತಾನೆ. ಅವನು ಜ್ಞಾನ ಮತ್ತು ಅದರ ರೂಪವನ್ನು ಹೇಳುವಾಗ ಅದರ ಪ್ರಾಕ್ತನ ರೂಪವನ್ನು ಹೇಳುತ್ತಾನೆ. ಜ್ಞಾನವೂ ಹೀಗೆ ಬೇರೆ ಬೇರೆ ವಿಧದಲ್ಲಿ ಕಟ್ಟಲಾಗಿದೆ. ಲೇಖಕ ಮತ್ತು ಅವನ ಪ್ರಜ್ಞೆಯನ್ನು ಅನೇಕವು ನಿರ್ಧರಿಸುತ್ತವೆ. ಮತ್ತು ಅದಕ್ಕೆ ಅತ್ಯಂತ ಮಹತ್ವದ ಜಾಗವೂ ಇದೆ. ನಮ್ಮ ಸಾಮಾಜಿಕ ಜ್ಞಾನ ಮತ್ತು ಅದರ ರೂಪಗಳು ತುಂಬಾ ಮಹತ್ವದ್ದೂ ಆಗಿದೆ. ಈ ದೃಷ್ಟಿಯಿಂದ ವ್ಯಕ್ತಿ ಮತ್ತು ಅವನ ಬರಹ ಹಾಗೂ ಅದನ್ನು ಗ್ರಹಿಸುವ ವಿಮರ್ಶಕನು ಒಂದು ಸಮಾನವಾದ ಪಾತಳಿಯಲ್ಲಿ ನಡೆಯಬೇಕಾಗುತ್ತದೆ. ಲೇಖಕನ ಪ್ರಜ್ಞೆ ಮತ್ತು ಓದುಗನ ಪ್ರಜ್ಞೆಯು ಒಂದು ಕಡೆಗೆ ಸಂಧಿಸಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಅರ್ಥಶಾಸ್ತ್ರ, ರಾಜಕಾರಣ, ಸಮಾಜಶಾಸ್ತ್ರ ಮುಂತಾದವುಗಳೂ ಹೆಚ್ಚು ಸ್ಪಷ್ಟವಾಗಿರುತ್ತವೆ. ಪ್ರತಿಯೊಂದು ಆಲೋಚನೆಯ ಕ್ರಮವೂ ಕೂಡಾ

ಚರಿತ್ರೆಯ ಬೇರನ್ನು ಹೊಂದಿರುತ್ತವೆ. ಫುಕೋ ಆಲೋಚನೆ ಮತ್ತು ಅದರ ಗ್ರಹಿಕೆಗೆ ಒಂದು ದೊಡ್ಡ ಇತಿಹಾಸವೂ ಇದೆ. ಯಾವುದೇ ಆಲೋಚನೆಯು ಸುಮ್ಮನೆ ಉಂಟಾಗಿರುವುದೂ ಇಲ್ಲ ಎಂದು ಹೇಳುತ್ತಾನೆ. ತತ್ವಜ್ಞಾನಕ್ಕೂ ಒಂದು ಪ್ರಾಕ್ತನ ರೂಪವಿರುತ್ತದೆ. ಆದರೆ ಸಾಹಿತ್ಯಕ್ಕೆ ಬಂದರೆ ಸ್ವಂತಿಕೆಯ ಪ್ರಶ್ನೆಯು ಹೆಚ್ಚು ಸೂಕ್ಷ್ಮವಾಗುತ್ತದೆ. ಮತ್ತು ಸ್ವಂತಿಕೆಯ ಪ್ರಶ್ನೆಯು ಸ್ವಲ್ಪ ಮಟ್ಟಿಗೆ ಅನುಮಾನವನ್ನು ಉಂಟು ಮಾಡುತ್ತದೆ. ಸಾಹಿತ್ಯವು ಒಂದು ನಿಯಮವನ್ನು ಒಳಗೊಂಡಿರುವುದರಿಂದ ಅದರ ಸ್ವರೂಪವನ್ನು ಅದು ಯಾವಾಗ ರಚಿತವಾಗಿದೆ ಎಂದೂ ಗ್ರಹಸಿಬೇಕಾಗುತ್ತದೆ.

ಓದಿನ ಬಹುತ್ವ ಮತ್ತು ಅದರ ಚಾರಿತ್ರಿಕತೆಯು ಈ ಕಾರಣದಿಂದ ಒಂದು ನಿಲುವನ್ನು ಹೊಂದುವುದೂ ಅಗತ್ಯವಾಗುತ್ತದೆ. ಸ್ವಂತಿಕೆಯು ಓದಿನಲ್ಲಿ, ಮೌಲ್ಯಮಾಪನದಲ್ಲಿ, ಬರಹದಲ್ಲಿ ಕಾಣಿಸುತ್ತದೆ. ಮತ್ತು ಅದರಲ್ಲಿ ಸಮಾಜ ಮತ್ತು ಮನಸ್ಸಿನ ಲೋಕವೂ ಇದೆ. ಕೃತಿಯ ಆಶಯವೆನ್ನವುದು ಈ ದೃಷ್ಟಿಯಂದ ಭಾವನೆಯಿಂದ ಹೊರತು ರಚಿತವಾಗುವುದೂ ಇಲ್ಲ. ನಾವು ಸ್ವಂತಿಕೆ ಮತ್ತು ಅದರ ವಿಸ್ತರಣೆಯನ್ನು ಬಯಸುತ್ತೇವೆ. ಆದರೆ ಈ ವಿಸ್ತರಣೆಯು ಯಾವ ರೂಪದಲ್ಲಿದೆ ಮತ್ತು ಅದರಲ್ಲಿ ನಾವು ಹೇಗೆ ಹೇಳುತ್ತೇವೆ ಎನ್ನುವುದೂ ಬಹಳ ಮುಖ್ಯ. ಸಾಹಿತ್ಯವು ಹೆಚ್ಚು ಖಚಿತವಾದರೆ ಅದರಲ್ಲಿ ಅನುಮಾನಕ್ಕೆ ಅವಕಾಶವು ಇಲ್ಲ. ಆದರೆ ಅದು ಹೆಚ್ಚು ಅಸ್ಪಷ್ಟವಾಗಿದ್ದರೆ ಅದರ ಅನ್ವಯವು ಬೇರೆಯಾಗುತ್ತದೆ. ಮತ್ತು ಅನ್ವಯವೇ ಮುಂಚೂಣಿಗೆ ಬಂದು ಹಲವು ಅರ್ಥವನ್ನು ಸೃಷ್ಟಿಸುತ್ತದೆ. ರಚನೆ ಮತ್ತು ಅದರ ಸ್ವರೂಪದಲ್ಲಿ ಲೇಖಕನು ವಹಿಸುವ ಪಾತ್ರವನ್ನು ಲುಕಾಕ್ಸ್ ಹೇಳುತ್ತಾನೆ. ವ್ಯಕ್ತಿಯ ನಿಲುವು ಈ ದೃಷ್ಟಿಯಿಂದ ಸಂವಾದಿಯಾಗಿಯೂ ಇರುತ್ತದೆ ಎಂದು ಅವನ ವಾದವಾಗಿದೆ.

ಕಾದಂಬರಿಯಲ್ಲಿ ನಾವು ಧ್ರುವೀಕರಣ ಮಾಡಬೇಕೆಂದು ಇಲ್ಲ. ಆದರೆ ಈಗ ನಮ್ಮ ಬರಹದ ಕುರಿತಾದ ಧೋರಣೆಯು ಬದಲಾಗಿದೆ. ಮತ್ತು ಅದನ್ನು ಕೆಲವರಿಗೆ ಮಾತ್ರವೇ ಸೀಮಿತಮಾಡಲಾಗಿದೆ. ಸಾಹಿತ್ಯವನ್ನು ಒಂದು ವರ್ಗಕ್ಕೆ ಮಾತ್ರವೇ ಸೀಮಿತ ಮಾಡಲಾಗಿದೆ. ಮತ್ತು ಅದನ್ನು ನೋಡುವಾಗ ಅದನ್ನು ತಾತ್ವಿಕ ಕಾರಣಕ್ಕೆ ಯಾರೂ ನೋಡುವುದೂ ಇಲ್ಲ. ಸಾಹಿತ್ಯವನ್ನು ನೋಡುವುದು ಅಂದರೆ ಅದನ್ನು ವಸ್ತು ಮತ್ತು ವಿಷಯ ಎನ್ನುವ ರೀತಿಯಲ್ಲಿ ವರ್ಗೀಕರಿಸಲಾಗುತ್ತದೆ. ಧ್ರುವೀಕರಣವನ್ನು ನಾವು ಕಾಣುತ್ತೇವೆ. ವಿಮರ್ಶೆಯು ಯಾವುದನ್ನು ವಿಸ್ತರಿಸುತ್ತದೆ.ಮತ್ತು ಅದು ಹೇಗೆ ಕಾಣುತ್ತಿರುತ್ತದೆ ಎನ್ನುವುದೂ ನಮಗೆ ಹೆಚ್ಚು ಮುಖ್ಯವಾಗಬೇಕಾಗುತ್ತದೆ. ಓದುವುದು ಅಂದರೆ ಪದವನ್ನು ಮಾತ್ರವೇ ನೋಡುವುದು ಮತ್ತು ಅದನ್ನು ಬದಲಿಸುವುದು ಎಂದು ಮಾತ್ರವೇ ಭಾವಿಸಲಾಗುತ್ತದೆ. ಸಾಹಿತ್ಯ ಮತ್ತು ಅದನ್ನು ಲೆಕ್ಕಕ್ಕೆ ಯಾವುದನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದೂ ನಮಗೆ ಮುಖ್ಯ. ಯಾವುದು ಸಾಹಿತ್ಯದಲ್ಲಿ ಗಮನಿಸಬೇಕಾದ ಅಂಶವೆನ್ನವುದೂ ಬಹಳ ಮುಖ್ಯ. ಸಾಹಿತ್ಯ ಮತ್ತು ಅದರ ಓದಿನ ಪ್ರಶ್ನೆಯೆಂದರೆ ಅದನ್ನು ಮುಕ್ತವಾದ ಸ್ವಾತಂತ್ರ್ಯವೆಂದು ಅನೇಕರು ಭಾವಿಸುತ್ತಾರೆ. ಓದಿನಲ್ಲಿ ಕೆಲವನ್ನು ನಾವು ಆಯ್ಕೆ ಮಾಡುತ್ತೇವೆ. ನಿಜ. ಆದರೆ ಅದು ಮುಕ್ತವಾದ ಸಂಗತಿಯು ಅಲ್ಲ. ಓದಿನಲ್ಲಿ ನಾವು ಕೆಲವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಓದು ಅಂದರೆ ಅದು ಒಂದು ನಿರ್ದಿಷ್ಟವಾದ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಅನುಸಂಧಾನವೂ ಹೌದು. ಸಾಹುತ್ಯ ಮತ್ತು

ಅದರ ಓದಿನ ಮುಕ್ತತೆಯೆಂದರೆ ಅದು ನಿರ್ದಿಷ್ಟವಾದ ಅಯ್ಕೆಯೂ ಹೌದು. ಲೇಖಕನೆಂದರೆ ಅವನು ಪ್ರಶ್ನಾತೀತನು ಅಲ್ಲ.

ಓದುವುದು ಅಂದರೆ ಅದು ಕೃತಿಯ ಮೇಲಿನ ಪ್ರಭುತ್ವವೂ ಅಲ್ಲ. ಓದುವುದು ಮತ್ತು ಅದನ್ನು ಅನುಭವಿಸುವುದು ಅಂದರೆ ಅದನ್ನು ದ್ವಂದ್ವಾತ್ಮಕವಾಗಿಯೂ ನೋಡುವುದು. ಯಾವುದೇ ಲೇಖಕನು ಯಾವುದನ್ನು ಬರೆಯುತ್ತಾನೆಯೋ ಅದನ್ನು ಮೀರುವ ಅಗತ್ಯವಿಲ್ಲ. ಅದರ ಬದಲು ನಾವು ಅವನ ಬಳಿಗೆ ಹೋಗುವ ಅಗತ್ಯವೂ ಇದೆ. ಹಾಗೆ ನೋಡುವುದಿದ್ದರೆ ಲೇಖಕ ಮತ್ತು ಓದುಗರು ಒಂದು ಹಂತದಲ್ಲಿ ತಮ್ಮ ಅನನ್ಯತೆಯನ್ನು ನಿರ್ದಿಷ್ಟವಾದ ಘಟ್ಟದಲ್ಲಿ ಕಳೆದುಕೊಳ್ಳುತ್ತಾರೆ. ಮತ್ತು ಕೆಲವು ಸಂದರ್ಭದಲ್ಲಿ ಅವರು ವರ್ಗಾಂತರವೂ ಆಗುತ್ತಾರೆ. ಓದುವಾಗ ನಾವು ಅನೇಕವನ್ನು ಭಿನ್ನವಾಗಿಯೂ ನೋಡಬೇಕಾಗುತ್ತದೆ. ಓದುವಾಗ ಕೆಲವನ್ನು ನಾವು ನಿರ್ದಿಷ್ಟವಾಗಿ ಅದನ್ನು ನೋಡಬೇಕಾಗುತ್ತದೆ. ಅನೇಕವು ಭಾಷೆಯ ಮೂಲಕವೇ ಸ್ಥಾನಾಂತರವು ಆಗುತ್ತದೆ. ಅಂದರೆ ಅದರ ಸ್ವರೂಪವನ್ನು ನಾವು ನೋಡುವ ಕ್ರಮವು ಬೇರೆಯಾಗಬೇಕಾಗುತ್ತದೆ. ಬರೆದ ಮೇಲೆ ಲೇಖಕನು ಅದರಿಂದ ಹೊರಗೆ ಬರುತ್ತಾನೆ. ಆದ್ದರಿಂದ ನಾವು ಯಾವುದನ್ನು ಅನ್ವಯ ಮಾಡುತ್ತೇವೆಯೋ ಅದರ ಅರ್ಥವನ್ನು ಖಚಿತ ಮಾಡಬೇಕಾಗುತ್ತದೆ. ಯಾವುದನ್ನು ನಾವು ಕೃತಿಯ ಸಾರವೆಂದು ಹೇಳುತ್ತೇವೆಯೋ ಅದರಲ್ಲಿ ಕೃತಿಯನ್ನು ಗ್ರಹಿಸಬೇಕಾಗುತ್ತದೆ. ಕೃತಿಯಲ್ಲಿ ಓದು ಎನ್ನುವುದಕ್ಕೆ ಕೆಲವು ರೀತಿಯ ಆದ್ಯತೆಯೂ ಇದೆ. ಬೇಕಾದಂತೆ ಓದುತ್ತೇವೆ ಎಂದರೆ ನಾವು ಕೃತಿಯ ಕೇಂದ್ರವನ್ನು ಬದಲಿಸುವ ಸಾಧ್ಯತೆಯೂ ಇರುತ್ತದೆ. ಓದು ಎನ್ನುವುದು ಮೂಲಭೂತವಾಗಿ ಅಸಂಗತವಾದ ಒಂದು ಪ್ರಕ್ರಿಯೆಯು ಅಲ್ಲ. ಓದು ಅಂದರೆ ಅದನ್ನು ನಾವು ಒಂದು ನಿರ್ದಿಷ್ಟವಾದ ಪ್ರಕ್ರಿಯೆ ಎಂದೂ ತಿಳಿಯಬೇಕಾಗುತ್ತದೆ. ಅಂದರೆ ಅದನ್ನು ಅನಿಯತವೆಂದು ಭಾವಿಸುವುದು ಸರಿಯಾದ ಕ್ರಮವು ಅಲ್ಲ. ಅನ್ವಯವು ಯಾವಾಗಲೂ ಅದರ ಕೇಂದ್ರಕ್ಕೆ ಬರಬೇಕಾಗುತ್ತದೆ. ಮತ್ತು ಅದರ ಅರ್ಥವನ್ನು ನಾವು ಅದರ ಆಶಯವನ್ನು ನೋಡಿಕೊಂಡು ಗಮನಿಸಬೇಕಾಗುತ್ತದೆ. ಯಾವುದೇ ಅಥೆಂಟಿಕ್ ಎನ್ನಬಹುದಾದ ಸಂಗತಿಗಳು ನಿಜವಾಗಿಯೂ ಕೃತಿಕಾರನ ಹತ್ತಿರ ಹೋಗುತ್ತದೆ. ಈ ದೃಷ್ಟಿಯಿಂದ ಯಾವ ಮಾರ್ಕ್ಸವಾದಿಯೂ ಸಾಹಿತ್ಯ ಮತ್ತು ಅದರ ವಿಮರ್ಶೆಯನ್ನು ನಿರಾಕರಿಸುವುದೂ ಇಲ್ಲ. ಅದು ಅತ್ಯಂತ ಗಂಭೀರವಾದ ಚಟುವಟಿಕೆಯು ಆಗಿದೆ. ಲೇಖಕನು ಯಾವುದನ್ನು ಅಭಿವ್ಯಕ್ತ ಮಾಡಿದ್ದಾನೆಯೋ ಅದನ್ನು ಗ್ರಹಿಸುವುದು ಈ ದೃಷ್ಟಿಯಿಂದ ಹೆಚ್ಚು ಸಕ್ರಿಯವಾದ ಸಂಗತಿಯೂ ಹೌದು. ಲೇಖಕ ಮತ್ತು ವಿಮರ್ಶಕನ ಪಾತ್ರವು ಈ ದೃಷ್ಟಿಯಿಂದ ಹೆಚ್ಚು ಸಂಕೀರ್ಣವಾಗಿದೆ. ಸಾಹಿತ್ಯದ ಚರ್ಚೆಯಲ್ಲಿ ಮತ್ತೆ ಮತ್ತೆ ಬಂದ ಒಂದು ಪ್ರಶ್ನೆಯನ್ನು ಇಲ್ಲಿ ನೋಡಬೇಕಾಗುತ್ತದೆ. ಅದು ಅವೈಯಕ್ತಿಕತೆಯ ಪ್ರಶ್ನೆ. ಅದು ಹಾಗೆ ಆಗುತ್ತದೆಯೇ ಎನ್ನುವುದನ್ನು ನೋಡಬೇಕು. ಯಾವುದೇ ಕಲೆಯು ಅವೈಯಕ್ತಿಕತೆಯಿಂದ ಹುಟ್ಟುವುದೂ ಇಲ್ಲ.

ವ್ಯಕ್ತಿಯ ಅನುಭವವು ಅತ್ಯಂತ ಹೆಚ್ಚು ಭಾವನೆಗಳನ್ನು ಒಳಗೊಂಡಿರುತ್ತವೆ. ಆದರೆ ಅದರಲ್ಲಿ ಭಾವನೆಯು ಹುಟ್ಟುವುದು ಮತ್ತು ಅದಕ್ಕೆ ನಾವು ಸ್ಪಂದಿಸುವುದು ಅನಿವಾರ್ಯವೂ ಹೌದು.. ಅಂದರೆ ಅದನ್ನು ಆ ರೀತಿಯಲ್ಲಿ ಹೇಳಬೇಕಾಗುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ಭಾವನೆಗಳ

ನಡುವೆ ಸಂಘರ್ಷವು ನಡೆಯುತ್ತವೆ. ಸಂಘರ್ಷವೇ ಕಾವ್ಯವನ್ನು ರಚಿಸಲು ಅವಕಾಶವನ್ನು ಮಾಡುತ್ತವೆ. ವ್ಯಕ್ತಿತ್ವದಿಂದ ದೂರವಾದರೆ ನಾವು ಬೆರೆಯಲಾರೆವು. ಅಂದರೆ ಬರಹವು ಹುಟ್ಟುವುದು ವ್ಯಕ್ತಿತ್ವದಿಂದ ಪಾರಾಗುವ ಪ್ರಕ್ರಿಯೆಯಿಂದ ಅಲ್ಲ. ಅದರ ಬದಲು ಅದು ಹುಟ್ಟುವುದು ನಿಜವಾಗಿಯೂ ವ್ಯಕ್ತಿಯ ಪ್ರಜ್ಞೆಯಿಂದ. ಅವ್ಯೆಯಕ್ತಿಕತೆಯು ವಾಸ್ತವವಾಗಿ ನಿಜವನ್ನು ಪರಿಗಣನೆಗೆ ತಂದು ಕೊಳ್ಳುವುದೂ ಇಲ್ಲ. ಭಾಷೆ ಎಂದರೆ ಅದು ವ್ಯಕ್ತಿಯಿಂದ ಆಗುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಸ್ವಭಾವವನ್ನು ಹೇಳುತ್ತದೆ. ಅಂದರೆ ಬರೆಯುವುದು ಮತ್ತು ಕೇಳುವುದು, ಹೇಳುವುದು ಮತ್ತು ಓದುವುದು ಮುಂತಾದವು ನಮ್ಮ ಭಾವನೆಗಳ ಸ್ವರೂಪವನ್ನು ಹೇಳುತ್ತವೆ. ಅದರಲ್ಲಿ ಒಂದು ನಿರ್ದಿಷ್ಟವಾದ ಸಂಬಂಧವೂ ಇರುತ್ತದೆ. ಲೇಖಕ ತನಗೆ ಗೊತ್ತಿರುವುದನ್ನು ಕೃತಿಯಲ್ಲಿ ಸರಿಯಾಗಿಯೇ ಹೇಳುತ್ತಾನೆ. ಅದು ಸಮಗ್ರವೂ ಆಗಿರುತ್ತದೆ. ಅವನ ಮನೋಭಾವ ಮತ್ತು ಅದರ ಘರ್ಷಣೆಗಳು ಅವನ ಮಾತಿನಲ್ಲಿ ವ್ಯಕ್ತವಾಗುತ್ತವೆ. ಅದರಲ್ಲಿ ಅವನ ಸ್ವಭಾವವೂ ಗಮನಕ್ಕೆ ಬರುತ್ತದೆ. ಸುಮ್ಮನೇ ಯಾರೂ ಮಾತಾಡುವುದೂ ಇಲ್ಲ. ಮಾತು ಮತ್ತು ನಮ್ಮ ಮನೋಸ್ಥಿತಿಯು ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತವೆ. ಅದಕ್ಕೆ ನಿರ್ದಿಷ್ಟವಾದ ಗುಣ ಮತ್ತು ಸ್ವಭಾವವು ಇರುತ್ತದೆ. ಬರಹ ಮತ್ತು ಅದರ ಸ್ವಭಾವವು ಭಿನ್ನವಾದ ಕಾರಣಕ್ಕೆ ನಮಗೆ ಹೆಚ್ಚು ಮುಖ್ಯವಾಗುತ್ತದೆ. ನಿರ್ದಿಷ್ಟವಾದ ಕೆಲವು ಮಾನದಂಡಗಳು ಇರುತ್ತವೆ. ಬರಹವು ಮೂಲಭೂತವಾಗಿ ಕೆಲವು ರೀತಿಯಲ್ಲಿ ಕೆಲವು ವಿಷಯಗಳನ್ನು ಪ್ರತಿಪಾದಿಸುತ್ತವೆ. ಅದು ಚರಿತ್ರೆಯಿಂದ ಹುಟ್ಟಿದೆ. ಅವನ ನೆನಪುಗಳನ್ನು ಅದು ಹೇಳುತ್ತದೆ. ಅನೇಕ ಸಂದರ್ಭದಲ್ಲಿ ಚಾರಿತ್ರಿಕ ಬದ್ಧತೆಯೆನ್ನುವುದು ಒಡೆದು ಕಾಣಿಸುವುದೂ ಇಲ್ಲ. ಆದರೆ ಅದು ಇರುತ್ತದೆ. ಅದರಿಂದ ಮುಂದೆ ಹೋಗಬೇಕೆ ಬೇಡವೇ ಎನ್ನುವುದು ಮಾತ್ರವೇ ಪ್ರಶ್ನೆಯು ಆಗಿದೆ.

ಕುವೆಂಪು ಕಾದಂಬರಿಯಲ್ಲಿ ಬರುವ ಐತ, ಪೀಂಚಲು ಕೂಡಾ ಚರಿತ್ರೆಯಿಂದ ಹೊರತಾಗುವುದಿಲ್ಲ. ಅವರೂ ಚರಿತೆಯನ್ನು ಕಟ್ಟಿದ್ದಾರೆ. ಅದನ್ನು ಕುವೆಂಪು ಮೂಲಕವೇ ಹೇಳುತ್ತಿದ್ದಾರೆ. ಅವರು ನಿಜವಾಗಿದ್ದಾರೆ. ಈ ದೃಷ್ಟಿಯಿಂದ ನಮಗೆ ಸಾಹಿತ್ಯ ಮತ್ತು ಅದರ ಅನನ್ಯತೆಯ ಪ್ರಶ್ನೆಯೂ ಅತ್ಯಂತ ಮಹತ್ವದ್ದೂ ಆಗಿದೆ. ಬರೆದು ಮುಗಿಸಿದಲ್ಲಿಗೆ ಲೇಖಕನು ಮುಕ್ತನಾಗುತ್ತಾನೆ. ನಿಜ. ಆದರೆ ಅವನು ಎಷ್ಟರಮಟ್ಟಿಗೆ ಮುಕ್ತನಾಗುತ್ತಾನೆ ಎನ್ನುವುದು ಮಾತ್ರವೆ ಇಲ್ಲಿ ಗಮನಿಸಬೇಕಾಗುತ್ತದೆ. ಪ್ರಜ್ಞೆ ಮತ್ತು ಅದರ ರೂಪೀಕರಣವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಪ್ರಜ್ಞೆಗೆ ಕೆಲವು ಉದ್ದೇಶಗಳು ಇರುತ್ತವೆ. ಬದಲಾವಣೆಯು ಮೂಲಭೂತವಾಗಿ ಕೆಲವನ್ನು ಹೇಳುತ್ತವೆ. ಅದು ನಮ್ಮ ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತದೆ. ಯಾವುದೇ ಸಂಗತಿಗೆ ಒಂದು ಮೂಲವೆನ್ನುವುದು ಇರುತ್ತದೆ. ಅದು ನಮಗೆ ನೆನಪುಗಳೂ ಹೌದು. ಆದ್ದರಿಂದ ಬರಹ ಮತ್ತು ನೆನಪುಗಳು ಅತ್ಯಂತ ಮಹತ್ವದ್ದೂ ಹೌದು. ಕೆಲವು ಸಂಬಂಧಗಳು ಈ ದೃಷ್ಟಿಯಿಂದ ಅತ್ಯಂತ ಮುಖ್ಯ. ನಾವು ಮತ್ತು ನಮ್ಮ ಸುತ್ತ ಇರುವ ಸಮಾಜವು ನಮಗೆ ಅನೇಕವನ್ನು ಹೇಳುತ್ತವೆ. ವ್ಯಕ್ತಿಯು ಸಮಾಜದಿಂದ ಪಡೆಯುತ್ತಾನೆ. ಕೃತಿಯಲ್ಲಿ ಲೇಖಕನನ್ನು ತಿರಸ್ಕರಿಸಬೇಕೆ ಎನ್ನುವುದು ಮುಖ್ಯವಾದ ಪ್ರಶ್ನೆಯೂ ಆಗಿದೆ. ಪೂರ್ವ ರಚಿತವಾದ ಪಠ್ಯವನ್ನು ಹೊರತು ಮಾಡಿಕೊಂಡು ನಾವು ಬರೆಯಬೇಕಾಗಿಯೂ ಇಲ್ಲ.

ರಾಷ್ಟ್ರೀಯತೆಯ ಚಳುವಳಿಯು ಒಂದು ಅಪೂರ್ವ ಘಟನೆ. ಅದನ್ನು ನೋಡಿಕೊಂಡೇ ಕಾರಂತರು ಬರೆದರು, ಅವರಿಗೆ ಕೊನೆಗೆ ಗಾಂಧಿಯವರ ನಿಲುವು ಸಹನೀಯವಾಗಲಿಲ್ಲ. ಅದನ್ನು ನಾವು ಪೂರ್ವ ಪಠ್ಯವೆಂದು ಹೇಳುತ್ತೇವೆ. ಅದನ್ನು ಕುರಿತು ಕಾರಂತರು ಏನು ಬರೆದರೋ ಅದರ ಮೂಲವನ್ನು ಬಿಡಲಿಲ್ಲ. ವಿಮರ್ಶೆಯನ್ನು ಮಾಡುವಾಗ ನಾವು ಅದನ್ನು ಗಮನಿಸಬೇಕಾಗುತ್ತದೆ. ಮೂಲಭೂತವಾಗಿ ಅದನ್ನು ಗುರುತಿಸುವುದು ಬಹಳ ಮುಖ್ಯವಾಗುತ್ತದೆ. ವಿಮರ್ಶೆಯು ಈ ದೃಷ್ಟಿಯಲ್ಲಿ ಒಂದು ಮಧ್ಯವರ್ತಿ. ಲೇಖಕ ಮತ್ತು ವಿಮರ್ಶಕರ ನಡುವೆ ಕೃತಿಯು ಇದೆ. ಅಂದರೆ ಯಾರು ಕೊಡುತ್ತಾರೆ, ಯಾರು ಸ್ವೀಕರಿಸುತ್ತಾರೆ ಎನ್ನುವುದು ಮಾತ್ರವೇ ಬಹಳ ಮುಖ್ಯ. ಈ ಸಂಬಂಧಗಳಲ್ಲಿ ಯಾವುದೆ ತಾರತಮ್ಯವು ಇಲ್ಲ. ಅವನು ಶ್ರೇಷ್ಠ ಮತ್ತು ಇನ್ನೊಬ್ಬ ಕನಿಷ್ಠ ಎನ್ನುವ ಪ್ರಶ್ನೆಯು ಮುಖ್ಯವಾಗುವುದೂ ಇಲ್ಲ. ನಾವು ಕೃತಿಯನ್ನು ಹೇಗೆ ಸ್ವೀಕರಿಸಿದ್ದೇವೆ ಎನ್ನುವುದು ಮಾತ್ರವೇ ಮುಖ್ಯವಾಗುತ್ತದೆ. ಸ್ವೀಕಾರವು ನಮ್ಮ ಸ್ವಂತಿಕೆಯ ಪ್ರಶ್ನೆಯೂ ಆಗುತ್ತದೆ. ಬರೆಯುವುದು ಮತ್ತು ಓದುವುದೂ ಎರಡೂ ನಮ್ಮ ಅನುಭವವನ್ನು ಹೇಳುತ್ತದೆ. ಕೃತಿಯು ನಮಗೆ ನಮ್ಮ ಅನುಭವವನ್ನು ವಿಸ್ತರಿಸುತ್ತದೆ. ಆದರೆ ಪಠ್ಯ ಮತ್ತು ಅದರ ಏಕತೆಯನ್ನು ಡೆರಿಡಾ ಪ್ರಶ್ನಿಸುತ್ತಾನೆ. ಸಾವಯವ ಸಂಬಂಧ ಮತ್ತು ಕೃತಿಗಳನ್ನು ಲುಕಾಕ್ಸ್ ಹೇಳುತ್ತಾನೆ. ಈ ಎರಡೂ ಸಂಗತಿಗಳನ್ನು ನಾವು ಗಮನಿಸಬೇಕಾಗುತ್ತದೆ. ಲೇಖಕ ಮತ್ತು ಅವನ ಮನೋಸ್ಥಿತಿಯು ಲೇಖಕನ ಮನೋಸ್ಥಿತಿಯು ಪೂರಕವಾಗಿ ಕೆಲಸವನ್ನು ಮಾಡಿದರೆ ಅದರ ಅರ್ಥವು ಬೇರೆಯಾಗುತ್ತದೆ.

ಲೇಖಕನು ಹೇಳುವುದು ಮತ್ತು ಅದನ್ನು ಓದುಗ ಸ್ವೀಕರಿಸುವುದು ವಿಶಿಷ್ಟವಾದ ಪ್ರಕ್ರಿಯೆಗಳು ಆಗಿವೆ. ಕೃತಿಗೆ ಒಂದು ಚಾರಿತ್ರಿಕ ಅಸ್ತಿತ್ವವು ಇದೆ ಎಂದು ಲುಕಾಕ್ಸ್ ಹೇಳುತ್ತಾನೆ. ಅವನು ಚರಿತ್ರೆ, ಕೃತಿಯ ವ್ಯಂಗ್ಯ ಮತ್ತು ಅದರ ಕಥಾನಕಗಳನ್ನು ಬಹಳ ಮುಖ್ಯವೆಂದು ಭಾವಿಸುತ್ತಾನೆ. ಅಮೇರಿಕಾದ ನವ್ಯ ವಿಮರ್ಶೆಯು ಅತ್ಯಂತ ಹೆಚ್ಚು ವ್ಯಂಗ್ಯ ಮತ್ತು ಅದರ ಪರಿನಾಮವನ್ನು ವಿವರಿಸಿತು. ಅದರ ಉದ್ಧೇಶವು ಬೇರೆಯಾಗಿದೆ. ಅದರ ನಿಲುವು ಬೇರೆಯಾಗಿದೆ. ಅದು ಪಠ್ಯವನ್ನು ಪ್ರಧಾನವೆಂದು ಹೇಳುತ್ತದೆ. ಅದರಲ್ಲಿ ಕೃತಿಯೇ ಹೆಚ್ಚು ಮುಖ್ಯ. ಆದರೆ ಬರವಣಿಗೆ ನಮ್ಮ ಸ್ವಂತಿಕೆಯನ್ನು ಹೇಗೆ ಹೇಳುತ್ತದೆ ಎಂದು ಅದು ನೋಡಲು ಹೋಗುವುದಿಲ್ಲ. ಹಾಗೆ ನೋಡುವುದಿದ್ದರೆ ಯಾವುದೇ ರಚನೆಯು ಮೂಲಭೂತವಾಗಿ ಸ್ವಂತ ಅಸ್ತಿತ್ವವನ್ನು ಹೊಂದುವುದಿಲ್ಲ. ಅದು ಉದ್ದೇಶವನ್ನು ಹೇಳುತ್ತದೆ. ಯಾವುದೇ ರೀತಿಯ ಓದು ನಮಗೆ ಬೇರೆ ಬೇರೆ ಅಂಶಗಳನ್ನು ಹೇಳುತ್ತದೆ ನಿಜ. ಆದರೆ ಅದರಲ್ಲಿ ಮೂಲಗ್ರಹಿಕೆಯು ಹೇಗೆ ಮುಖ್ಯವೆಂದೂ ನೋಡಬೇಕಾಗುತ್ತದೆ. ಓದುಗರು ಮತ್ತು ಅವರ ಒಳನೋಟವನ್ನು ಈ ದೃಷ್ಟಿಯಿಂದ ಬೇರೆ ಮಾಡಲು ಬರುವುದೇ ಇಲ್ಲ. ಪಠ್ಯವೆನ್ನುವುದು ಅದರ ಪಾಡಿಗೆ ಅದು ಸ್ವತಂತ್ರವೆಂದು ಹೇಳಲು ಆಗುವುದೂ ಇಲ್ಲ. ಅದು ಅದರ ಮಟ್ಟಿಗೆ ಪೂರ್ಣವೆಂದು ಹೇಳಿದರೆ ಅದರ ಕುರುಡುತನ ಮಾತ್ರವೇ ಆಗುತ್ತದೆ. ಮತ್ತೆ ಅನೇಕರು ಪಠ್ಯವನ್ನು ಒಳಗಿನಿಂದ ನೋಡಬೇಕು ಹೊರಗಿನಿಂದ ನೋಡಬೇಕು ಎಂದು ಹೇಳುತ್ತಾರೆ. ಅದು ಸರಳ ಸಮೀಕರಣ ಮಾತ್ರವೇ ಆಗುತ್ತದೆ. ಅವುಗಳು ಪರಸ್ಪರ ವಿರುದ್ಧವಾದ ಪ್ರಕ್ರಿಯೆಯು ಅಲ್ಲ. ಆದರೆ ಯಾವಾಗ ನಾವು ಬರಹ ಮತ್ತಿತರ ಸಂಗತಿಗಳನ್ನು ಬೇರೆಯೆಂದು

ಮಾಡುತ್ತೇವೆಯೋ ಆಗ ಅದರ ಸ್ವರೂಪವನ್ನು ಮಿತಿಮಾಡುತ್ತೇವೆ. ಆದರೆ ಯಾವಾಗ ಸಾಹಿತ್ಯವನ್ನು ಅತ್ಯಂತ ವೈಭವೀ ಕರಿಸುತ್ತೇವೆಯೋ ಆಗ ಅದರ ಕಾರ್ಯವನ್ನು ಹೆಚ್ಚು ಎಂದು ಭಾವಿಸುತ್ತೇವೆ. ನಮಗೆ ಅದರ ಕಾರ್ಯವನ್ನು ಮಾತ್ರವೇ ಬಹಳ ಮುಖ್ಯವೆಂಬ ಭಾವನೆಯು ಬರುತ್ತದೆ.

ನಮಗೆ ಬೇರೆ ಸಮಸ್ಯೆಯೂ ಇದೆ. ಅಂದರೆ ಸಾಹಿತ್ಯವನ್ನು ನೋಡುವುದು ಅಂದರೆ ನಾವು ಅದನ್ನು ಓದುಗ ವರ್ಗಕ್ಕೆ ಮಾತ್ರವೇ ಸೀಮಿತವೆಂದು ಹೇಳುತ್ತೇವೆ. ಆದರೆ ವಿಷಯವು ಅಷ್ಟು ಸುಲಭವಲ್ಲ. ಸಾಹಿತ್ಯ ಮತ್ತು ಅದರ ಭಾಷೆಯು ತನ್ನ ಪಾಡಿಗೆ ತಾನೇ ಸ್ವಯಂತಂತ್ರವಲ್ಲ. ಅದು ಅವಲಂಬಿತವಾದ್ದೂ ಹೌದು. ಸಾಹಿತ್ಯ ಮತ್ತು ಅದರ ಭಾಷೆಯನ್ನು ಮಾತ್ರವೇ ಬಹಳ ಮುಖ್ಯವೆಂದು ಹೇಳುವವರು ಉಳಿದ ಸಂಗತಿಯನ್ನು ಗ್ರಹಿಸುವುದೂ ಇಲ್ಲ. ಅವರು ಅದನ್ನು ತಮ್ಮ ಚರ್ಚೆಗೆ ಬೇಕಾದಂತೆ ಬಳಸುತ್ತಾರೆ. ವಿಮರ್ಶೆಯು ವಾಸ್ತವವಾಗಿ ಓದುವ ಕ್ರಮ. ಆದರೆ ಅದನ್ನು ಓದುವುದು ಅಂದರೆ ಸೀಮಿತವಾದ ಅರ್ಥದಲ್ಲಿ ನಾವು ಭಾವಿಸಬೇಕಾದ ಅಗತ್ಯವಿಲ್ಲ. ಲೇಖಕನಿಗೆ ಭಾಷೆಯು ಒಂದು ದೃಷ್ಟಿಕೋನದಲ್ಲಿ ಬರೀ ವಾಹಕ ಮಾತ್ರವೇ ಆಗಿದೆ. ಭಾಷೆಯನ್ನು ಅವನು ನಿಯಂತ್ರಿಸುತ್ತಾನೆ. ಅದು ಅವನ ಅಗತ್ಯವೂ ಹೌದು. ಅವನಗೆ ಯಾವುದು ಮುಖ್ಯವೆಂದು ಅನಿಸುತ್ತದೆಯೋ ಅದನ್ನು ಮಾತ್ರವೇ ಅವನು ಹೇಳುತ್ತಾನೆ. ನಮ್ಮ ಮನಸ್ಸು ಮತ್ತು ಅದರ ಸ್ವಭಾವವೇ ನಮಗೆ ಹೇಳುವಂತೆ ಪ್ರೇರೇಪಣೆಯನ್ನು ನೀಡುತ್ತದೆ. ಈ ದೃಷ್ಟಿಯಿಂದ ನಮ್ಮ ಮನಸ್ಸು ಮತ್ತು ಅದರ ಪರಿಣಾಮವೇ ಸಾಹಿತ್ಯದಲ್ಲಿ ಒಂದು ನಿರ್ದಿಷ್ಟವಾದ ಅಸ್ತಿತ್ವವನ್ನು ಪಡೆಯುವಂತೆ ಮಾಡುತ್ತದೆ. ರಾಚನಿಕ ವಿಮರ್ಶೆಯು ವಾಸ್ತವವಾಗಿ ಒಳ ಹೊರಗನ್ನು ಬೇರೆ ಮಾಡಲು ನೋಡುತ್ತದೆ. ಅದನ್ನು ಹಾಗೆ ಮಾಡುವಾಗ ಕೆಲವು ಸೀಮಾರೇಖೆಯನ್ನು ಹಾಕುತ್ತದೆ. ಅಂದರೆ ಸಾಹಿತ್ಯವನ್ನು ಹೇಗೆ ನೋಡಬೇಕು ಎನ್ನುವುದು ಅದರ ಸಮಸ್ಯೆಯೂ ಹೌದು. ಆದರೆ ಯಾವಾಗ ನಮ್ಮ ಲೇಖಕರು ತಮ್ಮ ಬರಹವನ್ನು ಲೋಕಾತೀತವಾದದ್ದು ಎಂದು ಭಾವಿಸುತ್ತಾರೆಯೋ ಆಗ ಅವರ ಬರಹಗಳಿಗೆ ಕೆಲವು ಮಿತಿಗಳು ಬರುತ್ತವೆ. ಅವರು ಕೆಲವು ಸೀಮಾರೇಖೆಯನ್ನು ಹಾಕಿಕೊಳ್ಳುತ್ತಾರೆ. ಮತ್ತು ಅದರಿಂದ ಅವರ ಬರಹವೂ ಕೂಡಾ ಮಿತಿಯನ್ನು ಹಾಕಿಕೊಳ್ಳುತ್ತವೆ.

ನಿಸರ್ಗದ ಸಮಾಜಶಾಸ್ತ್ರವೆಂದು ಯಾವುದನ್ನಾದರೂ ಕರೆಯುವುದಿದ್ದರೆ ಅದು ಕಾರಂತರ ಕಾದಂಬರಿಗಳನ್ನೆ ಎಂದು ಕಾಣುತ್ತದೆ.

ಅಂದರೆ ಕಾರಂತರು ಕಾದಂಬರಿಗಳಲ್ಲಿ ಕಾಣುವ ವಿವರಗಳು ಮತ್ತೊಂದು ಬಗೆಯವು. ಅವರು ಅದನ್ನು ನೋಡುವುದು ಒಂದು ಆಂತರಿಕವಾದ ಹಿನ್ನೆಲೆಯಲ್ಲಿ. ಅಂದರೆ ವ್ಯಕ್ತಿ ಮತ್ತು ನಿಸರ್ಗವನ್ನು ಕಾರಂತರು ದ್ವಂದ್ವಾತ್ಮಕವಾದ ಕ್ರಮದಲ್ಲಿಯೂ ನೋಡುತ್ತಾರೆ. ನಿಸರ್ಗ ಮತ್ತು ಮತ್ತು ಅದರ ಅಂತರಂಗವು ಅವರಿಗೆ ಹೆಚ್ಚು ಮುಖ್ಯ. ವ್ಯಕ್ತಿಯು ನಿಸರ್ಗವನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಕಾರಂತರಿಗೆ ಹೆಚ್ಚು ಮುಖ್ಯ. ಕಾರಂತರ ಬೆಟ್ಟದ ಜೀವ ಮತ್ತು ಕುಡಿಯರ ಕೂಸು ಕಾದಂಬರಿಗಳಲ್ಲಿ ನಿಸರ್ಗವು ಅತ್ಯಂತ ಮಹತ್ವದ್ದೂ ಆಗಿದೆ. ಬೆಟ್ಟದ ಜೀವದಲ್ಲಿ ವ್ಯಕ್ತಿ ಮತ್ತು ಅವನ ಭಾವನೆಗಳಿಗೆ ವಿಶೇಷವಾದ ಅರ್ಥವೂ ಇದೆ. ಕುಡಿಯರ

ಕೂಸು ಮತ್ತು ಬೆಟ್ಟದಜೀವ ಕಾದಂಬರಿಗಳಲ್ಲಿ ಕೃಷಿಗೆ ಕಾಡು ಪರಿವರ್ತನೆಯೂ ಆಗುತ್ತದೆ. ಅಂದರೆ ಅದರಲ್ಲಿ ವ್ಯಕ್ತಿ ಮತ್ತು ಆಹಾರ ಹಾಗೂ ಅವನ ಆರ್ಥಿಕತೆಯು ಅತ್ಯಂತ ಮಹತ್ವದ್ದೂ ಆಗುತ್ತದೆ. ನಿಸರ್ಗ, ವಾಸ್ತವ, ಮನುಷ್ಯ ಹಾಗೂ ಅವನ ಸಂಸ್ಕೃತಿಗಳು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತವೆ. ನಿಸರ್ಗದ ನಡುವೆ ವ್ಯಕ್ತಿಯು ತನ್ನ ಪಾಡಿಗೆ ನಿಸರ್ಗದ ಮಡಿಲಿನಲ್ಲಿ ಸುಖವನ್ನು ಅನುಭವಿಸಬಲ್ಲ. ನಿಸರ್ಗಕ್ಕೆ ಯಾವದೇ ರೀತಿಯಲ್ಲಿ ಯಾವುದೇ ಕೀಲಿಕೈ ಇಲ್ಲವೆನ್ನುವುದು ಇಲ್ಲಿಯ ಮುಖ್ಯವಾದ ತತ್ವವೂ ಆಗಿದೆ.

ಕಾರಂತರು ಹೇಳುವ ನಿಸರ್ಗವು ಮತ್ತೆ ಒಂದು ಅಂಶವನ್ನು ಕಾಣುತ್ತೇವೆ. ಅದು ನಿಸರ್ಗವನ್ನು ಧರ್ಮವನ್ನು ಒಟ್ಟಿಗೆ ಕಾಣುತ್ತದೆ. ಕುವೆಂಪು ಕಾದಂಬರಿಗಳಲ್ಲಿ ನಿಸರ್ಗದ ವಿವಿಧ ಕ್ರಿಯೆಗಳನ್ನು ನಾವು ಕಾಣಬಹುದು. ವ್ಯಕ್ತಿ ಮತ್ತು ಅವನ ಹೊಸ ಮಾದರಿಯ ಚಟುವಟಿಕೆಯು ನವೋದಯದಲ್ಲಿ ಎದ್ದುಕಾಣುತ್ತದೆ. ನಿಸರ್ಗದ ಎದುರು ವ್ಯಕ್ತಿಗಳು ವ್ಯಾಖ್ಯೆಗೆ ಗುರಿಯಾಗುತ್ತಾರೆ. ನಿಸರ್ಗವನ್ನು ವ್ಯಕ್ತಿಯು ನೋಡುವುದು ಮತ್ತು ಅದನ್ನು ಗ್ರಹಿಸುವುದು ಬಹಳ ಮುಖ್ಯವಾಗುತ್ತದೆ. ಈ ಅರ್ಥದಲ್ಲಿ ಒಂದು ಅಥೆಂಟಿಸಿಟಿಯು ವ್ಯಕ್ತವಾಗುತ್ತದೆ. ನಿಸರ್ಗದ ಶಬ್ದಚಿತ್ರವು ಕುವೆಂಪುಗೆ ಹೆಚ್ಚು ಅಗತ್ಯವಾಗುತ್ತದೆ. ಮಲೆನಾಡನ್ನು ಅವರು ಹೆಚ್ಚು ಸಂಯೋಜನೆಯನ್ನು ಮಾಡುತ್ತಾರೆ. ಅವರು ಹೇಳುವುದು ಮತ್ತು ಅವರು ಗ್ರಹಿಸುವುದು ಕನ್ನಡಕ್ಕೆ ಆಗ ಹೆಚ್ಚು ಅಗತ್ಯವಾಗಿತ್ತು.

ಕಾರಂತರ ಕಾದಂಬರಿಗಳಲ್ಲಿ ಮತ್ತೆ ಕೆಲವು ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ. ಅವರಲ್ಲಿ ನಿಸರ್ಗವು ಆಂತರಿಕವಾದ ಒಂದು ಶಕ್ತಿಯೂ ಆಗುತ್ತದೆ. ವ್ಯಕ್ತಿಯು ನಿಸರ್ಗವನ್ನು ಅರ್ಥ ಮಾಡಿಕೊಳ್ಳುವ ಕ್ರಮಗಳು ಕಾರಂತರಲ್ಲಿ ಬೇರೆಯಾಗುತ್ತವೆ. ವಾಸ್ತವವಾಗಿ ಕಾರಂತರು ನಿಸರ್ಗವನ್ನು ನೋಡುವುದು ವೀಕ್ಷಕನ ರೀತಿಯಲ್ಲಿಯೇ ಎನ್ನುವುದೂ ಇಲ್ಲಿ ಗಮನಾರ್ಹವಾಗಿದೆ. ಮತ್ತು ಅದನ್ನು ವ್ಯಕ್ತಿಯು ಹೇಗೆ ಕಾಣುತ್ತಾನೆ ಎನ್ನುವುದೇ ಕಾರಂತರಿಗೆ ಹೆಚ್ಚು ಮುಖ್ಯ. ಅವರ ಬೆಟ್ಟದ ಜೀವ ಕಾದಂಬರಿಯಲ್ಲಿ ಅತ್ಯಂತ ಸಮೃದ್ಧವಾದ ಒಂದು ನಿಸರ್ಗವು ಇದೆ. ಅದರೊಂದಿಗೆ ಮನುಷ್ಯನ ಭಾವನೆಗಳೂ ಇವೆ. ಕೃಷಿಗಾಗಿ ವ್ಯಕ್ತಿಯು ನಿಸರ್ಗವನ್ನು ತನಗೆ ಬೇಕಾದ ರೀತಿಯಲ್ಲಿ ಪರಿವರ್ತಿಸುತ್ತಾನೆ. ಪರಿವರ್ತನೆಯು ಉದ್ದೇಶಿತವೂ ಹೌದು. ಅದರಲ್ಲಿ ಕಾರಣವಿದೆ. ಹಾಗೆ ನೋಡುವುದಿದ್ದರೆ ಯಾವುದೇ ಕಾರಣವೂ ಇಲ್ಲದೆ ವ್ಯಕ್ತಿಯು ಯಾವುದೇ ಹೊಸರಚನೆಯನ್ನು ಮಾಡಲಾರ. ನಿಸರ್ಗ ಮತ್ತು ವಾಸ್ತವ, ನಿಸರ್ಗ ಮತ್ತು ವ್ಯಕ್ತಿಗಳ ನಡುವೆ ಅನೇಕ ದ್ವಂದ್ವಗಳಿವೆ. ಆದರೆ ನಿಸರ್ಗವನ್ನು ಬರಹದ ವ್ಯಂಗ್ಯಕ್ಕಾಗಿಯೇ ಅವರು ಬಳಸಿಲ್ಲ. ಆದರೆ ನವ್ಯದಲ್ಲಿ ಯಾವುದು ವ್ಯಂಗ್ಯವೆಂದು ಅನಿಸಿತೋ ಅದರ ಅರ್ಥವು ವಿಶಾಲವೂ ಆಯಿತು. ವ್ಯಂಗ್ಯವು ಕೃತಿಯಲ್ಲಿ ಅತ್ಯಂತ ವಿಶಾಲವಾದ ಅರ್ಥವನ್ನು ಪಡೆದದ್ದು ನವ್ಯದಲ್ಲಿಯೇ. ಸಂಕೇತ ಮತ್ತು ಅದರ ಅರ್ಥದ ಸ್ವರೂಪವನ್ನು ಅವರು ಬದಲಿಸಿದರು. ಆದ್ದರಿಂದ ನಿಸರ್ಗ ಮತ್ತು ಮನುಷ್ಯರ ನಡುವಣ ಸಂಬಂಧಕ್ಕೆ ಅತ್ಯಂತ ಭಿನ್ನವಾದ ಒಂದು ಚೌಕಟ್ಟನ್ನು ನವ್ಯರು ಕೊಟ್ಟರು. ಸಂಕೇತ ಮತ್ತು ಅದರ ಸ್ವರೂಪವನ್ನು ಬದಲಿಸಿ ಅದಕ್ಕೆ ಹೊಸದಾದ ಅರ್ಥವನ್ನು ಅವರು ಕೊಟ್ಟರು ಮಾತ್ರವೇ ಅಲ್ಲದೆ ಅದರಲ್ಲಿ ಭಿನ್ನತೆಯನ್ನು ಸ್ಥಾಪಿಸಿದರು. ಕಾದಂಬರಿಗಳಲ್ಲಿಯೂ ನಾವು ಇದನ್ನು ಕಾಣುತ್ತೇವೆ.

ಕಾರಂತರ ಕಾದಂಬರಿಗಳಿಗೆ ಇರುವ ಸಾಮಾಜಿಕ ಹಾಗೂ ತಾತ್ವಿಕ ದರ್ಶನಗಳು ನಮಗೆ ಅನೇಕ ಸಾಧ್ಯತೆಗಳನ್ನು ತೆರೆಯುತ್ತವೆ. ಕಾದಂಬರಿಯ ಅಗತ್ಯವಿಲ್ಲದಿದ್ದರೆ ನಾವು ಅದನ್ನು ಓದುತ್ತಿರಲಿಲ್ಲ. ಕಾದಂಬರಿಯ ರಚನೆ ಕನ್ನಡದಲ್ಲಿ ಒಂದು ಹೊಸ ಬಗೆಯ ಚಟುವಟಿಕೆಯೇ ಆಗಿತ್ತು. ಕಾರಂತರ ಬರವಣಿಗೆಯ ಆಯ್ಕೆ ಮತ್ತು ಓದುಗರಾದ ನಮ್ಮ ಆಯ್ಕೆ ಸಾಹಿತ್ಯದ ಅಗತ್ಯ ಮಾತ್ರವೇ ಅಲ್ಲ. ಅದು ಸಾಂಸ್ಕೃತಿಕ ಆಯ್ಕೆಯೂ ಹೌದು. ಹಾಗೆಂದು ರಚನೆಯು ಯಾವತ್ತು ಬರೀ ಬುದ್ಧಿಜೀವಿಗಳ ಚಟುವಟಿಕೆಯೆಂದು ಭಾವಿಸಬಾರದು. ಅದು ನಡೆಯತ್ತದೆ. ಮತ್ತು ಎಲ್ಲರೂ ರಚಿಸುತ್ತಾರೆ. ಅದರ ಹಿಂದೆ ಒಂದು ಸಮಾಜ ನಿರ್ದಿಷ್ಟವಾದ ಜ್ಞಾನವೂ ಇರುತ್ತದೆ. ಅದರಲ್ಲಿ ವ್ಯಕ್ತವಾಗುವುದು ಬರೀ ಕೆಲವರ ಜ್ಞಾನ ಮಾತ್ರವೇ ಎಂದೂ ಭಾವಿಸಬಾರದು. ಮನುಷ್ಯ ಮತ್ತು ಅವನ ಜ್ಞಾನದ ಆಧಾರದ ಮೇಲೆಯೇ ಅನೇಕವು ನಡೆಯುತ್ತದೆ. ಅದು ಸಮಾಜದ ವಾಸ್ತವವಾಗಿದೆ. ಮನುಷ್ಯನ ಆಂತರಿಕವಾದ ಅನೇಕ ಜ್ಞಾನವು ಬೇರೆ ಬೇರೆ ಸಂಗತಿಗಳಿಂದ ಆವೃತವಾಗಿರುತ್ತದೆ. ಆದ್ದರಿಂದ ಅದರ ಸ್ವರೂಪವೂ ಬೇರೆಯಾಗುತ್ತದೆ. ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಸಂಗತಿಯನ್ನು ಇಲ್ಲಿ ದಾಖಲಿಸಬಹುದು. ಜೋರು ಮಲೆಯು ಬಂದರೆ ಮಳೆಗಾಲವನ್ನು ಕಳೆಯುವುದು ಹೇಗೆ ಎನ್ನುವ ಪ್ರಶ್ನೆಯು ಸರಸ್ವತಿ ಮತ್ತು ಪಾರ್ವತಿಯರಿಗೆ ಬರುತ್ತದೆ. ಅವರ ಮಾತುಕತೆಯಲ್ಲಿ ಬರುವ ಮುಖ್ಯವಾದ ಅಂಶವೆಂದರೆ ಶೂದ್ರರು ಮೀನು ತಿಂದಾರು ಆದರೆ ನಾವು ಅದನ್ನು ತಿನ್ನಲಿಕೆ ಆದೀತೆ? ಇಡೀ ಕಾದಂಬರಿಯನ್ನು ಓದಿದರೆ ಇದು ಅತ್ಯಂತ ಸಣ್ಣದಾದ ಸಂಗತಿಯೂ ಹೌದು. ಹಾಗೆಂದು ಇದನ್ನು ಸತ್ಯವೇ ಅಲ್ಲವೆಂದು ಹೇಳಲು ಬರುವುದಿಲ್ಲ ಒಂದು ಕಾದಂಬರಿಯಲ್ಲಿ ಹೇಗೆ ಅತ್ಯಂತ ಸಣ್ಣದಾದ ಸಂಗತಿಯೂ ನಿರ್ದಿಷ್ಟವಾದ ಪಾತ್ರವನ್ನು ವಹಿಸುತ್ತದೆ ಎನ್ನುವುದಕ್ಕೆ ಇದು ಸಾಕ್ಷಿಯೂ ಆಗಿದೆ. ಅದು ನಿರ್ದಿಷ್ಟವಾದ ಜ್ಞಾನ ಮತ್ತು ನಡೆ ನುಡಿಯನ್ನು ಹೇಳುತ್ತದೆ. ಅನೇಕರಿಗೆ ಈ ಭಾಗವು ಅತ್ಯಂತ ಮಹತ್ವದ್ದು ಅಲ್ಲವೆಂದು ಅನಿಸಬಹುದು. ಆದರೆ ಇದರಲ್ಲಿ ಸಮಾಜದ ಆಚಾರ ವಿಚಾರದ ಪ್ರಶ್ನೆಯು ಬರುತ್ತದೆ. ನಾವು ಯಾವ ಅಧ್ಯಯನ ಕ್ರಮವನ್ನು ಇಟ್ಟುಕೊಳ್ಳುತ್ತೇವೆಯೋ ಆದರ ಸ್ವರೂಪವನ್ನು ಇದು ಸೂಚಿಸುತ್ತದೆ. ಸಾಮಾಜಿಕವಾದ ಸಂಗತಿಗಳಲ್ಲಿ ಆಹಾರದ ಪ್ರಶ್ನೆಯು ಇದೆ. ಮತ್ತು ಅದರಲ್ಲಿ ವಿಧಿನಿಷೇಧಗಳೂ ಇವೆ. ನಾವು ಯಾವ ಅಧ್ಯಯನದ ಕ್ರಮವನ್ನು ಇಟ್ಟುಕೊಳ್ಳುತ್ತೇವೆಯೋ ಅದರ ಆಧಾರದ ಮೇಲೆ ನಾವು ಕೆಲವು ನಿರ್ಣಯಕ್ಕೆ ಬರುತ್ತೇವೆ. ಹಾಗೆ ನೋಡಿದರೆ ರಚನೆ ಮತ್ತು ಅದರ ಕ್ರಿಯೆಯು ವೈಜ್ಞಾನಿಕವೂ ಆಗಿದೆ. ಯಾವುದನ್ನು ಈವತ್ತು ರಚನೆಯೆಂದು ಹೇಳಿ ಅದನ್ನು ಉಳಿದ ವಿಷಯಕ್ಕೆ ಸಂಬಂಧವೇ ಇಲ್ಲವೆಂದು ಪ್ರತಿಪಾದಿಸುತ್ತೇವೆಯೋ ಆದು ಹಾಗೆ ಇರುವುದೇ ಇಲ್ಲ. ಅದು ಜೀವನವನ್ನು ತಿಳಿಸುತ್ತದೆ. ಅದರಲ್ಲಿ ಕ್ರಿಯೆ ಇರುತ್ತದೆ. ಮತ್ತು ಅದರಲ್ಲಿ ಮತ್ತೆ ಮತ್ತೆ ಬೇರೆ ಅಂಶಗಳ ಜೊತೆಗಿನ ಸಂಬಂಧವೂ ಇರುತ್ತದೆ. ರಚನೆ ಮತ್ತು ಅದರ ಕ್ರಿಯೆಗೆ ಸಂಬಂಧವಿದೆ. ಕಾರಂತರ ಕುಡಿಯರ ಕೂಸು, ಸ್ವಪ್ನದ ಹೊಳೆ ಕಾದಂಬರಿಗಳನ್ನು ಓದಿದರೆ ಬೇಟೆ, ಕೃಷಿ ಮುಂತಾದವುಗಳು ಹೇಗೆ ಒಂದು ಜೀವನದ ಕಲಾತ್ಮಕವಾದ ಕ್ರಿಯೆಯು ಆಗಿದೆ ಎಂದು ತಿಳಿಯುತ್ತದೆ.

ವಾಸ್ತವವಾಗಿ ಕಾರಂತರಲ್ಲಿ ಜೀವನ ಮತ್ತು ಅದರ ಶ್ರದ್ಧೆಯ ಪ್ರಶ್ನೆಯು ಅತ್ಯಂತ ಮಹತ್ವದ್ದೂ ಆಗಿದೆ. ಅದು ಮನುಷ್ಯರ ನಡವಳಿಕೆಯನ್ನು ಹೇಳುತ್ತದೆ. ಮತ್ತು ಅದರಲ್ಲಿ ಬೇರೆ ಬೇರೆ

ಗುಂಪುಗಳ ಪ್ರಶ್ನೆಯೂ ಬರುತ್ತದೆ. ಅಂದರೆ ಕಾರಂತರ ಚೋಮನ ದುಡಿ ಕಾದಂಬರಿಯಲ್ಲಿ ಬರುವ ಗುಂಪು ಒಂದು ಬಗೆಯದು. ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಗುಂಪು ಮತ್ತೊಂದು ಬಗೆಯದು. ಈ ಗುಂಪುಗಳಲ್ಲಿ ನಮ್ಮ ವರ್ತನೆಯ ಅಂಶಗಳೂ ಸೇರಿಕೊಂಡಿವೆ. ಚರಿತ್ರೆಯು ಹೇಗೆ ಬದಲಾಗುತ್ತವೆ ಎನ್ನುವುದರ ಚಿತ್ರಣವೂ ಇದೆ. ಜೀವನ ಮತ್ತು ಅದರ ಅಸ್ತಿತ್ವಕ್ಕಾಗಿ ಮನುಷ್ಯರು ನಡೆಸುವ ವಿವಿಧ ಬಗೆಯ ಹೋರಾಟಗಳ ವಿವರಣೆಯು ಅದರಲ್ಲಿದೆ. ಆದರೆ ಕಾರಂತರ ಕಾದಂಬರಿಗಳಲ್ಲಿ ಬರುವ ಸಮುದಾಯದ ಅರ್ಥವು ಭಿನ್ನವಾದ ವಿವರಣೆಯನ್ನು ಕೊಡುತ್ತವೆ. ಆದರೆ ಹಳ್ಳ ಬಂತು ಹಳ್ಳ ಕಾದಂಬರಿಯಲ್ಲಿ ಬರುವ ಜೀವನ ಮತ್ತು ಅದರ ಹೋರಾಟವು ಬೇರೆ ರೀತಿಯದೂ ಆಗಿದೆ. ಅದೇ ಬಗೆಯ ಹೋರಾಟವನ್ನು ನಾವು ಸ್ವಪ್ನಸಾರಸ್ವತದಲ್ಲಿ ನೋಡುವುದು ಸಾಧ್ಯವೆ ಇಲ್ಲ. ಸ್ವಪ್ನ ಸಾರಸ್ವತದಲ್ಲಿ ಮತಾಂತರ ಮತ್ತು ಅದರ ವಿರುದ್ಧ ನಡೆಯುವ ಸಂಘರ್ಷದ ವಿವರಣೆಗಳೂ ಇವೆ. ಮನುಷ್ಯ ಮತ್ತು ಅವನ ವಿಶ್ವಾತ್ಮಕತೆಯ ಪ್ರಶ್ನೆಯು ಹೇಗೆ ಬದಲಾಗುತ್ತದೆ ಎನ್ನುವುದು ವಸಾಹತು ಮತ್ತು ವಸಾಹತೋತ್ತರಕಾಲದ ಕಾದಂಬರಿಗಳು ನಮಗೆ ಹೇಳುತ್ತವೆ. ಸಾವಿರಾರು ಜನರ ಸಾವಿರಾರು ಕ್ರಿಯೆಗಳು ಸಮಾಜವನ್ನು ರೂಪಿಸಿವೆ. ಎಷ್ಟೋ ಜನರ ಮನಸ್ಸುಗಳು ನಿರ್ದಿಷ್ಟವಾದ ಚರಿತ್ರೆಯನ್ನು ಕಟ್ಟಿವೆ. ಎಷ್ಟೋ ಸರ್ತಿ ಒಂದು ಗುಂಪಿನ ಜನರು ಒಂದೇ ರೀತಿಯಲ್ಲಿ ಯಾಕೆ ಯೋಚಿಸುತ್ತಾರೆ ಎಂದರೆ ಅವರಿಗೆ ಸಮಾನವಾದ ಕೆಲವು ಆಸಕ್ತಿಗಳು ಇರುತ್ತವೆ. ಕೆಲವು ಸಂದರ್ಭದಲ್ಲಿ ಗುಂಪು ಮತ್ತು ಅವರ ಯೋಚನೆಯ ಕ್ರಮವನ್ನು ನಾವು ಬೇರೆ ಮಾಡಲು ಬರುವುದೂ ಇಲ್ಲ. ಸಮುದಾಯ ಮತ್ತು ಅದರ ಚಟುವಟಿಕೆಗೆ ಕೆಲವು ರೀತಿಯಲ್ಲಿ ಬೌದ್ಧಿಕವಾದ ಚಟುವಟಿಕೆಯೂ ಇರುತ್ತದೆ. ಅದರಲ್ಲಿ ಸಾಹಿತ್ಯವೂ ಒಂದು. ವ್ಯಕ್ತಿಗಳು ಮತ್ತು ಅವರ ನಡವಳಿಕೆಗಳು ಇತ್ಯಾತ್ಮಕವಾದ ಸಂಯೋಜನೆಯನ್ನು ಮಾಡುತ್ತವೆ. ಸಮಾನವಾದ ಕೆಲವು ಅಂಶಗಳನ್ನು ರೂಪಿಸುತ್ತವೆ. ಸಮಾಜ ಮತ್ತು ಅದರ ಚಟುವಟಿಕೆಯನ್ನು ರೂಪಿಸುವಾಗ ಅದು ಯಾವುದನ್ನು ಹೇಳುತ್ತದೆ ಮತ್ತು ಅದನ್ನು ಅದು ಹೇಗೆ ಗ್ರಹಿಸುತ್ತದೆ ಎನ್ನುವುದು ಮಾತ್ರವೇ ಬಹಳ ಮುಖ್ಯ. ಅನೇಕ ಸಂದರ್ಭದಲ್ಲಿ ಹಳೆಯ ರಚನೆಗಳನ್ನು ಒಡೆದುಕೊಂಡು ಹೊಸರಚನೆಗಳು ಹುಟ್ಟುತ್ತವೆ. ಅರ್ಥಹೀನವಾದ ಕ್ರಿಯೆಗಳು ಮತ್ತು ಅದರ ರಚನೆಗಳನ್ನು ಹೊಸರಚನೆಗಳು ನಿರಾಕರಿಸುತ್ತವೆ. ಹೊಸತನ್ನು ಸ್ವೀಕರಿಸುವಾಗ ಅದರಲ್ಲಿ ಹೊಸ ಸನ್ನಿವೇಶವೂ ರಚನೆಯಾಗುತ್ತದೆ.

ಸಮಾಜವು ಬದಲಾಗುತ್ತಾ ಹೋದಂತೆ ನಮ್ಮ ಆಲೋಚನೆ ಮತ್ತು ನಡತೆಗಳು ಬದಲಾಗುತ್ತವೆ. ನಮ್ಮ ಪ್ರಗತಿಪರ ಆಲೋಚನೆಗಳೂ ವ್ಯತ್ಯಾಸವಾಗುತ್ತವೆ. ಒಂದು ಕಾಲದ ಪ್ರಗತಿಯ ಕುರಿತಾದ ಚಿಂತನೆಗಳು ಮತ್ತು ಕಾಲಕ್ಕೆ ಬರುವಾಗ ಹಳೆಯದರಂತೆ ಭಾಸವಾಗುತ್ತದೆ. ಯಾವುದೇ ರಚನೆ ಮತ್ತು ಅದರ ಕ್ರಿಯೆಗಳು ಶಾಶ್ವತವೆಂದು ಭಾವಿಸಬೇಕಾಗಿಯೂ ಇಲ್ಲ. ನಮ್ಮ ಕ್ರಿಯಾತ್ಮಕವಾದ ಒಂದು ಚಟುವಟಿಕೆಯು ಸಮೂಹದೊಂದಿಗೆ ನಿರ್ಣಾಯಕವಾದ ಸಂಬಂಧವನ್ನು ಇಟ್ಟುಕೊಂಡಿರುತ್ತವೆ. ಸಮಾಜ ಮತ್ತು ಲೇಖಕರ ನಡುವೆ ದ್ವಂದ್ವಾತ್ಮಕವಾದ ಸಂಬಂಧವಿದೆ. ಮತ್ತು ಅದನ್ನು ನಾವು ನಿರಾಕರಿಸಲು ಬರುವುದೂ ಇಲ್ಲ. ಸಮಾಜದಿಂದ ತೆಗೆದುಕೊಳ್ಳುವುದು ಮತ್ತು ಅದರಿಂದ ಪ್ರೇರಣೆಯನ್ನು ಪಡೆಯುವುದು ಹಾಗೂ ಮತ್ತೆ ಸಮಾಜಕ್ಕೆ ಕೊಡುವುದು ಅತ್ಯಂತ ಅಗತ್ಯವಾದ ಒಂದು ಚಟುವಟಿಕೆಯೂ ಆಗಿದೆ. ವ್ಯಕ್ತಿ ಮತ್ತು ಮತ್ತು ಅವನ ಸ್ವಭಾವ

ಹಾಗೂ ಅವನ ಅನುಭವವು ನಿಜವಾಗಿಯೂ ಶಕ್ತಿಶಾಲಿಯೂ ಆಗುತ್ತದೆ. ವ್ಯಕ್ತಿಯ ಅನುಭವಕ್ಕೆ ಸಂಕೀರ್ಣತೆಯು ಇದೆ. ಆದರೆ ಯಾವುದನ್ನು ಸಮಾಜ ಮತ್ತು ಅದರ ಚರಿತ್ರೆಯೆನ್ನುವುದು ಬದಲಾಗುತ್ತದೆ. ಮತ್ತು ಅದು ಬದಲಾಗುವಾಗ ಅದರ ಆದ್ಯತೆಗಳು ಬದಲಾಗುತ್ತವೆ. ವಾಸ್ತವವಾಗಿ ನಮ್ಮ ಗ್ರಹಿಕೆಗಳು ಬದಲಾಗಲು ಬೇರೆ ಬೇರೆ ಕಾರಣಗಳೂ ಇರುತ್ತವೆ. ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಸೂರನಿಗೆ ಅವನದೇ ಆಗಿರುವ ಅನನ್ಯತೆಯು ಇದೆ. ಅವನು ಉದಾರನೂ ಹೌದು. ಅವನ ವ್ಯಕ್ತಿತ್ವಕ್ಕೆ ನಿರ್ದಿಷ್ಟವಾದ ಅರ್ಥವೂ ಇದೆ. ಅವನನ್ನು ಒಂದು ಚರಿತ್ರೆಯ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅವನ ಜೀವನವು ಕೆಲವು ದೃಷ್ಟಿಯಿಂದ ಮಹತ್ವದ್ದೂ ಹೌದು. ಆದರೆ ಅವನ ಸಾಮಾಜಿಕ ಚರಿತ್ರೆಯು ಐತಾಳರ ಚರಿತ್ರೆಗಿಂತ ಬೇರೆಯೂ ಹೌದು.

ಹಾಗೆ ನೋಡುವುದಿದ್ದರೆ ಯಾವುದೇ ಜೀವಿಯ ಅರ್ಥ ಪೂರ್ಣತೆಯು ಮತ್ತು ಅರ್ಥ ಹೀನತೆಯು ನಿರ್ಧಾರವಾಗುವುದು ಸನ್ನಿವೇಶದಿಂದ ಎಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸೂರನ ಸಮಸ್ಯೆಯೇ ಬೇರೆ. ರಾಮೈತಾಳರ ಸಮಸ್ಯೆಯೇ ಬೇರೆ. ಅವರು ಒಬ್ಬರ ಹಾಗೆ ಮತ್ತೊಬ್ಬರು ಇಲ್ಲ. ಅವರ ಜೀವನವು ಪಲ್ಲಟವಾಗುತ್ತದೆ. ಅವರ ಆಲೋಚನೆಯೂ ಬದಲಾಗುತ್ತದೆ. ಅವರ ಪರಿಸರವೂ ಬೇರೆ ಬೇರೆ ಕಾರಣಗಳಿಂದ ಬದಲಾಗುತ್ತದೆ. ಜೀವನ ಮತ್ತು ಅದರ ಸಾಧ್ಯತೆಯೂ ಅವರ ಮಟ್ಟಿಗೆ ಬೇರೆಯೂ ಹೌದು. ಮನುಷ್ಯ ಮತ್ತು ಅವರ ಜೀವನ ಕ್ರಮದ ಮೇಲೆ ಅನೇಕ ಪ್ರಭಾವಗಳು ಇರುತ್ತವೆ. ಅದನ್ನು ಸುಲಭವಾಗಿ ತಳ್ಳಿ ಹಾಕಲು ಬರುವುದೂ ಇಲ್ಲ. ಮತ್ತು ಅದರ ಪರಿಣಾಮಗಳು ಬೇರೆ ರೀತಿಯಲ್ಲಿಯೂ ಇರುತ್ತದೆ. ಆದರೆ ನಮಗೆ ಸಾಹಿತ್ಯವನ್ನು ಸಮಾಜವನ್ನು ನೋಡುವಾಗ ಕೆಲವು ಮಿತಿಗಳು ಇರುತ್ತವೆ. ಅದನ್ನು ಮೊದಲು ನಾವು ಬಗೆಹರಿಸಿಕೊಳ್ಳಬೇಕಾಗುತ್ತದೆ. ಅಂದರೆ ಸಾಹಿತ್ಯವನ್ನು ಅದರ ಸಾಲುಗಳು ಮತ್ತು ಅದರಲ್ಲಿ ಬಳಕೆಯಾದ ಪದಗಳ ಹಿನ್ನೆಲೆಯಲ್ಲಿ ಮಾತ್ರವೇ ಗ್ರಹಿಸುವಾಗ ಅದರಲ್ಲಿ ಕೆಲವು ಮಿತಿಗಳು ಬರುತ್ತವೆ. ವಾಸ್ತವವಾಗಿ ಕಾವ್ಯವೆಂದರೆ ಅದು ಬರೀ ಸಾಲುಗಳು ಮಾತ್ರವೇ ಆಗಿಲ್ಲ. ಅದರ ಸ್ವರೂಪವು ನಿರ್ಧಾರವಾಗುವುದು ಅದರ ತಾತ್ವಿಕವಾದ ನೆಲೆಯಲ್ಲಿಯೂ ಹೌದು. ಆದ್ದರಿಂದ ಸಮಾಜದ ಬಿಂಬಗಳಾದ ಮನುಷ್ಯರ ಚಿತ್ರಣವು ಯಾವ ಬಗೆಯಲ್ಲಿ ಇರುತ್ತದೆ ಎನ್ನುವುದೂ ಮುಖ್ಯವಾದ ಪ್ರಶ್ನೆಯೇ ಆಗಿದೆ. ಮನುಷ್ಯ ಮತ್ತು ಅವರ ಜೀವನದ ಸ್ವರೂಪವು ಅನೇಕ ಸರ್ತಿ ಪುರಾಣಗಳು ಅಲ್ಲ. ಮನುಷ್ಯ ಮತ್ತು ಅವರ ಜೀವನವು ಪಲ್ಲಟವಾಗುವುದು ಅದರಿಂದ ಉಂಟಾಗುವ ಪರಿವರ್ತನೆಗಳು ಒಂದು ಮಾದರಿಯಲ್ಲಿ ಇರುವುದೂ ಇಲ್ಲ. ಅದು ಬದಲಾಗುತ್ತದೆ. ಬದಲಾದಾಗ ಪರಿಸರವೂ ಬದಲಾಗುತ್ತದೆ. ಮತ್ತು ಪರಿಸರವು ಬದಲಾದಾಗ ಅದರ ಮೂಲಕ ಜೀವನವೂ ಬದಲಾಗುತ್ತದೆ. ಈ ಸಂಬಂಧವು ಅತ್ಯಂತ ಸಂಕೀರ್ಣವೂ ಆಗಿರುತ್ತದೆ. ಇದನ್ನೇ ದ್ವಂದ್ವಾತ್ಮಕವೆಂದು ಹೇಳುತ್ತಾರೆ. ಮನುಷ್ಯ ಮತ್ತು ಸಮಾಜದ ಸಂಬಂಧವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಬರುತ್ತವೆ. ಯಾವುದನ್ನು ಜೀವನದ ಸಮಸ್ಯೆಯೆಂದು ಹೇಳುತ್ತೇವೆಯೋ ಅದನ್ನು ನಾವು ಮಾತ್ರವೇ ಮಾಡಿಕೊಳ್ಳುವುದೂ ಇಲ್ಲ. ಅದು ಬೇರೆ ಬೇರೆ ಕಾರಣಗಳಿಂದ ಬದಲಾಗುತ್ತದೆ.

ಆದ್ದರಿಂದ ನಾವು ಯಾವುದನ್ನು ಹೇಗೆ ನೋಡುತ್ತಿದ್ದೆವೆಯೊ ಆದು ಮಾತ್ರವೇ ಮುಖ್ಯವಾಗುವುದೂ ಇಲ್ಲ. ವ್ಯಕ್ತಿವಾದಿಗಳು ಜೀವನವನ್ನು ನೋಡುವ ಕ್ರಮಗಳು ಬೇರೆಯಾಗಿರುತ್ತವೆ. ಅವರು ವ್ಯಕ್ತಿಯನ್ನು ಮಾತ್ರವೇ ಜವಾಬ್ದಾರರನ್ನಾಗಿ ಮಾಡುತ್ತಾರೆ. ವಿಷಯವು ಅಷ್ಟು ಸರಿಯಾಗಿಲ್ಲ. ವ್ಯಕ್ತಿ ಮತ್ತು ಅವನ ಜೀವನದ ದೃಷ್ಟಿಕೋನಕ್ಕೂ ಸಮಾಜಕ್ಕೂ ಒಂದು ಸಂಬಂಧವಿದೆ, ಯಾವುದು ಘಟಿಸಿದಯೋ ಅದನ್ನು ಮಾತ್ರವೇ ನೋಡಿಕೊಂಡು ನಾವು ಮೌಲ್ಯ ಮಾಪನವನ್ನು ಮಾಡಲು ಬರುವುದಿಲ್ಲ. ಜೀವನದಲ್ಲಿ ಘಟಿಸುವ ಸಂಗತಿಗೂ ಜೀವನದ ಮೌಲ್ಯಕ್ಕೂ ನೇರವಾದ ಸಂಬಂಧವು ಇದೆಯೆಂದೂ ತಿಳಿಯಬಾರದು. ಅದು ಬದಲಾಗುತ್ತದೆ ಮತ್ತು ಬದಲಾಗುವಾಗ ಅದರ ಕಾರಣವೂ ಬೇರೆ ಇರುವುದಕ್ಕೆ ಸಾಧ್ಯ. ಜೀವನ ಮತ್ತು ಅದರ ಹಿಂದೆ ಇರುವ ಜೀವನದ ಮೌಲ್ಯಗಳು ಬೇರೆ ಬೇರೆ ಕಾರಣಕ್ಕೆ ಬದಲಾಗುತ್ತವೆ. ನಾವು ಯಾವುದನ್ನು ನೋಡುತ್ತೇವೆ ಮತ್ತು ಅದನ್ನು ಹೇಗೆ ಗ್ರಹಿಸುತ್ತೇವೆ ಹಾಗೂ ಅದರ ಹಿಂದೆ ಯಾವ ಸಮಾಜವು ಇದೆ, ಅದನ್ನು ಯಾವುದು ನಿಯಂತ್ರಿಸಿದೆ ಎನ್ನುವುದೂ ಅಷ್ಟೇ ಮುಖ್ಯ.

ಸಮಾಜವನ್ನು ನಾವು ಹೇಗೆ ನೋಡುತ್ತೇವೆ ಮತ್ತು ಅದರಂತೆ ನಾವು ಬರೆಯುವುದೂ ಅಷ್ಟೇ ನಿಜ. ಆದರೆ ಯಾವುದು ಮುಖ್ಯ ಮತ್ತು ಯಾವುದು ಅಮುಖ್ಯವೆಂದು ಹೇಳಲು ನಮಗೆ ನಮ್ಮದೇ ಆದ ತಾತ್ವಿಕತೆಯು ಬಹಳ ಮುಖ್ಯವಾಗುತ್ತದೆ. ಅದು ಅಗತ್ಯವೂ ಹೌದು. ವಾಸ್ತವವಾಗಿ ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ಸೂರನೂ ರಾಮನೂ ಬೇರೆ ಬೇರೆ ರೀತಿಯ ಕೆಲಸವನ್ನು ಮಾಡುತ್ತಾರೆ. ಆದರೆ ಅವರ ಕೆಲಸವನ್ನು ನೋಡಲು ಅವರ ಚರಿತ್ರೆಯನ್ನು ಗಮನಿಸಬೇಕಾಗುತ್ತದೆ. ಅದು ಅಗತ್ಯವೂ ಆಗುತ್ತದೆ. ಸೂರನು ಬದಲಾದ ಸನ್ನಿವೇಶದಲ್ಲಿ ಕೆಲಸವನ್ನು ಮಾಡುತ್ತಾನೆ. ಅದು ಅಗತ್ಯವೂ ಆಗುತ್ತದೆ. ರಾಮನೂ ಬದಲಾದ ಸನ್ನಿವೇಶದಲ್ಲಿ ಇದ್ದಾನೆ. ಅವರ ಸಂಬಂಧವು ಈ ದೃಷ್ಟಿಯಿಂದ ಹೊಸ ಸನ್ನಿವೇಶವನ್ನು ಹೇಳುತ್ತದೆ. ಸೂರನು ಆಧುನಿಕ ಯಗಕ್ಕೆ ಸಂಬಂಧಪಟ್ಟಿದ್ದಾನೆ. ಅವನ ಸ್ವಭಾವವು ಕೂಡಾ ಬೇರೆ ಮಾದರಿಯದು. ಆದರೆ ವಿಷಯವು ಅಷ್ಟು ಸರಳವಿಲ್ಲ. ಅದು ಬದಲಾಗುತ್ತದೆ ಅಂದರೆ ಅದರ ಹಿಂದೆ ಚರಿತ್ರೆಯು ಬದಲಾಗುತ್ತದೆ ಎಂದು ಮಾತ್ರವೇ ಅರ್ಥ. ಕುಮಾರವ್ಯಾಸನು ಬರೆಯುವ ಕಾಲಕ್ಕೆ ಸೂರನಂಥವರು ಇದ್ದಿಲ್ಲವೆಂದು ಹೇಳಬೇಕಾಗಿಯೂ ಇಲ್ಲ. ಆಗಲೂ ಅನೇಕ ಸೂರ, ಅನೇಕ ರೀತಿಯ ಐತಾಳರು ಇದ್ದರು. ಆದರೆ ಅದರಲ್ಲಿ ವ್ಯಕ್ತವಾದ ಪ್ರಾತಿನಿಧಿಕವಾದ ಸ್ವರೂಪವು ಮಾತ್ರ ಬೇರೆ ವಿಧಾನದ್ದು. ಬ್ರಿಟೀಷರು ಬಂದ ಮೇಲೆ ನಮ್ಮ ವಿವರಣೆಗಳು ಬದಲಾದವು. ನಮ್ಮ ಜೀವನ ಮತ್ತು ಅದರ ಧೋರಣೆಗಳೂ ವ್ಯತ್ಯಾಸವಾದವು. ಸಮಾಜವನ್ನು ನೋಡುವ ಮತ್ತು ಗ್ರಹಿಸುವ ಕ್ರಮದಲ್ಲಿಯೂ ವ್ಯತ್ಯಾಸವಾದವು. ಕೆಲವು ಚಾರಿತ್ರಿಕವಾದ ಚಟುವಟಿಕೆಗಳು ನಡೆದವು. ಅದನ್ನು ಸುಲ್ತಾನ್ ಟೀಪುವಿನ ಚಟುವಟಿಕೆಯಲ್ಲಿ ಕಾಣಬಹುದು. ಹಾಗೆ ನೋಡುವುದಿದ್ದರೆ ನಮಗೆ ತುಘಲಕ್ ನಾಟಕದ ತುಘಲಕ್ ಬಹಳ ಇಷ್ಟವಾಗುತ್ತಾನೆ. ಅವನ ಕನಸುಗಳು ಚೆನ್ನಾಗಿವೆ ಎಂದು ಅನಿಸುತ್ತವೆ. ಕುಡಿಯರ ಕೂಸು ಕಾದಂಬರಿಯಲ್ಲಿ ಉಳುಮೆ ಮತ್ತು ಬೇಸಾಯವು ನಮಗೆ ಹೊಸ ಸಂಗತಿಗಳನ್ನು ಹೇಳುತ್ತವೆ. ಮತ್ತು ರೈತರ ಕಷ್ಟವು ಯಾವ ಬಗೆಯವು ಎಂದು ಅಥೆಂಟಿಕ್ ಆಗಿಯೇ ವಿವರಿಸುತ್ತವೆ. ಕುಡಿಯರು ನಿಜವಾಗಿಯೂ ಬಂಡವಾಳಶಾಹಿಗಳು ಅಲ್ಲವೆನ್ನುವುದನ್ನು ಇಲ್ಲಿ ಮನಗಾಣಬೇಕಾಗುತ್ತದೆ. ಅವರ ಕೆಲಸ ಮತ್ತು ಅವರ ಜೀವನವು ಸುಖವಾದ ಸಂಗತಿಯೂ

ಅಲ್ಲ. ಕುಡಿಯರು ಮತ್ತು ಅವರ ಚಟುವಟಿಕೆಯು ಒಂದು ಬಗೆಯದಾಗಿದೆ. ಅವರ ಜೀವನ ಮತ್ತು ಸಂಸ್ಕೃತಿಯ ಸ್ವರೂಪವು ಒಂದು ಬಗೆಯಲ್ಲಿದೆ.ಅವರ ಜೀವನ ವಿಧಾನದಿಂದ ಅವರ ಅವರ ಭೌತಿಕ ಅಸ್ತಿತ್ವವನ್ನು ಬೇರೆ ಮಾಡಲು ಬರುವುದೂ ಇಲ್ಲ. ಕಾಡಿನ ಅನೇಕ ಸಂಗತಿಗಳು ಅವರನ್ನು ರೂಪಿಸಿವೆ. ಸಂಸ್ಕೃತಿ ಮತ್ತು ಅದರ ಅಸ್ತಿತ್ವವನ್ನು ಅವರು ನೋಡುವುವುದು ಚೋಮನ ದುಡಿಯ ಚೋಮನಂತೆ ಅಲ್ಲವೆನ್ನವುದು ಸ್ಪಷ್ಟವಾಗುತ್ತದೆ. ಕುಡಿಯರು ಅನೇಕ ವಿಷಯಗಳಲ್ಲಿ ಸ್ವತಂತ್ರರೂ ಹೌದು. ಅವರಿಗೆ ಪರಕೀಯರೆಂದರೆ ತಿರಿಮಲಭಟ್ಟ ಮತ್ತು ಕಿರಿಸ್ತಾನರು. ಅವರಿಲ್ಲಿ ತಾರತಮ್ಯಗಳು ಇವೆ. ಅವರು ಬದಲಾಗುತ್ತಾರೆ. ಅವರಿಗೆ ಬೇರೆ ಬೇರೆ ರೀತಿಯ ಅಸಿತ್ವವು ಇದೆ. ಗಿಡ್ಡಿ ಮತ್ತು ಅವಳ ಸಮಸ್ಯೆಯು ಒಂದು ಥರ. ಕೆಂಚ ಮತ್ತು ಅವನ ಸಮಸ್ಯೆಯು ಒಂದು ಥರ. ಹೀಗಾಗಿಯೇ ಅವರಿಗೆ ಭಿನ್ನವಾದ ಸಮಸ್ಯೆಗಳು ಇರುತ್ತವೆ. ಕಿರಿಮಲೆಯರು ಮತ್ತು ಹಿರಿಮಲೆಯವರು ಬೇರೆ ವರ್ಗಗಳನ್ನು ಮಾಡಿಕೊಂಡಿದ್ದಾರೆ. ಅವರಿಗೆ ಆ ತರಹದ ವ್ಯತ್ಯಾಸವೂ ಇದೆ. ಮತ್ತು ಅದರಲ್ಲಿ ತಾರತಮ್ಯಗಳೂ ಇವೆ. ಅವರಿ ಜೀವನ ಮತ್ತು ರಕ್ಷಣೆಗೆ ಹರಕೆಯನ್ನು ಹೇಳುವುದು ಕಲ್ಕುಡ ಮೊದಲಾದ ದೈವಗಳಿಗೆ. ಅವರ ನಡೆ ಮತ್ತು ನುಡಿಯನ್ನು ನಿಯಂತ್ರಿಸಿಕೊರಡು ಅವರಿಗೆ ನಿಯಮವನ್ನು ಹೇರುವುದು ಗುರಿಕಾರರು ಮಾತ್ರವೇ. ಅಂದರೆ ಇದರಲ್ಲಿ ವ್ಯತ್ಯಾಸಗಳೂ ಇವೆ. ಸಂಸ್ಕಾರ ಕಾದಂಬರಿಯಲ್ಲಿ ಗುರಿಕಾರರು ಮತ್ತು ಕಲ್ಕುಡರು ಮುಖ್ಯವಲ್ಲ. ಅದರಲ್ಲಿ ಹೆಚ್ಚು ಮುಖ್ಯ ಜಾತಿ ಮತ್ತು ಅದರ ಹಿಂದಿನ ಗೋತ್ರಗಳು ಹಾಗೂ ಮಠ. ಕಾರಂತರ ಕಾದಂಬರಿಗಳಲ್ಲಿ ಬರುವ ತತ್ವಜ್ಞಾನವನ್ನು ನಾವು ಕಾದಂಬರಿಯ ನಡುಗೆಯಲ್ಲಿಯೇ ನೋಡಬೇಕಾಗುತ್ತದೆ. ತತ್ವಜ್ಞಾನವನ್ನು ಕಾದಂಬರಿಗಳು ನೋಡುವುದು ಮತ್ತು ಗ್ರಹಿಸುವುದು ಮುಖ್ಯವಾಗಿ ಸಾರ ರೂಪದಲ್ಲಿಯೇ ಎನ್ನುವುದು ಇಲ್ಲಿ ಉಲ್ಲೇಖನೀಯ. ಸಮಾಜ, ಚರಿತ್ರೆ, ಆರ್ಥಿಕತೆ, ಸಾಂಸ್ಕೃತಿಕ ಸಂಗತಿಗಳು ಮತ್ತು ಸಾಹಿತ್ಯದ ನಿಲುವುಗಳು ಜೊತೆಗೆ ಹೋಗುತ್ತವೆ. ಅಂದರೆ ಅದರಲ್ಲಿ ಅನೇಕ ಸಂಗತಿಗಳು ಜೊತೆಗೆ ಹೋಗುವುದರಿಂದ ಅವುಗಳನ್ನು ಬೇರೆ ಮಾಡಿಕೊಂಡು ನೋಡಲು ಬರುವುದೂ ಇಲ್ಲ. ವಸ್ತು ಮತ್ತು ಅದರ ಕುರಿತಾದ ತಪ್ಪು ತೀರ್ಮಾನಗಳು ನಮಗೆ ತಪ್ಪು ಫಲಿತಾಂಶವನ್ನು ಕೊಡುತ್ತವೆ. ಆದ್ದರಿಂದ ಘಟನೆ ಮತ್ತು ಅದರ ಕುರಿತಾದ ತಪ್ಪು ತೀರ್ಮಾನವು ತಪ್ಪು ಫಲಿತಾಂಶವನ್ನು ಹೇಳುವುದು ಮಾತ್ರವೇ ಅಲ್ಲ ಅದರ ಮೂಲಕ ನಾವು ಸಂದೇಶವನ್ನು ಹೇಳುತ್ತೇವೆ. ಒಂದು ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ನಮಗೆ ಮನೋವಿಜ್ಞಾನ ಮತ್ತು ಸಮಾಜ ವಿಜ್ಞಾನವು ನೆರವಿಗೆ ಬರುತ್ತವೆ. ವಿಜ್ಞಾನಕ್ಕೂ ನಮ್ಮ ಬಳಕೆಯ ಸಮಾಜ ವಿಜ್ಞಾನಕ್ಕೂ ಈ ದೃಷ್ಟಿಯಿಂದ ದ್ವಂದ್ವಾತ್ಮಕತೆಯು ಇರುತ್ತದೆ. ಅವುಗಳ ನಡುವೆ ಕೆಲವು ಸಮಾನವಾದ ಅಂಶಗಳೂ ಇರುತ್ತವೆ.

ಫ್ರಾಯ್ಡ್ ಚರಿತ್ರೆ ಮತ್ತು ಸಮಾಜಶಾಸ್ತ್ರವನ್ನು ಹಾಗೂ ಧರ್ಮವನ್ನು ನೋಡುತ್ತಾನೆ. ಅದರ ಜೊತೆಗೆ ಅನೇಕ ಸಂಗತಿಗಳು ಇರುತ್ತವೆ ಎಂದು ಅವನ ಭಾವನೆಯೂ ಆಗಿದೆ. ಸಮಾಜ ಮತ್ತು ಅದರ ಸ್ವರೂಪವನ್ನು ಈ ದೃಷ್ಟಿಯಿಂದ ಬೇರೆ ಮಾಡಬೇಕಾಗುತ್ತದೆ. ಅವನಲ್ಲಿ ವ್ಯಕ್ತಿಗೂ ಸಮಾಜಕ್ಕೂ ಚರಿತ್ರೆಗೂ ವಿವಿಧ ರೀತಿಯ ಸಂಬಂಧವು ಇರುತ್ತದೆ. ಸಮಾಜದ ಅನೇಕ ವಿಧಿನಿಷೇಧಗಳು ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತವೆ. ಅಂದರೆ ವ್ಯಕ್ತಿಯನ್ನು ಅನೇಕ ಸಂದರ್ಭದಲ್ಲಿ ಇವುಗಳೇ ನಿಯಂತ್ರಣವನ್ನು ಮಾಡುತ್ತವೆ. ವ್ಯಕ್ತಿ ಮತ್ತು ಅವನ ಬಯಕೆಗಳು

ಒಂದು ರೀತಿಯಲ್ಲಿ ಇರುತ್ತವೆ. ಮತ್ತು ಅದರಲ್ಲಿ ವಿಶಿಷ್ಟತೆಯು ಮುಖ್ಯ. ವ್ಯಕ್ತಿ ಮತ್ತು ಅವನ ನಡೆ ನುಡಿಯು ಒಂದು ಬಗೆಯಲ್ಲಿ ಇರುತ್ತವೆ. ಮತ್ತು ಸಮಾನ ಚಾರಿತ್ರಿಕ ನಡೆ ನುಡಿಗಳು ಮತ್ತೊಂದು ರೀತಿಯಲ್ಲಿ ಇರುತ್ತವೆ. ಸಾಮೂಹಿಕ ನಡೆ ಮತ್ತು ನುಡಿಗಳು ಸಾಹಿತ್ಯದಲ್ಲಿ ಕೆಲವು ಆಯ್ಕೆಯನ್ನು ಮಾಡುವಂತೆ ಮಾಡುತ್ತವೆ. ವ್ಯಕ್ತಿ ಮತ್ತು ಅವನ ಬಯಕೆಗಳನ್ನು ನಾವು ಅವನ ಲಿಬಿಡೋ ಪ್ರವೃತ್ತಿಯಂದ ನೋಡಬೇಕಾಗುತ್ತದೆ ಅವನಲ್ಲಿ ಅಂದರೆ ಫ್ರಾಯ್ಡನಲ್ಲಿ ನಮಗೆ ಅನೇಕ ವಿವರಣೆಗಳು ದೊರೆಯುತ್ತವೆ. ಮತ್ತು ಅವನು ಅನೇಕವನ್ನು.ವಿವರಣಾತ್ಮಕವಾಗಿ ಮತ್ತು ವಿಶ್ಲೇಷಣಾತ್ಮಕವಾಗಿಯೂ ನೋಡುತ್ತಾನೆ. ಕನಸ್ಸು ಮತ್ತು ಅದರ ರಚನೆಯನ್ನು ಅವನು ವಿಶಿಷ್ಟವಾಗಿಯೂ ನೋಡುತ್ತಾನೆ. ಅದರಲ್ಲಿ ಅವನು ಹೆಚ್ಚು ಸಂದರ್ಭವನ್ನು ಗಮನಿಸುತ್ತಾನೆ. ಅದರ ಹಿಂದೆ ಇರುವ ಸಂವೇದನೆಯು ಅವನಿಗೆ ಬಹಳ ಮುಖ್ಯವಾಗುತ್ತದೆ. ಅವನ ಪ್ರಕಾರ ಲಿಬಿಡೋ ಅನ್ನುವುದು ಮೂಲಭೂತವಾಗಿ ಸ್ವಾಯತ್ತವಲ್ಲ. ಅದು ಸಂಸ್ಕೃತಿಯನ್ನು ಹೇಳುತ್ತದೆ. ಮತ್ತು ಅದರಲ್ಲಿ ಸಾಮಾಜಿಕ ಜೀವನದ ಅರ್ಥವೂ ಇರುತ್ತದೆ. ಈ ದೃಷ್ಟಿಯಿಂದ ಮನೋವೈಜ್ಞಾನಿಕ ವಿಮರ್ಶೆಯು ನಮಗೆ ಅನೇಕವನ್ನು ಸೂಚಿಸುತ್ತದೆ. ಅದು ಕೆಲಸವನ್ನು ಸಂಪೂರ್ಣವಾಗಿಯೂ ಗಮನಿಸುತ್ತದೆ. ಯಾವುದೇ ಪರಿಶೀಲನೆಗೆ ವಿವರಣೆಯು ಬೇಕಾಗುತ್ತದೆ.

ವಾಸ್ತವ ಮತ್ತು ಅದರ ಅಧ್ಯಯನವೆಂದರೆ ವ್ಯಕ್ತಿ ಮತ್ತು ಅವನ ಕ್ರಿಯೆ ಮತ್ತು ಅವನ ಹಿಂದೆ ಇರುವ ಸಮಾಜದ ಪರಿಶೀಲನೆಯೂ ಹೌದು. ವಾಸ್ತವವದ ಅಧ್ಯಯನವು ಈ ದೃಷ್ಟಿಯಿಂದ ಬೇರೆ ಬೇರೆ ಆನ್ವಯಿಕತೆಯನ್ನು ಹೇಳುತ್ತದೆ. ವಾಸ್ತವ ಮತ್ತು ಅದರ ಕ್ರಿಯೆಗಳಲ್ಲಿ ಈ ದೃಷ್ಟಿಯಿಂದ ಭಿನ್ನವಾದ ಒಂದು ಸಂಗತಿಯನ್ನು ಹೇಳುತ್ತದೆ. ನಾವು ರಚನೆಯನ್ನು ಮಾಡುತ್ತೇವೆ ಎಂದರೆ ಅದರ ಹಿಂದೆ ಕ್ರಿಯೆಯೂ ಇದೆ ಎಂದೇ ಅರ್ಥವಾಗುತ್ತದೆ. ರಚನೆಯು ಒಂದು ಬಗೆಯಲ್ಲಿ ನಿರ್ದಿಷ್ಟವಾದ ಚಟುವಟಿಕೆಯೂ ಹೌದು. ಯಾವುದೇ ಜ್ಞಾನವು ಇಲ್ಲದೆ ಯಾವುದೆ ಕ್ರಿಯೆಯು ಅಸಾಧ್ಯ. ಮತ್ತು ನಾವು ನಮಗೆ ಬೇಕಾದ ರಚನೆಗಳನ್ನು ಮಾಡುತ್ತೇವೆ. ಸಮಾಜವು ಈ ರೀತಿಯ ಅನೇಕ ಕ್ರಿಯೆಗಳನ್ನು ಹೊಂದಿರುತ್ತವೆ. ಬಂಡವಾಳದ ರಚನೆಯು ವ್ಯಕ್ತಿಗಳನ್ನು ನೋಡುವುದು ಮತ್ತು ಗ್ರಹಿಸುವುದು ಒಂದು ರೀತಿಯಲ್ಲಿ. ಕೆಲವು ನಿಯಮಗಳು ಮತ್ತೆ ಮತ್ತೆ ಯಾಕೆ ಬರುತ್ತವೆ ಎಂದರೆ ಅದರಲ್ಲಿ ಕೆಲವು ಸಾರ ರೂಪಗಳು ಇರುತ್ತವೆ. ರಚನೆ ಮತ್ತು ನಿರಚನೆಯು ಸಹಜವಾಗಿಯೂ ನಡೆಯುತ್ತದೆ. ಒಂದು ರಚನೆಯು ಮತ್ತೊಂದು ರಚನೆಗೆ ಕಾರಣವೂ ಆಗುತ್ತದೆ. ಆದ್ದರಿಂದ ರಚನೆ ಮತ್ತು ಅದರ ವ್ಯತ್ಯಾಸಗಳೂ ಅಧ್ಯಯನ ಯೋಗ್ಯವಾಗಿವೆ. ರಚನೆಗಳನ್ನು ಸಮಾಜವು ಬದಲಿಸುತ್ತದೆ. ಮತ್ತು ತನಗೆ ಬೇಕಾದ ರಚನೆಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಅದು ಪರಿವರ್ತನೆಯನ್ನು ಮಾಡುತ್ತದೆ. ವಾಸ್ತವವಾಗಿ ಅನೇಕ ರಚನೆಗಳು ತಾತ್ಕಾಲೀಕವಾದ ವಿಷಯವನ್ನು ಹೊಂದಿರುತ್ತದೆ. ಅನೇಕ ರಚನೆಗಳು ಪರಿವರ್ತನೆ ಮತ್ತು ಮುಂದುವರಿಕೆಯನ್ನು ಬೇರೆ ಬೇರೆ ವಿಧದಲ್ಲಿ ಮಾಡುತ್ತವೆ. ಅದರ ಹಿಂದೆ ಸಂವೇದನೆ ಮತ್ತು ಆಲೋಚನೆಗಳು ಇರುತ್ತವೆ. ಅನೇಕರು ಆಧುನಿಕ ರಚನೆಗಳನ್ನು ಓದುವಾಗ ಅದರ ಉದ್ದೇಶವನ್ನು ಗ್ರಹಿಸುವುದೇ ಇಲ್ಲ. ಹಾಗೆ ನೋಡುವುದಿದ್ದರೆ ಭಾಷೆ ಮತ್ತು ಅದರ ರಚನೆಗಳೇ ವಿಶ್ವಾತ್ಮಕವೂ ಆಗುತ್ತದೆ. ರಚನೆಗೆ ಇರುವ ಚಾರಿತ್ರಿಕತೆಯೂ ಈ ದೃಷ್ಟಿಯಿಂದ ಬಹಳ

ಮುಖ್ಯವಾಗುತ್ತದೆ. ರಚನೆಯೂ ಕೆಲವು ಮಾದರಿಯ ಸಂವಹನವನ್ನು ಹೇಳುತ್ತವೆ. ಮತ್ತು ಅನೇಕ ರಚನೆಗಳಿಗೆ ವೈಜ್ಞಾನಿಕವಾದ ಅಂಶಗಳೂ ಇರುತ್ತವೆ. ಅದರೆ ಅದರ ಸ್ವರೂಪದಲ್ಲಿಯೇ ಅನೇಕ ಅಂಶಗಳು ಇರುತ್ತವೆ.

ಕೃತಿಯೊಂದರ ವಿವರಣೆಯನ್ನು ಮಾಡುವುದು ಎಂದರೆ ಅದರ ರಚನೆಯನ್ನು ಮಾತ್ರವೇ ನೋಡುವುದು ಅಲ್ಲ. ಅದರ ಆಶಯವನ್ನು ನಾವು ಗಮನಿಸಬೇಕಾಗುತ್ತದೆ. ಇಲ್ಲಿ ಮಹಾಕಾವ್ಯ ಮತ್ತು ಅದರ ರಚನೆಯನ್ನು ನೋಡಬೇಕು. ಅದು ವಿಸ್ತಾರವಾಗಿರುತ್ತದೆ. ಮತ್ತು ಅದು ಕಾದಂಬರಿಗಿಂತ ಬೇರೆಯೂ ಆಗಿರುತ್ತದೆ. ನಮ್ಮ ಕೆಲಸ ಮತ್ತು ಅದರ ಸ್ವರೂಪವನ್ನು ನಿರ್ಧರಿಸಿಕೊಳ್ಳುವಾಗ ರಚನೆಯ ಭಿನ್ನತೆಯೂ ಬಹಳ ಮುಖ್ಯವಾದ ಸಂಗತಿಯೂ ಆಗುತ್ತದೆ.ಆದರೆ ಕಾಂಟ್ ಮತ್ತು ಅವನ ಕೆಲಸವನ್ನು ನೋಡಲು ನಮಗೆ ಅವನ ಲಾಂಡ್ರಿಬಿಲ್ ಉಪಯೋಗಕ್ಕೆ ಬರುತ್ತದೆ ಎಂದು ಅರ್ಥವೂ ಅಲ್ಲ. ನಮಗೆ ಎದುರಾಗಿರುವ ವಾಸ್ತವ ಮತ್ತು ಅದರ ಕುರಿತಾದ ಚಿಂತನೆಗಳು ಮಾಡುವುದಕ್ಕೆ ರಚನೆಯ ಅರಿವು ಇರಬೇಕಾಗುತ್ತದೆ. ವಾಸ್ತವವಾದ ರಚನೆಯೂ ಅದನ್ನು ಹೇಗೆ ಅರ್ಥ ಮಾಡುತ್ತೇವೆ ಎನ್ನುವುದನ್ನು ಸೂಚಿಸುತ್ತದೆ. ಬರಹ ಮತ್ತು ಅದರ ಸಾಮಾಜಿಕತೆಯನ್ನು ಕುರಿತು ಮಾತಾಡುವವರು ಇದನ್ನು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವೂ ಇದೆ. ಸಂಶೋಧಕನೂ ಇದನ್ನು ಗ್ರಹಿಸಬೇಕಾಗುತ್ತದೆ. ವಾಸ್ತವವಾಗಿ ತನ್ನ ಮನೋಸ್ಥಿತಿಗೆ ಅನುಗುಣವಾಗಿ ನಾವು ಅನೇಕವನ್ನು ನೋಡುತ್ತೇವೆ. ನಮ್ಮ ಗ್ರಹಿಕೆ ಮತ್ತು ನಮ್ಮ ಮನೋಸ್ಥಿತಿಗೆ ಕೆಲವು ರೀತಿಯ ಸಂಬಂಧಗಳೂ ಇರುತ್ತವೆ. ನಮಗೆ ಸಮಾಜ ಮತ್ತು ಅದರ ಪರಿಜ್ಞಾನವು ಇದ್ದಾಗ ನಾವು ಕೃತಿಯನ್ನು ನೋಡು ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗುತ್ತವೆ. ನಮಗೆ ಅತ್ಯಂತ ಅಗತ್ಯವಾಗಿ ಬೇಕಾಗಿರುವುದು ನಮ್ಮ ಸಮಾಜ ಮತ್ತು ಅದರ ಚರಿತ್ರೆಯ ಅರಿವು. ಈ ಅರ್ಥದಲ್ಲಿ ನಾವು ಸಮಾಜವನ್ನು ವೈಜ್ಞಾನಿಕವಾಗಿಯೂ ನೋಡಬೇಕಾಗುತ್ತದೆ. ಮತ್ತು ಅದರಲ್ಲಿ ನಾವು ಭಾವುಕತೆಯನ್ನು ಮಿಶ್ರ ಮಾಡಲು ಬರುವುದೂ ಇಲ್ಲ.

ನಮ್ಮ ಮನೋಸ್ಥಿತಿ ಮತ್ತು ಅದರ ವರ್ಗವೂ ನಮಗೆ ಮುಖ್ಯವಾಗುತ್ತದೆ. ಸಾಮಾಜಿಕ ಜ್ಞಾನ ಮತ್ತು ಅದರ ಸ್ವರೂಪವು ನಮಗೆ ಅತ್ಯಂತ ಅಗತ್ಯವೂ ಆಗುತ್ತದೆ. ನಾವು ನಮ್ಮ ಸಾಮಾಜಿಕ ಜ್ಞಾನವನ್ನು ಮಾತ್ರವೇ ಸರಿಯಾಗಿಯೂ ಗ್ರಹಿಸಬೇಕಾಗುತ್ತದೆ. ಆಲೋಚನೆ ಮತ್ತು ಸಾಹಿತ್ಯಕ್ಕೆ ಸಂಬಂಧವುರುವುದನ್ನು ನಾವು ಗಮನಿಸಲೇ ಬೇಕಾಗುತ್ತದೆ. ವ್ಯಕ್ತಿ ಮತ್ತು ಅವನ ಪ್ರಜ್ಞೆಯು ಚರಿತ್ರೆ ಮತ್ತು ಸಮಾಜದಿಂದ ಬಂದಿದೆ. ಸಾಮಾಜಿಕ ಜೀವನವು ಒಂದು ಬಗೆಯ ಪ್ರಜ್ಞೆಯನ್ನು ಕೊಡುತ್ತದೆ. ವ್ಯಕ್ತಿಯ ಪ್ರಜ್ಞೆಯು ಮತ್ತೊಂದು ಬಗೆಯದು. ವ್ಯಕ್ತಿಯೆಂದರೆ ಅವನು ಸಾಮಾಜಿಕ ರೂಪದ ಸಾರವೂ ಹೌದು. ಸಮಾಜದ ಅನೇಕ ಚಟುವಟಿಕೆಗಳು ನಮ್ಮನ್ನು ರೂಪಿಸುತ್ತವೆ. ಮತ್ತು ಅದರ ಜೊತೆಗೆ ನಾವು ನಮ್ಮ ಪ್ರಜ್ಞೆಯನ್ನು ರೂಪಿಸಿಕೊಂಡು ಇರುತ್ತೇವೆ. ಸಾಮಾಜಿಕತೆಯು ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದೂ ಹೌದು. ಸಮಾಜ ಮತ್ತು ವ್ಯಕ್ತಿಯ ನಡುವೆ ಒಂದು ಬಗೆಯ ಸಮತೋಲನವೂ ಇರಬೇಕಾಗುತ್ತದೆ. ಆದ್ದರಿಂದ ವ್ಯಕ್ತಿಯ ಮನೋಸ್ಥಿತಿಯು ಅತ್ಯಂತ ಸಂಕೀರ್ಣವೂ ಆಗಿರುತ್ತದೆ. ವ್ಯಕ್ತಿಯು ಅನ್ಯರಿಗೆ ಅನೇಕವನ್ನು

ಹೇಳುತ್ತಾನೆ. ಅನೇಕರಿಂದ ಕಲಿಯುತ್ತಾನೆ ಮತ್ತು ಬೆಳೆಯುತ್ತಾನೆ. ಅವನಿಗೆ ಅದು ಅಗತ್ಯವೂ ಆಗಿರುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಪ್ರಜ್ಞೆಯು ಈ ದೃಷ್ಟಿಯಲ್ಲಿ ಸ್ವಯಂಸಂಪೂರ್ಣವಲ್ಲ. ಅದು ಸಂವಾದಿಯಾದುದು ಹೌದು. ಜ್ಞಾನಕ್ಕೂ ನಮ್ಮ ಪ್ರಜ್ಞೆಗೂ ಒಂದು ಸಂಬಂಧವಿದೆ. ಸಮಾಜವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ನಾವು ಸಮಾಜವನ್ನು ಜ್ಞಾನದ ಮೂಲಕ ಅರಿಯುವುದೂ ಹೌದು. ಆದ್ದರಿಂದ ವ್ಯಕ್ತಿ ಮತ್ತು ಅವನ ತಿಳುವಳಿಕೆಯು ಅತ್ಯಂತ ಮಹತ್ವದ್ದೂ ಹೌದು. ಘಟನೆ ಮತ್ತು ಅದರ ಮೌಲ್ಯಕ್ಕೆ ಸಂಬಂಧವು ಇರುವುದರಿಂದ ನಾವು ಅನೇಕವನ್ನು ಈ ಮೂಲಕವೇ ಗ್ರಹಿಸಬೇಕಾಗುತ್ತದೆ. ಭೌತಿಕ ಮತ್ತು ಬೌದ್ಧಿಕ ಸಂಗತಿಗಳು ನಮಗೆ ಮತ್ತು ನಮ್ಮ ಪ್ರಜ್ಞೆಗೆ ಹೊಸ ಆಯಾಮವನ್ನು ಕೊಡುತ್ತದೆ. ನಾವು ಪ್ರತಿಪಾದಿಸುವ ಮೌಲ್ಯಕ್ಕೂ ಸಾಮಾಜಿಕ ವಾಸ್ತವವಕ್ಕೂ ಸಂಬಂಧವಿದೆ. ಅದರಲ್ಲಿ ಮೌಲ್ಯ, ತೀರ್ಮಾನ, ತಾತ್ವಿಕತೆಗಳು ಸೇರಿಕೊಂಡಿರುತ್ತವೆ. ಒಂದು ಅಧ್ಯಯನಕ್ಕೆ ಇರುವ ಒಳ ಮತ್ತು ಹೊರ ಅಧ್ಯಯನ ಕ್ರಮವನ್ನು ಈ ದೃಷ್ಟಿಯಲ್ಲಿ ನಾವು ಬೇರೆ ಮಾಡಿಕೊಂಡು ನೋಡಬೇಕಾಗುತ್ತದೆ. ಅಧ್ಯಯನಕ್ಕೂ ವಾಸ್ತವವಕ್ಕೂ ಈ ಅರ್ಥದಲ್ಲಿ ಸರಿಯಾದ ಸಂಬಂಧವೂ ಇದೆ. ಅದು ಸಮೂಹವೂ ಹೌದು ವ್ಯಕ್ತಿ ಕೇಂದ್ರಿತವೂ ಹೌದು. ವಿಷಯ ಮತ್ತು ಪರಿಸರಕ್ಕೂ ಈ ದೃಷ್ಟಿಯಿಂದ ಸಂಬಂಧವಿದೆ. ಅದನ್ನು ನಾವು ನೋಡಬೇಕಾಗುತ್ತದೆ. ಆದರೆ ಇಲ್ಲಿ ಮತೆ ಕೆಲವು ಸೂಕ್ಷ್ಮವಾದ ಪ್ರಶ್ನೆಗಳೂ ಇವೆ. ಮನೋರಚನೆಗೂ ವಿಶ್ವಾತ್ಮಕತೆಗೂ ಒಂದು ಸಂಬಂಧವಿದೆ.

ಯಾವುದೇ ಲೋಕ ದೃಷ್ಟಿಯನ್ನು ನಾವು ಈವತ್ತು ವ್ಯಕ್ತಿಯನ್ನು ಆಧರಿಸಿಕೊಂಡು ಮಾಡುವುದು ಕಷ್ಟದಾಯಕವಾಗಿದೆ. ಅಂದರೆ ವ್ಯಕ್ತಿಯ ಮನೋಸ್ಥಿತಿಯೂ ರಚನೆಯೇ ಆಗಿದೆ. ಅದಕ್ಕೆ ಕೆಲವು ನಿಯಮಗಳು ಇರುತ್ತವೆ. ನಿಯಮವನ್ನು ಈವತ್ತು ನಾವು ವಿರೋಧಿಸುವ ಸ್ಥಿತಿಯಲ್ಲಿ ಇಲ್ಲ. ನಿಯಮವನ್ನು ನಾವು ಮಾಡಿಕೊಂಡಿದ್ದೇವೆ. ಅದು ನಮ್ಮ ಅಗತ್ಯವೂ ಆಗಿರುವುದು ನಿಜ. ಸಿದ್ಧಾಂತವೂ ಯಾಕೆ ಮಹತ್ವದ್ದು ಆಗಿದೆಯೆಂದರೆ ಈ ಕಾರಣಕ್ಕೆ. ಅದು ಲೋಕವನ್ನು ನೋಡಲು ಒಂದು ಬುನಾದಿಯನ್ನು ಹಾಕುತ್ತದೆ. ಸಿದ್ಧಾಂತವು ಮತ್ತೊಂದನ್ನು ರೂಪಿಸುತ್ತದೆ. ಅದು ಮೌಲ್ಯವನ್ನು ಹೇಳುತ್ತದೆ. ಮತ್ತು ಅದರಲ್ಲಿ ಲೋಕವನ್ನು ಕಾಣಲು ಬೇಕಾದ ಒಂದು ನಿಲುವೂ ಇರುತ್ತದೆ. ಆದರೆ ಸೃಜನಶೀಲತೆಯು ನಮಗೆ ಮತ್ತೆ ಕೆಲವು ಅಂಶಗಳನ್ನು ಪ್ರತಿಪಾದಿಸುತ್ತವೆ. ಸೃಜನಶೀಲತೆಯೂ ನಮಗೆ ಜೀವನ ಮತ್ತು ಅದರ ಕುರಿತಾದ ವಿಶಿಷ್ಟವಾದ ಧೋರಣೆಯನ್ನು ಹೇಳುತ್ತದೆ. ಆದರೆ ಸಮೂಹ ಜೀವನದ ಪ್ರಜ್ಞೆಯು ನಮಗೆ ಅನೇಕವನ್ನು ತೋರಿಸಿಕೊಡುತ್ತದೆ. ಸಮೂಹ ಪ್ರಜ್ಞೆಯು ನಮಗೆ ನಿರ್ದಿಷ್ಟವಾದ ನೋಟವನ್ನು ಹೇಳುತ್ತದೆ. ಸಮಾಜ ಮತ್ತು ಅದರ ತಿಳುವಳಿಕೆಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಲೋಕ ದೃಷ್ಟಿ ಮತ್ತು ಅದರ ಪರಿಣಾಮಗಳು ನಮಗೆ ಪ್ರಭಾವವನ್ನು ಬೀರುವುದೂ ಅಷ್ಟೇ ನಿಜ. ನಾವು ಈ ದೃಷ್ಟಿಕೋನವನ್ನು ನಿಯಂತ್ರಿಸಬೇಕಾದ ಯಾವ ಅಗತ್ಯವೂ ಇಲ್ಲ. ಸಾಮಾಜಿಕ ಜೀವನ ಮತ್ತು ಅದರ ಸ್ವರೂಪವೇ ನಮಗೆ ಬಹಳ ಮುಖ್ಯ. ಆದರೆ ಲೋಕ ದೃಷ್ಟಿಯೆಂದರೆ ಅದು ಆತಾತ್ವಿಕವಾದ ಸಂಗತಿಯೂ ಅಲ್ಲ. ಅದರ ಹಿಂದೆ ಚರಿತ್ರೆ ಮತ್ತು ಅದು ಬೆಳೆದು ಬಂದ ವಿವಿಧ ಕ್ರಮಗಳೂ ಇವೆ. ಕೆಲವು ಸರ್ತಿ ನಾವು ಸಾಮಾನ್ಯವಾದ ಸಂಗತಿಗಳನ್ನು ನೋಡಬೇಕಾಗುತ್ತದೆ. ಅದು

ಉದ್ದೇಶಿತವೂ ಹೌದು. ವಿಶಿಷ್ಟವೂ ಹೌದು. ಕೆಲವು ಸಮಾಜ ಮತ್ತು ಅದರ ಸಂಘರ್ಷವನ್ನು ಹೇಳುತ್ತವೆ.

ಸಾಮಾಜಿಕ ವರ್ಗ ಮತ್ತು ಲೋಕ ಗ್ರಹಿಕೆಗೆ ಸಂಬಂಧವೂ ಇದೆ. ಕೆಲವು ಸಮಾಜ ಮತ್ತು ಅದರ ಅರಿವನ್ನು ಹೇಳುತ್ತವೆ. ಕೆಲವು ಸಾಮಾಜಿಕ ಘಟನೆಗಳು ಬೌದ್ಧಿಕವಾದ ಚಟುವಟಿಕೆಗೆ ಕಾರಣವೂ ಆಗುತ್ತದೆ. ನಿಸರ್ಗ ಮತ್ತು ಮನುಷ್ಯರ ನಡುವೆ ಇರುವ ಸಮತೋಲನವು ಭಿನ್ನವಾಗಿದೆ. ಮತ್ತು ಅದರ ಅರ್ಥವೂ ಬೇರೆಯಾಗಿದೆ. ನಮ್ಮ ಮಾನಸಿಕ ರಚನೆಗೂ ಬಾಹ್ಯಕ್ಕೂ ಒಂದು ಸಂಬಂಧವಿದೆ. ಸಮಾಜಕ್ಕೂ ಭೌತಿಕತೆಗೂ ಸಂಬಂಧವಿದೆ, ಆದ್ದರಿಂದ ಅವುಗಳನ್ನು ನಾವು ನಿರ್ದಿಷ್ಟವಾಗಿಯೇ ಗ್ರಹಿಸಬೇಕಾಗುತ್ತದೆ. ಬಾಹ್ಯವು ನಮಗೆ ಪ್ರಭಾವವನ್ನು ಬೀರುತ್ತದೆ. ಉತ್ಪಾದನೆ ಮತ್ತು ಉತ್ಪಾದನೆಯ ಶಕ್ತಿಗಳ ನಡುವಣ ಸಂಬಂಧವನ್ನು ಈ ದೃಷ್ಟಿಯಿಂದಲೇ ಮಾರ್ಕ್ಸವಾದಿಗಳು ವಿವರಿಸುತ್ತಾರೆ. ಸಾಮಾಜಿಕ ಜೀವನ, ಭೌತಿಕ ಅಗತ್ಯಗಳು ಮತ್ತು ಒತ್ತಡಗಳು ಬೇರೆ ಬೇರೆ ಪ್ರಭಾವವನ್ನು ಬೀರುತ್ತವೆ. ಸಾಮಾಜಿಕತೆ ಮತ್ತು ಬರಹದ ನಡುವೆ ಕೆಲವು ರೀತಿಯಲ್ಲಿ ಸಂಬಂಧವು ಇರಬೇಕಾಗುತ್ತದೆ ಎಂದು ಮಾರ್ಕ್ಸವಾದಿಗಳು ಈ ಕಾರಣಕ್ಕೆ ನಂಬುತ್ತಾರೆ. ಅನೇಕ ಸಂದರ್ಭದಲ್ಲಿ ನಮಗೆ ವಿವರಣೆಗಳೂ ಅಗತ್ಯವಾಗುವುದು ಈ ಕಾರಣಕ್ಕೆ. ಹಳೆಯ ರಚನೆಗಳು ಹೊಸ ರಚನೆಯನ್ನು ಮಾಡುವುದೂ ಇದೇ ದೃಷ್ಟಿಯಲ್ಲಿ. ಹಳೆಯ ಅನೇಕ ಅಂಶಗಳು ಹೊಸರಚನೆಯಲ್ಲಿ ಸೇರುತ್ತವೆ. ಮತ್ತು ಹೊಸದಾದ ಅವಕಾಶವನ್ನು ಮಾಡುತ್ತವೆ. ಇದರಿಂದ ಹೊಸದಾದ ದಿಕ್ಪಲ್ಲಟವು ಆಗುತ್ತದೆ. ಚರಿತ್ರೆಯ ಅರಿವು ಈ ಕಾರಣಕ್ಕೆ ಬೇಕಾಗುತ್ತವೆ. ಅದು ಹಿನ್ನೆಲೆಯನ್ನು ಹೇಳುತ್ತದೆ. ಚರಿತ್ರೆಯ ಹಾಜರಾತಿಗೂ ಅದರ ಸಾರಕ್ಕೂ ಈ ಕಾರಣದಿಂದ ಸಂಬಂಧವಿದೆ. ಚರಿತ್ರೆಯೆಂದರೆ ಗತವನ್ನು ನಿರೂಪಿಸುವ ಒಂದು ಕತೆಯಲ್ಲ. ಅದರಲ್ಲಿಯೂ ತಾತ್ವಿಕತೆಯ ಅಗತ್ಯವೂ ಇರುತ್ತದೆ. ಅದೂ ಒಂದು ಸಹಯೋಗವನ್ನು ಹೇಳಬೇಕಾಗುತ್ತದೆ. ವಾಸ್ತವವಾಗಿ ಚರಿತ್ರೆಯ ಅಧ್ಯಯನದಲ್ಲಿ ನಾವು ಆಗಾಗ ಬಳಸುವ ಪದಗಳನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅದರಲ್ಲಿ ನಿರಂಕುಶ ಪ್ರಭುತ್ವ, ಪ್ರಜಾಸತ್ತಾಕ, ಆಡಳಿತಶಾಹಿ ಮುಂತಾದ ಪದಗಳು ಬರುವುದು ಬರೀ ಒಂದು ವಿವರಣೆಯನ್ನು ಮಾತ್ರವೇ ಕೊಡುವುದೂ ಇಲ್ಲ. ಅದು ಅದನ್ನು ಬೇರೆ ರೀತಿಯಲ್ಲಿಯೂ ವಿವರಿಸುತ್ತದೆ. ಅವುಗಳು ಸಮಾಜದ ರಚನೆಗಳೂ ಆಗಿವೆ. ಆದರೆ ಸಾಮಾಜಿಕ ಚರಿತ್ರೆಯಲ್ಲಿ ಸಮಾಜದ ಏಳುಬೀಳುಗಳೂ ಬಹಳ ಮುಖ್ಯವಾಗುತ್ತವೆ. ಯಾವುದನ್ನು ಸಮಾಜದ ಸಂಶಗಳು ಎಂದು ಹೇಳುತ್ತೇವೆಯೋ ಅದು ಗಾಢವಾದ ಪ್ರಭಾವವನ್ನು ಬೀರುತ್ತವೆ.

ಸಾಮಾಜಿಕವಾದ ಅನೇಕ ಘಟನೆಗಳು ನಮ್ಮನ್ನು ವ್ಯಾಪಕವಾಗಿಯೇ ಆವರಿಸಿಕೊಳ್ಳುತ್ತವೆ ಆದ್ದರಿಂದಲೇ ಸಾಮಾಜಿಕ ಸತ್ಯವು ಅತ್ಯಂತ ಮುಖ್ಯವಾದ್ದೂ ಹೌದು. ನಾವು ಈಗ ನೋಡಬೇಕಾದ್ದು ವಿಧಿನಿಷೇಧಗಳು ಯಾಕೆ ಮಹತ್ವದ ಪಾತ್ರವನ್ನು ವಹಿಸುತ್ತವೆ ಎನ್ನುವುದೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗಿದೆ. ಅದಕ್ಕೂ ಸಮಾಜದಲ್ಲಿ ಒಂದು ಪಾತ್ರವು ಇದೆ. ಅವಕ್ಕೂ ಒಂದು ಸಮಾಜದಲ್ಲಿ ಸ್ಥಾನಮಾನವು ಕಲ್ಪಿತವಾಗಿದೆ. ಸಮಾಜ ಮತ್ತು ಅದರ ಸಮಸ್ಯೆಗಳನ್ನು ಈ ದೃಷ್ಟಿಯಿಂದ ನಾವು ಬೇರೆ ದೃಷ್ಟಿಕೋನದಲ್ಲಿ ನೋಡಬೇಕಾಗುತ್ತದೆ. ಸಮಾಜ ಮತ್ತು ಅದರ ಸಂಬಂಧಗಳನ್ನು ನಾವು ಈ ದೃಷ್ಟಿಯಿಂದ ಭಾವುಕವಾಗಿ ನೋಡಬೇಕಾದ

ಅಗತ್ಯವಿಲ್ಲ. ರೈತರು. ಅಧಿಕಾರ ಶಾಹಿ ಮತ್ತು ಕಾರ್ಮಿಕರು ಎನ್ನುವುದೇ ಮನುಷ್ಯನ ಸತ್ಯಗಳಲ್ಲಿ ಒಂದಾಗಿದೆ. ಆದರೆ ನಾವು ಅನೇಕರು ರೈತರನ್ನು, ಕಾರ್ಮಿಕರು ಮುಂತಾದ ಸತ್ಯಗಳನ್ನು ನೋಡಲು ಹೋಗುವುದೂ ಇಲ್ಲ. ಅದನ್ನು ಗಮನಕ್ಕೆ ತರದೆ ಬೇರೆ ಯಾವುದನ್ನೋ ಹೇಳುತ್ತಾರೆ. ಅವುಗಳು ನಮ್ಮ ರಾಜಕೀಯವಾದ ಸತ್ಯಗಳೂ ಹೌದು. ಈ ರೀತಿಯ ರಾಜಕೀಯವಾದ ಪ್ರಜ್ಞೆಯು ನಮಗೆ ಅತ್ಯಂತ ಅಗತ್ಯವೂ ಆಗಿದೆ. ರಾಜಕೀಯವು ನಮಗೆ ಅನೇಕ ನಿಯಂತ್ರಣವನ್ನು ಹೇರುತ್ತದೆ. ಆದ್ದರಿಂದ ನಾವು ಅದನ್ನು ಬಿಟ್ಟು ಮಾತಾಡಲು ಬರುವುದೇ ಇಲ್ಲ. ರಾಜಕಾರಣವೇ ಅನೇಕ ಸಂದರ್ಭದಲ್ಲಿ ನಮ್ಮ ಪ್ರಜ್ಞೆಯನ್ನು ನಿಯಂತ್ರಿಸುತ್ತದೆ. ಇವುಗಳು ಸಾಂಸ್ಕೃತಿಕವಾದ ಕ್ರಿಯೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಈ ದೃಷ್ಟಿಯಿಂದ ಸಂಸ್ಕೃತಿ ಮತ್ತು ಅದರ ಕ್ರಿಯೆಯು ಭಿನ್ನವಾಗುತ್ತದೆ. ಕೆಲವು ಸರ್ತಿ ಬೇರೆ ಬೇರೆ ಗುಂಪುಗಳು ಬೇರೆ ಅರ್ಥಗಳನ್ನು ಹೇಳುತ್ತವೆ. ಅವುಗಳು ಜೀವನವನ್ನು ನಿಯಂತ್ರಿಸುತ್ತವೆ. ಆದರೆ ಕೆಲವು ಸಂಗತಿಗಳು ನಿರ್ದಿಷ್ಟವಾದ ಮೌಲ್ಯವನ್ನು ಸೂಚಿಸುತ್ತವೆ. ಮತ್ತೆ ಕೆಲವು ಯಾವುದೇ ಮೌಲ್ಯವನ್ನು ಹೇಳುವುದೂ ಇಲ್ಲ. ಕೆಲವು ಸಂಗತಿಗಳು ಜಗತ್ತಿಗೆ ಅನ್ವಯವಾಗುತ್ತವೆ, ಮತ್ತು ಕೆಲವು ಸ್ಥಳೀಯ ಮಟ್ಟದಲ್ಲಿ ಮಾತ್ರವೇ ಇರುತ್ತವೆ. ಈ ಸಂಗತಿಗಳು ಲೇಖಕನ ಮೇಲೆ ಪ್ರಭಾವವನ್ನು ಬೀರುತ್ತವೆ.

ವಿಶ್ವಾತ್ಮಕತೆಯು ಲೇಖಕನ ಪ್ರಜ್ಞೆಯ ಮೇಲೆ ನಿರ್ಣಾಯಕವಾದ ಪ್ರಭಾವವನ್ನು ಬೀರುತ್ತದೆ. ಮತ್ತು ಯಾವುದು ವರ್ಗವಾಗಿದೆಯೋ ಅದರ ಪ್ರಭಾವವು ಬರಹವನ್ನು ರೂಪಿಸುತ್ತದೆ. ಹಾಗೆ ನೋಡುವುದಿದ್ದರೆ ಯಾವುದು ನಮಗೆ ಮುಖ್ಯ ಮತ್ತು ಯಾವುದು ನಮಗೆ ಅಮುಖ್ಯವೆಂದು ತೀರ್ಮಾನವನ್ನು ಮಾಡಿಕೊಳ್ಳುವುದು ನಮ್ಮ ಪ್ರಜ್ಞೆಯ ಆಧಾರದ ಮೇಲೆಯೇ. ಸಾಮಾಜಿಕ ಜೀವನ ಮತ್ತು ಅದರ ಪರಿಣಾಮಗಳು ಭಿನ್ನವಾಗಿ ರೂಪು ತಳೆಯುತ್ತದೆ. ಅದರ ಹಿಂದೆ ವಿವಿಧ ಸ್ವರೂಪಗಳೂ ಇರುತ್ತವೆ. ಸಾಮಾಜಿಕ ಅಭ್ಯಾಸಗಳು ನಮ್ಮನ್ನು ನಿರ್ದೇಶಿಸುತ್ತವೆ. ನಮ್ಮ ಒಟ್ಟಾರೆಯಾದ ಸಂಗತಿಗಳನ್ನು ನಮ್ಮ ಒಟ್ಟಾದ ಜೀವನ ಮತ್ತು ಅದರ ಸಂಗತಿಗಳು ಹೇಳುತ್ತವೆ. ಕಾಲ ಮತ್ತು ಆವಶ್ಯಕತೆಗಳೇ ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾದ ಸಂಗತಿಯೂ ಆಗಿದೆ. ಸಮಾಜ ಮತ್ತು ಅದರ ರಚನೆಗಳು ನಮ್ಮ ಬರಹವನ್ನು ಹೇಳುತ್ತವೆ. ಮತ್ತು ಅದರಲ್ಲಿ ವ್ಯತ್ಯಾಸಗಳೂ ಇರುತ್ತವೆ. ರಚನೆಯೇ ಅನೇಕ ಕಾರಣಗಳಿಂದ ಸಾಂಕೇತಿಕವೂ ಆಗುತ್ತದೆ. ಅವುಗಳು ನಿರ್ದಿಷ್ಟವಾದ ಸತ್ಯವನ್ನು ಮಾತ್ರವೇ ಹೇಳುತ್ತದೆ ಎಂದು ಅರ್ಥವಲ್ಲ. ಯಾಕೆಂದರೆ ಕಲಾವಿದನು ಕೆಲವನ್ನು ಆಯ್ಕೆ ಮಾಡುತ್ತಾನೆ ಮತ್ತು ಕೆಲವನ್ನು ಬದಲಿಸುತ್ತಾನೆ. ಸಂಸ್ಕೃತಿಯ ಚರ್ಚೆಗೆ ಈ ಅರ್ಥದಲ್ಲಿ ಸಾಂಕೇತಿಕತೆಯೂ ಇರುತ್ತದೆ. ನಾವು ನೋಡಬೇಕಾದ್ದು ಲೇಖಕ ಮತ್ತು ಅವನ ಮನೋಸ್ಥಿತಿಯನ್ನು ಮಾತ್ರವೇ. ಚರಿತ್ರೆಯ ಸನ್ನಿವೇಶಗಳು ನಮ್ಮನ್ನು ನಿಯಂತ್ರಿಸುತ್ತವೆ. ಮನಸ್ಸು ಮತ್ತು ನಡತೆಗೆ ಈ ದೃಷ್ಟಿಯಿಂದ ಸಂಬಂಧವೂ ಇದೆ. ಆದ್ದರಿಂದ ವ್ಯಕ್ತಿ ಮತ್ತು ಅವನ ನಡತೆಗೂ ಸಾಹಿತ್ಯಕ್ಕೂ ನೇರವಾದ ಸಂಬಂಧವೂ ಇದೆ.ಸಾಹಿತ್ಯ ಮತ್ತು ಅದರ ಚರ್ಚೆಯು ಈ ದೃಷ್ಟಿಯಿಂದ ಲೇಖಕ ಮತ್ತು ಅವನ ಮನೋಸ್ಥಿತಿಯನ್ನು ಆಧರಿಸಿಕೊಳ್ಳುವುದೂ ಅಗತ್ಯವಾಗಿದೆ.

ಸಾಹಿತ್ಯವನ್ನು ಸಮಾಜವು ನಿರೂಪಿಸಿಕೊಳ್ಳುವುದು ಮತ್ತು ಅದರ ಅರ್ಥವನ್ನು ಹೇಳುವುದು ಅತ್ಯಂತ ಸಹಜವೂ ಆಗಿದೆ. ಸಾಹಿತ್ಯ ಮತ್ತು ಅದರ ರಚನೆಯು ಸಮಾಜದಲ್ಲಿ ಒಂದು

ಮಹತ್ವದ ಪಾತ್ರವನ್ನು ವಹಿಸುತ್ತದೆ. ಲೇಖಕನ ಪ್ರಜ್ಞೆಯನ್ನು ಸಮಾಜದ ಪ್ರಜ್ಞೆಯ ಭಾಗವಾಗಿಯೂ ನೋಡಬೇಕಾಗುತ್ತದೆ. ಅಂದರೆ ಅದರಲ್ಲಿ ಲೇಖಕನಿಗೆ ಕೊಡಲಾದ ಒಂದು ಸನ್ನಿವೇಶವೂ ಇರುತ್ತದೆ. ಮತ್ತು ಸಾಮಾಜಿಕ ರಚನೆಗಳು ಭಾಷಿಕ ರಚನೆಗಳನ್ನು ನಿಯಂತ್ರಿಸುತ್ತವೆ. ಭಾಷೆಯು ಸಮಾಜದಲ್ಲಿ ಸಂವಹನದ ಮುಖ್ಯವಾದ ಭಾಗವೂ ಆಗಿರುತ್ತದೆ. ಲೇಖಕನಿಗೂ ಭಾಷೆಯು ಸಂವಹನದ ಭಾಗವೇ ಆಗಿದೆ. ಮತ್ತು ಲೇಖಕನು ತನ್ನದೇ ಆದ ಕಾರಣವನ್ನು ಹೊಂದಿದ್ದಾನೆ. ತನ್ನ ಅಗತ್ಯವನ್ನು ಭಾಷೆಯಲ್ಲಿ ಹೇಳುತ್ತಾನೆ. ಅವನ ಆಲೋಚನೆಯು ಮಾತ್ರವೇ ಬರಹದ ಚಟುವಟಿಕೆಯಲ್ಲಿ ವ್ಯಕ್ತವಾಗುತ್ತವೆ. ಬರಹವೂ ಒಂದು ದೃಷ್ಟಿಯಲ್ಲಿ ರಚನೆಯೇ ಆಗುತ್ತದೆ. ಆ ರಚನೆಯು ಅತ್ಯಂತ ಅಗತ್ಯವೂ ಆಗುತ್ತದೆ. ಬರಹ ಮತ್ತು ಅದರ ರಚನೆಯು ಸಮಾಜ ಮತ್ತು ಅದರ ರಚನೆಯ ಭಾಗವೂ ಆಗುತ್ತದೆ. ಅದರಲ್ಲಿ ವ್ಯತ್ಯಾಸಗಳು ಇರುವುದು ಲೇಖಕ ಮತ್ತು ಅವನ ಆಲೋಚನೆಯನ್ನು ಸೂಚಿಸುವುದಕ್ಕಾಗಿಯೂ ಹೌದು. ಲೇಖಕನು ಯಾವುದನ್ನು ಅಯ್ಕೆ ಮಾಡುತ್ತಾನೆ ಅದು ಅವನ ಆಲೋಚನೆ ಮತ್ತು ಮನೋಸ್ಥಿತಿಯ ದ್ಯೋತಕವೂ ಆಗಿರುತ್ತದೆ. ಪುನರುಜ್ಜೀವನ ಕಾಲದ ಅನಂತರ ವ್ಯಕ್ತಿ ಮತ್ತು ಅವನ ವ್ಯಾಖ್ಯೆಯು ಬದಲಾಯಿತು. ವ್ಯಕ್ತಿಯು "ನಾನು' ಮತ್ತು ಸಂಸ್ಕೃತಿಯನ್ನು ನೋಡುವ ಕ್ರಮಗಳು ಬದಲಾದವು. ವ್ಯಕ್ತಿ ಮತ್ತುಅವನ ದೇಹವನ್ನು ಗ್ರಹಿಸುವ ಚಿಂತನೆಗಳೂ ಬೇರೆಯಾದವು.

ವಾಸ್ತವವಾಗಿ ನಾನು ಎನ್ನವುದು ಆತ್ಮರತಿಯ ಭಾಗವೂ ಹೌದು. ನಾನು ಎನ್ನುವುದು ಮೂಲಭೂತವಾಗಿ ಮತ್ತೆ ಕೆಲವು ಅಂಶಗಳನ್ನು ಹೇಳುತ್ತವೆ. ಅದು ದೇಹ ಮತ್ತು ಮನಸ್ಸಿನ ಪ್ರಶ್ನೆಯೂ ಆಗಿದೆ. ನಾನು ಎನ್ನುವ ಕಲ್ಪನೆಯು ಸಾಂಸ್ಕೃತಿಕವಾಗಿ ರಚಿತವಾಗಿರುತ್ತದೆ. ಅದು ವ್ಯಕ್ತಿಯ ಪ್ರಜ್ಞೆಯನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ನಡವಳಿಕೆಯು ಮಾತ್ರವೇ ಪ್ರಧಾನವೂ ಆಗುತ್ತದೆ. ವ್ಯಕ್ತಿ ಅವನ ಲಿಬಿಡೋ, ಅವನ ಆಲೋಚನೆ ಹಾಗೂಅವನ ಸ್ವ ಹಿತಾಸಕ್ತಿಯು ಕಾಣಿಸುತ್ತದೆ. ವ್ಯಕ್ತಿ ಎನ್ನುವ ಕಲ್ಪನೆಯೇ ಮಿತಿಗಳೂ ಇರುತ್ತವೆ. ವ್ಯಕ್ತಿಯ ಬಯಕೆಯನ್ನು ಸಮಾಜವು ಹತ್ತಿಕ್ಕುವುದು ನಿಜ. ವ್ಯಕ್ತಿಯು ಮುಕ್ತಾಯವಾಗುವುದು ಸಮಾಜದಲ್ಲಿ ಮಾತ್ರವೇ. ಅವನ ಸಾವು ಅವನ ಅಸ್ತಿತ್ವವನ್ನು ಮುಕ್ತಾಯ ಮಾಡುತ್ತದೆ. ಲಿಬಿಡೋ ಮತ್ತು ಬರಹಕ್ಕೆ ಕೆಲವು ರೀತಿಯ ಸಂಬಂಧವಿದೆ. ನಾನು "ಅಂದರೆ ನಿಸರ್ಗದ ಮೇಲೆ ಯಜಮಾನಿಕೆಯನ್ನು ಸಾಧಿಸುವುದೂ ಹೌದು. ಸಂವಹನ ಮತ್ತು ಭಾಷೆಯ ಮೇಲೆಯೂ ನಾನು ಎನ್ನುವ ಕಲ್ಪನೆಯು ಪ್ರಭಾವವನ್ನು ಬೀರುತ್ತದೆ. ಸಮಾಜ ಮತ್ತು ನಡವಳಿಕೆಯೂ ಪರಸ್ಪರ ಸಂಘರ್ಷವನ್ನು ಸೃಷ್ಟಿಸುತ್ತದೆ. ನಾನು ಮತ್ತು ನನ್ನ ಬರಹ ಎನ್ನುವುದು ಮೂಲಭೂತವಾಗಿ ನಿರ್ದಿಷ್ಟವಾದ ಮತ್ತು ಸ್ವಂತಿಕೆಯ ಪ್ರಶ್ನೆಯನ್ನು ಎತ್ತುತ್ತದೆ. ನಾನು ನನ್ನ ಬಯಕೆಯನ್ನು ನನ್ನ ಬರಹದಲ್ಲಿ ವ್ಯಕ್ತ ಮಾಡುತ್ತೇನೆ. ಲಿಬಿಡಿನಲ್ ಬಯಕೆಯು ಬರಹದಲ್ಲಿ ವ್ಯಕ್ತವಾಗುತ್ತವೆ. ಸಾಮಾಜಿಕ ಜೀವನ ಮತ್ತು ನಾನು ಎನ್ನವುದು ಬೇರೆ ಬೇರೆ ಪ್ರಯೋಗಗಳಿಗೆ ಕಾರಣವೂ ಆಗುತ್ತದೆ. ಬರೆಯುವುದು ಅಂದರೆ ನಮ್ಮನ್ನು ವ್ಯಕ್ತ ಮಾಡುವುದೂ ಅಷ್ಟೇ ಸತ್ಯ. ಆದರೆ ಬರೆಯುವುದು ವ್ಯಕ್ತಿಯನ್ನು ತೃಪ್ತಿಗೊಳಿಸುತ್ತದೆ. ಕಲ್ಪಿತ ಸಂಗತಿ ಮತ್ತು ಅದರ ಪರಿಣಾಮವನ್ನು ಈ ದೃಷ್ಟಿಯಿಂದ ನಾವು ಭಿನ್ನವಾಗಿ ಗ್ರಹಿಸಬೇಕಾಗುತ್ತದೆ.

ಕಲ್ಪಿತವಾದ ಸುಖವೂ ಬರಹದಲ್ಲಿ ಕಾಣಿಸುತ್ತದೆ. ಮಾನಸಿಕವಾದ ರಚನೆಗಳು ಬರಹದ ರಚನೆಗಳಿಗೆ ಕಾರಣವೂ ಆಗುತ್ತವೆ. ಮತ್ತುಅದರಲ್ಲಿ ನೆಮ್ಮದಿಯೂ ದೊರೆಯುತ್ತದೆ. ಮತ್ತು ಅದು ವ್ಯಕ್ತಿಯನ್ನು ನಿರ್ದಿಷ್ಟವಾಗಿ ಬಿಡುಗಡೆ ಮಾಡುತ್ತದೆ. ಸುತ್ತಲಿನ ಜಗತ್ತನ್ನು ನೋಡಿಕೊಂಡೇ ವ್ಯಕ್ತಿಯು ಬರೆಯುತ್ತಾನೆ. ಸಮಾಜ ಮತ್ತು ಅದರ ಅರಿವೂ ಅವನಿಗೆ ಹೆಚ್ಚು ಮುಖ್ಯ. ಬರಹವು ವ್ಯಕ್ತಿಯ ಆಲೋಚನೆಯ ಕ್ರಮವನ್ನು ಹೇಳುತ್ತದೆ. ಪ್ರಾಂಕ್ ಫ್ರಾರ್ಟ್ ಸ್ಕೂಲ್ ಚರಿತ್ರೆಯನ್ನು ನೋಡುವಾಗ ಇದನ್ನೂ ಗಮನಕ್ಕೆ ತಂದಿತ್ತು. ವ್ಯಕ್ತಿ ಮತ್ತು ಅವನ ನಡವಳಿಕೆಯು ಬರೀ ಅವನೊಬ್ಬನ್ನು ಮಾತ್ರವೇ ಸೂಚಿಸುವುದೂ ಇಲ್ಲ. ಅದು ಸಮಾಜ, ಆರ್ಥಿಕತೆ ಮುಂತಾದವುಗಳನ್ನು ಹೇಳುತ್ತವೆ. ವ್ಯಕ್ತಿಯು ಅತೃಪ್ತನಾದರೆ ಮತ್ತು ಖಿನ್ನತೆಗೆ ಒಳಗಾದರೆ ಅವನ ವ್ಯಕ್ತಿತ್ವ ಮತ್ತು ಅವನ ಸಮಾಜವೆರಡೂ ನಮ್ಮ ಗಮನಕ್ಕೆ ಬರಬೇಕಾಗುತ್ತದೆ. ಎಷ್ಟೋ ಸರ್ತಿ ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಸಮಾಜವು ತಿದ್ದುತ್ತದೆ. ವ್ಯಕ್ತಿ ಮತ್ತು ಅವನ ಪ್ರಶ್ನೆಯನ್ನು ಸಮಾಜವು ನೋಡುವ ಕ್ರಮವೂ ಬೇರೆಯಾಗದೆ. ಆದ್ದರಿಂದ ಅವನ ಬರಹಕ್ಕೂ ಅವನ ನಡವಳಿಕೆಗೂ ಸಂಬಂಧವಿದೆ. ಹಾಗೆ ನೋಡುವುದಿದ್ದರೆ ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಬಂಡವಾಳವಾದವು ನೋಡುವ ಕ್ರಮವು ಭಿನ್ನವಾಗುತ್ತದೆ. ಅಂದರೆ ಅದು ಕೆಲವನ್ನು ಹೇರುತ್ತದೆ. ಸಮಾಜ ಮತ್ತು ಆದರ ತಾರತಮ್ಯಗಳು ಕೂಡಾ ಬರಹವನ್ನು ನಿರ್ದೇಶಿಸುತ್ತವೆ. ತಂತ್ರಜ್ಞಾನವು ಮುಂಚೂಣಿಯಲ್ಲಿ ಇರುವ ಸಮಾಜದಲ್ಲಿ ವ್ಯಕ್ತಿ ಮತ್ತು ಅವನ ನಡವಳಿಕೆಗಳು ಒಂದು ರೀತಿಯಲ್ಲಿ ಇರುತ್ತವೆ. ಯಾವುದೇ ಸಮಾಜವು ವಿಕಾಸವಾಗುತ್ತಾ ಬಂದಂತೆ ವ್ಯಕ್ತಿಯ ನಡವಳಿಕೆಯಲ್ಲಿ ವ್ಯತ್ಯಾಸವು ಕಾಣುತ್ತದೆ. ಕ್ರಿಯೆಗಳಲ್ಲಿ ವ್ಯತ್ಯಾಸವಾಗುತ್ತದೆ. ಆದರೆ ಯಾವುದೇ ಕ್ರಿಯೆಯು ನಿರ್ದಿಷ್ಟವಾದ ಉದ್ಧೇಶವನ್ನು ಹೊಂದಿರುತ್ತವೆ.

ವಾಸ್ತವವವಾಗಿ ಕಾರಂತರ ಕಾದಂಬರಿಗಳು ಮತ್ತು ಅದರ ನಿರೂಪಣೆಗಳಲ್ಲಿ ಎದ್ದು ಕಾಣಿಸುವ ಮುಖ್ಯವಾದ ಪ್ರಶ್ನೆಯೂ ಇದುವೇ ಆಗಿದೆ. ಅವರ ಪರಿಸರದಲ್ಲಿ ಕಾಣದೇ ಇದ್ದುದನ್ನು ಅವರು ವಿವರಿಸಿಲ್ಲ. ಅದರಲ್ಲಿ ಅವರಿಗೆ ಯಾವುದು ಮುಖ್ಯವೆಂದು ಅನಿಸಿತೋ ಅದನ್ನು ಮಾತ್ರವೇ ಅವರು ಬರೆದರು. ಲೇಖಕನು ಒಂದು ಸನ್ನಿವೇಶ ಮತ್ತು ಅದರ ಸ್ವರೂಪವನ್ನು ನೋಡಿಕೊಂಡೇ ಬರೆಯುತ್ತಾನೆ. ಮತ್ತು ಅವನಿಗೆ ಅದು ಮುಖ್ಯವಾಗುತ್ತದೆ. ಆಯಾ ರಚನೆಯ ಜೊತೆಗೆ ಲೇಖಕನು ಯಾವ ರೀತಿಯ ಸಂಬಂಧವನ್ನು ಇಟ್ಟುಕೊಂಡಿದ್ದಾನೆ ಎನ್ನುವುದನ್ನು ನೋಡಿಕೊಂಡೇ ನಾವು ಕೆಲವು ನಿರ್ಧಾರಕ್ಕೂ ಬರಬಹುದು. ಆದರೆ ಕಾರಂತರ ಕಾದಂಬರಿಯನ್ನು ಓದಿದರೆ ಅದರಲ್ಲಿ ಮತ್ತೆ ಬೇರೆ ಅಂಶಗಳೂ ನಮಗೆ ಕಾಣಿಸುತ್ತದೆ. ಅದು ಅವರು ಆಯಾ ರಚನೆಯಿಂದ ಯಾವುದನ್ನು ಆಯ್ಕೆ ಮಾಡಿಕೊಂಡಿದ್ದಾರೆಯೋ ಅದು ಅವರ ವಿವರಣೆಯನ್ನು ಹೇಳುತ್ತದೆ. ಮತ್ತು ಅದರ ಕುರಿತಾದ ಅವರ ಆನ್ವಯಿಕತೆಯನ್ನೂ ಅದು ನಿರ್ಧರಿಸುತ್ತದೆ. ಅವರ ಆಲೋಚನೆಗಳು ಅಂತ ಯಾವುದು ಇದೆಯೋ ಅದನ್ನು ಅವರು ಅವರ ಕಾದಂಬರಿಯಲ್ಲಿ ಹೇಳಿದರು. ಮತ್ತು ಅವರು ಬರೆದುದು ಒಂದು ಕಾಲದ ನಿರ್ದಿಷ್ಟವಾದ ಸಾಮಾಜಿಕ ಜೀವನ ಮತ್ತು ಅದರ ಅರ್ಥವನ್ನು ಮಾತ್ರವೇ. ಮೈಮನಗಳ ಸುಳಿಯಲ್ಲಿ ಕಾದಂಬರಿಯ ಮಂಜುಳೆಗೆ ಒಂದು ನಿರ್ದಿಷ್ಟವಾದ ಮಾದರಿಯೂ ಇದೆ. ಅದು ಅವಳ ಹೆಣ್ತನವನ್ನು ಹೇಳುತ್ತದೆ. ಅವಳ

ಬಯಕೆಯನ್ನು ಪ್ರಸ್ತುತ ಪಡಿಸುತ್ತದೆ. ಹೆಣ್ಣಾಗಿ ಅವಳು ಯಾವುದನ್ನು ಬಯಸುತ್ತಾಳೆ ಮತ್ತು ಅದನ್ನು ಅವಳು ಹೇಗೆ ಭಾವಿಸಿಕೊಳ್ಳುತ್ತಾಳೆ ಎನ್ನುವುದನ್ನು ಕಾರಂತರು ಅದರಲ್ಲಿ ನಿರೂಪಿಸುತ್ತಾರೆ.ವಾಸ್ತವವಾಗಿ ಇಡೀ ಕಾದಂಬರಿಯು ಅಂತಿಮವಾಗಿ ಹೇಳುವುದು ಹೆಣ್ಣೊಬ್ಬಳ ಅಂತರಂಗವನ್ನು ಮಾತ್ರವೇ ಅಲ್ಲ, ಅದು ಮನಸ್ಸನ್ನು ಹೇಳುತ್ತದೆ. ಅದರಲ್ಲಿ ಸತ್ಯವೂ ಇದೆ. ಇದನ್ನು ನಾವು ಮನೋವೈಜ್ಞಾನಿಕ ಕ್ರಮದಲ್ಲಿ ನೋಡುವುದೂ ಸಾಧ್ಯ. ಮತ್ತು ಇದನ್ನು ಗ್ರಹಿಸುವಾಗ ನಾವು ಮನೋವಿಜ್ಞಾನವನ್ನು ಮಾತ್ರವೇ ಗ್ರಹಿಸಬೇಕೆಂದು ಅರ್ಥವೂ ಅಲ್ಲ. ಹಾಗೆ ನೋಡುವುದಿದ್ದರೆ ಸಾಂಪ್ರದಾಯಿಕ ವಿಮರ್ಶಕರು ಸಾಹಿತ್ಯವನ್ನು ನೋಡುವುದು ಮತ್ತು ಗ್ರಹಿಸುವುದು ಕೇವಲ ಒಂದು ಪಾತ್ರವಾಗಿ ಮಾತ್ರವೇ. ಆದರೆ ಮನೋವೈಜ್ಞಾನಿಕ ವಿಮರ್ಶೆಯು ಸುಪ್ತಪ್ರಜ್ಞೆ ಮತ್ತು ಅದರ ಅಭಿವ್ಯಕ್ತಿಯನ್ನು ಗ್ರಹಿಸುತ್ತದೆ. ಆದರೆ ಇದರಲ್ಲಿ ನಾವು ಬಯಕೆ ಮತ್ತು ಅಭಿವ್ಯಕ್ತಿಯನ್ನು ನೋಡುವಾಗ ಬರೀ ಅಭಿವ್ಯಕ್ತಿಯನ್ನು ಮಾತ್ರವೇ ಗ್ರಹಿಸಿದರೆ ಸಾಕಾಗುವುದೂ ಇಲ್ಲ. ಈಡಿಪಸ್ ನಾಟಕದಲ್ಲಿ ಬರುವ ಅವನ ಪಾತ್ರವನ್ನು ಗ್ರಹಿಸಲು ನಮಗೆ ಬರೀ ಸಾಂಪ್ರದಾಯಿಕವಾದ ವಿಮರ್ಶೆಯು ಉಪಯುಕ್ತವಲ್ಲ. ಸಾಹಿತ್ಯದ ಅನೇಕ ಕೃತಿಗಳು ನಮಗೆ ಅಂತರಂಗವನ್ನು ಹೇಳುತ್ತವೆ. ಅದು ಬಹಳ ಅಗತ್ಯವೂ ಆಗಿರುತ್ತದೆ. ಆದ್ದರಿಂದಲೇ ಅನೇಕ ಸಾಂಪ್ರದಾಯಿಕವಾದ ವಿಮರ್ಶೆಯು ತಳೆಯುವ ಅನೇಕ ನಿರ್ಣಯಗಳು ನಮಗೆ ಬರೀ ಶೈಕ್ಷಣಿಕ ಅಗತ್ಯದಂತೆ ಕಾಣಿಸುತ್ತವೆ.

ಸಮಾಜಶಾಸ್ತ್ರೀಯವಾದ ದೃಷ್ಟಿಕೋನದಲ್ಲಿ ಮನೋಸ್ಥಿತಿ ಮತ್ತು ಅದರ ಸಾಮಾಜಿಕ ನಿಲುವುಗಳ ಅಗತ್ಯವೂ ಇರುತ್ತದೆ. ಕೃತಿಯಲ್ಲಿ ಬರುವ ಪಾತ್ರಗಳು ಮತ್ತು ಅವುಗಳ ಸ್ವಭಾವಗಳು ಮನಸ್ಸು ಮತ್ತು ಅದರ ಪರಿಣಾಮವನ್ನು ಹೇಳುತ್ತವೆ. ಆದರೆ ಅದರ ಜೊತೆಗೆ ಅವುಗಳು ಕೃತಿಯಲ್ಲಿ ಹೇಗೆ ಹಾಜರಾಗುತ್ತವೆ ಎನ್ನುವುದನ್ನೂ ನೋಡಬೇಕಾಗುತ್ತದೆ. ಅವುಗಳು ಒಂದು ರೀತಿಯಿಂದ ಭೌತಿಕವಾದ ಅಸ್ತಿತ್ವವನ್ನು ಪಡೆಯುತ್ತವೆ. ಮತ್ತು ಅವುಗಳ ಸ್ವಭಾವ ಮತ್ತು ವರ್ತನೆಗಳಿಗೆ ನಿರ್ದಿಷ್ಟವಾದ ಒಂದು ಅರ್ಥವೂ ಇರುತ್ತದೆ. ಅಂದರೆ ಅವುಗಳಿಗೆ ಇರುವ ಅರ್ಥವು ಮನಸ್ಸು ಮತ್ತು ಅದರ ನಿರೂಪಣೆಯನ್ನು ಮಾಡುತ್ತವೆ. ವಸ್ತು ಮತ್ತು ಅದರ ಆಯ್ಕೆಯು ಸಮಾಜವನ್ನು ಹೇಳುತ್ತದೆ ಎನ್ನುವುದು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ನಮ್ಮ ಗಮನವು ಇರಬೇಕಾದ್ದು ಈ ದೃಷ್ಟಿಯಿಂದ ಕೃತಿ ಮತ್ತು ಅದರ ವಸ್ತುವುದು ಯಾವ ರೀತಿಯದು ಎನ್ನುವುದರ ಬಗೆಗೆ. ನಮಗೆ ಮನುಷ್ಯ ಮತ್ತು ಅವನ ನಿಜವಾದ ಸ್ವರೂಪವು ಮುಖ್ಯವಾಗುತ್ತದೆ. ಅದನ್ನು ಲೇಖಕನು ಹೇಗೆ ಹೇಳುತ್ತಾನೆ ಮತ್ತು ಅದನ್ನು ಅವನು ಹೇಳುವಾಗ ತಳೆಯುವ ನಿಲುವು ಯಾವುದು ಎನ್ನುವುದು ಮಾತ್ರವೇ ಮುಖ್ಯವಾಗುತ್ತದೆ. ಮನೋಸ್ಥಿತಿಯೆನ್ನುವುದು ನಿಜವಾಗಿಯೂ ನಿರ್ಮಾಣವಾಗುತ್ತದೆ. ಮತ್ತು ಅದು ಸಮಾಜ ಮ್ತು ಪರಿಸರವನ್ನು ಅವಲಂಬಿಸುತ್ತದೆ. ಅದರಲ್ಲಿ ವ್ಯಕ್ತವಾಗುವುದು ಜೀವನ ಮತ್ತು ಅದರ ಅರ್ಥಗಳು ಮಾತ್ರವೇ. ಲೇಖಕ ಮತ್ತು ಅವನ ಮನೋಭಾವವು ಹೀಗೆ ಬೇರೆ ಬೇರೆ ರೀತಿಯಲ್ಲಿ ರೂಪುಗೊಳ್ಳುತ್ತದೆ.

ಲೇಖಕನು ಸಮಾಜ ಮತ್ತು ಬಾಹ್ಯದ ಅನೇಕ ನಿಯಮವನ್ನು ಮೀರಿ ಇರುವುದು ಸಾಧ್ಯವಿಲ್ಲ. ಅವನು ಅದರ ಮೂಲಕವೇ ಅನೇಕವನ್ನು ಗ್ರಹಿಸುತ್ತಾನೆ. ಅದನ್ನು ಕ್ಷಣಗಳು

ಮತ್ತು ಅದರ ಅರಿವು ಎಂದೂ ಹೇಳಬೇಕಾಗುತ್ತದೆ. ಅದರ ಜೊತೆಗೆ ಕೆಲವು ರೀತಿಯಲ್ಲಿ ಕೇಂದ್ರಗಳು ಇರುತ್ತವೆ. ಯಾವುದನ್ನು ಲೇಖಕ ಕೇಂದ್ರ ಮಾಡಿಕೊಳ್ಳುತ್ತಾನೆ ಮತ್ತು ಅದರ ಮೂಲಕ ಅವನು ನಿರೂಪಿಸುವ ಸಂಗತಿಗಳು ಯಾವುವು ಎನ್ನುವುದು ಮಾತ್ರವೇ ಬಹಳ ಮುಖ್ಯ. ಸಾರ್ತ್ರೆಯ ನಾಸಿಯಾ ಅಥವಾ ಗಿರಿಯವರು ಗತಿಸ್ಥಿತಿ ಮುಂತಾದ ಬರಹಗಳು ಸ್ವಂತವನ್ನು ಕೇಂದ್ರ ಮಾಡಿಕೊಂಡಿವೆ. ಇಲ್ಲಿ ಕೇಂದ್ರಕ್ಕೆ ಮಹತ್ವವು ಇದೆ. ಗತಿಸ್ಥಿತಿಯಲ್ಲಿ ವ್ಯಕ್ತಿಯು ಮುಖ್ಯನೂ ಆಗಿದ್ದಾನೆ. ವಾಸ್ತವವಾಗಿ ಕೃತಿಯಲ್ಲಿ ಬರುವ ಹೇಳಿಕೆ ಮತ್ರು ಅದರ ಅನ್ವಯಗಳಿಗೆ ನಿಜವಾದ ಅರ್ಥವು ಬೇರೆಯಿರುತ್ತದೆ. ಅದನ್ನು ಹೀಗೆಯೂ ಹೇಳಬಹುದು: ಕೃತಿಯಲ್ಲಿ ಬರುವ ಕೆಲವು ವಿಷಯಗಳು ಹೇಳಿಕೆಯನ್ನು ನೀಡುತ್ತವೆ. ಮತ್ತೆ ಕೆಲವು ಅನ್ವಯವನ್ನು ಸೂಚಿಸುತ್ತವೆ. ಬೆಟ್ಟದಜೀವ ಕಾದಂಬರಿಯಲ್ಲಿ ನಿರೂಪಕನು ನೋಡುವುದು ಅವನ ಅನ್ವಯವನ್ನೂ ಸೂಚಿಸುತ್ತದೆ. ಉದ್ದೇಶವು ಯಾವುದು ಮತ್ತು ಅದರ ಅನ್ವಯವು ಯಾವುದು ಎಂದು ಕಾದಂಬರಿಯನ್ನು ಓದುವಾಗ ತಿಳಿಯುತ್ತದೆ. ಕೃತಿಯಲ್ಲಿ ಅನ್ವಯವೇ ಕೃತಿಕಾರನ ಉದ್ದೇಶವನ್ನು ಹೇಳುತ್ತದೆ. ಮತ್ತು ಅದರಲ್ಲಿ ಅವನ ಮನೋಭಾವವೂ ಬಹಳ ಮುಖ್ಯವಾಗುತ್ತದೆ. ಕೃತಿಯಲ್ಲಿ ಬರುವ ಕ್ರಿಯೆಗಳು ಮತ್ತು ಅದರ ಸಂಗತಿಗಳೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಸಾಹಿತ್ಯ ಮತ್ತು ಅದರ ಲಕ್ಷಣವೂ ಒಂದು ದೃಷ್ಟಿಯಿಂದ ಮಹತ್ವದ್ದೂ ಆಗುತ್ತದೆ. ಸಾಹಿತ್ಯ ಮತ್ತು ಅದರ ಕ್ರಿಯೆ ಅದರ ಉದ್ದೇಶ ಮತ್ತು ಅದರಲ್ಲಿ ಬಳಕೆಯಾಗುವ ಪ್ರತೀಕಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಮತ್ತು ಮನೋವೈಜ್ಞಾನಿಕವಾದ ಹಿನ್ನೆಲೆಯಲ್ಲಿಯೂ ಗುರುತಿಸುವುದು ಸಾಧ್ಯ. ಬರಹವು ಒಂದು ರೀತಿಯಿಂದ ಲೇಖಕನಿಗೆ ನೆಮ್ಮದಿಯನ್ನು ಕೊಡುತ್ತದೆ. ಅಂದರೆ ಅವನಿಗೆ ಖುಶಿಯು ಸಿಗುತ್ತದೆ. ಆ ಖುಶಿಯು ಅವನಿಗೆ ಬೇರೆಯವರ ಜೊತೆಗೆ ತೋಡಿಕೊಂಡ ಸಂಗತಿಯನ್ನು ಹೇಳುತ್ತದೆ.

ವೈಯಕ್ತಿಕ ರಚನೆ ಅದರ ಅಗತ್ಯಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಬರಹವು ಒಂದು ಸುಖವೂ ಹೌದು. ನಾವು ನಮ್ಮ ವಿಷಯಗಳನ್ನು ಇನ್ನೊಬ್ಬರಲ್ಲಿ ನಮಗೆ ಗೊತ್ತಿರುವುದನ್ನು ತೋಡಿಕೊಂಡ ಅನುಭವನ್ನು ಅದು ಕೊಡುವುದರಿಂದ ನಮಗೆ ನೆಮ್ಮದಿಯನ್ನು ಕೊಡುತ್ತದೆ. ಮತ್ತು ಅದರಲ್ಲಿ ನಮ್ಮ ನೆಮ್ಮದಿಯು ಮಾತ್ರವೇ ಇಲ್ಲ ನಮ್ಮ ಬರಹವನ್ನು ಓದುವ ನಮ್ಮ ಸ್ನೇಹಿತನ ನೆಮ್ಮದಿಯೂ ಇರುತ್ತದೆ. ಅವನು ಸ್ನೇಹಿತನು ಯಾಕೆಂದರೆ ಅವನು ನಮ್ಮ ಬರಹವನ್ನು ಓದುತ್ತಾನೆ. ಮತ್ತು ಹಾಗೆ ನಮ್ಮೊಂದಿಗೆ ಅವನು ವಿಷಯವನ್ನು ಹಂಚುತ್ತಾನೆ. ಮತ್ತು ನಮಗೆ ಗೊತ್ತಿಲ್ಲದಂತೆ ನಮ್ಮ ನಿಲುವುಗಳನ್ನು ವಿರೋಧಿಸಬಹುದು ಅಥವಾ ನಮ್ಮ ಅಭಿಪ್ರಾಯವನ್ನು ಸ್ವೀಕರಿಸಲೂ ಬಹುದು. ಅಥವಾ ನಮ್ಮ ಅಭಿಪ್ರಾಯವನ್ನು ಮುಂದುವರಿಸಲೂ ಬಹುದು. ಅಂದರೆ ನಮ್ಮ ಬರಹ ಮತ್ತು ಅದನ್ನು ಸ್ವೀಕರಿಸುವ ನಮ್ಮ ಓದುಗನು ಸಂವಾದವನ್ನು ಮಾಡುತ್ತಾನೆ. ಆದರೆ ಅದರಲ್ಲಿ ಖುಷಿಯು ಇರುತ್ತದೆ. ಆದರೆ ಇಲ್ಲಿ ಮತ್ತೆ ಕೆಲವು ಅಭಿಪ್ರಾಯವನ್ನು ನೋಡಬಹುದು: ಬರಹವನ್ನು ಯಾರು ಓದುವುದೇ ಇಲ್ಲವೋ ಅವನು ನಿಜವಾಗಿಯೂ ನಮ್ಮೊಂದಿಗೆ ಸಂವಾದವನ್ನು ಮಾಡುವುದೇ ಇಲ್ಲವೆಂದು ನಾವು ತಿಳಿಯಬೇಕಾಗುತ್ತದೆ. ಮತ್ತು ಅದರಲ್ಲಿ ನಿರ್ದಿಷ್ಟವಾದ ಕೆಲವು ಸಂಗತಿಗಳು ಇರುತ್ತವೆ. ಅಂದರೆ ಬರಹ ಮತ್ತು ಅದರ ಸ್ವರೂಪವನ್ನು ನಾವು ಈ ದೃಷ್ಟಿಯಿಂದ ನಾವು ನೋಡಬೇಕಾದ ಕ್ರಮವೂ ಬೇರೆಯಾಗುತ್ತದೆ.

ಅದರ ಅರ್ಥವು ಇಷ್ಟೇ: ಬರಹವು ನಮ್ಮ ಮೌನವನ್ನು ಛೇದಿಸುತ್ತದೆ. ಮತ್ತು ಅದರಲ್ಲಿ ವೈಯಕ್ತಿಕ ರಚನೆ ಮತ್ತು ಅದರ ಸ್ವರೂಪವು ಇರುವುದು ನಮಗೆ ಬೇಕಾದ ಸಂಗತಿಗಳನ್ನು ಹೇಳಲು. ವೈಯಕ್ತಿಕ ರಚನೆಯು ನಮ್ಮ ಮನೋಭಾವನ್ನು ಹೇಳುತ್ತದೆ. ಆದರೆ ಸಮಾಜ ಮತ್ತು ಅದರ ರಚನೆಗಳು ಮತ್ತೊಂದನ್ನು ಹೇಳುತ್ತದೆ, ನಾವು ಬರೆಯುವುದು ಎಂದರೆ ಸಮಾಜ ಮತ್ತು ಅದರ ರಚನೆಯೊಂದಿಗೆ ನಾವು ಸಾಧ್ಯವಾದಷ್ಟು ಸಂಬಂಧವನ್ನು ಸ್ಥಾಪಿಸಿಕೊಳ್ಳುವುದೂ ಹೌದು. ಫ್ರಾಯ್ಡನ ವಿಶ್ಲೇಷಣೆಯಲ್ಲಿ ವೈಯಕ್ತಿಕತೆ ಮತ್ತು ಅದರ ಸ್ವರೂಪವು ಬೇರೆಯಾಗುತ್ತದೆ. ಅಂದರೆ ಅದರಲ್ಲಿ ವೈಯಕ್ತಿಕತೆ ಮತ್ತು ಅದರ ಸ್ವರೂಪವು ಈ ದೃಷ್ಟಿಯಿಂದ ಮನೋಸ್ಥಿತಿಯನ್ನು ಹೇಳುತ್ತದೆ. ಯಾವುದನ್ನು ನಾವು ಹೇಗೆ ಹೇಳಬೇಕು ಎನ್ನುವುದು ಮನೋಸ್ಥಿತಿಯ ಪ್ರಶ್ನೆಯೂ ಆಗಿದೆ. ಅವನು ಹೇಳುವುದು ನಮಗೆ ಇರುವ ಮನೋಸ್ಥಿತಿ ಮತ್ತು ಅದರ ಅರ್ಥವೂ ಬೇರೆ. ಅದರಲ್ಲಿ ನಾವು ಯಾವುದನ್ನು ಹೇಳುತ್ತೇವೆಯೋ ಅದರ ನಮ್ಮ ಅಭಿವ್ಯಕ್ತಿಯೂ ಹೌದು. ಅದರಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಇವೆ. ಅಂದರೆ ನಾವು ಇರುವುದನ್ನು ಮತ್ತು ಮನಸ್ಸು ಯಾವುದನ್ನು ಹೇಳುತ್ತದೆಯೋ ಅದನ್ನು ಮಾತ್ರವೇ ವಿವರಿಸುವುದಿಲ್ಲ ಅದರ ಬದಲು ನಮಗೆ ಯಾವುದನ್ನು ಹೇಳಬೇಕೆಂಬ ಬಯಕೆಯು ಇರುತ್ತದೆಯೋ ಅದನ್ನೂ ಹೇಳುತ್ತೇವೆ. ಮನಸ್ಸು ಮತ್ತು ಅದರ ಒತ್ತಡಗಳು ನಮಗೆ ಬಹಳ ವಿಷಯವನ್ನು ಹೇಳುತ್ತದೆ.

ಮನಸ್ಸು ಮತ್ತು ಅದರ ಸಂಕಟವು ಸಾಮಾನ್ಯರಿಗೆ ಒಂದೊಂದು ರೀತಿಯಲ್ಲಿ ಕಾಣಿಸಲೂ ಬಹುದು: ಅದು ಕೆಲವರಿಗೆ ನೋವು ಕೊಡುತ್ತದೆ. ಮನಸ್ಸು ಮತ್ತು ಅದರ ಒತ್ತಡವು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಾಣಿಸುತ್ತದೆ. ಕೆಲವರಿಗೆ ಅದು ತಲೆನೋವು, ಮತ್ತೆ ಕೆಲವರಿಗೆ ಅದು ದೇಹವನ್ನು ಹಿಂಡಿದ ಅನುಭವವನ್ನು ಮತ್ತೆ ಕೆಲವರಿಗೆ ಅದು ಸುಸ್ತನ್ನು ಉಂಟುಮಾಡಬಹುದು. ಅದರೆ ಅದು ಲೇಖಕನಲ್ಲಿ ಮಾತ್ರವೇ ಬೇರೆಯಾಗುತ್ತದೆ. ಒಬ್ಬ ಪ್ರಗತಿಪರ ಚಿಂತಕನು ತನ್ನ ನೋವನ್ನು ತನಗೆ ಅನಿಸಿದ್ದನ್ನು ತನ್ನ ಜೊತೆಯವರೊಂದಿಗೆ ಚಳುವಳಿಯನ್ನು ಮಾಡಬಹುದು. ಮತ್ತೆ ಕೆಲವರು ಅದನ್ನು ಬರಬೇಕಾದ ಆಶಯದ ಹಿನ್ನೆಲೆಯಲ್ಲಿಯೂ ನೋಡಬಹುದು. ಇರುವುದು ಮತ್ತು ಬರಬೇಕಾದ್ದು ಪ್ರಗತಿಪರ ಚಿಂತಕನಿಗೆ ಅತ್ಯಂತ ಆವಶ್ಯಕವೂ ಆಗಿರುತ್ತದೆ. ಮನುಷ್ಯ ಮತ್ತು ಅವನ ನಡತೆಯು ಬೇರೆ ಬೇರೆ ವಿಷಯಗಳನ್ನು ಹೇಳುತ್ತವೆ. ನಡತೆಗೂ ಒಂದು ರಾಚನಿಕವಾದ ಸ್ವರೂಪವು ಇದೆ. ಅದು ನಿರ್ದಿಷ್ಟವಾದ ಆಶಯವನ್ನು ಸೂಚಿಸುತ್ತದೆ. ರಚನೆ ಮತ್ತು ಅದರ ವಿಶ್ಲೇಷಣೆಯನ್ನು ಮಾಡುವಾಗ ನಾವು ಇದನ್ನು ಯೋಚಿಸಬೇಕಾಗುತ್ತದೆ. ರಾಚನಿಕ ವಿಶ್ಲೇಷಣೆಯಲ್ಲಿ ಚರಿತ್ರೆ ಮತ್ತು ಅದರ ಅರಿವು ಬಹಳ ಮುಖ್ಯವಾಗುತ್ತದೆ. ನಮಗೆ ಗೊತ್ತಿರಬೇಕಾದ ಅನೇಕ ಅಂಶಗಳು ಇವೆ. ವಾಸ್ತವ ಮತ್ತು ಅದರ ರಚನೆಗಳು ಸ್ಥಿರವಾಗಿ ಇರುವುದೂ ಇಲ್ಲ. ಅದು ಬದಲಾಗುತ್ತದೆ. ಮತ್ತು ಬದಲಾಗುವುದು ಬೇರೆ ಬೇರೆ ಕಾರಣಗಳಿಂದ. ಆದರೆ ಸಮಾಜ ಮತ್ತು ಅದರ ಅರಿವು ಹೆಚ್ಚು ಅಗತ್ಯವೂ ಆಗುತ್ತದೆ.

ಕಾದಂಬರಿಯು ನಿಜವಾಗಿಯೂ ನಿರ್ದಿಷ್ಟವಾದ ಓದುಗರನ್ನು ಸೆಳೆದಿದೆ. ಮತ್ತು ಹೀಗೆ ಸೆಳೆದ ಸಂಗರತಳಲ್ಲಿ ಕಾವ್ಯವೂ ಸೇರಿತ್ತದೆ. ಕಾವ್ಯದ ರಚನೆಗೆ ಕೇಳುಗರೂ ಕಾರಣ.ಅದು ಹೊಸ ಓದುಗರನ್ನು ಸೆಳೆಯಿತು. ಮತ್ತು ಅದರಲ್ಲಿ ಹೊಸದಾದ ಅಗತ್ಯಗಳೂ ಇದ್ದವು.

ಅಂದರೆ ಅವುಗಳನ್ನು ನಾವು ನೋಡಿಕೊಳ್ಳುವ ಕ್ರಮಗಳು ಭಿನ್ನವಾಗುತ್ತವೆ. ಸಾಹಿತ್ಯ ಮತ್ತು ಸಮಾಜದ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ನಮಗೆ ಸರಿಯಾದ ಪರಿಕರವು ಇಲ್ಲದೆ ಹೋದರೆ ಅದು ವಿಫಲವಾಗುತ್ತದೆ. ಅದನ್ನು ಗ್ರಹಿಸಲು ನಮಗೆ ಬುದ್ಧಿಜೀವಿಗಳ ಚರಿತ್ರೆಯೂ ಅಗತ್ಯವಿದೆ. ನವೋದಯವು ಬರೀ ಸಾಮಾನ್ಯರನ್ನು ಮಾತ್ರವೇ ಕೇಂದ್ರ ಮಾಡಿಕೊಂಡಿಲ್ಲ. ಅದು ಸಾಮಾನ್ಯವಾದ ಸಂವೇದನೆಯನ್ನು ಮಾತ್ರವೇ ಹೇಳುವುದೂ ಇಲ್ಲ. ಅದರಲ್ಲಿ ವ್ಯತ್ಯಾಸವೂ ಇದೆ. ಆದರೆ ಸಮಾಜ ಮತ್ತು ಸಂಸ್ಕೃತಿಯನ್ನು ಅದು ನೋಡುವ ಮತ್ತು ಗ್ರಹಿಸುವ ಕ್ರಮಗಳು ಭಿನ್ನವಾಗಿದೆ. ಅದರಲ್ಲಿ ಸಮಾಜವೆಂದರೆ ಸುಂದರವಾದ ಒಂದು ಆದರ್ಶವೂ ಹೌದು. ಸಮಾಜವನ್ನು ನವೋದಯದ ಲೇಖಕರು ನೋಡಿದ ಮತ್ತು ಅದನ್ನು ಸ್ವೀಕರಿಸಿದ ಕ್ರಮವು ಬೇರೆಯಾಗಿದೆ. ಹಾಗೆ ನೋಡುವುದಿದ್ದರೆ ಸಮಾಜವನ್ನು ಯಾವ ಲೇಖಕರು ಯಾವ ರೀತಿಯಲ್ಲಿ ಗ್ರಹಿಸುತ್ತಾರೆ ಮತ್ತು ಅದನ್ನು ಸ್ವೀಕರಿಸಿಕೊಳ್ಳುತ್ತಾರೆ ಎನ್ನುವುದೂ ಅಷ್ಟೇ ಮುಖ್ಯ. ಅದನ್ನು ಅವರು ನೋಡುವ ಕ್ರಮದ ಆಧಾರದ ಮೇಲೆಯೇ ನಾವು ನಿರ್ಧಾರ ಮಾಡಬೇಕಾಗುತ್ತದೆ. ನಾವು ನಮ್ಮ ಸಂವಹನ ಮತ್ತು ಅದರ ಹಿಂದೆ ಇರುವ ಆಲೋಚನೆಯನ್ನು ಗ್ರಹಿಸಬೇಕಾದ ಕ್ರಮವೇ ಭಿನ್ನವಾಗುತ್ತದೆ. ಸಂವಹನವೂ ಒಂದು ಬಗೆಯಲ್ಲಿ ತಂತ್ರಗಾರಿಕೆಯೂ ಆಗಿರುತ್ತದೆ ಎಂದು ಎಡ್ಮಂಡ್ ಬರ್ಕ್ ಹೇಳುತ್ತಾನೆ. ಗೋಲ್ಡ್‌ಮನ್ ಬದ್ಧತೆ ಮತ್ತು ಮನುಷ್ಯ ಸಂಬಂಧವನ್ನು ಹೇಳುತ್ತಾನೆ. ಯಾವುದೇ ಸಮಾಜದಲ್ಲಿ ನಿರ್ದಿಷ್ಟವಾದ ಒಂದು ಸಹಯೋಗವೂ ಇರುತ್ತದೆ. ಆ ಸಹಯೋಗವನ್ನು ನಾವು ನೋಡಬೇಕಾಗುತ್ತದೆ. ಅದು ಅಗತ್ಯವೂ ಆಗುತ್ತದೆ.

ಹಾಗೆಯೇ ನಮಗೆ ಗೊತ್ತಿರಬೇಕಾದ ಮತ್ತೊಂದು ಅಂಶವೆಂದರೆ ವ್ಯಕ್ತಿಗೂ ಒಂದು ಚರಿತ್ರೆಯು ಇರುತ್ತದೆ. ಅದನ್ನೂ ನಾವು ಗಮನಿಸಬೇಕಾಗುತ್ತದೆ. ವ್ಯಕ್ತಿವಾದ ಮತ್ತು ಅದರ ಚಿಂತನೆಯನ್ನು ಈ ವ್ಯಕ್ತಿ ಮತ್ತು ಅವನ ಅಸ್ತಿತ್ವದ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ಸಮಾಜ ಮತ್ತು ವ್ಯಕ್ತಿ ಸಂಬಂಧದಿಂದಲೇ ಆಲೋಚನೆಯು ಹುಟ್ಟುತ್ತದೆ. ಮತ್ತು ಅದರಲ್ಲಿ ವ್ಯಕ್ತಿಯು ಯಾವ ರೀತಿಯಲ್ಲಿ ಗ್ರಹಿಸುತ್ತಾನೆ, ಅದರ ಹಿನ್ನೆಲೆಯು ಯಾವ ಬಗೆಯದು ಎನ್ನುವುದು ಮಾತ್ರವೇ ಬಹಳ ಮುಖ್ಯ. ವ್ಯಕ್ತಿಯೂ ನಿಜವಾಗಿ ಒಂದು ಮೌಲ್ಯವನ್ನು ಮಾತ್ರವೇ ಪ್ರತಿನಿಧಿಸುತ್ತಾನೆ. ವ್ಯಕ್ತಿ ಮತ್ತು ಅವನ ಪ್ರಜ್ಞೆಯು ಯಾವತ್ತು ಒಂದು ಸಮಾಜವನ್ನು ಗ್ರಹಿಸುವುದು ನಿರ್ದಿಷ್ಟವಾದ ರೂಪದಲ್ಲಿ ಮಾತ್ರವೇ ಆಗಿರುತ್ತದೆ. ವ್ಯಕ್ತಿ ಮತ್ತು ಅವನ ಆಲೋಚನೆಗಳು ಯಾವತ್ತೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಅದು ಬದಲಾಗುತ್ತದೆ. ಬದಲಾವಣೆಯನ್ನು ನಾವು ಒಂದು ಬರೀ ಘಟಕವಾಗಿ ಮಾತ್ರವೇ ಆಗಿ ನೋಡಬಾರದು. ಅದು ಸಮಾಜ ಮತ್ತು ಅದರ ಗುಂಪುಗಳನ್ನು ಆಧರಿಸಿಕೊಂಡು ಬೇರೆಯಾಗುತ್ತದೆ. ಮತ್ತೆ ಹಾಗೆ ಬದಲಾಗದು ಅಂದರೆ ಅದು ವ್ಯಕ್ತಿ ಮತ್ತು ಅವನ ಆವಶ್ಯಕತೆಯೂ ಆಗುತ್ತದೆ. ವ್ಯಕ್ತಿ ಮತ್ತು ಅವನ ಚಿಂತನೆಯು ಕೆಲವೊಮ್ಮೆ ವಿಷಯನಿಷ್ಠವಾದುದೂ ಆಗಿರುತ್ತದೆ. ಅದರಲ್ಲಿ ಎಲ್ಲವೂ ಬರೀ ತಳಹದಿರಹಿತವಾದ ಸಂಗತಿಯೆಂದು ಗ್ರಹಿಸಬೇಕಾದ ಅಗತ್ಯವೂ ಇಲ್ಲ. ಅದು ಬದಲಾಗುತ್ತದೆ ಅಂದರೆ ಅದರ ಹಿಂದೆ ಕೆಲವು ಕಾರಣಗಳೂ ಇರುತ್ತವೆ. ವಿಷಯ ಮತ್ತು ಅದರ ಸಾಧ್ಯತೆಯು ಬೇರೆಯೂ ಆಗಿರುತ್ತದೆ. ಅಂದರೆ ಅದರಲ್ಲಿ ವ್ಯಕ್ತಿ ಮತ್ತು ಅವನ ನಿಲುವುಗಳು ಭಿನ್ನವಾದ್ದು ಕೂಡಾ ನಿಜ.

ಅದರಲ್ಲಿ ಅವನ ಆಯ್ಕೆಯು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅವನು ಎಲ್ಲವನ್ನೂ ವಸ್ತುನಿಷ್ಠವಾಗಿಯೇ ಗ್ರಹಿಸುತ್ತಾನೆ ಎಂದು ಅರ್ಥವಲ್ಲ. ಅವನು ತನ್ನ ಭಾವನೆಗಳನ್ನು ನೋಡುವ ಮತ್ತು ಗ್ರಹಿಸುವ ಕ್ರಮಕ್ಕೆ ಅನುಗುಣವಾಗಿಯೇ ಬೇರೆ ಸಾಧ್ಯತೆಗಳು ಉಂಟಾಗುತ್ತವೆ. ಆಯ್ಕೆ ಮತ್ತು ಪರಿಸರ ಹಾಗೂ ವ್ಯಕ್ತಿತ್ವ ಮತ್ತು ಅದರ ಚಹರೆಗಳಲ್ಲಿ ಉಂಟಾಗುವ ಭಿನ್ನತೆಗಳೂ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ವಾಸ್ತವವಾಗಿ ಯಾವುದೇ ವ್ಯಕ್ತಿಯು ತನ್ನ ಮಟ್ಟಿಗೆ ತಾನೇ ನಿರ್ಧರಿಸುವುದು ಅತ್ಯಂತ ಕಷ್ಟದಾಯಕವೂ ಹೌದು. ಅದರಲ್ಲಿ ವ್ಯತ್ಯಾಸಗಳಿವೆ. ಮತ್ತು ಅದರ ಸ್ವಭಾವ ಮತ್ತು ಅದರ ಸ್ವರೂಪವನ್ನು ಆಯಾ ಸನ್ನಿವೇಶದ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಅದರಲ್ಲಿ ಕ್ರಿಯೆ ಮತ್ತು ಅದರ ಚಹರೆಗಳೂ ಮುಖ್ಯವಾಗುತ್ತದೆ. ವ್ಯಕ್ತವಾದಿ ಚಿಂತನೆ ಮತ್ತು ವ್ಯಕ್ತಿವಾದಿ ಗ್ರಹಿಕೆಗಳ ಒಂದು ಬಗೆಯವು. ಅದರಲ್ಲಿ ಚಿಂತನೆಯು ವ್ಯಕ್ತಿಯನ್ನು ಒಂದು ಘಟಕವಾಗಿ ಮಾತ್ರವೇ ನೋಡುತ್ತದೆ. ವ್ಯಕ್ತಿಯನ್ನು ಅದು ಪ್ರತ್ಯೇಕ ಮಾಡುತ್ತಾ ಬಂದಿದೆ.

ವ್ಯಕ್ತಿ ಮತ್ತು ಅವನ ಆಲೋಚನೆಯನ್ನು ಅದು ಹೇಳುವ ಕ್ರಮಗಳು ಭಿನ್ನವಾಗಿವೆ. ಅಂದರೆ ವ್ಯಕ್ತಿ ಮತ್ತು ಅವನ ಸ್ವಭಾವವನ್ನು ಅದು ಹೇಳುವ ಕ್ರಮಗಳು ಬೇರೆಯಾಗುತ್ತದೆ. ಅದರಲ್ಲಿ ಭಿನ್ನವಾದ ಮತ್ತೆ ಕೆಲವು ಸಂಗತಿಗಳು ಸೇರಿಕೊಂಡಿವೆ. ವ್ಯಕ್ತಿಯನ್ನು ಒಂದು ಪ್ರತ್ಯೇಕವಾದ ಮೌಲ್ಯವನ್ನು ಧರಿಸುವವನು ಎಂದು ಅದು ಹೇಳುತ್ತದೆ. ಅಂದರೆ ಅದರಲ್ಲಿ ವ್ಯಕ್ತಿಯನ್ನು ಗ್ರಹಿಸುವಾಗ ವ್ಯಕ್ತಿ ಮತ್ತು ಅವನ ಕ್ರಿಯೆಯನ್ನು ಮಾತ್ರವೇ ಒಂದು ನಿರ್ದಿಷ್ಟವಾದ ಪ್ರಜ್ಞಾವಂತ ಸ್ಥಿತಿಯೆಂದು ಅದು ಹೇಳುತ್ತದೆ. ಅಂದರೆ ಅದು ಪ್ರಜ್ಞೆಯನ್ನು ನೋಡಿಕೊಳ್ಳುವ ಕ್ರಮವು ಬೇರೆಯಾಗಿದೆ. ಪ್ರಜ್ಞೆ ಮತ್ತು ಅದರ ಸ್ಥಿತಿಯನ್ನು ಅದು ಗ್ರಹಿಸುವಾಗ ಒಂದು ಸಿದ್ಧಾಂತ ರಹಿತವಾಗಿಯೂ ನೋಡುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಚಿಂತನೆಯನ್ನು ವಾಸ್ತವವಾಗಿ ಬರೀ ಒಂದು ಮೌಲ್ಯವನ್ನು ಮಾತ್ರವೇ ಹೇಳುತ್ತಾನೆ ಮತ್ತು ಅದು ಅದುವೇ ಸರ್ವತಂತ್ರ ಸ್ವತಂತ್ರವೆಂದು ಹೇಳಲು ಬರುವುದೂ ಇಲ್ಲ. ವ್ಯಕ್ತಿ ಮತ್ತು ಅವನ ಜೀವನವು ಹೇಗೆ ಭಿನ್ನವಾಗುತ್ತದೆ ಎನ್ನುವುದನ್ನು ಹೇಳಲು ಅದು ಬರೀ ಒಂದು ಮಾನದಂಡವನ್ನು ಮಾತ್ರವೇ ಬಳಸುತ್ತದೆ. ಆಧುನಿಕತೆ ಮತ್ತು ಅದರ ಸ್ವರೂಪವನ್ನೂ ವ್ಯಕ್ತಿವಾದವು ನೋಡುವ ಕ್ರಮವು ಬೇರೆಯಾಗಿದೆ. ಅದು ವ್ಯಕ್ತಿಯ ಆಧುನಿಕತೆಯನ್ನು ಮಾತ್ರವೇ ಪ್ರಧಾನವೆಂದು ಪರಿಗಣಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಗುಣವು ಆಧುನಿಕ ಸನ್ನಿವೇಶದಲ್ಲಿ ಚಿಂತನೆಯ ಕ್ರಮದಲ್ಲಿ ಹೇಗೆ ವ್ಯಕ್ತವಾಗುತ್ತದೆ ಎನ್ನವುದು ಮಾತ್ರವೇ ಅದರಲ್ಲಿ ಮುಖ್ಯ. ಆಧುನಿಕತಾವಾದಿಗಳು ವ್ಯಕ್ತಿಯನ್ನು ಮಾತ್ರವೇ ಒಂದು ನಿಯಂತ್ರಣ ರೂಪವಾದ ಸಂಗತಿಯೆಂದು ಹೇಳುತ್ತದೆ. ಅಂದರೆ ವ್ಯಕ್ತಿಯೇ ನಿರ್ದಿಷ್ಟವಾಗಿ ಒಂದು ವಿಶಿಷ್ಟವಾದ ಘಟಕವೆಂದೂ ಅದನ್ನು ಮಾತ್ರವೇ ನೋಡಿದರೆ ಸಾಕು ಎಂದೂ ಅದು ಭಾವಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ನಡೆ ನುಡಿಯನ್ನು ಮತ್ತು ಅದರ ಸ್ವಭಾವವನ್ನು ಅದು ಗ್ರಹಿಸುವ ರೀತಿಯು ಬೇರೆಯಾಗುತ್ತದೆ.

ವ್ಯಕ್ತಿಯೇ ಇಲ್ಲಿ ಒಂದು ಮುಖ್ಯವಾದ ವಿಷಯ. ಅದನ್ನು ನೋಡಿದರೆ ಸಾಕು ಎಂದೇ ಭಾವಿಸಲಾಗುತ್ತದೆ. ವ್ಯಕ್ತಿಯ ಸ್ವಾತಂತ್ರ್ಯವನ್ನು ಮಾತ್ರವೇ ಅದು ನಿರ್ದಿಷ್ಟವಾದ ಅರ್ಥದಲ್ಲಿ

ಗುರುತಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅದರ ಚಹರೆಗಳನ್ನು ವ್ಯಕ್ತಿ ಮತ್ತು ಅವನ ಗ್ರಹಿಕೆಗೆ ಕಾರಣವು ಆಗುತ್ತದೆ. ವ್ಯಕ್ತಿಯನ್ನು ವಿವರಿಸುವುದು ಮಾತ್ರವೇ ಇಲ್ಲಿ ಮುಖ್ಯ. ಸಿದ್ಧಾಂತ ಮತ್ತು ಅದರ ಸಂಘರ್ಷಗಳನ್ನು ಅದು ವ್ಯಕ್ತಿಯ ಹಂತದಲ್ಲಿ ಮಾತ್ರವೇ ನೋಡುತ್ತದೆ. ಸಿದ್ಧಾಂತ ಮತ್ತು ಅದರ ಅನ್ವಯನ್ನು ಕೂಡಾ ಅದು ನೋಡುವುದು ಬೇರೆ ರೀತಿಯಲ್ಲಿ. ವ್ಯಕ್ತಿ ಮತ್ತು ಅವನ ಹಿಂದೆ ಇರಬಹುದಾದ ಕೆಲವು ಒತ್ತಡಗಳನ್ನು ಅದು ಅಷ್ಟಾಗಿ ಗ್ರಹಿಸುವುದೇ ಇಲ್ಲ. ವ್ಯಕ್ತಿಯೆಂದರೆ ಅವನ ಪಾಡಿಗೆ ಅವನು ಸ್ವತಂತ್ರನಲ್ಲ. ಅವನು ವಿಶೇಷವಾಗಿ ಕೆಲವು ಮಾದರಿಯ ರಚನೆಯ ಭಾಗವೂ ಆಗಿರುತ್ತಾನೆ. ಸಾಮಾಜಿಕ ಗುಂಪು ಮತ್ತು ಅದರ ಪ್ರಭಾವವು ವ್ಯಕ್ತಿಯ ಮೇಲೆ ಆಗುತ್ತದೆ. ಚರಿತ್ರೆ ಮತ್ತು ಅದರ ಸ್ವರೂಪ ಹಾಗೂ ಅದರ ಪಲ್ಲಟದಲ್ಲಿ ವ್ಯಕ್ತಿಯು ಹೆಚ್ಚು ವಾಹಕನು ಮಾತ್ರವೇ ಆಗಿರುತ್ತಾನೆ. ಅಂದರೆ ಅವನ ವ್ಯಕ್ತಿತ್ವ ಮತ್ತು ಅದರ ಸ್ವರೂಪವು ಒಂದು ಪರಿಕರವೂ ಹೌದು. ಅಂದರೆ ಅದರಲ್ಲಿ ವ್ಯಕ್ತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮವನ್ನು ಸಾಮಾಜಿಕ ವರ್ಗಗಳ ಹಿನ್ನೆಲೆಯಲ್ಲಿ ಮಾತ್ರವೇ ನೋಡಬೇಕಾಗುತ್ತದೆ. ಸಾಮಾಜಿಕ ವರ್ಗಗಳು ಕೆಲವನ್ನು ಸೂಚಿಸುತ್ತವೆ. ಮತ್ತು ಅದರಲ್ಲಿ ಭೂತಕಾಲ, ವರ್ತಮಾನ, ಭವಿಷ್ಯದ ಸಂಗತಿಗಳೂ ಸೇರಿಕೊಂಡಿರುತ್ತವೆ. ವ್ಯಕ್ತಿವಾದ ಮತ್ತು ಅದರ ಸ್ವರೂಪವನ್ನು ನೋಡುವುದು ಅಂದರೆ ಈ ಕಾರಣದಿಂದ ಅವನ ವ್ಯಕ್ತಿತ್ವ ಮತ್ತು ಅವನ ಚರಿತ್ರೆಯ ಹಿನ್ನೆಲೆಯನ್ನೂ ನೋಡಬೇಕಾಗುತ್ತದೆ. ಆದರೆ ಇಲ್ಲಿ ಅನೇಕ ಪ್ರಶ್ನೆಗಳು ಬರುತ್ತವೆ. ಅಂದರೆ ವ್ಯಕ್ತಿಯನ್ನು ಒಂದು ಸಮಗ್ರವಾದ ಮತ್ತು ಪ್ರತ್ಯೇಕವಾದ ವ್ಯಕ್ತಿತ್ವ ಎಂದು ಭಾವಿಸಬೇಕಾದ ಅಗತ್ಯವಿದೆಯೇ? ವ್ಯಕ್ತಿ ಮತ್ತು ಅವನ ಜೀವನದ ಪ್ರಶ್ನೆಯನ್ನು ನಾವು ಈವತ್ತು ಯಾವ ರೀತಿಯಲ್ಲಿ ನೋಡಬೇಕು ಎನ್ನುವುದೂ ಮುಖ್ಯವಾದ ಪ್ರಶ್ನೆಯೇ ಆಗುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಸಮಸ್ಯೆಯನ್ನು ನಾವು ಈವತ್ತು ನೋಡಬೇಕಾದರೆ ಅದರಲ್ಲಿ ಸಮಾಜ ಮತ್ತು ಅದರ ಅರಿವಿನ ಪ್ರಶ್ನೆಯೇ ಮುಖ್ಯವಾಗಬೇಕಾಗುತ್ತದೆ.

ನಾವು ವ್ಯಕ್ತಿ ಮತ್ತು ಅವನ ಸಮಸ್ಯೆಯನ್ನು ನೋಡುವುದು ಮತ್ತು ಗ್ರಹಿಸುವುದರಲ್ಲಿಯೂ ತಪ್ಪುಗಳಿವೆ. ವ್ಯಕ್ತಿ ಮತ್ತುಅವನ ಅಸ್ತಿತ್ವವನ್ನು ಮಾತ್ರವೇ ನಾವು ಮಾನದಂಡವಾಗಿ ನೋಡಿದರೆ ಅದರ ಅರ್ಥವು ಬೇರೆಯಾಗುತ್ತದೆ. ಮತ್ತು ಅದರಲ್ಲಿ ಅವನನ್ನು ಒಂದು ಪ್ರತ್ಯೇಕ ಘಟಕವಾಗಿ ನೋಡಲಾಗುತ್ತದೆ. ವ್ಯಕ್ತಿ ಮತ್ತು ಅವನ ಚಿಂತನೆಯನ್ನು ಮಾತ್ರವೇ ಬಹಳ ಮುಖ್ಯವೆಂದು ಗಣಿಸಿದರೆ ಅದರ ಅರ್ಥವು ಬೇರೆಯಾಗುತ್ತದೆ. ಮತ್ತು ಅವನ ವ್ಯಕ್ತಿತ್ವವನ್ನು ಸ್ವಯಂಸಂಪೂರ್ಣವಾಗಿದೆ ಎಂದು ಗ್ರಹಿಸಲಾಗುತ್ತದೆ. ವ್ಯಕ್ತಿ ಮತ್ತು ಅವನ ವ್ಯಕ್ತಿತ್ವವನ್ನು ನೋಡಿದರೆ ಅದರ ಸ್ವರೂಪವೂ ಬೇರೆಯಾಗುತ್ತದೆ. ವ್ಯಕ್ತಿ ಒಂದು ನಿರ್ದಿಷ್ಟವಾದ ಮೌಲ್ಯವನ್ನು ಮಾತ್ರವೇ ಪ್ರಸ್ತುತಪಡಿಸುತ್ತಾನೆ. ಮತ್ತು ಅದು ಬಹಳ ಮುಖ್ಯವೆಂದು ಅವರು ಭಾವಿಸುತ್ತಾರೆ. ವ್ಯಕ್ತಿಯು ತನ್ನದೇ ಆದ ಪಾತ್ರವನ್ನು ವಹಿಸುತ್ತಾನೆ. ಆದರೆ ಅದರಲ್ಲಿ ವ್ಯಕ್ತಿಯನ್ನು ಸಮಾಜದ ಒಂದು ಭಾಗವೆನ್ನುವ ಕಲ್ಪನೆಯೇ ಇಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ವ್ಯಕ್ತಿ ಮತ್ತು ಅವನ ಮೌಲ್ಯವನ್ನು ಮಾತ್ರವೇ ನೋಡುವವರು ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಮಾತ್ರವೇ ಗಮನಿಸುತ್ತಾರೆ. ಆದರೆ ವ್ಯಕ್ತಿ ಕೇಂದ್ರಿತ ಚಿಂತನೆಯು ಒಂದು ವಿಷಯನಿಷ್ಠವಾದ ಸಂಗತಿಯು ಮಾತ್ರವೇ ಆಗಿದೆ. ವ್ಯಕ್ತಿ ಮತ್ತು ಅವನ ಚಿಂತನೆಯು ಕ್ರಮವು ಮೂಲಭೂತವಾಗಿ

ಕೆಲವು ಸಂಗತಿಗಳನ್ನು ಹೇಳುತ್ತವೆ. ಅದು ವ್ಯಕ್ತಿಯ ಕುರಿತಾಗಿ ಕೆಲವು ನಿರೂಪಣೆಯನ್ನು ಮಾಡುತ್ತವೆ. ಮತ್ತು ವ್ಯಕ್ತಿ ಮತ್ತು ಅವನ ಸ್ವಭಾವವನ್ನು ಆಧುನಿಕತೆತಯು ಗ್ರಹಿಸಿದ ಕ್ರಮವು ಬೇರೆಯಾಗಿದೆ. ಅದರಲ್ಲಿ ವ್ಯಕ್ತಿಯ ನಿಲುವುಗಳೇ ಪ್ರಧಾನವಾಗುತ್ತದೆ. ಮತ್ತು ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ವ್ಯಕ್ತಿಯನ್ನು ನೋಡುವಾಗ ಅವನೇ ಅನೇಕ ಸಂಗತಿಗಳ ವಾರಸುದಾರನೆಂದು ಅದು ವಿವರಿಸುತ್ತದೆ. ವಿಷಯನಿಷ್ಟತೆ ಮತ್ತು ವಸ್ತುನಿಷ್ಟತೆಯು ಈ ಚರ್ಚೆಯಲ್ಲಿ ಬೇರೆಯಾಗುತ್ತದೆ. ಮತ್ತು ಸ್ವಾತಂತ್ರ್ಯದ ಪ್ರಶ್ನೆಯನ್ನು ಈ ಸಂಗತಿಗಳು ನೋಡುವ ಕ್ರಮವು ಬೇರೆಯಾಗುತ್ತದೆ. ಮತ್ತು ಇದರಲ್ಲಿ ಸ್ವಾತಂತ್ರ್ಯವನ್ನು ವಿವರಿಸುವ ಕ್ರಮವು ಬೇರೆಯಾಗುತ್ತದೆ. ವಿವರಣೆ ಮತ್ತು ಅದರ ಅರ್ಥವೂ ಇಲ್ಲಿ ನಿರ್ದಿಷ್ಟವಾಗುತ್ತದೆ. ಅಂದರೆ ವ್ಯಕ್ತಿಯನ್ನು ನಾವು ಬರೀ ವಿಷಯನಿಷ್ಟವಾಗಿ ಮಾತ್ರವೇ ನೋಡುವುದು ಅಸಾಧ್ಯ. ಆಧುನಿಕತೆಯು ಅದರ ಸಿದ್ಧಾಂತವನ್ನು ನೋಡುವುದು ಬರೀ ಒಂದು ಗ್ರಹಿಕೆಯ ಕ್ರಮವಾಗಿ ಮಾತ್ರವೇ. ಅದರಲ್ಲಿ ವ್ಯತ್ಯಾಸವಿದೆ. ಇಲ್ಲ. ಇಲ್ಲಿ ನೋಡಬೇಕಾದ ಮತ್ತೊಂದು ಅಂಶವೂ ಇದೆ. ಆಧುನಿಕತೆಯು ಹೇಗೆ ವ್ಯಕ್ತಿಯನ್ನು ಸ್ವೀಕರಿಸುತ್ತದೆ ಎನ್ನುವುದೂ ಬಹಳ ದೊಡ್ಡದಾದ ಪ್ರಶ್ನೆಯೂ ಆಗಿದೆ. ಆಧುನಿಕತೆಯಲ್ಲಿ ವ್ಯಕ್ತಿಯ ವಾಹಕನು ಮಾತ್ರವೇ ಆಗಿದ್ದಾನೆ. ಮತ್ತು ಅವನ ವ್ಯಕ್ತಿತ್ವವನ್ನು ಈ ದೃಷ್ಟಿಯಿಂದ ನೋಡಬೇಕಾದ ಕ್ರಮವೂ ಬೇರೆಯಾಗುತ್ತದೆ. ವ್ಯಕ್ತಿ ಮತ್ತು ಅವನ ಗ್ರಹಿಕೆಗಳು ಆಧುನಿಕತೆಯಲ್ಲಿ ಬೇರೆ ಬೇರೆ ಆಗುತ್ತದೆ. ವ್ಯಕ್ತಿಯು ಇದರಲ್ಲಿ ಘಟಕ ಮಾತ್ರವೇ ಆಗಿರುವುದರಿಂದ ಅದರ ಅರ್ಥವೂ ಬೇರೆಯಾಗುತ್ತದೆ. ಆದರೆ ವಾಸ್ತವವಾಗಿ ವ್ಯಕ್ತಿಯು ಬರೀ ಸ್ವಾಯತ್ತವೆನ್ನಬಹುದಾದ ಸಂಗತಿಯು ಅಲ್ಲ. ವ್ಯಕ್ತಿಯು ಅರೆ ಸಾಮಾಜಿಕನೂ ಆಗಿರುತ್ತಾನೆ.

ಸಾಮಾಜಿಕ ಗುಂಪು ಮತ್ತು ವ್ಯಕ್ತಿಗೆ ಸಂಬಂಧವು ಇರುತ್ತದೆ. ಮತ್ತು ವ್ಯಕ್ತಯು ಗುಂಪಿನಿಂದ ಅನೇಕವನ್ನು ಪಡೆಯುತ್ತಾನೆ. ಅಂದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯು ಬೇರೆಯಾಗುತ್ತದೆ. ವ್ಯಕ್ತಿಯನ್ನು ಆಧುನಿಕತೆಯು ಯಾವ ರೀತಿಯಲ್ಲಿ ನೋಡುತ್ತದೆ ಮತ್ತು ಅದನ್ನು ಹೇಗೆ ಸ್ವೀಕರಿಸುತ್ತದೆ ಎನ್ನುವುದು ಒಂದು ಬಗೆಯ ನಿಲುವು ಆಗಿದ್ದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯು ಮತ್ತೊಂದು ರೀತಿಯಲ್ಲಿ ಇರುತ್ತದೆ. ಅಂದರೆ ವ್ಯಕ್ತಿಯು ಅವನ ಚರಿತ್ರೆಯನ್ನು ಮತ್ತು ಅವನ ಅಗತ್ಯವನ್ನು ತನಗೆ ಬೇಕಾದ ಕ್ರಮದಲ್ಲಿ ಕಟ್ಟುತ್ತಾನೆ. ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟವನ್ನು ಮಾಡುತ್ತಾನೆ. ಚರಿತ್ರೆಯು ಬದಲಾಗುತ್ತಾ ಹೋದರೆ ವ್ಯಕ್ತಿಯ ಜೀವನ ಮತ್ತು ಅವನ ಸ್ವಭಾವಗಳೂ ಬದಲಾಗುತ್ತವೆ. ಅಂದರೆ ವ್ಯಕ್ತಿ ಮತ್ತು ಅವನ ಅಗತ್ಯಗಳು ಅನೇಕವನ್ನು ಹೇಳುತ್ತವೆ. ಅವನು ಅದನ್ನು ಸಾಧಿಸಲು ಯತ್ನವನ್ನು ಮಾಡುತ್ತಾನೆ. ಅವನಿಗೆ ಅದು ಹೆಚ್ಚಿನ ಮಹತ್ವದ್ದೂ ಆಗುತ್ತದೆ. ಆದರೆ ವ್ಯಕ್ತಿಯನ್ನು ಸಮಾಜ ಮತ್ತು ಅವನ ವರ್ಗವು ನಿಯಂತ್ರಿಸುತ್ತದೆ. ಅವನ ಜೀವನವನ್ನು ಅದು ನಿರೂಪಿಸುತ್ತದೆ. ವರ್ಗ ಮತ್ತು ವಿಶ್ವಾತ್ಮಕತೆಗೆ ಕೆಲವು ರೀತಿಯ ಸಂಬಂಧವೂ ಇದೆ. ಅದನ್ನು ಹೀಗೆ ಹೇಳಬಹುದು. ವ್ಯಕ್ತಿಯನ್ನು ನಾವು ನೀತಿ ಮತ್ತು ಅವನ ನಡವಳಿಕೆಯನ್ನು ಆಧರಿಸಿಕೊಂಡು ವ್ಯಾಖ್ಯಾನಿಸುತ್ತೇವೆ. ವ್ಯಕ್ತಿ ಮತ್ತು ಅವನ ಸಾಮಾಜಿಕ ವಾಸ್ತವವು ಈ ದೃಷ್ಟಿಯಿಂದ ಬಹಳ ಮುಖ್ಯವಾದ ಸಂಗತಿಯೂ ಆಗಿದೆ.ರೊಮಾಂಟಿಕ್ ಯುಗವು ವ್ಯಕ್ತಿಯನ್ನು ನೋಡಿದ ಮತ್ತು ಅದನ್ನು ಚಿತ್ರಿಸಿದ ಕ್ರಮವು ಬೇರೆಯಾಗಿದೆ. ವ್ಯಕ್ತಿಯನ್ನು ಅದು ಉದಾರವಾಗಿಯೂ ನೋಡಿತು. ಅದರಲ್ಲಿ ನೈತಿಕತೆಯು ಹೆಚ್ಚು ಮುಖ್ಯ.

ದೇವರನ್ನು ರೊಮಾಂಟಿಕ್ ಯುಗವು ಸೃಷ್ಟಿಕರ್ತ ಮತ್ತು ಜೀವನವನ್ನು ಕೈಹಿಡಿದು ನಡೆಸುವವನು ಎಂದು ಭಾವಿಸುತ್ತದೆ. ಅದರೆ ಇಲ್ಲಿ ಮತ್ತೆ ಅದು ಬಾಹ್ಯ ಮತ್ತು ಅಂತರಂಗ ಶುದ್ಧಿಯನ್ನು ಮಾತ್ರವೇ ಹೇಳುತ್ತದೆ. ಜನಾಂಗ ಮತ್ತು ವಿಶ್ವಾತ್ಮಕತೆಯನ್ನು ಅದು ಹೇಳುವ ಕ್ರಮಗಳು ಬೇರೆಯಾಗಿವೆ. ಅಂದರೆ ವ್ಯಕ್ತಿಯನ್ನು ರೊಮಾಂಟಿಕ್ ಯುಗವು ಗ್ರಹಿಸುವ ಕ್ರಮವು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಜನಾಂಗ ಮತ್ತು ಲೋಕವನ್ನು ಅದು ಗ್ರಹಿಸುವುದು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಆಧುನಿಕತೆಗಿಂತ ಭಿನ್ನವಾದ ಒಂದು ಕ್ರಮವು ಇದರಲ್ಲಿದೆ. ಅದು ಲೋಕವನ್ನು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾಗಿಯೂ ಹೌದು. ಆದರೆ ವ್ಯಕ್ತಿ ಮತ್ತು ಅವನ ಜೀವನವನ್ನು ನಾವು ನೋಡುವುದು ಅವನ ಸ್ಥಾನಮಾನದ ಹಿನ್ನೆಲೆಯಿಂದ ಮಾತ್ರವೇ. ಅವನ ಚರಿತ್ರೆ ಮತ್ತು ಅವನ ಪರಿಸರವನ್ನು ನಾವು ಅಷ್ಟಾಗಿ ಗಮನಿಸಲು ಹೋಗುವುದೇ ಇಲ್ಲ. ವಾಸ್ತವವಾಗಿ ವ್ಯಕ್ತಿ ಮತ್ತು ಅವನ ಸೌಂದರ್ಯದ ಅಭಿರುಚಿಯನ್ನು ಮಾತ್ರವೇ ರೊಮಾಂಟಿಕರು ಎತ್ತಿ ಹಿಡಿಯುತ್ತಾರೆ. ಅವರಿಗೆ ಅದು ಬಹಳ ಮುಖ್ಯವಾದ ಸಂಗತಿಯ ಹಾಗೆ ಕಾಣುತ್ತದೆ. ಹಾಗೆ ನೋಡುವುದಿದ್ದರೆ ನವೋದಯವನ್ನು ವ್ಯಕ್ತಿ ಮತ್ತು ಅವನ ಸೌಂದರ್ಯವನ್ನು ಕುರಿತು ಹೇಳುವುದು ಭಿನ್ನವಾದ ರೀತಿಯಲ್ಲಿಯೇ. ಅದರಲ್ಲಿ ವ್ಯತ್ಯಾಸವಿದೆ. ಅಂದರೆ ನವೋದಯಕ್ಕೆ ಅತ್ಯಂತ ಮುಖ್ಯವಾದ ಸಂಗತಿಯು ಇರುವುದು ವ್ಯಕ್ತಿ ಮತ್ತು ಅವನ ಸೌಂದರ್ಯದ ಪರಿಕಲ್ಪನೆಯು ಮಾತ್ರವೇ. ಸಮಾಜಿಕ ರಚನೆಯನ್ನು ಅವರು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾದ ಕ್ರಮದಲ್ಲಿಯೂ ಹೌದು. ಕಲಾವಿದರು ಸಮಾಜ ಮತ್ತು ಅದರ ಸ್ವರೂಪವನ್ನು ಹೇಗೆ ನೋಡುತ್ತಾರೆ ಎನ್ನುವುದು ಮೂಲಭೂತವಾಗಿ ಮಹತ್ವದ ಅಂಶವೇ ಆಗುತ್ತದೆ. ಎಡ್ಮಂಡ್ ಬರ್ಕೆಯು ಅದನ್ನು ಸಂವಹನದ ತಂತ್ರಗಾರಿಕೆಗಳು ಎಂದು ಕರೆಯುತ್ತಾನೆ.

ಗೋಲ್ಡ ಮನ್ ಮಾನವೀಯತೆ ಮತ್ತು ಅದರ ಬದ್ಧತೆಯ ಹಿನ್ನೆಲೆಯಲ್ಲಿ ವಿವರಿಸುತ್ತಾನೆ. ಜನಾಂಗ ಮತ್ತು ಅದರ ಸಹಯೋಗದಲ್ಲಿ ಒಂದು ಖಚಿತತೆಯು ಇರುತ್ತದೆ. ಮತ್ತು ಅದರಲ್ಲಿ ಸಹಯೋಗವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದನ್ನು ಅವನು ಹೇಳುತ್ತಾನೆ ಆದರೆ ವ್ಯಕ್ತಿವಾದಕ್ಕೆ ಒಂದು ಚರಿತ್ರೆಯು ಇದೆ ಎನ್ನುವುದನ್ನು ಅವನು ಪ್ರತಿಪಾದಿಸುತ್ತಾನೆ. ರೊಮಾಂಟಕರಲ್ಲಿ ಅತ್ಯಂತ ವಿಸ್ತಾರವಾದ ಒಂದು ನಂಬಿಕೆ ಮತ್ತು ವಿಶ್ವಾತ್ಮಕತೆಯು ಇರುತ್ತದೆ. ಸಮಗ್ರತೆ ಮತ್ತು ಅದರ ಕುರಿತಾದ ಕೆಲವು ಮೌಲ್ಯಗಳು ಅದರಲ್ಲಿ ಇರುತ್ತದೆ. ಸಾಮೂಹಿಕವಾದ ಒಂದು ಪ್ರಜ್ಞೆಯನ್ನು ಅದು ಹೇಳುತ್ತಾ ಬಂದಿದೆ. ಈ ಅರ್ಥದಲ್ಲಿ ಅದರ ಅರ್ಥವೂ ಬೇರೆಯಾಗುತ್ತದೆ. ಸಾಹಿತ್ಯವು ಸಮಾಜ ಮತ್ತು ಸಾಮಾಜಿಕ ಸಂಗತಿಗಳನ್ನು ಅತ್ಯಂತ ವಿಶಿಷ್ಟವಾಗಿ ಹೇಳುತ್ತದೆ ಎನ್ನುವುದನ್ನು ರೊಮಾಂಟಿಕ್ ಪಂಥವು ಒಪ್ಪುತ್ತದೆ. ನವ್ಯವು ವ್ಯಕ್ತಿ ಮತ್ತು ಯಾಂತ್ರಿಕತೆಯನ್ನು ನೋಡುವುದು ಭಿನ್ನವಾಗಿ. ಅದಕ್ಕೇ ಅದರಲ್ಲಿ ಜೀವನ ಮತ್ತು ಅದರ ದೃಷ್ಟಿಕೋನವು ಬೇರೆಯಾಗುತ್ತದೆ. ವ್ಯಕ್ತಿಯನ್ನು ಅದು ಹೇಳುವುದು ಭಿನ್ನವಾದ ನೆಲೆಯಲ್ಲಿಯೂ ಹೌದು. ಅದರಲ್ಲಿ ಬರುವ ನಿರಾಶೆಯು ಕೂಡಾ ಒಂದು ಸನ್ನಿವೇಶವನ್ನು ಹೇಳುತ್ತದೆ. ನವ್ಯವು ದೇವರಿಲ್ಲದ ಜಗತ್ತನ್ನು ಹೇಳುತ್ತದೆ. ವ್ಯಕ್ತಿ ಮತ್ತು ಅವನ ಚಿಂತನೆಗಳನ್ನು ಅದು ಹೆಚ್ಚು ಪ್ರಗತಿಪರವಾದ್ದು ಎಂದು ಹೇಳುತ್ತದೆ. ತಂತ್ರ ಮತ್ತು ಅದರ ಪ್ರಯೋಗವು ಅದರಲ್ಲಿ ಹೆಚ್ಚು ಪ್ರಭಾವಶಾಲಿಯೂ ಆಯಿತು. ತಾಂತ್ರಿಕತೆ ಮತ್ತು ಅದರ ಪರಿಣಾಮವನ್ನು ನಾವು ನವ್ಯದಲ್ಲಿ ಕಾಣುತ್ತೇವೆ. ತಂತ್ರಜ್ಞಾನ

ಮತ್ತು ಅದರ ಕೌಶಲವು ಅವರಿಗೆ ಹೆಚ್ಚು ಮುಖ್ಯವಾಯಿತು. ತಾಂತ್ರಿಕತೆ ಮತ್ತು ಅದರ ಸ್ವರೂಪವು ಅತ್ಯಂತ ಹೆಚ್ಚು ಪ್ರಭಾವವನ್ನು ಬೀರಿತು. ತಾಂತ್ರಿಕತೆಯು ಅತ್ಯಂತ ಮುಖ್ಯವೆಂದು ಆ ಲೇಖಕರಿಗೆ ಅನಿಸಿತು. ವ್ಯಕ್ತಿತ್ವ ಮತ್ತು ಪರಕೀಯತೆಯನ್ನು ಅವರು ನೋಡಿದ ಮತ್ತು ಗ್ರಹಿಸಿದ ಕ್ರಮಗಳು ಬೇರೆಯಾಗಿವೆ. ನವ್ಯದಲ್ಲಿ ಪರಕೀಯತೆಯು ಅತ್ಯಂತ ಸಾಧ್ಯತೆಯನ್ನು ತೆರೆಯಿತು. ವ್ಯಕ್ತಿ ಮತ್ತು ಅವನ ಸ್ವಂತಿಕೆಯೇ ಅದರಲ್ಲಿ ಬಹಳ ಮುಖ್ಯ. ಪ್ರತ್ಯೇಕತೆಯು ಮಾತ್ರವೇ ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯವೆಂದು ಅದು ಹೇಳಿತು. ಬೇರೆ ಯಾವುದೇ ರೀತಿಯ ಅತಿಮಾನುಷವಾದ ಒಂದು ಸುಂದರ ಜಗತ್ತು ಇದೆ ಎನ್ನುವುದನ್ನು ನವ್ಯವು ಒಪ್ಪುವುದೂ ಇಲ್ಲ. ಅದು ಯಾವುದು ನಿಜವಾದ ಘಟನೆ ಅಥವಾ ವಸ್ತು ಎನ್ನುವುದು ಇದೆಯೋ ಅದನ್ನು ಮಾತ್ರವೇ ಸ್ವೀಕರಿಸುತ್ತದೆ. ಘಟನೆ ಮತ್ತು ಅದರ ಮೌಲ್ಯಮಾಪನವು ಅದಕ್ಕೆ ಮುಖ್ಯ. ಆದರೆ ಕನ್ನಡದಲ್ಲಿ ದಲಿತ ಸಾಹಿತ್ಯವು ಬಂದಾಗ ಅದರ ಚಹರೆಗಳು ಬೇರೆಯಾದವು.

ದಲಿತ ಮತ್ತು ಅದರ ನಂಬಿಕೆಗಳು ಭಿನ್ನವಾದವು. ಅದರ ತಾತ್ವಿಕತೆಯೇ ಈ ದೃಷ್ಟಿಯಿಂದ ಭಿನ್ನವಾಗಿದೆ. ವಾಸ್ತವವಾಗಿ ವ್ಯಕ್ತಿವಾದ ಮತ್ತು ಅದರ ನಂಬಿಕೆಗಳು ಭಿನ್ನವಾಗುತ್ತದೆ. ಆಧುನಿಕ ಬಂಡವಾಳವಾದದಲ್ಲಿ ವ್ಯಕ್ತಿವಾದವು ಹೆಚ್ಚಿನ ಅವಕಾಶವನ್ನು ಪಡೆಯುತ್ತದೆ. ಆದರೆ ಅದು ಮಾತ್ರವೇ ಮುಖ್ಯವಾಗಬೇಕು ಎಂದು ಅರ್ಥವಲ್ಲ. ಅನೇಕ ಚರಿತ್ರೆಕಾರರು ಇದನ್ನು ನೋಡುವುದು ಒಂದು ವಿವರಣೆಯಾಗಿ ಮಾತ್ರವೇ. ಆದರೆ ವಿವರಣೆಯು ಮಾತ್ರವೇ ಸಾಕಾಗುವುದೇ ಇಲ್ಲ. ಅದರಲ್ಲಿ ಬರೀ ಘಟನೆ ಮತ್ತು ಅದರ ವಿವರಣೆಯು ಸಾಕಾಗುತ್ತದೆ ಎಂದು ಭಾವಿಸಬೇಕಾಗಿಯೂ ಇಲ್ಲ. ಚರಿತ್ರೆ ಮತ್ತು ಅದರ ಹಿಂದೆ ಇರುವ ತತ್ವಜ್ಞಾನವನ್ನು ನೋಡಿದರೆ ಈ ಸಂಗತಿಗಳು ನಮಗೆ ತಿಳಿಯುತ್ತದೆ. ಚರಿತ್ರೆ ಮತ್ತು ಅದರ ಹಿಂದೆ ಇರುವ ತತ್ವಜ್ಞಾನವನ್ನು ನಾವು ಅರ್ಥ ಮಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಮತ್ತು ಅದರ ಸ್ವರೂಪವೇ ನಮಗೆ ಮುಂದೆ ಹೋಗಲು ದಾರಿಯನ್ನು ಹೇಳುತ್ತವೆ. ಅದರಲ್ಲಿ ನಿಸರ್ಗ ಮತ್ತು ಮನುಷ್ಯರ ನಡುವೆ ಇರುವ ಸಂಬಂಧ ಮತ್ತು ಅದರ ಸಂಘರ್ಷಗಳ ವಿವರಣೆಗಳೂ ನಮಗೆ ದೊರೆಯುತ್ತವೆ.

ಆಲೋಚನೆ ಮತ್ತು ಅದರ ಹಿಂದೆ ಇರುವ ತತ್ವವು ಮೂಲಭೂತವಾಗಿ ವಿಶಿಷ್ಟವೂ ಆಗಿರುತ್ತದೆ. ಅಂದರೆ ನಿಸರ್ಗ ಮತ್ತು ವ್ಯಕ್ತಿಯ ನಡುವಣ ಸಂಬಂಧವನ್ನು ನಾವು ಇತ್ಯಾತ್ಮಕವಾಗಿಯೂ ನೋಡಬೇಕಾಗುತ್ತದೆ. ವ್ಯಕ್ತಿ ಮತ್ತು ಅವನ ಜ್ಞಾನವು ಬೇರೆ ಬೇರೆ ವಿಧದಲ್ಲಿ ಬೆಳೆದು ಬಂದಿದೆ. ಅದನ್ನು ನಾವು ನೋಡುವ ಮತ್ತು ಗ್ರಹಿಸುವ ಕ್ರಮವೂ ಬೇರೆಯಾಗಬೇಕಾಗುತ್ತದೆ. ಪ್ರಜ್ಞೆ ಮತ್ತು ಅದರ ರಚನೆಯು ಈ ಕಾರಣದಿಂದ ಬೇರೆ ಬೇರೆ ರೀತಿಯಲ್ಲಿ ಆಗಿರುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನವು ಈವತ್ತು ಅತ್ಯಂತ ಮಹತ್ವದ ಜಾಗವನ್ನು ಪಡೆದುಕೊಂಡಿದೆ. ಮತ್ತು ಅದರ ಪರಿಣಾಮವಾಗಿ ಮನುಷ್ಯ ಮತ್ತು ಅವನ ಜೀವನ ಕ್ರಮವು ಬದಲಾಗಿದೆ. ಅದರ ಅನುಭವವು ನಮಗೆ ನೇರವಾಗಿಯೂ ಆಗಿದೆ. ಮನುಷ್ಯ ಮತ್ತು ಅವನ ತಿಳುವಳಿಕೆಗಳಲ್ಲಿ ಕೇವಲ ಪ್ರಮೇಯ ಮಾತ್ರವೇ ಇರುವುದಿಲ್ಲ..ಯಾವುದನ್ನು ನಾವು ತಿಳುವಳಿಕೆ ಎಂದು ಹೇಳುತ್ತೇವೆಯೋ ಅದರಲ್ಲಿ ಕೇವಲ ಕೆಲವು ನಿಯಮವು ಮಾತ್ರವೇ ಇರುತ್ತದೆ ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಅದರಲ್ಲಿ ಅನೇಕ ಸಂಗತಿಗಳು ಸೇರಿಕೊಂಡು ಇರುತ್ತದೆ.

ಮತ್ತು ಅದರಲ್ಲಿ ವೈಜ್ಞಾನಿಕತೆ, ಉತ್ಪಾದನೆಗಳು, ಜೀವನ ಕ್ರಮಗಳು, ಸಮಾಜ, ಚರಿತ್ರೆಗಳು ಸೇರಿಕೊಂಡಿರುತ್ತವೆ.

ಮನುಷ್ಯ ಮತ್ತು ಅವನ ಜ್ಞಾನವನ್ನು ನಾವು ಅಷ್ಟು ಸುಲಭವಾಗಿ ವರ್ಗೀಕರಿಸಲು ಬರುವುದೂ ಇಲ್ಲ. ರಚನೆಯೂ ಕೂಡಾ ಇದೇ ರೀತಿಯಲ್ಲಿ ಬರುತ್ತದೆ. ಮತ್ತು ಅದನ್ನು ನೋಡುವಾಗ ಅದರ ಸಾಧ್ಯತೆಯನ್ನು ಬೇರೆ ಮಾಡಿ ನೋಡಬೇಕಾಗುತ್ತದೆ. ಅದರಲ್ಲಿ ಅನುಭವವು ಇದೆ. ಆಲೋಚನೆಗಳು ಇರುತ್ತವೆ. ಮತ್ತು ಅದನ್ನು ನೋಡಿದರೆ ಅದರ ಅರ್ಥವನ್ನು ನಮ್ಮ ಗುಣ ಮತ್ತು ನಡತೆಯ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ವಾಸ್ತವವಾಗಿ ಇದನ್ನು ನಾವು ಈವತ್ತು ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ಅಂಶಗಳೂ ಇವೆ. ಅದನ್ನು ನೋಡಬೇಕಾಗುತ್ತದೆ. ಲೇಖಕನು ಯಾವುದನ್ನು ಹೇಳುತ್ತಾನೆಯೋ ಅದು ಅವನ ಸ್ವತ್ತು ಮಾತ್ರವೇ ಅಲ್ಲ ಅದರಲ್ಲಿ ಸಮಾಜದ ಅಂಶಗಳೂ ಸೇರುತ್ತವೆ. ಆದರೆ ಆಧುನಿಕತೆಯು ವ್ಯಕ್ತಿಯನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ಕ್ರಮದಲ್ಲಿ. ಮತ್ತು ವ್ಯಕ್ತಿಯನ್ನು ಹೇಳುವ ಕ್ರಮವು ಬೇರೆಯಾಗಿದೆ. ಅವನನ್ನು ಅತ್ಯಂತ ಮಹತ್ವದ ಭಾಗವೆಂದು ಹೇಳುವುದು ಮುಖ್ಯವಾಗುತ್ತದೆ. ಅಂದರೆ ವ್ಯಕ್ತಿಯನ್ನು ಒಂದು ಘಟಕವೆಂದು ಹೇಳುವುದರಿಂದ ಅದನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಲೇಖಕ ಮತ್ತ ಅವನ ಗ್ರಹಿಕೆಯು ಯಾವ ರೂಪದಲ್ಲಿ ಇರುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದು ಬಹಳ ಮುಖ್ಯವಾಗುತ್ತದೆ. ವ್ಯಕ್ತಿಯನ್ನು ಬರೀ ಒಂದು ನೆಲೆಯಲ್ಲಿ ಮಾತ್ರವೇ ನೋಡುವುದು ಮತ್ತು ಅದೇ ರೀತಿಯಲ್ಲಿ ಗ್ರಹಿಸುವುದು ಸರಿಯಾದ ಕ್ರಮವು ಅಲ್ಲ. ಅದನ್ನು ಮತ್ತೆ ಭಿನ್ನವಾಗಿಯೂ ನೋಡಬೇಕಾಗುತ್ತದೆ. ಲೇಖಕ ಮತ್ತು ಅವನ ಜೀವನವೂ ಹೇಗೆ ಒಂದು ಕೃತಿಯಲ್ಲಿ ಪಾತ್ರವನ್ನು ವಹಿಸುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎಂದು ನೋಡಬೇಕಾಗುತ್ತದೆ. ಇಲ್ಲಿ ಲೇಖಕ ಮತ್ತು ಅವನ ಜೀವನ ಹಾಗೂ ಅವನ ಯೋಚನೆಯು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವದರಲ್ಲಿ ಎರಡು ಮಾತು ಇಲ್ಲ. ಅದು ಜೀವನ ಮತ್ತು ಅವನ ಅನುಭವ ಮತ್ತು ಯೋಚನೆಯನ್ನು ಹೇಳುತ್ತದೆ. ಅದರಲ್ಲಿ ಅವನ ವ್ಯಕ್ತಿತ್ವವವನ್ನು ಭಿನ್ನವಾಗಿಯೂ ಹೇಳುತ್ತದೆ.

ಬರಹವೂ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಕ್ರಿಯೆಯು ಆಗಿದೆ. ಯಾಕೆ ಬರೆಯಲು ನಮಗೆ ಶಕ್ತಿಯು ಇರುತ್ತದೆ ಅಥವಾ ಯಾಕೆ ನಮಗೆ ಓದುವ ಮತ್ತು ಕಲ್ಪಿಸುವ ಶಕ್ತಿಯು ಇರುತ್ತದೆ ಎಂದು ಯೋಚಿಸಬೇಕಾಗುತ್ತದೆ. ಬರಹ ಮತ್ತು ಅದರ ಸನ್ನಿವೇಶವು ಬರೀ ಆಕಸ್ಮಿಕವಾದ ಚಟುವಟಿಕೆಯು ಅಲ್ಲ. ಅದರಲ್ಲಿ ಭಿನ್ನತೆ ಇದೆ. ಲೇಖಕ ಮತ್ತು ಅವನ ಟಿಪ್ಪಣಿಯೂ ಒಂದು ಹಂತದಲ್ಲಿ ಸಹಾಯವನ್ನು ಮಾಡವುವುದು ಸಾಧ್ಯ. ಪದಗಳು, ಅದರ ಜೋಡಣೆ, ಅದರ ಅಕ್ಷರದ ಸ್ವರೂಪ, ಅದರ ವಿಶಿಷ್ಟವಾದ ಅರ್ಥ, ಸಂಯೋಜನೆ ವಿಶಿಷ್ಟವಾದ ಪರಿಣಾಮವನ್ನು ಬೀರುತ್ತದೆ ಎಂದು ಫಾಸ್ಕಲ್ ಹೇಳುತ್ತಾನೆ. ಪದಗಳು ಕೂಡಾ ಸಂಕಥನವನ್ನು ಹೇಳುತ್ತದೆ. ಮತ್ತು ಅದರಲ್ಲಿ ವಿವಿಧ ರೀತಿಯ ಸಂಬಂಧ ಮತ್ತು ಅದರ ಚಹರೆಗಳೂ ಇರುತ್ತವೆ. ಹಾಗೆ ನೋಡುವುದಿದ್ದರೆ ವ್ಯಕ್ತಿ ಮತ್ತು ಅವನ ಸ್ವಭಾವವು ಅವನ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ನಿರ್ದಿಷ್ಟವಾದ ಸನ್ನಿವೇಶ ಮತ್ತು ಸಂದರ್ಭಗಳು ವ್ಯಕ್ತಿಯ ನಡೆಯನ್ನು ನಿರ್ಧರಿಸುತ್ತದೆ. ಅದು

ಕೆಲವು ಬಗೆಯ ಚಟುವಟಿಕೆಯನ್ನು ರೂಪಿಸುತ್ತದೆ. ದುರಂತ ನಾಟಕಗಳಲ್ಲಿ ವ್ಯಕ್ತಿ ಮತ್ತು ಅವನ ದುರಂತವು ಮಾತ್ರವೇ ಮುಖ್ಯವಾಗುತ್ತದೆ. ಮತ್ತು ಅದರಲ್ಲಿ ವ್ಯಕ್ತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗುತ್ತದೆ. ವ್ಯಕ್ತಿಯು ದುರಂತವು ಅತ್ಯಂತ ಮುಖ್ಯವಾಗುತ್ತದೆ. ವ್ಯಕ್ತಿಯು ಅದರಲ್ಲಿ ಮುಖ್ಯ.

ದುರಂತ ಎನ್ನುವುದು ಮೂಲಭೂತವಾಗಿ ಕೆಲವು ಪ್ರಮೇಯಗಳನ್ನು ಇಟ್ಟು ಕೊಂಡಿವೆ. ಮತ್ತು ಅದರಲ್ಲಿ ಸ್ವಲ್ಪ ಮಟ್ಟಿಗೆ ಆಧ್ಯಾತ್ಮಿಕತೆಯು ಸೇರಿದೆ. ಅದನ್ನು ಈ ದೃಷ್ಟಿಯಿಂದ ಬೇರೆಯಾಗಿಯೂ ನೋಡಬೇಕಾಗುತ್ತದೆ. ಅದು ವ್ಯಕ್ತಿ ಮತ್ತು ಸ್ವಭಾವವನ್ನು ಮಾತ್ರವೇ ಕೇಂದ್ರ ಮಾಡಿಕೊಂಡಿದೆ. ಮಧ್ಯಯಗದ ಅನೇಕ ನಂಬಿಕೆಗಳನ್ನು ಆಧುನಿಕ ಯುಗವು ಬದಲು ಮಾಡಿದೆ. ಮತ್ತು ಅದರ ಸ್ವರೂಪಗಳಲ್ಲಿ ವ್ಯತ್ಯಾಸವೂ ಇದೆ. ಆಧುನಿಕ ಯುಗದ ಮನುಷ್ಯನು ಈಗ ತನ್ನ ವ್ಯಾಖ್ಯೆಗಳನ್ನು ಬದಲು ಮಾಡಿದ್ದಾನೆ. ಅವನ ಚಹರೆಗಳು ಬದಲಾಗಿವೆ. ಈ ದೃಷ್ಟಿಯಿಂದ ಆಧುನಿಕರದ್ದು ಬೇರೆ ದೃಷ್ಟಿಕೋನ, ಅದರಲ್ಲಿಯೂ ರೊಮಾಂಟಿಕರು ಜೀವನ ಮತ್ತು ಅದರ ಆದರ್ಶಗಳನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಬೇರೆಯಾಗಿದೆ. ಅದರಲ್ಲಿ ತಾರತಮ್ಯಗಳೂ ಇವೆ. ವ್ಯಕ್ತಿ ಮತ್ತು ಅವನ ಆದರ್ಶಗಳು ಬದಲಾದಾಗ ಅದರ ಸ್ವರೂಪದಲ್ಲಿ ವ್ಯತ್ಯಾಸವೂ ಆಗುತ್ತದೆ. ವಾಸ್ತವವವಾಗಿ ಲೋಕವನ್ನು ರೊಮಾಂಟಿಕರು ಲೋಕವನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ರೀತಿಯಿಂದಲೂ ಹೌದು. ವ್ಯಕ್ತಿಯನ್ನು ನೋಡುವುದು ಮತ್ತು ಅವನನ್ನು ಒಂದು ಕೇಂದ್ರಕ್ಕೆ ತರುವುದು ಇಲ್ಲಿ ಮುಖ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ರೀತಿಯು ಅದರಲ್ಲಿ ಬದಲಾಗುತ್ತದೆ. ವ್ಯಕ್ತಿಯನ್ನು ಉದಾರತೆಯಿಂದ ನೋಡಲಾಗುತ್ತದೆ. ಮತ್ತು ಅವನ ಆದರ್ಶಗಳನ್ನು ಅತ್ಯಂತ ಗೌರವದಿಂದ ಕಾಣಲಾಗುತ್ತದೆ. ಆದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯನ್ನು ನಾವು ಯಾವ ರೀತಿಯಲ್ಲಿ ನೋಡುತ್ತೇವೆ ಮತ್ತು ಗ್ರಹಿಸುತ್ತೇವೆ ಎನ್ನುವುದು ಬಹಳ ಮುಖ್ಯ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಅದು ವ್ಯಕ್ತಿಯನ್ನು ವ್ಯಾಖ್ಯಾನಿಸುವ ಕ್ರಮವನ್ನು ಅವಲಂಬಿಸಿದೆ. ಅದರಲ್ಲಿ ಬಹಳ ಮುಖ್ಯವಾದ್ದು ವ್ಯಕ್ತಿಯನ್ನು ಗುರುತಿಸುವ ಕ್ರಮ. ವ್ಯಕ್ತಿಯನ್ನು ಬರೀ ಒಂದು ಘಟಕವೆಂದು ಗುರುತಿಸಿದರೆ ಅದರ ಸಾಧ್ಯತೆಯು ಬೇರೆಯಾಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ.

ಆಧುನಿಕತೆಯು ವ್ಯಕ್ತಿಯನ್ನು ಬರೀ ಒಂದು ಧರ್ಮದ ಪಾಲನೆಯನ್ನು ಮಾಡುವವನು ಎಂದು ಹೇಳುವುದೇ ಇಲ್ಲ. ಅದರಲ್ಲಿ ಅದರ ವ್ಯಾಖ್ಯೆಯು ಬೇರೆಯಾಗುತ್ತದೆ. ರೊಮಾಂಟಿಕರ ಆದರ್ಶವು ವ್ಯಕ್ತಿಯನ್ನು ಗ್ರಹಿಸುವ ಕ್ರಮವು ಬೇರೆಯಾಗಿದೆ. ಅದರಲ್ಲಿ ಅದ ಅರ್ಥವೂ ಬಿನ್ನವಾಗುತ್ತದೆ. ವ್ಯಕ್ತಿಯನ್ನು ಅತ್ಯಂತ ಸಾಚಾ ಎಂದು ಅದು ಹೇಳುತ್ತದೆ. ಅದರ ಅರ್ಥವೂ ಬೇರೆಯಾಗುತ್ತದೆ. ಅದರಲ್ಲಿ ವ್ಯಕ್ತಿಯನ್ನು ಗ್ರಹಿಸುವ ಕ್ರಮದಲ್ಲಿ ಆದರ್ಶವು ಮಾತ್ರವೇ ಬಹಳ ಮುಖ್ಯ.ಅದರಲ್ಲಿ ವ್ಯಕ್ತಿಯನ್ನು ನೋಡುವ ಮತ್ತು ಅದನ್ನು ಗ್ರಹಿಸುವ ಕ್ರಮವೂ ಭಿನ್ನವಾಗುವುದು ಅದರ ನಿರೂಪಣೆಯಲ್ಲಿ ಕಾಣಿಸುತ್ತದೆ. ವ್ಯಕ್ತಿ ಮತ್ತು ಅವನ ಆದರ್ಶವು ಅದರಲ್ಲಿ ಬಹಳ ಮುಖ್ಯವೂ ಆಗಿದೆ. ಮನುಷ್ಯನ ಹೊಸದಾದ ಘನತೆಯು ಎದ್ದು ಕಾಣಿಸುತ್ತದೆ. ವ್ಯಕ್ತಿಯನ್ನು ಅದು ಗ್ರಹಿಸುವಲ್ಲಿ ಇರುವ ಮತ್ತೊಂದು ಅಂಶವೆಂದರೆ ಉದಾರತೆಯೊಂದಿಗೆ ಬರುವ

ವಿವರಣೆಗಳು. ಅವನು ಅನ್ಯಾಯವನ್ನು ಮಾಡಬಾರದು ಮತ್ತು ಅದರಲ್ಲಿ ಅವನು ಘನತೆಯನ್ನು ಹೇಳಬೇಕು. ಆದ್ದರಿಂದ ಮೂಲತಃ ನವೋದಯದಲ್ಲಿ ವ್ಯಕ್ತಿ ಮತ್ತು ಅವನ ಆದರ್ಶಗಳಿಗೆ ಅದರದೇ ಆದ ಆಯಾಮವೂ ಇದೆ. ಧರ್ಮ ಮತ್ತು ವ್ಯಕ್ತಿಯ ಸಂಬಂಧವೂ ಅದರಲ್ಲಿ ಅತ್ಯಂತ ನಿರ್ಣಾಯಕವೂ ಆಗುತ್ತದೆ.

ವ್ಯಕ್ತಿ ಮತ್ತು ಅವನ ವರ್ತನೆಗಳು ಹಾಸ್ಯವಾಗುತ್ತದೆ. ಅವನು ದುರಂತವನ್ನೂ ಅಪ್ಪುತ್ತಾನೆ. ವಾಸ್ತವವಾಗು ವ್ಯಕ್ತಿ ಮತ್ತು ಅವನ ಜೀವನ ಕ್ರಮವೇ ಮೂಲಭೂತವಾಗಿ ರೊಮಾಂಟಿಕ್ ಪರಂಪರೆಯಲ್ಲಿ ಬೇರೆ ಬೇರೆ ವ್ಯಾಖ್ಯಾನವನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿಯನ್ನು ಅವನ ಜೀವನ ಕ್ರಮದ ಆದರ್ಶದ ಹಿನ್ನೆಲೆಯಲ್ಲಿಯೂ ಹೇಳಲಾಗುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ಸಾಹಿತ್ಯ ಮತ್ತು ಅದರ ರೂಪವು ನಿರ್ಧಾರವಾಗುವುದು ಅದರ ಸಾಮಾಜಿಕವಾದ ಅಗತ್ಯದ ಹಿನ್ನೆಲೆಯಲ್ಲಿಯೂ ಹೌದು. ಲುಕಾಕ್ಸ ರೂಪವನ್ನು ಒಂದು ಸಂಕೇತವಾದ ರಚನೆಯೆಂದೂ ಹೇಳುತ್ತಾನೆ. ಅವನ ಪ್ರಕಾರ ಸಾಹಿತ್ಯ ಮತ್ತು ಅದರ ರೂಪವು ಸಮಾಜದ ಅಗತ್ಯವಾಗುತ್ತದೆ. ಅದರಲ್ಲಿ ಅರ್ಥವೂ ಇರುತ್ತದೆ. ಅಂದರೆ ರೊಮಾಂಟಿಕರು ಬಳಸಿಕೊಂಡ ಭಾವಗೀತೆ, ಕಾದಂಬರಿಗಳು, ವಿಮರ್ಶೆಯು ಭಿನ್ನವಾದ ಒಲವನ್ನು ಸೂಚಿಸುತ್ತದೆ. ಒಂದು ಕಾದಂಬರಿಯಲ್ಲಿ ಬಳಕೆಯಾಗುವ ಜನಾಂಗವೂ ಅದರದೇ ಆದ ಅರ್ಥವನ್ನು ಹೇಳುತ್ತದೆ. ಒಂದು ಮಹಾಕಾವ್ಯದಲ್ಲಿಯೂ ಜನಾಂಗವು ಇರುತ್ತದೆ. ಅದರ ಅರ್ಥವೂ ಅದರಲ್ಲಿ ಬೇರೆಯಾಗುತ್ತದೆ. ಕಾದಂಬರಿಯಲ್ಲಿ ವ್ಯಕ್ತಿ ಮತ್ತು ಸಮಾಜವು ಜೊತೆಗೆ ಇರುತ್ತದೆ. ವ್ಯಕ್ತಿ ಮತ್ತು ಅವನ ಜೀವನದ ಕ್ರಮದಲ್ಲಿ ಪಲ್ಲಟವೂ ಬಹಳ ದೊಡ್ಡದೂ ಹೌದು. ಪುನರುಜ್ಜೀವನ ಮತ್ತು ಅದರ ಅಂತರದ ಬೆಳವಣಿಗೆಗಳು ಅನೇಕ ರೀತಿಯು ಸಾಹಿತ್ಯವನ್ನು ಹುಟ್ಟುಹಾಕಿದೆ. ವ್ಯಕ್ತಿ ಮತ್ತು ಅವನ ಚಹರೆಗಳು ಆಧುನಿಕ ಯುಗದಲ್ಲಿ ವ್ಯತ್ಯಾಸವೂ ಆಗಿದೆ. ವಾಸ್ತವವಾಗಿ ಆಧುನಿಕ ಯಗವು ವ್ಯಕ್ತಿಯನ್ನು ಅವನ ಅನನ್ಯತೆಯ ಹಿನ್ನೆಲೆಯಲ್ಲಿ ಗ್ರಹಿಸುತ್ತದೆ. ಅದರೊಂದಿಗೆ ಆಧುನಿಕ ಯಗವು ಹುಟ್ಟುಹಾಕಿದ ರೊಮಾಂಟಕ್ ಪರಂಪರೆಯು ಆಧುನಿಕ ಸಮಾಜದ ನಿರ್ದಿಷ್ಟವಾದ ವರ್ಗವನ್ನು ಹೇಳುತ್ತದೆ. ರೊಮಾಂಟಿಕ್ ವ್ಯಕ್ತಿಯು ಮಧ್ಯಮ ವರ್ಗದವನು. ಅವನು ನಿರ್ದಿಷ್ಟವಾದ ವರ್ಗವನ್ನು ಸೂಚಿಸುತ್ತಾನೆ. ಅವನದು ನಿರ್ದಿಷ್ಟವಾದ ಮತ್ತು ಅತ್ಯಂತ ಸುರಕ್ಷಿತವಾದ ಅಕ್ಷರಸ್ಥವಾದ ವರ್ಗವಾಗಿದೆ. ಅವನಿಗೆ ಸ್ವಂತ ಎನ್ನುವುದೂ ಅತ್ಯಂತ ಮುಖ್ಯವಾಗಿದೆ. ಜೀವನದ ಪ್ರೀತಿಯು ಇದೆ. ವ್ಯಕ್ತಿಯು ಜೀವನದ ವಿರೋಧಿಯು ಅಲ್ಲ. ಅವನಿಗೆ ಅವನದೇ ಆದ ಸ್ವಂತಿಕೆ ಮತ್ತು ಕನಸುಗಳೂ ಇದೆ. ಹೊಸದಾಗಿ ಶುರುವಾದ ಒಂದು ವರ್ಗವನ್ನು ಅವನು ಪ್ರತಿನಿಧಿಸುತ್ತಾನೆ. ಅಂದರೆ ಆಗ ವಸಾಹತುಕಾಲದ ಕೆಲವು ವರ್ಗವನ್ನು ಆಧುನಿಕ ರೊಮಾಂಟಿಕ್ ಕವಿಗಳು ಸೂಚಿಸುತ್ತಾರೆ. ಅವರು ಆಗಿನ ಶಿಕ್ಷಣದಿಂದ ಅನೇಕವನ್ನು ಪಡೆದುಕೊಂಡಿದ್ದಾರೆ. ಮತ್ತು ಅವರಿಗೆ ದೇಶ ಮತ್ತು ಅದರ ಅಗತ್ಯವು ಇತ್ತು. ಅವರಿಗೆ ಒಂದು ಕಡೆಯಿಂದ ವರ್ಡ್ಸ್‌ವರ್ತನ ಪ್ರಭಾವವೂ ಇದೆ. ಮತ್ತೊಂದು ಕಡೆಯಿಂದ ಅರವಿಂದರ ಪ್ರಭಾವವೂ ಇದೆ. ಅವರ ಆಯ್ಕೆಗಳು ಕೂಡಾ ಸಂವಾದಿಯಾಗಿದೆ. ಆಲೋಚನೆ ಮತ್ತು ಅದರ ಸ್ವರೂಪದಲ್ಲಿ ಇದನ್ನು ನಾವು ಕಾಣಬೇಕಾಗುತ್ತದೆ. ಅದರಲ್ಲಿ ಹೊಸದಾದ ಕಲ್ಪನೆಯು ಇದೆ. ಅದರಲ್ಲಿ ಅವರದೇ ಆದ ಆಲೋಚನೆಯು ಇದೆ. ಆಲೋಚನೆ ಮತ್ತು ಭಾವನೆಗಳು ಹಾಗೂ ಉದಾರತೆಗಳು

ಸಮನ್ವಯವಾಗುತ್ತದೆ. ಅದರಲ್ಲಿ ವಿಶಿಷ್ಟವಾದ ಮೌಲ್ಯಗಳು ಇವೆ. ಆದರೆ ಕನ್ನಡದ ಅನೇಕ ಕವಿಗಳು ತಮಗೆ ಬೇಕಾದ್ದನ್ನು ಮಾತ್ರವೇ ಬರೆದರು ಎಂದು ಹೇಳುವಂತೆ ಇಲ್ಲ. ಅವರ ಬರಹಗಳಲ್ಲಿ ವ್ಯಕ್ತಿ ಮತ್ತು ಅವನ ಜೀವನದ ದೃಷ್ಟಿಕೋನವು ಒಂದು ಕಾಲದ ಚರಿತ್ರೆಯನ್ನು ಹೇಳುತ್ತವೆ. ಒಂದು ಗುಂಪಿನ ಆವಶ್ಯಕತೆ ಮತ್ತು ಅದರ ಅಗತ್ಯಗಳನ್ನು ಅವರ ಕವಿತೆಗಳು ಹೇಳುತ್ತವೆ. ವ್ಯಕ್ತಿ ಮತ್ತು ವಿಶ್ವದ ಅಗತ್ಯವೇ ಅದರಲ್ಲಿ ಕಾಣಿಸುತ್ತದೆ.

ವ್ಯಕ್ತಿ ಮತ್ತು ಅವನ ಅಗತ್ಯಗಳನ್ನು ಅದು ಸೂಚಿಸುತ್ತದೆ. ವ್ಯಕ್ತಿಯು ಹೊಸದಾದ ಜೀವನವನ್ನು ನೋಡುತ್ತಾನೆ ಮತ್ತು ಅದನ್ನು ಅವನು ಹೇಗೆ ಸ್ವೀಕರಿಸುತ್ತಾನೆಯೋ ಅದರ ಅನುಸಾರವಾಗಿಯೂ ಬರೆಯುತ್ತಾನೆ. ಇದು ರೊಮಾಂಟಿಕರ ನಿಲುವುಗಳೂ ಹೌದು. ವೈಯಕ್ತಿಕತೆ ಮತ್ತು ಅದರ ಗ್ರಹಿಕೆಗೆ ಬೇರೆ ಬೇರೆ ಆಯಾಮವೂ ಇದೆ. ವ್ಯಕ್ತಿತ್ವ ಮತ್ತು ಅದರ ಗುರಿಯು ಅದರಲ್ಲಿ ಬೇರೆ ಬೇರೆ ಚಹರೆಗಳನ್ನು ಹೇಳುತ್ತವೆ. ರಚನೆಗಳು ಮತ್ತು ಅದರ ಕುರಿತಾದ ಸಮಾಜ ಜ್ಞಾನವು ಕೂಡಾ ರೊಮಾಂಟಿಕರಲ್ಲಿ ಮುಖ್ಯವಾಗುತ್ತದೆ. ರಚನೆ ಮತ್ತು ಅದರ ಅರ್ಥವೂ ರೊಮಾಂಟಿಕರಲ್ಲಿ ಬೇರೆಯಾಗುತ್ತದೆ. ಜೀವನದ ಅನೇಕ ದೃಷ್ಟಿಕೋನಗಳನ್ನು ಅವುಗಳು ಹೇಳುತ್ತವೆ. ಅಂದರೆ ವ್ಯಕ್ತಿಯು ಸಮಾಜ ಮತ್ತು ಅದರ ಪ್ರಶ್ನೆಯಿಂದ ಹೊರಗಿನವನು ಅಲ್ಲವೆನ್ನುವುದು ನವೋದಯದಲ್ಲಿ ಬಹಳ ಮುಖ್ಯ. ಕವಿಗಳು ಮತ್ತು ಅವರ ಜೀವನದ ವಿಧಾನಕ್ಕೂ ಅವರು ಬರೆದ ಕವಿತೆಗಳಿಗೂ ಸಂಬಂಧವಿದೆ. ಅದರಲ್ಲಿ ವ್ಯಕ್ತಿ ಮತ್ತು ಸಮೂಹವಿದೆ. ನವೋದಯದ ಕವಿತೆಗಳಲ್ಲಿ ವ್ಯಕ್ತಿ ಅವನ ಧಾರ್ಮಿಕವಾದ ನಂಬಿಕೆಗಳು, ಅವನ ಆಲೋಚನೆ, ಅವನ ಹಿಂದೆ ಇರುವ ಸಂಸ್ಥೆಗಳು, ಅವನ ನೈತಿಕ ನಿಲುವುಗಳು ವಿಭಿನ್ನವಾಗಿ ವ್ಯಕ್ತವಾಗುತ್ತವೆ. ಅಂದರೆ ವ್ಯಕ್ತಿಯು ಸಮಾಜ ಮತ್ತು ಅವನ ಜ್ಞಾನದ ಮೂಲಕ ಒಂದು ಸಂಬಂಧವನ್ನು ಸ್ಥಾಪಿಸುತ್ತಾನೆ. ಸಮಾಜಕ್ಕೆ ಇರುವ ನಿಯಮವನ್ನು ಬೇಂದ್ರೆಯವರು ತಿರಸ್ಕಾರ ಮಾಡುತ್ತಿಲ್ಲ. ಅವರು ಅದನ್ನು ಒಂದು ಚೌಕಟ್ಟಿನಲ್ಲಿ ಹೇಳುತ್ತಾರೆ. ಒಂದು ನಿಯಮವು ಇದೆ. ಮತ್ತೊಂದು ಕಡೆಗೆ ಒಂದು ನೈತಿಕತೆಯು ಇದೆ. ಬೇರೊಂದು ಕಡೆಗೆ ಪ್ರಜೆಯಾಗಿ ತಾನು ಮಾಡಬೇಕಾದ ಕರ್ತವ್ಯವೂ ಇದೆ. ಅದು ಪ್ರಜ್ಞೆಯನ್ನು ಹೇಳುತ್ತದೆ. ನಾಗರಿಕವಾದ ನಿಲುವನ್ನು ಹೇಳುತ್ತದೆ. ನವೋದಯ ಕಾಲದ ಕಾದಂಬರಿಗಳು ನೀತಿ ಮತ್ತು ಅಮೂರ್ತವಾದ ಆದರ್ಶವನ್ನು ಹೇಳುತ್ತವೆ. ಅದರಲ್ಲಿ ಕೆಲವು ಹಾಜರಾಗುತ್ತವೆ. ಮತ್ತು ಮತ್ತೆ ಕೆಲವು ಗೈರುಹಾಜರಿಯಾಗುತ್ತವೆ. ಕಾದಂಬರಿಯಲ್ಲಿ ಬರುವ ಧೋರಣೆಗಳು ಸಮಾಜ ಮತ್ತು ಅದರ ಬೆಳವಣಿಗೆಯನ್ನು ಹೇಳುತ್ತವೆ. ಅದರಲ್ಲಿ ಸಮಾಜವು ಒಂದು ಮೌಲ್ಯವನ್ನು ಮಾತ್ರವೇ ಹೇಳಿಕೊಳ್ಳುವುದೂ ಇಲ್ಲ. ಅದು ದೊಡ್ಡದಾದ ಸಮಾಜದೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳುತ್ತದೆ. ಸಾಹಿತ್ಯವೆನ್ನುವುದು ನಾವು ಭಾಷೆಯ ಮೂಲಕ ನಡೆಸುವ ಅನುಸಂಧಾನ. ಅದು ಒಂದು ಮಾದರಿಯ ಚಟುವಟಿಕೆಯೂ ಹೌದು.

ರೊಮಾಂಟಿಕ್ ಪರಂಪರೆಯು ವಾಸ್ತವವಾಗಿ ಒಂದು ರೀತಿಯಲ್ಲಿ ಒಂದು ಭಾವವನ್ನು ಮಾತ್ರವೇ ಹೇಳುತ್ತದೆ. ಅದರಲ್ಲಿ ವ್ಯಕ್ತಿಯು ಯಾವುದನ್ನು ಸೂಚಿಸುತ್ತಾನೆಯೋ ಅದರ ಭಾವಗಳು ಮಾತ್ರವೇ ಮುಖ್ಯವಾಗುತ್ತವೆ. ಇಲ್ಲಿ ಮತ್ತೊಂದು ಅಂಶವನ್ನು ಹೇಳಬೇಕಾಗುತ್ತದೆ. ವ್ಯಕ್ತಿಯ ರೊಮಾಂಟಿಕ್ ಕಲ್ಪನೆಯು ವಾಸ್ತವವವಾಗಿ ಒಂದು ಕ್ಷಣವನ್ನು ಹೇಳುತ್ತದೆ. ಅದರಲ್ಲಿ ವಿವಿಧತೆಯು

ಆ ಕ್ಷಣವನ್ನು ಮಾತ್ರವೇ ಹೇಳುತ್ತದೆ. ಅದರ ಆಯಾಮವೂ ಭಿನ್ನವಾಗುತ್ತದೆ. ಅದರಲ್ಲಿ ಒಂದು ಕ್ಷಣವೆನ್ನುವುದು ಒಂದು ಕಾಲವನ್ನು ಮಾತ್ರವೇ ಸೂಚಿಸುತ್ತದೆ. ಅದರಲ್ಲಿ ಆ ನಿಮಿಷ ಎನ್ನುವುದು ಮತ್ತು ಆ ಸೂಚನೆ ಎನ್ನುವುದು ಮಾತ್ರವೇ ಬಹಳ ಮುಖ್ಯ. ಇಲ್ಲಿ ಮತ್ತೊಂದು ಅಂಶವನ್ನು ನಾವು ಹೇಳಬೇಕಾಗುತ್ತದೆ. ಚಿತ್ರದಲ್ಲಿ ಬರುವ ಒಂದು ಕಲ್ಪನೆಯು ಲ್ಯಾಂಡ್ ಸ್ಕೇಪ್ ಪರಿಕಲ್ಪನೆಯು ನಮಗೆ ಬಹಳ ಮುಖ್ಯ. ಅದನ್ನು ಸುಂದರವೆಂದು ಹೇಳುತ್ತೇವೆ. ಅದರಲ್ಲಿ ಬರುವ ಸಂಯೋಜನೆಯು ಯಾವುದೇ ಚಲನೆಯನ್ನು ಹೇಳುವುದೂ ಇಲ್ಲ. ಅದರಲ್ಲಿಯೂ ಕಲಾವಿದನು ನೋಡುವ ನೋಟ ಮಾತ್ರವೇ ಮುಖ್ಯವಾಗುತ್ತದೆ. ಲಿರಿಕಲ್ ಕವಿತೆಯೂ ಕೂಡಾ ಒಂದು ದೃಷ್ಟಿಯಿಂದ ಒಂದು ಬಗೆಯ ಲ್ಯಾಂಡ್‌ಸ್ಕೇಪ್. ಅದರಲ್ಲಿ ನಿಸರ್ಗವೂ ಇದೆ. ಅದರಲ್ಲಿ ನೀತಿಯೂ ಇದೆ. ಭಾವಗೀತೆಗಳಲ್ಲಿ ವ್ಯಕ್ತಿ ಮತ್ತು ಅವನ ಭಾವನೆಗಳು ಮಾತ್ರವೇ ಇದೆ. ಅದರಲ್ಲಿ ಅದು ವಿಷಯನಿಷ್ಠವಾದ ಒಂದು ನಿರೂಪಣೆಯೂ ಹೌದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಭಾವಗೀತೆಯು ವ್ಯಕ್ತಿ ಮತ್ತು ಅವನ ಕೆಲವು ಸಂಗತಿಗಳನ್ನು ಹೇಳುತ್ತವೆ. ಅದರಲ್ಲಿ ಅವನ ಒಂದು ಕ್ಷಣದ ಭಾವನೆಗಳು ಮಾತ್ರವೇ ಇದೆ. ಭಾವಗೀತೆಗಳು ವ್ಯಕ್ತಿಯ ಕೆಲವು ವಿಷಯಗಳನ್ನು ಮಾತ್ರವೇ ಹೇಳುತ್ತವೆ. ಅದರಲ್ಲಿ ಭಾವನೆ ಮತ್ತು ಅದರ ಸ್ವರೂಪಗಳು ಇತ್ಯಾತ್ಮಕವಾಗಿಯೂ ಇರುತ್ತದೆ. ಅಂದರೆ ವ್ಯಕ್ತಿಯು ಒಂದು ಕ್ಷಣಕ್ಕೆ ಯಾವುದನ್ನು ಕಾಣುತ್ತಾನೆಯೋ ಅದನ್ನು ಮಾತ್ರವೇ ಅವನು ಹೇಳುತ್ತಾನೆ. ಅದರಲ್ಲಿ ಭಾವನೆ ಮತ್ತು ಅದರ ವಿಷಯನಿಷ್ಠವಾದ ಒಂದು ಸಂಗತಿಯು ಮಾತ್ರವೇ ಇರುತ್ತದೆ. ಭಾವಗೀತೆಯು ಹೆಚ್ಚು ಅಭಿವ್ಯಕ್ತಾತ್ಮಕವೂ ಆಗುತ್ತದೆ. ಅದು ನಿಯತಿಯನ್ನು ಒಪ್ಪುತ್ತದೆ. ಮತ್ತು ಅದರಲ್ಲಿ ನಿತ್ಯವೇ ಹೆಚ್ಚು ಮುಖ್ಯವಾಗುತ್ತದೆ. ನಿತ್ಯವನ್ನು ಅದು ತನ್ನದೇ ಆದ ಮಾತುಗಳಲ್ಲಿ ಹೇಳುತ್ತದೆ. ಅಂದರೆ ಅದರಲ್ಲಿ ನಿತ್ಯವು ಹೊಸಮಾತನ್ನು ಪಡೆಯುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ಜೀವನದ ಕ್ರಮವೂ ಹೆಚ್ಚು ಮುಖ್ಯವಾಗುತ್ತದೆ. ಅವರ ಜೀವನ ಮತ್ತು ಅದರ ಸುಂದರ ಕ್ಷಣಗಳು ಅದರಲ್ಲಿ ಹೆಚ್ಚು ಮುಖ್ಯವಾಗುತ್ತದೆ. ಅಂದರೆ ನವೋದಯಕ್ಕೆ ಸುಂದರವಾದುದರ ಬಗ್ಗೆ ಮಾತ್ರವೇ ಹೆಚ್ಚು ಆಸಕ್ತಿ. ಜೀವನ ಮತ್ತು ಅದರ ವ್ಯಾಖ್ಯೆಯು ಅದರಲ್ಲಿ ಬೇರೆಯಾಗುತ್ತದೆ. ಯಾವುದನ್ನು ನಾವು ಸಂದರ್ಭವೆಂದು ಹೇಳುತ್ತೇವೆಯೋ ಅದರ ಸ್ವರೂಪವೂ ನವೋದಯದಲ್ಲಿ ತೀರಾ ಒಂದು ಕ್ಷಣದ ಆಸಕ್ತಿಯನ್ನು ಹೇಳುತ್ತವೆ. ಅದರಲ್ಲಿ ಅನೇಕ ಸಾಮಾಜಿಕವಾದ ಸಂಗತಿಗಳೂ ಸೇರಿಕೊಳ್ಳಬಹುದು. ಗಾಂಧಿಯವರ ಕುರಿತು ಗಾಂದಿಗೆ ಭಾಷ್ಪಾಂಜಲಿ ಎನ್ನುವ ಕವಿತೆಯನ್ನು ಕುವೆಂಪು ಬರೆದರೆ ಮೂವತ್ತಮೂರು ಕೋಟಿಯ ಕುರಿತು ಬೇಂದ್ರೆಯವರು ಬರೆದರು. ಅದರಲ್ಲಿ ಬರುವ ಸಂಗತಿಗಳು ಒಂದು ಕಾಲವನ್ನು ಹೇಳುತ್ತದೆ. ಅದರಲ್ಲಿ ಆಗಿನ ಬುದ್ಧಿಜೀವಿಗಳ ಚಟುವಟಿಕೆಯೂ ಕಾಣಿಸುತ್ತದೆ. ಬರಹವೇ ಒಂದು ದೃಷ್ಟಿಯಲ್ಲಿ ಬುದ್ಧಿಜೀವಿಗಳ ಚಟುವಟಿಕೆಯೂ ಆಗಿರುತ್ತದೆ. ಅದರಲ್ಲಿ ಒಂದು ದೊಡ್ಡದಾದ ಚಲನೆಯೂ ಇದೆ. ವಾಸ್ತವವಾಗಿ ಬರೆಯುವುದು ಅಂದರೆ ಅದು ದೊಡ್ಡದಾದ ಕೆಲಸವೂ ಆಗಿದೆ. ಅದನ್ನು ಬರೆಯುವ ಮೊದಲು ನಾವು ಮಾಡಿಕೊಳ್ಳುವ ಟಿಪ್ಪಣಿಗಳೂ ಒಂದು ಲ್ಯಾಬಿನಂತೆ ಕೆಲಸವನ್ನು ಮಾಡುತ್ತದೆ. ಅದರಲ್ಲಿ ಅನ್ವಯವೂ ಇರುತ್ತದೆ. ಪ್ರಮೇಯವೂ ಇರುತ್ತದೆ. ಹಾಗೂ ಅದರಲ್ಲಿ ಬೇರೆ ಬೇರೆ ಸಂಗತಿಗಳೂ ಸೇರಿಕೊಂಡಿರುತ್ತವೆ. ವಾಸ್ತವವಾಗಿ ಸಾಹಿತ್ಯದಲ್ಲಿ ಬರುವ ಬೇರೆ ಬೇರೆ ವಾದಗಳು ಬೇರೆ ಬೇರೆ ರೀತಿಯ

ವರ್ಗೀಕರಣಗಳೂ ಆಗಿರುತ್ತವೆ. ಸಾಹಿತ್ಯ ಮತ್ತು ಅದರ ಗುಣಾತ್ಮಕವಾದ ನಿಲುವುಗಳನ್ನು ನಾವು ನೋಡುವಾಗ ಅದನ್ನು ಹೇಗೆ ಅನ್ವಯಿಸುತ್ತೇವೆ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ವಾದಗಳನ್ನು ನಾವು ಬಳಸುವುದು ನಮ್ಮ ಗ್ರಹಿಕೆ ಮತ್ತು ನಮ್ಮ ಬದ್ಧತೆಯ ಕಾರಣಕ್ಕೆ ಎನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅದರಲ್ಲಿ ಇವುಗಳು ನಿರ್ದಿಷ್ಟವಾದ ಅನೇಕ ಸಂಗತಿಗಳನ್ನು ಹೇಳುತ್ತವೆ. ವಾದಗಳು ಮತ್ತು ಅವುಗಳ ಆವಶ್ಯಕತೆಯು ಅತ್ಯಂತ ಮಹತ್ವದ್ದೂ ಆಗಿದೆ. ಅದರಲ್ಲಿ ನಾವು ಅಧ್ಯಯನ ಮಾಡಲು ಬೇಕಾದ ಪರಿಕರವೂ ಇರುತ್ತದೆ. ಅದರಲ್ಲಿ ಬೇರೆ ಬೇರೆ ವಿಮರ್ಶಾತ್ಮಕವಾದ ಪರಿಕರವೂ ಇರುತ್ತದೆ. ಅದರಲ್ಲಿ ಮಾದರಿಗಳೂ ಇರುತ್ತವೆ.

ಸಮಾಜವಾದಿ ದೃಷ್ಟಿಕೋನವು ಯಾಕೆ ಬೇಕು ಎನ್ನವುದಕ್ಕೆ ಅದು ಉತ್ತರವನ್ನು ಕೊಡುತ್ತದೆ. ಸಮಾಜವಾದಿ ವಾಸ್ತವವಾದವು ಒಂದು ನಿಲುವನ್ನು ಹೇಗೆ ತಳೆಯುತ್ತದೆ ಎನ್ನುವುದನ್ನು ನೋಡಲು ನಮಗೆ ಅದರ ಸಾರವೇ ಅತ್ಯಂತ ಮುಖ್ಯವಾಗುತ್ತದೆ. ಅದರಲ್ಲಿ ಸಾಹಿತ್ಯ ಮತ್ತು ಅದರ ನಿರ್ವವಚನವೂ ಇರುತ್ತದೆ. ಸಾಹಿತ್ಯವನ್ನು ಸಮಾಜವಾದಿ ವಾಸ್ತವವು ನೋಡುವುದು ಮತ್ತು ಗ್ರಹಿಸುವುದು ಒಂದು ಕ್ರಮದಲ್ಲಿ. ಅದರಲ್ಲಿ ಸೃಜನಶೀಲತೆ ಮತ್ತು ಅದರ ಚಹರೆಗಳು ಭಿನ್ನವಾಗುತ್ತದೆ. ಅದೇ ರೀತಿಯಲ್ಲಿ ನವೋದಯವೂ ಕೂಡಾ ಸಾಹಿತ್ಯ ಮತ್ತು ಅದರ ನಿರ್ವಚನವು ಒಂದು ರೀತಿಯಲ್ಲಿ ಇರುತ್ತದೆ. ನವ್ಯ ಮತ್ತು ಅದರ ನಿರ್ವಚನವು ಬೇರೆ. ಆದರೆ ನಮಗೆ ಗೊತ್ತಿರಬೇಕಾದ ಅಂಶವೆಂದರೆ ಸಾಹಿತ್ಯ ಮತ್ತು ಅದರ ರಚನೆಯು ಲೇಖಕ ಮತ್ತು ಅವನ ಮನಸ್ಸನ್ನು ಹೇಳುತ್ತದೆ ಎಂಬುದು. ಈ ದೃಷ್ಟಿಯಿಂದ ಸಮಾಜಶಾಸ್ತ್ರೀಯವಾದ ವಿಮರ್ಶೆಯು ನಮಗೆ ಗೊತ್ತು ಗುರಿಯನ್ನು ಸೂಚಿಸುತ್ತದೆ. ಸಮಾಜ ಮತ್ತುಅದರ ಕ್ರಮವು ಅದಕ್ಕೆ ಹೆಚ್ಚು ಮುಖ್ಯ. ಸಮಾಜವನ್ನು ಇಟ್ಟುಕೊಂಡು ಅದು ಸಾಹಿತ್ಯವನ್ನು ಗ್ರಹಿಸುತ್ತದೆ. ಸಾಮಾಜಿಕ ಜೀವನ ಮತ್ತು ಅದರ ಪರಿಣಾಮಗಳು ಸಾಹಿತ್ಯದ ಮೇಲೆ ಆಗುತ್ತದೆ ಎನ್ನುವುದು ಅದರ ವಾದವಾಗಿದೆ. ಜೀವನ ಮತ್ತು ಅದರ ಪ್ರಾತಿನಿಧಿಕತೆಯು ಬಹಳ ಮುಖ್ಯವೆಂದು ಅದು ಹೇಳುತ್ತದೆ. ಜೀವನ ಮತ್ತು ಅದರ ಅನೇಕ ಸಂಗತಿಗಳನ್ನು ಸಾಹಿತ್ಯವು ಹೇಳುತ್ತದೆ ಮತ್ತು ಅದರಲ್ಲಿ ವ್ಯಕ್ತಿ ಮತ್ತು ಅವನ ಗ್ರಹಿಕೆಗಳು ಬಹಳ ಮುಖ್ಯವೆಂದು ಅದರ ಪ್ರತಿಪಾದನೆಯೂ ಆಗಿದೆ. ಸಾಹಿತ್ಯ ಮತ್ತು ಅದರ ಗುಣವನ್ನು ಹೇಳುವುದೂ ಕೂಡಾ ಸಮಾಜಶಾಸ್ತ್ರವೇ ಆಗಿದೆ. ಅದರಲ್ಲಿ ತಾರತಮ್ಯವೂ ಇರುತ್ತದೆ. ಸಾಹಿತ್ಯ ಮತ್ತು ಅದರ ತಾತ್ವಕತೆಯನ್ನು ಹೊರತುಪಡಿಸಿಕೊಂಡು ನಾವು ಯಾವುದನ್ನು ಹೇಳಲಾಗುವುದೂ ಇಲ್ಲ. ಲೇಖಕನು ಆಯ್ಕೆಯನ್ನು ಮಾಡುತ್ತಾನೆ. ಮತ್ತು ಅದನ್ನು ಬರೆಯುತ್ತಾನೆ. ಸಮಾಜ ಮತ್ತು ಕಲೆಯ ಪ್ರಶ್ನೆಯು ಈ ದೃಷ್ಟಿಯಿಂದ ಸಂಕೀರ್ಣವೂ ಆಗುತ್ತದೆ. ಅದರಲ್ಲಿ ಬರೀ ಕಲ್ಪನೆಯು ಮಾತ್ರವೇ ಇದೆ ಎಂದು ಹೇಳಬೇಕಾಗಿಯೂ ಇಲ್ಲ. ಅಂದರೆ ಯಾವುದೇ ಲೇಖಕ ಬರೀ ಕಲ್ಪನೆಯಿಂದ ಯಾವುದನ್ನೂ ಉತ್ಪಾದಿಸಲಾರ. ಯಾವುದೇ ಪ್ರತೀಕ ಮತ್ತು ಕಲ್ಪನೆಯು ಕೆಲವನ್ನು ಮಾತ್ರವೇ ಹೇಳುತ್ತದೆ. ಅದು ಕೆಲವನ್ನು ಸೂಚಿಸುತ್ತದೆ. ಲೇಖಕ ಮತ್ತು ಅವನ ಶಕ್ತಿಯು ಒಂದು ರೀತಿಯಲ್ಲಿ ಇರುತ್ತದೆ. ಅದರಲ್ಲಿ ಬರಹ ಮತ್ತು ಅದರ ಸಾಧ್ಯತೆಯೂ ಇರುತ್ತದೆ. ಕೆಲವು ಪ್ರತಿಮೆಗಳಿಗೆ ವೈಜ್ಞಾನಿಕತೆಯೂ ಇರುತ್ತದೆ ಎನ್ನುವುದನ್ನು ಮರೆಯಲು ಆಗುವುದೂ ಇಲ್ಲ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಚಾರವೂ ಇದೆ. ಅದನ್ನು ಹೀಗೆ ಹೇಳಬಹುದು: ಮಾರ್ಕ್ಸವಾದವು ರೊಮಾಂಟಿಕ್

ಪರಂಪರೆಯನ್ನು ನೋಡಿದ್ದು ಅದರ ಹಿಂದೆ ಇರುವ ತಾತ್ವಿಕತೆಯು ದೆಸೆಯಿಂದಲೇ. ಆದ್ದರಿಂದ ಅದಕ್ಕೆ ಸಮಾಜ ಮತ್ತು ಚರಿತ್ರೆಯು ಮುಖ್ಯವಾದವು. ಲೇಖಕ ಮತ್ತು ಅವನ ಶಕ್ತಿಯನ್ನು ಅವನ ಬರಹದಲ್ಲಿ ನೋಡುತ್ತೇವೆ ನಿಜ. ಆದರೆ ಅದರಲ್ಲಿ ವ್ಯಕ್ತಿ ಮತ್ತು ಅವನ ಪ್ರಜ್ಞೆಯ ಇರುತ್ತದೆ. ಅದರ ಅಗತ್ಯವೂ ಆದಾಗುತ್ತದೆ. ವ್ಯಕ್ತಿಯನ್ನು ನೋಡುವುದು ಮತ್ತು ಅವನ ಚೈತನ್ಯವನ್ನು ಗುರುತಿಸುವುದು ಮೂಲಭೂತವಾಗಿ ಒಂದು ಅಗತ್ಯವಾಗಿ ಮಾತ್ರವೇ. ಯಾವುದೇ ಕಲಾಕೃತಿಯಲ್ಲಿ ಬರುವ ಅನೇಕ ಸಂಕೇತಗಳು ಮೂಲತಃ ಕೆಲವು ತಾತ್ವಿಕತೆಯನ್ನು ಹೇಳುತ್ತದೆ. ಅದಲ್ಲಿ ಅದು ಮೂಲಭೂತವಾಗಿ ಒಂದು ಕ್ರಮ ಮಾತ್ರವೇ ಆಗಿರುತ್ತದೆ. ಬುಡಕಟ್ಟು ಸಮಾಜ ಮತ್ತು ಅದರ ಸ್ವರೂಪವು ಒಂದು ಬಗೆಯಲ್ಲಿ ಇತ್ತು. ಅದರಲ್ಲಿನ ಭಾವನೆಗಳು ಅವರ ಅಭಿವ್ಯಕ್ತಿಯನ್ನು ಹೇಳುತ್ತದೆ.

ಕಾರಂತರಿಗೆ ಕಾದಂಬರಿಯು ಹೆಚ್ಚು ಮುಖ್ಯವಾದ ಸಾಹಿತ್ಯ ರೂಪವಾಗಿತ್ತು. ಅದನ್ನು ಅವರು ಆ ರೀತಿಯನ್ನು ಅಳವಡಿಸಿಕೊಂಡರು.

ಕಾರಂತರೂ ಒಂದು ಜೀವನ ದರ್ಶನವನ್ನು ಹೇಳುತ್ತಾರೆ. ಅದರಲ್ಲಿ ಧರ್ಮ ಮತ್ತು ಕರ್ಮದ ಭಾಷೆಯೂ ಬೇರೆಯಾಗಿದೆ. ಅದು ಒಂದು ಕಾಲದ ಸನ್ನಿವೇಶವನ್ನು ಹೇಳುತ್ತದೆ. ಅದರಲ್ಲಿ ಒಂದು ಕಾಲದ ಸಮಾಜ ಮತ್ತು ಅದರ ಸಂಬಂಧದ ನಿರೂಪಣೆಯೂ ಇದೆ. ಅವರ ಕಾದಂಬರಿಗಳು ಪ್ರಯೋಗ ಮತ್ತು ಜೀವನದ ದೃಷ್ಟಿಕೋನವನ್ನು ಸೂಚಿಸುತ್ತದೆ. ಕಾರಂತರು ಅವರ ಬರಹಗಳಲ್ಲಿ ಚರಿತ್ರೆ ಮತ್ತು ಸಮಾಜವು ಬದಲಾಗುವುದನ್ನು ಹೇಳಿದರು. ಆದರೆ ಅದು ವ್ಯಕ್ತಿಯ ಅನುಭವವನ್ನು ಮಾತ್ರವೇ ಸೂಚಿಸುತ್ತದೆ. ಕಾರಂತರ ಕಣ್ಣಿನ ಮೂಲಕವೇ ಅದು ನಮಗೆ ಬಂದಿದೆ. ಕಾರಂತರ ದೃಷ್ಟಿಕೋನವು ಇದೆ. ಆದರೆ ಇದೇ ಮಾತನ್ನು ನಾವು ಕುಮಾರವ್ಯಾಸನಿಗೆ ಹೇಳಲು ಬರುವುದಿಲ್ಲ. ಅದು ಸಂಕೀರ್ಣವಾಗಿದೆ. ಅನೇಕ ಸಂಗತಿಗಳನ್ನು ಅದು ಹೇಳುವುದು ಭಿನ್ನವಾದ ಪ್ರಕ್ರಿಯೆಯಲ್ಲಿ. ಲಿರಿಕಲ್ ಕೆಲಸದಲ್ಲಿ ಕಲಾವಿದ ಮತ್ತು ಅವನ ಭಾವನೆಗಳು ಹಾಗೂ ಅವನ ನಿಲುವುಗಳು ಬೇರೆಯಾಗಬಹುದು. ಈ ಅರ್ಥದಲ್ಲಿ ಬೇರೆ ಬೇರೆ ಪ್ರಕಾರಗಳು ಬೇರೆ ಬೇರೆ ಮನೋಭಾವವನ್ನು ಹೇಳುತ್ತವೆ. ಮತ್ತು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಮಾದರಿಗಳು ಚಾಲ್ತಿಗೆ ಬರುತ್ತವೆ. ಬೇರೆ ಸನ್ನಿವೇಶಗಳು ಬೇರೆ ಸೃಜನಶೀಲತೆಯನ್ನು ಸೂಚಿಸುತ್ತವೆ. ಆದರೆ ನಾವು ಇಲ್ಲಿ ಮತ್ತೆ ಯೋಚಿಸಬೇಕಾದ ಕೆಲವು ಅಂಶಗಳೂ ಇವೆ. ಸಾಹಿತ್ಯ ಮತ್ತು ಸಮಾಜವನ್ನು ಕುರಿತು ಯೋಚಿಸುವಾಗ ಅದರೆ ಚರಿತ್ರೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಲೇಖಕರು ಹೇಗೆ ಒಂದು ಸನ್ನಿವೇಶಕ್ಕೆ ಪ್ರತಿಕ್ರಿಯೆಯನ್ನು ಕೊಡುತ್ತಾರೆ ಎನ್ನುವುದೂ ಇಲ್ಲಿ ಬಹಳ ಮುಖ್ಯವಾದ ಸಂಗತಿಯೂ ಆಗುತ್ತದೆ. ಸಾಮಾಜಿಕ ಜೀವನ ಮತ್ತು ಅದರ ವಿವರಣೆಯು ನಮಗೆ ಅತ್ಯಂತ ಮುಖ್ಯವಾದ ಸಂಗತಿಯೂ ಆಗಿರುತ್ತದೆ. ಯಾವುದೇ ಸಮಾಜದಲ್ಲಿ ಬೇರೆ ಬೇರೆ ಒತ್ತಡಗಳು ಕೆಲಸವನ್ನು ಮಾಡುತ್ತವೆ. ನಮ್ಮ ಆಲೋಚನೆ ಮತ್ತು ಅದರ ವಿವರಣೆಗಳು ಬಹಳ ಮುಖ್ಯವಾದುದು ಆಗುತ್ತದೆ. ಆಲೋಚನೆ ಮತ್ತು ಅದರ ಅಭಿವ್ಯಕ್ತಿಯನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಯಾವುದೇ ಒಂದು ವರ್ಗಕ್ಕೆ ಇರುವ ಸಾಮಾನ್ಯವಾದ ತಾತ್ವಿಕತೆ ಮತ್ತು ಅದರ ಸ್ವರೂಪವು ಒಂದು ರೀತಿಯಲ್ಲಿ ಇರುತ್ತದೆ. ಆದರೆ ಕಲಾವಿದನು ಅದನ್ನು ಸ್ವೀಕರಿಸುವುದು ಮತ್ತು ಅದನ್ನು

ಪುನಃ ಬೇರೆ ರೀತಿಯಲ್ಲಿ ರೂಪಿಸುತ್ತಾನೆ. ಹಾಗೂ ಅದನ್ನು ನಾವು ಲೇಖಕನ ತಾತ್ವಿಕತೆಯೆಂದು ಹೇಳುತ್ತೇವೆ. ಅವನ ಯಾವುದನ್ನು ಹೇಳುತ್ತಾನೆ ಮತ್ತು ಅದನ್ನು ಹೇಗೆ ಹೇಳುತ್ತಾನೆ ಅದರ ಸ್ವರೂಪವು ಯಾವ ಬಗೆಯದು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಒಂದು ವರ್ಗ ಮತ್ತು ಅದರ ಮನೋಭಾವವು ಒಂದು ಕೃತಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ಮತ್ತು ಅದರ ಪ್ರಭಾವವು ಸಣ್ಣದು ಅಲ್ಲವೆನ್ನುವುದನ್ನು ನಾವು ಒತ್ತುಕೊಟ್ಟು ನೋಡಬೇಕಾಗುತ್ತದೆ. ಅಂದರೆ ವ್ಯಕ್ತಿಯನ್ನು ಪ್ರಭಾವಿಸುವುದು ಆಯಾ ಸನ್ನಿವೇಶಗಳು. ಅವನ ಆಲೋಚನೆಯನ್ನು ಅದು ಹೇಳುತ್ತದೆ. ಅದು ಅಗತ್ಯವಾಗುತ್ತದೆ. ಆದರೆ ಇಲ್ಲಿ ಮತ್ತೆ ನೋಡಬೇಕಾದ ಅಂಶಗಳು ಇವೆ. ವ್ಯಕ್ತಿ ಮತ್ತು ಅವನ ಮನೋಭಾವವು ಒಂದು ದೃಷ್ಟಿಯಿಂದ ಬಹಳ ಮಹತ್ವದ್ದೂ ಆಗಿರುತ್ತದೆ. ಅಂದರೆ ಅವನ ಮನೋಭಾವವನ್ನು ಒಂದು ಸನ್ನಿವೇಶವು ಆಳುತ್ತದೆ. ಅದರಲ್ಲಿ ಅವನ ಪರಿಸರ ಮತ್ತು ಅವನ ಕುಟುಂಬ, ಅವನ ಕಾಲ ಮುಂತಾದವು ಬಹಳ ಮುಖ್ಯವಾಗುತ್ತದೆ. ಅಂದರೆ ಅದರ ಪ್ರಭಾವವು ಅವನ ಬರಹವನ್ನು ರೂಪಿಸುತ್ತದೆ. ಅದರಲ್ಲಿ ಮತ್ತೆ ಕೆಲವು ಅಂಶಗಳೂ ಇರುತ್ತವೆ. ಅಂದರೆ ಸಮಾಜ ಮತ್ತು ಅದರ ಪರಿಣಾಮವನ್ನು ನಾವು ಶೂನ್ಯವೆಂದು ಹೇಳಲು ಆಗುವುದೂ ಇಲ್ಲ. ಸಾಹಿತ್ಯವೆಂದರೆ ಅದು ಸಮಾಜದ ಪ್ರಶ್ನೆಯೂ ಆಗುತ್ತದೆ. ಅದರಲ್ಲಿ ಯಾವುದು ಅಗತ್ಯವಿದೆಯೋ ಅದನ್ನು ಮಾತ್ರವೇ ಲೇಖಕನು ಹೇಳುತ್ತಾನೆ. ಅದು ಅವನಿಗೆ ಮುಖ್ಯವೆಂದು ಕಾಣಬೇಕು. ಲೇಖಕ ಮತ್ತು ಅವನ ಸಾಮಾಜಿಕ ರಾಜಕೀಯವಾದ ಸಿದ್ಧಾಂತಗಳು ಅವನ ಬರಹವನ್ನು ಸೂಚಿಸುತ್ತದೆ. ಒಂದು ಚರಿತ್ರೆ ಮತ್ತು ಅದರ ನಿರ್ಣಯವು ಲೇಖಕನನ್ನು ಪ್ರಭಾವಿಸುತ್ತದೆ. ಅದು ಅವನ ಮೇಲೆ ಬೀರುವ ಪ್ರಭಾವವನ್ನು ನಾವು ವಿವರಿಸುವ ಅಗತ್ಯವು ಇಲ್ಲವೆಂದು ಹೇಳಬೇಕಾಗಿಲ್ಲ. ವ್ಯಕ್ತಿ ಮತ್ತು ಅವನ ಸಮಾಜವು ಅವನ ಮೇಲೆ ಉಂಟು ಮಾಡುವ ಪ್ರಭಾವವು ಸಣ್ಣದು ಅಲ್ಲ. ಅದರಲ್ಲಿ ಇಂತಹುದು ಮಾತ್ರವೇ ಪ್ರಭಾವವನ್ನು ಬೀರಿದೆ ಎಂದು ಹೇಳಲು ಬರುವುದೂ ಇಲ್ಲ. ಪ್ರಭಾವಕ್ಕೆ ಬೇರೆ ಬೇರೆ ಆಯಾಮವು ಇರುತ್ತದೆ. ಅದರಲ್ಲಿ ಒಂದು ಸನ್ನಿವೇಶವು ಮಾತ್ರವೇ ಇದೆ ಎಂದು ಹೇಳಲು ಆಗುವುದೂ ಇಲ್ಲ. ಆದರೆ ಸಮಾಜಶಾಸ್ತ್ರೀಯವಾದ ದೃಷ್ಟಿಕೋನವನ್ನು ಹೊರಗಟ್ಟಲು ಅನೇಕ ಸಿದ್ಧಾಂತಗಳು ಬಂದಿವೆ. ಅದನ್ನು ಬೇಕೆಂದೇ ಚಾಲ್ತಿಗೆ ತರಲಾಯಿತು. ಅದರಲ್ಲಿ ವರ್ಗಗಳ ನಿರಾಕರಣೆಯೂ ಇದೆ. ಅದರಲ್ಲಿ ವಾಸ್ತವವಾಗಿ ಅನೇಕ ಸಮಸ್ಯೆಗಳು ಇವೆ. ಇಲ್ಲಿ ಹೇಳಬೇಕಾದ ಮತ್ತೆ ಕೆಲವು ಅಂಶಗಳನ್ನು ನಾವು ನೋಡಬೇಕಾಗುತ್ತದೆ. ಕೆಲವರು ರಾಷ್ಟ್ರವನ್ನು ಮಾತ್ರವೇ ಕೇಂದ್ರವಾಗಿ ಇರಿಸಿಕೊಂಡರು. ಮತೆ ಕೆಲವರು ಕಾಲವನ್ನು ಗಣನೆಗೆ ತರದೆ ಅದನ್ನು ಬರೀ ಕಲೆಯೆಂದು ಮಾತ್ರವೇ ಗುರುತಿಸುವ ಪ್ರಯತ್ನವನ್ನು ಮಾಡುತ್ತಾರೆ. ಅದರ ಉದ್ಧೇಶವು ಅತ್ಯಂತ ಸೀಮಿತವಾದ್ದೂ ಆಗಿದೆ. ಇನ್ನು ಕೆಲವರಿಗೆ ಪ್ರದೇಶ ಮಾತ್ರವೇ ಕಾಣಿಸಿತು. ಮತ್ತೊಂದಿಷ್ಟು ಜನರು ಪ್ರಜಾಪ್ರಭುತ್ವ ಮತ್ತು ಅದರ ಉದಾರವಾದವನ್ನು ಮಾತ್ರವೇ ಗ್ರಹಿಸಿದರು. ಅದರ ಮೂಲಕವೇ ಕೆಲವು ಸ್ಥಾಪಿತವಾದ ಹಿತಾಸಕ್ತಿಯನ್ನು ಗುರುತಿಸಿದರು. ಮೌಲ್ಯ ಮತ್ತು ಅದರ ಪ್ರಶ್ನೆಯನ್ನು ಕೆಲವರು ಸೀಮಿತವಾಗಿ ನೋಡುವ ಯತ್ನವನ್ನು ಮಾಡಿದರು. ಜನರು ಮತ್ತು ಅವರ ಮೌಲ್ಯವು ಯಾವ ಬಗೆಯದು ಎನ್ನುವುದೂ ಅಷ್ಟೇ ಮುಖ್ಯ. ಬರೀ ನಮ್ಮ ಎದುರು ಇರುವ ವಾಸ್ತವವನ್ನು ಮಾತ್ರವೇ ನೋಡಿಕೊಂಡು ಅದನ್ನು ವಿವರಿಸುವುದು ಸರಿಯಾದ ಕ್ರಮವಲ್ಲ. ಅದರಲ್ಲಿ ಯಾವುದು

ಹಿನ್ನೆಲೆಯು ಆಗಿದೆ ಎಂದೂ ನೋಡಬೇಕಾಗುತ್ತದೆ. ಅಂದರೆ ಇರುವ ವಾಸ್ತವವು ಕಣ್ಣಿಗೆ ಕಾಣಿಸುತ್ತದೆ. ಆದರೆ ಇದರ ಸ್ವರೂಪವನ್ನು ನಾವು ಮೇಲು ನೋಟದೊಂದಿಗೆ ಮಾತ್ರವೇ ವಿವರಿಸುವ ಅಗತ್ಯವಿಲ್ಲ.

ಒಂದು ಸಾಮಾನ್ಯೀಕೃತವಾದ ಹೇಳಿಕೆಯು ಯಾವ ರೀತಿಯ ಸಹಾಯವನ್ನು ಮಾಡುವುದಿಲ್ಲ. ಲೇಖಕ ಮತ್ತು ಅವನ ಉದ್ದೇಶವನ್ನು ನೋಡದೆ ಯಾವುದೇ ತೀರ್ಮಾನವನ್ನು ನಾವು ಮಾಡಲು ಬರುವುದೇ ಇಲ್ಲ. ವಾಸ್ತವ ಮತ್ತು ಅದರ ಸಾಧ್ಯತೆಗಳು ಬೇರೆ ಇರುತ್ತವೆ. ಅದರ ಕಾರಣಗಳೂ ಭಿನ್ನವಾಗುತ್ತವೆ. ವಾಸ್ತವವೆಂದು ಯಾವುದನ್ನು ಹೇಳುತ್ತೇವೆಯೋ ಅದರ ಅರ್ಥಗಳು ಭಿನ್ನವೂ ಆಗಿದೆ. ಅದರ ಹಿಂದೆ ಚರಿತ್ರೆಯು ಇದೆ. ಆ ಚರಿತ್ರೆಯನ್ನು ಲೇಖಕನು ಹೇಗೆ ಗ್ರಹಿಸುತ್ತಾನೆ ಎನ್ನುವುದೂ ಅಷ್ಟೇ ಮುಖ್ಯ. ವಾಸ್ತವ ಮತ್ತು ಅದರ ಆಶಯವನ್ನು ನಾವು ವಿಸ್ತರಿಸಲು ಸಾಧ್ಯ. ಅದರ ಬೇರೆ ಸಮಾಜದಲ್ಲಿ ಇದೆ. ಕಾರಂತರು ಬರೆದಿರುವ ಚೋಮನದುಡಿ ಕೃತಿಯನ್ನು ಬರೀ ಕಾದಂಬರಿಯಾಗಿ ನೋಡದೆ ಅದನ್ನು ಒಂದು ಸಮಾಜದ ಸಮಸ್ಯೆ ಎಂದು ನೋಡಿದರೆ ಅದರ ಅರ್ಥವು ಬೇರೆಯಾಗುತ್ತದೆ. ಚೋಮನು ರಾಷ್ಟ್ರೀಯ ನಾಯಕನು ಅಲ್ಲ. ಆದರೆ ಅವನಿಗೆ ಸಮಸ್ಯೆಯು ಇದೆ. ಅದರಲ್ಲಿ ಅವನ ವ್ಯಕ್ತಿತ್ವ ಮತ್ತು ಅದರ ಸ್ವರೂಪಗಳು ಇವೆ. ಈ ಅರ್ಥದಲ್ಲಿ ಕಾರಂತರು ಒಬ್ಬ ಚೋಮನ ಮೂಲಕ ಒಂದು ಸಮಾಜದ ಸಮಸ್ಯೆಯನ್ನು ಹೇಳುತ್ತಿದ್ದಾರೆ. ಸಾಮಾಜಿಕ ಜೀವನ ಮತ್ತು ಅದರ ಸಮಸ್ಯೆಗಳನ್ನು ಕಾರಂತರು ಹೇಳುತ್ತಾ ಬಂದಿದ್ದಾರೆ. ರಾಷ್ಟ್ರೀಯತೆ ಮತ್ತು ಅದರ ವಿವಿಧ ವರ್ಗಗಳನ್ನು ಕಾರಂತರು ಭಿನ್ನವಾದ ನೆಲೆಯಲ್ಲಿ ಶೋಧಿಸಿದ್ದಾರೆ. ವರ್ಗಗಳು ಮತ್ತು ಅವುಗಳ ವಿವಿಧ ಸಂಸ್ಕೃತಿಗಳು ಕಾರಂತರಿಗೆ ಹೆಚ್ಚು ಮುಖ್ಯವಾಗಿದೆ. ಅವುಗಳನ್ನು ಕಾರಂತರು ಒಂದು ಚರಿತ್ರೆಯು ಮೂಲಕವೇ ಕಂಡುಕೊಳ್ಳಲು ಯತ್ನವನ್ನು ಮಾಡುತ್ತಾರೆ. ರಾಷ್ಟ್ರ ಮತ್ತು ಅದರ ಒಳಗೆ ಇರುವ ತಾರತಮ್ಯವನ್ನು ಕಾರಂತರು ಅತ್ಯಂತ ಯಶಸ್ವಿಯಾಗುವಂತೆ ಕಾರಂತರು ಕಾದಂಬರಿಗಳಲ್ಲಿ ಹೇಳುತ್ತಾರೆ. ಸಂಕಪ್ಪಯ್ಯ, ಕೆಂಚ, ಬೆಳ್ಳಿ, ಸೂರ, ಕೊಕ್ಕರ್ಣೆ ಶೀನ, ಮಂಜುಳೆ ಹೀಗೆ ಅವರ ಕಾದಂಬರಿಗಳಲ್ಲಿ ಅನೇಕ ಪಾತ್ರಗಳು ಬರುತ್ತವೆ. ಮತ್ತು ಆ ಪಾತ್ರಗಳು ಬಂದದ್ದು ರಾಷ್ಟ್ರ ಮತ್ತು ಅದರ ಚರ್ಚೆಯ ಸಂದರ್ಭದಲ್ಲಿ ಎಂದು ಮನಗಾಣಬೇಕಾಗುತ್ತದೆ. ಆದರೆ ಈ ಪಾತ್ರಗಳು ಕೇಲವು ರೀತಿಯ ಚಲನೆಯನ್ನು ಹೇಳುತ್ತವೆ. ಕೆಲವು ಮೊದಲಿನ ಸ್ಥಿತಿಯಲ್ಲಿ ಇಲ್ಲ. ಸೂರ ಮುಂತಾದವರು ಇರುವುದು ಹಳೆಯ ಸಮಾಜದಲ್ಲಿ ಅಲ್ಲ. ಅವರ ಜೀವನ ಮತ್ತು ಅವರ ನೋಟಗಳು ಬದಲಾಗಿವೆ. ಕುಡಿಯರ ಕೂಸು ಕಾದಂಬರಿಯಲ್ಲಿ ಬರುವ ಕೆಂಚ ಬೂದ ಮುಂತಾದವರ ಜೀವನವನ್ನು ನಾವು ಮಧ್ಯಕಾಲೀನ ಸಮಾಜದಲ್ಲಿ ನೋಡಲು ಬರುವುದೂ ಇಲ್ಲ. ಆದರೆ ಜೀವನಕ್ಕೆ ಒಂದು ಚರಿತ್ರೆಯು ಇದೆ. ಅದರಲ್ಲಿ ಅವರ ವರ್ತಮಾನವೂ ಇದೆ. ವಿಲಾಯಿತಿಯವರು ಬಂದಿದ್ದಾರೆ. ಮತಾಂತರ ಮಾಡುತ್ತಾರೆ. ಅವರದು ಒಂದು ಬಗೆಯ ಶೋಷಣೆಯೇ. ಆದರೆ ಅವರ ಶೋಷಣೆ ಮತ್ತು ಅವರು ಒಡ್ಡುವ ಆಮಿಷವು ಬೇರೆ ಬೇರೆ ಕಾರಣಗಳಿಂದ ಸೆಳೆಯುತ್ತದೆ. ಕುಡಿಯರ ಬಡತನ, ಅವರ ಜಾತಿ, ಅವರ ನಂಬಿಕೆಗಳನ್ನು ಮಿಶಿನರಿಗಳು ಬಳಸಿಕೊಳ್ಳುತ್ತವೆ. ತಿರುಮಲ ಭಟ್ಟನ ದರ್ಪವು ಮತ್ತೊಂದು ಬಗೆಯದು. ಅವನೂ ಸಾಮಾನ್ಯನಲ್ಲ. ಅವನಿಗೆ ಬೇರೆ ಆಸಕ್ತಿಯೂ ಇದೆ. ಮಾರುಕಟ್ಟೆ ಮತ್ತು ಅದರ ಧಾರಣೆಯು ಅವನಿಗೆ ಗೊತ್ತಿದೆ. ಚರಿತ್ರೆ

ಮತ್ತು ಅದರ ಸಮಸ್ಯೆಗಳು ವ್ಯಕ್ತಿಯನ್ನು ಹೇಗೆ ರೂಪಿಸುತ್ತವೆ ಎನ್ನುವುದಕ್ಕೆ ಕಾರಂತರ ಕಾದಂಬರಿಗಳಲ್ಲಿ ಹೇರಳವಾದ ಉದಾಹರಣೆಗಳು ಇವೆ.

ಆದರೆ ಇದೇ ಸಮಸ್ಯೆಯನ್ನು ಮರಳಿಮಣ್ಣಿಗೆ ಕಾದಂಬರಿಯ ಲಚ್ಚನು ಎದುರಿಸುವುದಿಲ್ಲ. ಸಂದರ್ಭ ಮತ್ತು ವ್ಯಕ್ತಿಗಳು ಬದಲಾಗಿದ್ದಾರೆ. ಆದರೆ ಸಾಹಿತ್ಯ ಮತ್ತು ಅದರ ಪ್ರಶ್ನೆಗಳನ್ನು ನೋಡುವುದು ಮತ್ತು ಗ್ರಹಿಸುವುದು ಮುಖ್ಯವಾಗಿ ನಾವು ಒಂದು ದೃಷ್ಟಿಯಲ್ಲಿ ಮಾತ್ರವೇ. ಆದ್ದರಿಂದ ಸಮಸ್ಯೆಯು ಆಗಿದೆ. ಅದರಲ್ಲಿ ಸಾಹಿತ್ಯವನ್ನು ನಾವು ಅದರ ಸಾಮಾಜಿಕವಾದ ಕಾರ್ಯದ ಹಿನ್ನೆಲೆಯಲ್ಲಿ ನೋಡುವುದು ಅತ್ಯಂತ ಕಡಿಮೆ. ಆಲೋಚನೆಯನ್ನು ನಾವು ಹೆಚ್ಚು ನಿಗದಿ ಮಾಡುತ್ತೇವೆ. ಅದನ್ನು ಸೀಮಿತವಾಗಿ ಗ್ರಹಿಸುವ ಪ್ರಯತ್ನವನ್ನು ಮಾಡುತ್ತೇವೆ. ಹಾಗೆ ನೋಡುವುದಿದ್ದರೆ ಪ್ರಜಾಪ್ರಭುತ್ವ ಮತ್ತು ಅದರ ದೃಷ್ಟಿಕೋನವನ್ನು ಉದಾರವಾಗಿ ಗ್ರಹಿಸಿದ್ದು ಹೆಚ್ಚು. ಮತ್ತು ಜೀವನ ಮತ್ತು ಅದರ ಉದಾತ್ತವಾದ ಮೌಲ್ಯವನ್ನು ಹೇಳುವುದೇ ಭಿನ್ನವಾದ ರೀತಿಯಲ್ಲಿ ಮನುಷ್ಯನು ಉದಾರನಾಗಬೇಕು ಮತ್ತು ಸಾಮಾನ್ಯರನ್ನು ಹೆಚ್ಚು ಪ್ರೀತಿಯಿಂದ ಕಾಣಬೇಕು ಎನ್ನುವುದು ಅದರ ನಿಲುವು. ಆದರೆ ಉದಾತ್ತತೆಯೆಂದರೆ ಏನು ಎನ್ನುವುದೇ ನಿಜವಾದ ಸಮಸ್ಯೆಯೂ ಆಗುತ್ತದೆ. ಯಾವುದು ನಿಜವಾದ ಅರ್ಥದಲ್ಲಿ ಮಾನವೀಯವಾದ ಮೌಲ್ಯ ಎನ್ನುವುದೇ ನಿಜವಾದ ಸಮಸ್ಯೆಯು ಆಗುತ್ತದೆ. ಆದರೆ ಅದನ್ನು ನೋಡುವಾಗ ನಾವು ಅನೇಕ ರೀತಿಯಲ್ಲಿ ಸಮಸ್ಯೆಯನ್ನು ಅನುಭವಿಸುತ್ತೇವೆ. ಪ್ರತಿಯೊಂದು ವರ್ಗವೂ ತನ್ನದೇ ಆದ ಮನೋಸ್ಥಿತಿಯನ್ನು ಅವಲಂಬಿಸುತ್ತದೆ. ಜೀವನ ಮತ್ತು ಅದರ ಅರ್ಥವನ್ನು ಕೂಡಾ ನಿರ್ಧರಿಸುವುದು ಕೂಡಾ ಅದೇ. ಆರ್ಥಿಕತೆ ಮತ್ತು ಸಮಾಜವೆನ್ನುವುದು ಈ ಕಾರಣದಿಂದ ಅತ್ಯಂತ ಮಹತ್ವದ್ದೂ ಆಗಿದೆ. ಅಂದರೆ ಅದು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಅಂದರೆ ಸಾಮಾಜಿಕ ಜೀವನ ಮತ್ತು ಅದರ ಸಾಧ್ಯತೆಗಳು ಯಾವಾಗಲೂ ನಮಗೆ ನಿರ್ದಿಷ್ಟವಾದ ಅರ್ಥವನ್ನು ಕೊಡುತ್ತದೆ. ಆದರೆ ಅನೇಕರು ಜೀವನ ಮತ್ತು ಅದರ ವರ್ಗವನ್ನು ತಿರಸ್ಕರಿಸಿದರು. ಮತ್ತು ಅದರ ಪರಿಣಾಮವಾಗಿ ಕೆಲವನ್ನು ಅವರು ನೋಡಿದ ಕ್ರಮವು ಬೇರೆಯಾಗುತ್ತದೆ. ಅಂದರೆ ಅವರು ಜೀವನವನ್ನು ನೋಡುವುದು ಮತ್ತು ಗ್ರಹಿಸಿಸುವುದು ಬರೀ ಒಂದು ಸ್ವಾಯತ್ತವಾದ ಸಂಗತಿಯೆನ್ನುವ ಹಾಗೆ. ಅಂದರೆ ಅದರಲ್ಲಿಯೇ ಅವರಿಗೆ ಅರ್ಥ ಪೂರ್ಣತೆಯು ಕಾಣಿಸುತ್ತದೆ. ಸಮಾಜ ಮತ್ತು ಅದರ ಕುರಿತಾದ ಸಾಮಾಜಿಕ ಸಿದ್ಧಾಂತಗಳನ್ನು ಹೊರಗಟ್ಟುವುದು ಹೇಗೆ ಎನ್ನುವುದು ಮಾತ್ರವೇ ಅವರಿಗೆ ಮುಖ್ಯವಾಯಿತು. ಮತ್ತೆ ಕೆಲವರು ರಾಷ್ಟ್ರ ಮತ್ತು ಅದರ ಸಾಹಿತ್ಯವನ್ನು ಮಾತ್ರವೇ ಬಹಳ ಮುಖ್ಯವೆಂದು ಭಾವಿಸಿದರು.

ಸಾಹಿತ್ಯ ಮತ್ತು ಅದರ ಸಾಮಾಜಿಕ ಸಂಬಂಧವನ್ನು ನೋಡದೆ ಅನೇಕರು ಬರೀ ಸಾಹಿತ್ಯವನ್ನು ಮಾತ್ರವೇ ಕೇಂದ್ರಮಾಡಿಕೊಂಡರು. ಪ್ರಜಾಪ್ರಭುತ್ವ ಮತ್ತು ಅದರ ಪ್ರಶ್ನೆಗಳನ್ನು ಎತ್ತಿಕೊಂಡು ಅನೇಕರು ಮತ್ತೆ ವಾದ ವಿವಾದವನ್ನು ಮಾಡಿದರು. ಸಾಹಿತ್ಯವನ್ನು ಉದಾರತೆಯೊಂದಿಗೆ ವಿವರಿಸುವ ಪ್ರಯತ್ನವನ್ನು ಮಾಡಿದರು. ಮತ್ತೆ ಅವರು ಅದನ್ನು ನೋಡಿದ್ದು ಮತ್ತು ವಿವರಿಸಿದ್ದು ಬರೀ ಒಂದು ಉಪಯೋಗವನ್ನು ಮಾತ್ರವೇ. ಪ್ರಜಾಪ್ರಭುತ್ವ ಮತ್ತು ಅದರ ಉದಾರತೆಯು ಮಾತ್ರವೇ ಸಾಕಾಗುವುದಿಲ್ಲ. ಅದರಲ್ಲಿ ಬೇರೆ ಪ್ರಶ್ನೆಯೂ ಇದೆ. ಮನುಷ್ಯ ಮತ್ತು ಅವನ ಮೌಲ್ಯವೆನ್ನುವುದು ಬರೀ ಒಂದು ಸೀಮಿತವಾದ ಸಂಗತಿಯು

ಮಾತ್ರವೇ ಆಗಿಲ್ಲ. ಮನುಷ್ಯ ಮತ್ತು ಅವನ ಜೀವನದ ಮೌಲ್ಯವನ್ನು ನಾವು ಸೀಮಿತವಾಗಿ ನೋಡಲು ಸಾಧ್ಯವೇ ಇಲ್ಲ. ಅನೇಕ ಸರ್ತಿ ಲೇಖಕ ಮತ್ತು ಅವನ ನಂಬಿಕೆಯನ್ನು ನೋಡಬೇಕಾಗುತ್ತದೆ. ಲೇಖಕ ಮತ್ತು ಅವನ ಸಾಧ್ಯತೆಗಳು ರೂಪುಗೊಳ್ಳುವುದು ಮತ್ತು ಅದು ವಿಸ್ತಾರವಾಗುವುದು ನಿಜವಾದ ಒಂದು ಸಾಮಾಜಿಕವಾದ ಸ್ಥಿತಿಯಿಂದ. ವ್ಯಕ್ತಿ ಮತ್ತು ಅವನ ಮೌಲ್ಯಗಳು ಒಂದು ಸಾಧಾರಣವಾದ ಸ್ಥಿತಿಯು ಅಲ್ಲವಾಗಿದೆ. ಅದರಲ್ಲಿ ಅನೇಕ ಅಂಶಗಳು ಸೇರಿಕೊಳ್ಳುತ್ತವೆ. ಆದರೆ ನಮಗೆ ಹೆಚ್ಚು ಅವಕಾಶವನ್ನು ಕೊಡುವುದು ಸಾಹಿತ್ಯದಲ್ಲಿ ವಾಸ್ತವತೆಯು ಮಾತ್ರವೇ ಆಗಿದೆ. ಅದನ್ನು ನಾವು ನೋಡಲು ಹೆಚ್ಚು ಕಷ್ಟ ಪಡಬೇಕಾಗಿಲ್ಲ. ಅದರಲ್ಲಿ ನೇರವಾದ ನಿಲುವು ಇರುತ್ತದೆ. ಆದರೆ ಉಳಿದ ಪ್ರಕಾರಗಳು ನಮಗೆ ವಕ್ರತೆಯನ್ನು ಹೇಳುತ್ತವೆ. ವಕ್ರತೆಯು ನಮಗೆ ಕೊಡುವ ಅನುಭವಗಳು ಬೇರೆ. ಆದರೆ ಅದನ್ನು ಸಮಾಜ ಮತ್ತು ಅನ್ಯವಾದ ನಿಲುವು ಎಂದು ಭಾವಿಸಬಾರದು.

ಮನುಷ್ಯ ಮತ್ತು ಅವನ ಆಗತ್ಯಗಳು ಯಾವಾಗಲೂ ಬೇರೆಯಾಗಿರುತ್ತದೆ. ಆದರೆ ಅದನ್ನು ಸಮಾಜದಿಂದ ಬೇರೆ ಎಂದು ತಿಳಿಯಬಾರದು. ವಾಸ್ತವವನ್ನು ಇಟ್ಟುಕೊಂಡು ನಾವು ವಾಸ್ತವವಾದವನ್ನು ನೋಡಬೇಕಾಗುತ್ತದೆ. ವಾಸ್ತವವಾದ ಮತ್ತು ಅದರ ನಿಲುವನ್ನು ನಾವು ವಿಮರ್ಶೆಯಲ್ಲಿ ವಿವರಿಸಲು ಸಾಧ್ಯ. ಅದರ ಬೇರು ಸಮಾಜದಲ್ಲಿ ಇದೆ. ಅದಕ್ಕೂ ಚರಿತ್ರೆಯ ಆಗು ಹೋಗುಗಳಿಗೂ ನೇರವಾದ ಸಂಬಂಧವಿದೆ. ಕಾರಂತರ ಚೋಮನದುಡಿ ಮತ್ತು ಅದರ ನಿಲುವನ್ನು ನಾವು ಆ ಕಾಲದ ಅಗತ್ಯ ಮತ್ತು ಆ ಕಾಲದ ಪ್ರಶ್ನೆಯಾಗಿಯೂ ನೋಡಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಚೋಮನದುಡಿಯಲ್ಲಿ ಬರುವ ಚೋಮನು ರಾಷ್ಟ್ರ ಮತ್ತು ಅದರ ಉತ್ತರಾಧಿಕಾರಿಯು ಅಲ್ಲ. ಅವನಿಗೆ ಕೆಲವು ಸಮಸ್ಯೆಯು ಇದೆ. ಮತ್ತು ಆ ಸಮಸ್ಯೆಯನ್ನು ಅವನು ನೋಡುವುದು ತನ್ನ ಜೀವನ ಮತ್ತು ಅದರ ವಿನ್ಯಾಸದಲ್ಲಿ ಎಂದು ಮನಗಾಣಬೇಕಾಗುತ್ತದೆ. ಸಾಹಿತ್ಯವು ವಿಕಾಸದ ಹಾದಿಯನ್ನು ಹೇಳುತ್ತದೆ. ಅದು ಚರಿತ್ರೆ ಮತ್ತು ಸಮಾಜವು ಬೆಳೆದು ಬಂದ ಬಗೆಯನ್ನು ನಿರೂಪಿಸುತ್ತದೆ. ರಾಷ್ಟ್ರ ಮತ್ತು ಅದರ ಸಂಗತಿಯನ್ನು ಇಟ್ಟುಕೊಂಡು ಅದರ ಸ್ವರೂಪವನ್ನು ಸಾಹಿತ್ಯಕ್ಕೆ ಅನ್ವಯಿಸುವುದು ಸಾಧ್ಯವೇ ಎನ್ನುವುದು ಮುಖ್ಯವಾದ ಪ್ರಶ್ನೆಯು ಆಗಿದೆ. ಅದನ್ನು ಹಾಗೆ ಹೇಳುವುದು ಸಮರ್ಥನೀಯವಲ್ಲ. ಸಾಹಿತ್ಯವು ಅದರದೇ ಆಗಿರುವ ಅನನ್ಯತೆಯನ್ನು ಹೊಂದಿರುತ್ತದೆ. ಅದನ್ನು ಅದರ ವಿಕಾಸದಲ್ಲಿಯೇ ನೋಡಬೇಕಾಗುತ್ತದೆ. ರಾಷ್ಟ್ರ ಮತ್ತು ಅದರ ಒಳಗಡೆಗೆ ಇರುವ ಬೇರೆ ಬೇರೆ ವರ್ಗಗಳನ್ನು ನಾವು ಅಂಗೀಕರಿಸಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಸಾಹಿತ್ಯ ಮತ್ತು ಅದರ ಅರ್ಥವು ಬೇರೆಯಾಗುತ್ತದೆ. ಅದರಲ್ಲಿ ಭಿನ್ನವಾದ ನೆಲೆಗಳು ಇರುತ್ತದೆ. ಚರಿತ್ರೆ ಮತ್ತು ಅದರ ಆಚೆಗೆ ಇರುವ ಸಂಗತಿಗಳು ಎಂದು ವರ್ಗವನ್ನು ಹೇಳಲು ಬರುವುದೂ ಇಲ್ಲ.

ಅದು ನಿರ್ದಿಷ್ಟವಾದ ಅರ್ಥವನ್ನು ಹೊಂದಿರುತ್ತದೆ. ವರ್ಗವೂ ಒಂದು ಅರ್ಥದಲ್ಲಿ ನಿರ್ದಿಷ್ಟವಾದ ಒಂದು ಚರಿತ್ರೆಯನ್ನು ಹೇಳುತ್ತದೆ. ಅದರಲ್ಲಿ ಸಮಾಜ ಮತ್ತು ಅದರ ಸ್ವರೂಪವೂ ಇರುತ್ತದೆ. ಅದರಲ್ಲಿ ಆ ರೀತಿಯಲ್ಲಿ ನೋಡುವಾಗ ಅದರ ಅರ್ಥವನ್ನು ನಾವು ಸಮಾಜ ಮತ್ತು ಅದರ ಸೃಷ್ಟಿಯಲ್ಲಿಯೂ ನೋಡಬೇಕಾಗುತ್ತದೆ. ಸಮಾಜ ಮತ್ತು ಅದರ ಅರ್ಥವನ್ನು

ಈ ದೃಷ್ಟಿಯಿಂದ ಭಿನ್ನವಾಗಿಯೂ ನೋಡಬೇಕಾಗುತ್ತದೆ. ಅಮದರೆ ಅದು ಸಮಾಜವನ್ನು ಹೇಳುತ್ತದೆ. ಸಮಾಜವೇ ಒಂದು ಅರ್ಥದಲ್ಲಿ ಸಾಹಿತ್ಯವನ್ನು ಸೂಚಿಸುತ್ತದೆ. ಅದರ ನಿಲುವು ಈ ದೃಷ್ಟಿಯಿಂದ ಸಾಮಾಜಿಕ ಸ್ವರೂಪವನ್ನು ಅದರ ಅರ್ಥದಲ್ಲಿ ನೋಡುವಾಗ ಅದರ ಇತಿಹಾಸ ಮತ್ತು ಅದರ ಅಗತ್ಯಗಳೂ ಬಹಳ ಮುಖ್ಯವಾಗುತ್ತದೆ.

ಅನೇಕ ಸಾಮಾಜಿಕ ಚಳುವಳಿಗಳು ಒಂದು ಕಾರಣಕ್ಕೆ ಹುಟ್ಟಿರುತ್ತವೆ. ಚಳುವಳಿಗಳು ಸಾಮಾಜಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದರ ಪರಿಣಾಮವೂ ಸಾಹುತ್ಯದ ಮೇಲೆ ಆಗುತ್ತದೆ. ಅಂದರೆ ಸಾಹಿತ್ಯವನ್ನು ಅನೇಕ ಸಂದರ್ಭದಲ್ಲಿ ಚಳುವಳಿಗಳು ನಿರ್ದೇಶನ ಮಾಡುತ್ತವೆ. ಅದರ ಸ್ವರೂಪವನ್ನು ನಿರ್ಧರಿಸುತ್ತವೆ. ಸಮಾಜವು ತನಗೆ ಯಾವುದು ಅಗತ್ಯವಾಗಿದೆಯೋ ಅದನ್ನು ಉತ್ಪಾದಿಸುತ್ತವೆ. ಅದರಲ್ಲಿ ಅತ್ಯಂತ ಮುಖ್ಯವಾಗಿ ನಾವು ಗಮನಿಸಬೇಕಾದ್ದು ಅದರ ನಿಜವಾದ ಅಥೆಂಟಿಕ್ ಆದ ಆಸಕ್ತಿಯನ್ನು ಮಾತ್ರವೇ. ಸೌಂದರ್ಯ ಮತ್ತು ಅದರ ಅರ್ಥ ಪೂರ್ಣತೆಯನ್ನು ಈ ದೃಷ್ಟಿಯಿಂದ ನಾವು ಗಮನಿಸಬೇಕಾಗುತ್ತದೆ. ಆದರೆ ಯಾವುದನ್ನು ಈವತ್ತು ನಿಜವಾದ ಕಲಾತ್ಮಕವಾದ ಸೌಂದರ್ಯವೆಂದು ಹೇಳುತ್ತೇವೆಯೋ ಅದು ಕೆಲವು ಸಂಗತಿಗಳನ್ನು ಮಾತ್ರವೇ ಹೇಳುವುದೂ ಇಲ್ಲ. ಅದರಲ್ಲಿಯೂ ಸಾಹಿತ್ಯದಲ್ಲಿ ಬರುವ ವಾಸ್ತವವಾದ ಮಾತ್ರವೇ ಸಾಹಿತ್ಯ ಮತ್ತು ಅದರ ಗುಣಾತ್ಮಕವಾದ ಮೌಲ್ಯವನ್ನು ನಿರ್ಧರಿಸಲು ಇರುವ ಮಾನದಂಡವಾಗಬೇಕಾಗಿಲ್ಲ. ಅದು ನಿಚ್ಚಳವಾಗಿರುತ್ತದೆ. ಆದರೆ ಅಷ್ಟಕ್ಕೆ ಅದು ಸ್ವಯಂಸಂಪೂರ್ಣವೆಂದು ಹೇಳಬೇಕಾಗಿಯೂ ಇಲ್ಲ. ರಾಷ್ಟ್ರೀಯವಾದಿಗಳು ಸಾಹಿತ್ಯವನ್ನು ಹೇಗೆ ನಿರ್ವಚಿಸುತ್ತಾರೆ ಎನ್ನುವುದಕ್ಕಿಂತ ವರ್ಗಗಳನ್ನು ಹೇಗೆ ಕಾಣುತ್ತಾರೆ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ರಾಷ್ಟ್ರೀಯತೆ ವರ್ಗವನ್ನು ಹೇಗೆ ಕಾಣುತ್ತದೆ ಮತ್ತು ಅದನ್ನು ಹೇಗೆ ನಿರ್ವಚಿಸುತ್ತದೆ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ಸಾಹಿತ್ಯವನ್ನು ನೋಡುವಾಗ ಅದರ ಸ್ವರೂಪವನ್ನು ಅದರ ಸಾಮಾಜಿಕತೆಯ ಆಧಾರದ ಮೇಲೆ ನಿರ್ಧರಿಸಬೇಕಾಗುತ್ತದೆ. ಜೀವನ ಮತ್ತು ಅದರ ಸಾಧ್ಯತೆಯು ಯಾವಗಲೂ ಒಂದು ನಿಲುವನ್ನು ಹೊಂದಿರುವುದಿಲ್ಲ. ಮತ್ತು ಅದನ್ನು ಬರೀ ಒಂದು ರಾಷ್ಟದ ನಿರ್ವಚನವಾಗಿ ನೋಡಬೇಕಾಗಿಯೂ ಇಲ್ಲ. ಜೀವನ ಮತ್ತು ಅದರ ಸಾಧ್ಯತೆಯು ನಿರ್ಧಾರವಾಗುವುದು ಬರೀ ಒಂದು ರಾಷ್ಟ್ರೀಯತೆಯ ಆಧಾರದ ಮೇಲೆ ಅಲ್ಲವೆನ್ನುವುದು ಇಲ್ಲಿ ಉಲ್ಲೇಖನೀಯ. ವರ್ಗ ಮತ್ತು ಅದರ ರಚನೆಯು ಬರೀ ಒಂದು ದೇಶದ ಆಧಾರದ ಮೇಲೆ ನಡೆಯುವುದಿಲ್ಲ. ಅದರ ಅರ್ಥವು ಇರುವುದು ಅದರ ಆರ್ಥಿಕತೆಯನ್ನು ಹೇಳುತ್ತದೆ. ವರ್ಗವೇ ವಾಸ್ತವವಾಗಿ ಒಂದು ನಿಜವಾದ ಸಾಧ್ಯತೆಯೂ ಆಗುತ್ತದೆ. ಅಂದರೆ ವರ್ಗವೇ ಮನೋಭಾವವನ್ನು ಹೇಳುತ್ತದೆ. ಅದರಲ್ಲಿ ಕೆಲವು ಮುಖ್ಯವಾದ ಸಂಗತಿಯು ಇರುತ್ತದೆ. ವರ್ಗವು ನಿಶ್ಯಂಶಯವಾಗಿ ಒಂದು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಆದರೆ ಅದರೊಂದಿಗೆ ನಾವು ಒಂದು ಸಂಗತಿಯನ್ನು ಹೇಳಬೇಕಾಗುತ್ತದೆ. ಅಂದರೆ ವ್ಯಕ್ತಿಯನ್ನು ನಾವು ನೋಡಬೇಕಾದ್ದು ಅವನ ಸಮಾಜ ಮತ್ತು ಅವನ ಪರಿಸರದ ಹಿನ್ನೆಲೆಯಲ್ಲಿ. ಅದರ ಪರಿಣಾಮವಾಗಿ ಕೆಲವು ತಾತ್ವಿಕತೆಗಳು ಉಂಟಾಗುತ್ತವೆ. ಮತ್ತು ಅದರ ಕಾರಣವಾಗಿ ನಾವು ವರ್ಗವನ್ನು ನೋಡುವುದು ಮತ್ತು ಅದನ್ನು ಗ್ರಹಿಸುವುದರ ಅರ್ಥವೂ ಬೇರೆಯಾಗುತ್ತದೆ.

ಆದರೆ ಇಂತಹಾ ಸಂದರ್ಭದಲ್ಲಿ ನಾವು ಅದು ಹೇಗೆ ಸಮಾಜ ಮತ್ತು ಸಾಹಿತ್ಯವನ್ನು ನಿರ್ಧರಿಸುತ್ತದೆ ಎಂದೂ ನೋಡಬೇಕಾಗುತ್ತದೆ. ಸಾಹಿತ್ಯವನ್ನು ಅದು ನಿರ್ದೇಶಿಸುತ್ತದೆ.

ಸಮಾಜದಲ್ಲಿ ಸಾಹಿತ್ಯ ಮತ್ತು ಅದರ ಸ್ವರೂಪವು ಹೇಗೆ ನಿರ್ಧಾರವನ್ನು ಮಂಡಿಸುತ್ತದೆ. ಮತ್ತು ಅದರ ಅಗತ್ಯವು ಹೇಗಾಗಿದೆ ಎನ್ನುವುದನ್ನು ಇಲ್ಲಿ ನೋಡಬೇಕಾಗುತ್ತದೆ. ಅಂದರೆ ಸಾಹಿತ್ಯವನ್ನು ಸಮಾಜವು ನಿರ್ಧಾರ ಮಾಡುತ್ತದೆ. ಅಂದರೆ ಅದರಲ್ಲಿ ಸಾಮಾಜಿಕ ಜೀವನವು ಇರುತ್ತದೆ. ಅದರಲ್ಲಿ ಸಮಾಜವು ನಿರ್ಣಾಯಕವಾಗುತ್ತದೆ. ಸಾಹಿತ್ಯವೂ ಕೂಡಾ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಅದರಲ್ಲಿ ಈ ದೃಷ್ಟಿಯಿಂದ ಅರ್ಥವಂತಿಕೆಯು ಇರುತ್ತದೆ. ಒಂದು ಸಮಾಜದಲ್ಲಿ ಬುದ್ಧಿಜೀವಿಗಳ ಪಾತ್ರವನ್ನು ನಿರಾಕರಿಸಲು ಬರುವುದೂ ಇಲ್ಲ. ಒಂದು ದೇಶದಲ್ಲಿ ವಿವಿಧ ವರ್ಗಗಳದ್ದು ನಿರ್ಣಾಯಕವೂ ಆಗಿರುತ್ತದೆ. ಜನಾಂಗವೂ ಅಷ್ಟೇ ಮುಖ್ಯವಾದ ಸಂಗತಿಯು ಆಗುತ್ತದೆ. ಅಂದರೆ ಅದನ್ನು ಹೊರತು ಪಡಿಸಿದ ಸಂಗತಿಗಳು ಇಲ್ಲವಾಗಿದೆ. ಪ್ರತಿ ಸಮಾಜಕ್ಕೂ ಅದರದೇ ಆದ ಒಂದು ನಿಲುವು ಇರುತ್ತದೆ. ಅದನ್ನು ಅದರ ಸೃಜನಶೀಲತೆಯು ಹೇಳುತ್ತದೆ. ಹಾಗೆ ನೋಡುವುದಿದ್ದರೆ ಸೃಜನಶೀಲತೆಯು ನಿರ್ದಿಷ್ಟವಾದ ಪಾತ್ರವನ್ನು ಪಾತ್ರವನ್ನು ವಹಿಸುತ್ತದೆ. ಸಮಾಜದಲ್ಲಿ ಬುದ್ಧಿಜೀವಗಳ ಪಾತ್ರವನ್ನು ನಿರಾಕರಿಸಲು ಬರುವುದೇ ಇಲ್ಲ. ಆ ಬುದ್ಧಿಜೀವಗಳು ಯಾವುದನ್ನು ಹೇಳುತ್ತಾರೆ ಮತ್ತು ಅವರ ಪಾತ್ರವು ಯಾವ ಬಗೆಯದು ಎನ್ನವುದು ಮಾತ್ರವೇ ಬಹಳ ಮುಖ್ಯವಾಗುತ್ತದೆ. ಯಾವುದೇ ರಾಷ್ಟ್ರವು ತನ್ನದೇ ಆದ ಚೌಕಟ್ಟನ್ನು ಹೊಂದಿರುತ್ತದೆ ಮತ್ತು ಅದರಲ್ಲಿ ನಿಜವಾದ ಸಂಗತಿಯು ಯಾವ ಬಗೆಯದು ಎನ್ನುವುದು ಬಹಳ ಮುಖ್ಯವಾಗುತ್ತದೆ. ಅಂದರೆ ನಿಜವಾಗಿಯೂ ಅದು ಹುಸಿಯಾದ ರಾಷ್ಟ್ರವಾದವನ್ನು ಹೇಳುತ್ತದೆ ಎಂದರೆ ಅದರಲ್ಲಿ ಅರ್ಥವೇ ಇರುವುದಿಲ್ಲ. ಅದು ಅನಗತ್ಯವಾದ ಒಂದು ನಿಲುವನ್ನು ಹೊಂದಿರುತ್ತದೆ. ಆ ಕಾಲಕ್ಕೆ ಅನುಗುಣವಾಗಿ ಸಾಮಾಜಿಕ ಜೀವನ ಮತ್ತು ಅದರ ಸಾಂಸ್ಕೃತಿಕವಾದ ನಿಲುವನ್ನು ಹೊಂದಿರುತ್ತದೆ. ಮತ್ತು ಆಯಾ ಕಾಲಕ್ಕೆ ಅನುಗುಣವಾಗಿ ಧರ್ಮ ಮತ್ತು ನಂಬಿಕೆಗಳು ಬದಲಾಗುತ್ತವೆ. ಕೆಲವು ನಿರ್ದಿಷ್ಟವಾದ ತಾತ್ವಿಕತೆಯು ಹುಟ್ಟುತ್ತದೆ. ಯಾವುದನ್ನು ನಾವು ನಿಜವಾದ ಪರಂಪರೆ ಎಂದು ಹೇಳುತ್ತೇವೆಯೋ ಅದರ ಅರ್ಥವು ಆಯಾ ಕಾಲದ ಸನ್ನಿವೇಶಗಳಿಂದ ನಿರ್ಧಾರವಾಗುತ್ತದೆ. ಆದರೆ ಸಾಹಿತ್ಯಕ್ಕೂ ಒಂದು ನಿರ್ದಿಷ್ಟವಾದ ತಳಹದಿಯು ಇರುತ್ತದೆ. ಅದನ್ನು ಲೇಖಕನು ವಿಸ್ತರಿಸುತ್ತಾನೆ. ಅವನಿಗೆ ಅದು ಅಗತ್ಯವೂ ಆಗುತ್ತದೆ. ಅದರಲ್ಲಿ ಲೇಖಕನು ತನ್ನ ಜ್ಞಾನ ಮತ್ತು ಅರಿವನ್ನು ವಿವರಿಸುತ್ತಾನೆ ಲೇಖಕರು ಮೂಲಭೂತವಾಗಿ ಒಂದು ತಾತ್ವಿಕತೆಯ ಮುಖಂಡತ್ವವನ್ನು ವಹಿಸಬೇಕಾಗುತ್ತದೆ. ಅದರಲ್ಲಿ ಅದರ ಅಗತ್ಯವೂ ಇರುತ್ತದೆ. ಅಂದರೆ ಲೇಖಕ ಮತ್ತು ಅವನ ಜವಾಬ್ದಾರಿಯೂ ಬಹಳ ಮುಖ್ಯವಾಗುತ್ತದೆ.

ಜಮೀನ್ದಾರಿ ಪದ್ಧತಿಯ ಸಮಾಜದಲ್ಲಿ ಜೀವನದ ಕ್ರಮವು ಒಂದು ಬಗೆಯಲ್ಲಿ ಇರುತ್ತದೆ. ಮತ್ತು ಅದರ ತಾತ್ವಿಕತೆಯು ಒಂದು ಬಗೆಯಲ್ಲಿ ಇರುತ್ತದೆ. ಆದರೆ ಆಧುನಿಕ ಸಮಸ್ಯೆಯು ಬೇರೆಯಾಗಿದೆ. ಅದರಲ್ಲಿ ಬರುವ ನಿಜವೂ ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಕಾದಂಬರಿಯಲ್ಲಿ ಬರುವ ವಾಸ್ತವತೆಯು ಇಲ್ಲಿ ಬೇರೆಯಾಗುತ್ತದೆ. ಜಮೀನ್ದಾರಿ ಪದ್ಧತಿ ಮತ್ತು ಅದರ ಕುರಿತಾದ ವಾಸ್ತರವು ಕಾದಂಬರಿಯಲ್ಲಿ ಬರುವಾಗ ಒಂದು ರೀತಿಯಲ್ಲಿ ಇರುತ್ತದೆ.

ಕಾರಂತರಲ್ಲಿ ಸ್ತ್ರೀಯರು ಕಾರಂತರಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಅವರ ಕಾದಂಬರಿಯಲ್ಲಿ ಗಂಡ ಹೆಂಡಿರು ಪರಸ್ಪರ ಮುದ್ದಿಸುವ ಚಿತ್ರಣವು ಇಲ್ಲ. ದೇವನೂರರು ಪ್ರೇಮ ಕಾದಂಬರಿಯನ್ನು ಬರೆಯಲಿಲ್ಲ. ಅವರಲ್ಲಿ ಬರುವ ವಿವರಣೆಗಳು ನಮಗೆ ಹೆಚ್ಚು ತಟ್ಟುವುದು ಬೇರೆ ಕಾರಣಕ್ಕೆ. ಸಾಕವ್ವನ ಸಮಸ್ಯೆಯು ಇರುವುದು ಪ್ರೇಮದಲ್ಲಿ ಅಲ್ಲ. ಕಾರಂತರ ಚೋಮನಿಗೆ ಪ್ರೇಮವು ಮುಖ್ಯವಾದ ಸಮಸ್ಯೆಯು ಅಲ್ಲ. ಕಾರಂತರ ಕಾದಂಬರಿಗಳಲ್ಲಿ ಬರುವ ದಾಂಪತ್ಯಕ್ಕೆ ಇರುವ ಚೌಕಟ್ಟು ಕೂಡಾ ಪಶ್ಚಿಮ ಕೇಂದ್ರಿತವಾದ್ದು ಅಲ್ಲ. ಪೂರ್ವ ಜನ್ಮ ಮತ್ತು ಅದರ ಸಂಬಂದವು ಇಲ್ಲಿ ಮುಖ್ಯವಾಗುವುದಿಲ್ಲ. ಆದರೆ ಜಾತಕವನ್ನು ಕಾರಂತರು ತರುತ್ತಾರೆ. ಲೈಂಗಿಕ ಸಂಬಂಧವೆನ್ನುವುದು ಕಾರಂತರಲ್ಲಿ ಬೇರೆ ಬೇರೆ ಮಾದರಿಗಳನ್ನು ತೆರೆಯುತ್ತದೆ. ಗುಲಾಮರು ಅಥವಾ ಆಳುಗಳು ಮತ್ತು ಅವರ ಸಂಬಂಧವನ್ನು ಕಾರಂತರು ನೋಡುವುದು ಬೇರೆ ಕ್ರಮದಲ್ಲಿ. ತಲಾತಲಾಂತರದಿಂದ ಬಂದ ಆಳು ಚೋಮನು ಈ ವ್ಯವಸ್ಥೆಯ ಪ್ರತಿನಿಧಿಯೂ ಆಗಿದ್ದಾನೆ. ಆದರೆ ಅವನು ಆರಾಧಿಸುವ ದೈವವು ಇದೆ. ಕುಟುಂಬವು ಇದೆ. ಬುಡಕಟ್ಟುಗಳಲ್ಲಿ ನಡೆಯುವ ವಿದ್ಯಮಾನಗಳೂ ಕಾರಂತರಿಗೆ ಅತ್ಯಂತ ಮುಖ್ಯವಾಗುತ್ತದೆ. ಅದು ಸಂಸ್ಕೃತಿಯ ಒಳಗಿನಿಂದ ಬರುತ್ತದೆ. ಆದರೆ ಚೋಮನಿಗೆ ಯಾವ ಆಯ್ಕೆಯೇ ಇಲ್ಲವಾಗಿದೆ. ಆದ್ದರಿಂದಲೇ ಕಾರಂತರು ಕಾದಂಬರಿಗಳಲ್ಲಿ ಪಶ್ಚಿಮದ ಪರಂಪರೆಗಿಂತ ಬೇರೆಯಾದ ಸಂಗತಿಯನ್ನು ಹೇಳುತ್ತಾರೆ. ಇದನ್ನು ನಾವು ಗಮನಿಸುವುದು ಅತ್ಯಂತ ಅಗತ್ಯವಾಗಿದೆ. ಯಾವುದನ್ನು ಕಾರಂತರು ಪ್ರಾತಿನಿಧಿಕ ಮಾಡಿದರು ಎನ್ನುವುದು ಮುಖ್ಯವಾಗುತ್ತದೆ. ನಾಗವೇಣಿಯವರು ಯಾರನ್ನು ಹೇಳುತ್ತಾರೆ. ವೀಣಾ ಶಾಂತೇಶ್ವರು ಹೇಳಿದ ಹೆಣ್ಣು ಮಕ್ಕಳ ಸ್ವರೂಪವು ಯಾವ ಬಗೆಯದು ಎನ್ನುವುದು ಅತ್ಯಂತ ಕುತೂಹಲಕಾರಿಯಾದ ಅಂಶವಾಗಿದೆ. ಆದರೆ ಸಾಹಿತ್ಯವನ್ನು ನೋಡುವುದು ಮತ್ತು ಗ್ರಹಿಸುವುದು ವಸಾಹತು ಕಾಲದ ಅನಂತರ ವ್ಯತ್ಯಾಸವಾಯಿತು. ಯಾವುದನ್ನು ಈವತ್ತು ವಿಶ್ವ ಎಂದು ಹೇಳುತ್ತೇವೆಯೋ ಅದರ ಸ್ವರೂಪವು ವೇಗವಾಗಿ ಬದಲಾಗುತ್ತಿದೆ. ಇಡೀ ವಿಶ್ವವೇ ವಾಸ್ತವವಾಗಿ ಅತ್ಯಂತ ದೊಡ್ಡದಾದ ಸಂಘರ್ಷದಲ್ಲಿ ಇದೆ. ಆದರೆ ನಮಗೆ ಯಾವುದು ವಿಶ್ವಾತ್ಮಕವಾದ ಮೌಲ್ಯವಾಗಿದೆ ಮತ್ತು ಅದರ ಪರಿಣಾಮವು ಏನು ಎನ್ನುವುದು ತುಂಬಾ ಗಂಭೀರವಾಗಿ ಪರಿಗಣಿಸುವ ಅಗತ್ಯವೂ ಇದೆ. ಯಾವುದು ನಮಗೆ ಸ್ವಂತವಾಗಿದೆ ಮತ್ತು ಯಾವುದು ನಮಗೆ ಅನ್ಯವಾಗಿದೆ ಮತ್ತು ಈವತ್ತು ವಿಜ್ಞಾನ ಮತ್ತು ಅದರ ಪರಿಣಾಮಗಳು ಸಂಸ್ಕೃತಿಯ ಒಳಗೆ ಇದೆಯೇ ಅಥವಾ ಸಂಸ್ಕೃತಿಯ ಹೊರಗೆ ಇದೆಯೇ ಮುಂತಾದ ಪ್ರಶ್ನೆಗಳು ನಮ್ಮ ಮುಂದೆ ಇವೆ. ನಾವು ಯಾವುದನ್ನು ಹೇಳುತ್ತಿದ್ದೇವೆಯೋ ಅದರ ಸ್ವರೂಪಗಳು ಬೇರೆ ಬೇರೆ ಕಾರಣಗಳಿಂದ ಬದಲಾಗುತ್ತಿದೆ. ಇಲ್ಲಿ ಮತ್ತೆ ಯೋಚಿಸಬೇಕಾದ ಮತ್ತೊಂದು ಸಂಗತಿಯು ಇದೆ. ನಮಗೆ ಈವತ್ತು ತಂತ್ರಜ್ಞಾನ ಮತ್ತು ಅದರ ಕೊಡುಗೆಯನ್ನು ವಿರೋಧಿಸುವುದು ಅತ್ಯಂತ ಕಷ್ಟ ಸಾಧ್ಯವೂ ಆಗಿದೆ. ಇದನ್ನು ನಾವು ಮತ್ತೆ ಮತ್ತೆ ಬೇರೆ ಬೇರೆ ವಿಧದದಲ್ಲಿಯೂ ನೋಡಬೇಕಾಗುತ್ತದೆ.

ವಸಾಹತು ಕಾಲದ ಸನ್ನಿವೇಶವು ಮೂಲಭೂತವಾಗಿ ಕೆಲವನ್ನು ರೂಪಿಸಿತು. ಅದರಲ್ಲಿ ವಿಜ್ಞಾನ ಮತ್ತು ತಂತ್ರ ಜ್ಞಾನವೂ ಸೇರಿಕೊಂಡಿದೆ. ಅದನ್ನು ಭಾರತದಲ್ಲಿ ಪ್ರಯೋಗಿಸುವಾಗ

ಅದರಲ್ಲಿ ಅನೇಕ ದ್ವಂದ್ವಗಳೂ ಇದ್ದವು. ವಿಜ್ಞಾನ ಮತ್ತು ಅದರ ಶಿಸ್ತನ್ನು ಹೇಳುವಾಗ ಅದರ ಉದ್ದೇಶವು ಬೇರೆ ಇತ್ತು. ಹೊಸ ರೀತಿಯ ಬೌದ್ಧಿಕವಾದ ಜಗತ್ತು ನಮಗೆ ಹೊಸ ರೀತಿಯ ಅರಿವನ್ನು ಕೊಟ್ಟಿತು. ಅದರಲ್ಲಿ ಗಣಿತವೂ ಒಂದು. ಲೆಕ್ಕವನ್ನು ಈವತ್ತು ನಾವು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆ. ಅದು ನಮ್ಮನ್ನು ಎಲ್ಲಾ ಕ್ಷೇತ್ರದಲ್ಲಿಯೂ ಆವರಿಸಿಕೊಂಡಿದೆ. ವಾಣಿಜ್ಯಶಾಸ್ತ್ರ ಮತ್ತು ಅದರ ಪ್ರಯೋಗಗಳು ನಮಗೆ ಅತ್ಯಂತ ಮುಖ್ಯವಾದ ಒಂದು ಶಿಸ್ತಾಗಿಯೂ ಪ್ರಭಾವವನ್ನು ಬೀರಿದೆ. ಲೆಕ್ಕ ಎನ್ನುವುದು ಈಗ ಮಹತ್ವದ ಜಾಗವನ್ನು ಪಡೆದುಕೊಂಡಿದೆ. ಅದು ಬೇರೆ ಪ್ರಶ್ನೆ. ಇಲ್ಲಿ ವಾಸ್ತವವಾದವನ್ನು ಕುರಿತು ಹೇಳಿಕೊಳ್ಳುವುದು ಹೆಚ್ಚು ಸೂಕ್ತ. ವಾಸ್ತವವಾದವು ಸಾಹಿತ್ಯದ ಚರ್ಚೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ವಿಷಯಗಳೂ ಇವೆ. ಅದು ಸಾಹಿತ್ಯದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದು ಅದರ ನಿರೂಪಣೆಯ ಕಾರಣಕ್ಕೆ ಮಾತ್ರವೇ ಅಲ್ಲ ಎನ್ನುವುದನ್ನು ಇಲ್ಲಿ ಉಲ್ಲೇಖಿಸಬೇಕಾಗುತ್ತದೆ. ವಾಸ್ತವತೆಯೆಂದರೆ ಅದು ಬರಹಕ್ಕೆ ಕೊಟ್ಟ ಒಂದು ಶಾಸ್ತ್ರೀಯವಾದ ಹೆಸರು ಮಾತ್ರವೇ ಆಗಿದೆ. ಅದರಲ್ಲಿ ಮತ್ತೆ ಬೇರೆ ಅಂಶಗಳೂ ಇವೆ. ಅದು ಬರೀ ಸತ್ಯವನ್ನು ಮಾತ್ರವೇ ಹೇಳುತ್ತದೆ ಎಂದು ಅರ್ಥವಲ್ಲ. ವಾಸ್ತವವತೆಯೆಂದರೆ ಅದು ಭಾಷೆಯ ವಸ್ತು ಮತ್ತು ಅದರ ಸಂಯೋಜನೆಯೂ ಹೌದು. ವಾಸ್ತವತೆಯ ಹಿಂದೆ ಇರುವ ತಾತ್ವಿಕ ಗ್ರಹಿಕೆಯು ಬೇರೆಯಾಗಿದೆ. ವಾಸ್ತವವತೆಯಲ್ಲಿ ನಿರ್ದಿಷ್ಟವಾದ ಅನುಕರಣೆ ಮತ್ತು ಪ್ರಾತಿನಿಧೀಕರಣವೂ ಇದೆ. ಅದರಲ್ಲಿ ಸತ್ಯವು ಒಂದು ಭಾಗವಾಗಿದೆ. ಈ ಮೊದಲು ಹೇಳಿದಂತೆ ಸತ್ಯವನ್ನು ಮಾತ್ರವನ್ನು ಮಾತ್ರವೇ ಹೇಳುತ್ತದೆ ಎಂದು ಇದರ ಅರ್ಥವಲ್ಲ. ಅದರ ಬದಲು ವಾಸ್ತವವಾದದಲ್ಲಿ ಸತ್ಯವೂ ಒಂದು ಭಾಗವಾಗಿದೆ. ಕೆಲವೊಮ್ಮೆ ವಾಸ್ತವವಾದವನ್ನು ನಾವು ನಮ್ಮ ಗ್ರಹಿಕೆ ಮತ್ತು ಅದರ ಮಿತಿಯಲ್ಲಿ ನೋಡಬೇಕಾಗುತ್ತದೆ.

ವಾಸ್ತವತೆಯಲ್ಲಿ ಬಾಹ್ಯದ ನಿರೂಪಣೆಯೂ ಮುಖ್ಯವಾಗುತ್ತದೆ. ಅಂದರೆ ಅದರಲ್ಲಿ ಬಾಹ್ಯವೂ ಒಂದು ಘಟಕವಾಗಿದೆ. ವಾಸ್ತವತೆಯು ಒಂದು ವಸ್ತು ನಿಷ್ಟತೆಯನ್ನು ಎತ್ತಿಹಿಡಿಯುತ್ತದೆ. ಆದರೆ ಈ ವಸ್ತು ನಿಷ್ಟತೆಯು ವ್ಯಕ್ತವಾಗುವುದು ಆಯಾ ಸಂದರ್ಭದ ಹಿನ್ನೆಲೆಯಲ್ಲಿ ಮಾತ್ರವೇ ಆಗಿದೆ. ಹೊರಗಿನ ವಾಸ್ತವವನ್ನು ಗ್ರಹಿಸುವುದು ನಮ್ಮ ತಲೆಯ ಮೂಲಕವೇ. ಆದರೆ ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವಿದೆ. ಯಾವುದೇ ವಾಸ್ತವತೆಯು ವ್ಯಕ್ತವಾಗುವುದು ಒಂದು ನಿಲುವಿನ ಮೂಲಕವೇ ಎನ್ನುವುದನ್ನು ಇಲ್ಲಿ ಹೇಳಬೇಕಾಗುತ್ತದೆ. ಅನೇಕ ಸಂಸ್ಕೃತಿಗಳು ಇರುವ ಜಾಗದಲ್ಲಿ ಲೇಖಕನು ಯಾವ ಮಾದರಿಯನ್ನು ಅಂಗೀಕರಿಸುತ್ತಾನೆ ಎನ್ನುವುದೂ ಬಹಳ ಮುಖ್ಯವಾಗಿದೆ. ಮತ್ತು ಅವನಿಗೆ ಸಂಸ್ಕೃತಿಯು ಬಹಳ ಅಗತ್ಯವಾಗಿದೆ ಎನ್ನುವುದೂ ಅಷ್ಟೇ ಸತ್ಯ. ಈಗಾಗಲೇ ಇರುವ ವಾಸ್ತವವನ್ನು ಲೇಖಕನು ಬರೆಯುತ್ತಾನೆ. ಬರೆಯುವುದು ಅಂದರೆ ಅದರಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿಕೊಳ್ಳುವುದೂ ಹೌದು. ವಾಸ್ತವವಾದದ ಗುರಿಯು ಬೇರೆಯಿರುತ್ತದೆ. ಅಂದರೆ ಅದರಲ್ಲಿ ಗುರಿಯೂ ಭಿನ್ನವಾಗುತ್ತದೆ. ಕೃತಿ ಮತ್ತು ಅದರವ ಸ್ವರೂಪದ ಬಗ್ಗೆ ಆಧುನಿಕತಾವಾದಿಗಳಲ್ಲಿ ಮತ್ತು ವಾಸ್ತವವಾದಿಗಳಲ್ಲಿ ಭಿನ್ನಾಭಿಪ್ರಾಯವೂ ಇದೆ. ವಾಸ್ತವವು ಹೇಳುವುದು ಬಾಹ್ಯವನ್ನು ಮಾತ್ರವೇ ಎನ್ನುವುದು ಆಧುನಿಕತಾವಾದಿಗಳ ತಕರಾರು. ವಾಸ್ತವವಾದದಲ್ಲಿ ವ್ಯಕ್ತಿ ಮತ್ತು ಅವನ ಅಭಿರುಚಿಯು ಮಾತ್ರವೇ ಮುಖ್ಯವಾಗುತ್ತದೆ. ವಾಸ್ತವವಾದಿ

ಲೇಖಕನು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಮತ್ತು ಹೇಗೆ ಆಯ್ಕೆಯನ್ನು ಮಾಡುತ್ತಾನೆ ಎನ್ನುವುದೂ ಬಹಳ ಮುಖ್ಯ. ಹೊರಗಿನ ವಾಸ್ತವವಕ್ಕೆ ಯಾವ ಸ್ವರೂಪವು ಇದೆಯೋ ಅದನ್ನು ಹೇಗೆ ಹೇಳಬೇಕು ಎನ್ನುವುದೂ ಮೂಲಭೂತವಾಗಿ ಒಂದು ತಾತ್ವಿಕ ಸಮಸ್ಯೆಯೂ ಆಗಿದೆ. ವಾಸ್ತವಕ್ಕೆ ಅತ್ಯಂತ ವಿಶಾಲವಾದ ಒಂದು ಚರಿತ್ರೆಯು ಇರುತ್ತದೆ. ಮತ್ತು ಅದು ಚರಿತ್ರೆಯನ್ನು ಛೇದಗೊಳಿಸುವುದೂ ಇಲ್ಲ.

ಆದರೆ ವಾಸ್ತವವಾದಿ ಬರಹಗಳು ಅದನ್ನು ಕಾಣುವ ದೃಷ್ಟಿಕೋನವೂ ಬೇರೆಯಾಗುತ್ತದೆ. ತುಂಬಾ ವಿಶಾಲವಾದ ಒಂದು ಚರಿತ್ರೆಯು ನಮ್ಮ ಗಮನಕ್ಕೆ ಬರುವಾಗ ಒಂದು ತುಂಡಾಗಿ ಮಾತ್ರವೇ ಕಾಣಿಸುತ್ತದೆ. ಅದು ಮಿತಿಯೂ ಹೌದು. ಆದರೆ ಅದು ಆಧುನಿಕತಾವಾದಿಗಳು ಹೇಳುವ ರೀತಿಯಲ್ಲಿ ಇರುವುದಿಲ್ಲ. ಆಧುನಿಕತೆಯನ್ನು ಮಾತ್ರವೇ ಸತ್ಯವೆಂದು ಹೇಳುವವರು ಈ ದೃಷ್ಟಿಯಿಂದ ಚರಿತ್ರೆಯನ್ನು ಪ್ರಶ್ನಿಸುತ್ತಾರೆ. ಅವರು ಅಚಾರಿತ್ರಿಕವಾದಿಗಳು ಆಗಿದ್ದಾರೆ. ಅಂದರೆ ಅದರಲ್ಲಿ ಅವರು ಚರಿತ್ರೆಯ ಅಗತ್ಯವೇ ಇಲ್ಲವೆಂದು ಹೇಳುತ್ತಾರೆ. ವಾಸ್ತವವಾದಿಗಳು ಎಷ್ಟರ ಮಟ್ಟಿಗೆ ಸೆಕ್ಯುಲರ್ ಆಗಿದ್ದಾರೆ ಎನ್ನುವುದೂ ಬಹಳ ಮುಖ್ಯ. ಅಂದರೆ ಸೆಕ್ಯುಲರ್ ಆಗಿ ವಾಸ್ತವವನ್ನು ಗ್ರಹಿಸಿದರೆ ಅದರ ಸ್ವರೂಪವು ಬೇರೆಯಾಗುತ್ತದೆ. ಇಲ್ಲಿ ಮತ್ತೊಂದು ಅಂಶವೂ ಇದೆ. ಯಾವುದೇ ನಮ್ಮ ಗ್ರಹಿಕೆಯು ಬಹಳ ಮಿತಿಯುಳ್ಳದ್ದು ಆಗಿದ್ದರೆ ಅದರ ಮಿತಿಯು ನಮ್ಮ ವಾಸ್ತವತೆಯಲ್ಲಿ ಕಾಣಿಸಿಕೊಳ್ಳುತ್ತದೆ.

ವಾಸ್ತವ ಮತ್ತು ಅದರ ಸ್ವರೂಪವು ಕೂಡಾ ಬೇರೆ ಬೇರೆ ಕಾಲ ಕಾಲಕ್ಕೆ ಬೇರೆ ಬೇರೆಯಾಗುತ್ತದೆ. ಯಾವುದನ್ನು ನಾವು ವಾಸ್ತವವೆಂದು ಹೇಳುತ್ತೇವೆಯೋ ಅದರಲ್ಲಿ ಭಿನ್ನತೆಗಳು ಕಾಣಲು ಸಾಧ್ಯ. ಆದು ಬದಲಾಗುತ್ತಾ ಹೋಗುತ್ತದೆ. ಮತ್ತು ಅದರ ಸ್ವರೂಪದಲ್ಲಿ ವ್ಯತ್ಯಾಸವೂ ಆಗುತ್ತದೆ. ವಾಸ್ತವವತೆಯನ್ನು ಯಾರೂ ಸಮಗ್ರವಾಗಿ ಗ್ರಹಿಸುವುದು ಕಷ್ಟ. ಆದರೆ ಅದೇ ಕಾರಣಕ್ಕೆ ರಚನೋತ್ತರವಾದಿಗಳು ಹೇಳುವ ರೀತಿಯಲ್ಲಿ ಅದು ಖಾಲಿಯಾದ ಅವಕಾಶವೂ ಅಲ್ಲ. ವಾಸ್ತವತೆ ಮತ್ತು ಅದರ ಗ್ರಹಿಕೆಯನ್ನು ನಾವು ಸಮಗ್ರವಾಗಿ ಮಾಡಲು ಯತ್ನವನ್ನು ಮಾಡಿದರೆ ಅದರ ಅರ್ಥವು ಬೇರೆಯಾಗುತ್ತದೆ. ಆದರೆ ಯಾವಾಗ ನಾವು ಅದನ್ನು ಹೇಗೆ ಹೇಳುತ್ತೇವೆ ಮತ್ತು ಅದರ ಹಿಂದೆ ಇರುವ ಕಾಳಜಿಗಳು ಯಾವ ಬಗೆಯವು ಅನ್ನುವುದೂ ಅಷ್ಟೇ ಮುಖ್ಯವಾಗಿದೆ. ಅಂದರೆ ಯಾವುದೇ ಗ್ರಹಿಕೆ ಮತ್ತು ಅದರ ಹಿಂದೆ ಇರುವ ಸತ್ಯಗಳನ್ನೂ ನಾವು ಮಾನದಂಡವಾಗಿಯೂ ನೋಡಬೇಕಾಗುತ್ತದೆ. ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಬರುತ್ತವೆ. ಯಾವುದನ್ನು ನಾವು ವಾಸ್ತವವೆಂದು ಹೇಳಿಕೊಂಡಿದ್ದೇವೆಯೋ ಅದು ಒಂದು ಸಮಾಜದಲ್ಲಿ ಒಂದು ರೀತಿಯಲ್ಲಿ ಇರಬಹುದು, ಮತ್ತೊಂದು ಸಮಾಜದಲ್ಲಿ ಮತ್ತೊಂದು ರೀತಿಯಲ್ಲಿ ಇರಬಹುದು. ಹಾಗೆ ಅದು ಸ್ಥಳ ಮತ್ತು ಅವಕಾಶಗಳ ಹಿನ್ನೆಲೆಯಲ್ಲಿ ಬೇರೆಯಾಗಬಹುದು. ಸಮಾಜವು ಬದಲಾಗುತ್ತಾ ಹೋದಂತೆ ಅದರ ವಾಸ್ತವವು ಕೂಡಾ ಬದಲಾಗುತ್ತಾ ಹೋಗುತ್ತದೆ. ಮತ್ತು ಅದಕ್ಕೂ ಮಿತಿಗಳು ಇವೆ. ಆದರೆ ವಾಸ್ತವವೆಂದು ಯಾವುದನ್ನು ಹೇಳುತ್ತಾ ಬಂದಿದ್ದೇವೆಯೋ ಅದು ಜನರ ಇತಿಹಾಸವನ್ನೂ ಹೇಳುತ್ತದೆ. ಜಮೀನ್ದಾರಿ ಪದ್ಧತಿಯನ್ನು

ನೋಡುವಾಗ ಅದರ ಸ್ವರೂಪವು ಒಂದು ಬಗೆಯಲ್ಲಿ ಇರುತ್ತದೆ. ಮತ್ತು ಅದರ ವಾಸ್ತವವನ್ನು ನಾವು ಒಂದು ಬಗೆಯಲ್ಲಿ ಗ್ರಹಿಸಬೇಕಾಗುತ್ತದೆ ಮತ್ತು ಅದರ ವಾಸ್ತವತೆಗೂ ಬಂಡವಾಳವಾದದ ವಾಸ್ತವತೆಗೂ ತುಂಬಾ ವ್ಯತ್ಯಾಸವಿದೆ. ವಾಸ್ತವವನ್ನು ಆಯಾ ಸನ್ನಿವೇಶದಲ್ಲಿ ಲೇಖಕನು ಗ್ರಹಿಸುವಾಗ ಅವನು ಅವನ ದೃಷ್ಟಿಕೋನದಲ್ಲಿ ಮಾತ್ರವೇ ವಿವರಿಸುತ್ತಾನೆ. ಅವನಿಗೆ ಅವನ ದೃಷ್ಟಿಕೋನ ಮಾತ್ರವೇ ಮುಖ್ಯವಾಗುತ್ತದೆ. ಅಂದರೆ ಅದನ್ನು ಅವನು ಹೇಗೆ ಸ್ವೀಕರಿಸಿದ್ದಾನೆಯೋ ಅದೇ ರೀತಿಯಲ್ಲಿ ಅದರ ಕುರಿತಾಗಿ ಬರೆಯುತ್ತಾನೆ.

ಇಲ್ಲಿ ಮತ್ತೊಂದು ಪ್ರಶ್ನೆಯು ಬರುತ್ತದೆ. ಯಾವುದೇ ಸಮಾಜವು ತನಗೆ ಅನುಕೂಲವಾದ ಸಂಗತಿಗಳನ್ನು ಇಟ್ಟುಕೊಳ್ಳುತ್ತದೆ. ಮತ್ತು ಅದನ್ನು ಸ್ವೀಕರಿಸುವಾಗ ಅದಕ್ಕೂ ಬೇರೆ ಒತ್ತಡಗಳು ಇರುತ್ತವೆ. ಸಾಮಾಜಿಕ ಜೀವನ ಮತ್ತು ಅದರ ಒತ್ತಡಗಳನ್ನು ನಾವು ಒಂದೇ ರೂಪವೆಂದು ಹೇಳಲು ಬರುವುದೂ ಇಲ್ಲ. ವಾಸ್ತವವೇ ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಅದು ಕಣ್ಣು ಮತ್ತು ಕಿವಿ, ಮಾತು ಮತ್ತು ಅದು ಒತ್ತಡಗಳನ್ನು ಸೂಚಿಸುತ್ತವೆ.ಇಲ್ಲಿ ನಾವು ನೋಡಬೇಕಾದ ಅಂಶವೆಂದರೆ ಯಾವುದನ್ನು ವಾಸ್ತವವಾದಿಗಳು ಅತ್ಯಂತ ಮಹತ್ವದ್ದು ಎಂದು ಹೇಳುತ್ತಾರೆಯೋ ಅದನ್ನೇ ಆಧುನಿಕತಾವಾದಿಗಳು ನಿರಾಕರಿಸುತ್ತಾರೆ. ಪ್ರಮಾಣಗಳು ಬೇಕಾಗಿಲ್ಲವೆಂದು ಅವರ ವಾದವಾಗಿದೆ ವಾಸ್ತವ ಮತ್ತು ಅದರ ರೂಪೀಕರಣವನ್ನು ನಾವು ಹೇಗೆ ನೋಡಬೇಕು ಮತ್ತು ಅದನ್ನು ಹೇಗೆ ಗ್ರಹಿಸಬೇಕು ಎನ್ನುವುದಕ್ಕೆ ಯಾವುದೇ ಒಂದು ಮಾನದಂಡವೂ ಇಲ್ಲ. ನಾವು ಅದನ್ನು ನಮಗೆ ಬೇಕಾದಂತೆ ಸ್ವೀಕರಿಸುತ್ತೇವೆ. ಅದು ನಮಗೆ ಹೇಗೆ ಕಾಣಿಸುತ್ತದೆಯೋ ಆ ರೀತಿಯಲ್ಲಿ. ಸಮಾಜವು ಹೇಳುವ ಕ್ರಮಗಳನ್ನು ನಾವು ಬರೀ ಒಂದು ವಾಸ್ತವ ಎಂದು ಹೇಳಿದರೆ ಅದು ಅಷ್ಟು ಮಾತ್ರವೇ ಕಾಣಿಸುತ್ತದೆ. ಇಲ್ಲಿ ನಾವು ನೋಡಬೇಕಾದ ಮತ್ತೊಂದು ಅಂಶವಿದೆ. ಯಾವುದನ್ನು ನಾವು ಆಧುನಿಕ ಬಂಡವಾಳವಾದವೆಂದು ಹೇಳುತ್ತೇವೆಯೋ ಅದು ಒಂದು ವಾಸ್ತವವಾಗಿದೆ. ಆದರ ವಾಸ್ತವದಲ್ಲಿ ಬಡವರು ಇರುವುದೂ ಸರಿಯಾಗಿಯೇ ಕಾಣಿಸುತ್ತದೆ. ಬಂಡವಾಳವಾದವನ್ನು ಅಂಗೀಕರಿಸುವವರು ಹೇಳುವ ವಾಸ್ತವವು ವಿಕಾರವೂ ಹೌದು. ಅದು ಕೆಲವು ಮಿಥ್ಯೆಗಳನ್ನು ಸೃಷ್ಟಿಸುತ್ತದೆ. ಆದರೆ ಆ ಮಿಥ್ಯೆಯು ಹೇಗಿದೆ ಎಂದರೆ ಅದರಲ್ಲಿ ಸೋಗು ಜೀವನವೂ ಇದೆ. ಆದರೆ ಅವರು ಹೇಳುವ ಸತ್ಯಗಳನ್ನು ಉಳಿದವರು ಒಪ್ಪುವುದೇ ಸಾಧ್ಯವಿಲ್ಲ. ವಾಸ್ತವ ಮತ್ತು ಅದರ ಕುರಿತು ಮತ್ತೆ ಮತ್ತೆ ತಕರಾರುಗಳನ್ನು ಎತ್ತಿಕೊಂಡವರು ಆಧುನಿಕತಾವಾದಿಗಳು. ಅವರ ಪ್ರಕಾರ ವಾಸ್ತವ ಮತ್ತು ಅದರ ಸ್ವರೂಪವೇ ಅವರಿಗೆ ಚರ್ಚಾರ್ಹವಾಗಿದೆ. ವಾಸ್ತವ ಮತ್ತು ಅದರ ವ್ಯಾಖ್ಯೆಗಳನ್ನು ಅವರು ಒಪ್ಪುವುದೇ ಇಲ್ಲ. ಆದರೆ ವಾಸ್ತವವಾದವು ನಿಜವನ್ನು ಹೇಳುತ್ತದೆ. ಆ ನಿಜದ ಕುರಿತು ನಮ್ಮ ತರ್ಕಗಳು ಯಾವುದೇ ಇರಲಿ ಅದರಲ್ಲಿ ಕೆಲ ಮಟ್ಟಿಗೆ ಚರಿತ್ರೆಯನ್ನು ನಾವು ಗ್ರಹಿಸಬೇಕಾದ ಅಂಶಗಳನ್ನು ಅದು ಹೇಳುತ್ತದೆ. ಅದು ಹೇಳುವ ವಸ್ತುನಿಷ್ಠತೆಯು ಮಾತ್ರವೇ ನಮಗೆ ಮುಖ್ಯವಾಗಬೇಕು. ಅದು ಒಂದು ಸಾಧ್ಯತೆಯೂ ಹೌದು. ಅದಕ್ಕೆ ಕೆಲವು ಕ್ರಿಯೆಗಳು ಇವೆ ಮತ್ತು ಸಾಮಾನ್ಯವಾದ ಅನೇಕ ಸಂಗತಿಗಳನ್ನು ಅದು ಹೇಳುತ್ತದೆ. ಸಾಮಾನ್ಯವಾದ ಕೆಲವು ಸತ್ಯಗಳು 'ಆಗಿವೆ.' ಸಾಂಸ್ಕೃತಿಕ ವಾಸ್ತವವು ಮಾರ್ಕ್ಸ್ ಮತ್ತು ಫೆಡ್ರಿಕ್‌ಎಂಗಲ್ಸ್ ಅತ್ಯಂತ ಸಂಕೀರ್ಣವಾಗಿದೆ.

ಬೂರ್ಜ್ವಾಗಳು ಹೇಳುವ ಸತ್ಯಗಳು ಮಾತ್ರವೇ ವಾಸ್ತವ ಆಗಬೇಕಾಗಿ ಇಲ್ಲವೆಂದು ಅವರು ಹೇಳುತ್ತಾರೆ. ಅವರ ಪ್ರಕಾರ ಸಾಂಸ್ಕೃತಿಕ ವಾಸ್ತವ ಎಂದರೆ ಅದು ಮಾತ್ರವೇ ಅಲ್ಲ. ಬಂಡವಾಳವಾದವು ತನ್ನ ಸಾಧ್ಯತೆಯನ್ನು ವಿಸ್ತರಿಸಿದ್ದು ನಿಜ. ಸಾಂಪ್ರದಾಯಿಕ ಸಮಾಜವನ್ನು ನೋಡಿದರೆ ಬಂಡವಾಳವಾದವು ಹೆಚ್ಚು ಕ್ರಾಂತಿಕಾರಕವಾಗಿತ್ತು. ಅದು ಹೆಚ್ಚು ಕ್ರೌರ್ಯವನ್ನು ಹೊಂದಿದೆ. ಮತ್ತು ಅದರಲ್ಲಿ ಏಕಾಂತವಾದಿ ಪ್ರಕ್ರಿಯೆಯು ಇದೆ. ಆದರೆ ಹಿಂದಿನ ಚರಿತ್ರೆಯನ್ನು ನೋಡಿದರೆ ಬಂಡವಾಳವಾದವು ಹೆಚ್ಚು ಉದಾರವೂ ಆಗಿತ್ತು. ಮತ್ತು ಅದರಲ್ಲಿ ಮಾನವೀಯ ಅಂಶವೂ ಹೆಚ್ಚಾಗಿತ್ತು. ಮತ್ತು ಅದರಲ್ಲಿ ಮತ್ತೆ ಮತ್ತೆ ಬೇರೆ ಅಂಶಗಳೂ ಬಂದವು. ಅದನ್ನು ಹೀಗೆ ಹೇಳಬಹುದು: ಬಂಡವಾಳವಾದವು ಮೂಲತಃ ಮಾನವೀಯ ಸಂಬಂಧವನ್ನು ಹದಗೆಡಿಸಿತು.

ಸಮಾಜದಲ್ಲಿ ಬಂಡವಾಳವಾದವು ಕೂಡಾ ಒಂದು ಹಂತವಾಗಿದೆ. ಅದು ಹಳ್ಳಿಯ ಜೀವನ ಕ್ರಮವನ್ನು ಪಲ್ಲಟಗೊಳಿಸಿತು. ಅದರಲ್ಲಿ ಪರಿವರ್ತನೆಗಳೂ ತರುವ ಹೇರಳ ಅಂಶಗಳೂ ಇದ್ದವು. ಬಂಡವಾಳವಾದದಲ್ಲಿ ನಿಷೇಧಾತ್ಮಕ ಮತ್ತು ಧನಾತ್ಮಕ ಅಂಶಗಳೂ ಇದ್ದವು. ಈ ಅರ್ಥದಲ್ಲಿ ಅದು ಹೆಚ್ಚು ಸಂಕೀರ್ಣವೂ ಆಗಿತ್ತು. ಅದರಲ್ಲಿ ಒಳ್ಳೆಯ ಮತ್ತು ಕೆಟ್ಟ ಅಂಶಗಳು ಎರಡೂ ಇವೆ. ಅದು ತನ್ನನ್ನು ತಾನೇ ಬೇಗ ಪ್ರಕಟ ಮಾಡುವುದೂ ಇಲ್ಲ. ಅದೂ ಕೂಡಾ ಚಾರಿತ್ರಿಕ ಸೃಷ್ಟಿಯಾಗಿದೆ. ಮತ್ತು ಅದರಲ್ಲಿ ಬೇರೆ ಬೇರೆ ಆಶಯಗಳೂ ಸೇರಿಕೊಂಡಿವೆ. ಅದರ ಗರ್ಭದಲ್ಲಿಯೇ ಬೂರ್ಜ್ವಾ ಆಲೋಚನೆಗಳು ಹುಟ್ಟಿಕೊಂಡವು. ಅದಕ್ಕೂ ಆಲೋಚನೆಗೂ ದ್ವಂದ್ವಾತ್ಮಕವಾದ ಸಂಬಂಧವಿದೆ. ಅದನ್ನು ಹೀಗೆ ಹೇಳಬಹುದು: ಅದು ಕಲೆ ಮತ್ತು ಅದರ ಸೌಂದರ್ಯದ ಪ್ರಶ್ನೆಯನ್ನು ಬೇರೆ ರೀತಿಯಲ್ಲಿ ನೋಡಿತು. ವಾಸ್ತವವತೆಯನ್ನು ಅದು ಹೇಳಿದ ಕ್ರಮಗಳೂ ಬೇರೆಯಾಗಿವೆ. ಅದರ ನಿರೂಪಣೆಯೂ ಬೇರೆಯಾಯಿತು. ತಪ್ಪಾದ ಮನುಷ್ಯರ ಪ್ರಜ್ಞೆಯು ಕಾಣಿಸಿಕೊಂಡಿತು. ಹಳೆಯ ಸಮಾಜದಲ್ಲಿ ಇದ್ದ ವರ್ಗೀಕರಣವು ಬದಲಾದವು. ಅದರಲ್ಲಿ ಗುಲಾಮರು ಇದ್ದರು. ಬಾರ್ಬೆರಿಕ್ ಸಂಸ್ಕೃತಿಯೂ ಇತ್ತು. ಆಧುನಿಕ ಬಂಡವಾಳವಾದವೇ ಅನೇಕ ಹೊಸ ರೂಪಗಳ ಹುಟ್ಟಿಗೆ ಕಾರಣವೂ ಆಯಿತು. ಪರಿಕಲ್ಪನಾತ್ಮಕವಾದ ಅನೇಕ ಸಂಗತಿಗಳು ಚಾಲ್ತಿಗೆ ಬಂದವು. ಮೋರ್ಗನ್ ಇದರ ಬೇರೆ ರೂಪಗಳನ್ನು ಹೇಳುತ್ತಾನೆ. ಅವನು ಮಾನವಶಾಸ್ತ್ರದ ಬೆಳವಣಿಗೆಯಲ್ಲಿ ಗುರುತಿಸುತ್ತಾನೆ. ಚರಿತ್ರೆಯು ಕೆಲವು ಮೂಲಭೂತವಾದ ರೂಪಗಳನ್ನು ಹೊಂದಿರುತ್ತವೆ ಎಂದು ಅವನ ವಾದವಾಗಿದೆ. ಅಂದರೆ ಅದರಲ್ಲಿ ಮಾನವ ಮತ್ತು ಅವನ ಇತಿಹಾಸವು ಬದಲಾಗುತ್ತಾ ಬಂದಿದೆ. ಚರಿತ್ರೆ ಮತ್ತು ಅದರ ಬೆಳವಣಿಗೆ ಭಾಗವಾಗಿಯೇ ಹುಟ್ಟಿಕೊಂಡ ರೂಪಗಳನ್ನು ಗುಟ್ಟಾರಿ ಮತ್ತು ಡೆಲ್ಯಾಸೆ ಅವರು ಚರ್ಚಿಸುತ್ತಾರೆ. ಅವರು ಅದನ್ನು ಹೇಳುವಾಗ ಅದರಲ್ಲಿ ಇರುವ ಈಡಿಪಸ್ ಮನೋಭಾವದ ಬದಲಾವಣೆಯನ್ನು ಹೇಳುತ್ತಾರೆ. ಅವರು ಸಮಾಜ ಮತ್ತು ಆದರ ಆಂತರಿಕ ಬದಲಾವಣೆಯನ್ನು ಹೇಳುತ್ತಾರೆ. ಅವರ ಪ್ರಕಾರ ಅದು ಬದಲಾಗಿದರೆ. ಮತ್ತು ಅದರಲ್ಲಿ ಹಿಂಸಾತ್ಮಕವಾದ ಮನೋಭಾವವೂ ಇದೆ. ಅಂದರೆ ಈಡಿಪಸ್ ಪುರಾಣವೇ ಭಿನ್ನವಾದ ಒಂದು ಚೌಕಟ್ಟೂ ಆಗಿದೆ.

ಮಾರ್ಕ್ಸ್ ಮತ್ತು ಸಿಗ್ಮಂಡ್‌ಫ್ರಾಯ್ಡ್ ಇಬ್ಬರೂ ದೇಹವನ್ನು ಆವರಿಸಿಕೊಳ್ಳುವ ಕೆಲವು ಬಾಹ್ಯದ ಅಂಶಗಳನ್ನು ಹೇಳುತ್ತಾರೆ. ಭಾವನೆಗಳಿಗೆ ಒಂದು ತರ್ಕವಿದೆ. ಮತ್ತು ಆ ತರ್ಕವನ್ನು ಸ್ಕಿಜೋಪ್ರೆನಿಯಾ ಕಾಯಿಲೆಯು ನಿರಾಕರಿಸುತ್ತದೆ. ಅದಕ್ಕೆ ಯಾವುದೇ ತರ್ಕವು ಇಲ್ಲ. ಸ್ಕಿಜೋಪ್ರೆನಿಯಾ ರೋಗಿಗೆ ಯಾವುದೇ ಸಹಜವಾದ ಒಂದು ಜೀವನ ಕ್ರಮವು ಇರುವುದೂ ಇಲ್ಲ. ಅವನು ಉಳಿದವರಂತೆ ಬಾಳಲಾರ. ಅವನ ಮನೋಸ್ಥಿತಿಯು ಮೂಲಭೂತವಾಗಿ ಒತ್ತಡಕ್ಕೆ ಗುರಿಯಾಗಿರುತ್ತದೆ. ಅಮೂರ್ತವಾದ ಅನೇಕ ಅರ್ಥಗಳನ್ನು ಅವನು ಹೊಂದಿರುತ್ತಾನೆ. ಅವನಲ್ಲಿ ಬೇರೆ ಬೇರೆ ಭಾವನೆಗಳು ಕಾಣಿಸಿಕೊಳ್ಳುತ್ತವೆ. ಅವನ ಸಂಹಿತೆಗಳು ಬದಲಾಗುತ್ತವೆ. ಹಾಗೆ ನೋಡುವುದಿದ್ದರೆ ಯಾವುದೇ ಭಾವನೆಗಳನ್ನು ರೂಪಿಸುವುದು ಸಮಾಜವೇ. ಬೇರೆ ಬೇರೆ ಸಮಾಜದ ಸ್ಥಿತಿಗಳು ನಮಗೆ ಬೇರೆ ಒತ್ತಡವನ್ನು ಹೇರುತ್ತವೆ. ಆಧುನಿಕ ಬಂಡವಾಳವಾದವು ರೂಪಿಸಿಕೊಡುವ ಸಂಬಂಧಗಳು ಇದಕ್ಕೆ ತಾಜಾ ಉದಾಹರಣೆಯಾಗಿದೆ. ಅದರಲ್ಲಿ ತಂತ್ರಜ್ಞಾನವು ಇದೆ. ಮತ್ತು ಹೆಚ್ಚು ಐಷಾರಾಮಿ ಜೀವನ ಮತ್ತು ಅದರ ಸ್ಥಿತಿಗತಿಗಳೂ ಇವೆ. ಆಧುನಿಕ ವಾಸ್ತವವಾದ ಮತ್ತು ಏಕ ಕೇಂದ್ರಿತ ಬಂಡವಾಳವಾದವು ದ್ವಂದ್ವಾತ್ಮಕವಾದ ಸಂಬಂಧವನ್ನು ಹೊಂದಿವೆ. ಹೆಚ್ಚು ತಾಂತ್ರಿಕ ಪರಿಣಿತಿಯನ್ನು ಹೊಂದಿದ ವ್ಯಕ್ತಿಗಳು ಇದ್ದಾರೆ. ಆದರೆ ಇದರಲ್ಲಿ ಸಾಮಾನ್ಯರಾದ ಮನುಷ್ಯರು ಎಲ್ಲಿದ್ದಾರೆ ಎಂದು ಹುಡುಕಬೇಕಾಗುತ್ತದೆ. ಇದಕ್ಕೆ ಪೂರಕವಾದ ಕೆಲವು ವಿವರಣೆಗಳನ್ನು ಇಲ್ಲಿ ಕೊಡಬೇಕಾಗುತ್ತದೆ. ಬರಹವನ್ನು ಮನುಷ್ಯನು ರೂಪಿಸಿದ್ದೂ ಕೂಡಾ ಒಂದು ಮಹತ್ವದ ಸಾಧನೆಯೇ ಆಗಿದೆ. ಅಂದರೆ ಅದಕ್ಕೂ ಒಂದು ಚರಿತ್ರೆಯು ಇದೆ. ಮೊದಲು ಬಿಲ್ಲು ಬಾಣಗಳು ಇದ್ದವು. ಮಡಿಕೆಗಳು ಇದ್ದವು. ಮತ್ತು ಅದರಲ್ಲಿಯೇ ಚಿತ್ರಗಳೂ ಇದ್ದವು. ಇವುಗಳಿಂದ ಜನರು ಬರಹಕ್ಕೆ ಬದಲಾದದ್ದು ಕೂಡಾ ಚರಿತ್ರೆಯಲ್ಲಿ ಅತ್ಯಂತ ಮಹತ್ವದ್ದೂ ಆಗಿದೆ. ಬಿಲ್ಲು ಮತ್ತು ಬಾಣಗಳ ಅನಂತರ ಬಂದ ಕೃಷಿಯೂ ಕೂಡಾ ಬಹಳ ಮಹತ್ವದ್ದು. ಮನುಷ್ಯ ಸಮಾಜದಲ್ಲಿ ಬರಹವು ಒಂದು ದೊಡ್ಡದಾದ ಮೈಲಿಗಲ್ಲು. ಬರಹವನ್ನು ಸಂಶೋಧನೆ ಮಾಡದೇ ಹೋಗಿದ್ದರೆ ಇಷ್ಟು ಬೆಳವಣಿಗೆ ಸಾಧ್ಯವೇ ಇರಲಿಲ್ಲ. ಆದರೆ ಈ ಎಲ್ಲಾ ಸಂಗತಿಗಳು ಮುಖ್ಯವಾಗಿ ಮನುಷ್ಯನ ಇತಿಹಾಸದಲ್ಲಿ ಬಹಳ ದೊಡ್ಡ ಸಂಗತಿಯೂ ಆಗಿದೆ. ಈ ಮಾತುಗಳನ್ನು ಹೇಳಲು ಕಾರಣವಿದೆ.

ಯಾವುದನ್ನು ನಾವು ಈಗ ಬಹಳ ದೊಡ್ಡ ಸಂಗತಿಯೆಂದು ಹೇಳುತ್ತಿದ್ದೇವೆಯೋ ಅದರ ಸ್ವರೂಪಕ್ಕೂ ಒಂದು ಚರಿತ್ರೆಯು ಇದೆ. ನಾಗರಿಕತೆಯು ಇದ್ದಿಕ್ಕಿದ್ದಂತೆ ಹುಟ್ಟಿಲ್ಲ. ಅದಕ್ಕೂ ಒಂದು ಕಾರಣವಿದೆ. ಅಂದರೆ ಅದು ಇದ್ದಕ್ಕಿದ್ದಂತೆ ಹುಟ್ಟಿಕೊಂಡಿಲ್ಲ. ಅದರಲ್ಲಿ ಬೇರೆ ಸಂಗತಿಗಳೂ ಇವೆ. ಮನುಷ್ಯನು ತನಗೆ ಬೇಕಾದ್ದನ್ನು ಸೃಷ್ಟಿಸಿದ್ದಾನೆ. ಮತ್ತು ಅದರಲ್ಲಿ ಬೇರೆ ಬೇರೆ ಆಯಾಮಗಳೂ ಇವೆ. ಆದರೆ ಮಾರುಕಟ್ಟೆಯನ್ನು ಮಾತ್ರವೇ ಆಧರಿಸಿಕೊಂಡ ಬಂಡವಾಳವಾದವು ತನಗೆ ಬೇಕಾದ್ದನ್ನು ಮಾತ್ರವೇ ಹೇರುತ್ತದೆ. ಅದು ತನಗೆ ಬೇಕಾದ ರೂಪವನ್ನು ಮಾತ್ರವೇ ಉಳಿಸಿಕೊಳ್ಳುತ್ತದೆ. ಅದೂ ಕೂಡಾ ತನಗಾಗಿ. ಅಂದರೆ ಅದರಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿ ಅದರ ಹಿತಾಸಕ್ತಿಯೇ ಬಹಳ ಮುಖ್ಯವಾಗುತ್ತದೆ. ಆದರ ರಚನೆಯೂ ಬೇರೆಯಿರುತ್ತದೆ. ಮತ್ತು ಅದರಲ್ಲಿ ಬೇರೆ

ಬೇರೆ ಆಸಕ್ತಿಯೂ ಇರುತ್ತದೆ. ಇದನ್ನು ನೋಡುವಾಗ ಅನುಸರಿಸಬೇಕಾದ ಅನೇಕ ಅಂಶಗಳಲ್ಲಿ ರಚನೆಯೂ ಒಂದು. ಆದರೆ ರಚನೆಯು ಕೇವಲ ಮಾತುಗಳು ಮಾತ್ರವೇ ಎಂದು ಭಾವಿಸಬಾರದು. ರಚನೆಯನ್ನು ಅದರ ಅರ್ಥಗಳನ್ನು ಲೆವಿಸ್ಟ್ರಾಸ್ ವಿವರಿಸಿದ್ದಾನೆ. ಅವನ ಪ್ರಕಾರ ರಚನೆಯು ಅರ್ಥ ಹೀನವಾದ ಒಂದು ಚಟುವಟಿಕೆಯು ಅಲ್ಲ. ಅದರಲ್ಲಿ ಬೇರೆ ಬೇರೆ ವಿನ್ಯಾಸಗಳೂ ಇರುತ್ತವೆ. ಮತ್ತು ಬೇರೆ ಬೇರೆ ಆಶಯಗಳೂ ಇರುತ್ತವೆ. ಅಂದರೆ ಅದರಲ್ಲಿ ಬರುವ ಆಶಯಕ್ಕೂ ಅದರ ರಚನೆಗೂ ಇರುವ ಸಮಬಂಧ ಇರುತ್ತದೆ.

ದೇವರನ್ನು ಹೇಳುವಾಗ ಒಳ್ಳೆಯವರನ್ನಾಗಿಯೂ ಭೂತ ಮತ್ತು ದೆವ್ವಗಳನ್ನು ಹೇಳುವಾಗ ಕೆಟ್ಟವರನ್ನಾಗಿ ಮಾಡುವಾಗ ಒಂದು ಆಶಯವು ಕೆಲಸವನ್ನು ಮಾಡುತ್ತದೆ. ಅದಕ್ಕೆ ಒಂದು ನಿರ್ದಿಷ್ಟತೆಯು ಇರುತ್ತದೆ. ಒಂದು ಅರ್ಥವೂ ಇರುತ್ತದೆ. ಆದರೆ ಯಾವಾಗ ಅದನ್ನು ಗಮನಿಸುತ್ತೇವೆಯೋ ಆಗ ಅದರ ಅರ್ಥವು ಸರಿಯಾಗಿಯೇ ತಿಳಿಯುತ್ತದೆ. ಅವುಗಳನ್ನು ಅವನು ಸಹಜವಾದ ಒಂದು ಪ್ರಕ್ರಿಯೆ ಎಂದೇ ಹೇಳುತ್ತಾನೆ. ದೆವ್ವಗಳು ಯಾಕೆ ಪವಿತ್ರವಾದ ಕೆಲಸವನ್ನು ಮಾಡುವುದಿಲ್ಲವೆಂದು ಅವನು ಕೇಳುತ್ತಾನೆ. ಅವುಗಳಲ್ಲಿ ಒಂದು ಸನ್ನೆಯು ಇರುತ್ತದೆ. ಅಂದರೆ ಅದು ಸೂಚನೆಯೂ ಹೌದು.. ಆದರೆ ಯಾವಾಗ ಪುನರುಜ್ಜೀವನ ಕಾಲವು ಬಂತೋ ಆಗ ಅದರಲ್ಲಿ ಅನೇಕ ಪ್ರಶ್ನೆಗಳು ಬಂದವು. ಆಗಿನ ಬುದ್ಧಿಜೀವಿಗಳು ದೇವರನ್ನು ದೆವ್ವಗಳನ್ನು ಪ್ರಶ್ನಿಸಿದರು. ಧರ್ಮ ಮತ್ತು ಅದರ ಅರ್ಥಕ್ಕೆ ಇರುವ ಪಾವಿತ್ರ್ಯವನ್ನು ಪ್ರಶ್ನಿಸಿದರು. ಧರ್ಮ ಮತ್ತು ಅದರ ಸಂಕೇತಗಳಲ್ಲಿ ಇರುವ ಅರ್ಥಗಳನ್ನು ಹುಡುಕಿಕೊಳ್ಳುವ ಕಡೆಗೆ ತಮ್ಮ ಗಮನವನ್ನು ನೀಡಿದರು. ಆ ಪ್ರಶ್ನೆಯು ಅಲ್ಲಿಗೇ ನಿಂತಿದ್ದರಿಂದ ಅದು ಮುಂದೆ ಹೋಗಲಿಲ್ಲ. ಮತ್ತು ಅದರಲ್ಲಿ ನಿಷೇಧಾತ್ಮಕವಾದ ಅರ್ಥಗಳು ಮಾತ್ರವೇ ಇತ್ತು. ಅಂದರೆ ಅವರು ವಾಸ್ತವವನ್ನು ಹೆಚ್ಚು ಗ್ರಹಿಸಲು ಹೋಗಲಿಲ್ಲ. ಅವರಲ್ಲಿ ಅದರ ಸಮಸ್ಯೆಯು ಇತ್ತು. ಅದರ ಹಿನ್ನಲೆಯು ಬೇರೆಯೂ ಇತ್ತು. ಆಗಿನ ಬುದ್ಧಿಜೀವಿಗಳಲ್ಲಿ ವಿಜ್ಞಾನದ ಬಗ್ಗೆ ಪ್ರೀತಿಯು ಇತ್ತು. ಮತ್ತು ಅದರ ಓಘವೂ ಆಗ ಕೆಲಸವನ್ನು ಮಾಡಿತ್ತು. ವಿಜ್ಞಾನವು ಹಳೆಯ ಸಂಗತಿಗಳನ್ನು ತೀವ್ರವಾಗಿಯೂ ವಿರೋಧಿಸಿತ್ತು. ದೇವರು ಮತ್ತು ದೆವ್ವಗಳನ್ನು ಬರೀ ಕಟ್ಟುಕತೆಯೆಂದು ಮಾತ್ರವೇ ಹೇಳಿತು. ಅವರಿಗೆ ಆಗ ಅದರ ಅಗತ್ಯವೂ ಹೆಚ್ಚು ಎನ್ನುವುದು ಬೇರೆ ಪ್ರಶ್ನೆ. ಆಗ ವಿಜ್ಞಾನವೇ ಒಂದು ಆದರ್ಶವೆಂದು ಅನೇಕರು ನಂಬಿದ್ದರು. ಆಧುನಿಕ ವಿಜ್ಞಾನ, ಆಧುನಿಕ ತಂತ್ರಜ್ಞಾನ ಮತ್ತು ಆಧುನಿಕ ಅನ್ವೇಷಣೆಗೆ ಸಂಬಂಧವಿದೆ. ಅದರೊಂದಿಗೆ ಅಮೂರ್ತವಾದ ಜ್ಞಾನ ಮತ್ತು ವ್ಯಕ್ತಿಯ ಅಸ್ತಿತ್ವದ ಕುರಿತೂ ಪ್ರಶ್ನೆಗಳು ಬಂದವು. ಆದರೆ ಯಾವುದನ್ನು ವಿಜ್ಞಾನದ ಧನಾತ್ಮಕವಾದ ಅಂಶವೆಂದು ಹೇಳುತ್ತೇವೆಯೋ ಅದರ ಮೂಲಕವೇ ಅನೇಕವನ್ನು ಮನುಷ್ಯರು ಕಂಡುಹಿಡಿದರು ಎನ್ನುವುದಲ್ಲಿ ಎರಡು ಮಾತಿಲ್ಲ. ಅದಕ್ಕೆ ದ್ವಂದ್ವಾತ್ಮಕವಾದ ಒಂದು ಸಂಬಂಧವಿದೆ. ವಿಜ್ಞಾನವನ್ನು ನಾವು ಅನಿರ್ದಿಷ್ಟವೆಂದು ಹೇಳುವುದು ಅಸಾಧ್ಯ. ಈ ಕಾರಣಕ್ಕೆ ಮಾರ್ಕ್ಸವಾದವು ವಿಜ್ಞಾನವನ್ನು ತಿರಸ್ಕರಿಸುವುದೂ ಇಲ್ಲ. ವಿಜ್ಞಾನವೂ ಆಧುನಿಕ ಸಮಾಜದ ಮೇಲೆ ಪ್ರಭಾವವನ್ನು ಬೀರಿದೆ. ವಿಜ್ಞಾನವನ್ನು ಅಲ್ಲಗಳೆಯಲು ಆಗುವುದಿಲ್ಲವೆಂದು ಅದು ಹೇಳುತ್ತದೆ. ಅದೇ ವಿಜ್ಞಾನವು

ಉತ್ಪಾದನೆಯನ್ನು ಹೆಚ್ಚು ಮಾಡಿದೆ. ಅದನ್ನೂ ನಾವು ಅಲ್ಲಗಳೆಯಲು ಬರುವುದಿಲ್ಲ. ಆಧುನಿಕ ಉತ್ಪಾದನೆಯಲ್ಲಿ ನಾವು ಗುಣಾತ್ಮಕವಾದ ವ್ಯತ್ಯಾಸವನ್ನು ಕಾಣುತ್ತೇವೆ. ಆಧುನಿಕ ಉತ್ಪಾದನೆ ಮತ್ತು ಅದರ ಹೆಚ್ಚಳವು ಬೇರೆ ಬೇರೆ ಕೆಲಸವನ್ನು ಮಾಡಿದೆ. ಅದು ನಮ್ಮ ಬಯಕೆಗಳನ್ನು ಹೆಚ್ಚು ಪ್ರಚೋದಿಸಿದೆ. ಹಣವು ಈಗ ಮತ್ತಷ್ಟು ಚಂಚಲವಾಗಿದೆ. ಯಾರ ಕೈಯಲ್ಲೂ ಹಣವು ನಿಲ್ಲುವುದಿಲ್ಲ. ಅದು ನಮ್ಮನ್ನು ಮತ್ತೆ ಮತ್ತೆ ಹೆಚ್ಚು ಹೆಚ್ಚು ಆಸೆ ಬುರುಕರನ್ನಾಗಿ ಮಾಡಿದೆ. ಹಣಕ್ಕೂ ನಮಗೂ ನಮ್ಮ ಮಾರುಕಟ್ಟೆಗೂ ಅನೇಕ ರೀತಿಯ ಸಂಬಂಧವು ಕಲ್ಪಿತವಾಗಿದೆ. ಆದರೆ ಅದೂ ಒಂದು ಬಗೆಯ ವಿನಿಮಯವಾಗಿದೆ. ಬಂಡವಾಳವಾದವು ಹೇಗಿದೆ ಎಂದು ಹೇಳಲು ಈ ಮಾತುಗಳನ್ನು ಹೇಳಿದೆ. ಮತ್ತು ಜಮೀನ್ದಾರಿ ಪದ್ಧತಿಯು ಈ ಮಾದರಿಯದು ಅಲ್ಲ. ಜಮೀನ್ದಾರಿ ಪದ್ಧತಿಯಿಂದ ಬಂಡವಾಳವಾದವು ತಕ್ಷಣವೇ ಬದಲಾಗಿಲ್ಲ. ಅದು ಕಾಲಾವಕಾಶವನ್ನೂ ಪಡೆದಿತ್ತು. ಅದೇ ರೀತಿಯಲ್ಲಿ ಇದ್ದಕ್ಕೆ ಇದ್ದ ಹಾಗೆಯೇ ವಾಸ್ತವವಾದಿ ಬರಹಗಳಿಗೆ ಸಮಾಜವು ಬದಲಾಗಿರಲಿಲ್ಲ. ಅದು ಬದಲಾಗಲು ಕಾಲವೂ ಇತ್ತು. ಅದಕ್ಕೂ ಸಮಾಜಕ್ಕೂ ಒಂದು ನಿರ್ಣಾಯಕವಾದ ಸಂಬಂಧವೂ ಇತ್ತು. ಶಿಕ್ಷಣ ಮತ್ತು ಅದರ ಸ್ವರೂಪವನ್ನು ವಸಹಾತು ಕಾಲವು ನಿರ್ದೇಶನ ಮಾಡಿದಾಗ ಅದರ ಅರ್ಥವನ್ನು ಅದು ಬದಲಿಸಿದ್ದು ಅಷ್ಟೇ ಸತ್ಯ.

ಅಧ್ಯಾಯ - ೧೦

ಕಾನೂರು ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ ಸ್ಥಿತ್ಯಂತರ

ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವೆ ಪರಸ್ಪರ ಸಂವಾದವಿರುತ್ತದೆ. ಈ ಸಂವಾದವೆನ್ನುವುದು ತುಂಬಾ ಸಂಕೀರ್ಣವಾಗಿರುತ್ತದೆ. ಇಲ್ಲಿಂದಲೇ ಯಜಮಾನಿಕೆ ರೂಪುಗೊಳ್ಳುತ್ತದೆ. ಯಜಮಾನಿಕೆ ರೂಪುಗೊಳ್ಳುವುದೇ ಆಳಿಸಿಕೊಳ್ಳುವ ವರ್ಗವನ್ನು ಹಿಡಿತದಲ್ಲಿ ಇರಿಸಿಕೊಳ್ಳುವ ಮೂಲಕ ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಇದರಿಂದ ಬಿಡಿಸಿಕೊಂಡು ಪ್ರತಿ ಯಜಮಾನಿಕೆಯನ್ನು ಕಟ್ಟಬೇಕಾದುದು ಅಗತ್ಯ. ರಾಷ್ಟ್ರೀಯ ಆಂದೋಲನದ ಕುರಿತು ಚರ್ಚಿಸುವಾಗ ರಣಜಿತ್ ಗುಹಾ ಅವರು ಹೇಳುವ ಮಾತು ಗಮನಿಸಬೇಕಾದುದು. "ರಾಷ್ಟ್ರೀಯತೆ ಎನ್ನುವುದು ಭಾರತೀಯ ಏಕಾಂತವಾದಿಗಳಿಗೆ ಕಲಿಕೆಯ ಒಂದು ಭಾಗವಾಗಿತ್ತು. ಹೀಗಾಗಿ ವಸಾಹತು ಕಾಲದ ಆಡಳಿತ, ಅದರ ಅಧಿಕಾರ ಮತ್ತು ದೇಶೀಯ ಬೌದ್ಧಿಕ ಏಕಾಂತವಾದಿಗಳ ನಡುವೆ ಸ್ಪರ್ದೆ ಮತ್ತು ಸಹಕಾರ ಎರಡೂ ಕಾಣಿಸಿಕೊಂಡಿತು. ಇದು ಹೊಸ ರೀತಿಯ ಸಂವಾದಕ್ಕೆ ಕಾರಣವಾಯಿತು." ಅವರೇ ಹೇಳುವಂತೆ ವಸಾಹತು ಅನುಭವದ ಪರಿಣಾಮಗಳು ಸರಳರೇಖಾತ್ಮಕವಲ್ಲ ಮತ್ತು ಶುದ್ಧ ತಾರ್ಕಿಕವೂ ಅಲ್ಲ. ಈ ಅನುಭವವು ಪರ್ಯಾಯವಾದ ಅನೇಕ ಸಂಗತಿಗಳ ಅನಾವರಣವು ಕೂಡ ಆಗಿದೆ. ಹೀಗಾಗಿ ವಸಾಹತು ಅನುಭವದ ನಿರೂಪಣೆಗಳು ಸ್ಥಳೀಯ ಸಮಾಜದ, ಪ್ರಾದೇಶಿಕತೆಯ, ಕೆಳಸ್ತರದ ಸಂಸ್ಕೃತಿ, ಭಾಷೆಯ ಅನೇಕ ನಿರೂಪಣೆಗಳು ಸೇರಬೇಕಾಗುತ್ತದೆ.

ಆಳುವವ ಮತ್ತು ಆಳಿಸಿಕೊಳ್ಳುವವ ಇವರಿಬ್ಬರ ನಡುವಿನ ಪರಸ್ಪರ ಸಂಕೀರ್ಣ ಸಂವಾದದಿಂದಲೇ ಯಜಮಾನಿಕೆ ರೂಪುಗೊಳ್ಳುತ್ತಾನೆ. ಆಳುವವ ಬಲತ್ಕಾರದ (Coercion) ಮೂಲಕ ದಂಡದ ಪರಿಭಾಷೆಯಲ್ಲಿ ಅಥವಾ ದೈಹಿಕ ಹಿಂಸೆಯ (Persuasion) ಮೂಲಕ ಒಪ್ಪುವಂತೆ ಮಾಡುವುದರಿಂದ ಅಧಿಕಾರ ಗಳಿಸಿಕೊಳ್ಳುತ್ತಾನೆ. ಹಾಗೆಯೇ ಆಳುವವನೂ ಕೂಡ ಸಹಕಾರದ (Collabration) ಮೂಲಕ ಅಥವಾ ಸ್ವಯಂ ಅಂಗೀಕಾರದ (Resistance)

ಮೂಲಕ ಅಧಿಕಾರಕ್ಕೆ ಅಥವಾ ಆಳ್ವಿಕೆಗೆ ಕಾರಣನಾಗುತ್ತಾನೆ. ಇದನ್ನು ಕುವೆಂಪು ಕಾದಂಬರಿಗಳು ನಮಗೆ ಹೇಳುತ್ತವೆ. ಆದರ ಆಳದಲ್ಲಿ ಒಂದು ಬಗೆಯ ರಾಜಕೀಯ ದೃಷ್ಟಿಕೋನವೂ ಇದೆ. ಈ ರಾಜಕಾರಣ ಎದ್ದು ತೋರದೆ ಪಠ್ಯದ ಒಳಗೆ ಅಲ್ಲಲ್ಲಿ ಬಂದು ಹೋಗುತ್ತದೆ. ಅದು ಬೇರೆ ಬೇರೆ ರೂಪವನ್ನು ಹೊದುತ್ತದೆ. ಇಲ್ಲಿ ರಾಜಕಾರಣ ಎನ್ನುವುದು ನಾವು ತಳಮಟ್ಟದ ರಾಜಕಾರಣ ಎಂದು ಕರೆಯಬೇಕಾಗುತ್ತದೆ. ಇದರಲ್ಲಿ ದೈಹಿಕವಾದ ಹಿಶೆಯು ಇದೆ. ಸಹಕಾರದ ಮೂಲಕ ಒಪ್ಪುವಂತೆ ಮಾಡಲಾಗುತ್ತದೆ. ಹಾಗೆಯೇ ಸ್ವಯಂ ಅಂಗೀಕಾರವೂ ಇದೆ. ಅಧಿಕಾರವನ್ನು ಸ್ವೀಕಾರ ಮಾಡುವರೂ ಇದ್ದಾರೆ. (ಐತ ಈ ಬಗೆಯವನು). ಅವನು ಸ್ವೀಕಾರ ಮಾಡಿದ್ದಾನೆ. ಅವನಿಗೆ ಅದು ಅಂಗೀಕಾರವಾಗಿದೆ. ಪ್ರತಿಭಟಿಸುವ ಪ್ರಜ್ಞೆ ಎನ್ನುವುದು ಅವನಿಗೆ ಮುಖ್ಯವಾಗಲಿಲ್ಲ. ಎರಡೂ ಕಾದಂಬರಿಗಳು ನಮಗೆ ಈ ಬಗೆಯ ಸಂದೇಶವನ್ನು ಕೊಡುತ್ತವೆ. ಅಧಿಕಾರ ಮತ್ತು ಅದರ ಅಂಗೀಕಾರದ ವಿವಿಧ ವಿನ್ಯಾಸಗಳನ್ನು ಹೇಳುವುದು ಕುವೆಂಪು ಗುರಿ. ಸ್ಥಳೀಯ ಯಜಮಾನಿಕೆ ಮತ್ತು ಪರರ ಯಜಮಾನಿಕೆಯ ವಿವಿಧ ರೂಪಗಳನ್ನು ಅವರು ಹೇಳುತ್ತಾರೆ. ಹತ್ತೊಂಬತ್ತನೆಯ ಶತಮಾನದ ನೈಜ ಚಿತ್ರವು ಇಲ್ಲಿ ನಮಗೆ ಸಿಗುತ್ತವೆ. ಸಮಾಜವು ಬದಲಾಗುತ್ತದೆ. ಅದು ಬದಲಾಗಲು ಬೇರೆ ಕಾರಣಗಳು ಇವೆ ಎನ್ನುವುದನ್ನು ಕುವೆಂಪು ಒಪ್ಪುತ್ತಾರೆ. (ಮಲೆಗಳಲ್ಲಿನ ಮದುಮಗಳು ೨೦೧೨ಪುಟ ೪೬೨, ೪೬೩, ೪೮೩, ೫೫೬, ೫೫೭, ೬೨೭ ಪುಟಗಳನ್ನು ಗಮನಿಸಿ)

ವಸಾಹತುಕಾಲದ ಅನೇಕ ಚಾರಿತ್ರಿಕ ನಿರೂಪಣೆ ಅನುಕರಣೆಯ ಮಾದರಿಯವು. ಚರಿತ್ರೆಯನ್ನು ಬರೆಯುವಾಗ ನಾವು ಪಶ್ಚಿಮವನ್ನು ಅನುಕರಣೆ ಮಾಡಿದೆವು. (ಹೋಮಿಬಾಬಾ) ಪಶ್ಚಿಮದ ಚಿಂತಕರು ಭಾರತವನ್ನು ನೋಡುವಾಗ ಒಂದು 'ರಾಜಕೀಯ ಜನಾಂಗ'ವೆಂಬಂತೆ ಪರಿಗಣಿಸಿದರು. ಯುರೋಪಿನ ಪುನರುಜ್ಜೀವನ ಕಾಲಘಟ್ಟದಲ್ಲಿ ರೂಪುಗೊಂಡ ವಿಶ್ವಾತ್ಮಕತೆಗೆ ಯಾವ ಅರ್ಥವೂ ಉಳಿಸಿಲ್ಲ ಅದನ್ನು ಪರಿಶೀಲಿಸುವ ಅಗತ್ಯವಿದೆ. ಈ ಕಾರಣಕ್ಕೆ ಯುರೋಪ್ ಆಧಾರಿತ ಚಿಂತನೆಯ ಕ್ರಮಗಳನ್ನು ಭಂಜನಗೊಳಿಸುವ ಅಗತ್ಯವಿದೆ. ಆದರೆ ಪ್ರಗತಿಪರತೆ, ಪ್ರಜೆ, ನಾಗರಿಕತೆ ತಿರಸ್ಕರಿಸಬೇಕಾಗಿಲ್ಲ. ಹಾಗೆಯೇ ಅಚಾರಿತ್ರಿಕ, ಧಾರ್ಮಿಕ, ಆಧುನಿಕತೆಯ ವಿರೋಧಿಸುವುದರ ಅಗತ್ಯವಿಲ್ಲ ಹಾಗೆಂದು ಎಲ್ಲವನ್ನು ಬಂಡವಾಳದ ನಿರೂಪಣೆಯಿಂದಲೇ ಪ್ರಾರಂಭಿಸಬೇಕಾಗಿಲ್ಲ. ವಸಾಹತುವಾದಿ ಯಜಮಾನಿಕೆಯಲ್ಲಿರುವ ಪ್ರಮುಖ ಪ್ರಶ್ನೆಯೆಂದರೆ ಮನುಷ್ಯ-ಮನುಷ್ಯರ ನಡುವಣ ರಾಜಕಾರಣದ ಪ್ರಶ್ನೆ. ಅದನ್ನು ಮರೆಯಬಾರದು. ಈ ಬಗೆಯ ಯಜಮಾನಿಕೆಯ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾರು ಆಳಿಸಿಕೊಳ್ಳುತ್ತಾರೋ ಅವರ ಮನೋಧೋರಣೆಗೆ ಕಾರಣವಾದ ಸಂಕಥನಗಳ್ನು ಮುರಿಯಬೇಕು. ಅಧಿಕಾರಶಾಹಿ ಅಥವಾ ಜ್ಞಾನಶಾಹಿಯನ್ನು ಸ್ವಯಂ ಅಂಗೀಕರಿಸುವ , ಇಲ್ಲವೇ ಅಧಿಕಾರಕ್ಕೆ ಸಹಕರಿಸುವ ಮಾನಸಿಕ ಸ್ಥಿತಿಯಿಂದ ಹೊರಬರಬೇಕು. ಇದು ಆಗಬೇಕಾದರೆ ಈಗಾಗಲೇ ಇದು ಸರಿ, ಇದು ನೈತಿಕ, ಇದು ನಾಗರಿಕ, ಇದು ಶ್ರೇಷ್ಠ, ಇದು ಸಂಸ್ಕೃತಿ, ಇದು ಶಕ್ತ ಎಂದು ಸಿದ್ಧವಾಗಿರುವ ಮಿತ್‌ಗಳನ್ನು ಒಡೆಯಬೇಕಾಗಿದೆ. ಯಾವ ಬಗೆಯ ಜ್ಞಾನ ಪರಂಪರೆಗಳನ್ನು

ಯಾವ ಬಗೆಯ ಸಂಸ್ಕೃತಿ ಮೌಲ್ಯಗಳನ್ನು, ಯಾವ ಬಗೆಯ ಭಾಷೆ, ನಂಬಿಕೆಗಳನ್ನು ಕೆಳಸ್ತರದಲ್ಲಿಟ್ಟು ಅವುಗಳ ಮೇಲೆ ಏಕರೂಪತೆಯನ್ನು ಹೇರಲಾಗಿದೆಯೋ ಅದರಿಂದ ಬಿಡಿಸಿಕೊಂಡು ಪರ್ಯಾಯಗಳನ್ನು ಕಟ್ಟುವುದೇ ಅಲಕ್ಷಿತ ನೆಲೆಯ ಅಧ್ಯಯನ ಕ್ರಮಗಳು ಗುರುತಿಸುವ ಪರ್ಯಾಯ ಯಜಮಾನಿಕೆಯ ನಿರೂಪಣೆಗಳಾಗಿವೆ. ಈ ದಿಸೆಯಲ್ಲಿ ಶೆಲ್ಲಿವಾಲಿಯ ಹೇಳುವ ಈ ಮಾತನ್ನು ಗಮನಿಸಬೇಕು. **ಚಿನುವಾ ಅಚಿಬೆ ಮತ್ತು ಗೂಗಿವಾಥಿಯಾಂಗೋರ ಬರಹಗಳ ಬಗ್ಗೆ ಬರೆಯುತ್ತಾ "ಇದು ಆಫ್ರಿಕಾದ್ದೇ ಆದ ನಿರ್ಲಕ್ಷಿತ ಸಂಸ್ಕೃತಿಯೊಂದರ ಮೇಲಿನ ಯಾಜಮಾನ್ಯದ ದಾಳಿಗೆ ಎದುರಾಗಿ ರಾಜಕೀಯ ಕಾಳಜಿಗಳಿಂದ ಹುಟ್ಟಿಕೊಂಡಿರುವ ಕಪ್ಪು ಸೌಂದರ್ಯ ಮೀಮಾಂಸೆಯಾಗಿದೆ. ಅಂತೆಯೇ ಇದು ನಿರ್ಲಕ್ಷಿತ ಸಂಸ್ಕೃತಿಯೊಂದರ ಮೇಲಿನ ಯಾಜಮಾನ್ಯದ ದಾಳಿಗೆ ಪರ್ಯಾಯವಾಗಿ ವೈಶಿಷ್ಟ್ಯಪೂರ್ಣ ಸ್ಥಳೀಯ ಸಂಸ್ಥೆಗಳು, ಸೃಷ್ಟಿಪುರಾಣ ಮತ್ತು ಮೌಖಿಕ ಪರಂಪರೆಗಳನ್ನು ಎದುರು ನಿಲ್ಲಿಸುವ ಮೀಮಾಂಸೆಯಾಗಿದೆ."** (ಜಿ.ಎಸ್. ಅಮೂರ ೧೯೯೧ ಪು.೧೬೫) ಇಲ್ಲಿಯೇ ಗಾಂಧಿಯವರ ನಿಲುವನ್ನು ಗ್ರಹಿಸಬೇಕು:

"ನನ್ನ ಹೋರಾಟ ಕೇವಲ ರಾಜಕೀಯವಾದುದಲ್ಲ, ಅದೊಂದು ಧರ್ಮಯುದ್ಧ. ಆದುದರಿಂದ ಅದು ಪೂರ್ಣ ಪರಿಶುದ್ಧವಾದುದು, ಅದರಲ್ಲಿ ಸಾವು ಬದುಕು ಎರಡಕ್ಕೂ ವ್ಯತ್ಯಾಸವಿಲ್ಲ." ಎಂದು ಗಾಂಧಿ ಹೇಳುತ್ತಾರೆ. ಅಂದರೆ ಅವರಿಗೆ ಕೇವಲ ರಾಜಕೀಯ ಅಧಿಕಾರಕ್ಕಾಗಿ ಹೋರಾಟವಲ್ಲ. ಅವರು ನಿರೀಕ್ಷಿಸುವ 'ಒಡೆತನ' ಎಂಬುದು ಸತ್ಯ ಮತ್ತು ಅಹಿಂಸೆಯ ಮೂಲಕವಾಗಿ ನಡೆಯುವ ಹೋರಾಟ. ಮಹಾತ್ಮ ಸಂಪುಟ ೧, ಗಾಂಧಿಭವನ, ಮಾನಸಗಂಗೊತ್ರಿ, ೧೯೭೪ ಅವರ ದೃಷ್ಟಿಯಲ್ಲಿ ಭಾರತದ ಸಾಂಸ್ಕೃತಿಕ ಪುನರುತ್ಥಾನದ 'ಸಪ್ತಪದ'ಗಳೆಂದರೆ ೧. ಗಾಂಧಿ ಪ್ರಣಿತ ಸ್ವರಾಜ್ಯ ಕಲ್ಪನೆ. ೨. ದಯಾನಂದ ಸರಸ್ವತಿಯವರು ಎತ್ತಿ ಹಿಡಿದ ವೇದ. ೩. ರಮಣ ಮಹರ್ಷಿಗಳು ಖಚಿತಗೊಳಿಸಿದ ಅಹಂ ನೆಲೆಯ ಸೂತ್ರ. ೪. ರವೀಂದ್ರನಾಥ ಟಾಗೋರರ ಕಲಾಸಿದ್ಧಿ. ಶಿಕ್ಷಣ ಪ್ರಯೋಗಗಳು ೫. ರಾಮಕೃಷ್ಣ ವಿವೇಕಾನಂದರು ದರಿದ್ರ ನಾರಾಯಣನಿಗೆ ತೋರಿಸಿದ ಜೀವನ ನರನಾರಯಣದರ್ಶನ ೬. ಕೃಷ್ಣಜೀಯವರು ತೋರಿಸಿದ ಜೀವನ ಸಾಫಲ್ಯದ ಮಾರ್ಗ ಮತ್ತು ೭. ಮಾನವನಲ್ಲಿ ಅವತರಿಸಿದ ದೈವಿಕತೆ. ಈ ಸಪ್ತಪದಗಳು ಬೇಂದ್ರೆಯವರು ಸ್ವೀಕರಿಸಿದ ಸಾಂಸ್ಕೃತಿಕ ಮೌಲ್ಯಗಳೆ ಎಂದರೆ ಸ್ವಾತಂತ್ರ್ಯ ಜ್ಞಾನ, ಕಲೆ, ಶಿಕ್ಷಣ, ಸಂವೃದ್ಧಿ ಜೀವನ ಸಾಪಲ್ಯ, ದೈವಿಕತೆಗಳ ಸಂಕೇತಗಳೂ ಪರಸ್ಪರ ಪೋಷಕ ಗುಣಗಳನ್ನು ಕಂಡುಕೊಂಡರು. ವಸಾಹತಿನ ಅನುಭವ ಬೇಂದ್ರೆಯವರ ಕಾವ್ಯದಲ್ಲಿ ನೇರವಾಗಿ ಅಭಿವ್ಯಕ್ತವಾಗುವುದಿಲ್ಲ. ನಿಜವಾಗಿಯೂ ಭಾರತೀಯ ಪುನರುತ್ಥಾನದ ಪ್ರಕ್ರಿಯೆಯಲ್ಲಿ ಅವರು ಗುರುತಿಸುವ ಅಂಶಗಳು ವಸಾಹತಿನ ಅನುಭವಕ್ಕೆ ಪ್ರತಿಕ್ರಿಯೆಯಾಗಿರುವ ಅಂಶಗಳೇ ಎನ್ನುವುದನ್ನು ಗಮನಿಸುವುದು ಅವಶ್ಯವಿದೆ. ಬೇಂದ್ರೆಯವರು ಪ್ರವೇಶಿಸಿರುವ ರೀತಿ ಸ್ವಸಾಂಸ್ಕೃತಿಕ ಮೌಲ್ಯಗಳ ಹುಡುಕಾಟದಲ್ಲಿ ಪ್ರಧಾನವಾಗಿದ್ದರೂ ಅದರ ಮುಖಾಂತರ ರಾಷ್ಟ್ರೀಯತೆಯ ಕಲ್ಪನೆಗಳನ್ನು ಭಿನ್ನ ಪ್ರಸ್ಥಾನಗಳಲ್ಲಿ ಮಾಡುತ್ತಾರೆ" ಎನ್ನುವುದು ಗಮನಾರ್ಹ. (ನೋಡಿ – ಮಲೆಗಳಲ್ಲಿ ಮದುಮಗಳು ಪುಟ ೬೮೯, ೬೯೧)

ಸಂಪ್ರದಾಯದಲ್ಲಿ ಒಳ್ಳೆಯದನ್ನು ಸ್ವೀಕರಿಸಬೇಕು ಎಂದು ತಿಳಿಯುವ ಬಹುತೇಕ ನವೋದಯ ಬರಹಗಾರರ ಚಿಂತನಾಕ್ರಮದ ಮೂಲಮಾದರಿಯು ಹೊಸ ಉತ್ಪಾದನಾ ಸಂಬಂಧಗಳ ಪರಿಣಾಮವಾಗಿದೆ. ಮಾಸ್ತಿಯವರು ಮತ್ತೆ ಪರಂಪರೆಗೆ ಮರಳುತ್ತಾರೆ ಎನ್ನುವುದು ಕನ್ನಡ ವಿಮರ್ಶೆಯಲ್ಲಿ ಬಹಳ ಹಳೆಯ ವಾದವಾದವಷ್ಟೇ! ಈ ವಾಗ್ವಾದದ ಮೂಲ ವೈಚಾರಿಕ ಚೌಕಟ್ಟುಗಳು ಭಿನ್ನ ಭಿನ್ನವಾಗಿರಬಹುದು. ಮಾಸ್ತಿಯವರು ಒಬ್ಬ ಬ್ರಾಹ್ಮಣರಾಗಿ ಕೆಲವರಿಗೆ ಕಂಡರೆ ಇನ್ನು ಕೆಲವರಿಗೆ ಹಿಂದೂ ಸಂಸ್ಕೃತಿಯ ಒಳಗಡೆ ಇರುವ ಉದಾರವಾದಿಯಾಗಿ ಕಾಣಿಸುತ್ತಾರೆ. (ಮಲೆಗಳಲ್ಲಿ ಮದುಮಗಳು ಪುಟ ೪೩೨ , ೪೩೩) ಬರಿಯ ವಸಾಹತುಶಾಹಿ ಅನುಭವವನ್ನು ಒಂದು ವೈಚಾರಿಕ ಚೌಕಟ್ಟಿಗೆ ಇಟ್ಟುಕೊಂಡರೆ ಈ ಚರ್ಚೆಯು ಬೇರೊಂದು ರೂಪವನ್ನು ಪಡೆಯಲೂಬಹುದು. ಯಾಕೆಂದರೆ ಹೊಸ ಉತ್ಪಾದನಾ ಸಂಬಂಧಗಳ ಪರಿವರ್ತನೆಗಳ ಸಂದರ್ಭದಲ್ಲಿ ಕನ್ನಡದ ಬಹುತೇಕ ನವೋದಯದ ಲೇಖಕರು ಕೈಗಾರಿಕಾ ನೀತಿಯನ್ನು ಒಪ್ಪಿಕೊಂಡವರಲ್ಲ. ಇಲ್ಲಿಯೂ ಸ್ವೀಕೃತಿ ಮತ್ತು ನಿರಾಕರಣೆಯ ಎರಡೂ ಪ್ರಕ್ರಿಯೆಗಳು ಜರುಗಿವೆ. ವಸಾಹತುಶಾಹಿ ಸಂದರ್ಭದಲ್ಲಿ ಸ್ಥಳೀಯ ಆರ್ಥಿಕ ನೀತಿಗೆ ಒಂದು ನಿರ್ದಿಷ್ಟ ತರ್ಕವೆನ್ನುವುದು ಇದೆ. ಬ್ರಿಟೀಷರ ಜೊತೆಗೆ ಬಂದ ಒಂದು ಹೊಸ ಉತ್ಪಾದನಾಸಂಬಂಧಗಳನ್ನು ಹೊರತುಪಡಿಸಿದರೆ ಹಳೆಯ ದೇಶೀಯ ಮಾದರಿಯ ಉತ್ಪಾದನಾಕ್ರಮವು ಬಹಳ ಭಿನ್ನವಾಯಿತು. ಹತ್ತಿಬಟ್ಟೆಯ ತಯಾರಿಕೆ ತಾಂತ್ರಿಕ ಕುಶಲತೆ ಮೊದಲಾದವುಗಳು ಇಲ್ಲಿಯ ಜಮೀನ್ದಾರಿ ಪದ್ಧತಿಯ ಸಂದರ್ಭಗಳಿಗೆ ಹೆಚ್ಚು ಪೂರಕವಾಗಿತ್ತು.

ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಉತ್ಪಾದನೆಯ ಸಂಬಂಧವು ಬದಲಾದುದಷ್ಟೇ ಅಲ್ಲ, ಅದರ ಮುಖಾಂತರ ಇಡಿಯ ಆಲೋಚನಾ ಕ್ರಮದ ಬದಲಾವಣೆಗೆ ಅದು ಕಾರಣವಾಯಿತು. ಈ ಉತ್ಪಾದನೆಯ ಕ್ರಮವನ್ನು ಪ್ರಭುತ್ವದ ಸಂಸ್ಕೃತಿಯು ತನಗೆ ಬೇಕಾದಂತೆ ಬಳಸಿಕೊಂಡರೂ ಆಳಿಸಿಕೊಳ್ಳುವ ಸಂಸ್ಕೃತಿಗೂ ಸರಳ ದ್ವಂದ್ವವು ಕಾಣಿಸಿಕೊಂಡಾಗ ಪ್ರಭುತ್ವವು ನಿರ್ಮಿಸಿದ ಕೇಡು ಎಂದು ಪರಿಭಾವಿಸಿಕೊಂಡರು. ಉತ್ಪಾದನಾಕ್ರಮದ ಪರಿವರ್ತನೆಯೇ ಕೇಡಿನ ಮೂಲಗ್ರಹಿಕೆಯ ಮಾತ್ರಕೆ ಅಲ್ಲ. ಕೆಲವು ಸಂದರ್ಭಗಳಲ್ಲಿ ರಾಷ್ಟ್ರೀಯವಾದಿಗಳು ಉತ್ಪಾದನಾ ಕ್ರಮದ ಪರಿವರ್ತನೆ, ವರ್ತಕಶಾಹಿ ನಿಲುವು ಪಾಶ್ಚಾತ್ಯೀಕರಣ ಎಲ್ಲವನ್ನೂ ಒಂದೇ ರೀತಿಯಲ್ಲಿ ಇರಿಸಿ ಗ್ರಹಿಸಿದ್ದರು. ಕುವೆಂಪು ಪರಿವರ್ತನೆಯನ್ನು ಕಾದಂಬರಿಯಲ್ಲಿ ಹೇಳುತ್ತಾರೆ. ಆದರೆ ಈ ಪರಿವರ್ತನೆಗಳು ನಮಗೆ ವಿವಿಧ ರೂಪಗಳಲ್ಲಿ ಸಿಗುತ್ತದೆ. ಹೂವಯ್ಯ ಬದಲಾಗಿದ್ದಾನೆ. ಸೀತೆ ಬದಲಾಗುತ್ತಾಳೆ. ಮುಕುಂದಯ್ಯ ಕೂಡಾ ಅಂತಿಮವಾಗಿ ಒಂದು ದರ್ಶನದಲ್ಲಿ ಬಂದು ನಿಲ್ಲುತ್ತಾನೆ. ಹಾಗೆಂದು ಅವರು ಯಾರೂ ವಾಸ್ತವವನ್ನು ಮರೆತಿಲ್ಲ. ಅದರ ನಡುವೆ ಇದ್ದಾರೆ.

ಈ ಹೊಸ ಪರಿಗ್ರಹಿಕೆಗಳಿಂದಾಗಿ ಕೆಲವು ಹೊಸ ರಾಜಕೀಯ ಪರಿಭಾಷೆಗಳು ಚಾಲ್ತಿಗೆ ಬಂದವು. ಬ್ರಿಟೀಷ್ ಕಂಪನಿಗಳ ಅಧಿಕೃತ ಪರಿಭಾಷೆಯೇ ಒಂದರ್ಥದಲ್ಲಿ ಭಾರತೀಯ ರಾಜಕೀಯ ಪರಿಭಾಷೆಯಾಗಿ ರೂಪುಗೊಂಡಿತು. ಬ್ರಿಟೀಷ್ ಕಂಪನಿಗಳು ಚಾಲ್ತಿಗೆ ತಂದ ಆಜ್ಞೆ ಅಥವಾ ನಿರೂಪವು ರಾಜಕೀಯ ಮುಖ್ಯ ಪರಿಭಾಷೆಯಾಗಿ ರೂಪುಗೊಂಡಿತು. ಇದು ಕಾನೂರು ಹೆಗ್ಗಡಿತಿಯಲ್ಲಿ ಬರುತ್ತದೆ.

ರಾಷ್ಟ್ರೀಯತೆಯ ಹೋರಾಟವು ವಸಾಹತುಶಾಹಿ ಸಂದರ್ಭದಲ್ಲಿ ಒಂದು ಅಳಿವು ಉಳಿವಿನ ಪ್ರಶ್ನೆಯೂ ಆಗಿರುತ್ತದೆ. ಈ ದೃಷ್ಟಿಯಿಂದ ಕಾರ್ಮಿಕರಿಗೆ ದೇಶವಿಲ್ಲವೆಂದು ನಂಬಿದ ಲೆನಿನ್ ಕೂಡ ಒಂದು ಹಂತದಲ್ಲಿ ವಸಾಹತುಶಾಹಿ ಮತ್ತು ಅರೆವಸಾಹತುಶಾಹಿ ದೇಶಗಳಲ್ಲಿ ಪ್ರಜಾಪ್ರಭುತ್ವ ಮಾದರಿಯ ರಾಷ್ಟ್ರೀಯ ಹೋರಾಟಗಳು ಪ್ರಾರಂಭವಾದರೂ ಅಲ್ಲಿ ಸಮಾಜವಾದಿಗಳು ಅದನ್ನು ಬೆಂಬಲಿಸಬೇಕೆಂದು ಪ್ರತಿಪಾದಿಸಿದ್ದು ಗಮನಾರ್ಹ. ಒಂದು ಹಂತದಲ್ಲಿ ಮಾರ್ಕ್ಸ್‌ವಾದಿಗಳು ರಾಷ್ಟ್ರೀಯತೆಯ ಕಲ್ಪನೆಯನ್ನು ಬೂರ್ಜ್ವಾ ಪ್ರತಿಕ್ರಿಯೆಯೆಂದು ಕರೆದರು. ಆನಂತರ ರಾಷ್ಟ್ರೀಯತೆಯ ಹೋರಾಟವನ್ನು ಕಾರ್ಮಿಕರ ಪರವಾದ ಶಕ್ತಿಸಂಚಯದ ನೆಲೆಯಿಂದ ಬೆಂಬಲಿಸಿದರು. ರಾಷ್ಟ್ರೀಯತೆಯು ಒಂದು ಭಾವನಾತ್ಮಕವಾದ ನಿಲುವಾಗಿದ್ದರೂ ಆನಂತರ ಅದನ್ನು ಕಾರ್ಮಿಕರ ಹೋರಾಟವಾಗಿಯೂ ಕೈಗೆತ್ತಿಕೊಳ್ಳಬಹುದು ಎಂದು ಲೆನಿನ್ ಭಾವಿಸಿದ್ದು ಸಕಾರಣವಾಗಿದೆ. ಡಿವಿಜಿಯವರು ಈ ರೀತಿಯ ಪರಿಕಲ್ಪನೆಗಳನ್ನು ವಿರೋಧಿಸುತ್ತಾರೆ. ಅಂದರೆ ಈ ದೃಷ್ಟಿಯಿಂದ ಡಿ.ವಿ.ಜಿ.ಯವರ ನಿಲುವು ಸಂಸ್ಕೃತಿಯ ಜೊತೆಗೆ ಅನುಸಂಧಾನ ನಡೆಸುವ ಮಾದರಿಯದ್ದು; ಮಾತ್ರವೇ ಅಲ್ಲ ಹಿಂದಿರುಗಿ ನೋಡುವಂಥದ್ದು. ಪುರೋಹಿತಶಾಹಿ ಸಂಸ್ಕೃತಿಯು ಈ ಸಂದರ್ಭದಲ್ಲಿ ಸಾಂಪ್ರದಾಯಿಕ ಮೌಲ್ಯಗಳ ಕಡೆಗೆ ತಿರುಗಿತು. ಆದರೆ ಈ ವಿಷಯದಲ್ಲಿ ಕುವೆಂಪು ಒಂದು ಭಿನ್ನವಾದ ನಿಲುವನ್ನು ತಳೆಯುತ್ತಾರೆ. ವಾಸ್ತವದ ಹಲವು ಮುಖಗಳು ಅವರಲ್ಲಿ ಕಾಣಿಸಿಕೊಳ್ಳುತ್ತದೆ. ರಾಷ್ಟ್ರ, ದೇಶ, ಆಧುನಿಕತೆ, ಮಿಶನರಿಗಳು, ಹಳ್ಳಿ – ಹೀಗೆ ಎಲ್ಲವೂ ಕ್ರಮೇಣ ಬದಲಾಗುವುದು ಅನಿವಾರ್ಯ

ಬೇಂದ್ರೆಯವರು ತಾತ್ವಿಕ ಪ್ರಣಾಳಿಕೆಯನ್ನು ಈ ರೀತಿಯಲ್ಲಿ ಎತ್ತಿ ಹಿಡಿಯುತ್ತಾರೆ. ಆದ್ದರಿಂದ ಕುವೆಂಪು ಹೇಳುವ ನಿಲುವು ಸ್ವಲ್ಪ ಬೇರೆಯಾಗಿ ಕಾಣುತ್ತದೆ. ಕುವೆಂಪು ದೇಶಭಕ್ತಿಯು ನಮಗೆ ಅವರ ಕವಿತೆಗಳಲ್ಲಿ ಕಾಣಿಸುತ್ತದೆ. ಅವರು ರಾಷ್ಟ್ರವನ್ನು ಮತ್ತು ದೇಶಭಕ್ತಿಯನ್ನು ಅನೇಕ ಕವಿತೆಗಳಲ್ಲಿ ಹೇಳಿದ್ದಾರೆ. ಅವರಿಗೆ ಅದು ನಿಗೂಢವಲ್ಲ. ಅದು ವ್ಯಕ್ತವಾದ ರೂಪದ್ದು. ಅದನ್ನೇ ನಾವು ಮುಕುಂದಯ್ಯನಲ್ಲಿ ಕಾಣುತ್ತೇವೆ. ಒಂದು ದರ್ಶನವು ಇದೆ. ಅದನ್ನು ನಾವು ನಿರ್ದಿಷ್ಟವಾದ ಸನ್ನಿವೇಶದ ಸೃಷ್ಟಿ ಎಂದು ಭಾವಿಸಬೇಕು. ಕಾನೂರು ಹೆಗ್ಗಡಿತಿ ಪ್ರಕಟವಾದ್ದು ೧೯೩೬ರಲ್ಲಿ. ಅದು ಬ್ರಿಟೀಷ್ ಆಳ್ವಿಕೆಯ ಕಾಲ. ಹತ್ತು ವರ್ಷಗಳಾದ ಮೇಲೆ ನಮಗೆ ಸ್ವಾತಂತ್ರ್ಯ ಹೋರಾಟದ ಸಂಗತಿಯನ್ನು ಹೇಳುತ್ತದೆ. ಅದರ ಜೊತೆಗೆ ಬಂದ ಕೆಲವು ಅನಿಷ್ಟಗಳನ್ನು ನಿರೂಪಿಸುತ್ತದೆ.

ಧಾರ್ಮಿಕ ಪ್ರತಿಭಟನೆಯ ಅಂಶವಾಗಿ ರೂಪುಗೊಂಡಿರುವ ಧರಣಿ ಸತ್ಯಾಗ್ರಹದಲ್ಲಿ ರಾಷ್ಟ್ರೀಯ ಚಳುವಳಿಯ ಪರಿಗೃಹೀತ ಕಲ್ಪನೆಗಳಿವೆ. ಇದು ಗಾಂಧಿ ಮಾದರಿಯ ಹೋರಾಟಕ್ರಮವನ್ನು ಸೂಚಿಸುತ್ತಿರುವಂತೆಯೇ ಗಾಂಧಿ ಚಳುವಳಿಯ ಮಾದರಿಯನ್ನು ಹೆಚ್ಚು ಜನಪ್ರಿಯಗೊಳಿಸಿತು. ಗಾಂಧಿ ಹೇಳಿಕೊಟ್ಟ ಸತ್ಯಾಗ್ರಹದ ಪರಿಕಲ್ಪನೆ: ಧರಣಿ ಸತ್ಯಾಗ್ರಹದ ಸ್ವರೂಪವು ಕನ್ನಡ ಬರಹಗಾರರ ಮೇಲೆ ಪ್ರಭಾವ ಬೀರಿದೆ. ಲಾವಣಿಕಾರರು ಈ ಸಂಗತಿಗಳನ್ನು ವಿವರಿಸಿದ್ದಾರೆ. ಈ ರೀತಿಯ ಪ್ರತಿಭಟನೆಯು ರಾಷ್ಟ್ರೀಯತೆಯನ್ನು ಒಂದು ಭಾವನಾತ್ಮಕ ವಲಯ ಕಂಡಿರಿಸುವುದಾಗಿತ್ತು. ರಾಷ್ಟ್ರೀಯತೆಯೆನ್ನುವುದು ಒಂದು ರೀತಿಯಿಂದ ಪ್ರಭುತ್ವದ ಮಾದರಿಗಾಗಿ ಅಳವಡಿಸಿಕೊಂಡ ಪರ್ಯಾಯ ಮಾರ್ಗ. ಈ ರೀತಿಯ ಪರ್ಯಾಯ ಮಾರ್ಗವನ್ನು ಸ್ವಾತಂತ್ರ್ಯ ಮತ್ತು

ಪ್ರಜಾಪ್ರಭುತ್ವವೆನ್ನುವ ಎರಡು ರೂಪಗಳಲ್ಲಿ ಹುಡುಕಲಾಯಿತು. ಚರಿತ್ರೆಕಾರರು ಹೇಳುವಂತೆ ರಾಷ್ಟ್ರೀಯತೆಯಲ್ಲಿ ಸ್ವಾತಂತ್ರ್ಯದ ಅಂಶವು ಸೇರಿಕೊಂಡಿದೆ. ರಾಷ್ಟ್ರೀಯತೆಯ ಅಂತಿಮ ಯಶಸ್ಸು ಇರುವುದು ಸಮಾಜದಲ್ಲಿಯೇ ಆಗಿದೆ. ಕಾನೂರು ಹೆಗ್ಗಡಿತಿಯಲ್ಲಿ ಬರುವ ಬುದ್ಧನ ಮಾರ್ಗದ ಚಿತ್ರವು ನಮಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು.

ಭಾರತೀಯ ರಾಷ್ಟ್ರೀಯತೆಯ ಆಂದೋಲನವು ಪಶ್ಚಿಮದ ವೈಚಾರಿಕ ಜಗತ್ತಿನ ಕೆಲವು ಭಾಗಗಳನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಭಾರತೀಯ ತಳಹದಿಯನ್ನು ರೂಪಿಸುವ ಪ್ರಯತ್ನ ಮಾಡಿತು. ವಾಸ್ತವವಾಗಿ ರಾಷ್ಟ್ರೀಯತೆಯ ಗೃಹೀತ ಕಲ್ಪನೆಯಲ್ಲಿ ಮೊದಲನೆಯದು. ಮನುಷ್ಯನ ಆಲೋಚನಾ ಕ್ರಮದಿಂದ ರೂಪುಗೊಳ್ಳುವ ಸ್ವಾತಂತ್ರ್ಯದ ರಾಷ್ಟ್ರ ಮತ್ತು ರಾಜಧಾನಿಯ ಅಂಶಗಳು ಇರುತ್ತವೆ.

ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ಬಂದ ಎರಡು ಪರಿಕಲ್ಪನೆಗಳು ಇಲ್ಲಿ ಮುಖ್ಯ. ಮೊದಲನೆಯದು ಆಳುವ ರಾಣಿಗೆ ಪರವಾಗಿರುವ ನಿಲುವು, ಇದು ಪ್ರಭುವಿನ ಸೇವೆಯನ್ನು ಮಾಡಬೇಕು ಎನ್ನುವ ಅಪೇಕ್ಷೆಯನ್ನು ಹೊಂದಿರುತ್ತದೆ. ಎರಡನೆಯದು ತಾಯಿಯ ಸೇವೆ, ಈ ಎರಡೂ ಪರಿಕಲ್ಪನೆಯು ಭಾರತೀಯ ಪರಂಪರೆಯಿಂದ ಬಂದಿರುವ ಅಂಶ. ಒಂದರ್ಥದಲ್ಲಿ ಭಕ್ತಿ, ವಿನಯ ಮೊದಲಾದವುಗಳು ಭಾರತೀಯ ಫ್ಯೂಡಲ್ ಸಂಸ್ಕೃತಿಯಿಂದ ಬಂದ ಪರಿಭಾಷೆಗಳಾಗಿವೆ. ಇದನ್ನು ಕುವೆಂಪು ಹೇಳುತ್ತಾರೆ. ಅವರ ಅತ್ಯಂತ ಸುಪ್ರಸಿದ್ಧವಾದ ಕವಿತೆಯಲ್ಲಿ ಬರುವ ಸಾಲುಗಳನ್ನು ಇಲ್ಲಿ ಉಲ್ಲೇಖಿಸಬಹುದು: "ಭಾರತಾಂಬೆಯನ್ನು ಪೂಜಿಸೋಣ ಬಾರ"

ಇನ್ನೊಂದು ರೀತಿಯ ಮಾದರಿಯಿರುವುದು ಅಲೌಕಿಕ ಶಕ್ತಿಯ ಕಲ್ಪನೆಯಲ್ಲಿ. ಇದು ಭೂಮಿ ತಾಯಿಯ ಪರಿಕಲ್ಪನೆಯಿಂದ ಪ್ರಾರಂಭವಾಗುತ್ತದೆ. ಅವಂತ ಸಂಸ್ಕೃತಿಯ ಆರಾಧನೆಯ ಕ್ರಮದಿಂದ ಸಂಗತಿಗಳು ಶುರುವಾಗುತ್ತವೆ. ಈ ಭಾರತಾಂಬೆಯನ್ನು ಹಾಡಿ ಹೊಗಳುವ ಮೂಲಕ ರಾಷ್ಟ್ರೀಯತೆ ಕಾಳಜಿಯ ಬಗೆಗೆ ಕನ್ನಡ ರಾಜಭಕ್ತಿಯ ಕಲ್ಪನೆಗಳು ಬಿ.ಎಂ.ಶ್ರೀ. ಮೊದಲಾದವರಲ್ಲಿ ಕಾಣಿಸುತ್ತದೆ. ಈ ರೀತಿಯ ಕಲ್ಪನೆಗಳು ಕನ್ನಡ ಸಾಹಿತ್ಯದಲ್ಲಿ ಒಂದು ಸುಂದರ ಕನಸಾಗಿ ಬಂತು ಎನ್ನುವುದು ಎಲ್ಲರಿಗೂ ವಿದಿತವಾದ ವಿಷಯ. ಭಾರತಮಾತೆಯನ್ನು ಒಂದು ಶಕ್ತಿಯನ್ನಾಗಿ, ದೇವತೆಯಾಗಿ ಕಂಡಿರುವ ನವೋದಯ ಕವಿಗಳು ರಾಷ್ಟ್ರೀಯತೆಯನ್ನು ಸಂಸ್ಕೃತಿ ಪರ(ಹಿಂದೂ) ಹಿನ್ನೆಲೆಯಲ್ಲಿಯೂ ಕಂಡುಕೊಂಡರು ಎನ್ನುವುದು ಗಮನಾರ್ಹ. ಕುವೆಂಪು ಕನ್ನಡಾಂಬೆ ಎಂದು ಕರೆಯುತ್ತಾರೆ. ಹಾಗೆಂದು ಕುವೆಂಪು ರಾಜಕಾರಣಿಯು ಅಲ್ಲ. ಅವರು ಕವಿ. ಎಲ್ಲಾ ಜಾತಿ ಮತ್ತು ಮತಗಳನ್ನು ಬಿಟ್ಟು ಹೊರಬನ್ನಿ ಎಂದು ಅವರು ಕರೆ ಕೊಡುತ್ತಾರೆ.

ಇಡಿಯ ರಾಷ್ಟ್ರೀಯ ಆಂದೋಲನವು ಎತ್ತಿಹಿಡಿದ ಸಮಾನತೆ, ಸ್ವಾತಂತ್ರ್ಯ ಮೊದಲಾದ ಪದಗಳು ಆಕರ್ಷಕವಾದ ಪದಗಳು. ಈ ಪದಗಳು ಹದಿನೆಂಟನೆಯ ಶತಮಾನದ ಆಳುವ ವರ್ಗ ಸೃಷ್ಟಿಸಿದ ಪದಗಳು ಕೂಡಾ ಹೌದು. ವಾಸ್ತವವಾಗಿ ಇವೆಲ್ಲಾ ಕಲ್ಪಿತ ಸಂಬಂಧಗಳನ್ನು ಸೃಷ್ಟಿಸುತ್ತದೆ. ಮಾರ್ಕ್ಸ್‌ವಾದಿಗಳ ಪ್ರಕಾರ ಆ ಪದಗಳು ಬಹುದೊಡ್ಡ ಜಾಗತಿಕ ಆದರ್ಶ ಅಷ್ಟೇ!

ಮಾಸ್ತಿ ಗೊರೂರು ಮೊದಲಾದವರು ಈ ಕಲ್ಪಿತ ಸಂಬಂಧಗಳನ್ನೇ ಎತ್ತಿಹಿಡಿಯುತ್ತಾರೆ. ಅದನ್ನೇ ಕುವೆಂಪು ಎರಡು ಕಾದಂಬರಿಗಳಲ್ಲಿ ಹೇಳುತ್ತಾರೆ. ಪ್ರದೇಶವನ್ನು ನೋಡಿದರೆ ಹೂವಯ್ಯ ಮತ್ತು ಮುಕುಂದಯ್ಯ ಇಬ್ಬರೂ ಅತ್ಯಂತ ಕಿರಿಯರು. ಉಳಿದ ಅನೇಕ ಪಾತ್ರಗಳು ಹಿರಿತನವನ್ನು ಪ್ರತಿನಿಧಿಸುತ್ತಾರೆ. ಪ್ರದೇಶದಲ್ಲಿ ತಾರತಮ್ಯಗಳು ಇವೆ. ಜಾತಿಯ ಪ್ರಶ್ನೆಗಳು ಇವೆ. ಕಾಡಿನ ದಟ್ಟ ಚಿತ್ರಗಳೂ ಸಿಗುತ್ತವೆ. ಕುವೆಂಪು ಇದನ್ನು ಪುನರ್ರಚನೆ ಮಾಡುತ್ತಾರೆ. ಇದರಲ್ಲಿ ಬರುವ ಒಕ್ಕಲಿಗ ಸಮಾಜವು ಪುರೋಹಿತಶಾಹಿಯನ್ನು ಹೇಳುವುದಿಲ್ಲ. ಜೀವನದ ಸಹಜವಾದ ಚಿತ್ರಗಳೇ ಕಥನವನ್ನು ಹೇಳುತ್ತವೆ.

ಅಧ್ಯಾಯ

ಕಾನೂರು ಹೆಗ್ಗಡಿತಿಯನ್ನು ಒಂದು ಪೂರ್ಣವಾದ ಪಠ್ಯ ಎಂದು ಹೇಳುವುದಾದರೆ ಅದರ ಉಪಪಠ್ಯಗಳು ಈ ಕೆಳಗಿನಂತೆ ಇವೆ. ಎಲ್ಲಾ ತೊರೆಗಳು ಸೇರಿ ಒಂದು ನದಿಯು ಆದಂತೆ ಈ ಕಾದಂಬರಿಯಲ್ಲಿ ಅನೇಕ ಉಪಪಠ್ಯಗಳು ಸೇರಿಕೊಂಡು ಒಂದು ಪೂರ್ಣವಾದ ಪಠ್ಯವು ಆಗುತ್ತದೆ.

೧. ರಾಮತೀರ್ಥದೆಡೆ ಕಬ್ಬುಖಾರದ ಮೇಲೆ – ಇದು ಪ್ರಾರಂಭದ ಒಂದು ಸೂಚನೆಯನ್ನು ಕೊಡುತ್ತದೆ. ಇನ್ನೂ ನಡುಹಗಲಾಗದಿದ್ದರೂ ಬೇಸಗೆಯ ಬಿಸಿಲು ಸುಡುತ್ತಿದ್ದುದರಿಂದ ತೀರ್ಥಹಳ್ಳಿಯ ಕಲ್ಲು ಸಾರದ ಮಾರ್ಗವಾಗಿ ತುಂಗಾ ನದಿಯನ್ನು ದಾಟುತ್ತಿದ್ದ ಇಬ್ಬರು ತರುಣರು ಬಿಸಿಲ ಬೇಗೆಗೆ ಬಳಲಿ, ಬೆವರಿ, ವಾಹಿನಿಯ ದಕ್ಷಿಣ ತಟದಲ್ಲಿ ಕೊಬ್ಬಿ ಬೆಳೆದಿದ್ದ ಮರಗಳ ಹಸುರು ನೆಳಲನ್ನು ಆಶ್ರಯಿಸಲೆಂಬಂತೆ ಬೇಗಬೇಗನೆ ನಡೆಯುತ್ತಿದ್ದರು. ಅವರನ್ನು ನೋಡಿದ ಕೂಡಲೆ ಶ್ರೀಮಂತರ ಮನೆಯವರೆಂದು ಗೊತ್ತಾಗುತ್ತಿತ್ತು. ಬಹುದೂರದಿಂದ ಬಂದ ಆಯಾಸದಿಂದಲೂ ಸಕಾಲಕ್ಕೆ ನಿದ್ರಾಹಾರಗಳು ದೊರೆಯದಿದ್ದುದರಿಂದಲೂ ಕಾಂತಿಯುಕ್ತವಾಗಿರುತ್ತಿದ್ದ ಅವರ ಮುಖಗಳು ನಸುಬಾಡಿದ್ದುವು. (ಕಾನೂರು ಹೆಗ್ಗಡತಿ ; ಕುವೆಂಪು ; ಉದಯರವಿ ಪ್ರಕಾಶನ ಮೈಸೂರು ; ಪುಟ–೧) ಹೂವಯ್ಯನನನ್ನು ಇದು ಚಿತ್ರಿಸುತ್ತದೆ. ಹೂವಯ್ಯ ಊರಿಗೆ ಬರುತ್ತಾನೆ ಎನ್ನುವುದು ಇದರ ಸಾರ.

೨. ರಸ್ತೆಯಲ್ಲಿ ಶನಿ – ಗಾಡಿಯು ಬೀಳುವುದು ಇಲ್ಲಿ ಚಿತ್ರಿತವಾಗಿದೆ. ಅಷ್ಟೇ ಅಲ್ಲ ಹೂವಯ್ಯನಿಗೆ ಇದರಲ್ಲಿ ನೋವನ್ನು ಅನುಭವಿಸುತ್ತಾನೆ. ರಸ್ತೆಯ ಶನಿ ಎನ್ನುವುದು ಇಲ್ಲಿ ಸಾಂಕೇತಿಕವಾದ ಅರ್ಥವನು ಪಡೆಯುತ್ತದೆ. ಹೂವಯ್ಯನ ನೋವು ಮಾತ್ರವೇ ಇಲ್ಲಿ ಮುಖ್ಯ.

೩. ಚೆನ್ನಯ್ಯನ ಮೀನು ಶಿಕಾರಿ – ಹೆಸರು ಹೇಳುವಂತೆ ಇದರಲ್ಲಿ ಮೀನಿ ಶಿಕಾರಿಯ ವಿಶಿಷ್ಟತೆಯು ಎದ್ದು ಕಾಣುತ್ತದೆ.

೪. ಸೀತೆಯ ಚಿತ್ರವನ್ನು ನಾವು ಇದರಲ್ಲಿ ಕಾಣುತ್ತೇವೆ. ಸೀತೆ, ಚಿನ್ನಯ್ಯ ಮತ್ತು ಗೌರಮ್ಮರ ಚಿತ್ರವು ಇಲ್ಲಿ ಸಿಗುತ್ತವೆ. – ಮನೋವೈಜ್ಞಾನಿಕ ದೃಷ್ಟಿಕೋನದಿಂದ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯನ್ನು

ಮಾಡುವಾಗ ಮಹಿಳೆಯರ ಮನಸ್ಥಿತಿ ಮತ್ತು ಬರವಣಿಗೆಯ ಸೃಜನಶೀಲವಾದ ಬಿಕ್ಕಟ್ಟುಗಳನ್ನು ಕುರಿತಂತೆ ಚರ್ಚಿಸಬೇಕಾಗುತ್ತದೆ. ದೈಹಿಕ ಮತ್ತು ಭಾಷಿಕ ಮಾದರಿಗಳ ಕುರಿತು ಈಗಾಗಲೇ ಮನಃಶ್ಶಾಸ್ತ್ರೀಯ ದೃಷ್ಟಿಕೋನದಿಂದ ಬೇರೆ ಬೇರೆ ರೀತಿಯ ಚರ್ಚೆಗಳು ಬೆಳೆದು ಬಂದಿವೆ. ಒಂದು ಸಮಾಜದ ನಿರ್ದಿಷ್ಟವಾದ ಪರಿಸ್ಥಿತಿಯೊಳಗೆ ಸ್ತ್ರೀ ಪುರುಷರ ನಡುವಿನ ಸಂಬಂಧಗಳ ನಿರ್ವಚನಗಳನ್ನು ಬೇರೆ ಬೇರೆ ಮಾದರಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಮನಶ್ಶಾಸ್ತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿರುವ ಸಿಗ್ಮಂಡ್ ಫ್ರಾಯ್ಡ್. ಅಂತಿಮವಾಗಿ ಭಾಷೆ, ಸಂಸ್ಕೃತಿ ಮತ್ತು ಭ್ರಮಾಧೀನ ಜಗತ್ತು ಹಾಗೂ ಮಹಿಳೆಯರ ನಡುವಿನ ಸಂಬಂಧವನ್ನು ಬೇರೊಂದು ರೀತಿಯಿಂದ ವ್ಯಾಖ್ಯಾನಿಸಿದ್ದಾನೆ. ಫ್ರಾಯ್ಡ್‌ನ ಸುಪ್ರಸಿದ್ಧ ಈಡಿಪಸ್ ಕಾಂಪ್ಲೆಕ್ಸ್ ಕಲ್ಪನೆಯು ತಾಯಿ ಮತ್ತು ಮಗನ ಮಧ್ಯದ ಲೈಂಗಿಕ ಸಂಬಂಧದ ಸಿಂಬಾಲಿಕ್ ಅಭಿವ್ಯಕ್ತಿ ಎಂದು ಭಾವಿಸುತ್ತದೆ. ಆದರೆ ಜಾಕೋಸ್‌ಲಕಾನ್ ಎನ್ನುವ ಮನೋವಿಜ್ಞಾನಿ ಅದಕ್ಕೆ ತದ್ವಿರುದ್ಧವಾದ ನಿಲುವು ತಳೆದಿದ್ದು, ಭಾಷೆ ಅನ್ನುವುದೇ ಒಂದು ಸಾಂಕೇತಿಕ ವ್ಯವಸ್ಥೆಯೇ ಹೊರತು ಅದರಾಚೆಗೆ ಏನೂ ಅಲ್ಲ. ಈ ದೃಷ್ಟಿಯಿಂದ ಭಾಷೆ ಅನ್ನುವುದು ಗ್ರಹಿಸುವಾಗಲೇ ತಮ್ಮ ಮನೋ ವ್ಯಾಪಾರವು ಬೇರೆ ಬೇರೆ ಕೇಂದ್ರಗಳ ಮುಖಾಂತರ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುತ್ತದೆ ಎಂದು ಹೇಳಿದ. ಜಾಕೂಸ್ ಲಕಾನ್‌ನ ಈ ಸಿದ್ಧಾಂತವನ್ನು ಸ್ವಲ್ಪ ಮಟ್ಟಿಗೆ ಕೆಲವರು ಒಪ್ಪಿಕೊಂಡಿದ್ದಾರೆ. ಭಾಷೆ ಎನ್ನುವುದೇ ಪಿತೃರೂಪೀ ಸಂಸ್ಕೃತಿಯ ಸಂಕೇತವಾಗಿದೆ. ಹಾಗೂ ಪಿತೃ ಸಂಸ್ಕೃತಿಗೆ ಅನುಗುಣವಾಗಿ ಭಾಷೆಗೆ ನಿರ್ದಿಷ್ಟವಾದ ಅರ್ಥಗಳನ್ನು ಕೊಡಲಾಗಿದೆ. ಹೀಗಾಗಿ ಭಾಷೆಯ ನಿಯಮಾವಳಿಯೂ ಕೂಡಾ ಒಂದರ್ಥದಲ್ಲಿ ಪಿತೃಪ್ರಧಾನ ಸಂಸ್ಕೃತಿಎಂಬ ವ್ಯವಸ್ಥೆಯ ಒಳಗಡೆ ಹೊಂದಿಕೊಂಡಿರುವುದರಿಂದ ಆ ನಿಯಮದಲ್ಲಿ ಸ್ತ್ರೀಯೊಬ್ಬಳು ತನ್ನನ್ನು ತಾನೇ ಹೇಗೆ ಗುರುತಿಸಿಕೊಳ್ಳಬಲ್ಲಳು ಎಂದು ಸ್ತ್ರೀವಾದಿಗಳು ಕೇಳುತ್ತಾರೆ. ಹಾಗೆ ನೋಡಿದರೆ ಇದರಲ್ಲಿ ಬೇರೆ ಬೇರೆ ಸಮಸ್ಯೆಗಳು ಇವೆ.

ಮನಶ್ಶಾಸ್ತ್ರೀಯ ದೃಷ್ಟಿಕೋನದಿಂದ ವಿಮರ್ಶೆ ನಡೆಸುವ ಸ್ತ್ರೀವಾದಿಗಳು ಸ್ತ್ರೀತ್ವವನ್ನು ನಿರ್ದಿಷ್ಟ ವ್ಯಾಖ್ಯಾನ ಎನ್ನಲಾಗಿದ್ದು ಸ್ತ್ರೀತ್ವ ಎನ್ನುವುದನ್ನು ಒಂದು ಅವಗುಣವೆಂದು ಪರಿಗಣಿಸುವುದಿಲ್ಲ. ಮತ್ತು ಈಡಿಪಸ್ ಮಾದರಿಯಲ್ಲಿರುವಂತೆ ತಂದೆ ಮತ್ತು ಮಗನಿಗೆ ಸದಾ ದ್ವೇಷವೇ ಇರುತ್ತದೆ ಎಂದು ಪರಿಗಣಿಸಲಾಗುವುದಿಲ್ಲ. ಈ ದೃಷ್ಟಿಯಿಂದ ಬರವಣಿಗೆ ಎನ್ನುವುದು ಅವಳ ಅನುಭವ ಮತ್ತು ಸ್ತ್ರೀತ್ವದ ಅನನ್ಯತೆಯನ್ನು ಸೂಚಿಸುತ್ತಿರುತ್ತದೆ. (ಕನ್ನಡದಲ್ಲಿ ನವೋದಯ ಕಾಲದ ತಿರುಮಲಾಂಬ ಮೊದಲಾದ ಲೇಖಕಿಯರ ಬರವಣಿಗೆಯಲ್ಲಿ ಕಾಣಿಸಿಕೊಳ್ಳುವ ಸ್ತ್ರೀಪರ ನಿಲುವು ಬೇರೆ. ಅವರು ಉದಾರವಾದಿ ಮಾನವತಾವಾದಿ ನೆಲೆಯಿಂದ ನೋಡಿರುವ ಸ್ತ್ರೀತ್ವದ ನೆಲೆಗಳು ಭಿನ್ನವಾಗಿರುತ್ತದೆ. ನವೋದಯಕ್ಕೆ ಸಂಬಂಧಿಸಿದಂತೆ ಸ್ತ್ರೀ ಶಿಕ್ಷಣ, ವಿಧವಾ ವಿವಾಹ ಮೊದಲಾದ ವೈಚಾರಿಕ ಹಂದರಗಳು ತಿರುಮಲಾಂಬಾ ಮೊದಲಾದವರ ಬರವಣಿಗೆಯಲ್ಲಿ ಕಾಣಿಸಿತು.) ಒಂದು ಕಾಲಘಟ್ಟದ ಸ್ತ್ರೀವಾದಿ ಲೇಖಕಿಯರ ಮನೋಭಾವಗಳು, ಅವರ ಏಕಾಂತ, ಗಂಡಸಿನ ದಬ್ಬಾಳಿಕೆ ಇವು ಎಲ್ಲವೂ ನೇರವಾಗಿ ಸ್ತ್ರೀವಾದಿ ಓದುಗರಿಗೆ ಸಂಬಂಧಪಡದೇ ಇದ್ದರೂ ಸ್ತ್ರೀ ಸಂಬಂಧದ ರೂಪಗಳು ಇಂಥಲ್ಲಿ ಬೇರೆಯಾಗಿರುತ್ತವೆ. ಮತ್ತು ಈ ಬರವಣಿಗೆಯಲ್ಲಿ ಒಂದು

ಸಣ್ಣ ಸ್ವನಾಟಕೀಯತೆಯ ಸ್ವರೂಪ, ಅಭಿವ್ಯಕ್ತಿಯ ಕ್ರಮದಲ್ಲಿರುವ ಕೀಳರಿಮೆ ಮತ್ತು ಅಸ್ತಿತ್ವಕ್ಕೆ ನಡೆಸುವ ಹೋರಾಟ ಭಾಷೆಯ ಮುಖೇನ ಅಭಿವ್ಯಕ್ತವಾಗುತ್ತದೆ. ಇಂತಹ ಸಂದರ್ಭದಲ್ಲಿ ಸ್ತ್ರೀಯರ ಸ್ವಅನನ್ಯತೆಯ ಅಭಿವ್ಯಕ್ತಿಗೆ ಅದರದೇ ಆದ ಚಹರೆಗಳಿರುತ್ತವೆ. ಭಾಷೆಯನ್ನು ಕಲಿಯುವ ಕ್ರಮದಲ್ಲಿ ಒಬ್ಬಳು ಹುಡುಗಿ ಮತ್ತು ಒಬ್ಬ ಹುಡುಗನ ಕ್ರಮಕ್ಕೂ ವ್ಯತ್ಯಾಸವಿದೆ. ಹುಡುಗ ಭಾಷೆಯಲ್ಲಿ ತನ್ನ ಅಧಿಕೃತ ಚಹರೆ ಸ್ಥಾಪಿಸಿದರೆ ಭಾಷೆಯಲ್ಲೇ ಸ್ತ್ರೀ ತನ್ನ ಪರಕೀಯತೆಯನ್ನು ಅನುಭವಿಸುತ್ತಾಳೆ. ಆದರೆ ಎಲ್ಲರ ಮನೆಯಲ್ಲೂ ಮಗುವಿನ ಹಿತ ಸಂರಕ್ಷಣೆಯನ್ನು ತಾಯಿಯೇ ಮಾಡುತ್ತಾಳೆಂಬುದನ್ನು ಮರೆಯಲಾಗದು. ಇದೇ ದೃಷ್ಟಿಯಲ್ಲಿಯೇ ಸ್ತ್ರೀವಾದಿ ಚರ್ಚೆ ಶುರುವಾಗುವುದು. ಬರವಣಿಗೆ ಎನ್ನುವುದು ಸ್ತ್ರೀಯರಿಗೆ ಅವರ ಅನನ್ಯತೆಯ ದ್ಯೋತಕ. ಬರಹವನ್ನು ಸ್ತ್ರೀಯು ಅದು ತನ್ನದೇ ಕೂಸು ಎಂಬಂತೆ ಪರಿಭಾವಿಸುತ್ತಾಳೆ. ಈ ದೃಷ್ಟಿಯಿಂದ ಇದು ಮಹತ್ವಪೂರ್ಣ ಅಡಿಗಲ್ಲಾಗಿದೆ. ಸಾಮಾಜಿಕ, ಸಾಂಸ್ಕೃತಿಕ, ಚಾರಿತ್ರಿಕ ಬದಲಾವಣೆಯ ಮುಖ್ಯ ಪ್ರತಿಮೆಯಾಗಿ ಈ ಕಲ್ಪನೆಯು ಕೆಲಸ ಮಾಡುತ್ತದೆ. ಬರೆಯುವುದು ಅಂದರೆ ವಸಾಹತೀಕರಣದ ಕಾಲದಲ್ಲಿ ಒಂದು ಹೊಸಬಗೆಯ ಜ್ಞಾನದ ಪ್ರವೇಶವೂ ಆಗಿದೆ. ೧೦.ಬಿಂಕದ ಸಿಂಗಾರಿ ೧೯.ಮಾಯಗಾರ್ತಿ ಗಂಗೆ ೫.ಕಾನೂರು ಚಂದ್ರಯ್ಯಗೌಡರ ಮೂರನೆಯ ಹೆಂಡತಿ೨೦.ಸೀತೆ – ಹೂವಯ್ಯ೨೧.ಆ ಹೊಸಬಿ ಅಪ್ಪಯ್ಯನ ಹೆಂಡತಿಯೆ!

೬. ಸೇರೆಗಾರರ ಕೇಪಿನ ಕೋವಿ – ಇದನ್ನು ಹೀಗೆ ನೋಡಬಹುದು. ಮನೋವಿಜ್ಞಾನ ಮತ್ತು ಮಾರ್ಕ್ಸವಾದದ ಕುರಿತಾದ ಚರ್ಚೆಯು ಗಮನಾರ್ಹವಾಗಿದೆ. ಒಂದು ಮತ್ತೊಂದರ ಮೇಲೆ ಪ್ರಭಾವವನ್ನು ಬೀರಿರುವುದೂ ನಿಜ. ನಿರಚನ ಸಿದ್ದಾಂತಕ್ಕೆ ಪ್ರೇರಣೆಯನ್ನು ನೀಡಿದ ಜೇಕೂಸ್ ಲಕಾನ್‌ನ ನಿಲುವು ಇಲ್ಲಿ ಉಲ್ಲೇಖನೀಯ. ಲಕಾನ್‌ನ ಸಿದ್ದಾಂತವು ಒಂದು ಕಡೆಯಿಂದ ಮನೋವಿಜ್ಞಾನವೂ ಹೌದು. ಮತ್ತೊಂದು ಕಡೆಯಿಂದ ಅದು ಸಾಂಸ್ಕೃತಿಕ ವಿಮರ್ಶೆಯ ಮೇಲೂ ಪ್ರಭಾವ ಬೀರಿದೆ. ಅವನ ವಾದವನ್ನು ಜೇಮ್ಸನ್, ಹೊಸ ವಾದ ಹೌದು ಆದರೆ ಅದು ಸಂಕರಗೊಂಡಿದೆ ಎಂದು ಹೇಳುತ್ತಾನೆ. ಇದಕ್ಕಿಂತ ಮೊದಲು ಸಾರ್ತ್ರೆಯ ಹೇಳಿರುವುದು ಗಮನಾರ್ಹ. ಅವನು ಹೀಗೆ ಹೇಳುತ್ತಾನೆ– "ಮನೋವಿಜ್ಞಾನ ಮತ್ತು ಮಾರ್ಕ್ಸವಾದವು ಜೊತೆಯಲ್ಲಿ ಹೋಗಬೇಕಾದ ಅಗತ್ಯವಂತೂ ಇದೆ. ಇದನ್ನು ಯಾರೂ ತಿರಸ್ಕರಿಸುವುದಿಲ್ಲವೆಂದು ನಂಬುತ್ತೇನೆ. ಯಾಕೆಂದರೆ ಈಗ ಮನೋವಿಜ್ಞಾನವು ತನ್ನ ಪ್ರೈಮರಿ ಹಂತವನ್ನು ದಾಟಿದೆ. ಅದು ನಿಜವಾಗಿಯೂ ಮಾರ್ಕ್ಸವಾದದ ಜೊತೆಗೆ ಸೇರಿದರೆ ಬಹಳ ದೊಡ್ಡ ವೈಚಾರಿಕ ಕ್ರಾಂತಿಯಾಗಲು ಸಾಧ್ಯ. ಈ ದೃಷ್ಟಿಯಿಂದ ನಾವು ಯಾಕೆ ಪ್ರಯತ್ನಿಸಬಾರದು?" (೧೯೭೫) ಲಕಾನ್‌ನ ಸಿದ್ಧಾಂತದಲ್ಲಿ ಒಂದು ತರ್ಕವೂ ಇದೆ. ಆದುದರಿಂದ ಅದನ್ನು ಅನೇಕ ಸಿದ್ದಾಂತಗಳು ಅನ್ವಯಿಸಿಕೊಂಡವು. ಲಕಾನ್ ಹೇಳಿದ ಕೆಲವು ಅಂಶಗಳು ಅನ್ವಯಕ್ಕೆ ಸಾಧ್ಯವಾದವು. ಮಾರ್ಕ್ಸವಾದದ ಹೊಸ ರೀತಿಯ ಅನ್ವಯಕ್ಕೆ ಅವನ ವಾದಗಳು ಸಹಾಯವನ್ನು ಮಾಡಿದವು. ಮಾರ್ಕ್ಸವಾದ ಮತ್ತು ಲಕಾನಿನ ಮನೋವಿಜ್ಞಾನವು ಸಾಂಸ್ಕೃತಿಕ ಮನೋವಿಜ್ಞಾನವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಸಾಂಸ್ಕೃತಿಕ ಮನೋವಿಜ್ಞಾನದ ದೃಷ್ಟಿಯಿಂದ ಲಕಾನ್ ಹೇಳುವ ನಿಲುವು ಮುಖ್ಯವಾದುದು. ಅವನ ನಿಲುವು ಒಂದು ಪ್ರಮುಖವಾದ ನಿಲುವನ್ನು ಹೇಳುತ್ತದೆ. ಅದು

ಯಜಮಾನಿಕೆಗೆ ಸಂಬಂಧ ಪಟ್ಟಂತೆ ಇದೆ. ಮಾರ್ಕ್ಸವಾದದ ಪ್ರಮುಖ ಅಂಶಗಳು ಹೀಗಿವೆ– ಯಜಮಾನಿಕೆ, ತಾತ್ವಿಕತೆ, ವರ್ಗ ಸಂಘರ್ಷ. ಇವುಗಳನ್ನು ಕುರಿತು ವಿವರಿಸುವಾಗ ಲಕಾನ್‌ವಾದಗಳು ಉಪಯೋಗಕ್ಕೆ ಬರುತ್ತವೆ. ಆದರೆ ಲಕಾನ್‌ವಾದವನ್ನು ನೇರವಾಗಿ ಅನ್ವಯಿಸಲು ಬರುವುದಿಲ್ಲ. ಹಾಗೆಂದು ಲಕಾನಿನ ನಿಲುವನ್ನು ಸಂಕಥನದ ದೃಷ್ಟಿಯಿಂದ ಅಲ್ಲಗಳೆಯಲು ಬರುವುದಿಲ್ಲ. ಲಕಾನಿನ ನಿಲುವನ್ನು ಮಾರ್ಕ್ಸವಾದಕ್ಕೆ ಪರ್ಯಾಯವೆಂದು ಭಾವಿಸಬೇಕಾಗಿಲ್ಲವೆಂದು ಹೇಳುತ್ತಾರೆ. ಮೇಲು ನೋಟಕ್ಕೆ ಯಾವುದನ್ನು ನಾವು ಸತ್ಯವೆಂದು ಕರೆಯುತ್ತೇವೆಯೋ ಅದು ಮಾತ್ರವೇ ಸತ್ಯವಲ್ಲ. ಮತ್ತು ಅವನ ನಿಲುವು ಸೈದ್ಧಾಂತಿಕವಾದ ವಾಗ್ವಾದವೂ ಹೌದು. ಹಾಗೆ ನೋಡುವುದಿದ್ದರೆ ಸೈದ್ಧಾಂತಿಕವಾಗಿ ಮಹತ್ವದ ಪ್ರಶ್ನೆಯನ್ನು ಲಕಾನ್ ಎತ್ತಿಕೊಂಡಿದ್ದ. ನೇರವಾಗಿ ಲಕಾನ್ ಮಾರ್ಕ್ಸವಾದವನ್ನು ಬಳಸಿಕೊಂಡಿಲ್ಲ. ಲಕಾನ್ ಸಿದ್ಧಾಂತವು ತನ್ನದೇ ಮಾನದಂಡವನ್ನು ಇಟ್ಟುಕೊಂಡಿದೆ. ಲಕಾನಿನ ವಾದವನ್ನು ನಾವು ಆಯ್ಕೆ ಮಾಡಿಕೊಳ್ಳುವಾಗ ಅದನ್ನು ನಾವು ನೇರವಾಗಿ ಅನ್ವಯಿಸುವಂತಿಲ್ಲ. ಭಾಷೆ ಮತ್ತು ಅದರ ಅಭಿವ್ಯಕ್ತಿಯ ಕುರಿತು ಆಲೋಚಿಸುವಾಗ ಅದರ ಆಯ್ಕೆಗಳಲ್ಲಿ ಇರುವ ಪ್ರಶ್ನೆಯು ಮುಖ್ಯವಾಗಿದೆ. ಯಾವುದನ್ನು ನಾವು ಬರೆಯಬೇಕು ಮತ್ತು ಯಾವುದನ್ನು ಬರೆಯಬಾರದು ಎನ್ನುವುದೂ ಸಹಜವಾಗಿಯೇ ಮನೋಸ್ಥಿತಿಯನ್ನು ಅವಲಂಬಿಸಿದೆ. ಅದನ್ನೂ ನಾವು ಗಮನಿಸಬೇಕು. ಈ ಪ್ರಶ್ನೆಯು ನಮಗೆ ವಸಾಹತು ಕಾಲದಲ್ಲಿ ಬಂತು. ಬರಹ ಮತ್ತು ಅದರ ನೇಯ್ಗೆಯು ಯಾವ ರೀತಿಯಲ್ಲಿ ಇರಲು ಸಾಧ್ಯ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆಯೂ ಆಗಿತ್ತು. ಆದ್ದರಿಂದ ನಿಯ್ಗೆಯು ಈ ರೀತಿಯಲ್ಲಿ ಇದೆ. ಕೋವಿ ಒಂದು ಆಯುಧ. ಆದರೆ ಅದು ಪರಿಸರವನ್ನು ಯಜಮಾನಿಕೆಯನ್ನು ಸ್ಥಾಪಿಸಿಕೊಳ್ಳುವ ಪವೃತ್ತಯನ್ನು ಹೇಳುತ್ತದೆ.

ಬ್ರಿಟೀಷ್ ರಾಜಸತ್ತೆಯ ನಿಯಮದ ಪರಿಭಾಷೆಯನ್ನು ರಾಜಕೀಯ ಪರಿಭಾಷೆಯಾಗಿ ಬಳಸಿಕೊಂಡಿದ್ದ ಹಾಗೆಯೇ ಭಾರತೀಯ ಸಾಮಾಜಿಕ ಅಭಿವೃದ್ಧಿ ಪರಿಭಾಷೆಯನ್ನು ಅದು ಬಳಸಿಕೊಂಡಿತು. ಈ ಅಭಿವೃದ್ಧಿ ಅನ್ನುವುದು ಒಂದು ರೀತಿಯಿಂದ ಭಾರತೀಯ ಸಾಮಾಜಿಕ ಧೋರಣೆಯನ್ನು ಬದಲಾಯಿಸುವ ಅಂಶಗಳನ್ನು ಒಳಗೊಂಡಿಲಿಲ್ಲ. ಬ್ರಿಟೀಷ್ ರಾಜಸತ್ತೆಗೆ ಪೂರಕವಾಗಿ ಬಂದ ಈ ಪರಿಭಾಷೆಯು ಭಾರತೀಯ ಪರಿಸರದಲ್ಲಿ ಕೆಲವು ಬದಲಾವಣೆಗಳನ್ನು ತಂದಿತು. ಅಭಿವೃದ್ಧಿಯು ಆಳುವ ವರ್ಗಕ್ಕೆ ಹಿತಕಾರಿಯಾದ ನಿಲುವಾಗಿದ್ದರೂ ಆಳಿಸಿಕೊಂಡ ಜನ ಈ ಅಭಿವೃದ್ಧಿಯಿಂದ ಕೆಲವು ಅನುಕೂಲಗಳನ್ನು ಪಡೆದುಕೊಂಡಿತು. ಆದರೆ ಇದಕ್ಕೆ ಭಿನ್ನಭಿನ್ನ ಪ್ರತಿಕ್ರಿಯೆಗಳು ಕೂಡಾ ಬಂದವು. ಅಭಿವೃದ್ಧಿ ಎನ್ನುವುದು ಒಂದು ತಾಂತ್ರಿಕ ಪರಿಭಾಷೆಯಾದಾಗ ಅಲ್ಲಿ ಯಂತ್ರದ ಮಾದರಿಗಳು ಮುಖ್ಯವಾಗುತ್ತವೆ. ಯಂತ್ರದ ಪರಿಭಾಷೆಯನ್ನು ಹೊರತುಪಡಿಸಿದರೆ ಅಭಿವೃದ್ಧಿ ಎಲ್ಲಾ ನೆಲೆಗಳನ್ನು ಪಡೆದುಕೊಳ್ಳುತ್ತದೆ.

ಜಾತೀಯ ಸಮಸ್ಯೆ ಬಂದಾಗ ಬಹಳ ಉದಾರವಾಗಿ ನಡೆದುಕೊಂಡಿತು. ಅದರೆ ಮತೀಯ ಸಮಸ್ಯೆ ಬಂದಾಗ ಇಷ್ಟೊಂದು ಉದಾರವಾಗಿ ನಡೆದುಕೊಂಡಿಲ್ಲ. ಗಾಂಧೀ ಮಾದರಿಯ ಹೋರಾಟದ ಆದರ್ಶ ಇದಕ್ಕೆ ಒಂದು ಮೂಲ ನೆಲೆಯಾಗಿದ್ದರೆ: ಇನ್ನೊಂದು ಕ್ರಿಶ್ಚಿಯನ್ ಮಿಷನರಿಗಳ ಬಗೆಗಿನ ಅನುಮಾನವು ಈ ರೀತಿಯ ನಿಲುವಿಗೆ ಕಾರಣವಾಗಿರಬಹುದು. ಈ

ರೀತಿ ಯೋಚನಾಕ್ರಮ ಬಂದಿರುವುದಕ್ಕೆ ಮತ್ತೊಂದು ಕಾರಣವೆಂದರೆ ಇಂಗ್ಲೀಷ್ ಪ್ರಭುತ್ವ ರೂಪಿಸಿದ ಶಿಕ್ಷಣ ಮಾದರಿ, ಈ ಶಿಕ್ಷಣ ಮಾದರಿ ಮೂಲಭೂತವಾಗಿ ಭಾರತೀಯ ಜನರನ್ನು ಬ್ರಿಟೀಷ್ ಕಂಪನಿಗಳಿಗೆ ಗುಮಾಸ್ತರನ್ನಾಗಿ ನೇಮಿಸುವ ಆಸಕ್ತಿಯನ್ನು ಹೊಂದಿತ್ತು. ಭಾರತೀಯರನ್ನು ರಾಜಕೀಯ ಹಿಡಿತದಲ್ಲಿ ಇರಿಸಿಕೊಳ್ಳುವುದರ ಬಗೆಗೆ ಆಗಿನ ಶಿಕ್ಷಣ ಪದ್ಧತಿಯು ರೂಪುಗೊಂಡಿತು. ಆದರೆ ಅದರ ಜೊತೆಗೆ ಬಂದ ನೈತಿಕ ಮೌಲ್ಯದ ಪ್ರಶ್ನೆಯು ಭಾರತೀಯ ಬುದ್ಧಿಜೀವಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಅನುಕೂಲವನ್ನು ಕಲ್ಪಿಸಿಕೊಟ್ಟಿತು. ನಿರ್ದಿಷ್ಟ ಮಾದರಿಯ ಕಲಿಕೆಯ ಮಾದರಿಯು ಒಂದು ರೀತಿಯಿಂದ ವಸಾಹತುಶಾಹಿ ಸಂಸ್ಕೃತಿ ಮತ್ತು ಅದರ ತಾರ್ಕಿಕ ಬೆಳವಣಿಗೆಯ ಕಾರಣಗಳನ್ನು ಹೊಂದಿಕೊಂಡಿದೆ. ಬ್ರಿಟೀಷ್ ವಸಾಹತುಶಾಹಿ ಅನುಭವದಲ್ಲಿ ರೂಪಗೊಂಡ ಶಿಕ್ಷಣಕ್ರಮವನ್ನು ಪ್ರಭುತ್ವದ ವಿಸ್ತರಣೆಯ ಕಾರ್ಯಾಚರಣೆಯಾಗಿ ಗ್ರಹಿಸಿಕೊಳ್ಳಬಹುದು. ಸ್ಪಷ್ಟ ಅರ್ಥದಲ್ಲಿ ದೇಶೀಯ ಶಿಕ್ಷಣ ಕ್ರಮವು ಹಿಂದೆ ಸರಿದು ಅದರ ಬದಲಿಗೆ ವಸಾಹತುಶಾಹಿ ಸಂಸ್ಕೃತಿ ಹೇಳಿಕೊಟ್ಟ ಶಿಕ್ಷಣವು ಜಾರಿಗೆ ಬಂದಿತು. ಈ ಶಿಕ್ಷಣ ಕ್ರಮದಲ್ಲಿ ಹಳೆಯ ಮಠ ಕೇಂದ್ರದ ಶಿಕ್ಷಣಕ್ರಮವು ಗೈರು ಹಾಜರಾಗಿರುವುದು ಒಂದಂಶವಾದರೆ ಇನ್ನೊಂದು ರೀತಿಯಿಂದ ಶಿಕ್ಷಣವೆಂದರೆ 'ಸ್ಕೂಲ್ ಕೇಂದ್ರಿತ ಶಿಕ್ಷಣ'ವೆಂಬ ಪರಿಕಲ್ಪನೆ ಬಂದಿತು. ಈ ಶಿಕ್ಷಣವೆಂದರೆ ಅದು ಕೇವಲ ಕೌಶಲದ ಪ್ರಶ್ನೆಯಾಗಿರದೇ ಅಕ್ಷರಸ್ಥ ಪರಂಪರೆಯ ಕಡೆಗೆ ತೆರಳುವ ಪ್ರಶ್ನೆಯೂ ಆಯಿತು. ಈ ರೀತಿಯ ಶಿಕ್ಷಣಕ್ಕೆ ಒಂದು ನಿರ್ದಿಷ್ಟ ಚೌಕಟ್ಟಿದೆ. ಬ್ರಿಟೀಷ್ ಕಂಪನಿಗೆ ಆಗಬೇಕಾದುದು ಕೂಡಾ ಅದುವೇ, ವಾಸ್ತವಾಗಿ ಭಾರತೀಯ ವಿದ್ಯಾವಂತ ವರ್ಗವನ್ನು ಬ್ರಿಟೀಷರು ಸ್ವಲ್ಪ ಮಟ್ಟಿಗೆ ಒಪ್ಪಿಕೊಂಡರು. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಮಿಶನ್ ಸ್ಕೂಲ್ ಒಂದು ದೃಷ್ಟಾಂತವಾಗಿದೆ ಬ್ರಿಟೀಷ್ ಆಡಳಿತ ಕ್ರಮವನ್ನು ವಿಸ್ತರಿಸುವುದಕ್ಕೆ ಇದೊಂದು ಕಾರಣವಾಯಿತು. ಆದರೆ ಅದರ ಫಲವೇನು? ಬ್ರಿಟೀಷರು ಸೃಷ್ಟಿಸಿದ ಗುಮಾಸ್ತರ ಜೊತೆಗೆ ಒಂದು ರೀತಿಯ ಸಾಂಸ್ಕೃತಿಕ ಸನ್ನಿವೇಶವು ನಿರ್ಮಾಣಗೊಂಡಿತು. ಇದನ್ನೇ ಬೇರೊಂದು ಮಾತಿನಲ್ಲಿ ವಿವರಿಸುವುದಾದರೆ ಪಶ್ಚಿಮ ಕೇಂದ್ರಿತ ಶಿಕ್ಷಣ ಮಾದರಿಯಿಂದಾಗಿ ಭಾರತದಲ್ಲಿ ಮೂರು ಮುಖ್ಯ ಪರಿವರ್ತನೆಗಳಾದವು. ಮೊದಲನೆಯದು ಈ ಶಿಕ್ಷಣ ಕ್ರಮದಿಂದಾಗಿ ಸಾಂಸ್ಕೃತಿಕ ಬದಲಾವಣೆಯ ಪರಿಭಾಷೆಯು ರೂಪುಗೊಂಡಿತು ಎರಡನೆಯದಾಗಿ ಹೊಸ ಶಿಕ್ಷಣ ಕ್ರಮದಿಂದಾಗಿ ಪಶ್ಚಿಮದ ಉದಾರವಾದಿ ನಿಲುವೊಂದು ಭಾರತಕ್ಕೆ ಪ್ರವೇಶಿಸಿತು. ಮೂರನೆಯದಾಗಿ 'ನ್ಯಾಯ'ದ ಪರಿಕಲ್ಪನೆಯು ನವವಿದ್ಯಾವಂತ ವರ್ಗದಲ್ಲಿ ಮೂಡಿಬಂತು. ಮದ್ರಾಸ್ ಮತ್ತು ಸಂಸ್ಕೃತ ಕಾಲೇಜುಗಳಲ್ಲಿ ತ್ರಿಭಾಷಾ ಸೂತ್ರವಿರಲಿಲ್ಲ. ಆದರೆ ಉಳಿದ ಕಡೆಗೆ ಈ ಸೂತ್ರವು ಜಾರಿಗೆ ಬಂತು. ಬೆಂಟಿಕ್‌ನ ಉದಾರವಾದಿ ನಿಲುವು ಅಂತಿಮವಾಗಿ ಪ್ರಭುತ್ವದ ಪರವಾಗಿಯೇ ಇತ್ತು. ಗ್ರಂಥಸ್ಥ ಸಂಸ್ಕೃತಿಯ ಮತ್ತು ವೈಜ್ಞಾನಿಕ ಪರಿಕಲ್ಪನೆಯ ಮೂಲ ಜೀವಾಳವು ಪ್ರಭುತ್ವದ ಪರವಾಗಿದ್ದರೂ ಇದರಿಂದಾಗಿ ಭಾರತೀಯ ಸಾಂಪ್ರದಾಯಿಕ ಸಮಾಜಕ್ಕೆ ವಿದಾಯ ಹೇಳಬೇಕಾಗಿ ಬಂತು. ಈ ಸಾಂಸ್ಕೃತಿಕ ಪುನರ್ ನಿರ್ಮಾಣ ಪ್ರಶ್ನೆಯು ಅಂತಿಮ ರೂಪನ್ನು ಪಡೆದುಕೊಂಡಿರುವುದು ಸಾಂಸ್ಕೃತಿಕ ಏಕತೆಯ ಪ್ರಶ್ನೆಯಲ್ಲಿ. ರಾಷ್ಟ್ರೀಯತೆಯ ಪ್ರಶ್ನೆಯು ಕೃಷಿಮೂಲದ ಸಮಾಜದಿಂದ ನವರಾಷ್ಟ್ರೀಯ ಸಂಸ್ಕೃತಿಯ ಕಡೆಗೆ ಯೋಚಿಸಿದಂತೆ ಮಾಡಿತು.

ಒಂದೆಡೆಯಿಂದ ಕೈಗಾರಿಕೀಕರಣದ ವಿರುದ್ಧ ನಿಂತ ನಿಲುವು. ಮತ್ತೊಂದೆಡೆಯಿಂದ ರಾಷ್ಟ್ರೀಯ ಏಕತೆಯ ಪ್ರಶ್ನೆಯು ಕನ್ನಡದ ನವೋದಯ ಕವಿಗಳ ಕಾವ್ಯದಲ್ಲಿ ಪ್ರತಿಫಲಿಸಿದೆ. ಅನೇಕರು ರಾಷ್ಟ್ರೀಯ ಏಕತೆಯ ಬಗೆಗೆ ಹೆಚ್ಚು ಮಾಡಿದ್ದರ ಮುಖ್ಯಕಾರಣವಿದು, ಕೆಲವರು ಕನ್ನಡ ಭಾಷೆ, ಸಮೂಹ ಮೊದಲಾದವುಗಳ ಮೂಲಕ ಈ ಗತಿಬಿಂಬವನ್ನು ಕಾಣಲೆತ್ನಿಸಿದರೂ ಕೂಡಾ ಆಲೂರ ವೆಂಕಟರಾಯರು ಕನ್ನಡದ ಮೂಲಕ ಇಡೀ ರಾಷ್ಟ್ರೀಯತೆಯನ್ನು ಕಂಡಿರುವುದು ಇದಕ್ಕೊಂದು ಸಾಕ್ಷಿ. ರಾಷ್ಟ್ರೀಯತೆಯ ಪರಿಕಲ್ಪನೆಯ ಕ್ರಿಯಾತ್ಮಕ ಸ್ವರೂಪವಿರುವುದು ಸ್ವದೇಶ ಚಳುವಳಿಯಲ್ಲಷ್ಟೆ? ಈ ಚಳುವಳಿಯ ಮೂಲಕ ಅಂಕುರವಿರುವುದು ರಾಷ್ಟ್ರೀಯತೆಯನ್ನು ಯೋಚಿಸಿದ ಏಕಾಂತಿವಾದಿಗಳಲ್ಲಿ. ಸ್ವದೇಶಿ ಚಳುವಳಿಯಲ್ಲಿ ಧರ್ಮದ ಪರಿಭಾಷೆಯು ಮುಖ್ಯವಾಯಿತು. ಗಾಂಧಿಯ ಧರ್ಮರಾಜ್ಯದ ಪರಿಕಲ್ಪನೆಯಲ್ಲಿ ಆದರ್ಶ ಜಮೀನುದಾರನು ಕೂಡಾ ತನ್ನ ತ್ಯಾಗದಿಂದ ಅರ್ಥಪೂರ್ಣನಾಗಬಲ್ಲ, ಈ ನಿಲುವು ವರ್ಗ ಸಮರವನ್ನು ವಿರೋಧಿಸುವ ನಿಲುವಾಗಿದ್ದರೂ ಗಾಂಧಿಯ ಈ ವಾದ ಆ ಸಂದರ್ಭದಲ್ಲಿ ಹೆಚ್ಚು ಪ್ರಚಾರಕ್ಕೆ ಬಂತು.

೭. ಕಡೆಗೋಲು, ಕಂಬದ ಸಾಕ್ಷಿಯಲ್ಲಿ ಇದು ಸಾಂಕೇತಿಕವಾದ ಅರ್ಥವನ್ನು ಪಡೆಯುತ್ತದೆ.

೮. ಬೇಲರ ಬೈರನ ಮಗ ಗಂಗಹುಡುಗನೊಡನೆ –

೯. ಚಂದ್ರಯ್ಯಗೌಡರ ದರ್ಬಾರು

೧೧. ಅಣ್ಣಯ್ಯಗೌಡರ ಸಂಸಾರ ಶೂಲ

೧೨. ಕಳ್ಳಂಗಡಿ

೧೩. ಕಾನುಬೈಲಿನ ಕಳ್ಳುಗೊತ್ತು – ಒಂದು ಹವ್ಯಾಸದ ವಿವರಣೆ.

೧೪. ಹಳತು ಹೊಸತು ಸೇರಿದರೆ ಆಧುನಿಕತೆಯ ಪ್ರಶ್ನೆ ಯಜಮಾನಿಕೆಯನ್ನು ವಹಿಸುತ್ತಿರುವ ಬ್ರಿಟೀಷ್ ಜಗತ್ತು ತನಗೆ ಬೇಕಾದ್ದನ್ನು ಮಾತ್ರವೇ ರೂಪಿಸಿದೆ ಮತ್ತು ಅದನ್ನು ನಮ್ಮನ್ನು ಅನೇಕ ರೀತಿಯಲ್ಲಿ ಹೇಳುತ್ತಿದೆ ಎನ್ನುವುದೇ ಅಗ ಮಹತ್ವದ ಚರ್ಚೆಯೂ ಆಗಿತ್ತು ಮಾಸ್ತಿಯವರ ಅನೇಕ ಸಂಪಾದಕೀಯ ಬರಹಗಳು ಇದನ್ನು ಹೇಳುತ್ತವೆ. ಅದರಲ್ಲಿ ಯುದ್ಧ ಮತ್ತು ಅದರ ತಲ್ಲಣಗಳ ವಿವರಗಳು ಇವೆ. ಮತ್ತು ಅದರಲ್ಲಿಯೇ ಅನೇಕ ವಿಷಯಗಳು ಇವೆ. ಸಂಸ್ಕೃತಿಯನ್ನು ಅವರು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗಿವೆ. ವಾಸ್ತವವಾಗಿ ಯಾವುದೇ ಸಂಗತಿಗಳು ನಡೆದದ್ದು ನಮಗೆ ಒಂದು ಪಾಠವೂ ಆಗಿದೆ. ಅದರಲ್ಲಿ ವಸಾಹತು ಮತ್ತು ವಸಾಹತೀಕರಣದ ಸಂಬಂಧಗಳ ಪ್ರಶ್ನೆಗಳೂ ಇವೆ. ಪ್ರಭುತ್ವ ಮತ್ತು ಅದರ ಸ್ವರೂಪವನ್ನು ನಾವು ಇತ್ಮಾಕವಾಗಿ ನೋಡಬೇಕಾಗುತ್ತದೆ. ನಿರ್ವಸಾಹತೀಕರಣ ಮತ್ತು ಅದರ ಪ್ರಶ್ನೆಗಳು ನಮಗೆ ಸರಳವಾದ ಪ್ರಶ್ನೆಯು ಆಗಿರಲಿಲ್ಲ.ಅದರಲ್ಲಿ ಒಂದು ಚಲನೆಯು ಇದೆ. ಅದನ್ನು ನಾವು ನೋಡಬೇಕಾಗುತ್ತದೆ. ವಸಾಹತು ಪೂರ್ವ ಮತ್ತು ಅದರ ಪ್ರಶ್ನೆಯು ಇಲ್ಲಿ ಮುಖ್ಯವಾಗುತ್ತದೆ. ವಸಾಹತು ಪೂರ್ವ ಮತ್ತು ಅದರ ಶುದ್ಧತೆಯು ಅತ್ಯಂತ ಮಹತ್ವದ ಪ್ರಶ್ನೆಯೂ ಆಗುತ್ತದೆ.

ವಸಾಹತು ಮತ್ತು ಅದರ ಕಥನಗಳು ಸಾಮಾನ್ಯವಾಗಿರಲಿಲ್ಲ. ತಾತ್ವಿಕತೆಯು ನಮಗೆ ಮತ್ತೆ ಮತ್ತೆ ಬೇರೆ ಬೇರೆ ಆಯಾಮವನ್ನು ಕೊಡುತ್ತದೆ. ಅದರಲ್ಲಿ ಅದನ್ನು ನೋಡಲು ನಮಗೆ ಬೇರೆ ಪರಿಕರವೂ ಇರುತ್ತದೆ. ಮತ್ತೆ ಮತ್ತೆ ಸೃಜನಶೀಲತೆಯು ನಮಗೆ ಬೇರೆ ಬೇರೆ ಆಯಾಮುವನ್ನು ಕೊಡುತ್ತದೆ. ಅದನ್ನು ನಾವು ನಮ್ಮ ಲೇಖಕಿಯರು ನೋಡಿದ್ದೇವೆ.ಅದಕ್ಕೆ ಒಂದು ಸ್ಥಳೀಯವಾದ ಒಂದು ಅನನ್ಯತೆಯು ಇರುತ್ತದೆ. ಅದರಲ್ಲಿ ಕೆಲವನ್ನು ವಸಾಹತು ಆಢಳಿತವು ನಮಗೆ ಕೊಟ್ಟಿದೆ. ಅದನ್ನು ಅದು ನಮಗೆ ಅಕ್ಷರಶಃ ಹೇರಿದೆ. ಆದ್ದರಿಂದ ನಾವು ಕೇಂದ್ರ ಮಾಡಬೇಕು ಮತ್ತು ಯಾವುದನ್ನು ನಾವು ಅಂಚಿಗೆ ತರಬೇಕು ಎನ್ನುವುದೂ ಅತ್ಯಂತ ಮುಖ್ಯವಾಗುತ್ತದೆ. ನಮಗೆ ಕೆಲವು ಸಂಹಿತೆಗಳು ಇವೆ. ಅದನ್ನು ನಾವು ಮಾಡಿಕೊಂಡಿದ್ದೇವೆ ಮತ್ತು ಅದರಂತೆ ನಾವು ಮಾಡಿದ್ದೇವೆ. ರಾಷ್ಟ್ರೀಯತೆ ಮತ್ತು ಅದರ ಮಾದರಿಗಳು ನಮಗೆ ಬಿಡುಗಡೆಯ ಭಾಗವೂ ಆಗಿದ್ದು ಈ ಕಾರಣಕ್ಕೆ. ನಾವು ಪ್ರದೇಶ ಮತ್ತು ರಾಷ್ಟ್ರವನ್ನು ಪುನರ್‌ರಚನೆಯನ್ನು ಮಾಡಿಕೊಂಡಿದ್ದೇವೆ. ಯುರೋಪ್ ಮತ್ತು ಅದರ ನಿರ್ವಚನಗಳು ನಮಗೆ ಒಂದು ಮಾದರಿಯಲ್ಲಿದ್ದವು. ಅದರಲ್ಲಿ ಸ್ಥಳೀಯತೆಯ ಅರ್ಥವೂ ಬದಲಾಗಿದೆ. ಅದರಲ್ಲಿ ಪ್ರತಿ ತಂತ್ರವೂ ಇದೆ. ನಾವು ಇದನ್ನು ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ವಿವರಿಸಿದ್ದೇವೆ. ಅದರಲ್ಲಿ ಯಾವುದನ್ನು ನಾವು ಪ್ರತಿರೋಧಿಸಬೇಕು ಮತ್ತು ಯಾವುದನ್ನು ಸ್ವಾಗತಿಸಬೇಕು ಎನ್ನುವ ದ್ವಂದ್ವಗಳೂ ಇದ್ದವು. ಅದರಲ್ಲಿ ಸ್ಥಳೀಯತೆ ಮತ್ತು ಅದರ ಗುಣವನ್ನು ಕೂಡಾ ನಮ್ಮ ಲೇಖಕಿಯರು ಹೇಳುವ ಅವಕಾಶವೂ ಸಿಕ್ಕಿತು. ಇದು ಅತ್ಯಂತ ಮಹತ್ವದ ಪ್ರಶ್ನೆಯೂ ಆಗಿದೆ. ಅದರಲ್ಲಿ ಜನ ಜೀವನದ ಕಥನಗಳು ಇದ್ದವು. ಕಾರಂತರಿಗೆ ಅತ್ಯಂತ ಮಹತ್ವದ ವಿಷಯವೆಂದರೆ ಪ್ರದೇಶ ಮತ್ತು ವಿಶ್ವಾತ್ಮಕತೆ ಪ್ರಶ್ನೆ. ಅದನ್ನು ಅವರು ವಿವರಿಸಿದ ಕ್ರಮವು ಚೆನ್ನಾಗಿದೆ, ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಬರಹಗಳನ್ನು ಕೊಟ್ಟ ಮತ್ತೊಬ್ಬ ಲೇಖಕರು ತೇಜಸ್ವಿ. ಅವರು ಮೂಡಿಗೆರೆಯಿಂದ ಲೋಕವನ್ನು ನೋಡಿದರು. ಮತ್ತು ಅದರ ಪರಿಣಾಮವಾಗಿಯೇ ಮಂದಣ್ಣ ಮುಂತಾದವರು ಒಂದು ಜೀವ ಜಗತ್ತಿನ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಾರೆ. ಮೂಡಿಗೆರೆ ಮತ್ತು ಅಲ್ಲಿಯ ಕಾಫಿತೋಟಗಳು ಹಾಗೂ, ಅಲ್ಲಿಯ ಜೇನು, ಅಲ್ಲಿಯ ಅಣ್ಣಪ್ಪ ಮುಂತಾದವರು ಅವರಿಗೆ ಹೆಚ್ಚು ಮುಖ್ಯವಾಗುತ್ತಾರೆ. ಮೂಡಿಗೆರೆ ಎನ್ನುವುದು ಸಮಸ್ತವನ್ನು ಇಟ್ಟುಕೊಂಡಿದೆ. ಅದರಲ್ಲಿ ಅನೇಕವು ಸೇರಿಕೊಂಡಿವೆ. ಲಂಟಾನ ಪೊದೆಗಳು, ಅಲ್ಲಿ ಮೀನು ಸಾಬಿ, ತರಕಾರಿಯ ಅಂಗಡಿಯಲ್ಲಿ ಒಣಗಿ ಹೋದ ತರಕಾರಿಗಳು ಇವೆ. ಅನೇಕ ಪ್ರಶ್ನೆಗಳನ್ನು ತೇಜಸ್ವಿಯವರು ಎತ್ತಿಕೊಳ್ಳುತ್ತಾರೆ. ಅದರಲ್ಲಿ ಇಡೀ ಜೀವ ಸಂಕುಲವಿದೆ. ಅದರಲ್ಲಿ ಉದಾತ್ತರೂ ಇರುವುದಕ್ಕಿಂತ ಹೆಚ್ಚಾಗಿ ಲೋಲುಪರು. ಕಳ್ಳನಾಟದವರು, ಸುಳ್ಳು ಹೇಳುವವರು ಇದ್ದಾರೆ. ಈ ಸ್ಥಳವು ಅತ್ಯಂತ ಮುಖ್ಯವಾದ್ದೂ ಆಗಿದೆ. ಕೆಲವು ರೀತಿಯ ಸಂಕಥನವನ್ನು ಇದು ಹೇಳುತ್ತವೆ. ಅಲ್ಲಿ ಬರುವ ಯಜಮಾನಿಕೆಯು ಒಂದು ರೂಪವನ್ನು ಹೊಂದಿಲ್ಲ. ಅದರಲ್ಲಿ ಭಿನ್ನವಾದ ಚಟುವಟಿಕೆಯು ಇದೆ. ಅದೇ ಅದರಲ್ಲಿ ಕೇಂದ್ರವೂ ಆಗಿದೆ. ವಸಾಹತು ಮತ್ತು ವಸಾಹತೋತ್ತರ ಸಂದರ್ಭಗಳು ಅತ್ಯಂತ ಸಂಕೀರ್ಣವೂ ಆಗಿದೆ.

೧೬. ನೂರು ರೂಪಾಯಿ ನೋಟು

೧೭. ಕತ್ತಲೆಗಿರಿಯ ಸರುವಿನಲ್ಲಿ ಕಾಡುಹಂದಿಯ ಬೇಟೆ

೧೮. ಕಿಲಿಸ್ತರ ಜಾಕಿ ಮತ್ತು ಟೈಗರ್ ನಾಯಿ

೨೬. ಬೈರನು ಹೊಂಡ ತೋಣಕಿದ್ದು

೨೭. ಕಿಲಿಸ್ತರ ಮಾರ್ಕನಿಗೆ ಬೈರ ನಾಮ ಹಾಕಿದ್ದು

೨೮. ಮನ ಪಾಲಾಗುವ ಮಾತು

೨೯. ಕಾನೂರಿನಲ್ಲಿ ದೆಯ್ಯದ ಹರಕೆ

೩೦. ಹೋತದ ದೆಸೆಯಿಂದ

೩೩. ಅಣ್ಣಯ್ಯಗೌಡರನ್ನು ಊರು ಬಿಡಿಸಿದ್ದು

೩೪. ಆ ಹುಲಿ

೩೫. ಮುತ್ತಳ್ಳಿಯಲ್ಲಿ ಒಂದು ಮಧ್ಯಾಹ್ನ

೩೬. ದುಃಖಕ್ಕೆ ದೊಡ್ಡವರು ಬಡವರು ಎಂಬ ಭೇದವಿದೆಯ?

೩೭. ಮದುವೆಯಾಗುವವನೇ ಹೆಣ್ಣು ಕೇಳುವುದೇ?

೪೦. ಕಾನೂರು ಜಮೀನಿನ ಹಿಲ್ಲೆಯ ಪಂಚಾಯಿತಿ

೪೧. ಮನೆಯ ಚರಸೊತ್ತಿನ ಹಿಪ್ಪ – ವಾಸುವಿನ ವಿಚಿತ್ರ ಮೂರ್ಛೆ

೪೨. ಸಣ್ಣ ಮನಸ್ಸು

೪೩. ತೆಂಗಿನಕಾಯಿಯ ಮಂತ್ರಶಕ್ತಿ:

೪೪. ಹೂವಯ್ಯ ಕಾನೂರು ಮನೆಯನ್ನು ಬಿಟ್ಟು ಹೋದುದು

೪೫. ಹಾವಿನ ಮೊಟಸ್ಟೆ

೪೬. ಚಂದ್ರಯ್ಯಗೌಡರಿಗೆ ಕೃಷ್ಣಪಕ್ಷ ಹಿಡಿಯಿತು.

೪೭. ಭೂಮಿ ಹುಣ್ಣಿಮೆಯ ಹಬ್ಬದ ಹಿಂದಿನ ದಿನ ಕಾಡಿನಲ್ಲಿ ದೃಶ್ಯನಾದ ಪಟ್ಟಣ್ಣನ ಕಾಡುಹಂದಿಯ ಬೇಟೆ

೪೮. ಚಂದ್ರಯ್ಯಗೌಡರ ಕತ್ತಿಯಿಂದತಪ್ಪಿಸಿಕೊಂಡು ಸುಬ್ಬಮ್ಮ ರಾತ್ರಿ ಕಾನೂರಿನಿಂದ ಓಡಿಹೋದದ್ದು

೪೯. ಬಾಳಿನ ಬಾನಿನಲ್ಲಿ ಕರ್ಮುಗಿಲು ದಟ್ಟವಾಗುತ್ತಿದೆ

೫೧. ಗೊಬ್ಬರಗುಂಡಿಯಲ್ಲಿ ಸೋಮ ।

೫೨. ಸೇರೆಗಾರರ ಸ್ವಾನಬುದ್ಧಿ

೫೩ ಹಾ, ವಿಧಿ

೫೪. ಆತ್ಮಹತ್ಯೆ
೫೫. ಹೂವಯ್ಯ ಮುತ್ತಳ್ಳಿಗೆ
೫೬ ಕೌಲಿ ಕರು ಹಾಕಿದ್ದು
೫೮. ರಾಮಯ್ಯನಿಗೆ ಮದುವೆಯಾಯ್ತು
೫೯. ಪರ್ವತ ಶೃಂಗದಲ್ಲಿ ಸೂರ್ಯೋದಯದ ಸೌಂದರ್ಯಾನುಭೂತಿ
೬೦. ಮನಸ್ಸಿನ ಮಾಯಾಶಕ್ತಿ
೬೧. ಅಗ್ರಹಾರದ ದೇವಸ್ಥಾನದಲ್ಲಿ
೬೨. ಕೋಳಿಯಂಕದ ಪಟ್ಟೆಯಲ್ಲಿ
೬೩. ಸೋಮನಮೇಲೆ ಪ್ರಲೋಭನ ಪಿಶಾಚಿ
೬೪. ಸುಬ್ಬಮ್ಮ ಮತ್ತು ಗಂಗೆಯರಿಗೆ ನಡೆದ ಕುಸ್ತಿ
೬೫. ಕುಡಿದಿದ್ದ ಸೇರೆಗಾರರಿಂದ ಪಟನೆ ?
೬೬. ಓಬಯ್ಯನ ಕಥೆ
೬೭. ರಾಮಯ್ಯ ಸೀತೆಯನ್ನು ಕಾನೂರಿಗೆ ಕರೆತಂದಿದ್ದು
೬೮. ಸೀತೆಗೆ ನರಕ ಶಿಕ್ಷೆ
೬೯. ರುದ್ರವಾದರೂ ಮಧುರ ರಾತ್ರಿ
೭೦. ತಾಯಿಯ ಮರಣಶಯ್ಯೆಯ ಬಳಿ ಮಗನು ಮಾತುಕೊಟ್ಟಿದ್ದು
೭೧. ತವರುಮನೆಯ ಮುಳ್ಳಿನ ಹಾಸಿಗೆ
೭೨. ಬೇಸಗೆಯ ನಡುಗಾಡಿನ ಸರಲಿನಲ್ಲಿ ಬೈರ ಸಿದ್ದರ ಬಿಡಿ ಕಾರಿ
೭೩. ಕಣ್ಣೀರಿನ ಗಂಗಾತೀರ್ಥದಲ್ಲಿ ಕಟ್ಟಕಡೆಯ ಸ್ನಾನ
೭೪. ಮತ್ತೆ ಸುಬ್ಬಮ್ಮ ಕಾನೂರಿಗೆ ಹೆಗ್ಗಡಿತಿ ।
೭೫. ಸುಬ್ರಮ್ಮನ ದುಃಸ್ವಪ್ನ
೭೬ ಮನೆಯಲ್ಲಿ 'ಮುಟ್ಟುಚಿಟ್ಟು
೭೭. ಬುದ್ಧದೇವನ ಕೃಪಾ ಮಹಿಮೆ
೭೮. ಚನ್ನಯ್ಯ, ಪುಟ್ಟಮ್ಮ ಮತ್ತು ಅವರ ರಮೇಶ!
೭೯. ಸೇರಗಾರರು ಪರಾರಿ ।
೮೦. ಮೃತ್ಯುಮೂರ್ತಿಯ ಮುಂದೆ
೮೧. ಹತ್ತು ವರ್ಷಗಳಾದ ಮೇಲೆ ರೊಮಾಂಟಿಕ್ ಭಾವನೆಯನ್ನು ಹೇಳುವ ಸಂಗತಿಗಳಿಗೆ ಒಂದು ವಿವರಣೆಯನ್ನು ಕುವೆಂಪು ಕೊಡುತ್ತಾರೆ.

೧೫. ಹಲ್ಲಿಯ ಕೃಪೆ

೨೨. ಹೂವಯ್ಯನ ಭಾವಸಮಾಧಿ

೨೩. ಕಾಡುಕಿಚ್ಚಿಗೆ ಕಿಡಿಯ ಮುನ್ನುಡಿ

೨೪. ಶೂದ್ರ ಸಂಘದ ಮಹಾಸಭೆಯಲ್ಲಿ

೨೫. ಸೀತೆಯ ಮನಸ್ಸಿಗೆ ಮೊದಲನೆಯ ಸಿಡಿಲು

೩೧. ಸೀತೆಯ ರೋಗದ ರಹಸ್ಯ

೩೨. ಬಾಳಿನ ಬಲೆ

೩೮. ಕಳ್ಳಂಗಡಿಯವನ ಸಾಲಕ್ಕಾಗಿ ಸೋಮ ಹಳೇಪೈಕದ ತಿಮ್ಮನ ಕೋಳಿ ಹುಂಜವನ್ನು ಕದ್ದದ್ದು

೩೯. **ವರ್ಡ್ಸ್ ವರ್ತ್ – ಮ್ಯಾಥ್ಯೂ ಆರ್ನಾಲ್ಡ್** – ವಸಾಹತು ಮತ್ತು ಅದರ ಕಾಲವು ನಮಗೆ ಕೆಲವು ವಿಶಿಷ್ಟವಾದ ರೂಪವನ್ನು ಹುಡುಕಲು ಹೇಳಿದ್ದು ಕೂಡಾ ಅಷ್ಟೇ ಸತ್ಯವಾಗಿದೆ. ಅದು ಭೌತಿಕತೆಯನ್ನು ಹೇಳಿದ್ದು ನಿಜ. ಭಾರತೀಯರು ಒಂದು ವಿಧದಲ್ಲಿ ನಮಗೆ ಕೆಲವು ಸಂಗತಿಗಳನ್ನು ಯೋಚಿಸಲು ನಮಗೆ ಹಾದಿಯನ್ನು ಕಟ್ಟಿಕೊಟ್ಟವು. ಹಾಗೆಯೇ ಅದರಲ್ಲಿ ಸನ್ನಿವೇಶವನ್ನು ಹೊರತುಪಡಿಸಿದ ಓದುಗಳೂ ಇದ್ದವು. ಅದು ಇಂಗ್ಲಿಷ್ ಪಠ್ಯಗಳನ್ನು ಸಾರ ರೂಪವಾಗಿ ಓದಲು ಅವಕಾಶವನ್ನು ಕಲ್ಪಿಸಿದವು. ಇಂಗ್ಲೀಷಿನ ಓದು ಮತ್ತು ಅದರ ಸಾಧ್ಯತೆಯು ಹೇಗೆ ಪರಿವರ್ತನೆಯನ್ನು ತಂದಿದೆ ಎನ್ನುವುದಕ್ಕೆ ನಮ್ಮಲ್ಲೆ ಬೇಕಾದಷ್ಟು ಉದಾಹರಣೆಗಳು ಇವೆ. ಅದು ಭೌತಿಕವಾದ ಪ್ರಭಾವವನ್ನು ಬೀರಿದೆ ಹಾಗೂ ಅದರ ಪರಿಣಾಮವನ್ನು ನಮ್ಮವರು ವಿಭಿನ್ನವಾಗಿ ಸ್ವೀಕರಿಸಿದರು. ಅದು ಮನಸ್ಸು ಮತ್ತು ಅದರ ಚಟುವಟಿಕೆಯನ್ನು ಹೇಳುತ್ತದೆ. ವಸಾಹತು ಕಾಲದ ಅನೇಕ ಸನ್ನಿವೇಶಗಳಿಗೆ ಅನೇಕ ಆಯಾಮವೂ ಇದೆ. ಅದನ್ನು ಈ ರೀತಿಯಲ್ಲಿಯೂ ಹೇಳಬಹುದು– ಅದು ಸಮಾಜವನ್ನು ಬದಲಿಸದೆ ಹಾಗೂ ಅದರ ಮೂಲಕ ಕೆಲವು ಜನರ ಬದಲಾವಣೆಯನ್ನು ತಂದಿದೆ. ವಿಶ್ವಾತ್ಮಕತೆ ಹಾಗೂ ಅದರ ಅದರ ಬಗೆಗೆ ಇರುವ ದೃಷ್ಟಿಕೋನವು ನಮಗೆ ಕೊಟ್ಟ ಹೊಸದಾದ ಅರಿವು ಇಲ್ಲಿ ಮುಖ್ಯವಾಗುತ್ತದೆ. ಕೆಲವಕ್ಕೆ ನಿರ್ದಿಷ್ಟವಾದ ಪ್ರಭುತ್ವದ ಅಂಕಿತವೂ ಇರುತ್ತದೆ. ಮತ್ತೆ ಕೆಲವಕ್ಕೆ ಪ್ರಭುತ್ವ ಮತ್ತು ಅದರ ಅಂಕಿತವು ಇರುವುದೂ ಇಲ್ಲ. ಪ್ರಭುತ್ವ ಮತ್ತು ಆಳಿಸಿಕೊಳ್ಳುವ ಜನರ ನಡುವೆ ಇರುವ ಖಾಲಿಯಾದ ಜಾಗವನ್ನು ಕೆಲವು ಸಂಗತಿಗಳು ಭರ್ತಿ ಮಾಡಿದೆ. ಅದರಲ್ಲಿ ಶಾಲೆ ಆಸ್ಪತ್ರೆ ಮುಂತಾದವು ಹೇಗೆ ಸೇರಿಕೊಂಡಿವೆಯೋ ಅದೇ ರೀತಿಯಲ್ಲಿ ಸ್ವಯಂಸೇವಾ ಸಂಸ್ಥೆಗಳು ಕೂಡಾ ಇದ್ದವು. ಯಾವುದು ನಮಗೆ ಪರಕೀಯವಾಗಿದೆ ಮತು ಯಾವುದು ನಮಗೆ ಅತ್ಮೀಯವಾಗಿದೆ ಎನ್ನುವುದು ಅತ್ಯಂತ ಸುಲಭವಾದ ಪ್ರಶ್ನೆಯು ಆಗಿರಲಿಲ್ಲ. ಯರೋಪ್ ಮತ್ತು ಅದರ ರಚನೆಗಳನ್ನು ನಾವು ಹೇಗೆ ಮೂಲಭೂತವಾಗಿ ಒಂದು ಚರಿತ್ರೆಯ ಹಿನ್ನೆಲೆಯಲ್ಲಿ ನೋಡಲು ಸಾಧ್ಯವಾಗುತ್ತದೆಯೋ ಅದೇ ರೀತಿಯಲ್ಲಿ ನಾವು ನಮ್ಮ ಚರಿತ್ರೆಯನ್ನು ಒಂದು ಕಾಲಘಟಕ್ಕೆ ಸೀಮಿತವಾಗಿಯೂ ನೋಡಲು ಸಾಧ್ಯವಿದೆ.

ಆಗ ಯುರೋಪ್ ಮತ್ತು ಅದರ ಗ್ರಹಿಕೆಯನ್ನು ನಾವು ಹೇಗೆ ಮಾಡಿದ್ದೇವೆ ಮತ್ತು ಅದನ್ನು ಹೇಗೆ ಸ್ವೀಕರಿಸಿದ್ದೇವೆ ಎನ್ನುವುದಕ್ಕೆ ವಿಭಿನ್ನವಾದ ನಿಲುವುಗಳೂ ಇವೆ. ಯರೋಪನ್ನು ಅನುಸರಿವುದು ಮತ್ತು ಅದರ ರೀತಿಯಲ್ಲಿ ನಡೆಯುವುದು ಕೆಲವರಿಗೆ ಅತ್ಯಂತ ಮಹತ್ವದ್ದೂ ಆಗಿತ್ತು. ಅದನ್ನು ಹೆಮ್ಮೆ ಎಂದು ಭಾವಿಸಿದ್ದರು. ವಸಾಹತು ಮತ್ತು ಅದರ ಸನ್ನಿವೇಶಗಳು ಅದರ ಪರಿಣಾಮವನ್ನು ಓದು ಹೇಗೆ ಮಾಡಿತು ಎನ್ನುವುದನ್ನು ಆಗಿನ ನಮ್ಮ ಪಠ್ಯಗಳು ಹೇಳುತ್ತವೆ. ಇಂಗ್ಲೀಷಿನ ಓದು ಮತ್ತು ಅದರ ಸಾಧ್ಯತೆಯು ಹೇಗೆ ಪರಿವರ್ತನೆಯನ್ನು ತಂದಿದೆ ಎನ್ನುವುದಕ್ಕೆ ನಮ್ಮಲ್ಲೆ ಬೇಕಾದಷ್ಟು ಉದಾಹರಣೆಗಳು ಇವೆ. ಅದು ಭೌತಿಕವಾದ ಪ್ರಭಾವವನ್ನು ಬೀರಿದೆ ಹಾಗೂ ಅದರ ಪರಿಣಾಮವನ್ನು ನಮ್ಮವರು ವಿಭಿನ್ನವಾಗಿ ಸ್ವೀಕರಿಸಿದರು. ಅದು ಮನಸ್ಸು ಮತ್ತು ಅದರ ಚಟುವಟಿಕೆಯನ್ನು ಹೇಳುತ್ತದೆ. ವಸಾಹತು ಕಾಲದ ಅನೇಕ ಸನ್ನಿವೇಶಗಳಿಗೆ ಅನೇಕ ಆಯಾಮವೂ ಇದೆ. ಅದನ್ನು ಈ ರೀತಿಯಲ್ಲಿಯೂ ಹೇಳಬಹುದು_ ಅದು ಸಮಾಜವನ್ನು ಬದಲಿಸದೆ ಹಾಗೂ ಅದರ ಮೂಲಕ ಕೆಲವು ಜನರ ಬದಲಾವಣೆಯನ್ನು ತಂದಿದೆ. ವಿಶ್ವಾತ್ಮಕತೆ ಹಾಗೂ ಅದರ ಅದರ ಬಗೆಗೆ ಇರುವ ದೃಷ್ಟಿಕೋನವು ನಮಗೆ ಕೊಟ್ಟ ಹೊಸದಾದ ಅರಿವು ಇಲ್ಲಿ ಮುಖ್ಯವಾಗುತ್ತದೆ. ಕೆಲವಕ್ಕೆ ನಿರ್ದಿಷ್ಟವಾದ ಪ್ರಭುತ್ವದ ಅಂಕಿತವೂ ಇರುತ್ತದೆ. ಮತ್ತೆ ಕೆಲವಕ್ಕೆ ಪ್ರಭುತ್ವ ಮತ್ತು ಅದರ ಅಂಕಿತವು ಇರುವುದೂ ಇಲ್ಲ. ಪ್ರಭುತ್ವ ಮತ್ತು ಆಳಿಸಿಕೊಳ್ಳುವ ಜನರ ನಡುವೆ ಇರುವ ಖಾಲಿಯಾದ ಜಾಗವನ್ನು ಕೆಲವು ಸಂಗತಿಗಳು ಭರ್ತಿ ಮಾಡಿದೆ. ಅದರಲ್ಲಿ ಶಾಲೆ ಆಸ್ಪತ್ರೆ ಮುಂತಾದವು ಹೇಗೆ ಸೇರಿಕೊಂಡಿವೆಯೋ ಅದೇ ರೀತಿಯಲ್ಲಿ ಸ್ವಯಂಸೇವಾ ಸಂಸ್ಥೆಗಳು ಕೂಡಾ ಇದ್ದವು. ಯಾವುದು ನಮಗೆ ಪರಕೀಯವಾಗಿದೆ ಮತು ಯಾವುದು ನಮಗೆ ಅತ್ಮೀಯವಾಗಿದೆ ಎನ್ನುವುದು ಅತ್ಯಂತ ಸುಲಭವಾದ ಪ್ರಶ್ನೆಯು ಆಗಿರಲಿಲ್ಲ. ಯರೋಪ್ ಮತ್ತು ಅದರ ರಚನೆಗಳನ್ನು ನಾವು ಹೇಗೆ ಮೂಲಭೂತವಾಗಿ ಒಂದು ಚರಿತ್ರೆಯ ಹಿನ್ನೆಲೆಯಲ್ಲಿ ನೋಡಲು ಸಾಧ್ಯವಾಗುತ್ತದೆಯೋ ಅದೇ ರೀತಿಯಲ್ಲಿ ನಾವು ನಮ್ಮ, ಚರಿತ್ರೆಯನ್ನು ಒಂದು ಕಾಲಘಟ್ಟಕ್ಕೆ ಸೀಮಿತವಾಗಿಯೂ ನೋಡಲು ಸಾಧ್ಯವಿದೆ. ಆಗ ಯುರೋಪ್ ಮತ್ತು ಅದರ ಗ್ರಹಿಕೆಯನ್ನು ನಾವು ಹೇಗೆ ಮಾಡಿದ್ದೇವೆ ಮತ್ತು ಅದನ್ನು ಹೇಗೆ ಸ್ವೀಕರಿಸಿದ್ದೇವೆ ಎನ್ನುವುದಕ್ಕೆ ವಿಭಿನ್ನವಾದ ನಿಲುವುಗಳೂ ಇವೆ. ಯರೋಪನ್ನು ಅನುಸರಿವುದು ಮತ್ತು ಅದರ ರೀತಿಯಲ್ಲಿ ನಡೆಯುವುದು ಕೆಲವರಿಗೆ ಅತ್ಯಂತ ಮಹತ್ವದ್ದೂ ಆಗಿತ್ತು. ಅದನ್ನು ಹೆಮ್ಮೆ ಎಂದು ಭಾವಿಸಿದ್ದರು.

ಆದರೆ ಇದರಲ್ಲಿ ಮತ್ತೆ ಕೆಲವು ಅಂಶಗಳೂ ಇರುತ್ತವೆ. ಅತ್ಯುತ್ತಮವಾದ ಗದ್ಯವನ್ನು ನಾವು ಈವತ್ತು ನೋಡಿದರೆ ಅದರಲ್ಲಿಯೂ ಈ ಅಂಶಗಳು ಎದ್ದುಕಾಣಿಸುತ್ತದೆ. ಇರುವುದನ್ನು ಮಾತ್ರವೇ ವಿವರಿಸುವುದು ಅನೇಕ ಲೇಖಕಿಯ ಗುರಿಯಲ್ಲ. ಅದರಲ್ಲಿ ಪ್ರಮೇಯ, ನೋಟ ಮತ್ತು ಅರಿವು ಜೊತೆಗೆ ಇರುತ್ತದೆ. ಅಂದರೆ ಸಾಹಿತ್ಯವನ್ನು ನಾವು ನೋಡುವಾಗ ಅದರ ಸಾಧ್ಯತೆಯನ್ನು ಬೇರೆ ಬೇರೆ ನಿಟ್ಟಿನಲ್ಲಿ ನೋಡಬೇಕಾಗುತ್ತದೆ. ಮತ್ತು ಅದರಲ್ಲಿ ಅತ್ಯುತ್ತಮ ಸಂಗೀತದ ಅಂಶವು ಇರುತ್ತದೆ. ವಾಸ್ತುಶಿಲ್ಪದ ನಕ್ಷೆಯು ಇರುತ್ತದೆ. ಬಟ್ಟೆಯ ನೆಯ್ಗೆಯು ಇರುತ್ತದೆ. ಅದರ ಅಗತ್ಯವೂ ಇದುವೇ ಆಗಿದೆ. ಆಧುನಿಕಯುಗದ ಮುದ್ರಣ ಸಂಸ್ಕೃತಿ ಮತ್ತು ಅದರ ಸಾಧ್ಯತೆಗಳು ಬೇರೆಯಾಗಿವೆ ಎನ್ನುವುದೂ ಅಷ್ಟೇ ನಿಜ. ಅದರಲ್ಲಿ ಲೇಖಕರು ತಾನು ಯಾವುದನ್ನು ಬೇಕಾದರೂ ಹೇಳಿಕೊಂಡು

ಅದನ್ನು ಪ್ರಚುರಪಡಿಸಬಲ್ಲ. ಪುಸ್ತಕವನ್ನು ತನಗೆ ಬೇಕಾದಂತೆ ಹೆಣೆದುಕೊಂಡು ಅದನ್ನು ಮಾಧ್ಯಮಗಳ ಮೂಲಕವೇ ಹಂಚಬಲ್ಲ. ಲೇಖಕಿಯರು ಅನೇಕ ಸಂದರ್ಭದಲ್ಲಿ ಯಾವುದು ಹೆಚ್ಚು ಪ್ರಚಾರಕ್ಕೆ ಬರುತ್ತದೆಯೋ ಅದನ್ನು ಮಾತ್ರವೇ ನಿರೂಪಿಸಿಕೊಂಡು ಅದನ್ನು ಜನರಿಗೆ ಸತ್ಯವೆಂಬಂತೆ ಬಿಂಬಿಸಬಲ್ಲ ವಸಾಹತು ಮತ್ತು ಅದರ ಪ್ರಜ್ಞೆಯನ್ನು ಕುರಿತು ಹೇಳಿದ ಫ್ಯಾನನ್ ಅದರ ರಾಜನಿಕವಾದ ಸಂಗತಿಯನ್ನೂ ಗಮನಿಸಿದ್ದ. ಅವನ ಪ್ರಕಾರ ಆಳ್ವಿಕೆಗೆ ಒಳಗಾದವರ ಮನೋಸ್ಥಿತಿಯು ಭಿನ್ನವಾಗುತ್ತದೆ. ವಸಾಹತು ರಾಜಕಾರಣವು ಅನೇಕ ವರ್ಗಗಳನ್ನು ಮಾಡಿದ್ದನ್ನು ಅವನು ಗಮನಿಸಿದ್ದಾನೆ. ಮತ್ತು ಅವನಿಗೆ ಅದು ಬಹಳ ಮುಖ್ಯವಾಗಿತ್ತು. ಅವನು ಅದನ್ನು ಹೇಳುವಾಗ ಸಮಾಜವು ಹೇಗೆ ಬದಲಾಯಿತು ಮತ್ತು ಅದರ ಪರಿಣಾಮಗಳು ಯಾವ ಬಗೆಯಲ್ಲಿ ಇತ್ತು ಎನ್ನುವುದನ್ನೂ ಗ್ರಹಿಸಿದ್ದಾನೆ.

ರಾಷ್ಟ್ರೀಯತೆ ಮತ್ತು ಅದರ ಹಿಂದೆ ಇರುವ ಶಕ್ತಿಯನ್ನು ಅವನು ಪ್ರತಿರೋಧದ ಶಕ್ತಿಯೆಂದು ಹೇಳುತ್ತಾನೆ. ಅದು ಸಾಂಸ್ಕೃತಿಕವಾಗಿ ಬಹಳ ಮಹತ್ವದ್ದು ಎಂದೂ ಅವನು ಹೇಳುತ್ತಾನೆ. ಆದರೆ ವಸಾಹತೋತ್ತರ ಸನ್ನಿವೇಶದಲ್ಲಿ ಅನೇಕವು ಬದಲಾದವು. ರಾಷ್ಟ್ರ ಮತ್ತು ಅದರ ಸ್ವರೂಪವು ಹಳೆಯದರ ಶಕ್ತಿಯನ್ನು ಹೊಸತರ ಸಾಧ್ಯತೆಯನ್ನು ಪಡೆಯಿತು. ಮತ್ತು ಅದರ ಪರಿಣಾಮವಾಗಿ ಬೇರೆ ಬೇರೆ ಆಯಾಮಗಳು ದೊರೆತವು. ಒಂದು ದೇಶದ ಶಕ್ತಿಯು ಬದಲಾಯಿತು. ಅದರ ಸಾಧ್ಯತೆಯು ಬೇರೆ ಆಯಿತು. ರಾಷ್ಟ್ರೀಯತೆ ಮತ್ತು ಅದು ತಾತ್ವಿಕತೆಗೆ ಬೇಕಾದ ಅಗತ್ಯವನ್ನು ಪುರಾಣಗಳು ಕೊಟ್ಟವು. ಅದು ನೈತಿಕವೂ ಆಗಿತ್ತು. ಆದರೆ ವಸಾಹತೋತ್ತರ ಸನ್ನಿವೇಶದಲ್ಲಿ ಆ ಬಗೆಯ ಅರ್ಥಗಳು ಇಲ್ಲ. ಮತ್ತು ಗಿರಾಕಿ ಕೇಂದ್ರಿತವಾದ ಸಂಸ್ಕೃತಿಯು ಬೆಳೆಯಿತು. ಒಂದು ದೇಶ ಮತ್ತು ಅದರ ಅಸ್ತಿತ್ವದ ಪ್ರಶ್ನೆಯನ್ನು ರಾಷ್ಟ್ರೀಯತೆಯು ಹೇಳುವ ಕ್ರಮವೇ ಬೇರೆಯಾಗಿದೆ. ಅದು ಕ್ರಮವೂ ಹೌದು, ಆದರ್ಶವೂ ಹೌದು. ಒಂದು ದೇಶವು ತನಗೆ ಬೇಕಾದ ಅಂಶಗಳನ್ನು ತನ್ನ ಆಗತ್ಯಕ್ಕಾಗಿಯೇ ಕಟ್ಟುತ್ತದೆ. ಮತ್ತು ಅದರ ಅದರ ನಿರ್ವಚನವನ್ನು ಅದು ಮಾಡುತ್ತದೆ. ರಾಷ್ಟ್ರೀಯತೆ ಮತ್ತು ಅದರ ಸ್ವರೂಪವನ್ನು ಅದು ಸಿದ್ಧ ಪಡಿಸುವುದು ತನ್ನ ಅಗತ್ಯವನ್ನು ನೋಡಿಕೊಂಡು. ಅದಕ್ಕೆ ಒಂದು ಅಧಿಕೃತವಾದ ರೂಪವಿರುತ್ತದೆ. ಅದು ಸೈದ್ಧಾಂತಿಕವಾದ ಒಂದು ಹೋರಾಟವೂ ಹೌದು. ಅದಕ್ಕೆ ಕೆಲವು ಗುಣಗಳು ಇರಬೇಕಾಗುತ್ತದೆ. ರಾಷ್ಟ್ರೀಯತೆ ಮತ್ತು ಅದರ ರಾಜಕೀಯ ಹೋರಾಟವು ಬೇರೆ ಬೇರೆ ಆಯಾಮಗಳನ್ನು ರೂಪಿಸಿಕೊಳ್ಳುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ರಾಷ್ಟ್ರೀಯತೆಯು ಒಂದು ಪಠ್ಯವನ್ನು ರಚಿಸಿಕೊಳ್ಳುವುದೂ ಇಲ್ಲ. ಅದು ಒಂದು ತತ್ವಜ್ಞಾನವನ್ನು ಕಟ್ಟಲು ಯತ್ನಿಸಿತು. ರಾಷ್ಟ್ರೀಯತೆಯನ್ನು ಕಟ್ಟುವಾಗ ಗಾಂಧಿಯವರು ಸತ್ಯ ಮತ್ತು ಅದರ ಪ್ರಮಾಣಗಳನ್ನು ಬಳಸಿಕೊಂಡದ್ದು ನಿಜಕ್ಕೂ ಅತ್ಯಂತ ಕುತೂಹಲಕಾರಿಯಾಗಿದೆ. ಅದು ನಂಬಿಕೆಯನ್ನು ರೂಪಿಸಿತು. ಆದರೆ ರಾಷ್ಟ್ರೀಯತೆ ಮತ್ತು ಆಧುನಿಕತೆಗೆ ಯಾವ ಸಂಬಂಧವೂ ಇಲ್ಲ. ಅದು ತನ್ನದೇ ಆದ ಚಟುವಟಿಕೆಯನ್ನು ರೂಪಿಸಿತು. ಪ್ರೇಮಪತ್ರಕ್ಕೆ ಅಗ್ನಿಜ್ವಾಲೆ ನಾಗಮ್ಮನವರ ಹತಾಶೆ ಚಂದ್ರಯ್ಯಗೌಡರ ಈರ್ಷೆ ಇದನ್ನು ಹೇಳುತ್ತದೆ.

ಕಾದಂಬರಿಯು ಹೀಗೆ ಮುಕ್ತಾಯವಾಗುತ್ತದೆ. ಸ್ವಲ್ಪಹೊತ್ತಿನಲ್ಲಿ ಉತ್ಸವ ಆರಂಭವಾಯಿತು. ವಾಸು, ಆತನ ಇಬ್ಬರು ಬ್ರಾಹ್ಮಣ ಮಿತ್ರರು, ಶಂಕರಯ್ಯ, ರಮೇಶ ಇಷ್ಟು ಜನರು ವೇದಿಕೆಯ ಪಕ್ಕದಲ್ಲಿ ನಿಂತು ನವಜೀವನ ಮಂತ್ರಗಾನವನ್ನು ಹಾಡತೊಡಗಿದರು. ಲಕ್ಷ್ಮಿ ಹಿಂದುಗಡೆಯಿಂದ ಹಾರ್ಮೋನಿಯಂ ಬಾರಿಸುತ್ತಾ ಹಿಮ್ಮೇಳವಾಗಿದ್ದಳು. ಸೀತೆ ತಾನು ಕೂತಡೆಯಿಂದ ಮಾನಸಿಕವಾಗಿ ಅದರಲ್ಲಿ ಭಾಗವಹಿಸಿದ್ದಳು. ಆ ರಮಣೀಯ ವಸಂತ ಪ್ರಭಾತದಲ್ಲಿ, ಶಿಖರ ಕಂದರಮಯವಾದ ಸಹ್ಯಾದ್ರಿಯ ವನಭೂಮಿಯಲ್ಲಿ, ಹೊಸದಾಗಿ ಮೂಡಿಬಂದ ದಿನಮಣಿಯ ಕಾಂಚನಕಾಂತಿಯಲ್ಲಿ, ಗಿಳಿಕಾಮಳ್ಳಿ ಕಾಜಾಣ ಕೋಗಿಲೆ ಪಿಕಳಾರ ಮೊದಲಾದ ಹಕ್ಕಿಗಳಿಂಚರದೊಡಗೂಡಿ ಆ ಗಾನ ಆಲಿಸಿದವರನ್ನೆಲ್ಲ ಬೇರೊಂದು ನವೀನ ಆಶಾಜಗತ್ತಿಗೆ ತೇಲಿಸಿತು:

ಉದಯಿಸುತಿಹನದೊ ಅಭಿನವ ದಿನಮಣಿ
ಸಹ್ಯಾದ್ರಿಯ ಶೃಂಗಾಳಿಯ ಮೇಲೆ.
ಹರಿದೋಡಿದ ನಿಶೆ, ನಗೆ ಬೀರಿದೆ ಉಷೆ,
ತೀಡುತಲಿದೆ ತಂಗಾಳಿಯ ಲೀಲೆ,
ಮಲೆನಾಡನು ಮನಮೋಹಿಸುತಿದೆ ಓ
ದಿನಮುಖದಿನ ಕಾಂಚನಕಾತಿ
ಏಳೇಳಿರಿ! ಕರೆಯುತ್ತಿದೆ ಕೇಳಿರಿ,
ಓ ನವಜೀವನ ಸಂಕ್ರಾಂತಿ!
ಉದಯಿಸುತಿದೆ ನೂತನಯುಗದೇವತೆ!
ಮಿಥ್ಯೆಯ ಮೌಢ್ಯತೆಯನು ಸೀಳಿ ;
ಜ್ಞಾನದ ವಿಜ್ಞಾನದ ಮತಿಖಡ್ಗದಿ
ಮೈದೋರುವಳೈ ನವಕಾಳಿ!
ಕೆಚ್ಚಿನ ನೆಚ್ಚಿನ ತನುಮನ ಪಟುತೆಯ
ಸಂಪಾದಿಸಿ ಓ ಮೇಲೇಳಿ:

ಕಣ್ದೆರೆಯಿರಿ ನವಕ್ರಾಂತಿಗೆ, ಶಾಂತಿಗೆ,
ಓ ಕ್ರಾಂತಿಯ ಪುತ್ರರೆ, ಬಾಳಿ!

(ಕಾನೂರು ಹೆಗ್ಗಡತಿ; ಕುವೆಂಪು; ಉದಯರವಿ ಪ್ರಕಾಶನ ಮೈಸೂರು ; ಪುಟ–೫೯೦–೫೯೧).

ಕಾನೂರು ಹೆಗ್ಗಡಿತಿ ಕಾದಂಬರಿಯ ಪಾತ್ರಗಳ ಪರಿಚಯ ಮುಖೇನ ತಾತ್ವಿಕ ಸಂಗತಿಗಳ ಕಡೆಗೆ ನಾವು ನೋಡಬಹುದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಷ್ಯನ ಸಂಕಲ್ಪಗಳಿಂದ ಸ್ವತಂತ್ರವಾಗಿ ವಸ್ತುನಿಷ್ಠವಾಗಿ ಅಸ್ತಿತ್ವದಲ್ಲಿರುವ ಭೌತಿಕ ಪ್ರಪಂಚವು ನಮ್ಮ ಭೂಮಿ, ವಿಶ್ವ, ಸಕಲ ಸಜೀವ–ನಿರ್ಜೀವ ವಸ್ತುಗಳೆಲ್ಲವೂ ಚಲನಾತ್ಮಕವಾದ ಮೂಲವಸ್ತುವಿನ ಪರಿವರ್ತನೆಯಿಂದಾಗಿ ಉದ್ಭವವಾದವುಗಳಾಗಿವೆ. ಎಂದರೆ ಪ್ರಪಂಚವು ಸ್ವತಃ ಭೌತಿಕವಾಗಿದೆ.ಪ್ರಪಂಚದಲ್ಲಿರುವ ನಾನಾ ವಸ್ತು ವಿಶೇಷಗಳೂ ಪ್ರಕ್ರಿಯೆಗಳೂ

ಚಲನಾತ್ಮಕವಾದ ವಸ್ತುವಿನ ವಿಭಿನ್ನ ರೂಪಗಳಾಗಿವೆ. ಕ್ರಿಯೆಗಳಾಗಿವೆ. ವಸ್ತುವಿನ ಚಲನೆಯ ನಿಯಮಗಳಿಗೆ ಅನುಸಾರವಾಗಿ ನಡೆಯುವ ಪ್ರಾಪಂಚಿಕ ವ್ಯಾಪಾರಗಳಿಗೆ ಸರ್ವಾಂತರ್ಯಾಮಿಯಾದ, ಸರ್ವಶಕ್ತನಾದ ಪರಮಾತ್ಮನ ಅಥವಾ ದೇವರ ಸಹಾಯವೇನೂ ಅಗತ್ಯವಿಲ್ಲ. ವಿಜ್ಞಾನವು ಇದನ್ನು ರುಜುಗೊಳಿಸುತ್ತದೆ. ಈ ವೈಜ್ಞಾನಿಕ ಪ್ರಜ್ಞೆಯೇ ಮಾರ್ಕ್ಸ್‌ವಾದಿ ಭೌತಿಕವಾದದ ಜೀವಾಳವಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೂ ಇದೆ. ಮ್ಯಾಕ್ಸಿಂ ಗಾರ್ಕಿ ಬರೆಯುತ್ತಾರೆ: ನನ್ನ ಮಟ್ಟಿಗೆ ಹೇಳುವುದಾದರೆ, ಮನುಷ್ಯನಿಂದ ಅತೀತವಾದ ಯಾವುದೊಂದು ಇಲ್ಲ. ನನಗೆ ಸಂಬಂಧಿಸಿ ಹೇಳುವುದಾದರೆ ಮನುಷ್ಯನೇ, ಮನುಷ್ಯನು ಮಾತ್ರವೇ ಪ್ರಕೃತಿಯ ಎಲ್ಲ ಶಕ್ತಿಗಳ ಭಾವೀ ಯಜಮಾನ; ಮನುಷ್ಯನು ಮಾತ್ರವೇ ಅದ್ಭುತಗಳ ಕರ್ತೃ. ಲೋಕದಲ್ಲಿ ಅತೀ ಸುಂದರವಾದ ವಸ್ತುಗಳೆಲ್ಲವೂ ಮನುಷ್ಯನ ಕೈಗಳ ಪರಿಶ್ರಮದಿಂದಲೇ ಸೃಷ್ಟಿಯಾಗಿವೆ. ಪರಿಶ್ರಮದ ಮೂಲಕವೇ ನಮ್ಮ ಆಶಯಗಳೆಲ್ಲವೂ ಜನ್ಮ ತಾಳಿರುತ್ತವೆ. ಇದು ಒಂದು ಪದ್ಧತಿಯೆಂದೂ ನಾವು ಕರೆಯಬಹುದು. ಆದರೆ ಪರಿಪಾವನವಾದ ಕಾರ್ಯಗಳ ಕುರಿತಾಗಿ ಹೇಳುವುದಾದರೆ, ಮನುಷ್ಯನಿಗೆ ತನ್ನ ಬಗೆಗೇ ಇರುವ ಅತೃಪ್ತಿಯನ್ನು ಪರಿಹರಿಸುವುದಕ್ಕೆ ಅವನು ನಡೆಸುವ ಪರಿಶ್ರಮವೇ ಜಗತ್ತಿನಲ್ಲಿ ಅತ್ಯಂತ ಪಾವನವಾದ ಕಾರ್ಯವಾಗಿದೆ. ತಾನೇ ಸೃಷ್ಟಿಸಿರುವ ಎಲ್ಲ ತರದ ಹೀನತೆಗಳೊಂದಿಗೂ ಅವನಿಗಿರುವ ದ್ವೇಷವು ಬಹಳ ಪವಿತ್ರವಾಗಿದೆ. ದುರಹಂಕಾರ, ಅಸೂಯೆ, ಕೊಲೆಪಾತಕತನ, ರೋಗ, ಯುದ್ಧ, ಮನುಷ್ಯರೊಳಗಿನ ಪರಸ್ಪರ ಶತ್ರುತ್ವ ಮೊದಲಾದವುಗಳನ್ನೆಲ್ಲ ನಿವಾರಣೆ ಮಾಡುವ ಅವನ ಆಗ್ರಹ ಪವಿತ್ರವಾಗಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಅವನ ಶ್ರಮವು ಪರಿಪಾವನವಾದುದಾಗಿದೆ." ಗಾರ್ಕಿಯವರ ಈ ಮಾತೇ ಮಾರ್ಕ್ಸ್‌ವಾದದ ಮಾತಾಗಿದೆ. ಇದನ್ನು ಅನೇಕರು ಗಮನಿಸಲುಹೋಗುವುದೇ ಇಲ್ಲ. ಆದರೆ ಇದನ್ನು ಸಿದ್ಧಾಂತದ ವಿರೋಧಿಗಳು ಪ್ರಜ್ಞಾಪೂರ್ವಕವಾಗಿ ವಿವರಿಸುತ್ತಾರೆ. ವಸಾಹತು ಅಧಿಕಾರವು ಯುದ್ಧಗಳನ್ನು ಮಾಡಿತು. ಭಾರತೀಯ ಭೂಮಿ ಮತ್ತು ಸಂಪತ್ತನ್ನು ಲೂಟಿ ಮಾಡಿದ್ದರ ಜೊತೆಗೆ ಅದು ಬೇರೆ ಕ್ರಮಗಳನ್ನು ಅಳವಡಿಸಿಕೊಂಡಿತು. ಮನಸ್ಸು ಮತ್ತು ಸಾಹಿತ್ಯದ ರೂಪಗಳಿಗೆ ಸಂಬಂಧವಿದೆ. ಅದನ್ನು ನಾವು ಬೇರೆ ರೀತಿಯಲ್ಲಿಯೂ ನೋಡಬಹುದು: ಸಾಹಿತ್ಯ ಮತ್ತು ಅದರ ಪರಿಣಾಮಗಳನ್ನು ಬಹಳ ಸಣ್ಣದು ಎಂದು ಭಾವಿಸುವುದು ಸರಿಯಾದ ಕ್ರಮವಲ್ಲ ನಾವು ಯಾವುದನ್ನು ಅನುಭವ ಎಂದು ಹೇಳುತ್ತೇವೆಯೋ ಅದನ್ನು ನಾವು ಒಂದು ರೂಪದಲ್ಲಿ ಹಿಡಿದಿಡಲು ಪ್ರಯತ್ನ ಮಾಡುತ್ತೇವೆ. ಭಾಷೆ ಮತ್ತು ಅದರ ಸ್ವರೂಪವನ್ನು ನೋಡುವಾಗಲೂ ಈ ಪ್ರಶ್ನೆಯು ಬರುತ್ತದೆ. ಮತ್ತು ಅದನ್ನು ಗ್ರಹಿಸುವ ಕ್ರಮವೂ ಬೇರೆಯಾಗಿದೆ. ಮನುಷ್ಯ ಮತ್ತು ಅವನ ಮನಸ್ಸನ್ನು ನಾವು ನೋಡುವಾಗ ಮೊದಲು ಹೇಳುವುದು ಮನೋವಿಜ್ಞಾನವನ್ನು. ಅದು ಒಂದು ವಿಶಿಷ್ಟವಾದ ಶಿಸ್ತು ಆಗಿದೆ. ಒಂದು ಕಾಲಕ್ಕೆ ಕ್ರಿಶ್ಚಿಯಾನಿಟಿಯು ನಂಬಿದ್ದು ಪರಿಶುದ್ಧವಾದ ಒಂದು ಆತ್ಮವನ್ನು. ಆದರೆ ಅದು ಅನಂತರ ಧೋರಣೆಯನ್ನು ಬದಲಿಸಿಕೊಂಡಿತು. ಅದು ಎರಡು ಮುಖ್ಯವಾದ ಅಂಶವನ್ನು ಹೇಳುತ್ತದೆ. ಒಂದು ದೇವರು ಮತ್ತು ಅವನು ಸೃಷ್ಟಿ. ಮತ್ತೊಂದು ಮನುಷ್ಯನು ಮಾಡಬೇಕಾದ ಕರ್ತವ್ಯ. ಇದರಲ್ಲಿ ಮನುಷ್ಯನು ವಾಸ್ತವವಾಗಿ ತ್ಯಾಗವನ್ನು ಮಾಡುವುದರ ಮೂಲಕವೇ ಅನೇಕವನ್ನು ಪಡೆಯಬಲ್ಲ. ಮತ್ತು ಅವನು ಜೀವನವನ್ನು ನಿಸ್ವಾರ್ಥವಾಗಿ ಸೇವೆಯನ್ನು ಮಾಡುವುದರ ಮೂಲಕವೇ ಸಾರ್ಥಕ

ಪಡಿಸಿಕೊಳ್ಳಬಲ್ಲ. ಮಧ್ಯಯುಗೀನ ಕಾಲದಲ್ಲಿ ಸಮಾಜ ಮತ್ತು ವ್ಯಕ್ತಿಗಳ ನಡುವೆ ಬಂದ ಅಂತರವೂ ಇದರ ಹಿಂದೆ ಇದೆ. ಭಿನ್ನತೆಗಳು ಕೂಡಾ ಮಾನದಂಡಗಳೇ ಆದವು. ವ್ಯಕ್ತಿ ಮತ್ತು ಅವನ ಘನತೆಗಳು ಯಾವ ಬಗೆಯವು ಮತ್ತು ಅದರ ಪರಿಣಾಮಗಳು ಯಾವ ಬಗೆಯವು ಎನ್ನುವುದೇ ಬಹಳ ಮುಖ್ಯವಾದ ಪ್ರಶ್ನೆಗಳೂ ಆದವು. ಸಾಮಾಜಿಕ ವಿಘಟನೆ ಮತ್ತು ಅದರ ಪರಿಣಾಮಗಳೂ ಕಾಣಿಸಿಕೊಂಡವು. ವ್ಯಕ್ತಿ ಮತ್ತು ಅವನ ನೈತಿಕ ಶಕ್ತಿಯ ಪ್ರಶ್ನೆಯು ಬಹಳ ಮುಖ್ಯವಾಗಿತ್ತು. ಸಮಾಜ ಮತ್ತು ಅದರ ಸ್ವರೂಪವೇ ಬದಲಾಗುತ್ತಿದ್ದ ಸಂದರ್ಭಗಳು ಅನೇಕವನ್ನು ಹುಟ್ಟು ಹಾಕಿತು. ಮತ್ತು ಅದನ್ನು ನಾವು ಹೀಗೆಯೂ ನೋಡಬಹುದು: ನೈತಿಕ ಮತ್ತು ಅನೈತಿಕತೆಯ ಬಿಕ್ಕಟ್ಟು, ಸಾಮಾಜಿಕ ಜೀವನವೇ ಬದಲಾಗುತ್ತಿದೆ. ಮತ್ತು ಅದರಿಂದ ಸಮಾಜವು ಹಾಳಾಗಿ ಹೋಗಿದೆ ಎನ್ನುವ ಭಾವನೆಯ ಬಂತು.

ಸಮಾಜಕ್ಕೆ ಒಂದು ಆಧ್ಯಾತ್ಮಿಕವಾದ ಶಕ್ತಿಯು ಅಗತ್ಯವು ಇದೆ ಎಂದು ನಂಬಿದವರು ನೀತಿಯನ್ನು ಬೋಧಿಸಲು ತೊಡಗಿದರು. ಅದರಿಂದ ಸಾಮಾಜಿಕ ಮತ್ತು ನೈತಿಕತೆ ಅಗತ್ಯವನ್ನು ಕಂಡವರು ಸಮಾಜ ಮತ್ತು ಅದರ ಸುಧಾರಣೆ. ಆದರೆ ಈ ಸುಧಾರಣೆಯು ಏಕಮುಖವೂ ಆಗಿರಲಿಲ್ಲ. ಸಮಾಜದಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎನ್ನುವ ಚರ್ಚೆಗಳು ಪ್ರಾರಂಭವಾದವು. ಆಗ ಬಂದ ಚರ್ಚೆಗಳಲ್ಲಿ ಅಸಹಜತೆಯು ಕೂಡಾ ಚರ್ಚೆಗೆ ಒಳಗಾಯಿತು. ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವಿದೆ. ಯಾರನ್ನು ನಾವು ಮೂರ್ಖರು ಎಂದು ಹೇಳುತ್ತೇವೆಯೋ ಅದರ ಸ್ವರೂಪದಲ್ಲಿಯೇ ಅಸಹಜತೆಯ ಅಂಶವೂ ಇದೆ. ಅದೇ ರೀತಿಯಲ್ಲಿ ಕುಡುಕರು ತಮ್ಮನ್ನು ತಾವೇ ಅಸಹಜರನ್ನಾಗಿ ಮಾಡಿಕೊಳ್ಳುತ್ತಾರೆ. ಮತ್ತು ಅವರು ಕುಡಿದ ಹೊತ್ತಿನಲ್ಲಿ ತೊದಲುತ್ತಾರೆ. ಕಿರುಚುತ್ತಾರೆ. ಬೈಯುತ್ತಾರೆ. ಮತ್ತು ಜನರೊಂದಿಗೆ ಜಗಳವನ್ನು ಮಾಡುತ್ತಾರೆ. ಇದಕ್ಕೆ ಕಾರಣ ಅವರು ಸೇವಿಸಿದ ಅಮಲು. ಅಮಲು ವರ್ತಮಾನವನ್ನು ಮರೆಯುವಂತೆ ಮಾಡುತ್ತದೆ. ಕ್ರಿಮಿನಲ್‌ಗಳು ಮತ್ತೊಂದು ರೀತಿಯವರು. ಸಿಟ್ಟು, ಕ್ರೌರ್ಯ, ಜೀವನದ ಆವೇಶವು ಅವರನ್ನು ಅಪರಾಧಿಗಳನ್ನಾಗಿ ಮಾಡುತ್ತದೆ. ಅವರನ್ನು ಕ್ರಿಮಿನಲ್ ಎಂದು ಕರೆಯುವುದು ಮೂಲಭೂತವಾಗಿ ಅವರ ವರ್ತನೆಯ ಕಾರಣದಿಂದ. ಕ್ರಿಮಿನಲ್ ಗಳು ವಾಸ್ತವವಾಗಿ ಭಿನ್ನವಾದವರೂ ಹೌದು. ಅವರು ನಾಗರಿಕರನ್ನು ಭಯ ಹುಟ್ಟಿಸುತ್ತಾರೆ. ನಾಗರಿಕ ಸಂಹಿತೆಯ ದೃಷ್ಟಿಯಿಂದಲೇ ಆವರು ಅಪರಾಧಿಗಳು ಆಗಿದ್ದಾರೆ. ಪ್ರೇಮಿಗಳೂ ಅಷ್ಟೇ ಅವರೂ ಅಸಹಜರೆಂದು ಜನರು ಹೇಳುತ್ತಾರೆ. ಪ್ರೇಮವೂ ಒಂದು ದೃಷ್ಟಿಯಿಂದ ಅಮಲು ಎಂದು ಜನರು ಹೇಳುತ್ತಾರೆ. ಪ್ರಭುತ್ವವು ಯಾವುದನ್ನು ನಿಜವಾದ ನಾಗರಿಕ ಸಂಹಿತೆಯೆಂದು ಹೇಳುತ್ತದೆಯೋ ಅದರಲ್ಲಿ ಈ ವರ್ಗವು ಸೇರಿಲ್ಲ. ಕ್ರಿಮಿನಲ್‌ಗಳನ್ನು ದಂಡಸಂಹಿತೆಯು ದಂಡಿಸುತ್ತದೆ. ಆದರೆ ಪ್ರೇಮಿಗಳನ್ನು ಅದು ಅಪರಾಧಿಗಳು ಎಂದು ಹೇಳಿಕೊಳ್ಳುವುದಿಲ್ಲ. ಅದರಲ್ಲಿ ವ್ಯತ್ಯಾಸವಿದೆ. ಅಂದರೆ ಯಾವುದೇ ಸಮಾಜದ ಮತ್ತು ಪ್ರಭುತ್ವದ ಅಂಗ ಸಂಹಿತೆಗಳು ಬದಲಾಗುತ್ತವೆ. ಅದರಂತೆ ಕಾನೂನುಗಳು ಕೂಡಾ ಬದಲಾಗುತ್ತಾ ಹೋಗಿವೆ. ಕೆಲವನ್ನು ನಾಗರಿಕ ಸಂಹಿತೆಯು ಒಪ್ಪಿಕೊಂಡಿದೆ ಮತ್ತು ಕೆಲವನ್ನು ಅದು ತಿರಸ್ಕರಿಸಿದೆ. ಯಾವುದನ್ನು ನಾವು ಅಧಿಕಾರ ಮತ್ತು ಯಾವುದನ್ನು ನಾವು ಕಾನೂನು ಎಂದು ಹೇಳುತ್ತೇವೆ

ಅದು ಸಂವಾದಿಯಾದುದೂ ಹೌದು. ಪ್ರಭುತ್ವ ಮತ್ತು ಅದರ ಸಂಕಥನಗಳು ಯಾವಗಲೂ ಬದಲಾಗುತ್ತಾ ಹೋಗಿದೆ. ಮತ್ತು ಅನೇಕ ಸಂದರ್ಭದಲ್ಲಿ ಅದನ್ನು ನಾವು ಸಂವಾದಿಯೆಂದೂ ಕರೆಯುವುದು ಮಾತ್ರವೇ ಅಲ್ಲ, ಅವುಗಳ ವ್ಯಾಖ್ಯೆಗಳೂ ಬದಲಾಗಿವೆ. ಯಾವುದನ್ನು ನಾವು ಚರಿತ್ರೆ ಮತ್ತು ಅದರ ಗತಿಗಳು ಎಂದು ಹೇಳುತ್ತಾ ಬಂದಿದ್ದೇವೆಯೋ ಅದರಲ್ಲಿಯೂ ಬೇರೆ ಬೇರೆ ಅಂಶಗಳೂ ಇವೆ. ಕೆಲವನ್ನು ನಾವು ಆಯಾ ಕಾಲದ ಕಾನೂನು ಎಂದು ಹೇಳುತ್ತೇವೆ. ಮತ್ತೆ ಕೆಲವು ಕಾನೂನು ಮತ್ತು ಅದರ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಚರಿತ್ರೆಯಲ್ಲಿ ಘಟಿಸಿದ ಮುಖ್ಯವಾದ ಒಂದು ಅಂಶಗಳಲ್ಲಿ ಆಸ್ಪತ್ರೆಯೂ ಒಂದು. ಪಾಪಿಗಳು, ಬಡವರು, ದೀನರು, ಅನಾರೋಗ್ಯದಿಂದ ಕೂಡಿದವರು ಮತ್ತು ಕ್ಲಿನಿಕ್‌ಗಳ ನಡುವಣ ಸಂಬಂಧವೇ ವಿಶಿಷ್ಟವಾಯಿತು. ಅನಾರೋಗ್ಯದಿಂದ ಕೂಡಿದ ವ್ಯಕ್ತಿಯನ್ನು ನಾವು ಉದಾರವಾಗಿಯೂ ನೋಡಬೇಕು ಎನ್ನುವುದೂ ಒಂದು ಮುಖ್ಯವಾದ ವಿಷಯವು ಆಯಿತು. ತ್ಯಾಗ ಮತ್ತು ಸೇವೆಯು ಒಂದು ಮಾನದಂಡವೂ ಆಯಿತು. ಹುಚ್ಚುತನ, ನಾಗರಿಕತೆಗಳ ನಡುವಣ ಸಂಬಂಧವನ್ನು ಫುಕೋ ಗುರುತಿಸುತ್ತಾನೆ. ಅವನು ಹೇಳುವ ಅನೇಕ ಸಂಗತಿಗಳು ಮೂಲಭೂತವಾಗಿ ರಾಚನಿಕ ವಾದವನ್ನು ಹೇಳುತ್ತದೆ ಎನ್ನುವುದೂ ನಿಜ. ಆದರೆ ಇದರಲ್ಲಿ ಬೇರೆ ಬೇರೆ ಅಂಶಗಳನ್ನೂ ಅವನು ಚರ್ಚೆ ಮಾಡುತ್ತಾನೆ. ಸಮಾಜ, ರಾಚನಿಕತೆ, ರಾಜಕಾರಣದ ಪಲ್ಲಟಗಳು ಅವನ ಕೇಂದ್ರವಾದ ಆಸಕ್ತಿಯೂ ಆಗಿದೆ. ಅವನ ಅನೇಕ ಮಾತುಗಳಿಗೆ ಹದಿನಾರನೆಯ ಶತಮಾನದ ಫ್ರಾನ್ಸ್ ಚರಿತ್ರೆಯೂ ಮುಖ್ಯವಾದ ಕಾರಣವಾಗಿದೆ ಎನ್ನುವುದೂ ಅಷ್ಟೇ ನಿಜ. ತ್ಯಾಗ ಮತ್ತು ಕರುಣೆಗೆ ಹೊಸದಾದ ಅರ್ಥವ್ಯಾಪ್ತಿಯು ಬಂದದ್ದೂ ಈ ಕಾಲದಲ್ಲಿಯೇ. ಕರುಣೆಯನ್ನು ನಾವು ಮನಸ್ಸು ಮತ್ತು ಅದರ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಬಡವರ ಸೇವೆಯನ್ನು ಮಾಡಬೇಕು ಎನ್ನುವುದು ಆಗಿನ ಬಹಳ ದೊಡ್ಡ ನಂಬಿಕೆಯೂ ಆಗಿತ್ತು. ಬಡವರು ಮತ್ತು ಅವರ ಸೇವೆಯನ್ನು ಮಾಡುವುದೇ ಸಮಾಜಕ್ಕೆ ಬಹಳ ದೊಡ್ಡ ಸೇವೆಯೂ ಹೌದು ಎಂದು ಅನೇಕರು ನಂಬಿದ್ದರು. ಮತ್ತು ಇದರಿಂದ ಸೇವೆಗೆ ಒಂದು ನೈತಿಕವಾದ ದೃಷ್ಟಿಯೂ ಬಂತು. ಈ ಸಂದರ್ಭದಲ್ಲಿ ಆಸ್ಪತ್ರೆಗಳಿಗೆ ವಿಶೇಷವಾದ ಒಂದು ಅರ್ಥವು ಸಿಕ್ಕಿತು.

ಅನೇಕ ಪರಿಕಲ್ಪನೆಗಳಿಗೆ ಬಂದ ಹೊಸ ಅರ್ಥವನ್ನು ಫುಕೋ ಗುರುತಿಸುತ್ತಾನೆ. ಅವನು ಅದನ್ನು ಆ ಕಾಲದ ಚರಿತ್ರೆಯ ಗ್ರಹಿಸುತ್ತಾನೆ. ಅದು ಅವನಿಗೆ ಬಹಳ ಮುಖ್ಯವೂ ಆಗಿದೆ. ಬಡವರು ಮತ್ತು ಅವರ ಸೇವೆಗೆ ಬಂದ ಹೊಸದಾದ ಅರ್ಥವನ್ನು ನಾವು ಬೇರೆ ಹಿನ್ನೆಲೆಯಲ್ಲಿಯೂ ಗ್ರಹಿಸಬೇಕಾಗುತ್ತದೆ. ನೀತಿ ಮತ್ತು ಪ್ರಭುತ್ವದ ಜೊತೆಗೆ ಇದ್ದ ಸಂಬಂಧದ ಚಹರೆಯೂ ಬದಲಾಯಿತು. ಋಣ ಮತ್ತು ಅದರ ವ್ಯಾಖ್ಯೆಗಳಲ್ಲಿ ಬದಲಾದ ಅರ್ಥವು ಕಾಣಿಸಿತು. ವ್ಯಕ್ತಿ ಮತ್ತು ಅವನ ಅಭ್ಯುದಯವೂ ಒಂದು ವಿಶಿಷ್ಟವಾದ ಅರ್ಥವನ್ನು ಸೂಚಿಸಿತು. ಪಾಪ ಮತ್ತು ಪುಣ್ಯದ ನಡುವಣ ಸಂಬಂಧವನ್ನು ನಾವು ಈ ಅರ್ಥದಲ್ಲಿ ಅತ್ಯಂತ ಸಂಕೀರ್ಣವೆಂದು ಹೇಳಬೇಕಾಗುತ್ತದೆ. ಮತ್ತು ಪಾಪಿಗೂ ಉದ್ಧಾರವು ಸಾಧ್ಯವೆಂದು ಅನೇಕರು ಭಾವಿಸಿದ್ದರು. ಇದರಲ್ಲಿ ಪಾಪಿಗಳು, ಬಡವರು, ಕ್ರಿಮಿನಲ್‌ಗಳು ಕುರಿತ ಧೋರಣೆಯೂ ಇದೆ. ಮತ್ತು

ಇದನ್ನು ಆಗಿನ ಚಾರಿತ್ರಿಕ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ಮಾನಸಿಕ ತೊಂದರೆಯನ್ನು ಅನುಭವಿಸುವವರು, ಬಡವರು, ಅಪರಾಧಿಗಳು ಇರುವ ಸಮಾಜವೇ ನಾಗರಿಕತೆಯ ಕಳಂಕವೆಂದೇ ಹೇಳಲಾಯಿತು. ಯಾರು ಮನೋತೊಂದರೆಯನ್ನು ಅನುಭವಿಸುತ್ತಾರೆಯೋ ಅವರನ್ನು ಪಾಪಿಗಳು ಎಂದೇ ಪರಿಗಣಿಸಿದರು. ಹೆಣ್ಣು ಈ ವರ್ಗಕ್ಕೆ ಒಂದು ಕಾಲದಲ್ಲಿ ಸೇರಿದ್ದಳು. (ವಡ್ಡಾರಾಧನೆಯ ಸುಕುಮಾರಸ್ವಾಮಿ ಕತೆಯನ್ನು ಗಮನಿಸಬೇಕು). ಇಲ್ಲಿ ಮತ್ತೊಂದು ಸಮಸ್ಯೆಯು ಇದೆ. ಆಗ ಮತ್ತೆ ಒಂದು ಸಮಸ್ಯೆಯೂ ಬಂತು. ಅದೆಂದರೆ ಯಾವುದೇ ವ್ಯಕ್ತಿ ಮತ್ತು ಅವನ ಕಾಯಿಲೆಯು ಮೂಲಭೂತವಾಗಿ ನೈತಿಕ ಕಾರಣವನ್ನು ಹೊಂದಿದೆ ಎಂದೇ ಭಾವಿಸಿಕೊಂಡಿದ್ದರು. ಕೂಲಿಗಳು ಮತ್ತು ಅವರ ಮೇಲೆ ನಡೆಯುವ ದಬ್ಬಾಳಿಕೆಯನ್ನು ಒಂದು ದೃಷ್ಟಿಯಲ್ಲಿ ದೈಹಿಕವಾದ ಒಂದು ಅಧಿಕಾರವೆಂದೂ ಹೇಳಲಾಯಿತು. ವಾಸ್ತವವಾಗಿ ಕೂಲಿಯವರ, ಕಾರ್ಮಿಕರು ಶಕ್ತಿಯನ್ನು ಪ್ರಭುತ್ವವು ಚೆನ್ನಾಗಿಯೂ ಬಳಸಿಕೊಳ್ಳುತ್ತದೆ. ಭೌತಿಕವಾದ ಒಂದು ಯಜಮಾನಿಕೆಯಿಂದ ಉತ್ಪಾದನೆ ಮತ್ತು ಅದರ ರೂಪವೂ ಬದಲಾಗುತ್ತದೆ. ಆಯಾ ಕಾಲ ಮತ್ತು ಪ್ರದೇಶಗಳಲ್ಲಿ ಈ ಪ್ರಭುತ್ವವವು ತನ್ನ ಶಕ್ತಿಯನ್ನು ಸೂಚಿಸುತ್ತದೆ. ಇದರಿಂದ ಕಾರ್ಮಿಕರು ಮತ್ತು ಅವರ ಮೇಲೆ ನಡೆಯುವ ದಬ್ಬಾಳಿಕೆಯನ್ನು ನಾವು ಬೇರೆ ಬೇರೆ ಅರ್ಥದಲ್ಲಿಯೂ ಕಾಣಬೇಕಾಗುತ್ತದೆ.

ಯಜಮಾನಿಕೆ ಮತ್ತು ಅದರ ಫಲವೇ ವಾಸ್ತವವಾಗಿ ಭಿನ್ನವಾಗುತ್ತದೆ. ಮತ್ತು ಅದನ್ನು ಕಾಲ ಮತ್ತು ಅದರ ಅವಕಾಶಗಳ ಹಿನ್ನೆಲೆಯಲ್ಲಿಯೂ ಕಾಣಬೇಕಾಗುತ್ತದೆ. ಪುಕೋ ಜ್ಞಾನವನ್ನು ಒಂದು ಅಧಿಕಾರವೆಂದು ಹೇಳುವಾಗ ಈ ಸಂಗತಿಯೂ ಇದೆ. ಒಂದು ಕಾಲಕ್ಕೆ ನೈತಿಕತೆಯನ್ನು ಅತ್ಯಂತ ಪ್ರಧಾನವಾದ ಗುಣವೆಂದು ಹೇಳುವಾಗಲೂ ಈ ಅಂಶಗಳೂ ಇದ್ದವು. ನೈತಿಕತೆಯೇ ಒಂದು ಯಜಮಾನಿಕೆ ಎಂದೇ ಭಾವಿಸಲಾಯಿತು. ನೈತಿಕತೆ ಮತ್ತು ಅದನ್ನೂ ಮೀರಿದವರ ಪಾಪಪ್ರಜ್ಞೆಯ ಪ್ರಶ್ನೆಗಳು ಸಂಕೀರ್ಣವಾಗಿದೆ. ಹೆಣ್ಣಿನ ಪಾಪ ಮತ್ತು ಗಂಡಿನ ಪಾಪವೆಂದು ವರ್ಗೀಕರಿಸಲಾಗಿತ್ತು. ನಮ್ಮ ಸಂವೇದನೆ ಮತ್ತು ಅದರ ಅಂಶಗಳು ನಮ್ಮ ಮೇಲೆ ಬೇರೆ ಬೇರೆ ಪರಿಣಾಮವನ್ನು ಬೀರುತ್ತವೆ. ವ್ಯಕ್ತಿ ಮತ್ತು ಅವನ ಮನೋಸ್ಥಿತಿಯನ್ನು ಒಂದು ಆಧಾರದ ಮೇಲೆ ನಿರ್ಧರಿಸಲು ಬರುವುದೂ ಇಲ್ಲ. ಅವುಗಳು ಬರೀ ಒಂದು ಪದಗಳು ಮಾತ್ರವೇ ಅಲ್ಲ. ಮನೋವಿಜ್ಞಾನ, ಚರಿತ್ರೆ, ಸಮಾಜ ಇವುಗಳ ನಡುವಣ ಸಂಬಂಧವನ್ನು ನಾವು ಅತ್ಯಂತ ಸಂಕೀರ್ಣವೆಂದು ಹೇಳಬೇಕಾಗುತ್ತದೆ. ನಮ್ಮ ಪ್ರಜ್ಞೆ ಮತ್ತು ಅದರ ಸ್ವರೂಪವನ್ನು ನಿರ್ಧರಿಸುವುದೂ ಸಮಾಜವೇ. ಒಬ್ಬ ವ್ಯಕ್ತಿಯು ಯಾಕೆ ಪಾಪ ಪ್ರಜ್ಞೆಯಿಂದ ಬಳಲುತ್ತಾನೆ ಮತ್ತು ಅವನು ಯಾಕೆ ಖಿನ್ನನಾಗಿದ್ದಾನೆ, ಅವನು ಯಾಕೆ ತನ್ನ ಪಾಡಿಗೆ ತಾನೇ ಮಾತಾಡುತ್ತಾನೆ ಎನ್ನುವುದಕ್ಕೂ ಬೇರೆ ಬೇರೆ ಕಾರಣಗಳೂ ಇರುತ್ತವೆ ಎನ್ನವುದನ್ನು ಮನೋವಿಜ್ಞಾನವು ಹೇಳುತ್ತದೆ. ಮತ್ತು ಮನೋವೈದ್ಯನು ಕೂಡಾ ಕೇವಲ ವಿಜ್ಞಾನವನ್ನು ಮಾತ್ರವೇ ಅರಿತವನು ಆಗಿರುವುದೂ ಇಲ್ಲ. ಅವನು ರೋಗಿಯನ್ನು ನೋಡುವ ಕ್ರಮಗಳೂ ಭಿನ್ನವಾಗುತ್ತದೆ. ಈ ದೃಷ್ಟಿಯಲ್ಲಿ ವೈದ್ಯಕೀಯ ಉದ್ಯೋಗವೇ ಅತ್ಯಂತ ಅಗತ್ಯವಾದ ಒಂದು ಉದ್ಯೋಗವೂ ಹೌದು. ನಾವು ವೈದ್ಯಕೀಯವಾದ ಒಂದು ಸತ್ಯವನ್ನು ಎದುರಿಸುವುದು ಅತ್ಯಂತ ಅಗತ್ಯವೂ ಹೌದು. ಅದರ ಸಂಹಿತೆಗಳು, ಅದರ ಸಂಕೇತಗಳು ಭಿನ್ನವೂ ಹೌದು. ಅದರ ಜ್ಞಾನವನ್ನು ನಾವು ಬೇರೆ ಬಗೆಯದು ಎಂದೂ

ಹೇಳಬೇಕಾಗುತ್ತದೆ. ಮನೋವೈದ್ಯರು ರೋಗಿಯ ಮಾತುಗಳನ್ನು ನೋಡಿಯೇ ಅನೇಕ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅಂದರೆ ರೋಗಿಯ ಭಾಷೆ ಮತ್ತು ಅವನ ವರ್ತನೆಗಳು ಇಲ್ಲಿ ಮುಖ್ಯವಾದದ್ದು ಹೌದು. ಮನೋವೈದ್ಯಕೀಯವಾದ ಪರೀಕ್ಷೆಗೆ ಅದರದೇ ಆದ ಒಂದು ಆಯಾಮವೂ ಇದೆ. ವೈದ್ಯರು ಮತ್ತು ಅವರ ಜ್ಞಾನವೂ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅವರು ಅವರ ಕ್ಷೇತ್ರದಲ್ಲಿ ಯಾವ ಬಗೆಯ ಜ್ಞಾನ ಮತ್ತು ಅನುಭವವನ್ನು ಹೊಂದಿರುತ್ತಾರೆಯೋ ಆಗ ಅವರಿಗೆ ರೋಗಿಯ ತಪಾಸಣೆಯು ಸುಲಭವಾಗುತ್ತದೆ. ರೋಗಿ ಮತ್ತು ವೈದ್ಯರ ನಡುವಣ ಸಂಬಂಧವು ಸಾಮಾಜಿಕ ಕೂಡಾ ಆಗಿರುತ್ತದೆ. ಅವರು ಬರೆಯುವ ಚೀಟಿಗಳು ಅವರ ಊಹೆಯನ್ನೂ ಆಧರಿಸಿಕೊಂಡೂ ಇರುತ್ತದೆ. ಮನೋವೈದ್ಯಕೀಯವಾದ ಚಟುವಟಿಕೆಯನ್ನು ನೋಡುವಾಗ ಮತ್ತೆ ಕೆಲವು ಸಂಗತಿಗಳನ್ನು ಗಮನಿಸಬೇಕಾಗುತ್ತದೆ. ಮನೋವಿಜ್ಞಾನವನ್ನು ಮತ್ತು ಅದರ ಫಲವನ್ನು ಗ್ರಹಿಸುವುದು ರೋಗಿಯಲ್ಲ. ಆದ್ದರಿಂದ ಅವರ ಭಾಷೆ ಮತ್ತು ಅವರ ವಿಧಾನಗಳು ಚಿಕಿತ್ಸೆಯಲ್ಲಿ ಮಹತ್ವದ ಪಾತ್ರವನ್ನು ಸೂಚಿಸುತ್ತದೆ. ವೈದ್ಯರ ಭಾಷೆಯೂ ಭಿನ್ನವಾಗುವುದೂ ಮಾತ್ರವೇ ಅಲ್ಲ, ಅವರು ವ್ಯಕ್ತಿ ಮತ್ತು ಅವನ ನಡೆಯನ್ನು ಗ್ರಹಿಸುವ ಕ್ರಮವೂ ಬೇರೆಯಾಗುತ್ತದೆ. ಮನೋವೈದ್ಯಕೀಯ ಚಿಕಿತ್ಸೆಯು ಮೂಲಭೂತವಾಗಿ ದೇಹ, ಕ್ಲಿನಿಕಲ್ ಭಾಷೆಯೂ ಹೌದು. ಖಿನ್ನತೆ, ಮೂರ್ಛೆ ರೋಗ, ಆತಂಕ, ಮರೆವು, ದ್ವಂದ್ವತೆ ಮುಂತಾದವುಗಳು ಬೇರೆ ಬೇರೆ ಖಾಯಿಲೆಗಳೂ ಹೌದು. ಅದನ್ನು ನೋಡುವಾಗ ವೈದ್ಯರು ದೇಹವನ್ನು ನೋಡಬೇಕು, ಮನಸ್ಸನ್ನು ಗ್ರಹಿಸಬೇಕು. ವೈದ್ಯಕೀಯ ಲೋಕಕ್ಕೂ ಅದರದೆ ಆದ ಒಂದು ಚರಿತ್ರೆಯು ಇದೆ. ಮತ್ತು ಅದನ್ನು ನಾವು ಅದರ ವಿವರವಾದ ಬೆಳವಣಿಗೆಯಲ್ಲಿಯೂ ಗಮನಿಸಬೇಕಾದ ಅಗತ್ಯವೂ ಇದೆ. ಆಧುನಿಕ ವಿಜ್ಞಾನ ಮತ್ತು ಅದರ ಬೆಳವಣಿಗೆಗೂ ವೈದ್ಯಕೀಯವಾದ ಬೆಳವಣಿಗೆಗೂ ಒಂದು ಸಂಬಂಧವಿದೆ. ಮತ್ತು ಅದು ಇದ್ದಕ್ಕಿದ್ದಂತೆ ಹುಟ್ಟಿಕೊಂಡದ್ದೂ ಅಲ್ಲ.

ವ್ಯಕ್ತಿ ಮತ್ತು ಅವನ ಆರೋಗ್ಯದ ಪ್ರಶ್ನೆಯು ಅತ್ಯಂತ ಜಟಿಲವೂ ಆಗಿದೆ. ದೇಹವನ್ನು ಪರೀಕ್ಷೆ ಮಾಡದೆ ಯಾವುದೇ ನಿರ್ಧಾರವನ್ನು ವೈದ್ಯರು ತೆಗೆದುಕೊಳ್ಳಲಾರರು. ಈ ದೃಷ್ಟಿಯಿಂದ ದೇಹವೂ ಒಂದು ಮಾಧ್ಯಮವೂ ಆಗಿದೆ. ಆದರೆ ಯಾವಾಗ ಯಾವ ರೀತಿಯ ಸಮಸ್ಯೆಯು ಉಂಟಾಗುತ್ತದೆ ಮತ್ತು ಯಾವುದನ್ನು ತೆಗೆದುಕೊಂಡರೆ ಏನಾಗುತ್ತದೆ ಎನ್ನುವುದನ್ನು ವೈದ್ಯರು ಮಾತ್ರವೇ ನಿರ್ಧರಿಸಬಲ್ಲರು. ಈಗ ಅನೇಕ ಸಂಗತಿಗಳನ್ನು ನಾವು ಗಮನಿಸುತ್ತಿರುವುದು ವೈಜ್ಞಾನಿಕ ಪರಿಕರದ ಮೂಲಕವೂ ಹೌದು. ಅಂದರೆ ದೇಹವನ್ನು ಪರೀಕ್ಷೆ ಮಾಡಲು ನಮಗೆ ಈಗ ಪರಿಕರಗಳು ಇವೆ. ವೈಜ್ಞಾನಿಕವಾದ ದತ್ತಾಂಶಗಳು ನಮಗೆ ಅನೇಕ ವಿವರಗಳನ್ನು ಕೊಡುತ್ತವೆ. ಈಗ ನಾಡಿ ಬಡಿತವನ್ನು ನೋಡಲು ಪರಿಕರವು ಇದೆ. ಅದೇ ರೀತಿಯಲ್ಲಿ ಅದರ ಫಲಿತದಿಂದ ದೇಹ ಮತ್ತು ಅದರ ರಾಸಾಯನಿಕ ಏರುಪೇರುಗಳನ್ನು ಗಮನಿಸಬಲ್ಲೆವು. ದೇಹ ಮತ್ತು ಅದರ ವ್ಯಾಪಾರವನ್ನು ಗುರುತಿಸುವುದು ಅಂದರೆ ಅದನ್ನು ಒಂದು ಪರಿವೀಕ್ಷಣೆಯನ್ನು ಮಾಡುವುದು. ಮತ್ತು ವೈದ್ಯರು ಅದಕ್ಕೆ ಬೇಕಾದ ಮಾತ್ರೆಗಳನ್ನು ಕೊಡುವುದೂ ಕೂಡಾ ಇದೇ ಆಧಾರದ ಮೇಲೆ. ರಸಾಯನ ಶಾಸ್ತ್ರವು ಈಗ ಪ್ರಬುದ್ಧಾವಸ್ಥೆಗೆ ತಲುಪಿದೆ. ದೇಹ ಮತ್ತು

ಅದರ ಪರೀಕ್ಷೆಗೆ ಸಮಾಜದ ಅಗತ್ಯವು ಇಲ್ಲ. ಅಂದರೆ ಜ್ವರ ಬಂದರೆ ಅದಕ್ಕೆ ನಾವು ಸಮಾಜವನ್ನು ದೂರಬೇಕಾಗಿಯೂ ಇಲ್ಲ. ಆದರೆ ಮನಸ್ಸು ಮತ್ತು ಅದರ ಏರುಪೇರಿಗೆ ಕಾರಣಗಳು ಇರುತ್ತವೆ. ಮನಸ್ಸು ಮತ್ತು ಅದರ ಮೇಲೆ ಉಂಟಾಗುವ ಒತ್ತಡಕ್ಕೂ ಸಮಾಜಕ್ಕೂ ಒಂದು ಸಂಬಂಧವಿದೆ. ದೇಹವು ಸಹಜ. ಮತ್ತು ದೇಹವು ವ್ಯಕ್ತಿಯ ಕಟ್ಟಡವೂ ಹೌದು. ಅಂದರೆ ಆ ಕಟ್ಟಡದಲ್ಲಿ ಯಾವುದೇ ಒಂದು ಸಂಗತಿಯು ಸಡಿಲವಾದರೆ ಅದರ ಅರ್ಥವು ಬೇರೆಯಾಗುತ್ತದೆ. ದೇಹವನ್ನು ವೈದ್ಯರು ನೋಡುವಾಗ ಅದನ್ನು ವಸ್ತುವನ್ನು ಪರೀಕ್ಷೆ ಮಾಡುವಂತೆ ಮಾಡುತ್ತಾರೆ. ಹಾಗೆಂದು ಅತ್ಯಂತ ಭೌತಿಕವಾದ ಸಂಗತಿಯೆನ್ನುವ ಹಾಗೆ ಯಾರೂ ನೋಡುವುದಿಲ್ಲ. ದೇಹವು ಜೀವಂತವಾಗಿರುವುದು ಅಂದರೆ ಅದರಲ್ಲಿ ಅನುಭವ ಕೂಡಾ ಇದೆ ಎಂದೇ ಅರ್ಥ. ದೇಹ ಮತ್ತು ಅದರ ಏರುಪೇರುಗಳಿಗೆ ಕಾರಣಗಳಿವೆ. ಅದಕ್ಕೂ ಇತಿಹಾಸಗಳಿರುತ್ತವೆ. ಆದರೆ ಅನುಭವ ನಮ್ಮ ಕಣ್ಣಿಗೆ ಕಾಣಿಸುವುದೇ ಇಲ್ಲ. ಅದರಲ್ಲಿ ವ್ಯತ್ಯಾಸಗಳಿರುತ್ತವೆ. ದೇಹದ ಸಂಜ್ಞೆಗಳು ಬೇರೆಯಾಗಿವೆ ಎಂದು ಮಾತ್ರ ಇದರ ಅರ್ಥ. ಬೆಕ್ಕಿನ ಕಣ್ಣೆ ಕಾದಂಬರಿಯನ್ನು ಗಮನಿಸಬೇಕು. ಅದೇ ರೀತಿಯಲ್ಲಿ ನಾವು ಅಥೆಂಟಿಕ್ ಮತ್ತು ಅನ್ ಅಥೆಂಟಿಕ್ ಎನ್ನುವುದನ್ನು ಭಿನ್ನವಾಗಿಯೂ ನೋಡಬಹುದು. ಪ್ರಜ್ಞೆ ಮತ್ತು ಅದರ ವ್ಯಾಖ್ಯೆಗಳನ್ನು ಮಾಡಬಹುದು. ಸಮಾಜ ಮತ್ತು ಅದರ ರಚನೆಯು ಇರುವ ಹಾಗೆ ದೇಹ ಮತ್ತು ಅದರ ವ್ಯವಸ್ಥೆಯು ಇರುತ್ತದೆ. ಸಮಾಜಕ್ಕೆ ಹೇಗೆ ಹೃದಯವು ಇರುತ್ತದೆಯೋ ಅದೇ ರೀತಿಯಲ್ಲಿ ನಮಗೆ ಹೃದಯವು ಇರುತ್ತದೆ.

ನಮ್ಮ ಜೀವನದ ಸ್ವರೂಪವನ್ನು ನಾವು ನಿಗದಿ ಮಾಡಲು ಬರುವುದೂ ಇಲ್ಲ. ಅದರಲ್ಲಿ ಎದುರಾಗುವ ಅನೇಕ ಸಂಗತಿಗಳು ಆಯಾ ಸನ್ನಿವೇಶಕ್ಕೆ ತಕ್ಕಂತೆ ಭಿನ್ನವಾಗುತ್ತದೆ. ಅದನ್ನು ಹೀಗೆಯೇ ಎದುರಾಗುತ್ತದೆ ಎಂದು ಹೇಳಲು ಬರುವುದೂ ಇಲ್ಲ. ಆದರೆ ಯಾವಾಗ ಮನಸ್ಸು ಎನ್ನವುದು ಉದ್ವಿಗ್ನವಾಗುತ್ತದೆಯೋ ಆಗ ನಮ್ಮ ಮಾತು, ಅದರ ಚಹರೆಗಳು ಬೇರೆಯಾಗುತ್ತವೆ. ದೈಹಿಕ ರೋಗ ಮತ್ತು ಅದರ ಸ್ವರೂಪವನ್ನು ನಾವು ಒಂದು ಬಗೆಯಲ್ಲಿ ಕಾಣಬಹುದು. ಆದರೆ ಮನಸ್ಸಿನಲ್ಲಿ ಆಗುವ ಅಲ್ಲೋಲ ಕಲ್ಲೋಲಗಳನ್ನು ನಾವು ಹೀಗೆಯೇ ಎಂದು ಹೇಳುವುದು ತ್ರಾಸದಾಯಕ. ಆದರೆ ಯಾವಾಗಲೂ ನಮ್ಮ ಮನಸ್ಸಿನಲ್ಲಿ ನಡೆಯುವ ತಳಮಳಗಳನ್ನು ನಮ್ಮ ಭಾಷೆಯು ಅಸ್ಪಷ್ಟವಾಗಿಯೂ ವ್ಯಕ್ತಪಡಿಸುತ್ತದೆ. ಅದರಲ್ಲಿ ಅದು ವ್ಯಕ್ತವಾಗುತ್ತದೆ ನಿಜ. ಆದರೆ ಸಹಜ ಮನುಷ್ಯನ ಅಲ್ಲೋಲ ಕಲ್ಲೋಲಗಳಿಗೂ ಬೇರೆ ಬೇರೆ ಸ್ವರೂಪವು ಇರುತ್ತದೆ. ಮನುಷ್ಯರನ್ನು ನಾವು ಬೇರೆ ಬೇರೆಯಾಗಿಯೂ ವರ್ಗೀಕರಿಸುತ್ತೇವೆ. ಮಾನಸಿಕ ರೋಗಿ, ಬುದ್ಧಿಜೀವಿ, ತತ್ವಜ್ಞಾನಿ, ಅಕ್ಷರಸ್ಥ, ಅನಕ್ಷರಸ್ಥ ಇತ್ಯಾದಿ ಆದರೆ ಈ ವರ್ಗೀಕರಣಗಳಿಗೆ ನಾವು ಬಳಸುವ ಪರಿಕರವು ಯಾವ ಬಗೆಯದು ಎನ್ನುವುದೇ ನಮ್ಮ ಮುಂದೆ ಇರುವ ಗಂಭೀರವಾದ ಪ್ರಶ್ನೆ. ಈ ಚಹರೆಗಳಿಗೂ ನಮ್ಮ ಅಸ್ತಿತ್ವಕ್ಕೂ ಒಂದು ನಂಟು ಇದೆ. ಅದನ್ನು ನೋಡಿದರೆ ಅವುಗಳಿಗೆ ಒಂದು ಮೂಲಭೂತವಾಗಿ ಕೆಲವು ಸಾಮಾನ್ಯವಾದ ಲಕ್ಷಣಗಳು ಇರುವಂತೆ ಕಾಣುತ್ತದೆ. ಮತ್ತು ಅವುಗಳಿಗೂ ಒಂದು ಚರಿತ್ರೆಯು ಇರುತ್ತದೆ. ಯಾವುದನ್ನೂ ನಾವು ರೀತಿಯೆಂದೂ ನಮ್ಮ ಜೀವನದ ಕ್ರಮವೆಂದು ಹೇಳುತ್ತೇವೆಯೋ ಅದರ ಹಿನ್ನೆಲೆಯೂ ಬಹಳ ದೊಡ್ಡದು. ಮಾನಸಿಕ ರೋಗವನ್ನು ನಾವು ನೋಡುವಾಗ ನಾವು ಯಾವ ವಿಧಾನವನ್ನು ಅನುಸರಿಸುತ್ತೇವೆಯೋ ಅದನ್ನು ಹಾಗೆಯೇ ದೇಹದ ರೋಗಕ್ಕೆ ಅನ್ವಯಿಸಲು ಬರುವುದೂ

ಇಲ್ಲ. ಅದನ್ನು ಭಿನ್ನವಾದ ರೀತಿಯಲ್ಲಿಯೇ ನೋಡಬೇಕಾಗುತ್ತದೆ. ದೇಹದ ಒಳಗಿನ ಕಾರಣವು ನಮ್ಮನ್ನು ಒಂದು ರೀತಿ ಮಾಡುತ್ತದೆ. ಮನಸ್ಸು ಮತ್ತು ಮತ್ತೊಂದು ಪರಿಣಾಮವನ್ನು ಬೀರುತ್ತದೆ. ಆದರೆ ರೋಗವೆಂದರೆ ಅದನ್ನು ಅನೇಕರು ಶಾಪವೆಂದು ಹೇಳುತ್ತಿದ್ದರು. ದೇವರ ಶಾಪವೆನ್ನುವುದು ಒಂದು ವೈಜ್ಞಾನಿಕ ಕಾರಣವಲ್ಲ. ಅದರಲ್ಲಿ ಬೇರೆ ಬೇರೆ ಸಂಗತಿಗಳು ಅಡಕಗೊಂಡಿವೆ. ದೇಹವನ್ನು ಒಂದು ಪ್ರಯೋಗದ ರೀತಿಯಲ್ಲಿ ಪರೀಕ್ಷಿಸುವ ರೀತಿಯಲ್ಲಿ ನೋಡಿದಾಗ ಅದರ ಅರ್ಥವು ಬದಲಾಯಿತು. ದೇಹದ ಸ್ಥಿತಿಯಲ್ಲಿ ಒಂದು ಸಣ್ಣ ಬದಲಾವಣೆಯು ಆದಾಗಲೂ ನಾವು ಸಮಸ್ಯೆಯನ್ನು ಎದುರಿಸುತ್ತೇವೆ. ಬದುಕೆಂದರೆ ಅದು ಜೀವವನ್ನು ಉಳಿಸಿಕೊಳ್ಳುವ ಒಂದು ಪ್ರಯತ್ನವೂ ಹೌದು. ಅಸ್ತಿತ್ವವನ್ನು ಉಳಿಸಿಕೊಳ್ಳಲು ನಾವು ಮಾಡುವ ಹೋರಾಟವು ಸಣ್ಣದಲ್ಲ. ಜೀವ ಉಳಿದರೆ ತಾನೇ ತಾನು ಬದುಕುವುದು ಎನ್ನುವುದೇ ಚರಿತ್ರೆಯ ಮೂಲವೂ ಹೌದು. ಯಾರು ಅಸಹಜ ಯಾರು ಸಹಜ ಎನ್ನುವುದು ಮಾತಿನಲ್ಲೊ, ಅವರ ನಡವಳಿಕೆಯಲ್ಲೋ ಕಾಣಿಸಿಕೊಂಡು ಬಿಡುತ್ತದೆ. ಆದರೆ ಇದನ್ನು ಸೂಚಿಸುವುದು ಬರೀ ಮಾತು ಮಾತ್ರವೇ ಅಲ್ಲವೆನ್ನುವುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆಯಾ ವ್ಯಕ್ತಿಯ ಸನ್ನಿವೇಶ ಮತ್ತು ಅದರ ಸ್ಥಳ ಕಾಲಗಳು ನಿಜವಾಗಿಯೂ ಅಭಿವ್ಯಕ್ತಿಯಲ್ಲಿ ಕಾಣಿಸಿಕೊಳ್ಳುತ್ತದೆ. ವ್ಯಗ್ರತೆ ಮತ್ತು ಅದರ ಅಭಿವ್ಯಕ್ತಿಯು ಒಂದು ಬಗೆಯಲ್ಲಿ ಇದ್ದರೆ ಸಂತೋಷ ಮತ್ತು ಅದರ ಅಭಿವ್ಯಕ್ತಿಯು ಮತ್ತೊಂದು ಬಗೆಯಲ್ಲಿ ಇರುತ್ತದೆ.

ಮಾತು ಮತ್ತು ನಡವಳಿಕೆಯು ಒಂದು ರೀತಿಯಲ್ಲಿ ಕಾಣಿಸುತ್ತದೆ. ವ್ಯಕ್ತಿಯನ್ನು ಸಹಜವೆಂದು ಹೇಳಲೂ ಕೂಡಾ ಸನ್ನಿವೇಶವೇ ಕಾರಣವಾಗುತ್ತದೆ. ಅಂದರೆ ಯಾವುದನ್ನು ಕೂಡಾ ಆಯಾ ಸನ್ನಿವೇಶವನ್ನು ಆಧರಿಸಿಕೊಂಡು ಹೇಳಲು ಸಾಧ್ಯ.ಯಾವುದನ್ನು ನಾವು ಅಥೆಂಟಿಕ್ ಮತ್ತು ಯಾವುದನ್ನು ಅನ್ ಅಥೆಂಟಿಕ್ ಎಂದು ಹೇಳಲು ಆಯಾ ಸನ್ನಿವೇಶಗಳು ವಾಸ್ತವದ ಜೊತೆಗೆ ಯಾವ ಸಂಬಂಧವನ್ನು ಇಟ್ಟುಕೊಂಡಿವೆ ಎನ್ನುವುದೂ ಮಾನದಂಡವಾಗುತ್ತದೆ. ಹಾಗೆ ನೋಡುವುದಿದ್ದರೆ ಅಥೆಂಟಿಕ್ ಎನ್ನುವುದೂ ಒಂದು ಸನ್ನಿವೇಶ ಮಾತ್ರವೇ ಆಗಿದೆ. ಮನಸ್ಸು ಮತ್ತು ವಾಸ್ತವವು ಒಂದ ಬಗೆಯಲ್ಲಿ ವ್ಯಕ್ತವಾಗುತ್ತದೆ. ಮಾನಸಿಕ ಕ್ಲೈಬ್ಯತೆಯು ವಾಸ್ತವದ ಜೊತೆಗೆ ಸರಿಯಾದ ಸಂಬಂಧವನ್ನು ಇಟ್ಟುಕೊಳ್ಳುವುದೂ ಇಲ್ಲ. ಒಬ್ಬ ವ್ಯಕ್ತಿಯು ಮಾನಸಿಕವಾದ ಕಿರಿಕಿರಿಯನ್ನು ಅನುಭವಿಸಿಕೊಳ್ಳುತ್ತಾನೆ ಎಂದರೆ ಅವನ ಅನುಭವವು ಅಥೆಂಟಿಕ್ ಆಗಲು ಸಾಧ್ಯವೇ ಇಲ್ಲ. ಯಾರನ್ನು ನಾವು ನಿಜವಾದ ಮನುಷ್ಯರು ಎಂದು ಹೇಳುತ್ತೇವೆಯೋ ಅವರ ಜೀವನ ಮತ್ತು ಅಭಿವ್ಯಕ್ತಿಯು ಸಮತೋಲನ ಸ್ಥಿತಿಯನ್ನು ಇಟ್ಟುಕೊಂಡಿರುತ್ತದೆ. ಮತ್ತು ಅದು ಹೆಚ್ಚು ಅಥೆಂಟಿಕ್ ಕೂಡಾ ಆಗಿರುತ್ತದೆ. ಅಥೆಂಟಿಕ್ ಎನ್ನುವುದು ಒಂದು ಸ್ಥಿತಿ ಮಾತ್ರವೇ ಆಗಿದೆ. ಮನಸ್ಸು ಮತ್ತು ಅದರ ತಲ್ಲಣಗಳು ನಮ್ಮ ವರ್ತನೆಯಲ್ಲಿ ಕಾಣಲು ಸಾಧ್ಯ. ಕಾರಂತರ ನಂಬಿದವರ ನಾಕ ನರಕದ ವಾಗ್ದೇವಿಯನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಯಾವಾಗ ನಮ್ಮ ಮನಸ್ಸು ಹೊರಜಗತ್ತನ್ನು ನಿರ್ಲಿಪ್ತವಾಗಿ ನೋಡಲು ಪ್ರಯತ್ನಿಸುತ್ತದೆಯೋ ಆಗ ಅದರ ನಿರೂಪಣೆಯೂ ಅಷ್ಟೇ ಸಹಜವಾಗಿರುತ್ತದೆ. ಅದನ್ನು ಹೀಗೆಯೂ ಹೇಳಬಹುದು ಯಾವಾಗ ನಾವು ಹೊರಜಗತ್ತನ್ನು ಯಾವ ರೀತಿಯಲ್ಲಿ ನೋಡುತ್ತೇವೆಯೋ ಆಗ ನಮ್ಮ ಮಾತು ಕೂಡಾ ಅಷ್ಟೇ ವಸ್ತುನಿಷ್ಠವಾಗಿರುತ್ತದೆ. ಅದು ವಿಶಿಷ್ಟ. ಮತ್ತು ಅದರಿಂದ ನಾವು ಸ್ಥಾಪಿಸಿಕೊಳ್ಳುವ

ಜೀವನದ ಕ್ರಮವು ಅಷ್ಟೇ ಅಥೆಂಟಿಕ್. ಪ್ರತಿಭಾರ ಕವಿತೆಗಳು ಎಚ್.ಎಲ್.ಪುಷ್ಪರ ಕವಿತೆಗಳಿಗೆ ಇರುವ ವ್ಯತ್ಯಾಸ ಸ್ಪಷ್ಟ. ಮನಸ್ಸು ಎನ್ನುವುದೇ ಸಂಕೀರ್ಣ. ಆದರೆ ಅಥೆಂಟಿಕ್ ಗ್ರಹಿಕೆಗಳು ಯಾವಾಗಲೂ ಭಿನ್ನವೂ ಹೌದು. ಅದನ್ನು ಹೀಗೆಯೂ ಹೇಳಬಹುದು– ಯಾವುದನ್ನು ನಾವು ಅಥೆಂಟಿಕ್ ಎಂದು ಹೇಳುತ್ತೇವೆಯೋ ಅದರ ಗ್ರಹಿಕೆಗಳಲ್ಲಿ ನಿರ್ದಿಷ್ಟವಾದ ಸನ್ನಿವೇಶವೂ ಇರುತ್ತದೆ. ನಿಜವಾಗಿಯೂ ಯಾವುದನ್ನು ನಾವು ಹೇಳಬೇಕೆಂದುಕೊಳ್ಳುತ್ತೇವೆಯೋ ಅದನ್ನು ನಾವು ಒಂದು ಕ್ರಮವಾಗಿ ಮಾತ್ರವೆ ನೋಡುವುದೂ ಇಲ್ಲ. ಅದರಲ್ಲಿನ ಅಭಿವ್ಯಕ್ತಿಯು ಸಂಕೀರ್ಣವಾಗುತ್ತದೆ. ಆದರೆ ಅದು ಉದ್ದೇಶ ರಹಿತವಲ್ಲ. ಅದರ ಸ್ವರೂಪವೂ ಭಿನ್ನ.

ಯಾವುದೇ ಒಂದು ನಿರ್ದಿಷ್ಟವಾದ ಸನ್ನಿವೇಶವು ನಮಗೆ ಅನೇಕ ರೀತಿಯ ಕೊಡುಗೆಯನ್ನು ನೀಡುತ್ತದೆ. ವ್ಯಕ್ತಿಯು ದೈಹಿಕವಾಗಿ ಬಳಲಿದಾಗ ಅವನ ಮಾತು ಮತ್ತು ಅಭಿವ್ಯಕ್ತಿಯು ಬೇರೆಯಾಗುತ್ತದೆ. ವ್ಯಕ್ತಿ ಮತ್ತು ಅವನ ಕಾಯಿಲೆಯು ಅವನನ್ನು ಬಳಲುವ ಹಾಗೆ ಮಾಡುತ್ತದೆ. ವ್ಯಕ್ತಿ ಮತ್ತು ಮಾನಸಿಕ ಕಾಯಿಲೆಗಳಿಗೆ ಬೇರೆ ಬೇರೆ ಸ್ವರೂಪ ಇರುತ್ತದೆ. ಆದರೆ ಅದನ್ನು ನೋಡುವುದು ಎಂದರೆ ಅವನ ಸ್ಥಿತಿಯನ್ನು ಭಿನ್ನವಾಗಿಯೂ ಗ್ರಹಿಸುವುದು. ಮನಸ್ಸು ಮತ್ತು ಅದರ ಹಿಂದೆ ಇರುವ ಭ್ರಮೆಗಳನ್ನು ನಾವು ಹೇಗೆ ನೋಡಬೇಕು ಎನ್ನುವುದು ಅಷ್ಟೇ ಮುಖ್ಯ. ಈಗ ಈ ಕುರಿತ ಅಧ್ಯಯನ ಕ್ರಮಗಳು ಬೇರೆಯಾಗಿದೆ. ಮತ್ತು ಅಸ್ವಸ್ಥ ಮನಸ್ಸು ಎನ್ನವುದೇ ಈಗ ಪಾಪ ಜನ್ಯವೂ ಅಲ್ಲ. ಅದರ ಸ್ವರೂಪವು ಬದಲಾಗಿದೆ. ಅದನ್ನು ವಾಸಿ ಮಾಡಬಹುದು. ಸಭ್ಯನ ಮನೋಸ್ಥಿತಿಯನ್ನು ನಾವು ನೋಡುವುದು ತಾರ್ಕಿಕತೆಯ ಆಧಾರದ ಮೇಲೆ. ಯಾರು ಸಭ್ಯ ಮತ್ತು ಯಾರು ಅಸಭ್ಯ ಎನ್ನವುದೇ ಮೂಲತಃ ನೀತಿ ಸಂಹಿತೆಯೂ ಆಗಿದೆ. ಹುಚ್ಚುತನವೆನ್ನುವುದೇ ಮೂಲಭೂತವಾಗಿ ಬದಲಾಗಬಹುದಾದ ಸ್ಥಿತಿಯೂ ಹೌದು.

ಮನಸ್ಸು ಮತ್ತು ಅದರ ಸ್ಥಿತಿಗೆ ಸಾಮಾಜಿಕ ಮತ್ತು ಆರ್ಥಿಕವಾದ ಕಾರಣವೂ ಇರುತ್ತದೆ. ದೇಹ ಮತ್ತು ಅದಕ್ಕೆ ತಗಲುವ ರೋಗವನ್ನು ನಾವು ಕೇವಲ ದೇಹದ ಪ್ರಶ್ನೆಯೆಂದು ಹೇಳಲು ಬರುವುದೂ ಇಲ್ಲ. ಅದು ಬರುತ್ತದೆ. ಮತ್ತು ಹೋಗುತ್ತದೆ. ದೇಹ ಮತ್ತು ಅದರ ಮೇಲೆ ಉಂಟಾಗುವ ಪ್ರಭಾವಕ್ಕೂ ಅನೇಕ ಕಾರಣಗಳು ಇರುತ್ತವೆ. ಅದು ಮನುಷ್ಯನ ಅಸ್ತಿತ್ವದಲ್ಲಿಯೇ ಇರುತ್ತದೆ. ದೇಹದ ಮೇಲೆ ನಿಸರ್ಗದ ಪ್ರಭಾವವೂ ಅಷ್ಟೇ ಇರುತ್ತದೆ. ನಮ್ಮ ಜೀವನ ಮತ್ತು ಅದರ ಪರಿಣಾಮವೂ ರೋಗದಲ್ಲಿ ಕಾಣಿಸಿಕೊಳ್ಳುತ್ತದೆ. ದೇಹ ಮತ್ತು ಅದರ ಸ್ವರೂಪವು ಮತ್ತು ಅದರ ಸ್ಥಿತಿಯು ನಮ್ಮ ಅನೇಕ ಸ್ಥಿತಿಗಳಿಗೆ ಕಾರಣವಾಗುತ್ತದೆ. ಅದನ್ನು ಹೀಗೆಯೂ ಹೇಳಬಹುದು: ದೇಹದ ಪ್ರಕೃತಿಯೇ ಅನೇಕ ವಿಷಯಗಳಿಗೆ ಮೂಲ. ನಮಗೆ ತಗಲುವ ಅನೇಕ ರೋಗಗಳಿಗೆ ಆದರದೇ ಆದ ಸಮಸ್ಯೆಯೂ ಇರುತ್ತದೆ. ಅದನ್ನು ಹೋಗಲಾಡಿಸಲು ನಾವು ಔಷಧಿಯ ಮೊರೆಗೆ ಹೋಗುತ್ತೇವೆ. ದೇಹ ಮತ್ತು ಅದರ ಪರಿಣಾಮವನ್ನು ನಮ್ಮ ಮನಸ್ಸು ಅನುಭವಿಸುತ್ತದೆ. ಆದರೆ ಅದಕ್ಕೆ ಅದರದೇ ಆದ ನಿಯಮಗಳೂ ಇರುತ್ತವೆ. ದೇಹ ಮತ್ತು ಅದರ ರೋಗದ ಸ್ವರೂಪವನ್ನು ನಾವು ಮೊದಲೇ ಗುರುತಿಸವುದು ಅಸಾಧ್ಯ. ವ್ಯಕ್ತಿ ಮತ್ತು ಅವನ ಮನಸ್ಸು ಹಾಗೂ ಅವನ ದೇಹಕ್ಕೆ ಬೇರೆ ಬೇರೆ ಕಾರಣಗಳು ಇರುತ್ತವೆ. ಅದನ್ನು ಮೊದಲೇ ಹೇಳುವುದು ಅಸಾಧ್ಯ. ಮಾನಸಿಕ ಅಸ್ತವ್ಯಸ್ತತೆಗೂ ಬೇರೆ ಬೇರೆ ಕಾರಣಗಳು

ಇರುತ್ತವೆ. ಆದರೆ ಅದನ್ನು ಗುರುತಿಸುವುದು ತಜ್ಞರಿಗೆ ಮಾತ್ರವೆ ಸಾಧ್ಯ. ಮಾನಸಿಕ ಸ್ಥಿತಿಗೂ ಅವನ ವ್ಯಕ್ತಿತ್ವಕ್ಕೂ ಒಂದು ಸಂಬಂಧವಿದೆ. ವ್ಯಕ್ತಿಯು ಅದನ್ನು ಅನುಭವಿಸುತ್ತಾನೆ. ಹಾಗೂ ಅದನ್ನು ಅವನು ಅನುಭವಿಸುವಾಗ ಅದು ಯಾವ ರೀತಿಯಲ್ಲಿ ಇರುತ್ತದೆ ಮತ್ತು ಅದು ನೀಡುವ ಹಿಂಸೆಯು ಯಾವ ಬಗೆಯದು ಎನ್ನುವುದು ಅವನಿಗೆ ಮಾತ್ರವೇ ತಿಳಿಯುತ್ತದೆ. ವಾಸ್ತವವಾಗಿ ಜ್ವರ ಬಂದರೆ ಅದರ ಸಮಸ್ಯೆ ಮತ್ತು ಅದು ಕೊಡುವ ಹಿಂಸೆಯು ಎದ್ದು ಕಾಣಿಸುತ್ತದೆ. ಬೇರೆಯವರಿಗೆ ಅದು ಬೇಗನೇ ತಿಳಿಯುತ್ತದೆ. ಆದರೆ ಉಳಿದ ಸಂಗತಿಯು ಹಾಗೆ ಇಲ್ಲ. ಮಾನಸಿಕವಾಗಿ ಅನುಭವಿಸುವ ಹಿಂಸೆಯು ಅಷ್ಟು ಬೇಗ ಬೇರೆಯವರಿಗೆ ತಿಳಿಯುವುದೂ ಇಲ್ಲ. ಮಾನಸಿಕವಾದ ಸಮಸ್ಯೆಯು ಅವನ ವರ್ತನೆಯ ವಿಧಾನದಲ್ಲಿಯೇ ಗುರುತಿಸಬೇಕಾದ ಅಗತ್ಯವೂ ಇರುತ್ತದೆ. ಅಂದರೆ ಯಾವುದೇ ನಮ್ಮ ಮಾನಸಿಕವಾದ ಸಮಸ್ಯೆಯನ್ನು ನಾವು ಗುರುತಿಸುವಾಗ ಅದಕ್ಕೆ ಬೇರೆ ಮಾನದಂಡವೂ ಬೇಕಾಗುತ್ತದೆ. ಮಾನಸಿಕವಾದ ರೋಗವನ್ನು ಕೂಡಾ ಸರಿಯಾದ ರೀತಿಯಲ್ಲಿ ಗುರುತಿಸಬೇಕಾದ ಅಗತ್ಯವೂ ಇದೆ. ಮಾನಸಿಕ ರೋಗದ ಕಾರಣಗಳು ಭಿನ್ನ. ಅದನ್ನು ಸರಿಯಾದ ರೀತಿಯಲ್ಲಿ ಗುರುತಿಸಬೇಕಾದ ಅಗತ್ಯವು ಇರುತ್ತದೆ. ವ್ಯಕ್ತಿ ಮತ್ತು ಅವನ ವಿವಿಧ ಅವಸ್ಥೆಗಳಿಗೂ ಅನೇಕ ಕಾರಣವಿರುತ್ತದೆ. ಆದರೆ ಮನಸ್ಸು ಮತ್ತು ಅದರ ಅಸ್ತವ್ಯಸ್ತತೆಯು ಅವನನ್ನು ಕಾಡುತ್ತದೆ. ಇದನ್ನು ನೋಡುವಾಗ ನಾವು ಬಹಳ ಎಚ್ಚರದಲ್ಲಿಯೂ ಇರಬೇಕಾಗುತ್ತದೆ. ಅದಕ್ಕೂ ಕೆಲವು ಸನ್ನಿವೇಶಗಳು ಇರುತ್ತವೆ. ಮೂಲಭೂತವಾಗಿ ಫೋಬಿಯಾದ ಲಕ್ಷಣವು ಖಿನ್ನತೆಯ ಲಕ್ಷಣವಲ್ಲ. ವಿ.ವಿ.ಭಂಡಾರಿಯವರ ಸ್ಕೂಲ್ ಫೋಬಿಯೊ' ವಿರೂಪಾಕ್ಷ ದೇವರ ಮನೆಯವರ 'ಮಾತಾಡಿಪ್ಲೀಸ್' ಭಾರತಿ 'ಸಾಸಿವೆ ತಂದವಳು' ನೇಮಿಚಂದ್ರರ 'ಬದುಕ ಬದಲಿಸಬಹುದು' ಮುಂತಾದ ಕೃತಿಗಳು ನಮಗೆ ಬೇರೆ ಬೇರೆ ದಾರಿಗಳನ್ನು ತೋರಿಸುತ್ತವೆ. ಅದು ಮರೆವಿನ ರೋಗವೂ ಅಲ್ಲ. ಹೀಗಾಗಿ ಯಾವುದೇ ಒಂದು ಸಂಗತಿಯು ನಮ್ಮನ್ನು ವಿವಿಧ ರೀತಿಯಲ್ಲಿ ಕಾಡಬಹುದು. ಆದ್ದರಿಂದ ಜೀವನ ಮತ್ತು ಅದರ ಸನ್ನಿವೇಶವು ಅತ್ಯಂತ ಸಂಕೀರ್ಣವೂ ಆಗಿದೆ. ಆದರೆ ಇಲ್ಲಿ ಮತ್ತೆ ಕೆಲವು ಅಂಶಗಳನ್ನು ನೋಡಬೇಕಾಗುತ್ತದೆ. ಮನುಷ್ಯ ಮತ್ತು ಅವನ ಸ್ವಭಾವವನ್ನು ನಾವು ಒಂದೇ ರೀತಿಯಲ್ಲಿ ನೋಡಲು ಆಗುವುದೂ ಇಲ್ಲ. ಅದನ್ನು ಇತ್ಯಾತ್ಮಕವೆಂದು ಹೇಳುವುದು ಅಸಾಧ್ಯವೂ ಆಗಿರುತ್ತದೆ. ವ್ಯಕ್ತಿತ್ವ ಎನ್ನುವುದಕ್ಕೆ ಒಂದೇ ಚೌಕಟ್ಟು ಎನ್ನುವುದು ಇರುವುದೇ ಇಲ್ಲ. ಗುಂಪು ಮತ್ತು ಮನೋಭಾವಕ್ಕೆ ಕೆಲವೊಮ್ಮೆ ವ್ಯತ್ಯಾಸವೂ ಇದೆ. ವ್ಯಕ್ತಿತ್ವ ಮತ್ತು ಮನಸ್ಸು ಎನ್ನುವುದು ಮೂಲಭೂತವಾಗಿ ಚರಿತ್ರೆ ಮತ್ತು ಸಮಾಜದಿಂದ ನಿರ್ಧಾರವಾಗುತ್ತದೆ.

ವ್ಯಕ್ತಿಯು ಕೆಲವನ್ನು ಚರಿತ್ರೆಯಿಂದ ತೆಗೆದುಕೊಳ್ಳುತ್ತಾನೆ. ಅದನ್ನು ಒಂದು ಸಮಾಜಕ್ಕೂ ಅನ್ವಯವನ್ನು ಮಾಡಲು ಸಾಧ್ಯ. ಚರಿತ್ರೆ ಮತ್ತು ಅದರ ಸ್ವರೂಪವನ್ನು ನೋಡುವುದೇ ಬೇಡವೆಂದು ಅನೇಕರು ಹೇಳುತ್ತಾರೆ. ಚರಿತ್ರೆಯನ್ನು ಸಂವಾದಿಯಾಗಿ ನೋಡುವುದು ಮಾತ್ರವೇ ಅವರ ಗುರಿಯೂ ಆಗಿದೆ. ಅಂದರೆ ಚರಿತ್ರೆಯನ್ನು ಅವರು ಗ್ರಹಿಸುವ ಕ್ರಮದಲ್ಲಿಯೇ ತೊಡಕುಗಳು ಇವೆ. ಚರಿತ್ರೆಯು ವಾಸ್ತವವಾಗಿ ವಸ್ತುನಿಷ್ಟವಾಗಿಯೇ ಇದೆ ಎಂದು ಇದರ ಅಭಿಪ್ರಾಯವೂ ಅಲ್ಲ. ನಮ್ಮ ಆಧುನಿಕವಾದ ಜ್ಞಾನದ ಪರಂಪರೆಯು ನಮ್ಮನ್ನು ಬೇರೆ ಬೇರೆ ಕಡೆಗೆ ಕರೆದುಕೊಂಡು

ಹೋಗುತ್ತವೆ. ಆದರೆ ಇದರ ಪರಿಣಾಮವಾಗಿ ನಮ್ಮನ್ನು ವರ್ತಮಾನವು ಮಾತ್ರವೇ ನಿಯಂತ್ರಿಸುತ್ತಿದೆ ಬೇರೆ ಯಾವುದೂ ಅಲ್ಲವೆಂದು ಅವರು ವಾದಿಸುತ್ತಿದ್ದಾರೆ. ಆದರೆ ಯಾವುದು ನಮ್ಮನ್ನು ನಿಯಂತ್ರಸುತ್ತದೆಯೋ ಆದರ ಸ್ವರೂಪವು ಬೇರೆಯಾಗಿದೆ. ಅಂದರೆ ನಿಯಂತ್ರಣ ಮತ್ತು ಅದರ ಸ್ವರೂಪವನ್ನು ನಾವು ಕೇವಲ ವರ್ತಮಾನದಲ್ಲಿ ಮಾತ್ರವೇ ನೋಡುವುದು ಅಸಾಧ್ಯವಾಗಿದೆ. ಇಲ್ಲಿ ಮತ್ತೆ ಕೆಲವು ಸೂಕ್ಷ್ಮಗಳು ಇವೆ. ನಾವು ನಮಗೆ ಈಗ ದೊರೆಯುತ್ತಿರುವ ವರ್ತಮಾನದ ಜ್ಞಾನವನ್ನು ಅನುಸರಿಸಿಕೊಂಡು ಚರಿತ್ರೆಯನ್ನು ಗ್ರಹಿಸುತ್ತೇವೆ. ನಮಗೆ ಸರಿಯಾದ ತಾತ್ವಿಕವಾದ ಗ್ರಹಿಕೆಯು ಇಲ್ಲವಾದರೆ ಚರಿತ್ರೆಯೇ ಅಸ್ಪಷ್ಟವಾಗುತ್ತದೆ. ಈ ದೃಷ್ಟಿಯಿಂದ ವ್ಯಕ್ತಿತ್ವ ಮತ್ತು ಅದರ ಹೊಂದಾಣಿಕೆಯು ಅತ್ಯಂತ ಮಹತ್ವದ್ದೂ ಆಗುತ್ತದೆ. ಸಮಾಜ ಮತ್ತು ನಮ್ಮ ವರ್ತನೆಗಳಿಗೆ ಕೆಲವು ಸಂಬಂಧಗಳೂ ಇವೆ. ವ್ಯಕ್ತಿ ಮತ್ತು ಅವನ ಭಾವನೆಯನ್ನು ಒಂದು ಅರ್ಥದಲ್ಲಿ ಅವನ ಸಮಾಜವೇ ರೂಪಿಸುತ್ತದೆ. ಆದರೆ ವ್ಯಕ್ತಿ ಖಿನ್ನನಾಗುವುದು ಮತ್ತು ಅದರ ಪರಿಣಾಮವನ್ನು ಎದುರಿಸಿಕೊಳ್ಳುವುದು ಕೂಡಾ ಬರೀ ಒಂದು ಕಾರಣಕ್ಕೆ ಮಾತ್ರವೇ ಎಂದು ಹೇಳುವಂತಿಲ್ಲ. ಪರಸ್ಪರ ಸಹಕಾರವಿರುತ್ತದೆ ಮತ್ತೆ ಎಷ್ಟೋ ಸಂದರ್ಭದಲ್ಲಿ ವ್ಯಕ್ತಿಯು ಸ್ಪರ್ಧಾ ಮನೋಭಾವವನ್ನು ತೋರಿಸುತ್ತಾನೆ. ಮತ್ತೆ ಕೆಲವು ಸಂದರ್ಭದಲ್ಲಿ ವ್ಯಕ್ತಿಯು ಸಿಟ್ಟುಗೊಳ್ಳುತ್ತಾನೆ. ಕೆಲವೊಮ್ಮೆ ಅನುಮಾನವು ಇರುತ್ತದೆ. ಮತ್ತೆ ಕೆಲವೊಮ್ಮೆ ಮುಗ್ಧತೆಯು ಇರುತ್ತದೆ. ವ್ಯಕ್ತಿಯು ಕೆಲವೊಮ್ಮೆ ವಿಚ್ಛಿದ್ರಕಾರಿಯೂ ಆಗುತ್ತಾನೆ. ಅಂದರೆ ವ್ಯಕ್ತಿ ಮತ್ತು ಅವನ ಭಾವನೆಗಳು ಅವನ ಸ್ವಭಾವದ ಪ್ರತಿಫಲನವೆಂದು ಹೇಳುತ್ತೇವೆ. ಆದರೆ ಇದು ಮಾತ್ರವೇ ಉತ್ತರವೂ ಅಲ್ಲ. ಅದರಲ್ಲಿ ಬೇರೆ ಕಾರಣವೂ ಇರುತ್ತದೆ. ಸಮಾಜದಲ್ಲಿಯೂ ಸ್ಪರ್ಧೆಯು ಇರುತ್ತದೆ. ಮತ್ತೆ ಕೆಲವೊಮ್ಮೆ ಸಹಕಾರವೂ ಇರುತ್ತದೆ. ಅಂದರೆ ಇದನ್ನು ಮಾರ್ಕ್ಸವಾದದಲ್ಲಿ ಸಮಾಜದ ಕೆಲವು ಗುಣ ಮತ್ತು ವರ್ಗಗಳು ಎಂದು ಹೇಳುತ್ತಾರೆ. ವ್ಯಕ್ತಿ ಮತ್ತು ಅವನ ಜೀವನದಲ್ಲಿ ಕಾಣಿಸಿಕೊಳ್ಳುವ ವೈರುಧ್ಯಗಳಿಗೆ ಬೇರೆ ಆಯಾಮವೂ ಇರುತ್ತದೆ. ಲೈಂಗಿಕ ರಾಜಕಾರಣದ ಸ್ವರೂಪವನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

ಯಾವುದರ ಸ್ವರೂಪವನ್ನು ವ್ಯಕ್ತಿಯ ಮನಸ್ಸು ಎಂದು ಹೇಳುತ್ತೇವೆಯೋ ಅದರಲ್ಲಿ ಈ ಸಂಗತಿಗಳು ಇರುತ್ತವೆ. ಅದರಲ್ಲಿ ಎರಡು ಮಾತೂ ಇಲ್ಲ. ನಮ್ಮ ಮೆದುಳು ಕೆಲವನ್ನು ಒಪ್ಪುತ್ತವೆ ಮತ್ತು ಕೆಲವನ್ನು ನಿರಾಕರಿಸುತ್ತವೆ. ಇದಕ್ಕೆ ಕಾರಣಗಳು ಸ್ಪಷ್ಟವೂ ಆಗುವುದಿಲ್ಲ. ಜೀವನದಲ್ಲಿ ವೈರುಧ್ಯಗಳು ಮತ್ತು ಮಿತಿಗಳು ಇರುತ್ತವೆ. ಅದನ್ನು ನಿರಾಕರಿಸಲು ಬರುವುದೇ ಇಲ್ಲ. ಕೆಲವು ಮಿತಿಗಳು ಸಮಾಜದ ವಾಸ್ತವದಿಂದ ಬಂದಿರುತ್ತದೆ. ದೇಹ ಮತ್ತು ಮನಸ್ಸು ಒಂದೇ ರೀತಿಯಲ್ಲಿ ಇರುವುದಿಲ್ಲ. ಅದರ ಸಂಬಂಧವು ದ್ವಂದ್ವಾತ್ಮಕವೂ ಆಗಿರುತ್ತದೆ. ದೇಹ ಮತ್ತು ಮನಸ್ಸು ವಾಸ್ತವವಾಗಿ ಕ್ರಿಯಾಶೀಲವಾಗಿ ಇರುತ್ತವೆ. ದೇಹವನ್ನು ಮನಸ್ಸು ನಿಯಂತ್ರಿಸುತ್ತದೆ. ದೇಹವು ಮನಸ್ಸನ್ನು ನಿಯಂತ್ರಿಸುತ್ತದೆ. ಒಬ್ಬ ವ್ಯಕ್ತಿಯನ್ನು ನೋಡಬೇಕಾದರೆ ಅಥವಾ ಅವನನ್ನು ಅರ್ಥ ಮಾಡಿಕೊಳ್ಳಬೇಕಾದರೆ ಇದರ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದೂ ಅಗತ್ಯವಾಗಿರುತ್ತದೆ. ತತ್ವಜ್ಞಾನಿಗಳು ಈ ದ್ವಂದ್ವವನ್ನು ತತ್ವಜ್ಞಾನದ ಆಸರೆಯಲ್ಲಿ ಬಿಡಿಸಲು ಯತ್ನವನ್ನು ಮಾಡುತ್ತಾರೆ. ಆದರೆ ಸಮಸ್ಯೆಯು ಇರುವುದು ಬರೀ ದೇಹದ ವಿವೇಚನೆಯಲ್ಲಿ ಅಲ್ಲ. ಅದರಲ್ಲಿ ಮನಸ್ಸನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮನಸ್ಸು ಮತ್ತು ಅದರ

ಕಾಯಿಲೆಯನ್ನು ನೋಡುವುದು ಎಂದರೆ ಅದನ್ನು ದೇಹ ಮತ್ತು ಮನಸ್ಸುಗಳ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದು ಎಂದು ಮಾತ್ರವೇ ಅರ್ಥವಾಗುತ್ತದೆ. ಮಹಿಳೆಯನ್ನು ಈ ದೃಷ್ಟಿಯಲ್ಲಿ ಗ್ರಹಿಸಬೇಕಾಗುತ್ತದೆ. ಅವುಗಳನ್ನು ಪ್ರತ್ಯೇಕ ಮಾಡುವುದು ಅಲ್ಲ. ಅದರಲ್ಲಿ ಭಿನ್ನತೆಗಳು ಇವೆ. ದೇಹವು ಚಲಿಸುತ್ತದೆ. ಅದು ಅನುಭವವನ್ನು ಪಡೆಯುತ್ತದೆ. ಅದರ ಚಲನೆಯು ಅತ್ಯಂತ ಮುಖ್ಯವಾದದ್ದು. ಆದರೆ ಗಿಡಗಳು ಚಲಿಸುವುದಿಲ್ಲ. ಆದ್ದರಿಂದ ಅದರ ಅರ್ಥವು ಬೇರೆಯಾಗುತ್ತದೆ. ಗಿಡವು ಬೇರನ್ನು ಬಿಡುತ್ತದೆ. ನಾವು ನಡೆಯುವುದು ಅನುಭವನ್ನು ಪಡೆಯುವುದು ಮುಂತಾದವುಗಳಿಗೆ ಬೇರೆ ಅರ್ಥಗಳೂ ಇರುತ್ತವೆ. ಚಲನೆಯು ವಾಸ್ತವವಾಗಿ ಬಹಳ ಮುಖ್ಯವಾದದ್ದೂ ಕೂಡಾ ಹೌದು. ಅನುಭವ ಎನ್ನುವುದು ಸಂವೇದನೆಯ ಭಾಗವೂ ಆಗಿರುತ್ತದೆ. ಗ್ರಹಿಕೆಯು ಕೂಡಾ ಬಹಳ ಮುಖ್ಯವಾಗುತ್ತದೆ. ಅಂದರೆ ವ್ಯಕ್ತಿಯು ಯಾವುದನ್ನು ಪಡೆಯುತ್ತಾನೆ. ಮತ್ತು ಯಾವುದಕ್ಕೆ ಪ್ರತಿಕ್ರಿಯಿಸುತ್ತಾನೆ ಎನ್ನುವುದೂ ಇಲ್ಲ ಗಮನಾರ್ಹವಾಗುತ್ತದೆ. ಇಲ್ಲಿ ಮತ್ತೆ ಮನಸ್ಸು ಮತ್ತು ದೇಹದ ಪ್ರಶ್ನೆಗಳನ್ನು ನಾವು ನೋಡಬೇಕಾಗುತ್ತದೆ. ಮನಸ್ಸು ನಮ್ಮದೇ ಆದರೂ ಅದರ ವಿವರಗಳು ನಮಗೆ ಅರ್ಥವಾಗುವುದಿಲ್ಲ. ಅನೇಕ ಸಂದರ್ಭದಲ್ಲಿ ಮನಸ್ಸು ತಲ್ಲಣವನ್ನು ಅನುಭವಿಸುತ್ತದೆ. ಖಿನ್ನತೆಗೆ ಒಳಗಾಗುತ್ತದೆ. ವಾಸ್ತವವಾಗಿ ದೇಹ ಮತ್ತು ಮನಸ್ಸುಗಳ ನಡುವಣ ಸಂಬಂಧವು ಅತ್ಯಂತ ಸಂಕೀರ್ಣವೂ ಹೌದು. ಅದರಲ್ಲಿ ಬೇರೆ ಸಂಗತಿಗಳೂ ಇರುತ್ತವೆ. ಅದರಲ್ಲಿ ಕೆಲವು ನಿಯಮಗಳು ಇರುತ್ತವೆ. ಅದನ್ನು ನಾವು ನಿರಾಕರಿಸಲು ಬರುವುದೂ ಇಲ್ಲ. ಅದನ್ನು ಹೀಗೆಯೇ ಇದೆ ಎಂದು ಹೇಳುವುದು ಸಾಧ್ಯವೇ ಇಲ್ಲ. ಅದರ ನಿಯಮಗಳು ನಮಗೆ ಬೇಗ ಕಾಣಿಸುವುದೂ ಇಲ್ಲ. ನಮ್ಮ ಮನೋಸ್ಥಿತಿಗೆ ಅದರದೇ ಆದ ಕಾರಣಗಳು ಇರುತ್ತವೆ. ಮನೋಸ್ಥಿತಿ ಮತ್ತು ಅದರ ಸಾಧ್ಯತೆಗಳು ಯಾವಗಲೂ ಅತ್ಯಂತ ಬೇರೆಯಾಗಿರುತ್ತವೆ. ಅದನ್ನು ಒಂದು ತರ್ಕವೆಂದು ಹೇಳಲು ಬರುವುದೂ ಇಲ್ಲ.

ನಿಜವಾದ ಒಂದು ವಸ್ತು ಅಥವಾ ಘಟನೆ ಎಂದು ಇರುತ್ತದೆಯೋ ಅದರ ಸ್ವರೂಪವನ್ನು ನಾವು ಗ್ರಹಿಸುವಾಗ ನಮ್ಮಲ್ಲಿ ಅದರ ಕುರಿತಾದ ಒಂದು ನಕ್ಷೆಯು ನಮಗೆ ಇರುತ್ತದೆ. ಅದನ್ನು ನಾವು ಮನಸ್ಸಿನಲ್ಲಿ ಮಾಡಿಕೊಂಡಿರುತ್ತೇವೆ. ದೇಹ ಮತ್ತು ಅದರ ಪರಿಣಾಮವು ಮನಸ್ಸಿನ ಮೇಲೆ ಆಗುತ್ತವೆ. ಅದೇ ರೀತಿಯಲ್ಲಿ ಮನಸ್ಸು ಮತ್ತು ಅದರ ಪರಿಣಾಮವು ದೇಹದ ಮೇಲೆ ಆಗುತ್ತದೆ. ಅಲ್ಲದೆ ಚರಿತ್ರೆ ಮತ್ತು ಅದರ ಸನ್ನಿವೇಶಗಳು ನಮ್ಮ ಮನಸ್ಸನ್ನು ರೂಪಿಸುತ್ತದೆ. ಅದನ್ನು ಕನ್ನಡದ ಅನೇಕ ನಾಟಕಗಳು ನಮಗೆ ಹೇಳುತ್ತವೆ. ಹತ್ತೊಂಬತ್ತನೆಯ ಶತಮಾನದ ಅನೇಕ ಬದಲಾವಣೆಗಳು ಬರೀ ಸಮಾಜದ ಮೇಲೆ ಮಾತ್ರವೇ ಆಗಿರಲಿಲ್ಲ. ಅದರ ಪರಿಣಾಮವನ್ನು ನಾವು ಬರಹಗಳಲ್ಲಿ ಕಾಣುತ್ತೇವೆ. ವಾಸ್ತವವವಾಗಿ ಹತ್ತೊಂಬತ್ತನೆಯ ಶತಮಾನವು ಮೂಲಭೂತವಾಗಿ ಅನೇಕ ಬದಲಾವಣೆಯನ್ನು ತಂದಿತು. ಮನಸ್ಸು ಮತ್ತು ಅದರ ಬದಲಾವಣೆಯನ್ನು ಆಧುನಿಕ ಬರಹಗಳು ನಮಗೆ ಹೇಳುತ್ತವೆ. ಅದರಲ್ಲಿ ಮುಖ್ಯವಾಗಿ ಕಾರಂತರ ಬರಹಗಳು , ಚಿತ್ತಾಲರ ಬರಹಗಳು ತಿರುಮಲಾಂಬಾ ಎಚ್.ಎಲ್.ಪುಷ್ಪ ಪ್ರತಿಭಾ ಹೀಗೆ ಇದನ್ನು ಹೇಳುತ್ತವೆ. ವಾಸ್ತವವಾಗಿ ಮನುಷ್ಯ ಮತ್ತು ಅವನ ಮನೋಸ್ಥಿತಿಯನ್ನು ಚಿತ್ತಾಲರು ಹೇಳಿದರು. ಅವರಿಗೆ ಅದು ಅತ್ಯಂತ ಮುಖ್ಯವಾಗುತ್ತದೆ. ಯಾವುದು ನಮ್ಮನ್ನು

ನಿಯಂತ್ರಣ ಮಾಡುತ್ತದೆ ಮತ್ತು ಅದರ ಪರಿಣಾಮವು ಯಾವ ಬಗೆಯದು ಹೇಗೆ ಮನುಷ್ಯ ಆಧುನಿಕ ಜಗತ್ತಿನಲ್ಲಿ ಬಲಿಪಶುವಾಗುತ್ತಾನೆ ಎನ್ನುವುದು ಮುಖ್ಯವಾಗಿ ಕುವೆಂಪು ಪ್ರಶ್ನೆಯು ಆಗುತ್ತದೆ. ಅವರ ಬರಹಗಳು ನಮಗೆ ಮನೋವಿಶ್ಲೇಷಣೆಗೆ ಹೊಸದಾದ ದಾರಿಯನ್ನು ಕೊಟ್ಟಿತು. ಹೂವಯ್ಯ ಅನೇಕವನ್ನು ಹೇಳದೆ ಮನಸ್ಸಿನಲ್ಲಿಯೇ ತಡವರಿಸುತ್ತಾನೆ. ವಾಸ್ತವವಾಗಿ ಮನಸ್ಸು ಮತ್ತು ಅದರ ಸ್ಥಿತಿಗೆ ಬೇರೆ ಕಾರಣಗಳು ಇರುತ್ತವೆ.(ಹಲ್ಲಿಯ ಸಾಕ್ಷಿ) ವಾಸ್ತವಾಗಿ ಇದನ್ನು ನೋಡುವಾಗ ಮತ್ತೆ ಕೆಲವು ಕೆಲವು ಅಂಶಗಳನ್ನು ಗಮನಕ್ಕೆ ತಂದು ಕೊಳ್ಳಬೇಕಾಗುತ್ತದೆ. ಅದರಲ್ಲಿ ಜೀವನ ಮತ್ತು ಅದರ ಸಾದ್ಯತೆಯು ಇರುತ್ತದೆ. ಆಧುನಿಕ ಜಗತ್ತು ಹೇಗೆ ಮನುಷ್ಯನನ್ನು ನೋಡುತ್ತದೆ ಮತ್ತು ಅವನನ್ನು ಹೇಗೆ ಬೇಟೆಯಾಡುತ್ತದೆ, ಅವನ ಮನೋಸ್ಥಿತಿಯಲ್ಲಿ ಏನು ಬದಲಾವಣೆಯು ಆಗುತ್ತದೆ ಎಂದು ಕುವೆಂಪು ವಿವರಿಸುತ್ತಾರೆ.

ನಡತೆ ಮತ್ತು ಅದರ ಅಸಮತೋಲನ ಸ್ಥಿತಿಯು ಹೇಗೆ ವ್ಯಕ್ತಿಯನ್ನು ಕಾಡುತ್ತದೆ ಎನ್ನುವುದಕ್ಕೆ ಇದು ಒಂದು ಕಾರಣವೂ ಆಗಿದೆ. ಮನಸ್ಸು ಮತ್ತು ಅದರ ತಲ್ಲಣಗಳು ಭಿನ್ನವಾಗಿರುತ್ತವೆ. ಮೈಮನಗಳ ಸುಳಿಯಲ್ಲಿ ಕಾದಂಬರಿಯಲ್ಲಿ ಕಾಣುವುದು ಈ ಬಗೆಯ ಬೇರೆ ಬೇರೆ ಚಿತ್ರಣಗಳನ್ನು. ದೇಹದ ಹಸಿವೆ ಮತ್ತು ದೇಹದ ಸಮಸ್ಯೆಗಳು ಅದರಲ್ಲಿ ಬೇರೆ ಬೇರೆ ರೀತಿಯಲ್ಲಿ ಕಾಣಿಸುತ್ತವೆ. ಮಂಜಳಿಗೆ ಇರುವ ದುಃಖವು ಒಂದು ಬಗೆಯದು. ಅವಳಿಗೆ ದೇಹದ ಹಸಿವೆ ಇಲ್ಲ, ಅದರ ಬದಲು ತನ್ನನ್ನು ಅರ್ಥ ಮಾಡಿಕೊಳ್ಳುವ ಗಂಡು ಬೇಕಾಗುತ್ತಾನೆ. ಆದರೆ ಅವಳ ಮನೆಗೆ ಬರುವವರು ದೇಹದ ಹಸಿವೆಯನ್ನು ಹೊಂದಿದವರು. ಹೆಣ್ಣು ಮತ್ತು ಅವಳ ದೇಹವನ್ನು ಮಾತ್ರವೇ ಇಷ್ಟಪಡುವ ವ್ಯಕ್ತಿಯು ಅವಳ ದೇಹದ ಮೇಲೆ ಹಿಂಸೆಯನ್ನು ಮಾಡುತ್ತಾನೆ ಮತ್ತು ಅದರಿಂದ ತೃಪ್ತನಾಗುತ್ತಾನೆ. ಮತ್ತೊಬ್ಬ ಗಂಡು ವೇಷಧಾರಿ. ಅವನು ಕೊಕ್ಕರ್ಣೆ ಶೀನ. ಅವನ ರಾತ್ರಿಯ ವೇಷವನ್ನು ನೋಡಿ ಮರುಳಾದವಳು ಮರುದಿನ ಅವನ ಸಣಕಲು ದೇಹವನ್ನು ನೋಡುತ್ತಾಳೆ. ಗುಳಿ ಬಿದದ ಕಣ್ಣು ಮತ್ತು ಸಪೂರವಾದ ಕೈಕಾಲುಗಳು. ಅವನಿಂದ ಲೈಂಗಿಕವಾದ ತೃಪ್ತಿಯು ಇಲ್ಲ. ಮತ್ತೊಬ್ಬ ಸ್ವಾಮೀಜಿ. ದೇಹದ ತೃಷ್ಣೆಯನ್ನು ತೀರಿಸಲು ಬಂದಿದ್ದಾನೆ. ಅವನಿಗೆ ಸೇವೆ ಮಾಡುವುದು ಮಾತ್ರವೇ ಮುಖ್ಯವಾಗಿದೆ. ಮನಸ್ಸು ಮತ್ತು ದೇಹದ ನಡುವಣ ತಿಕ್ಕಾಟಗಳನ್ನು ಇವುಗಳು ಹೇಳುತ್ತವೆ. ಹೆಣ್ಣು ಮತ್ತು ಅವಳ ಮನೋಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲಾರದ ಗಂಡಸರ ಚಿತ್ರಣವು ಅದರಲ್ಲಿ ಬೇರೆ ಬೇರೆ ರೀತಿಯಲ್ಲಿ ಬಂದಿದೆ. ಆದರೆ ಈ ಸಮಸ್ಯೆಯನ್ನು ಅನಂತ ಮೂರ್ತಿಯವರು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾಗಿದೆ.

ಹೆಣ್ಣು ಮತ್ತು ಅವಳ ಮನೋಸ್ಥಿತಿ ಹಾಗೂ ಅವಳ ಉದಾರತೆಯನ್ನು ಸಂಸ್ಕಾರವು ಭಿನ್ನವಾಗಿಯೂ ನೋಡುತ್ತದೆ. ಅಂದರೆ ಮನಸ್ಸು ಮತ್ತು ಅದರ ಪರಿಣಾಮವನ್ನು ಆಧುನಿಕ ಸಾಹಿತ್ಯವು ಹೀಗೆ ಬೇರೆ ತರಹ ರೂಪಿಸಿದೆ. ಒಂದು ರೀತಿಯಿಂದ ಮನಸ್ಸು ಮತ್ತು ಅದರ ಸ್ಥಿತಿಯು ಭಿನ್ನವಾಗುತ್ತದೆ. ಅದರ ಸ್ವರೂಪದಲ್ಲಿ ಅನೇಕ ಸಂಗತಿಗಳು ಇರುತ್ತವೆ. ನಡತೆ ಮತ್ತು ಅದರ ಅಸಹತೆಯು ನಮ್ಮ ಮೇಲೆ ಅನೇಕ ಪರಿಣಾಮವನ್ನು ಬೀರುತ್ತದೆ. ಎಚ್.ನಾಗವೇಣಿ; ವೈದೇಹಿ, ಮಿತ್ರಾವೆಂಕಟ್ರಾಜ್ ಅವರ ಬರಹಗಳು ಉದಾಹರಣೆಗಳು ಮಾತ್ರ ಅನೇಕ ಸಂದರ್ಭದಲ್ಲಿ

ನಮ್ಮ ಮಾತು ಮತ್ತು ಅದರ ಗಲಿಬಿಲಿಗಳು ನಮ್ಮ ಮನಸ್ಸನ್ನು ಹೇಳುತ್ತದೆ. ಆದರೆ ಅದರಲ್ಲಿ ಜೀವನದ ಸಂಕಟಗಳು ಇರುತ್ತವೆ. ಆದರೆ ಅದನ್ನು ಹೇಳುವುದು ಅಂದರೆ ಅದರಲ್ಲಿನ ನೋವನ್ನು ವ್ಯಕ್ತ ಪಡಿಸುವುದು. ಆದರೆ ಇದರಲ್ಲಿ ಸಮಸ್ಯೆಗಳೂ ಇರುತ್ತವೆ. ದೇಹ ಮತ್ತು ಅದರ ಬಯಕೆಗಳು ನಮಗೆ ಅನೇಕವನ್ನು ತಿಳಿಸುತ್ತವೆ. ಮನಸ್ಸು ಮತ್ತು ಅದರ ಸ್ಥಿತಿಯನ್ನು ನಾವು ಈಗ ನೋಡುವುದು ಮತ್ತು ಗ್ರಹಿಸುವುದು ಒಂದು ನೆಲೆಯಿಂದ ಮಾತ್ರವೇ. ನಮಗೆ ಈ ದೃಷ್ಟಿಯಿಂದ ಈಡಿಪಸ್ ಚರ್ಚೆಯು ಹೆಚ್ಚು ಮಹತ್ವದ್ದಾಗಿಯೂ ಕಾಣುತ್ತದೆ. ಮನಸ್ಸನ್ನು ಗುರುತಿಸಲು ನಮಗೆ ಅದು ಒಂದು ದಾರಿಯ ಹಾಗೆ ಕಾಣಿಸುತ್ತದೆ. ಆದರೆ ಭಾವನೆ ಮತ್ತು ಅದರ ಅಳತೆಯನ್ನು ಈ ದೃಷ್ಟಿಯಿಂದ ಮಾತ್ರವೇ ಸಾಧ್ಯವೇ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಭಾವನೆ ಮತ್ತು ನಮ್ಮ ಗುಣವನ್ನು ನಾವು ಈ ದೃಷ್ಟಿಯಿಂದ ನೋಡುವ ಕ್ರಮವು ಬೇರೆಯಾಗುತ್ತದೆ. ಭಾವನೆ ಮತು ಅದರ ಸಾಧ್ಯತೆಯನ್ನು ನಾವು ಈವತ್ತು ನೋಡುವುದು ಒಂದು ಜೀವನ ಎನ್ನುವ ಥರದಲ್ಲಿ ಅಲ್ಲ. ಹಾಗೆ ನೋಡುವುದಿದ್ದರೆ ಮನಸು ಮತ್ತು ಅದರ ನಿಯಂತ್ರಣವನ್ನು ಶೂನ್ಯವಾದ ಒಂದು ಪ್ರತಿಕ್ರಿಯೆ ಎಂದು ಭಾವಿಸಬೇಕಾದ ಅಗತ್ಯವಂತೂ ಇಲ್ಲ. ಮಾರ್ಕ್ಸವಾದವು ಮನಸ್ಸನ್ನು ಕುರಿತು ಹೇಳುವಾಗ ಅದನ್ನು ಬರೀ ಒಂದು ಕನಸು ಎಂದು ಹೇಳುವುದಿಲ್ಲ. ಯಾವುದೇ ರೀತಿಯ ಭಾವನೆಗಳು ನಮಗೆ ಉಂಟಾಗುವುದು ಒಂದು ಪರಿಸ್ಥಿತಿಯಿಂದ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಯಾವುದೇ ಸಂಕೇತ ಮತ್ತು ಅದರ ಸ್ವರೂಪವನ್ನು ಹೇಳುವವನು ಹಾಗೂ ಅದನ್ನು ಯಾರಿಗೆ ಹೇಳುತ್ತಾನೆಯೋ ಅವನಿಗೆ ಸಂಬಂಧವಿದೆ.ಹಾಗೆ ನೋಡುವುದಿದ್ದರೆ ಬರಹ ಮತ್ತು ಮಾತುಗಳು ಬೇರೆ ಬೇರೆ ರೂಪವನ್ನು ಹೊಂದಿರುತ್ತವೆ.

ಮಾತು ಮತ್ತು ಅದರ ಸೂಚನೆಗಳು ಒಂದು ಬಗೆಯಲ್ಲಿ ಇರುತ್ತವೆ. ಮಾತು ಮತ್ತು ಬರಹವೆರಡೂ ಒತ್ತಡದಿಂದ ಪಾರಾಗಲು ಯತ್ನವನ್ನು ಮಾಡುತ್ತವೆ. ಮಾನಸಿಕ ಮತ್ತು ದೈಹಿಕವಾದ ಕೆಲವು ಒತ್ತಡಗಳನ್ನು ಅದು ನಿರೂಪಿಸುವುದು ಭಿನ್ನವಾದ ರೀತಿಯಲ್ಲಿ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಮನಸ್ಸು ಮತ್ತು ಅದರ ಆಲೋಚನೆಯನ್ನು ನಾವು ನೋಡುವುದು ಮತ್ತು ಗ್ರಹಿಸುವುದು ಅದರ ಭಿನ್ನವಾದ ಚಟುವಟಿಕೆಗಳಲ್ಲಿ ಎನ್ನುವುದು ಇಲ್ಲಿ ಗಮನಾರ್ಹ. ಅನುಭವವೂ ಕೂಡಾ ಒಂದು ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಮನಸ್ಸು ಮತ್ತು ಅದರ ಕ್ರಿಯೆಗಳು ನಮಗೆ ಬೇರೆ ಬೇರೆ ಅರ್ಥಗಳನ್ನು ಕೊಡುತ್ತವೆ. ಅದರಲ್ಲಿ ಭಿನ್ನತೆಗಳೂ ಇರುತ್ತವೆ. ಅನುಭವವೂ ನಮಗೆ ಒಂದು ಪ್ರಮಾಣವಾಗುತ್ತದೆ. ಅನುಭವ, ಅದರ ನಿರೂಪಣೆ ಅದರ ಸಾಧ್ಯತೆಗಳು ನಮಗೆ ಬೇರೆ ಅವಕಾಶಗಳನ್ನು ಕಲ್ಪಿಸುತ್ತವೆ. ಅನುಭವ ಎನ್ನುವುದು ಹುಟ್ಟುವುದು ನಮ್ಮ ವಿವಿಧವಾದ ಕೆಲಸಗಳಿಂದ ಎನ್ನುವುದು ಇಲ್ಲಿ ಉಲ್ಲೇಖನೀಯ. ಹಾಗೆ ನೋಡುವುದಿದ್ದರೆ ಅನುಭವ ಮತ್ತು ಬಯಕೆಗಳಿಗೆ ಕೆಲವು ರೀತಿಯ ಸಂಬಂಧವೂ ಇದೆ. ಆಧುನಿಕ ಸಮಾಜದಲ್ಲಿ ಬರಹ ಮತ್ತು ಅದರ ಕುರಿತಾದ ಬಯಕೆ, ಜನಪ್ರಿಯತೆ ಮುಂತಾದವುಗಳು ಬೇರೆ ಮಾದರಿಯಲ್ಲಿ ಕೆಲಸವನ್ನು ಮಾಡುತ್ತವೆ. ಬಯಕೆ, ಆಲೋಚನೆ, ಸಂಕಥನಗಳ ನಡುವೆ ಕೆಲವು ಸಂಬಂಧವಂತೂ ಇದ್ದೇಇದೆ. ಬಯಕೆ ಮತ್ತು ನಾವು ಮಾಡುವ ಕೆಲಸಗಳ ನಡುವೆ ಕೆಲವು ಮಾದರಿಯ ಸಂಬಂಧವೂ ಇದೆ.

ನಮ್ಮ ಬಯಕೆಗಳು ನಮಗೆ ಹೊಸದಾದ ಕೆಲವು ಸಂಗತಿಗಳನ್ನು ಹೇಳುತ್ತವೆ.ಕ್ರಿಯೆಗಳು ನಮಗೆ ಅತ್ಯಂತ ಮುಖ್ಯವಾದ ಒಂದು ಚಟುವಟಿಕೆಯೂ ಆಗಿರುತ್ತದೆ. ಆಧುನಿಕ ಸಮಾಜದಲ್ಲಿ ಬರಹ ಮತ್ತು ಅದರ ಅಗತ್ಯವನ್ನು ಅತ್ಯಂತ ಹೆಚ್ಚು ಮುಖ್ಯವೆಂದು ಅನೇಕ ಮಾರ್ಕ್ಸ್‌ವಾದಿಗಳು ಒಪ್ಪಿಕೊಂಡಿದ್ದಾರೆ. ಆಲೋಚನೆ ಮತ್ತು ಬಯಕೆ ಮತ್ತು ಸಂಕಥನಗಳು ಮೂರೂ ಒಂದೊಕ್ಕೊಂದು ಸಂಬಂಧವನ್ನು ಪಡೆದುಕೊಂಡಿರುತ್ತವೆ ಎನ್ನುವುದನ್ನು ಮಲೆಗಳಲ್ಲಿ ಮದುಮಗಳು ಕಾದಂಬರಿಯು ಹೇಳುತ್ತದೆ.. ಕ್ರಿಯೆ ಮತ್ತು ಆಲೋಚನೆಗಳು ಜೊತೆಗೆ ಇರುತ್ತವೆ. ಅದನ್ನು ಬೇರೆ ಮಾಡಲು ಆಗುವುದಿಲ್ಲ. ಯಾವುದು ಜೀವನದ ಸತ್ಯವೆಂದು ಹೇಳುತ್ತೇವೆಯೋ ಅದು ಹುಟ್ಟುವುದು ಈ ಪ್ರಕ್ರಿಯೆಯಲ್ಲಿ. ಭಾವನೆ ಸತ್ಯಗಳು ಕೂಡಾ ಈ ಅಂಶಗಳಿಗೆ ಪೂರಕವೇ ಆಗಿರುತ್ತವೆ. ಲೋಕ ಸತ್ಯವನ್ನು ನೋಡಿಕೊಂಡು ನಾವು ಯೋಚನೆಯನ್ನು ಮಾಡುತ್ತೇವೆ. ವ್ಯಕ್ತಿ ಮತ್ತು ಅವನ ಸಾಧ್ಯತೆಗಳು ಯಾವತ್ತೂ ಬೇರೆಯಾಗಿರುತ್ತದೆ. ಇದು ಅರ್ಥಪೂರ್ಣವಾಗುವುದು ಕಾದಂಬರಿಯ ಕೊನೆಯಲ್ಲಿ. ಪ್ರತಿಯೊಬ್ಬ ವ್ಯಕ್ತಿಯು ಕೂಡಾ ಅವನದೇ ಅದ ಅನನ್ಯತೆಯನ್ನು ಹೊಂದಿರುತ್ತಾನೆ. ಅದು ಅವನ ಶಕ್ತಿಯೂ ಹೌದು. ವ್ಯಕ್ತಿಯು ತನಗೆ ಬೇಕಾದ ಅಗತ್ಯವನ್ನು ಪೂರೈಸಿಕೊಳ್ಳಲು ಯತ್ನವನ್ನು ಮಾಡುತ್ತಾನೆ. ಸಮಾಜವು ಕೆಲವನ್ನು ನಿಯಂತ್ರಣ ಮಾಡುತ್ತದೆ. ಅದು ಅದರ ಉದ್ದೇಶವೂ ಆಗಿರುತ್ತದೆ. ಹಣಕಾಸು ಮತ್ತು ಸಮಾಜ ಎರಡೂ ನಮಗೆ ಬೇರೆ ಬೇರೆ ನಿಯಂತ್ರಣವನ್ನು ಹೇರುವುದರಿಂದ ಅದರ ಸ್ವರೂಪವೂ ಬೇರೆಯಾಗುತ್ತದೆ. ಸಮಾಜ ಮತ್ತು ಹಣಕಾಸು ಎರಡೂ ಲಾಭ ಮತ್ತು ನಷ್ಟವನ್ನು ಬೇರೆ ಬೇರೆ ರೀತಿಯಲ್ಲಿ ಹೇಳುತ್ತದೆ. ಚರಿತ್ರೆಯು ಮನುಷ್ಯನನ್ನು ಹೇಗೆ ನಿಯಂತ್ರಸುತ್ತದೆ ಮತ್ತು ಅದು ಹೇಗೆ ಅವನ ಜೀವನವನ್ನು ರೂಪಿಸುತ್ತದೆ ಎಂದು ಕುವೆಂಪು ಮುಕುಂದಯ್ಯನ ಚಿತ್ರವ ಮೂಲಕ ಹೇಳುತ್ತಾರೆ. ಚರಿತ್ರೆಯು ಆಗುವಿಕೆಗೆ ಸಂಬಂಧಪಟ್ಟಿದೆ. ಅದನ್ನು ಮಾರ್ಕ್ಸ್ ಹೇಳುತ್ತಾನೆ.

ಹಣವು ನಮಗೆ ಬೇರೆ ಬೇರೆ ಬಯಕೆಗಳನ್ನು ರೂಪಿಸುತ್ತವೆ. ಅದು ನಮಗೆ ಖಿನ್ನತೆಗಳನ್ನು ತರುತ್ತದೆ. ಆತಂಕವನ್ನು ಮೂಡಿಸುತ್ತವೆ. ಅದರಲ್ಲಿ ನಮಗೆ ನಮಗೆ ಭಯವನ್ನು ಉಂಟುಮಾಡುವ ಗುಣವೂ ಇದೆ. ಅದರ ಜೊತೆಗೆ ನಮಗೆ ಇರುವ ಸಂಬಂಧವನ್ನು ನಾವು ಪ್ರೀತಿ ಮತ್ತು ದ್ವೇಷದ ಸಂಬಂಧವೆಂದು ಹೇಳಿದರೂ ತಪ್ಪಾಗಲಾರದು. ಹಣವು ನಮಗೆ ಅಹಂಕಾರವನ್ನು ರೂಪಿಸುತ್ತದೆ. ನಾವು ಈವತ್ತು ಯಾವುದೇ ಕಾರಣಕ್ಕೆ ಒಂದು ಕಡೆಗೆ ಹಣವನ್ನು ಉಪಯೋಗ ಮಾಡುತ್ತೇವೆ ಎಂದರೆ ಅದರ ಕಾರಣವೂ ಹೆಚ್ಚು ಸ್ಪಷ್ಟವೂ ಇದೆ. ಹಣವನ್ನು ಹೂಡಿದರೆ ಅದಕ್ಕೆ ನಾವು ಸಮಯವನ್ನು ಬಳಸುತ್ತೇವೆ. ಅದರ ಕುರಿತು ಆಸಕ್ತಿಯನ್ನು ವಹಿಸುತ್ತೇವೆ. ಸಮಾಜ ಮತ್ತು ಹಣವು ನಮಗೆ ಕೆಲವನ್ನು ರೂಪಿಸಲು ಸಹಾಯವನ್ನು ಮಾಡುತ್ತದೆ. ಅದು ಕೆಲವು ನಿಯಮವನ್ನು ಹೇಳುತ್ತದೆ. ಎಷ್ಟು ಹಣವನ್ನು ನಾವು ಉಪಯೋಗ ಮಾಡಬೇಕು ಮತ್ತು ಅದನ್ನು ಹೇಗೆ ಉಳಿಸಬೇಕು ಎನ್ನುವುದು ನಮಗೆ ಅತ್ಯಂತ ಮುಖ್ಯವಾದ ವಿಚಾರವೂ ಆಗುತ್ತದೆ. ಹಣ ಮತ್ತು ಅದರ ಪಾತ್ರವೇ ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ ಕೆಲಸವನ್ನು ಮಾಡುತ್ತದೆ. ನಾವು ಅನೇಕ ಸಂದರ್ಭದಲ್ಲಿ ಅನುಭವಿಸುವ ಪರಕೀಯತೆ ಮತ್ತು ಅದರ ಸ್ವರೂಪಕ್ಕೂ ನಾವು ಏನಾಗಿದ್ದೇವೆ ಅದಕ್ಕೂ ನಾವು ಮುಂದೆ ಆಗುವುದಕ್ಕೂ ನೇರವಾದ

ಸಂಬಂಧವಿದೆ. ಹಣ ಮತ್ತು ಸಮಾಜ ಜೊತೆಗೆ ಹೋಗುತ್ತವೆ. ಆದ್ದರಿಂದ ಅದನ್ನು ನಾವು ನಿರಾಕರಿಸಲು ಬರುವುದೂ ಇಲ್ಲ. ರಾಜಕಾರಣ ಮತ್ತು ಅದು ಬಳಸುವ ಅಧಿಕಾರವನ್ನು ನಾವು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಹಣವು ನಮಗೆ ಬಯಕೆಯನ್ನು ಸೃಷ್ಟಿಸುತ್ತದೆ. ಅದರಲ್ಲಿ ಬೇರೆ ಬೇರೆ ಭಾವನೆಗಳು ಬರುವ ಸಂಗತಿಗಳೂ ಇರುತ್ತವೆ. ಆದರೆ ರಾಜಕಾರಣ ಮತ್ತು ಅದರ ಅಧಿಕಾರವನ್ನು ನಾವು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಹಣ, ಜ್ಞಾನ ಮತ್ತು ರಾಜಕೀಯ ಅಧಿಕಾರವು ಜೊತೆಗೆ ಸೇರಿಸದರೆ ಅದರ ಸ್ವರೂಪವೇ ಬೇರೆಯಾಗುತ್ತದೆ. ಜ್ಞಾನವನ್ನು ಮತ್ತು ಅದರ ಪ್ರತಿಫಲನವನ್ನು ನಾವು ಈ ದೃಷ್ಟಿಯಿಂದ ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಬಯಕೆಗಳು ಮತ್ತು ಅವುಗಳ ರಾಜಕಾರಣವನ್ನು ಅವರ ಕಾದಂಬರಿಗಳು ಬೇರೆ ಬೇರೆ ರೀತಿಯಲ್ಲಿ ವಿವರಿಸುತ್ತವೆ. ಜಾತಿಯು ಇದರಲ್ಲಿ ಅಧಿಕಾರವನ್ನು ವಹಿಸುತ್ತದೆ. ಶಾಸ್ತ್ರವು ಇಲ್ಲಿ ನಿರ್ದಿಷ್ಟವಾದ ಸಂಹಿತೆಯೂ ಆಗುತ್ತದೆ. ಜ್ಞಾನ ಮತ್ತು ಕಾರಣಗಳು ಇದರಲ್ಲಿ ಅತ್ಯಂತ ಮುಖ್ಯವಾಗಿವೆ. ವಾಸ್ತವವಾಗಿ ನಿಯಂತ್ರಣವು ನಮಗೆ ಒಂದಲ್ಲ ಒಂದು ರೀತಿಯ ಸಮಸ್ಯೆಯನ್ನು ತಂದು ಕೊಡುತ್ತದೆ. ಪ್ರತಿಯೊಬ್ಬ ಮನುಷ್ಯನೂ ತನ್ನನ್ನು ನಿಯಂತ್ರಣ ಮಾಡಲು ಹೊರಟರೆ ಅದರ ಪರಿಣಾಮವು ಅವನ ಮೇಲೆ ಆಗುತ್ತದೆ. ವ್ಯಕ್ತಿಗಳು ಒಂದಲ್ಲ ಒಂದು ರೀತಿಯಲ್ಲಿ ಸಮಸ್ಯಾತ್ಮಕವೂ ಆಗಿರುತ್ತಾರೆ ಎನ್ನುವುದನ್ನು ಕನ್ನಡದ ಅನೇಕ ಕಾದಂಬರಿಗಳು ಹೇಳುತ್ತವೆ. ವಾಸ್ತವವಾಗಿ ಕನ್ನಡದ ಕಾದಂಬರಿಗಳು ಸಮಾಜದ ಹೊಸದಾದ ಒಂದು ಸಂಗತಿಯನ್ನು ಹೇಳುತ್ತವೆ. ಅದರಲ್ಲಿ ಬದಲಾದ ಸಮಾಜ ಮತ್ತು ವ್ಯಕ್ತಿಗಳ ನಡುವಣ ಸಂಬಂಧದ ಪ್ರಶ್ನೆಗಳೂ ಇರುತ್ತವೆ. ವ್ಯಕ್ತಿಗಳು ಮತ್ತು ಸಮೂಹಗಳ ನಡುವೆ ಉಂಟಾಗುವ ತಾರತಮ್ಯವೇ ಕಾದಂಬರಿಗಳ ಜೀವಾಳವಾಗಿವೆ. ವ್ಯಕ್ತಿ ಮತ್ತು ಅವನ ಅವನ ಬಯಕೆಗಳು ಅಮಾಯಕವೂ ಆಗಿರುವುದೂ ಇಲ್ಲ. ಅದು ಸಾಮಾಜಿಕ ಜೀವನ ಮತ್ತು ಅದರ ಪರಿಣಾಮವನ್ನೆ ಹೇಳುತ್ತವೆ. ಅದರಲ್ಲಿ ಒಟ್ಟಾರೆಯಾದ ಜೀವನವೇ ಇರುತ್ತದೆ. ಆದರೆ ಜೀವನವನ್ನು ನೋಡುವ ಮತ್ತು ಗ್ರಹಿಸುವ ಕ್ರಮದಲ್ಲಿ ಉಂಟಾಗುವ ವ್ಯತ್ಯಾಸಗಳು ಹೇಗೆ ನಮಗೆ ಬದಲಾವಣೆಯನ್ನು ಸೂಚಿಸುತ್ತದೆ ಎನ್ನುವುದನ್ನು ಸುಮಂಗಲಾರ ಕತೆಗಳು ತಿಳಿಸುತ್ತವೆ. ಈ ಮೊದಲು ಹೇಳಿರುವಂತೆ ಕಾನೂರು ಹೆಗ್ಗಡತಿಯಲ್ಲಿ ಆಳುವ ಮತ್ತು ಆಳಿಸಿಕೊಳ್ಳುವ ವರ್ಗಗಳ ಸಂಬಂಧವು ಭಿನ್ನವಾಗಿದೆ.

ಅದು 'ಯಜಮಾನ' ಮತ್ತು ಅವನ ಆಳುವ ವರ್ಗಗಳ ನಡುವಣ ಸಂಬಂಧ. ಇದು ಕೇವಲ ಸಂಘರ್ಷವಾಗಿರಬೇಕೆಂದೇನೂ ಇಲ್ಲ. ಅವುಗಳ ನಡುವೆ ಬೇರೆ ಬೇರೆ ರೀತಿಯ ಸಂವಾದಗಳಿರುತ್ತವೆ. ಪ್ರಭುತ್ವ ಮತ್ತು ಅದು ಆಳುವ ಸಾಮಾನ್ಯ ವರ್ಗಗಳ ನಡುವೆ ಇರುವ ಸಂವಾದಗಳು ಹೀಗಿರುತ್ತವೆ.

೧. ಪ್ರಭುತ್ವವನ್ನು ಅನುಕರಿಸುವ ವರ್ಗ, ಇದನ್ನು ವಿಶಾಲವಾದ ಅರ್ಥದಲ್ಲಿ ಎಂ.ಎನ್.ಶ್ರೀನಿವಾಸರು 'ಸಂಸ್ಕೃತೀಕರಣ' ಮತ್ತು 'ಪಾಶ್ಚಾತ್ಯೀಕರಣ' ಎಂದು ಗುರುತಿಸಿದರು.
೨. ಆಳುವ ವರ್ಗವನ್ನು (ಪ್ರಭುತ್ವವನ್ನು) ಅನುಕರಿಸುವ ವರ್ಗ, ಇದನ್ನು ಹೋ.ಮಿ.ಕೆ ಬಾಬಾ ಅವರು ಅನುಕರಣಾತ್ಮಕ ನೆಲೆ ಎಂದು ಕರೆಯುತ್ತಾರೆ.

೩. ಪ್ರತಿರೋಧಾತ್ಮಕ: ಇದು ಪ್ರಭುತ್ವವನ್ನು ಪ್ರತಿರೋಧಿಸುವ ಮೂಲಕ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳುತ್ತದೆ ಅಥವಾ ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತವೆ. ಒಂದು ರೀತಿಯಲ್ಲಿ ಇಲ್ಲಿ ನಡೆಯುವ ಪ್ರತಿರೋಧವು ಸಶಸ್ತ್ರ ಅಥವಾ ನಿಶಸ್ತ್ರದ ಮೂಲಕವೇ ತನ್ನ ಸಾಂಸ್ಕೃತಿಕ, ರಾಜಕೀಯ ಪ್ರತಿರೋಧವನ್ನು ಒಡ್ಡುತ್ತವೆ.

೪. ಇಡಿಯ ಪ್ರಭುತ್ವವನ್ನು ನಿರಾಕರಿಸುವುದರ ಮೂಲಕ ಯಜಮಾನಿಕೆಗೆ ಒಂದು ನಿರ್ಲಕ್ಷ್ಯ ತೋರಿಸುವುದು ಮತ್ತೊಂದು ಪ್ರಕ್ರಿಯೆ. ಈ ಸಂದರ್ಭದಲ್ಲಿ ಪ್ರಭುತ್ವದ ಯಾವುದೇ ನಡೆ–ನುಡಿಯನ್ನು ಪ್ರತಿಯಾಗಿ ಕಟ್ಟಿಕೊಂಡು ಆಳಿಸಿಕೊಳ್ಳುವ ವರ್ಗ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಪರ್ಯಾಯ ಮಾರ್ಗೋಪಾಯವನ್ನು ರೈಲ್ವೇ ಹಳಿಯ ರೀತಿಯಲ್ಲಿ ಕಟ್ಟುವುದಿಲ್ಲ ಎಂಬುದನ್ನು ಅರಿಯಬೇಕು. ಆಳ್ವಿಕೆಯಿಲ್ಲದಿದ್ದರೆ ಆಳಿಸುವ ವರ್ಗ ಹೊಸ ಪರಿಭಾಷೆಯನ್ನು ಕಟ್ಟಿಕೊಳ್ಳುವುದಿಲ್ಲ (ರಣಜಿತ ಗುಹಾ: Dominance without Hegemony)

೫. ಪ್ರಭುತ್ವವು ಮತ್ತೊಂದು ಕೆಲಸವನ್ನು ಮಾಡುತ್ತದೆ. ಆಳಿಸಿಕೊಳ್ಳುವ ವರ್ಗವನ್ನು ತನಗೆ ಬೇಕಾದ ರೀತಿಯಲ್ಲಿ ನಿರ್ವಚಿಸುವುದು ಮತ್ತು ಆಳಿಸಿಕೊಳ್ಳುವ ವರ್ಗದ ಮನಸ್ಸು ಮತ್ತು ದೇಹ ತನ್ನ ವ್ಯಾಖ್ಯಾನಕ್ಕೆ ಅನುಸಾರವಾಗಿ ನಿರೂಪಿಸುವುದು. ಒಬ್ಬ ವ್ಯಕ್ತಿ ಹೆಚ್ಚು ಹೆಚ್ಚು ಯಜಮಾನಿಕೆಯನ್ನು ತೋರಿಸಿಕೊಂಡಂತೆ, ಆಳಿಸಿಕೊಳ್ಳುವ ವರ್ಗದ ಬುದ್ಧಿಶಕ್ತಿಯು ಬೇರೆ ಬೇರೆ ರೂಪಾಂತರವನ್ನು ಕಂಡುಕೊಳ್ಳಬಹುದು. ಪ್ರಭುತ್ವವು ಈ ಕಾರಣಕ್ಕಾಗಿ ಒಂದು ಹೊಸ ಚರಿತ್ರೆಯನ್ನು ಕಟ್ಟಬಹುದು. ಮತ್ತು ವ್ಯಕ್ತಿಗೆ 'ಪ್ರಜ್ಞೆ'ಯ ಮೇಲೆ ಕಟುವಾದ ನಿಯಂತ್ರಣ ಹೇರಬಹುದು. ಈ ಕೆಲಸವು ಪ್ರಜ್ಞೆಯ ಮೇಲೆ ತರುವ ಒತ್ತಡವೂ ಆಗಿರುತ್ತದೆ. ಪ್ರಭುತ್ವ ಪ್ರಜ್ಞೆಯ ಮೇಲೆ ಹಿಡಿತ ಸಾಧಿಸಿಕೊಂಡರೆ ಮತ್ತೆ ಆ ಪ್ರಜ್ಞೆಯಿಂದ ಹೊರಗಡೆ ಬರುವಂತಿಲ್ಲ. ಮಾನಸಿಕವಾಗಿ ಪ್ರಜ್ಞೆಯ ನಿಯಂತ್ರಣ ಮಾಡಿದಾಗ ವ್ಯಕ್ತಿ – ಸಮಾಜ ಒಂದು ಸಮತಲದ ರಚನಾ ಕ್ರಮದಲ್ಲಿ ರೂಪುಗೊಳ್ಳುತ್ತದೆ (Sudipta Kaviraj).

ಹೀಗೆ 'ಅಧಿಕಾರದ ವ್ಯಾಪ್ತಿ'ಯು ಬೇರೆ ಬೇರೆ ಮಾದರಿಗಳಲ್ಲಿ ಇರುತ್ತವೆ. ಆದರೆ ನಾವೀಗ 'ಅಧಿಕಾರ' ಎನ್ನುವುದನ್ನು 'ನೇಶನ್' ಎಂಬ ಅರ್ಥದಲ್ಲಿ ಬಳಸುತ್ತಿದ್ದೇವೆ. ಅಧಿಕಾರ ಸಾಮಾಜಿಕ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಒಂದು ಸಂಸ್ಥೆಯಿದ್ದರೆ ಅದು ಆಳುತ್ತದೆ ಮತ್ತು ಗುಂಪಿನ ಪರವಾಗಿ ಅಧಿಕೃತ ವಕ್ತಾರರಂತೆ ವಹಿಸುತ್ತದೆ. ಯಜಮಾನ್ಯವೆನ್ನುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ವಹಿಸುವಂತೆಯೇ ಅದರ ಜೊತೆಯಲ್ಲಿ ಅದು ತನ್ನದೇ ನಿಯಮ ಹೊಂದಿರುತ್ತದೆ. ಅಧಿಕಾರವನ್ನು ಯಾರು ಹಿಡಿಯುತ್ತಾರೋ ಅವರ ಚಟುವಟಿಕೆಯು ಒಂದು ವ್ಯವಸ್ಥೆಯನ್ನು ಸಿದ್ಧಪಡಿಸಿಕೊಳ್ಳಲು ಉಳಿದವರನ್ನು "ಅಧೀನ" ಎಂಬಂತೆ ನೋಡಿಕೊಳ್ಳುತ್ತಾರೆ. ಅಧಿಕಾರ ಹೊಂದಿದವರಿಗೆ ಕೆಲವು ವಿಶಿಷ್ಟ ಅಂಶಗಳ ಹಕ್ಕುಗಳು ಕೂಡಾ ಇರುತ್ತವೆ. ಅದಕ್ಕೆ ಸಂಬಂಧಿಸಿದಂತೆ ನಿಯಮಗಳು ರೂಪಿಸಲ್ಪಡುತ್ತವೆ. ಆಳುವ ವರ್ಗದ ಲಕ್ಷಣಗಳು ಆಯಾ ಸಮಾಜ ಮತ್ತು ಸಂಸ್ಕೃತಿಗೆ ಅನುಸಾರವಾಗಿ ಬೇರೆಯಾಗವಹುದು.

ಎಷ್ಟೋ ಸಂದರ್ಭಗಳಲ್ಲಿ 'ಅಧಿಕಾರ' ಪಡೆದುಕೊಳ್ಳುವ ರೀತಿ ರಿವಾಜುಗಳು ಬೇರೆಯಾಗುತ್ತವೆ. ಅದೇ ರೀತಿಯಲ್ಲಿ ಜನಾಂಗದಿಂದ ಜನಾಂಗಕ್ಕೆ ಬೇರೆಯಾಗುತ್ತವೆ. ಆಳುವ ವರ್ಗ ಆಯಾ ಸಂದರ್ಭ ಮತ್ತು ಪ್ರದೇಶಗಳಲ್ಲಿ ತಮಗೆ ಬೇಕಾದ ರೀತಿಯಲ್ಲಿ ನಿಯಮ ರೂಪಿಸುತ್ತಾರೆ ಮತ್ತು ಅದಕ್ಕೆ ಬೇಕಾದ ಸ್ಥಾನ ನಿರ್ಣಯಗಳಾಗುತ್ತವೆ. ಉದಾ: ಬೇರೆ ಬೇರೆ ಜಾತಿಯಲ್ಲಿರುವ ಗುರಿಕಾರರು, ಪುರೋಹಿತರು ಇತ್ಯಾದಿ.

ವಸಾಹತು ಪೂರ್ವದ ಕಾಲಘಟ್ಟದಲ್ಲಿ ಕಾನೂನು ಮತ್ತು ಶಿಕ್ಷೆ ಎರಡಕ್ಕೂ ಊರೊಳಗೆಯೇ ನ್ಯಾಯ ದೊರಕುತ್ತಿತ್ತು. ಕುಮಾರ ವ್ಯಾಸನ 'ವಿದುರನೀತಿ' ಮತ್ತು ಭೀಷ್ಮ ಪರ್ವ ಮುಂತಾದವು ಮತ್ತು ಕೆರೆಗೆ ಹಾರ (ಇದರಲ್ಲಿ ಕೆರೆಗೆ ಹಾರವಾಗುವುದು ಕೂಡಾ ಒಂದು ರೀತಿಯ ಶಿಕ್ಷೆ) ಈ ದೃಷ್ಟಿಯಿಂದಲೇ ಭಾರತಕ್ಕೆ ಬಂದ ಅನೇಕ ಬ್ರಿಟಿಶ್ ಗವರ್ನರ್ ಜನರಲ್‌ಗಳು ಭಾರತದ ಜನರು ಅನಾಗರಿಕರು, ಅವರಿಗೆ ಕಾನೂನುಗಳು ಗೊತ್ತಿಲ್ಲ. ಅವರಿಗೆ ಜಮೀನಿನ ಅಳತೆಯ ಪ್ರಮಾಣ ಗೊತ್ತಿಲ್ಲ. ಅದಕ್ಕಾಗಿ ಅವರಿಗೆ ಬೇಕಾಗಿರುವ 'ನ್ಯಾಯ'ದ ತಿಳುವಳಿಕೆ ಮತ್ತು ಅಕ್ಷರಾಭ್ಯಾಸ ಎಂದು ಭಾವಿಸಿಕೊಂಸಿದ್ದರು. ಉದಾ: ಲಾರ್ಡ್ ಬೆಂಟಿಂಕ್, ಲಾರ್ಡ್‌ವೆಲ್ಲೆಸ್ಲಿ, ಇವರ ನೀತಿಗಳು. ಇಲ್ಲಿ ಬಳಕೆಯಾಗಿರುವ 'ಲಾರ್ಡ್' ಎಂಬ ಪದವನ್ನು ಗಮನಿಸಿ ("ಲಾರ್ಡ್" ವೆಲ್ಲೆಸ್ಲಿ ಇದೇ "ಲಾರ್ಡ್" ಎಂಬ ಪದವನ್ನು ಮತ್ತೊಂದು ಅರ್ಥದಲ್ಲಿಯೂ ಬಳಸುತ್ತೇವೆ: ಲಾರ್ಡ್ ಕೃಷ್ಣ, ಲಾರ್ಡ್ ಎಂದರೆ ಆಳುವವನು ಎಂಬರ್ಥ ಬರುತ್ತದೆ. ಲಾರ್ಡ್ ವೆಲ್ಲೆಸ್ಲಿಗೂ, ಲಾರ್ಡ್ ಕೃಷ್ಣನಿಗೂ ಯಾರ ರೀತಿಯ ವ್ಯತ್ಯಾಸವೂ ಇಲ್ಲ).

ಹದಿನೇಳನೆಯ ಶತಮಾನದ ರಾಜಕೀಯ ತತ್ವಜ್ಞಾನಿ ಜೇಮ್ಸ್ ಹ್ಯಾರಿಂಗ್‌ಟನ್ ಹೇಳಿದ ಪ್ರಮುಖ ಅಂಶಗಳನ್ನು ಇಲ್ಲಿ ಗಮನಿಸಬಹುದು. ಉದಾರವಾದಿ ಮಾನವತಾವಾದವು ಅಧಿಕಾರದ ಎರಡು ಸ್ವರೂಪವನ್ನು ವಿವರಿಸುತ್ತದೆ ಅಥವಾ ವ್ಯತ್ಯಾಸಗೊಳಿಸುತ್ತದೆ.

- ನಾಗರಿಕ ಮಾನವತಾವಾದವು (Civic Humanism) ವಾಸ್ತವದ ಅಧಿಕಾರವನ್ನು ಒಂದು ರೀತಿಯಲ್ಲಿ ವಿವರಿಸುತ್ತದೆ.
- ಆದರೆ ಕಾನೂನು ಆಧಾರಿತ (Dejure) ಪ್ರಭುತ್ವದ ಸ್ವರೂಪ ಬೇರೆ. ಇಲ್ಲಿ ಅಧಿಕಾರದ ಸ್ವರೂಪ ಬೇರೆಯಾಗುತ್ತದೆ. ಅಧಿಕಾರದ ಹೊಣೆ ಭಿನ್ನವಾದ ನಿಲುವನ್ನು ತಳೆಯುತ್ತದೆ. ಅಧಿಕಾರದ ಹೊಣೆಗಾರಿಕೆಯು ಸಾಕ್ಷ್ಯ, ವಸ್ತುನಿಷ್ಠತೆ ಮುಂತಾದ ಅಂಶಗಳನ್ನು ಒಳಗೊಂಡಿದೆ.
- ಕಾನೂನು ಆಧಾರಿತ (Dejure) ಅಧಿಕಾರದಲ್ಲಿ ಪ್ರಭುತ್ವವು ಹಕ್ಕುದಾರಿಕೆಯನ್ನು ಹೊಂದಿದೆ ಮತ್ತು ಅದು ತನ್ನ ಅಧಿಕಾರವನ್ನು ಅದರದೇ ಅನ್ನಬಹುದಾದ ನ್ಯಾಯವನ್ನು ರೂಪಿಸಿಕೊಳ್ಳುತ್ತದೆ.

ಆದರೆ ಈ ಎರಡೂ ಪ್ರಭು ಸಂಹಿತೆಯಲ್ಲಿ ಅಧಿಕಾರದ ಹೊಣೆಗಾರಿಕೆಯನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸುತ್ತವೆ. ಕುವೆಂಪು ಎರಡೂ ಕಾದಂಬರಿಗಳು ಇದನ್ನು ಹೇಳುತ್ತವೆ.

ಒಬ್ಬನ ಬದಲಿಗೆ ಮತ್ತೊಬ್ಬ ಕಾರ್ಯನಿರ್ವಹಿಸುವಾಗ "ಅಧಿಕಾರ" (Detacto) ಶಾಸನ ಅನುವುದು ಬೇರೆ ಅರ್ಥ ಕೊಡುತ್ತದೆ. ಕಾಯಿದೆ ಪ್ರಕಾರ ಒಬ್ಬ ಅಧಿಕಾರಕ್ಕೆ ಬರುವುದೆಂದರೆ ಅದರ ಸ್ವರೂಪವು ಬೇರೆಯಾಗುತ್ತದೆ. ಅಧಿಕಾರವನ್ನು ವಿವರಿಸಬೇಕಾದ ಸಂದರ್ಭದಲ್ಲಿ ಮಕೋ ಅಧಿಕಾರದ ಕುರಿತು ಪುನರ್ ವ್ಯಾಖ್ಯೆ ಮಾಡಿದ್ದಾನೆ. ಅವನ ಪ್ರಕಾರ ಯಜಮಾನಿಕೆ (ಪ್ರಭುತ್ವ) ಎನ್ನುವುದು ಸಾಮಾಜಿಕ ರೂಪಗಳಲ್ಲಿ ಒಂದು. ಅದು ವಸ್ತುನಿಷ್ಟವಲ್ಲ. ವಿಷಯನಿಷ್ಟ. ಒಂದು ಹಂತದಲ್ಲಿ ಪ್ರಭುತ್ವವು ಜ್ಞಾನದ ರೂಪವನ್ನು ಪಡೆದುಕೊಂಡು ಅದರ ಮೂಲಕ ಅಧಿಕಾರವನ್ನು ಚಲಾಯಿಸುತ್ತವೆ. ಹೀಗಾಗಿ ಅಧಿಕಾರವು ಸಾಮಾಜಿಕ ಸಂದರ್ಭದಲ್ಲಿ ವಿಶ್ವಾತ್ಮಕವಾದ ಅರ್ಥವನ್ನು ಪಡೆಯುತ್ತದೆ.

ಕಾನೂರು ಹೆಗ್ಗಡತಿಯಲ್ಲಿ ಯಾಜಮಾನಿಕೆಯನ್ನು ವಹಿಸುವ ವರ್ಗವು ಇದೆ. ಆಳುಗಳ ವರ್ಗವೂ ಇದೆ. ಆಳುವವರು ಮತ್ತು ಆಳಿಸಿಕೊಳ್ಳುವವರ ಸಂಬಂಧವು ಇದರಲ್ಲಿ ಸಂಕೀರ್ಣವೂ ಹೌದು.

ಒಕ್ಕಲು ವರ್ಗ :

- **೧. ಅಣ್ಣಯ್ಯಗೌಡ :** ಚಂದ್ರಯ್ಯಗೌಡರ ಗದ್ದೆ ತೋಟಗಳನ್ನು ಗ, ಗುತ್ತಿಗೆ ಮಾಡಿಕೊಂಡು ಕೆಳಕಾನೂರಿನಲ್ಲಿ ಒಕ್ಕಲಾಗಿದ್ದವರು. ಅವರ ಮೂವರು ಹೆಂಡತಿಯರು ಸತ್ತಿದ್ದು ನಾಲ್ಕನೆಯ ಹೆಂಡತಿ ರೋಗಿಯಾಗಿದ್ದಳು. ದ್ವಿತೀಯ ಪತ್ನಿಯಲ್ಲಿ ಹುಟ್ಟಿದವನೇ ಓಬಯ್ಯ, ಮೂರನೆಯ ಹೆಂಡ ಹುಟ್ಟಿದ ಒಬ್ಬಳು ಏಳೆಂಟು ವಯಸ್ಸಿನ ಮಗಳಿದ್ದಳು, ಹೆಣ್ಣುಗಳಿಗೆ ತೆರವನ್ನು ತರಲು ಸಾಲ ಮಾಡಿ ಸುಸ್ತಾಗಿದ್ದರು. ಮಗನಿಗೆ ಲಗ್ನ ಮಾಡಲು ಚಂದ್ರಯ್ಯಗೌಡರು ಸಾಲ ಕೊಡಲು ನಿರಾಕರಿಸಿದಾಗ ತನ್ನ ಮಗನ ನಿಂದನೆಗೆ ಗುರಿಯಾಗುತ್ತಾರೆ. ಮಗನ ಮಾತನ್ನನುಸರಿಸಿ ಕೆಳಕಾನೂರಿನಿಂದ ಸಿಂಗಪ್ಪಗೌಡರಲ್ಲಿ ಒಕ್ಕಲಾಗಿ ಹೋಗಲು ಕೆಳಕಾನೂರಿನಿಂದ ಹೊರಡುವಾಗ ಚಂದ್ರಯ್ಯಗೌಡರಿಗೆ ಸಿಕ್ಕಿಹಾಕಿಕೊಳ್ಳುವ ಅಯ್ಕೆಗೌಡರು ಕೊನೆಗೆ ದೇಶಾಂತರ ಹೋಗುತ್ತಾರೆ, ಪತ್ನಿ, ಮಗಳನ್ನು ಕಳೆದುಕೊಂಡು ಕೊನೆಗೆ ಅಪರಿಚಿತ ನಾಡಿನಲ್ಲಿ ಅಸುನೀಗುತ್ತಾರೆ. ಮಲೆನಾಡಿನಲ್ಲಿ ಮದುವೆಯ ಬಗ್ಗೆ ಒಂದು ಶಿಸ್ತುಬದ್ಧ ಜೀವನ ನಡೆಸದ, ತೆರಕ್ಕಾಗಿ ಸಾಲ ಮಾಡಿ ಸಂಸಾರದ ಶೂಲದಲ್ಲಿ ಸಿಕ್ಕಿ ಒದ್ದಾಡುವವವರ ಮಾದರಿಯಂತೆ ಅಣ್ಣಯ್ಯಗೌಡರ ಕುಟುಂಬ ಬಿಂಬಿತವಾಗಿದೆ.

ಆಳುವ ವರ್ಗ :

- **೨. ಓಬಯ್ಯಗೌಡ :** ಕೆಳಕಾನೂರು ಅಣ್ಣಯ್ಯಗೌಡರ ಮಗ, ಸಾಕಷ್ಟು ಸ್ಥಿತಿವಂತರಾಗಿದ್ದ ಅಣ್ಣಯ್ಯಗೌಡ ಅಧಿಕ ತೆರಕೊಟ್ಟು ಮದುವೆ ಮಾಡಿಕೊಳ್ಳುತ್ತಿದ್ದುದನ್ನು ಕಂಡು ಕೋಪಗೊಂಡ ಈ ಯುವಕ ಕ್ರಮೇಣ ಎಲ್ಲ ದುಶ್ಚಟಗಳಿಗೆ ಬಲಿಯಾಗುತ್ತಾನೆ. ಗಂಗೆಯ ಸಹವಾಸದಿಂದ ವ್ಯಭಿಚಾರಿಯಾದ ಓಬಯ್ಯ ದುಡ್ಡಿಗಾಗಿ ಕಳ್ಳತನ ಮಾಡುತ್ತಾನೆ. ಚಂದ್ರಮೌಳೇಶ್ವರ ಸ್ವಾಮಿಯ

ಗುಡಿಯ ಬಳಿಯ ಹೊಳೆಯಲ್ಲಿದ್ದ ದೇವರ ಮೀನನ್ನು ಕದ್ದು ಮಾರಿ ಕಳ್ಳು ಕುಡಿಯುತ್ತಾನೆ. ತಂಗಿಯ ಕೈಯಲ್ಲಿದ್ದ ಕಡಗವನ್ನು ಸಂಚಿನಿಂದ ಅಪಹರಿಸುತ್ತಾನೆ. ಯಾವುದೋ ದೂರದ ಸಂಬಂಧ ಹಿಡಿದು ಸುಬ್ಬಮ್ಮನ ಮನಗೆದ್ದು ನೂರು ರೂಪಾಯಿ ನೋಟು ಸಾಲ ಪಡೆದ ಓಬಯ್ಯ ಮುಂದೆ ಅನೇಕ ಅವಾಂತರಗಳಿಗೆ ಕಾರಣವಾಗುತ್ತಾನ. ತಾವು ಕಡಿಸಿದ್ದ ಕಳ್ಳನಾಟಾವನ್ನು ಚಂದ್ರಯ್ಯಗೌಡರು ಸಾಗಿಸುವ ಸಂಚನ್ನು ಸಿಂಗಪ್ಪಗೌಡರಿಗೆ ತಿಳಿಸುತ್ತಾನೆ. ಸುಬ್ಬಮ್ಮನಿಂದ ಪಡೆದ ನೋಟು ಹಗರಣವಾಗಿ ಚಂದ್ರಯ್ಯಗೌಡರಿಂದ ಹೊರತ ತಿಂದು ಕೆಳಕಾನೂರು ಬಿಟ್ಟು ಸೀತೆಮನೆಗೆ ಸ್ಥಳಾಂತರವಾಗುವ ನಿರ್ಧಾರ ತೆಗೆದುಕೊಳ್ಳುತ್ತಾನೆ. ಚಂದ್ರಯ್ಯಗೌಡರಿಗೆ ಸಿಕ್ಕಿಕೊಂಡು ಸರ್ವಸ್ವವನ್ನು ಕಳೆದುಕೊಂಡು ಊರು ಬಿಡುತ್ತಾನೆ. ಸೀತೆಮನೆಗೆ ಹೋಗದೆ ಮುದಿ ತಂದೆ ಹಾಗೂ ಮಲತಂಗಿಯ ಜೊತೆ ಸ್ವಲ್ಪಕಾಲ ಮೇಗರಹಳ್ಳಿಯಲ್ಲಿದ್ದಾಗ ಮಲತಂಗಿ ಸಾಯುತ್ತಾಳೆ. ಅನಂತರ ತಂದೆ – ಮಗ ಆಗುಂಬೆಯಲ್ಲಿ ಕೆಲಸಕ್ಕೆ ಸೇರಿಕೊಂಡಾಗ ಮೂಲಿ ಬೇನೆಯಿಂದ ತಂದೆ ಸಾಯುತ್ತಾನೆ. ಮೈಲಿ ಬೇನೆಯಿಂದ ವಿಕಾರವಾದ ಓಬಯ್ಯ ಧರ್ಮಸ್ಥಳಕ್ಕೆ ಹೋಗಿದ್ದ ಚಂದ್ರಯ್ಯಗೌಡರಿಗೆ ಸಿಕ್ಕು ಕಾನೂರಿಗೆ ಹಿಂತಿರುಗಿ ನಂತರ ಹೂವಯ್ಯನ ಬಳಿ ಕೆಲಸಕ್ಕೆ ನಿಂತು ಸಂಯಮದ ಬದುಕು ಸಾಗಿಸುತ್ತಾನೆ. ಭೋರ್ಗರೆವ ನದಿಯೊಂದು ದಿಕ್ಕುದೆಸೆಯಿಲ್ಲದೆ ಹರಿದು ಕೊನೆಗೆ ಸಾಗರದೊಡನೆ ಸಂಗಮಿಸುವಂತೆ ಓಬಣ್ಣ ತನ್ನ ಕಟ್ಟು ಹರಿದ ಪಂಜಿನಂಥ ಬದುಕಿಗೆ ಸಾರ್ಥಕವನ್ನು ಹೂವಯ್ಯನ ಸಾನ್ನಿಧ್ಯದಲ್ಲಿ ಪಡೆಯುತ್ತಾನೆ.

- ೩. **ಕೃಷ್ಣಪ್ಪ** : ಸೀತೆಮನೆ ಸಿಂಗಪ್ಪ ಗೌಡರ ಮಗ, ಮುತ್ತ್ರಯ ಸೀತೆಯ ಜೊತೆ ಲಗ್ನ ನಿಷ್ಕರ್ಷೆಯಾದಾಗ ಉಲ್ಲಸಿತನಾಗುವ ಕೃಷ್ಣಪ್ಪ ಕಳಕಾನೂರು ಅಣ್ಣಯ್ಯಗೌಡರ ಸಂಸಾರವನ್ನು ಸೀಸ ಮನೆಗೆ ಸ್ಥಳಾಂತರಿಸಲು ವಿಫಲನಾಗುತ್ತಾನೆ, ಅಪ್ಪನ ಚರ್ನೆಯಿಂದ ನೊಂದು, ಕಟ್ಟಿಗೆ ಕೋಮಿಗೆ ಬಿದ್ದ ಹುಲಿಯನ್ನು ನೋಡಲು ಹೋಗುತ್ತಾನೆ. ಮರಿ ಹುಲಿಯ ಸವಾಸ ಬೇಡವೆಂದು ಜಾಕಿ ಹೇಳಿದರೂ, ತಂದೆಗೆ ತನ್ನ ಪೌರುಷವನ್ನು ತೋರಲಾಲು ಗಾಯಗೊಂಡ ಹುಲಿಯನ್ನು ಶಿಕಾರಿ ಮಾಡಲು ಹೋಗಿ ಕೊನೆಗೆ ಹುಲಿಗೆ ಬಲಿಯಾಗಿ ದಾರುಣವಾಗಿ ಸಾಯುತ್ತಾನೆ.

- ೪. **ಚಿನ್ನಯ್ಯ** : ಮುತ್ತಳ್ಳಿ, ಶ್ಯಾಮಯ್ಯಗೌಡರ ಮಗ ಚೆನ್ನಯ್ಯ ಸ್ವಲ್ಪಮಟ್ಟಿಗೆ ಓದಿದವನು, ಸರಳ ಸ್ವಭಾವದವನಾದ ಆತನಿಗೆ ಹೂವಯ್ಯ – ರಾಮಯ್ಯರಲ್ಲಿ ಗಾಢ ಸ್ನೇಹ ಹೂವಯ್ಯ ರಾಮಯ್ಯ ನವರು ಮೈಸೂರಿನಿಂದ ಬರುತ್ತಾರೆಂದು ತಿಳಿದು ಬೈಲುಕೆರೆಯಲ್ಲಿ ಮೀನು ಶಿಕಾರಿಗೆ ಹೊರಡುತ್ತಾನೆ. ಸ್ವಲ್ಪ ಪಟ್ಟಣದ ನಾಗರಿಕತೆಯನ್ನು ಮೈಗೂಡಿಸಿಕೊಂಡ ಚೆನ್ನಯ್ಯ ಕಾನೂರು ಚಂದ್ರಯ್ಯಗೌಡರ ಎರಡನೆಯ ಹೆಂಡತಿಯ ಮಗಳು ವಟ್ಟಮ್ಮ ನನ್ನು ಮದುವೆಯಾಗುತ್ತಾನೆ.

- ೫. **ಗೌರಮ್ಮ** : ಮುತ್ತಳ್ಳಿ, ಶ್ಯಾಮಯ್ಯಗೌಡರ ಧರ್ಮಪತ್ನಿ, ಚೆನ್ನಯ್ಯ, ಸೀತೆ ಮತ್ತು ಲಕ್ಷ್ಮಿಯರ ತಾಯಿ ಸುಸಂಸ್ಕೃತಳಾದ ಗೌರಮ್ಮನವರ, ಆಕೆಯ ಗರತಿಯ ಗಾಂಭೀರ್ಯ,

ತಾಯಿಯ ಪವಿತ್ರತೆ, ನಿಸ್ವಾರ್ಥತೆ, ಸಹಿಷ್ಣತೆ ಚನ್ನಯ್ಯನ ಮನಸ್ಸಿಗೆ ಹಿಡಿಸುತ್ತಿದ್ದವ ತನ್ನ ಮಗಳು ಸೀತೆಯ ಮದುವೆಗೆ ಸಂಬಂಧಿಸಿದಂತೆ, ಯಾವುದೇ ಅಭಿಪ್ರಾಯವನ್ನು ಹೇಳಲಾರದಂತೆ ಆಕೆಯ ಸುಸಂಸ್ಕೃತ ಗುಣ ತಡೆದಿತ್ತು

- **೬. ನಾಗಮ್ಮ :** ಕಾನೂರು ಸುಬ್ಬಯ್ಯಗೌಡರ ಹೆಂಡತಿ, ಹೂವಯ್ಯನ ತಾಯಿ, ಮಗನಿಗಾಗಿ ಜೀವ ಹಿಡಿದುಕೊಂಡು ಬದುಕಿದ ನಾಗಮ್ಮನಿಗೆ ಚಂದ್ರಯ್ಯಗೌಡರ ಮಕ್ಕಳಾದ ರಾಮಯ್ಯ, ವಾಸು, ಪುಟ್ಟಮ್ಮನವರ ಬಗ್ಗೆ ವಿಶೇಷ ಮಮತೆ, ಚಂದ್ರಯ್ಯಗೌಡರ ಕುಟಿಲೋಪಾಯಗಳನ್ನು ಬಲ್ಲ ಆಕೆಗೆ ಚಂದ್ರಯ್ಯಗೌಡರಿಂದ ಮಗನಿಗೆ ಕಿರುಕುಳ ತಪ್ಪದು ಎಂಬ ಆತಂಕ. ಮಗ ಮದುವೆಯಾಗದೆ ಉಳಿದ ದುಗುವೊಂದು ಕಡೆ ಮಗ ಹೂವಯ್ಯ ಮದುವೆಯಾಗುವಂತೆ ಆತನಿಂದ ಭಾಷೆ ಪಡೆದೇ ಆಕೆ ಅಸುನೀಗುತ್ತಾಳೆ.

- **೭. ಚಂದ್ರಯ್ಯಗೌಡ :** ಕಾನೂರು ಮನೆತನದ ಯಜಮಾನ, ಅಣ್ಣ ಸುಬ್ಬಯ್ಯಗೌಡರು ಗತಿಸಿದ ಮೇಲೆ ಈತನೇ ಮನೆಯ ಯಜಮಾನ, ಅಣ್ಣ ಸುಬ್ಬಯ್ಯಗೌಡರು ಸಾಯುವಾಗ ಅವರಿಗೂ ಚಂದ್ರಯ್ಯಗೌಡರಿಗೂ ಮನಸ್ತಾಪವಿತ್ತು. ಹಾಗಾಗಿ ಅಣ್ಣನ ಮಗ ಹೂವಯ್ಯ ಮತ್ತು ಅತ್ತಿಗೆ ನಾಗಮ್ಮನವರ ಬಗ್ಗೆ ಅವಾದರು ಮೊದಲ ಇಬ್ಬರು ಹೆಂಡತಿಯರು ಗತಿಸಿದ ಮೇಲೆ ನೆಲ್ಲು ಹಳ್ಳಿಯ ಸುಬ್ಬಮ್ಮನನ್ನು ಮೂರನೆಯ ಹೆಂಡತಿಯಾಗಿ ತಂದರು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಚಂದ್ರಯ್ಯಗೌಡರು ಎರಡನೇ ಮದುವೆಯಾಗಿ ಹೆಣ್ಣು ನೋಡಲು ಮಂಡಗದ್ದೆಗೆ ಹೋಗಿದ್ದುದು ತಿಳಿದುಬರುತ್ತದೆ. ತುಂಗಾನದಿಯನ್ನು ದಾಟುವಾಗ ಗುತ್ತಿ (ಕುಳವಾಡಿ ಸಣ್ಣ)ಯನ್ನು ತನ್ನ ಜೊತೆಯಲ್ಲಿ ಕಾನೂನಿಗೆ ಕರೆತರುವ ಪ್ರಸ್ತಾಪವೂ ಇದೆ ಆಸೂಯೆ ದಾಕ್ಷಿ ಮತ್ತು ಮುಂಗೋಪದಿಂದ ಇಡೀ ಮನೆತನವನ್ನೇ ಒಡೆದು ಛಿದ್ರ ಮಾಡಿ ಬಿಡುವ ಚಂದ್ರಯ್ಯಗೌಡರು ಇಡೀ ಕಾನೂರು ಮನೆತನದ ಅಲ್ಲೋಲ ಕಲ್ಲೋಲಗಳಿಗೆ ಅವರೇ ನೇರವಾಗಿ ಕಾರಣರಾಗುತ್ತಾರೆ, ಮದ್ಯವ್ಯಸನಿಯೂ, ಕ್ರೂರಿಯೂ, ವಿಷ ಲಂಪಟನೂ ಆದ ಚಂದ್ರಯ್ಯ ಗೌಡ ಸಾಯುವ ಮುನ್ನ ಹೂವಯ್ಯನ ಪ್ರಭಾವಕ್ಕೆ ಸಿಕಿ ಪಶ್ಚಾತ್ತಾಪ ಪಡುತ್ತಾನೆ.

- **೮. ಪುಟ್ಟಣ್ಣ :** ಕಾನೂರು ಚಂದ್ರಯ್ಯಗೌಡರ ಮನೆಯಲ್ಲಿದ್ದ ಪಟ್ಟಣ್ಣ ಅವರಿಗೆ ಸಂಬಂಧಿಯಲ್ಲ, ಕಾದಂಬರಿಯ ಬಹುಮುಖ್ಯ ಪಾತ್ರಗಳಲ್ಲೊಬ್ಬ, ಮದುವೆಯಾಗದ, ಮನೆ ಮಠ ಯಾವುದರ ಹಂಗಿಲ್ಲದೆ ತನ್ನ ನಾಯಿ – ಟೈಗರ್ ಜೊತೆ ಕಾಡು ಮೇಡು ಅಲೆಯುತ್ತಾ ಬೇಟೆಯಲ್ಲಿ ಪಳಗಿದ್ದವನು ಕೋವಿ ಕೆಲಸ, ಕಬ್ಬಿಣದ ಕೆಲಸ, ಬಡಗಿ ಕೆಲಸ, ಬೆತ್ತದ ಕೆಲಸ – ಹೀಗೆ ಹತ್ತಾರು ಕಸುಬು ತಿಳಿದಿದ್ದರೂ ಎಂದಿಗೂ ಅವುಗಳನ್ನು ಸಂಪಾದನೆಗೆ ಬಳಸಿಕೊಂಡವನಲ್ಲ, ಹೂವಯ್ಯನಿಂದ "ಕಾಡು ಫಕೀರ' ಎಂದು ಕರೆಸಿಕೊಂಡವನು ಎಲ್ಲಾ ಘಟನೆಗಳನ್ನು ನಿರ್ಲಿಪ್ತವಾಗಿ ಕಾಣುವ ಪುಟ್ಟಣ್ಣ ತನ್ನ ನಾಯಿ ಸತ್ತಾಗ ದುಃಖಿಸುತ್ತಾನೆ. ಕಾನೂರು ಮನೆ ಪಾಲಾದಾಗ ಹೂವಯ್ಯನ ಜೊತೆಯಲ್ಲಿಯೇ ನೆಲೆ ನಿಲ್ಲುತ್ತಾನೆ. ಅಂತಿಮವಾಗಿ ಹೂವಯ್ಯನ ಪ್ರಭಾವದಿಂದ ಬೇಟೆಯನ್ನು ಬಿಡಲು ಯತ್ನಿಸಿದರೂ ಸಫಲನಾಗದ ಕೊನೆಗೆ ಕಾನೂರು ವಾಸಪ್ಪಗೌಡ (ವಾಸು) ರಲ್ಲಿ ನೆಲೆಯಾಗುತ್ತಾನೆ.

- ೯. **ಪುಟ್ಟಮ್ಮ :** ಚಂದ್ರಯ್ಯಗೌಡರ ಎರಡನೇ ಹೆಂಡತಿಯ ಮಗಳು. ವಾಸುವಿನ ಲಭ್ಯ, ಮುತ್ತಳ್ಳಿ ಶ್ಯಾಮಯ್ಯಗೌಡರ ಮಗ ಚನ್ನಯ್ಯನು ಈಕೆಯನ್ನು ಮದುವೆಯಾಗುತ್ತಾನೆ. ಅವಳಿಗೆ ರಮೇಶ, ಲಲಿತ ಮತ್ತು ಮಾಧು ಎಂಬ ಮೂವರು ಮಕ್ಕಳು

- ೧೦. **ಬಾಳೂರು ಸಿಂಗೇಗೌಡರು :** ಮಲೆನಾಡ ಒಕ್ಕಲಿಗ ಮುಖಂಡರಲ್ಲೊಬ್ಬರು, ಇವರು ಒಕ್ಕಲಿಗರಲ್ಲಿ ರೂಢಿಯಾಗಿದ್ದ ಮದ್ಯಪಾನವನ್ನು ತ್ಯಜಿಸಲು ವ್ಯವಸ್ಥೆಯಾಗಿದ್ದ ಸಭೆಯಲ್ಲಿ ಉಪನ್ಯಾಸ ಮಾಡಿದವರು, ಆದರೆ ಅದಕ್ಕೆ ಸಂಬಂಧಿಸಿದ "ಮಾನೆ, ಪತ್ರಕ್ಕೆ ರುಜು ಹಾಕಲು ನಿರಾಕರಿಸಿದವರು, ತಮಗೆ ಪಂಡ ಕಲ್ಲು ಬಿಡುವ ಬಗ್ಗೆ ನಂಬಿಕೆಯೂ ಇಲ್ಲ. ಇಷ್ಟವೂ ಇಲ್ಲವೆಂದು ಹಳೆಯ ರೂಢಿಗೆ ಅಂಟಿಕೊಂಡವರು.

- ೧೧. **ಮಾಧು :** ಚಿನ್ನಯ್ಯ ಪುಟ್ಟಮ್ಮನ ಎರಡನೇ ಮಗ

- ೧೨. **ರಮೇಶ :** ಮುತ್ತಳ್ಳಿ ಚಿನ್ನಯ್ಯ ಮತ್ತು ಪುಟ್ಟಮ್ಮನ ಮಗ ವೆಂಕಪ್ಪ ಜೋಯಿಸರು ಕರಿಯಣ್ಣ ಎಂದು ಇಟ್ಟಿದ್ದ ಹೆಸರನ್ನು ತಿರಸ್ಕರಿಸಿ, ಸೀತೆ ವೆಂಕಟಾಚಾರ್ಯರ ಕಾದಂಬರಿಯ ಪಾತ್ರದ ರಮೇಶ' ಎಂಬ ಹೆಸರನ್ನಿಡುತ್ತಾಳೆ.

- ೧೩. **ರಾಮಯ್ಯ :** ಕಾನೂರು ಚಂದ್ರಯ್ಯಗೌಡರ ಮೊದಲನೇ ಹೆಂಡತಿಯ ಮಗ ಹೂವಯ್ಯನೊಡನೆ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದವನು ಅವನ ಜೊತೆಗೆ ಕಾನೂರಿಗೆ ಬರುತ್ತಾನೆ. ರಾಮಯ್ಯನೂ ತಂದೆಯ ಇಚ್ಛೆಯಂತೆ ವಿದ್ಯಾಭ್ಯಾಸ ಬಿಡಬೇಕಾಗುತ್ತದೆ. ತಂದೆಯ ತಂತ್ರದಿಂದ ಹೂವಯ್ಯನನ್ನು ದ್ವೇಷಿಸುವ ರಾಮಯ್ಯ ಸೀತೆಯನ್ನು ಮದುವೆಯಾಗುತ್ತಾನೆ. ಆದರೆ ಮದುವೆ ತಂದೊದಗಿಸುವ ಕಾರ್ಪಣ್ಯಗಳಿಂದ ಜರ್ಝರಿತವಾಗುತ್ತಾನೆ. ತನ್ನ ಕಣ್ಣು ಮುಂದೆಯೇ ಕಾನೂರು ಮನೆತನ ಪತನವಾಗುತ್ತಿರುವುದನ್ನು ಕಂಡ ದುರ್ಬಲ ಮನಸ್ಸಿನ ರಾಮಯ್ಯ ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

- ೧೪. **ಲಕ್ಷ್ಮೀ :** ಸೀತೆಯ ತಂಗಿ ಕಾನೂರು ಚಂದ್ರಯ್ಯಗೌಡರ ಮಗ ವಾಸುವನ್ನು ಮದುವೆಯಾಗಿ ಕಾನೂರಿನಲ್ಲಿ ನೆಲೆಸುತ್ತಾಳೆ, ಬಾಲಕಿಯರಲ್ಲಿ ಕಾಣುವ ಸಹಜ ತುಂಟತನ, ಮುಗ್ಧತೆಯಿಂದ ಲಕ್ಷ್ಮಿಯ ಪಾತ್ರ ಬಿಂಬಿತವಾಗಿದೆ.

- ೧೫. **ಲಲಿತೆ :** ಚಿನ್ನಯ್ಯ ಪಟ್ಟಮ್ಮನ ಮಗಳು

- ೧೬. **ಸಿಂಗಪ್ಪಗೌಡ :** ಸೀತೆ ಮನೆಯ ಸಿಂಗಪ್ಪಗೌಡರು ಹೂವಯ್ಯನ ಸಂಬಂಧಿ, ಹೂವಯ್ಯನ ತಾಯಿಯ ತಂಗಿಯನ್ನು ಮದುವೆಯಾಗಿರುವ ಸಿಂಗಪ್ಪಗೌಡರು ಹೂವಯ್ಯನಿಗೆ ಕಕ್ಕಯ್ಯ, ಚಂದ್ರಯ್ಯಗೌಡ ಮತ್ತು ಸಿಂಗಪ್ಪಗೌಡರಿಗೆ ಒಂದು ಕಾಲಕ್ಕೆ ನೆಂಟಸ್ತಿಕೆ – ಗೆಳೆತನವಿದ್ದರೂ, ಕಾದಂಬರಿಯ ಆರಂಭದ ಹೊತ್ತಿಗೆ ಇಬ್ಬರಿಗೂ ಕೂಲಿಯಾಳಿನ ಸಂಬಂಧದಲ್ಲಿ ಮನಸ್ತಾಪ ವೇರ್ಪಟ್ಟಿರುತ್ತದೆ. ಹಾಗಾಗಿ ಅವರಿಬ್ಬರೂ ಆಗಾಗ್ಗೆ ಘರ್ಷಣೆಗೆ ಇಳಿಯುತ್ತಾರೆ. ಚಂದ್ರಯ್ಯಗೌಡರ ಇಚ್ಛೆಗೆ ವಿರುದ್ಧ ತಮ್ಮ ಮಗ

ಕೃಷ್ಣಪ್ಪನಿಗೆ ಮುತ್ತಳ್ಳಿಯ ಸೀತೆಯನ್ನು ತಂದುಕೊಳ್ಳಲು ತಂತ್ರ ಹೆಣೆಯುತ್ತಾರೆ. ಮಗನ ಸಾವಿನ ನಂತರ ಹೂವಯ್ಯನ ಪರವಾಗಿ ನಿಲ್ಲುತ್ತಾರೆ. (ಭಾರತ) ರಾಮಾಯಣವನ್ನು ಓದುವ ಸರಸ ಪ್ರಕೃತಿಯವರಾದ ಸಿಂಗಪ್ಪಗೌಡರಿಗೆ ಹೂವಯ್ಯ, ರಾಮಯ್ಯನನ್ನು ಕಂಡರೆ ವಿಶೇಷವಾದ ಅಕ್ಕರೆಯಿದ್ದರೂ, ಚಂದ್ರಯ್ಯಗೌಡರ ವಿರುದ್ಧ ಸಮಯಾವಕಾಶ ಸಿಕ್ಕಾಗಲೆಲ್ಲ ಇಕ್ಕಟ್ಟಿಗೆ ಸಿಕ್ಕಿಸಲು ಪ್ರಯತ್ನಿಸುತ್ತಾರೆ.

- **೧೭. ಸೀತೆ :** ಮುತ್ತಳ್ಳಿ, ಶ್ಯಾಮಯ್ಯ ಗೌಡ ಮತ್ತು ಗೌರಮ್ಮನವರ ಮಗಳು. ಹೂವಯ್ಯನಿಗಿಂತಲೂ ಐದಾರು ವರ್ಷ ಚಿಕ್ಕವಳಾದ ಸೀತೆಗೆ ಹೂವಯ್ಯ ಆರಾಧ್ಯಮೂರ್ತಿ, 'ಹೂವಯ್ಯ ಭಾವನನ್ನೇ ಮದುವೆಯಾಗುತ್ತೇನೆ' ಎಂದು ಗೋಡೆಯ ಮೇಲೆ ಬರೆದಿದ್ದ ಸೀತೆಯನ್ನು ಹೂವಯ್ಯ ಸಹ ಮೆಚ್ಚಿಕೊಂಡಿದ್ದನು. ಗಾಡಿಯಿಂದ ಉರುಳಿ ಪೆಟ್ಟಾದಾಗ ಸೀತೆಯ ಸನಿಹದಲ್ಲೇ ಕಾಲಕಳೆದ ಹೂವಯ್ಯ ಆಕೆಯನ್ನು ತೀವ್ರವಾಗಿ ಪ್ರೀತಿಸತೊಡಗಿದ, ಸನ್ನಿವೇಶದ ಒತ್ತಡದಿಂದ ಆಕೆಗೆ ಸೀತೆವಳ ಸಿಂಗಪ್ಪಗೌಡರ ಮಗ ಕೃಷ್ಣಪ್ಪನ ಜೊತೆ ಮದುವೆ ನಿಶ್ಚಯವಾಗುತ್ತದೆ. ಆದರೆ ಹುಲಿಗೆ ಸಿಕ್ಕು ಕೃಷ್ಣಪ್ಪ ಮೃತನಾದನಂತರ ಚಂದ್ರಯ್ಯಗೌಡರ ಸಂಚಿನಿಂದ ಅವರ ಮಗ ರಾಮಯ್ಯನ ಜೊತೆ ವಿವಾಹವಾಗುತ್ತದೆ, ತಾನು ಮನಸಾರೆ ಪ್ರೀತಿಸಿದ ಹೂವಯ್ಯನನ್ನು ಮದುವೆಯಾಗಲಾರದೆ ಮಾನಸಿಕ ವೇದನೆಯಿಂದ ತೊಳಲುವ ಸೀತೆ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಗುತ್ತದೆ. ರಾಮಯ್ಯನ ಸಾವಿನ ನಂತರ ಸೀತೆ ತನ್ನ ತಂಗಿ ಲಕ್ಷ್ಮಿಯ ಜೊತೆಯಲ್ಲಿ ಕಾನೂರಿನಲ್ಲಿ ನೆಲೆಸಿ ಹೂವಯ್ಯನ ಆಧ್ಯಾತ್ಮಿಕ ಸಂಗಾತಿಯಾಗುತ್ತಾಳೆ.

- **೧೮. ಸುಬ್ಬಮ್ಮ :** ನೆಲ್ಲುಹಳ್ಳಿ, ಪೆದ್ದೇಗೌಡರ ಮಗಳು ಸುಬ್ಬು ಚಂದ್ರಯ್ಯಗೌಡರ ಕೈಹಿಡಿದು ಕಾನೂರು ಸುಬ್ಬಮ್ಮ ಹೆಗ್ಗಡಿತಿಯಾದವರು, ಬಡ ಕುಟುಂದಿದಿಂದ ಮೂರನೆಯ ಹೆಂಡತಿಯಾಗಿ ಬಂದ ಕಿರಿಯ ವಯಸ್ಸಿನ ಸುಬ್ಬಮ್ಮ ಹೊಸ ಬಗೆಯ ಬದುಕಿಗೆ ಹೊಂದಿಕೊಳ್ಳಲಾಗದೆ ಕಾದಂಬರಿಯುದ್ದಕ್ಕೂ ಚಡಪಡಿಸುತ್ತಾಳೆ. ಒಂದು ಬಗೆಯ ಕೀಳರಿಮೆ, ತನ್ನ ತವರು ಮನೆಗಿಂತಲೂ ಉತ್ತಮ ಸ್ಥಿತಿಯ ಮನೆಗೆ ಬಂದರೂ ಹೊಂದಿಕೊಳ್ಳಲಾಗದ ತಳಮಳ ಈಡೇರಲಾರದ ಆಸೆಗಳು, ವಯಸ್ಸಾದ ಗಂಡನ ಸಂಶಯದಿಂದ ತೊಳಲಾಡುವ ಸುಬ್ಬಮ್ಮ ಕೊನೆಗೆ ಸೇರೆಗಾರ ರಂಗಪುಟ್ಟಿಯ ಲೈಂಗಿಕ ವಾಂಟೆಗೆ ಬಲಿಯಾಗುತ್ತಾರೆ. ತನ್ನ ತಪ್ಪಿನ ಅರಿವಾಗಿ, ಸರಿಪಡಿಸಿಕೊಳ್ಳಲಾಗದ ಹಂತ ಮುಟ್ಟಿದ ಸುಬ್ಬಮ್ಮ ಅಂತಿಮವಾಗಿ ದಾರುಣವಾಗಿ ಅಸುನೀಗುತ್ತಾಳೆ.

- **೧೯. ವಾಸು :** ಚಂದ್ರಯ್ಯಗೌಡರ ಎರಡನೆಯ ಹೆಂಡತಿಯ ಮಗ ಸುಬ್ಬಮ್ಮನ ವಿರುದ್ಧ ಕೋಪದಿಂದ ಕುದಿಯುವ ವಾಸು ಒಂದು ಬಗೆಯ ನಿಸರ್ಗ ಆರಾಧಕ, ಗಾಡಿಯಾಳು ನಿಂಗನ ಮಗ ಪುಟ್ಟ, ಬೇಲರ ಭೈರವ ಮಗ ಗಂಗನೊಡನೆ ಕಾಡು ತಿರುಗುವ ಹವ್ಯಾಸ. ಹೂವಯ್ಯನ ಬಗ್ಗೆ ಪ್ರೀತಿ, ಮನೆ ಪಾಲಾಗುವಾಗ ವಾಸ್ತು ವಿಚಿತ್ರವಾಗಿ ಮೂರ್ಛ ಹೋಗುತ್ತಾನ. ಮುಂದೆ ಮುತ್ತಳ್ಳಿ ಶ್ಯಾಮಯ್ಯಗೌಡರ ಎರಡನೆಯ ಮಗಳು ಲಕ್ಷ್ಮಿಯನ್ನು ಮದುವೆಯಾಗಿ ವಾಸಪ್ಪ ಗೌಡನನಿಸುತ್ತಾನೆ.

- **೨೦. ವೆಂಕಪ್ಪ ಜೋಯಿಸ :** ತುಂಗಾತೀರದ ಅಗ್ರಹಾರದ ಜೋಯಿಸರು. ಮಲೆನಾಡಿನ ಜನರ ಮೌಢ್ಯವೇ ಇವರ ಬದುಕಿಗೆ 'ಬಂಡವಾಳ ಅವರ ಮುಖ್ಯ ಕಸುಬು ದೇವಸ್ಥಾನದ ಮಾಜೆಯಾದರೂ ಹಲವಾರು ಕಸುಬುಗಳನ್ನು ಬಲ್ಲವರು, ಮುಖ್ಯವಾಗಿ ಮೌಢ್ಯವನ್ನು ಹೆಚ್ಚಿಸುವಂಥ ನಿಮಿತ್ತ ನೋಡುವುದು, ಭವಿಷ್ಯ ಹೇಳುವದು ಜಾತಕ ಬರೆಯುವುದು, ಭೂತಗಳಿಗೆ ಹಣ್ಣು ಕಾಯಿ ಕೊಡುವುದು, ಮಂತ್ರದಿಂದ ದೆವ್ವ ಭೂತ ಬಿಡಿಸುವುದು, ಹಿಡಿಸುವದು ಇತ್ಯಾದಿ ತನ್ನ ತಂದೆ ಸುಬ್ಬಯ್ಯಗೌಡರು ಶೇಷ ಜ್ವರದಿಂದ ನರಳುತ್ತಿ ದಾಗ ತಣ್ಣೀರು ಮುಟ್ಟಿಸಿ ಪೂಜೆ ಮಾಡಿಸಿ ವಿಷಮಗೊಂಡಿದ್ದರಿಂದಲೇ ಅವರು ಸತ್ತರೆಂದು ಹೂವಯ್ಯನಿಗೆ ಜೋಯಿಸರ ಬಗ್ಗೆ ತಿರಸ್ಕಾರ, ಓದಿ ಬಂದ ಹೂವಯ್ಯ ತನ್ನ ವ್ಯವಹಾರಗಳಿಗೆ ಅಡ್ಡಗಾಲು ಹಾಕುವುದನ್ನು ಇಷ್ಟಪಡದ ಜೋಯಿಸರು ಚಂದ್ರಯ್ಯಗೌಡನನ್ನು ಅವನ ವಿರುದ್ಧ ಎತ್ತಿಕಟ್ಟುತ್ತಾರೆ. ಸೀತೆಯನ್ನು ಹೂವಯ್ಯನಿಗೆ ಕೊಡುವುದನ್ನು ತಪ್ಪಿಸುವಲ್ಲಿ ಸಹಕಾರ ನೀಡುವ ಅವರು ರಾಮಯ್ಯನ ಜೊತೆ ಮದುವೆ ಮಾಡುವಾಗ ವಿಹ್ವಲವಾದ ಆತನು ತಾಳಿ ಕಟ್ಟಲು ಹಿಂದ ಮುಂದೆ ನೋಡಿದಾಗ ತಾವೇ ಕಟ್ಟಿ ಮದುವೆ ಶಾಸ್ತ್ರ ಮುಗಿಸುತ್ತಾರೆ. ಸೀತೆಗೆ ದೆವ್ವ ಬಿಡಿಸಲು ನಾನಾ ವಿಧವಾದ ಕ್ರೂರ ತಂತ್ರಗಳನ್ನೂ ಇವರು ಬಳಸುತ್ತಾರೆ. ಜನರ ಮೌಢ್ಯವನ್ನು ವೃದ್ಧಿಸಿ ಅದನ್ನು ತಮ್ಮ ಉಪಯೋಗಕ್ಕೆ ಬಳಸಿಕೊಳ್ಳುವ ನಿಷ್ಣಾತಿ ವೆಂಕಪ್ಪ ಜೋಯಿಸರಲ್ಲಿ ಕಾಣಬಹುದು.

- **೨೧. ಶಂಕರ್ಯ :** ಸೀತೆಮನೆ ಸಿಂಗಪ್ಪಗೌಡರ ಮಗ

- **೨೨. ಶಾಮಯ್ಯಗೌಡರು :** ಮುತ್ತಳ್ಳಿ ಮನೆತನದ ಯಜಮಾನರು ಚಿನ್ನಯ್ಯ, ಸೀತೆ, ಲಕ್ಷ್ಮಿಯ ತಂದೆ, ಸಿಂಗಪ್ಪಗೌಡರ ತಂತ್ರದಂತೆ ಸೀತೆಯನ್ನು ಮೊದಲು ಕೃಷ್ಣಪ್ಪನಿಗೆ ಮದುವೆ ಮಾಡಿಕೊಳ್ಳಲು ಒಪ್ಪಿ ನಂತರ ಆತ ಹುಲಿಗೆ ಬಲಿಯಾವಾಗ ಚಂದ್ರಯ್ಯಗೌಡರ ಮಗ ರಾಮಯ್ಯನಿಗೆ ಮದುವೆ ಮಾಡಿಕೊಡಲು ಒಪ್ಪುತ್ತಾರೆ. ಮಗಳ ಭವಿಷ್ಯಕ್ಕಿಂತ 'ಚಂದ್ರಯ್ಯಗೌಡರಲ್ಲಿರುವ ಸಾಲ ಪಡೆಯುವ ಬಯಕೆಯೇ ಈ ನಿರ್ಧಾರಕ್ಕೆ ಕಾರಣ, ಚಂಚಲ ಸ್ವಭಾವ ಗಟ್ಟಿ ನಿರ್ಧಾರವಿಲ್ಲದ ವ್ಯಕ್ತಿ, ಪಾನನಿಷೇದಕ್ಕೆ ಸಂಬಂಧಿಸಿದ ಮಾನಪತ್ರಕ್ಕೆ ರುಜು ಹಾಕಿಯೂ ಚಟವನ್ನು ಬಿಡಲಾರದ ತಿರುಪತಿಗೆ ತಪ್ಪು ಕಾಣಿಕೆ ಕಟ್ಟಿ ಕುಡಿಯುವದನ್ನು ಮುಂದುವರಿಸುತ್ತಾನೆ.

- **೨೩. ಹೂವಯ್ಯ :** ಕಾನೂರು ಚಂದ್ರಯ್ಯಗೌಡರ ಅಣ್ಣ ದಿವಂಗತ ಸುಬ್ಬಯ್ಯಗೌಡರು ಮತ್ತು ನಾಗಮ್ಮ ನವರ ಏಕೈಕ ಪತ್ರ, ಮೈಸೂರಿನಲ್ಲಿ ಓದುತ್ತಿದ್ದ ಹೂವಯ್ಯ ಬೇಸಿಗೆ ರಜೆಗೆ ಕಾನೂರಿಗೆ ಬಂದ ನಂತರ ಬದಲಾದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಓದನ್ನು ಅರ್ಧಕ್ಕೇ ನಿಲ್ಲಿಸಿ ಕಾನೂರಿನಲ್ಲೇ ನಿಲ್ಲಬೇಕಾಗುತ್ತದೆ. ಚಿಕ್ಕಪ್ಪ ಚಂದ್ರಯ್ಯಗೌಡನ ಈರ್ಷೆ ತಾಳಲಾರದ ಪಾಲು ತೆಗೆದುಕೊಂಡು ಕೆಳಕಾನೂರಿನಲ್ಲಿ ನೆಲೆಯೂರುತ್ತಾನೆ. ತನ್ನ ಮನೋವೃತ್ತಿಯಿಂದಾಗಿ ಆತ ಕಾದಂಬರಿಯ ಉಳಿದೆಲ್ಲ ಪಾತ್ರಗಳಿಗಿಂತ ಭಿನ್ನವಾಗಿ ನಿಲ್ಲುತ್ತಾನೆ. ಹೂವಯ್ಯ ತನ್ನ ಸುಶಿಕ್ಷಿತತೆ, ಆಧ್ಯಾತ್ಮಿಕತೆ ಮತ್ತು ಕ್ರಿಯಾಶೀಲತೆಯಿಂದ

ಸುತ್ತಲಿನವರ ಬದುಕನ್ನು ಉತ್ತಮಗೊಳಿಸಲು ಪ್ರಭಾವ ಬೀರುತ್ತಾನೆ. ತಾನು ಪ್ರೀತಿಸಿದ ಮುತ್ತಳ್ಳಿ ಶ್ಯಾಮಯ್ಯಗೌಡರ ಮಗಳು ಸೀತೆಯನ್ನು ಮದುವೆಯಾಗಲಾರದೆ ನಿರಾಶೆಗೊಂಡರೂ ಕೊನೆಗೆ ಜೀವನ ಪ್ರೀತಿ ಆತನನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ. ಹೂವಯ್ಯನ ಪ್ರಯತ್ನದಿಂದ ಮಲೆನಾಡಿನ ಅನೇಕ ಹಳ್ಳಿಗಳು ನಾಗರಿಕತೆಯೆಡೆಗೆ ಹೆಜ್ಜೆ ಹಾಕುತ್ತವೆ ಆಳುಗಳು ತಮ್ಮ ಅನಾಗರಿಕ ಬದುಕಿನಿಂದ ನಾಗರಿಕ ಬದುಕಿನಡೆಗೆ ಮುನ್ನಡೆಯುತ್ತಾರೆ, 'ಕಾನೂರು ಹೆಗ್ಗಡಿತಿ' ಕಾದಂಬರಿಯ ನಾಯಕ ನಿಸ್ಸಂದೇಹವಾಗಿ ಹೂವಯ್ಯನೇ ಆಗಿದ್ದಾನೆ.

ಆಳುಗಳು

- **೧. ಆಳು – ಕಾಳ :** ಶ್ಯಾಮಯ್ಯಗೌಡರ ಮನೆಯ ಆಳು ಸೀತೆಯನ್ನು ಸಿಂಗಪ್ಪಗೌಡರ ಮಗ ಕೃಷ್ಣಪ್ಪನಿಗೆ ತಂದುಕೊಳ್ಳುವ ಬಗ್ಗೆ ಆಗುತ್ತಿದ್ದ ಮಾತುಕತೆಯನ್ನು ಮೊದಲು ಸೀತೆಗೆ ಹೇಳಿದವನು,

- **೨. ಕುಂಬಾರ ನಂಜ :** ಚಿನ್ನಯ್ಯನ ಮೀನು ಶಿಕಾರಿಯ ಜೊತೆಗಾರ, ಆಳು, ಕಳ್ಳು ಕುಡಿಯಲು ತನ್ನ ಹೆಂಡತಿಯ ಕಿವಿಯ ಆಭರಣವನ್ನೂ ಕಿತ್ತು ಕಳ್ಳಂಗಡಿಗೆ ಕೊಡುವ ಮದ್ಯವ್ಯಸನಿ,

- **೩. ಗಂಗ :** ಬೈರನ ಮಗ, ಬೈರನ ಹೊಂಡ ತೋಣಕುವ ಕಾಯಕದಲ್ಲಿ ಮಗ ಜೊತೆಗಾರ, ಜೊತೆಗೆ ತನ್ನ ತಂದೆಯ ಕಣ್ಣಪಿಸಿ ಕಳ್ಳಂಗಡಿಯಲ್ಲಿ ಸ್ವತಂತ್ರವಾಗಿ ಸಾಲ ಮಾಡುವನ್ನು ಚಾಣಾಕ್ಷ, ಕಾನೂರು ಮನೆತನ ಪಾಲಾಗುವ ಮುನ್ನ ನಿಂಗನು ಹೂತಿದ್ದ ಹಕಾರುಗಳನ್ನು ಕಳ್ಳಂಗಡಿಯ ಚಿಕ್ಕಣ್ಣನಿಗೆ ತೋರಿಸಿಕೊಟ್ಟು ಮಂತ್ರಿಸಿದ ತೆಂಗಿನಕಾಯಿ ಮತ್ತು ದೆಯ್ಯದ ಭಯದಿಂದ ಗಂಗೆ ಹುಡುಗ ಸಾವನ್ನಪ್ಪುತ್ತಾನೆ.

- **೪. ಗಂಗೆ :** ಸೇರೆಗಾರ, ರಂಗಪ್ಪಸೆಟ್ಟಿ ಘಟ್ಟದ ಕೆಳಗಿಂದ ತಂದ ಹಕ್ಕಾಳು, ಆಕೆ ರಂಗಪ್ಪ ಸಟ್ಟನ ಪ್ರೇಯಸಿ ಓಬಯ್ಯಗೌಡನನ್ನೂ ಹಾದಿ ತಪ್ಪಿಸಿದವಳು. ಚಂದ್ರಯ್ಯಗೌಡನನ್ನೂ ವಶಮಾಡಿಕೊಂಡವಳು ಸುಬ್ಬಮ್ಮನನ್ನು ಮದುವೆಯಾದ ನಂತರ ಚಂದ್ರಯ್ಯಗೌಡರು ತನ್ನನ್ನು ಕಡೆಗಣಿಸುತ್ತಿದ್ದಾರೆಂದು ಭಾವಿಸಿ ಸುಬ್ಬಮ್ಮನ ಮೇಲೆ ಆಸೂಯೆ ತಾಳುತ್ತಾರೆ, ತನ್ನ ಪ್ರಿಯಕರನನ್ನು ಮದುವೆಯಾಗಲು ಆಗದ, ಮುದುಕನ ಕೈಹಿಡಿದ ಗಂಗೆ ನಂತರ ಗಂಡನಿಂದ ಪ್ರಿಯಕರ ಹತನಾದ ಮೇಲೆ ರಂಗಪ್ಪಸೆಟ್ಟರೊಡಗೂಡಿ ಕಾನೂರಿಗೆ ಬರುತ್ತಾಳೆ. ಮುಗ್ಧ ಸುಬ್ಬಮ್ಮನನ್ನು ಕೆಟ್ಟದಾರಿಗೆಳೆಯುತ್ತಾಳೆ. ಚಂದ್ರಯ್ಯಗೌಡರು ಸುಬ್ಬಮ್ಮನನ್ನು ಹೊರಕ್ಕೆ ಅಟ್ಟಿದಾಗ ಗಂಗೆ ಚಂದ್ರಯ್ಯಗೌಡರ ಮನೆಯಲ್ಲೇ ನೆಲೆಸುತ್ತಾಳೆ. ಚಂದ್ರಯ್ಯಗೌಡರ ಸಾವಿನ ನಂತರ ಸಂಚು ಹೂಡಿ ಸುಬ್ಬಮ್ಮನ ಒಡವೆಗಳೊಡನೆ ಸೇರೆಗಾರರ ಜೊತೆ ಪರಾರಿಯಾಗುತ್ತಾಳೆ.

- **೫. ಜಾಕಿ :** ಸೀತೆಮನೆ ಸಿಂಗಪ್ಪಗೌಡರ ಮನೆಯ ನಂಬಿಕಸ್ತ ಅಳು ವಿವೇಚನೆ ಕಲಮ, ಬಲಿಷ್ಠನೂ, ಧೂರ್ತನ ಪುಂಡನೂ ಆಗಿದ್ದ ಜಾಕಿಗೆ ಜಗಳ ಕಾಯುವುದು ತುಂಬಾ

ಪ್ರಿಯವಾದ ಕೆಲಸ, ಮಹಾ ಕುಡುಕ, ಕಟುಕ, ಅವನ ಕೆನ್ನೆದೆಗೆ ಅಜ್ಞಾನ ಅಸಂಸ್ಕೃತಿಗಳ ಮೂಲಧಾರ, ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದರೂ ಈತನ ರಾಕ್ಷಸೀಭಾವ ಕಡಿಮೆಯಾಗಿರಲಿಲ್ಲ. ಇದೇ ದುಡುಕು ಸ್ವಭಾವ ಪುಟ್ಟಣ್ಣನ ನಾಯಿ ಟೈಗರ್ನ ಸಾವಿಗೆ ಕಾರಣವಾಗುತ್ತದೆ. ಹುಲಿಯ ಶಿಕಾರಿಗೆ ಹೋದ ಕೃಷ್ಣಪ್ಪನ ಜೊತೆ ಅವನು ಹುಲಿಯ ಹೊಡೆತಕ್ಕೆ ಸಿಕ್ಕು ಚಿಕಿತ್ಸೆಗೂ ಬದುಕಲಾರದೆ ಸಾಯುತ್ತಾನೆ.

- **೬. ನಿಂಗ :** ಕಾನೂರು ಮನತನದ ಆಳು, ಗಾಡಿಯನ್ನು ಹೊಡೆಯುವವನು, ಗಾಡಿಯಾಳು ನಿಂಗ' ಎಂದೇ ಪರಿಚಿತ, ರಾಮಯ್ಯ ಮತ್ತು ಹೂವಯ್ಯನನ್ನು ಕಾನೂರಿಗೆ ಕರೆತರುವ ಹಾದಿಯಲ್ಲಿ ಎತ್ತುಗಳು ಕೆರೆಗೆ ಎಳೆದಾಗ ಆತ ಗಾಡಿ ನಿಲ್ಲಿಸಲು ವಿಫಲನಾಗಿ ಗಾಡಿ ಉರುಳುತ್ತದೆ. ಈ ಘಟನೆ ಕಾದಂಬರಿಯ ಮುಂದಿನ ಎಲ್ಲಾ ಅಲ್ಲೋಲ-ಕಲ್ಲೋಲಗಳಿಗೆ ಮುನ್ನುಡಿಯಂತಿದೆ. ಚಂದ್ರಯ್ಯಗೌಡರನ್ನು ಧರ್ಮಸ್ಥಳಕ್ಕೆ ಕರೆದೊಯ್ಯುವ ನಿಂಗೆ ವಾಪಸ್ಸು ಬರುವಾಗ ಕಾಯಿಲೆಯಿಂದ ಸಾಯುತ್ತಾನೆ. ನಿಂಗನ ಮಗ ಪುಟ್ಟನನ್ನು ಓಬಯ್ಯ ಆದರಿಸುತ್ತಾನೆ.

- **೭. ಪುಟ್ಟ :** ಚಂದ್ರಯ್ಯ ಗೌಡರ ಗುಡಿಯಾಳು, ನಿಂಗನ ಮಗ, ಕಾನೂರಿನ ಮನೆಯಲ್ಲಿ ವಾಸುವಿನ ಜೊತೆಗಾರ, ಚಂದ್ರಯ್ಯಗೌಡರ ಜೊತೆ ಧರ್ಮಸ್ಥಳಕ್ಕೆ ಹೋಗಿ ಹಿಂದಕ್ಕೆ ಬರುವಾಗ ಈತನ ತಂದೆ ನಿಂಗ ಕಾಯಿಲೆಯಿಂದ ಅಸು ನೀಗುತ್ತಾನೆ. ಆಮೇಲೆ ಪುಟ್ಟಿ, ಓಬಯ್ಯನ ಪ್ರೀತಿಯಲ್ಲಿ ಬೆಳೆಯುತ್ತಾನೆ. ಸೀತೆಗೆ ಚಂದ್ರಯ್ಯಗೌಡರು ದಪ್ಪ ಬಿಡಿಸಲು ಶಿಕ್ಷೆ ವಿಧಿಸಿದಾಗ ಪುಟ್ಟ ಅವಳು ಕೆಳಕಾನೂರಿನ ಹೂವಯ್ಯನ ಮನೆಗೆ ಹೋಗಲು ನೆರವು ನೀಡುತ್ತಾನೆ. ಹಾಗೆಯೇ ಸುಬ್ಬಮ್ಮನಿಗೆ ಗಂಗೆಯ ಕಣಪ್ಪಿಸಿ ತನ್ನ ಒಡವೆಗಳನ್ನು ಸಾಗಿಸಲು ಪುಟ್ಟವೇ ನೆರವು ನೀಡುತ್ತಾನೆ. ಪಟ್ಟನ ಕೃತ್ಯಕ್ಕೆ ಸೇರೆಗಾರರು ಅವನನ್ನು ಮೂರ್ಛ ಬರುವಂತೆ ಹೊಡೆದು ಸತ್ತನೆಂದು ಭಾವಿಸಿ ಹೂಳಲು ಸಂಚುಮಾಡುತ್ತಿರುವಾಗಲೇ ಹೂವಯ್ಯನಿಂದ ಬದುಕುಳಿಯುತ್ತಾನೆ. ಸೀತೆಯ ಪ್ರಯತ್ನದಿಂದ ಮುಂದೆ ಅಕ್ಷರಸ್ಥನಾಗಿ ಕೆಳಕಾನೂರಿನ ಒಕ್ಕಲಾಗಿ ಸಣ್ಣ ಪುಟ್ಟಣ್ಣ ನಾಗಿ ಬೆಳೆಯುತ್ತಾನೆ.

- **೮. ಬೈರ :** ಚಂದ್ರಯ್ಯ ಗೌಡರ ಜೀತದಾಳು, ಟೇಲರವನ್ನು, ತನ್ನ ವಂಶದ ಕುಲಕಸಬು ಅಲ್ಲದಿದ್ದರೂ ಕದ್ದು ಬನಿಯನ್ನು ಕಟ್ಟುವುದರಲ್ಲಿ ಹೊಂಡ ತೊಣಚಿ ಮೀನು, ಏಡಿಗಳನ್ನು ಹಿಡಿಯುವುದರಲ್ಲಿ ನಿಮ್ಣಾಸ ಟಿಗಳು ಮರಕ್ಕೆ ಮಾರ್ಕ್ ಹಾಕಲು ಬಂದವರಿಗೆ ಸಿಕ್ಕಿ ಬೀಳುವ ಬೈಲ ಆತನಿಗೆ ಪಂಗನಾಮ ಹಾಕುತ್ತಾನೆ.

- **೯. ಸಿದ್ದ :** ಚಂದ್ರಯ್ಯಗೌಡರ ಮನೆಯ ಆಳು, ಬೇಲರವನು. ರಾಮಯ್ಯ – ಹೂವಯ್ಯರು ನೇಗಿಲು ಹಿಡಿದು ಹೊಲ ಉಳಲು ಬೈರ ಸಿದ್ದರ ನೇಗಿಲು – ಎತ್ತುಗಳನ್ನು ಹಿಡಿದುಕೊಳ್ಳುತ್ತಾರೆ. ಹೂವಯ್ಯನ ಎತ್ತಿಗೆ ಗಾಯವಾಗಿ, ರಾಮಯ್ಯ ಹಿಡಿದ ನೇಗಿಲು ಮುರಿದಾಗ ಸಿದ್ಧ ಗಾಬರಿಯಾಗುತ್ತಾನೆ. ಕಾನೂರು ದುರಂತಕ್ಕೆ ಈ ಘಟನೆ ಮುನ್ನುಡಿಯಂತಿರುತ್ತದೆ, ಕಿಲಿಸ್ಕರ ಮಾರ್ಕನಿಗೆ ಪಂಗನಾಮ ಹಾಕಲು ಬೈರನ ತಲೇ ಗಡ್ಡ ಮೀಸೆಯನ್ನು ನುಣ್ಣಗೆ ಬೋಳಿಸುವವನೇ ಸಿದ್ಧ.

- ೧೦. ಸೇಸಿ : ಬೈರನ ಹೆಂಡತಿ, ಗಂಗನ ತಾಯಿ.

- **೧೧. ಸೋಮ (ಸೋಮಯ್ಯ ಶೆಟ್ಟಿ) :** ಡೊಳ್ಳು ಹೊಟ್ಟೆಯ ಸೋಮ ಗಟ್ಟದ ಕೆಳಗಿನ ಆಳು, ಚಂದ್ರಯ್ಯಗೌಡರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸೋಮನಿಗೆ ಮಾಂಸ (ಹಾಡು) ಎಂದರೆ ಪ್ರಾಣ, ಅದಕ್ಕಾಗಿ ಏನನ್ನೂ ಮಾಡಬಲ್ಲ ಸಾಹಸಿ, ಮಾಂಸದಲ್ಲಿದ್ದ ಅತಿಯಾಸೆಯನ್ನು ಅಡಗಿಸಿಕೊಳ್ಳುವಷ್ಟು ಸಂಯಮವಿರದಿದ್ದುದರಿಂದ ಅನೇಕ ಹಾಸ್ಯ ಪ್ರಸಂಗಗಳಿಗೆ ತುತ್ತಾಗುತ್ತಾನೆ. ಕಲ್ಲಂಗಡಿಯವನ ಸಾಲ ತೀರಿಸಲು ಹಳೆಪೈಕದ ತಿಮ್ಮನ ಹುಂಜವನ್ನು ಕದ್ದು ಸಿಕ್ಕಿಹಾಕಿಕೊಳ್ಳುತ್ತಾನೆ ಕಾನೂರು ಮನತನ ಪಾಲಾದಾಗ ಚಂದ್ರಯ್ಯಗೌಡರಲ್ಲಿ ಆಳಾಗಿ ಉಳಿಯುವ ಆತ ಹೂವಯ್ಯ ಸಾಕಿದ್ದ ಹೋತ 'ಬಲೀಂದ್ರ ನನ್ನು ಕದಿಯಲು ಹೋಗಿ ಗೊಬ್ಬರದ ಗುಂಡಿಯಲ್ಲಿ ಬೀಳುತ್ತಾನೆ ಕೊನೆಗೆ ಹೂವಯ್ಯನಲ್ಲಿ ಆಳಾಗಿ ಬಂದು ನಿಂತು ಸೋಮಯ್ಯ ಸೆಟ್ಟಿಯಾಗಿ ನಾಗರಿಕತೆಯೆಡೆಗೆ ಮುಂದುವರಿಯುತ್ತಾನೆ.

- **೧೨. ಹಳೆ ಪೈಕದ ತಿಮ್ಮ :** ಚಂದ್ರಯ್ಯಗೌಡರ ಒಕ್ಕಲಾದ ಹಳೆಪೈಕದ ತಿಮ್ಮ ಬಗನಿಕಟ್ಟಿ ಕಳು ಇಳಿಸುವ ಕುಲಕುಸುಬಿನಲ್ಲಿ ನಿಷ್ಣಾತು ಚಂದ್ರಯ್ಯಗೌಡರಿಗೆ ಬಗು ಸರಬರಾಜು ಮಾಡುತ್ತಾ ಅವರ ವಿಶ್ವಾಸ ಸಂಪಾದಿಸಿದ್ದ. ಕಾನೂರಿನ ಕಾನುಬೈಲಿನ ಕಪ್ಪು ಗೊತ್ತಿನಲ್ಲಿ ಕಳ್ಳು ಕಾಯಿಸುವುದು ಅವನ ಕಾಯಕ ಮುಂದೆ ಹೂಮನ ಪ್ರಭಾವದಿಂದಾಗಿ, ಕಳ್ಳಾಕಾಯಿಸುತ್ತಿದ್ದ ಎತ್ತರವಾದ ಕಾನುಬೈಲಿನಲ್ಲಿ ಒಂದು ಸುಂದರ ಮಂದಿರವನ್ನು ನಿರ್ಮಿಸಿ ಕರ್ಮಯೋಗಿಯಾಗಿ ವಾಸಿಸುತ್ತಾನೆ.

- **೧. ಮಧ್ಯವರ್ತಿ – ಸೇರಗಾರ ರಂಗಪ್ಪಸಟ್ಟಿ :** ಗಟ್ಟದ ಕೆಳಗಿನ ರಂಗಪ್ಪಸಟ್ಟಿ, ಚಂದ್ರಯ್ಯಗೌಡರ ಸೇರೆಗಾರ, ಕೂಲಿಯಾಳುಗಳನ್ನು ಗಟ್ಟದ ಮೇಲಕ್ಕೆ ತಂದು ಚಂದ್ರಯ್ಯಗೌಡರಲ್ಲಿ ಸೇರೆಗಾರನಾಗಿ ಕೆಲಸ ಮಾಡಿಸುವವನು ತಾನು ತಂದ ಹಾಳು ಗಂಗೆಯೊಡನೆ ಸಂಬಂಧವಿಟ್ಟುಕೊಂಡವನು ಚಂದ್ರಯ್ಯಗೌಡರು ಗಂಗೆಯೊಡನೆ ಕೂಡುವಂತೆ ಜಾಲ ಹೆಣೆದವರು. ಸುಬ್ಬಮ್ಮನ ಮೇಲೆ ಮೋಹಗೊಳ್ಳುವ ರಂಗಪ್ಪಸೆಟ್ಟಿ, ನಾನಾ ವಿಧಗಳಿಂದ ಕೊನೆಗೂ ಆಕೆಯನ್ನು ಒಲಿಸಿಕೊಳ್ಳುತ್ತಾನೆ, ಹೂವಯ್ಯನ ವಿರುದ್ಧ ಚಾಡಿ ಹೇಳಿ ಚಂದ್ರಯ್ಯ ಗೌಡರ ಮನಸ್ಸು ದ್ವೇಷಕ್ಕೆ ತಿರುಗುವಂತೆ ಮಾಡುವಲ್ಲಿ ಸಫಲವಾಗುತ್ತಾನೆ. ಸುಬ್ಬಮ್ಮನ ಕಳ್ಳ ಬಸುರಿಗೆ ಕಾರಣವಾಗಿ ಆಕೆಯ ಒಡವೆಗಳನ್ನೆಲ್ಲ ದೋಚಿ ಗಂಗೆಯೊಡನೆ ಗಟ್ಟದ ಕೆಳಕ್ಕೆ ರಾತ್ರೋರಾತ್ರಿ ಪರಾರಿಯಾಗುತ್ತಾನೆ. ಸುಬ್ಬಮ್ಮ ಹಾಗೂ ಕಾನೂರು ಮನೆತನದ ದುರಂತಕ್ಕೆ ಸೇರೆಗಾರ ರಂಗಪ್ಪಸೆಟ್ಟಿಯ ಪಾಲು ಹೆಚ್ಚಿನದು.

ಅನುಬಂಧ – ೪

ಕಾದಂಬರಿ ಊರುಗಳ ಪರಿಚಯ : ಪ್ರಾದೇಶಿಕತೆ

- **ಅಗ್ರಹಾರ** : ವೆಂಕಪ್ಪ ಜೋಯಿಸರ ಊರು, ತುಂಗಾ ತೀರದಲ್ಲಿ ರುವ ಅಗ್ರಹಾರ ರಮಣೀಯ ಸ್ಥಳವಾಗಿತ್ತು. ಹೊಳೆಯ ದಡದಲ್ಲಿ ಚಂದ್ರಮೌಳೇಶ್ವರನ ಗುಡಿಯೂ ಅದಕ್ಕೆ ಸಮೀಪದಲ್ಲಿಯೇ ಕೈಹೆಂಚು ಹೊದಿಸಿದ್ದ ವೆಂಕಪ್ಪ ಜೋಯಿಸರ ನಾಡಹಂಚಿನ ಮನೆಯೂ ಇವೆ.

- **ಅತ್ತಿಗದ್ದೆ** : ಕಾನೂರು ಆಸುಪಾಸಿನ ಹಳ್ಳಿ, ಒಮ್ಮೆ ಮಾತ್ರ ಉಲ್ಲೇಖಗೊಂಡಿದೆ. ಹೂವಯ್ಯನ ತಾಯಿ ಗೌರಮ್ಮನವರು ತಮ್ಮ ಮಗನಿಗೆ ಮದುವೆಮಾಡಿ ಕೊಳ್ಳಲು ಅತ್ತಿಗೆದ್ದ ಹಿರಿಯಣ್ಣಗೌಡರ ಮಗಳು ರಂಗಮ್ಮನನ್ನು ಪ್ರಸ್ತಾಪಿಸು ತ್ತಾರೆ, ಅತ್ರಿಗದ್ದೆ ಹಿಂಣಯ್ಯ ಗೌಡರು ತಮ್ಮ ಮಗಳನ್ನು ರಾಮಯ್ಯನಿಗೆ ಎರಡನೇ ಸಂಬಂಧಕ್ಕೆ ಕೊಡಲು ಪ್ರಯತ್ನಿಸುತ್ತಾರೆ.

- **ಆಗುಂಬೆ** : ಕಾನೂರಿನಿಂದ ಧರ್ಮಸ್ಥಳಕ್ಕೆ ಆಗುಂಬೆಯ ಮಾರ್ಗವಾಗಿ ಹೋಗುತ್ತಿದ್ದದ್ದು ಕೃತಿಯಲ್ಲಿ ತಿಳಿದುಬರುತ್ತದೆ. ಚಂದ್ರಯ್ಯಗೌಡರು ಧರ್ಮಸ್ಥಳದಿಂದ ಹಿಂದಿರುಗಿ ಬಂದಾಗ ಅವರ ಜೊತೆಗಿದ್ದ ಗಾಡಿ ಹೊಡೆಯುವ ಆರು ನಿಂಗೆ ಕಾಯಿಲೆಯಿಂದ ಆಗುಂಬೆಯ ಆಸ್ಪತ್ರೆಯಲ್ಲಿದ್ದಾನೆಂದು ಅವನ ಮಗ ಪಟ್ಟನಿಗೆ ಓಬಯ್ಯ ಹೇಳುತ್ತಾನೆ: ಕೆಳಕಾನೂರು ಬಿಟ್ಟ, ಓಬಯ್ಯ ತಂದೆ ಅಣ್ಣಯ್ಯಗೌಡನ ಜೊತೆ ಮೊದಲು ಮೇಗರವಳ್ಳಿಯಲ್ಲಿ ಕೆಲಸಕ್ಕಿದ್ದು ನಂತರ ಆಗುಂಬೆಯ ಬ್ರಾಹ್ಮಣ ಸಾಹುಕಾರರಲ್ಲಿ ಕೆಲಸಕ್ಕೆ ನಿಲ್ಲುತ್ತಾನೆ.

- **ಎಂಟೂರು** : ಕಾನೂರಿನ ಮತ್ತೊಂದು ನೆರೆಯ ಹಳ್ಳಿ, ಎಂಟೂರಿನ ಶೇವೇಗೌಡರು ಕಾನೂರು ಮನೆಯ ಹಿನ್ನೆಯಲ್ಲಿ ಹಿರಿಯರಾಗಿ ಭಾಗವಹಿಸುತ್ತಾರೆ.

- **ಕಳ್ಳಂಗಡಿ** : ಮುತ್ತಳ್ಳಿಗೂ – ಕಾನೂರಿಗೂ ನಡುವೆ ಕಲ್ಲಂಗಡಿಯಿತ್ತು. ಸಾಯಂಕಾಲದಿಂದ ಆರಂಭವಾಗಿ ರಾತ್ರಿ ಒಂಬತ್ತು ಗಂಟೆಯವರಿಗೂ ವಹಿವಾಟು ನಡೆಸುತ್ತಿದ್ದ ಕಳ್ಳಂಗಡಿಯ ಖಾಯಂ ಗಿರಾಕಿಗಳೆಂದರೆ ಕಾನೂರು, ಮುತ್ತಳ್ಳಿ, ಸೀತೇಮನೆಯ ಒಕ್ಕಲುಗಳು, ಅವರ ಆಳುಗಳು, ಮದ್ಯವ್ಯಸನ ಹಚ್ಚಿಕೊಂಡ ಆಳುಗಳ ದೌರ್ಬಲ್ಯದಿಂದ ಈ ಕಳ್ಳಂಗಡಿ ಕೊಬ್ಬಿತ್ತು. ಹೂವಯ್ಯನ ಪ್ರಭಾವ ವೃದ್ಧಿಸಿದ ನಂತರವೇ ಕಾಡಿನ ನಡುವೆ ಇದ್ದ ಕಳ್ಳಂಗಡಿ ಕುಸಿದುಬಿದ್ದು ಅಲ್ಲಿ ನಾಲ್ಕಾರು ಗ್ರಾಮಗಳಿಗೆ ಅನುಕೂಲವಾಗುವ ಆಸ್ಪತ್ರೆ, ಸ್ಕೂಲು, ಪೋಸ್ಟಾಫೀಸು ತಲೆ ಎತ್ತುತ್ತವೆ. ಕಳ್ಳಂಗಡಿ ಕಾದಂಬರಿಯ ಕಾಲಘಟ್ಟದಲ್ಲಿ ಸುಧಾರಣೆಯನ್ನು ಮೈಗೂಡಿಸಿಕೊಳ್ಳುವ ಸ್ಥಳವೆನಿಸುತ್ತದೆ.

- **ಕಾನುಬೈಲು** : ಕಾನೂರು ಮನೆಯ ಉತ್ತರ ದಿಕ್ಕಿಗೆ ಇದ್ದ ಉನ್ನತ ಗುಡ್ಡಗಾಡಿನ ನೆತ್ತಿಯಲ್ಲಿ ಹೆಬ್ಬಂಡೆ, ಹಾಸುಬಂಡೆಗಳಿಂದ ಬಯಲಾಗಿದ್ದ ಪ್ರದೇಶವೇ ಕಾಡುಬೈಲು ಅಲ್ಲಿಂದ ನಿಂತು ನೋಡಿದರೆ ಕೃತಿಯಲ್ಲಿ ಬರುವ ಕೆಳಕಾನೂರು ಮುತ್ತಳ್ಳಿ,

ಸೀತೆಮನೆಯನ್ನಲ್ಲದೆ ಆಗುಂಬೆ ಘಾಟಿ, ಕುಂದದ ಗುಡ್ಡ, ಕುದುರೆಮುಖ, ಮರುತಿ ಪರ್ವತಗಳನ್ನು ನೋಡಬಹುದಿತ್ತು. ಅಲ್ಲಿನ ಸೂರ್ಯ, ಚಂದ್ರೋದಯ ದ್ವಿಗುಣಿತ ರಮಣೀಯವಾಗಿ ಶೋಭಿಸುತ್ತಿದ್ದರಿಂದ ರಜಾಕಾಲದಲ್ಲಿ ಊರಿಗೆ ಬಂದಾಗ ಹೂವಯ್ಯ ರಾಮಯ್ಯರಿಗೆ ಅದೊಂದು ನಿತ್ಯ ಸಂದರ್ಶನದ ಸೌಂದರ್ಯ ಸ್ಥಾನವಾಗಿತ್ತು. ಇಂಥ ರಮಣೀಯ ಪ್ರದೇಶದಲ್ಲಿಯೇ ಹಳೇಪೈಕದ ತಿಮ್ಮನು ಕಳು ಗೊತ್ತು ಮಾಡಿಕೊಂಡಿದ್ದು ಚಂದ್ರಯ್ಯಗೌಡರಂಥ ಶ್ರೀಮಂತ ವರ್ಗದವರಿಗೆ ಕಳು ಕಾಯಿಸಿಕೊಡುತ್ತಿದ್ದನು. ಕಳ್ಳಂಗಡಿ ಕೆಳವರ್ಗದವರ ಕಳ್ಳು ಪಾನೀಯ ಕೇಂದ್ರವಾದರೆ, ಕಾನುಬೈಲು ಮೇಲುವರ್ಗದವರ ಪಾನಕೇಂದ್ರವಾಗಿತ್ತು. ಪುಟ್ಟಣ್ಣ ತನ್ನ ಪ್ರೀತಿಯ ನಾಯಿ 'ಟೈಗರ್' ಹತ್ಯೆಗೀಡಾದಾಗ ಅದನ್ನು ಹೊಳಲು ಕಾನುಬೈಲನೆ ಆರಿಸಿಕೊಳ್ಳುತ್ತಾನೆ, ಹೂವಯ್ಯನ ಪ್ರಭಾವದಿಂದ ಕಳ್ಳು ಕಾಯಿಸುವ ಕಾರ್ಯ ತ್ಯಜಿಸಿದ ಹಳೇಪೈಕದ ತಿಮ್ಮ ಇಲ್ಲಿ ಒಂದು ಸುಂದರ ಮಂದಿರವನ್ನು ನಿರ್ಮಿಸಿ ಕರ್ಮಯೋಗಿಯಾಗಿ ತಪಸ್ವಿಯಂತೆ ಬಾಳುತ್ತಾನೆ.

- **ಕಾನೂರು** : 'ಕಾನೂರು ಹೆಗ್ಗಡಿತಿ' ಕೃತಿಯ ಪ್ರಮುಖ ಘಟನೆಗಳೆಲ್ಲವೂ ಜರುಗುವುದು ಕಾನೂರಿನಲ್ಲಿ, ಕಾನೂನ ಚಂದ್ರಯ್ಯಗೌಡರ ಮಂಗಳೂರು ಹೆಂಚಿನಮನೆ ಕಾದಂಬರಿಯ ಎಲ್ಲ ಘಟನೆಗಳಿಗೂ ಸಾಕ್ಷಿಯಾಗುತ್ತದೆ. ಆ ದೊಡ್ಡಮನೆಯ ಪೂರ್ವ – ಉತ್ತರ ಪ್ರದೇಶಗಳಿಗೆ ಕಾಡು – ಬೆಟ್ಟಗಳು ಕಣಿವೆ ಅಬೇದ್ಯ ಕೋಟೆ ರಚಿಸಿದ್ದರೆ ದಕ್ಷಿಣ ದಿಕ್ಕಿನಲ್ಲಿ ಅಸೂರು ಮನೆತನದ ತೋಟ ಗದ್ದೆಗಳು, ಒಕ್ಕಲು ಮತ್ತು ಅಳುಗಳ ಹುಲ್ಲು ಮನೆ, ಬಿಡಾರ, ಕಣ, ಕೊಟ್ಟಿಗೆ, ಪಟ್ಟೆಗಳಿದ್ದವು ಕಾನೂರು ಚಂದ್ರಯ್ಯಗೌಡರ ಮನೆ ಅಧುನಿಕತೆ ಮತ್ತು ಪ್ರಾಚೀನತೆಯೆರಡರ ಮಿಶ್ರಣ, ಮನೆಗೆ ಹಳೆಯ ಮರಗಳನ್ನು ಬಳಸಿದ್ದರೆ, ಛಾವಣಿಗೆ ಹೊ ಮಂಗಳೂರು ಹೆಂಚುಗಳನ್ನು ಹೊದಿಸಲಾಗಿತ್ತು. ಅಂಗಳದಲ್ಲಿ ತುಲಸಿ ಪೀಠ, ಜಗಲಿಯ ಮೇಲೆ ಹೆಗ್ಗಡಿಯಾರದ ಪಕ್ಕದಲ್ಲಿ ರಾಷ್ಟ್ರೀಯತೆಯ ಪ್ರಭಾವ ಮಲೆನಾಡಿನ ಮೂಲೆಯನ್ನು ಸ್ಪರ್ಶಿಸಿದ್ದರ ಕುರುಹಾಗಿ ರವಿವರ್ಮನ ದೇವತೆಗಳ ಚಿತ್ರ, ತಿರುಪತಿಯ ಬಣ್ಣದ ಚಿತ್ರಗಳ ಜೊತೆಗೇ, ಒಬ್ಬಿಬ್ಬರು ದೇಶಭಕ್ತರ ಪಟಗಳು ಮತ್ತು ಭಾರತಾಂಬೆಯ ಚಿತ್ರಪಟವೂ ಇತ್ತು.

  ಕಾನೂರು ಮನೆ ಪ್ರಾಚೀನ ಮೂಢನಂಬಿಕೆ ಮತ್ತು ಆಧುನಿಕತೆಯ ಸುಧಾರಣೆಯ ನಡುವಣ ಸಂಘರ್ಷದ ಕೇಂದ್ರವಾಗುತ್ತದೆ. ಸಂಪ್ರದಾಯ ಮೌಢ್ಯ ಮತ್ತು ಆಧುನಿಕ ಶಿಕ್ಷಣದ ಮುಖಾಮುಖಿಗೆ ಅದು ತೆರೆದುಕೊಳ್ಳುತ್ತದೆ. ಚಂದ್ರಯ್ಯಗೌಡರ ಸಂಕುಚಿತ ಬುದ್ಧಿ, ಮೆಕಪ್ಪ ಜೋಯಿಸರ ಕುಟಿಲ ತಂತ್ರಗಾರಿಕೆ ಮತ್ತು ಆಧುನಿಕತ ಪರ ನಿಲ್ಲುವ ಹೂವಯ್ಯ ಇವುಗಳ ನಡುವಿನ ಘರ್ಷಣೆಯಲ್ಲಿ ಮನೆ ಒಡೆಯುತ್ತದೆ. ಈ ಮನೆಯ ಸಂಸ್ಕೃತಿಗಿಂತ ಭಿನ್ನವಾದ ಹಿನ್ನೆಲೆಯಿಂದ ಬರುವ ಸುಬ್ಬಮ್ಮನ ತೊಳಲಾಟಗಳೂ ಕಾನೂರು ಮನೆಯಲ್ಲಿ ಅನುರಣಿಸುತ್ತವೆ.

- **ಕುರವಳ್ಳಿ** : ತೀರ್ಥಹಳ್ಳಿಯ ಬಳಿ ತುಂಗಾನದಿಯನ್ನು ಕಲ್ಲು ಸಾಗರದ ಮೂಲಕ ದಾಟಿ ಬಂದಾಗ ಮೊದಲು ಸಿಗುವುದು ಕುರುವಳ್ಳಿ, ತುಂಗಾನದಿಯನ್ನು ಗಾಡಿಯ ಮೂಲಕ

ದಾಟಲಾಗದ ಕಾರಣ ಈ ಹಳ್ಳಿಯ ಅರಳಿ ಕಟ್ಟೆಯ ಬುಡದಲ್ಲಿ ಗಾಡಿಯನ್ನು ನಿಲ್ಲಿಸುತ್ತಾರೆ. ಕುರುವಳ್ಳಿಯ ಕಿರು ಪೇಟೆಯ ಹಾದಿಯ ಮೂಲಕವೇ ಕಾನೂರಿಗೆ ಹೋಗುವ ಹಾದಿಯಿದೆ.

- **ಕೂಳೂರು :** ಈ ಸ್ಥಳದ ವಿವರಗಳು ಕಾದಂಬರಿಯಲ್ಲಿ ಹೆಚ್ಚು ದೊರೆಯುವುದಿಲ್ಲ. ಸೀತೆ ಎಸ್ಮೃತಿ ಹೊಂದಿದಾಗ ಆಕೆಯ ತಾಯಿ ಗೌರಮ್ಮ ಮಗಳ ಆರೋಗ್ಯಕ್ಕೆ ಪ್ರಾರ್ಥಿಸಿ ಕೂಳೂರಿಗೆ ಕಳುಹಿಸಿ ಪ್ರಸಾದ ತರಿಸುವುದಾಗಿ ಹೇಳುತ್ತಾರೆ ಕೂಳೂರು ದೇವಾಲಯದ ಪ್ರಸಾದ ಕಡುಕನ್ನು ಓಡಿಸಿ ಒಳಿತನ್ನು ಮಾಡಬಹುದೆಂಬ ನಂಬಿಕೆ ಪ್ರಚಲಿತವಾಗಿತ್ತು.

- **ಕೆಳಕಾನೂರು :** ಕಾನೂರಿಗೆ ಸುಮಾರು ಒಂದು ಮೈಲಿ ದೂರವಿದ್ದ ಕೆಳಕಾನೂರು ಮನೆ ಕಾನೂರು ಮನೆತನಕ್ಕೆ ಸೇರಿದ ಆಸ್ತಿ, ಅಣ್ಣಯ್ಯಗೌಡರು ಚಂದ್ರಯ್ಯಗೌಡರ ಗದ್ದೆ ತೋಟಗಳನ್ನು ಇಲ್ಲಿ ಗಡಿ ಗುತ್ತಿಗೆಗೆ ಮಾಡಿಕೊಂಡು ಒಕ್ಕಲಾಗಿದ್ದರು. ಅವರು ಮೂವರು ಹೆಂಡತಿಯರು ಸತ್ತ ನಂತರ ನಾಲ್ಕನೆಯವಳನ್ನು ಮದುವೆಯಾಗಿದ್ದರು. ದ್ವಿತೀಯ ಪತ್ನಿಯಲ್ಲಿ ಹುಟ್ಟಿದವ ಓಬಯ್ಯ, ಚಂದ್ರಯ್ಯಗೌಡರಲ್ಲಿ ಮಾಡಿದ ಸಾಲ ತೀರಿಸಲಾಗಪ್ಪರ ಜೊತೆಗೆ ಓಬಯ್ಯನ ಅವಿವೇಕವೂ ಸೇರಿ ಅಣ್ಣಯ್ಯಗೌಡರು ಕೆಳಕಾನೂರನ್ನು ತ್ಯಜಿಸಬೇಕಾಗುತ್ತದೆ ಕಾನೂರು ಮನೆ ಪಾಲಾದ ನಂತರ ಹೂವಯ್ಯನು ತಾಯಿಯೊಡನೆ ಬಂದು ಕಳಕಾನೂರಿನಲ್ಲೇ ನೆಲೆಸುತ್ತಾನೆ.

- **ಕೊಪ್ಪ :** 'ಕಾನೂರು ಹೆಗ್ಗಡಿತಿ' ಕೃತಿಯಲ್ಲಿಯ ಬಹುತೇಕ ಪ್ರದೇಶವೆಲ್ಲ ತೀರ್ಥಹಳ್ಳಿ, ಕೊಪ್ಪದ ನಡುವೆ ಬರುವ ಪ್ರದೇಶವಾಗಿದೆ. ಚಂದ್ರಯ್ಯಗೌಡರು ಮಾಡುವ ಧರ್ಮಸ್ಥಳ ಯಾತ್ರೆ ಈ ಭೌಗೋಳಿಕ ಪರಿಮಿತಿಯನ್ನು ದಾಟುತ್ತದೆ. ತೀರ್ಥ ಹಳ್ಳಿಯಂತೆಯೇ ಕೊಪ್ಪ ಸಹ ಆಧುನಿಕತೆ ಮೈಗೂಡಿಸಿಕೊಂಡಿದ್ದಕ್ಕೆ, ಕೊಪ್ಪದ ಕಡೆಯಿಂದ ಬೈಸಿಕಲ್ಲೊಂದು ಪ್ರವೇಶಿಸುವ ದೃಶ್ಯದಲ್ಲಿ ಸೂಚನೆ ಸಿಗುತ್ತದೆ.

- **ಚಿಕ್ಕೂರು :** ತೋಟವನ್ನು ತಾವೇ ಸ್ವಯಂಶ್ರಮದಿಂದ ಸಂಪಾದಿಸಿದ್ದೆಂದು ಚಂದ್ರಯ್ಯಗೌಡರು ಘೋಷಿಸುವುದರಿಂದ ಅದು ಕಾನೂರಿಗೆ ಹತ್ತಿರದ ಪ್ರದೇಶವೆಂದು ತರ್ಕಿಸಬಹುದು. ಅಥವಾ ಇದೊಂದು ತೋಟದ ಹೆಸರಾಗಿರಲೂಬಹುದು.

- **ತಿರುಪತಿ :** ತಿರುಪತಿಯ ವೆಂಕಟರಮಣಸ್ವಾಮಿ ಮಲೆನಾಡಿನ ಅನೇಕ ಜನರಿಗೆ ಆರಾಧ್ಯದೈವ ಇದು ಕಾನೂರು ಪಸಕ್ಕೆ ಅತಿ ದೂರದ ಯಾತ್ರಾಸ್ಥಳ, ಗೌರಮ್ಮನಂಥವರು ಮಗಳಿಗೆ ಒಳಿತಾಗಲು ಇಂಥ ದೂರದ ದೇವರುಗಳಿಗೂ ಹರಸಿಕೊಳ್ಳುತ್ತಾರೆ.

- **ತೀರ್ಥಹಳ್ಳಿ :** 'ಕಾನೂರು ಹೆಗ್ಗಡಿತಿ' ಕೃತಿಯ ಆರಂಭದಲ್ಲೇ ತೀರ್ಥಹಳ್ಳಿಯ ಉಲ್ಲೇಖವಿದೆ. ಇದು ಮಲೆನಾಡಿನ ಪ್ರಮುಖ ನಗರ ಕೇಂದ್ರ, ತೀರ್ಥಹಳ್ಳಿಗೆ ಹೊಂದಿಕೊಂಡಂತೆ ಹರಿವ ತುಂಗಾನದಿಗೆ ಅಡ್ಡಲಾಗಿರುವ ಕಲ್ಲು ಸಾರದ ಮಾರ್ಗವಾಗಿಯೇ ಮೈಸೂರಿನಲ್ಲಿ ಓದುತ್ತಿದ್ದ ಹೂವಯ್ಯ ರಾಮಯ್ಯನವರು ಮಲೆನಾಡಿನ ಜಗತ್ತಿಗೆ ಮರುಪ್ರವೇಶ ಮಾಡುತ್ತಾರೆ, ಕಾನೂರಿನಂಥ ತುಂಗಾನದಿಯ ಆಚೆಗಿನ ಮಲೆನಾಡ ಜಗತ್ತಿಗೂ ಈಚೆಗಿನ ಹೊರಜಗತ್ತಿಗೂ

ತೀರ್ಥಹಳ್ಳಿ ಸಂಪರ್ಕ ಕಲ್ಪಿಸುವ ಕೇಂದ್ರವಾಗಿತ್ತು, ಪಟ್ಟಣ ಗಾಡಿಯ ಬಳಿ ಬರುವುದು ತಡವಾಗುವುದಕ್ಕೆ ತೀರ್ಥಹಳ್ಳಿಯಲ್ಲಿ ಹೋಟಲಿಗೆ ಹೋಗಿರುವ ಕಾರಣವನ್ನು ರಾಮಯ್ಯ ತರ್ಕಿಸುತ್ತಾನೆ, ಕಾದಂಬರಿಯ ಕಾಲದ ವೇಳೆಗೆ ತೀರ್ಥಹಳ್ಳಿಗೆ ಆಧುನಿಕತೆ ಪ್ರವೇಶಿಸಿದ್ದರ ಸೂಚನೆ ಇಲ್ಲಿ ಸಿಗುತ್ತದೆ. ತೀರ್ಥ ಹಳ್ಳಿಯಲ್ಲಿ ಮುತ್ತಳ್ಳಿ ಸ್ವಾಮಯ್ಯಗೌಡರ ಮಗ ಚೆನ್ನಯ್ಯ ಕಲಿತ ಅನೇಕ ವಿದ್ಯೆಗಳಲ್ಲಿ ಸಿಗರೇಟು ಸೇದುವುದೂ ಸೇರಿದೆ. ಚಂದ್ರಯ್ಯಗೌಡರು ತಂಟೆಕೋರ ಮಗ ವಾಸುವನ್ನು ತೀರ್ಥಹಳ್ಳಿಯ ಶಾಲೆಗೆ ಹಾಕುವುದಾಗಿ ಹೇಳುವುದರಿಂದ ಮಲೆನಾಡಿನ ಜನರಿಗೆ ಅದೊಂದು ವಿದ್ಯಾಕೇಂದ್ರವೂ ಆಗಿತ್ತೆಂಬ ಸೂಚನೆ ದೂರೆಯುತ್ತದೆ.

- **ಧರ್ಮಸ್ಥಳ :** ಮಲೆನಾಡಿನ ಜನರಿಗೆ ಗಟ್ಟದ ಕೆಳಗಿನ ಧರ್ಮಸ್ಥಳ ಒಂದು ಪ್ರಮುಖ ಧಾರ್ಮಿಕ ಕೇಂದ್ರ, ಅದು ಮೌಢ್ಯ ಬಿತ್ತುವ ಕೇಂದ್ರವೆಂದು ನಂಬುವ ಕೃತಿಕಾರರು ಅದಕ್ಕೆ ಅನೇಕ ಸಮರ್ಥನಗಳನ್ನು ನೀಡುತ್ತಾರೆ. ಸಂಕಟ ಬಂದಾಗ, ಪ್ರಮುಖವಾಗಿ ದೈಹಿಕವಾಗಿ ರೋಗ ಬಂದಾಗ ಅನೇಕ ಪಾತ್ರಗಳು ಧರ್ಮಸ್ಥಳದ ಮಂಜುನಾಥ ಭೂತಗಳಿಗೆ ಹರಿಸಿಕೊಂಡು ಕಾಣಿಕೆ ಅರ್ಪಿಸಲು ಸಂಕಲ್ಪಿಸುತ್ತವೆ ಮೈಮೇಲೆ ಬರುವ ದವ್ವಗಳಿಗೆ ಭಯ ಹುಟ್ಟಿಸಲೂ ಈ ದೇವಸ್ಥಾನದ ದೇವರ ಹೆಸರನ್ನು ಹೇಳುತ್ತಾರೆ. ಚಂದ್ರಯ್ಯಗೌಡರು ತಮ್ಮ ಅನಾರೋಗ್ಯ ಸುಧಾರಣೆಗೆ ಅಂತಿಮವಾಗಿ ಧರ್ಮಸ್ಥಳಕ್ಕೆ ಯಾತ್ರೆ ಹೊರಡುತ್ತಾರೆ.
- **ನೆಲ್ಲು ಹಳ್ಳಿ :** ನೆಲ್ಲು ಹಳ್ಳಿಯ ಪಪ್ಪಗೌಡರ ಊರು, ಈ ಕುಟುಂಬದವರು ಕಾನೂರು ಮನತನಕ್ಕೆ ಹೋಲಿಸಿದರೆ ಅಸಂಸ್ಕೃತರೂ, ಬಡವರೂ ಆಗಿರುತ್ತಾರೆ. ಚಂದ್ರಯ್ಯಗೌಡರ ಮೂರನೆಯ ಹೆಂಡತಿಯಾಗಿ ಸುಬ್ಬಮ್ಮನ್ನು ಮದುವೆ ಮಾಡಿಕೊಡಲು ಒಪ್ಪುತ್ತಾರೆ.
- **ಬಾವಿಮಕ್ಕಿ :** ಚಂದ್ರಯ್ಯಗೌಡರು ಸ್ವಯಾರ್ಜಿತವಾಗಿ ಗಳಿಸಿದ್ದ ಈ ಜಮೀನು – ಗದ್ದೆ ತನಗೇ ಸೇರಬೇಕೆಂದು ಹೇಳುವುದರಿಂದ ಕಾನೂರಿಗೆ ಸಮೀದಲ್ಲಿದೆಯೆಂದು ತಿಳಿಯಬಹುದು.
- **ಬಾಳೂರು :** ಕಾನೂರಿನ ಆಸುಪಾಸಿನ ಹಳ್ಳಿ, ಅದು ಕಾನೂರಿನಿಂದ ಇರುವ ದೂರ, ದಿಕ್ಕು ಇತ್ಯಾದಿ ವಿವರಗಳು ಕಾದಂಬರಿಯಲ್ಲಿ ದೊರೆಯುವುದಿಲ್ಲ. ಬಾಳೂರಿನ ಸಿಂಗೇಗೌಡರ ಮನೆತನ ಮಲೆನಾಡ ಒಕ್ಕಲಿಗರಲ್ಲಿ ಪ್ರಸಿದ್ಧವಾಗಿತ್ತೆಂದು ತಿಳಿದು ಬರುತ್ತದೆ. ಮಲೆನಾಡ ಒಕ್ಕಲಿಗರಲ್ಲಿ ಮದ್ಯಪಾನ ತ್ಯಜಿಸಲು ನಡೆದ ಆಂದೋಲನದಲ್ಲಿ ಸಿಂಗೇಗೌಡರು ಭಾಗಿಯಾದರೂ ಮದ್ಯಪಾನ ವರ್ಜಿಸುವ ಮಾನಪತ್ರಕ್ಕೆ ಸಹಿ ಹಾಕಲಿಲ್ಲ. ಹೆಂಡ, ಕಳ್ಳು ಬಿಡಲು ಅವರಿಗೆ ಇಷ್ಟವೂ ಇರಲಿಲ್ಲ.
- **ಬೈದೂರು :** ಕಾನೂರು ಆಸುಪಾಸಿನಲ್ಲಿರುವ ಮತ್ತೊಂದು ಹಳ್ಳಿ, ಅಲ್ಲಿನ ಬಸವೇಗೌಡರು ಸುತ್ತಲಿಗೆ ಪ್ರಸಿದ್ಧರಾಗಿದ್ದವರು. ಆ ಹಿರಿಯರು ಕಾನೂರು ಮನೆ ಹಿನ್ನೆಯ ವಿಚಾರದಲ್ಲಿ ಭಾಗಿಯಾಗುತ್ತಾರೆ.
- **ಬೈಲುಕೆರೆ :** ಮುತ್ತಳ್ಳಿ ಗೆ ಸಮೀಪದ ಬೈಲುಕರ ಕಾದಂಬರಿಯ ಆರಂಭದಲ್ಲಿ ಬರುತ್ತದೆ. ಚೆನ್ನಯ್ಯನು ಮೀನು ಸಿಕಾರಿ ಮಾಡುವ ಸ್ಥಳ.

- **ಮುತ್ತಳ್ಳಿ :** ತೀರ್ಥಹಳ್ಳಿ, ಕೊಪ್ಪ ಸರ್ಕಾರಿ ರಸ್ತೆಯಲ್ಲಿ, ಮುತ್ತಳ್ಳಿಯು ತೀರ್ಥಹಳ್ಳಿಗೆ ಸುಮಾರು ಮೂರು – ಮೂರುವರ ಮೈಲಿಯ ದೂರದಲ್ಲಿದೆ. ಮುತ್ತಳ್ಳಿಯ ಶ್ಯಾಮಯ್ಯಗೌಡರ ಹೆಂಚಿನಮನೆ ಮರಗಳ ಮರೆಯಲ್ಲಿದ್ದರೂ ರಸ್ತೆಗೆ ಕಾಣುವಂತಿತ್ತು. ಉಳಿದವು ಶ್ಯಾಮಯ್ಯಗೌಡರ ಒಕ್ಕಲುಗಳ ಹುಲ್ಲಿನ ಮನೆಗಳು ಮತ್ತು ಕೂಲಿಯಾಳುಗಳ ಗುಡಿಸಲುಗಳು.

- **ಮದ್ದೂರು :** ಕಾನೂರಿನ ನೆರೆಯ ಹಳ್ಳಿ, ಅಲ್ಲಿನ ಭಮ್ಮೇಗೌಡರ ಮನೆತನ ಪ್ರಸಿದ್ಧವಾದದ್ದು, ಭರಗೌಡರು ಕಾನೂರು ಮನೆ ಹಿಸ್ಸೆಯ ಪಂಚಾಯತಿಯಲ್ಲಿ ಭಾಗವಹಿಸುವ ಪ್ರಮುಖರಲ್ಲೊಬ್ಬರು.

- **ಮೇಗ್ರಳ್ಳಿ :** ಬಹುಶಃ ಇದು ಮೇಗರವಳ್ಳಿಯ ಗ್ರಾಮರೂಪವಿರಬೇಕು, ಮೇಗರವಳ್ಳಿ ಈಗಲೂ ತೀರ್ಥ ಹಳ್ಳಿ ಕೊಪ್ಪ ರಸ್ತೆಯಲ್ಲಿರುವ ಊರು. ಕಾದಂಬರಿ ನಡೆದ ಕಾಲಕ್ಕೂ ಅದು ದೊಡ್ಡ ಊರೇ ಆಗಿದ್ದಿತು. ಮೇಗ್ರಳ್ಳಿಯ ನಾಗಪ್ಪ ಹೆಗ್ಗಡೆಯು ಸಹ ಕಾನೂರು ಮನೆ ಹಿಸ್ಸ ಘಟನೆಯಲ್ಲಿ ಭಾಗಿಯಾಗುತ್ತಾರೆ. ಓಬಯ್ಯ ಮತ್ತು ಅವನ ತಂದೆ ಕೆಳಕಾನೂರು ಬಿಟ್ಟ ನಂತರ, ಹಿಂದಿನ ಯೋಜನೆಯಂತೆ ಸೀತೆಮನೆಗೆ ಹೋಗದ ಮೇಗರವಳ್ಳಿಯ ದೊಡ್ಡ ಹೆಗ್ಗಡೆಯವರೊಬ್ಬರ ಮನೆಯಲ್ಲಿ ಸಂಬಳಕ್ಕೆ ನಿಲ್ಲುತ್ತಾರೆ.

- **ಮೈಸೂರು :** ಮೈಸೂರು ಕಾದಂಬರಿಯಲ್ಲಿ ನಡೆಯುವ ಘಟನೆಯ ಕಾಲಕ್ಕೆ ಉನ್ನತ ವಿದ್ಯಾಭ್ಯಾಸದ ಕೇಂದ್ರವಾಗಿತ್ತು. ಕಾದಂಬರಿಯು ಇಪ್ಪತ್ತನೇ ಶತಮಾನದ ಆರಂಭದ ದಶಕದಲ್ಲಿನ ಬದುಕನ್ನು ಚಿತ್ರಿಸುವುದರಿಂದ ಮೈಸೂರಿನಲ್ಲಿ ವಿದ್ಯಾಭ್ಯಾಸದ ಸುಧಾರಣೆಯ ಗಾಳಿ ಬೀಸಿರುವುದನ್ನು ಊಹಿಸಬಹುದು, ಕಾದಂಬರಿಯಲ್ಲಿ ಮೈಸೂರಿನ ಪ್ರಸ್ತಾಪ ನೇರವಾಗಿ ಬಾರದಿದ್ದರೂ, ಹೂವಯ್ಯನ ನೆನಕೆಯಲ್ಲಿ ಮರುಕಳಿಸುತ್ತದೆ. ಅದರ ಜೊತೆಗೆ ಚಾಮುಂಡಿಬೆಟ್ಟ, ಅರಮನೆ, ಕುಕ್ಕನಹಳ್ಳಿ ಕೆರೆ, ಅಠಾರ ಕಚೇರಿ, ಹೈಸ್ಕೂಲು, ಕಾಲೇಜು, ಜನಸಂದಣಿಯ ಚಿತ್ರಗಳೂ ಬರುತ್ತವೆ. ಪ್ರಮುಖವಾಗಿ ಮೈಸೂರು ಶಿಕ್ಷಣ ಕೇಂದ್ರವಾಗಿರುವುದು ಚಿತ್ರಿತಗೊಂಡಿದೆ.

- **ಸಿದ್ದನ ಮಠ :** ಸಿದ್ದನ ಮಠವು ಕಾದಂಬರಿಯಲ್ಲಿ ಒಮ್ಮೆ ಮಾತ್ರ ಉಲ್ಲೇಖಗೊಂಡಿದೆ. ಸಿದ್ಧರ ಮಠದ ಪ್ರಾದ ಸಂಕಷ್ಟದಲ್ಲಿರುವವರಿಗೆ ಒಳಿತು ಮಾಡಬಹುದೆಂಬ ನಂಬಿಕೆ ಕೃತಿಯಲ್ಲಿನ ಪಾತ್ರಗಳಲ್ಲಿದೆ.

- **ಸಿಬ್ಬಲುಗುಡ್ಡೆ :** ಕುವೆಂಪು ಅವರ ಅನೇಕ ಕೃತಿಗಳಲ್ಲಿ ಸಿಬ್ಬಲುಗುಡ್ಡೆ ಪ್ರದೇಶ ಕಾಣಿಸಿಕೊಳ್ಳುತ್ತದೆ, ಸಹ್ಯಾದ್ರಿಯ ಬುಡದಲ್ಲಿರುವ ರಮಣೀಯ ದೃಶ್ಯ. 'ದೇವರು ರುಜು ಮಾಡಿದನು' ಕವನದಲ್ಲಿಯೂ ಅದರ ಉಲ್ಲೇಖವಿದೆ 'ಕಾನೂರು ಹೆಗ್ಗಡಿತಿ' ಕೃತಿಯಲ್ಲಿ ಶ್ಯಾಮಯ್ಯಗೌಡರ ಮಗಳು ಸೀತ್ರ ರಾಮಯ್ಯನೊಡನೆ ಮದುವೆ ನಿಶ್ಚಯವಾದಾಗ ಹೆದರಿ ವಿಸ್ಮೃತಿಗೊಳಗಾದಾಗ, ತಾಯಿ ಗೌರಮ್ಮನವರು ಮಗಳ ಆರೋಗ್ಯಕ್ಕಾಗಿ ಹರಿಸಿಕೊಳ್ಳುವ ದೇವತಾಸ್ಥಳಗಳಲ್ಲಿ ಸಿಬ್ಬಲುಗುಡ್ಡೆಯೂ ಒಂದು, ಸಿಬ್ಬಲುಗುಡ್ಡೆ ಕಾನೂರು ಹೆಗ್ಗಡಿತಿ ಕೃತಿ ನಡೆಯುವ ಪರಿಸರದಲ್ಲಿಯೇ ಬರುತ್ತದೆ.

- **ಸೀತೆಮನೆ :** ತೀರ್ಥಹಳ್ಳಿ ಕೊಪ್ಪದ ದಾರಿಯಲ್ಲಿರುವ ಕಾನೂರಿಗೆ ಸಮೀಪದಲ್ಲೇ ಸೀತೆ ಮನೆಗೆ ದಾರಿ ಅಗಚುತ್ತದೆ. ಕಾನೂರಿಗೆ ಸಮೀಪದ ಸಿತೇಮನೆಯ ಯಜಮಾನರು ಸಿಂಗಪ್ಪಗೌಡರು.
- **ಸೋಮೇಶ್ವರ :** ಕಾನೂರಿನಿಂದ ಆಗುಂಬೆಯನ್ನು ದಾಟಿ ಧರ್ಮಸ್ಥಳಕ್ಕೆ ಹೋಗುವ ದಾರಿಯಲ್ಲಿ ಸಿಗುವ ಊರು. ಪುಟ್ಟನ ತಂದೆ ಗಾಡಿಯಾಳು ನಿಂಗ, . ಚಂದ್ರಯ್ಯಗೌಡರನ್ನು ಧರ್ಮಸ್ಥಳಕ್ಕೆ ಕರೆದೊಯ್ದು ವಾಪಸ್ಸು ಬರುವಾಗ ವಾಂತಿಬೇಧಿಯಿಂದ ಸೋಮೇಶ್ವರದಲ್ಲಿ ಅಸು ನೀಗುತ್ತಾನೆ.

(ವಿವರಗಳಿಗೆ ನೋಡಿ ಅನುಬಂಧಗಳು)

ಮಲೆಗಳಲ್ಲಿ ಮದುಮಗಳು ಕೃತಿಯ ಮೊದಲು ಬರುವ ಚಿತ್ರವು ಹೀಗೆ ಇದೆ:

ಸಿಂಬಾವಿ ಭರಮೈಹೆಗ್ಗಡೆಯವರ ದೊಡ್ಡ ಚೌಕಿಮನೆಯ ಹೆಬ್ಬಾಗಿಲು ದಾಟಿದ ಅವರ ಜೀತದಾಳು, ಹೊಲೆಯರ ನಾಯಿಗುತ್ತಿ, ಹೊರ ಅಂಗಳದ ಕಡೆಯ ಮೆಟ್ಟಿಲಲ್ಲಿ ನಿಂತು ಆಕಾಶದ ಕಡೆಗೆ ಬಿಡುಗಣ್ಣಾಗಿ ನೋಡುತ್ತಿದ್ದನು. ಮನೆಯ ಪಕ್ಕದಲ್ಲಿದ್ದ ಅಡಕೆಯ ತೋಟದಿಂದ, ಒಂದು ಕೈಯಲ್ಲಿ ಒಂದು ಕರಿಬಾಳೆಯ ಗೊನೆಯನ್ನೂ ಮತ್ತೊಂದು ಕೈಯಲ್ಲಿ ಬಾಳೆಯೆಲೆಗಳ ಕಟ್ಟೊಂದನ್ನೂ ಹಿಡಿದು, ಆರಡಿ ಎತ್ತರವಿದ್ದರೂ ಅತಿ ನಿಧಾನವಾಗಿ ಬರುತ್ತಿದ್ದ ಮನೆಗೆಲಸದ ಮರಾಟಿ ಮಂಜನು "ಏನೋ, ಗುತ್ತೀ, ಮುಗಿಲ ಕಡೆ ನೋಡ್ತಾ ನಿಂತೆ? ದೂರಾ? ಒಳ್ಳೆ ದರೋಬಸ್ತಾಗಿದ್ದೀಯಲ್ಲಾ! ಆ" ಎಂದು ತನ್ನ ನಡೆಗಿಂತಲೂ ನಿಧಾನವಾಗಿ ರಾಗಧ್ವನಿಯಿಂದ ಪ್ರಶ್ನಿಸುತ್ತಾ ಹತ್ತಿರಕ್ಕೆ ಬಂದನು.

ಬಲದಲ್ಲಿ ಮಂಜನಿಗಿಂತ ಮಿಗಿಲಾಗಿದ್ದರೂ ಎತ್ತರದಲ್ಲಿ ಬಹಳ ಕುಳ್ಳಾಗಿದ್ದ ಗುತ್ತಿ ಮುಗಿಲನ್ನೂ ಮುಖವನ್ನೂ ಒಟ್ಟಿಗೆ ನೋಡುತ್ತಾ "ಹಾಳ್ ಮಳೆ ಸಾಯ್ತದೋ ಏನೋ ಅಂತ ನೋಡ್ತಾ ಇದ್ದೆ" ಎಂದು, ಸ್ವಲ್ಪ ಅವಸರದಿಂದ "ಮಳೆ ಫಕ್ಕನೆ ಬತ್ತದೇನ್ರೋ?" ಎಂದು ಪ್ರಶ್ನಿಸಿದನು.

ಮಂಜನೂ ತನ್ನ ಕುತ್ತಿಗೆಯ ನರಗಳು ಎದ್ದು ಕಾಣುವ ರೀತಿಯಲ್ಲಿ ಮುಗಿಲ ಕಡೆಗೆ ನೋಡುತ್ತಾ "ನೀನು ಎಲ್ಲಿಗೆ ಹೋಗಬೇಕು ಹೇಳು ? ಆ" ಎಂದನು.(ಮಲೆಗಳಲ್ಲಿ ಮದುಮಗಳು; ಕುವೆಂಪು ; ಉದಯರವಿ ಪ್ರಕಾಶನ ಮೈಸೂರು ; ಪುಟ–೧)

ಕಾದಂಬರಿಯ ಕೊನೆಯಲ್ಲಿ ಬರುವ ಒಂದು ವಿಶಿಷ್ಟವಾದ ಚಿತ್ರವು ಇದೆ. "ಚಿನ್ನಮ್ಮ ಪೀಂಚಲು ಇಬ್ಬರೂ ಮಾತು ನಿಲ್ಲಿಸಿ, ನಿದ್ದೆ ಮಾಡುವವರಂತೆ ನಟಿಸುತ್ತಾ, ಗಡದ್ದಾಗಿ ಹೊದ್ದುಕೊಂಡು ಬೆಚ್ಚಗೆ ಮಲಗಿದ್ದರು: ಮುಟ್ಟಾದ ಮೂರು ದಿನವಾದರೂ ಮಲೆನಾಡಿನ ಮಹಿಳೆಯರಿಗೆ ನಿವೃತ್ತಿಜೀವನದ ವಿರಾಮದ ಹಕ್ಕು ಇರುತ್ತಿತ್ತಷ್ಟೆ!" ।(ಮಲೆಗಳಲ್ಲಿ ಮದುಮಗಳು; ಕುವೆಂಪು ; ಉದಯರವಿ ಪ್ರಕಾಶನ ಮೈಸೂರು ; ಪುಟ–೭೧೨)

ಇದರೊಂದಿಗೆ 'ಪಿರಿಯಾಪಟ್ಟಣ ಕಾಳಗ' ಸರ್ಜಾರಂಗಪ್ಪನಾಯಕ ಲಾವಣಿ ಮೊದಲಾದವುಗಳಲ್ಲಿಯೂ ಬ್ರಿಟೀಶರ ವಿರುದ್ಧ ಹೋರಾಟದ ಕಥಾನಕಗಳಿವೆ. ಹಾಗೆಯೇ

'ಶಿವಪುರ ಸತ್ಯಾಗ್ರಹ' 'ಈಸೂರು ಹೋರಾಟ' ಇತ್ಯಾದಿ ಮಾದರಿಗಳೂ ಕರ್ನಾಟಕದಲ್ಲಿ ಜರುಗಿವೆ. ಒಟ್ಟಾಗಿ ಇವೆಲ್ಲಾ ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಎತ್ತಿಹಿಡಿದಿವೆ. ಈ ರೀತಿಯ ಹೋರಾಟಗಳು ಪಠ್ಯಪುಸ್ತಕಗಳ ದಾಖಲೆಗಳಲ್ಲಿ ಯಾರು ಈ ರೀತಿಯ ಹೋರಾಟಗಳಲ್ಲಿ ಭಾಗವಹಿಸಿದರು. ಅವರ ಹೆಸರೇನು ಇತ್ಯಾದಿ ಅನೇಕ ಸಂಗತಿಗಳು ನಮ್ಮ ಗಮನಕ್ಕೆ ಬಾರದಿರುವ ವಿಷಯಗಳಾಗಿವೆ. ಈ ದೃಷ್ಟಿಯಿಂದ ಇನ್ನೂ ಅನೇಕ ಸಂಗತಿಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ವಾಸ್ತವವಾಗಿ ಬೇಂದ್ರೆಯವರು ನವೋದಯ ಕಾಲದ ಅತ್ಯಂತ ಶಕ್ತಿಶಾಲಿಯಾದ ಕವಿಯಾಗಿದ್ದಾರೆ. ಅವರು ರೊಮಾಂಟಿಕ್ ಪರಂಪರೆಯನ್ನು ತುಂಬಾ ಚೆನ್ನಾಗಿ ಬಳಸಿದರು. ಅವರು ಪದ್ಯಗಳ ಮೂಲಕ ಜನರನ್ನು ಬೇರೆ ಬೇರೆ ಬಗೆಯಲ್ಲಿ ತಲುಪಿದ್ದು ನಿಜವಾಗಿಯೂ ಮಹತ್ವದ ಸಂಗತಿಯು ಆಗಿದೆ. ಕವಿ ಮತ್ತು ಅವನ ಅನುಭವಗಳು ವ್ಯಕ್ತವಾಗುವುದು ಭಾಷೆಯಲ್ಲಿ ಎನ್ನುವುದೂ ಅಷ್ಟೇ ನಿಜ. ಅವರ ಕವಿತೆಗಳ ಅನುಭವವು ಹೆಚ್ಚು ವಿಶಿಷ್ಟವಾಗಿದೆ. ಅದರಲ್ಲಿ ಜೀವನದ ಅನೇಕ ಸಂಗತಿಗಳು ಸೇರಿಕೊಂಡಿವೆ. ಕವಿ ಮತ್ತು ಅವನ ದೃಷ್ಟಿಕೋನಗಳು ಒಂದಲ್ಲಾ ಒಂದು ರೀತಿಯಲ್ಲಿ ವ್ಯಕ್ತವಾಗುತ್ತವೆ. ಅವನ ಅನುಭವ ಮತ್ತು ಅದರ ಸಂಯೋಜನೆಯು ಪದಗಳಲ್ಲಿ ವ್ಯಕ್ತವಾಗುತ್ತವೆ. ಹಾಗೆ ನೋಡುವುದಿದ್ದರೆ ಭೃಂಗದಾ ಬೆನ್ನೇರಿ ಕಲ್ಪನಾ ವಿಲಾಸ ಎನ್ನುವುದು ಕವಿತೆಗಳ ಬಹಳ ದೊಡ್ಡದಾದ ಘೋಷ ವಾಕ್ಯವೂ ಆಗಿದೆ. ಹತ್ತೊಂಬತ್ತನೆಯ ಶತಮಾನವು ನಮಗೆ ಬೇರೆ ಬೇರೆ ಅನುಭವಗಳು ರೂಪುಗೊಂಡ ಕಾಲವೂ ಆಗಿದೆ. ಕಾಲ ಮತ್ತು ಅದರ ಪರಿಣಾಮಗಳು ಬೇಂದ್ರೆಯವರ ಕವಿತೆಗಳಲ್ಲಿ ಕಾಣಿಸುತ್ತದೆ.

ಹತ್ತೊಂಬತ್ತನೆಯ ಶತಮಾನದ ಕೆಲವು ತಲ್ಲಣಗಳು ಅವರ ಕವಿತೆಗಳಲ್ಲಿ ಕಾಣಿಸುತ್ತದೆ. ರೊಮಾಂಟಿಸಿಸಂ ಒಂದು ದೃಷ್ಟಿಯಿಂದ ಅತ್ಯಂತ ಮಹತ್ವದ ಕ್ರಾಂತಿಕಾರಕವಾದ ಹೆಜ್ಜೆಯೂ ಹೌದು. ನವೋದಯವು ಸಮಾಜ ಮತ್ತು ಅದರ ಹಿಂದೆ ಏನು ನಡೆಯುತ್ತಿದ್ದವೋ ಅದರ ದಾಖಲೆಯೂ ಆಗಿದೆ. ನವೋದಯವು ಅನೇಕ ರೀತಿಯ ಅರಿವನ್ನು ಪಡೆದುಕೊಂಡಿತ್ತು. ಪುನರುಜ್ಜೀವನ, ರಾಷ್ಟ್ರೀಯತೆ, ಶಿಕ್ಷಣ, ನಿಸರ್ಗವಿಜ್ಞಾನವನ್ನು ಕನ್ನಡದಲ್ಲಿ ಆಗ ಅನೇಕರು ಕಲಿತಿದ್ದರು. ಇದರಿಂದ ಬದಲಾಗುತ್ತಿರುವ ಸಮಾಜ ಮತ್ತು ಅದರ ಅರಿವು ಅಗಿನ ಕವಿತೆಗಳಲ್ಲಿ ಕಾಣಿಸುತ್ತದೆ. ಅದರಲ್ಲಿಯೂ ಬೇಂದ್ರೆಯವರ ಕವಿತೆಗಳು ಅತ್ಯಂತ ಮಹತ್ವದ್ದಾಗಿದೆ. ಅದರಲ್ಲಿ ಚಿತ್ರದ ಗುಣವಿದೆ. ಅದರಲ್ಲಿ ಶಬ್ದಚಿತ್ರವಿದೆ. ವಿವರಣೆಯು ಇದೆ. ನೋಟದ ಶಕ್ತಿಯು ಇದೆ. ವಾಸ್ತವವಾಗಿ ಅವರ ಜೋಗಿ ಮುಂತಾದ ಕವಿತೆಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಅವರ ಕವಿತೆಗಳಲ್ಲಿ ಹೊಸಭಾವದ ಕಡೆಗೆ ತುಡಿತವೂ ಇದೆ. ಆಗ ತಾನೇ ರೂಪುಗೊಂಡಿದ್ದ ಹೊಸಭಾವನೆ ಮತ್ತು ಅದರ ಪರಿಣಾಮವನ್ನು ಅವರ ಕವಿತೆಗಳು ಹೇಳುತ್ತವೆ. ಒಂದು ಹುಣಸೆಯ ಮರವು ಹೊಸ ಕವಿತೆಗೆ ಕಾರಣವಾಗುತ್ತದೆ. ಒಂದು ನೀರಿನ ಚೆಲ್ಲಾಟವೂ ಮೂಲಭೂತವಾಗಿ ಒಂದು ಶಕ್ತಿಯನ್ನು ಕೊಡುತ್ತದೆ. ಭಾವನೆಯು ಸ್ಫೂರ್ತಿಯನ್ನು ಹೇಳುತ್ತದೆ. ಅದು ಮನಸ್ಸನ್ನು ಸೂಚಿಸುತ್ತದೆ. ಮನಸ್ಸು ಎಷ್ಟು ಕ್ರಿಯಾಶೀಲವಾಗಲು ಸಾಧ್ಯ ಎನ್ನುವುದನ್ನು ಅದು ಹೇಳುತ್ತದೆ. ಅದರಲ್ಲಿ ಭಾವನೆಯು ಅತ್ಯಂತ ಮುಖ್ಯವಾದ್ದು. ಬೇಂದ್ರೆಯವರು ಭಾಷೆಯ ಸಾಂಪ್ರದಾಯಿಕವಾದ ಬಳಕೆಯನ್ನು ಬಿಟ್ಟು ಹೊಸದಾದ ಬಳಕೆಯನ್ನು ರೂಪಿಸಿದರು. ಅವನ ನಿರೂಪಣೆಯ ಹೊಸತನವು ಹೊಸದಾದ ವಸ್ತುವನ್ನು ಹೇಳುತ್ತದೆ.

ವ್ಯಕ್ತಿಯ ನಿಜವಾದ ಒಂದು ಕಲ್ಪನೆಯ ಶಕ್ತಿಯು ಹೇಗೆ ಹೊಸದಾದ ಪರಿಣಾಮವನ್ನು ಬೀರಲು ಸಾಧ್ಯ ಎನ್ನುವುದನ್ನು ಅವರ ಕವಿತೆಗಳು ಹೇಳುತ್ತವೆ. ಹೆಣ್ಣು ಮಕ್ಕಳು ತಲೆ ಬಾಚಿಕೊಳ್ಳುವುದಂಥ ಸಣ್ಣ ಸಂಗತಿಯನ್ನು ಕೂಡಾ ತಿರುಮಲಾಂಬ ಬರೆದಿದ್ದಾರೆ. ಕುತೂಹಲದಾಯಕವಾದ ಸಂಗತಿಯೆಂದರೆ ವಾಸ್ತವತೆ ಮತ್ತು ಅದರ ಮಾರ್ಗವನ್ನು ಅವರು ಬಿಟ್ಟರು. ಲೌಕಿಕ ಮತ್ತು ಅಲೌಕಿಕದ ನಡುವೆ ಒಂದು ಬೆಸುಗೆಯು ಅವರ ಕಾವ್ಯದ ಮುಖ್ಯವಾದ ಶಕ್ತಿಯೂ ಆಗುತ್ತದೆ. ರೊಮಾಂಟಿಕ್ ಎನ್ನುವುನ್ನು ಅನೇಕರು ಬರೀ ಒಂದು ರತಿಪ್ರತೀಕವೆಂದು ಭಾವಿಸಿದ್ದು ನಿಜ. ಆದರೆ ವಿಷಯವು ಹಾಗೆ ಇಲ್ಲ. ಅವರಲ್ಲಿ ಅದು ಬೇರೆ ಬೇರೆ ರೂಪಕಗಳ ಸಂಗತಿಯೂ ಆಗುತ್ತದೆ. ಕಾರಂತರ ಅನೇಕ ಕಾದಂಬರಿಗಳು ವಾಸ್ತವವವಾನ್ನು ಹೇಳುತ್ತವೆ. ಮಿರ್ಜಿಯವರ ನಿಸರ್ಗ, ರಾವ್ ಬಹದ್ದೂರರ ಗ್ರಾಮಾಯಣ, ಕುವೆಂಪುರವರ ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಮುಂತಾದವು ವಾಸ್ತವವನ್ನು ಹೆಚ್ಚು ಒಪ್ಪಿಕೊಂಡು ಮುಂದುವರಿದಿದ್ದವು

ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಜರುಗಿದ ಹೊಸ ರೀತಿಯ ಕಾನೂನು ನಾಗರಿಕತೆ ಅಧಿಕಾರದ ವ್ಯಾಖ್ಯೆಗಳು ಅದರ ಒಡಲಿನಿಂದಲೇ ರಾಷ್ಟ್ರೀಯತೆ ಈ ಯಾವ ಸಂಗತಿಗಳು ಭಾರತದ ಅನೇಕರಿಗೆ ಮುಖ್ಯ ಸಮಸ್ಯೆಯಾಗಲಿಲ್ಲ. ಯಾವ ದೊರೆ ಬಂದರೇನು ಹೋದರೇನು ರಾಗಿ ಬೀಸುವುದು ತಪ್ಪುವುದಿಲ್ಲ. ವಸಾಹತುಕಾಲದಲ್ಲಿ ಬಂದ ಹೊಸ ನಾಗರಿಕ ವ್ಯಾಖ್ಯೆ ಯುರೋಪಿಯನ್ ಉದ್ದೇಶಕ್ಕೆ ತಕ್ಕಂತೆ ಇತ್ತು. ೧೮೬೦ ರಲ್ಲಿ ಲಾರ್ಡ್ ಮೆಕಾಲೆ ರೂಪಿಸಿದ 'ಇಂಡಿಯನ್ ಪಿನಲ್ ಕೋಡ್' ಇದಕ್ಕೆ ಒಂದು ಉದಾಹರಣೆ ಮಾತ್ರ. ಚರಿತ್ರೆ; ಮಾನವಶಾಸ್ತ್ರ, ಮುಂತಾದವುಗಳನ್ನು ಯುರೋಪಿಯನ್ ಕಣ್ಣಿಂದಲೇ ನೋಡಬೇಕಾಗಿಲ್ಲ. ಇಂಡಿಯನ್ ಪಿನಲ್ ಕೊಡ್ ರಚಿಸುವಾಗ ಅದರ ಹಿಂದಿದ್ದ ಉದ್ದೇಶ ಸ್ಪಷ್ಟ ವಸಾಹತುಪೂರ್ವದ ನ್ಯಾಯ ಕಾನೂನು ಮುಂತಾದವುಗಳು ಬರ್ಬರವಾದುದು ಅನಾಗರಿಕವೆಂದು ಅದು ಸೂಚಿಸಬೇಕಾಗಿತ್ತು. ಹೊಸ ನಾಗರಿಕ ವ್ಯಾಖ್ಯೆಯಲ್ಲಿ ಜನರು ಕೇವಲ ನಾಗರಿಕರು ಅಥವಾ ಪ್ರಜೆಗಳು. ಅದರಾಚೆಗೆ ಬೇರೊಂದು ಮಾದರಿಗಳು ವಸಾಹತು ಆಡಳಿತಗಾರರಿಗೆ ಯುರೋಪಿಯನ್ ಮಾನವಶಾಸ್ತ್ರಜ್ಞರು ನಾಗರಿಕರು ಮತ್ತು ಅನಾಗರಿಕರು ಎಂದು ಎರಡು ವರ್ಗಿಕರಣ ಮಾಡಿ ಅದರ ಭಾರತದ ಅನೇಕ ಜಾತಿಗಳನ್ನು 'ಜನಾಂಗ' (ಛಿಂಟಟಣಟಿಣಥಿ) ಎಂಬ ವ್ಯಾಖ್ಯೆಗೆ ಗುರಿಪಡಿಸಿದರು. ಈಗಲೂ ನಮ್ಮ ಜಾನಪದ ಅಧ್ಯಯನಗಳು ಇದೇ ಧಾಟಿಯಲ್ಲಿ ಮುಂದುವರಿಸಿದೆ. ಅಂದರೆ; ಅಧ್ಯಯನಕಾರರಿಗೆ 'ಜಾತಿ' ಅಧ್ಯಯನಕ್ಕೆ ಇರುವ ಒಂದು ವಸ್ತು ಮಾತ್ರ. ವಸಾಹತು ರೂಪಿಸಿದ ನಮ್ಮ ಪ್ರಜ್ಞೆಯನ್ನು ನಾವು ಬದಲಾಯಿಸಲು ಹೊರಡುವಾಗಲೂ ಇದೇ ವ್ಯಾಖ್ಯಾನವನ್ನು ಆಧರಿಸಿಕೊಂಡಿರುತ್ತೇವೆ. ನಾವು ನಮ್ಮ ಅನುಭವಗಳನ್ನು ನಮ್ಮ ಕಥನಗಳನ್ನು ನಮ್ಮದೇ ರೀತಿಯಲ್ಲಿ ಕಟ್ಟಲು ಸಾಧ್ಯ. ಮತ್ತು ನಮ್ಮ ಸಮಾಜದಲ್ಲಿರುವ ವಿಧಿನಿಷೇಧಗಳು ಅವುಗಳ ಸಾಂಸ್ಕೃತಿಕ ಅರ್ಥವಂತಿಕೆ, ಖಾಸಗಿ ನಿಯಮಾವಳಿಗೆ ಇರುವ ಪ್ರಾಶಸ್ತ್ಯವನ್ನು ಗುರುತಿಸಲು ನಮ್ಮ ಜ್ಞಾನಪರಂಪರೆಯನ್ನೇ ಆಧರಿಸಬೇಕಾಗುತ್ತದೆ. ಅಲ್ಲಿಯ 'ಪ್ರಗತಿಪರ ಚಿಂತನೆಗಳು' ಇಲ್ಲಿಗೆ ಯಥಾ ಪ್ರಕಾರ ಅನ್ವಯಿಸಲು ಬರುತ್ತದೆಯೆ? ಅಥವಾ ದೇವರಿಲ್ಲವೆಂದು ಹೇಳಿದಲ್ಲಿಗೆ ಪ್ರಗತಿಪರರಾಗುತ್ತೇವೆಯೆ?

ಆಗ ಮಲೆನಾಡಿನಲ್ಲಿ ನಂಟರ ಮನೆಗೆ ಹೋದರೆ ಮೊದಲು ಕಾಲು ತೊಳೆಯಲು ನೀರು ಕೊಡುತ್ತಿದ್ದರು. ಆಮೇಲೆ ತಾಂಬೂಲ ನಿವೇದನವಾಗುತ್ತಿತ್ತು. ತರುವಾಯ ಹುರಿಮಾಂಸ ಅಥವಾ ಉಪ್ಪುಮೀನು ಅಥವಾ ಉಪ್ಪಿನಕಾಯಿ– ಇತ್ಯಾದಿ ಯಾವುದಾದರೊಂದು ವ್ಯಂಜನದ ಸಮೇತವಾಗಿ, ಬಾಯಿ ಲೊಚಗುಟ್ಟುವಷ್ಟರ ಮಟ್ಟಿಗೆ ಹುಳಿ ಹುಳಿಯಾದ ಹೆಂಡ ಕಳ್ಳುಗಳನ್ನು ಆದರಪೂರ್ವಕವಾಗಿ ವಿನಿಯೋಗಿಸಿ ಅತಿಥಿಸತ್ಕಾರ ಮಾಡುತ್ತಿದ್ದರು. ಈಗಿನವರು ಕಾಫಿ ಕೊಡುವುದನ್ನೂ ಕುಡಿಯುವುದನ್ನೂ ಹೇಗೆ ಸುಧಾರಣೆಯ ಚಿಹ್ನೆಯೆಂದೂ ನಾಗರಿಕತೆಯ ಗೌರವವೆಂದೂ ಭಾವಿಸುತ್ತಿರುವರೊ ಹಾಗೆಯೆ ಆಗಿನವರು ಹೆಂಡ ಕಳ್ಳುಗಳನ್ನು ಸನ್ಮಾನಿಸುತ್ತಿದ್ದರು.

ಆ ಪ್ರಾಂತದಲ್ಲಿ ಮೊಟ್ಟಮೊದಲು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಜನರಿಂದ ವಿದ್ವನ್ಮಣಿಯೆಂದು ಸಂಭಾವಿತರಾದ ಮಹನೀಯರೊಬ್ಬರು ಪಾದ್ರಿಗಳ ಮತ್ತು ಕೆಂಪು ಮುಖದ ರೆವರೆಂಡುಗಳ ಪ್ರಭಾವಕ್ಕೂ ಮೆಚ್ಚಿಗೆಗೂ ಪಾತ್ರರಾಗಿ, ತಮ್ಮ ಮತದ ಆಚಾರ ಅನಾಚಾಗಳೆರಡನ್ನೂ ಒಂದೇ ಉಸಿರಿನಲ್ಲಿ ನಿಂದಿಸಿ ಭಾಷಣ ಮಾಡತೊಡಗಿದರಂತೆ; ತಾವು ಕ್ರಿಸ್ತಮತಕ್ಕೆ ಸೇರುವುದಾಗಿಯೂ ಸಾರಿದರಂತೆ. ಪಾದ್ರಿಗಳ ಮತ್ತು ರೆವರೆಂಡ್ ದೊರೆಗಳ ಮೆಚ್ಚುಗೆಗಾಗಿ ತಮ್ಮ ಬಂಧುಗಳಲ್ಲಿಯೂ ಕೆಲವನ್ನು ಕ್ರಿಸ್ತಮತಕ್ಕೆ ಸೇರಿಸಿ, ತಾವು ಮಾತ್ರ 'ಸೇರುತ್ತೇನೆ, ಸೇರುತ್ತೇನೆ' ಎಂದು ಹೇಳುತ್ತಿದ್ದು, ಕಡೆಗೂ ಭಾರತೀಯ ಕ್ರೈಸ್ತ ಜನಸಂಖ್ಯೆಗೆ ಸ್ವಲ್ಪವೂ ಲಾಭವಾಗದ ರೀತಿಯಲ್ಲಿ ಕೈಲಾಸವಾಸಿಯೆ ಆಗಿಬಿಟ್ಟರಂತೆ!'[೭]

ಕುವೆಂಪುರವರ 'ಕಾನೂರು ಹೆಗ್ಗಡಿತಿ' ಕಾದಂಬರಿಯು ಸಾಂಪ್ರದಾಯಿಕವಾದ ಕೌಟುಂಬಿಕ ವ್ಯವಸ್ಥೆಯ ಅಸಮಾನತೆ, ಅಮಾನವೀಯತೆ, ಅಶಾಂತಿ, ಶೋಷಣೆ, ಕ್ರೌರ್ಯ, ಸ್ವಾರ್ಥ ಇವುಗಳಿಂದ ರೋಗಪೀಡಿತವಾಗಿರುವ ವಾಸ್ತವ ಚಿತ್ರವನ್ನು ಅನಾವರಣ ಗೊಳಿಸುತ್ತದೆ. ಅದಕ್ಕೆ ಕಾರಣಗಳನ್ನು ಶೋಧಿಸುತ್ತದೆ. ಈ ಅಮಾನವೀಯವಾದ ವ್ಯವಸ್ಥೆಯನ್ನು ವಿದ್ಯೆ, ವಿಜ್ಞಾನ, ವೈಚಾರಿಕತೆ, ಮಾನವೀಯತೆ, ಸಮಾನತೆ ಈ ಅಸ್ತ್ರಗಳಿಂದ ಮಾನವೀಯಗೊಳಿಸಬೇಕೆಂಬ ಆದರ್ಶವನ್ನು ಕಲಾತ್ಮಕವಾಗಿ ಮುಂದಿಡುತ್ತದೆ.

ಮನುಷ್ಯನ ಬದುಕನ್ನು ಇದು ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಎಂದು ವಿಭಾಗಿಸಿಕೊಂಡು ಅರ್ಥ ಮಾಡಿಕೊಳ್ಳುವುದು ಮಹಾ ತ್ರಾಸದಾಯಕ. ಏಕೆಂದರೆ ಮಾರುಕಟ್ಟೆಯಲ್ಲಿ ವಸ್ತುಗಳನ್ನು ವಿಂಗಡಿಸಿದಂತೆ ಬದುಕನ್ನು ವಿಂಗಡಿಸಲು ಸಾಧ್ಯವಾಗುವುದಿಲ್ಲ, ಒಟ್ಟು ಬದುಕಿನಲ್ಲಿ ಒಂದರೊಳಗೊಂದು ಬೆರೆತುಹೋಗಿರುತ್ತದೆ. ಆದ ಬದುಕನ್ನು ಒಳಗೊಳ್ಳುತ್ತಿರುತ್ತದೆ. ಆದರೂ ಬದುಕು ಕೌಟುಂಬಿಕವಾಗಿಯೇ ಇದು ಕೌಟುಂಬಿಕ ಬದುಕೆಂದು ಹೇಳುತ್ತಿರುವಾಗಲೇ ಅದು ಸಾಮಾಜಿಕವು, ಆರ್ಥಿಕವೂ ಪ್ರಧಾನವಾಗುತ್ತದೆ. ಕೌಟುಂಬಿಕ ಬದುಕಿನ ರೀತಿ–ನೀತಿಗಳು ಸಮಗ್ರ ಬದುಕನ್ನು ರೂಪಿಸುವಂತಾಗಬೇಕು.

ಕುವೆಂಪು ತಮ್ಮ ಕಾದಂಬರಿಗಳಲ್ಲಿ ಬ್ರಾಹ್ಮಣರು, ಗೌಡರು, ಸೇರೆಗಾರರು, ಹಳೇ ಪೈಕದವರು, ತಟ್ಟರು, ಬೇಲರು, ಬಿಲ್ಲವರು, ಹಸಲರು ಹಾಗೂ ಹೊಲೆಯರು. ಹೀಗೆ ಹಿಂದೂಧರ್ಮದ

---

[೭] (ಪುಟ್ಟಪ್ಪ ಕೆ. ವಿ, ಕಾನೂರು ಹೆಗ್ಗಡಿತಿ, ೧೯೬೦, ಪುಟ. ೧೯೧–೧೯೨.

ವಿವಿಧ ಜಾತಿಗಳ ಕೌಟುಂಬಿಕ ಬದುಕನ್ನು ಚಿತ್ರಿಸಿದ್ದಾರೆ. ಕೌಟುಂಬಿಕ ಬದುಕನ್ನು, ಅದರ ಆಗು – ಹೋಗುಗಳನ್ನು ಜಾತಿ ಮತ್ತು ಧರ್ಮದ ಸಂಪ್ರದಾಯಗಳು ನಿಯಂತ್ರಿಸುವುದು ಮುಖ್ಯವಾಗಿ ಕಂಡುಬರುತ್ತದೆ. ಈ ಸಂಪ್ರದಾಯ, ನಂಬಿಕೆಗಳ ಹಿನ್ನೆಲೆಯಲ್ಲಿ ಪುರೋಹಿತಶಾಹಿ, ಜಮೀನ್ದಾರಿ ಹಾಗೂ ಬಂಡವಾಳಶಾಹಿ ಮೌಲ್ಯಗಳು ಪ್ರಧಾನವಾಗಿರುವುದನ್ನು ಸೂಚಿಸುತ್ತಾರೆ. ವಿವಾಹ, ಹುಟ್ಟು–ಸಾವು, ಪೂಜೆ ಮೊದಲಾದ ಆಚರಣೆಗಳ ಬಗ್ಗೆ ಒಂದು ಕುಟುಂಬಕ್ಕೆ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಜಾತಿ–ಧರ್ಮಾಧಾರಿತವಾದ ವ್ಯವಸ್ಥೆ ನೀಡುವುದಿಲ್ಲ. ಅವಿಭಕ್ತ ಕುಟುಂಬದ ಯಜಮಾನನು ಇತರ ಸದಸ್ಯರ ಬೇಕು–ಬೇಡಗಳನ್ನು ಅರ್ಥಮಾಡಿಕೊಳ್ಳಲು ಮುಂದಾಗದೆ ತನ್ನ ಇಷ್ಟದಂತೆ ಅಧಿಕಾರದ ದರ್ಪದಿಂದ ಕಾರ್ಯಪ್ರವೃತ್ತನಾಗುವುದರಿಂದ ಕುಟುಂಬದಲ್ಲಿ ಬಿರುಕುಂಟಾಗುವುದನ್ನು ಅದರಿಂದ ಕುಟುಂಬ ಒಡೆದು ವಿಭಕ್ತವಾಗುವುದನ್ನು 'ಕಾನೂರು ಹೆಗ್ಗಡಿತಿ' ಕಾದಂಬರಿಯ ಕಾನೂರು ಚಂದ್ರಯ್ಯ ಗೌಡರ ಮನೆತನದ ಕುಸಿತ ಮತ್ತು ವಿಮರ್ಶಕ ಕೆ.ಎಸ್. ಭಗವಾನ್ರವರು ಮೂಢನಂಬಿಕೆಗಳನ್ನು ಪುರೋಹಿತಶಾಹಿ ಹುಟ್ಟು ಹಾಕಿದ್ದು ಅದರ ಪ್ರಭಾವ ಬ್ರಾಹ್ಮಣೇತರ ಜಾತಿಗಳಲ್ಲಿ ಹೇಗೆ ಉಂಟಾಗಿದೆ. ಎಂಬುದನ್ನು ಹೀಗೆ ಗುರುತಿಸುತ್ತಾರೆ. ಕಾನೂರು ಚಂದ್ರಯ್ಯಗೌಡರು, ಮುತ್ತಳ್ಳಿ ಶ್ಯಾಮಯ್ಯ ಗೌಡರು. ಸೀತೆಮನೆ ಸಿಂಗಪ್ಪಗೌಡರು, ಕೆಳಕಾನೂರು ಅಣ್ಣಯ್ಯ ಗೌಡರು ಮುಂತಾದ ಮೇಲ್ವರ್ಗದ ಜನರಿಂದ ಹಿಡಿದು ಅತ್ಯಂತ ಕೆಳವರ್ಗದ ಮಂದಿಯವರೆಗೂ ವೆಂಕಪ್ಪಯ್ಯ ಜೋಯಿಸರ ಪ್ರಭಾವ ತಾನೇ ತಾನಾಗಿ ಪ್ರಬಲವಾಗಿ ಹರಡಿಕೊಂಡಿದೆ. ವ್ಯವಸ್ಥೆಯ ಮೇಲೆ ಅವರ ಆಕ್ಟೋಪಸ್ ಹಿಡಿತ ಅಸಾಧಾರಣವಾಗಿದೆ. ಬದುಕಿನ ಪ್ರತಿಯೊಂದು ವಿಷಯದಲ್ಲೂ ಅವರ ಸಲಹೆ ಕೇಳುವುದು ಅವರು ಹೇಳಿದಂತೆ ನಡೆದುಕೊಳ್ಳುವುದಷ್ಟೇ ಅಬ್ರಾಹ್ಮಣರ ಕರ್ತವ್ಯ ಮತ್ತು ಧರ್ಮವಾಗಿ ಬಿಟ್ಟಿದೆ. ಅವರ ಪಂಚಾಂಗ ಆದೇಶಿಸಿದಂತೆ ತಂದೆ–ತಾಯಿಗಳು ತಮ್ಮ ಮಕ್ಕಳ ಮದುವೆಯನ್ನು ನೆರವೇರಿಸುತ್ತಾರೆ. ಇದರಲ್ಲಿ ವಧುವಿನ ಅಥವಾ ವರನ ಅಭಿಪ್ರಾಯಕ್ಕೆ ಬೆಲೆಯಿಲ್ಲ. ಪರಸ್ಪರ ಪ್ರೇಮಿಸಿದ್ದ ಹೂವಯ್ಯ ಸೀತೆಯರಿಗೆ ನಡೆಯಬೇಕಾಗಿದ್ದ ಮದುವೆಯನ್ನು ತಪ್ಪಿಸುವುದರಲ್ಲಿ ಪುರೋಹಿತಶಾಹಿಯ ಕೊಳಕು ನಡತೆ ಹೇಯವಾಗಿ ಪ್ರಕಟಗೊಳ್ಳುತ್ತದೆ (ಬದಲಾವಣೆ : ೧೯೯೩, ಪು.೧೧೧–೧೨). ದುರಂತದ ಚಿತ್ರಣದಲ್ಲಿ ಕಾಣುತ್ತೇವೆ, ಕಾನೂರು ಚಂದ್ರ ಕೇಂದ್ರವಾಗಿಟ್ಟುಕೊಂಡು ವಲಸ: ಮಲೆನಾಡಿನ ಒಕ್ಕಲಿಗರ ಚಿತ್ರವನ್ನು ನೀಡಿದ್ದಾರೆ, ಸಾಂಪ್ರದಾಯಿಕವಾದ ಕೌಟುಂಬಿಕ ಸ್ವರೂಪ ಸಂಕ್ರಮಣ ಕಾಲದಲ್ಲಿ ಅಧುನಿಕ ವಿದ್ಯಾಭ್ಯಾಸ, ಅಧುನಿಕತೆ, ವೈಚಾರಿಕತೆ, ಗೌಡರ ಕೌಟುಂಬಿಕ ೧೫ ವೈದ್ಯಾ। ಮನೋಭಾವನೆ ಇವುಗಳಿಂದ ನಿಮಾದ ಮಾನವೀಯತೆ ಉಂಟುಮಾಡಿದ ತಲ್ಲಣ ಅತಂಕ ಮತ್ತು ಪಟಗಳನ್ನು ಸರ್ಣವಾಗಿ ಕಾದಂಬರಿ ಹಿಡಿದಿಟ್ಟಿದೆ. ಉದಾಹರಳೆಗಳ ಮೂಲಕ ಕದಂಬರಿಯಲ್ಲಿ ಕಂಡುಬರುವ ಬರುವ ಕೌಟುಂಬಿಕ ಮಾದರಿಗಳನ್ನು ಗ್ರಹಿಸಬಹುದು.

ಕಾನೂರು ಚಂದ್ರಯ್ಯ ಗೌಡರು ಯಜಮಾನರಾಗಿರುವ ಪ್ರಾಚೀನ ಉಳಿದ ಮನೆಯನ್ನು ವರ್ಣಿಸುತ್ತಾ ಕುವೆಂಪು ಅವಿಭಕ್ತ ಕುಟುಂಬದ ವಿವರವನ್ನು ನೀಡುವು ಸೂಚಿಸುತ್ತಾರೆ, ಆ ಮನೆಯಲ್ಲಿ ಮೂವತ್ತು ನಲ್ವತ್ತು ಮಂದಿ ನಿರಾತಂಕವಾಗಿ ಅಂದರೆ ಅವಿಭಕ್ತ ಕುಟುಂಬದ

ಮಾದರಿಯು ಆ ಕಾಲದಲ್ಲಿ ಅಸ್ತಿದ ಮಗ ಮಾಡಬಹುದಾಗಿತ್ತು. ಈ ಕಥೆಯ ಕಾಲಕ್ಕೆ ಪೂರ್ವದಲ್ಲಿ ಗಂಡಸರು, ಹೆಂಗಸ ಮಕ್ಕಳು ಎಲ್ಲಾ ಇಪ್ಪತ್ತೈದು ಮೂವತ್ತು ಮಂದಿ ಮನೆಯವರೂ, ಹತ್ತು ಹದಿನೈದು ಸೇವಕರೂ ಒಟ್ಟು ನಲ್ವತ್ತು ನಲ್ವತ್ತೈದು ಜನಗಳ ಮಟ್ಟಿಗೆ ಮನೆಯನ್ನೆಲ್ಲ ತುಂಬಿರುತ್ತಿದ್ದರು. ಒಟ್ಟು ಕುಟುಂಬವಾಗಿದ್ದುದರಿಂದ ಹಾಗಿದ್ದುದರಲ್ಲೇನೂ ಆಶ್ಚರ್ಯವಿಲ್ಲ.'[೮] ಚಂದ್ರಯ್ಯಗೌಡರ ಈಗಿನ ಕುಟುಂಬವು ಅವಿಭಕ್ತ ಕುಟುಂಬವೇ ಆಗಿದೆ. ಅವರೊಂದಿಗೆ ಅವರಣ್ಣನ ಹೆಂಡತಿ ನಾಗಮ್ಮ ಮತ್ತು ಮಗ ಹೂವು ವಾಸವಾಗಿದ್ದಾರೆ. ಆದರೆ ಕೂಡು ಕುಟುಂಬದಲ್ಲಿರ ಬೇಕಾದ ಅನ್ಯೋನ್ಯತೆ ಇಲ್ಲಿಲ್ಲ. ಅಂದರೆ ಈಗಾಗಲೇ ಆವಿಭಕ್ತ ಕುಟುಂಬದಲ್ಲಿ ಪರಸ್ಪರ ಅನುಮಾನ, ಅಪನಂಬಿಕೆ, ಸ್ವಾರ್ಥದಿಂದ ಬಿರುಕು ಕಾಣಿಸಿಕೊಂಡಿರುವುದನ್ನು ಕಾದಂಬರಿ ಸ್ಪಷ್ಟವಾಗಿ ಸೂಚಿಸುತ್ತದೆ. ಮಲೆನಾಡಿನ ಒಕ್ಕಲಿಗ ಜಮೀನ್ದಾರರು ಆಗಿನ ಕಾಲದಲ್ಲಿ ಮೂರು–ನಾಲ್ಕು ಮದುವೆ ಯಾಗುತ್ತಿದ್ದುದು ಹಾಗೂ ಅದರಿಂದ ಕೌಟುಂಬಿಕ ಅಶಾಂತಿ ತಲೆದೋರಿ ಸಂಬಂಧಗಳಲ್ಲಿ ವಿಘಟನೆಯುಂಟಾಗುತ್ತಿದ್ದುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಚಂದ್ರಯ್ಯಗೌಡರು ತನ್ನ ಎರಡನೆ ಹೆಂಡತಿ ತೀರಿಕೊಂಡಾಗ ಮದುವೆ ವಯಸ್ಸಿಗೆ ಬಂದಿದ್ದ ಮಗ ರಾಮಯ್ಯನನ್ನು ಒಂದು ಮಾತು ಕೇಳದೆ ತಮ್ಮಿಷ್ಟದಂತೆ ಹದಿನೆಂಟು ವರ್ಷ ಪ್ರಾಯದ ಅಸಂಸ್ಕೃತ ಹಿನ್ನೆಲೆಯ ಸುಬ್ಬಮ್ಮನನ್ನು ಮೂರನೆ ಹೆಂಡತಿಯಾಗಿ ಸ್ವೀಕರಿಸುತ್ತಾರೆ.

ಸುಬ್ಬಮ್ಮನ ಆಗಮನದಿಂದ ಕಾನೂರಿನ ಗೌಡರ ಕುಟುಂಬ ಅಶಾಂತಿಯ, ಗಲಾಟೆಯ ತಾಣವಾಗಿ ಇಡೀ ಮನೆ ನರಕ ಸದೃಶವಾಗಿ ದುರಂತದೆಡೆಗೆ ಸಾಗುವುದನ್ನು ಮಾರ್ಮಿಕವಾಗಿ ಸಕಾರಣವಾಗಿ ಕೃತಿ ಚಿತ್ರಿಸುತ್ತದೆ. ಸುಬ್ಬಮ್ಮನನ್ನು ಕೈಹಿಡಿದ ನಂತರ ಚಂದ್ರಯ್ಯಗೌಡ ದರ್ಪ, ಕ್ರೌರ್ಯ ಅಧಿಕವಾಗಿ ಅವರ ಅಮಾನವೀಯವಾದ ವರ್ತನೆ ಅಧಿಕವಾಗುತ್ತಲೇ ಸಾಗುತ್ತದೆ. ಎಲ್ಲರನ್ನೂ, ಅದರಲ್ಲೂ ಹೂವಯ್ಯನನ್ನು ಅನುಮಾನದಿಂದ ನೋಡುವ ಭಾವನೆ ಹೆಚ್ಚಾಗುತ್ತದೆ. ಇದರಿಂದ ಅತ್ತಿಗೆ ನಾಗಮ್ಮ ಮತ್ತು ಅವಳ ಮಗ ಹೂವಯ್ಯನ ಮೇಲೆ ದ್ವೇಷ ಸಾಧನೆಗೆ ಮುಂದಾಗಿ ಕೀಳುತನದಿಂದ ವರ್ತಿಸುತ್ತಾರೆ. ಹೂವಯ್ಯನ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸುವುದು, ರಾಮಯ್ಯನನ್ನು ಹೂವಯ್ಯನಿಂದ ದೂರ ಮಾಡುವುದು, ಹೂವಯ್ಯನನ್ನು ಕಾನೂರಿನಿಂದ ಕೆಳಕಾನೂರಿಗೆ ಹೋಗಿ ಬದುಕುವಂತೆ ಮಾಡುವುದು. ವೆಂಕಪ್ಪ ಜೋಯಿಸರ ಉಪದೇಶದಂತೆ ಸೀತೆ ಹೂವಯ್ಯನಿಗೆ ದೊರಕದಂತೆ ಮಾಡಿ ತನ್ನ ಮಗ ರಾಮಯ್ಯನಿಗೆ ವಿವಾಹ ಮಾಡುವುದು, ಸೀತೆಗೆ ಅಮಾನುಷವಾಗಿ ಜೋಯಿಸರ ಮಾತನ್ನು ನಂಬಿ ಬರೆಹಾಕಿ ಚಿತ್ರಹಿಂಸೆ ನೀಡುವುದು. ತನ್ನ ಹೆಂಡತಿ ಸುಬ್ಬಮ್ಮ ತನ್ನ ಇಚ್ಛೆಗೆ ವಿರುದ್ಧವಾಗಿ ವರ್ತಿಸಿದಾಗ ಕ್ರೂರವಾಗಿ ಹೊಡೆದು ಶಿಕ್ಷಿಸುವುದು, ಇವುಗಳಿಂದ ತನ್ನ ಕುಟುಂಬದಲ್ಲಿ ಯಾರೊಂದಿಗೂ ಅರ್ಥಪೂರ್ಣವಾದ, ಪ್ರೀತಿ ವಿಶ್ವಾಸದ ಸಂವಾದ ಸಾಧ್ಯವಾಗುವುದೇ ಇಲ್ಲ. ಬಹುಶಃ ಇದರ ಕೊರತೆಯೇ ಒಂದು ಕುಟುಂಬದ ಸರ್ವನಾಶಕ್ಕೆ ಕಾರಣವಾಗುತ್ತದೆ. ಎಲ್ಲಾ ಸಂದರ್ಭಗಳಲ್ಲೂ ಚಂದ್ರಯ್ಯಗೌಡರು ಜಮೀನ್ದಾರಿಕೆಯ ಯಾಜಮಾನ್ಯದ ಕ್ರೌರ್ಯದ ವರ್ತನೆಗಳಿಂದಲೇ ಮುಖಾಮುಖಿಯಾಗ ಬಯಸುವುದು ಅವರ ಕುಟುಂಬವನ್ನು ದುರಂತಗಳ ಸರಮಾಲೆಗೆ ಈಡುಮಾಡುತ್ತದೆ. ವಿದ್ಯಾವಂತನೂ,

---

[೮] ಕುವೆಂಪು., ಕಾನೂರು ಹೆಗ್ಗಡಿತಿ, ಪುಟ.೩೩–೩೪.

ಮಾನವತಾವಾದಿಯೂ ಆದ ಹೂವಯ್ಯನ ಮಾನವೀಯ ಕ್ರಿಯೆ ವರ್ತನೆಗಳನ್ನು ಸ್ವಲ್ಪ ಸಾವಧಾನದಿಂದ ಗಮನಿಸಿ ಅರ್ಥಮಾಡಿಕೊಳ್ಳುವ ವ್ಯವಧಾನವನ್ನು ತೋರಿದ್ದರೆ ಚಂದ್ರಯ್ಯಗೌಡರ ಕುಟುಂಬಕ್ಕೆ ಅಂಥ ದುರ್ಗತಿ ಬರಲು ಸಾಧ್ಯವಾಗುತ್ತಿರಲಿಲ್ಲ. ಎಂಬ ಧ್ವನಿಯನ್ನು ಕಾದಂಬರಿ ಸೂಚಿಸುತ್ತದೆ.

ಅಣ್ಣಯ್ಯಗೌಡರು ಸಂಸಾರ ಶೂಲಕ್ಕೆ ಸಿಕ್ಕಿಹಾಕಿಕೊಂಡಿರುವ ಬಗೆಯನ್ನು, ಅದಕ್ಕೆ ಕಾರಣಗಳನ್ನು ಕಾದಂಬರಿ ಹೀಗೆ ವಿವರಿಸುತ್ತದೆ. "ಅಣ್ಣಯ್ಯಗೌಡರಿಗೆ ಚಂದ್ರಯ್ಯ ಗೌಡರ ತಂದೆತಾಯಿ ಎಲ್ಲರೂ ಪರಿಚಿತರಾಗಿದ್ದರು. ಒಕ್ಕಲುತನದಲ್ಲಿ ಮೊದಲು ನೆಮ್ಮದಿಯಾಗಿದ್ದವರು ಹೆಣ್ಣುಗಳಿಗಾಗಿ ತೆರವನ್ನು ತೆತ್ತೂ ತೆತ್ತೂ ಈಚೆಗೆ ಬಹಳ ದರಿದ್ರಾವಸ್ಥೆಗೆ ಇಳಿದಿದ್ದರು. ಅವರ ಗ್ರಹಚಾರಕ್ಕೆ ತಕ್ಕಂತೆ ಮೂವರು ಹೆಂಡಿರೂ ಸತ್ತು ನಾಲ್ಕನೇ ಹೆಂಡತಿಯೂ ರೋಗದಿಂದ ನರಳುತ್ತಿದ್ದಳು . ಅವರ ದ್ವಿತೀಯ ಪತ್ನಿಯಲ್ಲಿ ಹುಟ್ಟಿದ್ದ ಓಬಯ್ಯನೆಂಬ ಮಗನಿಗೆ ಇಪ್ಪತ್ತೈದು ವರ್ಷವಾಗಿತ್ತು. ತೃತೀಯ ಪತ್ನಿಗೆ ಏಳೆಂಟು ವರುಷದ ಹುಡುಗಿ ಯೊಬ್ಬಳಿದ್ದಳು. ಓಬಯ್ಯನಿಗೆ ಇನ್ನೂ ವಿವಾಹವಾಗಿರಲಿಲ್ಲ. ಅದು ಕಾರಣವಾಗಿ ತಂದೆ ಮಕ್ಕಳಿಗೆ ಮನಸ್ತಾಪವುಂಟಾಗಿ ಓಬಯ್ಯ ತಾನು ಬೇರೆ ಸಂಸಾರ ಹೂಡುತ್ತೇನೆಂದು ಹೆದರಿಸುತ್ತಿದ್ದನು. ವಿವಾಹವಾಗದಿದ್ದುದಕ್ಕೆ ಕಾರಣ ತೆರಕೊಡಲು ಹಣವಿರಲಿಲ್ಲ. ಆ ಕಾರಣದಿಂದಲೇ ಅಣ್ಣಯ್ಯ ಗೌಡರಿಗೆ ಜೀವನವೆಲ್ಲ ನರಕಯಾತನೆಯಂತೆ ಇದ್ದಿತು." (ಪು .೬೩), ಅಣ್ಣಯ್ಯಗೌಡರು ವಯಸ್ಸಿಗೆ ಬಂದ ಮಗನಿದ್ದರೂ ಮೂರು-ನಾಲ್ಕನೆಯ ಮದುವೆಯಾದದ್ದೆ ಅವರ ಕೌಟುಂಬಿಕ ಜೀವನದಲ್ಲಿ ಅಶಾಂತಿಗೆ ಕಾರಣವಾಗಿದೆ. ಮಗ ತಂದೆಯಿಂದ ದೂರ ಸರಿಯುವ ದುಸ್ಥಿತಿ ಬಂದಿದೆ. ಸಾಲಗಾರರೂ ಆಗಿದ್ದಾರೆ. ಈ ಪರಿಸ್ಥಿತಿ ವಯಸ್ಸಿಗೆ ಬಂದು ಮದುವೆಯ ನಿರೀಕ್ಷೆಯಲ್ಲಿರುವ ಓಬಯ್ಯ ಅಡ್ಡದಾರಿ ತುಳಿಯುವಂತೆ ಪ್ರೇರೇಪಿಸುತ್ತದೆ. ವ್ಯವಸಾಯಕ್ಕೆ ಸ್ವಂತ ಭೂಮಿಯಿಲ್ಲದ, ಕೌಟುಂಬಿಕವಾಗಿ ಯಾವುದ ಜವಾಬ್ದಾರಿಯಿಲ್ಲದೆ ಇರುವುದರಿಂದ ಹೆಣ್ಣಿನ ಸಂಗದ ಬಯಕೆಯ ಕೌಟುಂಬಿಕ ಆಶಯ ತಂದೆಯ ಮೇಲಿನ ಕೋಪವಾಗಿಸಿಕೊಂಡು ತಂದೆಯನ್ನು ತಿರಸ್ಕರಿಸುವ ಮನ ಮಾಡುತ್ತಾನೆ. ಆದರೆ ವಯಸ್ಸಾದ ತಂದೆ ಅಣ್ಣಯ್ಯಗೌಡರು ಮಗನನ್ನು ತಿರಸ್ಕರಿಸುವ ಹ ಹೋಗುವುದಿಲ್ಲ. ಹೀಗಾಗಿ ಚಂದ್ರಯ್ಯಗೌಡರು ಅಮಾನುಷವಾಗಿ ತನ್ನ ಮೇಲೆ ಹೊಡೆದ ನಂತರ ಅವರ ಅಧೀನದಲ್ಲಿ ಇರಲು ಒಪ್ಪದ ಮಗನ ಆಶಯವನ್ನು ಅನುಮೋದಿಸುತ್ತಾರೆ. ಮಗನೆಂಬ ಕೌಟುಂಬಿಕ ಅಭಿಮಾನದಿಂದ ಅವನ ಜೊತೆ ದೇಶಾಂತರ ಅಲೆಯುತ್ತಾರೆ.

ಅಧ್ಯಾಯ - ೧೧

ಕುವೆಂಪು ಕಾದಂಬರಿಗಳಲ್ಲಿ ಜಮೀನ್ದಾರಿ ಪದ್ಧತಿ

ಮಾನವತಾವಾದಿ ದೃಷ್ಟಿಕೋನದಿಂದ ಕುವೆಂಪುರವರು ಮಲೆನಾಡಿನ ದಟ್ಟವಾದ, ಸಮಗ್ರವಾದ ಬದುಕನ್ನು ತಮ್ಮ ಎರಡೂ ಕಾದಂಬರಿಗಳಲ್ಲಿ ಸೃಜನಶೀಲವಾಗಿ ಕಟ್ಟಿ ಕೊಟ್ಟಿದ್ದಾರೆ. ಇವುಗಳಲ್ಲಿ ಬದುಕಿನ ಒಳಿತು-ಕೆಡುಕು ಕಷ್ಟ-ಸುಖಗಳು, ದುಃಖ ದುಮ್ಮಾನಗಳು, ಇತಿ-ಮಿತಿಗಳು, ಸಾಧ್ಯಸಾಧ್ಯತೆಗಳು, ಏಳು-ಬೀಳುಗಳು, ಮೇಲು-ಕೀಳುಗಳು, ಕ್ರಿಯೆ-ಪ್ರತಿಕ್ರಿಯೆಗಳು ಇವುಗಳ ವಾಸ್ತವ ಚಿತ್ರಣ ಇರುವುದರಿಂದ ಇವುಗಳನ್ನು ಈಗಾಗಲೇ ವಾಸ್ತವತಾವಾದದ ಕಾದಂಬರಿಗಳೆಂದು ಪರಿಗಣಿಸಲಾಗಿದೆ. ಇಲ್ಲಿ ಇವುಗಳ ಸಮಗ್ರ ವಿಶ್ಲೇಷಣೆಗೆ ಹೋಗದೆ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಜಮೀನ್ದಾರಿ ಪದ್ಧತಿ ಮೌಲ್ಯಗಳ ಹಿನ್ನೆಲೆಯಲ್ಲಿರುವ ದೇಶಿವಾದದ ನಿಲುವುಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗುತ್ತದೆ.

ಕುವೆಂಪುರವರ ಎರಡು ಬೃಹತ್ಕಾದಂಬರಿಗಳು ಮಲೆನಾಡಿನ ಜಮೀನ್ದಾರಿ ಪದ್ಧತಿಯ ವಾಸ್ತವ ಚಿತ್ರಣವನ್ನು ಧ್ವನಿಪೂರ್ಣವಾಗಿ ಕಟ್ಟಿಕೊಡುತ್ತವೆ. ಇಲ್ಲಿ ಜಮೀನ್ದಾರಿ ಡಾ. ಡಿ.ಆರ್. ನಾಗರಾಜರವರು ಕುವೆಂಪು ಕೃತಿಗಳಲ್ಲಿ ವರ್ಣವರ್ಗ ಸಂಘರ್ಷ ಎಂಬ ಲೇಖನದಲ್ಲಿ ಕಲಾವಿದ ಕುವೆಂಪು ತತ್ವಜ್ಞಾನಿಯ ದಿವ್ಯ ನಿರ್ಲಕ್ಷವನ್ನು ಮೀರಿ ಜೀವನದ ವಾಸ್ತವಗಳನ್ನು ತಮ್ಮ ಕೃತಿಯಲ್ಲಿ ಕೊಟ್ಟಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ, ಕುವೆಂಪು ಅವರ ಕೇಂದ್ರ ಕಾಳಜಿಗಳು ಮಾನವತಾವಾದದ ಕಾಳಜಿಗಳು"[೯] ಎಂದು ಅಭಿಪ್ರಾಯ ಪಡುತ್ತಾರೆ.

ಕೆ.ಎಸ್. ಭಗವಾನ್‌ರ 'ಕುವೆಂಪು ಕಂಡ ದಲಿತ ಜೀವನ' ಲೇಖನದಲ್ಲಿ ಕುವೆಂಪುರವರು ಮನುಷ್ಯರನ್ನು ಕುರಿತು ಮೂಲಭೂತವಾಗಿ ಚಿಂತಿಸುತ್ತಾರೆ. ದೀನ ದಲಿತರು ಮೇಲೆ ಬರಬೇಕೆಂದು ಅನುಮಾನಕ್ಕೆ ಅವಕಾಶವಿಲ್ಲದಂತೆ, ಅಪಾರ್ಥಕ್ಕೆ ಆಸ್ಪದವಿಲ್ಲದಂತೆ ಚಿತ್ರಿಸಿದ್ದಾರೆ. ಅವರದು

---

[೯] ನಾಗಾರಾಜ್, ಅಮೃತ ಮತ್ತು ಗರುಡ, ೧೯೯೦, ಪು. ೨೦-೨೨

ಮಾನವತಾವಾದ ಮತ್ತು ಸಮಾನತಾವಾದ ಎಂದು ಅಭಿಪ್ರಾಯಪಟ್ಟಿದ್ದಾರೆ (ಬದಲಾವಣೆ, ೧೯೯೩, ಪು.೧೭೦). ಪದ್ಧತಿಯ ವಿವಿಧ ಮಾದರಿಗಳು ಗೋಚರಿಸುತ್ತವೆ. ಮಲೆನಾಡಿನ ಜನರಿಗೆ ಜೀವಾಳ ಅದೇ ಬದುಕು. ಹೀಗಾಗಿ ವ್ಯವಸಾಯವೇ ಇಲ್ಲಿನ ಬದುಕಿನ ಕೇಂದ್ರವಾಗಿದ್ದ ಕುವೆಂಪು ಕಾದಂಬರಿಗಳ ಸಮಾಜದ ಕೇಂದ್ರವಾಗಿ ಜಮೀನ್ದಾರಿ ವ್ಯವಸ್ಥೆ ಇದರ ಸುತ್ತ ಬೇರೆಲ್ಲ ಅಂಶಗಳು, ಘಟಕಗಳು ಬರುತ್ತವೆ. ಈ ವ್ಯವಸ್ಥೆಯಲ್ಲಿ ಮೇಲ್ಜಾತಿ ಜನರು ಮುಖ್ಯವಾಗಿ ಬ್ರಾಹ್ಮಣರು, ಗೌಡರು (ಒಕ್ಕಲಿಗರು) ಜಮೀನ್ದಾರರಾಗಿದ್ದಾರೆ ಕೆಳಜಾತಿಯ ಜನರು ತಮ್ಮ ಜೀವನ ನಿರ್ವಹಣೆಗೆ, ಜಮೀನ್ದಾರರ ಒಕ್ಕಲುಗಳಾಗಿ ಕೂಲಿಯಾಳುಗಳಾಗಿ ಜೀವನ ಪರ್ಯಂತ ದುಡಿಯಬೇಕಾದ, ಜೀತ ಮಾಡಬೇಕಾದ ದುಸ್ಥಿತಿಯಿರುವುದನ್ನು ಕಾಣುತ್ತೇವೆ. ಉದಾಹರಣೆಗೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬ್ರಾಹ್ಮಣರಾದ ಕಲ್ಲೂರು ಮಂಜ ಭಟ್ಟರು, ಗೌಡರುಗಳಾದ, ಸಿಂಬಾವಿ ಭರಮೈ ಹೆಗ್ಗಡೆ, ಹಳೆಮನೆ ಸುಬ್ಬಣ್ಣ ಹೆಗ್ಗಡೆ, ಶಂಕರ ಹೆಗ್ಗಡೆ, ಕೋಣೂರು ರಂಗಪ್ಪಗೌಡರು, ಹೂವಳ್ಳಿ ವೆಂಕಟಣ್ಣ, ಬೆಟ್ಟಳ್ಳಿ ಕಲ್ಲಯ್ಯ ಗೌಡರು ಇವರೆಲ್ಲಾ ಜಮೀನ್ದಾರರಾಗಿ ಚಿತ್ರಿತರಾಗಿದ್ದಾರೆ. ಅಪರೂಪವೆಂಬಂತೆ ದೀವರ ಜಾತಿಗೆ ಸೇರಿದ ಲಕ್ಕುಂದದ ಸೇಸನಾಯ್ಕ ಜಮೀನ್ದಾರನಾಗಿ ಚಿತ್ರಿತವಾಗಿದ್ದಾನೆ. ಆದರೆ ಇವನನ್ನು ಜಮೀನ್ದಾರನೆಂದು ಒಪ್ಪಿಕೊಳ್ಳುವುದಕ್ಕೆ ಮೇಲ್ಜಾತಿಯ ಗೌಡರುಗಳು ಸಿದ್ಧರಿರಲಿಲ್ಲವೆಂಬುದನ್ನು ಕಾದಂಬರಿಯೇ ಸೂಚಿಸುತ್ತದೆ. ಇದರ ಬಗ್ಗೆ ಚರ್ಚೆ ನಡೆದು ಅದು ಸರ್ಕಾರದವರೆಗೂ ಹೋಗಿ ಸರ್ಕಾರವು ಗೌಡರ ಪರವಾಗಿಯೇ ತೀರ್ಪು ನೀಡಿದನ್ನು ಕಾದಂಬರಿ ತಿಳಿಸುತ್ತದೆ. (ಮ.ಮ.ಪು .೮೯),

'ಕಾನೂರು ಹೆಗ್ಗಡಿತಿ'ಯಲ್ಲಿ ಕಾನೂರಿನ ಚಂದ್ರಯ್ಯಗೌಡರು, ಸೀತೆಮನೆ ಸಿಂಗಪ್ಪ ಗೌಡರು, ಮುತ್ತಳ್ಳಿ ಶಾಮಯ್ಯ ಗೌಡರು, ಬೈದೂರು ಬಸವೇಗೌಡರು, ಬಾಳೂರು ಸಿಂಗೇಗೌಡರು, ನೆಲ್ಲುಹಳ್ಳಿ ಪೆದ್ದೇಗೌಡರು, ಮುದ್ದೂರು ಭರೇ ಗೌಡರು, ಎಂಟೂರು ಶೇಷೆಗೌಡರು, ಮೇಗಳ್ಳಿ ನಾಗಪ್ಪ ಹೆಗ್ಗಡೆ ಹೀಗೆ ಮೇಲ್ವಾತಿಯ ಗೌಡರುಗಳೇ ಜಮೀನ್ದಾರರಾಗಿರುವುದು ಕಂಡುಬರುತ್ತದೆ. ಜಮೀನ್ದಾರರುಗಳಿಗೆ ಕೆಳಜಾತಿಯವರು ಒಕ್ಕಲುಗಳಾಗಿ, ಕೂಲಿಯಾಳುಗಳಾಗಿ ಚಿತ್ರಿತವಾಗಿದ್ದಾರೆ. ಜಮೀನ್ದಾರಿ ವ್ಯವಸ್ಥೆಯನ್ನು ಪುರೋಹಿತಶಾಹಿ ನಿಯಂತ್ರಿಸುವುದನ್ನು ಕಾಣುತ್ತೇವೆ. ನಮ್ಮ ದೇಶದಲ್ಲಿ ಪುರೋಹಿತಶಾಹಿ ನಿಯಂತ್ರಿತ ಜಮಿನ್ದಾರಿ ವ್ಯವಸ್ಥೆಯೇ ಇರುವುದು. ಇದು ಹೆಚ್ಚಾಗಿ ಜಾತಿಯಾಧಾರಿತವಾಗಿದೆ. ಸ್ವಲ್ಪಮಟ್ಟಿಗೆ ಅಲ್ಲಲ್ಲಿ ವಿರಳವಾಗಿ ವರ್ಗಾಧಾರಿತವಾಗಿರುವುದು ಕಂಡುಬರುತ್ತದೆ, ಈ ವ್ಯವಸ್ಥೆಯಲ್ಲಿ ಕ್ರೌರ್ಯ, ಶೋಷಣೆ, ದಬ್ಬಾಳಿಕೆ, ಅಮಾನವೀಯತೆ ಇವುಗಳೆ ವಿಜೃಂಭಿಸುತ್ತವೆ. ಇದು ಪರಂಪರಾನುಗತವಾಗಿ ನಡೆದುಕೊಂಡು ಬರುತ್ತಿರುವುದನ್ನು ಇದಕ್ಕೆ ಕಾರಣವಾಗಿರುವ ಅಂಶಗಳನ್ನು, ಒಳಿತು–ಕೆಡುಕುಗಳನ್ನು ಈ ವ್ಯವಸ್ಥೆಯಲ್ಲಿ ಆಗಲೇ ಬೇಕಾಗಿರುವ ಸುಧಾರಣೆ–ಬದಲಾವಣೆಗಳನ್ನು ಕುವೆಂಪು ಮಾನವೀಯವಾಗಿ ಎರಡು ಕಾದಂಬರಿಗಳಲ್ಲಿ ಶೋಧಿಸಿದ್ದಾರೆ. ಈ ವ್ಯವಸ್ಥೆಯನ್ನು ಮುಕುಂದಯ್ಯ – ದೇವಯ್ಯ ಚಿನ್ನಯ್ಯ ಪ್ರಮುಖವಾಗಿ ಹೂವಯ್ಯ ಇವರ ಮೂಲಕ ಮಾನವೀಯಗೊಳಿಸುತ್ತಾರೆ.

ಇನ್ನು ಮುಂದೆ ಕುವೆಂಪುರವರ ಎರಡು ಕಾದಂಬರಿಗಳಲ್ಲಿ ಜಮೀನ್ದಾರಿ ಪದ್ಧತಿ ಯಾವ ರೀತಿ ಚಿತ್ರಿತವಾಗಿದೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ತಿಳಿಯುವ ಪ್ರಯತ್ನವನ್ನು ಮಾಡಲಾಗುತ್ತದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಜಮೀನ್ದಾರಿ ಪದ್ಧತಿಯಲ್ಲಿ

ಸ್ವಂತ ಜಮೀನನ್ನು ಹೊಂದುವ ಅಧಿಕಾರ ಯಾವ ಜಾತಿಗೆ ಸೇರಿದ್ದು ಎಂಬುದರ ಚರ್ಚೆ ನಡೆದು ಅದು ಸರ್ಕಾರದವರೆಗೂ ಹೋಗಿ, ಅಲ್ಲಿಯ ಒಕ್ಕಲಿಗರ ಪರವಾಗಿಯೇ ತೀರ್ಪು ಬಂದಿದ್ದನ್ನು ಕಾದಂಬರಿ ಹೀಗೆ ವಿವರಿಸುತ್ತದೆ. "ಲಕ್ಕುಂದದ ಜಮೀನಿನಲ್ಲಿ ಮುಕ್ಕಾಲು ಪಾಲು ಸಿಂಬಾವಿ ಭರಮೈ ಹೆಗ್ಗಡೆಯವರಿಗೆ ಸೇರಿತ್ತು. ಇನ್ನುಳಿದ ಕಾಲುಪಾಲು ಹಳೆಪೈಕದ ಸೇಸನಾಯ್ಕನ ಸ್ವಂತದ್ದಾಗಿತ್ತು . ಸಾಧಾರಣವಾಗಿ ಒಕ್ಕಲಿಗ ಒಡೆಯರ ಒಕ್ಕಲುಗಳಾಗಿದ್ದುಕೊಂಡು, ಬಗನಿಯ ಮರದಿಂದ ಕಳ್ಳು ಇಳಿಸಿ ಕುಡಿದು ಮಾರಿ ಜೀವನ ಮಾಡುವ ಹಳೆ ಪೈಕದವರಿಗೆ (ಅವರಿಗೆ 'ಅವರು' ಎಂಬ ಹೆಸರೂ ಉಂಟು) ಸ್ವಂತ ಜಮೀನಿರುವುದು ಬಹಳ ಅಪೂರ್ವ, ಮಹಾ ಅನಾಚಾರವೆಂದು ಅನೇಕರ ಮನಸ್ಸು. ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳೆಪೈಕದವರಿಗೆ ನಿಷಿದ್ಧ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆ, ಗೌಡ, ನಾಯಕರುಗಳೆಲ್ಲ ಸೇರಿ ತೀರ್ಮಾನ ಮಾಡಿದ್ದರು. ಅಷ್ಟೆ ಅಲ್ಲದೆ ಮದುವೆ ಮೊದಲಾದ ಸಂಭ್ರಮಗಳಲ್ಲಿ ಹಳೆಪೈಕದವರು, ಒಕ್ಕಲಿಗರನ್ನು ಯಾವ ವಿಧದಲ್ಲಿಯೂ ಅನುಕರಿಸಕೂಡದೆಂದು ಮಾಮೂಲು ಕಟ್ಟಾಗಿತ್ತು. ದಿಬ್ಬಣದಲ್ಲಿ ಮದುವೆಯ ಗಂಡು ಕುದುರೆಯ ಮೇಲೆ ಸವಾರಿ ಮಾಡಬಾರದು, ದಂಗೆಯ ಮೇಲೆ ಕುಳಿತರಂತೂ ಮದುಮಕ್ಕಳಿಗೂ, ದಿಬ್ಬಣದವರೆಗೂ ಉಳಿಗತಿಯಿರಲಿಲ್ಲ" (ಮ.ಮ. ಪು.೮–೯) ಈ ತೀರ್ಮಾನಕ್ಕೆ ಸರ್ಕಾರವು ತನ್ನ ಅಂಕಿತವನ್ನು ಹಾಕಿದ್ದನ್ನು ಕಾದಂಬರಿಕಾರರು ಎಲ್ಲಿಯೂ ಸಮರ್ಥಿಸುವುದಿಲ್ಲ. ಇದಕ್ಕೆ ನಿರೂಪಕನ ಪ್ರತಿಕ್ರಿಯೆಯನ್ನು ನೋಡಿದರೆ ಗೊತ್ತಾಗುತ್ತದೆ "ಸರ್ಕಾರದ ಇತ್ಯರ್ಥಕ್ಕೆ ಕಾರಣ ನ್ಯಾಯ ಪಕ್ಷಪಾತವಾಗಿರಲಿಲ್ಲ; ಬಲಪಕ್ಷಪಾತವಾಗಿತ್ತು. ಬಲಿಷ್ಠರೂ ಬಹುಸಂಖ್ಯೆಯವರೂ ಆದವರ ಕಡೆ ಸರ್ಕಾರವಿದ್ದರೆ ಅದಕ್ಕೂ ಕ್ಷೇಮ ನ್ಯಾಯ ರಕ್ಷಣೆಯೂ ಸುಲಭಸಾಧ್ಯ" (ಮ.ಮ.ಪು.೯). ಇಲ್ಲಿ ಬಲಶಾಲಿ ಗಳಾದ ಜಮೀನ್ದಾರರ ಪರವಾಗಿ ಯಾವಾಗಲೂ ಆಡಳಿತಶಾಹಿ ಕೈ ಜೋಡಿಸುತ್ತದೆ. ಆಸ್ತಿ ಮತ್ತು ಹಣದಿಂದ ಸಮಾಜದಲ್ಲಿ ಸಹಜವಾಗಿ ಅಧಿಕಾರ ಮತ್ತು ಪ್ರತಿಷ್ಠೆ ಪ್ರಾಪ್ತವಾಗುತ್ತಿತ್ತು. ಇದನ್ನು ಕಾಪಾಡಿಕೊಳ್ಳಲು ಪಟ್ಟಭದ್ರ ಹಿತಾಸಕ್ತಿಗಳು ಯಾವಾಗಲೂ ತನ್ನ ಕೈಕೆಳಗಿನವರನ್ನು ದುರ್ಬಲರನ್ನು ಹಿಂಸಿಸುತ್ತಾ ಶೋಷಿಸುತ್ತಾ ಬರುವುದನ್ನು ಕಾಣುತ್ತೇವೆ.

ಭೂಮಾಲಿಕರು ತಮ್ಮ ಹಿತಾಶಕ್ತಿಗಳನ್ನು ಈಡೇರಿಸಿಕೊಳ್ಳಲು ಕೂಲಿಯಾಳುಗಳನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ನಡೆಸಿಕೊಳ್ಳುವುದು ಕಂಡುಬರುತ್ತದೆ. ಭಾರತದಲ್ಲಿ ಜಮೀನಿನ ಒಡೆಯನಾಗುವುದನ್ನು ಹೆಚ್ಚಾಗಿ ಜಾತಿ ನಿರ್ಧರಿಸುತ್ತದೆ. ಮೇಲ್ಜಾತಿಯವರ ಕೈಯಲ್ಲಿ ಆಸ್ತಿ ಮತ್ತು ಹಣ ಕೇಂದ್ರಿಕೃತವಾಗುವ ಅಸಮಾನತೆಯು ವ್ಯವಸ್ಥೆ ಯಾವಾಗಲೂ ಅಮಾನವೀಯವಾಗಿರುತ್ತದೆ. ಈ ಜಮೀನ್ದಾರಿ ಪದ್ಧತಿ ಜೀತ ಪದ್ಧತಿಯನ್ನು ಸ್ವಾತಂತ್ರ್ಯ ಒಂದು ಗಟ್ಟಿಗೊಳಿಸುತ್ತಾ ಬಂದಿದೆ. ಜೀತಗಾರನಾದವನಿಗೆ ಯಾವುದೇ ರೀತಿಯ ಮತ್ತು ಹಕ್ಕುಗಳು ಲಭ್ಯವಾಗುವುದಕ್ಕೆ ಬಿಡುವುದಿಲ್ಲ. ಅವನ ಬದುಕಿನ ಎಲ್ಲಾ ತೀರ್ಮಾ ಗಳನ್ನು ಅವನ ಧಣಿಯೇ ತೆಗೆದುಕೊಳ್ಳುತ್ತಾನೆ. ಇಲ್ಲಿ ಅವನು ಯಜಮಾನನ: ಉಪಭೋಗಿ ವಸ್ತುವಿನಂತಾಗುತ್ತಾನೆ. 'ಮಲೆಗಳಲ್ಲಿ ಮದುಮಗಳು ಕಾದಂಬರಿಯ ಇದರ ವಾಸ್ತವ ಚಿತ್ರಣವನ್ನು ಕೊಡುತ್ತದೆ. ಬೆಟ್ಟಳಿ ಕಲ್ಲಯ್ಯ ಗೌಡರು ತನ್ನ ಜೀತದಾಳ ದೊಡ್ಡ ಬೀರನ ಮಗಳು ತಿಮ್ಮಿಯ ಮದುವೆಯ ವಿಚಾರದಲ್ಲಿ ತೆಗೆದುಕೊಳ್ಳುವ ನಿರ್ಧಾರ ಇದಕ್ಕೆ ಒಳ್ಳೆಯ ನಿದರ್ಶನವಾಗಿದೆ. ಜಮೀನ್ದಾರಿ

ಪದ್ಧತಿಯಲ್ಲಿರುವ ಸ್ವಾರ್ಥ, ಕೌರ್ಯ, ಅಮಾನವೀಯ ಶೋಷಣೆಯ ಸಂಪೂರ್ಣ ದರ್ಶನವನ್ನು ಈ ಪ್ರಸಂಗ ಮಾಡಿಕೊಡುತ್ತದೆ. ದೊಡ್ಡ ಬೀರನ ಕುಟುಂಬದಲ್ಲಿ ಯಾರಿಗೂ ತಿಮ್ಮಿಯನ್ನು ಬಚ್ಚನಿಗೆ ಮದುವೆ ಮಾಡಲು ಕಿಂಚಿತ್ತೂ ಇಷ್ಟವಿರಲಿಲ್ಲ. ಆದರೆ ತನ್ನ ಒಡೆಯನ ಸ್ವಾರ್ಥಕ್ಕೆ ಕ್ರೌರ್ಯಕ್ಕೆ ಹೆದರಿ ಅನಿವಾರ್ಯವಾಗಿ ಒಪ್ಪಲೇಬೇಕಾಗುತ್ತದೆ. ಇಲ್ಲದಿದ್ದರೆ ಅವರಿಗೆ ಉಳಿಗಾಲವಿಲ್ಲ. ಒಡೆಯನಿಗೆ ಜೀತ ಮಾಡಲು ಒಂದು ಆಳು ಬೇಕೆ ಹೊರತು ತಿಮ್ಮಿಯ ಬದುಕಲ್ಲ. ಈ ಕಾರಣದಿಂದ ಅವನು ತಿಮ್ಮಿಯನ್ನು ಗುತ್ತಿಗೆ ಕೊಟ್ಟು ಮದುವೆ ಮಾಡಲು ಅಡ್ಡಿ ಮಾಡುತ್ತಾನೆ. ಜಮೀನ್ದಾರಿ ಪದ್ಧತಿಯ ಕೆಡುಕನ್ನು ಅದರ ಅನಾಹುತವನ್ನು ಕಾದಂಬರಿ ಧ್ವನಿವತ್ತಾಗಿ ಹಿಡಿದಿಟ್ಟಿದೆ. ತಿಮ್ಮಿಯ ಮದುವೆ ಒತ್ತಾಯಪೂರ್ವಕವಾಗಿ ಬಚ್ಚರೊಂದಿಗೆ ತೀರ್ಮಾನವಾಗಿದ್ದಾಗ ಗುತ್ತಿ ಅವಳನ್ನು ಅಪಹರಿಸುವ ಯೋಜನೆ, ತಿಮ್ಮಿಯ ಮನೆಗೆ ಬರುತ್ತಾರೆ, ಸಿಮ್ಮಿ ಮತ್ತು ಅವಳ ತಾಯಿ ಸೇಸಿಗೆ ಈ ಮರು ಸುಕಾರಾಂ ಇಚ್ಚಿಸಿರುವುದಿಲ್ಲ, ಗುತ್ತಿ ಬಂದಾಗ ಇವರಿಬ್ಬರ ಮನೆಯಲ್ಲಿದ್ದರು, ಗುತ್ತಿ ಆಗಮನ ಇವರಿಬ್ಬರಿಗೂ ಆನಂದವನ್ನುಂಟು ಮಾಡಿತು. ಸೇಸಿ ಮತ್ತು ಗುತ್ತಿಯ ಮನಸ್ಸಿನ ಪ್ರತಿಕ್ರಿಯೆಗಳನ್ನು ಕಾದಂಬರಿ ಹೀಗೆ ನಿರೂಪಿಸುತ್ತದೆ. "ತನ್ನ ಮಗಳ ಮದುವೆಯ ಪೂರ್ವಸಿದ್ಧತೆಯನ್ನು ಕುರಿತು ವ್ಯಂಗ್ಯವಾಡಿದ ಸೋದರಳಿಯನಿಗೆ ಅತ್ತೆ ಕ್ಷಮೆ ಕೇಳುವಂತೆ "ಧಣೀರು, ಹಿರೇರು ಸೇರಿ ನಿಶ್ಚಯಿಸಿಬಿಟ್ಟಾರೆ, ನಾವು ಹೆಣ್ಣು ಹೆಂಗಸರು ಏನು ಮಾಡಾಕಾಗ್ಗದಪ್ಪ? ನಮ್ಮನ್ನೇನು ಕೇಳ್ತಾರಾ?" ಕೋಳಿ ಕೇಳಿ ಕಾರಾ ಕಡೀತಾರಾ? ಎಂದು ಹೇಳುತ್ತಲೇ ಗೊಳ್ಳೆ ಸೆರಗಿನಿಂದ ಕತ್ತಿಕೊಂಡಳು. ಗುತ್ತಿಗೆ ಗೊತ್ತಿತ್ತು ಅತ್ತೆಗೆ ತನ್ನ ಮಗಳನ್ನು ಬಚ್ಚನಿಗೆ ಕೊಡಲು ಸ್ವಲ್ಪವೂ ಮನಸ್ಸಿರಲಿಲ್ಲ ಎಂದು. ಅಲ್ಲದೆ ತಿಮ್ಮಿಯನ್ನು ತನಗೇ ಕೊಡುವುದಕ್ಕೆ ಮನಸ್ಸಿದ್ದುದನ್ನೂ ನಾನಾ ರೀತಿಗಳಿಂದ ವ್ಯಕ್ತಪಡಿಸಿಯೂ ಇದ್ದಳು. ತಾನು ತಿಮ್ಮಿಗಾಗಿ ತಂದುಕೊಟ್ಟ ಸಣ್ಣ ಪುಟ್ಟ ಕಾಣಿಕೆಗಳನ್ನು ಹೆಮ್ಮೆಯಿಂದ ಸ್ವೀಕರಿಸಿದ್ದಳು. ಆದರೆ ಗೌಡರ ಜೀತದಾಳಾಗಿ, ಅವರಲ್ಲಿ ಸಾಲಮಾಡಿ, ಅವರಿಗೆ ತನ್ನನ್ನು ಸಂಪೂರ್ಣವಾಗಿ ಮಾಡಿಕೊಂಡಿದ್ದ ದೊಡ್ಡ ಬೀಗ ಆ ವಿಚಾರದಲ್ಲಿ ನಿರುಪಾಯನಾಗಿ ಒಡೆಯರ ಅಜ್ಞೆಗೆ ತಲೆಬಾಗಿದ್ದನು.

ಒಡೆಯರಿಗೆ ಬೇಕಾಗಿದ್ದುದು ಜೀತ ಮಾಡಲು ಒಂದು ಆಳು. ತಮ್ಮ ಹೊಲೆಗೇರಿಯ ಒಂದು ಹೆಣ್ಣನ್ನು ಹೊರಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದಾಳು ಖೋತ ಬೀಳುತ್ತದೆ. ಅವರ ಕಟ್ಟಪ್ಪಣೆ, ಬೇರೆ ರೀತಿಯಿಂದ ವರ್ತಿಸಿದರೆ ಆ ಹಣ್ಣು ಅನೊಬ್ಬ ಬೇರೆ ಆದ್ದರಿಂದ ಕೇರಿಯ ಹಣ್ಣನ್ನು ಕೇರಿಯ ಗಂಡೇ ಮದುವೆಯಾಗಬೇಕು ಎಂಬುದು ಕಟ್ಟಿಸಿಕೊಂಡಿದ್ದರೂ ಸರಿ ಅವಳನ್ನು ಎಳೆದು ತರಿಸಿ, ತಾಳಿ ಕೇರಿಯವನಿಂದ ತಾಳಿ ಕೀಳಿಸಿ, ತಮ್ಮ ಕೇರಿಯವನಿಗೇ ಮದುವೆ ಮಾಡಿಸುತ್ತಿದ್ದರೆಂಬುದರಲ್ಲಿ ಸಂದೇಹವ ಇರಲಿಲ್ಲ. ಅಪ್ಪಿ ತಪ್ಪಿ ಒಡೆಯರ ಇಚ್ಚೆಗೆ ವಿರೋಧವಾಗಿ ನಡೆದವರಿಗೆ ಹಿಂದೆ ಅಂತಹ ಗತಿಯೇ ಒದಗಿತ್ತು. ಕೀಳು ಜಾತಿಯವರಿಗೆ ಅವರ ಇಚ್ಛಾನುಸಾರ ಒಲವು ಅಕ್ಕರೆ ಇರುವುದಂದರೇನು ? ಒಲವು ಅಕ್ಕರೆ ಏನಿದ್ದರೂ ಎಲ್ಲಾ ಒಡೆಯರ ಲಾಭದ ವಲಯದೊಳಗಿದ್ದು, ಅವರ ಇಚ್ಛಾಧೀನವಾಗಿರಬೇಕು" (ಮ.ಮ. ಪು .೧೬೩). ಇಲ್ಲಿ ಗುತ್ತಿ ಮತ್ತು ಸೇಸಿ ಇಬ್ಬರೂ ರಾಕ್ಷಸ ವ್ಯವಸ್ಥೆಯ ವಿರುದ್ಧ ಒಂದು ರೀತಿಯಲ್ಲಿ ಒಳಬಂಡಾಯ ಹೂಡುವುದನ್ನು ಕಾಣುತ್ತೇವೆ. ಇದು ಜಮೀನ್ದಾರಿ ವ್ಯವಸ್ಥೆಯಲ್ಲಿ ಉಂಟಾಗುತ್ತಿದ್ದ ಪಲ್ಲಟದ ಸೂಚನೆಯೆನ್ನಹುದು.

ಗುತ್ತಿ ತಿಮಿಯನ್ನು ರಾತ್ರೋರಾತ್ರಿ ಬೆಟ್ಟಳ್ಳಿಯಿಂದ ಅಪಹರಿಸಿದ ವಿಚಾರ, ಒಡೆಯ ಕಯ್ಯ ಗೌಡರಿಗೆ ತಿಳಿದ ನಂತರ ಮಾರನೆ ದಿನ ಬೆಳಿಗ್ಗೆ ಹೊರ ಬೀರನಿಗೆ ಕರೆ ಕಳುಹಿಸಿದಾಗ, ಹಿರಿಯ ಮಗ ಸಣ್ಣ ನೀರನೊಡನೆ ದೊಡ್ಡ ಬೀರು ಬಂದಾಗ ವಿಚಾರಣೆ ಮಾಡಿದ ಗೌಡರು, ಕೋಪದಿಂದ ಇಚಾರದ ಸಾಯಿಂದ ದೇವರಿಗೆ ಹೊಡೆಸಿಬಿಡುತ್ತಾರೆ. ಸಣ್ಣ ನೀರನ್ನು ಹೆದರಿ ಕಂಗಾಲಾಗಿ ದಮ್ಮಯ್ಯ ಗುಡ್ಡೆ ಹಾಕಿ ಒಡೆಯನನ್ನು ಸಾಬಿಯನ್ನು ಬೇಡಿಕೊಂಡರೂ ಮಾನವೀಯ ಅನುಕಂಪ ಎಲ್ಲಪ್ಪು ನಿಮ್ಮ ಮೂಲಕ ಅವನ ಕ್ರೌರ್ಯ ತಾಂಡವವಾಡುತ್ತದೆ. ಸಣ್ಣ ಬೀರನು ಹೊಡೆತದ ನೋವನ್ನು ಸಹಿಸಲಸಾಧ್ಯವಾಗಿ ಚಿಟಾರನೆ ಕೂಗಿಕೊಂಡು ರೋಧಿಸುತ್ತಾ "ದಮ್ಮಯ್ಯ ಸಾಜ್ ಹೊಡೀ ಬ್ಯಾಡಿ, ನಾ ಸಾಯ್ತಿನಿ ನನ್ನ ಹೆಂಡ್ರು ಮಕ್ಕಳ ಬಾಯ್ ಮಣ್ಣು ಹಾಕಬ್ಯಾಡಿ – –––– (ಒಂದು ಅಸಹ್ಯ ಪದ ಪ್ರಯೋಗ ಮಾಡಿ) ತಿನ್ತೀನಿ ಆಯ್ಯೋ ಅಪ್ಪಾ ಬಿಡಿಸೋ! ನಂಗೊತ್ತಿಲ್ಲೋ, ತಿಮ್ಮಿ ಎಲ್ಲಿ ಹೋದ್ಲು ಅಂತಾ! ಅಯ್ಯೋ ಅಯ್ಯೋ ಅಯ್ಯೋ" ಎಂದು ಸಣ್ಣ ಬೀರ ಒದ್ದಾಡಿಕೊಂಡು ಒರಲುತ್ತಿದ್ದ ಹಾಗೆಯೇ ಇಜಾರದ ಸಾಬಿ ಮತ್ತೂ ಒಂದು, ಎರಡು, ಮೂರು ಸಾರಿ ಬೀಸಿ ಬೀಸಿ ಬರಲಿನಿಂದ ಹೊಡದೇ ಬಿಟ್ಟನು. ಮೊದಲ ಬಾರಿಯ ಹೊಡೆತಕ್ಕೆ ಬಾಸುಂಡೆಗಳೆದ್ದಿದ್ದ ಬೆನ್ನು ಎರಡನೆಯ ಸುತ್ತಿನ ಪೆಟ್ಟುಗಳಿಗೆ ಇದ್ದಕ್ಕಿದ್ದ ಹಾಗೆಯೇ ಕೆಂಪಾಯಿತು. ನೆತ್ತರು ಚಿಮ್ಮಿ ಅವನು ಉಟ್ಟಿದ್ದ ಪಂಚೆ ಒದ್ದೆಯಾಗಿ ಕಾಲ ಮೇಲೆ ಇಳಿದ ಉಚ್ಚೆಗೆ ನೆಲ ತೊಯ್ದಿತ್ತು. ಅಂಡಿನ ಬಟ್ಟೆಯೂ ರಕ್ತದಿಂದ ಕೆಂಪಾಯಿತು. ಅವನ ಕೂಗೂ ಒಮ್ಮೆಗೆ ನಿಂತುಬಿಟ್ಟಿತು! ತಲೆ ಕತ್ತಿನ ಮೇಲೆ ನಿಲ್ಲಲೊಲ್ಲದೆ ಜೋಲಿತು! ದೊಡ್ಡ ಬೀರ ಗದ್ಗದಿಸುತ್ತಾ ಎದ್ದು ಓಡಿಹೋಗಿ ಗೌಡರ ಕಾಲ ಬಳಿ ದೊಪ್ಪನೆ ಬಿದ್ದು "ಒಡೆಯಾ, ನನ್ನ ಮಗನ್ನ ಉಳಿಸಿಕೊಡಿ ಎಂದು ಆತಂಕ ಬೆಳೆಸುತ್ತದೆ. ಕೂಗಿಕೊಂಡನು" (ಮ.ಮ.ಪ್ರ. ೩೩೫) ಶತಮಾನಗಳಿಂದ ಈ ಬರ್ಬರವಾ ವ್ಯವಸ್ಥೆಯಲ್ಲಿ ಜಮೀನ್ದಾರರ ಈ ರಾಕ್ಷಸ ಕೌರ್ಯ ಏನೂ ತಪ್ಪು ಮಾಡಿರದಿದ್ದರೂ ಬಲಿಯಾಗಬೇಕಾದ ಜೀತದಾಳುಗಳ ಚಿಂತಾಜನಕ ದುರಂತಮಯ ಬದುಕನ್ನು ಕಾದಂಬರಿಯ ಮೇಲಿನ ಸನ್ನಿವೇಶವು ಅನಾವರಣಗೊಳಿಸುತ್ತದೆ. ಈ ರೀತಿಯ ಅಮಾನವೀಯ ಅಸಮಾನತೆಯ ವ್ಯವಸ್ಥೆ ಬದಲಾಗಿ ಮಾನವೀಯ ಸಮಾನತೆಯ ಸಮಾಜ ರೂಪಿತವಾಗಬೇಕು ಎಂಬ ಆಶಯವನ್ನು ಕಾದಂಬರಿ ಧ್ವನಿಸುತ್ತದೆ.

ಜಮೀನ್ದಾರಿ ಮತ್ತು ಆಡಳಿತಶಾಹಿ ವ್ಯವಸ್ಥೆ ಎಷ್ಟು ಭಯಾನಕವಾಗಿದೆಯೆಂಬುದನ್ನು ಗುತ್ತಿಯ ದೇಶಾಂತರ ಸೂಚಿಸುತ್ತದೆ. ತನ್ನ ಅತ್ತೆಯ ಮಗಳಾದ ತಿಮ್ಮಿಯನ್ನು ಯಾವುದೇ ತೊಂದರೆಯಿಲ್ಲದೆ ಮದುವೆಯಾಗಿ ಸುಖವಾಗಿ ಬಾಳಬೇಕಾಗಿದ್ದ ಗುತ್ತಿ ಬೆಟ್ಟಳ್ಳಿಯ ಜಮೀನ್ದಾರನಿಗೂ ಮತ್ತು ಪೋಲಿಸಿನವರಿಗೂ ಹೆದರಿ ಅಸಹಾಯಕನಾಗಿ ವನವಾಸ ಅನುಭವಿಸಿ, ಅಲೆಮಾರಿಯಾಗಿ ಭಾರವಾದ ಹೃದಯದಿಂದ ಊರನ್ನು ತ್ಯಜಿಸಿ ದೇಶಾಂತರ ಹೋಗಬೇಕಾಗುತ್ತದೆ.

ಜನಪ್ರಿಯವಾದ ರಾಜಕಾರಣ ಮತ್ತು ಅದರ ಪರಿಣಾಮವು ಬೇರೆ ಬೇರೆ ಬಗೆಯಲ್ಲಿ ಇರುತ್ತದೆ. ಆದರೆ ಇದು ಯಾಕೆ ಜನಪ್ರಿಯವಾಗುತ್ತದೆ ಮತ್ತು ಅದರ ಪರಿಣಾಮವು ಯಾವುದು ಎಂದು ಯೋಚನೆ ಮಾಡಲು ಹೋಗುವುದೂ ಇಲ್ಲ. ಆಧುನಿಕ ಮಾರುಕಟ್ಟೆ ಮತ್ತು ಅದರ ವ್ಯವಸ್ಥೆಯು ನಮಗೆ ಒಂದು ಸಿಟ್ಟನ್ನು ತರುತ್ತದೆ. ಅದರ ಜೊತೆಗೆ ಈವತ್ತು ನಮಗೆ ಆರ್ಥಿಕವಾದ

ಸಮಸ್ಯೆಯು ಇದೆ. ಮತ್ತೊಂದು ಕಡೆಯಿಂದ ನಮ್ಮ ಬೇರೆ ಬೇರೆ ಆತಂಕಗಳೂ ಇವೆ. ಇದನ್ನು ಆಧುನಿಕೋತ್ತರವಾದಿಗಳು ಸ್ವಲ್ಪ ಮರೆ ಮಾಡುತ್ತಾರೆ. ಈವತ್ತು ನಮಗೆ ಎದುರಾಗುತ್ತಿರುವ ಸಮಸ್ಯೆಯು ಒಂದರೆಡಲ್ಲ. ಭಯೋತ್ಪಾದನೆ, ಜನಪ್ರಿಯ ರಾಜಕಾರಣಗಳು, ಸಮಾಜ ಮತ್ತು ಅದರ ನೈತಿಕವಾದ ಬಿಕಟ್ಟುಗಳು ನಮ್ಮ ಹಿಂಡಿ ಹಿಪ್ಪೆ ಮಾಡುತ್ತಿವೆ. ಆಧುನಿಕೋತ್ತರ ಶೈಲಿಯು ನಮ್ಮ ಆಲೋಚನೆಯನ್ನು ಖಾಲಿಯಾದ ಅವಕಾಶದಲ್ಲಿ ಇಡುತ್ತಿರುವುದರಿಂದ ಅದರ ಸಮಸ್ಯೆಯೇ ಬೇರೆಯಾಗಿದೆ. ಮಾರುಕಟ್ಟೆ ಮತ್ತು ಅದರ ಏರಿಳಿತಗಳು ನಮಗೆ ಸಮಸ್ಯೆಯನ್ನು ತರುತ್ತವೆ. ಹಾಗೆ ನೋಡಿದರೆ ಸಮಸ್ಯೆಯು ಒಂದರೆಡಲ್ಲ. ಅದು ಕುಟುಂಬ ಜೀವನದ ಮೇಲೆ ಪ್ರಭಾವವನ್ನು ಬೀರಿದೆ. ಒಂದು ಅಸ್ಥಿರತೆಯು ಕಾಣುತ್ತದೆ. ಈ ಜಗತ್ತು ಮತ್ತು ಅದರ ಸಮಸ್ಯೆಯು ವ್ಯಕ್ತಿಗಳಾಗಿ ನಮ್ಮ ಮೇಲೆ ಆಗುತ್ತದೆ. ನಮಗೆ ಈಗ ಇರುವ ಸಮಸ್ಯೆಯು ನಮ್ಮ ಮಾನವೀಯ ಅಸ್ತಿತ್ವದಿಂದ ಪ್ರಾರಂಭವಾಗುತ್ತದೆ. ನಮ್ಮ ಆಲೋಚನೆಯ ಕ್ರಮವು ಎಲ್ಲಿಂದ ಪ್ರಾರಂಭವಾಗುತ್ತದೆಯೋ ಅಲ್ಲಿಂದಲೆ ನಮ್ಮ ಅಸ್ತಿತ್ವದ ಬಗೆಗಿನ ಚಿಂತನೆಯ ಕ್ರಮವು ಪ್ರಾರಂಭವಾಗುತ್ತದೆ. ನಾನು ಮನುಷ್ಯನಾಗಿ ಏನು ಆಗಬೇಕು ಮತ್ತು ನನ್ನ ಅಸ್ತಿತ್ವದ ಅರ್ಥವೇನು ಎಂಬುದರ ಜಿಜ್ಞಾಸೆಯು ನಮ್ಮ ಬದುಕಿನಲ್ಲಿ ಮುಖ್ಯವಾದುದು. ಎಲ್ಲಿ ನಮ್ಮ ಮನಸ್ಸು ಕ್ರಿಯಾಶೀಲವಾಗಿರುತ್ತದೆಯೋ ಅಲ್ಲೆಲ್ಲಾ ಈ ರೀತಿಯ ಪ್ರಶ್ನೆಗಳು ನಮ್ಮ ಎದುರು ಇರುತ್ತದೆ. ಮನುಷ್ಯರ ಸ್ವಭಾವವು ಇನ್ನೂ ಒಂದು ರೀತಿಯಲ್ಲಿ ಇರುತ್ತದೆ. ಅದು ನೀತಿ ಮತ್ತು ಅನೀತಿಗೆ ಸಂಬಂಧಪಟ್ಟದ್ದು. ನೀತಿ ಮತ್ತು ಅನೀತಿಯೆನ್ನುವುದೇ ಒಂದು ಚೌಕಟ್ಟು, ಅದರಾಚೆಗೆ ಬೇರೆ ಏನೂ ಇರುವುದಿಲ್ಲ. ಅನೈತಿಕರು, ಭ್ರಷ್ಟರು, ಕೇಡಿನವರು ಎಂದು ಕರೆಯುತ್ತೇವೆಯೋ ಅವರನ್ನು ಕಾನೂನು ಬದ್ಧವಾಗಿಯೇ ಶಿಕ್ಷಿಸುತ್ತೇವೆ. ಅದು ನಡತೆಯನ್ನು ರೂಪಿಸಲು ಸಹಾಯ ಮಾಡುತ್ತದೆ. ಇದರ ಒಂದು ನಂಬಿಕೆಯೇ ಮತ್ತೊಬ್ಬರ ನಂಬಿಕೆಯಾಗಿ ರವಾನೆಯಾಗುತ್ತದೆ. ಯಾವುದನ್ನು ನಾವು ಮಾನವೀಯ ಚಟುವಟಿಕೆ ಎಂದು ಕರೆಯುತ್ತೇವೆಯೋ ಅದು ಕೂಡಾ ಇದೇ ಹಿನ್ನೆಲೆಯಿಂದ ಬಂದಿರುತ್ತದೆ. ಸ್ವಂತಿಕೆ ಎನ್ನುವುದೂ ಕೂಡಾ ಸನ್ನಿವೇಶದ ಸೃಷ್ಟಿ. ಹಾಗೂ ಮನುಷ್ಯನಾಗುವುದು ಎಂದರೆ ಉದ್ದೇಶಿತ ಚಟುವಟಿಕೆ. ಅದಕ್ಕೆ ಸಂಬಂಧಪಟ್ಟ ಕ್ರಿಯೆಯೂ ನಮ್ಮದೇ ಆಯ್ಕೆ. ಸ್ವಭಾವವನ್ನು ಈ ದೃಷ್ಟಿಯಿಂದ ಪ್ರತ್ಯೇಕಗೊಳಿಸಲು ಆಗುವುದಿಲ್ಲ. ಜಾಗತೀಕರಣದ ಸಂದರ್ಭದಲ್ಲಿ ಇದರ ಪ್ರಶ್ನೆಯು ಮಾತು ಹೆಚ್ಚಾಯಿತು.

ಮಾರ್ಕ್ಸ್ ಮತ್ತು ಏಂಗಲ್ಸ್ ಅವರು ತಾತ್ವಿಕತೆಯನ್ನು ಕುರಿತು ಯೋಚಿಸುವಾಗ ಇದರ ಚರ್ಚೆಯನ್ನು ಬೇರೆ ರೀತಿಯಲ್ಲಿಯೂ ಮಂಡಿಸಿದ್ದರು ಎನ್ನುವುದು ಇಲ್ಲಿ ಗಮನಾರ್ಹ. ಸಾಮಾಜಿಕ ಮೌಲ್ಯ ಮತ್ತು ಅದರ ಹಿಂದೆ ಇರುವ ತಾತ್ವಿಕತೆಯನ್ನು ಆಳುವ ವರ್ಗವು ತನಗೆ ಬೇಕಾದಂತೆ ರೂಪಿಸಿಕೊಳ್ಳುತ್ತದೆ. ಯಜಮಾನಿಕೆಯನ್ನು ವಹಿಸುವ ವರ್ಗವು ತನಗೆ ಬೇಕಾದಂತೆ ಸಾಮಾಜಿಕ ಜೀವನದಲ್ಲಿ ಮೌಲ್ಯಗಳನ್ನು ರೂಪಿಸಿಕೊಳ್ಳುತ್ತದೆ. ಅದಕ್ಕೆ ಬೇಕಾದಂತೆ ಸಂಸ್ಥೆಗಳನ್ನು ಹುಟ್ಟು ಹಾಕುತ್ತದೆ. ಬಂಡವಾಳವಾದವು ರೂಪಿಸಿಕೊಳ್ಳುವ ಮತ್ತೊಂದು ಅಂಶವೆಂದರೆ ಮನುಷ್ಯ ಮನುಷ್ಯರ ನಡುವೆ ಸ್ಪರ್ಧೆ. ಯಾರು ಹೆಚ್ಚು ಲಾಭವನ್ನು ಮಾಡುತ್ತಾರೆಯೋ ಅವರಿಗೆ ಹೆಚ್ಚು ಮನ್ನಣೆಯನ್ನು ನೀಡಲಾಗುತ್ತದೆ. ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವೆಂದರೆ ಜಾಗತೀಕರಣ

ಮತ್ತು ಬಂಡವಾಳವಾದವು ಮನುಷ್ಯರನ್ನು ಆಸೆಬುರುಕರನ್ನಾಗಿ ಮಾಡುತ್ತವೆ. ಮಾರ್ಕ್ಸ್ ಹೇಳುವಂತೆ ಯಾವುದು ಆಡಳಿತ ವರ್ಗದ ತಾತ್ವಿಕತೆಯಾಗಿರುತ್ತದೆಯೋ ಅದನ್ನು ಉಳಿದವರು ಅನುಕರಿಸಲು ತೊಡಗುತ್ತಾರೆ. ತನ್ನ ವರಸೆಗೆ ತಕ್ಕಂತೆ ಆಳುವ ವರ್ಗವು ತಾತ್ವಿಕತೆಯನ್ನು ಹೇರುವುದೂ ಅಷ್ಟೇ ನಿಜ. ಆದರೆ ಕಮ್ಯುನಿಸ್ಟ್ ತಾತ್ವಿಕತೆಯು ಮನುಷ್ಯರ ನಡುವಣ ಸಹಕಾರವನ್ನು ಮಾತ್ರವೇ ಹೇಳುತ್ತದೆ. ಆದುದರಿಂದ ಅದರ ತಾತ್ವಿಕತೆಯು ಬೇರೆಯಾಗುತ್ತದೆ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಮನುಷ್ಯ ಸಮಾಜವು ಅತ್ಯಂತ ಸಂಕೀರ್ಣವಾದುದೂ ಹೌದು. ಮನುಷ್ಯನೆಂದರೆ ಅವನು ಸಮಾಜದಲ್ಲಿ ಅವನದೇ ಆದ ಚಟುವಟಿಕೆಯನ್ನು ರೂಪಿಸಿಕೊಂಡಿರುತ್ತಾನೆ. ಅನೇಕ ಸಂದರ್ಭದಲ್ಲಿ ವ್ಯಕ್ತಿ ಮತ್ತು ಅವನ ವ್ಯಕ್ತಿತ್ವವು ರೂಪಿಸಲ್ಪಟ್ಟಿರುತ್ತದೆ. ಆದುದರಿಂದ ವ್ಯಕ್ತಿತ್ವ ಅನ್ನುವುದು ಸ್ವತಂತ್ರವಲ್ಲ ಎಂದು ಮಾರ್ಕ್ಸ್‌ವಾದವು ಹೇಳುತ್ತದೆ. ಮಾರ್ಕ್ಸ್‌ವಾದದ ಪ್ರಕಾರ ಸ್ವಾತಂತ್ರ್ಯ ಮತ್ತು ಅದರ ಅಭಿವ್ಯಕ್ತಿಗೆ ಸಂಬಂಧಪಟ್ಟಂತೆ ಅನೇಕ ವೈರುಧ್ಯವಿದೆ. ಬಾಹ್ಯ ಮತ್ತು ಆಂತರಿಕ, ವಸ್ತು ನಿಷ್ಟತೆ ಮತ್ತು ವಿಷಯ ನಿಷ್ಟತೆ, ಖಾಸಗಿ ಮತ್ತು ಸಾರ್ವಜನಿಕ, ಶ್ರಮ ಮತ್ತು ಬಿಡುವು, ಸಾಮಾಜಿಕತೆ ಮತ್ತು ಮಾನಸಿಕ, ರಾಜಕೀಯ ಮತ್ತು ಕಾವ್ಯಾತ್ಮಕ ಇವುಗಳ ನಡುವೆ ಅನೇಕ ರೀತಿಯಲ್ಲಿ ಸಂಘರ್ಷಗಳಿವೆ. ಲೂಯಿಸ್ ಅಲ್ಲೂಸರ್ ಹೇಳುವಂತೆ ಆದರ್ಶ ಸಮಾಜವು ರೂಪುಗೊಳ್ಳಲು ನಿಜವಾದ ಆದರ್ಶ ಪ್ರಭುತ್ವವು ಬೇಕು. ಮಾರ್ಕ್ಸ್‌ವಾದವು ಮತ್ತೊಂದು ಸಂಗತಿಯನ್ನು ಹೇಳುತ್ತದೆ– ಮನುಷ್ಯರ ನಡುವಣ ಸ್ಪರ್ಧೆಯಿದೆ. ಅಸ್ತಿತ್ವದ ಹಿನ್ನೆಲೆಯೂ ಮನುಷ್ಯರ ಸ್ವಭಾವಕ್ಕೂ ಅವನ ಸಾಮಾಜಿಕತೆಗೂ ಸಂಬಂಧವಿರುವಂತೆಯೇ ಅವನ ಆರ್ಥಿಕತೆಗೂ ಅವನ ಸ್ಥಾನಮಾನಕ್ಕೂ ಸಂಬಂಧವಿದೆ. ಇದನ್ನು ಮಾರ್ಕ್ಸ್ ತನ್ನ ಪೊಲಿಟಿಕಲ್ ಎಕಾನಮಿಯಲ್ಲಿಯೂ ವಿವರಿಸಿದ್ದಾನೆ. ಪೊಲಿಟಿಕಲ್ ಫಿಲಾಸಫಿಯು ನಿಂತಿರುವುದು ಭಿನ್ನವಾದ ತಳಹದಿಯ ಮೇಲೆ ರಾಜಕೀಯ ವಾಸ್ತವವೆಂದು ಯಾವುದನ್ನು ಕರೆಯುತ್ತೇವೆಯೆಂದರೆ ಅದಕ್ಕೆ ಭದ್ರವಾದ ತಳಹದಿಯು ಇದ್ದಾಗ ಮಾತ್ರವೇ.

ಗ್ರಾಂಶಿಯು ಮತ್ತೆ ಒಂದು ವಿವರವನ್ನು ನಮ್ಮ ಮುಂದೆ ಇಡುತ್ತಾನೆ–ಆಧುನಿಕ ಶಾಲೆಗಳು, ಚರ್ಚುಗಳು, ಸಮೂಹ ಮಾಧ್ಯಮಗಳು, ಸಿನಿಮಾಗಳು ನಮ್ಮ ಮುಂದೆ ಇಡುವುದು ಸಂಸ್ಕೃತಿಯ ವಿಭಿನ್ನ ಸಂಗತಿಗಳನ್ನು. ಸಿವಿಲ್ ಸೊಸೈಟಿಯು ಸಂಸ್ಕೃತಿಯನ್ನೂ ತನಗೆ ಬೇಕಾದಂತೆ ವ್ಯಾಖ್ಯಾನಿಸುತ್ತದೆ. ಹಾಗೂ ನಾಗರಿಕ ಸಮಾಜವು ಅನೇಕ ಸಂಸ್ಥೆಗಳನ್ನು ನಿರ್ದಿಷ್ಟವಾಗಿ ಒಂದು ಕೇಂದ್ರದಲ್ಲಿ ತಂದು ನಿಲ್ಲಿಸಿ ಸಂಸ್ಕೃತಿಯನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನೂ ಮಾಡುತ್ತದೆ. ಈ ಕಾರಣದಿಂದ ಆಧುನಿಕ ಪ್ರಭುತ್ವವು ಸಂಸ್ಥೆಗಳನ್ನು ಸಮಾಜದ ಕೇಂದ್ರದಲ್ಲಿ ತಂದು ನಿಲ್ಲಿಸುತ್ತದೆ. ಯಜಮಾನಿಕೆಯನ್ನು ವಹಿಸುವ ವರ್ಗವು ತನಗೆ ಬೇಕಾದಂತೆ ಕೆಲವು ವ್ಯಾಖ್ಯಾನಗಳನ್ನು ಮಾಡುತ್ತದೆ. ಸಮಾಜದ ಸರಿ ಮತ್ತು ತಪ್ಪು ಎಂದು ಕೆಲವನ್ನು ನಿಶ್ಚಯಿಸುವುದೂ ಇದೇ. ಕೇಂದ್ರ ಮತ್ತು ಪರಿಧಿಯ ಕಲ್ಪನೆಯೂ ಇದರದೇ. ಸಂಸ್ಕೃತಿಯ ಅಧ್ಯಯನದಲ್ಲಿ ಗ್ರಾಂಶಿಯು ಬಳಸಿದ ಪರಿಭಾಷೆಯೆಂದರೆ ಹೆಜೆಮನಿ. ಯಜಮಾನಿಕೆಯು ನಮ್ಮನ್ನು ಆಳಲು ಕೆಲವು ಸಂಸ್ಥೆಗಳನ್ನು ಹುಟ್ಟು ಹಾಕುತ್ತದೆ. ಅದರಲ್ಲಿ ಪೋಲಿಸ್ ವ್ಯವಸ್ಥೆ, ಕೋರ್ಟ್, ಮಿಲಿಟರಿ ಮುಂತಾದವುಗಳು ಇರುತ್ತವೆ. ಮತ್ತು ಪರೋಕ್ಷವಾಗಿ ಕೆಲವನ್ನು ಅದು ಶ್ರೇಷ್ಠವೆಂದು ಹೇಳುತ್ತದೆ. ಹಾಗೂ ಯಜಮಾನಿಕೆಯು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಯತ್ನಿಸುತ್ತದೆ. ಕೆಲವು

ಬೌಂಡರಿಗಳನ್ನು ಕೂಡಾ ಅದು ರೂಪಿಸುತ್ತದೆ. ಅಧಿಕಾರ ರಚನೆಗೆ ಯಾವುದು ಶ್ರೇಷ್ಟ, ಯಾವುದು ಕನಿಷ್ಟವೆಂಬ ವರ್ಗೀಕರಣಗಳು ತುಂಬಾ ಅಗತ್ಯವಿರುತ್ತದೆ. ಯಾವುದು ಯಜಮಾನಿಕೆಯ ಪ್ರಾತಿನಿಧಿಕ ರೂಪವಾಗಿದೆಯೋ ಅದು ಸಾಂಸ್ಕೃತಿಕ ರೂಪಗಳ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಯಾವುದು ಸಾಮಾಜಿಕ ರಚನೆಯ ಭಾಗವಾಗಿದೆಯೋ ಅದನ್ನು ನಿರೂಪಿಸುವ ಸಂಸ್ಥೆಗಳನ್ನು ಸಾಮಾಜಿಕ ಸಿಮೆಂಟ್ ಎಂದು ಗ್ರಾಂಶಿಯು ಹೇಳುತ್ತಾನೆ. ಯಜಮಾನಿಕೆಯನ್ನು ವಹಿಸುವ ವರ್ಗಗಳು ರೂಪಿಸುವ ನೀತಿ ಸಂಹಿತೆಗಳು ನಮ್ಮ ಸಂಸ್ಕೃತಿಯ ಭಾಗಗಳು ಎಂದೇ ನಾವು ಭಾವಿಸುತ್ತೇವೆ. ಅನೇಕ ಸಂದರ್ಭಗಳಲ್ಲಿ ಬುದ್ಧಿಜೀವಿಗಳು ಸಾಂಸ್ಥಿಕವಾದ ಮೌಲ್ಯಗಳನ್ನು ಪ್ರಚುರ ಪಡಿಸುವಂತೆಯೇ ಮಾತಾಡುತ್ತಾರೆ. ಹಾಗೆ ನೋಡುವುದಿದ್ದರೆ ಆಧುನಿಕ ಯುಗದಲ್ಲಿ ಬಂದಿರುವ ಆಡಳಿತಾತ್ಮಕ ವ್ಯವಸ್ಥೆಯು ಅದರದೇ ಆದ ರಚನೆಯನ್ನು ಒಳಗೊಂಡಿದೆ. ಸಂಸ್ಕೃತಿಯ ಚರ್ಚೆಯಲ್ಲಿ ಈ ಆಡಳಿತಾತ್ಮಕ ವ್ಯವಸ್ಥೆಯು ಬಹು ದೊಡ್ಡ ಸಂಶೋಧನೆಯ ಅವಕಾಶವನ್ನೂ ಕಲ್ಪಿಸಿದೆ. (ನೋಡಿ ಗ್ರಾಂಶಿ – ಪ್ರಿಸನ್ ನೋಟ್ ಬುಕ್)

ನಿರಚನ ಸಿದ್ಧಾಂತಕ್ಕೆ ಪ್ರಭಾವ ಬೀರಿರುವ ವ್ಯಕ್ತಿಯೆಂದರೆ ನೀಶೆ. (೧೮೪೪–೧೯೦೦) ನೀಶೆಯು 'ಪಶ್ಚಿಮದ ತತ್ತ್ವಜ್ಞಾನವು ಪೂರ್ವ ನಿಯೋಜನೆಗೆ ಒಳಪಟ್ಟಿದೆ' ಎಂದು ಹೇಳುತ್ತಾನೆ. ಇಲ್ಲಿ ಪ್ರಭಾವ ಎನ್ನುವ ಪದವನ್ನು ಬಳಸಲಾಗಿದೆ. ಅದು ಒಂದು ರೀತಿಯಿಂದ ನಮ್ಮನ್ನು 'ತಪ್ಪು' ಹಾದಿಗೆ ಕರೆದೊಯ್ಯುತ್ತದೆ. ಅದರ ಜೊತೆಗೆ ಈ ಪದವು ನಿರ್ದಿಷ್ಟ ಪರಿಕಲ್ಪನಾತ್ಮಕ ಅಂಶಗಳನ್ನು ಒಳಗೊಂಡಿದ್ದು ಅದರಲ್ಲಿ ನಿರ್ದಿಷ್ಟ 'ಆಶಯ' (Theme)ವನ್ನು ಪ್ರತಿಪಾದಿಸಲಾಗುತ್ತದೆ. ಇದರ ಪರಿಣಾಮವಾಗಿ ಒಂದರ ಪ್ರಭಾವದಿಂದ ಇನ್ನೊಂದು ಎನ್ನುವಾಗ ಯಾವುದು ಪ್ರಭಾವ ಬೀರಿದೆಯೋ ಅದು ಯಜಮಾನಿಕೆಯನ್ನು ವಹಿಸುತ್ತದೆ. ಹೀಗಾಗಿ ನಿರಚನ ಸಿದ್ಧಾಂತದ ಮೇಲೆ ನೀಶೆಯ ತತ್ತ್ವಜ್ಞಾನದ ಗ್ರಹಿಕೆಗಳು ಪ್ರಭಾವ ಬೀರಿದೆಯೆಂದು ಹೇಳಿರುವಾಗ ಆತನ ತತ್ತ್ವಜ್ಞಾನವೇ ಯಜಮಾನಿಕೆಯನ್ನು ವಹಿಸಿ ನಿರಚನ ಸಿದ್ಧಾಂತವು ಅದರ ಹಿಂದೆ ಬರುವ ಅಡಿಯಾಳು ಆಗುವ ಅಪಾಯವಿರುತ್ತದೆ. ನಿರಚನ ಸಿದ್ಧಾಂತವು ವಿರೋಧಿಸುವುದು ಇದನ್ನೇ 'ಯಾವುದೇ ಆಗಲಿ' ಒಂದರ ಮೇಲೆ 'ಇನ್ನೊಂದು' ಯಜಮಾನಿಕೆಯನ್ನು ವಹಿಸುತ್ತದೆಯೆಂಬ ಪರಿಕಲ್ಪನೆಯಾಗಲಿ ಒಂದರ ಮುಖಾಂತರ ಇನ್ನೊಂದು ವಿಷಯವನ್ನು ಗ್ರಹಿಸುತೇವೆ ಎಂಬ ನಿಲುವನ್ನಾಗಲೀ ನಿರಚನ ಸಿದ್ಧಾಂತವು ನಿರಾಕರಿಸುತ್ತದೆ, ಯಜಮಾನಿಕೆಯನ್ನು ವಹಿಸುವ ಈ ರೀತಿಯ ತಿಳುವಳಿಕೆಯನ್ನು ನಿರಚನವು ವಿರೋಧಿಸುವುದರಿಂದ ಆ ಸಿದ್ಧಾಂತಕ್ಕೆ ನೀಶೆಯೇ ಪ್ರಭಾವ ಬೀರಿದ ಎಂದು ಹೇಳಿದರೆ ಅಲ್ಲಿ 'ನೀಶೆಯ ಸಿದ್ಧಾಂತಗಳ ಯಜಮಾನಿಕೆ'ಯನ್ನು ನಿರಚನ ಸಿದ್ಧಾಂತದ ಮಟ್ಟಿಗೆ ಒಪ್ಪಿಕೊಂಡಂತಾಯಿತು. ಆದುದರಿಂದ ಇದನ್ನು ಒಂದು ಅಪಾಯವೆಂದು ಕರೆಯಬಹುದೇ? ಇಲ್ಲಿ ಹೆಗೆಲ್ ಮತ್ತು ನೀಶೆಯ ಪ್ರಭಾವವು ಹೇಗೆ ಆಗಿದೆ ಎಂದೂ ನೋಡಬೇಕಾಗುತ್ತದೆ. ಹೆಗೆಲ್ ಸತ್ಯದ ಚರಿತ್ರೆ ಮತ್ತು ಚರಿತ್ರೆಯ ಸತ್ಯವನ್ನು ಬೇರೆ ಮಾಡುತ್ತಾನೆ. ಮಾತು ಮತ್ತು ಅದರ ಕ್ರಮವು ಬೇರೆಯಾಗುತ್ತದೆ. ಹಾಗೆ ನೋಡಿದರೆ ರೊಲಾಂಡ್ ಬಾರ್ತ್ ಕೂಡಾ ಬರಹವನ್ನು ಒಂದು ಭಿನ್ನವಾದ ಪ್ರಕ್ರಿಯೆ ಎಂದು ಭಾವಿಸುತ್ತಾನೆ. ಲೇಖಕರು ಮತ್ತು ಅವರ ಚರಿತ್ರೆಯನ್ನು ಬೇರೆ ಬೇರೆ ವಿಧದಲ್ಲಿ ನೋಡಲಾಗಿದೆ.

ಬರವಣಿಗೆಯನ್ನು ಮುಕ್ತ ಪ್ರಪಂಚಕ್ಕೆ ತೆರೆದಿರುವ ಹಾದಿಯೆಂದು ನಾವು ಪರಿಗಣಿಸಿದರೆ ಅದಕ್ಕೆ ನಿರ್ದಿಷ್ಟವಾದ ಬಂಧನವೆನ್ನುವುದು ಇರಲು ಸಾಧ್ಯವಿಲ್ಲ. ಇದರ ಹಿನ್ನೆಲೆಯಲ್ಲಿ 'ಆಲೋಚನೆಗಳ' ಚರಿತ್ರೆಯು ನಿರ್ದಿಷ್ಟವೆಂದೂ ಪರಿಗಣಿಸುವಂತಿಲ್ಲ ಎಂದು ಡೆರಿಡಾ ಹೇಳುತ್ತಾನೆ.

ಒಂದು ಪಠ್ಯವು ನಿರಚನಕ್ಕೆ ತೆರೆದುಕೊಳ್ಳುವಾಗಲೇ ಈ ಪ್ರಕ್ರಿಯೆಯು ಶುರುವಾಗುತ್ತದೆ. ನಿರಚನ ಸಂದರ್ಭದಲ್ಲಿ ಬರಹಗಾರನ ಉದ್ದೇಶವೇನು ಎಂಬುದು ಮುಖ್ಯವಲ್ಲ. ಈ ಅರ್ಥದಲ್ಲಿ ಡೆರಿಡಾ ಸುಮ್ಮನೇ ಯಥಾವತ್ತಾಗಿ ನೀಶೆಯ ತತ್ತ್ವಜ್ಞಾನವನ್ನು ಹಾಗೆಯೇ ಎತ್ತಿಕೊಂಡಿದ್ದಾನೆ ಎಂದು ಪರಿಭಾವಿಸುವಂತಿಲ್ಲ. ಅದರ ಬದಲಿಗೆ ಆತನ ತತ್ತ್ವಜ್ಞಾನವನ್ನು ಡೆರಿಡಾ ಆಧುನಿಕ, ರಚನೋತ್ತರ ಸಂದರ್ಭಕ್ಕೆ ತಕ್ಕಂತೆ ಆಳವಡಿಸಿಕೊಂಡ ಎಂದು ಹೇಳುವುದು ಸೂಕ್ತ. ಅದು ಬೇರೆ ಪ್ರಶ್ನೆ. ಆದರೆ ನಾವು ಇದನ್ನು ಮತ್ತೊಂದು ದೃಷ್ಟಿಕೋನದಿಂದ ನೋಡಬೇಕಾಗಿದೆ. ನಾವು ಯಾವುದರ ಅಡಿಯಾಳಾಗಿದ್ದೇವೆ ಮತ್ತು ನಮ್ಮನ್ನು ಯಾರು ಆಳುತ್ತಾರೆ ಎಂದು ನೋಡಬೇಕಾಗಿದೆ. ಇದ್ದಕ್ಕಿದ್ದಂತೆ ಜನರು ಕಾಣೆಯಾಗುತ್ತಾರೆ. ಅವರು ಯಾಕೆ ಗೈರು ಹಾಜರಿಯಾಗುತ್ತಾರೆ ಎಂದು ನೋಡಿದರೆ ನಮಗೆ ಜಗತ್ತು ಅದರ ಸಮಸ್ಯೆಯು ತಿಳಿಯುತ್ತದೆ. ಮಹಾಯುದ್ಧ ಮತ್ತು ಪರಿಣಾಮಗಳು ನಮ್ಮ ಮೇಲೆ ಆಗಿದೆ. ನಿಸರ್ಗದ ಮೇಲೆ ನಾವು ನಿರಂತರವಾಗಿ ನಮ್ಮ ಬಲವನ್ನು ಪ್ರದರ್ಶನ ಮಾಡುತ್ತಿದ್ದೇವೆ. ಹಾಗೆ ನೋಡಿದರೆ ನಾವು ಅಷ್ಟು ಮುಗ್ಧರಾಗಿಲ್ಲ. ಒಂದು ಸಮತೋಲನವು ಇಲ್ಲದ ಸ್ಥಿತಿಯಲ್ಲಿ ನಾವು ಇದ್ದೇವೆ. ಅಣುಬಾಂಬ್ ರಾಜ್ಯಗಳನ್ನು ಮಾತ್ರವೇ ನಾಶ ಮಾಡಿದೆ ಎಂದು ಭಾವಿಸಬೇಕಾಗಿಲ್ಲ. ಇಲ್ಲಿ ಮತ್ತೊಂದು ವಿಚಾರವನ್ನು ಹೇಳಬೇಕಾಗಿದೆ. ನಮ್ಮ ಆಲೋಚನೆ ಮತ್ತು ಅದರ ಸ್ವರೂಪವನ್ನು ಹೇಳುವಾಗ ಸ್ಪಿನೋಜಾ ಒಂದು ಮಾತನ್ನು ಹೇಳಿದ : ಆಲೋಚನೆಯು ತನ್ನ ಪಾಡಿಗೆ ತಾನೇ ಸ್ವತಂತ್ರವಲ್ಲ. ಆಲೋಚನೆಯು ನಮಗೆ ಹುಟ್ಟುತ್ತದೆ. ಆ ಆಲೋಚನೆಯು ನಮ್ಮ ಅಗತ್ಯಕ್ಕೆ ಅನುಸಾರವಾಗಿಯೇ ಇರುತ್ತದೆ. ನಾವು ಈವತ್ತು ಏನು ಆಲೋಚನೆಯನ್ನು ಮಾಡುತ್ತಿದ್ದೇವೆಯೋ ಅದರ ಸ್ವರೂಪವು ಅತ್ಯಂತ ಸಂಕೀರ್ಣವಾಗಿದೆ. ನಿಸರ್ಗ ಮತ್ತು ಅದರ ಮೇಲೆ ಹಿಡಿತವು ನಮ್ಮ ಉದ್ದೇಶ. ಆದ್ದರಿಂದ ಅದನ್ನು ನಿಯಂತ್ರಣ ಮಾಡಲು ಹೊರಟಿದ್ದೇವೆ. ನಿಸರ್ಗಕ್ಕೂ ನಮ್ಮ ಒಂದು ಆಕ್ರೋಶವು ಇದೆ. ಅದನ್ನು ಅದು ತೋರಿಸುತ್ತದೆ. ಅದರ ಸಿಟ್ಟು ಒಂದೇ ಬಗೆಯದು ಅಲ್ಲ. ಅದು ನಮ್ಮ ಮೇಲೆ ಬೇರೆ ಬೇರೆ ಥರ ತನ್ನ ಸಿಟ್ಟನ್ನು ತೋರಿಸುತ್ತದೆ. ಅಕಾಲಿಕವಾದ ಬರಗಾಲ, ಅಕಾಲಿಕವಾದ ಮಳೆ. ಕುಡಿಯುವ ನೀರಿನ ಕೊರತೆ ಇತ್ಯಾದಿ. ನಿಯಂತ್ರಣವನ್ನು ಮಾಡಲಿಕ್ಕೆ ನಾವು ಬೇರೆ ಬೇರೆ ಪರಿಕರವನ್ನು ಬಳಸುತ್ತಿದ್ದೇವೆ. ನಿಸರ್ಗ ಮತ್ತು ಅದರ ವರ್ತನೆಯು ಒಂದು ಥರವಿರುತ್ತದೆ. ಆ ವರ್ತನೆಯನ್ನು ನಾವು ಬಲವಂತವಾಗಿ ನಿಗ್ರಹ ಮಾಡುತ್ತೇವೆ. ನಿಸರ್ಗ ಮತ್ತು ಅದರ ಜೊತೆಗೆ ನಾವು ನೀಡಬೇಕಾದ ಸಹಕಾರವು ಒಂದು ಥರವಿದ್ದರೆ ಅದರ ಮೇಲೆ ನಾವು ನಡೆಸುವ ಅಧಿಕಾರವು ಮತ್ತೊಂದು ಥರವಿರುತ್ತದೆ. ನಾವು ಈಗ ಸಹಕಾರವನ್ನು ಬಿಟ್ಟು ಅಧಿಕಾರವನ್ನು ನಡೆಸಲು ಹೋಗಿಯೇ ಸಿಕ್ಕು ಹಾಕಿಕೊಂಡಿದ್ದೇವೆ. ನಿಸರ್ಗವು ಒಂದು ಕಲುಷಿತವಾದ ಆದ ಸ್ವರೂಪಕ್ಕೆ ಬಂದಿದೆ. ಚರ್ನೋಬೈಲ್ ಒಂದು ಉದಾಹರಣೆಯು ಮಾತ್ರವೇ ಆಗಿದೆ.

ನಿಸರ್ಗ ಮತ್ತು ನಮ್ಮ ನಡುವೆ ಬೇರೆ ಬೇರೆ ಅಂತರಗಳು ಸೃಷ್ಟಿಯಾಗಿವೆ. ಇದರ ನಡುವೆ ನಾವು ಸಹಜತೆಯನ್ನು ಬಿಟ್ಟು ಅಸಹಜತೆಯನ್ನು ಒಪ್ಪಿಕೊಂಡಿದ್ದೇವೆ. ತಮಾಷೆಯ ಮಾತನ್ನು ಹೇಳುವುದಿದ್ದರೆ ಇದನ್ನು ಜಿಜೆಕ್ ಹೇಳುತ್ತಾನೆ : ನಾವು ಇಲ್ಲಿ ಅಂದರೆ ಈ ಭೂಮಿಯಲ್ಲಿ ಮನುಷ್ಯರು ಇಲ್ಲದೆ ಹೋಗಿದ್ದರೆ ಭೂಮಿಯ ಮೇಲೆ ಬರೀ ಪ್ರಾಣಿಗಳು ಮಾತ್ರವೇ ಇರುತ್ತಿದ್ದವು. ಅವನು ಹೇಳುವ ಹಾಗೆ ಈವತ್ತು ಮನುಷ್ಯತ್ವ ಎಂದರೆ ನಾವು ಟಿವಿಯಲ್ಲಿ ಪ್ರಾಣಿಗಳನ್ನು ನೋಡುವುದು. ಅದರ ಸ್ವರೂಪವನ್ನು ವಿವರಣೆಗಳನ್ನು ಗಮನಿಸುವುದು. ನಾವು ಇದಕ್ಕೆ ಬೇಕಾದ ಎಲ್ಲಾ ತಂತ್ರಜ್ಞಾನಗಳನ್ನು ಹೊಂದಿದ್ದೇವೆ. ನಮಗೆ ಇದು ಬಹಳ ಮುಖ್ಯವಾದ ವಿಷಯದ ಥರ ಕಾಣಿಸುತ್ತದೆ. ಪ್ರಾಣಿಗಳನ್ನು ನೋಡುತ್ತಾ ಹೋದಂತೆ ನಮಗೆ ನಾವೇ ಪರಕೀಯರಾಗಿ ಬಿಡುತ್ತೇವೆ. ಪ್ರಾಣಿಗಳು ತಮ್ಮ ಪಾಡಿಗೆ ಬೇಟೆಯಾಡುತ್ತಾ ಹೋಗುತ್ತವೆ. ಪ್ರಾಣಿಗಳ ಜಗತ್ತು ನಮಗೆ ಒಂದು ಫ್ಯಾಂಟಸಿಯ ಥರ ಕಾಣಿಸುತ್ತದೆ. ಅಷ್ಟೇ ಅಲ್ಲ ಅದರ ಮುಖಾಂತರ ನಾವು ನಮ್ಮ ಪಾಡಿಗೆ ನಾವೇ ಅವಾಸ್ತವ ಆಗುತ್ತೇವೆ. ಪ್ರಾಣಿಗಳು ಬೇಟೆಯಾಡುವುದನ್ನು ನೋಡಿ ನಮಗೆ ಯಾಕೆ ಖುಶಿಯಾಗುತ್ತದೆ ಎಂದೂ ಯೋಚಿಸಬೇಕಾಗುತ್ತದೆ. ಇದನ್ನು ಹೇಳಲು ಕಾರಣವಿಷ್ಟೆ : ನಾವು ಇದನ್ನು ನೋಡುತ್ತಾ ಮೈ ಮರೆಯುತ್ತೇವೆ ಎಂದಾದರೆ ನಮಲ್ಲಿ ಮತ್ತು ನಮ್ಮ ಸಂಸ್ಕೃತಿಯಲ್ಲಿ ಇನ್ನೂ ಪ್ರಾಣಿಗಳ ಕೆಲವು ಅಭ್ಯಾಸಗಳು ಹೊರಟು ಹೋಗಿಲ್ಲ. ಡಾರ್ವಿನ್ ಹೇಳುವ ವಿಕಾಸವಾದವನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳುವುದು ಅತ್ಯಂತ ಅಗತ್ಯ. ಅನೇಕ ವಿಜ್ಞಾನಿಗಳು ಈವತ್ತು ಇದನ್ನು ಮತ್ತೆ ಮತ್ತೆ ಚರ್ಚೆ ಮಾಡುತ್ತಾರೆ. ವಿಕಾಸ ಎನ್ನುವುದು ಈವತ್ತು ಬೇರೆ ಬೇರೆ ವ್ಯಾಖ್ಯಾನಗಳಿಗೆ ಕಾರಣವೂ ಆಗಿದೆ. ನಾವು ನಮ್ಮ ಲೈಂಗಿಕ ಸಂಗಾತಿಯನ್ನು ಮೆಚ್ಚಿಸಲು ಏನೇನು ಮಾಡುತ್ತೇವೆ ಎಂದೂ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯವೂ ಇದೆ. ನಾವು ನೈಸರ್ಗಿಕವಾಗಿಯೇ ಪ್ರಾಣಿತನವನ್ನು ಹೊಂದಿದ್ದೇವೆ. ನಮಗೆ ಅದರಿಂದ ಹೊರಗೆ ಬರಲು ಸಾಧ್ಯವೂ ಆಗಿಲ್ಲ.

ಆಧುನಿಕೋತ್ತರ ಸಮಾಜವು ಅದನ್ನು ಮತ್ತಷ್ಟು ಹೆಚ್ಚು ಮಾಡಿಕೊಳ್ಳುತ್ತಿದೆ. ಈ ಮಾತನ್ನು ಯಾಕೆ ಹೇಳಬೇಕಾಗಿದೆಯೆಂದರೆ ಆಧುನಿಕೋತ್ತರ ಚಿಂತನೆಯು ಸಹಜ ಎನ್ನುವುದನ್ನು ಬೇರೆ ಬೇರೆ ಥರ ಅರ್ಥ ಮಾಡಿಕೊಳ್ಳುತ್ತದೆ. ಯಾವುದೇ ತರಬೇತಿಯು ಇಲ್ಲದ ಪ್ರಾಣಿ ಅಥವಾ ಮಂಗ ಹೇಗೆ ವರ್ತಿಸುತ್ತದೆ ಎಂದು ಗಮನಿಸಬೇಕು. ನ್ಯಾಶನಲ್ ಜಿಯಾಗ್ರಾಫಿ ಚಾನೆಲ್ ನಮಗೆ ಕೊಡುವ ಮಾಹಿತಿಯು ಈ ಥರದ್ದು ಎನ್ನುವುದು ಇಲ್ಲಿ ಗಮನಾರ್ಹವಾಗಿದೆ. ಪ್ರಾಣಿಗಳು ಮತ್ತು ಅವುಗಳ ಜೀವನ, ಅವುಗಳ ಪರಸ್ಪರ ಸಹಕಾರ, ಸಂಘರ್ಷಗಳು ನಮಗೆ ಕಾಣಿಸುತ್ತವೆ. ಮೀನುಗಳು ಮತ್ತು ಅವುಗಳ ಮೌನವನ್ನು ಆಧುನಿಕೋತ್ತರ ಹೇಳುವ ಮೌನವನ್ನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಅತ್ಯಂತ ಮೌನದಲ್ಲಿಯೂ ಪ್ರಾಣಿಗಳು ಇನ್ನೊಂದು ಪ್ರಾಣಿಯನ್ನು ಗುರುತಿಸುತ್ತದೆ. ಸೆಕ್ಸನ್ನು ಯಾವುದೇ ವಿಜೃಂಭಣೆಯಿಲ್ಲದೆ ಆಚರಿಸು ಎನ್ನುವುದೂ ಒಂದು ತತ್ವವಾಗಿದೆ. ಸೆಕ್ಸ್ ಮತ್ತು ಅದರ ಸಂಬಂಧವನ್ನು ಅಚಾರಿತ್ರಿಕವಾಗಿ ನೋಡು ಎನ್ನುವುದೂ ಕೂಡಾ ಹಾಗೆಯೇ ಆಗಿದೆ. ಗಂಡು ಮತ್ತು ಹೆಣ್ಣಿನ ಸಂಬಂಧವೆನ್ನುವುದನ್ನು ನಾವು ಒಂದು ಯುದ್ಧವೆಂದು ಭಾವಿಸಬೇಕಾಗಿಯೂ ಇಲ್ಲ. ಪರಸ್ಪರ ಮಿಲನವನ್ನು ಹೊಂದುವುದು ಮಾತ್ರವೇ ಇದೆ. ಅದರಲ್ಲಿ ಖಾಯಂ ನೆಲೆಯೂರುವುದು ಎನ್ನುವುದು ಇಲ್ಲ. ಅದಕ್ಕೆ ಒಂದು ನಿಯಮ

ಇಲ್ಲ ಪರಸ್ಪರ ಹೊಂದುವುದು ಮತ್ತು ಕ್ಲಿಯರ್ ಮಾಡಿಕೊಳ್ಳುವುದು ಮುಖ್ಯ. ಲೈಂಗಿಕ ಸಂಬಂಧ ಮತ್ತು ಅದನ್ನು ಅನುಭವಿಸುವುದು ಯಾವುದೇ ಚರಿತ್ರೆಯು ಇಲ್ಲದೆ ನಡೆಯುತ್ತದೆ. ಆದ್ದರಿಂದ ಲೈಂಗಿಕ ಸಂಬಂಧವನ್ನು ಚರಿತ್ರೆಕ್ಕಿಂತ ಹೊರತು ಮಾಡಿಕೊಂಡು ನೋಡಬೇಕು ಎನ್ನುವ ವಾದವು ಕುತೂಹಲಕಾರಿಯಾಗಿದೆ. ಅಷ್ಟೆ. ಯಾವುದೇ ಪ್ರಾಣಿಯು ಸಹಜವಾಗಿ ತನ್ನ ಲೈಂಗಿಕವಾದ ಸಂಬಂಧವನ್ನು ಹೊಂದಿರುತ್ತದೆ. ಅದರಲ್ಲಿ ಅದಕ್ಕೆ ಯಾವುದೇ ಫ್ಯಾಂಟಸಿಗಳು ಇರುವುದೂ ಇಲ್ಲ ಅದರ ಕುರಿತಾಗಿ ಅದು ಕನಸು ಕಾಣುವುದೂ ಇಲ್ಲ. ಅದರ ಕುರಿತಾಗಿ ಅದು ಪದ್ಯವನ್ನು ಬರೆಯುವುದೂ ಇಲ್ಲ. ಅದಕ್ಕೆ ಅದು ಸಹಜವಾಗಿರುತ್ತದೆ. ಖಾಯಂ ಆಗಿ ಒಬ್ಬರನ್ನೇ ಲೈಂಗಿಕತೆಗಾಗಿ ಆರಿಸಿಕೊಳ್ಳುವುದು ಮತ್ತು ಒಬ್ಬರನ್ನೇ ಸಂಭೋಗಕ್ಕೆ ಆಶ್ರಯಿಸುವುದು ಸರಿಯಾದ ಪದ್ಧತಿಯು ಅಲ್ಲ. ಅದು ಅಸಹಜ. ಈ ಮಾತನ್ನು ಬರೆದವನು ವಾಜೋಮನ್ (ನೋಡಿ : ಜಿಜೆಕ್ ೨೦೧೦ ಲಿವಿಂಗ್ ಇನ್ ದಿ ಎಂಡ್ ಆಫ್ ಟೈಮ್ಸ್ ವರ್ಸೊ) ಕೇಳುವುದಕ್ಕೆ ಅತ್ಯಂತ ಸುಂದರವಾದ ಈ ಮಾತನ್ನು ನಾವು ಒಂದು ಉಟೋಪಿಯಾ ಎಂದು ಹೇಳಬಹುದು. ಯಾಕೆಂದರೆ ಇದರಲ್ಲಿ ಸಮಾಜ ಮತ್ತು ಅದರ ರಚನೆಯು ಕುರಿತಾದ ಯಾವ ಮಾತುಗಳೂ ಇಲ್ಲ.

ವಾಸ್ತವವಾಗಿ ಇದನ್ನು ಒಂದು ಬಯಕೆ ಎಂದು ಮಾತ್ರವೇ ಹೇಳಬಹುದು. ಇದು ನಿಜವಲ್ಲ. ಎರಡನೆಯದಾಗಿ ಇದರಲ್ಲಿ ಮತ್ತೊಂದು ಮುಖ್ಯವಾದ ಅಂಶವೂ ಇದೆ. ಲೈಂಗಿಕ ಸಂಬಂಧ ಹಾಗೂ ಅದಕ್ಕೆ ಸಂಬಂಧಿಸಿದ ವರ್ತನೆಗಳನ್ನು ಈವತ್ತು ನಾವು ಹೇಗೆ ನೋಡಬೇಕು ಎನ್ನುವುದೂ ಅತ್ಯಂತ ಮುಖ್ಯವಾದ ಪ್ರಶ್ನೆ. ಕೇವಲ ಖುಶಿಯನ್ನು ಮಾತ್ರವೇ ನಾವು ನೋಡುತ್ತೇವೆ ಎಂದಾದರೆ ಅದರ ಅರ್ಥವು ಏನು ಎನ್ನುವುದೂ ಅತ್ಯಂತ ಮುಖ್ಯವಾದ ಪ್ರಶ್ನೆಯಾಗುತ್ತದೆ. ಬಯಕೆಗಳು ಮತ್ತು ಅದರ ಬಗೆಗೆ ನಮಗೆ ಇರುವ ಕಲ್ಪನೆಗಳು ವಸ್ತುವನ್ನು ಆಧರಿಸಿಕೊಂಡು ಇರುತ್ತದೆ ಎಂದು ಹೇಳಲು ಬರುವುದೂ ಇಲ್ಲ. ತಾತ್ವಿಕವಾದ ಒಂದು ಭ್ರಮೆಯಿಂದ ಯಾವುದೂ ಆಗುವುದೇ ಇಲ್ಲ. ಅದು ಎಲ್ಲರಿಗೂ ಗೊತ್ತು. ವಾಣಿಜ್ಯವಾದಿ ಅರ್ಥಶಾಸ್ತ್ರವು ಹೇಗೆ ನಮಗೆ ಬೇರೆ ಬೇರೆ ಬಯಕೆಗಳನ್ನು ತುಂಬುತ್ತದೆ ಮತ್ತು ಅದರಲ್ಲಿ ಚರಿತ್ರೆಯ ನಿರಾಕರಣೆಯು ಹೇಗೆ ಇರುತ್ತವೆ ಎನ್ನುವುದಕ್ಕೆ ಅನೇಕ ಉದಾಹರಣೆಗಳು ಇರುತ್ತವೆ. ಉಪಯೋಗತಾವಾದಿ ಬಂಡವಾಳವಾದವು ನಮಗೆ ಹೆಚ್ಚು ಭ್ರಮೆಗಳನ್ನು ತುಂಬದೇ ಹೋದರೆ ಅದು ತನ್ನ ಲಾಭವನ್ನು ಪಡೆದುಕೊಳ್ಳಲಾರದು. ಆದರೆ ಇಲ್ಲಿ ಮತ್ತೆ ಒಂದು ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಹೆಚ್ಚು ಸೂಕ್ತ. ಆಧುನಿಕ ಚರಿತ್ರೆಯು ಅದರ ಕ್ರಾಂತಿಕಾರಕತೆಯನ್ನು ಹೇಗೆ ಬಳಸುತ್ತದೆ ಎನ್ನುವುದೂ ನಮ್ಮ ಗಮನಕ್ಕೆ ಬರಬೇಕು. ನವಚಾರಿತ್ರಿಕತೆಯು ಗತವನ್ನು ನೋಡುವ ಕ್ರಮಕ್ಕೂ ಮಾರ್ಕ್ಸ್‌ವಾದವು ಗತವನ್ನು ನೋಡುವ ಕ್ರಮಕ್ಕೂ ವ್ಯತ್ಯಾಸವಿದೆ. ವಾಲ್ಟರ್ ಬೆಂಜಮಿನ್ ಚರಿತ್ರೆಯಿಂದ ಕಲಿಯಬೇಕಾದ್ದನ್ನು ಹೇಳಿದ್ದಾನೆ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಯಾವುದು ನಿಜವಾಗಿಯೂ ಅತ್ಯಂತ ಕೆಟ್ಟದಾದ ವಾಸ್ತವವು ಇದೆಯೋ ಅದನ್ನು ಹೆಚ್ಚು ಆಕರ್ಷಕವಾಗಿ ಹೇಳುವುದರಿಂದ ಹೆಚ್ಚು ಉಪಯೋಗ ಆಗುವುದೂ ಇಲ್ಲ. ಅದನ್ನು ಚರಿತ್ರೆಯ ಕೆಟ್ಟ ಕಾರಣ ಎಂದು ಹೇಳುತ್ತಾರೆ.

ಈ ದೃಷ್ಟಿಯಿಂದ ನಮಗೆ ಚರಿತ್ರೆಯ ಮುಕ್ತತೆಯು ಬೇಕು. ಆದರೆ ನಾವು ಕಲ್ಪಿತವಾದ ಚರಿತ್ರೆಯನ್ನು ಕಟ್ಟಿಕೊಂಡು ಏನೂ ಮಾಡುವಂತೆ ಇಲ್ಲ. ಚರಿತ್ರೆಯನ್ನು ನೋಡುವಾಗ ನಾವು

ಬಹಳ ಎಚ್ಚರದಲ್ಲಿ ಇರಬೇಕಾಗುತ್ತದೆ. ನೆಪೋಲಿಯನ್ ಬಹಳ ದೊಡ್ಡ ನಾಯಕ. ಅವನು ಅನೇಕವನ್ನು ಸಾಧಿಸಿದ ಎಂದು ಹೇಳಿಕೊಳ್ಳುವುದರಿಂದ ಆಗುವುದು ಏನು ಎನ್ನುವುದೇ ನಮ್ಮ ಮುಂದೆ ಇರುವ ಪ್ರಶ್ನೆ. ಕೋಮುವಾದವೂ ತನಗೆ ಬೇಕಾದ ನಾಯಕರನ್ನು ಹುಟ್ಟು ಹಾಕುತ್ತದೆ. ಅದರ ಮೂಲಕ ಜನರನ್ನು ತನ್ನ ಹದ್ದುಬಸ್ತಿಗೆ ತರುತ್ತದೆ. ಜನರು ಅದಕ್ಕೆ ಹೊಂದುತ್ತಾರೆ. ಚರಿತ್ರೆಯಲ್ಲಿ ಯಾವುದು ಯಜಮಾನಿಕೆಯನ್ನು ವಹಿಸಿಕೊಂಡಿದೆ ಎಂದು ಮಾತ್ರವೇ ನಾವು ನೋಡಬೇಕಾಗುತ್ತದೆ. ಪ್ಲೆಕನೋವ್ ಒಂದು ಮಾತನ್ನು ಹೇಳುತ್ತಾನೆ : ಚರಿತ್ರೆಯಲ್ಲಿ ಒಬ್ಬ ವ್ಯಕ್ತಿಯೂ ನಿರ್ದಿಷ್ಟವಾದ ಪಾತ್ರವನ್ನು ವಹಿಸುತ್ತಾನೆ. ಭಾರತದಲ್ಲಿ ಇಂದಿರಾಗಾಂಧಿಯವರೂ ಒಂದು ಚರಿತ್ರೆಯನ್ನು ಬರೆದರು. ಅವರು ದಾರುಣವಾದ ಸಾವನ್ನೂ ಕಂಡರು. ಅದನ್ನು ನಾವು ಈಗ ಒರಸಿ ಹಾಕಲು ಸಾಧ್ಯವೇ ಇಲ್ಲ. ತುರ್ತುಪರಿಸ್ಥಿತಿಯು ಒಂದು ಪಾತ್ರವನ್ನು ವಹಿಸಿದೆ. ಅದೇ ರೀತಿಯಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವೂ ಚರಿತ್ರೆಯಲ್ಲಿ ಆಗಿದೆ. ಮತ್ತೊಂದು ಕಡೆಯಿಂದ ವಾಕ್ ಸ್ವಾತಂತ್ರ್ಯವೂ ಹರಣವಾಗಿದೆ. ಇದನ್ನು ಈಗ ನಾವು ನೋಡುವುದು ಹಾಗೂ ವಿಶ್ಲೇಷಣೆ ಮಾಡುವುದು ಅತ್ಯಂತ ಮುಖ್ಯ. ಆದ್ದರಿಂದ ಚರಿತ್ರೆ ಎನ್ನುವುದು ಅತ್ಯಂತ ಸಂಕೀರ್ಣವಾಗಿದೆ. ಚರಿತ್ರೆ ಎನ್ನುವುದು ಒಂದು ಮುಖವನ್ನು ಹೊಂದಿರುವುದೂ ಇಲ್ಲ. ಅದಕ್ಕೆ ಅನೇಕ ಮುಖಗಳು ಇವೆ. ನವ ಡಾರ್ವಿನ್ ವಾದದ ಮೂಲಕವೇ ನಾವು ಸಮಾಜವನ್ನು ನೋಡಬೇಕಾಗಿಲ್ಲ. ಅದರ ಮತ್ತೊಂದು ರೂಪವನ್ನು ಹೇಳಿದವನು ಸ್ಟೆಫನ್ ಜೆ.ಗೋಲ್ಡ್. ಅವನ ಅತ್ಯಂತ ಮುಖ್ಯವಾದ ಕೃತಿ ನನ್ನ ನೆನಪಿನ ಪ್ರಕಾರ ಎವರ್ ಸಿನ್ಸ್ ಡಾರ್ವಿನ್. ಅವನು ಮಾರ್ಕ್ಸ್‌ವಾದಿ ಜೀವ ವಿಜ್ಞಾನಿ. ಅವನು ವಿಕಾಸವನ್ನು ನೋಡುವುದು ಬೇರೆ ಥರ. ವಿಕಾಸ ಮತ್ತು ಚರಿತ್ರೆಯ ಸಂಬಂಧವು ದ್ವಂದ್ವಾತ್ಮಕ ಎಂದು ಅವನು ಹೇಳುತ್ತಾನೆ. ಅವನಲ್ಲಿ ಆವಶ್ಯಕತೆ ಎನ್ನುವುದಕ್ಕೆ ಒಂದು ಅರ್ಥವೂ ಇದೆ. ಲೆನಿನ್ ಕೂಡಾ ಚಾರಿತ್ರಿಕ ಅವಶ್ಯಕತೆ ಎನ್ನುವುದನ್ನು ಹೇಳುತ್ತಾನೆ. ಆದರೆ ಅವನು ಅವಕಾಶವಾದಿ ಚಾರಿತ್ರಿಕ ಆವಶ್ಯಕತೆಯನ್ನು ನಿರಾಕರಿಸುತ್ತಾನೆ. ಲೆನಿನ್ ನಾವು ಈಗ ನಿಜವಾಗಿಯೂ ಕ್ರಿಯಾಶೀಲರು ಆಗದೇ ಹೋದರೆ ಏನಾದೀತು ಎಂದು ಕೇಳುತ್ತಾನೆ. ನಿಜವಾದ ಚರಿತ್ರೆಯನ್ನು ನೋಡುವುದು ಅಂದರೆ ನಾವು ಬರೀ ಪರ್ಯಾಯವನ್ನು ಮಾತ್ರವೇ ಯೋಚನೆ ಮಾಡುವುದು ಅಲ್ಲವೆನ್ನುವುದೂ ನಮಗೆ ಗೊತ್ತಿರಬೇಕಾಗುತ್ತದೆ. ಅತ್ಯಂತ ಸರಳವಾದ ಸಂಗತಿಯೆಂದರೆ ಮನುಷ್ಯನು ಮೂಲಭೂತವಾಗಿ ಭೂಮಿಯ ಮಟ್ಟಿಗೆ ಒಬ್ಬ ಅಪರಿಚಿತನಾಗಿದ್ದಾನೆ. ಅವನು ವರ್ತಿಸುವುದು ಕೂಡಾ ಹಾಗೆಯೇ ಇದೆ. ಅವನು ತಾನು ಭಿನ್ನ ಗ್ರಹದಿಂದ ಬಂದಿದ್ದೇನೆ ಎನ್ನುವ ಥರ ಯೋಚನೆ ಮಾಡುತ್ತಾನೆ. ವ್ಯಕ್ತಿಯಾಗಿಯೇ ಅವನು ಪರಕೀಯನಂತೆ ವರ್ತಿಸುತ್ತಾನೆ. ಅವನು ಒಳಿತನ್ನು ಮಾಡಬಲ್ಲ. ಹಾಗೆಯೇ ಕೆಡುಕನ್ನು ಕೂಡಾ. ಅವನು ತನ್ನ ಚರ್ಮದ ಮೇಲೆ ಹಾಗೆಯೇ ಮಲಗಲಾರ. ಅವನು ತನ್ನ ಜೈವಿಕ ಅಂಶ ಏನಿದೆಯೋ ಅದನ್ನು ಮಾತ್ರವೇ ಒಪ್ಪಿಕೊಳ್ಳಲಾರ. ಅವನಿಗೆ ಕೃತಕವಾದ ವಸ್ತ್ರವು ಬೇಕಾಗುತ್ತದೆ. ಕೂತುಕೊಳ್ಳಲು ಅವನಿಗೆ ಕುರ್ಚಿಯು ಬೇಕಾಗುತ್ತದೆ.

ತನ್ನ ಸ್ವಾತಂತ್ರ್ಯದ ಬಗ್ಗೆ ಅವನಿಗೆ ಸಂಶಯವೂ ಇದೆ. ಅವನು ನಗಾಡಬಲ್ಲ. ಅವನು ಅಳಬಲ್ಲ. ಆದರೆ ಇಲ್ಲಿ ಮತ್ತೆ ಒಂದು ಅಂಶವನ್ನು ನೋಡಬೇಕು : ಅವನು ತಾನು ಇಡೀ ಜಗತ್ತನ್ನು ಅರ್ಥಮಾಡಿಕೊಂಡಿದ್ದೇನೆ ಎಂದು ಭಾವಿಸುತ್ತಾನೆ. ಆದರೆ ಅದರ ಜೊತೆಗೆ ಅವನು

ತಾನೇ ದೇಹವನ್ನು ಶುಚಿಮಾಡಿಕೊಳ್ಳುತ್ತಾನೆ, ವಾಸ್ತವವನ್ನು ಅರ್ಥಮಾಡಿಕೊಳ್ಳಲು ಯತ್ನವನ್ನು ಮಾಡುತ್ತಾನೆ. ಅವನಿಗೆ ತನ್ನ ಅಸ್ತಿತ್ವದ ಕುರಿತು ಆಲೋಚನೆಯು ಇರುತ್ತದೆ. ತಾನು ಬದುಕಿ ಬಂದಿರುವುದಕ್ಕೆ ದಾಖಲೆ ನೋಡುತ್ತಾನೆ. ಅವನು ತಾನೇ ನಿಸರ್ಗವನ್ನು ತನಗೆ ಬೇಕಾದಂತೆ ಮಣಿಸಿದ್ದಾನೆ. ವಾಲ್ಟರ್ ಬೆಂಜಮಿನ್ ಚಾರಿತ್ರಿವಾದ ಪುನರಾವರ್ತನೆಯನ್ನು ಹೇಳುತ್ತಾರೆ. ಆದರೆ ಅವನು ಅದನ್ನು ವಿಶಿಷ್ಟವಾದ ಅರ್ಥದಲ್ಲಿ ಹೇಳಿದ್ದಾನೆ. ಅದರಲ್ಲಿ ವೈಚಾರಿಕವಾದ ತಳಹದಿಯು ಇದೆ. ಆಯ್ಕೆ ಮತ್ತು ಅದರ ಸರಿ ಎನ್ನುವುದು ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಆದ್ದರಿಂದ ಯಾವುದು ಚರಿತ್ರೆಯಲ್ಲಿ ಘಟಿಸಿದೆಯೋ ಅದರ ಸ್ವರೂಪವನ್ನು ನಾವು ಮೊದಲು ನೋಡಬೇಕಾಗುತ್ತದೆ. ಎರಡನೆಯದಾಗಿ ಚರಿತ್ರೆಯನ್ನು ಗ್ರಹಿಸುವುದು ಅಂದರೆ ನಿಜವಾಗಿಯೂ ಅದು ನಮ್ಮ ವರ್ತಮಾನವನ್ನು ಹೇಳುವುದೂ ಹೌದು. ಚರಿತ್ರೆಯಲ್ಲೂ ಹೂತು ಹೋದ ಸಂಗತಿಯನ್ನು ಈ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಅದು ಅಗತ್ಯವೂ ಆಗಿದೆ. ಚರಿತ್ರೆ ಮತ್ತು ಅದರ ಮತ್ತೊಂದು ಸಾಧ್ಯತೆಯು ಇರುವವು ನಮ್ಮ ವರ್ತಮಾನದ ಅಗತ್ಯವೂ ಆಗಿದೆ. ಬೆಂಜಮಿನ್ ಹೇಳಿದ್ದು ಈ ಅರ್ಥದಲ್ಲಿ. ಅವನು ಚರಿತ್ರೆ ಮತು ಅದರ ಸ್ವರೂಪವನ್ನು ನಾವು ಹೀಗೆ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಎಲ್ಲಾ ದೇಶಗಳ ರಾಜಸತ್ತೆಯು ಹೇಗೆ ಕೆಲಸವನ್ನು ಮಾಡಿದೆ ಎಂದು ಗೊತ್ತಾದರೆ ನಮಗೆ ಈಗ ಅಂದರೆ ಆಧುನಿಕೋತ್ತರವು ಯಾವ ಕಡೆಗೆ ಸಾಗುತ್ತದೆ ಎಂದು ತಿಳಿಯುತ್ತದೆ. ಕಾರಂತರು ತಮ್ಮ ಕಾದಂಬರಿಗಳಲ್ಲಿ ಹೇಳಿದ ಚರಿತ್ರೆಯು ಯಾವುದನ್ನು ಸೂಚಿಸುತ್ತದೆ ಎಂದೂ ನೋಡಬೇಕು. ಅದು ಸಂವಾದಿಯಾದ ಚರಿತ್ರೆಯು ಅಲ್ಲ. ಮರಳಿಮಣ್ಣಿಗೆ ಕಾದಂಬರಿಯಲ್ಲಿ ಬರುವ ವಿವರಣೆಗಳು ಒಂದು ಸಮತಲವನ್ನು ಹೇಳುವುದೂ ಇಲ್ಲ. ಅದರಲ್ಲಿ ರಾಷ್ಟ್ರ ಮತ್ತು ಅದರ ಸಮಸ್ಯೆಯು ಇದೆ. ಹಾಗೆ ನೋಡಿದರೆ ಅವರು ಮತ್ತೊಂದು ಕಾದಂಬರಿಯಲ್ಲಿ ಜೀವ ಮತ್ತು ದೇಹದ ಪ್ರಶ್ನೆಗಳನ್ನು ಭಿನ್ನವಾಗಿಯೇ ಹೇಳಿದರು. (ಮೂಕಜ್ಜಿಯ ಕನಸುಗಳು) ಮತ್ತೆ ಒಂದು ಪ್ರಶ್ನೆಯ ಸ್ವರೂಪವನ್ನು ಅವರು ಎತ್ತಿಕೊಂಡದ್ದು ನಮ್ಮ ಕಲ್ಪನೆಯನ್ನು ಮೀರಲಾಗದ ದೇವರು ಲೇಖನದಲ್ಲಿ. ಅದರಲ್ಲಿ ವೈಚಾರಿಕತೆಯು ಹೆಚ್ಚು ಮುಖ್ಯವಾಗುತ್ತದೆ. ವಿಕಾಸವಾದವು ಅವರಿಗೆ ಹೇಗೆಲ್ಲಾ ಕಾಣಿಸಿದೆ ಎನ್ನುವುದೇ ಗಮನಾರ್ಹ.

ಡಾರ್ವಿನ್ ಹೇಳುವ ಜೀವ ವಿಕಾಸ ಸಿದ್ಧಾಂತವು ಕ್ರಿಶ್ಚಿಯನ್ ಆಲೋಚನೆಗಿಂತ ಬೇರೆಯಾದ್ದು ಎನ್ನುವುದು ಸ್ಪಷ್ಟ. ಆದರೆ ಡಾರ್ವಿನ್ ಕೂಡಾ ಕಾರಣವನ್ನು ಅನ್ವಯ ಮಾಡುತ್ತಾನೆ. ಜೀವ ವಿಕಾಸವು ಕಾರಣವೇ ಇಲ್ಲದೆ ಆಗಿಲ್ಲವೆನ್ನುವುದು ಅತ್ಯಂತ ಮಹತ್ವದ ವಾದವೂ ಆಗಿದೆ. ದೇವರು ಮತ್ತು ವಿಜ್ಞಾನ ಎರಡರ ನಡುವೆ ಒಂದು ಸಂಘರ್ಷವೂ ಇದೆ. ದೇವರಿಗೆ ಯಾವುದೇ ಬಂಧನವು ಇಲ್ಲ. ಅವನು ಅತೀತ. ಯಾವುದನ್ನು ನಾವು ಕಾರಣವೆಂದು ಹೇಳುತ್ತೇವೆಯೋ ಅದರ ಪ್ರಶ್ನೆಗಳು ಅರಿಸ್ಟಾಟಲ್‌ನಿಗಿಂತ ಪೂರ್ವದಲ್ಲಿಯೂ ಇತ್ತು. ಆಧುನಿಕವಾದ ವಿಜ್ಞಾನಯುಗವು ನಮಗೆ ಬೇರೆ ಕಾರಣಕ್ಕೆ ಅತ್ಯಂತ ಮಹತ್ವದ್ದು ಆದರೆ ಇಲ್ಲಿ ಅದಕ್ಕಿಂತ ಪೂರ್ವದ ಯುಗವನ್ನು (ಅನೇಕರು ಪುನರುಜ್ಜೀವನ ಕಾಲಕ್ಕಿಂತ ಪೂರ್ವದ್ದು) ಅನೇಕರು ಕತ್ತಲೆಯು ಯುಗವೆಂದು ಹೇಳಿದರು. ಆಧುನಿಕ ವಿಜ್ಞಾನವನ್ನು ಅನೇಕರು ಒಂದು ಆಲೋಚನೆಯ ಕ್ರಮವೆಂದು ಹೇಳಿದರು. ಅದು ಸ್ವಯಂ ಸೇವಕತನದಿಂದ ಬಂದುದು ಎಂದು ಹೇಳಿದರು. (ಇದನ್ನು ಹೆಚ್ಚು ಹೇಳಿದ್ದು

ಕ್ರಿಶ್ಚಿಯನ್ ಥಿಯಾಲಜಿಸ್ಟರು ಎನ್ನುವುದು ಇಲ್ಲಿ ಉಲ್ಲೇಖನೀಯ). ಅವರು ಯಾವುದನ್ನು ನಿಜವಾಗಿಯೂ ಕತ್ತಲೆಯು ಯುಗ ಎಂದು ಕರೆಯುತ್ತಾರೆ ಎನ್ನುವುದೇ ಸಮಸ್ಯೆ. ಇರಲಿ. ಅದು ಬೇರೆ ವಿಚಾರ. ಇದರ ಇನ್ನೊಂದು ಮುಖವನ್ನು ನಾವು ನೋಡಬೇಕು : ದೇವರು ನಮ್ಮನ್ನು ಯಾಕೆ ಸೃಷ್ಟಿ ಮಾಡಿದ ? ಈ ಪ್ರಶ್ನೆಗೆ ಉತ್ತರವನ್ನು ಕೊಡಲು ಹೊರಟರೆ ದೇವರಿಗೆ ಇರುವ ಅನನ್ಯತೆಯ ಸಮಸ್ಯೆಯೂ ತಿಳಿದೀತು. ದೇವರು ಕೂಡಾ ತನ್ನನ್ನು ತಾನೇ ಪ್ರೀತಿ ಮಾಡುತ್ತಾನೆ. ಲಕಾನ್ ಇದನ್ನು ತಿರುಗಿಸಿಕೊಂಡು ನೋಡುತ್ತಾನೆ : ದೇವರು ಇಲ್ಲವಾದರೆ ಹಾಗೆ ಜೀವನವೇ ಇಲ್ಲವೆ ? ಸೃಷ್ಟಿಕಾರ್ಯವು ನಡೆಯುವುದೇ ಇಲ್ಲವೆ ? ದೇವರು ತಂದೆ ಎಂದು ಒಪ್ಪಿಕೊಂಡರೆ ಏನಾಗುತ್ತದೆ ಎಂದು ಯೋಚಿಸಬೇಕಾಗುತ್ತದೆ. ದೇವರು ತನ್ನ ಮಕ್ಕಳು ಕಷ್ಟ ಪಡುವುದನ್ನು ನೋಡಿಕೊಂಡು ಖುಶಿಪಡುತ್ತಾನೆಯೇ ? ಹೊಟ್ಟೆಗೆ ಹಿಟ್ಟಿಲ್ಲದೆ ಸಾಯವವರನ್ನು ನೋಡಿ ಅವನಿಗೆ ಸಂತೋಷವಾಗುತ್ತದೆಯೇ ? ಧರ್ಮಶಾಸ್ತ್ರಗಳು ಹೇಳುವುದನ್ನು. ನಾವು ಹೀಗೆ ಕೇಳಬಹುದು. ನಮಗೆ ಇರುವ ಆಂತರಿಕವಾದ ಶಕ್ತಿಯನ್ನು ನಾವು ದೇವರ ಅಂಶವೆಂದು ಹೇಳಬಹುದೆ ? ನಮಗೆ ದೃಷ್ಟಿಧೋರಣೆಯಿದೆ. ಅದರಿಂದ ಕೇಡು ಮತ್ತು ಒಳ್ಳೆಯತನ ಎನ್ನುವುದು ಬರುತ್ತದೆ. ಆದ್ದರಿಂದ ನಮಗೆ ಅನೇಕ ವಿಷಯಗಳು ಗೊತ್ತಿರಬೇಕಾಗುತ್ತದೆ.

ಅಧ್ಯಾಯ - ೧೨

ಕಾನೂರು ಹೆಗ್ಗಡತಿ

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿಯೂ ಚಂದ್ರಯ್ಯ ಗೌಡರ ಕ್ರೌರ್ಯದಿಂದ ಅವರ ಒಕ್ಕಲು ಅಣ್ಣಯ್ಯ ಗೌಡರು ಸಂಸಾರಸಮೇತ ಊರೂರು ಅಲೆಯಬೇಕಾಗುತ್ತದೆ. ಅಣ್ಣಯ್ಯ ಗೌಡರ ಮಗ ಓಬಯ್ಯ ಯಾರಿಗೂ ತಿಳಿಯದಂತೆ ಸುಬ್ಬಮ್ಮ ಹೆಗ್ಗಡಿತಿಯಿಂದ ಹರಿದ ನೂರು ರೂಪಾಯಿ ನೋಟನ್ನು ಸಾಲವಾಗಿ ಪಡೆದು ಕಳ್ಳಂಗಡಿಯವನಿಗೆ ಕೊಟ್ಟು ಕಳ್ಳು ಕುಡಿದು, ಹಳೆಸಾಲ ತೀರಿಸುತ್ತಾನೆ. ಆ ನೋಟು ನಡೆಯುವುದಿಲ್ಲ. ಎಂದು ಗೊತ್ತಾದ ಮೇಲೆ ಚಂದ್ರಯ್ಯ ಗೌಡರವರೆಗೂ ಬಂದು ಕಳ್ಳಂಗಡಿಯವನು ದೂರು ಕೊಡುತ್ತಾನೆ. ಚಂದ್ರಯ್ಯ ಗೌಡರಿಗೆ ಆ ನೋಟು ತಮ್ಮದೆ ಎಂದು ಗೊತ್ತಾಗಿ, ಅದು ಹೇಗೆ ಓಬಯ್ಯನಿಗೆ ಸಿಕ್ಕಿತು ಎಂಬ ಅನುಮಾನ ಬಂದು ಓಬಯ್ಯನನ್ನು ವಿಚಾರಣೆ ಮಾಡುತ್ತಾರೆ. ಗೌಡರಿಗೆ, ತನ್ನ ಅತ್ತಿಗೆ, ಹೂವಯ್ಯನ ತಾಯಿ ನಾಗಮ್ಮನವರ ಮೇಲೆ ಗುಮಾನಿಯಿರುತ್ತದೆ. ಈ ಕಾರಣಕ್ಕಾಗಿ ಅವರಿಗೆ ನಿಜಸ್ಥಿತಿ ಅತ್ಯಂತ ಅವಶ್ಯವಾಗಿರುತ್ತದೆ. ಏಕೆಂದರೆ ಎಲ್ಲರ ಎದುರಿನಲ್ಲಿ ಓಬಯ್ಯ ಈ ನೋಟು ನಾಗಮ್ಮನವರೆ ಕೊಟ್ಟಿದ್ದೆಂದು ಹೇಳಿದರೆ, ಆಸ್ತಿಪಾಲು ಮಾಡಿ ಅವರನ್ನು ಬೇರೆ ಹಾಕುವ ಬಯಕೆ ಇರುತ್ತದೆ. ವಿಚಾರಣೆಯ ವೇಳೆಯಲ್ಲಿ ಓಬಯ್ಯ ಭೂತರಾಯನೆ ಪ್ರತ್ಯಕ್ಷನಾಗಿ ಇದನ್ನು ದಂಡದ ಪರಿಭಾಷೆಯೆಂದು ಗುರುತಿಸುತ್ತಾರೆ. ದಂಡದ ಪರಿಭಾಷೆಗೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಸಣ್ಣ ಬೀರನಿಗೆ ಹೊಡೆಯುವ ಪ್ರಸಂಗ ಒಂದು ಉದಾಹರಣೆ. ಈ ಸಂದರ್ಭದಲ್ಲಿ ಕೆಳವರ್ಗದ ಪ್ರತಿಕ್ರಿಯೆಯು ದಂಡದ ಪರಿಭಾಷೆಗೆ ಒಗ್ಗಿಕೊಂಡಿತ್ತು ಎಂದು ಕುವೆಂಪು ವಿವರಗಳ ಮೂಲಕ ಪ್ರತಿಪಾದಿಸುತ್ತಾರೆ. ಜಮೀನುದಾರರು ಕೆಳವರ್ಗದವರನ್ನು ಈ ರೀತಿಯ ದಂಡದಿಂದಲೇ ಒತ್ತಾಯಪೂರ್ವಕವಾಗಿ ನಿಗ್ರಹಿಸುತ್ತಿದ್ದರು (ಶಬ್ದರೇಖೆ, ೧೯೯೮. ಪು .೫೪) ಬಂದು ನನಗೆ ನೋಟು ಕೊಟ್ಟ ಎಂಬ ಕಥೆಯನ್ನೆ ಮತ್ತೆ ಮತ್ತೆ ಹೇಳುತ್ತಾನೆ. ಎಷ್ಟು ಒತ್ತಾಯ ಮಾಡಿದರೂ ಹೆದರಿಸಿದರೂ ನಿಜವನ್ನು ಬಾಯಿಬಿಡುವುದಿಲ್ಲ. ಆಗ ಚಂದ್ರಯ್ಯ

ಓಬಯ್ಯ ಗೌಡರು ಕೋಪಗೊಂಡು ಬೆತ್ತವನ್ನು ತಂದು ನಿಜ ಹೇಳೀಯೋ ಇಲ್ಲವೋ ಎಂದು ಗದರಿಸುತ್ತಾರೆ. ಆದರೂ ಓಬಯ್ಯ ಸುಮ್ಮನೆ ನಿಂತುಬಿಡುತ್ತಾನೆ ಮತ್ತು ಕೋಪಗೊಂಡ ಗೌಡರು ಹಿಂದು ಮುಂದು ನೋಡದೆ ಕೈಲಿದ್ದ ಬೆತ್ತದಿಂದ ಡಲ್ ಡಲ್ ಡಲ್ಲನೆ ಹೊಡೆಯತೊಡಗಿದರು. ಓಬಯ್ಯ ನಾಲ್ಕೈದು ಪೆಟ್ಟು ಬೀಳುವವರೆಗೂ ಕಲ್ಲಿನಂತೆ ನಿಂತಿದ್ದವನು ಇದ್ದಕ್ಕಿದ್ದ ಹಾಗೆ ಅಯ್ಯೋ ಎಂದು ಎದೆ ಬಿರಿಯುವಂತೆ ಕೂಗಿಕೊಂಡು ಗೌಡರ ಕೈಲಿದ್ದ ಬೆತ್ತವನ್ನು ಭದ್ರ ಮುಷ್ಟಿಯಿಂದ ತುಡುಕಿ ಹಿಡಿದನು. ಗೌಡರಿಗೆ ಅದನ್ನು ಬಿಡಿಸಿಕೊಳ್ಳಲು ಆಗದಿದ್ದಾಗ, ಪುಟ್ಟಣ್ಣನೂ ಸೇರೆಗಾರರು ಬಿಡಿಸಿದರು. ಮತ್ತೆ ಗೌಡರು ಹೊಡೆಯತೊಡಗಿದಾಗ ಪ್ರತಿಹಿಂಸೆ ಮಾಡುವ ಮನಸ್ಸಾದರೂ ಸುತ್ತಮುತ್ತಲಿದ್ದ ಗೌಡರ ಸೇವಕರಿಗೆ ಹೆದರಿ ಪೆಟ್ಟುಗಳನ್ನು ಸಹಿಸಲಾರದೆ ಸತ್ಯವನ್ನು ಹೇಳಿಬಿಟ್ಟನು" (ಕಾ.ಹೆ. ಪು.೨೪೯-೫೦) ಚಂದ್ರಯ್ಯ ಗೌಡರ ಕೋಪ ಸುಬ್ಬಮ್ಮನ ಮೇಲೆ ತಿರುಗುತ್ತದೆ. ನಂತರ ಓಬಯ್ಯ ತನ್ನ ಮನೆಗೆ ಬಂದು ತಂದೆಗೆ ನಡೆದ ವಿಷಯವನ್ನೆಲ್ಲ ತಿಳಿಸಿ ಕೆಳಕಾನೂರು ಬಿಟ್ಟು, ಸೀತೆಮನೆ ಸಿಂಗಪ್ಪ ಗೌಡರ ಮನೆಗೆ ಹೋಗಿ ಒಕ್ಕಲಾಗಲು ಒಪ್ಪಿಸುತ್ತಾನೆ. ಹೀಗೆ ಊರು ಬಿಟ್ಟು ಹೋದ ಓಬಯ್ಯ ಎಲ್ಲೂ ನೆಲೆ ಕಾಣಲು ಸಾಧ್ಯವಾಗದೆ ಕಾಯಿಲೆಯಿಂದ ತಂದೆ – ತಂಗಿಯರನ್ನು ಕಳೆದುಕೊಳ್ಳುತ್ತಾನೆ. ನಂತರ ಊರೂರು ಅಲೆದು ತಾನೂ ಕಾಯಿಲೆಗೆ ಈಡಾಗಿ ಒಂದು ಕಣ್ಣನ್ನು ಕಳೆದುಕೊಂಡು ಮತ್ತೆ ಚಂದ್ರಯ್ಯ ಗೌಡರ ಆಶ್ರಯಕ್ಕೆ ಬಂದು, ಅವರ ಆಳಾಗಿ ಅವರ ಸಾವಿನ ನಂತರ ಹೂವಯ್ಯನ ಒಕ್ಕಲಾಗಿ ಜೀವನ ಮುಂದುವರಿಸುತ್ತಾನೆ. ಓಬಯ್ಯನ ಬದುಕು ಅಮಾನವೀಯ ನೆಲೆಯಿಂದ ಮಾನವೀಯ ನೆಲೆಗೆ ಚಲಿಸುವುದನ್ನು ಕಾದಂಬರಿ ಸೂಚಿಸುತ್ತದೆ. ಅಣ್ಣಯ್ಯ ಗೌಡರು ಒಕ್ಕಲಿಗ ಜಾತಿಗೆ ಸೇರಿದವರಾಗಿದ್ದರೂ, ಸಾಮಾಜಿಕ ಮೇಲುಸ್ತರವಾಗಿ ಮೇಲ್ವರದಲ್ಲಿದ್ದರೂ, ಸ್ವಂತ ಜಮೀನಿಲ್ಲದೆ, ಬಡವರಾಗಿ ಜಮೀನ್ದಾರಿ ಪದ್ಧತಿಯ ಶೋಷಣೆಗೆ, ಹಿಂಸೆಗೆ ಒಳಗಾಗ ಬೇಕಾಗುತ್ತದೆ. ಇವರು ಮೇಲ್ಜಾತಿಯವರಾದ ಕಾರಣ ಬೇರೆಯವರ ಜಮೀನನ್ನು ಗುತ್ತಿಗೆಗೆ ಪಡೆದುಕೊಂಡು ಜೀವನ ನಿರ್ವಹಿಸುವ ಅವಕಾಶಗಳು ಸಿಗುತ್ತವೆ. ಆದರೆ ಒಂದರ ಮೇಲೊಂದರಂತೆ ನಾಲ್ಕು ಮದುವೆಯಾಗಲು ಹೆಣ್ಣುಗಳಿಗೆ ತೆರ ಕೊಡುವುದಕ್ಕಾಗಿ ಚಂದ್ರಯ್ಯ ಗೌಡರಲ್ಲಿ ಸಾವಿರ ರೂ.ಗಳ ಸಾಲಮಾಡಿ ಅವರು ಸಂಸಾರ ಶೂಲಕ್ಕೆ ಸಿಕ್ಕಿಕೊಳ್ಳಬೇಕಾಗುತ್ತದೆ.

ಕುವೆಂಪುರವರ ಎರಡು ಕಾದಂಬರಿಗಳಲ್ಲೂ ಜಮೀನ್ದಾರರು, ಒಕ್ಕಲುಗಳು ಆಗಿರುವವರು ಮೇಲ್ಜಾತಿಯವರಾದ ಬ್ರಾಹ್ಮಣರು, ಗೌಡರು, ಹೆಗ್ಗಡೆ, ನಾಯಕರು ಮತ್ತು ಹಳೆಪೈಕದವರು, ಕೆಳಜಾತಿಗೆ ಸೇರಿದ ಹರಿಜನರೆಲ್ಲ ಕೂಲಿಯಾಳುಗಳು, ಆದರಲ್ಲೂ ಜೀತದಾಳುಗಳು. ಇವರಾರಿಗೂ ಒಕ್ಕಲುಗಳಾಗುವುದಕ್ಕೂ ಅವಕಾಶವಿಲ್ಲ, ಹಕ್ಕಿಲ್ಲ ಎಂಬ ವಾಸ್ತವ ಚಿತ್ರಣವನ್ನು ಕೊಡುತ್ತವೆ. ಜಾತಿಯ ಶ್ರೇಣೀಕರಣಕ್ಕೊಳಗಾಗಿ ನಮ್ಮ ಶಿಕ್ಷೆಯಾಗು ಛಿದ್ರಗೊಂಡಿರುವ, ಅಸಮಾನತೆಯಿಂದ ತುಂಬಿ ತುಳುಕುತ್ತಿರುವ ವ್ಯವಸ್ಥೆಯಾಗಿದೆ.

ಜಮಿನ್ದಾರಿ ವ್ಯವಸ್ಥೆಯಲ್ಲಿ ನಿರಪರಾಧಿಗಳಿಗೆ, ಅಮಾಯಕರಿಗೆ ಹೇಗೆರುತ್ತದೆಂಬುದಕ್ಕೆ 'ಕಾನೂರು ಹೆಗ್ಗಡಿತಿ'ಯಲ್ಲಿ ಒಂದು ನಿದರ್ಶನ ಸಿಗುತ್ತದೆ. ಇವು ಮತ್ತು ರಾಮಯ್ಯರು, ಬೈರ ಮತ್ತು ಸಿದ್ದ ಇವರು ಗದ್ದೆ ಊಳುತ್ತಿದ್ದ ಆರುಗಳನ್ನು ಒತ್ತಾಯದಿಂದ, ಬೇಡ ಬೇಡ ಎಂದರೂ

ಬಿಡದೆ ಅವರಿಂದ ಕಸಿದುಕೊಂಡು ಗದ್ದೆ ಉಳಲು ತೊಡಗಿದಾಗ ಎತ್ತುಗಳಿಗೆ ಗಾಬರಿಯಾಗಿ ಅಡ್ಡಾದಿಡ್ಡಿ ಓಡುತ್ತವೆ. ಆಗ ರಾಮಯ್ಯ ಹಿಡಿದ ಆರಿನ ನೇಗಿಲು ಮುರಿದು ಎತ್ತುಗಳ ಕಾಲಿಗೆ ಗಾಯವಾಗುತ್ತದೆ. ಇದರಲ್ಲಿ ಬೈರ ಮತ್ತು ಸಿದ್ದರದು ತಪ್ಪು ಇಲ್ಲವೆ ಇಲ್ಲ. ಆದರೆ ಇದಕ್ಕಾಗಿ ಚಂದ್ರಯ್ಯ ಗೌಡರಿಂದ ಹೊಡೆತದ ಶಿಕ್ಷೆ ಮತ್ತು ಆ ದಿನದ ಕೂಲಿ ಬತ್ತವನ್ನು ಕಳೆದುಕೊಳ್ಳ ಬೇಕಾಗುತ್ತದೆ. ಈ ಘಟನೆ ನಡೆದ ಮೇಲೆ ಬೈರ – ಸಿದ್ದರು ಹೆದರಿ ನೆಲಕ್ಕೆ ಕುಸಿದುಹೋದರು. ಗಾಯಗೊಂಡ ಎತ್ತನ್ನು ಹೊಡೆದುಕೊಂಡು, ಮುರಿದ ನೇಗಿಲನ್ನು ಹೊತ್ತುಕೊಂಡು ಕೊಟ್ಟಿಗೆಯ ಕಡೆಗೆ ಹೋಗುತ್ತಿದ್ದರು . ಇದನ್ನು ಚಂದ್ರಯ್ಯ ಗೌಡರು ನೋಡಿ "ಈ ಸೂಳೇ ಮಕ್ಕಳಿಗೆ ಏನು ಮಾಡಬೇಕಾಯ್ತು? ಒಂಬತ್ತು ಗಂಟೆಗೆ ಕೆಲಸಕ್ಕೆ ಹೊರಡ್ತಾರೆ ! ಹತ್ತು ಗಂಟೆಗೆ ಕೆಲಸ ಬಿಡ್ತಾರೆ! ಎಂದು ಗಟ್ಟಿಯಾಗಿ ಕೂಗಿದರು; ಏ ಬೈರಾ ! ನಿಮ್ಮ ಬಿಡಾರಕ್ಕೆ ಬೆಂಕಿ ಬೀಳಾ ! ಇಷ್ಟು ಬೇಗನೆ ಆರು ಬಿಟ್ಟು ಗುಡೀಗೆ ಸಾಯ್ತಿರೇನೋ." ಗೌಡರ ಸ್ವರವನ್ನು ಕೇಳಿದ ಕೂಡಲೆ ಸಿದ್ಧನಿಗೆ ಜಂಘಾಬಲವೇ ಉಡು ಹೋದಂತಾಯ್ತು, ಬೈರ ನಡೆದುದನೆಲ್ಲಾ ಚಾಚೂ ತಪ್ಪದೆ ವರದಿ ಒಪ್ಪಿಸಿದನು. ಗೌಡರು ಎತ್ತಿನ ಕಾಲಿಗಾದ ಗಾಯವನ್ನು, ಮುಲದ ನೇಗಿಲನ್ನು ನೋಡಿ ಮನೆಹಾಳ ಮಕ್ಕಳು ನಿಮಗೆ ಯಾರೋ ಹೇಳಿದವರು ಅವರ ಕೈಗೆ ನೇಗಿಲು ಕೊಡಾಕೆ?" ಎಂದವರ ಬೈರನ ಕಪಾಲಕ್ಕೊಂದು ಪಟೀರೆಂದು ಕೊಟ್ಟರು. ಮೇಲಿನ ಗದ್ದೆಯ ಅಂಚಿನ ಮೇಲೆ ನಿಂತಿದ್ದ ಸಿದ್ಧ ತನಗೂ ಎಲ್ಲಿ ಏಟು ಬೀಳುತ್ತದೆಯೋ ಎಂದು ಅಂಜಿ ಹಿಂದು ಹಿಂದಕ್ಕೆ ಸರಿದು, ಕಾಲು ತಪ್ಪಿ ಹೊತ್ತ ನೇಗಿಲೊಡನೆ ಮೂರು ನಾಲ್ಕು ಅಡಿ ತಾಗಿದ್ದ ಕೆಳಗಿನ ಗದ್ದೆಗೆ ದಿಸಿಲ್ಲನೆ ಉರುಳಿ ಬಿದ್ದನು ! ಗೌಡರು ರಂಗಪ್ಪ ಸೆಟ್ಟರ ಕಡೆಗೆ ತಿರುಗಿ ಸೇರೆಗಾರೇ ಇವರಿಗೆ ಇವತ್ತು ಕೂಲಿ ಬತ್ತ ವಜಾ !" ಎಂದು ಹೊರಟುಹೋದರು. ಗದ್ದೆಯಿಂದ ಮೇಲೆದ್ದ ಸಿದ್ದ ಮೈಯಿಕೊಡವಿಕೊಳ್ಳುತ್ತಾ "ನಮ್ಮ ಗಿರಾಚಾರ ! ಹಾಳು ಜನ್ಮಾನಾ ಬಿಸಾಕ!" ಎನ್ನುತ್ತಿದ್ದನು (ಕಾ, ಹೆ.ಪು. ೧೮೬–೮೭).

ಜಮೀನ್ದಾರರ ಮನೆತನದಲ್ಲಿ ಅಣ್ಣ – ತಮ್ಮಂದಿರಲ್ಲಿ ಆಸ್ತಿ ಪಾಲಾಗುವಾಗಲೂ ಅನ್ಯಾಯ, ಮೋಸ, ವಂಚನೆ ನಡೆಯುವುದನ್ನು ಅಣ್ಣಂದಿರ ಮಕ್ಕಳಿಗೆ ತಮ್ಮಂದಿರು ಮೋಸ ಮಾಡುವುದನ್ನು ಕುವೆಂಪು ಎರಡು ಕಾದಂಬರಿಗಳಲ್ಲೂ ಚಿತ್ರಿಸಿದ್ದಾರೆ. 'ಕಾನೂರು ಹೆಗ್ಗಡಿತಿ'ಯ ಚಂದ್ರಯ್ಯ ಗೌಡರು ಸುಳ್ಳುಪಳ್ಳು ಸಾಲದ ಲೆಕ್ಕವನ್ನು ತೋರಿಸಿ ಮುಕ್ಕಾಲು ಪಾಲು ಆಸ್ತಿಯನ್ನು ತಮ್ಮದಾಗಿಸಿಕೊಳ್ಳುತ್ತಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಯಲ್ಲಿ ಬರುವ ಹಳೆಮನೆ ಸುಬ್ಬಣ್ಣ ಹೆಗ್ಗಡೆಯವರು ಅನೇಕ ವರ್ಷಗಳ ಹಿಂದೆಯೇ ಮರಣ ಹೊಂದಿದ್ದ ಅವರ ಅಣ್ಣ ದುಗ್ಗಪ್ಪ ಹೆಗ್ಗಡೆಯ ಮಗ ಶಂಕರ ಹೆಗ್ಗಡೆಯವರಿಗೆ ಹಾಲು ಕೊಡುವಾಗ, ಆಸ್ತಿ, ಮನೆ, ಆಳು ಕಾಳುಗಳಲ್ಲಿ ಮೋಸ ಮಾಡುತ್ತಾರೆ, ಮುಕ್ಕಾಲಾ ಪಾಲು ಶಾವಿಟ್ಟುಕೊಂಡು ಕಾಲು ಪಾಲನ್ನು ಕಷ್ಟದಿಂದ ಕೊಡುತ್ತಾರೆ ಎಂಬುದಾಗಿ ಚಿತ್ರಿಸಲಾಗಿದೆ. ಹೀಗೆ ಪಾಲಾದ ನಂತರವೂ ಆ ಕುಟುಂಬಗಳಲ್ಲಿ ಒಳ್ಳೆಯ ಸಂಬಂಧ ಕಂಡುಬರುವುದಿಲ್ಲ, ಅವಿಭಕ್ತ ಕುಟುಂಬಬಗಳು ವಿಭಕ್ತ ಕುಟುಂಬಬಗಳಾಗಿ ಛಿದ್ರಗೊಳ್ಳುತ್ತಿದ್ದ ಬಗೆಯನ್ನು ಕುವೆಂಪು ಈ ನಿದರ್ಶನಗಳ ಮೂಲಕ ಸೂಚಿಸುತ್ತಿದ್ದಾರೆ. ದಾಯಾದಿಗಳಲ್ಲಿ ಪರಸ್ಪರ ದ್ವೇಷ ಮಾತ್ತರ ಹೆಚ್ಚಾಗುತ್ತಾ ಹೋಗುವುದನ್ನು ಕಾಣುತ್ತೇವೆ. ಇದರಲ್ಲಿ ಕೆಡುಕು ಮತ್ತು ಒಳ್ಳೆಯತನದ ನಡುವಿನ ಸಂಘರ್ಷವನ್ನು ಗುರುತಿಸಬಹುದು.

ಈ ಕೌಟುಂಬಿಕ ಛಿದ್ರೀಕರಣ ಜಮೀನ್ದಾರಿ ಪದ್ಧತಿಯ ಪಲ್ಲಟಗಳಿಗೆ ಕಾರಣವಾಗಿದೆ. ಆಧುನಿಕತೆ ಹಳ್ಳಿಗಳಿಗೆ ಪ್ರವೇಶ ಮಾಡಿದ್ದರ ಪರಿಣಾಮವಾಗಿ ಹಳ್ಳಿಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಕಷ್ಟು ಓದಲಾವಣೆಗಳುಂಟಾಗುತ್ತವೆ. 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಆಧುನಿಕತೆಯು, ಬೈಸಿಕಲ್ಲು, ಸ್ಕೂಲು, ಗಡಿಯಾರ, ಕಾಫಿ, ಹೋಟೆಲ್ಲು, ಪೊಲೀಸು ಇವುಗಳ ಮೂಲಕ ಪ್ರವೇಶಿಸಿದ್ದರ ಹೊಳವು ಸಿಗುತ್ತದೆ 'ಕಾನೂರು ಹೆಗ್ಗಡಿತಿ'ಯ ಸಮಾಜ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸಮಾಜಕ್ಕಿಂತ ಹೆಚ್ಚು ಆಧುನಿಕವಾದುದು. ಕಾದಂಬರಿಯ ಕೇಂದ್ರ ಪಾತ್ರವಾದ ಹೂವಯ್ಯನೇ ಹೆಚ್ಚು ಆಧುನಿಕನಾದವನು, ಹೂವಯ್ಯ, ರಾಮಯ್ಯ ನಗರದಲ್ಲಿ ಇಂಗ್ಲಿಷ್ ಶಿಕ್ಷಣ ಪಡೆದು ಕಾನೂರಿಗೆ ಹಿಂದಿರುಗಿದವರು. ಮುಂದೆ ವಾಸು ಕೂಡ ನಗರದಲ್ಲಿ ವಿದ್ಯಾಭ್ಯಾಸ ಮಾಡಿ ಹಿಂದಿರುಗುತ್ತಾನೆ. ಹೂವಯ್ಯ ವರ್ಡ್ಸ್ ವರ್ತ್, ಮ್ಯಾಥ್ಯ ಆರ್ನಾಲ್ಡ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರ ವಿಚಾರಗಳಿಂದಲೂ ಪ್ರಭಾವಿತನಾದವನು, ಬುದ್ಧ, ಬಸವ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಗಾಂಧೀ ಮೊದಲಾದ ಭಾರತೀಯ ದಾರ್ಶನಿಕರ ವಿಚಾರಗಳ ಹಾಗೂ ವೇದ ಉಪನಿಷತ್ತು, ಭಗವದ್ಗೀತೆ ಇವುಗಳ ಜ್ಞಾನ ಸಂಪಾದನೆಯನ್ನು ಮಾಡಿದ್ದಾನೆ. ಈ ಎಲ್ಲಾ ವೈಚಾರಿಕ ಜ್ಞಾನಸಂಪತ್ತಿನ ಬಲದಿಂದಲೇ ಹೂವಯ್ಯ ಮಾನವೀಯ ನೆಲೆಯಲ್ಲಿ, ಮೂಢನಂಬಿಕೆ, ಪುರೋಹಿತಶಾಹಿ, ಜಮೀನ್ದಾರಿ ಪದ್ಧತಿಯ ಸ್ವಾರ್ಥ, ಹಿಂಸೆ, ಕೌರ್ಯ, ಜಾತೀಯತೆ ಇವೆಲ್ಲವುಗಳಿಂದ ರೋಗಗ್ರಸ್ಥವಾಗಿದ್ದ, ಅಮಾನವೀಯವಾಗಿದ್ದ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯನ್ನು ಬದಲಾಯಿಸುವ, ಸುಧಾರಿಸುವ ಮಾನವೀಯತೆಯ ಸ್ಪರ್ಶವನ್ನು ಕೊಡುವ ಪ್ರಯತ್ನವನ್ನು ಮಾಡುತ್ತಾನೆ. ಹೀಗೆ ಮಾಡುವಾಗ ಅಮಾನವೀಯತೆಯ ವ್ಯವಸ್ಥೆಗೆ ಮುಖಾಮುಖಿಯಾಗಿ ಎಚ್ಚರಿಕೆಯಿಂದ ಸಂಘರ್ಷದ ಮೂಲಕವೆ ಸ್ಥಿತ್ಯಂತರಕ್ಕೆ ಕಾರಣನಾಗುತ್ತಾನೆ.

ಪುರೋಹಿತಶಾಹಿ ವ್ಯವಸ್ಥೆಯ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗಲು ಬಯಸುವ ವೆಂಕಪ್ಪಯ್ಯ ಜೋಯಿಸರನ್ನು ಹಾಗೂ ಜಮೀನ್ದಾರಿ ಪದ್ಧತಿಯ ಕ್ರೌರ್ಯ ಶೋಷಣೆಯನ್ನು ಪ್ರತಿನಿಧಿಸುವ ತನ್ನ ಚಿಕ್ಕಪ್ಪ ಚಂದ್ರಯ್ಯ ಗೌಡರನ್ನು ಮಾನವೀಯತೆಯ ನೆಲೆಯಲ್ಲಿಯೆ ಎದುರಿಸುತ್ತಾನೆ. ಅವರಲ್ಲಿ ತಲ್ಲಣವನ್ನುಂಟುಮಾಡುತ್ತಾನೆ. ಹೂವಯ್ಯನ ವ್ಯಕ್ತಿತ್ವವನ್ನು ಅಂಥ ಕರಡು ತಟ್ಟಲು ಎಷ್ಟು ಪದರ ಉಗುತ್ತಾರೆ, ಕಂಗೆ ಕೊನೆಗೆ ಗಂಡಯ್ಯ ಗೌಡರ ದರ ಕೇಳುತ್ತಾ ಹವಯವ ಮಾಡನೀಯ ವ್ಯಕ್ತಿತ್ವದ ಪ್ರಭಾವದಿಂದಲೆ ಎಕ್ಕಬಹುದು, ಇಲ್ಲ ಕಾಯಿಲೆಯಿಂದ ಹಾಸಿಗೆ ಹಿಡಿದು ರಾಗಿ ಮಲಗಿದ್ದ ಒಂದು ಗೌರ ಗೋಡಲು ಹೂವಯ್ಯಾ ಒಂದು ಮಾತನಾಡಿದಾಗ, ಇದ್ದಕ್ಕಿದ್ದಂತೆ ಅದಲು ಕಣ್ಣೀರ ಸುರಿಸುವಲ್ಲಿ ವ್ಯಕ್ತವಾಗುತ್ತದೆ.

ಹೂವಯ್ಯರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಆಳುಗಳನ್ನು ಆಳುಗಳಂತೆ ನೋಡದೆ ಮನುಷ್ಯರನ್ನಾಗಿ ನೋಡುತ್ತಾನೆ, ಅವರ ಜೀವನ ಮಟ್ಟವನ್ನು ಸುಧಾರಿಸಲು ಪ್ರಯತ್ನ ಮಾಡುತ್ತಾನೆ, ಆಳುಗಳಿಗೂ ಇವನ ಮೇಲೆ ಅಪಾರ ಗೌರವ ಸಹಜವಾಗಿರುತ್ತದೆ. ಅವರಲ್ಲಿ ಅರಿವು ಮೂಡಿಸುತ್ತಾನೆ. ಕಾದಂಬರಿಯ ಹತ್ತು ವರ್ಷಗಳಾದ ಮೇಲೆ ಎಂಬ ಕೊನೆಯ ಅಧ್ಯಾಯದಲ್ಲಿ ಕಾನೂರು ಮತ್ತು ಸುತ್ತಮುತ್ತ ಹಳ್ಳಿಗಳಲ್ಲಿ ಹೂವಯ್ಯನ ಪ್ರಭಾವದಿಂದುಂಟಾಗಿರುವ ಬದಲಾವಣೆಗಳನ್ನು

ಸೂಚಿಸುವಲ್ಲಿ, ಜಮೀನ್ದಾರಿ ಪದ್ಧತಿಯಲ್ಲಿ ಅಗತ್ಯವಾಗಿ ಆಗಬೇಕಾಗಿರುವ ಸುಧಾರಣೆಗಳ ಸಾಧ್ಯತೆಗಳನ್ನು ಕುವೆಂಪು ನಮ್ಮ ಮುಂದೆ ಇಡುತ್ತಿದ್ದಾರೆನಿಸುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿಯೂ ಅವಿದ್ಯಾವಂತ ಜಮೀನ್ದಾರರ ಕ್ರೌರ್ಯಕ್ಕೆ ಎದುರಾಗಿ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರಲು ಮಾನವೀಯವಾಗಿ ಪ್ರಯತ್ನಪಡುವ ಪಾತ್ರಗಳು, ಸ್ವಲ್ಪ ಮಟ್ಟಿಗೆ ವಿದ್ಯಾವಂತರಾಗಿರುವ ಮುಕುಂದಯ್ಯ ಮತ್ತು ದೇವಯ್ಯರೇ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.

ಜಮೀನ್ದಾರರುಗಳು ಅನೈತಿಕ ಮಾರ್ಗಗಳಿಂದ ಆಸ್ತಿ ಮಾಡುವುದು, ಸಂಪಗಳಿಸುವುದು ಮತ್ತು ಅದನ್ನು ಹಿಂಸೆ, ಕೌರ್ಯ, ದಬ್ಬಾಳಿಕೆಗಳಿಂದ ಪೋಷಿಸಿಕೊಂಡು ಹೋಗಲು ಗೂಂಡಾ ಪಡೆಗಳನ್ನು ಇಟ್ಟುಕೊಂಡು ತಮ್ಮ ಪಟ್ಟಭದ್ರ ಹಿತಾಸಕ್ತಿಯನ್ನು ಕಾಪಾಡಿಕೊಂಡು ಹೋಗಲು ಪ್ರಯತ್ನಿಸುವುದನ್ನು ಕುವೆಂಪು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಲೇವಡಿ ಮಾಡುತ್ತಾರೆ. ಐವರು ಸಾಬರುಗಳನ್ನು ಕಲ್ಲೂರು ಸಾಹುಕಾರ ಮಂಜ ಭಟ್ಟರು ಹೊನ್ನಾಳಿಯಿಂದ ಕರೆಸಿ ತಮ್ಮ ಸಾಲ ವಸೂಲಿ ಸಾಬರುಗಳನ್ನಾಗಿ ನೇಮಿಸಿಕೊಂಡ ಸನ್ನಿವೇಶದಲ್ಲಿ ಇದನ್ನು ಕಾಣುತ್ತೇವೆ.

ಜಮೀನ್ದಾರರುಗಳ ಅನೈತಿಕ ಲೈಂಗಿಕ ಸಂಬಂಧವನು, ಅದರಿಂದುಂಟಾಗುತ್ತಿದ್ದ ಗುಹ್ಯರೋಗಗಳನ್ನು ಆಗಿನ ಕಾಲದಲ್ಲಿ ಜಮೀನ್ದಾರರುಗಳು ಮೂರು-ನಾಲ್ಕು ಮದುವೆ ಆಗುತ್ತಿದ್ದುದನ್ನು, ಅದಕ್ಕಾಗಿ ಏನೂ ಬೇಕಾದರೂ ಮಾಡಲು ಹೇಸದಿದ್ದುದನ್ನು ಈ ಕಾರಣಗಳಿಂದಲೆ ಬಡವರ ಮನೆಯ ಹೆಣ್ಣುಮಕ್ಕಳ ಜೀವನ ಹಾಳಾಗುತ್ತಿದ್ದುದನ್ನು ಎರಡೂ ಕಾದಂಬರಿಗಳು ಅರ್ಥವತ್ತಾಗಿ ಕಟ್ಟಿಕೊಡುತ್ತವೆ. ಜಮೀನ್ದಾರಿ ಪದ್ಧತಿಯ ಕೇಡು ಸುಬ್ಬಮ್ಮ, ಸೀತೆ, ಚಿನ್ನಮ್ಮ ಕಾವೇರಿ, ತಿಮ್ಮಿ ಮೊದಲಾದ ಸ್ತ್ರೀಯರನ್ನು ಅನೇಕ ಕಷ್ಟ ಪರಂಪರೆಗಳ ಬಲೆಯೊಳಗೆ ಕೆಡವಿ ಅವರ ಬದುಕನ್ನು ನಾಶ ಮಾಡಲು ಮುಂದಾದುವನ್ನು ಗುರುತಿಸಬಹುದಾಗಿದೆ. ಸ್ತ್ರೀಯರಿಗೆ ತಮ್ಮಣ್ಣಿಯ ಬದುಕನ್ನು ರೂಪಿಸಿಕೊಳ್ಳುವುದಕ್ಕೆ ತಮಗೆ ಇಷ್ಟವಾದವನನ್ನು ಬಾಳಸಂಗಾತಿಯನ್ನು ಆರಿಸಿಕೊಂಡು ಜೀವನ ಸಾಗಿಸಲು ಈ ವ್ಯವಸ್ಥೆಯಲ್ಲಿ ಅವಕಾಶಗಳಿಲ್ಲದಿರುವ, ಸ್ತ್ರೀ ಶೋಷಣೆಯ ಮುಖಗಳನ್ನೂ ಈ ಕಾದಂಬರಿಗಳು ಹಿಡಿದಿಟ್ಟಿವೆ ಎನ್ನಬಹುದು.

ಹಿಂದೂ ಧರ್ಮದಲ್ಲಿ ಬ್ರಾಹ್ಮಣೇತರ ಜಾತಿಯವರನ್ನು ಧಾರ್ಮಿಕವಾಗಿ ಶೋಷಿಸುತ್ತಿರುವುದರ ವಿರುದ್ಧ ಬಂಡಾಯ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತದೆ. ಹಿಂದೂ ಧರ್ಮ ಕೆಳಜಾತಿಯ ಜನರನ್ನು ಮನುಷ್ಯರನ್ನಾಗಿ ನೋಡದೆ, ಸರಿಯಾಗಿ ಬದುಕಲು ಬಿಡದೆ, ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಳ್ಳುತ್ತಾ ಬರುತ್ತಿರುವುದನ್ನು ವಿದ್ಯಾಭ್ಯಾಸ ನೀಡದೆ ಶತಶತಮಾನಗಳಿಂದ ದೆಯ್ಯ-ದ್ಯಾವರು, ಜಾತಕ-ಜ್ಯೋತಿಷ್ಯ, ಹರಕೆ-ಬಲಿ, ಪಾಪ-ಪುಣ್ಯ, ಜನ್ಮ-ಪುನರ್ಜನ್ಮ ಇವುಗಳ ಬಗ್ಗೆ ಮೂಢನಂಬಿಕೆಗಳನ್ನು ಹುಟ್ಟುಹಾಕಿ ಶೋಷಿಸುತ್ತಾ ಬಂದಿರುವುದನ್ನು ಸೂಚಿಸುತ್ತಾರೆ. ಮಲೆನಾಡಿನಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಜಾತ್ಯಾತೀತವಾಗಿ ಶಿಕ್ಷಣದ ಮೂಲಕ ನಿಜಸ್ಥಿತಿಯನ್ನು ಮನವರಿಕೆ ಮಾಡಿಕೊಡುತ್ತಾ, ಸಮಾನತೆಯ ಅರಿವು

ಮೂಡಿಸುತ್ತಾ ವೈಚಾರಿಕ ಮತ್ತು ವೈಜ್ಞಾನಿಕ ವಿಷಯಗಳನ್ನು ತಿಳಿಸುತ್ತಾ ಹಿಂದೂಗಳನ್ನು ಜಾಗೃತಗೊಳಿಸುವ ಕಾರ್ಯಗಳು ನಡೆಯುತ್ತಿದ್ದುದನ್ನು ಕಾದಂಬರಿ ವಿವರಿಸುತ್ತದೆ (ನೋಡಿ : ಮ.ಮ. ಪು.೭೦೨) ರೆವರೆಂಡ್ ಲೇಕ್ವಿಲ್ ಪಾದ್ರಿ, ಜೀವರತ್ನಯ್ಯ ಈ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡುತ್ತಾ ಒಕ್ಕಲಿಗ ಮತ್ತು ಕೆಳಜಾತಿಯ ಜನರನ್ನು ಮತಾಂತರಕ್ಕೆ ಪ್ರಲೋಭನೆಗಳ ಮೂಲಕ ಪ್ರಯತ್ನಿಸುತ್ತಿದ್ದುದನ್ನು ಕುವೆಂಪು ಚಿತ್ರಿಸಿದ್ದಾರೆ. ಚಿನ್ನಪ್ಪ ಗೌಡರಂಥವರು ಈಗಾಗಲೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುವುದು ಕಂಡುಬರುತ್ತದೆ. ದೇವಯ್ಯ ಮತ್ತು ಅವನ ಕೂಲಿಯಾಳು ಬಚ್ಚನನ್ನು ಮತಾಂತರಗೊಳಿಸುವ ಪ್ರಕ್ರಿಯೆ ನಡೆಯುತ್ತಿರುವುದನ್ನು ಸೂಚಿಸುತ್ತಿರುವುದರ ಮೂಲಕ ಕುವೆಂಪು ಪುರೋಹಿತಶಾಹಿಯನ್ನು ವಿರೋಧಿಸಿ ಅದಕ್ಕೆ ಶಾಕ್ ಕೊಡುವ ರೀತಿಯಲ್ಲಿ ಜಮೀನ್ದಾರಿ ಮನೆತನಕ್ಕೆ ಸೇರಿದವರು ಮತಾಂತರಕ್ಕೆ ಆಕರ್ಷಿತರಾಗುತ್ತಿದ್ದ ವಾಸ್ತವ ಸ್ಥಿತಿಯ ಚಿತ್ರಣ ನೀಡುತ್ತಾರೆ. ಆಧುನೀಕರಣದಿಂದಾಗಿ ಮಲೆನಾಡಿನ ಪುರೋಹಿತಶಾಹಿ ಮತ್ತು ಜಮೀನ್ದಾರಿ ಪದ್ಧತಿಯ ಸಮಾಜದಲ್ಲಿ ಸಾಕಷ್ಟು ಸ್ಥಿತ್ಯಂತರಗಳು ಜರುಗುತ್ತಿದ್ದುದನ್ನು ಕುವೆಂಪು ಸೂಚಿಸುತ್ತಿದ್ದಾರೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಪುರೋಹಿತಶಾಹಿ ಪ್ರತಿನಿಧಿಯಾದ ವೆಂಕಪ್ಪಯ್ಯ ಜೋಯಿಸರನ್ನು ವಿದ್ಯಾವಂತ ಹೂವಯ್ಯ ನೇರವಾಗಿಯೆ ಪ್ರಶ್ನಿಸುತ್ತಾನೆ. ಬ್ರಾಹ್ಮಣ್ಯದ ಮೌಲ್ಯಗಳನ್ನು ವಿರೋಧಿಸುತ್ತಾನೆ.

ಒಟ್ಟಿನಲ್ಲಿ ಕುವೆಂಪುರವರ ಎರಡು ಕಾದಂಬರಿಗಳ ಹಿನ್ನೆಲೆಯಲ್ಲಿ ಆಧುನಿಕತೆಯು ಪ್ರಧಾನ ಶಕ್ತಿಯಾಗಿ ಕೆಲಸ ಮಾಡಿದೆ. ಇವುಗಳಲ್ಲಿ ಪಲ್ಲಟಕ್ಕೊಳಗಾಗುತ್ತಿರುವ ಸಾಮಾಜಿಕ ವ್ಯವಸ್ಥೆಯನ್ನು ಕಾಣುತ್ತೇವೆ. ಇಲ್ಲಿ ಚಿತ್ರಿತವಾಗಿರುವ ಮಲೆನಾಡು ಸಾಂಪ್ರದಾಯಿಕ ಜಮೀನ್ದಾರಿ ಸಾಮಾಜಿಕ ಸಂಬಂಧಗಳನ್ನು ಪ್ರತಿನಿಧಿಸುತ್ತದೆ. ಆದರೆ ಅದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ, ಬಲಹೀನಗೊಳ್ಳುತ್ತಾ, ಸತ್ವಹೀನವಾಗುತ್ತಿದೆ. ಇದರಿಂದ ಸಮಾಜದಲ್ಲಿ ಹೊಸ ಸಂಬಂಧಗಳು ರೂಪುಗೊಳ್ಳತೊಡಗಿವೆ. ಹಳೆಯ ವ್ಯವು ತನ್ನ ಗಳಲ್ಲಿಯೂ ವರ್ಣವರ್ಗಾಧಾರಿತವಾದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕ್ರೌರ್ಯ ಹುಚ್ಚಾ ಹಿಡಿತವನ್ನು ಬಲಪಡಿಸಿಕೊಳ್ಳಲು ಯತ್ನಿಸುತ್ತಿದೆ. ಇದರ ಫಲವಾಗಿ ಎರಡು ಕಾದಂಬ ಕಂಡುಬರುತ್ತದೆ. ಬ್ರಾಹ್ಮಣರು, ಗೌಡರು, ವಸೂಲಿ ಸಾಬರು ಮತ್ತು ಕಲಿಸ ಜಾಕಿಯುಂತಹವರ ಮೂಲಕ ಈ ಕ್ರೌರ್ಯ ದಬ್ಬಾಳಿಕೆ ವ್ಯಕ್ತವಾಗುತ್ತಿರುವುದನ್ನು, ಇದಕ್ಕೆ ಪ್ರತಿಯಾಗಿ ಮುಕುಂದಯ್ಯ, ದೇವಯ್ಯ, ಚಿನ್ನಮ್ಮ ಗುತ್ತಿ–ತಿಮ್ಮಿ, ಹೂವಯ್ಯ –ಸೀತೆ ಇವರೆಲ್ಲ ಮಾನವೀಯತೆಯ ಮೂಲಕ ಹೊಸ ಸಂಬಂಧಗಳನ್ನು ರೂಪಿಸಲು ಪ್ರಯತ್ನಿಸುತ್ತಿರುವುದನ್ನು ಎರಡು ಕಾದಂಬರಿಗಳು ಚಿತ್ರಿಸುತ್ತವೆ. (ಡಾ.ನಾಗಪ್ಪ ಗೌಡ.ಆರ್ – ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟದ ಸ್ವರೂಪಗಳು – ಪ್ರಸಾರಂಗ ಕುವೆಂಪು ವಿಶ್ವವಿದ್ಯಾನಿಲಯ – ಪು.ಸಂ– ೮೨ ರಿಂದ ೯೪).

ಅಧ್ಯಾಯ – ೧೩

ಗ್ರಾಮಾಯಣ : ಉತ್ತರ ಕರ್ನಾಟಕದ ವಾಸ್ತವಿಕ ಚಿತ್ರಣಗಳು

೧೯೫೭ರಲ್ಲಿ ರಚಿತವಾದ ರಾವ್‌ಬಹದ್ದೂರರ 'ಗ್ರಾಮಾಯಣ' ಕಾದಂಬರಿಗೆ ಕನ್ನಡದ ವಾಸ್ತವತಾವಾದದ ಕಾದಂಬರಿಗಳಲ್ಲಿ ವಿಶೇಷಸ್ಥಾನವಿದೆ.

"ಆರವತ್ತು ವರ್ಷಗಳ ಹಿಂದಿನ ಯಥಾವತ್ತಾದ ಜೀವನವನ್ನು ಚಿತ್ರಿಸುವ ಒಂದು ಗ್ರಾಮದ ಜೀವನ ಕಥಾಮಾಲೆ" ಎಂದು. ಈ ಕೃತಿ ಒಂದು ಹಳ್ಳಿಯ (ಪಾದಳ್ಳಿ) ಬದುಕನ್ನು ಯಥಾವತ್ತಾಗಿ ಹಿಡಿದಿಡುವ (ವಾಸ್ತವಕ್ಕೆ ಧಕ್ಕೆಯಾಗದಂತೆ) ದಿಟ್ಟ ಪ್ರಯತ್ನವನ್ನು ಮಾಡಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಕಾದಂಬರಿಯ ಕತೆಯ ಬಗ್ಗೆ ಕೆ.ಡಿ.ಕುರ್ತಕೋಟಿ ಯವರು ಮುನ್ನುಡಿಯಲ್ಲಿ ಸೂಚಿಸಿರುವುದನ್ನು ಇಲ್ಲಿ ಉಲ್ಲೇಖಿಸಹುದು. ಇದು ಮುಖ್ಯವಾಗಿ ಪಾದಳ್ಳಿಯ ಕತೆ. ಕೃಷ್ಣಾನದಿಯ ದಂಡೆಯ ಮೇಲೆ ಇರುವ ಈ ಊರ ಪ್ರಾದೇಶಿಕ ಸತ್ಯವಷ್ಟೇ ಆಗಿರದೆ ಈ ಕಾದಂಬರಿಯಲ್ಲಿಯ ಅನೇಕ ಸಂಗತಿಗಳಿಗೆ ಸನ್ನಿವೇಶಗಳಿಗೆ, ವ್ಯಕ್ತಿಗಳಿಗೆ ಕೇಂದ್ರಬಿಂದುವಾಗಿದೆ. ಅಂತಲೇ ಇಲ್ಲಿ ನಡೆಯುವ ಘಟನೆಗಳು, ಅವುಗಳಲ್ಲಿ ಭಾಗವಹಿಸಿದ ವ್ಯಕ್ತಿಗಳು ಪಾದಳ್ಳಿಯ ದೈವಕ್ಕೆದುರ್ದೈವಕ್ಕೆ) ಅಭಿವ್ಯಕ್ತಿಯನ್ನು ನೀಡುತ್ತವೆ. ಕತೆ ಪಾದಳ್ಳಿಯನ್ನು ಬಿಟ್ಟು ಇನ್ನೊಂದು ಊರಿಗೆ ಹೋದರೂ, ಬೇರೆ ಊರಿನ ವ್ಯಕ್ತಿಗಳು ಪಾದಳ್ಳಿಗೆ ಬಂದರೂ ಪಾದಳ್ಳಿಯ ಜೀವನವೇ ಅಲ್ಲಿ ಪ್ರಕಾಶಿತ ವಾಗುತ್ತದೆ. ಪಾದಳ್ಳಿಯ ಸ್ಥಿತಿ–ಗತಿ, ಅವನತಿಗಳೇ ಕಾದಂಬರಿಯ ಜೀವನವಾಗಿ ಮಿಡಿಯುತ್ತವೆ."

ಲೇಖಕರ ಉದ್ದೇಶದ ಮಾತುಗಳು ಈ ಕಾದಂಬರಿಯನ್ನು ಹೇಗೆ ಅರ್ಥೈಸಬೇಕೆಂಬುದಕ್ಕೆ ಸ್ಪಷ್ಟ ಸೂಚನೆಯನ್ನು ನೀಡುತ್ತವೆ. ಈ ಕಾದಂಬರಿಗೆ ನಾಯಕನಿಲ್ಲ. ನಾಯಕಿಯೂ ಇಲ್ಲ. ಪ್ರಮುಖವಾಗಿ ಕಂಡುಬರುವ ಪಾತ್ರಗಳು ಇರಬಹುದಾದರೂ ಅವು ಜೀವನ ವಿನ್ಯಾಸದ ದೃಷ್ಟಿಯಿಂದ ಮಾತ್ರ ಪ್ರಮುಖವಾಗಿವೆ. ಪಾದಳ್ಳಿಯ ಜನ ಸಮೂಹವೇ ಈ ಕಾದಂಬರಿಯ ನಾಯಕನೆಂದು ನಾನು ತಿಳಿದಿದ್ದೇನೆ. ಕೊನೆಯಲ್ಲಿ ಬರುವ ಪ್ರಳಯದ ಚಿತ್ರವೇ ಕೊನೆಯಲ್ಲ,

ಅದರಲ್ಲಿಯೂ ಬರಲಿರುವ ಮನ್ವಂತರದ ಬೀಜಗಳು ಅಡಗಿವೆಯೆಂಬುದನ್ನು ವಾಚಕರು ಗಮನಿಸಬೇಕು. ಅಂದರೆ ಪಾದಳ್ಳಿಯ ಜನ ಸಮೂಹದ ಬದುಕಿನ ಅವನತಿಯನ್ನು ಕಟ್ಟಿಕೊಡುವ ಉದ್ದೇಶವನ್ನು ಕಾದಂಬರಿ ಹೊಂದಿದೆ. ಪಾದಳ್ಳಿಯ ಬದುಕು ಅಧೋಗತಿಯತ್ತ ಸಾಗುತ್ತಾ ಬಂದು ನಾಶವಾಗುವುದಕ್ಕೆ ಕಾರಣಗಳನ್ನು ಕಾದಂಬರಿ ಧ್ವನಿಪೂರ್ಣವಾಗಿ ಸೂಚಿಸುತ್ತದೆ. ಆ ಹಳ್ಳಿಯನ್ನು ತಮ್ಮ ಅಧೀನದಲ್ಲಿ ಇಟ್ಟುಕೊಳ್ಳ ಬಯಸುವ ಪ್ರಮುಖ ವ್ಯಕ್ತಿಗಳ ಅಧಿಕಾರ ಲಾಲಸೆ, ಸ್ವಾರ್ಥ, ವಂಚನೆ, ಕಾಮಪಿಪಾಸೆ, ಕೌರ್ಯ, ಹೊಣೆಗೇಡಿತನ, ಅಜ್ಞಾನ, ಅಂಧಶ್ರದ್ಧೆ ಮೊದಲಾದವುಗಳೇ ಕಾರಣಗಳಾಗಿವೆ. ಇದಕ್ಕೆ ಪಾದಳ್ಳಿಯ ಆಂತರಿಕ ಮತ್ತು ಬಾಹ್ಯ ಶಕ್ತಿಗಳು ಪೂರಕವಾಗಿ ಕಾರ್ಯಪ್ರವೃತ್ತವಾಗುವುದರಿಂದ ದುರಂತ ತೀರ ಸುಲಭ ಸಾಧ್ಯವಾಗಿ ಬಿಡುತ್ತದೆ. ವಸಾಹತುಶಾಹಿಯ ಮೂಲಕ ಭಾರತವನ್ನು ಪ್ರವೇಶಿಸಿದ ಆಧುನಿಕತೆಯ ಕೇಡು ಹೇಗೆ, ಮೊದಲೇ ಸತ್ವಹೀನವಾಗಿದ್ದ ಅಸಮಾನತೆಯ ವ್ಯವಸ್ಥೆಯನ್ನು ಬಹುಬೇಗನೆ ಛಿದ್ರಛಿದ್ರಗೊಳಿಸಿಬಿಡುತ್ತದೆ ಎಂಬುದನ್ನು ಕಾದಂಬರಿ ಸೂಚಿಸುತ್ತದೆ. ಒಂದು ಕುಟುಂಬದಲ್ಲಾಗಲೀ, ಹಳ್ಳಿಯಲ್ಲಾಗಲಿ, ರಾಜ್ಯದಲ್ಲಾಗಲಿ ಅರಾಜಕತೆಯುಂಟಾದಾಗ ದುಷ್ಟ ಮನಸ್ಸುಗಳು ಕಾರ್ಯ ಪ್ರವೃತ್ತವಾಗಿ ಇಡೀ ಹಳ್ಳಿಯ ಜೀವನಾಡಿಯನ್ನೇ ಹೇಗೆ ನಾಶ ಮಾಡಿಬಿಡುತ್ತವೆ ಎಂಬುದಕ್ಕೂ ಗ್ರಾಮಾಯಣ ಒಂದು ಒಳ್ಳೆಯ ನಿದರ್ಶನವಾಗಿದೆ. ಇಲ್ಲಿ ಇವುಗಳ ಸಮಗ್ರ ವಿಶ್ಲೇಷಣೆಗೆ ಹೋಗದೆ ಪಾದಳ್ಳಿಯ ದುರಂತ ಬದುಕಿಗೆ ಸಾಕ್ಷಿಭೂತವಾಗುವಂತೆ ಪ್ರಕೃತಿಯ ಚಿತ್ರಣ ಮೂಡಿಬಂದಿರುವುದನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಪಾದಳ್ಳಿಯ ಜನರಿಗೆ ಒಂದೇ ಒಂದು ಆಶ್ರಯ ಸ್ಥಾನವಾಗಿದ್ದ ವಾಡೆಯ ಯಜಮಾನಿಯಾಗಿದ್ದ ಪುತಳಾಬಾಯಿಯ ಆತ್ಮಹತ್ಯೆಯ ಸುದ್ದಿ ತಿಳಿದ ಜನರ ದುಃಖವನ್ನು ವಿವರಿಸುವ ಸಂದರ್ಭದಲ್ಲಿ ಅಲ್ಲಿಯ ಪರಿಸರವನ್ನು ಕಾದಂಬರಿಕಾರರು ಹೀಗೆ ನಿರೂಪಿಸುತ್ತಾರೆ. "ನಿರ್ಜನವಾದ ಅರಣ್ಯದಲ್ಲಿ ನಡೆಯುವ ರೀತಿಯ ಒಂಟಿಗನಾದ ಪ್ರಯಾಣಿಕನಂತೆ ಹೊತ್ತು ಮೆಲ್ಲಗೆ ಸರಿಯುತ್ತಿತ್ತು. ಹೊತ್ತು ಮುಳುಗಿ, ಪಾದಳಿಯಲ್ಲಿ ಸಂಜೆ ಇಷ್ಟು ಉತ್ಸಾಹಹೀನವಾಗಿ ಎಂದೂ ತೋರಿರಲಿಲ್ಲ. ನಾಡೆಲ್ಲ ದನಕರುಗಳು ಹಿಂದಿರುಗಿ ಬಂದವು. ವಾತಾವರಣದ ತುಂಬೆಲ್ಲಾ ಯಾಕೋ ನಿರಾಸೆಗಳೊಡನೆ ನಾಚಿಕೆಯೂ ಬೆರೆತಂತಿತ್ತು. ಎಲ್ಲರ ಮನಸ್ಸಿನಲ್ಲಿಯೂ, ಯಾವಾಗ ಹೊತ್ತು ಮುಳುಗಿ ಕತ್ತಲಾಗುವುದೋ ಎಂಬ ನಿರೀಕ್ಷೆಯಿತ್ತು. ಹಗಲ ಬೆಳಕು ಯಾರಿಗ, ಬೇಡವಾಗಿತ್ತು." ಈ ವಿವರಣೆಯನ್ನು ಗಮನಿಸಿದರೆ ಪಾದ ಮುಂದಿನ ದುರಂತದ ಬೀಜ ಮೊಳೆಯುತ್ತಿರುವ ಸೂಚನೆ ವ್ಯಕ್ತವಾಗುತ್ತದೆ. ಇದರ ಮೊಳಕೆಯನ್ನು ಕಿತ್ತೆಸೆಯುವ, ನಾಶಮಾಡುವ ದಿಟ್ಟವಾದ ವಿವೇಚನಾಯುತವಾದ ಕ್ರಿಯೆ ಯಾರಿಂದಲೂ ಸಾಧ್ಯವಾಗುವುದೇ ಇಲ್ಲ.

ಗದ್ಯ ಎನ್ನುವುದೇ ಒಂದು ವಿಶಿಷ್ಟವಾದ ಶೈಲಿಯು ಆಗಿರುತ್ತದೆ ಎಂದು ವಿಮರ್ಶಕರು ಅಭಿಪ್ರಾಯ ಹೊಂದಿದ್ದು ಗಮನಾರ್ಹ. ಒಂದು ಪ್ರಕಾರವಾಗಿ ಕಾದಂಬರಿಯು ತನ್ನದೇ ಆದ ಒಂದು ವಿಶಿಷ್ಟತೆಯನ್ನು ಹೊಂದಿರುವುದು ನಿಜ. ಕಾದಂಬರಿಕಾರರು ತಮಗೆ ಅನುಕೂಲವಾದ ಗದ್ಯವನ್ನು ಬಳಸುತ್ತಾರೆ. ಕಾದಂಬರಿಯ ಒಳಗೆ ನಿರೂಪಕನು ಭಾಗವಹಿಸಿದರೆ ಅದರ ಸ್ವರೂಪವನ್ನು

ನಿರೂಪಕನೇ ನಿಯಂತ್ರಿಸುತ್ತಾನೆ. ಕಾದಂಬರಿಯ ವಸ್ತು ಮತ್ತು ಅದರ ನಿರೂಪಣೆಯು ಆಗ ಒಂದು ರೀತಿಯಲ್ಲಿ ಇರುತ್ತದೆ. ಆದರೆ ಯಾವಾಗ ಲೇಖಕನು ಕಾದಂಬರಿಯ ಹೊರಗೆ ಇದ್ದು ಕಾದಂಬರಿಯ ವಸ್ತುವನ್ನು ನಿರೂಪಿಸಲು ಹೋಗುತ್ತಾನೆಯೋ ಆಗ ಅದರ ಸ್ವರೂಪವು ಭಿನ್ನವಾಗುತ್ತದೆ.ಗೊಂಬೆಯಾಟದ ಥರ ಕಾದಂಬರಿಯ ವಸ್ತುವನ್ನು ಅವನು ನಿರೂಪಿಸಿಕೊಳ್ಳುತ್ತಾ ಹೋಗುತ್ತಾನೆ. ಆಗ ಲೇಖಕನ ಉದ್ದೇಶ ಮತ್ತು ಅವನ ತಾತ್ವಿಕ ದೃಷ್ಟಿಕೋನವು ವ್ಯಕ್ತವಾಗುವ ಕ್ರಮಗಳು ಬೇರೆಯಾಗುತ್ತವೆ. ತೇಜಸ್ವಿ ಆಕರ್ಶಕವಾದ ನುಡಿಗಟ್ಟಿಗೆ ಮಾರು ಹೋದವರು ಅಲ್ಲ. ಕಾದಂಬರಿಯು ಬರೆದು ಮುಗಿದ ಮೇಲೆ ಅದರ ಬಗ್ಗೆ ಯೋಚನೆ ಮಾಡಿದವರೂ ಅಲ್ಲ. ಲೇಖಕನ ದೃಷ್ಟಿಕೋನ , ಅವನ ಮಾತಿನ ಚಹರೆಗಳು ಕಾದಂಬರಿಯಲ್ಲಿ ವ್ಯಕ್ತವಾಗುವ ಕ್ರಮಗಳು ಅನೇಕ ಸಂದರ್ಭದಲ್ಲಿ ಸಂಕೀರ್ಣವೂ ಆಗುತ್ತದೆ. ಅವನ ಪ್ರಜ್ಞೆ, ಅವನ ಮಾತುಗಳು, ಅವನ ನಿಲುವುಗಳು ಮತ್ತು ಅವನು ಆಯ್ಕೆ ಮಾಡಿಕೊಂಡ ವಸ್ತು,ಅವನ ಭಾಷೆ ಹಾಗೂ ಅವನ ಕಾದಂಬರಿಯ ಪಾತ್ರಗಳು ಎಲ್ಲವೂ ಜೊತೆಗೆ ಇರುತ್ತವೆ. ಮತ್ತು ಮುಖಾಮುಖಿಯಾಗುತ್ತವೆ. ಲೇಖಕನ ಧ್ವನಿ ಮತ್ತು ಕಾದಂಬರಿಯ ಧ್ವನಿ ಎರಡೂ ಜೊತೆಗೆ ಬರುತ್ತವೆ. ಆದರೆ ಲೇಖಕನು ಯಾವುದನ್ನು ನೋಡುತ್ತಾನೆ, ಅವನಿಗೆ ಯಾವುದು ಮುಖ್ಯವಾಗುತ್ತದೆ ಅದು ಮಾತ್ರವೇ ಕಾದಂಬರಿಯಲ್ಲಿ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಕಾದಂಬರಿಯ ವಸ್ತು ಪ್ರಪಂಚವು ಸೋಸಲ್ಪಡುತ್ತದೆ. ಕಾದಂಬರಿಯೆನ್ನುವುದು ಭೂತಕಾಲಕ್ಕೆ ಸಂಬಂಧಪಟ್ಟಿದೆ. ಅದರ ಸ್ವರೂಪವು ಯಾವುದು ಇದೆಯೋ ಅದನ್ನು ಹೇಳುತ್ತಾ ಮುಂದಿನ ಸಂಗತಿಗಳನ್ನು ನಿರೂಪಿಸುತ್ತದೆ. ಕಾದಂಬರಿಯ ಕಾಲವು ಹೇಳುವುದು ಭಿನ್ನವಾದ ದೃಷ್ಟಿಕೋನವನ್ನು. ಕಾದಂಬರಿಯಲ್ಲಿನ ಲೋಕದೃಷ್ಟಿಯು ಕಾದಂಬರಿಯ ವಸ್ತುವನ್ನು ಮತ್ತು ಅದರ ಸಾಧ್ಯತೆಯನ್ನು ಸೂಚಿಸುತ್ತದೆ. ಅದು ಅನೇಕ ಸರ್ತಿ ಪ್ರತಿಮೆಗಳಾಗಿಯೂ ವ್ಯಕ್ತವಾಗುತ್ತದೆ. ಕಾದಂಬರಿ ಮತ್ತು ಅದರ ವಸ್ತುವು ಲೇಖಕನ ನಿಲುವನ್ನು ವ್ಯಕ್ತಪಡಿಸಿಕೊಳ್ಳುವುದರಿಂದಲೇ ಕಾದಂಬರಿಯ ಭಾಷೆಯೂ ನಿಯಂತ್ರಣಕ್ಕೆ ಒಳಗಾಗುತ್ತದೆ. ಕಾದಂಬರಿಯ ನಾಯಕನು ಜಗತ್ತಿನೊಂದಿಗೆ ಒಂದು ನಿರ್ಣಾಯಕವಾದ ಪಾತ್ರವನ್ನು ಹೊಂದಿರುತ್ತಾನೆ. ಚಿದಂಬರ ರಹಸ್ಯದ ರಫಿ ಮತ್ತು ಜಯಂತಿಯರನ್ನು ನಾವು ಇಲ್ಲಿ ನೋಡಬಹುದು.

ಲೇಖಕನ ತಾತ್ವಿಕತೆಯು ಯಾವುದು ಎಂದು ನಾವು ದುರ್ಬೀನ್ ಹಿಡಿದು ನೋಡಬೇಕಾಗಿಲ್ಲ. ಅದು ಕಾದಂಬರಿಯ ಅಗತ್ಯವೂ ಹೌದು. ಕಾದಂಬರಿಯ ನಾಯಕನು ಕಾದಂಬರಿಯ ಮುಖೇನ ಜಗತ್ತಿನೊಂದಿಗೆ ಸ್ಥಾಪಿಸುವ ಸಂಬಂಧವೇ ಕಾದಂಬರಿಯ ತಾತ್ವಿಕತೆಯನ್ನು ಸೂಚಿಸುತ್ತದೆ. ಕಾದಂಬರಿಕಾರನ ನಿಲುವುಗಳು ಕಾದಂಬರಿಯಲ್ಲಿ ಒಂದು ಯೋಚನೆಯ ಕ್ರಮವೂ ಆಗಿರುತ್ತದೆ. ಇಲ್ಲಿ ಲೇಖಕನು ತನ್ನ ಆಲೋಚನೆಯನ್ನು ಮತ್ತು ತನ್ನ ದೃಷ್ಟಿಕೋನವನ್ನು ಕಾದಂಬರಿಯ ವಸ್ತು ಪ್ರಪಂಚದ ಜೊತೆಗೆ ಸಮೀಕರಿಸುತ್ತಾನೆ. ಲೇಖಕನ ಯೋಚನೆಯೇ ಕಾದಂಬರಿಯಲ್ಲಿ ಒಂದು ಪಾತ್ರದ ಮೂಲಕವೂ ವ್ಯಕ್ತವಾಗುವ ಸಾಧ್ಯತೆಯೂ ಇರುತ್ತದೆ. ಅದು ಅಗತ್ಯವೆಂದು ಅವನು ಭಾವಿಸುವ ಸಾಧ್ಯತೆಯೂ ಇರುತ್ತದೆ. ಆದರೆ ಯಾವಾಗ ಲೇಖಕನು ಸರಿ ಮತ್ತು

ತಪ್ಪುಗಳನ್ನು ನೋಡುವ ಕ್ರಮವೇ ಬೇರೆ. ತನ್ನ ದೃಷ್ಟಿಕೋನದಲ್ಲಿ ಯಾವುದು ಸರಿಯಲ್ಲವೋ ಆಗ ಅದನ್ನು ಅವನು ನಿರಾಕರಿಸುತ್ತಾನೆ. ಕಾದಂಬರಿಯ ನಾಯಕನು ಲೇಖಕನೇ ಆದಾಗ ಅವನು ಕಾದಂಬರಿಯನ್ನು ನಿಯಂತ್ರಿಸುತ್ತಾನೆ. ಅವನಿಗೆ ಅದು ಮುಖ್ಯವಾಗಲೂ ಬಹುದು. ಕರ್ವಾಲೋ ಉದಾಹರಣೆ. ಕಾದಂಬರಿಯಲ್ಲಿ ಮತ್ತೊಂದು ಅಂಶವೂ ಮುಖ್ಯವಾಗುತ್ತದೆ. ಯಾವಾಗ ಒಂದು ಪಾತ್ರವಾಗಿ ಲೇಖಕನು ಬಂದರೆ ಅದರ ಸ್ವರೂಪವೇ ಅವನಲ್ಲಿ ಕೇಂದ್ರೀಕರಣವಾಗುತ್ತದೆ. ಯಾವುದೇ ಒಂದು ಕಾದಂಬರಿಯಲ್ಲಿ ಬರುವ ಪಾತ್ರಗಳಿಗೆ ಅವುಗಳದೇ ಆದ ವರ್ತನೆಯು ಇರುತ್ತದೆ. ಮತ್ತು ಗುಣಧರ್ಮವೂ ಇರುತ್ತದೆ. ಅದು ವ್ಯಕ್ತಿಯ ಮಟ್ಟಿಗೆ ಸತ್ಯವೂ ಹೌದು. ಕಾದಂಬರಿಯ ಸ್ವಗತದ ಶೈಲಿಯೂ ಕೂಡಾ ಕಾದಂಬರಿಯನ್ನು ನಿಯಂತಿಸುತ್ತದೆ. ಆದರೆ ಅದನ್ನು ಲೇಖಕನು ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ ಎನ್ನವುದೂ ಬಹಳ ಮುಖ್ಯ. ಕಾದಂಬರಿಯಲ್ಲಿ ಸ್ವಗತವು ಬಹಳ ಮುಖ್ಯವಾದ ಕ್ರಿಯೆ ಕೂಡಾ ಆಗಬಹುದು. ಆದರೆ ಇದರ ನೋಟವನ್ನು ಹೇಗೆ ಗ್ರಹಿಸಬೇಕು ಎನ್ನುವುದು ಬಹಳ ಮುಖ್ಯ. ಲೇಖಕನ ಉದ್ದೇಶ, ಅವನ ಪ್ರಜ್ಞೆಯು ಸಾಹಿತ್ಯದಲ್ಲಿ ಕೆಲಸವನ್ನು ಮಾಡುತ್ತದೆ ಎನ್ನವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಲೇಖಕನು ಯಾವುದನ್ನು ನೋಡುತ್ತಾನೆ, ಯಾವುದನ್ನು ತಿಳಿಯುತ್ತಾನೆ ಎನ್ನುವದೇ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಲೇಖನ ನಿಲುವು ಕಾದಂಬರಿಯ ನಿಲುವಾಗಿಯೂ ಪರಿವರ್ತನೆಯಾಗುತ್ತದೆ. ಕಾದಂಬರಿಯಲ್ಲಿ ಒಂದು ಪಾತ್ರವು ಯಾವ ಗುಣವನ್ನು ಹೊಂದಿರುತ್ತದೆಯೋ ಅದನ್ನು ನಾವು ಕಾದಂಬರಿಯಲ್ಲಿ ಗಮನಿಸುವುದು ತಾತ್ವಿಕತೆಯ ದೃಷ್ಟಿಯಿಂದ ಅಗತ್ಯವೂ ಹೌದು. ಆದರೆ ನಾವು ಅದನ್ನು ಪ್ರತ್ಯೇಕವಾದ ನಿಲುವು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಕಾದಂಬರಿಯು ಹೇಳುವುದು ಯಾವುದನ್ನು ಎಂದು ತಿಳಿಯಬೇಕಾದರೆ ಅದರ ತಾತ್ವಿಕ ನಿಲುವನ್ನು ಗ್ರಹಿಸಲೇ ಬೇಕಾಗುತ್ತದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯಲ್ಲಿ ಲೇಖಕನು ಯಾವುದನ್ನು ಹೇಳಲು ಬಯಸುತ್ತಾನೆಯೋ ಅದು ಅವನ ಕೃತಿಯಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗಲು ಸಾಧ್ಯ. ಲೇಖಕನ ವೈಯಕ್ತಿಕ ನಿಲುವು ಅವನ ಬರಹದಲ್ಲಿ ಹೇಗೆ ವ್ಯಕ್ತವಾಗುತ್ತದೆಯೋ ಅದನ್ನು ಅವನ ಭಾಷೆ, ಅವನ ನಿರೂಪಣಾ ಕ್ರಮ, ಅವನ ಆಶಯಗಳು ಹೇಳುತ್ತವೆ. ವ್ಯಕ್ತಿ ಮತ್ತು ಅನುಭವ ಎರಡೂ ಕೃತಿಯಲ್ಲಿ ವ್ಯಕ್ತವಾಗುವಾಗ ಅದನ್ನು ಮಾತ್ರವೇ ಮಾನದಂಡವಾಗಿ ಇಡಬೇಕಾದ ಅಗತ್ಯವೂ ಇಲ್ಲ. ಕಾದಂಬರಿಯಲ್ಲಿ ಯಾವುದು ಹೇಗೆ ವ್ಯಕ್ತವಾಗುತ್ತದೆ ಎನ್ನವುದು ಮಾತ್ರವೆ ಮುಖ್ಯ. ಆದರೆ ನವ್ಯದ ವಿಮರ್ಶಕರು ಹೇಳುವ ರೀತಿಯಲ್ಲಿ ಅನುಭವ ಮಾತ್ರವೇ ಮುಖ್ಯವಾಗುವ ಅಗತ್ಯವಿಲ್ಲ. ಇಲ್ಲಿ ಗಮನಿಸಬಹುದಾದ ಮತ್ತೊಂದು ಸಂಗತಿಯೂ ಇದೆ. ಲೇಖಕನ ಆಲೋಚನೆಯು ಕಾದಂಬರಿಯಲ್ಲಿ ವ್ಯಕ್ತವಾಗುವಾದ ಕೂಡಲೇ ಅದನ್ನು ಅವನು ಜೀವನ ಪೂರ್ತಿಯಾಗಿ ನಿರೂಪಿಸುತ್ತಾನೆ ಎಂದು ಹೇಳಲು ಬರುವುದೂ ಇಲ್ಲ. ಕಾದಂಬರಿಕಾರನು ಯಾವುದನ್ನು ಹೇಳುತ್ತಾನೆಯೋ ಅದು ಅವನ ಉದ್ದೇಶಿತ ನಿಲುವೂ ಆಗಿರುತ್ತದೆ. ಕಾದಂಬರಿಯ ವಸ್ತು ಅವನ ನಿಲುವನ್ನು ಸೂಚಿಸುತ್ತದೆ. ಕಾದಂಬರಿಕಾರನ ಆಲೋಚನೆಯು ಕಾದಂಬರಿಯಲ್ಲಿ

ವಿಭಿನ್ನವಾದ ಸಂವಾದವನ್ನು ಸೂಚಿಸುತ್ತದೆ. ಅವನ ನಿಲುವನ್ನು ನಾವು ಹೇಗೆ ನೋಡಬೇಕು ಎನ್ನುವುದೇ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ಕಾದಂಬರಿಯು ಹೇಳುವುದು ಒಂದು ಜೀವನದ ಕ್ರಮವನ್ನು. ಅದು ಅದಕ್ಕಿಂತ ಹೊರತಾಗಿರುವ ಸಾಧ್ಯತೆಯು ಇಲ್ಲ. ಆದ್ದರಿಂದ ಕಾದಂಬರಿಯನ್ನು ಓದುವಾಗ ಅದನ್ನು ನಮ್ಮ ಜೀವನದ ಭಾಗವೆಂಬಂತೆ ಓದುತ್ತೇವೆ. ನಮಗೆ ಯಾವುದು ಕಾಣಿಸುತ್ತದೆಯೋ ಅದನ್ನು ಮಾತ್ರವೇ ಕಾದಂಬರಿಕಾರನು ಹೇಳುತ್ತಾನೆ ಎಂದು ಅರ್ಥವಲ್ಲ. ಅವನು ಅದಕ್ಕಿಂತ ಭಿನ್ನವಾದುದನ್ನು ಹೇಳಬಹುದು. ಆದರೆ ಅದರಿಂದಲೇ ಅದು ಪೂರ್ಣವಾಯಿತು ಎಂದು ಅರ್ಥವಲ್ಲ. ಒಂದು ಸಾಮಾಜಿಕ ಜೀವನದ ಕ್ರಮವು ಒಂದೇ ಕ್ಷಣದಲ್ಲಿ ಮುಕ್ತಾಯವಾಗುವುದೂ ಇಲ್ಲ. ಅದು ಮುಂದುವರಿಯುತ್ತದೆ. ಅದಕ್ಕೆ ಚರಿತ್ರೆಯು ಇದೆ. ಅದೇ ರೀತಿಯಲ್ಲಿ ವ್ಯಕ್ತಿಗೂ ಅವನದೇ ಆದ ಚರಿತ್ರೆಯು ಇದೆ. ಜೀವನ ಎನ್ನುವುದು ಕೂಡಾ ಒಂದು ನಿಯಮವೇ ಆಗಿರುತ್ತದೆ. ಆದರೆ ಇದರನ್ನು ನಾವು ನೋಡುವಾಗ ಒಂದೊಂದು ರೀತಿಯಲ್ಲಿ ನೋಡುತ್ತೇವೆ. ಆದರೆ ಇದನ್ನು ನೋಡುವುದು ಎಂದರೆ ನಾವು ನಮ್ಮ ಜೀವನವನ್ನು ಒಂದು ನಮಗೆ ಬೇಕಾದಂತೆ ಗ್ರಹಿಸುವುದು ಎಂದು ಅರ್ಥವಲ್ಲ. ಕಾದಂಬರಿಯು ತನ್ನ ಆವಶ್ಯಕತೆಗೆ ತಕ್ಕಂತೆ ಜೀವನವನ್ನು ನೋಡುತ್ತದೆ. ಆದರೆ ಹೀಗೆ ನೋಡುವಾಗ ಅದರ ಸ್ವರೂಪವು ಭಿನ್ನವಾದ ಒಂದು ರಚನೆಯಂತೆಯೂ ಭಾಸವಾಗುತ್ತದೆ. ಇದನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ದಾದಾ ತನ್ನ ಹೊಲದ ಬೆಳೆಯನ್ನು ಕಾಯುತ್ತಿದ್ದ ರಾತ್ರಿಯ ಬೆಳದಿಂಗಳನ್ನು ನೋಡಿದಾಗ ಆಗುವ ಅನುಭವವನ್ನು ಕಾದಂಬರಿಯಲ್ಲಿ ವರ್ಣಿಸಲಾಗಿದೆ. ಭಾರತ ಹುಣ್ಣಿಮೆ ತುಂಬಿದ ಬೆಳದಿಂಗಳಿನ ರಾತ್ರಿ ದಾದಾ ಹೊಲದಲ್ಲಿ ಜೋಳದ ಇಕ್ಕಲ, ಗೋದಿಯ ಹುಲ್ಲು, ಕಡಲೆಯ ಚಟ್ಟ ಇವುಗಳ ಸಮೀಪದಲ್ಲಿ ಕುಳಿತು ಆಕಾಶವನ್ನು ನೋಡುತ್ತಿದ್ದ. ಚಳಿಗಾಲದ ಗಾಳಿ ಮೈನಡುಗಿಸುತ್ತಿತ್ತು. ರಾತ್ರಿಯ ಹೊತ್ತು ನಿದ್ದೆಯನ್ನು ಬಿಟ್ಟು ಹೊಲವನ್ನು ಕಾಯಬೇಕಾದ್ದರಿಂದ ಅವನ ಮನಸ್ಸು ಅನೇಕ ವಿಚಾರಗಳಲ್ಲಿ ದಂಗಾಗಿತ್ತು. ಒಮ್ಮೆ ತುಂಬಿದ ಚಂದ್ರಾಮನನ್ನು ನೋಡುತ್ತಿದ್ದ; ಒಮ್ಮೆ ದಿಗಂತವನ್ನೆಲ್ಲ ವ್ಯಾಪಿಸಿ, ತುಳುಕಿ ಹೊಲದ ಮೈದಡವುತ್ತಿದ್ದ ಬೆಳದಿಂಗಳನ್ನು ಸಾವಕಾಶವಾಗಿ ಪರೀಕ್ಷಿಸುತ್ತಿದ್ದ ನೆಲಕ್ಕೆ ನೆಲವೇ ಬೆಳುದಿಂಗಳ ಮಾಯೆಯಲ್ಲಿ ನಿದ್ದೆ ಹೋದಂತಿತ್ತು. ನಕ್ಷತ್ರಗಳೆಲ್ಲ ಬೆಳುದಿಂಗಳ ಕಡಲಿನಲ್ಲಿ ಮುಳುಗಿ ಹೋಗಿದ್ದವು." (ಗ್ರಾಮಾಯಣ ಪುಟ ೭೭) ಈಕಾದಂಬರಿಯು ಹೇಳುವುದು ಕಳೆದು ಹೋದುದನ್ನು. ಆದರೆ ಅದು ಕಳೆದು ಹೋಗಿದೆ ಆದರೆ ಅದು ಮತ್ತೆ ಮುಂದಿನ ಸೂಚನೆಯನ್ನು ನೀಡುತ್ತದೆ. ಇದನ್ನೇ ಮತ್ತೆ ಹೇಳಬಹುದಾದ ಸಂಗತಿಯೆಂದರೆ ಕಾದಂಬರಿಯು ನೀಡುವುದು ಮುಂದಿನ ಭವಿತ್ಯವದ ಸಂಗತಿಯನ್ನು. ಆದರೆ ಇದಕ್ಕೆ ವಿಶಿಷ್ಟವಾದ ಆಯಾಮವೂ ಇರುತ್ತದೆ. ಕಾದಂಬರಿಯು ಭಿನ್ನವಾದ ಸಂಕಥನವನ್ನು ಹೇಳುತ್ತದೆ. ಅದರ ಆಯಾಮವು ಭಿನ್ನವಾಗಿರುತ್ತದೆ. ಅದು ನಿರೂಪಣೆಗೆ ಸಂಬಂಧ ಪಟ್ಟಿದೆ. ಆದರೆ ಅದರದೇ ಆದ ವಿಶಿಷ್ಟವಾದ ಕಥನದ ಶೈಲಿಯೆಂದು ಹೇಳುತ್ತೇವೆ. ಆದರೆ ಇದನ್ನು ನಾವು ಭಾಷಿಕ ವಿಶಿಷ್ಟತೆ ಎಂದೂ ಹೇಳುತ್ತೇವೆ.

ಕಾದಂಬರಿಗಳು ದಿನ ನಿತ್ಯದ ವಿವರಣೆಯನ್ನು ಭಾಷೆಯಲ್ಲಿ ನಿರೂಪಿಸುತ್ತವೆ. ಅವುಗಳಿಗೆ ಅವುಗಳದೇ ನಿರೂಪಣೆಯ ಕ್ರಮವು ಇದೆ ಎಂದ ಮಾತ್ರಕ್ಕೆ ಅವುಗಳು ಮತ್ತೆ ಏನೋ ಆಗಿರುತ್ತವೆ ಎಂದು ಹೇಳಲು ಬರುವುದಿಲ್ಲ. ಅಂದರೆ ಅದು ಕಾವ್ಯ ಅಲ್ಲ. ಅದು ಆಕರ್ಶಕ ಪದಗಳ ಗುಚ್ಚವೂ ಅಲ್ಲ. ಆದರೆ ಕಾದಂಬರಿಯು ಯಾವುದೇ ರೀತಿಯ ಲಯದ ವಿನ್ಯಾಸಗಳನ್ನು ಹೊಂದಿಲ್ಲವೆನ್ನುವುದರಿಂದ ಅದನ್ನು ಸಾಹಿತ್ಯವೇ ಅಲ್ಲವೆಂದು ಹೇಳಲು ಬರುವುದೂ ಇಲ್ಲ. ಕಾದಂಬರಿಯು ಯಾವಾಗಲೂ ವರ್ತಮಾನದ ವಿಷಯಗಳಿಗೆ ಸಂಬಂಧ ಪಟ್ಟಕೊಂಡೇ ವಿವರಣೆಯನ್ನು ಹೇಳುತ್ತದೆ ಎಂದು ಭಾವಿಸಬೇಕಾಗಿಲ್ಲ. ಕಾದಂಬರಿಯೆನ್ನುವುದು ಮೂಲಭೂತವಾಗಿ ಅನೇಕ ವಿಷಯಗಳನ್ನು ವಿವರಿಸುತ್ತದೆ. ಆದರೆ ಅದನ್ನು ನಾವು ಹೀಗೂ ಹೇಳಬಹುದು – ಕಾದಂಬರಿಯು ತನ್ನ ಕಥನದ ಮಾದರಿಯಲ್ಲಿಯೇ ಚರಿತ್ರೆಗೆ ಸ್ಪಂದಿಸುತ್ತದೆ. ಆದ್ದರಿಂದ ಅದರ ಆಯಾಮಗಳು ಬೇರೆ. ಕತೆ ಮತ್ತು ಚರಿತ್ರೆಯ ಸಂಗತಿಗಳು ಜೊತೆಗೆ ಇರುತ್ತದೆ. ಅದು ಅದರ ಅಗತ್ಯವೂ ಆಗಿರುತ್ತದೆ. ವಾಸ್ತವವಾದವಂತೂ ಚರಿತ್ರೆಗೆ ಪ್ರತಿಕ್ರಿಯಿಸುವ ವಿಧಾನವು ಭಿನ್ನವಾಗಿದೆ. ಅದು ದಿನ ನಿತ್ಯದ ಸಂಗತಿಗಳನ್ನು ಹೇಳುತ್ತದೆ. ಕಾದಂಬರಿಯು ಹೇಳುವ ಅನೇಕ ಸಂಗತಿಗಳನ್ನು ಸಾಹಿತ್ಯದ ಪ್ರತ್ಯೇಕತೆ ಎಂದು ಹೇಳಲು ಬರುವುದೂ ಇಲ್ಲ. ಕಾದಂಬರಿಯ ನಿರೂಪಣೆಯ ಕ್ರಮ ಅಥವಾ ಅದರ ಶೈಲಿಯನ್ನು ನಾವು ಉದ್ದೇಶ ರಹಿತವೆಂದು ಹೇಳುವಂತೆ ಇಲ್ಲ. ಯಾವುದನ್ನು ನಾವು ಭಾಷಿಕ ಅಸ್ತಿತ್ವವೆಂದು ಹೇಳುತ್ತೇವೆಯೋ ಅದರ ಸ್ವರೂಪವು ಇರುವುದು ವಾಸ್ತವಕ್ಕೆ ಪ್ರತಿಕ್ರಿಯಿಸುವ ವಿಧಾನದಲ್ಲಿ. ಭಾಷೆ ಮತ್ತು ಶೈಲಿಯನ್ನು ಕಾದಂಬರಿಯ ಸಂದರ್ಭದಲ್ಲಿ ಬೇರೆಯಾಗಿ ನೋಡಬಹುದಾದರೂ ಅದು ಕೂಡಾ ತಾತ್ವಿಕತೆಯನ್ನು ಹೊರತುಪಡಿಸಿದ್ದು ಎಂದು ಭಾವಿಸಬೇಕಾಗಿಲ್ಲ. ಅದಕ್ಕೂ ಅದರ ಕಾರಣವು ಇದ್ದೇ ಇರುತ್ತದೆ. ಕಾದಂಬರಿಯ ಶೈಲಿಯು ಮೂಲಭೂತವಾಗಿ ಸಂಕಥನವನ್ನು ಸೂಚಿಸುತ್ತದೆ. ಆದರೆ ಈ ಸಂಕಥನವನ್ನು ನಾವು ತಾತ್ವಿಕತೆಯೊಂದಿಗಿನ ಮುಖಾಮುಖಿ ಎಂದು ಹೇಳಬೇಕಾಗುತ್ತದೆ.

ಲೇಖಕನು ನಿರೂಪಣೆಯಲ್ಲಿ ಭಾಗವಹಿಸುವ ಕ್ರಮವು ಬೇರೆ. ಆಂತರಿಕ ಕಾರಣಕ್ಕಾಗಿಯೇ ಕಾದಂಬರಿಯು ವಿಶಿಷ್ಟವೆಂದು ಅನಿಸುತ್ತದೆ. ಕಾದಂಬರಿಯ ಭಾಷೆಯನ್ನು ಲೇಖಕ ಉದ್ದೇಶದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕಾದಂಬರಿಯ ಭಾಷೆಯು ತನ್ನ ಅಗತ್ಯಕ್ಕೆ ಅನುಸಾರವಾಗಿ ರೂಪುಗೊಳ್ಳುತ್ತದೆ. ಮತ್ತು ಅದನ್ನು ನೋಡುವಾಗ ಭಾಷೆ ಮತ್ತು ಅದರ ಆಂತರಿಕ ತರ್ಕಗಳನ್ನು ಗಮನಿಸುವುದು ಅಗತ್ಯವೂ ಆಗಿದೆ. ಪಡದಯ್ಯ, ಬಾಪೂಸಾಹೇಬ, ಲಿಂಗಪ್ಪ, ಶೇಷಪ್ಪ ಈ ದುಷ್ಟ ಚತುಷ್ಟಯ ಸ್ವಾರ್ಥ ಸಾಧನೆಗಾಗಿ ಹೂಡುತ್ತಿದ್ದ ಪಿತೂರಿಗಳಿಂದ ಪಾದಳ್ಳಿಯ ಬದುಕು ನರಕ. ಸದೃಶವಾಗುತ್ತಿರುವುದಕ್ಕೆ ಕೋಪಗೊಂಡಿದೆಯೋ ಎನ್ನುವಂತೆ ಪ್ರಕೃತಿಯು ತನ್ನ ಕರಾಳ ರೂಪವನ್ನು ದರ್ಶನ ಮಾಡಿದ್ದರ ಪ್ರತೀಕದಂತೆ ಪ್ರಕೃತಿಯನ್ನು ಚಿತ್ರಿಸಲಾಗಿದೆ. ಇದು ಒಳ್ಳೆಯ ನಿದರ್ಶನ ಹೋಳಿ ಹುಣ್ಣಿಮೆಯ ದಿನ ಆಚರಿಸುವ ಕಾಮನ ಹಬ್ಬದ ವಿವರಣೆಯಾಗಿದೆ. "ಅನಾವೃಷ್ಟಿಯಿಂದುಂಟಾದ ಭೀಕರ ಪರಿಸ್ಥಿತಿ, ಕಾಲರಾ ದಾಳಿಯಿಟ್ಟ ಪರಿಣಾಮವಾಗಿ ಅನೇಕರು ಮರಣ ಹೊಂದಿದ್ದು ಈ ಕಾರಣದಿಂದ, ಪಾದಳ್ಳಿಯಲ್ಲಿ ಈ ಸಾರೆ

ಹೋಳಿ ಹುಣ್ಣಿಮೆಯ ಉತ್ಸಾಹವಲ್ಲ ಆಡಗಿಹೋಗಿತ್ತು. ಯಾರೂ ಲಭ್ಯವೀಯದ ಬಡ ಅತಿಥಿಯಂತೆ ಕಾಮನ ಹಬ್ಬ ಬಂದರೂ ಅದನ್ನು ಕೇಳುವವರಿರಲಿಲ್ಲ" (ಪುಟ ೧೨).

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ನಮಗೆ ಭಾಷೆಯನ್ನು ನೋಡುವುದು ಅಂದರೆ ಅದು ರಾಚನಿಕವಾದ ವಿಧಾನವು ಅಲ್ಲ ಎನ್ನುವುದು ಬಂತು. ಭಾಷೆ ಮತ್ತು ಅದರ ರಾಚನಿಕ ಸ್ವರೂಪವನ್ನು ಅನೇಕರು ತಿರಸ್ಕರಿಸಿದರು. ಭಾಷೆಯೆಂದರೆ ನಾವು ಅದರ ಸಂವಾದಿತನವನ್ನು ಮಾತ್ರವೇ ನೋಡುವುದು ಎಂದು ಅನೇಕರು ಭಾವಿಸಿದರು. ಅಷ್ಟೇ ಅಲ್ಲ ಭಾಷೆ ಎಂದರೆ ಅದು ನೇರವಾಗಿ ಸ್ವತಂತ್ರವಾದ ಒಂದು ಅಸ್ತಿತ್ವವನ್ನು ಹೊಂದಿರುತ್ತದೆ ಎಂದು ಅದಕ್ಕೂ ಒಂದು ಭಿನ್ನವಾದ ರೂಪವು ಇದೆ ಎಂದು ಅನೇಕರು ಹೇಳಿದರು. ಭಾಷೆ ಮತ್ತು ಅದರ ಚರ್ಚೆಯು ಬೇರೆ ಬೇರೆ ಕಡೆಗೆ ಹೋಗಿದ್ದು ಕೂಡಾ ಅಷ್ಟೇ ಸತ್ಯ. ಭಾಷೆ ಮತ್ತು ಅದರ ಚರ್ಚೆಯನ್ನು ಲಿಂಗತಾರತಮ್ಯಕ್ಕೆ ಅನುಸಾರವಾಗಿಯೂ ಮಾಡಲಾಯಿತು. ಭಾಷೆ ಎಂದರೆ ಅದರ ಮತ್ತೊಂದು ಮುಖವೇ ಆರ್ಥಿಕವಾದ ಬದಲಾವಣೆ. ಭಾಷೆ ಮತ್ತು ಅದರ ಅಧ್ಯಯನ ಕ್ರಮಗಳು ಬೇರೆಯಾದವು. ಇದರ ಪರಿಣಾಮವು ಬೇರೆ ಬೇರೆ ಥರದಲ್ಲಿ ಆಯಿತು ಎನ್ನುವುದೂ ಅಷ್ಟೇ ನಿಜ. ಭಾಷೆ ಮತ್ತು ಅದರ ಸ್ವರೂಪವನ್ನು ಸಾಹಿತ್ಯದ ಹಿನ್ನೆಲೆಯಲ್ಲಿ ಕೆಲಸಮಾಡುವ ವಿಧಾನವು ಉಂಟಾಯಿತು. ಭಾಷೆ ಮತ್ತು ಅದರ ಪ್ರಯೋಗಗಳು ಸಾಹಿತ್ಯದಲ್ಲಿ ಹೇಗೆ ಇರುತ್ತದೆ ಎನ್ನುವುದು ಚರ್ಚೆಗೆ ಗುರಿಯೂ ಆಯಿತು. ಸಾಹಿತ್ಯಕ್ಕೆ ಒಂದು ಪ್ರತ್ಯೇಕವಾದ ಭಾಷೆಯು ಇದೆ. ಅದು ರೂಪಕದಲ್ಲಿ ಇದೆ. ಇದರ ಜೊತೆಗೆ ಸಾಹಿತ್ಯದಲ್ಲಿ ಬಳಕೆಯಾಗುವ ರೂಪಕವು ಹೇಗೆಲ್ಲಾ ಕೆಲಸವನ್ನು ಮಾಡುತ್ತದೆ, ಅದಕ್ಕೂ ಸಾಹಿತ್ಯದ ವಸ್ತುವಿಗೂ ಇರುವ ಸಂಬಂಧವು ಯಾವ ಬಗೆಯದು, ಭಾಷೆ ಮತ್ತು ಅದರ ರಚನೆಗೂ ಸಂಕೇತಕ್ಕೂ ಇರುವ ಸಂಬಂಧವು ಹೇಗೆ ಇರುತ್ತದೆ, ರೂಪಕ ಮತ್ತು ಅದರ ಅರ್ಥವಾದ ಪ್ರಶ್ನೆ, ಅಭಿವ್ಯಕ್ತಿ ಮತ್ತು ಅದರ ಭಾಷೆ ಸಂಬಂಧಗಳು ಚರ್ಚೆಗೆ ಗುರಿಯಾಯಿತು.

ಗ್ರೇಮಾಸ್ ಭಾಷೆಗೆ, ಅದರ ವಸ್ತುವಿಗೆ ಹಾಗೂ ಸಂಕೇತಕ್ಕೆ ಮತ್ತು ಅರ್ಥಕ್ಕೆ ಯಾವ ಸಂಬಂಧವಿದೆ ಎಂದು ವಿವರಿಸುತ್ತಾನೆ. ಅವನ ವಾದವು ಮುಖ್ಯವಾಗಿದೆ. ಅವನು ಅರ್ಥ ಮತ್ತು ಅದರ ಪರಿಣಾಮಗಳನ್ನು ಹೇಳುತ್ತಾನೆ. ನಮ್ಮ ಮನಸ್ಸು ಮತ್ತು ಅಭಿವ್ಯಕ್ತಿಗೆ ಹೇಗೆ ಸಂಬಂಧವು ಇದೆ ಮತ್ತು ಅದರ ಹಿಂದೆ ಇರುವ ಭಾವನೆಯು ಏನು ಎನ್ನುವುದು ಅವನಲ್ಲಿ ಮುಖ್ಯ. ಲೇಖಕನು ಒಂದು ಸಂಕೇತದ ಮೂಲಕ ನಮಗೆ ಒಂದು ಸೂಚನೆಯು ಕೊಡುವುದು ಸತ್ಯ. ರಷ್ಯಾದ ರೂಪನಿಷ್ಠರು ಇದನ್ನು ವಿವರಿಸಿದರು. ೧೯೨೯ರ ತರುವಾಯ ಭಾಷೆಯ ಚರ್ಚೆಯು ಬೇರೆಯಾಯಿತು. ರಾಚನಿಕ ವಿಧಾನವನ್ನು ಹೇಗೆಲ್ಲಾ ಅನ್ವಯವನ್ನು ಮಾಡಬಹುದು ಎನ್ನುವುದಕ್ಕೆ ನಮಗೆ ಲೆವಿಸ್ಟ್ರಾಸ್ ಬರಹವೂ ನಮಗೆ ಸಾಕ್ಷಿಯು ಆಗಿದೆ. ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದಲ್ಲಿ ಇದು ಹೇಗೆ ವಿವರಣೆಗೆ ಸಿಕ್ಕಿತು ಎನ್ನುವುದೂ ಒಂದು ಪ್ರಶ್ನೆಯು ಆಯಿತು. ರಾಚನಿಕವಾದ ಎನ್ನುವುದು ಜಗತ್ತನ್ನು ಅರ್ಥಮಾಡಿಕೊಳ್ಳಲು ಬೇಕಾದ ಚಳುವಳಿಯೂ ಆಯಿತು. ಸಸೂರನ ಭಾಷಾವಿಜ್ಞಾನವು ಕಾಲ ಮತ್ತು ರಚನೆಯನ್ನು ಹೇಳುತ್ತದೆ. ಆದ್ದರಿಂದ ಇದು

ನಮಗೆ ಚರಿತ್ರೆ ಮತ್ತು ಆಲೋಚನೆಗಳು ಹೇಗೆ ಕೆಲಸವನ್ನು ಮಾಡುತ್ತದೆ ಎನ್ನುವುದನ್ನು ಹೇಳುತ್ತದೆ. ಆದರೆ ಇಲ್ಲಿ ಒಂದು ಮಾತನ್ನು ಹೇಳಬೇಕು: ರಚನಾವಾದವನ್ನು ಅನೇಕರು ಒಪ್ಪುವುದಿಲ್ಲ. ನಮ್ಮ ಆಲೋಚನೆ ಮತ್ತು ಅದರ ಚರಿತ್ರೆಯನ್ನು ಅರ್ಥಮಾಡಿಕೊಳ್ಳಲು ನಮಗೆ ರಾಚನಿಕ ವಿಧಾನವೂ ಅತ್ಯಂತ ಮುಖ್ಯವಾದ ಪರಿಕರವೂ ಆಗಿದೆ ಎನ್ನುವುದನ್ನು ಮರೆಯಬಾರದು. ಹಾಗೆ ನೋಡಿದರೆ ನಾವು ಈವತ್ತು ಯಾವುದೇ ಕೃತಿಯನ್ನು ಓದುವಾಗಲೂ ಅದನ್ನು ಒಂದು ಪಠ್ಯವಾಗಿ ಮಾತ್ರವೇ ನೋಡುತ್ತೇವೆ. ಪಠ್ಯಗಳು ಮತ್ತು ಅವುಗಳ ಹಿಂದೆ ಇರುವ ರಾಜಕಾರಣವನ್ನು ಅನೇಕ ಸಂದರ್ಭದಲ್ಲಿ ಗ್ರಹಿಸಲು ಹೋಗುವುದಿಲ್ಲ. ವಾಸ್ತವವಾಗಿ ಈವತ್ತು ನಮಗೆ ಕಾಂಟ್ ಮತ್ತು ಅವನ ತತ್ವಜ್ಞಾನದ ರೂಪಗಳು ಕೆಲವು ಕಾರಣದಿಂದ ಅತ್ಯಂತ ಮುಖ್ಯವಾಗಿದೆ. ಅವನಲ್ಲಿ ಕಾಲ ಮತ್ತು ಅವಕಾಶಗಳ ಕಲ್ಪನೆಯು ಇದೆ. ಅದನ್ನು ವಿವರಿಸುವಾಗ ಸ್ಥಳವನ್ನು ಹೇಳುತ್ತಾನೆ. ಅದರ ಜತೆಗೆ ಅವನು ಸ್ವಾತಂತ್ರ್ಯ ಮತ್ತು ಅದರ ಕಲ್ಪನೆಯನ್ನು ಮಂಡಿಸಿದ್ದಾನೆ. ಅದರಲ್ಲಿ ವಾಸ್ತವವಾದವೂ ಅತ್ಯಂತ ಮುಖ್ಯವಾಗಿದೆ. ಕಾಲ ಮತ್ತು ಅವಕಾಶ ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾದದ್ದು. ಆದರೆ ಅವಕಾಶವು ಬದಲಾಗುತ್ತದೆ. ಅದರ ಜೊತೆಗೆ ಕಾಲವು ಪಲ್ಲಟವಾಗುತ್ತದೆ. ಆದರೆ ಪಲ್ಲಟವೆನ್ನುವುದು ನಿರ್ದಿಷ್ಟವಾದ ಕಾರಣದಿಂದ ವ್ಯತ್ಯಾಸವಾಗುತ್ತದೆ. ಅದನ್ನು ನಾವು ಅತ್ಯಂತ ದೊಡ್ಡದಾದ ಅದರ್ಶ ಎನ್ನುವ ಅರ್ಥದಲ್ಲಿ ತೆಗೆದುಕೊಳ್ಳಬೇಕಾಗಿಯೂ ಇಲ್ಲ. ವೈಚಾರಿಕವಾಗಿ ಹೇಳುವುದಿದ್ದರೆ ನಮಗೆ ಈವತ್ತು ಕಾಲವು ವಾಸ್ತವದ ಒಂದು ಭಾಗವೂ ಆಗಿದೆ. ಕಾಲ ಎನ್ನುವುದು ಒಂದು ಭ್ರಾಂತಿ ಎಂದು ಭಾವಿಸಬೇಕಾದ ಅಗತ್ಯವು ಇಲ್ಲ. ನಮ್ಮ ಅನುಭವಕ್ಕೂ ಕಾಲಕ್ಕೂ ಒಂದು ಸಂಬಂಧವು ಇದೆ. ಅದನ್ನು ಈ ಆಗು ಬವಿಕೆಯಲ್ಲಿ ನಾವು ಗುರುತಿಸಬೇಕಾಗುತ್ತದೆ. ಒಂದು ಹಂತದಲ್ಲಿ ನಾವು ಹೀಗೆ ಹೇಳುತ್ತೇವೆ: ನಮಗೆ ಇದನ್ನು ಈಗ ಮಾಡಲು ಆಗುವುದಿಲ್ಲ. ಮತ್ತೆ ಕೆಲವೊಮ್ಮೆ ನಮಗೆ ಈ ಸಂದರ್ಭವು ಅತ್ಯಂತ ಉಪಯುಕ್ತವಾಗಿದೆ. ಎರಡೂ ನಮಗೆ ಇರುವ

ಕಾಲ ಮತ್ತು ಅವಕಾಶವನ್ನು ಹೇಳುತ್ತದೆ. ಆಗುವುದಿಲ್ಲ ಮತ್ತು ಆಗುತ್ತದೆ ಎನ್ನುವುದನ್ನು ನಾವು ಹೇಳುವಾಗ ನಮ್ಮ ಪರಿಸ್ಥಿತಿ ಮತ್ತು ನಮ್ಮ ಅಗತ್ಯಗಳೂ ಅತ್ಯಂತ ಮುಖ್ಯವಾಗುತ್ತದೆ. ಎಷ್ಟೋ ಸರ್ತಿ ನಮ್ಮ ಕಾರಣ ಎನ್ನುವುದು ತುಂಬಾ ನಿಗೂಢವೂ ಆಗಿರುತ್ತದೆ. ಮಾಡಬೇಕಾದ ಕೆಲಸ ಮತ್ತು ಅದರ ಕಾರಣಗಳು ಒಂದು ಥರ ಇರುತ್ತದೆ. ಅದನ್ನು ನಿಗೂಢವೆಂದೂ ಹೇಳಬಹುದು. ಆದರೆ ಕೆಲವೊಮ್ಮೆ ನಾವು ಯಾವುದನ್ನು ಮಾಡಬೇಕಾಗಿದೆಯೋ ಅದು ಆಗದ ಹಾಗೆ ನಮ್ಮ ನೀತಿಶಾಸ್ತ್ರವು ತಡೆಯುತ್ತದೆ. ಮತ್ತೆ ಕೆಲವೊಮ್ಮೆ ನಾವು ಯಾವುದನ್ನು ಮಾಡಬೇಕಾಗಿದೆಯೋ ಅದರ ರೂಪವನ್ನು ಕಾರ್ಯವೇ ನಿರ್ಧರಿಸುತ್ತದೆ. ಕಾರಣಗಳು ಹಾಗೂ ಕಾರ್ಯಗಳು ಜೊತೆಗೆ ಸಾಗುತ್ತವೆ. ಅದರ ಜತೆಗೆ ನಾವು ಯಾವ ಕಾರ್ಯವನ್ನು ಮಾಡುತ್ತೇವೆಯೋ ಅದರ ಪರಿಣಾಮವು ನಮಗೆ ತಿಳಿಯುತ್ತದೆ.. ಕಿರ್ಕೆಗಾರ್ಡ್ ಒಂದು ವಿಚಾರವನ್ನು ಹೇಳುತ್ತಾನೆ. ಅವನಲ್ಲಿ ಸ್ವಾತಂತ್ರ್ಯ ಅಸ್ತಿತ್ವಕ್ಕೆ ಒಂದು ಸಂಬಂಧವು ಇದ್ದೇ ಇರುತ್ತದೆ. ನಮ್ಮ ಅಸ್ತಿತ್ವಕ್ಕೆ ಒಂದು ಸ್ವಾತಂತ್ರ್ಯ ಎನ್ನುವುದು ಇದ್ದರೆ ನಾವು ಅದರ ಜವಾಬ್ದಾರಿಯನ್ನು ಕೂಡಾ ಹೊರಬೇಕಾಗುತ್ತದೆ.

ಆದರೆ ಸ್ವಾತಂತ್ರ್ಯ ಎನ್ನುವುದು ಒಂದು ಅತ್ಯಂತ ಅಮೂರ್ತವಾದ ಸಂಗತಿಯು ಅಲ್ಲವೆನ್ನುವುದೂ ಇಲ್ಲಿ ಉಲ್ಲೇಖನೀಯ.

"ಅಂದು ಮಳೆಗೆ ಏನು ಕಸುವು ಬಂದಿತ್ತೋ ಏನೋ ಒಂದೇ ಗತಿಯಲ್ಲಿ ಎರಗಿತು. ಬಿರುಗಾಳಿ ಮನಸ್ಸಿಗೆ ಬಂದತ್ತ ಬೀಸುತ್ತ ನೆಲ – ಬಾನುಗಳಲ್ಲಿ ಕೋಲಾಹಲವನ್ನುಂಟು ಮಾಡುತ್ತಿತ್ತು. ಅದನ್ನು ಪ್ರತಿಭಟಿಸುವಂತೆ ಜೋರಾಗಿ ಮಳೆ ಹೆಚ್ಚಿ ಹೊಡೆಯುತ್ತಿತ್ತು. ಭೂತಾಕಾರದ ರಾಕ್ಷಸನೋರ್ವನ ರಣಗರ್ಜನೆಯಂತೆ ಗುಡುಗುತ್ತಿತ್ತು. ಗಾಳಿಯ ಕಣ್ಣು ತಪ್ಪಿಸಬೇಕೆನ್ನುವಂತೆ ಅದ್ಭುತವಾಗಿ ಮಿಂಚು ಬೆಳಗುತ್ತಿತ್ತು. ದಿಕ್ಕುಗಳೆಲ್ಲ ಕತ್ತಲೆಯಲ್ಲಿ ಕರಗಿಹೋಗಿದ್ದವು. ಮಳೆ ನಡುಹರೆಯದ ಉಕ್ಕಿನಲ್ಲಿದ್ದಾಗ ನೆಲ–ಮುಗಿಲುಗಳ ನಡುವಿನ ಅಂತರವೆಲ್ಲ ಅಳಿಸಿ ಹೋಗಿ ಅಂತರಿಕ್ಷವೆಲ್ಲ ಜಲಮಯವಾಯಿತು." ಉತ್ತರ ಕರ್ನಾಟಕದ ಬಯಲು ಭಾಗದಲ್ಲಿಯೂ ಪ್ರದೇಶದಲ್ಲಿ ಭೀಕರವಾಗಿ ಸುರಿಯುವ ಮಳೆಯ ಚಿತ್ರಣವನ್ನು ಇಲ್ಲಿ ಕಾಣುತ್ತೇವೆ. ಕಾದಂಬರಿಯ ಕೊನೆಯ ಧಾರಾಕಾರ ಮಳೆಯಿಂದ ಕೃಷ್ಣಾನದಿ ಉಕ್ಕಿಹರಿದು ಪ್ರವಾಹದಿಂದ ಇಡೀ ಪಾದಳ್ಳಿಯನ್ನೆ ನಾಶ ಮಾಡುವುದನ್ನು ಕಾಣುತ್ತೇವೆ. ಲೇಖಕರು ಇದನ್ನು ದಾದಾನ ಕಲ್ಪನೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. "ಊರಮಗ್ಗಲಿಗೇ ಹಗಲು – ರಾತ್ರಿ ಬೇಸರವಿಲ್ಲದೆ ಹರಿಯುತ, ಅಲ್ಲಿಯ ಹೊಲಗಳಿಗೆಲ್ಲ ಮೊಲೆ ಹಾಲನ್ನು ಉಣ್ಣಿಸಿ ತಾಯಿಯಾಗಿದ್ದ ಈ ನದಿಗೂ ಒಮ್ಮೊಮ್ಮೆ ಹುಚ್ಚು ತಲೆಗೇರುತ್ತದೆ. ಚಂಡಿಯಾಗಿ ಕಂಡದ್ದನೆಲ್ಲ ನುಂಗಬೇಕೆಂದು ಹಾತೊರೆಯುತ್ತದೆ ಹೊಳೆ, ಅದರ ಪ್ರಚಂಡ ರೋಷದೆದುರು ಮನುಷ್ಯನ ಬದುಕು ತರಗೆಲೆಯಷ್ಟು ಕ್ಷುದ್ರವಾಗಿ ಕಾಣುತ್ತದೆ. ಬೆಂಚಿಯ ಮುಂದಿನ ದಿನ್ನೆಯು ನದಿಯ ಸೆಳವಿಗೆ ಸಿಕ್ಕು ಮಣ್ಣು ತರಿದು ಹೋಗಿ ಗಟ್ಟಿಯಾದ ಬಿರುಸಾದ ನೆಲವಷ್ಟೇ ಉಳಿದಿತ್ತು. ರಕ್ತ ಮಾಂಸಗಳೆಲ್ಲ ಒಣಗಿ ಹೋಗಿ ಅಸ್ಥಿಪಂಜರವಷ್ಟೇ ಉಳಿದಂತಾಗಿತ್ತು. ಅದನ್ನು ನೋಡಿ ದಾದಾ ಮರುಗಿದ. ಪಾದಳ್ಳಿಯ ರೈತರಿಗೆ ಬಿತ್ತಿಕೊಳ್ಳಲು ಮಣ್ಣನ್ನು ಕೂಡ ನದಿ ಉಳಿಸಿರಲಿಲ್ಲ. ಒಕ್ಕಲಿಗನ ಬಾಯಿಗೆ ಮಣ್ಣು ಬಿದ್ದಂತಾಗಿತ್ತು. ನದಿಯ ಸುತ್ತಮುತ್ತಲಿನ ಭೂಮಿಯೆಲ್ಲ ಬಂಜೆಯಾಗಿತ್ತು." (೨೬೭) ಇಂತಹ ಸರ್ವನಾಶಿಯಾದ ಪ್ರವಾಹದಲ್ಲಿ ಬಾಳಾಚಾರರು ಸಿಕ್ಕಿ ಜಲಸಮಾಧಿಯಾಗಿದ್ದು, ಇಡೀ ಊರನ್ನೇ ನುಂಗಿ ನೊಣೆಯುವಂತೆ ಪಾದಳ್ಳಿಯ ದುರಂತವನ್ನು ತೀವ್ರಗೊಳಿಸಲು ಸಹಕಾರಿಯಂತೆ ಪ್ಲೇಗು ಬಂದದ್ದು ಭೀಕರವಾಗಿ ಚಿತ್ರಿತವಾಗಿದೆ. ಪಾದಳ್ಳಿಯ ಜನರು ಸತ್ಯಹೀನರಾಗಿ ಮಾಡಿದ ಪಾಪಕಾರ್ಯಗಳಿಗೆ ಕ್ಷಮೆಯೇ ಇಲ್ಲವೆನ್ನುವಂತೆ ಪ್ರಕೃತಿ, ಪ್ರವಾಹ ಮತ್ತು ಪ್ಲೇಗಿನ ಮೂಲಕ ಧ್ವಂಸ ಮಾಡಿದ್ದರ ಸೂಚನೆ ಅರ್ಥಪೂರ್ಣವಾಗಿದೆ. ಇಡೀ ಪಾದಳಿಗೆ ಬಡಿದಿದ್ದ ಮಹಾರೋಗವನ್ನು ಗುಣಪಡಿಸುವ ಚಿಕಿತ್ಸಕ ಆ ಊರಲ್ಲಿ ಯಾರೂ ಇರಲಿಲ್ಲ ಎಂಬುದನ್ನು ಕಾದಂಬರಿಕಾರರು ವಾಲೀಕಾರ ಮಲ್ಲನ ಮಾತಿನ ಮೂಲಕ ಸೂಚಿಸುತ್ತಾರೆ. "ಮೂರು ದಿನಗಳಲ್ಲಿ ಊರು ಬರಿದಾಯಿತು. ಅರ್ಧ ಪಿಡುಗು ನುಂಗಿತ್ತು; ಕೆಲಭಾಗವನ್ನು ಪಾದಳ್ಳಿಯನ್ನು ಕಾಯುತ್ತ ಬಂದಿದ್ದ ನದಿ ಚಂಡಿಯಾಗಿ ನುಂಗಿತ್ತು. ಬೆಂಕಿ ಕೆಲವರನ್ನು ಆಹುತಿಗೊಂಡಿತ್ತು. ಯಾರಾರೋ ಹೇಗೆ ಹೇಗೋ ತಮ್ಮ ತಮ್ಮ ಕೊನೆಯನ್ನು ಕಂಡಿದ್ದರು. ಆದರೆ ವಾಲೀಕಾರ

ಮಲ್ಲನಿಗೆ ಇದಾವುದರಲ್ಲಿಯೂ ನಂಬಿಕೆ ಇರಲಿಲ್ಲ. ಚೇ ತಗೀರಿ ಪಿಡುಗು ಏನು ಮಾಡೀತು? ಹಿಂದಕ ಕಾಲರಾ ಬಂದಿದ್ದಿಲ್ಲೇನು? ಕರೇ ಹೇಳತೀನಿ ತಂದೆ, ಏಟ ಪಾಪಾ ಮಾಡಿದರ ಭೂಮಿ ತಾಯಿ ತಡಕೊಂಡಾಳಿ? ಆ ಪಾಪಾನ ನುಂಗಿತೋ ಯಪ್ಪಾ!" ಎಂದು ಹವಾಲ್ದಾರನಿಗೆ ಹೇಳಿದ್ದನ್ನೆ ಹೇಳುತ್ತಿದ್ದ. ಇದನ್ನು ಎಸ್.ಕೋದಂಡರಾಮರವರು ಹೀಗೆ ಗುರುತಿಸುತ್ತಾರೆ. "ಮಾನವೇತರ ಪ್ರಮೇಯಗಳು ಮಳೆ ಮತ್ತು ಸಾಂಕ್ರಾಮಿಕ ರೋಗಗಳಲ್ಲಿ ಇಡೀ ಪಾದಳ್ಳಿಯ ಅಸ್ತಿತ್ವವನ್ನು ಗುಡಿಸಿ ಗುಂಡಾಂತರ ಮಾಡಿಬಿಡುತ್ತವೆ. ಮತ್ತೆ ಚೇತರಿಸಿಕೊಳ್ಳಲಾರದ ಸ್ಥಿತಿಯಲ್ಲಿ ಪಾದಳ್ಳಿ ದುರಂತಕ್ಕೊಳಗಾಗಿದೆ." (ಪುಟ ೫೭೩)

ಬಾಳಾಚಾರ್ಯ ಮತ್ತು ಪಡದಯ್ಯ ಚಿಮಣಾ, ದಾದಾ ಇವರ ವ್ಯಕ್ತಿತ್ವವನ್ನು ನೋಡಿದರೆ ನಮಗೆ ಮೇಳಿನ ಮಾತು ಸ್ಪಷ್ಟವಾಗುತ್ತದೆ. ವಸಾಹತು ಆಡಳಿತವು ಕೇವಲ ಒಂದು ಸೈನ್ಯದ ಪ್ರಶ್ನೆಯು ಅಲ್ಲ. ಅದು ಸಾಂಸ್ಕೃತಿಕ ಪರಿಕರವನ್ನು ಬಳಸಿಕೊಂಡಿದೆ. ಆದರೆ ಆಗ ಜಗತ್ತು ಬಂಡವಾಳವಾದವನ್ನು ಮಾತಾಡುತ್ತಿತ್ತು. ವಿಶ್ವಾತ್ಮಕತೆಯ ಪ್ರಶ್ನೆಯು ಅತ್ಯಂತ ಮುಖ್ಯವಾದದ್ದು. ಅದು ಯಜಮಾನಿಕೆಯ ಪ್ರಶ್ನೆಯನ್ನು ಒಳಗೊಂಡಿದೆ. ಅದು ನಿರ್ದಿಷ್ಟವೂ ಹೌದು. ಅದಕ್ಕೆ ನಿರ್ದಿಷ್ಟವಾದ ಅನನ್ಯತೆಯು ಇದೆ. ಆಧುನಿಕ ಅನನ್ಯತೆಯನ್ನು ನೋಡಿದರೆ ಇದು ಹೆಚ್ಚು ಸ್ಪಷ್ಟವಾಗುತ್ತದೆ. ಸ್ಥಳೀಯತೆ ಮತ್ತು ಆಧುನಿಕ ಮಾರುಕಟ್ಟೆಗಳು ನಮ್ಮನ್ನು ಒಂದು ರೀತಿಯಲ್ಲಿ ರೂಪಿಸುತ್ತವೆ. ವಿಶ್ವಾತ್ಮಕತೆ ವಿಶಿಷ್ಟತೆಯು ಇದೆ. ಆಳುವ ವರ್ಗವೂ ತನ್ನದೇ ಆದ ವಿಶ್ವಾತ್ಮಕತೆಯನ್ನು ಹೇಳುತ್ತದೆ. ಬಂಡವಾಳವಾದವು ಲೋಕವನ್ನು ಒಂದು ಮಾಡಲು ನೋಡುತ್ತದೆ. ಆಳಿಸಿಕೊಳ್ಳುವ ವರ್ಗವೂ ತನ್ನದೇ ಆದ ವಿಶ್ವಾತ್ಮಕತೆಯನ್ನು ಹೇಳುತ್ತದೆ. ಅನೇಕ ಸಮಾಜದ ಅನನ್ಯತೆಗಳು ನಿರ್ದಿಷ್ಟವಾದ ರಾಚನಿಕ ಅರ್ಥವನ್ನು ಹೊಂದಿರುತ್ತವೆ. ಸಮಾಜ ಮತ್ತು ಅದರ ಅನನ್ಯತೆಯನ್ನು ಈ ದೃಷ್ಟಿಯಿಂದ ಬೇರೆ ಮಾಡುವಂತೆ ಇಲ್ಲ. ಅದು ನಿರ್ದಿಷ್ಟವಾದ ಅನನ್ಯತೆಗೂ ವಿಶ್ವಾತ್ಮಕತೆಗೂ ಈ ದೃಷ್ಟಿಯಿಂದ ಸಂಬಂಧವಿದೆ. ಇವುಗಳ ನಡುವಣ ಸಂಬಂಧವನ್ನು ದ್ವಂದ್ವಾತ್ಮಕ ಎಂದು ಕರೆಯಬಹುದು. ಸ್ಥಳೀಯ ಅರ್ಥ ಮತ್ತು ವಿಶ್ವಾತ್ಮಕವಾದ ಅರ್ಥವು ಬೇರೆಯಾಗುವುದು ಅದರ ಪ್ರಾತಿನಿಧಿಕವಾದ ಅಂಶಗಳಿಂದ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಜಾಗತಿಕ ವಿದ್ಯಮಾನವು ಸ್ಥಳೀಯತೆಯ ಮೇಲೆ ಪ್ರಭಾವವನ್ನು ಬೀರಬಲ್ಲುದು. ಅನೇಕ ಸಂದರ್ಭದಲ್ಲಿ ಅನೇಕ ಸ್ಥಳೀಯತೆಗಳು ಸೇರಿಕೊಂಡು ವಿಶ್ವಾತ್ಮಕತೆಯು ಆಗುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಸಮಾಜ ಹಾಗೂ ಅವನ ಗ್ರಹಿಕೆಗಳು ಬದಲಾಗುತ್ತಾ ಹೋದಂತೆ ಅವನ ಅಸ್ತಿತ್ವ ಮತ್ತು ಅವನ ಅನನ್ಯತೆಗಳು ಬೇರೆಯಾಗುತ್ತವೆ. ಹಾಗೆ ನೋಡುವುದಿದ್ದರೆ ವಿಶ್ವಾತ್ಮಕತೆ ಎನ್ನುವುದು ಖಾಲಿಯಾದದ್ದು. ಅದಕ್ಕೆ ಪೂರ್ವ ನಿರ್ಧರಿತವಾದ ಸಂಗತಿಗಳು ಇಲ್ಲ. ರಾಜಕಾರಣ ಮತ್ತು ಸಮಾಜವು ಖಾಲಿಯಾದ ವಿಶ್ವಾತ್ಮಕತೆಯನ್ನು ಭರ್ತಿ ಮಾಡುತ್ತವೆ.

ವಿಶ್ವಾತ್ಮಕ ದೃಷ್ಟಿಕೋನ ಎನ್ನುವುದು ಒಂದು ಅರ್ಥದಲ್ಲಿ ಸೀಮೆಯನ್ನು ದಾಟುತ್ತದೆ. ಮತ್ತು ರಾಜಕಾರಣವು ಅದನ್ನು ಬಾಗಿಸಲಾರದು. ರಾಜಕಾರಣ ಮತ್ತು ಸ್ಥಳೀಯತೆಗಳು ಬೇರೆ ಬೇರೆ ಅವಕಾಶಗಳು ಭರ್ತಿ ಮಾಡಲು ಯತ್ನವನ್ನು ಮಾಡುತ್ತವೆ. ವಾಸ್ತವವಾಗಿ ರಾಜಕಾರಣವು

ಅನೇಕವನ್ನು ಬದಲಿಸಲು ಯತ್ನವನ್ನು ಮಾಡುತ್ತವೆ. ವಿಶ್ವಾತ್ಮಕತೆಯಲ್ಲಿ ಯಾವುದನ್ನೂ ನಾವು ಭರ್ತಿ ಮಾಡಲು ಸಾಧ್ಯ. ಅಂದರೆ ಅದು ಕೆಲವು ವಿಷಯಗಳಲ್ಲಿ ಖಾಲಿಯಾಗಿಯೇ ಇರುತ್ತದೆ. ವಿಶ್ವಾತ್ಮಕತೆ ಎನ್ನುವುದು ಈಗಾಗಲೇ ವ್ಯಾಖ್ಯಾನಗೊಂಡ ಒಂದು ಸಂಗತಿಯು ಅಲ್ಲ ಮತ್ತು ಸಾರ ರೂಪದಲ್ಲಿ ಇರುವುದೂ ಇಲ್ಲ. ಅದು ಬದಲಾಗುತ್ತದೆ. ಈಗಾಗಲೇ ವ್ಯಾಖ್ಯಾನಕ್ಕೆ ಗುರಿಯಾದ ಸಂಗತಿಗಳು ಮಾತ್ರವೇ ಇದೆ ಎಂದು ತಿಳಿಯಬಾರದು. ಒಂದು ವಿಶಿಷ್ಟವಾದ ಸಂಗತಿಯ ಮೂಲಕವೇ ನಾವು ಅದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಗಂಡು ಮತ್ತು ಹೆಣ್ಣು ಎನ್ನುವುದು ಲೋಕದಲ್ಲಿ ಇದೆ. ಅದನ್ನು ಒಂದು ಪ್ರದೇಶದಲ್ಲಿ ಒಂದು ಮತ್ತೊಂದು ಪ್ರದೇಶದಲ್ಲಿ ಮತ್ತೊಂದು ಎಂದು ಹೇಳುವಂತೆ ಇಲ್ಲ. ರಾಚನಿಕ ಭಿನ್ನತೆಗಳು ಇವೆ. ಅದರೆ ಅದರ ಹಿಂದೆ ಇರುವ ರಾಜಕಾರಣಗಳು ಮಾತ್ರವೇ ಬೇರೆಯಾಗುತ್ತಾ ಹೋಗುತ್ತವೆ. ಆದ್ದರಿಂದ ಗಂಡು ಮತ್ತು ಹೆಣ್ಣು ಎಂದು ಹೇಳುವಾಗ ಅದರ ಹಿಂದೆ ಯಾವ ರಾಜಕೀಯವು ಇದೆ ಎಂದೂ ನೋಡಬೇಕಾಗುತ್ತದೆ. ರಾಜಕೀಯ ಸನ್ನಿವೇಶಗಳೇ ಇಲ್ಲಿ ಮುಖ್ಯವಾಗುತ್ತದೆ. ಮನುಷ್ಯ ಹಸಿವೆಯಲ್ಲಿ ನರಳುವುದು, ಅಕಾಲಿಕವಾದ ಬರಗಾಲ. ಬೆಲೆಗಳ ಆವರ್ತನ ಪ್ರಕ್ರಿಯೆಗಳು ನಡೆಯುತ್ತವೆ. ಇದು ಜಗತ್ತಿನಲ್ಲಿ ಕಾಣಿಸುತ್ತದೆ. ಇವುಗಳು ಚರಿತ್ರೆಯಲ್ಲಿ ದಾಖಲೆಯಾಗುವುದೇ ಇಲ್ಲ. ಆದರೆ ಮನುಷ್ಯನು ಹುಟ್ಟುವುದು ಹಸಿವಿನಿಂದ ಕಷ್ಟ ಪಡುವುದು ನೀರು ಕುಡಿಯುವುದು ಮುಂತಾದ ಪ್ರಕ್ರಿಯೆಗಳು ನಡೆಯುತ್ತವೆ. ಇವುಗಳು ಸತ್ಯ ಸಂಗತಿಗಳೂ ಆಗಿವೆ. ಇವುಗಳು ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿವೆ. ಆದರೆ ನಾವು ಇದನ್ನು ದಾಖಲೆ ಮಾಡಿಲ್ಲ. ಹಾಗೆಂದು ಇವುಗಳನ್ನು ಚರಿತ್ರೆಯ ಕಥನಗಳು ಅಲ್ಲವೆಂದು ಭಾವಿಸಬಾರದು ಎಂದು ಫುಕೋ ಹೇಳುತ್ತಾನೆ. (ಫುಕೋ ಆರ್ಕ್ಯಾಯಲಜಿ ಆಫ್ ನಾಲೆಜ್) ಬರಹದಿಂದ ಶುರು ಮಾಡಿ ಈ ಜಗತ್ತಿನಲ್ಲಿ ಹಲವು ಸಂಗತಿಗಳು ಆಗುತ್ತವೆ. ಜಗತ್ತಿನಲ್ಲಿ ಸಣ್ಣ ಬದಲಾವಣೆಯಿಂದ ಪ್ರಾರಂಭ ಮಾಡಿ ಅನೇಕವು ನಡೆಯುತ್ತವೆ. ವಾಸ್ತವವಾಗಿ ಬೇರೆ ಬೇರೆ ಸಂಬಂಧಗಳು ಬೇರೆ ಬೇರೆ ನಿರ್ವಹಣೆಯನ್ನು ಮಾಡುತ್ತವೆ. ವಿಶ್ವಾತ್ಮಕ ಎಂದು ಹೇಳುವಾಗ ನಾವು ಅದನ್ನು ಬೇರೆಯಾದ ಒಂದು ಪ್ರಕ್ರಿಯೆ ಎಂದು ಭಾವಿಸುತ್ತೇವೆ. ಇಲ್ಲಿ ಇದಕ್ಕೆ ಪೂರಕವಾದ ಮತ್ತೆ ಕೆಲವು ಪ್ರಶ್ನೆಗಳನ್ನು ನೋಡಬೇಕಾಗುತ್ತದೆ : ಚರಿತ್ರೆಯ ಅಧ್ಯಯನದಲ್ಲಿ ಬಂದಿರುವ ಕಾಲ ಮತ್ತು ಅದರ ಸನ್ನಿವೇಶಗಳು ಹೇಗೆ ವಿಶ್ವಾತ್ಮಕವಾದ ಸಂಗತಿಗಳನ್ನು ತರುತ್ತವೆ ಎನ್ನುವುದು ಮೂಲಭೂತವಾದ ಪ್ರಶ್ನೆ. ಹಾಗೆ ನೋಡಿದರೆ ವಿಶ್ವಾತ್ಮಕ ಮತ್ತು ಅದರ ಪ್ರಕ್ರಿಯೆಗಳು ಬೇರೆಯಿರುತ್ತವೆ. ಕೆಲವು ವಿಶ್ವಾತ್ಮಕವಾದ ಸಂಗತಿಗಳು ಇರುತ್ತವೆ. ಅದು ಮನುಷ್ಯ ಶಕ್ತಿಗೆ ಕಾರಣವಾಗುತ್ತವೆ. ಸಂತೋಷ, ಅತ್ಯುತ್ತಮವಾದ ನಡವಳಿಕೆ ಮುಂತಾದವು ಇದರಲ್ಲಿ ಇರುತ್ತವೆ.

ಚಾರಿತ್ರಿಕ ಮತ್ತು ಅಚಾರಿತ್ರಿಕ ಎನ್ನುವುದು ಇದ್ದೇ ಇರುತ್ತದೆ ಎಂದು ನೀಶೆಯು ಹೇಳುತ್ತಾನೆ ಇದನ್ನು ಹೆಗೆಲ್ ಮತ್ತು ಜಾರ್ಗನ್ ಹೇಬರ್‌ಮಾಸ್ ವಿಭಿನ್ನವಾಗಿಯೇ ಹೇಳಿದ್ದಾರೆ. ಸಮಾಜದಲ್ಲಿ ಹೇಗೆ ಬೇರೆ ಬೇರೆ ಕಾರಣಗಳು ವಲಸೆಯನ್ನು ಉಂಟುಮಾಡಿವೆ ಮತ್ತು ಅದರ ಮೂಲಕವೇ ಜನರು ಬೇರೆ ಬೇರೆ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ ಎನ್ನುವುದು ಮುಖ್ಯವಾದ ಪ್ರಶ್ನೆ. ಚರಿತ್ರೆಯ

ಅಧ್ಯಯನವೆಂದರೆ ಅದು ಆಲೋಚನೆಗಳ ಚರಿತ್ರೆಯನ್ನು ಅಧ್ಯಯನ ಮಾಡುವುದು, ಸಾಹಿತ್ಯದ ಚರಿತ್ರೆಯನ್ನು ಅಧ್ಯಯನ ಮಾಡುವುದು ತತ್ವಜ್ಞಾನ ಮತ್ತು ಅದರ ಬೆಳವಣಿಗೆಯನ್ನು ಅಧ್ಯಯನ ಮಾಡುವುದು ಎಂದು ಭಾವಿಸುತ್ತೇವೆ. ಆದ್ದರಿಂದ ಚರಿತ್ರೆಯ ಅಧ್ಯಯನದಲ್ಲಿ ಕೆಲವು ಸೀಮಿತವಾದ ಚೌಕಟ್ಟು ಮಾತ್ರವೇ ಸಿಕ್ಕಿದೆ. ಹೀಗೆ ಮಾಡುವಾಗ ನಾವು ಅದು ಯಾವ ಕಾಲದಲ್ಲಿ ನಡೆಯಿತು ಮತ್ತು ಹೇಗೆ ನಡೆಯಿತು ಎಂದು ಮಾತ್ರವೇ ಹೇಳುತ್ತೇವೆ. ಅಂದರೆ ನಮಗೆ ಘಟನೆಗಳು ಮತ್ತು ಅದರ ನಿರೂಪಣೆಗಳು ಮಾತ್ರವೇ ಮುಖ್ಯವಾಯಿತು. ಇದರ ಮೂಲಕವೇ ನಾವು ಚರಿತ್ರೆಯ ವಿಶ್ವಾತ್ಮಕತೆಯನ್ನು ಗ್ರಹಿಸುವ ಯತ್ನವನ್ನು ಮಾಡುತ್ತೇವೆ, ಕಾಲವು ಮಾತ್ರವೇ ನಮಗೆ ಹೆಚ್ಚು ಮುಖ್ಯವಾಯಿತು. ಚರಿತ್ರೆಯಲ್ಲಿ ಪಕ್ಷಿನೋಟ ಮತ್ತು ಸೂಕ್ಷ್ಮದೃಷ್ಟಿ ಎರಡೂ ಕೆಲಸವನ್ನು ಮಾಡಿವೆ. ಆದರೆ ಇದರಲ್ಲಿ ಬಹಳ ಮುಖ್ಯವಾದದ್ದು ಚರಿತ್ರೆಗೆ ಇರುವ ನಾನಾ ರೂಪಗಳು ಮತ್ತು ಅವುಗಳ ಹಿಂದೆ ಇರುವ ಕೆಲವು ತತ್ವಗಳು ಅನೇಕ ಸಂದರ್ಭದಲ್ಲಿ ನಮ್ಮ ಗಮನಕ್ಕೆ ಬರುವುದೇ ಇಲ್ಲ. ಆದ್ದರಿಂದ ವಿಶ್ವಾತ್ಮಕತೆಯನ್ನು ಗ್ರಹಿಸುವಾಗ ನಾವು ಘಟನೆಗಳನ್ನು ಮಾತ್ರವೇ ಹೆಚ್ಚು ಕೇಂದ್ರ ಮಾಡಿಕೊಳ್ಳುತ್ತೇವೆ. ಕಳೆದು ಹೋಗಿರುವುದನ್ನು ಒಂದು ಶಾಸ್ತ್ರ ಮಾಡುತ್ತೇವೆ. ಅದನ್ನು ಸಾಧ್ಯವಾದಷ್ಟು ಹೆಚ್ಚು ಶಾಸ್ತ್ರೀಯತೆಯ ಭಾಗವಾಗಿ ನೋಡುತ್ತೇವೆ. ಇದರಲ್ಲಿ ಗುಂಪುಗಳು, ಚಲನೆಗಳು, ಬೆಳವಣಿಗೆಗಳು ಹೆಚ್ಚು ಮುಖ್ಯವಾಗುತ್ತವೆ. ಚರಿತ್ರೆಯಲ್ಲಿ ಕೆಲವು ಹಾಗೆಯೇ ಮುಂದುವರಿಯುತ್ತವೆ. ಮತ್ತೆ ಕೆಲವು ಹಾಗೆ ಮುಂದುವರಿಯುವುದೂ ಇಲ್ಲ. ಕೆಲವು ದಾಖಲೆಯಾಗಿರುತ್ತವೆ. ಮತ್ತೆ ಕೆಲವು ದಾಖಲೆಯಾಗಿರುವುದೂ ಇಲ್ಲ. ಒಂದೇ ಕಾಲದಲ್ಲಿ ಜಗತ್ತಿನಲ್ಲಿ ಅನೇಕ ಸಂಗತಿಗಳು ನಡೆಯುತ್ತವೆ. ಅವುಗಳು ಒಂದೇ ರೂಪದಲ್ಲಿ ಇರುವುದೂ ಇಲ್ಲ. ಚರಿತ್ರೆಯಲ್ಲಿ ಕೆಲವು ನಮ್ಮ ನೆನಪಿನ ಭಾಗವು ಮಾತ್ರವೇ ಆಗಿರುತ್ತದೆ ಹಾಗೂ ಅದನ್ನು ನಾವು ಎಲ್ಲಿಯೂ ದಾಖಲಿಸಲು ಹೋಗುವುದೂ ಇಲ್ಲ. ಕಿರುಗೂರಿನ ಗಯ್ಯಾಳಿಗಳು ಇದಾಹರಣೆ. ಇರುವ ದಾಖಲೆಗಳನ್ನು ಅನೇಕರು ಅನ್ವಯ ಮಾಡಿದ್ದಾರೆ. ಅದನ್ನು ಪ್ರಶ್ನೆ ಮಾಡಿದ್ದಾರೆ. ಅದು ಸತ್ಯವೇ ಅಥವಾ ಸುಳ್ಳೆ ಎಂದು ನೋಡಿದ್ದಾರೆ. ದಾಖಲೆ ಮತ್ತು ಅದರ ಸಂಸ್ಕತಿಯು ಒಂದು ಥರ. ದಾಖಲೆಗಳಲ್ಲಿ ಅನೇಕವು ಹೀಗೆ ಬೇರೆ ಬೇರೆ ಅನ್ವಯಕ್ಕೆ ಗುರಿಯಾಗಿವೆ. ದಾಖಲೆಗಳನ್ನು ವರ್ಗೀಕರಿಸುವುದು ಅದನ್ನು ಮರುಪರಿಶೀಲನೆ ಮಾಡುವುದು ಮುಂತಾದವು ನಡೆದಿದೆ. ಸಿಕ್ಕಿದ ದಾಖಲೆ ಮತ್ತು ಅದರ ಸಾಧ್ಯತೆಗಳು ನಮಗೆ ಹೆಚ್ಚು ಮುಖ್ಯವಾಯಿತು. ಆದರೆ ಜನ ಸಮೂಹಕ್ಕೆ ಒಂದು ಪ್ರಜ್ಞೆಯು ಇದೆ. ಅದು ದಾಖಲೆಗಳಲ್ಲಿ ಇರಬಹುದು ಅಥವಾ ಇಲ್ಲದೆಯೂ ಇರಬಹುದು. ಅನೇಕವು ಸಮಾಜದಲ್ಲಿ ನಡೆಯುತ್ತದೆ. ಅದರ ಸ್ವರೂಪಗಳು ಬೇರೆಯಿರುತ್ತವೆ.

ಕೆಲವು ಸಂಗತಿಗಳು ನಿರಂತರವಾದರೆ ಮತ್ತೆ ಕೆಲವು ನಿರಂತರತೆಯನ್ನು ಕಾಪಾಡಿಕೊಂಡಿಲ್ಲ. ಬಹುಮಟ್ಟಿಗೆ ನಮ್ಮ ಚರಿತ್ರೆಯು ಬಹಳ ಪುರಾತನವಾದದ್ದು. ಅದು ಅನೇಕ ಸಂದರ್ಭದಲ್ಲಿ ವ್ಯಕ್ತವಾಗಿದ್ದರೂ ಕೆಲವೊಮ್ಮೆ ವ್ಯಕ್ತವಾಗಿಲ್ಲ. ಕಾಲ ಮತ್ತು ಅದರ ಅನುಕ್ರಮತೆಯು ನಮಗೆ ಸಿಕ್ಕಿದೆ. ಅದರಲ್ಲಿ ಕೆಲವು ಅಭಿವ್ಯಕ್ತವಾಗಿದೆ. ಮತ್ತೆ ಕೆಲವು ಅನಭಿವ್ಯಕ್ತವಾಗಿದೆ. ಯಾವುದು ದಾಖಲೆಯು ಆಗಿಲ್ಲವೋ ಅದನ್ನು ಚರಿತ್ರೆಯಿಂದ ಹೊರಗೆ ಇಡಲಾಗಿದೆ. ಮತ್ತು ಚರಿತ್ರೆಯನ್ನು

ಬರೀ ಪ್ರಮೇಯ ಹಾಗೂ ಲೆಕ್ಕಾಚಾರವೆಂದು ಹೇಳಲಾಗಿದೆ. ಅನೇಕ ವೈರುದ್ಧ್ಯಗಳು ನಮ್ಮ ಚರಿತ್ರೆಯಲ್ಲಿ ಕಾಣಸಿಗುತ್ತದೆ. ಅನೇಕವು ಮತ್ತೆ ಬಾಹ್ಯದ ಒತ್ತಡವನ್ನೂ ಅನುಭವಿಸಿವೆ. ಕೆಲವು ಒತ್ತಡಗಳು ನಮ್ಮ ಗಮನಕ್ಕೆ ಬರುತ್ತವೆ. ಆದರೆ ಮತ್ತೆ ಕೆಲವು ಕಣ್ಣಿಗೆ ಕಾಣಿಸುವುದಿಲ್ಲ. ಈ ಮಾತುಗಳು ಗ್ರಾಮಾಯಣಕ್ಕೆ ಅನ್ವಯವಾಗುತ್ತದೆ. 'ಗ್ರಾಮಾಯಣ' ಕಾದಂಬರಿಯ ಪ್ರಾರಂಭದಲ್ಲಿ ಲೇಖಕರು ಹೇಳುವಂತೆ "ಸರಂಜಾಮೀ ಪದ್ಧತಿಯನ್ನು ಆಧರಿಸಿ ನಿಂತ ಸಮಾಜದ ಅದರ ಪರಮ ಇಷ್ಟಾರ್ಥವೆನಿಸಿದ ಸಾಮ್ರಾಜ್ಯಶಾಹಿಯ ಸುಗ್ಗಿಯ ಕಾಲವಾದ ಹತ್ತೊಂಬತ್ತನೆಯ ಶತಮಾನ ಗತಿಸಿ ಹೊಸ ಶತಮಾನ ಇನ್ನೇನು ಹೊಸ ಧ್ಯೇಯಗಳನ್ನು ತೋರುವುದೋ ಎಂದು ನಾಡಿನಲ್ಲಿ ಕುತೂಹಲ ಪ್ರಾರಂಭವಾಗಿತ್ತು. ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರೀಯವಾದ ಮೊದಲಾದ ಹೊಸ ವಿಚಾರಗಳಿಂದ ತುಂಬಿದ ಇಪ್ಪತ್ತನೆಯ ಶತಮಾನ ಕಾಲಿಡುವ ಸಂಧಿಕಾಲ ನಮ್ಮ ದೇಶದಲ್ಲಿ ಮಹತ್ವದ ಸ್ಥಿತ್ಯಂತರ ಕಾಲ ಹಳೆಯ ಸರಂಜಾಮೀ ಪದ್ಧತಿ ಅಳಿದಿಲ್ಲ. ಹೊಸ ಸಾಮಾಜಿಕ ವ್ಯವಸ್ಥೆ ರೂಪುಗೊಂಡಿಲ್ಲ. ಸಮಾಜ ವ್ಯವಸ್ಥೆಯ ತಳಹದಿಗೆ ಗೆದ್ದಲು ಹತ್ತಿದ್ದಂತಾಗಿ ಸಾವಿರಾರು ವರ್ಷಗಳಿಂದ ಕಟ್ಟಿದ ಮಂದಿರ ಬೀಳಬಹುದೆಂಬ ಭೀತಿಯಿತ್ತು. ಹೊಸ ಸಮಾಜ ವ್ಯವಸ್ಥೆಯ ರೂಪುರೇಷೆಗಳ ಅಸ್ಪಷ್ಟ ಚಿತ್ರವು ಧ್ಯೇಯವಾದಿಗಳ ಕನಸುಗಳಲ್ಲಿ ಮಾತ್ರ ಉಳಿದಿತ್ತು" ಇಂತಹ ಸಾಮಾಜಿಕ ರಚನೆಯನ್ನು ಹೊತ್ತಿರುವ ಪಾದಳ್ಳಿಯು ಹಳೆಯದರಿಂದ ಸಂಪೂರ್ಣವಾಗಿ ಮುಕ್ತವಾಗದೆ ಹೊಸತನವನ್ನು ಕಂಡುಕೊಳ್ಳದ ಅತಂತ್ರ ಸ್ಥಿತಿಯಲ್ಲಿ ಇಲ್ಲಿನ ಸಾಮಾಜಿಕ ವ್ಯವಸ್ಥೆಯಿದೆ ಎನ್ನುವ ಮೂಲಕ ಪಾದಳ್ಳಿಯ ಪ್ರಾದೇಶಿಕತೆ ಕಟ್ಟಿಕೊಡುತ್ತಾರೆ. ಆದ್ದರಿಂದಲೇ ಈ ಕಾದಂಬರಿಯು ಅತ್ಯಂತ ಮುಖ್ಯವಾಗಿದೆ.

ನಮ್ಮ ಪ್ರಕಟಣೆಗಳು

1.	ಕನಸುಗಳಿಗೆ ಕಿನಾರಗಳಿರುವುದಿಲ್ಲ*	ರವಿಕುಮಾರ್	ರೂ. 70.00
2.	ಕಿಲಾರಿ *	ಡಾ. ಎಸ್.ಎಮ್. ಮುತ್ತಯ್ಯ	ರೂ. 50.00
3.	ಸಂವೇದನೆ (ಬರಗೂರು ರಾಮಚಂದ್ರಪ್ಪ ಜೀವನ ಮತ್ತು ಸಾಹಿತ್ಯ)*	ಡಾ. ಎಸ್. ಮಾರುತಿ	ರೂ. 160.00
4.	ಬೆಳಕಿನ ಪಾದ *	ಬಾಲಕೃಷ್ಣ ನಾಯಕ್ ಡಿ.	ರೂ. 40.00
5.	ಪಾತ್ರಗಳು ಇರಲಿ ಗೆಳೆಯ *	ಸತ್ಯನಾರಾಯಣರಾವ್ ಅಣತಿ	ರೂ. 50.00
6.	ದೂಸ್ರಾ *	ರವಿಕುಮಾರ್	ರೂ. 60.00
7.	ನೆಲದ ಮರೆಯ ನಿಧಾನ *	ಸಿದ್ದು ಯಾಪಲಾಪರವಿ	ರೂ. 40.00
8.	ಅಪರೂಪದ ಮನುಷ್ಯ *	ಆತ್ಮಕೂರ ವಾಮನಾಚಾರ್ಯ	ರೂ. 80.00
9.	ವಸಂತಸ್ಮೃತಿ *	ಡಿ.ಅರ್. ನಾಗರಾಜ್	ರೂ. 70.00
10.	ಮಹಿಳೆ ಮತ್ತು ದುಡಿಮೆ *	ಡಾ. ಬಿ.ಹಚ್. ಅಂಜನಪ್ಪ	ರೂ. 200.00
11.	ಸರ್ವಜ್ಞನ ವಚನಗಳು	ಡಾ. ಕೆ.ಅರ್. ಗಣೇಶ್	ರೂ. 200.00
12.	ಕೃತಿಪ್ರವೇಶ (ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ ಕೃತಿಗಳ ಸಮಗ್ರ ಅವಲೋಕನ)*	ಡಾ.ಎಸ್.ಎಸ್.ಅಂಗಡಿ.	ರೂ. 100.00
13.	ಮಣ್ಣಿನ ಕವಿತೆ *	ಡಾ. ನಿಂಗಪ್ಪ ಮುದೇನೂರು	ರೂ. 60.00
14.	ಸೊಂಡೂರು ಕುಮಾರಸ್ವಾಮಿ *	ಡಾ. ನಿಂಗಪ್ಪ ಮುದೇನೂರು	ರೂ. 160.00
15.	ಲಿಖಿತ – ಅಲಿಖಿತ *	ಡಾ. ಎಸ್.ಎಮ್. ಮುತ್ತಯ್ಯ	ರೂ. 160.00
16.	ವರ್ತಮಾನ *	ಬಿ.ಪಿ. ಶಿವಾನಂದ ರಾವ್	ರೂ. 85.00
17.	ಗಾದೇಯ ಮಾತು *	ಪ್ರೊ. ಮಲ್ಲೇಪುರಂ ಜಿ. ವೇಂಕಟೇಶ್	ರೂ. 25.00
18.	ಹಡೆ ಏರಿಸಿದ ಸೂರ್ಯನ ಕುದುರೆ *	ಸತ್ಯನಾರಾಯಣ ರಾವ್ ಅಣತಿ	ರೂ. 25.00
19.	ನಿಜದ ಬೆಳಗು *	ಅಕ್ಕಿ ಬಸವೇಶ್	ರೂ. 30.00
20.	ವಚನ ಬೆಳಗು *	ಡಾ. ನಾಗರಾಜ ಎಂ.	ರೂ. 70.00
21.	ವರದಿಗಾರರೇ ಈ ಕಡೆ ಸ್ವಲ್ಪ ನೋಡಿ*	ಪಿ. ರಾಜೇಂದ್ರ	ರೂ. 60.00
22.	ನಮ್ಮ ಕರ್ನಾಟಕ	ಪಿ. ರಾಜೇಂದ್ರ	ರೂ. 70.00
23.	ವೇದ–ತಂತ್ರ–ಸಂಸ್ಕೃತಿ *	ಡಾ. ಜಿ.ಬಿ. ಹರೀಶ್	ರೂ. 90.00
24.	ಸಖಿ–ಸಖಿ (ಗಜಲ್‌ಗಳು) *	ರವಿ ಹಂಪಿ	ರೂ. 40.00
25.	ಆಕಾಶದ ಹಾಡು *	ಅನಸೂಯದೇವಿ	ರೂ. 120.00
26.	ಬಿಂಬದೊಳಗಣ ಪ್ರಾಣ *	ಡಾ. ಹೆಬ್ಬಾಲೆ ನಾಗೇಶ್	ರೂ. 50.00

27.	ವಿಜಯನಗರ ಸಾಮ್ರಾಜ್ಯದ ಕನಸುಗಾರ ಕುಮಾರರಾಮ _	ಓಂಕಾರಪ್ಪ	ರೂ. 250.00
28.	ಮಳೆಗಾಲದ ಕಾಡು *	ಸ್ವಾಮಿನಾಥ	ರೂ. 30.00
29.	ವಾಲ್ಮೀಕಿ	ಡಾ. ಸರಜೂ ಕಾಟ್ಕರ್	ರೂ. 200.00
30.	ಕರ್ನಾಟಕ ಬುಡಕಟ್ಟು ಭಾಷೆ *	ಡಾ. ಎಸ್.ಎಸ್. ಅಂಗಡಿ	ರೂ. 225.00
31.	ಕತ್ತಲ ಬೆಳಗು *	ಜ.ನಾ. ತೇಜಶ್ರೀ	ರೂ. 40.00
32.	ನವವಿಸರ್ಗ *	ಡಾ. ಕವಿತಾ ರೈ	ರೂ. 130.00
33.	ಕಡಲ ತಡಿಯ ತಲ್ಲಣ*	ಉಷಾ ಕಟ್ಟೆಮನೆ ಡಾ. ಪುರುಷೋತ್ತಮ ಬಿಳಿಮಲೆ	ರೂ. 150.00
34.	ಬಂಟರು ಬದುಕು ಮತ್ತು ಬದಲಾವಣೆ	ಡಾ. ಶೇಖರ	ರೂ. 300.00
35.	ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನ	ಕೆ. ನಾರಾಯಣಸ್ವಾಮಿ	ರೂ. 150.00
36.	ಈ ಕ್ಷಣ *	ಜ್ಯೋತಿ ಗುರುಪ್ರಸಾದ್	ರೂ. 65.00
37.	ಗಣೇಶನ ಬೆಂಗ್ಳೂರು ಯಾತ್ರೆ*	ಪ್ರಕಾಶ್ ಕೆ. ನಾಡಿಗ್	ರೂ. 65.00
38.	ಕೃಷ್ಣ ಕಷಾಯ *	ಪಿ.ವಿ. ರಾಮಚಂದ್ರ	ರೂ. 100.00
39.	ರಾವಣನ ಡೈರಿ	ಹಾ.ಮ್ಯ. ಸೂರಿ	ರೂ. 150.00
40.	ಮೊಪಾಸಾನ ಕಥೆಗಳು	ಪಿ.ವಿ. ರಾಮಚಂದ್ರ	ರೂ. 350.00
41.	ತಂತಿ ಪಕ್ಷಿ *	ಜ್ಯೋತಿ ಗುರುಪ್ರಸಾದ್	ರೂ. 60.00
42.	ವಕ್ರರೇಖೆ *	ಡಾ. ಜಿ.ಬಿ. ಹರೀಶ್	ರೂ. 300.00
43.	ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ *	ಡಾ. ಎಸ್. ನಾಗರತ್ನಮ್ಮ	ರೂ. 125.00
44.	ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರೀಕ – ಕಾನೂನು ಭಂಗ ಚಳುವಳಿ *	ಡಾ. ಎಸ್. ನಾಗರತ್ನಮ್ಮ	ರೂ. 175.00
45.	ಪ್ರಾಚೀನ ಕನ್ನಡ ಸಾಹಿತ್ಯ ಸಂಘರ್ಷ	ಡಾ. ರವಿ ಛಲವಾದಿ	ರೂ. 225.00
46.	ಶಿವರಾಮ ಕಾರಂತರ ಕೃತಿಗಳಲ್ಲಿ ಸ್ತ್ರೀ ಸಂಕಥನದ ಸ್ವರೂಪ *	ಡಾ. ರಾಜೇಂದ್ರ ತಗಡ್ಲಿ	ರೂ. 175.00
47.	ಮಾಧ್ಯಮ ಮಾರ್ಗದರ್ಶಿ	ಪಿ. ರಾಜೇಂದ್ರ	ರೂ. 125.00
48.	ಊರು ಮನೆ (ಸಣ್ಣ ಕಥೆಗಳ ಸಂಕಲನ)	ಲಕ್ಷ್ಮಣ ಕೊಡಸೆ	ರೂ. 160.00
49.	ಮುಖಾ – ಮುಖಿ *	ಬಿ.ಪಿ. ಶಿವಾನಂದ ರಾವ್	ರೂ. 85.00
50.	ಜೋಲಿ ಲಾಲಿ *	ಜ್ಯೋತಿ ಗುರುಪ್ರಸಾದ್	ರೂ. 160.00
51.	ಅನಸೂಯಾ ಕಥೆಗಳು *	ಡಾ. ಅನಸೂಯಾ ದೇವಿ	ರೂ. 100.00
52.	ರಾಜಕೀಯ ಕಥೆಗಳು *	ಡಾ. ಜಿ. ವೀರಭದ್ರಗೌಡ	ರೂ. 100.00
53.	ಜನಪದ ಕತೆಗಳು:ಆಶಯಗಳು	ಡಾ. ವಾಮದೇವ	ರೂ. 160.00
54.	ಅಮೂರ್ತ ಕನ್ನಡಿ *	ಡಾ. ಟಿ.ಡಿ. ರಾಜಣ್ಣ ತಗ್ಗಿ	ರೂ. 100.00
55.	ವ್ಯಾಸಕೂಟ ಮತ್ತು ದಾಸಕೂಟ *	ಡಾ. ಅನಸೂಯಾ ದೇವಿ	ರೂ. 250.00
56.	ಹೃದಯವಂತ ವಿಷ್ಣು *	ವಿನೋದ್ ಕುಮಾರ್ ಬಿ.	ರೂ. 95.00
57.	ಮಿಣ ಮಿಣ ಚೀಣಾ *	ತ್ರಿವೇಣಿ ಶಿವಕುಮಾರ್	ರೂ. 175.00
58.	ಸನೂತನ ದಾರ್ಶನಿಕರೂ *	ಸ್ವಾಮಿನಾಥ	ರೂ. 80.00
59.	ದಿಗ್ದರ್ಶಕರು*	ಅರುಣ್ ಎಲ್.	ರೂ. 80.00

60.	ವಚನ ವ್ಯಕ್ತಿತ್ವ ವಿಕಾಸ	ಡಾ. ಹಾ.ಮ. ನಾಗಾರ್ಜುನ	ರೂ. 80.00
61.	ಸರಸ್ವತಿ *	ಡಾ. ಬಿ.ಆರ್. ಸತ್ಯನಾರಾಯಣ	ರೂ. 300.00
62.	ನಿಡುಗಲ್ಲು ದುರ್ಗದ ಕಥನ *	ಡಾ. ಡಿ. ಕೆ. ಚಿತ್ತಯ್ಯ ಪೂಜಾರ್	ರೂ. 250.00
63.	ಸ್ತ್ರೀವಾದಿ ಚಿಂತನೆಗಳು *	ಡಾ. ಹಾ.ಮ. ನಾಗಾರ್ಜುನ	ರೂ. 480.00
64.	ಕಮಲದೇಸಾಯಿ ಕಥೆಗಳು	ಅನು: ಚಂದ್ರಕಾಂತ ಪೋಕಳೆ	ರೂ. 120.00
65.	ಪ್ರೀತಿ ಏನೆನ್ನಲ್ಲಿ ನಿನ್ನ	ರೂಪಾ ಎಲ್. ರಾವ್	ರೂ. 70.00
66.	ಹೆಜ್ಜೆ ಮೂಡದ ಹಾದಿಯಲಿ	ಸುಧೇಶ್ ಶೆಟ್ಟಿ	ರೂ. 160.00
67.	ಹಕ್ಕಿ ಹರಿವ ನೀರು	ಡಾ. ಕವಿತಾ ರೈ	ರೂ. 60.00
68.	ಸಾಹಿತ್ಯ ಸಂಸ್ಕೃತಿ *	ಡಾ. ತಳವಾರ ವಾಮದೇವ	ರೂ. 110.00
69.	ಸಾಧಕರ ಹಾದಿ	ಕೆ.ಎನ್. ಪರಾಂಜಪೆ	ರೂ. 100.00
70.	ಸಾಧನಶೀಲ (ಡಾ. ಎ.ವಿ. ಪ್ರಸನ್ನ ಅವರ ಅಭಿನಂಧನ ಗ್ರಂಥ)		ರೂ. 225.00
71.	ಗಡಿಪಾರು	ಚಂದ್ರಕಾಂತ ಪೋಕಳೆ	ರೂ. 150.00
72.	ರಾಜ್ಯಾಯಣ	ಪಿ. ರಾಜೇಂದ್ರ	ರೂ. 150.00
73.	ಇಂಧನ *	ಚಂದ್ರಕಾಂತ ಪೋಕಳೆ	ರೂ. 100.00
74.	Cosmic Joke	*Raghav Chinivar*	ರೂ. 250.00
75.	Urbanization Industrialization In Karnataka	*Dr. Chandrappa*	ರೂ. 480.00
76.	ಅಪ್ಪನ ಪ್ರತಿರೂಪ ಮತ್ತಿತರ ಕತೆಗಳು	ಡಾ. ಟಿ.ಡಿ.ರಾಜಣ್ಣ ತಗ್ಗಿ	ರೂ. 100.00
77.	ನೀಲಕುರುಂಜಿ (ವಿಮರ್ಶಾ ಲೇಖನಗಳು) *	ಎಂ. ಶಿವರಾಮಯ್ಯ	ರೂ. 220.00
78.	ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು *	ಡಾ. ವೀರೇಶ್ ಬಳ್ಳಾರಿ	ರೂ. 200.00
79.	ಶಾಸ್ತ್ರೀಯ ಭಾಷೆ ಕನ್ನಡ & ಶಿಕ್ಷಣದ ಹಕ್ಕುಗಳು *	ಡಾ. ಹಾ.ಮಾ.ನಾಗಾರ್ಜುನ	ರೂ. 170.00
80.	ವೀರ ವನ್ತೆ ದುರ್ಗವ್ವ	ಡಾ. ಎಲ್ಲಪ್ಪ ಕೆ.ಕೆ.ಪುರ	ರೂ. 100.00
81.	ಮಂಡ್ಯ ಜಿಲ್ಲೆಯ ಹೊಯ್ಸಳ ದೇವಾಲಯಗಳು	ಡಾ. ಶೋಭ	ರೂ. 250.00
82.	ಕಾಗದದ ದೋಣಿ ಯಾನ-1	ಎಸ್.ಎಂ. ಪೆಜತ್ತಾಯ	ರೂ. 180.00
83.	ಕಾಗದದ ದೋಣಿ ಯಾನ-2	ಎಸ್.ಎಂ. ಪೆಜತ್ತಾಯ	ರೂ. 180.00
84.	ಶರ್ವಾಣಿ	ಸುನಿತಾರಾಜು	ರೂ. 70.00
85.	ಕನ್ನಡ ಸಾಹಿತ್ಯದಲ್ಲಿ ಬೆಡಗು	ಡಾ. ರಾಜು ಕೆ.ಎಸ್.	ರೂ. 80.00
86.	ನಮ್ಮ ರಕ್ಷಕ ರಕ್ಷಾ	ಎಸ್.ಎಂ. ಪೆಜತ್ತಾಯ	ರೂ. 40.00
87.	ಅಮ್ಮ ಹೇಳಿದ ಕತೆಗಳು *	ತ್ರಿವೇಣಿ ಶಿವಕುಮಾರ್	ರೂ. 60.00
88.	ನಮ್ಮ ಕರ್ನಾಟಕ-2011	ಸೃಷ್ಟಿನಾಗೇಶ್	ರೂ. 130.00
89.	ಸುದ್ದಿಯ ಹಿಂದೆ*	ಡಿ.ವಿ. ರಾಜಶೇಖರ್	ರೂ. 70.00
90.	ಮೈಲಾರ ಬಸವಲಿಂಗ ಶರಣರ ತ್ರಿವಿಧಿಕರಣ*	ಡಾ. ಹಾ.ಮಾ. ನಾಗಾರ್ಜುನ	ರೂ. 250.00
91.	ವೀರವನ್ತೆ ದುರ್ಗವ್ವ (ನಾಟಕ)	ಡಾ. ಯಲ್ಲಪ್ಪ ಕೆ.ಕೆ.ಪುರ	ರೂ. 70.00
92.	ಹಕ್ಕಿ ಹರಿವ ನೀರು	ಡಾ. ಕವಿತಾ ರೈ	ರೂ. 40.00
93.	ವೀರವನ್ತೆ ದುರ್ಗವ್ವ (ಕಾದಂಬರಿ)	ಡಾ. ಯಲ್ಲಪ್ಪ ಕೆ.ಕೆ.ಪುರ	ರೂ. 120.00

94.	ಲೋಕಾಮುದ್ರಾ (ನಾಟಕ)	ಡಾ. ಕವಿತಾ ರೈ	ರೂ. 50.00
95.	ಸಾಹಿತ್ಯ ಸಂಸ್ಕೃತಿ	ಡಾ. ತಳವಾರ ವಾಮದೇವ	ರೂ. 110.00
96.	ಅಲ್ಲುಂಟು ನೆಂಟು	ಬಿ.ಎಸ್. ಲಕ್ಷ್ಮೀನಾರಾಯಣ	ರೂ. 70.00
97.	ವೇಶ್ಯೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು	ಪ್ರೊ. ಶಿವರಾಮಯ್ಯ	ರೂ. 125.00
98.	ಪುಟಾಣಿಗಳಿಗಾಗಿ ಪುಟ್ಟ ಕಥೆಗಳು *	ಪ್ರಕಾಶ್ ಕೆ. ನಾಡಿಗ್	ರೂ. 70.00
99.	ತುತ್ತಿಗೊಂದು ಕಥೆ (ಮಕ್ಕಳ ಕಥೆಗಳು)*	ಸುನೀತಾ ರಾಜು	ರೂ. 80.00
100.	ಬ್ಲಾಗಿಸು ಕನ್ನಡ ಡಿಂಡಿಮವ	ಚೇತನ ತೀರ್ಥಹಳ್ಳಿ	ರೂ. 90.00
101.	ಭಾರತ ಮತ್ತು ಪಾಕಿಸ್ತಾನ ಕಾಶ್ಮೀರ *	ಡಾ. ಸಿ.ಚಂದ್ರಪ್ಪ	ರೂ. 225.00
102.	ತರಂಗಿಣಿ ತೀರದಲ್ಲಿ *	ಆತ್ಮಕೂರ ವಾಮನಾಚಾರ್ಯ	ರೂ. 225.00
103.	ಆಲೋಡನ *	ಆನಂದ ಝುಂಜರವಾಡ	ರೂ. 150.00
104.	ನಾದಲೋಕದ ರಸನಿಮಿಷಗಳು	ಶಿರೀಷ ಜೋಷಿ	ರೂ. 150.00
105.	ಕುವೆಂಪು ಕಾವ್ಯಯಾನ *	ಡಾ. ಬಿ.ಆರ್.ಸತ್ಯನಾರಾಯಣ	ರೂ. 200.00
106.	ಸಂಘರ್ಷ *	ಮಾಲತೇಶ ಸಿದ್ಧಮ್ಮನವರು	ರೂ. 50.00
107.	ಅಜ್ಜಿ ಹೇಳಿದ ಕಥೆಗಳು *	ಡಾ. ಅನಸೂಯದೇವಿ	ರೂ. 100.00
108.	ಭುವನದ ಬೆರಗು *	ತ್ರಿವೇಣಿ ಶಿವಕುಮಾರ್	ರೂ. 150.00
109.	ಅಮ್ಮಿ (Ammi Saeed mirza)	ರಾಹು	ರೂ. 470.00
110.	ಪ್ರಕೃತಿ ಮತ್ತು ಪ್ರೀತಿ *	ಡಾ. ಅನಸೂಯದೇವಿ	ರೂ. 300.00
111.	ರಾಣಿ ಕಥೆಗಳು*	ಡಾ. ವೀರಭದ್ರಗೌಡ	ರೂ. 150.00
112.	ಶತಪದಗಳ ಸುಳಿಯಲ್ಲಿ*	ಮಹೇಶ ದೇಶಪಾಂಡೆ	ರೂ. 70.00
113.	ಪ್ರಾಚೀನ ಭಾರತದ ವೈದ್ಯ ವಿಜ್ಞಾನ *	ಡಾ. ಕವಿತಾ ಎಸ್.ಎಚ್.	ರೂ. 80.00
114.	ಜೋಲಿ ಲಾಲಿ (ಭಾಗ-2) *	ಜ್ಯೋತಿ ಗುರುಪ್ರಸಾದ್	ರೂ. 250.00
115.	ನಮ್ಮ ಆರೋಗ್ಯ ನಮ್ಮ ಕೈಯಲ್ಲಿ	ಡಾ. ಲೀಲಾವತಿ ದೇವದಾಸ್	ರೂ. 200.00
116.	ಬೇಂದ್ರೆ-ಶರೀಫರ ಕಾವ್ಯಾಯಾನ	ಸುನಾಥ ದೇಶಪಾಂಡೆ	ರೂ. 350.00
117.	ಪಡು-ಮೂಡು *	ಕೆ. ಕೇಶವಶರ್ಮ	ರೂ. 500.00
118.	ವಸಾಹತುಶಾಹಿ ಪರಿಕಲ್ಪನೆಗಳು	ಕೆ. ಕೇಶವಶರ್ಮ	ರೂ. 350.00
119.	ಸಾಂಸ್ಕೃತಿಕ ಪರಿಕಲ್ಪನೆಗಳು	ಕೆ. ಕೇಶವಶರ್ಮ	ರೂ. 350.00
120.	ಸ್ತ್ರೀವಾದಿ ಪರಿಕಲ್ಪನೆಗಳು	ಕೆ. ಕೇಶವಶರ್ಮ	ರೂ. 350.00
121.	ಸುಗಂಧ ಪುಷ್ಪ *	ಹಾ.ಮ. ನಾಗಾರ್ಜುನ	ರೂ. 175.00
122.	ಸೆಕ್ಯೂಲರ್‌ವಾದ : ಬುಡ-ಬೇರು	ರಾಹು	ರೂ. 300.00
123.	ಕವಿತೆಯ ಓದು	ಪ್ರಭಾಕರ ಆಚಾರ್ಯ	ರೂ. 150.00
124.	ಆರನೆಯ ಹೆಂಡತಿಯ ಆತ್ಮಕಥೆ (My Feudal Lord)	ರಾಹು	ರೂ. 400.00
125.	ಮೈ ಫಾದರ್ ಬಾಲಯ್ಯ	ಡಾ. ರಾಜಣ್ಣ ತಗ್ಗಿ	ರೂ. 180.00
126.	ಪೀತಾಧಿಯಪತಿಯ ಪತ್ನಿ (Blasphemy)	ರಾಹು	ರೂ. 350.00
127.	ಹಾಡುವ ಹಕ್ಕಿಯ ಶೋಕಗೀತೆ*	ಡಾ. ಅಪ್ಪಗೆರೆ ಸೋಮಶೇಖರ್	ರೂ. 130.00
128.	ವಿಮರ್ಶೆಯ ಪರಿಕಲ್ಪನೆಗಳು	ಕೇಶವಶರ್ಮ ಕೆ.	ರೂ. 500.00
129.	ಯಾತ್ರಿಕನ ಕನಸು (Alchimest)	ರಾಜಣ್ಣ ತಗ್ಗಿ	ರೂ. 160.00
130.	ದಾಂಪತ್ಯ ನಿಷ್ಠೆ ಪರಿಕಲ್ಪನೆ ಬದಲಾಗುತ್ತಿದೆಯೇ?	ಸುನಂದ ಕಡಮೆ	ರೂ. 160.00

131.	ಕುಮಾರವ್ಯಾಸ ಭಾರತ ಭಾಷಾ ವೈಜ್ಞಾನಿಕ ವಿಶ್ಲೇಷಣೆ	ಓಂಕಾರಪ್ಪ	ರೂ. 200.00
132.	ನೋಯುವ ಹಲ್ಲಿಗೆ ಹೊರಳುವ ನಾಲಿಗೆ	ಡಾ.ಹೆಚ್.ಎಸ್. ಅನುಪಮಾ	ರೂ. 200.00
133.	ತತ್ವಜ್ಞಾನದ ಪರಿಕಲ್ಪನೆಗಳು	ಕೇಶವಶರ್ಮ ಕೆ.	ರೂ. 500.00
134.	ಬಹುರೂಪಿ ಭಾರತ	ತ್ರಿವೇಣಿ ಶಿವಕುಮಾರ್	ರೂ. 250.00
135.	ಮಾರ್ಕ್ಸ್‌ವಾದಿ ಪರಿಕಲ್ಪನೆಗಳು	ಕೇಶವಶರ್ಮ ಕೆ.	ರೂ. 400.00
136.	ಹೊಸಪಕ್ಷಿ ರಾಗ	ಜ್ಯೋತಿ ಗುರುಪ್ರಸಾದ್	ರೂ. 200.00
137.	ತೇಲ್ನೋಟ	ಕು.ಗೋ	ರೂ. 150.00
138.	ಆಟಗಳು	ಪ್ರಕಾಶ್ ಕೆ. ನಾಡಿಗ್	ರೂ. 80.00
139.	ಕನಸಿನೂರಿನ ಕಿಟ್ಟಣ್ಣ	ಕೆ. ಪ್ರಭಾಕರನ್	ರೂ. 80.00
140.	ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ	ಕು.ಗೋ	ರೂ. 80.00
141.	ಒಂದು ನೂರು ವರ್ಷಗಳ ಏಕಾಂತ (One Hundred Years of Solitude)	ಡಾ. ವಿಜಯಾ ಸುಬ್ಬರಾಜ್	ರೂ. 450.00
142.	ಜೀವಸಿರಿ	ವಸುಂಧರಾ ಭೂಪತಿ	ರೂ. 150.00
143.	ಅಲೆಮಾರಿ ಒಬ್ಬನ ಆತ್ಮಕತೆ..!(Gulliver Trevels)	ಡಾ॥ ಟಿ.ಡಿ.ರಾಜಣ್ಣ ತಗ್ಗಿ	ರೂ.200.00
144.	ಶಾಲ್ಮಲಿ (ಹಿಂದಿ ಅನುವಾದ)	ಡಾ॥ ವಿಜಯಾ ಸುಬ್ಬರಾಜ್	ರೂ. 160.00
145.	ತೆರವು (ಮರಾಠಿ ಅನುವಾದ)	ಚಂದ್ರಕಾಂತ ಪೊಕಳೆ	ರೂ. 80.00
146.	ಅನನ್ಯ (ಕನ್ನಡ ತಮಿಳು ಸಾಹಿತ್ಯ ಅವಲೋಕನ)	ಡಾ॥ ತಮಿಳ್ ಸೆಲ್ವಿ	ರೂ. 160.00
147.	ಧರೆಹೊತ್ತಿ ಉರಿದಾಗ (ಸಂಪುಟ–1) (ಭಾರತ ವಿಭಜನೆಯ ದುರಂತ ಕಥೆಗಳು)	ರಾಹು	ರೂ. 450.00
148.	ಧರೆಹೊತ್ತಿ ಉರಿದಾಗ (ಸಂಪುಟ–2) (ಭಾರತ ವಿಭಜನೆಯ ದುರಂತ ಕಥೆಗಳು)	ರಾಹು	ರೂ. 450.00
149.	ಧರೆಹೊತ್ತಿ ಉರಿದಾಗ (ಸಂಪುಟ–3) (ಭಾರತ ವಿಭಜನೆಯ ದುರಂತ ಕಥೆಗಳು)	ರಾಹು	ರೂ. 450.00
150	ದಯವಿಟ್ಟು ಮುಚ್ಚಬೇಡಿ ರಸ್ತೆ ಗುಂಡಿಗಳನ್ನು	ಶಾಂತರಾಜ್ ಐತಾಳ್	ರೂ. 150.00
151	ಪಾತಾಳಕ್ಕೆ ಪಯಣ (Journey to the Center of the Earth)	ಡಾ. ರಾಜಣ್ಣ ತಗ್ಗಿ	ರೂ. 225.00
152	ಕೊಡಚಾದ್ರಿ (ಸಾಧಕರ ನುಡಿ ಚಿತ್ರಗಳು)	ಲಕ್ಷ್ಮಣ ಕೊಡಸೆ	ರೂ. 180.00
153	ಸುಡಗಾಡ ಕಾಯ	ಡಾ. ಅನುಬೆಳ್ಳೆ	ರೂ. 125.00
154	ಕರುಳ ತೆಪ್ಪದ ಮೇಲೆ (ಖುಷ್ವಂತ್‌ಸಿಂಗ್‌ರ ಟ್ರೈನ್ ಟೂ ಪಾಕಿಸ್ತಾನ ನಾಟಕ)	ಚಿದಾನಂದ ಸಾಲಿ	ರೂ. 70.00
155	ದೇವನೊಬ್ಬ ಬೇಕೆ ?	ಡಾ. ಶೀಪರಮಟ್ಟಿ	ರೂ. 150.00
156	ಮೊಪಾಸನ ಕಥೆಗಳು ಭಾಗ 1	ಡಾ. ಪಿ.ವಿ. ರಾಮಚಂದ್ರ	ರೂ. 450.00
157	ಮೊಪಾಸನ ಕಥೆಗಳು ಭಾಗ 2	ಡಾ. ಪಿ.ವಿ. ರಾಮಚಂದ್ರ	ರೂ. 450.00
158	ದಾಹ	ಡಾ॥ ಟಿ.ಡಿ.ರಾಜಣ್ಣ ತಗ್ಗಿ	ರೂ. 200.00
159	ಕತ್ತಲಲ್ಲಿ ಕೊಲೆ (MURDER IN THE DARK)	ಡಾ. ನವೀನ್ ಹಳೇಮನೆ	ರೂ. 80.00
160	ಆಮೇನ್ – ದಮನಿತ ದೀದಿಯ ಆತ್ಮಕಥನ	ಸಿಸ್ಟರ್ ಜೆಸಿ	ರೂ. 240.00
161	ಬೆಸುಗೆಯ ಬಂಧನದಲ್ಲಿ	ಡಾ॥ ವಿಜಯಾ ಸುಬ್ಬರಾಜ್	ರೂ. 350.00
162	ಮಲೆಯಾಳದ ಪ್ರಸಿದ್ಧ ಪೆಣ್ ಕಥೆಗಳು	ಪಾರ್ವತಿ ಜಿ. ಐತಾಳ್	ರೂ. 210.00

163	ಭಯೋತ್ಪಾದಕ	ರಾಹು	ರೂ. 225.00
164	ಬೆಸುಗೆಯ ಬಂದನದಲ್ಲಿ	ಡಾ. ವಿಜಯಾ ಸುಬ್ಬರಾಜ್	ರೂ. 350.00
165	ಸಂಗೀತಲೋಕದ ಸವಿನೆನಪುಗಳು	ಶೀರೀಷ ಜೋಷಿ	ರೂ. 100.00
166	ಜೀವನವೆನ್ನುವ ಅದ್ಭುತ!	ಕೆ. ಪ್ರಭಾಕರನ್	ರೂ. 250.00
167	ಮಾರ್ಕ್ಸ್‌ವಾದ ಮತ್ತು ಅನ್ಯವಾದಗಳು	ಕೇಶವಶರ್ಮ ಕೆ	ರೂ. 300.00
168	ಕರುಣಾಳು, ಬಾ ಬೆಳಕೆ (FEVER)	ಅನಸೂಯದೇವಿ	ರೂ. 180.00
169	ದಾಂಪತ್ಯ ಯೋಗ	ಡಾ. ನಾ ಮೊಗಸಾಲೆ	ರೂ. 180.00
170	ಅಜೇಯ (The Count of Monte Cristo)	ಡಾ. ರಾಜಣ್ಣ ತಗ್ಗಿ	ರೂ. 400.00
171	ಸಂಗೀತಲೋಕದ ಸವಿನೆನಪುಗಳು	ಶಿರೀಷ ಜೋಶಿ	ರೂ. 100.00
172	ಚಮತ್ಕಾರಿ ದೇಹ ವಿಸ್ಮಯಕಾರಿ ಮನಸು	ಡಾ. ಶೀಪರಮಟ್ಟಿ	ರೂ. 150.00
173	ಕಸ್ತೂರಬಾ	ಡಾ. ಪ್ರಭಾಕರ್ ಎಂ ನಿಂಬರಗಿ	ರೂ. 300.00
174	ಇದು ವಿದಾಯವಲ್ಲ	ಪಾರ್ವತಿ ಜಿ. ಐತಾಳ್	ರೂ. 160.00
175	ಎಲ್ಲೇ ಮೀರಿ (N GUGI W THIONG 'O)	ಡಾ. ಎಚ್. ಎಸ್. ನಾಗಭೂಷಣ್	ರೂ. 200.00
176	ಪ್ರಸಿದ್ಧ ಚೀನೀ ಕಥೆಗಳು	ಡಾ. ವಿಜಯಾ ಸುಬ್ಬರಾಜ್	ರೂ. 230.00
177	ಹಿಮ (ORAHAN PAMUK)	ಡಾ. ಕೆ.ಎಸ್. ವೈಶಾಲಿ	ರೂ. 550.00
178	ಡೋರಿಯನ್ ಗ್ರೇನ ಬಾವಚಿತ್ರ (Picture Of Dorean greay)	ಡಾ. ವಿಜಯಾ ಸುಬ್ಬರಾಜ್	ರೂ. 160.00
179	ಕಥನವಕಾಶ (ಅನುವಾದಿತ ಕತೆಗಳು)	ಚಿದಾನಂದ ಸಾಲಿ	ರೂ. 150.00
180	ಪ್ರೀತಿಯ ನಲವತ್ತು ನಿಯಮಗಳು (THE FORTY RULES OF LOVE) ELIF SHAFAK	ಮಮತಾ ಜಿ ಸಾಗರ	ರೂ. 400.00
181	ಶ್ರೀ ರಾಮಾಯಣ ದರ್ಶನಂ-ಶ್ರೀ ದರ್ಶನ	ಶ್ರೀನಿವಾಸ ಕೃ. ದೇಸಾಯಿ	ರೂ. 150.00
182	ಭಾಮಾ ದಲಿತ ಪ್ರಜ್ಞೆ	ಡಾ. ಎಚ್.ಎಸ್. ನಾಗಭೂಷಣ್	ರೂ. 180.00
183	ಅಷ್ಟವಕ್ರನೂ ಅಪೂರ್ವ ಸುಂದರಿಯೂ (THE HUNCH BACK OF NOTRE DAME)	ಡಾ. ರಾಜಣ್ಣ ತಗ್ಗಿ	ರೂ. 225.00
184	ರಾತ್ರಿ ಕಪ್ಪು.... ಕೊಡ ಕಪ್ಪು	ಚಂದ್ರಕಾಂತ ಪೋಕಳೆ	ರೂ. 200.00
185	ಲಾಸ್ಟ್ ಲೋಕಲ್ ಲೋಸ್ಟ ಲವ್	ರಾಜೀವ್ ನಾಯಕ್	ರೂ. 120.00
186	ವಿವಾಹ ಬೋಜನವಿದು	ಶಾಂತರಾಜ್ ಐತಾಳ್	ರೂ. 120.00
187	ನೆನಪಿನಂಗಳದಲ್ಲಿ ವೈಯನ್ಕೆ, ವಡ್ಡರ್ಸೆ, ಪೂಜಾರಿ	ಚಿದಂಬರ ಬೈಕಂಪಾಡಿ	ರೂ. 140.00
188	ನನ್ನವರು (MAVALLU)	ಸುಲೋಚನ	ರೂ. 190.00
189	ವಯನಾಡಿನ ಕನಸು	ಪಾರ್ವತಿ ಜಿ. ಐತಾಳ್	ರೂ. 100.00
190	ಪ್ರಾತಿನಿಧಿಕತೆ ಮತ್ತು ಸ್ವಯಂಬಲ	ಕೇಶವಶರ್ಮ ಕೆ.	ರೂ. 260.00
191	ಮಾರ್ಕ್ಸವಾದ ಮತ್ತು ಅನ್ಯವಾದಗಳು	ಕೇಶವಶರ್ಮ ಕೆ.	ರೂ. 350.00
192	ದಡವ ಹಡೆದ ನದಿ (ಕವಿತೆಗಳು)	ಎಚ್.ಎನ್. ಈಶಕುಮಾರ್	ರೂ. 100.00
193	ಭಾರತದ ಜ್ವಲಂತ ಸಮಸ್ಯೆಗಳು ಮತ್ತು ಮಾಧ್ಯಮ	ಅಭಿಲಾಷಾ ಆರ್.	ರೂ. 100.00
194	ಕೃಷ್ಣವೇಣಿ (ಕಾದಂಬರಿ)	ವೆಂಕಟಗಿರಿ ಕಡೇಕಾರ್	ರೂ. 170.00
195	ಆಕಾಶದ ಕರೆ (ಸಣ್ಣ ಕಥೆಗಳು)	ಡಾ. ಅನಸೂಯಾದೇವಿ	ರೂ. 350.00

196	ಬುಡಕಟ್ಟು ಜ್ಞಾನಪರಂಪರೆ	ಡಾ. ಎಸ್.ಎಂ. ಮುತ್ತಯ್ಯ	ರೂ. 170.00
197	ಮರಳ ದಿಬ್ಬಗಳಲ್ಲಿ ಮಹಿಳೆ (The women in the dunes)	ಡಾ. ವಿಜಯಾ ಸುಬ್ಬರಾಜ್	ರೂ. 160.00
198	ಉಪೇಂದ್ರನಾಥ ಅಶ್ಕರರ ಐದು ನೀಳ್ಗಥೆಗಳು	ಪಾರ್ವತಿ ಜಿ. ಐತಾಳ್	ರೂ. 100.00
199	ಮಾಫಿಯಾ	ಕೆ.ಕೆ. ಗಂಗಾಧರನ್	ರೂ. 540.00
200	ಲುಷನ್‌ರ ಆಯ್ದ ಹತ್ತು ಕಥೆಗಳು	ಡಾ. ವಿಜಯಾ ಸುಬ್ಬರಾಜ್	ರೂ. 150.00
201	ಆಲಂಪನಾ	ಶ್ಯಾಮಲಾ ಮಾದವ	ರೂ. 250.00
202	ಬ್ಲ್ಯಾಕ್ ಕಾಫಿ	ಅನು ಬೆಳ್ಳೆ	ರೂ. 180.00
203	ಮಲಾಣ್	ಶಾಂತನಾಯ್ಕ ಶಿರಗಾನಹಳ್ಳಿ	ರೂ. 310.00
204	ಮಲೆಯಾಳದ ಮಹಿಳಾ ಕಥನ	ಪಾರ್ವತಿ ಜಿ. ಐತಾಳ್	ರೂ. 270.00
205	ಮಾರಾಟಗಾರನ ಸಾವು	ಎಂ.ಎಸ್. ರಘುನಾಥ	ರೂ. 140.00
206	ಜೆನ್ ಅನುಭವ	ವಿಜಯ್‌ನಾಗ್	ರೂ. 360.00
207	ದೇಸಿ ದಿಬ್ಬಣ	ಡಾ. ಕೆ.ಎಲ್. ದಿವ್ಯ	ರೂ. 220.00
208	ಗೋಡೆ	ಡಾ. ಸಿ.ಎಸ್. ದ್ವಾರಕನಾಥ್	ರೂ. 400.00
209	ಕಥೆಗಳ ಕಟ್ಟು	ಅಮರೇಶ್ ನುಗಡೋಣಿ	ರೂ. 350.00
210	ಒಲವು ತುಂಬಿದ ದಾರಿ (ಪ್ರೇಮ ಕಥನಗಳು)	ಕೇಶವ ಮಳಗಿ	ರೂ. 280.00
211	ಅರೇಬಿಯನ್ ನೈಟ್ಸ್ ಭಾಗ–1	ಶರಣಪ್ಪ ಜಿ	ರೂ. 600.00
212	ಅರೇಬಿಯನ್ ನೈಟ್ಸ್ ಭಾಗ–2	ಶರಣಪ್ಪ ಜಿ	ರೂ. 425.00
213	ಭೂಮಿಗೆ ಬಂದ ಗಂಧರ್ವ	ಡಾ. ಹೆಚ್.ಎಲ್. ನಾಗೇಗೌಡ	ರೂ. 350.00
214	ಒಂಟಿದನಿ (ಬೋರಿಷ್ ಪಾಸ್ತಾರ್‌ನಕ್)	ಕೇಶವಮಳಗಿ	ರೂ. 260.00
215	ಪರ್ಯಾಯ ನೋಟಗಳು (Paralex veiw. Salvoj zizek)	ಕೇಶವಶರ್ಮ	ರೂ. 530.00
216	ಗಾನ್ ವಿತ್ ದ ವಿಂಡ್	ಶ್ಯಾಮಲ ಮಾಧವ	ರೂ. 750.00
217	ಕಥಾ ಸಮಾಹಾರಂ	ಪ್ರಭಾಕರನ್ ಕೆ.	ರೂ. 150.00
218	ವದರಿಂಗ್ ಹೈಟ್ಸ್	ಶ್ಯಾಮಲ ಮಾಧವ	ರೂ. 400.00
219	ನನ್ನ ಬದುಕು (My Life) *ANTON CHEKHOV*	ಕನ್ನಡಕ್ಕೆ:ಮಡಿವಾಳಪ್ಪ ತಟ್ಟಿಮನಿ	ರೂ. *125.00*
220	ಆರ್ತ	ಕನ್ನಡಕ್ಕೆ : ಗೀತಾ ಶೆಣೈ	ರೂ. 150.00
221	ಮೂರನೆ ದಡ	ಕನ್ನಡಕ್ಕೆ : ಎ.ಎನ್. ಪ್ರಸನ್ನ	ರೂ. 220.00
222	ದೇವರುಗಳ ರಾಜ್ಯದಲ್ಲಿ	ಬೋಳುವಾರು ಮಹಮದ್ ಕುಂಞ	ರೂ. 160.00
223	ಸಫಾ	ಪ್ರಸಾದ್ ನಾಯ್ಕ್	ರೂ. 350.00
224	ಹಲವು ಜೀವನ ಹಲವು ಮಾರ್ಗದರ್ಶಕರು	ಎನ್. ಶ್ರೀಧರ್	ರೂ. 200.00
225	ಜಪಾನೀನ ಕಾಲ್ಪನಿಕ ಕಥೆಗಳು	ಕನ್ನಡಕ್ಕೆ ; ವಿಜಯ್ ನಾಗ್	ರೂ. 200.00
226	ನವಿಲು ಪುರಾಣ	ಕನ್ನಡಕ್ಕೆ ; ಕೆ.ಈ ರಾಧಕೃಷ್ಣ	ರೂ. 450.00
227	ಶಬರಿಗಾದನು ಅತಿಥಿ ದಾಶರಥಿ	ಶ್ರೀನಿವಾಸ ಕೃ ದೇಸಾಯಿ	ರೂ. 125.00
228	ಪಡೆಯದ ಭಾಗ್ಯ	ಶ್ರೀನಿವಾಸ ಕೃ ದೇಸಾಯಿ	ರೂ. 125.00
229	ಗೂಳಿ	ಕನ್ನಡಕ್ಕೆ: ನಲ್ಲತಂಬಿ	ರೂ. 225.00
230	ನೀರದೀವಿಗೆ	ಕೆ.ವೈ. ನಾರಾಯಣಸ್ವಾಮಿ	ರೂ. 260.00
231	ವೈದ್ಯಕೀಯ ವೃತ್ತಿ ಉದ್ಯೋಗ ಉದ್ಯಮ	ಕನ್ನಡಕ್ಕೆ: ರಾಹು	ರೂ. 325.00

232	ಬದುಕಿರುವುದೇ ಕಥೆ ಹೇಳಲಿಕ್ಕೆ	ಟಿ.ಎಸ್. ರಘುನಾಥ್	ರೂ. 725.00
233	ಒಡೆದ ಕನ್ನಡಿ	ಕನ್ನಡಕ್ಕೆ: ವಿಜಯಾ ಸುಬ್ಬರಾಜ್	ರೂ. 220.00
234	ತಣ್ಣನೆಯ ಮಾಂಸ ಮತ್ತು ಇತರ ಕಥೆಗಳು	ಡಾ. ಕೆ.ಎಲ್. ದಿವ್ಯ	ರೂ. 170.00
235	ಹೆರೊಡೊಟಸನ ಸಮರ ಕತೆಗಳು	ಶಿವರಾಮಯ್ಯ ಡಾ.ಎಚ್.ವಿ.ರಂಗಾಚಾರ್	ರೂ. 275.00
236	ಒಂದು+ ಮತ್ತು ನೂರುಕಥೆಗಳು	ಪ್ರೊ. ಕೆ.ಈ. ರಾಧಾಕೃಷ್ಣ	ರೂ. 350.00
237	ಮನಸು ಮಾಗಿದ ಸುಸ್ವರ	ಜ್ಯೋತಿ ಗುರುಪ್ರಸಾದ್	ರೂ. 350.00
238	ಬುದ್ಧ ಬಾಬಾಸಾಹೇಬ ಮತ್ತು ನಾನು	ಅಶೋಕ್	ರೂ. 160.00
239	ಒಂದು ತುಂಡು ಗೋಡೆ	ಬೋಳುವಾರು ಮಹಮದ್ ಕುಂಞ	ರೂ. 150.00
240	ಮಲೆಯಾಳದ ಪೆಣ್ ಕಥನ	ಕಮಲ ಹೇಮ್ಮಿಗೆ	ರೂ. 320.00
241	ಸೂರ್ಯ ಶಿಖರ	ಕನ್ನಡಕ್ಕೆ : ರಾಜಣ್ಣ ತಗ್ಗಿ	ರೂ.3 20.00
242	ದಲಿತ ತತ್ವಶಾಸ್ತ್ರ : ಭಾರತೀಯ ಭೌತಿಕವಾದ ಚಾರ್ವಕ ದರ್ಶನ : ಕೆಲವು ತಾತ್ವಿಕ ಚಿಂತನೆಗಳು	ಲಕ್ಕೂರು ಆನಂದ	ರೂ. 210.00
243	ಈಡಿಪಸ್ ಮತ್ತು ಅಂತಿಗೊನೆ	ಡಾ. ವಿಜಯಾ ಸುಬ್ಬರಾಜ್	ರೂ. 125.00
244	ಪ್ರಶಾಂತ ನೀಲಾಕಾಶ TEN THOUSAND MILES WITH CLOUDS	ಉಷಾಶ್ರೀ	ರೂ. 550.00
245	ಸುಂದರವನದಲ್ಲಿ ನೊಣದ ರಾಜ್ಯಭಾರ	ಕನ್ನಡಕ್ಕೆ:ಸುನೀತ ಕುಶಾಲನಗರ	ರೂ. 120.00
246	ನಖಾಶಿಖಾಂತ (ಮಲೆಯಾಳಂ ಕಥೆಗಳು)	ಕನ್ನಡಕ್ಕೆ:ಪ್ರಭಾಕರನ್ ಕೆ	ರೂ. 275.00
247	ಭಾಷಾಂತರ ಜಗತ್ತು	ಪರ್ವತಿ ಜಿ ಐತಾಳ್	ರೂ. 180.00
248	ಹೆಣೆಯುತ್ತಿದೆ ಜೇಡ ಬಲೆಯ.....*	ಪ್ರೊ. ಶಿವರಾಮಯ್ಯ	ರೂ. 200.00
249	ಸಾಹಿತ್ಯ ಮತ್ತು ತತ್ವಜ್ಞಾನ	ಕೆ. ಕೇಶವಶರ್ಮ	ರೂ. 400.00
250	ಅನುಪಲ್ಲವಿ	ಆತ್ಮಕೂರ ವಾಮನಚಾರ್ಯ	ರೂ. 160.00
251	ಕಥೆ– ಚಿತ್ರಕಥೆ	ಶಶಿಧರ್ ಚಿತ್ರದುರ್ಗ	ರೂ. 200.00
252	ತನ್ನಷ್ಟಕ್ಕೆ	ರೂಪ ಹಾಸನ	ರೂ. 50.00
253	ನಕ್ಷತ್ರ ನೋಡುತಾ....	ತಮ್ಮಣ್ಣ ಬೀಗಾರ	ರೂ. 100.00
254	ತಾರೆಗಳ ದುನಿಯಾ	ಶಶಿದರ್ ಚಿತ್ರದುರ್ಗ	ರೂ. 100.00
255	ಮೂಡಲ ಮನೆಯ ಮುತ್ತಿನ ಹುಡುಗಿ	ಆತ್ಮಕೂರ ವಾಮನಚಾರ್ಯ	ರೂ. 160.00
256	ರೀ ಮೇಡ್ ಇನ್ ಅಮೆರಿಕ	ವಿಜಯ್ ಬಾರದ್ವಜ್	ರೂ. 250.00
257	ಪ್ರಭು ಸಂಹಿತೆಯ ರೂಪಕಗಳು	ಕೆ. ಕೇಶವಶರ್ಮ	ರೂ. 220.00
258	ಆಧುನಿಕೋತ್ತರವಾದ	ಕೆ. ಕೇಶವಶರ್ಮ	ರೂ. 350.00
259	ದ್ರೌಪದಿ	ವೇಣುಗೋಪಾಲ ವಹ್ನಿ	ರೂ. 500.00
260	ಕಳಚಿದ ಕೊಂಡಿ	ಪ್ರಮೋದ್ ಮತಾಲಿಕ	ರೂ. 150.00
261	ಮಲೆಯಾಳದ ಪ್ರಸಿದ್ಧ ಪೆಣ್ ಕತೆಗಳು	ಪರ್ವತಿ ಜಿ ಐತಾಳ್	ರೂ. 320.00
262	ಹಳ್ಳಿ ಹಕ್ಕಿಯ ಹಾಡು (ಹೆಚ್ ವಿಶ್ವನಾಥ್ ಆತ್ಮಕತನ)	ಹೆಚ್ ವಿಶ್ವನಾಥ್	ರೂ. 175.00
263	ಎಳೆಯರಿಗಾಗಿ ಸರಳ ರಾಮಾಯಣ	ವೇಣುಗೋಪಾಲ ವಹ್ನಿ	ರೂ. 350.00
264	ಮಾತು ಮಾತು ಮಥಿಸಿ...	ಮೇಟಿ ಮಲ್ಲಿಕಾರ್ಜುನ	ರೂ. 380.00
265	ಕಣಜ	ಪ್ರಮೋದ್ ಮುತಾಲಿಕ	ರೂ. 225.00
266	ಹಿಂದು ಸಾಮ್ರಾಜ್ಯವಾದ ಚರಿತ್ರೆ	ಸ್ವಾಮಿ ಧರ್ಮತೀರ್ಥ	ರೂ. 220.00

267	ಹಿರೋಶಿಮಾದ ಹೂವುಗಳು	ಡಾ. ವಿಜಯ್ ನಾಗ್ ಜಿ	ರೂ. 180.00
268	ಕುರುಡು (Blindness)	ಡಾ. ವಿಜಯಾ ಸುಬ್ಬರಾಜ್	ರೂ. 325.00
269	ಲೇಡಿ ಚಾರ್ಟಲೀಸ್ ಲವರ್	ಟಿ.ಎಸ್. ರಘುನಾಥ್	ರೂ. 500.00
240	ಚಲಂ (ಆತ್ಮಕಥೆ)	ಲಕ್ಕೂರು ಆನಂದ	ರೂ. 400.00
271	ಬೆಳಕೂ ಅದೆ, ಕತ್ತಲೆಯೂ ಅದೇ	ಡಾ. ಅಮರೇಶ ನುಗಡೋಣಿ	ರೂ. 280.00
272	ಮುತ್ತು (Pearl)	ಲಕ್ಕೂರು ಆನಂದ	ರೂ. 150.00
273	ನಡು ಮಧ್ಯಾಹ್ನದ ಚಂದ್ರ ಮತ್ತು ಇತರ ಕತೆಗಳು (ABDULRAZAK GURNAH)	ಜೆ. ಬಾಲಕೃಷ್ಣ	ರೂ. 150.00
274	ಡೈರಿ ಆಫ್ ಎ ಎಂಗ್ ಗರ್ಲ್	ನಾಗರೇಖಾ ಗಾಂವ್ಕರ್	ರೂ. 450.00
275	ನಾಗಚಂದ್ರನ ರಾಮನ ಕಥನ	ಸೃಜನ್ ಗಣೇಶ್ ಹೆಗಡೆ	ರೂ. 360.00
276	ಶಂಭಾಲ	ಕನ್ನಡಕ್ಕೆ ; ಡಾ. ಜಯಲಲಿತಾ	ರೂ. 270.00
277	ಸ್ವರ್ಗ (NOBLE PERIZE WINNER)	ಕನ್ನಡಕ್ಕೆ ; ಬಿ. ಶರಣಪ್ಪ	ರೂ. 320.00
278	ಆನಂತ್ಯ	ಸುನೀತರಾಜ್	ರೂ. 400.00
279	ಯಶೋಧರ ಚರಿತ್ರೆ (ಸಂಘರ್ಷದ ನೆಲೆಗಳು)	ಕೇಶವಶರ್ಮ ಕೆ	ರೂ. 290.00
280	ಹೊನ್ನ ಕೊಪ್ಪರಿಗೆ	ವಸಂತಿ ಶೆಟ್ಟಿ ಬ್ರಹ್ಮಾವರ	ರೂ. 120.00
281	ಚಾಂಡಾಳನೊಬ್ಬನ ಆತ್ಮವಿಮರ್ಶೆ (INTERROGATTING MY CHANADALA LIFE)	ಡಾ. ಎಚ್. ಎಸ್. ನಾಗಭೂಷಣ	ರೂ. 325.00
282	1984	ಡಾ. ವಿಜಯಾ ಸುಬ್ಬರಾಜ್	ರೂ. 275.00
283	ಭಾಷಾಂತರ ಜಗತ್ತು	ಪಾರ್ವತಿ ಜಿ. ಐತಾಳ್	ರೂ. 125.00
283	ಬಿಜಾಪುರ ಡೈರಿ	ಚಂದ್ರಕಾಂತ ಪೋಕಳೆ	ರೂ. 225.00
284	ರನ್ನಿಂಗ್ ನಾವೆಲಿಸ್ಟ್(Haruki Murkami)	ರವಿಕುಮಾರ್ ಹಂಪಿ	ರೂ. 160.00
285	ಹಾಜಿ ಮುರಾದ್ ಮತ್ತು ಇತರ ಕಥೆಗಳು	ಟಿ.ಎಸ್. ರಘುನಾಥ್	ರೂ. 700.00
286	ಹೊಕ್ಕುಳು	ಡಾ. ಮೊಗಳ್ಳಿ ಗಣೇಶ್	ರೂ. 400.00
287	ಇಲ್ಲಿ ಯಾರು ಮುಖ್ಯರಲ್ಲ	ಡಾ. ಮೊಗಳ್ಳಿ ಗಣೇಶ್	ರೂ. 350.00
288	ಮನುಷ್ಯನಾಗಿ ಉಳಿದಿಲ್ಲ (NO LONGER HUMAN)	ವಿಜಯ ನಾಗ್ ಜಿ	ರೂ. 140.00
289	ನಾನೆಂಬುದು ಕಿಂಚಿತ್ತು (ಆತ್ಮಕಥನ)	ಡಾ. ಮೊಗಳ್ಳಿ ಗಣೇಶ್	ರೂ. 425.00
290	ಎಲ್ಲೆಗಳ ಮೀರಿ (ಪಾಶ್ಚಾತ್ಯ ಲೇಖಕಿಯರ ಆಶಯ ಮತ್ತು ಗ್ರಹಿಕೆಗಳು)	ಶ್ರೀದೇವಿ ಕೆರೆಮನೆ	ರೂ. 225.00
291	ಸಾಹಸ ಬೀಮ ವಿಜಯ	ಕೆ. ಕೇಶವಶರ್ಮ	ರೂ. 475.00
292	ಆದಿಪುರಾಣದ ಪ್ರವೇಶಕ್ಕೆ ವಿವಿಧ ದಾರಿಗಳು	ಕೆ. ಕೇಶವಶರ್ಮ	ರೂ. 600.00
293	ಕನ್ನಡ ಕಾವ್ಯ ಮೀಮಾಂಸೆ	ಕೆ. ಕೇಶವಶರ್ಮ	ರೂ. 750.00
294	ಬರ್ಟೋಲ್ಟ್ ಬ್ರೆಕ್ಟ್	ಕೆ. ಕೇಶವಶರ್ಮ	ರೂ. 400.00
295	ಶರಣರ ನಾಡಿನ ಸೂಫೀ ಮಾರ್ಗ	ಪರ್ವೀನ್ ಸುಲ್ತಾನಾ	ರೂ. 650.00
296	ಹೆಣವಾಗುತಿರುವ ಗಣರಾಜ್ಯ The crooked timber of new india (Parakala Parbhakar)	ಕನ್ನಡಕ್ಕೆ: ರಾಹು	ರೂ. 300.00
297	ನವೋದಯ ಸಾಹಿತ್ಯದ ಹಿನ್ನಲೆ-ಪ್ರೇರಣೆ ಮತ್ತು ಪ್ರಭಾವಗಳು	ಕೆ. ಕೇಶವಶರ್ಮ	ರೂ. 350.00
298	ಅಂಟೋನಿಯೊ ಗ್ರಾಮ್ಷಿ	ಕೆ. ಕೇಶವಶರ್ಮ	ರೂ. 350.00

299 ಭವ್ಯ ಭೂಮಿ ಕನ್ನಡಕ್ಕೆ : ಕೆ. ಶ್ರೀನಾಥ್ ರೂ. 425.00
The Good Earth , Pearl S Buck - Nobel Prize Winner

300 ವೃದ್ಧ ಮತ್ತು ಸಮುದ್ರ ಕನ್ನಡಕ್ಕೆ: ರಾಜಣ್ಣ ತಗ್ಗಿ ರೂ. 180.00
old man and sea (Ernest Miller Hemingway)Nobel Prize Winner

301 ದಿ ಕಾಲ್ ಆಫ್ ವೈಲ್ಡ್ ಕನ್ನಡಕ್ಕೆ: ಜೆ.ವಿ.ಕಾರ್ಲೋ ರೂ. 260.00
The Call of the Wild -Jack London

302 ಹೃದಯ ಕನ್ನಡಕ್ಕೆ: ವಿಜಯ ನಾಗ್ ರೂ. 250.00
KoKoro Novel (Kokoro: Sensei no isho) BY : Natsume Soseki

303 ಭೂಮಿ (ಕಾದಂಬರಿ) ಕನ್ನಡಕ್ಕೆ : ಬಂಜಗೆರೆ ಜಯಪ್ರಕಾಶ ರೂ. 400.00
EARTH- Émile Zola (Émile Édouard Charles Antoine Zola)

304 ದ ಗರ್ಲ್ ವಿತ್ ದಿ ಗೋಲ್ಡನ್ ಐಸ್ ಕನ್ನಡಕ್ಕೆ: ರಾಜಣ್ಣ ತಗ್ಗಿ ರೂ. 140.00
The Girl With The Golden Eyes - Honoré de Balzac

305 ದೇವಿ ಕುರುಬತಿ ಶುಭದಾ ಎಚ್.ಎನ್. ರೂ. 260.00
A Tale of an Ancient legendary Egyptian queen

*** ಪ್ರತಿಗಳು ಮುಗಿದಿವೆ.**

299 The Good Earth, Pearl S Buck - Nobel Prize Winner ರೂ. 125.00

300 Old man and sea (Ernest Miller Hemingway) Nobel Prize Winner ರೂ. 150.00

301 The Call of the Wild- Jack London ರೂ. 100.00

302 Kokoro Novel (Kokoro: Sensei no Isho) by : Natsume Soseki ರೂ. 150.00

303 EARTH- Emile Zola (Emile Edouard Charles Antoine Zola) ರೂ. 400.00

304 The Girl With The Golden Eyes - Honore de Balzac ರೂ. 140.00

305 A Tale of an Ancient legendary Egyptian queen ರೂ. 240.00



ಸಮಾಜವು ತುಂಬಾ ವೇಗವಾಗಿ ಬದಲಾಗುತ್ತಿದೆ. ಮನುಷ್ಯರು ಬದಲಾಗುತ್ತಿದ್ದಾರೆ. ಅವರ ಪರಿಸರ, ಸಂಸ್ಕೃತಿಯು ಬದಲಾಗುತ್ತಿದೆಯೆಂಬ ತಿಳುವಳಿಕೆಯಿಂದ ಕಾದಂಬರಿಗಳು ಅವನ್ನು ಅಭಿವ್ಯಕ್ತಿಸಿವೆ. ಕನ್ನಡದ ಬಹುತೇಕ ಚಂಪೂ ಹಾಗೂ ಷಟ್ಪದಿ ಕಾವ್ಯಗಳು ನಾಯಕರನ್ನು; ಖಳನಾಯಕರನ್ನು ತುಂಬಾ ಸ್ಪಷ್ಟವಾಗಿ ವ್ಯಾಖ್ಯಾನಿಸಿವೆ. ಯಾರು ಖಳನಾಯಕರಾಗುತ್ತಾರೆ. ಯಾರು ನಾಯಕರಾಗುತ್ತಾರೆ ಎಂಬುದನ್ನು ತಿಳಿಸುವಾಗಲೇ ಅವರಿಗೆ ಕೆಲವು ವಿಶಿಷ್ಟ ಗುಣಗಳನ್ನು ಕೊಟ್ಟಿದ್ದಾರೆ. ಕೌರವನು ಖಳನಾಯಕ ಯಾಕೆಂದರೆ ಅವನು ಪುಣ್ಯಾತ್ಮರೂ, ಸಜ್ಜನರೂ ಆದ ಪಾಂಡವರನ್ನು ಕಾಡಿಗೆ ಅಟ್ಟಿದ: ಸಭೆಯಲ್ಲಿ ದ್ರೌಪದಿಯ ಸೀರೆಯನ್ನು ಸೆಳೆಸಿದ - ಇತ್ಯಾದಿ.
ಆದರೆ ಕಾದಂಬರಿಯೆಂದೊಡನೆ ಮನುಷ್ಯರ ಕತೆಗಳೆಂದೇ ನಾವೇಕೆ ತಿಳಿಯಬೇಕು? ಬರೆಯುವಾತನೇನೋ ಮನುಷ್ಯ. ಆದರೆ ಆತನ ಕಥಾ ಸೃಷ್ಟಿಯ ನಾಯಕ, ಪ್ರತಿನಾಯಕ ಪೋಷಕ ಪಾತ್ರಗಳೆಲ್ಲವೂ ನಿಸರ್ಗವಾಗಬಲ್ಲುದು ಎಂದು ಕಾರಂತರು ಹೇಳುತ್ತಾರೆ. ಕಾರಂತರ ಪ್ರಕಾರ ಕಾದಂಬರಿಗೆ ವಸ್ತುವಿನ ಆಯ್ಕೆಯ ಮಿತಿಯಿಲ್ಲ. ಹಾಗೆಂದು ಬರೆಯುವವನು ಮನುಷ್ಯ ಎಂಬುದನ್ನು ಮರೆಯಲಾಗದು.



ಪುಸ್ತಕ
146
CRITISISM
₹475